ಜಯಂತಿ

ಜೂಲೈ ೧೯೪೨

ೋ. ಶಿವರಾಮ ಕಾರಂತ
. ರಾಧಾಕೃಷ್ಣನ್
ಲ್. ಜಿ. ಬೇಂದ್ರೆ
ಪ್ರೊ. ಜಾಗಿರದಾರ
ಭಾರತೀಸುತ' ಇತ್ಯಾದಿ.

ಬೆಲೆ ನಾಲ್ಕಾಣೆ

ಪ್ರತಿತಿಂಗಳ ಮೊದಲನೆಯ ತಾರೀಖಿಗೆ ಪ್ರಕಟವಾಗುವುದು.

ವಾ. ವರ್ಗಣಿ ಅಂಚೆವೆಚ್ಚ ಸೇರಿ ೩—೦—೦ .... ವ್ಹಿ. ಪಿ. ಯಿಂದ ೩-೫-೦ .... ಬಿಡಿಸಂಚಿಕೆಗೆ ೪ ಆಣೆ

ಸಂಪಾದಕರು

ಬೆಟಗೇರಿ ಕೃಷ್ಣಶರ್ಮರು

೫ನೆಯ ವರ್ಷ	ಜೂಲೈ ೧೯೪೨	೨ನೆಯ ಸಂಚಿಕೆ

ಮುಖ್ಯವಿಷಯಗಳ ಪರಿವಿಡಿ

ಸಾಮಾಜಿಕನ ಸಂವಚನಗಳು (ವಿಚಾರತರಂಗ) .... ' ಸಾಮಾಜಿಕ ' ೪೯
ಸಂಪಾದಕೀಯ .... ಸಂಪಾದಕರು ೫೦
ಮಂಗನ ಮಲ್ಲಿನಾಥತನ .... ' ಮಲ್ಲಿನಾಥ ' ೫೧
ದೇಶಬಂಧು ದಾಸರ ಜೀವನಸ್ಮೃತಿ .... ಶ್ರೀ. ವಾಳ್ವೇಕರ್ ಗುರುರಾಯರು, ಎಲ್‌ಎಲ್. ಬಿ. ೫೩
ಸಾದರ ಸ್ವೀಕಾರ ೫೬
3 ಹೆಣ್ಣಿನ ಒಲವು (ಅನುವಾದಿತ ಕಥೆ) .... ಶ್ರೀ. ಆರ್. ಕೆ. ಕೊಪ್ಪರ, ಕಲ್ಲಾಪುರ ೫೮
3 ಕೀರ್ತಿಯ ನೆರಳು (ಲಘುಪ್ರಬಂಧ) .... ' ಭಾರತೀಸುತ ' ಮೈನಾಡು ೬೨
ದೀನಲಕ್ಷ್ಮಿಯೆ ಬಾರ ! (ಕವನ) .... ಶ್ರೀ. ಬಿ. ಎಚ್. ಶ್ರೀಧರ, ಬಿ. ಎ. (ಆನರ್ಸ್) ೬೩
ಭೂದೇವಿ ಅಲುಗದಿರು ! (ಕವನ) .... ಶ್ರೀ. ವಿ. ಜಿ. ಭಟ್ಟ, ಕಡತೋಕಾ ೬೪
4 ನಮ್ಮೂರ ಕೆರೆ (ವ್ಯಂಗ್ಯ ಪ್ರಬಂಧ) .... ಶ್ರೀ. ಕೋಟ ಶಿವರಾಮ ಕಾರಂತರು ೬೫
ಭಾರತದ ಜಾತಿ-ಜಾತಿಗಳ ತೊಡಕು (ವಿಚಾರ ಪ್ರಚೋದಕ) ಶ್ರೀ. ಸಂತರಾಮ, ಬಿ. ಎ ೬೮
8 ಕುಡಿದ ಕಣ್ಣೀರು (ಸಣ್ಣಕತೆ) .... ಶ್ರೀ. ಬೇಂದ್ರೆ ಲಕ್ಷ್ಮಣರಾಯರು ೭೨
ಕನ್ನಡವನ್ನು ಮರೆಯದ ಕನ್ನಡಿಗ (ವ್ಯಕ್ತಿ ಪರಿಚಯ) .... ಶ್ರೀ. ವರದರಾಜ ಆದ್ಯ, ಸೊಲ್ಲಾಪುರ ೭೮
5 ಜೊಜ್ಜು ಮನುಷ್ಯರು (ಹರಟೆ) .... ಶ್ರೀ. ಕ. ರಾಧಾಕೃಷ್ಣನ್, ಬನಾರಸ ೮೦
ಕ. ವಿ. ವಿದ್ಯಾಲಯ ಪರಿಷತ್ತು (ವಿಮರ್ಶಾತ್ಮಕ ವರದಿ) .... ಪ್ರೊ. ಆರ್. ವಿ. ಜಾಗೀರದಾರ, ಎಂ. ಎ. (ಲಂಡನ್) ೮೨
ನಿರ್ಭಾಗ್ಯ ಕೋರಿಯಾ (ಪರಿಚಯಾತ್ಮಕ).... .... ಶ್ರೀ. ಸಿ. ಬಿ. ಬೆಲ್ಲದ, ಇಟಗಿ ೮೫
ಮನೆಯಲ್ಲಿಯೆ ಹೊಲಿಗೆ ಕಲಿಯಿರಿ ! (ಉಬ್ಬುತೋಳು) .... ಶ್ರೀ. ಹಳಪೇಟೆ ಚಿಂತಾಮಣಿರಾಯರು ೯೧
ಕನ್ನಡ ಸೈನಿಕ (ಕ. ವಿ. ವಿ. ಪರಿಷದಧ್ಯಕ್ಷರ ಸಂದರ್ಶನ) .... ' ಸಂ. ಕ. ಸೈ ' ೯೨
ನಗೀಗೆ ನೇವೇದ್ಯ .... ' ನಕಲೀ ನಾರಾಯಣಾಚಾರ್ರು ' ೯೫
ನಾಲ್ಕ್ಕು ನಿಟ್ಟಿನ ನೋಟ .... ' ನಿರೀಕ್ಷಕರು ' ೯೬

ಜೂಲೈ ಸಂಚಿಕೆಗೆ ಚಂದಾ ಅವಧಿ ಮುಗಿಯುವ ಚಂದಾದಾರರೆಲ್ಲರೂ ತಂತಮ್ಮ ಚಂದಾಹಣವನ್ನು ಕೂಡಲೆ ಮನಿಯಾರ್ಡರ್ ಮೂಲಕ ಕಳುಹಬೇಕು. ಮುಂದೆ ಚಂದಾದಾರರಾಗಲು ಮನಸ್ಸಿಲ್ಲದವರು, ದಯೆಯಿಟ್ಟು ಕೂಡಲೆ ಕಾಗದ ಬರೆದು ತಿಳಿಸಬೇಕು. ಸಂ. ಜ.

ಜಯಂತಿ

ಸಂಪುಟ ೫ | ೧ನೆಯ ಜೂಲೈ ೧೯೪೨ | ಸಂಚಿಕೆ ೨

ಸಾಮಾಜಿಕನ ಸಂವಚನಗಳು

ಮನಸು-ಬುದ್ಧಿಗಳನು ಅನಿತಿನಿತು ಹರಿಯಲು ಬಿಟ್ಟರೆ ಹಣಿವೆನೆಂಬುದೀ ಧರ್ಮದಂಡ! ನಡೆವ ದಾರಿಯ ನಡುವೆ ತಪ್ಪಿ ಅಡಿಗಳನಿಟ್ಟರೆ ಜಡಿವೆನೆಂಬುದಾ ರಾಜದಂಡ! ಇವೆರಡರ ಕಂಗಳನೂ ತಪ್ಪಿಸಲು ಹವಣಿಸುತ, ಹಗಲಿರುಳೂ ವ್ಯಭಿಚಾರವ ನಡೆಯಿಸಿಹುದು ಮಾನವಪಿಂಡ! ಯಾರ ವ್ಯಭಿಚಾರ ಯಾರದೆಂಬುದನರಿಯದೆ ಇನ್ನಾರನೊ ಹಣಿಯುತಿಹುದು ಕುರುಡು ಧರ್ಮದಂಡ; ಇನ್ನಾರನೊ ಜಡಿಯುತಿಹುದು ಬರಡು ರಾಜದಂಡ! ಇದಕಾಗಿಯೆ ಕಾಲರಾಯನೇಗಲೂ ಕಳಿಸುತಿಹ ಹೊಸಬರ ದಂಡ; ಹಳೆಯ-ವಾದ ಧರ್ಮದಂಡ-ರಾಜದಂಡಗಳೆದುರು ಹೂಡಿಸುತಿಹ ಹೋರಬಗೆಗಳ ಬಂಡ!

* * *

ಸಮಾಜದ ನಿಲುವಿಗೆ ಬೇಕು ಧರ್ಮಜ್ಞಾನವನರಿವ ದ್ರಷ್ಟಾರ ಮಹರ್ಷಿಗಳು; ಸಮಾಜದ ಗೆಲುವಿಗೆ ಬೇಕು ಭೂಮಿಯನಾಳಲು ಬಲ್ಲ ಬಿಲ್ಲಾಳು-ಬಿಲ್ಲಾಳುಗಳು; ಸಮಾಜದ ಚೆಲುವಿಗೆ ಬೇಕು ಹಣವ ಕೆರೆಕಟ್ಟಿ ಹರಿಸುವ ಹರದ-ಸೆಟ್ಟಿಗಳು; ಸಮಾಜದ ಉಳುವೆಂಗೆ ಬೇಕು ಹಗಲಿರುಳು ದುಡಿವ ಕೂಲಿಯಾಳುಗಳು! ಇಂತೀ ಕಜ್ಜಗಳನೆಸಗದಿರೆ ಋಷಿ ಋಷಿಯಲ್ಲ, ನುಸಿ! ಬಿಲ್ಲಾಳು ಬಿಲ್ಲಾಳಲ್ಲ, ಬಿಲ್ಹುಳು! ಸೆಟ್ಟಿ ಸೆಟ್ಟಿಯಲ್ಲ ಚಿಟ್ಟೆ! ಆಳು ಆಳಲ್ಲ, ಬಿಡಿಗೂಳು! ಇವರೆಲ್ಲ ಸಮಾಜದ ಸತ್ತ್ವವನೆ ತಿಂದು ತಿಂದು, ಧಾರಿಣಿಯನೇ ಸಾರರಹಿತವನ್ನಾಗಿಸುತಿಹರು. ಇಂತಹವರ ಇರವೆ ಸಮಾಜದ ಸಾವಿಗೆ ಕಾರಣವಾಗುವುದೆಂದು ಸಾರುತಿರುವ, ನಮ್ಮ ಕಾರಣ-ಪುರುಷ ಕಾಲರಾಯ!

* * *

ಬುದ್ಧಿವಂತರ ಬುದ್ಧಿ ಮಾನವರಂ ತಿದ್ದುವುದಕಲ್ಲದೆ ಕದ್ದು ಕದ್ದು ತಿಂಬುದಕಾಗಿ ನವೆಸುತಿದೆ ನೋಡಾ! ಗಟ್ಟಿಗರಾದ ಜಟ್ಟಿಗರ ತೋಳಬಲ್ಮೆಯಿಂದು ಮಾನವಕುಲದ ಕಟ್ಟಳಿಕೆಯಿಲ್ಲದೆ ಕುಟ್ಟಿ ಕುಟ್ಟಿ ತಿನುವುದರಲ್ಲಿ ವ್ಯಯಿಸುತಿದೆ ನೋಡಾ! ಸಿರಿಯಾಳು-ಸೆಟ್ಟರ ಸಂಪತ್ಪ್ರಾಪ್ತಿಯಿಂದು, ಲೋಕದಲಿ ಶಾಂತಿ-ಸಮತೆಯನು ಸಮೆಯಲಿಕಾಗದೆ ಅಶಾಂತಿ-ವಿಷಮತೆಗಳ ಮಂಗನಾಟಕ್ಕೆ ಹಿಂಗಿಹೋಗುತಿದೆ ನೋಡಾ! ದುಡಿವ ಕೂಲಿಯಾಳುಗಳ ದುಡಿತದ ಪಡಿ, ಯಾರ ಬಾಯಿಗೊ ಬಿದ್ದು ಬಡತನದ ಬಾಳು ಹೆಚ್ಚುತಿದೆ ನೋಡಾ! ಇಂತಿರುವಾಗ ಶಾಂತಿ-ತೃಪ್ತಿ-ತುಷ್ಟಿಗಳಿಗೆ ತಾಣವೆಲ್ಲಿದೆಯೆಂದು ತಿರುತಿರುಗಿ ಕೇಳುವ ನಮ್ಮ ಕೆರಳಿದ ಕಾಲರಾಯ!

* * *

ಅಯ್ಯಾ, ಮತ-ಮತಗಳಲಿ ಹರಿದು ಹಂಚಿಹೋಗಿ ಬಿರಿಗೊಂಡಿದೆ ನಮ್ಮ ಧರ್ಮಜ್ಞಾನದ ಶೀಲ! ಅಯ್ಯಾ, ಕುಲ-ಕುಲಗಳಲಿ ಕಡಿಗೊಂಡು ಹೋಗಿ ಕಳೆಗಟ್ಟಿದೆ ನಮ್ಮ ಕೈ-ಮ್ಮೆಯ ಬಲ! ಜಾತಿ-ಜಾತಿಗಳ ಚಾಳಿಗೆಯಲ್ಲಿ ಜೋತಾಡುತ್ತ ಸೋತುಹೋಗಿದೆ ನಮ್ಮ ಸಂಪತ್ತಿನ ಮೂಲ! ಪಂಗಡ-ಪಂಗಡಗಳಲಿ ಬಿಂಗದಗೊಂಡು ಪಸುಗೆಪಟ್ಟು ಹೋಗಿದೆ ನಮ್ಮ ದುಡಿಮೆಯ ಫಲ! ಅಯ್ಯಾ, ಧರ್ಮದ ಜ್ಞಾನಕ್ಕಾಗಿ ಬುದ್ಧಿಯನು ಬೆಳಗಿಸಯ್ಯಾ! ಒಟ್ಟನು ಕಟ್ಟಲಿಕಾಗಿ ಬೀರವನು ಪೊಳಗಿಸಯ್ಯಾ! ಎಲ್ಲರ ಹಸಿವಿಗಾಗಿ ಸಿರಿವಂತಿಕೆಯನು ತೊಳಗಿಸಯ್ಯಾ! ಲೋಗರ ಯೋಗಕ್ಷೇಮಕ್ಕಾಗಿ ದುಡಿವ ದೇಹವ ಪಳಗಿಸಯ್ಯಾ! ಇದರಿಂದಲೆ ಇಹವುಂಟು, ಇದರಿಂದಲೆ ಪರವುಂಟು; ಇದನೆ ಜೀವನ್ಮುಕ್ತಿಯೆನ್ನುವ ನಮ್ಮ ಜ್ಞಾನಿಗಳ ಜ್ಞಾನಿ ಕಾಲರಾಯ!



ಒರಟು ಕಾಗದ

ಈ ಸಂಚಿಕೆಗೆ ಒರಟು ಕಾಗದವನ್ನು ಬಳಸುವಂತಹ ಅನಿವಾರ್ಯ ಸಂದರ್ಭ ಒದಗಿಯೆ ಬಿಟ್ಟಿತು. ಪರಿಸ್ಥಿತಿಯನ್ನು ಅರಿತಿರುವ ವಾಚಕ ವರ್ಗಕ್ಕೆ ಕ್ಷಮಾಯಾಚನೆಯ ಆವಶ್ಯಕತೆಯೇನೂ ಇಲ್ಲವೆಂದು ನಮ್ಮ ನಂಬುಗೆ. ಸಮಯಕ್ಕೆ ಸರಿಯಾಗಿ ಇಂತಹ ಕಾಗದವಾದರೂ ದೊರೆತು, ಜಯಂತಿಯ ಸಮಯನಿಷ್ಠತೆಗೆ ಸಹಾಯವಾಯಿತಲ್ಲ— ಎಂದು ಸಮಾಧಾನ ನಮಗೆ. ಈ ಸಲದ ಕಾಗದ ಇಷ್ಟೊಂದು ಒರಟಾಗಿ ಕಪ್ಪಾಗಿ ಕಂಡರೂ, ಹಿಂದಿನ ಸಲ ಉಪಯೋಗಿಸಿದ ಒಳ್ಳೆಯ ಕಾಗದಕ್ಕಿಂತ ಹೆಚ್ಚಿಗೆ ಹಣ ಸುರಿಯಬೇಕಾಯಿತೆಂದು ಹೇಳಿದರೆ ಅನೇಕರಿಗೆ ಅಸತ್ಯವೆಂದು ಕಾಣಬಹುದು; ಆದರೆ ಇದು ಸಂಪೂರ್ಣ ಸತ್ಯ-ಸಂಗತಿ. ಸದ್ಯದ ಮಹಾಯುದ್ಧ ಹಿಂದುಸ್ತಾನಕ್ಕೆ ತಂದೊದವಿಸಿರುವ ವಿಚಿತ್ರ ಪರಿಸ್ಥಿತಿಗಿದೊಂದು ಸಣ್ಣ ಉದಾಹರಣೆ. ಈಗ ನಮ್ಮ ವಾಚಕರಿಗೆ ಸಂತೋಷದ ಸಂಗತಿಯೊಂದನ್ನು ವಿದಿತಪಡಿಸುವುದೆಂದರೆ: ಇಲ್ಲಿಯ ಕಾಗದ ವ್ಯಾಪಾರಿಗಳಾದ ಶ್ರೀಮಾನ್ ಜಿ. ಕೆ. ಕೇಳಕರರು— ಇನ್ನು ಮುಂದೆ ಆರು ತಿಂಗಳಿಗೆ ಸಾಲುವಷ್ಟು— ಒಳ್ಳೆಯ ಕಾಗದವನ್ನು ಈಗಾಗಲೆ ಪೂರಯಿಕೆಮಾಡಿದ್ದಾರೆ; ಮುಂದೆ ಕೂಡ ಖಂಡಿತ ಪೂರಯಿಸುವುದಾಗಿ ಮಾತುಕೊಟ್ಟಿದ್ದಾರೆ. ಹಣ ಹಿಡಿದುಕೊಂಡು ಅಲೆದಾಡಿದರೂ ಬೇಗನೆ ಕಾಗದ ಸಿಕ್ಕದಂತಹ ಈ ಕಾಲದಲ್ಲಿ—ಕೇವಲ 'ಜಯಂತಿ'ಯ ಮೇಲಿನ ವಿಶ್ವಾಸದಿಂದ— ಮನೆಯ ವರೆಗೆ ತಂದು ಪೂರಯಿಸಿಕೊಡುವ ಅಭಿವಚನವಿತ್ತುದಕ್ಕಾಗಿ, ಶ್ರೀ. ಕೇಳಕರರವರಿಗೆ ನಮ್ಮ ಅಭಿನಂದನೆಗಳನ್ನು ಸಲ್ಲಿಸುವುದು ಅಗತ್ಯವಾಗಿದೆ. ಇನ್ನು ಮೇಲೆ ಜಯಂತಿ ಒಳ್ಳೆಯ ಕಾಗದದಲ್ಲಿಯೆ ಪ್ರಕಟವಾಗುವುದೆಂದು ನಮ್ಮ ವಾಚಕವರ್ಗಕ್ಕೆಲ್ಲ ಸಾರಿ ಹೇಳುವ ಧೈರ್ಯ ನಮಗಿಂದು ಬಂದಿದೆ.

'ಜಯಂತಿ' ಸಣ್ಣ ಕತೆಗಳ ಮೇಲಾಟ

ಈ ಸಂಚಿಕೆಯ ಮೇಲೋಲೆಯ ಕೊನೆಯ ಪುಟದ ಮೇಲೆ ಪ್ರಕಟವಾದ ಪ್ರಕಟನೆಯನ್ನು ಎಲ್ಲರೂ ಲಕ್ಷ್ಯಪೂರ್ವಕವಾಗಿ ಓದಿ ನೋಡಬೇಕು. ಎರಡಿದ್ದ ಬಹುಮಾನಗಳು ಮೂರಾಗಿವೆ. ಬಹುಮಾನಧನದ ಸಂಖ್ಯೆಯೂ ದೊಡ್ಡದಾಗಿದೆ. ಇದಕ್ಕೆ ಕಾರಣರೆಂದರೆ ಮುಂಬಯಿಯಲ್ಲಿರುವ ಜಯಂತಿಯ ಹಿತಚಿಂತರೊಬ್ಬರು. ಇವರು ಮೊದಲನೆಯ ಬಹುಮಾನವನ್ನು ೧೦ ರಿಂದ ೧೫ ಕ್ಕೆ ಹೆಚ್ಚಿಸುವುದಾಗಿ ಹೇಳಿ, ಹೆಚ್ಚಿನ ಹಣವನ್ನು ತಾವು ಕೊಡುವುದಾಗಿ ಹೇಳಿದ್ದಾರೆ. ಮೂರನೆಯ ಬಹುಮಾನವೊಂದನ್ನಿರಿಸಬೇಕೆಂತಲೂ ಅದಕ್ಕಾಗಿ ೫ ರೂ. ಗಳನ್ನು ತಾವು ಕೊಡುವೆವೆಂತಲೂ ಧಾರವಾಡದ ನಮ್ಮ ಸ್ನೇಹಿತರೊಬ್ಬರು ಹೇಳಿರುವರು. ಇವೆರಡರ ನಡುವಿನ ಬಹುಮಾನ ಇನ್ನೂ ಸ್ವಲ್ಪ ಹೆಚ್ಚಾಗಿರಬೇಕೆಂಬ ಅಪೇಕ್ಷೆಯಿಂದ, ನಾವು ಅದನ್ನು ಐದರಿಂದ ಎಂಟಕ್ಕೆ ಏರಿಸಿದ್ದೇವೆ. ಮೇಲಾಟದಲ್ಲಿ ಹೆಚ್ಚು ಜನಕ್ಕೆ ಭಾಗವಹಿಸಲು ಅನುಕೂಲವಾಗಬೇಕೆಂದು ಒಂದು ತಿಂಗಳ ಕಾಲಾವಧಿಯನ್ನೂ ಬೆಳೆಯಿಸಿದ್ದೇವೆ. ಕನ್ನಡ ನಾಡಿನ ಎಲ್ಲ ಕತೆಗಾರರೂ, ಯಾವ ಸಂಕೋಚವನ್ನೂ ತಾಳದೆ ಈ ಮೇಲಾಟಲ್ಲಿ ಭಾಗವಹಿಸಿ, ಇದನ್ನು ಯಶಸ್ವಿಯನ್ನಾಗಿಸಬೇಕಾಗಿ ಬಿನ್ನಹ.

ವ್ಹಿ. ಪಿ. ಗಳ ನಿರಾಕರಣೆ

ವರ್ಗಣಿಯ ಅವಧಿ ಮುಗಿಯುವುದಕ್ಕೆ ಒಂದು ತಿಂಗಳ ಮೊದಲೆ ಜಯಂತಿಯ ಸಂಚಿಕೆಯೊಡನೆ 'ಮುಂದಿನ ತಿಂಗಳಿಗೆ ನಿಮ್ಮ ಚಂದಾ ಅವಧಿ ಮುಗಿಯುವುದು. ಅಷ್ಟರಲ್ಲಿಯೆ ತಮ್ಮ ಹೊಸ ವರ್ಷದ ವರ್ಗಣಿಯನ್ನು ಕಳುಹಬೇಕು. ಮುಂದೆ ಪತ್ರಿಕೆ ಬೇಡವಾದರೆ ದಯೆಯಿಟ್ಟು ಕಾಗದ ಬರೆದು ಹಾಗೆ ಸ್ಪಷ್ಟವಾಗಿ ತಿಳುಹಬೇಕು. ಎರಡನ್ನೂ ಮಾಡದಿದ್ದರೆ ಮುಂದಿನ ಸಂಚಿಕೆಯನ್ನು ವ್ಹಿ. ಪಿ. ಯಿಂದ ಕಳುಹುವೆವು; ಸ್ವೀಕರಿಸಿ ಉಪಕಾರ ಮಾಡಬೇಕು. ವ್ಹಿ. ಪಿ. ಕಳುಹಿದರೆ ವ್ಯರ್ಥ ಮೂರಾಣೆ ಹೆಚ್ಚಿನ ವೆಚ್ಚ ತೆರಬೇಕಾಗುವುದು' ಎಂಬರ್ಥದ ಪ್ರಾರ್ಥಮಿಕ ನೋಟೀಸೊಂದನ್ನು ನಾವು ಕಳುಹುತ್ತಿರುವೆವು. (ಇದನ್ನು ನೋಡಿದವರಲ್ಲಿ ಕೆಲವರು ಚಂದಾ ಹಣ ಕಳುಹುವರು; ಎಲ್ಲಿಯೊ ಅಪರೂಪವಾಗಿ ಒಬ್ಬಿಬ್ಬರು ಮಹನೀಯರು, ಬೇಡವೆಂದು ಕಾಗದ ಬರೆಯುವ ಉಪಕಾರವನ್ನು ಮಾಡುವರು.) ಇದಾದ ಮೇಲೆ ೧೫ ದಿನಗಳಿಗೆ ಮೊದಲು, ಮೇಲಿನ ಮಾತುಗಳನ್ನೆ ಒಳಗೊಂಡ ಕಾಗದವೊಂದನ್ನು ಬರೆದು ಎರಡನೆಯ ಸಲ ಜ್ಞಾಪಕಕೊಡುವೆವು. ಇಷ್ಟು ಮಾಡಿದ ಮೇಲೂ ಉತ್ತರ ಹಣ ಬಾರದವರ ಕಡೆಗೆ ವ್ಹಿ. ಪಿ. ಕಳುಹುವೆವು. ಆದರೂ ಅವುಗಳನ್ನು ಸ್ವೀಕರಿಸದೆ ನೂಕಿಬಿಡುವ ಮಹಾಪುರುಷರು ೧೦೦ ರಲ್ಲಿ ಸುಮಾರು ೩೫ ಜನ ಹೊರಡುವರು. ಸ್ವೀಕರಿಸಿದ ೬೫ ಜನರಲ್ಲಿ ೬೦ ಕ್ಕಿಂತ ಹೆಚ್ಚು ಜನ ಸಾಮಾನ್ಯ ಸ್ಥಿತಿಯವರು— ಹಳ್ಳಿಗರು. ನೂಕಿಬಿಡುವ ೩೫ ಜನರಲ್ಲಿ ೩೩ ಕ್ಕಿಂತ ಹೆಚ್ಚು ದೊಡ್ಡ ಮನುಷ್ಯರು. ಇವರಲ್ಲಿ ತಿಂಗಳಿಗೆ ನೂರಾರು ಸಂಬಳ ತಿನ್ನುವ ಸರಕಾರಿ ಅಧಿಕಾರಿಗಳಿರುವರು; ಸಾವಿರಾರು ರೂಪಾಯಿ ಸಂಪಾದನೆ ಮಾಡುವ ವಕೀಲ-ಡಾಕ್ಟರರಿರುವರು (ಪತ್ರಕರಿಗೂ ಜವಾಬ್‌ದಾರರಿಗೂ ಓದಬೇಕಾದ ವಿಷಯವೆ ಗೊತ್ತಿಲ್ಲ). ಯಾರಿಂದ ಪತ್ರಿಕೆಗಳು ಹೆಚ್ಚಿನ ಪೋಷಣೆ ಪಡೆದು ಅಭಿವೃದ್ಧಿ ಹೊಂದಬೇಕೋ ಅಂತಹರಿಂದ ಈ ಬಗೆಯ ಒಳಹೊಡೆತ. ನೂರು ವ್ಹಿ. ಪಿ. ಗಳಲ್ಲಿ ೩೫ ತಿರುಗಿ ಬಂದರೆ ೭ ರೂ. ೧ ಆ. ೯ ಪೈಗಳ ಅಂಚೆಯ ವೆಚ್ಚದ ವ್ಯರ್ಥಹಾನಿ ನಮಗೆ. ಅಲ್ಲದೆ ಅಷ್ಟು ಸಂಚಿಕೆಗಳು ಉಪಯೋಗವಿಲ್ಲದುವುಗಳಾಗಿ ಬಂದು ಕಾರ್ಯಾಲಯದಲ್ಲಿ ಬೀಳುವುವು. ಯಾವ ದೊಡ್ಡ ಮನುಷ್ಯರೆ ಆಗಲಿ ಸಾಮಾನ್ಯ ಮನುಷ್ಯರೆ ಆಗಲಿ, ದಯೆಯಿಟ್ಟು ತಮ್ಮ ನೈತಿಕ ಜವಾಬ್‌ದಾರಿಯನ್ನು ಅರಿತುಕೊಂಡು, ಬೇಡವಾಗಿದ್ದರೆ ಮೊದಲೆ

(೫೨ ನೆಯ ಪುಟಕ್ಕೆ ಮುಂದುವರಿವುದು)

೧. ಕನ್ನಡ-ಕಲಿ ಅರ್ಥಾತ್ ಇಂಗ್ಲಿಶ ಮರೆ

ಬೆಳಗಾಂವಿಯ ಕರ್ನಾಟಕ ವಿಶ್ವವಿದ್ಯಾಲಯ ಪರಿಷತ್ತಿನ ಉದ್ಘಾಟನವನ್ನು ಮಾಡುವಾಗ, ಸರ್ ಸಿದ್ದಪ್ಪ ಕಂಬಳಿಯವರು ಇಂಗ್ಲಿಷಿನಲ್ಲಿ ಮಾತನಾಡಿದರಷ್ಟೆ! ಅಷ್ಟಕ್ಕೆಯೆ 'ಸರ್ ಸಿದ್ದಪ್ಪನವರಿಗೆ ಕನ್ನಡ ಬರುವುದಿಲ್ಲವೆ?' ಎಂದು ಬೆಳಗಾಂವಿಯ ಬಂಟರೊಬ್ಬರು ಹರಿಹಾಯ್ದಿದ್ದಾರೆ. ಪಾಪ! ಸರ್ ಸಿದ್ದಪ್ಪನವರ ಗೂಢವೆ ತಿಳಿದಿಲ್ಲವೇನೊ ಈ ಲೆಕ್ಕಣಿ ಲಂಪಟರಿಗೆ! ಸರ್ ಸಾಹೇಬರಿಗೆ ಕನ್ನಡ ಬರುವುದಿಲ್ಲವೆಂದಲ್ಲ; ಬೆಳಗಾಂವಿಯವರಿಗೆ ಕನ್ನಡ ತಿಳಿಯುವುದಿಲ್ಲ ಎಂದು ಸಾಹೇಬರು ಇಂಗ್ಲಿಷಿನಲ್ಲಿ ಮಾತನಾಡಿದ್ದು. ಇದಲ್ಲದೆ ಹಿಂದೆ ಶಿಕ್ಷಣಮಂತ್ರಿಗಳಿದ್ದವರೆಲ್ಲ ಬೆಳಗಾಂವಿಯಲ್ಲಿ ಮರಾಠಿಯಲ್ಲಿಯೆ ಮಾತನಾಡಬೇಕೆಂಬ ಪದ್ಧತಿ ಇಲ್ಲವೆ? ಸರ್ ಸಿದ್ದಪ್ಪನವರು ಮರಾಠಿಯನ್ನರಿಯದ ಕನ್ನಡ ಮುಂದಾಳಾಪ್ಪರಿಂದ ಪಾಪ! ಅವರಿಗೆ ಇಂಗ್ಲಿಷಿನಲ್ಲಿ ಮಾತನಾಡುವ ಪ್ರಸಂಗಬಂದಿತು. ಇದಕ್ಕಾಗಿ 'ಧಾರವಾಡದವರು ನಿಷೇಧ ಸಭೆಯನ್ನು ಮಾಡಬಾರದು' ಎಂದೂ ಈ ಬೆಳಗಾಂವಿಯ ಲೇಖಕರು ಬೇಡಿಕೊಂಡಿದ್ದಾರೆ. ಅದಕ್ಕಾಗಿ ಮಂಗರಾಯನು ಅಭಯವಚನವನ್ನು ಕೊಡುತ್ತಲಿದ್ದಾನೆ--ಕೇಳಿ! ಬೆಳಗಾಂವಿಯಲ್ಲಿ ಬಿರುಗಾಳಿ ಎದ್ದು, ಮುಖಕ್ಕೆ ಧೂಳು ಬಡೆದು, ದಾರಿ ಕಾಣದಂತೆ ಆಗುವವರೆಗೆ ಧಾರವಾಡದವರು ಸಭೆಯನ್ನೆ ಕರೆಯುವುದಿಲ್ಲ. ಆದ್ದರಿಂದ, ಕನ್ನಡ ನೊರೆಯೆ, ಬೆಳಗಾಂವಿಯ ಮರಿಯೆ, ನಿನಗೆ ಹೆದರಿಕೆ ಬೇಡ! ಮಂಗರಾಯನದೊಂದು ಮಾರ್ಮಿಕ ಮಾತನ್ನು ಕೇಳು. ಕೋಡು ಅನಂತ ಎಂದು ಇರಿಯುವ ಮುಂಚೆ, ಕೋಡು ಚಿಕ್ಕವು ಎಂಬುದನ್ನು ಮರೆಯಬೇಡ. ನೂರು ವರ್ಷ ಬಾಳು, ಮಂಗರಾಯನ ಮಾತನ್ನುಮಾತ್ರ ಕೇಳು!

೨. ಸೋಡಚೀಟಿಯ ಸತ್ಯಾಗ್ರಹ

'ಬ್ರಿಟಿಶರು ತಾವಾಗಿಯೆ ಮತ್ತು ಆದಷ್ಟು ಸಿಗ್ಗ ಇಲ್ಲದೆ ತೀವ್ರ ಹಿಂದುಸ್ತಾನವನ್ನು ಬಿಟ್ಟು ಹೋಗಬೇಕು ಎಂಬ ಮಹಾತ್ಮರ ಹೇಳಿಕೆಯಿಂದ ನಮ್ಮ ರಾಜಕಾರಣದಲ್ಲಿ ನವಚೈತನ್ಯ ಬಂದಿದೆ ಎಂಬುದರ ಬಗ್ಗೆ ಮಂಗರಾಯನ ಅಭಿಪ್ರಾಯವೇನಿದೆ?' ಎಂದು ಕುತೂಹಲದಿಂದಲೂ ಕನಿಕರದಿಂದಲೂ ಅನೇಕ ವಾಚಕರು ಕೇಳುತ್ತಲಿದ್ದಾರೆ. ಆದರೆ ಮಂಗರಾಯನು ಇತ್ತ ಬ್ರಿಟಿಶರ ಕೋಪ, ಇತ್ತ ಮಹಾತ್ಮರ ಶಾಪ ಎಂಬ ಕತ್ತರಿಯಲ್ಲಿ ಸಿಲುಕಿ ಹಲ್ಲು ಕಿರಿಯಬೇಕಾಗಿದೆ. ಏನೆಂದು ಅಭಿಪ್ರಾಯವನ್ನು ಕೊಡಬೇಕು—ಎಂದರೆ ಅರ್ಥಾತ್ ನಿಮ್ಮ ಮನಸಿನಲ್ಲಿದ್ದುದನ್ನೆ ಹೇಳಬೇಕಲ್ಲವೆ ನಿಮಗೆ ಸಂತೋಷ-ಸಮಾಧಾನಗಳಾಗಬೇಕಾದರೆ? ಹಾಗಾದರೆ, ಇದೊ! ಧುಮುಕುವ ಮಂಗರಾಯ ಕಲ್ಪನಾತರಂಗಗಳ ತಳಕ್ಕೆ! ಮಹಾತ್ಮರು ಸ್ವರಾಜ್ಯದ ಸದಿಚ್ಛೆಯಿಂದಲೆ ಹೀಗೆ ಹೇಳಿರಬಹುದೆ? ಬ್ರಿಟಿಶರಿದ್ದುದಕ್ಕೆ ಹಿಂದುಸ್ತಾನ ಪರತಂತ್ರ, ಅರ್ಥಾತ್ ಬ್ರಿಟಿಶರು ಹೋದರೆ ಹಿಂದುಸ್ತಾನವು ಸ್ವತಂತ್ರ ಎಂದು ಇನರ್ ವಾಯಿಸ್ (Inner voice) ಎಂಬ ಅಪರನಾಮಾಭಿಧಾನವುಳ್ಳ ಅಂತರಾತ್ಮನೆಂದು ಖ್ಯಾತಿವೆತ್ತ ಒಳದನಿ ಹೇಳಿರಬಹುದೆ? ಅಥವಾ ಬ್ರಿಟಿಶರಿಗಿಂತ ಮುಂಚೆ ಒಳಹೊಕ್ಕ ಮುಸಲ್ಮಾನರು ಪಾಕಿಸ್ತಾನವೆಂದು ಹೊರಬೀಳಲು, ತದನಂತರ ಬ್ರಿಟಿಶರೂ ಹೊರಬೀಳುವುದು ಕ್ರಮಪ್ರಾಪ್ತ ಎನಿಸಿರಬಹುದೆ? ಅಥವಾ ಮುಂಚೆ ಶಾಸನಬದ್ಧವಾಗಿ ಬ್ರಿಟಿಶರಿಗೂ ಮುಸಲ್ಮಾನರಿಗೂ ನೋಟೀಸನ್ನು ಕೊಟ್ಟು, ಅವರು ಹೊರಬೀಳದಿದ್ದರೆ ತಾವೇ ಹೊರಬೀಳುವ ಸತ್ಯಾಗ್ರಹವನ್ನು ಹೂಡುವ ಹವಣಿಕೆಯಲ್ಲಿದ್ದಾರೆಯೆ ಭಗವಾನ್—ಅಲ್ಲಲ್ಲ—ಮಹಾತ್ಮಾ ಗಾಂಧಿಯವರು? ಅಥವಾ—ಸಾಕು. ಡಿಫೆನ್ಸ್ ಆಫ್ ಇಂಡಿಯಾ ಆಕ್ಟಿನ ಆಣೆಯಿಟ್ಟು ಮಂಗರಾಯನು ಹೇಳುವನಲ್ಲಾ—ಇಷ್ಟೆ ಸಾಕು! ಇದಕ್ಕಿಂತಲೂ ಹೆಚ್ಚಿಗೆ ಹೇಳಬಯಸಿದರೆ ಮಂಗರಾಯನ ನೈಗೆ ಒಳ್ಳೆಯದಲ್ಲ.

೩. ಯಾವ ಠಿಕಾಣೆ, ನಾ ಕಾಣೆ!

'ಮುಂಬರುವ ನಮ್ಮ ವಿಶ್ವವಿದ್ಯಾಲಯಕ್ಕೆ ಮದ್ರಾಸ-ಮೈಸೂರ-ಆ್ಯಂಡ್-ಸದರ್ನ್‌ಮರಾಠಾ ಯುನಿವರ್ಸಿಟಿ (M. M. & S M.) ಎಂದು ಯಾಕೆ ಹೆಸರಿಡಬಾರದು?' ಎಂದು ಕಿಡಿಗೇಡಿತನದಿಂದಲೊ ಕರುಳಿನಿಂದಲೊ ವಾಚಕರೊಬ್ಬರು ಮಂಗರಾಯನನ್ನು ಕೇಳಿದ್ದಾರೆ. ಎಂತಹ ಅವಿವೇಕತನ! ಎಂದರೆ – ವಿಶ್ವವಿದ್ಯಾಲಯವು ಯಾವ ಊರಿನಲ್ಲಿ ಸ್ಥಾಪಿತವಾಗುವುದೆಂಬುದನ್ನು ಅರಿಯುವ ಮುಂಚೆಯೆ ಅದಕ್ಕೆ ತಕ್ಕ ಹೆಸರನ್ನಿಡಬೇಕೆಂಬ ಹಂಬಲ! ಇದೆಂತಹ ಅವಿವೇಕ! ಕರ್ನಾಟಕ ವಿಶ್ವವಿದ್ಯಾಲಯವನ್ನು 'ಕ್ಷ' ಊರಿನಲ್ಲಿ ಸ್ಥಾಪಿಸಬೇಕೆಂದು ಕವಿಗಳೊಬ್ಬರು ಹೇಳಿಲ್ಲವೆ? ಆದರೆ 'ಯ' ಊರಿನಲ್ಲಿ ಯಾಕೆ ಸ್ಥಾಪಿಸಬಾರದು ಎಂದು ಕವಿಗಳಲ್ಲದವರ ಆಕ್ಷೇಪ. ಇವೆರಡನ್ನೂ ತಪ್ಪಿಸುವುದಾದರೆ ಹುಕ್ಕೇರಿ ರೋಡಿನಲ್ಲಿ ನಮ್ಮ ವಿಶ್ವವಿದ್ಯಾಲಯವನ್ನು ಸ್ಥಾಪಿಸಬೇಕೆಂದು ಮಂಗರಾಯನ ಸೂಚನೆ. 'ಕ್ಷ' 'ಯ' ಮೊದಲಾದವುಗಳ ಬಾಧೆ ತಪ್ಪಿಸಲು ಅದೇ ಯೋಗ್ಯವಾದ ಆರೋಗ್ಯಧಾಮ. ಇದಲ್ಲದೆ ಕಟ್ಟಿಗೆ ಕ್ಯಾನರಾ ಜಿಲ್ಲೆಯಲ್ಲಿ, ಕಲ್ಲು ಉತ್ತರ ಕರ್ನಾಟಕದಲ್ಲಿ, ಕಬ್ಬಿಣ ಮೈಸೂರಿನಲ್ಲಿ, ಉಸುಕು ಮದರಾಸಿನಲ್ಲಿ ಇದ್ದುದರಿಂದ ಹೊಸತಾಗಿ ಕಟ್ಟುವುದೂ ಅನುಕೂಲವಾಗಲಿಕ್ಕಿಲ್ಲ; ಆದರೆ ಇವೆಲ್ಲ ಪ್ರದೇಶಗಳನ್ನೂ ಒಂದುಗೂಡಿಸುವ ಶಕ್ತಿ ಸದರ್ನ್‌ಮರಾಠಾ ರೈಲಿಗೆ ಇದ್ದುದರಿಂದ, ಸದರ್ನ್‌ಮರಾಠಾ ಕೇಂದ್ರದಲ್ಲಿಯೇ ವಿಶ್ವವಿದ್ಯಾಲಯ ಸ್ಥಾಪಿತವಾಗಬೇಕೆಂದೆನಿಸುವುದೂ ಅಷ್ಟೇನು ಅಸಹಜವಲ್ಲ. ಅಂತೂ ಈ ವಿಚಾರವನ್ನು ಮಾಡಲು ಕೇಂದ್ರದವರು—ಅಲ್ಲ—ಆಂಧ್ರ—ಬೆಳಗಾಂವಿಯವರು ಇನ್ನೊಮ್ಮೆ ಪರಿಷತ್ತನ್ನು ಕರೆಯಬೇಕೆಂದು ಮಂಗರಾಯನ ಸೂಚನೆ—ಎಂದರೆ ಅಷ್ಟರಲ್ಲಿ ಮಂಗರಾಯನೂ ತನ್ನದೊಂದು ಕಾವ್ಯಗಾಯನವನ್ನು ಏರ್ಪಡಿಸಬಹುದು:

ಕರೆಯೋಣು ಬಾರs ಕರೆಯೋಣು ಬಾ ||
ಆ ಜಾಗ ! ಈ ಜಾಗ ! ನೋಡೋಣ
ಕರೆದಾಗ !
ನನ್ನ ತಿಕಾಣೆವಾಗ ! ಕರೆಯೋಣು ಬಾ,
ಮರೆಯೋಣು ಬಾ ||

* * *

೪. ಸಮಸ್ಯೆಗಳ ಸಮ್ಮೇಳನ

ಇತ್ತೀಚೆಗೆ 'ಕನ್ನಡ ಸಮಸ್ಯೆ' ಎಂಬ ವಿಷಯವಾಗಿ ವಾಗ್ಯುದ್ಧ ನಡೆದದ್ದು ಮಂಗರಾಯನಿಗೆ ಮೋಜಿನ ಮಾತಾಗಿದೆ. ಯಾಕೆಂದರೆ, ಬುದ್ಧಿಯ ಹಿರಿತನದಿಂದಿಷ್ಟೆ ಅಲ್ಲದೆ ಆಧುನಿಕ ರಾಷ್ಟ್ರೀಯ ದೃಷ್ಟಿಯಿಂದಲೂ ಮಂಗರಾಯನು ಮಾನವ-ಜಾತಿಗೆಯೆ ಮೂಲಪುರುಷನಿದ್ದಾನೆ. ಆದಕಾಗಿ, ಮಾನವತೆಯನ್ನು ಬಿಟ್ಟು ಜಾತಿಗಾಗಿಯೆ ಕಡಿದಾಡುವ ಮಾನವ ಜಾತಿಗಾಗಿ, ಅಂತಹ ಮರುಳಿಗಾಗಿ, ಮಮತೆಯ ಮೂತಿಗುಳ್ಳಗೆ ಮಂಗಜ್ಞನಿಗೆ. ಹೋಗಲಿ, ಮಂಗಜ್ಞನು ಹೇಳಬೇಕೆಂದಿದ್ದ ಮಾತನ್ನ ಮರೆತನಲ್ಲ! ಅದೆಂದರೆ, ಕನ್ನಡ ಸಮಸ್ಯೆಗಳಿವೆ, ಬೇರೆ ಸಮಸ್ಯೆಗಳಿವೆ, ಎಂದರೆ ನಿಜವಾದ ಕನ್ನಡ ಸಮಸ್ಯೆಗಳು ಬೇರೆಯೆ ಆಗಿವೆ. ಅವುಗಳಡೆಂತೆಂತೆನೆ :

(೧) ಸಾಹಿತಿಗಳೆಲ್ಲ ಪಂಪ-ರನ್ನರ ಮೇಲೆಯೆ ಯಾಕೆ ವ್ಯಾಖ್ಯಾನಿಸುವರು ?

(೨) ಅಸಾಹಿತಿಗಳೆಲ್ಲ 'ಸಮ್ಮಿಸ್ಟೀ' ಯ ಮೇಲೆಯೆ ಯಾಕೆ ಉಪನ್ಯಾಸಿಸುವರು ?

(೩) ಮುಂದಾಳುಗಳೆಲ್ಲ 'ತರುಣರ ಕರ್ತವ್ಯ' ವನ್ನಷ್ಟೆ ಕುರಿತು ಯಾಕೆ ಉದ್ಘೋಷಿಸುವರು ?

(೪) ಈ ಸದ್ಯದ ಸ್ಥಿತಿಯಲ್ಲಿ ಪಂಪ-ರನ್ನರಿಂದ ಹೊಟ್ಟೆ ತುಂಬದ, ದಾರಿದ್ರ್ಯತರುಣರ ಕರ್ತವ್ಯವೇನು ?

(೫) 'ಕನ್ನಡ ನುಡಿ' ಎಂಬ ವಾರಪತ್ರಿಕೆಯಲ್ಲಿ ಬರುವ ಅಗ್ರಲೇಖಗಳ ಅರ್ಥ-ಉದ್ದೇಶ-ಗಾಂಭೀರ್ಯಗಳನ್ನು ಹುಡುಕುವ ಪರಿಶೋಧಕನಿರುವನೆ ?

(೬) ದಿನಪತ್ರಿಕೆಗಳಲ್ಲಿ ಸಾಯುತ್ತಿರುವ ಕನ್ನಡಕ್ಕೆ ಔಷಧಿ ಇದೆಯೆ ?

(೭) ಸಂಸ್ಥಾನಗಳನ್ನೊಳಗೊಂಡ ಇಡಿಯ ಕನ್ನಡ ಪ್ರಾಂತದಲ್ಲಿ ಮೇಲಧಿಕಾರಿಗಳು ಕನ್ನಡೇತರರೇಕೆ ?

ಇಂತಹ ಇನ್ನೂ ಅನೇಕ ಸಮಸ್ಯೆಗಳಿವೆ. ಅವುಗಳನ್ನು ಬಿಡಿಸಲು ಮಂಗರಾಯನು ಸಮ್ಮೇಳನವನ್ನು ಕೂಡಿಸಬೇಕೆಂದಿದ್ದಾನೆ. ಈ ಸಮಸ್ಯಾ ಸಮ್ಮೇಳನದಲ್ಲಿ ಬುದ್ಧಿಬಾವುಟವೆ ಹಾರುವುದರಿಂದ, ಯಾರ ಆಕ್ಷೇಪಣೆಯೂ ಬರಲಿಕ್ಕಿಲ್ಲವೆಂದು ಮಂಗರಾಯನ ಊಹೆ. ಬಂದರೂ—ಅಥವಾ, ಆ ಮೇಲೆ ಕನ್ನಡ ನುಡಿಯನ್ನು ನೋಡೋಣ.

* * *

೫. ಸುದ್ದಿಯೆ ನಿಬುದ್ಧಿಯೆ ?

'ನಮ್ಮದೊಂದು—ದ ಹತ್ತಿರ ಸುಡುವ ಕಟ್ಟಿಗೆ ಅಡ್ಡ ತೆಗೆಯಲ್ಪಟ್ಟಿದೆ. ಬೇಕಾದ ವೇಳೆಗೆ ಹೇಳಿದ ಸ್ಥಳಕ್ಕೆ ತಂದು ಮುಟ್ಟಿಸುವೆವು. ಎಲ್ಲರೂ ಇದರ ಲಾಭವನ್ನು ಪಡೆದುಕೊಳ್ಳಬೇಕು' ಎಂದು ವಿಜಾಪುರದ ವ್ಯಾಪಾರಿಗಳೊಬ್ಬರು ಸಂಯುಕ್ತ ಕರ್ನಾಟಕದ ಒಂದು ಸಂಚಿಕೆಯಲ್ಲಿ ಇಡಿಯ ಕರ್ನಾಟಕಕ್ಕೇ ಎಚ್ಚರಿಕೆಯನ್ನು ಕೊಟ್ಟಿದ್ದಾರೆ. ಇಂತಹ ಮಹತ್ತ್ವದ ಮಾತಿನ ಮರ್ಮ ಇಲ್ಲವೆ ಮೋಜು ಏನಿರಬಹುದೆಂದು ಮಂಗರಾಯನಿಗೆ ದಿಗಿಲುಬಿದ್ದಿದೆ. (೧) ಎಲ್ಲರಿಗೂ ಈ ರೀತಿ ಅನುಕೂಲ ಒದಗಿಸಿ, ಅವರನ್ನು ಅಜಾಮಿಳನಂತೆ ಸಾಯುವ ಕ್ಷಣವಲ್ಲಾದರೂ ಹಿಂದು ಧರ್ಮಕ್ಕೆ ಸೇರಿಸುವ ಹಿಂದು ಮಹಾಸಭೆಯ ತಂತ್ರವಿದಿರಬಹುದೆ ? (೨) ಯುದ್ಧದ ಕಾಲದಲ್ಲಿ ಧಾರಣೆ ಏರಿ, ಇರುವುದು ಎಷ್ಟು ಕಠಿಣವಾಗಿದೆ ಅಷ್ಟೆ ಸಾಯುವುದು ಸುಲಭ ಎಂಬ ಉದಾತ್ತ ತತ್ತ್ವಪ್ರಚಾರವಿದಿರಬಹುದೆ? (೩) ಬೆಳೆವ ಕನ್ನಡ ಸಾಹಿತ್ಯದ ತೀರ ಆಧುನಿಕ ಶೈಲಿಯ ಸ್ಯಾಂಪಲ್ (sample) ದ ಪ್ರದರ್ಶನವೊ ? (೪) ವಿಮಾ ಕಂಪನಿಯ ಏಜೆಂಟರ ಕುಚೋದ್ಯವಿರಬಹುದೆ ? ಇಲ್ಲವೆ (೫) ವಾಡಿಕೆಯಂತೆ ಇನ್ನೊಂದು ಸಂಚಿಕೆಯಲ್ಲಿ 'ಎಲ್ಲರೂ ಇದರ ಲಾಭವನ್ನು ಪಡೆದುಕೊಳ್ಳಬೇಕು ಎಂಬುದರ ಬದಲಾಗಿ 'ಎಲ್ಲ ಕನ್ನಡಿಗರೂ ಇದರ ಲಾಭವನ್ನು ಪಡೆದುಕೊಳ್ಳಬೇಕು ಎಂದು ಓದಿರಿ' ಎಂಬ ತಿದ್ದುಪಡೆ ಬರಬಹುದೆ? ನೆನೆದರೆ ಮಂಗರಾಯನ ಮೈಗೂದಲು ನಿಮಿರುವುದು, ಕೈ ಕೆರೆಯುವುದು. ಪಡೆಬರೆಹವನ್ನಾಗಲಿ ಸುದ್ದಿಗಾರರ ಬರೆಹವನ್ನಾಗಲಿ ಬಲ್ಲವರದಾರು ?

* * *



ಪುಸ್ತಕ ದೊರೆಯುವ ಸ್ಥಳ :
ವಾಗ್ವಿಲಾಸ ಬುಕ್-ಡಿಪೋ, ಹುಬ್ಬಳ್ಳಿ.

(೫೦ ನೆಯ ಪುಟದಿಂದ ಮುಂದುವರಿದುದು)

ಬರೆದು ತಿಳುಹಬೇಕಲ್ಲದೆ ವ್ಹಿ.ಪಿ. ನಿರಾಕರಿಸಿ ಹಾನಿಯನ್ನೊದಗಿಸುವ ಸಂದರ್ಭ ತರಕೂಡದೆಂದು ಸೆರಗೊಡ್ಡಿ ಬೇಡಿಕೊಳ್ಳುವೆವು. ತಾವು ಊರಲ್ಲಿಲ್ಲದಾಗ ವ್ಹಿ. ಪಿ. ಬಂದು ಮರಳಿಹೋದುದಕ್ಕಾಗಿ ವ್ಯಸನವನ್ನು ಸೂಚಿಸಿ, ವ್ಹಿ. ಪಿ. ವೆಚ್ಚವನ್ನು ಕೂಡ ಸೇರಿಸಿ ಮನಿಯಾರ್ಡರಿನಿಂದ ಹಣಕಳುಹಿದ ಸಹೃದಯರೂ ಉಂಟು. ಆದರೆ ಅವರ ಸಂಖ್ಯೆ ಕೈಬೆರಳಿನಿಂದ ಎಣಿಸುವಷ್ಟು. ಹೀಗೆ ಮಾಡಲಾರದವರು ಮೊದಲೆ ನಮಗೊಂದು ಕಾಗದ ಬರೆದು ಬೇಡವೆಂದು ತಿಳುಹಿದರೂ ಅದೊಂದು ದೊಡ್ಡ ಉಪಕಾರಮಾಡಿದಂತಾಗುವುದು. ಇದನ್ನು ಯಾರೂ ಮರೆಯಲಾಗದು. ಮರೆತರೆ ಮುಂದುವರಿಯಬೇಕೆನ್ನುವ ಪತ್ರಿಕೆಯನ್ನು ಹಿಂದಕ್ಕೆ ಸೆಳೆದು ಸಿಲ್ಕಿಸಿದ ಅಪರಾಧಕ್ಕೆ ಪಾತ್ರರಾಗಬೇಕಾಗುವುದೆಂಬುದರ ಜ್ಞಾಪಕ ಎಲ್ಲರಿಗೂ ಇರಲಿ !

—ಸಂಪಾದಕರು

ದೇಶಬಂಧು ದಾಸರ ಜೀವನ ಸ್ಮೃತಿಗಳು

★

ಶ್ರೀ. ವಾಳ್ವೇಕರ ಗುರುರಾಯರು ಎಲ್‌ಎಲ್. ಬಿ. ಹುಬ್ಬಳ್ಳಿ

ಬಂಗಾಲಿಗಳ ಹೃದಯಸಿಂಹಾಸನದಲ್ಲಿ ಸ್ಥಿರವಾಗಿ ಕುಳಿತ ಈ ಅನಭಿಷಿಕ್ತ ಮಹಾಮಂಡಲೇಶ್ವರನ ಸ್ವಾತಂತ್ರ್ಯಪ್ರೀತಿ, ದೇಶಸೇವೆ, ಸ್ವಾರ್ಥತ್ಯಾಗ ಇವೆಲ್ಲ, ಪ್ರತಿಯೊಬ್ಬ ಕನ್ನಡಿಗನಿಗೂ ಮಾದರಿಯಾಗಬೇಕಾಗಿದೆ; ಅದಾಗದಿದ್ದರೆ ಕನ್ನಡಿಗರಿಗೆ ಇಂದಿನ ಬೀಳುವೆಯ ನರಕದಿಂದ ಏಳಿಗೆಯಿಲ್ಲ!

ಬುದ್ಧಿವೈಭವದಲ್ಲಿ ಬಂಗಾಲಿಗಳು ಬಹು ಶ್ರೇಷ್ಠರೆಂಬುದನ್ನು ಎಲ್ಲರೂ ಒಪ್ಪಬೇಕಾದ ಸಂಗತಿ. ಬೌದ್ಧಿಕ ಪ್ರಪಂಚದ ಬಹುತರ ಎಲ್ಲ ಶಾಖೆ-ಉಪಶಾಖೆಗಳಲ್ಲಿಯೂ ಅವರು ಮೇಲ್ತರಗತಿಯ ಸ್ಥಾನವನ್ನು ಪಡೆದಿದ್ದಾರೆ. ಆಧುನಿಕ ಕವಿಶ್ರೇಷ್ಠರಲ್ಲಿ **ಶ್ರೀರವೀಂದ್ರನಾಥ** ಠಾಕೂರರಿಗೆ ಮೊದಲಿನ ಸ್ಥಾನವಿತ್ತು. ರಸಾಯನಶಾಸ್ತ್ರವಿಶಾರದರಲ್ಲಿ **ಆಚಾರ್ಯ ಸರ್ ಪಿ. ಸಿ. ರೇ** ಅವರು ಆಂತರರಾಷ್ಟ್ರೀಯ ಕೀರ್ತಿಯನ್ನು ಪಡೆದಿದ್ದಾರೆ. ಪದಾರ್ಥ-ವಿಜ್ಞಾನಶಾಸ್ತ್ರದಲ್ಲಿ ಹೊಸ ಶೋಧಗಳನ್ನು ಮಾಡಿದ **ಸರ್ ಜಗದೀಶಚಂದ್ರ ಬೋಸರ** ಹೆಸರನ್ನು ಅರಿಯದವರಿಲ್ಲ. ಅನೇಕಭಾಷೆಗಳನ್ನರಿತವರೂ ಪಂಡಿತವರ್ಯರೂ ಮೈಸೂರು ವಿಶ್ವವಿದ್ಯಾಲಯದ ವ್ಹಾಯಿಸ್ ಚಾನ್ಸಲರರೂ ಆದ ಶ್ರೀ. ಬ್ರಜೇಂದ್ರ **ನಾಥ ಸೀಲರನ್ನು** ಸರಿಗಟ್ಟುವ ವಿದ್ಯಾವ್ಯಾಸಂಗಿಗಳು ಎಷ್ಟು ಜನರಿದ್ದಾರೆ? ಕಲಕತ್ತೆಯ ವಿಶ್ವವಿದ್ಯಾಲಯದಲ್ಲಿ ವಿಶ್ವಾಮಿತ್ರನಂತೆ ಹೊಸ ಸೃಷ್ಟಿಯನ್ನು ನಿರ್ಮಿಸಿದ—ಆಧುನಿಕ ಬೃಹಸ್ಪತಿಗಳೆಂದು ಪೌರ್ವಾತ್ಯ ಹಾಗು ಪಾಶ್ಚಾತ್ಯ ಪಂಡಿತರಿಂದ ಹೊಗಳಿಸಿಕೊಂಡ— **ಸರ್ ಆಶುತೋಷ** ಮುಖರ್ಜಿಯವರ ಯೋಗ್ಯತೆಯ ವ್ಹಾಯಿಸ್ ಚಾನ್ಸಲರರು ದೊರೆಯುವುದು ದುರ್ಲಭ. ಕಲಕತ್ತೆಯ ಹಾಯ್‌ಕೋರ್ಟಿನಲ್ಲಿ ಕಾಯಿದೆ ಪಂಡಿತರದೊಂದು ಶ್ರೇಷ್ಠ ಪರಂಪರೆಯೇ ಇದೆ. **ಉಮೇಶಚಂದ್ರ ಬ್ಯಾನರ್ಜಿ, ಡಾಕ್ಟರ್ ರಾಶಬಿಹಾರಿ ಘೋಷ, ಸರ್ ಎಸ್. ಪಿ. ಸಿಂಹ, ಚಿತ್ತರಂಜನ ದಾಸ, ಎನ್. ಎನ್. ಸರಕಾರ** ಮೊದಲಾದವರ ಕೀರ್ತಿ ಭಾರತಭೂಮಿಯಲ್ಲೆಲ್ಲ ಪಸರಿಸಿತ್ತು. **ಶ್ರೀರಾಮಕೃಷ್ಣ ಪರಮಹಂಸರಂತಹ** ಯೋಗಿಗಳು ಹಾಗು ಭಾರತೀಯ ತತ್ತ್ವಜ್ಞಾನವನ್ನು ಯುರೋಪಿಯನರಿಗೆ ಅಮೇರಿಕನರಿಗೆ ತಿಳಿಸಿಕೊಟ್ಟ **ಸ್ವಾಮಿ ವಿವೇಕಾನಂದರು** ಬಂಗಾಲಿಗಳೆ. **ತಪಸ್ವೀ ಅರವಿಂದ ಘೋಷರು** ಎಲ್ಲರಿಗೂ ಮಾನ್ಯರಾಗಿದ್ದಾರೆ. ಮಾನವನ ಅನೇಕ ಕಾರ್ಯಕ್ಷೇತ್ರಗಳಲ್ಲಿ ಬಂಗಾಲಿಗಳು ಬಹುಮಾನದ ಸ್ಥಳಗಳನ್ನು ಪಡೆದದ್ದು ಭಾರತೀಯರೆಲ್ಲರಿಗೂ ಅಭಿಮಾನದ ಸಂಗತಿಯಾಗಿದೆ.

ನಾಗಪುರ ಕಾಂಗ್ರೆಸ್

ಹಳೆಯ ಪದ್ಧತಿಗನುಸರಿಸಿ ಜರುಗಿದ ಕಾಂಗ್ರೆಸ್ ಅಧಿವೇಶನಗಳಲ್ಲಿ **ನಾಗಪೂರ ಕಾಂಗ್ರೆಸು** ಅಪೂರ್ವವಾದದ್ದು. ಲೋಕಮಾನ್ಯರು ಅಧಿವೇಶನಕ್ಕೆ ಅಧ್ಯಕ್ಷರಾಗಿ ಆರಿಸಲ್ಪಡುವವರಿದ್ದರು. ಆದರೆ ಆ ಬಹುಮಾನವು ನಾಗಪುರಕ್ಕೆ ದುರ್ದೈವದಿಂದ ದೊರೆಯಲಿಲ್ಲ. ಪ್ರತಿನಿಧಿಗಳ ಸಂಖ್ಯೆ, ಪ್ರೇಕ್ಷಕರ ಸಂದಟ್ಟಣೆ ಮಿತಿಮೀರಿತ್ತು. ಮಹಾತ್ಮಾಗಾಂಧಿಯವರ ಅಸಹಕಾರದ ಆಂದೋಲನವು ಆರಂಭವಾಗುವುದಿತ್ತು. ಚಿತ್ತರಂಜನದಾಸರು ಈ ಆಂದೋಲನದ ಮುಖ್ಯಭಾಗವನ್ನು ವಹಿಸಲು—ಅಂಗೀಕರಿಸಲು ಸಿದ್ಧರಿದ್ದಿಲ್ಲ. ಬಂಗಾಲದಿಂದ ಪ್ರತಿನಿಧಿಗಳ ಸ್ಪೇಶಲ್ ಟ್ರೇನುಗಳು ಬಂದಿದ್ದುವು. ಅವರ ಸಂಗಡ **ಬಿಪಿನಚಂದ್ರ ಪಾಲರೂ** ಬಂದಿದ್ದರು. ಅಸಹಕಾರದ ಕಾರ್ಯಕ್ರಮದ ಬಗ್ಗೆ ತೀವ್ರವಾದ ಮತಭೇದವಾಯಿತು. ಕಾಂಗ್ರೆಸ್ಸಿನ ಪ್ರಮುಖ ಕಾರ್ಯಕರ್ತರಲ್ಲಿ ಇಬ್ಬಣವಾಗಿ, ಕಾಂಗ್ರೆಸ್ಸಿನ ವರ್ಚಸ್ಸು ಕಡಿಮೆಯಾಗುವುದೆಂದು ಜನರು ಸಾಶಂಕರಾದರು. **ಚಿತ್ತ**ರಂಜನರಂತಹ ಬಂಗಾಲದ ಧುರೀಣರು, ತಮ್ಮ ಆಂದೋಲನದ ಮುಂದಾಳುಗಳಲ್ಲಿರಬೇಕೆಂದು ಮಹಾತ್ಮಾಜಿಯವರಿಗೆ ಬಲವಾದ ಇಚ್ಛೆ. ಮಹಮ್ಮದಲ್ಲಿಯವರಿಗೆ ಚಿತ್ತರಂಜನರಂತಹ ಕಾರ್ಯಕರ್ತರನ್ನು ಕಳೆದುಕೊಳ್ಳಲಿಕ್ಕೆ ವಿಷಾದವೆನಿಸುತ್ತಿತ್ತು. ಚಿತ್ತರಂಜನರು ಪ್ರತ್ಯೇಕ ಬಂಗಲೆಯಲ್ಲಿ ಇಳಿದಿದ್ದರು. ಮೌಲಾನಾ ಸಾಹೇಬರಿಗೆ ಮಹಾತ್ಮರ ಬಿಡಾರದಿಂದ ಚಿತ್ತರಂಜನರ ಬಂಗ್ಲೆಗೆ ಅನೇಕ ಸಲ ಹೋಗಿಬರುವ ಭಾಗ ಬಿತ್ತು. ಈ ವಿಷಯದಲ್ಲಿ ಅವರು ಹೀಗೆ ಹೇಳಿದ್ದಾರೆ:

"Like a shuttle I went to and from between Das and Gandhi, and it was at 3 o'clock at night that Das called me to announce that he had given up his practice. (ನೇಗೆಯಲ್ಲಿಯ ಲಾಳಿಯಂತೆ ನಾನು ಒಮ್ಮೆ ಗಾಂಧಿಯವರ ಕಡೆಗೆ, ಇನ್ನೊಮ್ಮೆ ದಾಸರವರ ಕಡೆಗೆ ತೆರಪಿಲ್ಲದೆ ಓಡಾಡಿದೆ. ಕೊನೆಗೆ ರಾತ್ರಿಯ ಮೂರು ಗಂಟೆಗೆ ದಾಸರು ನನ್ನನ್ನು ಕರೆದು, ತಾವು ವಕೀಲಿಯನ್ನು ಬಿಡುವುದಾಗಿ ಹೇಳಿ

ದರು.)" ಕಾಂಗ್ರೆಸ್ ಅಧಿವೇಶನವು ಮುಂಜಾನೆ ಹತ್ತುಗಂಟೆಗೆ ಪ್ರಾರಂಭವಾಗುವುದಿತ್ತು. ಅನೇಕ ಪ್ರತಿನಿಧಿಗಳು ಬೆಳಗಿನ ನಾಲ್ಕು ಗಂಟೆಗೇ ಸಭಾಮಂಟಪದಲ್ಲಿ ಸ್ಥಳ ದೊರಕಿಸಿಕೊಂಡು ಕುಳಿತಿದ್ದರು. ಅಧಿವೇಶನ ಪ್ರಾರಂಭವಾದರೂ ಬಂಗಾಲದ ಶಿಬಿರದಲ್ಲಿ ಒಬ್ಬ ಪ್ರತಿನಿಧಿಯೂ ಕಾಣಲಿಲ್ಲ. ಬಂಗಾಲ ಪ್ರಾಂತವು ಭಾರತದಿಂದ ಸಿಡಿದು ನಿಂತಿದೆಯೆಂದೂ, ದಾಸರು ಅಸಹಕಾರಕ್ಕೆ ವಿರೋಧಿಗಳಾದುದರಿಂದ ಹೀಗಾಯಿತೆಂದೂ ತರ್ಕ-ವಿತರ್ಕ ಪ್ರಾರಂಭವಾಯಿತು. ಅಷ್ಟರಲ್ಲಿ ನಿಜವಾದ ಸುದ್ದಿ ಬಂದಿತು: ಬಂಗಾಲದ ಪ್ರತಿನಿಧಿಯೊಬ್ಬರು ನಿಧನಹೊಂದಿದ್ದುದರಿಂದ ಚಿತ್ತರಂಜನರಿಗೂ ಅವರ ಅನುಯಾಯಿಗಳಿಗೂ ಬರಲಿಕ್ಕೆ ತಡವಾಯಿತು. ಮಹಾತ್ಮಾಜಿಯವರು ಚಿತ್ತರಂಜನರಂತಹ ವೀರವೃತ್ತಿಯ ದೇಶಭಕ್ತನನ್ನು ತಮ್ಮ ಸಹಾಯಕರಲ್ಲಿ ಸೇರಿಸಿಕೊಂಡದ್ದನ್ನು ಕಂಡು ಅನೇಕರಿಗೆ, ಶ್ರೀ ಶಂಕರಾಚಾರ್ಯರು ಮಂಡನಮಿಶ್ರರನ್ನು ಅದ್ವೈತಮತಾಚಾರ್ಯರನ್ನಾಗಿ ಮಾಡಿದ ಸಂಗತಿಯ ನೆನವು ಆಯಿತು.

ದಾಸರ ದಾತೃತ್ವ

ಚಿತ್ತರಂಜನರ ವಾರ್ಷಿಕ ಆದಾಯ ೬ ಲಕ್ಷಕ್ಕೆ ಕಡಿಮೆ ಇದ್ದಿಲ್ಲ. ಆದುದರಿಂದಲೆ ಮೌಲಾನಾ ಮಹಮ್ಮದ ಅಲ್ಲಿಯವರು ಕೂಡ ದಾಸರ ಹತ್ತಿರ ಕನಿಷ್ಠ ೨೦-೩೦ ಲಕ್ಷ ರೂಪಾಯಿಗಳಾದರೂ ನಗದು ಇರಬೇಕೆಂದು ಊಹಿಸಿದ್ದರು. ಈ ತಿಳಿವಳಿಕೆಯಿಂದಲೆ ತಾನು ಅವರಿಗೆ ವಕೀಲ ವೃತ್ತಿಯನ್ನು ಬಿಡಲಿಕ್ಕೆ ಹೇಳಿದೆನೆಂದು ಅವರು ಬರೆದಿದ್ದಾರೆ:

"I thought that he must have had 20 or 30 lakhs to his credit in the bank's but after giving up practice he told me that he was in debt to the extent of two and a half lakhs. (ಅವರು ತಮ್ಮ ಸಂಪಾದನೆಯಲ್ಲಿ ಏನಿಲ್ಲವೆಂದರೂ ೨೦-೩೦ ಲಕ್ಷದಷ್ಟು ಬ್ಯಾಂಕಿನಲ್ಲಿ ಇರಿಸಿರಬಹುದೆಂದು ನನ್ನ ಕಲ್ಪನೆಯಿದ್ದಿತು. ಆದರೆ ವಕೀಲಿಯನ್ನು ಬಿಟ್ಟಾದ ಮೇಲೆ ಕೇಳಿದಾಗ, ೨-೨|| ಲಕ್ಷದಷ್ಟು ತಮಗೆ ಸಾಲವಿರುವುದಾಗಿ ಹೇಳಿದರು.)"

ಮುಂದೆ ಮೌಲಾನಾ ಸಾಹೇಬರೇ ಹೀಗೆ ಹೇಳಿದ್ದಾರೆ. "When he talked of his debts and of selling his house to pay them off, I almost felt like a criminal in having pro-posed to him the discontinuance of his practice at the Bar. (ಸಾಲ ತೀರಿಸುವುದರ ಸಲುವಾಗಿ ಅವರು ತಮ್ಮ ಮನೆಯನ್ನು ಮಾರಲಿರುವರೆಂಬುದನ್ನು ಕೇಳಿದಾಗಂತೂ, ವಕೀಲಿಯನ್ನು ಬಿಡಲು ಹೇಳಿ ನಾನೊಂದು ಅಪರಾಧ ಮಾಡಿದೆನೆಂದು ನನಗೆನಿಸಿತು.)"

ಮಹಾತ್ಮಾ ಗಾಂಧಿಯವರು "He was generous to a fault. Though he earned lacs of rupees from his practice he never permitted himself to be rich. And even he gave up the mansion he had. (ಅದೊಂದು ದೋಷವೆಂದು ಎನಿಸುವಷ್ಟು ಇವರಲ್ಲಿ ಔದಾರ್ಯವಿತ್ತು. ಇವರು ತಮ್ಮ ವೃತ್ತಿಯಿಂದ ಲಕ್ಷಾಂತರ ರೂಪಾಯಿಗಳನ್ನು ಸಂಪಾದಿಸಿದರೂ ಸಿರಿವಂತಿಕೆಯ ಅಪೇಕ್ಷೆಯನ್ನೆಂದೂ ಮಾಡುತ್ತಿರಲಿಲ್ಲ. ಕೊನೆಗೆ ತಮ್ಮ ಅರಮನೆಯಂತಹ ಮನೆಯನ್ನೂ ತೊರೆಯಬೇಕಾಗಿ ಬಂದಿತು.)" ಎಂದು ಹೇಳಿದ್ದಾರೆ.

ಚಿತ್ತರಂಜನರು ತಮ್ಮ ಭವ್ಯವಾದ ಕಟ್ಟಡವನ್ನು ಕೂಡ ದಾನ ಮಾಡಿದರು. ಆ ಕಟ್ಟಡದಲ್ಲಿ ಈಗ ಆಸ್ಪತ್ರೆಯಿದೆ. ಅವರ ದಾತೃತ್ವವನ್ನು ಮಹಾತ್ಮಾಜಿಯವರು ಹೀಗೆ ವರ್ಣಿಸಿದ್ದಾರೆ:

"His sacrifice was great. His generosity had no bounds. His loving hand was opened out to all "His board was free to the prince and the pauper. His heart went out to every one in distress. Where is the youngman in Bengal who does not owe a debt of gratitute to Deshabandhu in some shape or other.' ಎಂದರೆ "ಇವರ ತ್ಯಾಗಬುದ್ಧಿ ತುಂಬ ದೊಡ್ಡದು. ಔದಾರ್ಯ ಅಳತೆಯಿಲ್ಲದಂತಹದು. ಇವರ ಪ್ರೀತಿಯ ಹಸ್ತ ಎಲ್ಲರನ್ನೂ ಸ್ವಾಗತಿಸುತ್ತಿದ್ದಿತು."

"ಇವರ ಮನೆಯೆಂದರೆ ತಿರುಕರಿಂದ ಅರಸರ ವರೆಗೆ ಎಲ್ಲರಿಗೂ ತೆರೆದ ಬಾಗಿಲುಳ್ಳದ್ದು. 'ದಾಸರ ಋಣದಲ್ಲಿ ಸಿಕ್ಕಿರದ ತರುಣ ಬಂಗಾಲದಲ್ಲಿ ಇರಬಹುದೆ?' ಎಂದು ಯಾರೂ ಕೇಳುವಂತಿದ್ದಿತು."

ಇದು ಸತ್ಕಾರ್ಯವಿದೆ, ಇದರಿಂದ ಜನಹಿತವಾಗುತ್ತದೆ, ದೇಶದಲ್ಲಿ ಉದ್ಯೋಗದ ಬೆಳವಣಿಗೆಯಾಗುತ್ತದೆಂದು ದಾಸರಿಗೆ ಮನವರಿಕೆಯಾದರೆ ಆಯಿತು; ಆ ಕೆಲಸಕ್ಕೆ ಅವರು ತಮ್ಮಿಂದಾದಷ್ಟು ಧನಸಹಾಯ ಮಾಡಲಿಕ್ಕೆ ಯಾವಾಗಲೂ ಮುಂದುವರಿಯುತ್ತಿದ್ದರು. ಬ್ಯಾಂಕಿನಲ್ಲಿ ತಮ್ಮ ಖಾತೆಯಲ್ಲಿ ಹಣವಿಲ್ಲದಾಗ ಒಬ್ಬ ಗೃಹಸ್ಥನು, ಒಂದು ಕಾರಖಾನೆ ತೆಗೆಯುವುದಕ್ಕಾಗಿ ೨೭ ಸಾವಿರ ರೂಪಾಯಿ ಬೇಡಲಿಕ್ಕೆ ಚಿತ್ತರಂಜನರ ಕಡೆಗೆ ಹೋಗಿ, ಆ ಉದ್ಯೋಗದ ಬಗ್ಗೆ ಸವಿಸ್ತರವಾಗಿ ಹೇಳಿದರು. ದಾಸಬಾಬುಗಳು over draft ತಕ್ಕೊಂಡು ಆ ಗೃಹಸ್ಥನಿಗೆ ಹಣ ಕೊಟ್ಟರು.

ಯುವಕರಿಗೆ ಆಧಾರ

ಚಿತ್ತರಂಜನರಿಗೆ ಯುವಕರ ಬಗ್ಗೆ ಬಹಳ ಅಭಿಮಾನ. ಕೆಲವು ಬಂಗಾಲಿ ಯುವಕರು ರಾಜಕಾರ್ಯದಲ್ಲಿ ಹಿಂಸೆಯ ಹಾದಿಯನ್ನು ಹಿಡಿದಿದ್ದರು. ಅವರು ತಪ್ಪು ಹಾದಿ ಹಿಡಿದಿದ್ದರೆಂಬುದು ನಿಜ; ಆದರೆ ಅವರ ತ್ಯಾಗವು ವರ್ಣನೀಯವಾಗಿದೆಯೆಂದು ಚಿತ್ತರಂಜನರ ಮತ. ಅನೇಕ ಸ್ಥಾನಬದ್ಧ ಯುವಕರು ಸಹಿಸುತ್ತಿರುವ ಕಷ್ಟಗಳನ್ನು ನೋಡಿ, ಚಿತ್ತರಂಜನರ ಕೋಮಲ ಅಂತಃಕರಣವು ಕೊರಗುತ್ತಿತ್ತು. ತಾನು ಹೇಳುವುದರಲ್ಲಿ ಸ್ವಲ್ಪ

ಕೂಡ ಅತಿಶಯೋಕ್ತಿ ಇಲ್ಲವೆಂದು ಮಹಾತ್ಮಾಜಿಯವರು ಹೀಗೆಂದರು:

"Throughout my travels in East Bengal I came in contact with hundreds and hundreds of—I was going to say thousands and thousands of—students and I understood what reverence, what affection they had for Chittaranjan Das. I am now receiving letters from many students and I read in these letters the same certificate, the same affection the same adoration and veneration. He was father to the youth of Bengal. His generosity was boundless, his love for the students was boundless."

(ನಾನು ಪೂರ್ವ ಬಂಗಾಲದಲ್ಲಿ ಪ್ರವಾಸ ಮಾಡುತ್ತಿದ್ದಾಗ ನೂರಾರು—ಸಾವಿರಾರು—ವಿದ್ಯಾರ್ಥಿಗಳನ್ನು ಕಂಡೆ. ದೇಶಬಂಧು ದಾಸರ ವಿಷಯಕ್ಕೆ ಅವರಲ್ಲಿ ವಿಶ್ವಾಸ ಗೌರವಭಾವ ತುಂಬಿ ತುಳುಕುತ್ತಿದ್ದಿತು. ಈಗಲೂ ಬಂಗಾಲಿ ತರುಣರಿಂದ ಹಲವು ಬಗೆಯ ಕಾಗದಗಳು ಬರುತ್ತಿರುವುವು. ಅವೆಲ್ಲದರಲ್ಲಿಯೂ ಅವರ ಬಗ್ಗೆ ಅದೇ ಬಗೆಯ ವಿಶ್ವಾಸ ಗೌರವಭಾವ ಮೂಡಿ ನಿಂತಿರುತ್ತದೆ. ಬಂಗಾಲದ ಯುವಕರಿಗೆ ದಾಸರೆಂದರೆ ತಂದೆ ಇದ್ದಹಾಗೆ. ವಿದ್ಯಾರ್ಥಿಗಳ ಬಗ್ಗೆ ಇರುವ ಅವರ ಔದಾರ್ಯವೂ ಕಳಕಳವೂ ಅವರ್ಣನೀಯವಾಗಿದ್ದುವು.)"

ಮಹಾತ್ಮಾಜಿಯವರು ಇನ್ನೊಂದು ಕಡೆಗೆ ಹೀಗೆ ಬರೆದಿದ್ದಾರೆ: "Where is the youngman in all Bengal who does not owe a debt of gratitude to Deshabandhu in some shape or other?"

ಸ್ತುತಿ ಸೇರುತ್ತಿದ್ದಿಲ್ಲ

ಸಾಧಾರಣವಾಗಿ ಸಾಮಾನ್ಯ ಮಾನವನು ಸ್ತುತಿಪ್ರಿಯನಿರುತ್ತಾನೆ. ಇದಕ್ಕೂ ಕಡಿಮೆ ತರಗತಿಯವರು ಆತ್ಮಸ್ತುತಿಮಾಡಿಕೊಳ್ಳುತ್ತಾರೆ. ಕೀಳರು ಇದಕ್ಕೂ ಮುಂದೆ ಹೋಗಿ, ಆತ್ಮಸ್ತುತಿ ಪರನಿಂದೆಯಲ್ಲಿ ಸಂತೋಷಪಡುತ್ತಾರೆ. ಚಿತ್ತರಂಜನರ ಸ್ವಾರ್ಥತ್ಯಾಗವು ಶ್ರೇಷ್ಠವಾದದ್ದೆಂದು ಸ್ತೋತ್ರಮಾಡಿದರೆ, ಅದು ಅವರಿಗೆ ಸೇರುತ್ತಿದ್ದಿಲ್ಲ. ಮಹಾರಾಷ್ಟ್ರದ ಭಕ್ತಶಿರೋಮಣಿಗಳಲ್ಲಿ ಒಬ್ಬರು ಹೇಳಿದಂತೆ 'ನಿಂದಕನ ಮನೆ ಹತ್ತಿರಿರಬೇಕು. ತಮ್ಮ ದೋಷಗಳು ತಮಗೆ ತಿಳಿಯುವುದಿಲ್ಲ; ಅವುಗಳನ್ನು ತಿಳಿದುಕೊಂಡು ಕಳೆದುಕೊಳ್ಳಬೇಕು' ಎಂದು ದಾಸರು ಹೇಳುತ್ತಿದ್ದರು. 'ನೀವು ಲಕ್ಷಾವಧಿ ರೂಪಾಯಿಗಳ ಪ್ರಾಪ್ತಿಯನ್ನು ಬಿಟ್ಟು, ಎಲ್ಲ ಸುಖಸಾಧನಗಳನ್ನು ತ್ಯಜಿಸಿ ಈ ಪರಿಯಾಗಿ ಕಷ್ಟಪಡುತ್ತೀರಲ್ಲಾ' ಎಂದು ಅವರ ಒಬ್ಬ ಸ್ನೇಹಿತನು ಅಂದನು; ಅದಕ್ಕೆ ಚಿತ್ತರಂಜನರು "ನಾನು ನಿಮ್ಮ ಸ್ತುತಿಗೆ ಪಾತ್ರನಿಲ್ಲ. My sacrifices are nothing compared to those of many young men who have sacrified their all and are working for the country practically without food and raiment. (ಸರ್ವಸ್ವವನ್ನೂ ಸೂರೆಮಾಡಿ, ಹಸಿವು-ಬಾಯಾರಿಕೆಗಳ ಪರಿವೆಯಿಲ್ಲದೆ ದೇಶಕ್ಕಾಗಿ ದೇಹಸವೆಯಿಸುತ್ತಿರುವ ಆ ಅನೇಕ ಜನ ಭಾರತಪುತ್ರರ ಮುಂದೆ ನನ್ನ ತ್ಯಾಗಕ್ಕೆ ಯಾವ ಬೆಲೆ?) ನನಗಿಂತ ಅವರೆ ಸ್ತುತಿಗೆ ಹೆಚ್ಚು ಅರ್ಹರಿದ್ದಾರೆ" ಎಂದು ಹೇಳಿದರು. 'ಬಲಗೈಯಿಂದ ಕೊಟ್ಟ ದಾನವು ಎಡಗೈಗೆ ಗೊತ್ತಾಗಬಾರದು. ನಾನು ಕೊಡುವ ಅಲ್ಪ ಸ್ವಲ್ಪ ಧನಸಹಾಯವನ್ನು ನೀವು ಇಷ್ಟೊಂದು ಹೊಗಳಿದರೆ ಅದರಿಂದ ಬರುವ ಪುಣ್ಯವು ಇಲ್ಲದಂತಾಗುವುದು' ಎಂದು ಹೇಳಿದರು. ಯಾವ ತರದ ಫಲದ ಆಶೆ ಇಲ್ಲದೆ ಮಾಡಿದ ದಾನವೇ ಶ್ರೇಷ್ಠವಾದದ್ದೆಂದು ಅವರ ನಂಬುಗೆ.

ಎಲ್ಲರೂ ನನ್ನವರೆ

ಪ್ರತಿಪಕ್ಷಿಗಳ ಮೇಲೆ ಟೀಕೆಮಾಡುವುದರಲ್ಲಿ ಚಿತ್ತರಂಜನರು ತುಂಬ ಬಲಿಷ್ಠರು. ಕೈಕೊಂಡ ಸಾರ್ವಜನಿಕ ಕಾರ್ಯವನ್ನು ನೆರವೇರಿಸುವುದಕ್ಕಾಗಿ— ತತ್ತ್ವಕ್ಕಾಗಿ— ಅವರು ಬಡಿದಾಡುತ್ತಿದ್ದರು. ಆತ್ಮಪ್ರತಿಷ್ಠೆಗಾಗಿ ಯಾವ ಪಕ್ಷವನ್ನೂ ಅವರು ನಿರ್ಮಿಸಲಿಲ್ಲ, ಅಥವಾ ಯಾವ ಸಂಸ್ಥೆಯನ್ನೂ ಸ್ಥಾಪಿಸಲಿಲ್ಲ, ಅಥವಾ ಯಾವ ಕಾರ್ಯವನ್ನೂ ಕೈಕೊಳ್ಳಲಿಲ್ಲ. ಸಾರ್ವಜನಿಕ ಸೇವೆಯಲ್ಲಿ ತೊಡಗಿದವರೆಲ್ಲರ ಬಗ್ಗೆ ಅವರಲ್ಲಿ ಆದರವಿತ್ತು. ರಾಜಕಾರಣದ ಗದ್ದಲವಿಲ್ಲದ ಸ್ಥಳದಲ್ಲಿ ಚಿತ್ತರಂಜನರ ಜೊತೆಯಲ್ಲಿ ಎರಡು ದಿವಸ ಕಳೆಯಬೇಕೆಂದು ಮಹಾತ್ಮರು ದಾರ್ಜಿಲಿಂಗಕ್ಕೆ ಹೋದರು. ದಾಸ ದಂಪತಿಗಳ ಆಗ್ರಹದಿಂದ ಐದು ದಿವಸ ನಿಂತರು. ಖಾದೀ ಪ್ರಸಾರದ ಬಗ್ಗೆ ವಿಚಾರವಿನಿಮಯವಾಯಿತು. 'ಖಾದೀ ಪ್ರತಿಷ್ಠಾನ'ದ ಸತೀಶಬಾಬುಗಳನ್ನು ಕರೆಯಿಸಬೇಕೆಂದು ಗೊತ್ತಾಯಿತು. "ತಮ್ಮ ಬಗ್ಗೆ ನಾನು ತಪ್ಪು ತಿಳುವಳಿಕೆಮಾಡಿಕೊಂಡಿದ್ದೇನೆಂದು (Prejuduced) ಸತೀಶ ಬಾಬುಗಳ ಅಭಿಪ್ರಾಯವಾಗಿದೆ. ಅದು ತಪ್ಪು. ಅವರು ಬಂದು ನನ್ನ ಮನೆಯಲ್ಲಿಯೇ ಇಳಿದುಕೊಳ್ಳಬೇಕು" ಎಂದು ಚಿತ್ತರಂಜನರು ಮಹಾತ್ಮರಿಗೆ ಹೇಳಿದರು. ಅದಕ್ಕೆ ಗಾಂಧೀಜಿಯವರು ಸ್ಥಳಸಂಕೋಚವಾಗಬಹುದೆಂದು ಹೇಳಿದರು. ಕೂಡಲೆ ಚಿತ್ತರಂಜನರು "ನಾನು ನನ್ನ ಕೋಣೆಯನ್ನು ಸತೀಶ ಬಾಬುಗಳವರಿಗೆ ತೆರವು ಮಾಡಿಕೊಡುತ್ತೇನೆ. ಅವರು ನನ್ನ ಮನೆಯಲ್ಲಿ ಇದ್ದೇ ತೀರಬೇಕು" ಎಂದು ಆಗ್ರಹ ಹಿಡಿದರು. ಮಹಾತ್ಮರಿಗೆ ಕೂಡ ಚಿತ್ತರಂಜನರು ಹೀಗೆ ಬರೆದಿದ್ದರು: "Remember, you are under my jurisdiction; I am chairman of the Reception Committee. You have to include Darjiling in your tour. This is a command." (ಜ್ಞಾಪಕವಿರಲಿ, ಇದೀಗ ತಾವು ನನ್ನ ಅಧಿಕಾರಕ್ಷೇತ್ರದಲ್ಲಿ ಬಂದಿದ್ದೀರಿ. ನಾನು ಸ್ವಾಗತ ಸಮಿತಿಯ ಅಧ್ಯಕ್ಷ. ತಮ್ಮ ಪ್ರವಾಸದ ಕಾರ್ಯಸೂಚಿಯಲ್ಲಿ ದಾರ್ಜಿಲಿಂಗವನ್ನೂ ಸೇರಿಸಬೇಕೆಂದು ನಾನು ಆಜ್ಞಾಪಿಸು-

(೫೬ ನೆಯ ಪುಟ ನೋಡಿರಿ)

ಸಾದರ ಸ್ವೀಕಾರ

೧೦. **ರೇವಣ ಸಿದ್ಧೇಶ್ವರ ದೇವರ ರಗಳೆ** (ಹರಿಹರ ಕವಿವಿರಚಿತ). ಪ್ರಧಾನ ಸಂಪಾದಕರು ಶ್ರೀಮಾನ್ ಎಸ್. ಎಸ್. ಬಸವನಾಳ ಎಂ. ಎ., ಪ್ರಕಾಶಕರು : ಧಾರವಾಡದ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆಯ ಸಾಹಿತ್ಯಸಮಿತಿ. ಫ್ರೌ. ಕ್ರಾ. ೮. ೩೬. ಪುಟಗಳು. ಬೆಲೆ ೦-೨-೦.

ಹರಿಹರ ಮಹಾಕವಿ ಕನ್ನಡದ ಕಾವ್ಯ-ಗಂಗೆಯ ಪ್ರವಾಹವನ್ನು ಹೊಸನಿಟ್ಟಿಗೆ ತಿರುಗಿಸಿ, ಹೊಸದೊಂದು ಪಾತ್ರವನ್ನು ಕಲ್ಪಿಸಿಕೊಟ್ಟನೆ. ‘ ಗಿರಿಜಾಕಲ್ಯಾಣ ’ ಆತ ಬರೆದ ಚಂಪೂ ಕಾವ್ಯ ; ಆದರೆ ಅದುವರೆಗಿನ ಚಂಪೂಕಾವ್ಯಗಳಿಗಿಂತ ಕಟ್ಟಿನಲ್ಲಿ, ನಡಿಗೆಯಲ್ಲಿ, ನುಡಿಯಲ್ಲಿ ಹೊಸತನದಿಂದ ಕೂಡಿದೆ ಅದು. ಇದಕ್ಕೆ ಕಾರಣವೆಂದರೆ ವರ್ಣಕದ ಕಡೆಗೆ ವಿಶೇಷವಾಗಿದ್ದ ಆತನ ಒಲವು. ಈ ಒಲವಿನ ಸಂಪೂರ್ಣ ಕಾರ್ಯವನ್ನು ಆತನ ನೂರಿಪ್ಪತ್ತು ಶಿವಶರಣರ ರಗಳೆಗಳಲ್ಲಿ ಕಾಣಬಹುದು. ಈತನ ‘ ಬಸವರಾಜ ದೇವರ ರಗಳೆ’ಯನ್ನು ದಿವಂಗತರಾದ ಟಿ. ಎಸ್. ವೆಂಕಣ್ಣಯ್ಯನವರು ಸಂಪಾದನೆ ಮಾಡಿ, ಸುಂದರವಾಗಿ ಪ್ರಕಟಿಸಿರುವರು. ಹಾವೇರಿಯಲ್ಲಿ ಹೊರಡುತ್ತಲಿದ್ದ ‘ವೀರಶೈವ ಸದ್ಧರ್ಮ ದೀಪಿಕೆ ’ ಎಂಬ ಮಾಸಪತ್ರಿಕೆಯಲ್ಲಿಯೂ ಹರಿಹರನ ಒಂದೆರಡು ರಗಳೆಗಳು ಅಚ್ಚಾಗಿವೆ. ಶ್ರೀಮಾನ್ ಹಳಕಟ್ಟಿಯವರ ‘ ಶಿವಾನುಭವ ’ ಮಾಸಪತ್ರಿಕೆಯಲ್ಲಿಯೂ ಇವು ಒಂದರ ಹಿಂದೊಂದು ಕ್ರಮವಾಗಿ ಪ್ರಕಟವಾಗುತ್ತಲಿವೆ. ಈಗ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆಯವರು, ತಮ್ಮ ಸಾಹಿತ್ಯಸಮಿತಿಯ ಪರವಾಗಿ ಹರಿಹರನ ರಗಳೆಗಳನ್ನೆಲ್ಲ ಸುಂದರವಾಗಿ ಸಂಪಾದನೆಮಾಡಿ ಅಂದವಾಗಿ ಪ್ರಕಟಿಸಬೇಕೆಂಬ ಸಂಕಲ್ಪವೆತ್ತು, ಈ ಗ್ರಂಥದ ಪ್ರಕಟನೆಯಿಂದ ಕಾರ್ಯವನ್ನಾರಂಭಿಸಿರುವರು. ಇದು ಒಬ್ಬ ಶರಣರ ರಗಳೆಯ ಮೂಲವನ್ನೊಳಗೊಂಡ ಕಿರುಹೊತ್ತಗೆ. ಹೀಗೆಯೆ ಒಬ್ಬೊಬ್ಬ ಶರಣರ ರಗಳೆಯನ್ನೊಳಗೊಂಡ ಕಿರುಹೊತ್ತಗೆಗಳು ಕ್ರಮವಾಗಿ ಪ್ರಕಟವಾಗಲಿರುವುವಲ್ಲದೆ, ಅಡಿಟಿಪ್ಪಣಿ-ಶಬ್ದಕೋಶಗಳನ್ನೊಳಗೊಂಡ ಎಲ್ಲ ರಗಳೆಗಳ ಸಮಗ್ರ ಆವೃತ್ತಿಯೊಂದೂ ಹೊರಡಲಿರುವುದು. ಒಬ್ಬೊಬ್ಬ ಶರಣನೆಂದರೆ ಮಾನವತೆಯ ಕಾನನದಲ್ಲಿ ಅರಳಿದ ಸುಂದರ ಸುರಭಿಪೂರಿತಸುಮನವಿದ್ದಂತೆ. ಯಾವ ಪಥ್ಯದ ಯರು ಮೂಸಿದರೂ ಅಲ್ಲಿ ಸುಗಂಧ ದೊರೆತೇ ದೊರೆಯುವುದು. ಜಾತಿ-ಮತ-ಪಂಥಗಳಾವುವೂ ಇದಕ್ಕೆ ಅಡ್ಡಿಮಾಡಲಾರವು. ಇಂತಹ ಒಳ್ಳೆಯ ಗ್ರಂಥವನ್ನು ಪ್ರಕಟಿಸುವ ಹೊಣೆಹೊತ್ತುದಕ್ಕಾಗಿ ಕನ್ನಡಿಗರೆಲ್ಲರೂ ಪ್ರಕಾಶಕರನ್ನು ಅಭಿನಂದಿಸಬೇಕಾಗಿದೆ.

೧೧. ಜಯುವೈಭವ (ಸಂಭಾಷಣ) ಲೇಖಕರು ಎಚ್. ಎಂ. ನಾರಾಯಣ ಭಟ್ಟರು, ಕುಂಬಳೆ. ಮೈಸೂರಿನ ಸದ್ಯದ ದೊರೆಗಳಾದ ಜಯಚಾಮರಾಜರ ಪಟ್ಟಾಭಿಷೇಕದ ಸಂದರ್ಭದಲ್ಲಿ ರಾಜಭಕ್ತಿ ಪ್ರೇರಿತರಾಗಿ ಬರೆದ ಬರೆಹವೊಂದಿದು. ಡೆ. ೧/೧೬ ದ ೧೬ ಪುಟಗಳು. ಬೆಲೆ ?

(೫೫ ನೆಯ ಪುಟದಿಂದ ಮುಂದುವರಿದಿದೆ.)

ತ್ತೇನೆ.)'' ಇಂತಹ ಆಗ್ರಹದ ಮಮತೆಯ ಆಮಂತ್ರಣ ಪತ್ರ-ವನ್ನು ತಾವು ಕಾದಿಡಬೇಕಾಗಿದ್ದಿತೆಂದು ಮಹಾತ್ಮಾಜಿಯವರು ಹಳಿಹಳಿಸಿದರು.

ಟಿಳಕರ ನಂಬಿಗಸ್ತರು.

ಅಮೃತಸರ ಕಾಂಗ್ರೆಸಿನಲ್ಲಿ ನಡೆದ ಒಂದು ಸಂಗತಿಯನ್ನು ಮಹಾತ್ಮಾಜಿಯವರೇ ಹೇಳಿದ್ದಾರೆ. ಅಮೃತಸರದಲ್ಲಿ ಸುಧಾ-ರಣೆಯ ನಿರ್ಣಯದ ಬಗ್ಗೆ ಇಬ್ಬಣವಾಗುವ ಪ್ರಸಂಗ ಬಂದಿತು. ಮಹಾತ್ಮರು ಒಂದು ರವೆಕಟ್ಟಿಯಷ್ಟೂ ಬದಲುಮಾಡಲು ಸಿದ್ಧ-ರಾಗಲೊಲ್ಲರು. ಚಿತ್ತರಂಜನರೂ ಅದೇ ಧೋರಣವನ್ನು ಸ್ವೀಕ-ರಿಸಿದರು. ಚಿತ್ತರಂಜನರ ಜಾಜ್ವಲ್ಯವಾದ ದೇಶಭಕ್ತಿ ಹಾಗೂ ಅವರ ವಕ್ತೃತ್ವವು ಪರಿಣಾಮಕಾರಿಯಾಗಿದ್ದುವು. ಮೌಲಾನಾ ಮಹಮ್ಮದ ಅಲ್ಲಿಯವರು " you must not undo the great work you have done in the (Punjab) inquiry " ಎಂದು ಮಹಾತ್ಮರ ಮನವನ್ನೊಲಿಸಹತ್ತಿದರು. ಚಿತ್ತರಂಜನರ ನಿರ್ಣಯವನ್ನು ಗಾಂಧೀಜಿಯವರು ಒಪ್ಪಬೇಕೆಂದು ಅವರು ಯತ್ನಿಸಹತ್ತಿದರು. ಕೊನೆಗೆ ಒಂದು ಸೂಚನೆ ಮಹಾತ್ಮಾಜಿಯವರ ಕಡೆಗೆ ಬಂತು. ಅದನ್ನು ಅವರು ಸ್ವೀಕರಿಸಿ ದೇಶಬಂಧು ದಾಸರ ಕಡೆಗೆ ಕೊಟ್ಟರು. ಅದನ್ನು ನೋಡಿ ‘ ನನ್ನ ಪಕ್ಷಕ್ಕೆ ಅದು ಸಮ್ಮತವಾದರೆ ಅಡ್ಡಿ ಇಲ್ಲ ’ ಎಂದು ದಾಸರು ಹೇಳಿದರು. ಇದನ್ನೆಲ್ಲ ಲೋಕಮಾನ್ಯರು ನಿರೀಕ್ಷಿಸುತ್ತಿದ್ದರು. ಆಗ ಪಂಡಿತ ಮದನಮೋಹನ ಮಾಲವೀಯರ ವಕ್ತೃತ್ವದ ಗಂಗಾಪ್ರವಾಹವು ಹರಿಯುತ್ತಿತ್ತು. ಇದೆಲ್ಲ ವೇದಿಕೆಯ ಮೇಲೆ ನಡೆದಿತ್ತು. ಲೋಕಮಾನ್ಯರ ಕಡೆಗೆ ಆ ಸೂಚನೆ ಬಂತು. ಅವರು " I do not want to see it, if Das has appeared, it is good enough for me. (ದಾಸ್ ಅವರ ಸಮ್ಮತಿಯಿದ್ದಲ್ಲಿ ನಾನು ಬೇರೆಯಾಗಿ ನೋಡಬೇಕಾದ ಕಾರಣವೆ ಇಲ್ಲ. ಅವರ ಅಭಿಪ್ರಾಯ ಯಾವಾಗಲೂ ಸಮ್ಮತ.)'' ಎಂದು ಹೇಳಿದರು. ಮಾಲವೀಯರು ಅದನ್ನು ಮಹಾತ್ಮರ ಕೈಯೊಳಗಿಂದ ಕೂಡಲೆ ತಕ್ಕೊಂಡು, ಸುಧಾರಣೆಯ ಬಗ್ಗೆ ಒಮ್ಮತವಾಗಿದೆಯೆಂದು ಜಾಹೀರ್ ಪಡಿಸಿದರು. ಅದರಿಂದ ಎಲ್ಲ ಕಡೆಗೆ ಸಂತೋಷವು ಸೂಸಿ ಹರಿಯತೊಡಗಿತು.

ಹೆಣ್ಣಿನ ಒಲವು

★

(ಸಣ್ಣಕತೆ)*

ಶ್ರೀ. ಆರ್. ಕೆ. ಕೊಪ್ಪರ, ಕಲ್ಲಾಪುರ

★

ಹೆಣ್ಣಿನ ಒಲವಿನೆಳೆ ಒಮ್ಮೆ ಹೊರಕ್ಕೆ ಹೊರಟಿತೆಂದರೆ ಅದು ಒಂದೆ ಕೇಂದ್ರವನ್ನೆ ಸುತ್ತುವುದಲ್ಲದೆ, ತುಂಬಿಗಳಂತೆ ಹೂವಿನಿಂದ ಹೂವಿಗೆ ಹಾರುತ್ತ ಹೋಗುವುದಿಲ್ಲ. ಕರ್ಟಿಯ ಪ್ರೇಮದ ಕರುಣಕಥೆ ಈ ಸಿದ್ಧಾಂತಕ್ಕೆ ಪ್ರತ್ಯಕ್ಷ ಪ್ರಮಾಣವಾಗಿದೆ.

★

ಒಂದು ಮಾರ್ಕ್ವೀಸ್ ಬಾರಟೂಮ್‌ನಲ್ಲಿ ಮೇಜವಾನಿ; ಊಟದ ಮನೆಯಲ್ಲಿ ಝುಗಝುಗಿಸುವ ವಿದ್ಯುತ್ಪ್ರಕಾಶ, ನಡುವೆ ಚತುಷ್ಕೋಣಾಕೃತಿಯ ವಿಶಾಲವಾದ ಮೇಜು, ಅದರ ಮೇಲೆ ಶುಭ್ರವಾದ ಬಟ್ಟೆಯ ಹೊದಿಕೆ. ಮೇಜಿನ ಸುತ್ತಲೂ ಹನ್ನೆರಡು ಮಂದಿ ಗಂಡಸರು ಮತ್ತು ಎಂಟು ಮಂದಿ ಹೆಂಗುಸರು ಕುಳಿತಿದ್ದರು. ಮಧ್ಯದಲ್ಲಿ ಮಾರ್ಕ್ವೀಸ್ ಮತ್ತು ಅವನ ಹೆಂಡತಿ; ಅವಳ ಜೊತೆಯಲ್ಲಿ ಅದೇ ಊರಿನ ಒಬ್ಬ ಮುದುಕ ಡಾಕ್ಟರನು.

ಊಟ ಮುಗಿಯುತ್ತ ಬಂದಾಗ ಒಬ್ಬರು ಪ್ರೇಮದ ವಿಷಯ ಪನ್ನೆತ್ತಿದರು. ತರುವಾಯ ಕೇಳುವುದೇನು? ಅದರ ಮೇಲೆ ವಾದ-ವಿವಾದವೆದ್ದಿತು. 'ಮನುಷ್ಯನು ನಿಜವಾದ ಪ್ರೇಮವನ್ನು ಎಷ್ಟುಸಲ ಮಾಡಲು ಸಾಧ್ಯವಿದೆ? ಒಂದು ಸಲವೇ ಅಥವಾ ಅನೇಕ ಸಲವೇ?....' ಎಂಬುದೇ ಅವರ ವಾದಾತ್ಮಕ ಪ್ರಶ್ನೆಯಾಗಿದ್ದಿತು. ಕೆಲವು ಜನರು 'ಮನುಷ್ಯನು ಆಯುಷ್ಯದಲ್ಲಿ ನಿಜವಾಗಿ ಒಂದು ಸಲವೇ ಪ್ರೇಮ ಮಾಡಲು ಸಾಧ್ಯ' ಎಂದು ಹೇಳಿ, ತಮ್ಮ ಮಾತಿಗೆ ಬೆಂಬಲವಾಗುವಂತೆ ಕೆಲವು ಜನರ ಹೆಸರನ್ನು ಹೇಳಿದರು. ಅವರ ಮಾತನ್ನು ಖಂಡಿಸುತ್ತ ಕೆಲವರು, ಅನೇಕಸಲ ಪ್ರೇಮಿಸಿದ ಜನರ ಸಂಗತಿಯನ್ನೂ ತಮ್ಮ ಪರವಾಗಿ ಹೀಗೆ ಮಂಡಿಸಿದರು: "ಪ್ರೇಮವು ಸಂಸರ್ಗಜನ್ಯ ರೋಗದಂತೆ. ಮನುಷ್ಯನಾದರೂ ತನ್ನ ಜೀವನದಲ್ಲಿ ಅನೇಕಸಲ ಪ್ರೇಮ ಮಾಡಬಹುದು. ಈ ಮಾತು ಸತ್ಯಸೃಷ್ಟಿಯನ್ನು ಸೂಕ್ಷ್ಮವಾಗಿ ಪರಿಶೀಲಿಸಿದರೆ ತಿಳಿಯಬಹುದು. ಇದು ಕಾವ್ಯಪ್ರಪಂಚವನ್ನೇ ಮೆಚ್ಚಿಕೊಂಡಿರುವಂತಹ ಜನರಿಗೆ ರುಚಿಸುವುದಿಲ್ಲ.." ಇತ್ಯಾದಿ. ಇದಕ್ಕೆ ಪ್ರತಿಯಾಗಿ ಮೊದಲಿನ ಪಂಗಡದವರು "ಮನುಷ್ಯನು ಆಯುಷ್ಯದಲ್ಲಿ ಒಂದೆ ಸಲವೆ ಪ್ರೇಮಮಾಡಬಲ್ಲನು; ಪ್ರಣಯವು ಇತರ ಯಾವುದೇ ಉತ್ಕಟವಾದ ಭಾವನೆಗಿಂತಲೂ ಉತ್ಸಾಹಕ್ಕಿಂತಲೂ ಅಥವಾ ಮಾನವನ ರಮ್ಯ ಹಗಲುಗನಸುಗಳಿಗಿಂತಲೂ ಹೃದಯದಲ್ಲಿ ಆಳವಾಗಿ ಬೇರು ಬಿಡುತ್ತದೆ. ಅಲ್ಲಿ ಅದು ಅಂಕುರಿಸುತ್ತದೆ. ದಿನವೂ ಪಲ್ಲವಿಸುತ್ತಿರುವಂತಹ ಈ ಲತೆಯನ್ನು ಕಿತ್ತು ಹಾಕಲು ಎಂದೂ ಸಾಧ್ಯವಿಲ್ಲ!" ಎಂದು ಉದ್ಗಾರತೆಗೆದರು.

ಅನೇಕ ಸಲ ಪ್ರೇಮದಲ್ಲಿ ಬಿದ್ದ ಮಾರ್ಕ್ವೀಸನು ಆ ಮಾತನ್ನು ವಿರೋಧಿಸುತ್ತ "ಮನುಷ್ಯನು ಒಂದು ಸಲವೇ ಅಲ್ಲ, ಲೆಕ್ಕವಿಲ್ಲದಷ್ಟು ಸಲ ಪ್ರೀತಿಸಬಹುದು; ಅದೂ ಕೂಡ ಅಂತಃಕರಣಪೂರ್ವಕವಾಗಿ—ಎಂದು ನಾನು ನಿಶ್ಚಯವಾಗಿ ಹೇಳುತ್ತೇನೆ. ಪ್ರೀತಿಯ ಆವೇಗವು ಅನಾವರವಾದದರಿಂದ, ಹತಬಲರಾದಂತಹ ಜನರು ಆಗಾಗ ಆತ್ಮಹತ್ಯೆಮಾಡಿಕೊಂಡದ್ದನ್ನೂ ಅನ್ಯರ ಕೊಲೆ ಮಾಡಿದ್ದನ್ನೂ ನಾನು ದೃಷ್ಟಾಂತಕ್ಕಾಗಿ ಹೇಳಬಲ್ಲೆ. ಆದರೆ ಅಂತಹ ಜನರು ಆ ಬಗೆಯ ಮೂರ್ಖತನವನ್ನು ಮಾಡದೆ ಬಿಟ್ಟಿದ್ದರೆ, ಕೆಲವು ಕಾಲದ ಮೇಲೆ ಅವರ ರೋಗವು ತನ್ನಷ್ಟಕ್ಕೆ ತಾನೇ ಗುಣವಾಗುತ್ತಿತ್ತು. ಇಷ್ಟೇ ಅಲ್ಲ, ಹೊಸದಾಗಿ ಪ್ರೇಮ ಮಾಡುತ್ತ ಅವರು ಸಾಯುತ್ತಿದ್ದರು. ಪ್ರಣಯಿಗಳೆಂದರೆ ಕುಡುಕರಿದ್ದಂತೆ; ಅವರು ನಿತ್ಯವೂ ಕುಡಿಯುತ್ತಾರೆ. ಅನೇಕ ಸಲವೂ ಅವರು ಕುಡಿಯಬಲ್ಲರು. ಹಾಗೆ ಒಮ್ಮೆ ಪ್ರೇಮಮಾಡಿದ ಮನುಷ್ಯನು, ಅನೇಕ ವೇಳೆ ಮೊದಲಿನಂತೆಯೆ ನಿಷ್ಠಾಪೂರ್ವಕ ಪ್ರೇಮ ಮಾಡಬಲ್ಲನು. ಅದೂ ಅಲ್ಲದೆ ಇದು ಬೇರೆ ಬೇರೆ ಮನುಷ್ಯರ ಸ್ವಭಾವದ ಮೇಲೆ ಅವಲಂಬಿಸಿರುವ ಮಾತು" ಎಂದು ನುಡಿದನು.

ಸ್ವಲ್ಪ ಹೊತ್ತು ಎಲ್ಲರೂ ಮೌನವ್ರತವನ್ನು ಧರಿಸಿದ್ದರು. ತರುವಾಯ, ಸರ್ವಾನುಮತದಿಂದ ಆ ವೃದ್ಧ ಡಾಕ್ಟರನನ್ನು ಪಂಚನನ್ನಾಗಿ ಆರಿಸಬೇಕೆಂದು ಗೊತ್ತಾಯಿತು. ಅವನ ನಿರ್ಣಯವನ್ನೇ ಎಲ್ಲರೂ ಮಾನ್ಯಮಾಡಬೇಕೆಂದೂ ಗೊತ್ತಾಯಿತು. ಡಾಕ್ಟರನನ್ನೇ ಪಂಚನನ್ನಾಗಿ ಮಾಡಿದ್ದರ ಕಾರಣವೆಂದರೆ, ಅವನಿಗೆ ಸ್ತ್ರೀ-ಪುರುಷರ ಸ್ವಭಾವದ ಬಗ್ಗೆ ಒಳ್ಳೆಯ ಮತ್ತು ಕೆಟ್ಟ ಅನುಭವಗಳು ಅನೇಕ ಸಲ ಬಂದಿದ್ದುವು. ಅಲ್ಲದೆ ಅವನು ಎಂದೂ ಸುಳ್ಳು ಹೇಳುತ್ತಿರಲಿಲ್ಲ. ಅವನ ಮತವನ್ನು ಕೇಳಲು ಎಲ್ಲರೂ ಉತ್ಸುಕರಾಗಿದ್ದರಾಗ.

* ಮೊಪಾಸನ The chair mender ಎಂಬ ಕತೆಯ ಅನುವಾದ.

ಮಾರ್ಕ್ವೇಜನು ಈ ಮೊದಲು ಹೇಳಿದಂತೆ ಡಾಕ್ಟರನು "ಪ್ರೇಮವು ಮನುಷ್ಯರ ಸ್ವಭಾವದ ಮೇಲೆ ಅವಲಂಬಿಸಿರುವ ಮಾತು. ಸಾಯುವವರೆಗೆ— ಒಂದು ದಿವಸವೇಕೆ ಒಂದು ಕ್ಷಣವೂ ಕೂಡ ಬಿಡದೆ— ಏಕನಿಷ್ಠೆಯಿಂದ ಪ್ರೀತಿಸಿದ ಒಂದು ವ್ಯಕ್ತಿಯ ಕತೆ ನನಗೆ ಗೊತ್ತಿದೆ. ನನಗೆ ಒದಗಿದ ಪ್ರೀತಿಯ ಅನುಭವಗಳಲ್ಲಿ ಅದೊಂದು!" ಎಂದು ನುಡಿದ.

ಮಾರ್ಕ್ವೇಜನ ಹೆಂಡತಿಯು ಚಪ್ಪಾಳೆಯಿಕ್ಕುತ್ತ, "ಇಷ್ಟು ಏಕನಿಷ್ಠೆಯಿಂದ ಪ್ರೀತಿಸಲ್ಪಟ್ಟಂತಹ ಪುರುಷನು ಎಷ್ಟು ಧನ್ಯನಿರ ಬಹುದು! ಆ ಪ್ರೀತಿಯನ್ನು ಪಡೆದ ಅವನು ಎಂತಹ ಭಾಗ್ಯ-ಶಾಲಿ! ಅವನ ಜೀವನವು ಎಷ್ಟು ಸುಖಮಯವಾಗಿರಲಿಕ್ಕಿಲ್ಲ!" ಎಂದು ಸಂತಸದಿಂದ ತನ್ನ ಭಾವನೆಗಳನ್ನು ವ್ಯಕ್ತಪಡಿಸಿದಳು.

ಡಾಕ್ಟರನು ತನ್ನಷ್ಟಕ್ಕೆ ತಾನು ಮುಗುಳುನಗೆ ನಕ್ಕು ಮಾತನ್ನು ಮುಂದುವರಿಸಿದನು: "ಪ್ರೇಮಪೂಜೆಯನ್ನು ಕೈಗೆದುಕೊಂಡಂತಹ ವ್ಯಕ್ತಿಯು ಪುರುಷನೇ ಇದ್ದಿರಬೇಕೆಂಬ ನಿಮ್ಮ ತರ್ಕವು ಸಮಂಜಸವಾಗಿದೆ. ಮ್ಯಾಡಮ್, ತಾವು ಕೆಮಿಸ್ಟ್ (Chemist) ಜೋಕನನ್ನು ಬಲ್ಲಿರಿ; ಅವನ ಮೇಲೆ ತನ್ನ ಪ್ರೇಮಸುಧೆಯನ್ನು ಸುರಿಸಿದವಳು ಯಾರು ಗೊತ್ತೆ? ಮುರುಕು ಖುರ್ಚಿಗಳನ್ನು ಸರಿಪಡಿಸಿ ಹೊಟ್ಟೆ ಹೊರೆಯುತ್ತಿದ್ದ ಒಬ್ಬ ಅಶಿಕ್ಷಿತ ಬಡ ಹೆಂಗುಸು!"

"ಹೇಗೆಯೇನು?" ಎಂದು ನಡುವೇ ಮಾರ್ಕ್ವೇಜನ ಹೆಂಡತಿ; ಕುತೂಹಲದಿಂದ ಕೇಳಿದಳು. ಅವಳ ಕುತೂಹಲಕ್ಕೆ ಕಾರಣವೆಂದರೆ 'ಅಶಿಕ್ಷಿತರು ಮತ್ತು ಬಡವರು ಪ್ರೇಮ ಮಾಡುವುದು ಸಾಧ್ಯವೇ ಇಲ್ಲ, ಅವರಿಗೆ ಪ್ರೇಮದ ಗಂಧವೂ ಇರುವುದಿಲ್ಲ, ಸಿರಿವಂತ— ಸುಶಿಕ್ಷಿತ ಮತ್ತು ಕೀರ್ತಿವಂತ ಜನರೇ ಪ್ರೇಮ-ರಾಜ್ಯದಲ್ಲಿ ಅಡಿಯಿಡಲು ಯೋಗ್ಯರು' ಎಂಬ ಭಾವನೆ ಅವಳ ರೋಮ-ರೋಮಗಳಲ್ಲಿಯೂ ನೆಲೆಗೊಂಡಿತ್ತು.

ಡಾಕ್ಟರನು ಮಾತಿನ ಸರಣಿಯನ್ನು ಮುಂದುವರಿಸುತ್ತ ಹೇಳತೊಡಗಿದ: "ಮೂರು ತಿಂಗಳ ಹಿಂದೆ ನಡೆದ ಘಟನೆಯಿದು. ಮೃತ್ಯುಶಯ್ಯೆಯ ಮೇಲೆ ತಳಮಳಿಸುತ್ತಿದ್ದ ಒಬ್ಬ ಹೆಂಗುಸಿನ ಕಡೆಯಿಂದ ಕರೆಬಂದುದರಿಂದ, ನಾನು ಅವಳ ಮನೆಗೆ ಹೋದೆನು. ಅವಳ ಹಾಸಿಗೆಯ ಹತ್ತಿರ ಎರಡು ಕರಿಯ ಬಣ್ಣದ— ಬಲಿಷ್ಠ-ನಾಯಿಗಳು ನಿಂತಿದ್ದುವು. ಮೊದಲು ನನಗೆ ಅವು ಬಹಳ ವಿಲಕ್ಷಣವಾಗಿ ಕಂಡುವು. ಸಮೀಪದ ಆಪ್ತರಂತೆ ಅವು ಹಾಸಿಗೆಯನ್ನು ಬಿಟ್ಟು ಕದಲುತ್ತಿರಲಿಲ್ಲ. ನನಗಿಂತ ಮೊದಲು ಬಂದ ಪಾದ್ರಿಯು, ಆ ನಾಯಿಗಳ ಹೊರತು ಅವಳಿಗೆ ಬೇರೆ ಯಾರೂ ಇಲ್ಲವೆಂದು ನನಗೆ ಹೇಳಿದನು. ಅವಳ ಪಾಲಕರು—ಗೆಳೆಯರು—ಆಪ್ತರು—ಎಲ್ಲರೂ ಎಂದರೆ ಅವೆರಡು ಕರಿಯ ನಾಯಿಗಳೇ. ತಾನು ಗಳಿಸಿದ ಹಣದ ಯೋಗ್ಯ ವ್ಯವಸ್ಥೆ ಮಾಡಲು, ವಿಶ್ವಾಸದವನೆಂದು ಅವಳು ನನ್ನನ್ನು ಕರೆಯಿಸಿದ್ದಳು. ಅವಳು ತನ್ನ ಎಲ್ಲ ಆಸ್ತಿಯನ್ನೂ ಕೆಮಿಸ್ಟ್ ಜೋಕನಿಗೆ ಮುಟ್ಟಿಸುವುದಾಗಿ ನನ್ನನ್ನು ಕೇಳಿ-ಕೊಂಡಳು. ಯಾವ ಸಂಬಂಧವೂ ಇಲ್ಲದೆ ಇದ್ದ ಒಬ್ಬ ಪರಕೀಯನಿಗೆ ತನ್ನ ಎಲ್ಲ ಬದುಕನ್ನೂ ಬಿಟ್ಟುಕೊಟ್ಟದ್ದನ್ನು ನೋಡಿ ನನಗೆ ತುಂಬ ಆಶ್ಚರ್ಯವಾಯಿತು. ನಾನು ಗೊಂದಲದಲ್ಲಿ ಬಿದ್ದದ್ದನ್ನು ನೋಡಿ ಅವಳು ತನ್ನ ಆತ್ಮಚರಿತ್ರೆಯನ್ನು ಹೇಳತೊಡಗಿದಳು. ಅವಳ ಜೀವನದ ಕಥೆ ಅತ್ಯಂತ ಹೃದಯದ್ರಾವಕವಾಗಿದೆ. ಕರುಣಾ-ಪೂರಿತವಾಗಿದೆ. ಅಂತಹ ಕತೆಯನ್ನು ನಾವು ಇನ್ನೊಮ್ಮೆ ಕೇಳುವಂತಿಲ್ಲವೆಂದು ನನಗೆನಿಸುವುದು.

....ಅವಳ ತಂದೆ-ತಾಯಿ ಹಳೆಯ ಖುರ್ಚಿಗಳನ್ನು ಸರಿಪಡಿಸಿ ಹೊಟ್ಟೆ ಹೊರೆಯುತ್ತಿದ್ದರು. ಅವರಿಗೆ ಸ್ವಂತದ ಮನೆಯ ಕಲ್ಪನೆಯೂ ಇರಲಿಲ್ಲ. ನಾಲ್ಕು ಗೋಡೆಗಳು ಅದರ ಮೇಲೆ ಒಂದು ಚಪ್ಪರವಿದ್ದಂತಹ ಒಂದು ಗುಡಿಸಲೂ ಕೂಡ ಅವರಿಗೆ ಗೊತ್ತಿರಲಿಲ್ಲ. ಸಣ್ಣವಳಿರುವಾಗ ಅವಳು ಹರಕು ಅರಿವೆಗಳನ್ನು ಉಟ್ಟುಕೊಂಡು ತಾಯಿಯ ಜೊತೆಯಲ್ಲಿಯೆ ಇರುತ್ತಿದ್ದಳು. ಅವಳ ತಂದೆ-ತಾಯಿಗಳು ಯಾವುದಾದರೊಂದು ಹಳ್ಳಿಯಲ್ಲಿ, ಜಲಾಶಯದ ಸಮೀಪದಲ್ಲಿ ತಮ್ಮ ವಸತಿ ಮಾಡುತ್ತಿದ್ದರು. ಕೆಲಸ ದೊರಕಿಸುವುದಕ್ಕಾಗಿ ಬೇರೆ ಬೇರೆ ಸುತ್ತಲಿನ ಹಳ್ಳಿಗಳನ್ನು ತಿರುಗುತ್ತಿದ್ದರು. ಅವರ ಲಗಾಮು-ಥಡಿಗಳಿಲ್ಲದ ಕುದುರೆಯು, ಅವರ ವಸತಿಸ್ಥಾನದ ಸಮೀಪದಲ್ಲಿಯೆ, ಗಿಡದ ಎಲೆಗಳನ್ನು ತಿನ್ನುತ್ತ ಅಡ್ಡಾಡುತ್ತಿತ್ತು. ಅವರ ನಾಯಿಗಳು ಮುಂಗಾಲಿನ ಉಗುರುಗಳಿಂದ ಮೂಗು ತುರಿಸಿಕೊಳ್ಳುತ್ತ ಅಲ್ಲಿಯೇ ಬಿದ್ದುಕೊಂಡಿರುತ್ತಿದ್ದುವು. ಆ ಸಣ್ಣ ಹುಡುಗಿ ಸಮೀಪದ ಮೈದಾನದಲ್ಲಿ ಆಡುತ್ತಿ-ದ್ದಳು. ಅವಳ ತಂದೆ-ತಾಯಿಗಳು ಒಂದು ದೊಡ್ಡ ಮರದ ನೆರಳಿನಲ್ಲಿ ತಮ್ಮ ಕೆಲಸವನ್ನು ಶಾಂತಭಾವದಿಂದ ಮಾಡುತ್ತ ಲಿದ್ದರು.

....'ಮುರಿದ ಖುರ್ಚಿ ದುರಸ್ತಿ ಮಾಡುವುದು ಇದೆಯೆ?' ಎಂದು ಯಾರು ಕೂಗುತ್ತ ಹೋಗಬೇಕೆಂಬುದನ್ನು ನಿಶ್ಚಯಿಸು-ವುದಕ್ಕಾಗಿ, ದಂಪತಿಗಳು ಒಬ್ಬರ ಕೂಡೊಬ್ಬರು ಮಾತನಾಡು-ತ್ತಿದ್ದರು. ಮಗಳು ಆಡುತ್ತ ಆಡುತ್ತ ದೂರ ಹೋದರೆ ಅಥವಾ ಹಳ್ಳಿಯ ಹುಡುಗರ ಕೂಡ ಮಾತನಾಡುತ್ತ ನಿಂತದ್ದನ್ನು ಕಂಡರೆ ತಂದೆಯು 'ಏ ಕಟ್ಟೀ, ಅಲ್ಲಿಗೇಕೆ ಸಾಯಲಿಕ್ಕೆ ಹೋಗಿದ್ದೀಯೆ? ಇಲ್ಲಿ ಬಾ!' ಎಂದು ಕೂಗುತ್ತಿದ್ದನು. ಆ ಶಬ್ದಗಳ ಹೊರತು ಬೇರೆ ಪ್ರೀತಿಯ ಮಾತುಗಳನ್ನು ತಂದೆಯ ಬಾಯಿಂದ ಅವಳು ಕೇಳಲಿಲ್ಲ.

....ಮಗಳು ದೊಡ್ಡವಳಾದ ಹಾಗೆ ಕೆಲಸ ದೊರಕಿಸುವುದಕ್ಕೆ ಅವಳೂ ಹಳ್ಳಿಗಳಲ್ಲಿ ತಿರುಗಾಡತೊಡಗಿದಳು. ಅಲ್ಲಿ ಭೆಟ್ಟಿಯಾದ ಹುಡುಗರ ಕೂಡ ಮಾತನಾಡಲು ಅವಳು ಪ್ರಯತ್ನಿಸುತ್ತಿದ್ದಳು. ಆಗ ಆ ಹುಡುಗರ ತಂದೆ-ತಾಯಿಗಳು, ಹುಡುಗರನ್ನು ಬೈದು ಛೀ ಹಾಕುತ್ತಿದ್ದರು. 'ಇನ್ನೊಂದು ಸಲ ನೀವು ಆ ಹೇಸಿ ಹುಡುಗಿಯ ಕೂಡ ಮಾತನಾಡುತ್ತಿದ್ದುದನ್ನು ಕಂಡರೆ, ನಿಮ್ಮ ಗತಿ

ನೆಟ್ಟಗಾಗಲಿಕ್ಕಿಲ್ಲ ' ಎಂದು ಅವರು ತಮ್ಮ ಮಕ್ಕಳಿಗೆ ಎಚ್ಚರಿಕೆ ಕೊಡುತ್ತಿದ್ದರು.

* * *

" ಕರ್ಟಿ ಹನ್ನೊಂದು ವರುಷದವಳಿರುವಾಗ, ಈ ಊರಿನ ಶಾಲೆಯ ಪಟಾಂಗಣದಲ್ಲಿ ಜೋಕನು ಅಳುತ್ತಿರುವುದನ್ನು ಕಂಡಳು. ಅವನ ಗೆಳೆಯರಲ್ಲಿ ಯಾರೋ ಅವನ ಒಂದು ಫಾರ್ದಿಂಗನ್ನು ಎತ್ತಿಹಾಕಿದುದರಿಂದ ಅವನು ದುಃಖಿಸುತ್ತಿದ್ದನು. ಅವನ ಶೋಕಪೂರಿತ ಮುಖವನ್ನು ನೋಡಿ, ಅವಳಿಗೆ ತುಂಬ ವ್ಯಥೆಯಾಯಿತು. ಅವಳು ಅವನ ಹತ್ತಿರ ಹೋಗಿ, ಅವನ ದುಃಖದ ಕಾರಣವನ್ನು ತಿಳಿದು, ತನ್ನ ಹರಕು ಲಂಗದಿಂದ ಅವನ ಕಣ್ಣನ್ನು ಒರಸುತ್ತ, ಅಂದು ತಾನು ದೊರಕಿಸಿದ ಪುಡಿಗಾಸುಗಳನ್ನು ಅವನ ಮುಂದೆ ಸುರುವಿದಳು. ಅರ್ಧ ಪೆನ್ನು, ಪೆನ್ನು, ಫಾರ್ದಿಂಗ್ ಹೀಗೆ ೪–೫ ನಾಣ್ಯಗಳು ಅದರಲ್ಲಿ ಇದ್ದುವು. ತಾನು ಕೊಟ್ಟ ನಾಣ್ಯಗಳನ್ನು ಅವನು ಸುಮ್ಮನೆ ಸ್ವೀಕರಿಸಿದ್ದನ್ನು ನೋಡಿ ಕರ್ಟಿಗೆ ತುಂಬ ಆನಂದವಾಯಿತು.

'ಕಳೆದುಕೊಂಡ ಫಾರ್ದಿಂಗಿಗೆ ಬದಲಾಗಿ ಇಷ್ಟು ನಾಣ್ಯಗಳು ಸಿಕ್ಕುವಲ್ಲಾ' ಎಂಬ ಸಂತಸದಲ್ಲಿ, ಅವನು ಅವಳನ್ನು ತಿರಸ್ಕರಿಸಲಿಲ್ಲ; ಅವನಿಗೆ ಕೋಪವೂ ಬರಲಿಲ್ಲ. ಅದನ್ನು ಕಂಡು ಕರ್ಟಿ ತನ್ನ ಕೋಮಲ ಬಾಹುಲತೆಗಳಿಂದ ಅವನ ಕುತ್ತಿಗೆಯನ್ನಪ್ಪಿ, ಪ್ರೇಮಭರದಿಂದ ಒಳಿತಾಗಿ ನಾಲ್ಕೈದು ಬಾರಿ ಚುಂಬಿಸಿದಳು. ತರುವಾಯ ನಿದಾನವಾಗಿ ತನ್ನ ಜಡಹೃದಯವನ್ನು ಹೊತ್ತುಕೊಂಡು ಹೊರಟುಹೋದಳು.

.... ಆ ದಿವಸದಿಂದ ಆ ಹುಡುಗಿಯ ಅಂತಃಕರಣದಲ್ಲಿ ವಿಲಕ್ಷಣವಾದ ತಳಮಳವು ಜಾಗ್ರತವಾಯಿತು. ಜೋಕನು ಅವಳಿಗೆ ತೀರ ಆಪ್ತನಾಗಿ ತೋರತೊಡಗಿದನು. ಅವಳ ಅಲ್ಪತ್ಯಾಗದಿಂದ ಅವಳ ಕೋಮಲ ಭಾವನೆಗಳು ಉದ್ದೀಪ್ತವಾದುವು. ಈ ಮಾಯೆ ಯಾರನ್ನೂ ಬಿಟ್ಟಿಲ್ಲವಲ್ಲ !

.... ಮುಂದೆ ಎಷ್ಟೋ ತಿಂಗಳು ಅವಳಿಗೆ ಆ ಹುಡುಗನ ವಿಷಯಕವಾದ ಮಧುರ ಸ್ವಪ್ನಗಳೇ ಬೀಳತೊಡಗಿದುವು. ಅವಳು ಅವನನ್ನು ಶೋಧಮಾಡುವುದಕ್ಕಾಗಿ, ತನ್ನ ಹರಕು ಲಂಗದಲ್ಲಿ ಕೆಲವು ಫಾರ್ದಿಂಗುಗಳನ್ನು ಹಾಕಿಕೊಂಡು ಒಂದು ದಿವಸ ಹೊರಟಳು. ಅವನು ತನ್ನ ತಂದೆಯ ಅಂಗಡಿಯಲ್ಲಿ ಕುಳಿತದ್ದನ್ನು ಬಳಿಯ ಕಾಜಿನ ಕಿಟಕಿಯ ಮೂಲಕ ಕರ್ಟಿ ನೋಡಿದಳು. ಅಂಗಡಿಯಲ್ಲಿ ಹಚ್ಚಿದ ಬಣ್ಣಬಣ್ಣದ ದೀಪಗಳ ಬೆಳಕಿನಲ್ಲಿ, ತಂದೆಯ ಹಿಂದೆ ಹಿಂದೆ ಓಡಾಡುತ್ತಿದ್ದ ಜೋಕನ ಸುಂದರ ದೇಹಯಷ್ಟಿಯು ಅವಳಿಗೆ ಅತ್ಯಂತ ಮೋಹಕವಾಗಿ ಕಂಡಿತು.

.... ಒಂದು ಸಲ ಗೆಳೆಯರ ಕೂಡ ಅವನು ಮಾತನಾಡುತ್ತಿದ್ದುದನ್ನು ಕಂಡು, ಓಡುತ್ತ ಅವನ ಬಳಿಗೆ ಹೋಗಿ ನಿಂತುಕೊಂಡಳು. ಅವನನ್ನು ಗಟ್ಟಿಯಾಗಿ ತಬ್ಬಿಕೊಂಡು ಲೊಟಲೊಟನೆ ಮುದ್ದಿಸತೊಡಗಿದಳು. ಈ ಅದ್ಭುತವನ್ನು ನೋಡಿ ಅವನು ಗಾಬರಿಯಾಗಿ ಅಳತೊಡಗಿದನು. ಕರ್ಟಿ ದಿಗಿಲುಗೊಂಡು, ಅವನನ್ನು ಸಮಾಧಾನಮಾಡುವುದಕ್ಕಾಗಿ ತನ್ನಲ್ಲಿದ್ದ ಎಲ್ಲ ಫಾರ್ದಿಂಗುಗಳನ್ನೂ ಅವನಿಗೆ ಕೊಟ್ಟುಬಿಟ್ಟಳು. ಆಶ್ಚರ್ಯಚಕಿತನಾಗಿ ಜೋಕನು ಅವಳ ಕಡೆಗೆ ನೋಡಿ ಮುಗುಳುನಗೆ ನಕ್ಕನು. ಅವನ ಮಧುರಹಾಸ್ಯವೆಂದರೆ ಬೇಕಾದಷ್ಟು ಸಲ ಚುಂಬಿಸಲು ಪೂರ್ಣ ಅನುಮತಿ ಎಂದು ತಿಳಿದು, ಕರ್ಟಿ ಅವನನ್ನು ಮನದಣಿಯಾಗಿ ಮುದ್ದಿಸಿದಳು.

* * *

.... ನಾಲ್ಕು ವರುಷ ಇದೇ ಕ್ರಮ ನಡೆಯುತ್ತಿತ್ತು. ತನ್ನನ್ನು ಚುಂಬಿಸಿದುದಕ್ಕಾಗಿ ಅವನು ಪ್ರತಿಸಲವೂ ಅವಳಿಂದ ದುಡ್ಡು ಸುಲಿಯುತ್ತಿದ್ದನು. ಅವಳಿಗೆ ಅವನೇ ಸಕಲ ಸರ್ವಸ್ವವಾಗಿದ್ದನು. ಅವನು ಸಹ ಅವಳ ದಾರಿಯನ್ನು ಆತುರತೆಯಿಂದ ನಿರೀಕ್ಷಿಸುತ್ತಿದ್ದನು. ಅವಳನ್ನು ಕಂಡ ಕೂಡಲೆ ಓಡುತ್ತ ಅವಳ ಹತ್ತಿರ ಹೋಗುತ್ತಿದ್ದನು. ಆಗ ಕರ್ಟಿಗೆ ಸ್ವರ್ಗವು ಅಂಗೈಯಲ್ಲಿದ್ದಂತೆ ಭಾಸವಾಗುತ್ತಿತ್ತು.

.... ಕೆಲವು ದಿವಸ ಜೋಕನು ಊರಲ್ಲಿ ಕಾಣದಾದನು. ಕಾಲೇಜಿಗೆ ಹೋಗಿರುವನೆಂದಾಕೆ ಬಹಳ ಕಷ್ಟದಿಂದ ಕೇಳಿ ತಿಳಿದುಕೊಂಡಳು. ಎರಡು ವರುಷ ಆತ ಊರಿಗೆ ಬರಲಿಲ್ಲ. ಮುಂದೆ ಅವಳು ಅವನನ್ನು ಕಂಡಾಗ, ಅವಳಿಗೆ ಅವನ ಗುರುತು ಕೂಡ ಮೊದಲು ಸಿಕ್ಕಲಿಲ್ಲ. ಅಷ್ಟು ಅವನಲ್ಲಿ ಬದಲಾವಣೆಯಾಗಿದ್ದಿತು! ಉಣ್ಣೆಯ ಸುಂದರವಾದ ಸೂಟನ್ನು ಹಾಕಿಕೊಂಡು ಓಡಾಡುವಂತಹ ಅವನ ನಿಡಿದಾದ ದೇಹವು ಅವಳಿಗೆ ಅತ್ಯಂತ ಮನೋಮೋಹಕವಾಗಿ ಕಂಡಿತು. ತಾನು ಅವಳನ್ನೆಂದೂ ನೋಡದಂತೆಯೂ, ಅವಳನ್ನು ಗುರುತಿಸದಂತೆಯೂ ಜಂಭದಿಂದ ಅವಳ ಸಮೀಪದಲ್ಲಿಯೆ ಅವನು ಹಾಯ್ದುಹೋದನು. ಹೋಗುವಾಗ ಅವನ ಕೋಟಿನ ಅಂಚು ಅವಳ ಗೌನಿಗೆ ತಾಕಿತು. ಓ! ಆ ಸ್ಪರ್ಶಸುಖ! ಅವಳ ಮೈಯಲ್ಲಿ ಮಿಂಚಿನ ಹೊಳೆ ತುಳುಕಿದಂತಾಯಿತು. ಮುಂದೆ ಎಷ್ಟೋ ದಿವಸ, ಆ ನೆನಹಿನಿಂದ ಅವಳು ಆಗಾಗ ಪುಳಕಿತಳಾಗುತ್ತಿದ್ದಳು. ಅವನನ್ನು ಕಾಣುವುದಕ್ಕಾಗಿ ಅವನ ಮನೆಗೆ ಹೋಗಬೇಕೆಂದುಕೊಂಡಳು. ಆದರೆ ಅವನ ಕೂಡ ಮಾತನಾಡುವುದಕ್ಕೆ ಸ್ವಲ್ಪವೂ ಧೈರ್ಯವಿರಲಿಲ್ಲ. ದಿನವೂ ಅವನನ್ನು ನೋಡಿದರೆ ಸಾಕೆಂದು ಅವಳು ಹಂಬಲಿಸುತ್ತಿದ್ದಳು. ಆದರೆ ದೈವವು ಆ ಸುಖವನ್ನೂ ಅವಳಿಗೆ ಕೊಡುತ್ತಿರಲಿಲ್ಲ. ಭಕ್ತಿಪೂರ್ವಕವಾಗಿ ಅವಳು ಅವನನ್ನು ತನ್ನ ಆರಾಧ್ಯದೈವವೆಂದು ಪೂಜಿಸುತ್ತಿದ್ದಳು. ಸಾಯುವಾಗ ಅವಳು ನನ್ನನ್ನು ಕುರಿತು 'ಡಾಕ್ಟರ್' ಅವನೆಂದರೆ ನನಗೆ ಒಂದು ವಿಧದ ಹುಚ್ಚು; ಅವನ ಹೊರತು ಲೋಕದಲ್ಲಿ ಬೇರೆ ಪುರುಷರಿರುವರೆಂಬ ಭಾವನೆ ನನಗೆ ಇರಲಿಲ್ಲ; ಈ ಜಗತ್ತಿನಲ್ಲಿ ನಾವಿಬ್ಬರೇ ಇರುವವರು ಎಂದು ಭ್ರಮಿಸುತ್ತಿದ್ದೆ!' ಎಂದು ಹೇಳಿದಳು.

....ಅವಳ ತಂದೆ-ತಾಯಿಗಳು ಸತ್ತುಹೋದರು. ಅವರ ಉದ್ಯಮವನ್ನೇ ಮಗಳೂ ಕೈಕೊಂಡಳು. ಆಮೇಲು ಈಗ ಎರಡು ನಾಯಿಗಳನ್ನು ಸಾಕಿದ್ದಳು. ಅವು ಅವಳ ಅಂಗರಕ್ಷಕವಾಗಿದ್ದುವು. ಆ ನಂಬುಗೆಯ ಪ್ರಾಣಿಗಳು ಅವಳು ಸಾಯುವವರೆಗೆ ತಮ್ಮ ಕರ್ತವ್ಯವನ್ನು ಪಾಲಿಸಿದುವು; ಅವಳ ಬಂಧುಗಳಂತೆ ಅವಳ ಪಾಲನೆ ಮಾಡುತ್ತಿದ್ದುವು.

....ಕರ್ಟಿ ಒಂದು ದಿನ ಕೆಲಸ ಮುಗಿಸಿಕೊಂಡು, ಸಂಜೆಯ ಮುಂದೆ ಜೋಕನ ಅಂಗಡಿಯ ಮುಂದೆಯೆ ಹಾಯ್ದು ಬರುತ್ತಿದ್ದಳು. ಅವನ ಭುಜದ ಮೇಲೆ ತನ್ನ ತಲೆಯನ್ನು ಒರಗಿಸಿ, ಅವನಿಗೆ ಹೊಂದಿಕೊಂಡು ಅಂಗಡಿಯ ಮೆಟ್ಟಿಲನ್ನು ಇಳಿಯುವಂತಹ ಒಬ್ಬ ತರುಣಿಯನ್ನು ಅವಳು ನೋಡಿದಳು. ಹಿಂದಿನಿಂದ ವಿಚಾರಿಸಿದ ಮೇಲೆ, ಆ ತರುಣಿಯು ಅವನ ಹೆಂಡತಿಯೆಂದು ಅವಳಿಗೆ ತಿಳಿದು ಬಂದಿತು.

....ಅಂದಿನ ರಾತ್ರಿಯೇ ಕರ್ಟಿ ನದಿಯಲ್ಲಿ ಹಾರಿಕೊಂಡಳು. ಆದರೆ ದಂಡೆಯಮೇಲೆ ಕುಳಿತುಕೊಂಡು ತನ್ನದೇ ಆದ ಒಂದು ರಾಗದಲ್ಲಿ ಹಾಡುತ್ತಿದ್ದ ಒಬ್ಬ ಹುಡುಗನು, ಕೂಡಲೇ ಅವಳನ್ನು ಹೊರಕ್ಕೆ ತೆಗೆದನು; ಅವಳಿಗೆ ಬೇಡವಾದ ಜೀವವನ್ನು ಅವನು ಬದುಕಿಸಿದನು. ಮುಂದೆ ಔಷಧೋಪಚಾರಕ್ಕಾಗಿ ಅವನು ಕರ್ಟಿಯನ್ನು ಸಮೀಪದಲ್ಲಿದ್ದ ಜೋಕನ ಔಷಧದ ಅಂಗಡಿಗೆ ಹೊತ್ತುಕೊಂಡು ಬಂದನು. ಜೋಕನು ಅವಳ ಬ್ಲೌಜ್ ಗುಂಡಿಗಳನ್ನು ಬಿಚ್ಚಿ, ಬಹಳ ವೇಳೆಯ ವರೆಗೆ ಅವಳ ವಕ್ಷಸ್ಥಲವನ್ನು ರಭಸದಿಂದ ತಿಕ್ಕುತ್ತಿದ್ದನು. ತುಸು ಹೊತ್ತಿನಲ್ಲಿಯೆ ಅವಳಿಗೆ ಎಚ್ಚರು ಬಂದಿತು. ಅವಳು ಅವನನ್ನು ದೃಷ್ಟಿಸಿದಳು. ಅವನ ದೃಷ್ಟಿಯಲ್ಲಿ ಪ್ರೇಮಭಾವನೆಯಿರದೆ ಕರ್ತವ್ಯದ ಭಾವನೆಯಿದ್ದಿತು. ಅವಳು ಹೊರಟು ಹೋಗುವಾಗ ಜೋಕನು "ಇಂತಹ ಹುಚ್ಚುತನವನ್ನು ಇನ್ನೊಮ್ಮೆ ಮಾಡಬೇಡ; ನದಿಯಲ್ಲಿ ಹಾರಿಕೊಳ್ಳಲಿಕ್ಕೆ ನಿನಗೆ ಹುಚ್ಚು ಹಿಡಿದಿದ್ದಿತೇನು?" ಎಂದು ಸಿಟ್ಟಿನಿಂದ ಅವಳನ್ನು ಬೈಯುತ್ತ ಮಲಗಲು ಹೊರಟುಹೋದನು.

'ಅವನು ನನ್ನ ಕೂಡ ಮಾತನಾಡಿದನಲ್ಲ! ನನ್ನ ದೇಹಸ್ಪರ್ಶವನ್ನೂ ಮಾಡಿದನಲ್ಲ!' ಎಂಬ ಆನಂದದ ಲಹರಿಯಲ್ಲಿ ಅವಳ ಕೆಲವು ದಿನಗಳು ಉರುಳಿ ಹೋದುವು. ಅಂದು ಅವನು ಪಟ್ಟ ಶ್ರಮಕ್ಕೆ ಕಾಣಿಕೆಯೆಂದು ಅವಳು ಕೆಲವು ಹಣ ಕೊಡಲು ಇಚ್ಛಿಸಿದಳು. ಆದರೆ ಅವನು ತೆಗೆದುಕೊಳ್ಳಲಿಲ್ಲ.

....ಪುನಃ ಅವಳಿಗೆ ಅವನ ವಿಷಯಕವಾದ ಹಳವಂಡವು ಪ್ರಾರಂಭವಾಯಿತು. ಅಂಗಡಿಯಲ್ಲಿ ಅತ್ತಿಂದಿತ್ತ ತಿರುಗಾಡುತ್ತಿದ್ದ ಅವನನ್ನು ನೋಡುವುದಕ್ಕೆ ಅವಳು ಪ್ರತಿದಿನವೂ ಎಷ್ಟೋ ಸಲ ಅಲ್ಲಿ ನಿಂತಿರುತ್ತಿದ್ದಳು. ಅವನನ್ನು ಕಣ್ಣುತುಂಬ ನೋಡುವುದಕ್ಕೆ ಮತ್ತು ನಾಲ್ಕು ಕ್ಷಣವೇ ಆಗಲೊಲ್ಲದೇಕೆ ಅವನಕೂಡ ಮಾತನಾಡಿ ಕಾಲಹರಣಮಾಡುವುದಕ್ಕೆ, ಅವನ ಅಂಗಡಿಯಲ್ಲಿ ಹೋಗುತ್ತಿದ್ದಳು; ತನಗೆ ಅಗತ್ಯವಿಲ್ಲದಿದ್ದರೂ ಕೆಲವು ಔಷಧಗಳನ್ನು ಕೊಂಡು, ಅಪ್ರತ್ಯಕ್ಷವಾಗಿ—ಮೊದಲು ಹೇಗೆ ಹಣಕೊಡುತ್ತಿದ್ದಳೋ ಹಾಗೆ— ಹಣಕೊಡುತ್ತಿದ್ದಳು. ಅವಳಿಗೆ ಆದರ ಪ್ರತಿಫಲವಾಗಿ ಔಷಧಗಳು ಬೇಕಾಗಿರಲಿಲ್ಲ; ಅವನ ಚುಂಬನಮಾತ್ರ.

....ಅವಳು ಮೇ ತಿಂಗಳಲ್ಲಿ ತೀರಿಹೋದಳೆಂದು ಮೊದಲೇ ನಾನು ಹೇಳಿದ್ದೇನೆ. ಈ ವರೆಗೆ ಅವಳು ತನ್ನ ಜೀವನದ ಕರುಣಕತೆಯನ್ನು ಹೇಳಿ ಕೆಲಹೊತ್ತು ಸುಮ್ಮಗಾದಳು. ತಾನು ಗಳಿಸಿದ ಎಲ್ಲ ದುಡ್ಡನ್ನೂ ಅವನಿಗೆ ಮುಟ್ಟಿಸುವುದಾಗಿ ನನ್ನನ್ನು ಪ್ರಾರ್ಥಿಸಿಕೊಂಡಳು. ಅವನ ಸಲುವಾಗಿ ಹೇಗಾದರೂ ಹಣ ಕೂಡಿಸಬೇಕೆಂದು ಅವಳು ಅರೆಹೊಟ್ಟೆಯುಂಡು, ಉಪವಾಸ ವನವಾಸಗಳನ್ನನುಭವಿಸಿ, ಅವಿರತವಾಗಿ ದುಡಿದು, ಅಕಾಲದಲ್ಲಿ ಸತ್ತುಹೋದಳು. ನನ್ನ ಕೈಯಲ್ಲಿ ೨೩೨ ಫ್ರ್ಯಾಂಕುಗಳನ್ನು ಕೊಟ್ಟು, ಅವನಿಗೆ ಮುಟ್ಟಿಸುವೆನೆಂದು ನನ್ನಿಂದ ವಚನ ತೆಗೆದು ಕೊಂಡಳು. ಅವಳು ಸತ್ತಮೇಲೆ ನಾನು ಆ ಗಂಟನ್ನು ತೆಗೆದುಕೊಂಡು, ಅವಳ ಅಂತ್ಯವಿಧಿಗಾಗಿ ೨೭ ಫ್ರ್ಯಾಂಕುಗಳನ್ನು ಆ ಪಾದ್ರಿಗೆ ಕೊಟ್ಟು, ಅಲ್ಲಿಂದ ಹೊರಟು ಮನೆಗೆ ಬಂದೆ. ಸತ್ತಮೇಲಾದರೂ ತನ್ನ ನೆನಹು ಸಂಪೂರ್ಣವಾಗಿ ಇರಲಿ ಎಂದು, ಅಷ್ಟು ದೊಡ್ಡ ನಿಧಿಯನ್ನು ಅವನಿಗೆ ಬಿಟ್ಟುಕೊಟ್ಟಿರಬಹುದು—ಎಂದು ನನಗೆನಿಸಿತು.

....ಮರುದಿವಸ ನಾನು ಜೋಕನ ಮನೆಗೆ ಹೋದೆನು. ಆದೇ ಊಟಮಾಡಿ ದಂಪತಿಗಳು ಸುಖವಾಗಿ ಹರಟೆಕೊಚ್ಚುತ್ತಿದ್ದರು. ಸತ್ಕಾರದಿಂದ ನನಗೆ ಸ್ವಾಗತಬಯಸಿ, ಬದಿಯಲ್ಲಿದ್ದ ಖುರ್ಚಿಯ ಮೇಲೆ ಕುಳಿತುಕೊಳ್ಳಲು ನನಗೆ ಕೇಳಿಕೊಂಡನು. ಅವನ ಸುಂದರವಾದ ಮೊಗವನ್ನು ನೋಡಿದರೆ, ಅವನ ಸುಖಮಯವಾದ ಸಂಸಾರದ ಕಲ್ಪನೆ ಬರುವಂತಿತ್ತು. ಜೋಕನು ಸಂತುಷ್ಟನಾಗಿ ಇದ್ದನು, ಸುಖಿಯಾಗಿದ್ದನು, ತನ್ನ ಪ್ರಪಂಚದಲ್ಲಿ ಮಗ್ನನಾಗಿದ್ದನು. ನಾನು ಅವಳ ಕರುಣಕತೆಯನ್ನು ಅವನ ಮನಕರಗುವ ರೀತಿಯಲ್ಲಿ ಹೇಳಿ ಮುಗಿಸಿದೆನು. ಅವನು ಅವಳ ನೆನಪಿನಿಂದ ಕಣ್ಣೀರನ್ನು ಸುರಿಸಬಹುದೆಂದು ನಾನು ಭಾವಿಸಿದ್ದೆ. ಆದರೆ ವಿಪರೀತಕ್ಕಿಟ್ಟುಕೊಂಡಿತು. ಬೀದಿಬೀದಿ ತಿರುಗಿ ಮುರುಕು ಖುರ್ಚಿ ನೆಟ್ಟಗೆ ಮಾಡಿ, ತನ್ನ ಉದರನಿರ್ವಾಹ ಮಾಡಿಕೊಳ್ಳುತ್ತಿದ್ದ ಒಬ್ಬ ತರುಣಿಯು ತನ್ನ ಮೇಲೆ ಏಕನಿಷ್ಠವಾಗಿ ಪ್ರೇಮಮಾಡುತ್ತಿದ್ದಳೆಂದು ಕೇಳಿ, ಅವನು ಸಿಟ್ಟಿನಿಂದ ಥರಥರನೆ ಕಂಪಿಸತೊಡಗಿದನು. ಅವನ ಕೆಂಪುಮೊಗವು ಕೋಪದಿಂದ ಮತ್ತಿಷ್ಟು ಕೆಂಪಾಯಿತು. ಪ್ರಾಣಕ್ಕಿಂತಲೂ ಪ್ರಿಯವಾದ ಮಾನ-ಮರ್ಯಾದೆ, ತನ್ನ ಕರ್ತೃತ್ವಶಕ್ತಿಯಿಂದ ಗಳಿಸಿದ ಕೀರ್ತಿ ಮತ್ತು ಸಮಾಜದಲ್ಲಿದ್ದ ತನ್ನ ಪ್ರತಿಷ್ಠೆಯನ್ನು ಅವಳು ಕಿತ್ತುಕೊಳ್ಳುತ್ತಿದ್ದಂತೆ ಅವನಿಗೆ ತೋರಿತು.

....ಅವನ ಹೆಂಡತಿಯು ಅವನಿಗಿಂತಲೂ ಹೆಚ್ಚು ಸಿಟ್ಟಿಗೆದ್ದು, ತಿರಸ್ಕಾರದಿಂದ 'ಎಂತಹ ಅಪಮಾನಕಾರಕ ಮತ್ತು ಲಜ್ಜಾಸ್ಪದವಾದ ಮಾತು ಇದು! ಅವಳು ಪ್ರೇಮಿಸುವುದಕ್ಕೆ ಬೇರೊಬ್ಬನು

ಸಿಕ್ಕಲಿಲ್ಲವೆ? ಮನುಷ್ಯರು ತಮ್ಮ ಯೋಗ್ಯತೆಗೆ ಸರಿಯಾಗಿ ನಡೆದುಕೊಳ್ಳಬೇಕು. !' ಎಂದು ತನ್ನ ಟೀಕೆಯನ್ನು ಅದಕ್ಕೆ ಜೋಡಿಸಿದಳು.

ಆದರೆ ಮುಂದೆ ಹಾಗೆಯೆ ಸಾಗದೆ ವಿಚಾರಮಾಡುವಂತೆ ನಡುವೆ ತುಸು ತಡೆದಳು. ಅದಷ್ಟು ಪ್ರಖರಶಬ್ದಗಳಿಂದ ತನ್ನ ಭಾವನೆಗಳನ್ನು ಹೊರಗೆಡಹಲು ಅವಳು ಯೋಚಿಸುತ್ತಿರಬಹುದು ಎಂದು ನಾನು ತಿಳಿದೆ. ಜೋಕನು ತನ್ನ ಖುರ್ಚಿಯಿಂದ ಎದ್ದು ರಭಸದಿಂದ ಅತ್ತಿಂದಿತ್ತ ಹೆಜ್ಜೆಹಾಕುತ್ತಿದ್ದನು. ಹಠಾತ್ತಾಗಿ ನನ್ನ ಸಮೀಪಕ್ಕೆ ಅವನು ಬಂದು 'ಡಾಕ್ಟರ್, ನಾನು ಹೇಗೆ ಆ ಹಣ ತೆಗೆದುಕೊಳ್ಳಲಿ? ನೀವು ಯಾಕೆ ಈ ಸುದ್ದಿಯನ್ನು ನನಗೆ ತಿಳಿಸಿದಿರಿ? ಅಯ್ಯೋ, ನಾನು ಏನು ಮಾಡಲಿ? ಅವಳು ಜೀವಂತಳಾಗಿದ್ದರೆ, ಒಬ್ಬ ಸಭ್ಯಗೃಹಸ್ಥನ ಮಾನ ಕಳೆದದ್ದಕ್ಕಾಗಿ ಅವಳನ್ನು ಕೈದುಮಾಡಿಸುತ್ತಿದ್ದೆ!' ಎಂದು ಅರ್ಭಟಿಸತೊಡಗಿದನು.

.... ಆ ದಂಪತಿಗಳ ಈ ಅವಾಂತರವನ್ನು ನೋಡಿ ನಾನು ವಿಸ್ಮಯದಿಂದ— ಮಾತನಾಡಲೂ ಕೂಡ ಬಾರದಷ್ಟು— ದಿಗಿಲುಗೊಂಡಿದ್ದೆನು. ಅವನ ಪ್ರಶ್ನೆಗೆ ಏನು ಹೇಳಬೇಕೆಂಬುದೂ ನನಗೆ ತೋಚಲೊಲ್ಲದು. ಆದರೂ ನಾನು ಯಾವ ಕಾರ್ಯದ ಸಲುವಾಗಿ ಬಂದಿದ್ದೆನೋ ಆ ಕಾರ್ಯವನ್ನು ಮಾಡಲೆಬೇಕಾಗಿತ್ತು. ಆದುದರಿಂದ ನಾನು 'ನಿಮಗೆ ಕೊಡುವುದಕ್ಕೆ ಅವಳು ನನ್ನ ಕಡೆಗೆ ೬೩೦೦ ಫ್ರ್ಯಾಂಕುಗಳನ್ನು ಕೊಟ್ಟು ಸ್ವರ್ಗಸ್ಥಳಾಗಿದ್ದಾಳೆ. ನಿಮಗೆ ತೆಗೆದುಕೊಳ್ಳಲು ಯೋಗ್ಯವೆನಿಸದಿದ್ದರೆ ಅವನ್ನು ಬಡವರಿಗೆ ಹಂಚಿಬಿಡಿರಿ' ಎಂದು ಸಲಹೆ ಹೇಳಿದೆ.

ನನ್ನ ಮಾತಿನ ಕಡೆಗೆ ಲಕ್ಷ್ಯಕೊಡದೆ ಅವರು ಆಶ್ಚರ್ಯದಿಂದ ನನ್ನ ಕಡೆಗೆ ನೋಡತೊಡಗಿದರು.

ನಾನು ಕಿಸೆಯಿಂದ ಗಂಟನ್ನು ತೆಗೆದು ಅವರ ಮುಂದೆ ಸುರಿದೆನು; ಎಷ್ಟೋ ಹಳೆಯ— ಹೊಸ— ನಾಣ್ಯಗಳ ರಾಶಿ ಅವರ ಮುಂದೆ ಬಿದ್ದಿತು.

ತರುವಾಯ ನಾನು 'ಇದನ್ನು ಏನು ಮಾಡುವಿರಿ?' ಎಂದು ಅವರನ್ನು ಕೇಳಿದೆ.

ಜೋಕನ ಹೆಂಡತಿಯು ಕೂಡಲೆ 'ಇದು ಅವಳ ಕೊನೆಯ ಇಚ್ಛೆಯಿರುವುದರಿಂದ ನಾವು ಇದನ್ನು ತಿರಸ್ಕರಿಸಿದರೆ ತುಸು....'

ಗೊಂದಲದಲ್ಲಿ ಬಿದ್ದಂತಹ ಪತಿರಾಜನು ಇನಿಯಳ ಸಹಾಯಕ್ಕೆ ಧಾವಿಸುತ್ತ ಬಂದನು: 'ಅವಳ ನೆನಪಿಗಾಗಿ ನಾವು ನಮ್ಮ ಹುಡುಗರ ಸಲುವಾಗಿ ಇದನ್ನು ವಿನಿಯೋಗಿಸುತ್ತೇವೆ' ಎಂದು ಮಾತನ್ನು ಮುಗಿಸಿದನು.

'ನಿಮ್ಮ ಇಚ್ಛೆ' ಎಂದಿಷ್ಟೇ ನಾನು ನುಡಿದೆ. ಅವನು ಮತ್ತೆ 'ನಿಮಗೆ ಅವಳು ನನಗೆ ಕೊಡುವದಕ್ಕೆ ಗಂಟನ್ನು ಕೊಟ್ಟಳಲ್ಲವೆ? ಹಾಗಾದರೆ ಅದನ್ನು ಕೊಟ್ಟುಬಿಡಿರಿ. ನಾವು ಅದನ್ನು ಸತ್ಕಾರ್ಯದಲ್ಲಿ ವಿನಿಯೋಗಿಸುತ್ತೇವೆ. ಆದರ ನಂಬುಗೆ ಇದ್ದರೆ ತೀರಿತು' ಎಂದು ಹೇಳಿ, ತನ್ನ ಉಪನ್ಯಾಸವನ್ನು ಮುಗಿಸಿದನು.

ಅವರ ಕೈಯಲ್ಲಿ ಹಣವನ್ನು ಕೊಟ್ಟು ಅವರಿಗೆ ವಂದಿಸಿ ಹೊರಟುಬಂದೆ.

.... ಮರುದಿವಸ ಜೋಕನು ನನ್ನ ಕಡೆಗೆ ಬಂದು 'ಅವಳ ಹತ್ತಿರ ಒಂದು ಟಾಂಗಾ ಮತ್ತು ಒಂದು ಕುದುರೆ ಇದ್ದಿತಲ್ಲವೆ? ಅವುಗಳನ್ನು ನೀವು ಏನು ಮಾಡುವಿರಿ?' ಎಂದು ಕೇಳಿದನು.

'ಇನ್ನೂ ಏನೂ ನಿಶ್ಚಯವಾಗಿಲ್ಲ; ನಿಮಗೆ ಬೇಕಾಗಿದ್ದರೆ ತೆಗೆದುಕೊಂಡು ಹೋಗಿರಿ' ಎಂದು ನಾನು ಹೇಳಿದೆ.

'ಒಳ್ಳೆಯದು, ನನಗೆ ಅವುಗಳಿಂದ ಬಹಳ ಉಪಯೋಗವಾಗುವುದು' ಎಂದು ಅವನು ಮಾರ್ನುಡಿದನು.

ಅವನು ತುಸು ದೂರ ಹೊರಟುಹೋದಾಗ ಅವನನ್ನು ಕೂಗಿ ಕರೆದೆ. ಹತ್ತಿರ ಬಂದಮೇಲೆ 'ಅವಳ ಹತ್ತಿರ ಇನ್ನೂ ಒಂದು ಮುದುಕ ಕುದುರೆ ಮತ್ತು ಎರಡು ನಾಯಿಗಳಿವೆ. ಬೇಕಾಗಿದ್ದರೆ ಅವುಗಳನ್ನೂ ನೀವು ತೆಗೆದುಕೊಂಡು ಹೋಗಬಹುದು' ಎಂದು ಹೇಳಿ, ಅವನಿಂದ ಉತ್ತರ ನಿರೀಕ್ಷಿಸತೊಡಗಿದೆ.

ಅವನು ಕಿಲಕಿಲನೆ ನಕ್ಕು 'ಡ್ಯಾಮ್! ಆ ತೊಡಕನ್ನು ತೆಗೆದುಕೊಂಡು ನಾನೇನು ಮಾಡಲಿ? ಒಳ್ಳೆಯ ಬೆಲೆಬರುವಂತಿದ್ದರೆ ಮಾರಿಬಿಡಿರಿ!' ಎಂದು ಹೇಳಿ, ತನ್ನ ಕೈಯನ್ನು ಮುಂದೆ ಚಾಚಿದನು. ಅದನ್ನು ನನ್ನ ಕೈಯಲ್ಲಿ ತೆಗೆದುಕೊಂಡು ಶೇಕ್-ಹ್ಯಾಂಡ್ ಮಾಡಿ ಅವನನ್ನು ಬೀಳ್ಕೊಟ್ಟೆ. ಆದರ ಕಾರಣವಿಷ್ಟೆ, ಕೆಮಿಸ್ಟರೂ ಡಾಕ್ಟರರೂ ವಿರೋಧಿಗಳಾದರೆ ನಡೆಯುವಂತಿಲ್ಲ.

ನಾಯಿಗಳನ್ನು ನಾನು ಸಾಕತೊಡಗಿದೆ. ಕುದುರೆಯನ್ನು ಪಾದ್ರಿಯು ತೆಗೆದುಕೊಂಡನು. ಟಾಂಗೆಯ ಉಪಯೋಗವನ್ನು ಜೋಕನು ಮಾಡಿಕೊಳ್ಳತೊಡಗಿದನು. ರೇಲ್ವೆ ಕಂಪನಿಯ ಸಂಗ್ರಹವನ್ನು ಮಾರಲಿಕ್ಕೆ ತೆಗೆದುಕೊಂಡಂತಹ ಸತ್ಕಾರ್ಯದಲ್ಲಿ ಆ ದುಡ್ಡಿನ ಉಪಯೋಗವಾಯಿತೆಂದು ನಾನು ಕೇಳಿದೆ"

ಡಾಕ್ಟರನು ತನ್ನ ಕತೆ ಮುಗಿಸಿದಾಗ, ಮಾರ್ಕ್ವೀಸನ ಮನಸಿನ ಮೇಲೆ ವಿಲಕ್ಷಣ ಪರಿಣಾಮವಾಗಿತ್ತು. ಅವನು ಕಣ್ಣು ಒರಸಿಕೊಳ್ಳುತ್ತ,

"ನಿಜವಾದ ಪ್ರೀತಿಯನ್ನು ಕೇವಲ ಸ್ತ್ರೀಯರೇ ಮಾಡಬಲ್ಲರು" ಎಂದು ನುಡಿದು ಸುಮ್ಮಗಾದನು.

"ಕಾಡುಕೋಣ"ದ ಗುರುತಿನ
ಕಾಗದವು
ಕನ್ನಡ ನಾಡಿನದು!
ಬರೆಯಲಿಕ್ಕೂ ಮುದ್ರಣಕ್ಕೂ ತಕ್ಕುದಾದುದು.
ಅಧಿಕೃತ ಪ್ರಸಾರಕರು: ಜಿ. ಕೆ. ಕೇಳಕರ
ಸ್ವದೇಶಿ ಪೇಪರ್ ಮಾರ್ಟ್, ಧಾರವಾಡ.

ಕೀರ್ತಿಯ ನೆರಳು

(ಲಘುಪ್ರಬಂಧ)

ಶ್ರೀ. 'ಭಾರತೀಸುತ' ವೈನಾಡು

★

ಮಾನವನಿಗಿರುವ ಆದರ್ಶಗಳು ಸೂತ್ರದ ಬೊಂಬೆಗಳಂತೆ ಮಾತ್ರ ಇರುವುವು; ಇವೆಲ್ಲವುಗಳ ಅಂತಃಸೂತ್ರವೆಂದರೆ ಮಾನವರ ಅಂತರಾಂತರದಲ್ಲಿರುವ ಕೀರ್ತಿಯ ಆಶೆ. ಈ ಆಶೆಯೆ ಮಾನವನ ಇಹವನ್ನೂ ಪರವನ್ನೂ ರೂಪಿಸುತ್ತದೆ.

★

"ನಿಮ್ಮ ಜೀವನದ ಉದ್ದೇಶವೇನು?" ಎಂಬ ಸವಾಲನ್ನು ನಾನು ಹಾಕುವುದಾದರೆ, ನೀವು ಕೊಡುವ ಉತ್ತರವೇನೆಂಬುದು ನನಗೆ ಗೊತ್ತು. ಚಟ್ಟನೆ 'ದೇಶಸೇವೆ, ಭಾಷಾಸೇವೆ, ಈಶಸೇವೆ, ಸಮಾಜಸೇವೆ' ಹೀಗೆ ಏನಾದರೂ ಒಂದು ಜಬಾಬು ನಿಮ್ಮ ಕೊರಳಿಂದ ಹೊರಟುಬರುವುದೆಂಬುದನ್ನು ನಾನು ಬಲ್ಲೆ. ಆದರೆ ನಿಮ್ಮ ಜೀವನದ ಉದ್ದೇಶವು ನೀವು ಹೇಳುವ ಈಶ, ದೇಶ, ಭಾಷಾ ಇತ್ಯಾದಿಗಳ ಸೇವೆಗಳಲ್ಲವೆಂಬುದರ ಅರಿವು ನನಗಿದೆ. ಹಾಗಾದರೆ 'ನಮ್ಮ ಜೀವನದ ಆಶೆ-ಆಕಾಂಕ್ಷೆಗಳೇನು?' ಎಂಬ ಸವಾಲು ನಿಮ್ಮ ಕೊರಳಿಂದ ಹೊರಡಬಹುದು. ಅದಕ್ಕೆ ನಾನು ಕೊಡುವ ಮಾರನ್ನು ಕೇಳಿ ನೀವು ಸಿಟ್ಟಾಗಬಾರದು, ಕಣ್ಣು ಕೆಂಪುಮಾಡಬಾರದು—ಎಂದು ನಾನು ಮೊದಲೇ ಬಿನ್ನವಿಸಿಕೊಳ್ಳುತ್ತೇನೆ. ಏಕೆಂದರೆ ಸತ್ಯವು ಅಪ್ರಿಯವಾದುದು; ಅದು ಯಾರಿಗೂ ರುಚಿಸುವುದಿಲ್ಲ. ನಿಮ್ಮ ಆಶೆ-ಆಕಾಂಕ್ಷೆಗಳು ಬಹಳವಿಲ್ಲ; ಇರುವುದು ಒಂದೇ ಒಂದು, ಅದೇನೆಂದರೆ: ನೀವು ಸತ್ತು ಮಣ್ಣಿನಡಿಗೆ ಹೋದರೂ, ನಿಮ್ಮ ಹೆಸರನ್ನು ಈ 'ದುನಿಯಾ'ದೊಳಗೆ ನೆಲೆನಿಲ್ಲಿಸಬೇಕೆಂಬುದು; ನಾಲ್ಕು ಮಂದಿಯ ನಾಲಗೆಗಳಲ್ಲಿ ನಿಮ್ಮ ಹೆಸರು ಓಡಾಡುತ್ತಿರಬೇಕೆಂಬುದು. ಈ ಉದ್ದೇಶಪೂರ್ತಿಗಾಗಿ ನೀವು ಈಶ, ದೇಶ, ಭಾಷಾ-ಇತ್ಯಾದಿ ಸೇವೆಗಳ ಹಾದಿಗಳನ್ನು ಅವಲಂಬಿಸಿರಬಹುದು. ಅಲ್ಲವೆಂದು ನಾನು ಹೇಳುವುದಿಲ್ಲ.

ಮನುಷ್ಯನು ತಾನು ಅಳಿದು ಹೋದ ಅನಂತರವೂ ಈ ಗೋಳದಲ್ಲಿ ತನ್ನ ಹೆಸರು ನೆಲಸಬೇಕೆಂದು ಬಯಸುವುದು ತಪ್ಪೇನೂ ಅಲ್ಲ. ತಾನು ಕೀರ್ತಿವಂತನಾಗಬೇಕು—ತಾನು ಸುಪ್ರಸಿದ್ಧನಾಗಬೇಕು— ಎಂಬ ಆಶೆಯು ಮನುಷ್ಯನಾಗಿ ಹುಟ್ಟಿದವನಿಗೆ ಇದ್ದೇ ಇದೆ. ಅಂತಹ ಆಶೆ ತನಗೆ ಇಲ್ಲವೇ ಇಲ್ಲವೆಂದು ಯಾರಾದರೂ ಎದೆತಟ್ಟುತಿದ್ದರೆ, ಅಂತಹನು ಮನುಷ್ಯನೇ ಅಲ್ಲವೆಂಬುದನ್ನು ನಾನು ಸಪ್ರಮಾಣವಾಗಿ ತೋರಿಸಿಕೊಡಬಲ್ಲೆ. ಗೊಬ್ಬರದ ಹುಳುವಿನಂತೆ ಹುಟ್ಟಿ ಬೆಳೆದು, ಕೊನೆಗೆ ಸತ್ತು ಹೆಣವಾಗಲು ಯಾರೂ ಇಚ್ಛಿಸುವುದಿಲ್ಲ. ತಮಗೆ ಹೆಸರು-ಕೀರ್ತಿಗಳು ಬೇಡವೆಂದು ನಟಿಸುವವರನ್ನು—ಜನರ ಹೊಗಳಿಕೆ ತಮಗೆ ಅಗತ್ಯವಿಲ್ಲವೆಂದು ಹೇಳುವವರನ್ನು—ನಾವು ಧಾರಾಳವಾಗಿ ನೋಡಬಹುದು. ಈ ರೀತಿಯ ಮಂದಿಯನ್ನು ನೀವು ಸೂಕ್ಷ್ಮವಾಗಿ ಪರಿಶೀಲಿಸಿ ನೋಡಿರಿ; ಆಗ ತಿಳಿಯುವುದು ಅವರ ಗುಟ್ಟು. 'ತಮಗೆ ಹೆಸರು-ಕೀರ್ತಿಗಳು ಬೇಡ; ಹೊಗಳಿಕೆ ತೆಗಳಿಕೆಗಳು ತಮಗೆ ಸಮವಾದುವು' ಹೀಗೆಲ್ಲ ಹೇಳಿ ಜನರ ಮುಂದೆ ಮೆರೆಯುವುದರಿಂದಲೆ, ತಮ್ಮ ಹೆಸರುಗಳನ್ನು ಆಚಂದ್ರಾರ್ಕ ನೆಲೆಗೊಳಿಸಲು ಅವರು ಯತ್ನಿಸುತ್ತಿದ್ದಾರೆ— ಎಂಬುದು ನಿಮಗೆ ಹೊಳೆಯದಿರದು.

ಹಿಂದುಗಳಲ್ಲಿ,—ಅವರಲ್ಲಿಯೂ ಹೆಚ್ಚಾಗಿ ಬ್ರಾಹ್ಮಣರಲ್ಲಿ—ವರುಷಕ್ಕೆ ಒಂದು ಸಲ ಸತ್ತ ತಾಯಿ-ತಂದೆಗಳ ಶ್ರಾದ್ಧ ಮಾಡುವಾಗ, ಪಿಂಡಗಳನ್ನು ಹಾಕುವ ಒಂದು ಆಚಾರವಿದೆ. ಇದರ ತಾತ್ಪರ್ಯವೇನೆಂದು ನಾನು ಕೇಳಿದರೆ, 'ಅರ್ಥವಿಲ್ಲದ ಅಂಧಾಚಾರ,—ವಿವೇಕದ ತಿರುಳಿಲ್ಲದ ಮೂಢನಂಬಿಕೆ' ಎಂಬ ಉದ್ಗಾರಗಳು ನಿಮ್ಮ ತುಟಿಗಳಿಂದ ಹೊರಬರಬಹುದು. ಅಲ್ಲ,-ಅಲ್ಲ! ಅದರಲ್ಲಿ ಒಂದು ಅಮೂಲ್ಯ ತತ್ತ್ವವು ಅಡಗಿದೆ, ಒಂದು ಗಹನ ವಿಚಾರವಿದೆ ಎಂದು ನಾನು ಕೂಗಿ ಹೇಳುತ್ತೇನೆ! ಏನೆಂದು ಕೇಳುವಿರಾ? ನಮ್ಮ ಹಿರಿಯರು—ನಮ್ಮ ಆಚಾರ, ನಮ್ಮ ಧರ್ಮ, ನಮ್ಮ ನೀತಿ, ಇವುಗಳನ್ನು ನಿರ್ಮಿಸಿದ ಆ ಪುಣ್ಯ ಪುರುಷರು—ತಮ್ಮ ಹೆಸರು ಕೀರ್ತಿಗಳು ಜನರ ಬಾಯಿಗಳಲ್ಲಿ—ಅವರಲ್ಲಿಯೂ ಮುಂದಿನ ತಲೆಮಾರಿನವರಲ್ಲಿ—ಪಸರಿಸಬೇಕೆಂದು ಬಯಸಿದ್ದರು. ಹಾಗೆ ತಮ್ಮ ಹೆಸರುಗಳನ್ನು ನಿಲ್ಲುವಂತೆಮಾಡುವುದೇ ಮಾನವತೆಯ ಕುರುಹು ಎಂಬುದನ್ನು ಅರಿತಿದ್ದರು. ಸತ್ತು ಬೂದಿಯಾದವರ ಹೆಸರುಗಳು ಮೂರು ತಲೆಮಾರಿನ ಮಟ್ಟಿಗಾದರೂ ಅವರ ಕುಟುಂಬದವರ ನಾಲಗೆಗಳಲ್ಲಿ ನೆಲಸಲು, 'ಶ್ರಾದ್ಧ' ಎಂಬ ಅಮೂಲ್ಯ ಆಚಾರವನ್ನು ಹಿಂದಣ ಹಿರಿಯರು ಹಾಕಿಕೊಟ್ಟರು. ಅವರ ಈ ಕೆಲಸದ ಪರಿಣಾಮವಾಗಿ, ಸತ್ತುಹೋದವರ ಹೆಸರುಗಳು, ಅವರ ಮಕ್ಕಳ-ಮೊಮ್ಮಕ್ಕಳ ಮತ್ತು ಮರಿಮಕ್ಕಳ ನಾಲಗೆಗಳಲ್ಲಿ ನೆಲೆನಿಲ್ಲುವಂತಾಯಿತು. ಅವರ ಕುಟುಂಬದವರು ವರುಷಕ್ಕೊಂದು ಸಲವಾದರೂ ಅವರನ್ನು ನೆನೆದು, ಅವರ ಗುಣಕಥನಮಾಡಿ ಪಿಂಡ ಹಾಕುತ್ತಾರೆ; ತಿಲೋದಕಗಳನ್ನು ಬಿಡುತ್ತಾರೆ. ಕ್ಷಣವಿಗೆ ಬಂದವರು ಅವರನ್ನು ನೆನೆಯುತ್ತಾರೆ. ಈ ಎಲ್ಲಾ ಸಂಗತಿಗಳನ್ನು ಕಲೆಹಾಕಿ ನೋಡುವಾಗ, ಮನುಷ್ಯನ ಕೀರ್ತಿ-ಹೆಸರುಗಳನ್ನು ಮುಂದಿನ ತಲೆಮಾರುಗಳಲ್ಲಿ ಶಾಶ್ವತವಾಗಿರಿಸಲೋಸುಗ-

ವಾಗಿಯು, ಶ್ರಾದ್ಧವೆಂಬ ಆಚಾರವನ್ನು ಹಿಂದಿನವರು ಹಾಕಿಕೊಟ್ಟರೆಂಬ ನನ್ನ ಸಂದೇಹವು ದೃಢವಾಗುತ್ತಿದೆ.

'ಅಪುತ್ರಸ್ಯ ಗತಿರ್ನಾಸ್ತಿ' ಎಂಬ ಪ್ರಮಾಣವಚನವು ಪುರಾಣ-ಇತಿಹಾಸಗಳಲ್ಲಿ ಕಂಡುಬರುತ್ತಿದೆ. ಮಕ್ಕಳಿಲ್ಲದವರಿಗೆ ಪರಲೋಕದಲ್ಲಿ ಸ್ಥಾನವಿಲ್ಲವಂತೆ. ಆದುದರಿಂದಲೇ ದಶರಥ ಮೊದಲಾದವರು ಪುತ್ರಕಾಮೇಷ್ಟಿಯನ್ನು ಮಾಡಿ ಮಕ್ಕಳನ್ನು ಪಡೆದರು; ಆ ಮೂಲಕ ಸ್ವರ್ಗಕ್ಕೆ 'ಪಾಸ್‌ಪೋರ್ಟ್' ಪಡೆದರು. ಈ ವಚನವನ್ನು ನಾನು ಸೂಕ್ಷ್ಮವಾಗಿ ಪರಿಶೋಧಿಸಿ ನೋಡಲು— ನ್ಯೂಟನ್ನಿಗೆ ಗುರುತ್ವಾಕರ್ಷಣ ತತ್ತ್ವವು ಹೊಳೆದಂತೆ— ಆ ಮಾತಿನಲ್ಲಿ ಅಡಗಿರುವ ಮಹದ್ರಹಸ್ಯವು ನನಗೆ ಹೊಳೆಯಿತು. ಆ ವಚನಕಾರನು, ಮುಂದಿನ ತಲೆಮಾರಿನಲ್ಲಿ ಮನುಷ್ಯನ ಹೆಸರು ಬೆಳಗಬೇಕೆಂಬ ಸದುದ್ದೇಶದಿಂದಲೇ ಆ ವಚನವನ್ನು ರಚಿಸಿದ್ದಾನೆ. ಮಕ್ಕಳನ್ನು ಪಡೆಯದೆ ಹೋದರೆ,— ಅವನು ಸತ್ತು ಬೂದಿಯಾದ ಮೇಲೆ ಅವನನ್ನು ನೆನೆಯುವವರಿಲ್ಲ. ಅವನನ್ನು ನೆನೆದು ಪಿಂಡ-ತಿಲೋದಕಗಳನ್ನು ಬಿಡದೆ ಹೋದರೆ, ಅವನಿಗೆ ಸ್ವರ್ಗದಲ್ಲಿ ಎಡೆಯು ದೊರಕದು. ಆದುದರಿಂದ ಸತ್ತ ಮೇಲೆ ಸ್ವರ್ಗವು ಸಿಕ್ಕಬೇಕಾದರೆ ಮನುಷ್ಯನು ತನ್ನ ಹೆಸರನ್ನು ಶಾಶ್ವತವಾಗಿರುವಂತೆ ಮಾಡಬೇಕು.

ಹಿಂದಣ ಜನರು, ತಾವು ಮೃತರಾದಮೇಲೆ ವರುಷಕ್ಕೊಂದಾವೃತ್ತಿ ತಮ್ಮ ಕುಟುಂಬದವರು ಶ್ರಾದ್ಧ ಮಾಡಿ, ಪಿಂಡ ತಿಲೋದಕಗಳನ್ನು ಕೊಟ್ಟು, ತಮ್ಮನ್ನು ನೆನೆದುಕೊಳ್ಳುವುದರಿಂದ ತೃಪ್ತರಾಗುತ್ತಿದ್ದರು. ಅವರು ಸ್ವರ್ಗದಲ್ಲಿ ನಿಂತು, ತಮ್ಮ ಕುಟುಂಬದವರು ವರುಷಕ್ಕೊಂದು ಸಲ ಸ್ಮರಿಸುತ್ತಿರುವುದನ್ನು ಕಣ್ತುಂಬ ನೋಡಿ ನಲಿಯುತಿದ್ದರು. ಆದರೆ ಇಂದಿನ ಮನುಷ್ಯನನ್ನು ಹಿಂದಣ ಜನರ ಪಿಂಡ-ತಿಲೋದಕಗಳು ತೃಪ್ತಿಪಡಿಸುವಂತಿಲ್ಲ. ತಾನು ಸತ್ತುಹೋದಮೇಲೆ ತನ್ನ ಕುಟುಂಬವು ಪಿಂಡ-ತಿಲೋದಕಗಳನ್ನು ಕೊಡುತ್ತದೆಯೊ ಇಲ್ಲವೊ ಎಂಬುದನ್ನು ತಿಳಿಯುವ ಬಗೆ ಹೇಗೆಂಬ ಸಂಶಯವು ಅವನನ್ನು ಬಾಧಿಸಿದೆ. ಸಾಲದುದಕ್ಕೆ ಸ್ವರ್ಗವೆಂಬುದು ಇದೆಯೋ ಇಲ್ಲವೋ ಎಂಬ ಸಂದೇಹ ಬೇರೆ. ಆದುದರಿಂದ ಬಾದರಾಯಣನ ಕಾಲದ ಪಿಂಡ-ತಿಲೋದಕಗಳು ಆಧುನಿಕ ಯುಗಕ್ಕೆ ಅನುಯೋಗ್ಯವಾದುವುಗಳಲ್ಲ. ಮನುಷ್ಯ ತಾನು ಜೀವಂತನಾಗಿರುವಾಗಲೆ, ತನ್ನ ಹೆಸರನ್ನು ಜನರು ಹಾಡಿ ಹರಸುತಿರುವುದನ್ನು ನೋಡಬೇಕೆಂಬ ಬಯಕೆಯು ಅವನ ಎದೆಯಲ್ಲಿ ಹುಟ್ಟಿದೆ. ಆದುದರಿಂದ ಹಿಂದಣಕಾಲದ ಶ್ರಾದ್ಧ-ಕರ್ಮವನ್ನು ದೂರ ಎಸೆದು, ನೂತನೋಪಾಯಗಳನ್ನು ಕಂಡುಹಿಡಿಯಬೇಕಾಯಿತು. ಹೊಸದೊಂದು ಕರ್ಮಪಥವನ್ನು ತುಳಿಯಬೇಕಾಯಿತು. ಇಂದಿನ ಮನುಷ್ಯನು ಸೂರ್ಯ-ಚಂದ್ರರಿರುವತನಕ ತನ್ನ ಕೀರ್ತಿಯನ್ನು ಬೆಳಗಿಸಲು ಕಂಡುಹಿಡಿದ ನೂತನೋಪಾಯಗಳು, ದೇಶ-ಈಶ-ಭಾಷಾ ಎಂಬಿತ್ಯಾದಿ ಸೇವೆಗಳು.

'ಅಯ್ಯಾ, ನೀನು ನಾಡಿನಲ್ಲೆಲ್ಲಾ ಅಲೆದಾಡಿ, ಪ್ಲ್ಯಾಟ್‌ಫಾರಮ್ಮುಗಳ ಮೇಲೆ ನಿಂತು ಕಿರುಚಿ ಗಂಟಲು ಹುಣ್ಣು ಮಾಡಿಕೊಳ್ಳುತಿರುವುದೇಕೆ?' ಎಂದು ನೀವು ಒಬ್ಬ ದೇಶಸೇವಕನನ್ನು ಕೇಳಿ ನೋಡಿ. ಆಗ ಅವನಿಂದ ಈ ಜವಾಬು ಸಿಕ್ಕುತ್ತದೆ: "ನಮ್ಮ ಹಿಂದುಸ್ಥಾನವು ಇತರ ಎಲ್ಲಾ ದೇಶಗಳಿಗಿಂತ ಹಿಂದುಳಿದಿದೆ. ಅವುಗಳನ್ನು ಸರಿಗಟ್ಟದಿದ್ದರೆ ನಮ್ಮ ನಾಡಿಗೆ ಮೋಕ್ಷವಿಲ್ಲ. ನಾವು ಭಾರತಮಾತೆಯನ್ನು ಮೇಲಕ್ಕೆತ್ತಬೇಕು: ಭಾರತಭೂಮಿಯ ಉದ್ಧಾರಕ್ಕೋಸುಗ ಅಲೆದಾಡುತಿದ್ದೇನೆ. ಭಾಷಣಗಳನ್ನು ಕೊಟ್ಟು ಗಂಟಲು ಹುಣ್ಣು ಮಾಡಿಕೊಳ್ಳುತಿದ್ದೇನೆ" ಇತ್ಯಾದಿ. ಅವನ ಈ ಮಾತುಗಳನ್ನು ಕೇಳಿ ನೀವು ಸುಮ್ಮನಾಗಕೂಡದು. ಈ ಪ್ರಶ್ನೆಯನ್ನು ಅವನ ಮುಂದಿಡಿರಿ, ಏನು ಜವಾಬು ಸಿಗುತ್ತದೆ ಎಂಬುದನ್ನು ನೋಡೋಣ: 'ಅಯ್ಯಾ, ನಮ್ಮ ಭಾರತ-ಭೂಮಿಯು ಹಿಂದುಳಿದುದಾಗಿರಬಹುದು; ಹಿಂದುಳಿದುದರಿಂದಲೇ ಆಗಿರಬಹುದು ನಮ್ಮದೇಶಕ್ಕೆ ಹಿಂದೂಸ್ಥಾನವೆಂಬ ಹೆಸರು ಬಂದುದು. ಆಧುನಿಕ ಭೂಮಿ ಶಾಸ್ತ್ರಜ್ಞರು ಹೇಳುತ್ತಾರೆ: ನಾವು ಪಡುವಣಕ್ಕೆ ಗುರಿಯಿಟ್ಟು ಹಡಗು ಪ್ರಯಾಣಮಾಡಿದರೆ, ಕೊನೆಗೆ ಪಡುವಲೇ ಮೂಡಲಾಗುವುದೆಂದು. ಅದರಂತೆ ನಾವು ಭೂಗೋಳದ ನಕಾಶದ ಮೇಲೆ ದೇಶಗಳನ್ನು ಎಡದಿಂದ ಎಣಿಸಿಕೊಂಡು ಬರುವುದಾದರೆ, ನಮ್ಮ ದೇಶವು ಯುರೋಪದ ನಾಡುಗಳಿಗಿಂತ ಮುಂದೆ ನಿಲ್ಲುವುದಿಲ್ಲವೇ? ಕಳೆದ ಎಷ್ಟೋ ಯುಗ-ಗಳಿಂದ ಉತ್ತರದಲ್ಲಿ ಹಿಮಾಲಯವೂ, ಮೂಡಲಲ್ಲಿ ಬಂಗಾಳಾ ಕೊಲ್ಲಿಯೂ, ಪಡುವಲಲ್ಲಿ ಅರಬೀ ಸಮುದ್ರವೂ ನೆಲಸಿವೆ. ಹಿಮಾಲಯವು ಕುಸಿದುಬಿದ್ದು ನಮ್ಮ ನಾಡನ್ನು ಮುಚ್ಚಿಲ್ಲ; ಬಂಗಾಳಾಕೊಲ್ಲಿ-ಅರಬೀ ಸಮುದ್ರಗಳು ಉಕ್ಕಿ ಬಂದು ನಮ್ಮ ದೇಶವನ್ನು ಮುಳುಗಿಸಿಲ್ಲ. ಭಾರತವರ್ಷವು ಕೃತಯುಗದಲ್ಲಿ ಇದ್ದಂತೆಯೇ ಈಗಲೂ ಇದೆ. ಹೀಗಿರುವಾಗ ನಮ್ಮ ನಾಡನ್ನು ಮೇಲಕ್ಕೆತ್ತಬೇಕಾದ ಅವಶ್ಯಕತೆಯೆಲ್ಲಿದೆ?'

ಈ ನಿಮ್ಮ ನುಡಿಗೆ ಅವನು ಜವಾಬುಕೊಡಲಾರ. ಅವನು ಬಾಯಿಮುಚ್ಚಿ ತೆಪ್ಪಗಾಗುತ್ತಾನೆ; ಇಲ್ಲವೆ ತನ್ನ ಕಣ್ಣುಗಳನ್ನು ಕೆಂಪುಮಾಡಿ 'ನೀವು ಶುದ್ಧ ಮರುಳರು—' ಎಂದು ಗದರಿಸುತ್ತಾನೆ. ಅವನ ನುಡಿಗಳನ್ನು ಕೇಳಿ ನೀವು ಅಚ್ಚರಿಪಡಬೇಕಾದುದಿಲ್ಲ. ಮೇಲಿನ ತರ್ಕದಿಂದ ತನ್ನ ಹೆಸರನ್ನು ಬೆಳಸಿಕೊಳ್ಳಲೋಸುಗ,— ಕೀರ್ತಿಯ ನೆರಳನ್ನು ಕಾಂಕ್ಷಿಸಿ,— ದೇಶಸೇವೆಯನ್ನು ಮಾಡುತ್ತಿರುವೆನೆಂದು ಅವನು ಒಪ್ಪಿಕೊಳ್ಳಬೇಕಾಗುತ್ತದೆ. ಹಿಂದೆ ಹೇಳಿದಂತೆ ಸತ್ಯವು ಅಪ್ರಿಯವಾದುದು. ನಿಜವನ್ನು ಹೇಳಲು ಎಲ್ಲರಿಗೂ ನಾಚಿಕೆ. ಆದುದರಿಂದಲೇ ಅವನು ಸಿಟ್ಟಿಗೆದ್ದುದು; ಅದಲ್ಲದೆ ನೀವು ನುಂಬರಾದುದರಿಂದಲ್ಲ.

'ಸಮಯವು ಬಹಳವಾಯಿತು; ಇನ್ನು ಕಿರುಚಿಕೊಳ್ಳಲು ಪುರಸತ್ತು ಕೊಡಲಾರೆ.' ಎಂದು ಒಳಗಿನಿಂದ ಸಂಪಾದಕರು ಒದರುತ್ತಿದ್ದಾರೆ. ಅವರ ನುಡಿಯನ್ನು ನಾನು ಮಾನಿಸದಿದ್ದರೆ, ಅವರು ಇನ್ನು ಮೇಲೆ ನನ್ನನ್ನು ನಿಮ್ಮ ಮುಂದೆ ಬರಲು ಬಿಡಲಾರರು. ನನಗೇನೋ ಕೀರ್ತಿಯ ನೆರಳನ್ನು ಕುರಿತು ಮಾತನಾಡಲು ಬಹಳವಿದೆ ಆದರೆ ಅದೆಲ್ಲಾ ಇನ್ನೊಂದು ಸಲ. ಈಗ ತೆರೆಯ ಹಿಂದೆ ಮರೆಯಾಗಲು ಸಂಪಾದಕರ ಅಪ್ಪಣೆಯಾಗಿದೆ.

ದೀನಲಕ್ಷ್ಮಿಯೆ ಬಾರ!

★

ಶ್ರೀ. ಬಿ. ಎಚ್. ಶ್ರೀಧರ, ಬಿ. ಎ.

ಬಾ ತಂಗಿ ಬಾ ತಂಗಿ ಬಡತನವೆ ಚಿರಸಂಗಿ,
ಬಾಳಿನಲಿ ಬೇರಿಲ್ಲ ಬರಡು ಎಲ್ಲ;
ನಿಟ್ಟುಸಿರ ಹೊಗೆಯೇಕೆ ನಿನ್ನ ನಾಸಾಪುಟದಿ?
ಹುಟ್ಟು ಕೆಟ್ಟವು ಇಷ್ಟು, ಬೇರೆಯಿಲ್ಲ! ||೧||

ಹೊಲಬುಗೆಟ್ಟಲುಬು ವ್ಯಥೆಯೂರಿಬಂದಿಹ ನಿನ್ನ
ಜಳಭರಿತ ನಯನಗಳ ನೋಟದಿಂದ—
ಕರುಳನರಿಯೊಣ್ಣೆಯಲಿ ಕರಿದ ಹಾಗೆನಿಸುತಿದೆ,
ಎಳಗುವರಿ ಇಲ್ಲ ನೆರಳೆನ್ನ ಕಂದ! ||೨||

ಹುಟ್ಟುವಾಗಲೆ ಬೆನ್ಗೆ ಕಟ್ಟಬಂದಿತು ದೈನ್ಯ,
ಹೊಟ್ಟೆಯಲೆ ಹುಲಿಯಾಗಿ ಗರ್ಜಿಸಿತ್ತು;
ಮುಟ್ಟನಿಂದಿಹುದೀಗ ಗೋಣನಾಂತೆಲೆ ತಂಗಿ,
ಬಿಟ್ಟು ಹೋಗದು ಭೂತ ಬದುಕಲಿತ್ತು! ||೩||

ಬಾ ಮುದ್ದುಬಂಗಾರ, ನಿನ್ನ ಎಳಮೈಗಿಂದು
ಅಳಲಾಯ್ತು ಪರಿಕಾರ, ದೀನಮುದ್ರೆ—
ನಿನಗಾಯ್ತಲಂಕಾರ, ನನ್ನ ಭುಜಕಾಷ್ಠಗಳ
ದಿಂಬಿನಲಿ ಬಡತನದ ಯೋಗನಿದ್ರೆ! ||೪||

ಒಂದು ದಿನ ಈ ಜಗದ ಬೆಳಕೆಂಬ ಕತ್ತಲೆಯು
ಕಂಡು ಮನಸೋತು ಮುದವೆಂದು ತಿಳಿದು
ಹೆಂದದಾಡಿದೆವೆಂದು ಅದು ಮುದದ ನೆರಳೆಂದು
ಕಂಡು ಮಿಡುಕುವ ಪಾಡುಬಂತೆ ನಿನಗೂ? ||೫||

ದೇವ-ಧರ್ಮವಿಚಾರ ಸತ್ಕತೆ ಸದಾಚಾರ
ಯಾವುದಿದ್ದರು ಉಂಡ ಹೊಟ್ಟೆಗಿಲ್ಲ;
ಕಾವರಿಲ್ಲದ ಕರುಣನಂದನರ ಬಾಳಿನಲಿ
ಯಾವುದೂ ನೆರವಲ್ಲ—ಇದ್ದು ಇಲ್ಲ! ||೬||

ಪುಟ್ಟ, ಗಲ್ಲವು ಜೋತು ಬಿದ್ದಿರುವುದೇಕಮ್ಮ?
ಕಟ್ಟಕಟುಕನು ನಾನು ಬದುಕಿರುವನೆ?
ಹುಟ್ಟು ಹುಳುವಾದೆ ನಾನಕ್ಕಟಾ ಎದೆವನೆಯು
ಚುಕ್ಕ ಗಿಳಿ ಬಾ ಅಳಲಿಗಳಲ ನೀನೆ? ||೭||

ದೀನಲಕ್ಷ್ಮಿಯೆ ಬಾರ, ದಯೆಯ ಭಿಕ್ಷುಕ ಕರೆವ;
ಕಾನನವೆ ಗತಿಯೆಮಗೆ ಪೋಷ ಬಾರ!
ಮಾನವಂತರ ಜಗವು ನಮಗಲ್ಲ-ನಮಗಿಲ್ಲ;
ಹೀನತೆಯ ತಿರಿದುಂಬ ತಂಗಿ ಬಾರ! ||೮||

ಭೂದೇವಿ ಅಳುಗದಿರು!

★

ಶ್ರೀ. ವಿ. ಜಿ. ಭಟ್ಟ, ಕಡತೋಕಾ

ಬನಹೊಲಗಳ ಹಚ್ಚಸೀರೆ
ಸಿಂಗರಿಸಿದೆ ನಿನ್ನ ನೀರೆ!
ಧರಣಿ, ಜೀವ-ಜನ್ಮದಾತೆ
ರಾರಾಜಿಪೆ ಕನ್ಯೆಯಂತೆ!

ರವಿ-ಶಶಿಗಳು ನಿನ್ನ ಕಂಡು
ಸೊಬಗಿನ ಸವಿಯೂಟವುಂಡು
ಮೋಹಿಪರು ವಸುಂಧರಾ,
ನೀನದೆನಿತು ಸುಂದರಾ!

ನಿನಗಾಗಿಯೆ ತಿರುಗುತಿಹರು
ಹಗಳೆಂದತಿ ಮರುಗುತಿಹರು;
ಧನ್ಯೆ ನೀ ಪತಿವ್ರತೇ
ಅಗಸಸತಿ ಸುವ್ರತೇ!

ಕಿಡಿಕಾರಲಿ, ಹಾಲೆರೆಯಲಿ
ಮಾಡಲವರು ಬೇಟ;
ಆದರಿಕೋ ತೊಲಗಬೇಡ
ನಿನ್ನ ವ್ರತದ ಪೀಠ!

ನಮ್ಮೂರ ಕೆರೆ

(ಮೈಲುಕಲ್ಲಿನೊಡನೆ ಮಾತುಕತೆಗಳು)

ಶ್ರೀ. ಶಿವರಾಮ ಕಾರಂತ

★

ಎಲ್ಲ ಊರುಗಳಲ್ಲೂ ಒಂದೊಂದು ಕೆರೆಯಿರಬಹುದು; ಹಾಗಿಲ್ಲದ ಊರು ಊರೇ ಅಲ್ಲವೆಂದರೂ ಸಲ್ಲುವುದು. ಅಂತೆಯೇ ನಮ್ಮ ಊರಿಗೂ ಒಂದು ಕೆರೆಯಿದೆ. ನಮ್ಮೂರ ಕೆರೆಯೆಂದಮೇಲೆ ಏನಾದರೂ ಹೆಚ್ಚಳ ಇರಬೇಡವೇ? ಅದರ ಹೆಸರೇ ಅದನ್ನು ಸಾರುವುದು. ಕೆರೆ ಕಟ್ಟಿಸಿದವರು ಗಟ್ಟಿಗರಾದುದರಿಂದಲೋ ಏನೋ— ಅದಕ್ಕೆ ಚೆನ್ನಾದ ಹೆಸರನ್ನು ಇಟ್ಟಿದ್ದರು. ಅದನ್ನು ಕೇಳಿದಲ್ಲಿ, ಎಷ್ಟೋ ಊರವರಿಗಿಂತ ನಮ್ಮೂರವರು ಮೇಲೆಂದು ನನಗೆನಿಸುವುದು. ಹುಬ್ಬಳ್ಳಿಯವರ 'ಗುರುಸಿದ್ಧಪ್ಪನ ಹೊಂಡ', ಮೈಸೂರವರ 'ಅಮ್ಮಸಂದ್ರ', 'ಬೊಮ್ಮಸಂದ್ರ', 'ನೀಲಸಂದ್ರ'ಗಳು ಏನು ಚೆಲುವಿನ ಹೆಸರುಗಳಂತೆ? ಮುಖ್ಯ ಎಮ್ಮೆಗಳ ಸ್ನಾನಕ್ಕೆ ಯೋಗ್ಯವಾದುವುಗಳನ್ನು ಸಮುದ್ರ (ಸಂದ್ರ)ವೆನ್ನಬೇಕೇ? ಕಡಲು ಕಾಣದ ಮೈಸೂರವರಿಗೆ ಕೆರೆ ಸಮುದ್ರವಾದರೆ, ಹುಬ್ಬಳ್ಳಿಯ ನೀರು ಕಾಣದ ಮಂದಿಗೆ ಕೆರೆ ಹೊಂಡವಾಯಿತು. ಕಡಲು ಕಾಣುತ್ತಿರುವ ನಮ್ಮ ಜನರಿಗೆ ಕಡಲಿನ ಮುಂದೆ ಕೆರೆ 'ತೀರ್ಥ'! ಅಂತೆಯೇ ನಮ್ಮೂರ ಕೆರೆಗೆ 'ವರುಣತೀರ್ಥ' ಎಂಬ ನಾಮಕರಣವಿದೆ. ಅಲ್ಲಿಂದ ಪಡುವಣಕ್ಕೆ ಒಂದೇ ಮೈಲಿ ದೂರದಲ್ಲಿ ವರುಣನ ರಾಜ್ಯ. ಅಲ್ಲಿನದು ಉಪ್ಪು ನೀರು; ಇಲ್ಲಿನದು ಸಿಹಿ ನೀರು. ಅಲ್ಲಿಂದಿಲ್ಲಿಯ ತನಕ ಒಂದು ಕಾಲದಲ್ಲಿ ಕಡಲು ಹಾಸಿದ್ದಿರಬೇಕು; ಅಂತೆಯೇ ಕಡಲಿನ ಮರಳಿನ ದಿನ್ನೆ ಇದರ ಸುತ್ತಲೂ ಹಾಸಿಕೊಂಡಿದೆ.

ಸೆಕೆಗಾಲದ ಒಂದು ದಿನ ನನ್ನ ಸವಾರಿ, ನಿತ್ಯದಂತೆ ಅಲೆದಾಡಲು ಹೊರಟಿತು. ಊರೆಲ್ಲ ಅಲೆದಾಡಿ ಬಂದು, ನಮ್ಮೂರ ಕೆರೆಯೇರಿಯ ಮೇಲೆ ಬಂದು ಕುಳಿತೆ. ಅಲ್ಲಿ ಕೈಯಿಂದ ಮರಳನ್ನು ಹಾರಿಸುತ್ತ ಎಷ್ಟು ಹೊತ್ತು ಕಳೆದೆನೋ— ಕಣ್ಮುಂದೆಯೇ ಬಾನಿನ ಬಣ್ಣಗಳೆಲ್ಲ ಮಾಯವಾಗಿ ಹೋಗಿದ್ದುವು. ಇನ್ನು ಮೈಗೆ ತಂಪಿಡಲು ಸ್ನಾನ ಮಾಡುವ ಎಂದು ಕೆರೆಗಿಳಿಯ ಹೊರಟೆ. ಯಾವ ಕಡೆಯಿಂದಿಳಿಯಲಿ— ಎಂದು ಯೋಚನಾಪರನಾಗಬೇಕಾಯಿತು. ಹಾಗೆ- ನಮ್ಮೂರ ಕೆರೆಯನ್ನಿಳಿಯಲು ತುಂಬ ಪರಿಚಯಸ್ಥನಿರಬೇಕು. ನೀರಲ್ಲಿ ಮುಳುಗುವ ಭೀತಿಯಿಲ್ಲ. ಕೊರಳಿಗೆ ಕಲ್ಲು ಕಟ್ಟಿಕೊಂಡು ಬಿದ್ದರೂ ಅಲ್ಲಿ ಪ್ರಾಣ ಹೋಗಲಾರದು. "ಆತ್ಮಹತ್ಯೆಗಿದು ತಾಣವಲ್ಲ" ಎಂದೇ ಅದರ ಬಿರುದು. ಆದರೆ ಇಳಿಯುವವರ ಹೆದರಿಕೆ ಇದು: ಸಮನಾದ ದಾರಿಯಲ್ಲಿ ಇಳಿಯದವನು ನೀರು ಸೇರುವ ಬದಲು ಕೆಸರು ಮುಕ್ಕಿಯಾನು! ಅದಕ್ಕೇನೆ ಪರಿಚಿತಿ ಬೇಕಾದುದು. ಕಾಲಿಟ್ಟರೆ ಕಾಲಿಗೆ ಕಪ್ಪೆ ತಗಲಬಹುದು; ನೀರೊಳ್ಳೆ ಸುತ್ತಿಕೊಳ್ಳಬಹುದು; ಹಾವು ಕಡಿದರೂ ಕಡಿಯಬಹುದು. ಅದೆಲ್ಲ ಅವರವರ ಹಣೆಯ ಮೇಲಿನ ಬರೆಹ—ಎಂದು ಊಹಿಸುವ. ಆದರೆ ಸ್ನಾನ ಮಾಡುವವರು ಬಟ್ಟೆ ಒಗೆಯಲು ಬಯಸಬಹುದು. ಅದಕ್ಕೆ ಕಲ್ಲು ಬೇಕು. ಆ ಕಲ್ಲಿನ ಮೇಲೆ ಕಾಲಿರಿಸಿದರೆ ಪಾಚಿಯಿಂದ ನೀವು ನೀರು ಸೇರಬಾರದು. ಅದು ಮಾತ್ರವಲ್ಲ—ನೀವು ಎಲ್ಲಿ ಇಳಿದಿರಿ ಎಂಬುದರ ಮೇಲಿಂದ ನಿಮ್ಮ 'ವರ್ಣ' ತೂಕವಾದೀತು. ಪಡು ಎಂದಿಳಿದರೆ ಶೂದ್ರರಾಗುವಿರಿ. ತೆಂಕು ಬಡಗು ಬ್ರಾಹ್ಮಣ್ಯದ ಗುರುತು; ಮೂಡಣದವರು ಅವರು ಅವರನ್ನೆ ಬ್ರಾಹ್ಮಣರೆಂದು ಕರೆಯಬೇಕಷ್ಟೆ—ಹೀಗೆಲ್ಲ ರೂಢಿಧರ್ಮ.

ಆದರೆ ಒಮ್ಮೆ ಕೆರೆಯನ್ನಿಳಿದು ಎಲ್ಲಿಗೆ ಹೋದರೂ ನಡುವನ್ನು ಮೀರದಷ್ಟು ನೀರು. ಮಳೆಗಾಲದಲ್ಲೂ ನೀರಿನ ಮಿತಿ ಮೀರಲಾರದು. ನೆಲದಲ್ಲಿ ಈಸುವುದಕ್ಕಿಂತ ಇಲ್ಲಿ ಈಸುವುದು ವಾಸಿ.

★

ಋಷಿಗಾಗಿ ಜನ್ಮವೆತ್ತ 'ವರುಣತೀರ್ಥ' ಮುಂದೆ ರಸಿಕರಿಗೆ ಆಯಿತು; ಆ ಮೇಲೆ ಕೃಷಿಕರಿಗೆ ಆಯಿತು. ಈಗ ನುಸಿಗಳಿಗಾಗಿ ನೆಲೆನಿಂತಿದೆ.

★

ಹಾಗೆ ನಡುನೀರಲ್ಲಿ ಕೈಯಿಟ್ಟು, ಕಾಲು ಬಿಟ್ಟು ಶಲಭನಾಗಿ, ಬಾಯಿಂದ ನೀರನ್ನು ಗುಳುಗುಳು ಮಾಡುವುದು ನನ್ನ ವಿನೋದ. ಅಲ್ಲೇ ಕುಳಿತರೂ ಆಯಿತು. ಹುಸು ಹದಮೀರಿ ಸರಿದರೆ ಕೆಸರು ತುಳಿಯಬೇಕು. ಜಿಗಳೆಗಳ ನೆಚ್ಚು; ಒಳ್ಳೆಗಳ ವಿಹಾರ. ಇನ್ನೂ ಮುಂದೆ, ನೈದಿಲೆಗಳ ನಾಳಗಳೇ ಕಾಲಿಗೆ ಸುತ್ತಿ 'ಹಾವು- ಹಗ್ಗ ನ್ಯಾಯ' ವನ್ನು ಕಲ್ಪಿಸಬಹುದು.

ಈ ರೀತಿಯ ಜಲ-ನೆಲ ಸ್ತಂಭನ ವಿದ್ಯೆಯಲ್ಲಿ ಎಳತನದಿಂದ ಪಾರಂಗತನಾಗಿ ಬಂದ ನಾನು, ಆ ದಿನವೂ ನೀರನ್ನು ಇಳಿದೆ. ಸೆಕೆಯ ಕಾಟ ತಪ್ಪಿಸಿ, ಹವೆಯು ಶೀತವಾಗುವ ತನಕ ಕತ್ತಿನ ತನಕ ನೀರಲ್ಲಿ ಕುಳಿತಿರುವ ಬಯಕೆಯಿಂದ, ಆ ನಸುಕಿಗೆ ಇಳಿದೆ. ಆದರೆ ಕಾಲಿಗೆ ನೀರು ತಗಲಿತೇ ವಿನಾ ಕಾಲಿಂದ ಮೇಲೇರಲಿಲ್ಲ. ಹಾಗೇನೆ ನಡೆನಡೆದು ಮುಂದುವರಿದೆ; ನನ್ನ ಶರೀರವು ನೀರ ಕುಣಿಯೊಂದರಲ್ಲಿ ನನ್ನನ್ನಿಳಿಸಿಬಿಟ್ಟಿತು. ಬಾವಿಗೆ ಬಿದ್ದವನಂತೆ ಗಾಬರಿಗೊಂಡು ಆಚೀಚೆ ಕೈಯೊಡ್ಡಿದೆ. ನೀರಿನ ಹೊಂಡ ಆಳವೂ ಆಗಿರಲಿಲ್ಲ; ಅಗಲವೂ ಆಗಿರಲಿಲ್ಲ. ಇದ್ದುದರಲ್ಲೇ ತೃಪ್ತಿ

ಪಟ್ಟು ಕುಳಿತ ನನ್ನಾಚೆ ಇನ್ನೊಂದು ಹೊಂಡದಲ್ಲಿ, ತಪಸ್ವಿಯಂತೆ ಕೋಣವೊಂದು ಮಲಗಿತ್ತು. ಅದರ ಮೇಲೆ ನಮ್ಮೂರಿನ 'ಬಡಾ' ಕಪ್ಪೆಗಳು ಕುಳಿತಿದ್ದುವು. ನಮ್ಮೂರಿನ ಹಿರಿಯ ಕಪ್ಪೆಗಳೆಂಬ ಒಂದು ಗೌರವವಲ್ಲವಾಗಿದ್ದರೆ, ಈ ನನ್ನ ತೀರ್ಥಬಂಧುಗಳ ಮೇಲೆ ನನಗೇತರ ಹೆಮ್ಮೆ? ಅವನ್ನು ಗದರಿಸಿ ಓಡಿಸಲೇ? ನಮ್ಮೂರ ಕಪ್ಪೆ ಬಾಯಿ ತೆರೆದರೆ ಕಿವಿಯೊಡೆದೀತು. ನಮ್ಮೂರವರ ಗಂಟಲದನಿ ಅದಕ್ಕೊಂದು ಕಡಮೆಯಲ್ಲ; ಆದರೂ ಸ್ಪರ್ಧೆಗೆ ಸಾಹಸ ಸಾಲದಾಯಿತು.

ಈ ಅವಸ್ಥೆಯಲ್ಲಿ ನನ್ನ ಸ್ವಂತ ಹೆಮ್ಮೆ ಕುಗ್ಗಿತು. ಆಚೆ ಸಹ-ಸಾಂಘಿಕನಾಗಿರುವುದು ಗಂಡುಎಮ್ಮೆ; ಅದೂ ಸೆಕೆಗಾಗಿ ನೀರಲ್ಲಿ ಯೋಗಾರೂಢವಾಗಿದೆ. ಇದನ್ನೆಲ್ಲ ಎಣಿಸಿ ನನಗೆ ನಮ್ಮ ಊರ ಕೆರೆಯ ಹೆಸರಿನ ವಿಚಾರ ಹೊಳೆದು "ಅಯ್ಯೋ ದೇವರೆ! ಯಾರಪ್ಪ—ಈ ಕೆರೆಯನ್ನು ವರುಣತೀರ್ಥವೆಂದು ಹೇಳಿ ಮಾನ ಕಳೆದರು?' ಎಂದು ಉದ್ಗರಿಸಿದೆ. ನನ್ನ ಬಾಯಿ ತೆರೆದುದೇ ತಡ—ನನ್ನ ನೆರೆ ಬಂಧುಗಳಾದ ಮಂಡೂಕಗಳು "ಇಂಕಿಲಾಬ್ ಜಿಂದಾಬಾದ್" ಎಂದು ರಾಗಮಾಡಿದುವು. ಅದನ್ನು ಕೇಳುತಿರುವುದರೊಳಗೇನೆ ನಮ್ಮೂರ ಕೆರೆಯ ಆತ್ಮವು ಮೇಲೆದ್ದು "ಏಕೆ ನಿನಗೆ ವ್ಯಥೆ? ನನ್ನ ಹೆಸರಿಗಾಗಿ ನೀನೇಕೆ ಬೇಸರಿಯಬೇಕು?" ಎಂದಿತು.

"ಅಲ್ಲವಯ್ಯಾ ಜಲಪ್ರೇತ, ಇದೇನು ಕೆರೆಯೇ, ಕಪ್ಪೆಗಳ ಆವಾಸವೇ? ಎಮ್ಮಾಲಯವೆ?.... ಇದನ್ನು ತೀರ್ಥವೆನ್ನಬೇಕೆ?"

"ಅಣ್ಣಾ, ಸಿಟ್ಟಾಗುವೆಯೇಕೆ? ನಿನ್ನ ಊರವರು ಇದಕ್ಕೂ ಹೊಲಸಾದ ನೀರನ್ನು ತೀರ್ಥವೆಂದು ಕುಡಿಯುವಾಗ, ಕಾಸನ್ನು ತೆತ್ತು ಮೀಯುವಾಗ ನಾನೇನು ಕಡಮೆ! ನನ್ನಲ್ಲಿನ ಮೀಯಾಟಕ್ಕೆ ದಂಡತೆರಬೇಕಾಗಿಯೂ ಇಲ್ಲ!"—ಎಂದಿತು ಜಲಪ್ರೇತ.

"ಅದು ಸಮನಯ್ಯಾ, ಆದರೆ ನಿನ್ನ ದುರ್ದೈವಕ್ಕಾಗಿಯೇ ನನ್ನ ಮರುಕ. ನಾನು ಚಿಕ್ಕವನಾಗಿದ್ದಾಗ ಇಲ್ಲಿ ಬಂದು ಮಿಂದ ಹಂಬಲದಿಂದ ಈಗಲೂ ಬಂದೆ. ಆಗ ತೀರ್ಥವೆಂದರೆ ಹೆಸರು ತುಸುವಾದರೂ ಸಲ್ಲುತ್ತಿತ್ತು. ಈಗ ಇಲ್ಲಿ ನೀರೂ ಇಲ್ಲ; ನಾರುವುದೂ ಹೆಚ್ಚು. ಇದೇನು ಸಂಸ್ಕಾರ?" ಎಂದೆ.

ಜಲಪ್ರೇತ ನಕ್ಕಿತು. "ನನ್ನ ಸಂಸ್ಕಾರವೇ? ಅದು ತೀರ ಕ್ರಮಗತವಾದುದು. ಅದು ಕಾವ್ಯಮಯವಾದುದು. ಜೀವನದಲ್ಲಿ ಏಳು, ಬಾಳು, ಬೀಳುಗಳಿರುವಂತೆ—ನನಗೂ ಮೂರನೆಯ ಕಾಲ ಬಂದಿದೆ."

"ಇದೇನು ವೇದಾಂತವಯ್ಯಾ?"

"ಇದು ವೇದಾಂತವಲ್ಲ ರಸಿಕ, ಇದು ಕಾವ್ಯ!"

"ಏನು ಕಾವ್ಯ? ಕಾವ್ಯವೆಂದರೆ 'ಕೀವ್ಯ'ವೇ? ಹೊಲಸೇ?"

"ಹೊಲಸಿನಲ್ಲೂ ಸತ್ಯವಿದೆ; ಸೌಂದರ್ಯವಿದೆ!"

"ಹೇಗೆ?"

"ಈಗ ನನ್ನ ಚರಿತ್ರೆಯ ಸೊಗಸನ್ನೇ ಕೇಳು:

ಮೊದಲು ನಾನಾದೆ ಒಬ್ಬ ಋಷಿಗಾಗಿ
ಆ ಬಳಿಕ ನೆರವಾದೆ ಊರ ಕೃಷಿಗಾಗಿ
ಈಗಿರುವೆ ನೋಡಯ್ಯ ನುಸಿಗಾಗಿ—"

ಆ ಮಾತನ್ನು ಕೇಳಿ ಕಾವ್ಯದ ಸೊಗಸನ್ನು ಪೂರ್ತಿಮಾಡಲು "ಕೂಡಲ ಸಂಗಮದೇವಾ" ಎಂದೆ ನಾನು.

"ನೋಡು, ದಿನೇ ದಿನೇ ನನ್ನಿಂದಾಗಿ ಬದುಕುತ್ತಿರುವ ಜೀವಿಗಳ ಸಂಖ್ಯೆ ಹೆಚ್ಚುತ್ತಿರುವುವೇ ಹೊರತು ಕಡಮೆಯಾಗಿಲ್ಲ. ಮೊದಲು ಎರಿಸ್ಟಾಕ್ರಸಿಯಾಗಿದ್ದ ನಾನು, ಮೊಬಾಕ್ರಸಿಗಾಗಿ ಬಾಳಿದೆ. ಈಗ ತೀರ ವಿಶಾಲಾರ್ಥದ ಕ್ರಸಿ–ನನ್ನದು; ನುಸಿಯೋ-ಕ್ರಸಿ!"

ಅದರ ವೇದಾಂತ, ಕಾವ್ಯ, ರಾಜಕೀಯ ವಿದ್ವತ್ತು ನನ್ನ ತಲೆಯ ಮಿದುಳನ್ನೇ ಅವಿಗ್ಗೈಯತೊಡಗಿತು. "ಅಯ್ಯಾ, ಹಿಂದಣ ಋಷಿಸೇವೆ, ಕೃಷಿಸೇವೆಗಳು ನಿಜವಿರಲಿ ಇಲ್ಲದಿರಲಿ; ಈಗಣ ನಿನ್ನ— ನುಸಿಸೇವೆ ನಿಜ"—ಎಂದೆ.

"ಕೇಳು ಹುಡುಗ, ಹಿಂದೆ ಇಲ್ಲೊಂದು ಋಷ್ಯಾಶ್ರಮವಿತ್ತು. ಆಗ ಈ ಕೆರೆಯನ್ನು ಸುಂದರವಾಗಿ ನಿರ್ಮಿಸಿ, ಸೋಪಾನರಂಜಿತವಾಗಿ ಮಾಡಿದ್ದರು. ಇಲ್ಲಿನ ನೀರು ತೀರ್ಥಕ್ಕಿಂತ ಶುದ್ಧವಾಗಿತ್ತು. ಯಾರಿಗೂ ಕಾಲಿರಿಸಲು ಭೀತಿ ಬರುವಂತಿತ್ತು!"

"ಆ ಭೀತಿ ಈಗ ಇನ್ನಷ್ಟು ಅಧಿಕವಾಗಿದೆ!"

ಅದು ನನ್ನ ಮಾತನ್ನು ಕೇಳದವರಂತೆ ಮುಂದುವರಿಸುತ್ತ "ನೂರಾರು ವರ್ಷ ಕಡಲದಂಡೆಗೆ ಇದಿರಾಗಿದ್ದ ನನ್ನನ್ನು 'ವರುಣ ತೀರ್ಥ' ಎಂದು ಕರೆದರು. ಇಲ್ಲಿ ಮಿಂದವರು ಕಡಲಿಗೆ ಹೋಗಿ ಮಿಂದರು; ಅಲ್ಲಿ ಮಿಂದವರು ತಿರುಗಿ ಇಲ್ಲಿ ಬಂದು ಮಿಂದರು."

"ಹೂಂ" ಎಂದೆ ನಾನು— ಉದಾಸೀನನಾಗಿ.

"ಆ ಮೇಲೆ– ನಿನ್ನ ಹಿರಿಯರು...." ಎಂದಿತು ಕೆರೆಯಾತ್ಮ.

"ನನ್ನ ಹಿರಿಯರೇ?" ನಾನು ಕೇಳಿದೆ.

ಆ ಮಾತನ್ನು ಅದು "ನಿನ್ನೂರ ಹಿರಿಯರು" ಎಂದು ಮಾರ್ಪಡಿಸಿ, ವೈಯಕ್ತಿಕ ಮಾನನಷ್ಟದ ಆರೋಪ ತಪ್ಪಿಸಿಕೊಂಡು ಹೀಗೆ ಹೇಳಿತು:

"ನನ್ನ ಸೋಪಾನದ ಕಲ್ಲುಗಳನ್ನು ತಂತಮ್ಮ ಮನೆಗೆ ಸಾಗಿಸಿದರು; ನನ್ನ ಕೆಸರನ್ನು ಎತ್ತದೆ ಕುಳಿತರು."

"ಅವರಿಗೆ ಕೆಸರಿನ ಸ್ನಾನ ಇಷ್ಟವಾಗಿತ್ತೇ?"

"ಹಾಗೇನಲ್ಲ. ಅದು ತೀರ್ಥವೆನಿಸಿಕೊಂಡಿದ್ದಷ್ಟು ಕಾಲ— ಬ್ರಾಹ್ಮಣರೇ ಬಂದು ಮಿಂದುಹೋದರು. ನಾನು ರೂಪುಗೆಡಲು ಎಲ್ಲರೂ ಬಂದು ಮಿಂದರು. ಶೂದ್ರರು ಮೀಯುವ ಕೆರೆಯ ಕೆಸರನ್ನು ಬ್ರಾಹ್ಮಣರು ತೆಗೆಯಲಿಲ್ಲ; ಬ್ರಾಹ್ಮಣರ ಕೆರೆಯೆಂದು ಶೂದ್ರರು ಕೆಸರೆತ್ತಲಿಲ್ಲ!"

" ಆಗ ಜಸ್ಟಿಸ್ ಪಾರ್ಟಿಯ ಮುಖಂಡರು ಯಾರಾಗಿದ್ದರು?" ಎಂದು ನಾನು ಪ್ರಶ್ನೆಮಾಡಿದೆ.

"ನೀನು ಅರಿಯದ ಕೂಸು! ಈ ಬ್ರಾಹ್ಮಣ-ಶೂದ್ರವಾದ ನನ್ನಷ್ಟೇ ಹಿಂದಿನವಾದ!"

" ಹಾಗಾದರೆ ನಿನ್ನ ಚರಿತ್ರೆಯನ್ನು ಮುಂದುವರಿಸಿ ಹೇಳು!"

" ಊರ ಜನರೆಲ್ಲರೂ ಸಮಾನಾಧಿಕಾರದಿಂದ ನನ್ನ ನೀರನ್ನು ಬಯಸಿದ ಮೇಲೆ, ಪ್ರಾಣಿಕೋಟಿಗಳದೇನು ತಪ್ಪು— ಎಂದು ಊರಿನ ಎಮ್ಮೆ ಕೋಣಗಳು, ಕಲ್ಲಿಲ್ಲದ ದಂಡೆಯನ್ನಿಳಿದು ನೀರಿಗೆ ಬಂದುವು."

" ನೀನು ವರುಣನ ತೀರ್ಥವಾಗಿರಲು ನೆಗಳೆ (ಮೊಸಳೆ) ಮೊದಲಿಗೆ ಬರುವುದು ನ್ಯಾಯವಿತ್ತು; ಈ ಯಮವಾಹನವೇಕೆ ಮೊದಲು ಬಂದಿತು?"

"ಮಳೆಗಾಲದ ದಿನಗಳಲ್ಲಿ ಹಿಂದೆ ನೆಗಳೆಗಳೂ ಬರುತ್ತಿದ್ದುವು."

" ಅನಂತರ?"

" ಅನಂತರ ನೋಡಯ್ಯಾ-ನಿನ್ನ ಊರಲ್ಲಿ ಕವಿಕುಲ ಹೆಚ್ಚಿತು. ಅವರು ನನ್ನ ತಿಳಿನೀರಲ್ಲಿ ಸೊಗ ಕಾಣಲಾರದೆ- 'ಕುವಲಯ' ಗಳನ್ನು ತಂದು ನೆಟ್ಟರು. ಅವುಗಳಿಂದ ನನ್ನ ನೀರೇ ಮರೆಯಾಯಿತು. ಕೆರೆಯೆಲ್ಲ ನೈದಿಲೆ, ಕುಮುದಗಳಿಂದ ಆವರಿಸಲ್ಪಟ್ಟಿತು!"

" ಹಾಗಾದರೆ ಕುವಲಯ-ಕೇವಲ ಸಂಸ್ಕೃತ ಪದವಲ್ಲ!" ಎಂದು ವಿಸ್ಮಿತನಾದೆ ನಾನು.

" ಅದು ಹೇಗೆ?"

" ಆಗಲೂ ದಕ್ಷಿಣಭಾರತದಲ್ಲಿ ಹಿಂದೀ ಪ್ರಚಾರವಿತ್ತು! ರಾಮನೇ ಇಲ್ಲಿಗೆ ಬಂದಿದ್ದರೂ ಬಂದಿರಬಹುದು. ಆವನ ಜನರು ಈ ಕೆರೆಯನ್ನೆ "ಕುವಾ" ಎಂದೂ ಅದನ್ನು 'ಲಯಿ' ಸಿದ ಗಿಡಗಳನ್ನು ಕುವಲಯ- ಎಂದೂ ಕರೆದಿರಬೇಕು" ಎಂದು ನನ್ನ ಆಭಾಸಾಶಾಸ್ತ್ರದ ವಿದ್ವತ್ತನ್ನು ತೋರಿಸಿದೆ.

"ಸರಿ ಹೇಗೂ ಇರಲಿ, ನನ್ನ ನೀರು ಹಾಗಾಯಿತು. ಸೋಪಾನ, ಸ್ನಾನಘಟ್ಟಗಳ ಕಲ್ಲು ಜಾರಿಹೋದುವು. ಆಗ ಬದಿಯ ಮಣ್ಣು ಜರಿಯದಂತೆ ಕೇದಗಿ ಗಿಡಗಳನ್ನು ನೆಟ್ಟರು. ಕುಮುದ-ಕೇದಗಿಗಳನ್ನು ಕಂಡು ನಿಮ್ಮೂರಿನ ಕವಿಗಳು ಹಿಗ್ಗಿದರು."

ಆಗ ನನ್ನೊಂದು ಹಳೆಯ ನೆನಹು ಮರುಕೊಳಿಸಿತು. ಆ ಕೇದಗೀಬನವಾಸಿನಿಯಾದ ಸರ್ಪವೊಂದು, ನನ್ನತ್ತೆಯೊಬ್ಬಳನ್ನು ಕಚ್ಚಿದು ಸಾವಿಗೀಡುಮಾಡಿದ ನೆನಪಾಯಿತು.

" ಅವರು ರಸಿಕರೆ?" ಎಂದು ಉದ್ಗರಿಸಿದೆ.

" ಸರಿ—ಆ ರಸಿಕರ ಯುಗ ಸರಿಯಿತು. ಅನಂತರ ನಿಮ್ಮೂರ ಕೃಷಿಕರ ಯುಗಬಂದಿತು. ಅವರು ನನ್ನ ನೀರಿಂದ ಬತ್ತದ ಪೈರನ್ನು ಬೆಳೆಯಿಸಿದರು; ತೀರ್ಥದ ನೀರೆಲ್ಲ ಬತ್ತಿದರೂ ಅವರಿಗೆ ತೃಪ್ತಿಯಾಗಲಿಲ್ಲ."

" ಹೋಗಲಿ—ಅವರಾದರೂ ಕೆಸರು ತೆಗೆಯಬಹುದಿತ್ತಲ್ಲ?"

" ತಮ್ಮ ಹೊಲಕ್ಕೆ ಬೇಕಾದ ಕೆಸರನ್ನು ತೆಗೆದಾರು. ಅದಕ್ಕೂ ಮಿಗಿಲಾದರೆ ಕೆಸರು? ಅಲ್ಲದೆ ಕೆಸರು-ನೀರುಗಳ ಸಮಪಾಕದಲ್ಲಿ ಗಾಳಹಾಕಿ ಮೀನು ಹಿಡಿಯಲು ತುಂಬ ಅನುಕೂಲವಾಗುತ್ತಿತ್ತು!"

" ಓಹೋ—ಹಾಗಿದ್ದರೆ ನಿನ್ನ ಜಲ-ನೆಲಗಳು ವಿಪ್ರ-ಶೂದ್ರರಿರ್ವರಿಂದಲೂ ಪುನೀತಗೊಂಡಿತು! ಮುಂದೆ?"

" ಮುಂದೆ ಈಗಿನ ಯುಗ ಪ್ರಾಪ್ತಿಸಿತು. 'ನುಸಿ'ಯುಗವಿದು. ನಾನೀಗ ನುಸಿಗಳ ಆವಾಸ; ಬೆಕ್ಟೀರಿಯಗಳ ತವರುಮನೆ. ಹಿಂದೆ ಯೋಗ-ಭೋಗಗಳ ಕುರುಹಾಗಿದ್ದಂತೆ ಈಗ ರೋಗಗಳ ದಾಸಿ!"

ಸರಿ. ಸಮತಾವಾದದ ಆ ದಿನದಲ್ಲಿ ಅಲ್ಲಿ ನೆರೆದಿದ್ದ ಕಪ್ಪೆಗಳು ಒಮ್ಮೆಗೇ 'ಇಂಕಿಲಾಬ್ ಜಿಂದಾಬಾದ್'ಗಳ ಕ್ರಾಂತಿಮಯ ಕಹಳೆಯನ್ನು ಮೊಳಗಿಸಿದುವು. ಪ್ರಾಯಶಃ ಅವುಗಳಿಗೆ ಈ ಅನುಮಾನವೆದ್ದಿರಬೇಕು— " ಸ್ನಾನಕ್ಕೇ ಏಕೆ ಕೆರೆ ಮೀಸಲಾಗಬೇಕು? ಮುಸುರೆ ತಿಕ್ಕಬಾರದೇಕೆ? ಆರೋಗ್ಯಶಾಸ್ತ್ರದ ಇತರ ಚಟುವಟಿಕೆಗಳು ಅಲ್ಲಿ ನಡೆಯಬಾರದೇಕೆ? ಮನುಷ್ಯನಿಗೆ ಮಾತ್ರ ಕೆರೆಯಲ್ಲಿನ ಅಧಿಕಾರವೇ? ಎಮ್ಮೆ, ಕಪ್ಪೆ, ಕೇರೆಗಳಿಗೆಲ್ಲಾ ಸಮತಾವಾದ ಸಲಬೇಡವೇ?"

ನಿಜ, ಇದೇ ಮಾದರಿಯ ಜೇವಾ-ಕ್ರೆಸಿಯ ಆದರ್ಶವಾಯಿತು ಆ ಕೆರೆ. ಸ್ವಯಂ ಸ್ಪಷ್ಟವಾಗತಕ್ಕ ಮಾತದು. ನನ್ನ ಊರಿನ ಹೆಸರು ಕೋಟ. ಕೂಟ-ಎಂದಿದ್ದ ಒಂದು ಕಾಲದ ಹೆಸರು ಈಗ ಕೋಟವಾಗಿದೆ. ನಮ್ಮ ಊರಿನ ಬ್ರಾಹ್ಮಣರು ಕೂಟ-ದವರು. ಅವರಿಗೆ ಮಠವಿಲ್ಲ, ಸ್ವಾಮಿಗಳ ತಕರಾರಿಲ್ಲ. ಹೀಗಿರಲು ಅವರ ಡೆಮಾಕ್ರೆಸಿಗೆ ಒಪ್ಪಿದ ಕೆರೆ ಊರಲ್ಲಿರಬೇಡವೇ?

ಇದನ್ನು ಕಂಡು ನನಗೆ ಭವಿಷ್ಯದ ಅನೇಕ ವಿಚಾರಗಳು ತಲೆಯನ್ನು ತಳಮಳಿಸುತ್ತಿವೆ. ಈ ಡೆಮಾಕ್ರೆಸಿ, ಈ ಸಮತಾವಾದಗಳು ಈ ಯುಗದಲ್ಲೇ ಇಷ್ಟೊಂದು ಮುಂದುವರಿದಿರಲು— ಆ ತತ್ತ್ವ ಮತ್ತು ಮುಂದುವರಿದಲ್ಲಿ ಎಂಥ ರಾಜ್ಯ ಸೃಷ್ಟಿಗೊಳ್ಳಬಹುದು?

ಆಗಷ್ಟೆ—ಇಂಕಿಲಾಬ ಜಿಂದಾಬಾದ್—ರಣಕಹಳೆ ಊದಿತು. ನಾನು ಕುಳಿತಿದ್ದ ನೀರಿನ ಕುಣಿಯ ಗೋಡೆಗಳು, ದಸಕ್ಕನೆ ಜರಿದು ಒಳಕ್ಕೆ ಬಿದ್ದು ನನಗೆ ಕತ್ತಿನತನಕ ಗೋರಿ ಪ್ರಾಪ್ತಿಸಿತು. ಜಲದೇವತೆಯು ಗುಳುಗುಳು ಗೊಳ್ಳೆಂದು, ನೀರೊಳಗಿಂದ ಗಾಳಿಯ ಗುಳ್ಳೆಯಾಗಿ ಮೇಲೆದ್ದು ಅಂತರ್ಧಾನವಾಯಿತು. ನಾನು ಭೀತಿಯಿಂದ ಎಚ್ಚೆತ್ತು, ಕೆಸರಿಂದ ಮೈವೆತ್ತು, ಆ ತಾಣದಿಂದ ಕಾಲುಕಿತ್ತು, ಒಂದೇಸವನೆ ಮನೆಗೆ ಓಟಹಿಡಿದೆ. ಮನೆ ಬಾವಿಯ ನೀರಿನಿಂದ ನನ್ನ ಕೆಸರ್ಗವಚಕಿತ್ತು, ಮೋಕ್ಷ ತಾಳುವತನಕ ನನ್ನ ಅಂತರಾತ್ಮನಿಗೆ ತಿಳಿವೇ ಬರಲಿಲ್ಲ.

ಭಾರತದ ಜಾತಿ-ಜಾತಿಗಳ ತೊಡಕು

ಶ್ರೀ: ಸಂತರಾಮ ಬಿ. ಎ.*

★

ಜಾತಿಭೇದವೆಂಬುದಿದು ನಮ್ಮ ದೇಶಕ್ಕೆ ಅಂಟಿಕೊಂಡಿರುವ ಬಲುದಿನದ ರೋಗ. ಈ ರೋಗವಿರುವ ವರೆಗೆ ನಮಗೆ ಮುಕ್ತಿಯಿಲ್ಲ. ಹಾಗಿದ್ದರೆ ಅದಕ್ಕೆ ಪ್ರತೀಕಾರವನ್ನು ಮಾಡುವುದು ಅವಶ್ಯವಲ್ಲವೆ?

★

ನಮ್ಮ ದೇಶದಲ್ಲಿ ಜಾತಿ-ಜಾತಿಗಳ ಐಕ್ಯತೆಗಾಗಿ ಎಷ್ಟು ಪ್ರಯತ್ನ ಮಾಡಿದರೂ, ಹಿಂದು-ಮುಸ್ಲಿಂ ದೊಂಬಿಗಳು ದಿನದಿನಕ್ಕೆ ಹೆಚ್ಚುತ್ತಿರುವುದು ಅತ್ಯಂತ ವ್ಯಸನಕರವೂ ನಾಚಿಕೆಗೀಡಾದುದೂ ಆದ ವಿಷಯ. ಹಿಂದು-ಮುಸ್ಲಿಂ ದೊಂಬಿಯ ಅಗ್ನಿಗೆ ತುತ್ತಾಗದ ನಗರವೇ ಪ್ರಾಯಶಃ ನಮ್ಮ ದೇಶದಲ್ಲಿಲ್ಲವೆನ್ನಬಹುದು. ಮಹಾತ್ಮಾ ಗಾಂಧಿಯವರು ಶಾಂತಿ ಮತ್ತು ಅಹಿಂಸೆಯ ಅವತಾರವೆಂದು ಹೇಳಲಾಗುವುದು. ಅಲ್ಲದೆ ಅವರ ಪ್ರಭಾವವು ಎಲ್ಲಕ್ಕಿಂತ ಹೆಚ್ಚಾಗಿ ಗುಜರಾತು ಪ್ರಾಂತದಲ್ಲಿ ಎಂದು ಕೂಡ ಹೇಳಲಾಗುವುದು. ಆದರೆ ಅದೇ ಗುಜರಾತಿನ **ಅಹಮದಾಬಾದ್**, ಮುಂಬಯಿ ಮೊದಲಾದ ನಗರಗಳಲ್ಲಿಯೆ ಭಯಂಕರ ಜಾತೀಯ ಗಲಭೆಗಳಾಗುತ್ತಿರುವುದನ್ನು ನಾವು ದಿನದಿನವೂ ನೋಡುತ್ತಲೆ ಇದ್ದೇವೆ. ಬ್ರಿಟಿಷ್ ನೌಕರಶಾಹಿಯವರ ಕೈವಾಡವೆ ಈ ದಂಗೆಗಳಿಗೆ ಕಾರಣವೆಂದು ಹಿಂದೆ ಹೇಳುತ್ತಿದ್ದರು. ಆದರೆ ಕಾಂಗ್ರೆಸ್ ಮಂತ್ರಿಮಂಡಲಗಳು ಅಧಿಕಾರದಲ್ಲಿದ್ದಾಗ ಆದಷ್ಟು ದೊಂಬಿಗಳು ಬ್ರಿಟಿಷರ ಅಧಿಕಾರದ ಕಾಲದಲ್ಲಾಗಿರಲಿಲ್ಲ. ಕಲಹಗಳೂ ದೊಂಬಿಗಳೂ ಇತರ ದೇಶಗಳಲ್ಲಿ ಕೂಡ ನಡೆಯುತ್ತವೆ. ಇಂಗ್ಲೆಂಡಿನಲ್ಲೆಲ್ಲ ಏಳು ವರ್ಷಗಳ ಯುದ್ಧ, ೩೦ ವರ್ಷಗಳ ಕದನ, ಕೊನೆಗೆ ೧೦೦ ವರ್ಷಗಳ ವರೆಗಿನ ಕದನ ಸಹ ನಡೆದಿವೆ. ಆದರೆ ಕೊನೆಗೆ ಎಲ್ಲವೂ ಶಾಂತವಾಗಿವೆ. ಇಂದಿನ ಭಯಂಕರ ಯುದ್ಧವು ಎಷ್ಟು ದಿನಗಳ ಕಾಲ ನಡೆಯುವುದೋ ಯಾರು ಬಲ್ಲರು? ಆದರೂ ಅದು ಒಂದಲ್ಲ ಒಂದು ದಿನ ನಿಂತೇ ನಿಲ್ಲುವುದು. ಇಂದಲ್ಲ, ನಾಳೆಯಾದರೂ ಇಂಗ್ಲೆಂಡ್-ಜರ್ಮನಿಗಳಲ್ಲಿ ಮೈತ್ರಿಯುಂಟಾಗಿಯೇ ಆಗುವುದು.

ಆದರೆ ಹಿಂದು-ಮುಸಲ್ಮಾನರ ದಂಗೆಯಾದರೋ, ಏಳನೆಯ ಶತಮಾನದಿಂದ—**ಮಹಮುದ್ ಬಿನ್ ಖಾಸಿಮನು** ಸಿಂಧು ದೇಶವನ್ನು ಆಕ್ರಮಿಸಿದಾಗಿನಿಂದ—ಪ್ರಾರಂಭವಾಗಿ, ಇದುವರೆಗೆ ನಡೆಯುತ್ತಲೇ ಇದೆ; ಮುಂದೆ ನಿಲ್ಲುವ ಸೂಚನೆಯೂ ಕಾಣಬರುತ್ತಿಲ್ಲ. ಮುಸಲ್ಮಾನರು ಕೇವಲ ರಾಜ್ಯಾಧಿಕಾರಕ್ಕೆಂದೇ ಕಾದುತ್ತಿದ್ದಲ್ಲಿ, ಅವರ ಕೈಯಲ್ಲಿ ಆಡಳಿತಸೂತ್ರಗಳಿದ್ದಾಗ ಈ ಕಲಹಗಳು ನಿಂತು ಹೋಗಬೇಕಾಗಿತ್ತು; ಏಕೆಂದರೆ ಒಂದು ದೇಶವನ್ನು ಗೆಲ್ಲುವುದಕ್ಕಿಂತ ಹೆಚ್ಚಿನ ಅಧಿಕಾರವಿನ್ನೇನಿದೆ? ಆದರೆ ನಾವು ನೋಡುವುದೇನು? ಆಗಲೂ ಈ ಎರಡೂ ಜಾತಿಯವರ ದ್ವೇಷಾಗ್ನಿಯು ಶಾಂತವಾಗಿರಲಿಲ್ಲ, ಎಂದಮೇಲೆ ಇದಕ್ಕೆ ಕಾರಣವೇನು?

ಪತಿ-ಪತ್ನಿಯರಲ್ಲಿ ವೈಮನಸ್ಯವುಂಟಾಗುತ್ತದೆ; ಅಣ್ಣತಮ್ಮಂದಿರಲ್ಲಾಗುತ್ತದೆ. ಸಿಕ್ಖರೂ ಹಿಂದುಗಳೂ ಹೊಡೆದಾಡುವರು. ಎಲ್ಲರೂ ಕೊನೆಯಲ್ಲಿ ಒಂದಾಗುವರು. ಕಾರಣವೇನೆಂದರೆ, ಈ ಜನಗಳಲ್ಲಿ ಕಲಹವನ್ನುಂಟುಮಾಡುವುದಕ್ಕೆ ಬೇಕಾಗುವ ಶಕ್ತಿಗಿಂತಲೂ, ಇವರಲ್ಲಿ ಐಕ್ಯತೆಯನ್ನುಂಟುಮಾಡುವ ಶಕ್ತಿಯೇ ಅಧಿಕವಾಗಿದೆ. ವಸ್ತುಸ್ಥಿತಿ ಏನೆಂದರೆ, ಯಾವ ಜನರಲ್ಲಿ ಪರಸ್ಪರ ಊಟೋಪಚಾರ, ಕೊಟ್ಟು ತರುವುದೇ ಮುಂತಾದ ಸಂಬಂಧವಿರುವುದೋ, ಅವರು ಒಂದುವೇಳೆ ಪರಸ್ಪರರಲ್ಲಿ ಕಾದಿದರೂ ಕೊನೆಯಲ್ಲಿ ಒಂದಾಗುವರು. ಆದರೆ ಯಾರಲ್ಲಿ ಈ ಅನುಕೂಲವಿಲ್ಲವೋ ಅವರಲ್ಲಿ, ಶಾಂತಿಯಾಗಲಿ ಪರಸ್ಪರ ವಿಶ್ವಾಸವಾಗಲಿ ಎಂದಿಗೂ ಉಂಟಾಗಲಾರದು. ಒಂದೇ ದೇಶದ ನಿವಾಸಿಗಳ

---

* ಲೇಖಕರ ವಿಚಾರಪ್ರಚೋದಕ ಲೇಖನವೊಂದರ ಅನುವಾದವಿದು. ಅನುವಾದಿಸಿದವರು ಶ್ರೀ. ಎಸ್. ಎಲ್. ಸುಬ್ರಹ್ಮಣ್ಯಂ, ಕೊಡಗನೂರು ಅವರು. ಈ ಲೇಖನದಲ್ಲಿಯ ವಿಚಾರಗಳು ತುಂಬ ಚರ್ಚೆಗೆ ಆಸ್ಪದವನ್ನುಂಟುಮಾಡುವಂತಹವಾಗಿವೆ. ಸದ್ಯ ಜಾತೀಯ ತೊಡಕಿನ ಸೆಕೆಯನ್ನು ಬಡಿಸಿಕೊಂಡವರು ಬಹುಜನರು. ಈ ಸೆಕೆಯ ನಿವಾರಣೆಗಾಗಿ ಹಲವರು ಹಲವು ಬಗೆಯಿಂದ ವಿಚಾರಮಾಡುತ್ತಿರಬಹುದು, ಅಂತಹರಲ್ಲಿ ಶ್ರೀ. ಸಂತರಾಮ ಅವರೊಬ್ಬರು. ಇವರ ವಿಚಾರಗಳು ಸಂಪ್ರದಾಯವಾದಿಗಳ ಹೃದಯವನ್ನು ಗಡಗಡ ನಡುಗಿಸದೆ ಇರವು. ಈ ವಿಚಾರಗಳನ್ನು ಖಂಡಿಸಿ ಮಂಡಿಸಿ ಬರೆದ ಬೇರೆ ಲೇಖನಗಳಿಗೂ ಜಯಂತಿಯಲ್ಲಿ ಎಡೆಕೊಡಲಾಗುವುದು.

ಎರಡು ಗುಂಪಿನವರಲ್ಲಿ, ಉಪಚಾರದ ಸಂಬಂಧ ಯಾವಾಗ ಇಲ್ಲವೋ—ಆಗಲೇ ಅವರಲ್ಲಿ ಮೇಲು ಕೀಳೆಂಬ ಭಾವನೆ ಯುಂಟಾಗುತ್ತದೆ. ಈ ಕುತ್ಸಿತ ಭಾವನೆಯುಂಟಾದ ಕೂಡಲೆ, ಅವರ ಪರಂಪರಾಗತವಾದ ಸದ್ಭಾವನೆಯು ಭಂಗವಾಗಿ, ದ್ವೇಷವು ಹರಡಿ ಹೋಗುವುದು; ಇದರಿಂದ ದೇಶದ ಶಾಂತಿಯು ನಷ್ಟವಾಗುವುದು. ಹಿಂದು-ಮುಸಲ್ಮಾನರ ಧರ್ಮಗಳು ಬೇರೆ ಬೇರೆ ಯಾದುದರಿಂದಲೇ ಹಿಂದು-ಮುಸ್ಲಿಂ ಕಲಹಗಳಾಗುವುವೆಂದು ಹೇಳಬಹುದು. ಆದರೆ, ಉತ್ತರಭಾರತದಲ್ಲಿರುವ ಹಿಂದು-ಮುಸ್ಲಿಂ ದ್ವೇಷಕ್ಕಿಂತಲೂ **ದಕ್ಷಿಣದಲ್ಲಿ ಬ್ರಾಹ್ಮಣ-ಬ್ರಾಹ್ಮಣೇತರರ ದ್ವೇಷವು ಇನ್ನೂ ಅಧಿಕವಾಗಿದೆ.** ಇಬ್ಬರೂ ಹಿಂದುಗಳೇ ಆಗಿದ್ದರೂ, ಕೆಲವು ದಿನಗಳ ಹಿಂದೆ ಮಿ. ಜಿನ್ನರು ಮದ್ರಾಸಿಗೆ ಹೋಗಿದ್ದಾಗ, ಅಲ್ಲಿಯ ಬ್ರಾಹ್ಮಣೇತರ ಮತ್ತು ಅಸ್ಪೃಶ್ಯ ಹಿಂದುಗಳ ಮುಖಂಡರು ಮಿ. ಜಿನ್ನರನ್ನು ಹೃತ್ಪೂರ್ವಕವಾಗಿ ಸ್ವಾಗತಿಸಿದರು. ಬ್ರಾಹ್ಮಣ-ಬ್ರಾಹ್ಮಣೇತರ ದ್ವೇಷವು ಇದುವರೆಗೆ ಹಿಂದು-ಮುಸ್ಲಿಂ ದ್ವೇಷದಷ್ಟು ಭೀಷಣರೂಪವನ್ನು ಧರಿಸಿಲ್ಲ. ಆದರೆ ಅದಕ್ಕೆ ಕಾರಣವಿದೆ. ಆ ಕಾರಣವು ಭಾರತಕ್ಕೆ "ರಿಫಾರ್ಮ್ಸ (ಸುಧಾರಣೆಗಳು)" ಅಥವಾ ರಾಜನೈತಿಕ ವಿಶೇಷಾಧಿಕಾರವು ದೊರೆಯುವುದಕ್ಕೆ ಮೊದಲು, ಎಂದರೆ ಬ್ರಿಟಿಷ್ ನೌಕರಶಾಹಿಯ ಕಾಲದಲ್ಲಿ ಈ ಸಾಂಪ್ರದಾಯಿಕ ಕಲಹಗಳು ಆಗದಿದ್ದುದೇ ಆಗಿದೆ.

ಮೊದಲು ಸಮಸ್ತಶಕ್ತಿಯೂ ಶಾಸಕರ ಕೈಯಲ್ಲಿದ್ದಿತು. ಪ್ರಜೆಗಳು ಕೇವಲ ಕುರಿಗಳಂತಿದ್ದರು. ಆಗ ರಾಜನು ಪ್ರಜೆಗಳನ್ನು ತುಳಿಯುತ್ತಿದ್ದನು; ಆದರೆ ಈಗ ಅದೇ ಆಡಳಿತವೇ ಶಾಸಕರ ಕೈಯಿಂದ ಜನಸಾಮಾನ್ಯರ ಕೈಗೆ ಬಂದಿರುತ್ತದೆ. ಆದುದರಿಂದ ಮುಸಲ್ಮಾನರು ಹಿಂದುಗಳೊಡನೆ, ಬ್ರಾಹ್ಮಣೇತರರು ಬ್ರಾಹ್ಮಣರೊಡನೆ, ಹಿಂದೆ ನಡೆದುದಕ್ಕೆ ಪ್ರತೀಕಾರ ಮಾಡಲು ಯತ್ನಿಸುತ್ತಿದ್ದಾರೆ. ಎರಡೂ ಗುಂಪಿನವರ ದ್ವೇಷದ ಮೂಲಕಾರಣವು, ೬೦೦ ವರ್ಷಗಳ ಕೆಳಗಿದ್ದಂತೆಯೆ ಈಗಲೂ ಇದೆ. ಆ ಮೂಲಕಾರಣವನ್ನು ನಿರ್ಮೂಲ ಮಾಡಲು ಹಿಂದೆ ಯಾರೂ ಪ್ರಯತ್ನಿಸಿರಲೂ ಇಲ್ಲ, ಈಗ ಪ್ರಯತ್ನ ಮಾಡುತ್ತಲೂ ಇಲ್ಲ. ಮೊದಲು ಬ್ರಾಹ್ಮಣರು ಬ್ರಾಹ್ಮಣೇತರರನ್ನೂ ಹಿಂದು ಅಸ್ಪೃಶ್ಯರನ್ನೂ ಅವರ್ಣನೀಯವಾದ ಹಿಂಸೆಗೆ ಗುರಿ ಮಾಡಿದರು. ಬ್ರಿಟಿಷರ ಆಡಳಿತದಲ್ಲಿ ಉನ್ನತಾಧಿಕಾರಗಳೆಲ್ಲ ಸವರ್ಣಹಿಂದುಗಳ ಕೈಗೆ ಬಂದುದರಿಂದ, ಮುಸಲ್ಮಾನರೆಲ್ಲರೂ ಸುಮ್ಮನಿದ್ದರು. ಆದುದರಿಂದಲೇ ಶೂದ್ರರು ದ್ವಿಜರಿಗೆ ವಿರೋಧವಾಗಿಯೂ, ಮುಸ್ಲಿಮರು ಹಿಂದುಗಳಿಗೆ ವಿರುದ್ಧವಾಗಿಯೂ ತಲೆ ಎತ್ತಲಾಗುತ್ತಿರಲಿಲ್ಲ. ಆದರೆ ಕಾಲಚಕ್ರವು ಉರುಳಿತು. ಶೂದ್ರರೂ ಮುಸಲ್ಮಾನರೂ ತಲೆ ಎತ್ತಲಾರಂಭಿಸಿದ್ದಾರೆ.

ಈ ಹಿಂದು-ಮುಸ್ಲಿಂ ದಂಗೆಗಳು ದಿನದಿನಕ್ಕೆ ಅತ್ಯಂತ ಭಯಂಕರ ರೂಪವನ್ನು ಧರಿಸುತ್ತಲಿವೆ. ಇದರಿಂದ ಸರಕಾರವೂ ಪ್ರಜೆಗಳೂ ಬಹಳ ಚಿಂತೆಗೊಳಗಾಗಿದ್ದಾರೆ. ಇವೆಲ್ಲ ಜಗಳಗಳನ್ನು ತಡೆಯಲು ಅಲ್ಲಲ್ಲಿಯೇ ಹಿಂದು-ಮುಸ್ಲಿಂ ಐಕಮತ್ಯದ ಸಭೆಗಳಾಗುತ್ತಿವೆ. ಮುಖಂಡರು ಅಲ್ಲಲ್ಲಿ ಸಂಚರಿಸಿ ಐಕಮತ್ಯದ ವಿಷಯವಾಗಿ ವ್ಯಾಖ್ಯಾನ ಮಾಡುತ್ತಿದ್ದಾರೆ. ಸರ್ಕಾರಿ ಅಧಿಕಾರಿಗಳು ಜನರಲ್ಲಿ ಕೋಮುವಾರು ಸೌಹಾರ್ದದ ವಿಷಯವಾಗಿ ಉಪದೇಶ ಮಾಡುತ್ತಿದ್ದಾರೆ. ಕಾಂಗ್ರೆಸ್ಸಿನವರು, ಈ ಜಗಳಕ್ಕೆ ಧರ್ಮವೇ ಕಾರಣವೆಂದು ತಿಳಿದು, 'ನಾವು ಹಿಂದುಗಳೂ ಅಲ್ಲ, ಮುಸಲ್ಮಾನರೂ ಅಲ್ಲ' ಎಂದು ಘೋಷಿಸುತ್ತಿದ್ದಾರೆ. ಮತ್ತೆ ಕೆಲವರು ವರ್ತಮಾನಪತ್ರಿಕೆಗಳೇ ಈ ದಂಗೆಗಳಿಗೆ ಕಾರಣವೆಂದು ಅವುಗಳನ್ನು ಟೀಕಿಸುತ್ತಿದ್ದಾರೆ. ಆದರೆ ದಂಗೆಗಳನ್ನುಂಟು ಮಾಡುವಂತಹ ಭಾಷಣಗಳಾಗದಿದ್ದರೆ, ದಂಗೆಗಳೇ ಆಗದಿದ್ದರೆ, ಪತ್ರಿಕೆಗಳು ಅವುಗಳನ್ನು ಪ್ರಕಟಿಸುತ್ತಲೇ ಇರಲಿಲ್ಲ. ಕಲಹಗಳ ಮೂಲಕಾರಣವನ್ನು ಕಂಡುಹಿಡಿದು, ಅದನ್ನು ದೂರಮಾಡುವುದಕ್ಕೆ ಬದಲಾಗಿ, ಆ ಕಲಹಗಳ ಸಮಾಚಾರವನ್ನು ಪ್ರಕಟಿಸುವ ಪತ್ರಿಕೆಗಳವರನ್ನು ಅಪರಾಧಿ ಎಂದು ಹೇಳುವುದರಿಂದ ಏನು ತಾನೇ ಲಾಭವಾಗುವುದು?

ಪಂಜಾಬ್ ಸರ್ಕಾರವು ಕೋಮುವಾರು ಸೌಹಾರ್ದವನ್ನು ಸ್ಥಾಪಿಸುವುದಕ್ಕೂ ಮತ್ತು ಜಗಳಗಳನ್ನು ನಿರೋಧಿಸುವುದಕ್ಕೂ ಒಂದು ಲಕ್ಷ ರೂ. ಗಳನ್ನು ವೆಚ್ಚ ಮಾಡಬೇಕೆಂದು ನಿಶ್ಚಯಿಸಿದೆ. ಈ ನಿಶ್ಚಯವೇನೋ ಒಳ್ಳೆಯದೇ; ಆದರೆ ತನ್ನ ಧ್ಯೇಯದ ಸಿದ್ಧಿಗಾಗಿ ಅದು ಮಾಡಿರುವ ಯೋಜನೆಯನ್ನು ನೋಡಿದರೆ, ಪಂಜಾಬ್ ಸರ್ಕಾರಕ್ಕೆ ನಿಜವಾದ ಸಫಲತೆಯು ದೊರೆಯುವ ಆಶೆಯೇ ಇಲ್ಲ. ಆ ಯೋಜನೆಯೇ ಈ ರೀತಿಯದಾಗಿದೆ:

'ನಾವು ಇರುವ ವಾತಾವರಣವು ದುರ್ಭಾಗ್ಯದಿಂದ ಕೋಮುವಾರು ಅವಿಶ್ವಾಸದ ಭಾವನೆಗಳಿಂದ ತುಂಬಿ, ಕೋಮುವಾರು ಕಲಹವೆಂಬ ಅಗ್ನಿಯು ಪ್ರಜ್ವಲವಾಗಲು ಒಂದೇ ಒಂದು ಸಣ್ಣ ಕಿಡಿಯು ಸಹ ಸಾಕಾಗುವಂತಿದೆ.

ಬೇರೆ ಬೇರೆ ಸಂಪ್ರದಾಯಗಳಲ್ಲಿರುವ ಪರಸ್ಪರ ಸಂಬಂಧವನ್ನು ಸರಿಪಡಿಸಲು—ಅವರಲ್ಲಿ ಸದ್ಭಾವನೆಯನ್ನು ಹೆಚ್ಚಿಸಲು, ಬಜೆಟ್ಟಿನಲ್ಲಿ ೧ ಲಕ್ಷ ರೂ. ಗಳನ್ನು ವೆಚ್ಚ ಮಾಡಲಾಗುವುದು.'

ಈ ಯೋಜನೆಯಲ್ಲಿ ಸಹ ರೋಗದ ಮೂಲಕಾರಣವನ್ನು ಕಂಡುಹಿಡಿಯುವ ಪ್ರಯತ್ನವನ್ನು ಮಾಡಲಾಗಿಲ್ಲ, ಅದರ ಬಾಹ್ಯ ಲಕ್ಷಣಗಳನ್ನೆ ರೋಗವೆಂದು ತಿಳಿದು, ಅದಕ್ಕೆ ಅಸ್ಥಾಯಿಯಾರೂಪವಾದ ಚಿಕಿತ್ಸೆಯನ್ನು ಮಾಡಲಾಗುತ್ತಿದೆ.

ಕೆಲವು ದಿನಗಳ ಹಿಂದೆ ಲಾಹೋರಿನಲ್ಲಿ, ಗಡಿನಾಡಿನ ಗಾಂಧಿಯವರಾದ ಖಾನ್ ಅಬ್ದುಲ್ ಗಫಾರ್ ಖಾನ್‌ರವರ ಅಧ್ಯಕ್ಷತೆಯಲ್ಲಿ ಸಂಪ್ರದಾಯವಿರೋಧ ಸಮ್ಮೇಳನವು ನಡೆದಿತ್ತು. ಅದರಲ್ಲಿ ರೈಲ್ವೆ ಸ್ಟೇಷನ್‌ಗಳಲ್ಲಿ "ಹಿಂದೂ ನೀರು" "ಮುಸಲ್ಮಾನ್ ರೊಟ್ಟಿ" ಎಂಬುದನ್ನು ನಿಲ್ಲಿಸಬೇಕೆಂದು ಹೇಳಲಾಗಿದ್ದಿತು. ಅಲ್ಲದೆ ಪ್ರತ್ಯೇಕ ಚುನಾವಣೆಯ ಪದ್ಧತಿಯನ್ನು ಸಹ ನಿಲ್ಲಿಸಬೇಕೆಂಬ ನಿರ್ಣಯವಾಯಿತು. ಇಂತಹ ಯೋಜನೆಗಳಿಂದ,

ಜ್ವರಪೀಡಿತನಾದ ರೋಗಿಗೆ ತಣ್ಣಗಿರುವ ನೀರಿನಲ್ಲಿ ಕುಳಿತು ಕೊಂಡು ತನ್ನ ತಾಪವನ್ನು ಕಡಮೆಮಾಡಿಕೊಳ್ಳುವುದಕ್ಕೆ ಹೇಳಿದಂತಾಯಿತು. ಯೋಗ್ಯನಾದ ವೈದ್ಯನು ಮೊದಲು ಜ್ವರದ ಮೂಲಕಾರಣವನ್ನು ತಿಳಿಯಲು ಯತ್ನಿಸುತ್ತಾನೆ, ಅನಂತರವೇ ಚಿಕಿತ್ಸೆ ಮಾಡಲು ಪ್ರಯತ್ನಿಸುತ್ತಾನೆ. ಒಬ್ಬ ಹಿಂದೂ ಬ್ರಾಹ್ಮಣನು ಒಬ್ಬ ಬ್ರಾಹ್ಮಣೇತರ ಹಿಂದುವು ಮಾಡಿದ ಆಹಾರವನ್ನು ತಿನ್ನುವುದಿಲ್ಲ; ಏಕೆಂದರೆ ಈ ರೀತಿ ಮಾಡುವುದರಿಂದ ತನ್ನ ಜಾತಿಯು ಭ್ರಷ್ಟವಾಗುವುದೆಂಬ ಭಯವಿದೆ ಇವನಿಗೆ. ಮದ್ರಾಸಿನ ಕಡೆ, ಒಬ್ಬ ಬ್ರಾಹ್ಮಣನು ಒಬ್ಬ ಬ್ರಾಹ್ಮಣೇತರ ಹಿಂದುವಿಗೆ ತನ್ನ ಮನೆಯನ್ನು ಬಾಡಿಗೆಗೆ ಕೂಡ ಕೊಡುವುದಿಲ್ಲ; ಎಂದಮೇಲೆ ಇಂತಹವನು ಮುಸಲ್ಮಾನರ ಕೈಯಿಂದ ನೀರು ಕುಡಿಯುವುದಾಗಲಿ, ಊಟಮಾಡುವುದಾಗಲಿ ಸಾಧ್ಯವಿದೆಯೆಂದು ಭಾವಿಸಬಹುದೆ?

ಇದೇ ಪ್ರತ್ಯೇಕ ಚುನಾವಣೆಗೂ ಮತ್ತು ಸರಕಾರದಲ್ಲಿಯ ವಿಶಿಷ್ಟ ಸ್ಥಾನಗಳಿಗೂ ಅನ್ವಯಿಸುತ್ತದೆ. ಪ್ರಜಾತಂತ್ರಾತ್ಮಕ ರಾಜ್ಯಗಳಲ್ಲಿ ಎಲ್ಲ ಮನುಷ್ಯರೂ ಉನ್ನತಿಯನ್ನೈದಲು ಸಮನಾದ ಅವಕಾಶವಿದೆ. ಪಾಶ್ಚಿಮಾತ್ಯ ದೇಶಗಳಲ್ಲಿ ಸಹ ದರಿದ್ರ ಮತ್ತು ಧನಿಕರ ಬೇರೆ ಬೇರೆ ಗುಂಪುಗಳಿವೆ; ಆದರೆ ಅಲ್ಲಿ ಜನ್ಮಮೂಲಕವಾದ ಜಾತಿಭೇದಗಳ ಪ್ರತಿಬಂಧಕವಿಲ್ಲ. ಅಲ್ಲಿ ದರಿದ್ರನು ಧನಿಕನಾಗಬಲ್ಲನು; ಆದರೆ ಭಾರತದಲ್ಲಿ ಒಬ್ಬ ಭಂಗಿಯು ಎಂದಿಗೂ ಬ್ರಾಹ್ಮಣನಾಗಲಾರನು. ಇಲ್ಲಿ ಬ್ರಾಹ್ಮಣನು ಬ್ರಾಹ್ಮಣನಿಂದಲೇ ಊಟ ಮಾಡುವನು ಹೊರತು, ಇತರರ ಕೈಯಿಂದ ಮುಟ್ಟನು. ಪರಿಣಾಮವಾಗಿ ಬ್ರಾಹ್ಮಣವಿದ್ಯೆ, ಸಂಸ್ಕೃತಿಗಳು ಕೇವಲ ಬ್ರಾಹ್ಮಣರಿಗೆ ಮಾತ್ರ ಮೀಸಲಾಗಿರುತ್ತವೆ. ಈ ಕಾರಣದಿಂದಲೆ ಭಾರತದಲ್ಲಿ ಬೇರೆಬೇರೆ ಜಾತಿಗಳು—ಸಾವಿರಾರು ವರ್ಗಗಳಿಂದ ಒಟ್ಟಿಗೆ ವಾಸಿಸುತ್ತಿದ್ದರೂ— ಇದುವರೆಗೆ ಸಾಮೂಹಿಕವಾಗಿ ವಿದ್ವಾಂಸ ಬ್ರಾಹ್ಮಣ, ಧನಿಕ ಅಗ್ರವಾಲ, ನಿರ್ಧನಿಕ, ಚಮ್ಮಾರ, ಸಾಹಸೀ ರಾಜಪುತ್ರರು ಮತ್ತು ಅಂಜುಬುರುಕ ಬನಿಯರು ಉಳಿದೇ ಇರುವರು. ಇವರೆಲ್ಲರಿಗೂ ಪರಸ್ಪರ ಊಟೋಪಚಾರಗಳಲ್ಲಿ— ಕೊಟ್ಟು ತರುವುದರಲ್ಲಿ ಸಂಬಂಧವಿದ್ದಿದ್ದಲ್ಲಿ ವಿದ್ಯೆ, ಐಶ್ವರ್ಯ, ವೀರತೆ ಮತ್ತು ದೌರ್ಬಲ್ಯ ಇವುಗಳು ಯಾವುದೇ ಒಂದು ಜಾತಿಗೇ ಸೇರಿಹೋಗುತ್ತಿರಲಿಲ್ಲ. ಎಲ್ಲ ಮನೆಗಳಲ್ಲಿಯೂ ವಿದ್ವಾಂಸರೂ, ಧನಿಕರೂ, ಸಾಹಸಿಗಳೂ ಮತ್ತು ಚತುರರೂ ಜನ್ಮಧಾರಣಮಾಡುತ್ತಿದ್ದರು. ಈಗಿನ ಸಾಮಾಜಿಕ ವ್ಯವಸ್ಥೆಯಲ್ಲಿ ಯಾರಾದರೊಬ್ಬ ಬ್ರಾಹ್ಮಣನು ಉನ್ನತಪದವಿಯಲ್ಲಿದ್ದರೆ, ತನ್ನವರನ್ನೇ ತನ್ನ ಕೈಕೆಳಗಿನ ಕೆಲಸಕ್ಕೆ ನಿಯಮಿಸಿಕೊಂಡು, ಇತರರನ್ನು ತಿರಸ್ಕರಿಸುವನು. ಅವರೆಲ್ಲರೂ ಚೀಣದವರಿಗೆ ಅರಬರು ಹೇಗೋ ಹಾಗೆ! ಆದುದರಿಂದಲೇ ಸರ್ಕಾರಿ ನೌಕರಿಗಳಲ್ಲಿ ಅಸ್ಪೃಶ್ಯರ ಸಂಖ್ಯೆಯು ಶೂನ್ಯಮಯವಾಗಿರುವುದು! ಇಂಗ್ಲಿಷ್ ಸರಕಾರವು ಹರಿಜನರಿಗೆ ಪ್ರತ್ಯೇಕ ಚುನಾವಣೆ ಮತ್ತು ರಕ್ಷಿತ ಸ್ಥಾನಗಳ ವ್ಯವಸ್ಥೆ ಮಾಡದೆ ಇದ್ದಿದ್ದರೆ, ಅವರಿಗೆ ಎಂದಿಗೂ ನೌಕರಿ ಸಿಕ್ಕುವ ಸಂಭವವೇ ಇರುತ್ತಿರಲಿಲ್ಲವೇನೊ! ಒಬ್ಬ ಚಮ್ಮಾರನ ಸ್ಪರ್ಶಮಾತ್ರದಿಂದ ಅಪವಿತ್ರನಾಗುವೆನೆಂದು ಭಾವಿಸುವ ಒಬ್ಬ ದ್ವಿಜನು, ಅಸ್ಪೃಶ್ಯನು ತನ್ನ ಅಧಿಕಾರಿಯಾಗುವುದನ್ನು ಸಹಿಸಬಲ್ಲನೆ? ಈ ರೀತಿ ಸವರ್ಣಹಿಂದುಗಳೇ ತಮ್ಮ ಸಹೋದರರೊಡನೆ ದುರ್ವ್ಯವಹಾರ ಮಾಡಿದರೆ, ವಿಧರ್ಮಿಯ ಮುಸಲ್ಮಾನರು ಮತ್ತು ಈಸಾಯಿಗಳೊಡನೆ ಸಮತೆ ಮತ್ತು ಬಂಧುತ್ವದ ವ್ಯವಹಾರವನ್ನಿಟ್ಟುಕೊಳ್ಳಬಹುದೆಂದು ನಾವು ನಂಬಬಹುದೇ? ಎಂದಿಗೂ ಇಲ್ಲ!

ಪರಸ್ಪರರಲ್ಲಿ ಪ್ರೇಮ ಉಂಟಾಗಬೇಕಾದಲ್ಲಿ, ಸಾಮಾಜಿಕ ಸಂಬಂಧವೇರ್ಪಡಬೇಕು. ವಸ್ತುಸ್ಥಿತಿ ಏನೆಂದರೆ, ಹಿಂದು-ಮುಸಲ್ಮಾನರ ಹಿತಗಳು ಒಂದಾಗದೆ ಇದ್ದಲ್ಲಿ, ಅವರಲ್ಲಿ ಐಕಮತ್ಯವು ಹೇಗೆ ತಾನೇ ಉಂಟಾದೀತು? ಅವರು ಒಂದು ರಾಷ್ಟ್ರದವರಾಗಿ, ಅವರಲ್ಲಿ ಪರಸ್ಪರ ಸಾಮಾಜಿಕ ಸಂಬಂಧವಾದಾಗಲೇ ಅವರಿಬ್ಬರ ಹಿತಗಳು ಒಂದೇ ಆಗುವುವು. ಆದರೆ ಹಿಂದುಗಳ ಜಾತಿ, ಉಪಜಾತಿಗಳ ಹಿತಗಳೇ ಒಂದಕ್ಕೊಂದು ವಿರೋಧವಾಗಿರುವಾಗ, ಹಿಂದು ಮುಸ್ಲಿಂ ಹಿತಗಳು ಹೇಗೆ ತಾನೇ ಒಂದಾಗುವುವು? ಅವರದು ಏಕರಾಷ್ಟ್ರವಾಗುವುದಾದರೂ ಹೇಗೆ? ಜಾತಿಭೇದದ ಕಾರಣದಿಂದ ಹಿಂದುವು ಇತರರೊಡನೆ ಸೇರಿರಲಾರನು. ಹಿಂದುಗಳು ಶಾಸಕರಾಗಿರಬೇಕು, ಅಥವಾ ಶಾಸಿತರಾಗಿರಬೇಕೇ ವಿನಾ ಸಮಾನತೆಯಿಂದ ಅಣ್ಣತಮ್ಮಂದಿರಂತೆ ಇರಲಾರರು. ಈಗಂತೂ ಅವರು ಶಾಸಕರಾಗಲಾರರು; ಆದುದರಿಂದ ಇನ್ನೊಬ್ಬರ ಅಧೀನದಲ್ಲೇ ಇರಬೇಕು. ಇವರ ಉಚ್ಚ-ನೀಚವೆಂಬ ವರ್ಣವ್ಯವಸ್ಥೆಯು, ಇವರಲ್ಲಿ ಬಂಧುತ್ವ ಮತ್ತು ಸಮತೆಯ ಪವಿತ್ರಭಾವನೆಯನ್ನು ನಷ್ಟಗೊಳಿಸಿ, ಇವರನ್ನು ಲೋಕಸತ್ತಾತ್ಮಕ ಶಾಸನಪದ್ಧತಿಗೆ ಅಯೋಗ್ಯರನ್ನಾಗಿ ಮಾಡಿಬಿಟ್ಟಿದೆ. ಜಾತಿಭೇದವನ್ನು ಇಟ್ಟುಕೊಂಡು, 'ಜನರ ಹಿತಕ್ಕಾಗಿ, ಜನರ ಮೂಲಕ, ಜನರಿಂದಲೇ ಆಡಳಿತ' ಎಂಬ ಸುಂದರಸಿದ್ಧಾಂತವನ್ನು ಪಾಲಿಸಿಕೊಂಡು ಬರುವುದು ಸಾಧ್ಯವೇ ಇಲ್ಲ. ಹಿಂದುಗಳು ಜಾತಿಭೇದವನ್ನು ನಿರ್ಮೂಲಮಾಡದೆ ಹೋದಲ್ಲಿ, ಕೆಲವೇ ವರ್ಷಗಳಲ್ಲಿ ಅಸ್ಪೃಶ್ಯರೂ ಮತ್ತು ಸ್ಪೃಶ್ಯ ಶೂದ್ರರು ಸಹ ಸವರ್ಣಹಿಂದುಗಳೊಡನೆ, ಈಗ ಮುಸಲ್ಮಾನರು ವರ್ತಿಸುತ್ತಿರುವಂತೆಯೇ ಕಠಿಣತೆಯಿಂದ ವರ್ತಿಸುವುದನ್ನು ನಾವು ಸದ್ಯದಲ್ಲಿಯೇ ನೋಡಲಿರುವೆವು. ಆದುದರಿಂದ, ಕೇವಲ ಹಿಂದು-ಮುಸಲ್ಮಾನರ ಜಗಳವು ಮಾತ್ರವಲ್ಲದೆ, ಬ್ರಾಹ್ಮಣ-ಬ್ರಾಹ್ಮಣೇತರವಾದದ ಅಂತ್ಯವೂ ಕೂಡ ಹಿಂದುಗಳ ಜಾತಿಭೇದವು ಹೋದಾಗಲೇ ಆಗುವುದು.

ಸರ್ಕಾರವು ಲಕ್ಷಾಂತರ ರೂ. ಗಳನ್ನು ವೆಚ್ಚಮಾಡುವುದರ ಬದಲು, ಜಾತಿಭೇದವನ್ನು ಒಪ್ಪುವುದನ್ನೇ ನಿಲ್ಲಿಸಬೇಕು. ಈಗ ಒಬ್ಬ ಅಸ್ಪೃಶ್ಯನು ಸವರ್ಣಿಗಳ ಹೋಟಲಿಗೆ ಹೋದರೆ, ಅಥವಾ ಬಾವಿಯಲ್ಲಿ ನೀರು ತಂದರೆ, ಒಂದು ಮಂದಿರವನ್ನು ಪ್ರವೇಶಿ-

ಸಿದರೆ, ಸರ್ಕಾರದ ಕಾನೂನು ಅವನನ್ನು ದಂಡಿಸುತ್ತದೆ. ಉಚ್ಚ-ವರ್ಣದ ಹಿಂದುಗಳು ಬ್ರಿಟಿಶ್ ಸರ್ಕಾರವನ್ನು ಮೋಸಗೊಳಿಸಿ, ಪ್ರಾರಂಭದಲ್ಲಿ ಜಾತಿಭೇದದ ಭಾವನೆಗಳು ಶಾಶ್ವತವಾಗಿರುವಂತೆ ಸಹಾಯಮಾಡುವಂತಹ ಕಾನೂನನ್ನು ರಚಿಸುವಂತೆ ಮಾಡಿದರು. ಧಾರ್ಮಿಕ ವಿಚಾರಗಳಲ್ಲಿ ತಾಟಸ್ಥ್ಯನೀತಿಯನ್ನು ವಹಿಸುವೆನೆಂದು ಹೇಳಿ, ಸರ್ಕಾರವು ಆ ಅನ್ಯಾಯವಾದ ಅತ್ಯಾಚಾರಪೂರ್ಣವಾದ ಕಾನೂನನ್ನೇ ಮುಂದುವರಿಸಿಕೊಂಡುಬರುತ್ತಿದೆ. ಆದುದರಿಂದ ಸರ್ಕಾರವು ಇಂತಹ ಕಾನೂನನ್ನು ಮೊದಲು ನಿರ್ನಾಮಗೊಳಿಸಬೇಕು. ಮತ್ತು ಕಚೇರಿಗಳಲ್ಲಿ ನೌಕರಿಗಳಲ್ಲಿ ಜಾತಿಭೇದವಿರದಂತೆ ಆಜ್ಞೆಮಾಡಬೇಕು. ಯಾರನ್ನೂ ಯಾವ ಜಾತಿಯವನೆಂದು ಕೇಳಲೇಬಾರದು. ಅಲ್ಲದೆ ಜಾತಿಭೇದವನ್ನು ನಿರ್ಮೂಲಮಾಡಲು ಯತ್ನಿಸುವವರಿಗೆ ತೊಂದರೆ ಕೊಡಬಾರದು. ಜಾತಿಯ ಕಾರಣದಿಂದ ಯಾರನ್ನೇ ಆಗಲಿ, ತಿರಸ್ಕಾರಭಾವದಿಂದ ಕಾಣುವವರಿಗೆ ಕ್ರೂರವಾದ ಶಿಕ್ಷೆಯಾಗಬೇಕು. ಊಟೋಪಚಾರದಲ್ಲಿರುವ ಪ್ರತಿಬಂಧವನ್ನು ದೂರಮಾಡುವುದರಿಂದ ಪರಸ್ಪರ ಪ್ರೇಮವು ಹೆಚ್ಚುವುದು, ಕಲಹಗಳು ನಿಲ್ಲುವುವು. ಹಿಂದು-ಮುಸಲ್ಮಾನರು ಭಾರತೀಯರಂತಿರುವರು. ಧಾರ್ಮಿಕವಿಚಾರಗಳು, ಪೂಜಾವಿಧಿಗಳು ಪ್ರತ್ಯೇಕವಾಗಿದ್ದರೂ ಇವರು ಒಬ್ಬರೊಡನೊಬ್ಬರು ಕಾದಾಡುವುದಿಲ್ಲ. ಎಲ್ಲರ ರಾಷ್ಟ್ರವೂ ಒಂದೇ, ಎಲ್ಲರ ಹಿತವೂ ಒಂದೇ ಆಗುವುದು.

ಈಗ ಹಿಂದುವು ಮುಸಲ್ಮಾನನನ್ನೂ, ಮುಸಲ್ಮಾನನು ಹಿಂದುವನ್ನೂ ಭಯದಿಂದ ನೋಡುತ್ತಿದ್ದಾನೆ. ಇಂಗ್ಲಿಷರ ಭಯವಿಲ್ಲದೆ ಇದ್ದಿದ್ದರೆ, ನಾಯಿ-ಬೆಕ್ಕುಗಳಂತೆ ಕಚ್ಚಾಡುತ್ತಿದ್ದರೋ ಏನೋ! ಭಾರತದ ಮುಸಲ್ಮಾನರು ವಂಶದ ದೃಷ್ಟಿಯಿಂದ ನೂರಕ್ಕೆ ೯೦ ರಷ್ಟು ಹಿಂದುಗಳೇ! ಇಂದಿನ **ಖಾಲಿದ್ ಲತೀಫ್ ಗೋಬಾನು** ೪ ವರ್ಷಗಳ ಹಿಂದೆ **ಕನ್ಹಯ್ಯಾಲಾಲ್** ಗೋಬಾ ಆಗಿದ್ದನು. **ಸರ್ ಮಹಮದ್ ಇಕ್ಬಾಲ್, ಡಾ. ಸೈಫುದ್ದೀನ್ ಕಿಚ್ಲು, ಮೌಲಾನಾ ಮಹಮದ್** ಅಲಿ, **ಶೌಕತ್** ಅಲಿ, ಮಿ. **ಜಿನ್ನಾ** ಇವರೆಲ್ಲರ ಪೂರ್ವಜರು ಹಿಂದುಗಳೇ ಆಗಿದ್ದರು. ಅವರೆಲ್ಲರೂ ಅರಬಸ್ಥಾನದಿಂದ ಬಂದವರಲ್ಲ. ಅಫ್‌ಘಾನಿಸ್ತಾನದ ನೂರರಲ್ಲಿ ೯೦ ಜನರು ಹಿಂದು, ಬೌದ್ಧರಿದ್ದರು. ಹಿಂದು ಮುಸಲ್ಮಾನರ ಹಿತಗಳು ಒಂದಾದಮೇಲೆ, ಮಹಾವೀರದಳ, **ರಾಷ್ಟ್ರೀಯ ಸ್ವಯಂಸೇವಕರ ಸಂಘ, ಖಾಕ್ಸಾರ್, ಅಹರಾರ್ ಆದಿ** ಸಂಸ್ಥೆಗಳ ಆವಶ್ಯಕತೆಯೇ ಇರುವುದಿಲ್ಲ. ಬ್ರಾಹ್ಮಣರು ಬ್ರಾಹ್ಮಣರ ಹೊರತು ಇತರರನ್ನು ನೀಚರೆಂದು ತಿಳಿಯುವತನಕ, ಈ ಸಾಂಪ್ರದಾಯಿಕ ಸಮಸ್ಯೆಯು ಬಗೆಹರಿಯುವುದೇ ಇಲ್ಲ: ದೇಶವು ಸುಖಿಯಾಗುವುದಿಲ್ಲ, ಶಾಂತಿ ಮತ್ತು ಸ್ವಾತಂತ್ರ್ಯಗಳು ಕನಸೇ ಆಗುವುವು.

ಆದುದರಿಂದ ಎಲ್ಲ ದೇಶಹಿತೈಷಿಗಳೂ, ಜಾತಿಭೇದವನ್ನು ಮೂಲೋತ್ಪಾಟನಮಾಡಲು ತಮ್ಮ ಸರ್ವಶಕ್ತಿಯನ್ನೂ ವಿನಿಯೋಗಿಸಿ ಕೆಲಸಮಾಡಬೇಕಾದುದು ಅವರ ಪವಿತ್ರ ಕರ್ತವ್ಯವಾಗಿದೆ.

ಮನೆಗೊಂದು ಅಂದ-ಚೆಂದದ ಒಡವೆ ಅವಶ್ಯವಲ್ಲವೆ?
ದಣಿವಾರಿಸಿಕೊಳ್ಳಲು ಹಿತವಾದ ಆಸನವು ಬೇಕಲ್ಲವೆ?

ಹುಬ್ಬಳ್ಳಿಯ
ಸದ್ಗುರು ಉದ್ಯೋಗ ಮಂದಿರ
ಇವರು
ತಯಾರಿಸಿದ

ಸುಂದರ ಆಕಾರದ
ಸುಲಭ ಬೆಲೆಯ

‘ಸುಮನ’

ಕುರ್ಚಿಯನ್ನು
ಉಪಯೋಗಿಸಿರಿ.



★

ಮನವೊಪ್ಪುವ ಕೆಲಸಕ್ಕಾಗಿ ಇಲ್ಲಿಯೆ ಬನ್ನಿರಿ!

ಕುರ್ಚಿ, ಮೇಜು, ಕಪಾಟು, ಬಾಕು,
ಟೀಪಾಯ್, ಸೋಫಾಸೆಟ್ಟುಗಳು—
ಆದೇಶ—
ಯಾವುದೇ ತರದ ಹೊಸ ಮಾದರಿಯ ಕಟ್ಟಿಗೆಯ ಸಾಮಾನುಗಳನ್ನೂ ಶಾಸ್ತ್ರೀಯವಾಗಿ, ಯೋಗ್ಯಬೆಲೆಗೆ, ತಯಾರಿಸಿ ಕೊಡುವೆವು.

ಕರ್ನಾಟಕದಲ್ಲಿ ಔದ್ಯೋಗಿಕಶಿಕ್ಷಣ ಕೊಡುವ ಆದ್ಯ ಸಂಸ್ಥೆ! ಸ್ಕಾಲರಶಿಪ್ಪು ಕೊಟ್ಟು ಶಿಕ್ಷಣ ಕೊಡುವ ಹೊಸಯೋಜನೆಯ ಸೂಚಕ ಪತ್ರಿಕೆಯನ್ನು ಇಂದೇ ಪಡೆಯಿರಿ.

ಬಡಿಗತನದ
ಶಾಸ್ತ್ರೀಯ ಶಿಕ್ಷಣವು ನಮ್ಮಲ್ಲಿ ದೊರೆಯುವುದು.
ವಿವರಗಳಿಗಾಗಿ ಬನ್ನಿರಿ, ಇಲ್ಲವೆ ಬರೆಯಿರಿ.

ಶ್ರೀ ಸದ್ಗುರು ಉದ್ಯೋಗ ಮಂದಿರ,
ಸ್ಟೇಶನ್ ರೋಡ್,
ಹುಬ್ಬಳ್ಳಿ.

ಜೂನ್ ತಿಂಗಳಿಂದ ಹೊಸವರ್ಗಗಳು ಪ್ರಾರಂಭವಾಗುವವು. “ಸೂಚಕಪತ್ರ ಪ್ರವೇಶಪತ್ರ”ಗಳಿಗೆ ೧॥ ಆಣೆ ಸ್ಟಾಂಪಿನೊಡನೆ ಇಂದೇ ಬರೆಯಿರಿ.
ವ್ಯವಸ್ಥಾಪಕ.

ಉತ್ತಮ ಕೆಲಸ ಮಾಡುವ ಬಡಿಗರು ಬೇಕಾಗಿದ್ದಾರೆ; ಬೇಕಾದವರು ಅರ್ಜಿಮಾಡಿರಿ. ಅಥವಾ ಭೆಟ್ಟಿಯಾಗಿರಿ!

ಕುಡಿದ ಕಣ್ಣೀರು

(ಸಣ್ಣ ಕತೆ)

ಶ್ರೀ. ಚೇಂದ್ರೆ ಲಕ್ಷ್ಮಣರಾಯರು

ಉಪ್ಪೆಂದು ಹೀಗಳೆದು ಹೇಸಿಕೊಳ್ಳಬಹುದಾದ ಕಣ್ಣೀರನ್ನು, ಸುಧೆಯಂತೆ ಸವಿನೂಡಿ ಕುಡಿದ ಸೇತುವಿಗೆ ಅದರಲ್ಲಿ ಎಂತಹ ರುಚಿ ಸಿಕ್ಕಿದ್ದೀತು?

★

ಶಾಲೆಯ ಕೆಲಸ ಮುಗಿಸಿಕೊಂಡು ಆವೇ ಮನೆಗೆ ಬಂದಿದ್ದೆ. ಅಂದು ಬೆಳಗಿನಲ್ಲಿ ಬಂದುದೊಂದು ಪತ್ರ ಟೇಬಲ್‌ಮೇಲಿತ್ತು. ಕುರ್ಚಿಯ ಮೇಲೆ ಕುಳಿತು ಪತ್ರ ಒಡೆದು ಓದಿದೆ. ಅದು ನನ್ನೊಬ್ಬ ಸ್ನೇಹಿತನ ಪತ್ರ; ಈ ಪತ್ರಕ್ಕಾಗಿ ನಾನು ಎಂಟಾನೆಂಟು ದಿನಗಳಿಂದ ದಾರಿಕಾಯುತ್ತಲಿದ್ದೆ. ಒಬ್ಬರಲ್ಲಿ ಸಾಲ ಕೇಳಿದ್ದೆ, ' ಇಲ್ಲ ' ಎಂದು ಅದರಲ್ಲಿ ಉತ್ತರವಿತ್ತು. ಪತ್ರ ಮಡಿಸಿ ಕಿಸೆಯಲ್ಲಿಟ್ಟು, ಹಾಗೆಯೆ ಎದ್ದು ಕೋಟು ಟೊಪ್ಪಿಗೆ ತೆಗೆಯಹತ್ತಿದೆ. ತಲೆಯಲ್ಲಿ ಏನೇನೊ ವಿಚಾರ. ಅಂದೆಯೆ ನನ್ನ ಕ್ಲಾಸಿಗೆ ಇನ್‌ಸ್ಪೆಕ್ಟರರು ಬಂದು ಹೋಗಿದ್ದರು. ನಾನು ಕಲಿಸುವ ರೀತಿ ಅವರಿಗೆ ತೃಪ್ತಿಕರವೆನಿಸಲಿಲ್ಲ. ಬಿ. ಟಿ. ಗೆ ಹೋಗದಿದ್ದರೆ ಕೆಲಸ ನಿಲ್ಲಲಾರದೆಂದು ಹೆಡ್‌ಮಾಸ್ತರರು, ಒಬ್ಬನನ್ನೆ ಕರೆದು ಪರ್ಯಾಯವಾಗಿ ನನಗೆ ಸೂಚಿಸಿದ್ದರು. ಇದೇ ವಿಚಾರವೆ ಹಲವು ರೂಪ ತಳೆದು ದಾರಿಗುಂಟ ತಲೆಯಲ್ಲಿ ತಾಂಡವವಾಡುತ್ತಿದ್ದಿತು. ಬೆಳಗಿನಿಂದಲೂ ಒಂದು ಕಪ್ ಚಹಕೂಡ ಕುಡಿದಿರಲಿಲ್ಲ. ಶಾಲೆಗೆ ಹೋಗುವಾಗ, ಇನ್‌ಸ್ಪೇಕ್ಟರರು ಬರುವರೆಂದು ಅವಸರ ; ಹೋದಮೇಲೆ, ಕ್ಲಾಸು ಬಿಟ್ಟು ಕದಲಲೇ ಇಲ್ಲ. ತಲೆ ದಿಮುಗುಡಹತ್ತಿತು. ಆಗಾಗ ಸಣ್ ಸಣ್ ಎಂದು ತಲೆಯಲ್ಲಿ ಸಿಡಿಯುತ್ತಾ ಇತ್ತು. ಪತ್ರ ಮುಗಿಸಿದ ಮೇಲೆ ತಲೆನೋವು ಹೆಚ್ಚಾಯಿತು. ಎರಡೂ ಕೈಯ ಹೆಬ್ಬೆರಳುಗಳಿಂದ ಹಣೆಯ ಮಲುಕನ್ನು ಒತ್ತಿಕ್ಕಿ ಹಿಡಿದು, ಹಾಗೆಯೆ ಒಳಗೆ ಬಂದೆ. ಹೆಂಡತಿ ಮತ್ತು ತಾಯಿ ಅಡಿಗೆಮನೆಯಲ್ಲಿ ಇದ್ದರು. ತಾಯಿ ಅಡಿಗೆ ಮಾಡುತ್ತಿದ್ದಳು ; ಹೆಂಡತಿ ಸೀರೆ ಉಟ್ಟುಕೊಳ್ಳುತ್ತಾ ಇದ್ದಳು. ಅವ್ವನ ಮುಖ ಒಲೆಯ ಕಡೆಗಿತ್ತು. ನಾನು ಅಡಿಗೆಮನೆಯ ಬಾಗಿಲಲ್ಲಿ ಬಂದು ನಿಂತಾಗ ಆವಳು ನನ್ನನ್ನು ನೋಡಲಿಲ್ಲ. ಈಕೆ ' ಸುಮ್ಮಗಿರಿ ' ಎಂದು ಸನ್ನೆ ಮಾಡಿದಳು. ಅಲ್ಲೇ ಸ್ವಲ್ಪ ಸರಿದು ಮರೆಗೆ ನಿಂತೆ. ತಾಯಿಯ ಸಿಡಿನುಡಿ ಕೇಳಿಸಿತು : " ಒಯ್ಯಾರ ಮಾಡಿಕೊಂಡು ತಿರುಗಲಿಕ್ಕೆ ಬೇಕು....ಇಟ್ಟಾಳಲ್ಲ, ಅಡಿಗಿಯಾಕಿನ್ನs ಅಂತ ನನ್ನಿಲ್ಲೆ ! ಯಾವ ಬೋಕಾಣಿ ಬಂದರೂ ನಾನು ಡೀಕೋದೇನೂ ತಪ್ಪೂದಿಲ್ಲ! ಸೊಟ್ಟದೊಂದು ಮಾಸ್ತರಕೀಗೇ ಈಕೀ ದಿಮಾಕು ಇಷ್ಟು ; ಇನ್ನ ಗಂಡಗ ದೊಡ್ಡದೊಂದು ಕೆಲಸ ಸಿಕ್ಕಿದ್ದರ ಎಷ್ಟು ಮಾಡ್‌ತಿದ್ಲೊ ರಮಣಿ ! ಇನ್ನೂ ಸೀರೀ ಉಡೋ ಸಂಭ್ರಮಾನೇs ನಡದsದ.... ! ಗಂಡನ ಮುಂದ ತೋರಿಸಬೇಕಲ್ಲಾ ಫ್ಯಾಶನ್ನು.... ! "

ಅವ್ವ ಹೀಗೆ ನುಡಿಯುವಾಗ ಈಕೆಯು ಕಡೆಗೆ ನೋಡಿದಳು. ಆವಳಿಗೆ ಕಾಣಿಸಿದೆನೋ ಏನೋ ಎಂದು ನಾನು ಮುಂದೆ ಬಂದೆ. " ಏನು, ಆಯಿತೇನು ? ಈಕೆ ಎಲ್ಲಿ ಹೋಗಿದ್ದಳು ಮುಂಜಾನೆ ? " ಎಂದು ಅವ್ವನ ಹತ್ತಿರ ಹೋಗಿ ಕೇಳಿದೆ.

" ಆಕಿನ್ನs ಕೇಳು ! ನನಗ ಹೇಳಿ ಹೋಗತಿದ್ದರ ಗೊತ್ತಿರಬೇಕು ! ಮನಸಿಗೆ ಬಂದಲ್ಲೆ ಹೋಗತಾರ....ಮನಸಿಗೆ ಬಂದಲ್ಲೆ ಕೂಡತಾರ! ನನಗ ಹೇಳಿ ಹೋಗಲಿಕ್ಕೆ ನಾಯಾರು ಆಕಿಗೆ ? ಇದ್ದೀಯಲ್ಲ, ಮಾಡಿಕೊಂಡ ಗಂಡ !···· ನೀನೇ ಕೇಳು ! "

" ಅತ್ತೆಯವರಿಗೆ ಹೇಳೇ ಹೋಗಿದ್ದೆ. ರುಕ್ಮಿಣಿಗೆ ಪಥ್ಯದ ಅಡಿಗೀ ಮಾಡಿ ಹಾಕಿ ಬಂದೆ. ಆಕೆಯ ಗಂಡ ಊರಲ್ಲಿಲ್ಲ ! " ನಾನು ಕೇಳದಲೆ ಆಕೆ ತಾನಾಗಿ ಉತ್ತರಕೊಟ್ಟಳು.

" ಮನೀ ಕೆಲಸಾ ಬಿಟ್ಟು, ಈ ಊರ ಉಸಾಬರಿ ಯಾತಕ್ಕ ಬೇಕಾಗಿದ್ದೀತಪ್ಪಾ— ಈಕಿಗೆ ? ನೀನs ನೋಡು, ಮಂದಿಗೆ ಉಪಕಾರಮಾಡಲಿಕ್ಕೆ ಹೋಗ್ತ್ಯಾಳ ! ಇದ್ದೇನಲ್ಲಾ ಮನ್ಯಾಗ···· ಕತ್ತೀಹಾಂಗ ದುಡೀಲಿಕ್ಕೆ ! "

" ನಾ ಬಂದು ಮಾಡತಿದ್ದೆ ಅಡಿಗೀನ ! "

" ಈಗ ಮಾಡ್ತಾ ಇದ್ದೀಯಲ್ಲಾ ! "

ನನಗೆ ಅದೇನೋ ಹುಚ್ಚುಸಿಟ್ಟು ಬಂದು ಬಿಟ್ಟಿತು. ಮೂಲೆಯಲ್ಲಿ ಬಟ್ಟೆ ಒಣಹಾಕುವ ಕೋಲಿತ್ತು ; ಅದರ ಕಡೆ ದೃಷ್ಟಿ ಹೋಯಿತು. ಎರಡೇಟು ಹಾಕಿ ಬಿಡಬೇಕೆಂದು ತಲೆಯಲ್ಲಿ ಒಂದು ವಿಚಾರ ಬಂದುಬಿಟ್ಟಿತು. ಕೋಲನ್ನು ತಕ್ಕೊಂಡೆ, ಅದನ್ನು ನೋಡಿ ಆಕೆ ನಡುಮನೆಗೆ ಓಡಿಹೋದಳು. ನಾನೂ ಬೆನ್ನಟ್ಟಿ ಹೋಗಿ ಚೆನ್ನಾಗಿ ಎರಡೇಟು ಸೆಳೆದೆ, ಬೆನ್ನಮೇಲೆ ಬಿದ್ದುವು. ಮತ್ತೆ ಎರಡೇಟು ಬಿಗಿದೆ ; ಒಂದು ರಟ್ಟೆಯಮೇಲೆ, ಇನ್ನೊಂದು ಕಾಲಿನಮೇಲೆ ಬಿದ್ದುವು. ನೆಲಕ್ಕೆ ಬಿದ್ದು ಅಳತೊಡಗಿದಳು.

ನಾಲ್ಕೈದು ಏಟು ಹೊಡೆಯುವವರೆಗೆ ಅವ್ವ ಒಲೆಯ ಮುಂದೆಯೆ ಕುಳಿತಿದ್ದಳು. ಆಕೆ ಒದ್ದಾಡಿ ಚೀರಿ ಅಳಹತ್ತಿದ ಮೇಲೆ, ಮುಸುರೆಯ ಕೈಯಿಂದ ಹಾಗೆಯೆ ಹೊರಗೆ ಬಂದು, " ಏನೋ ಹುಚ್ಚು XX ಗಂಡಾ, ಹೀಗೆ ಹೊಡೆದರೆ ? ಬುದ್ಧಿಯನ್ನ ಎಲ್ಲಿಟ್ಟಿದ್ದಿ ? ತಪ್ಪು ಮಾಡಿದರೆ ಸಿಟ್ಟು ಮಾಡಬೇಕು; ಬಾಯಿಂದ ಬೆದರಿಸಬೇಕು ! ಹೊಡೆಯುವಾಗ ಎಲ್ಲಾದರೂ ಬಡೀತು,

ಏನಾದರೂ ಆಯ್ತು ಅಂದರೆ, ವಿನಾಕಾರಣ ಅಪವಾದಕ್ಕೆ ನಾನು ಗುರಿ! ನಾ ಒಬ್ಬಾಕಿ ಇದ್ದೀನಿ ಅಂತ ಇವೆಲ್ಲಾ ಬರ್ತಾವ. ಇಬ್ಬರೂ ರಾಜಾ-ರಾಣೀ ಹಾಂಗ ಇದ್ದರ ಸೆಟ್ಟಗಾಗತಿತ್ತು. ದೇವರು ಒಯ್ಯುವೊಲ್ಲ ನನ್ನ....ಯಾಕಿಟ್ಟಾನೊ ಇನ್ನೂ!" ಎಂದು ಅವ್ವ ಅಳತೊಡಗಿದಳು. ಕೋಲನ್ನು ಅಲ್ಲಿಯೇ ಒಗೆದು, ನಾನು ಹೊರಗೆ ಬಂದು ಕುಳಿತೆ.

ತಲೆಯಲ್ಲಿ ಯೋಚನೆಯೊಂದು ಸುಳಿಯಿತು:— ಮನೆಯಲ್ಲಿರ ಬಾರದೆಂದು. ಸದ್ದುಮಾಡದೆ ಕೋಟು ಟೊಪ್ಪಿಗೆ ಹಾಕಿಕೊಂಡು ಹಾಗೆಯೆ ಹೊರಟುಬಿಟ್ಟೆ. ಅಳುತ್ತಿರುವ ಧ್ವನಿ ಕೇಳಬರು ತ್ತಿತ್ತು. ಅವ್ವ ಏನೇನನ್ನೋ ಒಟಗುಡುತ್ತ ಚಹಾತಿ ಲಟ್ಟಿಸುತ್ತಿದ್ದಳು.

ನೇರವಾಗಿ ಕಟ್ಟೀ ರಾಮೂನ ಮನೆಗೆ ಬಂದೆ. ಬಾಗಿಲನ್ನು ಮುಂದೆ ಮಾಡಿತ್ತು. ಅವನನ್ನೇನೂ ಕೂಗಲಿಲ್ಲ. ಹಾಗೆಯೆ ಮುಂದೆ ಹೊರಟೆ. ಹಾದಿಯುದ್ದಕ್ಕೂ ತಲೆಯಲ್ಲೆಲ್ಲ ವಿಚಾರವೇ ವಿಚಾರ: "ನಾನು ಹೆಂಡತಿಯನ್ನು ಯಾಕೆ ಹೊಡೆದೆ?....ರುಕ್ಮಿಣಿ ಆಕೆಯ ಗೆಳತಿ; ಪಾಪ, ಕಾಯಿಲೆ ಇದ್ದಳು.... ಆಕೆಯ ಗಂಡ ಊರಲ್ಲಿರಲಿಲ್ಲ....ಹೋಗಿದ್ದಾಳು ಪಥ್ಯದ ಅಡಿಗೆ ಮಾಡಲಿಕ್ಕೆ.... ಇದರಲ್ಲಿ ತಪ್ಪೇನು? ಅನುವು ಆಪತ್ತುಗಳಲ್ಲಿ ಒಬ್ಬರಿಗೊಬ್ಬರ ನೆರವು ಬೇಕೇಬೇಕು....ತಾಯಿ ಊರಲ್ಲಿಲ್ಲದಾಗ, ತಿಂಗಳಿಗೆ ನಾಲ್ಕು ದಿನ ತಪ್ಪದೆ – ನಾವು ಅವರಲ್ಲಿ ಉಂಡು ಬರಲಿಲ್ಲವೇನು? .... ಈಗ ಆಕೆಗೆ ಪಥ್ಯ ಮಾಡಿಹಾಕಿದರೆ ಅವ್ವನಿಗೆ ಸಿಟ್ಟು ಬಂತು....ಯಾಕೋ? ಪರರು ನಮಗೆ ಸಹಾಯ ಮಾಡಿದರೆ ಬೇಕು; ನಾವು ಮಾಡುವು- ದಾದರೆ ಬೇಡ.... ತನ್ನನ್ನು ಕೇಳಿ ಹೋಗಲಿಲ್ಲಾ- ಎಂದು ಇದೆಲ್ಲ ಸಿಟ್ಟು.... ತಾಯಿ ಎಂದು ಆವಳ ಮೇಲೆ ನನ್ನ ಪ್ರೀತಿ. ಆದರೆ ಆಕೆ ಅತ್ತೆಯಾದಾಗ ಮಾತ್ರ ನನ್ನ ತಲೆ ಕಾಯುತ್ತದೆ. ಒಂದೇ ಕರುಳು; ಆದರೆ ಬಣ್ಣ ಎಷ್ಟು? ಮನೆಯಲ್ಲಿರುವವರು ನಾವು ಮೂರು ಜನ. ನಾನು ಹೆಂಡತಿಯನ್ನು ಪ್ರೀತಿಸಬಲ್ಲೆ; ಅಷ್ಟೇ ತಾಯಿಯನ್ನೂ ಪ್ರೀತಿಸಬಲ್ಲೆ. ಆದರೆ ತಾಯಿಯ ರೀತಿ ಹಾಗಿಲ್ಲ. ಇಬ್ಬರ ಮೇಲಿನ ಪ್ರೀತಿ ಎರಡು ವಿಧ! ತಾನು ಮಗನನ್ನು ಪ್ರೀತಿಸಬೇಕು, ಮಗ ತನ್ನನ್ನು ಪ್ರೀತಿಸಬೇಕು. ಸೊಸೆಯೊ-ಆಕೆ ಯಾವಾಗಲೂ ತನಗೆ ಅಂಕಿತಳಾಗಿರಬೇಕು. ಇದರಲ್ಲಿ ಸ್ವಲ್ಪ ವ್ಯತ್ಯಾಸವಾಯಿತೊ, ದೇವ್ವ ಸೇರಿತೇ ಮೈಯಲ್ಲಿ! ಸೊಸೆಯೆಂದರೆ ಇವರ ತಿಳಿವಳಿಕೆ ಏನಿದೆಯೊ!...."

ಹೀಗೆ ಏನೇನೋ ವಿಚಾರತರಂಗಗಳು ತಲೆಯಲ್ಲಿ ಬಂದು ಹೋಗುತ್ತಲಿದ್ದುವು. ಎಲ್ಲಿಗೆ ಹೊರಟಿದ್ದೆನೊ ನನಗೇ ಗೊತ್ತಿದ್ದಿಲ್ಲ. ಅಷ್ಟರಲ್ಲಿಯೆ ಊಟದ ಹೋಟೆಲ್ಲಿನ ಬೋರ್ಡನ್ನು ಕಂಡೆ. ಮನಸ್ಸಿನಲ್ಲಿ ಬಂತು— ಇಲ್ಲಿಯೇ ಊಟ ಮಾಡಬೇಕೆಂದು. ಒಳಗೆ ಹೋದೆ. ಎಲೆ ಬಡಿಸಿದ್ದಿತು. ಊಟಕ್ಕೆ ಕುಳಿತೆ. ಒಬ್ಬ ಗುರುತಿನವರು ಕೇಳಿದರು:

"ಇದೇನು, ಇಲ್ಲಿಯ ಊಟ ಯಾಕೆ ಬಂತು ನಿಮ್ಮ ಪಾಲಿಗೆ?"

"change (ಚೇಂಜ್) ಅಂತ ಬಂದಿದ್ದೇನೆ!"

"ಅಂತೂ ಮನೆಯ ಊಟ ಕೂಡಾ ಒಮ್ಮೊಮ್ಮೆ ಬೇಸರ ಬರ್ತದೆ ಅನ್ರಿ!"

"ಒಮ್ಮೊಮ್ಮೆ ಎಲ್ಲದರದೂ ಬೇಸರ ಬರ್ತದೆ! ಮನೆಯ ಊಟ ಪಷ್ಟೇ ಯಾಕೆ. ಮಾಡಿಕೊಂಡ ಹೆಂಡತಿ, ಹಡೆದ ತಾಯಿ, ಹುಟ್ಟಿ ಬೆಳೆದ ಮನೆ— ಯಾವುದೂ ಬೇಡವೆನಿಸುತ್ತದೆ!"

"ತಾಯಿಯ ವಿಷಯ ನಾವು ಒಪ್ಪಬಹುದು. ಆದರೆ ಹೆಂಡತಿ ಅದರಲ್ಲಿಯೂ ಹೊಸ ಹೆಂಡತಿ ಬೇಸರಾಗುವದನ್ನು ನಾನೆಲ್ಲಿಯೂ ಕೇಳಿಲ್ಲ!"

"ನನ್ನ ಅನುಭವ ನಾನು ಹೇಳಿದೆ! ಅದಿರಲಿ, ಈವೊತ್ತೇನು ಯುದ್ಧದ ಸುದ್ದಿ?"

ನಡೆದಿದ್ದ ವಿಷಯ ಮುಂದೆ ಸಾಗಿಸುವ ಮನಸ್ಸಿರಲಿಲ್ಲ; ಯುದ್ಧದ ವಿಷಯವನ್ನು ತೆಗೆದೆ. ಊಟದ ಕಡೆಗೆ ಲಕ್ಷ್ಯವೇ ಇರಲಿಲ್ಲ. ಹಾಗೂ ಹೀಗೂ ನಾಲ್ಕು ತುತ್ತು ಹೊಟ್ಟೆಯಲ್ಲಿ ಹಾಕಿದೆ. ಹೊರಗೆ ಬಂದು ಬಾಕಿನ ಮೇಲೆ ಕುಳಿತು ಪೇಪರನ್ನು ಓದಿದೆ. ಎಲ್ಲ ಮುಗಿಯಿತು. ಎದ್ದವನೇ ಮತ್ತೆ ರಾಮೂನ ಮನೆಗೆ ಬಂದೆ. ಬಾಗಿಲು ಇಕ್ಕಿತ್ತು. ಕೂಗಿದೆ; ಎದ್ದು ಬಂದು ರಾಮು ಬಾಗಿಲನ್ನು ತೆರೆದ. ಆತನಿಗೆ ಆಶ್ಚರ್ಯವಾಯಿತು; ಕೇಳಿದ:—

"ಏನೋ ಈಗ ಬಂದೆ? ಬಾ,— ಊಟ?

"ಎಲ್ಲ ಮುಗಿದಿದೆ. ಮನೆಯಲ್ಲಿ ಬೇಜಾರು ಬಂತು, ಬಂದೆ!"

"ದಿನಾಲು ಬರುವುದಿಲ್ಲ; ಇಂದೇ ಯಾಕೆ ಬಂತಪಾ?"

"ಕಾರಣ ಗೀರಣ ಕೇಳಬೇಡ. ಅದನ್ನು ಮತ್ತೆಂದಾದರೂ ಹೇಳುವೆನಂತೆ. ಈಗ ಬೇರೆ ಏನಾದರೂ ಹರಟೆ ಹೊಡೆಯೋಣ!"

"ಹೋಗಲಿ ಬಿಡು, ವಿಶೇಷವೇನೂ ಇಲ್ಲ, ಹೌದಲ್ಲೊ?"

"ಇಲ್ಲ; ಇಂದು ಶಾಲೆಯಲ್ಲಿ ಇನ್‌ಸ್ಪೆಕ್ಶನ್ ಇತ್ತು– ನನ್ನ ಬಗ್ಗೆ ಇನ್ಸ್ಪೆಕ್ಟರರ ರಿಮಾರ್ಕ್ಸ ನೆಟ್ಟಗಿಲ್ಲ!"

"ಇಷ್ಟೇನೇ? ಅದಕ್ಕ ಇಷ್ಟೊಂದ್ಯಾಕ ಮನಸಿಗೆ ಹಚ್ಚಿಗೊಂಡಿದೀ? ಬಹಳಾದರೆ ನವಕರಿಗೆ ಬ್ಯಾಡಂದಾರು! ಅಂದಾಗ ವಿಚಾರ ಮಾಡೀಯಂತ!"

ಅಂದು ರಾಮೂನಿಗೆ ಇನ್‌ಸ್ಪೆಕ್ಶನ್ ವಿಷಯವನ್ನಷ್ಟೆ ಹೇಳಿದೆ; ಉಳಿದ ಮಾತುಗಳನ್ನು ಹೇಳಲಿಲ್ಲ. ಬೇರೆ ಬೇರೆ ವಿಷಯ ಮಾತಾ ಡುತ್ತಾ ಇರುವಾಗಲೆ ಜಂಪು ಹತ್ತಿತು. ಅಂದು ಮಧ್ಯಾಹ್ನ ರಜೆ ಇತ್ತು. ಅದೊಂದು ಚಿಂತೆ ಇರಲಿಲ್ಲ. ರಾಮು ಚಹನಾಡಿ ನನ್ನನ್ನೆಬ್ಬಿಸಿದ. ಇಬ್ಬರೂ ಜೊತೆಗೂಡಿ ಚಹ ಕುಡಿದೆವು. 'ಕ್ಲಬ್ಬಿಗೆ ಹೋಗೋಣ' ಎಂದು ರಾಮು ನುಡಿದ. ನನಗೆ ಅದು ಬೇಕಾಗಿರ ಲಿಲ್ಲ. 'ಹಾಗಾದರೆ ಸಿನೆಮಾಕ್ಕೆ ಹೋಗೋಣ' ಎಂದು ಇನ್ನೊಂದು ಹಾದಿಯನ್ನು ಸೂಚಿಸಿದ. ಒಪ್ಪಿದೆ. ಇಬ್ಬರೂ ಹೋದೆವು. ಚಿತ್ರ ನಡೆದಾಗ ಹಲವು ಸಲ ನನಗೆ ಮನೆಯ ನೆನಪಾಯಿತು. 'ತಾಯಿ ಏನು ಮಾಡುತ್ತಿರಬಹುದು? ಹೆಂಡತಿ ಉಂಡಿರಬಹುದೊ ಅಥವಾ ಹಾಗೇ ಅಳುತ್ತ ಕುಳಿತಿರಬಹುದೊ?' ಇತ್ಯಾದಿ. ಆದರೆ ಬಹಳ ಹೊತ್ತು ಈ ವಿಚಾರವನ್ನು ತಲೆಯಲ್ಲಿ ಇಟ್ಟುಕೊಳ್ಳುತ್ತಿರಲಿಲ್ಲ.

ಸಿನೆಮಾ ಮುಗಿದಮೇಲೆ, ರಾಮೂನ ಜತೆಗೆ ಅವನ ಮನೆಗೆ ಹೋಗಿ ಅಲ್ಲಿಯೆ ಉಂಡು ಮಲಗಬೇಕೆಂದೆನಿಸಿತು ; ಆದರೆ ಅದು ಸರಿದೋರಲಿಲ್ಲ. ಮನೆಗೆ ಬಂದೆ ; ಬಾಗಿಲು ಮುಚ್ಚಿತ್ತು. ಸಂದಿಯೊಳಗಿಂದ ನೋಡಿದೆ, ದೀಪಕಾಣುತ್ತಿತ್ತು. ಯಾರ ಸುಳಿವೂ ಇರಲಿಲ್ಲ. ಸ್ವಲ್ಪ ಹೊತ್ತು ಹಾಗೆಯೆ ನಿಂತೆ. ಐದು ನಿಮಿಷವಾಯ್ತು, ಹತ್ತು ನಿಮಿಷವಾಯ್ತು. ಕೊನೆಗೊಮ್ಮೆ 'ಅವ್ವಾ' ಎಂದು ಕೂಗಿದೆ. ಅವ್ವ ಬರಲಿಲ್ಲ ; ಈಕೆ ಬಂದಳು.

" ಯಾರವರು ? " ಎಂದು ಕೇಳಿದಳು.

' ನಾನು ' ಎಂದೆ.

ಬಾಗಿಲು ತೆರೆಯಿತು. ಅವಳ ಮೋರೆ ನೋಡಿದೆ ; ಅತ್ತು ಅತ್ತು ಕಣ್ಣು ಮೂಗು ಕೆಂಪಗೆ ಆಗಿದ್ದುವು. ಮಾತನೇನೂ ಆಡದೆ ಒಳಗೆ ಹೋಗಿ ಬಿಟ್ಟಳು. ಮೈಮೇಲಿನ ಬಟ್ಟೆತೆಗೆಯುತ್ತಿರುವಾಗಲೆ ಕೇಳಿದೆ:

" ಅವ್ವ ಎಲ್ಲಿ ? "

" ನನಗೆ ಗೊತ್ತಿಲ್ಲ ; ನೀವು ಹೋದಮೇಲೆ ತುಸು ಹೊತ್ತಿಗೆ ಅವರೂ ಹೋದರು ! ಇದುವರೆಗೂ ಬಂದಿಲ್ಲ" ಒಳಗಿಂದ ಉತ್ತರ ಬಂದಿತು.

ಐದು ನಿಮಿಷ ಹಾಗೆಯೆ ಕುಳಿತೆ. ವಿಚಾರ ಬಂತು : 'ತಾಯಿ ಎಲ್ಲಿ ಹೋಗಿದ್ದರೂ ಕರೆದುಕೊಂಡು ಬರಬೇಕು' ಎಂದು. ಹಾಗೆಯೆ ಎದ್ದೆ ; ಹೊರಟು ಬಿಟ್ಟೆ. ಹೆಂಡತಿ ಏನೋ ಅಂದ ಹಾಗಾಯ್ತು. ಅದು ನನಗೆ ನೆಟ್ಟಗೆ ಕೇಳಬರಲಿಲ್ಲ.

* * *

ಊರಲ್ಲಿ ನಮಗೆ ಆಪ್ತರ ಮನೆ ಎಂದರೆ ಒಂದೇ, ಶ್ಯಾಮಣ್ಣ ನಾಯಕರದು. ಅವರ ಮನೆಗೂ ನಮ್ಮ ಮನೆಗೂ ಒಂದುವರೆ ಮೈಲು ದೂರ. ರಾತ್ರಿ ಸುಮಾರು ಹತ್ತುಗಂಟೆ ಆಗಿತ್ತು. ಇಪ್ಪತ್ತು ನಿಮಿಷದಲ್ಲಿ ಅವರ ಮನೆಗೆ ಬಂದೆ. ಎಲ್ಲರೂ ಊಟಕ್ಕೆ ಕುಳಿತಿದ್ದರು. ನನ್ನ ವಿಷಯವಾಗಿಯೆ ಮಾತು ನಡೆದಿತ್ತು. ನೇರವಾಗಿ ಭೋಜನ ಶಾಲೆಗೆ ಹೋದೆ. " ಸೇತೂ ಬಂದೇ ಬಿಟ್ಟನಲ್ಲ ! " ಎಂದು ಶ್ಯಾಮಣ್ಣವರ ಹೆಂಡತಿ ಎಂದರು. ಎಲ್ಲರೂ ನನ್ನ ಕಡೆಗೆ ನೋಡಿದರು. " ಒಂದು ಮಣೆ ಕೊಡು ಅವನಿಗೆ " ಎಂದು ಶ್ಯಾಮಣ್ಣವರು ಹೆಂಡತಿಗೆ ಹೇಳಿದರು. ಮಣೆ ಹಾಕಿದರು, ಕುಳಿತೆ.

" ಅಲ್ಲೋ ಸೇತೂ, ಏನಪಾ ಇದು.... ನೀನು ಹೀಗೆ ಮಾಡ್ತಾ ಇರೋದು ? ತಾಯಂದಿರು ಮಕ್ಕಳನ್ನ ಬೇಡೋದ್ಯಾತಕ್ಕ ? ಮುಪ್ಪಿನ ಕಾಲಕ್ಕ ನೋಡಬೇಕೂ ಅಂತಲ್ಲs ? ಹೆಣ್ತೀ ಮ್ಯಾಲೆ ಪ್ರೀತಿ ಮಾಡು ; ಆದರ ತಾಯಿನ್ನ ಮರೀಬ್ಯಾಡ....ತಿಳೀತೇನು ? ಆಕೆಯದು ಮುಪ್ಪಿನಕಾಲ, ಬಹಳಾದರ ಇನ್ನು ನಾಕಾರು ವರ್ಷ ಇದ್ದಾಳು ! ಮೇಲಿನವರ ಕರೆಬಂದರೆ ಅದಕ್ಕೇನೂ ತಡಹಿಡಿಯುವದಿಲ್ಲ....... ! "

" ಮಾವಾ, " ನಾನು ನಡುವೇ ಹೇಳಿದೆ. " ನನ್ನ ಸ್ವಭಾವ ನಿಮಗ ಗೊತ್ತದ ! ನಾವು ಮೂರೂ ಜನ ಅನ್ಯೋನ್ಯವಾಗಿರಬೇಕು; ಯಾರೂ ಯಾರಮೇಲೂ ಅಧಿಕಾರ ನಡೆಯಿಸಬಾರದು. ಅವ್ವ ಹ್ಯಾಗೆ ನಮ್ಮ ಮನೆಗೆ ಬಂದಿದ್ದಾಳೊ, ಹಾಗೇ ಹೆಂಡತಿಯೂ ಬಂದಿದ್ದಾಳೆ. ಅಧಿಕಾರದ ಪ್ರಶ್ನೆ ಬಂದರೆ ಎಲ್ಲರೂ ಅಷ್ಟೆ ! " ನಾನು ಮೆಲ್ಲಗೆ ಹೇಳಿದೆ.

ಅವ್ವನಿಗೆ ನನ್ನ ಮಾತು ಸೇರಿಕೆ ಬರಲಿಲ್ಲ. ಆಕೆಗೆ ಏನೋ ಎನಿಸಿತು. " ಶ್ಯಾಮಾ, ಯಾಕಪ್ಪಾ ಇದೆಲ್ಲಾ ರಗಳೆ ! ನನ್ನ ಹಣೇಬಾರದಲ್ಲಿ ಮಗನ ಸುಖಾ ಬರೆದಿಲ್ಲ. ಅದಕ್ಕೂ ಪುಣ್ಯಾ ಮಾಡಿ ಬಂದಿರಬೇಕು. ಇಲ್ಲದ್ದನ್ನು ಬೇಡಿದರ ಹ್ಯಾಂಗ ಬಂದೀತು? ಹೇಣ್ತಿ ಬರೋತನಕಾ ತಾಯಿ ಬೇಕಾಗಿತ್ತು. ಈಗ ಹೇಣ್ತಿ ಬಂದ್ಲು, ನವಕರಿ ಸಿಕ್ಕಿತು; ತಾಯಿ ಈಗ ಬೇಕ್ಯಾತಕ್ಕ ನೋಡು ! ನಾ ಇದ್ದರ ಮನಸ್ಸಿಗೆ ಬಂದ್ಹಾಂಗ ಇರಲಿಕ್ಕೆ ಬರೂದಿಲ್ಲ ! ಈಗ ಆರು ತಿಂಗಳಾಯ್ತು. ಒಂದು ದಿನ ಏನೂ ಗಳಿಗಿಹೊತ್ತು ಕೂತು, ಸಂತೋಷದಿಂದ ನನ್ನ ಜೊತೀಗೆ ಇಂವ ಮಾತಾಡಿಲ್ಲ. ನಾ ಇಲ್ಲದಾಗ ಹೆಣ್ತೀ ಜೋಡಿ ಕುಚುಕುಚು ಹಾಂಗs ಹಚ್ಚಿರತಾನ ! ನಾ ಇದ್ದೆನಂದರ ಇಬ್ಬರ ಬಾಯಿಗೂ ಬೀಗ ಬೀಳ್ತಾವ ! ನಾ ಏನಪ್ಪಾ ಇಂಥಾ ತಪ್ಪು ಮಾಡಿರೋದು ? ಇವತ್ತು ಹೆಣ್ತೀನ್ನ ಹೊಡೆದ. ಯಾಕ ?.... ಅವಳ ತಪ್ಪೂ ಅಂತಲ್ಲ ; ನನ್ನ ಮ್ಯಾಲಿನ ಸಿಟ್ಟು ಅದಕ್ಕ ಕಾರಣ !"

" ಸುಮಕ್ಕಾ, ಸೇತೂ ಏನೂ ಅವಿವೇಕಿ ಅಲ್ಲ. ತಿಳಿದಂವ ಇದ್ದಾನ ;.... ಹೊಸತಾಗಿ ಹೇಣ್ತಿ ಮನೀಗೆ ಬಂದ್ಲೂ ಅಂದರ ಸ್ವಲ್ಪ ತಪ್ಪು ಆಗೂದು ಸ್ವಾಭಾವಿಕ ; ಹಿರೇರು ಸಹನ ಮಾಡಬೇಕು. ಈಗಿನ ಹುಡುಗರ ಮನಸ್ಸು ಒಂದು ರೀತಿ. ಹೆಣ್ತೀ ಮ್ಯಾಲೆ ತಮ್ಮ ಹೊರತು ಬೇರೆ ಯಾರೂ ಅಧಿಕಾರ ನಡಿಸಬಾರದೂ ಅಂತ ಇವರಿಗೆ ಅನಿಸ್ತಾ ಇರ್ತsದ. ತಾವು ಹೆಣ್ತೀನ್ನ ಬೇಕಾದ್ಹಾಂಗ ನಡೆಸಿಕೊಳ್ಳಬಹುದು ; ಆದರ ಹಿರೇರು ಇವರ ಹೆಂಡಂದಿರಿಗೆ ಒಂದು ಮಾತಾಡಿದರ ಇವರ ಪಿತ್ತ ತಲೀಗೇರ್‍ತsದ ! ನಾವು ಗಂಡಸರು ಇದನ್ನ ತಿಳಕೊಂಡು, ಬೇಕಾದ ಬದಲಾವಣೀ ಮಾಡಿಕೋತೀವಿ ! ನಿಮಗೆ ತಿಳೀಬೇಕಾದರ ತಡಾ ಹಿಡೀತದ ! ಸುಮಕ್ಕಾ, ನಾನು ಒಂದು ಮುಖ್ಯ ಮಾತು ಹೇಳ್ತಿನಿ : ಮಗಾ ಪ್ರಾಯಕ್ಕ ಬಂದಾ ಅಂದರ ತಂದೀ ಅಧಿಕಾರ ಹೋಯ್ತು ; ಮನೀಗೆ ಸೊಸೀ ಬಂದ್ಲೂ ಅಂದರ ತಾಯಿದೂ ಅಧಿಕಾರ ಹೋಯ್ತು ! "

" ನನಗ್ಯಾಕ ಇವೆಲ್ಲಾ ಅಧಿಕಾರಾ-ಪಧಿಕಾರಾ ! ನಮಗವು ತಿಳಿಯೋದೂ ಇಲ್ಲ, ಅದರ ಹಾಂಗ ನಡಿಯೋದೂ ನಮ್ಮಿಂದ ಆಗೋದಿಲ್ಲ. ಎಲ್ಲಾದರೂ ' ಒಂದು ತೀರ್ಥಕ್ಷೇತ್ರ ನೋಡಿ ಕಳಿಸಿ ಬಿಡು ! ರಾಮಾ ಕೃಷ್ಣಾ ಅಂತ ಕಾಲಾ ಕಳೀತಿನಿ ! ಯಾಕಪ್ಪಾ, ಇದೆಲ್ಲಾ ನನಗ ? ನಾನಂತೂ ಇನ್ನೇನು ಮನಿಗೆ ಹೋಗೋ ಆಕಿ ಅಲ್ಲ ! " ಅವ್ವ ನಿಶ್ಚಯದ ದನಿಯಲ್ಲಿ ಅಂದಳು.

" ಸುಮಕ್ಕಾ, ಇವೆಲ್ಲ ಆಗೋ ಮಾತಲ್ಲ—ಹೋಗೋ ಮಾತಲ್ಲ ! ಏ ಸೇತೂ, ಕರಿಯೊ ಅವ್ವನ್ನ-ಮನೀಗೆ ಬಾ ಅಂತ !" ಶ್ಯಾಮಣ್ಣವರ ಹಿರೇಮಗ ರಾಮಣ್ಣ ಅಂದ.

" ನಾನು ಅದಕ್ಕಾಗಿಯೇ ಈಗ ಬಂದಿರೋದು. ನೋಡು ಮಾವಾ, ನನಗ ಅವ್ವನ ಮ್ಯಾಲೆ ಸಿಟ್ಟಿಲ್ಲ. ಅವ್ವ ಹಾಂಗ ತಿಳು ಕೊಂಡಾಳ.... ಅದಕ್ಕ ನಾ ಏನು ಮಾಡಲಿ? ನಾವು ಗಂಡಾ ಹೇಣ್ತೀ ಹ್ಯಾಂಗಽ ಇದ್ದರೂ, ಅವ್ವ ಅದರಲ್ಲಿ ಸಂತೋಷಪಡಬೇಕು. ತಪ್ಪಿದ್ದರ ನಾ ಆವನ್ನ ತಿದ್ದಿಕೋತೀನಿ. ತಿದ್ದಿಕೊಳ್ಳದಿದ್ದರ ಅನು-ಭವಸ್ತೀನಿ. ಆದರೆ ಮಾತುಮಾತಿಗೂ ' ಹಾಂಗ್ಯಾಕ ಮಾಡಿದಿ, ಹೀಂಗ್ಯಾಕ ಮಾಡಿದಿ ?' ಅಂತ ಪ್ರಾರಂಭಾದರ ಎಂಥವರಿಗೂ ತಲೆ ಶಾಂತವಾಗಿ ಉಳಿಯುವುದಿಲ್ಲ. ಹೆಣ್ತೀನ್ನ ಮೇಲುಕಟ್ಟಿ ನಾನು ಮಾತಾಡುವದಿಲ್ಲ; ಆಕೆ ತಪ್ಪು ಮಾಡಿದರೆ ನಾನಿದ್ದೀನಿ ತಿದ್ದಲಿಕ್ಕೆ! ಹೆಣ್ತೀನ್ನ ತಿದ್ದಲಿಕ್ಕೆ ಗಂಡನೇ ಸಮರ್ಥ; ಅವನಿಂದ ಸಾಧ್ಯವಾಗ ದಿದ್ದರೆ ಯಾರಿಂದಲೂ ಸಾಧ್ಯ ಆಗೂ ಹಾಂಗಿಲ್ಲ !"

"ಅಂತೂ ಮದುವೆ ಆದ ಆರು ತಿಂಗಳಲ್ಲಿ ಬಹಳ ಅನುಭವ ಬಂದೈತಲಾ ನಿನಗ ಸೇತೂ! ಅದಿರಲಿ, ಊಟಾ ಮಾಡಿ ಬಂದೀಯೊ ಏನು ಹಾಂಗಽ ಬಂದೀಯೊ ?"

" ಊಟ ಆಗಿಲ್ಲ ; ಅದರ ಹಸಿವಿಯೂ ಇಲ್ಲ !"

" ಇರಲಿ ಬಾ, ಒಂದು ತುತ್ತು ಉಣ್ಣು ! ಅಲ್ಲೇ ಕೂಡು. ರಾಧಕ್ಕಾ, ಎಲೆ ಬಡಿಸು !" ರಾಮಣ್ಣ ತಾಯಿಗೆ ಹೇಳಿದ.

ನಾನು ಒಲ್ಲೆನೆಂದರೂ ಕೇಳಲಿಲ್ಲ. ಎಲೆ ಬಂದೇಬಿಟ್ಟಿತು. " ಸುಮಕ್ಕಾ, ಸೇತೂ ಕರೀಲಿಕ್ಕೆ ಬಂದಾನ. ಈಗ ನೀನು ಹೋಗು, ನಾನೆಲ್ಲ ಅವನ್ನ ಆ ನ್ಯಾಲೆ ಕರೆದು ಬುದ್ಧಿ ಹೇಳ್ತೀನಿ!" ಶ್ಯಾಮಣ್ಣ ಅಂದರು.

" ಈಗ ನಾ ಏನೂ ಹೋಗೋವಾಕಿ ಅಲ್ಲ. ದಿನಾ ಬೆಳಗು ಇವರು ಮಾಡೋದನೆಲ್ಲಾ ನನ್ನಿಂದ ನೋಡೋದು ಆಗೋದಿಲ್ಲ! ಮತ್ತ ನಾನು ಮನಿಯೊಳಗಿರೋದು ಇಂವಗೂ ಬ್ಯಾಡ; ಆಕೀಗಂತೂ ಮೊದಲಽ ಬ್ಯಾಡ!" ತಾಯಿ ನುಡಿದಳು.

"ಸೇತೂ, ಸುಮಕ್ಕ ನಾಳೆ ಬರ್ತಾಳ. ಹೇಣ್ತಿ ಮನೆಯಲ್ಲಿ ಒಬ್ಬಾಕೇ.... ಪಾಪ ! ನೀನು ಈಗ ಹೋಗು!" ಶ್ಯಾಮಣ್ಣ ಅಂದರು

" ಅವ್ವನನ್ನು ಬಿಟ್ಟು ನಾನು ಹೋಗುವವನೇ ಅಲ್ಲ " ನಾನೆಂದೆ.

" ಇರಲಿ ಹೋಗೋ, ನೀನೂ ದೊಡ್ಡ ಮಾತೃಭಕ್ತ ! ನಾಳೆ ನಾವೆಲ್ಲಾರೂ ಸುಮಕ್ಕನ್ನ ಕರಕೊಂಡು ನಿಮ್ಮ ಮನೀಗೇ ಬರ್ತೀವಿ ಹೋಗು! ಎಲ್ಲರ ಊಟ ಅಲ್ಲೇ ನಾಳೆ ! ಹೆಂಡತಿಯ ಕಡೆಯಿಂದ ಅಡಿಗೀ ಮಾಡಿಸಿಡು ! ಈವೊತ್ತಿನ ನಿನ್ನ ಅಪರಾಧಕ್ಕ ಇದು ತಪ್ಪುದಂಡ !" ರಾಮಣ್ಣ ಚೇಷ್ಟೆಯ ದನಿಯಲ್ಲಿ ನುಡಿದ.

" ಹೌದು, ಹಾಗೇ ಮಾಡೋದು " ಎಂದು ಎಲ್ಲರ ಬಾಯಿಂದ ಒಮ್ಮೆಲೆ ಮಾತು ಬಂದುಬಿಟ್ಟಿತು. ಸರಿ, ನನ್ನ ಆಗ್ರಹ ನಡೆಯು ವಂತಿರಲಿಲ್ಲ.

"ನಾಳೆ ಅವ್ವನನ್ನು ಕರೆದುಕೊಂಡು ನೀವೆಲ್ಲರೂ ಬರಲೇ ಬೇಕು! " ಎಂದು ಹೇಳಿ ಹೊರಟುಬಿಟ್ಟೆ.

* * *

ಮನೆಗೆ ಬಂದೆ, ಹೆಂಡತಿ ಒಂದೇ ಕೂಗಿಗೆ ಬಾಗಿಲನ್ನು ತೆರೆದಳು. ಕೋಣೆಯಲ್ಲಿ ಹೋದವನೇ ಬಟ್ಟೆ ತೆಗೆದು, ಬಾಗಿಲನ್ನು ಮುಂದೆ ಮಾಡಿ, ದೀಪ ತೆಗೆದು ಮಲಗಿಕೊಂಡೆ ಆಕೆ ಇವನ್ನೆಲ್ಲ ನೋಡುತ್ತ ಒಂದು ಕಡೆಗೆ ನಿಂತಿದ್ದಳು. ನನ್ನನ್ನು ಮಾತನಾಡಿಸುವ ಧೈರ್ಯ ವಾಗಲಿಲ್ಲ ; ನಾನೂ ಅವಳನ್ನು ಕರೆಯಲಿಲ್ಲ, ಮಾತನಾಡಿಸಲಿಲ್ಲ. ಕೋಣೆಯ ಬಾಗಿಲಿಗೆ ಕೊಂಡಿಯನ್ನು ಮಾತ್ರ ಹಾಕಲಿಲ್ಲ. 'ಬಂದರೆ ತಾನಾಗಿಯೇ ಬರಲಿ! ಏನು ಮಾಡುತ್ತಾಳೊ ನೋಡೋಣ' ಎಂದು. ತಲೆಬಾಗಿಲನ್ನು ಇಕ್ಕಿದಳು. ಅವಳ ಹಾಸಿಗೆ ನನ್ನ ಕೋಣೆ ಯಲ್ಲಿಯೇ ಇತ್ತು. ಹಾಗೆಯೆ ಹೊರಗೆ ಕುಳಿತುಬಿಟ್ಟಿರಬೇಕು. ದೀಪ ಮಾತ್ರ ಉರಿಯುತ್ತಿತ್ತು. ನಾನು ಅರ್ಧಗಂಟೆಯವರೆಗೂ ಹೊರಳಾಡುತ್ತಾ ಇದ್ದೆ. ನಿದ್ದೆ ಬರಲೊಲ್ಲದು. ಅವಳೂ ಒಳಗೆ ಬರುವ ಲಕ್ಷಣ ಕಾಣಲಿಲ್ಲ. ' ನನಗೆ ನಿದ್ದೆಹತ್ತಿದ ಮೇಲೆ ಬರಬೇಕೆಂದು ಕಾದಿರಬಹುದು ' ಎನಿಸಿತು. ' ಒಮ್ಮೆ ಗೊರಿಕೆ ಹಾಕಿಯಾದರೂ ನೋಡೋಣ' ಎಂದು ವಿಚಾರ ಬಂತು ಮನಸ್ಸಿ ನಲ್ಲಿ. ಘೋರ್‌ಘೊರ್ರೆಂದು ಅವಳಿಗೆ ಕೇಳಬರುವ ಹಾಗೆ ಪ್ರಾರಂಭ ಮಾಡಿದೆ. ಈ ನನ್ನ ಪ್ರಾರ್ಥನೆಗೆ ಅವಳ ಹೃದಯ ಕರಗಿದಂತೆ ಕಾಣಿಸಿತು. ಮೆಲ್ಲಗೆ ಬಾಗಿಲು ತೆರೆಯಿತು. ನಾನು ಬಾಗಿಲಕಡೆಗೆ ಬೆನ್ನುಮಾಡಿ ಮಲಗಿದ್ದೆ; ಆಕೆ ಬರುವುದನ್ನು ಕಿವಿಯಿಂದಲೆ ಕಂಡು-ಕೊಂಡೆ. ಶೀರ ಹತ್ತಿರ ಬಂದಳು. ಹಾಸಿಗೆಯಮೇಲೆ ಕಾಲಿಟ್ಟಳು. ಹಾಗೆಯೆ ಮೆಲ್ಲಗೆ—ನನಗೆ ತಿಳಿಯದ ಹಾಗೆ—ಮಲಗಿಕೊಂಡಳು. ಅವಳ ಉಸಿರಿನ ವೇಗ ಹೆಚ್ಚಾಯಿತು. ನಾನು ಗೊರಕೆಯನ್ನು ಜೋರುಮಾಡಿದೆ. ಆಕೆ ಒಂದುಗಳಿಗೆ ಹಾಗೆಯೆ ಮಲಗಿದ್ದು, ಮುಂದೆ ಮೆಲ್ಲಗೆ ನನ್ನ ಹತ್ತಿರ ಸರಿಯುತ್ತಾ ಬಂದಳು. ನನ್ನ ಬೆನ್ನಿಗೆ ಅವಳ ಮೈ ಅಂಟಿಕೊಂಡಿತು. ಉಸಿರಿನ ಜೊತೆಗೆ ಅಳುವ ಒಳದನಿ ಯೊಂದು ಹೊರಚಿಮ್ಮಿ ಬರುತ್ತಲಿತ್ತು. ಮಗ್ಗಲನ್ನು ಬದಲಿಸಿ ಹೊರಳಿ ಮಲಗಿದೆ. ಕೈ ಆಕೆಯ ಮುಖದ ಮೇಲೆ ಹೋಯಿತು. ಕೆನ್ನೆಗಳ ತುಂಬ ಕಣ್ಣೀರು! ಒಮ್ಮೆಲೆ ಸೆರಗಿನಿಂದ ಕಣ್ಣುಗಳನ್ನೊರ ಸಿದೆ. " ನಾನು ನಿಷ್ಕಾರಣ ಹೊಡೆದೆ " ಎಂಬ ಮಾತು ನನ್ನ ಬಾಯಿಂದ ತಾನಾಗಿ ಹೊರಕ್ಕೆ ಬಂದಿತು. ಅವಳ ದುಃಖದ ಕಟ್ಟು ಒಡೆದು ಅಶ್ರುಗಳು ಹಳ್ಳವಾಗಿ ಹರಿಯತೊಡಗಿದುವು. ' ಅತ್ತೆಯವರು ಬರಲಿಲ್ಲವೆ ?' ಎಂದು ಕೇಳಿದಳು. ' ನಾಳೆ ಬರುತ್ತಾಳೆ ' ಎಂದೆ. ವಿಚಾರದ ಚಕ್ರಕ್ಕೆ ಮತ್ತೆ ಕೀಲಿಯನ್ನು ಕೊಟ್ಟಂತಾಯ್ತು. ಬೆಳಗಿನ ಸಂಗತಿಗಳೆಲ್ಲ ಒಂದೊಂದೇ ನೆನಪಿಗೆ ಬರತೊಡಗಿದುವು : ಚಹ ಕುಡಿಯದೆ ಶಾಲೆಗೆ ಹೋದೆ; ತಲೆಶೂಲಿ ಪ್ರಾರಂಭವಾಯ್ತು, ಇನ್ಸ್‌ಪೆಕ್ಷನ್ ಸರಿಯಾಗಿ ಆಗಲಿಲ್ಲ. ಮನೆಗೆ ಬಂದೆ. ಅತ್ತೆ ಸೊಸೆಯರ ತಿಕ್ಕಾಟ ! ತಾಯಿಯನ್ನು ಸಮಾಧಾನ ಪಡಿಸಬೇಕು ; ಅದಕ್ಕೆ ಹೆಂಡತಿಯನ್ನು ಬಾಸಳು ಬರುವ ಹಾಗೆ ಹೊಡೆದಾಯಿತು. ನಾನು ಉಂಡೆ, ಚಹ ಕುಡಿದೆ, ಸಿನೆಮಾ ನೋಡಿದೆ. ಅವ್ವನೂ ಮಾವನ ಮನೆಯಲ್ಲಿ ಉಂಡಳು, ತಿಂದಳು.

(೭೯ನೆಯ ಪುಟಕ್ಕೆ ಮುಂದುವರಿದುದು)

ಕನ್ನಡವನ್ನು ಮರೆಯದ ಕನ್ನಡಿಗ

ವಾಸ್ತುಶಿಲ್ಪದ ವಿಶ್ವಕರ್ಮ

ಶ್ರೀ. ಮಗನಲಾಲ ಹಿರಾಚಂದ ಶಹಾ ಬಿ. ಇ., ಎ. ಎಮ್. ಐ. ಇ. ಇ. (ಲಂಡನ್)

ಶ್ರೀ. ವರದರಾಜ ಆದ್ಯ, ವಿಜಾಪುರ

★

ಯಾರಾದರೂ ಕನ್ನಡಿಗರು ಅಂತಸ್ತಿಗೇರಿದರೆ, ತಾವು ಕನ್ನಡಿಗರೆಂಬ ಭಾವನೆಯನ್ನೆ ಮರೆತು ಬಿಡುತ್ತಾರೆ. ಇಷ್ಟೇ ಅಲ್ಲ, ಅವರಲ್ಲಿಯ ಅನೇಕರು 'ಮನೆಗೆ ಮಾರಿ ಹೆರವರಿಗೆ ಉಪಕಾರಿ' ಆಗಿ ಪರಿಣಮಿಸುತ್ತಾರೆ. ಆದರೆ ಶ್ರೀ. ಮಗನಲಾಲರು ತಮ್ಮ ಕನ್ನಡತನದ ಬಗ್ಗೆ ತುಂಬ ಹೆಮ್ಮೆಯನ್ನಿಟ್ಟುಕೊಂಡಿದ್ದಾರೆ.

★

ಇದೇ ೧೯೪೭ ನೆಯ ಮೇ ೨೫ ನೆಯ ತಾರೀಖು, ಬೆಂಗಳೂರ ವೈ. ಎಂ. ಸಿ. ಎ. ನಲ್ಲಿ, ಕನ್ನಡಿಗರ ಸಭೆಯೊಂದು ಸೇರಿದ್ದಿತು. ಅಂದಿನ ಸನ್ಮಾನ್ಯ ಅತಿಥಿಗಳು ಎದ್ದು ನಿಂತು ತಮ್ಮ ಉಪನ್ಯಾಸ ವನ್ನು ಪ್ರಾರಂಭಿಸಿದರು. ಮೊದಲಿನ ಸಾಂಪ್ರದಾಯಿಕ ಮಾತು ಗಳಾದ ಮೇಲೆ, ನಿಜವಾದ ಹೆಮ್ಮೆಯ ದನಿಯಲ್ಲಿ ಹೀಗೆ ಹೇಳ-ತೊಡಗಿದರು :—

"ನಾನು ಕನ್ನಡಿಗ; ಕನ್ನಡಬಾರದ ಕನ್ನಡಿಗ. ಆದರೂ ಕನ್ನಡಿಗನೆಂದು ಹೆಮ್ಮೆಯಿಂದ ಹೇಳಿಕೊಳ್ಳುವುದಕ್ಕೆ ಒಂದು ಕಾರಣವುಂಟು. ಆ ಕಾರಣವೆಂದರೆ ನಮ್ಮ ಕನ್ನಡ ಕವಿಗಳು ಹಾಡಿರುವ ಹೆಮ್ಮೆ. ನನ್ನ ಊರು ವಿಜಾಪುರ. ಮಹಾಕವಿಯಾದ ಅಭಿನವಪಂಪ ಬೆಳೆದು ಬಾಳಿದ ಊರದು. ಆ ಮಹಾನುಭಾವನ ನೆರೆಮನೆಯವನು ನಾನು. ಆತ ತುಳಿದ ಪಾವನಭೂಮಿಯಲ್ಲಿ ಓಡಾಡಿದವನು; ಆತ ಕಟ್ಟಿಸಿದ ಪೂಜ್ಯ ಮಲ್ಲಿನಾಥ ಬಸದಿಯಲ್ಲಿ ಪ್ರಾರ್ಥನೆ ಮಾಡಿದವನು. 'ಕವಿರಾಜ, ಕವಿಪಿತಾಮಹ, ಕವಿ-ಕಂಠಾಭರಣ, ವಿದ್ವಜ್ಜನಸಾರ್ವಭೌಮ, ಸಾಹಿತ್ಯ ವಿದ್ಯಾಧರ, ಭಾರತೀಕರ್ಣಪೂರ' ಇತ್ಯಾದಿ ಬಿರುದಾಂಕಿತನಾದ ಅಭಿನವಪಂಪನ ನೆರೆಯವನಾದ ನಾನು ಸಾಮಾನ್ಯನೆ? ನನ್ನ ಈ ಹೆಮ್ಮೆಯ ಕೆಚ್ಚನ್ನು ಮನ್ನಿಸಬೇಕು ತಾವೆಲ್ಲ........"

ಇಷ್ಟೊಂದು ಕನ್ನಡಿಗನೆಂದು ಹೆಮ್ಮೆಯಿಂದ ಹೇಳುವ ಈ ಮಹಾ-ಶಯರು ಯಾರು ಗೊತ್ತೆ?

ಹಿಂದುಸ್ತಾನದಲ್ಲಿಯೆ ಮೊದಲನೆಯದಾದ—ಅಲ್ಲದೆ ಇಂದಿನ ಮಹಾಯುದ್ಧದ ಸಮಯದಲ್ಲಿ ಅತ್ಯಂತ ಮಹತ್ವದ್ದಾದ—ಬೆಂಗಳೂರಿನ ವಿಮಾನ ಕಾರಖಾನೆಯ ಸ್ಥಾಪನೆಗಾಗಿ, ಸುಮಾರು ಐದು ನೂರು ಎಕರೆ ವಿಶಾಲವಾಗಿದ್ದ ಕಾಡನ್ನು ಕಡಿಸಿ ನಾಡನ್ನು ಮಾಡಿ, ಕಾರಖಾನೆಗೆ ಅವಶ್ಯಕವಾದ ಕಟ್ಟಡಗಳನ್ನೂ ಇತರ ವ್ಯವಸ್ಥೆ ಯನ್ನೂ ಕೇವಲ ಆರು ತಿಂಗಳುಗಳ ಅಲ್ಪಾವಧಿಯಲ್ಲಿ ಅತ್ಯುತ್ತಮ ವಾದ ರೀತಿಯಲ್ಲಿ ಸಿದ್ಧಪಡಿಸಿದ ಕನ್ನಡಿಗರಿವರು. ಕನ್ನಡನಾಡಿ ನಲ್ಲಿ ಹುಟ್ಟಿ—ಕನ್ನಡನಾಡಿನಲ್ಲಿ ತಮ್ಮ ಆಯುಷ್ಯದ ಬಹುಭಾಗ-ವನ್ನು ಕಳೆಯದೆ ಇದ್ದರೂ—ಕನ್ನಡದಲ್ಲಿ ಅತ್ಯಂತ ಅಭಿಮಾನವನ್ನು ತಾಳುತ್ತಿರುವ ಮಹನೀಯರಿವರು. ಇವರಾರೆಂಬುದು ಬಹುಶಃ ಕನ್ನಡಿಗರಿಗೆ ಗೊತ್ತಿರಲಿಕ್ಕಿಲ್ಲ. ಇವರೇ ಮಗನಲಾಲ ಹಿರಾಚಂದ ಶಹಾ ಅವರು. ಇವರು ಕನ್ನಡಿಗರೆಂದರೆ ತಮಗೆ ಸಂಶಯವೇ? ಮೇಲಿನ ಅವರ ಮಾತನ್ನು ಕೇಳಿ ಸಂಶಯವನ್ನು ಪರಿಹರಿಸಿಕೊಳ್ಳ ಬೇಕು ಎಲ್ಲರೂ. ಈ ಕನ್ನಡ ವಿಶ್ವಕರ್ಮ, ಕಾರಖಾನೆ ಕಟ್ಟಿಸುವ ಕಾರ್ಯವನ್ನಷ್ಟೇ ಮಾಡಿರದೆ, ಹಿಂದುಸ್ತಾನ್ ಸರಕಾರದವರು ಆ ಕಾರಖಾನೆಯನ್ನು ತಮ್ಮ ವಶಕ್ಕೆ ತೆಗೆದುಕೊಳ್ಳುವ ಮೊದಲು, ಅದರ ಮ್ಯಾನೇಜರಾಗಿದ್ದುಕೊಂಡು ಎಲ್ಲ ವ್ಯವಸ್ಥೆಯನ್ನೂ ನೋಡಿ-ಕೊಳ್ಳುತ್ತಿದ್ದರು. ಕನ್ನಡನಾಡಿನ ಈ ಶ್ರೇಷ್ಠ ಎಂಜಿನಿಯರರು ಮಾಡಿದುದು ಇದೊಂದೇ ಮಹಾಕಾರ್ಯವನ್ನಲ್ಲ; ಹಿಂದುಸ್ತಾನದ ಬೇರೆ ಬೇರೆ ಭಾಗಗಳಲ್ಲಿಯೂ, ಬ್ರಹ್ಮದೇಶದಲ್ಲಿಯೂ ತಮ್ಮ ಅಗಾಧವಾದ ಜ್ಞಾನದಿಂದ— ಸುವ್ಯವಸ್ಥಿತವಾದ ಕಾರ್ಯ

ದಿಂದ— ಕೀರ್ತಿಶಾಲಿಗಳಾಗಿ ಹೆಸರನ್ನು ಗಳಿಸಿದ್ದಾರೆ. ಈ ಕೀರ್ತಿಯು—ಅವರೇ ತಮ್ಮದೊಂದು ಮಾತಿನಲ್ಲಿ ಹೇಳಿದಂತೆ— ಕನ್ನಡ ನಾಡಿಗೆ ಬಂದ ಕೀರ್ತಿಯು ಸರಿ. ಇಂತಹ ಕನ್ನಡ ಸುಪುತ್ರರ ಪರಿಚಯವನ್ನು ಜಯಂತಿಯ ವಾಚಕರಿಗೆ ಮಾಡಿಕೊಡುವುದು ಅವಶ್ಯವೂ ಯೋಗ್ಯವೂ ಆಗಿದೆಯೆಂದು ನನ್ನ ಭಾವನೆ.

ಶ್ರೀಯುತ ಮಗನಲಾಲರ ಹುಟ್ಟು, ವಿಜಾಪುರ ಜಿಲ್ಲೆಯ ಇಂಡಿ ಎಂಬ ತಾಲೂಕಿನ ಸ್ಥಳದಲ್ಲಿ, ೧೯೦೩ ನೆಯ ವರ್ಷ ಮಾರ್ಚ ೨೬ ನೆಯ ದಿನ ಆಯಿತು. ಇವರ ಮೂಲಮನೆತನ ಗುಜರಾತಿನದು; ಆದರೆ ಇಲ್ಲಿ ನೆಲೆನಿಂತು ಕನ್ನಡಿಗರಿಗಿಂತ ಕನ್ನಡಿಗರಾಗಿ ಹೋಗಿದ್ದಾರೆ ಇವರ ಕುಟುಂಬದವರು. ಆದುದರಿಂದಲೆ ಇವರ ಪ್ರಾಥಮಿಕ ಶಿಕ್ಷಣವು ಕನ್ನಡದಲ್ಲಿಯೆ ಪ್ರಾರಂಭವಾಯಿತು. ಶ್ರೀಮಂತ ವ್ಯಾಪಾರಸ್ಥರ ಮನೆತನಕ್ಕೆ ತಕ್ಕಂತೆಯೆ— ಇವರ ಪ್ರಾಥಮಿಕ ಶಿಕ್ಷಣವು ಇಂಡಿಯಲ್ಲಿ ಆದನಂತರ—ಮಾಧ್ಯಮಿಕ ಶಿಕ್ಷಣಕ್ಕೆಂದು ವಿಜಾಪುರಕ್ಕೆ ಬಂದರು. ಅಲ್ಲಿ ಎರಡು ವರ್ಷ **ಪಿ. ಬಿ. ಜೆ.** ಹೈಸ್ಕೂಲಿನಲ್ಲಿಯೂ, ಮೂರು ವರ್ಷ ಸಿದ್ಧೇಶ್ವರ ಹೈಸ್ಕೂಲಿನಲ್ಲಿಯೂ, ಉಳಿದುದನ್ನು ಪುಣೆಯಲ್ಲಿ ನ್ಯೂ ಇಂಗ್ಲಿಷ್ ಹೈಸ್ಕೂಲಿನಲ್ಲಿಯೂ ಕಲಿತರು. ೧೯೨೦ ರಲ್ಲಿ, ಮ್ಯಾಟ್ರಿಕ್ ಪರೀಕ್ಷೆಯಲ್ಲಿ, ತುಂಬ ಮೇಲಿನ ಕ್ರಮಾಂಕವನ್ನು ಪಡೆದುಕೊಂಡು ಉತ್ತೀರ್ಣರಾದರು. ಪ್ರಾಥಮಿಕ ಹಾಗು ಮಾಧ್ಯಮಿಕ ಶಾಲೆಗಳಲ್ಲಿ ಶ್ರೀ. ಮಗನಲಾಲರು, ಯಾವಾಗಲೂ ಗಣಿತ ವಿಷಯದಲ್ಲಿ ಹೆಚ್ಚು ಆಸ್ಥೆಯನ್ನು ತೋರಿಸುತ್ತಿದ್ದರು. ಆ ವಿಷಯದ ಮೇಲೆ ಇವರಿಗೆ ಬಲು ಪ್ರೀತಿ.

ಶ್ರೀ. ಮಗನಲಾಲರು ರಜೆಯಲ್ಲಿ ತಮ್ಮ ಹುಟ್ಟಿದೂರಿಗೆ ಬರುವರು. ಆಗ ತಂದೆ-ತಾಯಿಗಳು ಎಷ್ಟು ಅಡ್ಡಿ ಮಾಡಿದರೂ; ಅವರ ಕಣ್ತಪ್ಪಿಸಿ ಮೇಲಿಂದ ಮೇಲೆ ಹೊಲಗಳಿಗೆ ಹೋಗಿ, ರೈತರು ಕೆಲಸಮಾಡುವುದನ್ನೂ ಅವರ ನೀತಿ-ರೀತಿಗಳನ್ನೂ ನೋಡುತ್ತ ತಿಳಿದುಕೊಳ್ಳುತ್ತಿದ್ದರು. ರೈತರಲ್ಲಿ ಸಮರಸರಾಗಿ ಹೋಗುವುದು, ಅವರೊಡನೆ ತಿರುಗಾಡುವುದು ಇವರಿಗೆ ಬಲು ಪ್ರೀತಿ; ಆದರೆ ಶ್ರೀಮಂತರ ಮನೆಯಲ್ಲಿ ಹುಟ್ಟಿದುದರ ಮೂಲಕ **ಇವರಿಗೆ ಆ ಪ್ರಸಂಗಗಳು ಬರುವುದು ತೀರ ಕ್ವಚಿತ್ತಾಗಿ.**

ಮ್ಯಾಟ್ರಿಕ್ ಪರೀಕ್ಷೆಯಾದನಂತರ ಇವರು ಫರ್ಗ್ಯೂಸನ್ ಕಾಲೇಜನ್ನು ಸೇರಿ, ಎಫ್. ವೈ. ನಲ್ಲಿ ಮೊದಲನೆಯ ತರಗತಿಯಲ್ಲಿ ಉತ್ತೀರ್ಣರಾದರು. ಬಳಿಕ ಪುಣೆಯ ಎಂಜಿನಿಯರಿಂಗ್ ಕಾಲೇಜನ್ನು ಸೇರಿದರು. ಇಂಟರ್ ಪರೀಕ್ಷೆಗೆ ಕುಳಿತು ಇವರು ಮೊದಲನೆಯ ವರ್ಗದಲ್ಲಿ ಉತ್ತೀರ್ಣರಾದರು. ೧೯೨೭ರಲ್ಲಿ ಬಿ. ಇ. ಪರೀಕ್ಷೆಯನ್ನು ಮೊದಲನೆಯ ವರ್ಗದಲ್ಲಿ ಉತ್ತೀರ್ಣರಾದರಷ್ಟೇ ಅಲ್ಲ, ಮುಂಬಯಿ ವಿಶ್ವವಿದ್ಯಾಲಯಕ್ಕೇ ಒಂದನೆಯ ಕ್ರಮಾಂಕವನ್ನು ಪಡೆದು, 'ಪಾಂಡ್ಯ' ಪಾರಿತೋಷಕವನ್ನು ದೊರಕಿಸಿದರು. ತರುವಾಯ ಮುಂಬಯಿ ಸರಕಾರದವರಿಂದ ಇಂಡಸ್ಟ್ರಿಯಲ್ ಸ್ಕಾಲರಶಿಪ್‌ನ್ನು ದೊರಕಿಸಿ, ಬೆಂಗಳೂರಿನ ಟಾಟಾ ವಿಜ್ಞಾನ ಮಂದಿರದಲ್ಲಿ ಎರಡು ವರ್ಷಗಳವರೆಗೆ ಇಲೆಕ್ಟ್ರಿಕಲ್ ಎಂಜಿನಿಯರಿಂಗ್ ವಿಷಯದಲ್ಲಿ ಸಂಶೋಧನೆಯನ್ನು ಮಾಡಿ, ಎ. ಎಮ್. ಐ. ಇ. ಇ. (ಇಂಗ್ಲಂಡ್) ಪದವಿಯನ್ನು ಪಡೆದರು.

ಶ್ರೀ. ಮಗನಲಾಲ ಶಹಾ ಅವರು

೧೯೨೮ನೆಯ ವರ್ಷದ ಕೊನೆಗೆ ಮಗನಲಾಲರು **ಟಾಟಾ ಕನ್‌ಸ್ಟ್ರಕ್ಶನ್ ಕಂಪನಿ** (ಇದೇ ಹಿಂದುಸ್ತಾನ ಕನ್‌ಸ್ಟ್ರಕ್ಶನ್ ಕಂಪನಿಯೆಂದು ಕರೆಯಲ್ಪಡುತ್ತದೆ) ಯನ್ನು ಸೇರಿದರು. ಅಂದಿನಿಂದಲೂ ಹಿಂದುಸ್ತಾನದ ಸುಪ್ರಸಿದ್ಧ ಧನಾಢ್ಯರೂ, ವ್ಯಾಪಾರಿಗಳೂ ಆದ **ಶ್ರೀ. ವಾಲಚಂದ ಹಿರಾಚಂದ** ಅವರೊಡನೆ ಇವರ ಸಂಬಂಧ ಬೆಳೆದು, ಅದು ಈವರೆಗೂ ನಡೆದುಕೊಂಡು ಬಂದಿದೆ. ಶ್ರೀ. ಮಗನಲಾಲರು ಶ್ರೀ. ವಾಲಚಂದ ಹಿರಾಚಂದರ ಅತ್ಯಂತ ವಿಶ್ವಾಸದ ಹಾಗು ಅವರ ಬಲಗೈಯಂತಿರುವ ಮಹನಿಯರೆಂದು ಹೇಳಲು ಅಡ್ಡಿಯಿಲ್ಲ. ೧೯೨೮ರಲ್ಲಿ **ಖಂಡಾಳಾದ** ನೆಲಮನೆಗಳನ್ನು ಕಟ್ಟಿಸುವ ಕಾರ್ಯದಲ್ಲಿವರು ತೊಡಗಿದ್ದರು; ಅನಂತರ ಕೆಲವು ಸಮಯದ ವರೆಗೆ **ಮಾರ್ಸ್‌ಲ್ಯಾಂಡ್** ಪ್ರಾಯಿಸ್ ಆ್ಯಂಡ್ ಕಂಪನಿಯ ವರ್ಕ್ಸ್ ಮ್ಯಾನೇಜರಾಗಿ ಕಾರ್ಯವನ್ನು ಮಾಡಿದರು. ಅದೇ ವರ್ಷ, ಮುಂಬಯಿಯ ಬೋರಿಬಂದರ (ವ್ಹಿಕ್ಟೋರಿಯಾ ಟರ್ಮಿನಸ್) ನ್ನು ವಿಸ್ತಾರವನ್ನಾಗಿ ಮಾಡುವ ಕಾರ್ಯವು ಇವರ ನೇತೃತ್ವದಲ್ಲಿ ನಡೆಯಿತು. ೧೯೩೦ರಲ್ಲಿ, ಮಧ್ಯಪ್ರಾಂತದಲ್ಲಿ ಸೇತುವೆಗಳನ್ನು ಕಟ್ಟುವ ಕಾರ್ಯಗಳನ್ನು ಮಾಡಿದರು. ೧೯೩೧ ರಲ್ಲಿ ರಾವಳಪಿಂಡಿಯ ಹತ್ತಿರ ಸಿಂಧೂನದಿಯ

ಮೇಲೆ ದೊಡ್ಡ ಸೇತುವೆಯನ್ನು—ಇವರು ಮೇಲ್ವಿಚಾರಕರಾಗಿ—ಕಟ್ಟಿಸಿದರು. ಈ ಸೇತುವೆಯನ್ನು ಕಟ್ಟುವಾಗ 'ನ್ಯೂಮಾಟಿಕ್ ಸಿಂಕಿಂಗ್' ಎಂಬ ಪದ್ಧತಿಯನ್ನು ಇವರು ಅನುಸರಿಸಿದರು. ಭಾರತೀಯ ಎಂಜಿನಿಯರರು ಈ ಪದ್ಧತಿಯನ್ನು ಅನುಸರಿಸಿದು-ದೆಂದರೆ ಇದೇ ಮೊದಲನೆಯ ಸಲ. ೧೯೩೦ ರಲ್ಲಿ ಮಂಡಾಲೆಯ ಹತ್ತಿರ ಸಗಾಯಿಂಗ ಸೇತುವೆಯ ರಚನೆಗಾಗಿ ಬ್ರಹ್ಮದೇಶಕ್ಕೆ ಪ್ರಯಾಣ ಬೆಳಸಿದರು. ಅಲ್ಲಿಯ ಕೆಲಸವನ್ನು ತೀರಿಸಿಕೊಂಡು **ಹ್ಯೂಮ್ ಪಾಯಿಪ್ ಫ್ಯಾಕ್ಟರಿಯ** ವರ್ಕ್ಸ್ ಮ್ಯಾನೇಜರರಾಗಿ ಅಹಮ್ಮದಾಬಾದಿಗೆ ಮರಳಿದರು.

ಶ್ರೀ. ಮಗನಲಾಲರು, ಮೇಲೆ ವಿವರಿಸಿದ ಮುಖ್ಯವಾದ ಕೆಲಸ-ಗಳನ್ನಷ್ಟೆ ಅಲ್ಲದೆ, ಇನ್ನೂ ಅನೇಕ ಸಣ್ಣ-ಪುಟ್ಟ ಕೆಲಸಗಳನ್ನೂ ಮಾಡಿದ್ದರು; ಇದರಿಂದ ಆಗಲೆ ಅವರಿಗೆ ಸಾಕಷ್ಟು ಅನುಭವವು ದೊರೆತಿತ್ತು. ಆದರೆ ಇಷ್ಟರಿಂದಲೆ ಅವರಿಗೆ ಸಮಾಧಾನವಾಗಲಿಲ್ಲ. 'ಪ್ಲೇನ್ ಸ್ಟೀಲ್ ಪಾಯಿಪ್' ನ ಬಗ್ಗೆ ಹೆಚ್ಚಿನ ಜ್ಞಾನವನ್ನು ಸಂಪಾದಿಸುವುದಕ್ಕೋಸುಗ, ಶ್ರೀ. ಮಗನಲಾಲರು ೧೯೩೨ ರಲ್ಲಿ ಸಿಂಗಾಪೂರಕ್ಕೆ ತೆರಳಿದರು. ಅಲ್ಲಿಂದ **ಥಾಯಿಲ್ಯಾಂಡ್** ಹಾಗು **ಇಂಡೋಚಾಯನಾ**ಗಳಿಗೂ ಹೋಗಿಬಂದರು. ಮುಂದೆ ಸಕ್ಕರೆಯ ಕಾರಖಾನೆಗಳ ನಿರೀಕ್ಷಣೆಗಾಗಿ ಹಾಗೂ ಅಭ್ಯಾಸಕ್ಕಾಗಿ **ಜಾವಾಕ್ಕೆ** ಹೋಗಿ, ಅಲ್ಲಿ ಸಕ್ಕರೆಯ ಕಾರಖಾನೆಗಳ ಸ್ಥಿತಿ-ಗತಿಗಳನ್ನೂ ಅವು ಕಾರ್ಯಮಾಡುವ ಪದ್ಧತಿಯನ್ನೂ ಅಭ್ಯಾಸ ಮಾಡಿದರು. ಜಗತ್ತಿನಲ್ಲಿಯೆ ಮಾದರಿಯದಾಗಿರುವ ಆಸ್ಟ್ರೇಲಿಯಾದ '**ಕ್ವೀನ್ಸ್ ಲ್ಯಾಂಡ್**' ಎಂಬಲ್ಲಿಯ ಸಕ್ಕರೆಯ ಕಾರಖಾನೆಗಳಿಗೆ ಭೆಟ್ಟಿ ಕೊಟ್ಟು ಬಂದರು. ಹಾಗೆಯೆ ಆಸ್ಟ್ರೇಲಿಯಾದಲ್ಲಿ ಎಲೆಕ್ಟ್ರಿಕ್ ವೆಲ್ಡಿಂಗಿನ ಬಗ್ಗೆ ವಿಶೇಷ ಜ್ಞಾನವನ್ನು ಸಂಪಾದಿಸಿಕೊಂಡು ಹಿಂದುಸ್ಥಾನಕ್ಕೆ ಮರಳಿಬಂದರು.

ಹಿಂದುಸ್ಥಾನಕ್ಕೆ ಮರಳಿದ ಕೂಡಲೆ **ರಾವಳಗಾಂವದಲ್ಲಿ** ಸಕ್ಕರೆಯ ಕಾರಖಾನೆಯನ್ನು ಕಟ್ಟುವ ಹಾಗು ಅದರ ಪೂರ್ವ-ಸಿದ್ಧತೆಯನ್ನು ಮಾಡುವ ಹೊಣೆಗಾರಿಕೆಯನ್ನು ಇವರಿಗೆ ಒಪ್ಪಿಸಲಾಯಿತು. ಕೇವಲ ನಾಲ್ಕು ತಿಂಗಳಲ್ಲಿಯೆ ಕಾರಖಾನೆಯನ್ನು ಕಟ್ಟಿ ಮುಗಿಸಿ, ಅದು ಬೇಗನೆ ಪ್ರಾರಂಭವಾಗುವಂತೆ ಮಾಡಿದರು. ೧೯೩೪ ರಲ್ಲಿ ಪುಣೆ ಜಿಲ್ಲೆಯ **ಕಳಂಬವಲ್ಲಿ**, ಮಾರ್ಸ್‌ಲ್ಯಾಂಡ್ ಪ್ರಾಯಿಸ್ ಲ್ಯಾಂಡ್ ಕಂಪನಿಯವರು ಸ್ಥಾಪಿಸಿದ ಸಕ್ಕರೆಯ ಕಾರಖಾನೆಯನ್ನೂ ಇವರೇ ಕಟ್ಟಿಸಿ, ಅದರ ಸ್ಥಾಪನೆಗೆ ಬಹಳ ನೆರವಾದರು. ಅಲ್ಲದೆ ೧೯೩೭ ರ ವರೆಗೆ ಅಲ್ಲಿ ಮುಖ್ಯ ಎಂಜಿನಿಯರ್ ಹಾಗು ಡೆಪ್ಯುಟಿ ಮ್ಯಾನೇಜರರಾಗಿ ಕಾರ್ಯ ಮಾಡಿದರು.

ಶ್ರೀಯುತ ಮಗನಲಾಲರು ತಮ್ಮ ಉದ್ಯೋಗದಲ್ಲಿ ತೊಡಗಿರು-ವಾಗ, ಸ್ವಾತಂತ್ರ್ಯಕ್ಕಾಗಿ ದೇಶದಲ್ಲಿ ನಡೆದ ಚಳವಳಿಯು ಅವರ ಲಕ್ಷ್ಯವನ್ನೆಳೆಯದೆ ಬಿಡಲಿಲ್ಲ. ದೀರ್ಘವಾದ ಹಾಗು ಬಹಳ ತೊಂದರೆಯದಾದ ಕಾರ್ಯದಿಂದ ಇವರು ಕೆಲವುದಿನ ದೂರವಿರ ಬೇಕೆಂದರು. ಸಾಧ್ಯವಿದ್ದಷ್ಟು ದೇಶಸೇವೆಯನ್ನು ಮಾಡುತ್ತಲೆ, ವಿಶ್ರಾಂತಿಯನ್ನು ಪಡೆಯಬೇಕೆಂದು ಇವರು ೧೯೩೭ ರ ಕೊನೆಗೆ ವಿಜಾಪುರಕ್ಕೆ ಆಗಮಿಸಿದರು. ವಿಜಾಪುರದಲ್ಲಿ ಇವರು ವಾಸವಾಗಿದ್ದ ಮೂರು ವರ್ಷಗಳಲ್ಲಿ, ಇವರು ಮಾಡಿದ ಜನಸೇವೆಯು ಆದರ್ಶ-ವಾದುದಾಗಿದೆ; '**ಗ್ರಾಮೋದ್ಧಾರ ಸಂಘ**'ವನ್ನು ಸ್ಥಾಪಿಸಿ, ಇಡಿ ಜಿಲ್ಲೆಯಲ್ಲೆಲ್ಲ ಪ್ರವಾಸ ಮಾಡಿ, ರೈತರ ಸ್ಥಿತಿಯನ್ನು ಸುಧಾರಿಸಲು ಅವಶ್ಯವಾದ ಕಾರ್ಯವನ್ನು ಕೈಕೊಂಡರು. **ಗೋಶಾಲೆಯನ್ನು** ಸ್ಥಾಪಿಸಿ, ೨೦೦ ಆಕಳುಗಳ ಸಂರಕ್ಷಣೆಯ ವ್ಯವಸ್ಥೆಯನ್ನು ಮಾಡಿ-ದರು. ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಸಮಿತಿಯ ಸದಸ್ಯರಾಗಿ ಆರಿಸಿ ಬಂದು, ಕಾಂಗ್ರೆಸಿನ ಪ್ರಚಾರವನ್ನು ಜಿಲ್ಲೆಯಲ್ಲಿ ಮಾಡಲು ಅನುವಾದರು. ಒಂದು ವರ್ಷದ ವರೆಗೆ ಇಂಡಿ ತಾಲೂಕಾ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಾಗಿದ್ದರು. ವಿಜಾಪೂರ 'ವಿದ್ಯಾರ್ಥಿ ಸಂಘ'ದವರು ಕೈಕೊಂಡಿದ್ದ ಸಾಕ್ಷರತಾ ಪ್ರಚಾರದ ಕಾರ್ಯದಲ್ಲಿ ಅನೇಕ ರೀತಿಯಿಂದ ಇವರು ನೆರವಾದರು. 'ಅಭ್ಯಾಸ ಮಂಡಳ'ವನ್ನು ಸ್ಥಾಪಿಸಿ, ವಿಜಾಪುರದ ತರುಣರಿಗೆ ರಾಜಕೀಯ ವಿಚಾರಗಳ ಅಭ್ಯಾಸಕ್ಕೆ ಅನುಕೂಲ ಮಾಡಿಕೊಟ್ಟರು.

ಶ್ರೀಯುತ ಮಗನಲಾಲರಿಂದ ಸೇವೆಯನ್ನು ತೆಗೆದುಕೊಳ್ಳುವ ಯೋಗ ವಿಜಾಪುರ ಜಿಲ್ಲೆಯ ಜನರಿಗೆ ಇದ್ದಿಲ್ಲವೆಂದು ತೋರು-ತ್ತದೆ. ಏಕೆಂದರೆ ಅಖಿಲ ಭಾರತದ ದೃಷ್ಟಿಯಿಂದ ಮಹತ್ತ್ವ ಪೂರ್ಣವಾದ ಹಾಗು ಭಾರತೀಯ ಇತಿಹಾಸದಲ್ಲಿ ಮೊದಲನೆಯ ದಾದ—ಹಿಂದೀ ನೌಕಾಪಡೆಯನ್ನು ಕಟ್ಟುವ ಯೋಜನೆಯನ್ನು ಶ್ರೀಯುತ **ವಾಲಚಂದ ಹಿರಾಚಂದರವರು** ಪ್ರಾರಂಭಿಸುತ್ತಲೆ, ಶ್ರೀ. ಮಗನಲಾಲರು **ವಿಶಾಖಾಪಟ್ಟಣಕ್ಕೆ** ಹೋಗಿ, ಹಡಗುಗಳನ್ನು ಕಟ್ಟುವ ಕಾರಖಾನೆಯನ್ನು ರಚಿಸಲು ನೆರವಾದರು. ಅಲ್ಲಿ ಕೇವಲ ಆರು ತಿಂಗಳುಗಳ ವರೆಗೆ ಮಾತ್ರ ಇದ್ದರು. ಶ್ರೀಮಾನ್ ವಾಲ-ಚಂದರು ಹಿಂದುಸ್ಥಾನದಲ್ಲಿ ಮೊದಲನೆಯದಾದ ವಿಮಾನ ಕಾರ-ಖಾನೆಯನ್ನು ಬೆಂಗಳೂರಿನಲ್ಲಿ ಸ್ಥಾಪಿಸಬೇಕೆಂದು ನಿಶ್ಚಯಿಸಿದರು. ಕಾರಖಾನೆಯನ್ನು ಕಟ್ಟುವ ಹಾಗು ಅದರ ಎಲ್ಲ ವ್ಯವಸ್ಥೆಯನ್ನೂ ಮಾಡುವ ಸಂಪೂರ್ಣ ಹೊಣೆಯನ್ನು ಶ್ರೀ. ಮಗನಲಾಲರ ಮೇಲೆಯೆ ಹೊರಿಸಲಾಯಿತು. ಶ್ರೀ. ಮಗನಲಾಲರು ಈ ಕಾರ್ಯವನ್ನು ಎಷ್ಟು ಸುವ್ಯವಸ್ಥಿತವಾಗಿ ಹಾಗು ಹೊಣೆಗಾರಿಕೆಯಿಂದ ಮಾಡಿದ ರೆಂಬುದಕ್ಕೆ, ಸುಮಾರು ೫೦೦೦ ಜನರು ಕೆಲಸ ಮಾಡುತ್ತಿರುವ ಹಾಗು ೫೦೦ ಎಕರೆ ಭೂಮಿಯನ್ನು ಆವರಿಸಿರುವ ಭವ್ಯವಾದ ಆ ಕಾರಖಾನೆಯೇ ಸಾಕ್ಷಿಯಾಗಿದೆ. ಮದ್ರಾಸಿನ '**ಇಂಡಿಯನ್ ಎಕ್ಸ್‌ಪ್ರೆಸ್**' ಪತ್ರಿಕೆಯು ಬರೆದಿರುವ ಈ ಕೆಳಗಿನ ವಿವರವು ಅವರ ಕಾರ್ಯದಕ್ಷತೆಗೆ ಸಾಕ್ಷಿಯಾಗಿದೆ :

"The project known as the Hindusthan Aircraft Ltd. is a gigantic affair and work of this magnitude requires great initiative and forethought. Mr. M. H. Shah, who is in charge of the construction is a genius and his association with Mr. Walchand Hirachand for

the past 16 years in various fields of activities has tended to make Mr. Shah an organiser of the first class. There would appear to be nothing that he does not know in the line and his patience in explaining things to those who visit the works under construction calls for admiration."

ಹಿಂದುಸ್ತಾನ್ ಸರಕಾರದವರು ವಿಮಾನ ಕಾರಖಾನೆಯನ್ನು ತಮ್ಮ ವಶಕ್ಕೆ ತೆಗೆದುಕೊಳ್ಳುವ ಮೊದಲು, ಶ್ರೀ. ಮಗನಲಾಲರು ಅದರ ಮ್ಯಾನೇಜರರಾಗಿ ಕೆಲಸ ಮಾಡುತ್ತಿದ್ದರು; ಅನಂತರ ಅಮೇರಿಕನ್‌ರು ಹಾಗು ಬ್ರಿಟೀಶರು ಅದರ ಮೇಲ್ವಿಚಾರಕರಾಗಿರುವರು. ಶ್ರೀ. ಮಗನಲಾಲರು ಈಗ ಅಲ್ಲಿ ಎಗ್ಝಿಕ್ಯೂಟಿವ್ಹ ಆಫೀಸರರಾಗಿದ್ದಾರೆ.

ಶ್ರೀ. ಮಗನಲಾಲರು ಅಂತರರಾಷ್ಟ್ರೀಯ ಪರಿಸ್ಥಿತಿಯನ್ನು—ವಿಶೇಷವಾಗಿ ಇಂದಿನ ಮಹಾಯುದ್ಧದ ಮೂಲಕಾರಣಗಳನ್ನೂ, ವಿವರಗಳನ್ನೂ—ಬಹಳವಾಗಿ ಅಭ್ಯಾಸ ಮಾಡಿದವರಾಗಿದ್ದಾರೆ. ವಿಜ್ಞಾನವು ಇವರ ವಿಷಯವಾದರೂ ಸಾಹಿತ್ಯವನ್ನೂ ಸಾಕಷ್ಟು ಅಭ್ಯಾಸ ಮಾಡಿದ್ದಾರೆ. ಎಂಜಿನಿಯರರೂ ಯಾವಾಗಲೂ ಅದೇ ಕಾರ್ಯದಲ್ಲಿ ನಿರತರಾಗಿರುವವರೂ ಆದ ಶ್ರೀ. ಮಗನಲಾಲರು, ಕನ್ನಡ ಸಾಹಿತ್ಯದಲ್ಲಿ ಶ್ರೇಷ್ಠರಾದ ರನ್ನ, ಪಂಪ ಮೊದಲಾದವರ ಕೃತಿಗಳನ್ನು ಓದಿದ್ದಾರೆಂದು ಹೇಳಿದರೆ ಆಶ್ಚರ್ಯವೆನಿಸದೆ ಇರದು. ಸಾಮ್ಯವಾದವನ್ನು ಹಾಗು ಕಮ್ಯೂನಿಜಮ್‌ನ್ನೂ ಶ್ರೀಯುತರು ಚೆನ್ನಾಗಿ ಅಭ್ಯಾಸಮಾಡಿದ್ದಾರೆ. ಈ ವಿಷಯಗಳ ಮೇಲೆ ಇವರು, ವಿಜಾಪುರದ ಅಭ್ಯಾಸ ಮಂಡಲದಲ್ಲಿ ಮೇಲಿಂದ ಮೇಲೆ ಭಾಷಣ ಮಾಡುತ್ತಿದ್ದರು.

ತಮ್ಮ ಆಯುಷ್ಯದ ಬಹುಭಾಗವನ್ನು ಕರ್ನಾಟಕದ ಹೊರಗೆ ಕಳೆದಿದ್ದರೂ, ಕನ್ನಡದ ಸಂಪರ್ಕ ಬಹುದಿನದ ವರೆಗೆ ಇಲ್ಲದೆ ಇರುವಾಗಲೂ, ಕನ್ನಡದ ಮೇಲಿನ ಪ್ರೇಮ-ಅಭಿಮಾನಗಳು ಶ್ರೀ. ಮಗನಲಾಲರಲ್ಲಿ ಕಡಿಮೆಯಾಗಿಲ್ಲ. ಬಹಳ ಮಾನವಿರುವಂತಹ ಹಾಗು ವಿಪುಲವಾಗಿ ಸಂಬಳ ದೊರೆಯುವಂತಹ ಸ್ಥಾನದಲ್ಲಿದ್ದರೂ ವಿನಯ ಹಾಗು ಸರಳತನ ಇವರಲ್ಲಿ ತುಂಬಿ ತುಳುಕುತ್ತಿರುವವು. ಯಾವಾಗಲೂ ಇರುವ ಹಸನ್ಮುಖದಿಂದ ವಿಜಾಪುರದಲ್ಲಿ ಸ್ವಾಗತಿಸುತ್ತಿದ್ದ ಶ್ರೀ. ಮಗನಲಾಲರೇ ನನ್ನನ್ನು— ತಾವು ಬೆಂಗಳೂರಿನಲ್ಲಿ ವಾಸಿಸುತ್ತಿರುವ—ಭವ್ಯವಾದವರೂ ಅಚ್ಚುಕಟ್ಟಾಗಿರುವ— ಬಂಗಲೆಯಲ್ಲಿ ಸ್ವಾಗತಿಸಿದರು. ಹಿರಿಯರಲ್ಲಿ ಹಿರಿಯರಾಗಿಯೂ ಕಿರಿಯರಲ್ಲಿ ಕಿರಿಯರಾಗಿಯೂ ಇರುವ ವಿಶೇಷವಾದ ಸದ್ಗುಣವೊಂದು ಇವರಲ್ಲಿ ಮನೆಮಾಡಿಕೊಂಡಿದೆ.

"ಕನ್ನಡ ನಾಡಿನ ಅನೇಕ ಸ್ಥಳಗಳಲ್ಲಿ ಅರಣ್ಯಸಂಪತ್ತು, ಕಾರವಾರ ಜಿಲ್ಲೆಯಲ್ಲಿ ಕಾಗದ ಕಾರಖಾನೆಗಳಿಗಾಗಿ ಅನುಕೂಲತೆ, ಬಾಗಲಕೋಟೆಯಲ್ಲಿ ಅರಿವೆಯ ಗಿರಣಿಗಳಿಗಾಗಿ ಅನುಕೂಲತೆ, ಕಲಾದಗಿ-ಬಾದಾಮಿಗಳಲ್ಲಿ ಖನಿಜಸಂಪತ್ತು ಮೊದಲಾದ ಅನೇಕ ಔದ್ಯೋಗಿಕ ಅನುಕೂಲತೆಗಳಿದ್ದು, ಕೂಲಿಕಾರರು ಬೇಕಾದಷ್ಟು ದೊರೆಯುತ್ತಿದ್ದು, ಕನ್ನಡನಾಡಿನಲ್ಲಿ ಉದ್ಯೋಗ-ವ್ಯವಸಾಯಗಳು ಬೆಳೆಯದಿರುವುದು ತೀರ ಶೋಚನೀಯವು. ಇದಕ್ಕೆ ಕನ್ನಡ ನಾಡಿನ ಧನವಂತರ ಹಾಗು ಸರಕಾರದ ನಿರ್ಲಕ್ಷ್ಯತನವೇ ಕಾರಣವಾಗಿದೆ. ಸಿರಿವಂತರು ಕೇವಲ ಬಡ್ಡಿಯ ವ್ಯವಹಾರದಲ್ಲಿ ನಿರತರಾಗದೆ ತಮ್ಮ ಸಂಪತ್ತನ್ನು ಉದ್ಯೋಗ-ವ್ಯವಸಾಯದಲ್ಲಿ ತೊಡಗಿಸಿದರೆ, ಕನ್ನಡನಾಡಿನ ಉದ್ಯೋಗ-ವ್ಯವಸಾಯಗಳು ಹಾಗು ಅವುಗಳ ಮೂಲಕ ಕನ್ನಡನಾಡು ಬೇಗನೆ ಊರ್ಜಿತಾವಸ್ಥೆಯನ್ನು ಪಡೆಯುವುದು" ಎಂದು ಶ್ರೀ. ಮಗನಲಾಲರು ಕನ್ನಡನಾಡಿನ ಉದ್ಯೋಗ-ವ್ಯವಸಾಯಗಳ ಬಗ್ಗೆ ತಮ್ಮ ಮತವನ್ನು ಪ್ರಕಟಿಸಿದರು. ಅನುಭವಿಕರೂ ನುರಿತವರೂ ಆದ ಇವರ ಅಭಿಪ್ರಾಯದ ಕಡೆಗೆ ಕನ್ನಡದ ಸಿರಿವಂತರೂ, ಸರಕಾರದವರೂ ಲಕ್ಷ್ಯವನ್ನೀಯುವುದು ಅವಶ್ಯವಿದೆ.

ತಮ್ಮ ಅಮೌಲ್ಯವಾದ ಜ್ಞಾನದಿಂದಲೂ, ಅಪರಿಮಿತವಾದ ಅನುಭವದಿಂದಲೂ, ಅಗಾಧವಾದ ಕಾರ್ಯದಕ್ಷತೆಯಿಂದಲೂ ಶ್ರೀ. ಮಗನಲಾಲರು ಕನ್ನಡನಾಡಿಗೆ ಇನ್ನಿಷ್ಟು ಕೀರ್ತಿ ತರಲೆಂದು ಹಾರಯಿಸುತ್ತೇನೆ.

(೬೫ ನೆಯ ಪುಟದಿಂದ ಮುಂದುವರಿದುದು)

ಹೆಂಡತಿಗೆ ಮಾತ್ರ ಮುಂಜಾವಿನಿಂದ ಊಟವಿಲ್ಲ....ತಪ್ಪು ನನ್ನದು; ಕೆಲಸಗಿತ್ತಿಗೆ ತಾಯಿಯದು! ಆದರೆ ಅದನ್ನು ಅನುಭವಿಸುವಾಕೆ ಹೆಂಡತಿ. ಇಷ್ಟಾದರೂ ಎಲ್ಲ ಅಪರಾಧ ತನ್ನದೇ ಎನ್ನುವ ಹಾಗೆ ನನ್ನನ್ನು ನೋಡಿಯುಟ್ಟಳು....ಇದೇನು ನಮ್ಮ ಹೆಂಗುಸರ ಸ್ವಭಾವವೊ ಪ್ರೇಮದ ಲಕ್ಷಣವೊ ಅಥವಾ ಅವರ ಅಸಹಾಯಸ್ಥಿತಿಯ ಚಿಹ್ನವೊ? ಯಾವುದೂ ನನಗೆ ಅರ್ಥವಾಗಲಿಲ್ಲ, ಒಡೆಯದ ಒಗಟು!

ಈ ವಿಚಾರ ಬರುತ್ತಿರುವಾಗಲೆ ನಿದ್ದೆ ಹತ್ತಿತು. ಮುಂಜಾನೆ ಚಹಮಾಡಿಕೊಂಡು ಬಂದು ಹೆಂಡತಿ ಗದ್ದ ಹಿಡಿದು ನನ್ನನ್ನೆಬ್ಬಿಸಿದಳು. "ನನ್ನ ಜೊತೆಗೆ ನೀನೂ ಕುಡಿಯಬೇಕು" ಎಂದೆ. "ನಾನು ಆ ಮೇಲೆ ಕುಡಿಯುತ್ತೇನೆ" ಎಂದಳು, "ಛೆ, ಅದಾಗದು; ಇದರಲ್ಲಿಯೇ ಇಬ್ಬರೂ ಕುಡಿಯೋಣ" ಎಂದೆ. ನನಗೆ ಕೊಡಲು ಅವಳು ಚಹದ ಕಪ್ಪು ಮುಂದೆಮಾಡುವಾಗ, ಅವಳ ಒಂದು ತಟಕು ಕಣ್ಣೀರು ಅದರಲ್ಲಿ ಬಿದ್ದುಬಿಟ್ಟಿತು. ಉತ್ಕಟಭಾವನೆಯು ನನ್ನನ್ನಾವರಿಸಿಕೊಂಡಿತ್ತು. 'ಬೇರೆ ತಾ' ಎಂದು ಹೇಳುವ ಮೊದಲು, ಅದನ್ನೇ ಅರ್ಧ ಕುಡಿದು ತೀರಿಸಿ ಬಿಟ್ಟಿದ್ದೆ.

ಬೊಜ್ಜು-ಮನುಷ್ಯರು

(ಹರಟೆ)

ಶ್ರೀ. ಕರ್ನಮಂಡಕಲ
ರಾಧಾಕೃಷ್ಣನ್

★

ಬೊಜ್ಜುವಿನ್ನು ಇರುವುದೆಂದರೆ ಹುಸಿದಂತಲ್ಲ, ಕೊಂದಂತಲ್ಲ, ಕದ್ದಂತಲ್ಲ. ಆದರೆ ಬೊಜ್ಜುವನ್ನು ಇರುವವರು ಇವೆಲ್ಲ ಪಾಪಗಳನ್ನೂ ಮಾಡಿದವರಂತೆ, ಸಮಾಜದಲ್ಲಿ ನಾಚಿಕೆಗೆ ಈಡಾಗಿ ಬಾಳಬೇಕಾಗುವುದು; ಹಲವು ಸಲ ನಗೆಗೆ ಅವಮಾನಕ್ಕೆ ಗುರಿಯಾಗಬೇಕಾಗುವುದು.

"ರಾಯರೇ ಬಾಗಿಲು" ಎಂಬ ಸ್ವರ ಕೇಳಬಂತು. "ಯಾರು?" ಎಂಬ ಪ್ರಶ್ನೆಗೆ "ನಾನು!" ಎಂಬ ಸದುತ್ತರ ಬಂತು. "ಲೋ ಹರ್ಷ, ಹೋಗಿ ಬಾಗಿಲು ತೆಗೆಯೋ?" ಎಂದೆ. "ಎರಡೂ ಬಾಗಿಲು ತೆಗೆಯಯ್ಯಾ, ಬಂದಿರುವುದು ನಾನು!" ಎಂದು ಕೂಗಿದ ದನಿ ಕೇಳಬಂತು.

ಬಂದವರು ಗಣಪತಿರಾಯರು! ಗಣಪತಿರಾಯರೇನೂ ನಾಮದ್ರೋಹಿಗಳಲ್ಲ; ಹೆಸರಿಟ್ಟ ಅಮ್ಮ-ಅಪ್ಪಂದಿರಿಗೆ ಅಪಕಾರವನ್ನೇನೂ ಮಾಡಿಲ್ಲ; ಹೆಸರಿಗೆ ತಕ್ಕ ಮೂರ್ತಿ. ಅವರ ಅಂಗಿಗೆ ಸಾಧಾರಣವಾಗಿ ನಾಲ್ಕು ಗಜ ಬಟ್ಟೆ ಬೇಕಾದೀತು. ಉಡುವುದು ಎಲ್ಲರಂತೆ ಅಡ್ಡಪಂಚೆಯಾದರೂ ನಾಲ್ಕು ಮೊಳದ್ದಲ್ಲ; ಆರು ಮೊಳವಾಗಲೇ ಬೇಕು. ಇದನ್ನೆಲ್ಲಾ ಸಿಂಗರಿಸಲು ಒಂದು ಬಟ್ಟೆಯ ಬೆಲ್ಟು. ಅದಿಲ್ಲದಿದ್ದರೆ ಪಂಚೆ ಜಾರಿದರೆ....? ಮೇಲೆ ಕೊಳಕಾದ ಬನೀನೊಂದು, ಅದೂ ಹರುಕು; ಸಾಮಾನ್ಯಕ್ಕಿಂತ ಸ್ವಲ್ಪ ಉದ್ದನೆ ಮೂಗು. ಇವರಪ್ಪ ಇವರ ತಲೆಯನ್ನೂ ಕಟಿದಿದ್ದರೆ....?

"ಈಗಿನ ಕಾಲದ ಹುಡುಗರಿಗೆ ಯೋಚನಾಶಕ್ತಿಯೇ ಹಾಳಾಗುತ್ತಿದೆ ನೋಡು, ಸುಗ್ರೀವಾ! ನಾನು ಬಂದರೆ ಎರಡೂ ಬಾಗಿಲನ್ನ ತೆರೆಯಬೇಕೆಂಬ ಜ್ಞಾನವಿಲ್ಲದಿದ್ದರೆ ಹೇಗೆ? ಮತ್ತೆ ಓದುತ್ತಿರುವುದು ಮ್ಯಾಟ್ರಿಕ್ಕು" ಎಂದು ರಾಯರು ಉದ್ಗಾರ ತೆಗೆದರು.

"ತಲೆ ಹಸಿಯದು ರಾಯರೇ, ಪರವಾಇಲ್ಲ ಕೂಡಿ" ಎಂದೆ. "ನಮ್ಮ ಸ್ಕೂಲಿನಲ್ಲಿ ಇವೆಲ್ಲ ಕಲಿಸುವುದಿಲ್ಲ" ಎಂದು ಒಳಗಿನಿಂದಲೇ ಹೇಳಿ, ಹರ್ಷ ಹಲ್ಲು ಕಿರಿದ. ವಿಷಯ ನಗೆಯಲ್ಲಿ ತೇಲಾಡಿ ಹೋಯಿತು.

* * *

ದೇವರು ಮಾನವನಿಗೆ ಮಾಡಿರುವ ಅನ್ಯಾಯ—ಅಪಕಾರ—ದ್ರೋಹಗಳಲ್ಲಿ, ಬೊಜ್ಜುಮನುಷ್ಯರನ್ನು ನಿರ್ಮಿಸಿದುದೂ ಒಂದು. ಬ್ರಹ್ಮನಿಗೆ ಆಗ ಕೋಪವೇ ಬಂದಿರಬೇಕು. ಇಲ್ಲದಿದ್ದರೆ ದಾನವನಿಗೂ ದೇವನಿಗೂ ನಡುವೆ ಈ ಬೊಜ್ಜುಮನುಷ್ಯರ ಗುಂಪನ್ನೇಕೆ ನಿರ್ಮಿಸಬೇಕಾಗಿತ್ತು? ಈ ತ್ರಿಶಂಕುಪುರುಷರ ಮರ್ಯಾದೆ ಕಾಪಾಡಲು ಅದೇ ಜಾತಿಯ ದೇವನೊಬ್ಬನನ್ನೂ ನಿರ್ಮಿಸಿದ್ದಾನೆ. "ಗಣಪ" ಎಂದೊಡನೆ ಚಂದ್ರನಿಂದ ಅವಮಾನಿತನಾಗಿ, ಬಿರುಕು ಬಿಟ್ಟ ಹೊಟ್ಟೆಗೆ ಹಾವು ಸುತ್ತಿಕೊಂಡು, ಬಡಪಾಯಿ ಪ್ರಾಣಿಯಾದ ಆ ಪುಟ್ಟ ಇಲಿಯ ಮೇಲೆ ಸವಾರಿಮಾಡಿದ ಆ ತೊಪ್ಪೆಯ ಮೂರ್ತಿ (ಕಡುಬು ಪ್ರೂಫ್) ನೆನಪಿಗೆ ಬರುತ್ತಾನೆ. ಈತನ ತೂಕವನ್ನು ಆ ಇಲಿ ಹೇಗೆ ತಡೆಯಿತೊ—ಅಥವಾ ಆಗಿನ ಇಲಿಗಳು ಈಗಿನ ಆನೆಗಳಷ್ಟು ಇದ್ದುವೋ....? ಅಂತೂ, ದೇವರ ವಿಷಯ, ದೂರವಾಗಿರುವುದೇ ಮೇಲು!

ಮನೆಯಲ್ಲಿ ಸ್ವಲ್ಪ ಬೆಳೆದ ಹುಡುಗನಿಗೆ ಅನಾಯಾಸವಾಗಿ "ಗಣಪ" ಎಂಬ ಬಿರುದು ಬರುತ್ತದೆ. ದಪ್ಪವಾಗಿ ಬೆಳೆದು ಬೊಜ್ಜಿದ್ದ ಉಪಾಧ್ಯಾಯನಂತೂ— ಅಂದೇ ತಾನು ಆ ಕೆಲಸಕ್ಕೆ ರಾಜೀನಾಮೆ ಕೊಡುವುದು ಒಳಿತು; ಇಲ್ಲದಿದ್ದರೆ ದೇವರ ನಾಮ ಕೂಡ ನೆನಪಿಗೆ ತಾರದ ಈಗಿನ ಕಾಲದ ಹುಡುಗರು, ಆ ಗುರುವಿಗೆ ಸಹಸ್ರನಾಮ ಮಾಡುತ್ತಾರೆ. ಹೀಲಿಯಮ್, ಡನ್‌ಲಪ್-ಇವು ಇಂತಹ ನಾಮಗಳಲ್ಲಿ ಎರಡು. ಇಂತಹವೆಷ್ಟೋ! ಬೊಜ್ಜು ಬೆಳೆದಿರುವ ಹೆಂಗಸರಂತೂ ಬೀದಿಯಲ್ಲಿ ಬರಲಿಕ್ಕೆ ನಾಚಿಕೆಪಡುತ್ತಾರೆ. ಸಾಮಾನ್ಯವಾಗಿ ಹೊರಗೆ ಬಂದರೆ ಜನರ ಕಣ್ಣು ಇವರ ಮೇಲೆ. ಈಗ ಆಕೆಗೆ ವಿಶೇಷ ಗುಣ ಬಂದಿದೆ; ಹಾದಿಯಲ್ಲಿ ಹೋಗುವವರಿಗೆ ಮತ್ತೇನು ಕೆಲಸ?

ಇಷ್ಟು ಕಷ್ಟಪಟ್ಟವರೊಬ್ಬರು ಹೇಳುತ್ತಿದ್ದರು: "ಬೊಜ್ಜು ಬರುವುದೆಂದರೆ ನಿಜವಾಗಿಯೂ ಒಂದು ತೆರದ ಅಪಮಾನ! ಇದು ಪಾಪದಫಲ!" ಎಂದಿದ್ದರು. ಪಾಪ!

* * *

ರೈಲಿನಲ್ಲಾಗಲಿ, ಬಸ್ಸಿನಲ್ಲಾಗಲಿ ಬೊಜ್ಜುಮನುಷ್ಯ ಕುಳಿತನೆಂದರೆ, ಕುಳಿತಿರುವ ಇತರರ ಮನಸ್ಸಿನಲ್ಲಿ "ಇದೆಂತಹ ಪ್ರಾಣಿ ಇದು? ನಾವು ತೆತ್ತಿರುವಷ್ಟೇ ಹಣ ತೆತ್ತು ನಮ್ಮ ಎರಡರಷ್ಟು ಜಾಗ ಆಕ್ರಮಿಸಿದೆ!" ಎಂಬ ತರ್ಕ. ಕೆಲವರಂತೂ ಕೈಯ ಮರೆಯಲ್ಲಿ ಹಲ್ಲು ಕಿರಿಯುತ್ತಾರೆ. ಬೊಜ್ಜು ಬಂದಿರುವ ಆ ಪ್ರಾಣಿ ಹೆಂಗಸಾಗಿದ್ದರೆ ಮತ್ತೂ ಕನಿಕರ. ಅಂತಹ ಆಕೆ ಬಸ್ಸು ಹತ್ತಿದೊಡನೆ, ಬಸ್ಸಿನ ಕಂಡಕ್ಟರು "ಗಾಡಿ ತೂತು ಹೋಯಿತು" ಎನ್ನುತ್ತಾನೆ. "ಆಕೆಗೆ ಡಬಲ್ ಟಿಕೆಟ್" ಎಂದು ಒಂದು ಸಣ್ಣಮಗು ಉಸಿರುತ್ತದೆ. ಡ್ರೈವರ್, ಸ್ವಲ್ಪ ಹೊತ್ತಾದ ನಂತರ ಗಾಡಿ ನಿಲ್ಲಿಸಿ, "ಅದೇ, ಟೈರ್ ಬರ್ಸ್ಟ್" ಎನ್ನುತ್ತಾನೆ. ಬಸ್ಸು ತೂಗಾಡುತ್ತದೆ, ಗಾಡಿಯ ಜನರೆಲ್ಲಾ ಆಕೆಯ ಕಡೆಗೆ ನೋಡುತ್ತಾರೆ, ಆಕೆ ತಲೆ ಕೆಳಗಿಡುತ್ತಾಳೆ. ಸೀರೆಯ ಅಂಚಿನ

ನಡುವಿನಿಂದ ಆಕೆಯ ಬೊಜ್ಜು ಮುಂದೆ ಬಂದು "ನನ್ನಿಂದ ನಿನಗೆಷ್ಟು ತೊಂದರೆಯೇ?" ಎಂದು ಮಾತನಾಡಿಸುತ್ತದೆ.

ಗಂಡಸಿಗೆ ಬೊಜ್ಜಿದ್ದರೆ ಅಷ್ಟು ಆಶ್ಚರ್ಯವಿಲ್ಲ. ಮೈಮುರಿದು ದುಡಿವ ಹೆಂಗಸಿಗೆ ಬೊಜ್ಜೆಂದರೆ ಎಲ್ಲರಿಗೂ ಆಶ್ಚರ್ಯ. ಲೋಕವೇ ಅಷ್ಟು: ಗಂಡಸು ಹೇಗಿರಲಿ, ಅದನ್ನು ಲೆಕ್ಕಕ್ಕೆ ತರುವುದಿಲ್ಲ ನಾವು. ಹೆಂಗಸು ಹಾಗಾದರೆ ಊರೆಲ್ಲಾ ಕಿವಿಯ ಹತ್ತಿ ತೆಗೆದು, ಆ ಸುದ್ದಿಯನ್ನು ಕಿವಿಯೊಳಗೆ ತುರುಕಿಕೊಳ್ಳುತ್ತಾರೆ. ಚಿಕ್ಕಮಕ್ಕಳಿಗೆ ಬೊಜ್ಜು ಬಂದಿತೆಂದರೆ, ಬೆಳವು ಎಂಬ ರೋಗಿನಲ್ಲಿ ತಳ್ಳುತ್ತೇವೆ.

ಗಂಡು-ಹೆಣ್ಣು ಸೇರಿ ವಿಹಾರಕ್ಕೆ ಹೊರಟಾಗ 'ಆ ಜೋಡಿ ಒಪ್ಪುವುದೇ?' ಎಂಬ ಯೋಚನೆ ಹಲವರಿಗೆ. ಗಂಡು ಸಣ್ಣಗಿದ್ದು ಹೆಣ್ಣಿಗೆ ಬೊಜ್ಜು ಬಂದಿದ್ದರೆ ಹಾದಿಯ ಜನರಿಗೆ ಆಶ್ಚರ್ಯ. ಗಂಡು ಭಾರಿಯಾಗಿದ್ದು ಹೆಣ್ಣು ಸಣ್ಣಕ್ಕಿರುವುದು ಹೊಸತೇನಲ್ಲ. ಗಣೇಶನಿಗೆ ಬೊಜ್ಜಿದ್ದರೂ ಗಣಪನ ಹೆಂಡಿರಿಗೆ ಬೊಜ್ಜಿರಲಿಲ್ಲವೆಂಬುದಕ್ಕೆ ಪುರಾಣವೇ ಸಾಕ್ಷಿ. ಆ ಮೊದಲನೆಯ ಜಾತಿಯ ಜೋಡಿಯನ್ನು ನೋಡಿದರೆ ಯಾರಿಗಾದರೂ "She is not his better half, she is his one and a half" ಎನ್ನಿಸುತ್ತದೆ. ಒಮ್ಮೆ ಹೀಗಾಗಿದ್ದ ಸಂದರ್ಭ ಕೂಡ ಉಂಟು. ಒಬ್ಬ ಉಪಾಧ್ಯಾಯರು ವಿದ್ಯಾರ್ಥಿಯೊಬ್ಬನಿಗೆ ಒಂದು ಚೀಲ ಕೊಟ್ಟು "ಇದನ್ನು ನಮ್ಮ ಮನೆಯಲ್ಲಿ ನನ್ನಾಕೆಗೆ ಕೊಟ್ಟುಬಾ" ಎಂದರಂತೆ. ಆ ಹುಡುಗ ಕೊಟ್ಟುಬಂದು "ನಿಮ್ಮ ಪತ್ನಿಯವರು ಇರಲಿಲ್ಲ; ಮನೆಯ ಮುಂದೆ ದಪ್ಪಕ್ಕೆ ಕುಳಿತಿದ್ದ ನಿಮ್ಮ ತಾಯಿಗೆ ಕೊಟ್ಟೆ" ಎಂದನಂತೆ. ಆದರೆ ಉಪಾಧ್ಯಾಯನಕ್ಕು "ಆಕೆ ನನ್ನ ತಾಯಿಯಲ್ಲ, ನನ್ನ ಪ್ರೀತಿಪಾತ್ರಳಾದ ಪತ್ನಿ!" ಎಂದನಂತೆ.

ಹೆಂಗಸರಿಗೆ ಬೊಜ್ಜು ಬರುವುದರಿಂದ ಆಗುವ ಅನರ್ಥವಿದು. ಮೈಮುರಿವ ಹೆಂಗಸಿಗೆ ಬೊಜ್ಜು ಏಕೆ ಬರಬೇಕೋ?

ನೀವು ಏನೇ ಅನ್ನಿ, ನಾನೇನು ಪಕ್ಷಪಾತದಿಂದ ಮಾತನಾಡುತ್ತಿಲ್ಲ. ಹೆಂಗಸರಿಗೆ ಬೊಜ್ಜಿನಿಂದ ಆಗುವಷ್ಟು ಅವಮಾನ ಗಂಡಸರಿಗಿಲ್ಲ. 'ಅದರಲ್ಲಿ ತಪ್ಪೇನಿದೆ?' ಎಂದು ಕೇಳಿದರೆ ನಾನು ಹೇಳಲಾರೆ. ಗಂಡಸರಿಗೆ ಬೊಜ್ಜು ಇರುವಾಗ ಹೆಂಗಸರಿಗೇಕೆ ಇರಬಾರದೆಂದರೆ ನಾನು ಉತ್ತರ ಹೇಳಲಾರೆ. ಆದರೆ ಹೆಂಗಸರಿಗೆ ಬೊಜ್ಜಿರಬಾರದೆಂದು ನನ್ನ ತೀರ್ಮಾನ. 'ಗಂಡಸರು ಸಿಗರೇಟು ಸೇದುತ್ತಾರೆ; ಹಾಗಾದರೆ ಹೆಂಗಸರೇಕೆ ಸೇದಬಾರದು?' ಈ ಪ್ರಶ್ನೆ ಸ್ತ್ರೀ ಸ್ವಾತಂತ್ರ್ಯ—ಸಮಾನತೆಗಳದ್ದಲ್ಲ. ಕಾರಣ ಹೇಳಲಿಕ್ಕಾಗದಿದ್ದರೂ, ಹೀಗಿರಬೇಕು!

ಹೆಂಗಸರಿಗೂ ಬೊಜ್ಜಿರಬೇಕೆಂದೂ, ಬೊಜ್ಜಿದ್ದರೆ ತಪ್ಪಲ್ಲವೆಂದೂ ವಾದಿಸುವ ಸಮತಾವಾದಿಗಳಿಗೆ ನನ್ನದೊಂದು ಪುಟ್ಟ ಪ್ರಶ್ನೆ :- ನಿಮ್ಮ ಹೆಂಡತಿಗೆ ಬೊಜ್ಜಿದ್ದರೆ ನೀವು ಸಹಿಸುತ್ತೀರೊ? ನಿಜವಾಗಿ ಹೇಳಿ.

ಬೊಜ್ಜು ಸಿರಿವಂತನದ ಗುರುತಾಗಿರಬಹುದು; ಆದರೆ ಮಾನವರಿಗೆಲ್ಲಾ ಮೇಲ್ಪಟ್ಟಿಯನ್ನು ದೇವ ಹಾಕಿದ್ದಾನೆ. ಯಾವ ಕೆಲಸಕ್ಕೂ ಮೊದಲು ಗಣಪನನ್ನು ವಂದಿಸುತ್ತೇವೆ. 'ಅಂತಹವನನ್ನು ಆರಾಧಿಸುವ ನಾವು ಅವನ ಹಾಗೆ ಬೊಜ್ಜು ಬೆಳೆಯಿಸುವುದರಲ್ಲಿ ತಪ್ಪೇನು?' ಎಂದು ಒಮ್ಮೊಮ್ಮೆ ಎನಿಸುತ್ತದೆ. ದೊಡ್ಡ ಮನುಷ್ಯರೆಂದು ಎನಿಸಿಕೊಳ್ಳುವವರು ಸ್ವಲ್ಪ ಬೊಜ್ಜು ಬಂದಿರುವವರೇ? ಅನೇಕ ಸಾಹುಕಾರರನ್ನು ನಾನು ಕಂಡಿದ್ದೇನೆ; ಎಲ್ಲರೂ ಹಾಗೇ! ಹೋಟಲ್ ಮಾಲೀಕರು, ಸೇಠರು— ದುಡ್ಡಿರುವ ದೊಡ್ಡಪ್ಪಂದಿರಿಗೆಲ್ಲಾ ಬೊಜ್ಜು ಒಂದು ಅಲಂಕಾರ; ಅವರ ಗುರುತು. ಯಾವ ಸಭೆ ನೆಗೆಯಲಿ, ಎಲ್ಲಿ ಜನ ಸೇರಲಿ, ಇವರಿಲ್ಲದೆ ಕೆಲಸ ನಡೆಯುವಂತಿಲ್ಲ. ಇವರಿದ್ದೆಡೆ ನಗು ತಡೆಯದಿರುವುದಕ್ಕಾಗುವುದಿಲ್ಲ. ಆದರೆ ಈ ಮಹಾನುಭಾವರಿಗೆಲ್ಲ ಒಂದು ಅವಗುಣವಿರುತ್ತದೆ: ತಮ್ಮನ್ನು ಕಂಡರೆ ಎಲ್ಲರೂ ನಗುವರೆಂದು ಗೊತ್ತಿದ್ದರೂ, ತಮಗೆ ಬೊಜ್ಜಿಲ್ಲವೇನೋ ಎಂಬಂತಿರುತ್ತಾರೆ.

* * *

ಪ್ರಕೃತಿಗೆ ಒಂದು ದುರ್ಗುಣವಿದೆ. ಈ ದುರ್ಗುಣಕ್ಕೆ Equilibrium in nature ಎಂದು ಅಜ್ಞಾನಿಗಳೆನ್ನುತ್ತಾರೆ. ಎಂತಹ ದೊಡ್ಡ ಮನುಷ್ಯನೇ ಆಗಲಿ, ಕೆಲವು ವಿಷಯಗಳಲ್ಲಿ ಹಸುಳೆಗಿಂತ ಮೂರ್ಖನಾಗುತ್ತಾನೆ. ಈ ಸಮತ್ವವನ್ನು ಇಟ್ಟಿರಲು ಪ್ರಕೃತಿ ಅವಸ್ಥೆಪಡುತ್ತದೆ. ದೊಡ್ಡ ಮೇಧಾವಿಗಳನ್ನು ನೋಡಿ, ವಿಜ್ಞಾನಿಗಳನ್ನು ನೋಡಿ, ರಾಜನೀತಿ ವಿಶಾರದರನ್ನು ನೋಡಿ, ಎಲ್ಲರೂ ಬೊಜ್ಜು ಮನುಷ್ಯರೇ! ಚರ್ಚಿಲ್, ರೂಸ್‌ವೆಲ್ಟ್, ವೆಲ್ಸ್, ಭೂಲಾಭಾಯಿ ದೇಸಾಯಿ, ಮುಸ್ಸೊಲಿನಿ, ನೆಪೋಲಿಯನ್....ಇವರನ್ನೆಲ್ಲ ನೋಡಿ! ಬೊಜ್ಜು ದೊಡ್ಡ ಮನುಷ್ಯರ ಲಕ್ಷಣವೆನಿಸಲೂಬಹುದು. ಹೀಗೆಂದಾಗ 'ಗಾಂಧಿ, ಹಿಟ್ಲರ್ ಇವರಿಗೆ ಬೊಜ್ಜು ಇಲ್ಲವಲ್ಲಾ!' ಎಂಬ ಪ್ರಶ್ನೆ ಬರಬಹುದು. ಗಾಂಧಿ, ಹಿಟ್ಲರ್ ದೊಡ್ಡ ಮನುಷ್ಯರೆಂದು ನಿಮಗೆ ಹೇಳಿದವರಾರು?

ಯೂಕ್ಲಿಡ್ ಪ್ರಸಿದ್ಧ ಗಣಿತಶಾಸ್ತ್ರಜ್ಞ. ಅವನು ಬರೆದ ರೇಖಾಗಣಿತದ ಪ್ರಮೇಯಗಳಲ್ಲಿ, ಸರಳರೇಖೆಗಿಂತ ವೃತ್ತಕ್ಕೇ ಹೆಚ್ಚು ಪ್ರಾಮುಖ್ಯತೆ. ದೇವರಿಗೆ ತೆಳ್ಳನೆಯ ಮನುಷ್ಯರಿಗಿಂತ ಗುಂಡಗೆ—ಬೊಜ್ಜಿರುವವರರನ್ನು ಕಂಡರೆ ಪ್ರೀತಿ ಹೆಚ್ಚೆಂದು ತೋರಿಸಲಿಕ್ಕೆ ಇದೂ ಒಂದು ಅಂಶ.

ಜನಗಣನೆ ಮಾಡುವಾಗ ಹೆಂಗಸರ ಗಂಡಸರ ಲೆಕ್ಕ ಮಾಡುತ್ತಾರೆ; ಜಾತಿವಿಭಾಗಗಳ ಪ್ರಕಾರ—ಬ್ರಾಹ್ಮಣ, ಲಿಂಗಾಯತರೆಂದು ಕೂಡುತ್ತಾರೆ. ನಾನು ೧೯೭೧ನೆಯ ಜನಗಣನೆಯ ಚಾಲಕರಿಗೆ ಒಂದು ಸಲಹೆ-ಬಿನ್ನಹ-ಮಾಡುತ್ತೇನೆ: ಬೊಜ್ಜು ಬಂದಿರುವ ಮನುಷ್ಯರನ್ನೂ ಎಣಿಸಲಿ. ೧೯೬೧ರ ಗಣತಿಯೇನೋ ಕೋಮುವಾರ್ ಭಾವನೆಯಿಂದ ತುಂಬಿತ್ತು. ೧೯೭೧ರಲ್ಲಾದರೂ ಇಂತಹ ವಿಚಿತ್ರ ವಿಷಯಗಳಿಗೆ ಗಮನ ಕೊಡಲಿ!

ಕರ್ನಾಟಕ ವಿಶ್ವವಿದ್ಯಾಲಯ ಪರಿಷತ್ತು

ಪ್ರೊಫೆಸರ ಆರ್. ವ್ಹಿ. ಜಾಗಿರದಾರ ಎಮ್. ಎ. [ಲಂಡನ್]

★

ಒಟ್ಟಿನಲ್ಲಿ ಕರ್ನಾಟಕ ವಿಶ್ವವಿದ್ಯಾನಿಲಯ ಪರಿಷತ್ತು ಎಲ್ಲ ಮಾತುಗಳನ್ನೂ ಕಣ್ಣೆದುರಿಗೆ ತಂದುಕೊಂಡು, ಚೆನ್ನಾಗಿ ಸಾಧಕ-ಬಾಧಕ ಪ್ರಮಾಣಗಳಿಂದ ವಿಮರ್ಶಿಸಿ, ಅತ್ಯಂತ ಸಮರ್ಪಕವಾದ ಧೋರಣೆಯಿಂದ ಕಾರ್ಯಮಾಡಿದೆ.

★

ಕಳೆದ ಮೇ ೩೦-೩೧ಕ್ಕೆ ಬೆಳಗಾಂವಿಯಲ್ಲಿ ಕ.ವಿ.ವಿ. ಪರಿಷತ್ತಿನ ಅಧಿವೇಶನ ಸೇರಿದ್ದು ಈಗಾಗಲೆ ಕನ್ನಡಿಗರಿಗೆ ಅಭಿಮಾನದ ಮಾತಾಗಿದೆ. ಕರ್ನಾಟಕದ ಸಾರ್ವಜನಿಕ ಜೀವನದಲ್ಲಿ ಮುಂದಾಳಾದ ಶ್ರೀ. ಜೋಶಿ ನಾರಾಯಣರಾಯರು ಸ್ವಾಗತಾಧ್ಯಕ್ಷರು; ಮುಂಬಯಿಯಲ್ಲಿ ಕರ್ನಾಟಕದ ಹೆಸರನ್ನೆತ್ತಿ ಹಿಡಿದ, ಸರಕಾರೀ ವಕೀಲರಾದ ಶ್ರೀ. ಆರ್. ಎ. ಜಾಹಗಿರದಾರರು ಅಧ್ಯಕ್ಷರು. ಜ್ಞಾನದ ಹಿರಿತನದಿಂದ, ಅನುಭವದ ಅನುಕೂಲತೆಯಿಂದ, ಕನ್ನಡತನದ ಅಭಿಮಾನದಿಂದ ಈ ಇಬ್ಬರು ಮಹನೀಯರು—ಪರಿಷತ್ತಿನ ಯೋಗ್ಯತೆಯನ್ನೂ ಉಪಯುಕ್ತತೆಯನ್ನೂ ಹೆಚ್ಚಿಸಿದರೆಂಬುದರಲ್ಲಿ ಸಂದೇಹವಿಲ್ಲ.

ಸ್ವಾಗತಾಧ್ಯಕ್ಷರ ಮತ್ತು ಅಧ್ಯಕ್ಷರ ಭಾಷಣಗಳಲ್ಲಿ ಇಡಿಯ ಕರ್ನಾಟಕದ ಒಮ್ಮನಸ್ಸಿನ ಬೇಡಿಕೆಗಳು ಸ್ಪಷ್ಟವಾಗಿ ದನಿಗೊಂಡಿವೆ. ಸ್ವಾಗತಾಧ್ಯಕ್ಷರು ತಮ್ಮ ಭಾಷಣದ ಪ್ರಾರಂಭದಲ್ಲಿಯೆ ಪರಿಷತ್ತನ್ನು ಕಾರ್ಯಪ್ರವೃತ್ತವಾಗುವಂತೆ ಎಚ್ಚರಿಸಿ, ಹುರಿದುಂಬಿಸಿದರು. 'ಕರ್ನಾಟಕಕ್ಕೆ ಸ್ವತಂತ್ರವಾದ ವಿದ್ಯಾಪೀಠವು ಬೇಕೋ ಹೇಗೆ—ಎಂಬುದರ ಬಗ್ಗೆ ಸಾಧಕ ಬಾಧಕವಾಗಿ ಚರ್ಚಿಸಿ, ಎಲ್ಲ ರೀತಿಯಿಂದಲೂ ಈ ಪ್ರಶ್ನೆಯ ವಿಚಾರ ಮಾಡಿ, ವರದಿಯನ್ನು ತಯಾರಿಸಲು ಒಂದು ಮಂಡಲವನ್ನು ನಿಯಮಿಸುವುದೆ ಈ ಪರಿಷತ್ತಿನ ಕಾರ್ಯ' ಎಂಬ ಅವರ ವಾಕ್ಯವು, ಅವರ-ಅದರಂತೆ ಎಲ್ಲ ಕನ್ನಡಿಗರ-ಕಾರ್ಯನಿರ್ಧಾರದ ದ್ಯೋತಕವಾಗಿದೆ. 'ರಾಜ್ಯಾಡಳಿತದಲ್ಲಿ ತುಂಡುತುಂಡಾಗಿ ಬೇರೆ ಬೇರೆ ಪ್ರಾಂತಗಳಲ್ಲಿ ಹಂಚಿ ಹೋದ ಕರ್ನಾಟಕವು, ಉಚ್ಚ ಶಿಕ್ಷಣದ ವಿಷಯದಲ್ಲಿ ನಷ ಒಂದೇ ಆಡಳಿತಕ್ಕೆ ಒಳಪಟ್ಟಿಲ್ಲ' ಎಂದು ಶ್ರೀ. ಜೋಶಿ ನಾರಾಯಣರಾಯರು ತೋರಿಸಿದ ಸಂಗತಿಯಿಂದ ಕರ್ನಾಟಕಕ್ಕೆ ಯಾವ ಅನ್ಯಾಯವಾಗಿದೆ ಎಂಬುದನ್ನು, ಅಧ್ಯಕ್ಷ ಶ್ರೀ. ಜಾಹಗೀರದಾರರು ಈ ವಾಕ್ಯಗಳಲ್ಲಿ ಕಾಣಿಸಿದ್ದಾರೆ: 'ಡೆಕ್ಕನ್ ಮತ್ತು ಎಲ್ಫಿನ್‌ಸ್ಟನ್ ಕಾಲೇಜುಗಳು ಆರಂಭವಾಗಿ ೭೦ ವರ್ಷಗಳಾದ ಮೇಲೆ, ನಮ್ಮ ಕಡೆಯಿಂದ ೨ ಲಕ್ಷ ರೂಪಾಯಿಗಳ ವಂತಿಗೆಯನ್ನು ತೆಗೆದುಕೊಂಡು ಸರಕಾರದವರು ಕರ್ನಾಟಕ ಕಾಲೇಜನ್ನು ತೆರೆದರು. ಇದೊಂದೇ ವಿಷಯವು ಕರ್ನಾಟಕದ ಬಗ್ಗೆ ಮುಂಬಯಿ ಸರಕಾರದಲ್ಲಿದ್ದ ಅನಾಸ್ಥೆಯನ್ನು ವ್ಯಕ್ತಪಡಿಸುತ್ತದೆ. ಈಗಿನ ಮುಂಬಯಿ ವಿಶ್ವವಿದ್ಯಾಲಯದಲ್ಲಿ ಕರ್ನಾಟಕಕ್ಕೆ ಪ್ರಾತಿನಿಧ್ಯವಿಲ್ಲ' *

ಕರ್ನಾಟಕಕ್ಕೆ ವಿಶ್ವವಿದ್ಯಾಲಯವು ಯಾಕೆ ಅಗತ್ಯವಿದೆ ಎಂಬುದಕ್ಕೆ ಇಬ್ಬರೂ ಹಿರಿಯರು ಬಲವಾದ ಕಾರಣಗಳನ್ನು ಕಾಣಿಸಿದ್ದಾರೆ. ಒಂದು ಕಡೆ ಆಂಧ್ರರ ವಿಶ್ವವಿದ್ಯಾಲಯ, ಇನ್ನೊಂದೆಡೆ ಮಹಾರಾಷ್ಟ್ರದ ಯೋಜನೆ; 'ಇಂಥ ಸಮಯದಲ್ಲಿ ಕರ್ನಾಟಕಸ್ಥರು ತಮ್ಮ ಸಂಸ್ಕೃತಿಯ ಸಂರಕ್ಷಣೆ ಮತ್ತು ಅಭಿವೃದ್ಧಿಗಳ ವಿಚಾರ ಮಾಡದೆ ಕೂಡುವುದು ಹೇಗೆ?' ಎಂದು ಸ್ವಾಗತಾಧ್ಯಕ್ಷರ ಆವ್ಹಾನ. 'ಹೀಗೆ ಹರಿದು ಹಂಚಿಹೋದ ಕನ್ನಡನಾಡಿನ ಎಲ್ಲ ತುಣುಕುಗಳನ್ನೂ ಒಂದು ವಿಶ್ವವಿದ್ಯಾಪೀಠದ ಉದರದಲ್ಲಿಟ್ಟು ಪೋಷಿಸಿ ಸಾಂಸ್ಕೃತಿಕ ಏಕೀಕರಣವನ್ನೆಸಗುವುದೂ ಕರ್ನಾಟಕ ವಿದ್ಯಾಪೀಠದ ಸ್ಥಾಪನೆಯ ಉದ್ದೇಶಗಳಲ್ಲೊಂದಾಗಿದೆ' ಎಂದು ಅಧ್ಯಕ್ಷರ ಆಕಾಂಕ್ಷೆ. ಕರ್ನಾಟಕ ವಿಶ್ವವಿದ್ಯಾಲಯದ ಪ್ರಶ್ನೆ ತಾತ್ಕಾಲಿಕವಾದುದಲ್ಲ, ಕಳೆದ ಇಪ್ಪತ್ತೈದು ವರ್ಷಗಳಿಂದ ಅಖಿಲ ಕರ್ನಾಟಕ ಸಮ್ಮೇಳನಗಳಲ್ಲಿ (ರಾಜಕೀಯವಿರಲಿ ಸಾಹಿತ್ಯಿಕವಿರಲಿ) ಏಕಮತದ ಬೇಡಿಕೆ ಇದೆ; ಇದಲ್ಲದೆ 'ಮಹಾರಾಷ್ಟ್ರ, ಗುಜರಾತ, ಕರ್ನಾಟಕ ಮತ್ತು ಸಿಂಧ..ಪ್ರತಿಯೊಂದು ಪ್ರಾಂತದ ಮುಖ್ಯ ಪಟ್ಟಣದಲ್ಲಿ ಒಂದೊಂದು ವಿದ್ಯಾಪೀಠವನ್ನು ಸ್ಥಾಪಿಸುವುದು ಉಚ್ಚ ಶಿಕ್ಷಣದ ವಿಕಾಸಕ್ಕೆ ಆವಶ್ಯಕ

* ದಪ್ಪಕ್ಷರಗಳನ್ನು ನಾವು ಕಾಣಿಸಿದ್ದೇವೆ. —ಲೇ.

ಇರುವದು' ಎಂದು ಸರಕಾರ ನಿಯುಕ್ತ ಸಮಿತಿಯೊಂದು ೧೯೩೪ ರಲ್ಲಿಯೆ ಅಭಿಪ್ರಾಯಪಟ್ಟಿದೆ ಎಂಬ ಮಹತ್ತ್ವದ ಮಾತುಗಳನ್ನು ಅಧ್ಯಕ್ಷರಿಬ್ಬರೂ ಸ್ಪಷ್ಟವಾಗಿ ತೋರಿಸಿಕೊಟ್ಟಿದ್ದಾರೆ. ಇದಲ್ಲದೆ ವಿಶ್ವವಿದ್ಯಾಲಯದ ಯೋಜನೆ ಮತ್ತು ಸ್ವರೂಪ ಇವುಗಳ ಬಗ್ಗೆಯೂ ಈ ಹಿರಿಯರು ಹಾದಿಯನ್ನು ತೋರಿಸಿದ್ದಾರೆ.

ಇಂತಹ ಮಾರ್ಗದರ್ಶಕರ ನೇತೃತ್ವದಲ್ಲಿ ಪರಿಷತ್ತು ವ್ಯಾವಹಾರಿಕವಾದ ಮತ್ತು ಸಮಂಜಸವಾದ ಗೊತ್ತುವಳಿಗಳನ್ನು ಸ್ವೀಕರಿಸಿದ್ದು ಆಶ್ಚರ್ಯವಲ್ಲ. ಪರಿಷತ್ತುಗಳ ರೂಢಿಯಂತೆ ಇಲ್ಲಿ ಗೊತ್ತುವಳಿಗಳ ಸುರಿಮಳೆಯನ್ನು ಸುರಿಸಿಲ್ಲ. ಅಗತ್ಯವಾದ ಮತ್ತು ಉಪಯುಕ್ತವಾದ ೪-೬ ಮಾತ್ರ ಗೊತ್ತುವಳಿಗಳಿವೆ. ಒಂದು ದೃಷ್ಟಿಯಿಂದ ಎಲ್ಲ ಗೊತ್ತುವಳಿಗಳೂ ಒಂದೇ ವಿಷಯದ ಬೇರೆ ಬೇರೆ ಭಾಗಗಳಾಗಿವೆ ಎಂದು ಹೇಳಬಹುದು. (೧) ಕರ್ನಾಟಕ ವಿಶ್ವವಿದ್ಯಾಲಯದ ಸ್ಥಾಪನೆಗೆ ಕೈಕೊಳ್ಳಬೇಕಾದ ಅಗತ್ಯದ ಯೋಜನೆ, (೨) ಕನ್ನಡ ಸಂಸ್ಥಾನಗಳ ಪ್ರಶ್ನೆ, (೩) ಮಹಾರಾಷ್ಟ್ರ ವಿಶ್ವವಿದ್ಯಾಲಯದ ಯೋಜನೆಯಿಂದ ಉದ್ಭವಿಸಿದ ಪ್ರಶ್ನೆ- ಈ ಮೂರೇ ಮಾತುಗಳನ್ನು ಕುರಿತು, ಕ. ವಿ. ವಿ. ಪರಿಷತ್ತು ಗೊತ್ತುವಳಿಗಳನ್ನು ಸ್ವೀಕರಿಸಿದೆ.

(೧) ನಮಗೊಂದು ವಿಶ್ವವಿದ್ಯಾಲಯ ಬೇಕೆಂದಾಗಲಿ, ಮಹಾರಾಷ್ಟ್ರ ವಿ. ವಿ. ಸಮಿತಿಯ ಬದಲಾಗಿ ಪ್ರಾದೇಶಿಕ ವಿ. ವಿದ್ಯಾಲಯಗಳ ಸ್ಥಾಪನೆಯ ಸಮಿತಿಯನ್ನು ಸರಕಾರವು ನಿಯಮಿಸಬೇಕಾಗಿತ್ತೆಂದಾಗಲಿ, ಈಗ ಕೂಡಲೆ ಕರ್ನಾಟಕ ವಿ. ವಿ. ಸಮಿತಿಯನ್ನು ಸರಕಾರವು ನಿಯಮಿಸಬೇಕೆಂದಾಗಲಿ ಕೇವಲ ಹಟ ತೊಟ್ಟು ಪರಿಷತ್ತಿಗೆ ಯಾವ ಸಮಾಧಾನವೂ ಇಲ್ಲ. ಯಾಕೆಂದರೆ, ಆ ಮಾರ್ಗವಾಗಿ ಕಾರ್ಯಸಾಧನೆಯಾಗುವಂತಿಲ್ಲ. ಆದಕ್ಕಾಗಿ ಕ. ವಿ. ವಿ. ಪರಿಷತ್ತು ಈ ವಿಷಯ ಕೇವಲ ತನ್ನ ಅಭಿಪ್ರಾಯವನ್ನು ಸೂಚಿಸಿದೆ. ಇದಲ್ಲದೆ ಕರ್ನಾಟಕವು ಬೇರೆ ಬೇರೆ ಸರಕಾರಗಳಲ್ಲಿ ಹಂಚಿದುದೊಂದು ತೊಂದರೆ ಎಂಬುದನ್ನೂ ಮರೆಯುವಂತಿಲ್ಲ. ಒಂದು ವೇಳೆ ಈ ಎಲ್ಲ ಸರಕಾರಗಳೂ ನಮ್ಮ ಬೇಡಿಕೆಯನ್ನು ಮನ್ನಿಸುವವು— ಎಂದು ತಿಳಿಯೋಣ. ಆದರೆ ಅಷ್ಟಕ್ಕೆ ಬೇಕಾಗುವ ಅನಾವಶ್ಯಕ ಕಾಲವಿಳಂಬವು ಪರಿಷತ್ತಿಗೆ ಇಷ್ಟವಿಲ್ಲ. ಸದ್ಯಕ್ಕೆ ಈ ಸರಕಾರಗಳು ಯಾವ ಧೋರಣೆಯನ್ನೆ ತಾಳಲಿ, ನಾವು ಮಾತ್ರ ಕೂಡಲೆ ಕಾರ್ಯಕ್ಕೆ ತೊಡಗಬೇಕು-ಎಂದು ಪರಿಷತ್ತಿನ ನಿರ್ಧಾರವಾಗಿದೆ. ಆ ನಿರ್ಧಾರವನ್ನು ಕೂಡಲೆ ನಡೆಯಿಸುವಂತೆ ಪರಿಷತ್ತು ಯೋಜನೆಗಳನ್ನೂ ಕೈಕೊಂಡಿದೆ. ಈ ಯೋಜನೆ ಎರಡು ವಿಧವಾಗಿವೆ:— (ಅ) ವಿಶ್ವವಿದ್ಯಾಲಯಕ್ಕಾಗಿ ಜನ-ಧನ ಸಹಾಯವನ್ನು ಎಲ್ಲ ರೀತಿಯಿಂದ ಕೂಡಿಸಿ, ಪ್ರಚಾರಮಾಡಿ, ಪ್ರಯತ್ನಗಳನ್ನು ಸಂತತವಾಗಿ ಸಾಗಿಸಲು ಒಂದು ವಿಶ್ವವಿದ್ಯಾಲಯ ಮಂಟಪ (Karnatak University Association) ಎಂಬ ಸ್ಥಾಯಿ ಸಂಸ್ಥೆ ; (ಆ) ವಿಶ್ವವಿದ್ಯಾಲಯದ ರೂಪರೇಷೆಗಳನ್ನೂ ಹಣಕಾಸಿನ ಅಂದಾಜನ್ನೂ ಆದರ ಸ್ಥಾನಮಾನಗಳನ್ನೂ ಅಭ್ಯಾಸದಿಂದ ಗೊತ್ತುಪಡಿಸಲು ಒಂದು ತಜ್ಞರ ಸಮಿತಿ. ಇದಿಷ್ಟನ್ನೆ ಗೊತ್ತುಮಾಡಿ, ಪರಿಷತ್ತು ತನ್ನ ವ್ಯವಹಾರ್ಯಬುದ್ಧಿಯನ್ನು ತೋರಿಸಿದೆ. ಯಾಕೆಂದರೆ ಈ ಯೋಜನೆಗಳನ್ನೂ ವಿವರವನ್ನೂ ಗೊತ್ತುಮಾಡುವುದು, ಒಂದೆರಡು ದಿನಗಳ ಅವಸರದ ಅಧಿವೇಶನದಲ್ಲಾಗಲಿ ನೂರಾರು ಜನರು ಚರ್ಚಿಸುವಲ್ಲಾಗಲಿ ಶಕ್ಯವಿಲ್ಲ, (ಇದಕ್ಕೆ ಉದಾಹರಣೆ ಎಂಬಂತೆ ಒಂದು ಚಿಕ್ಕ ವಿಷಯದಲ್ಲಿಯೆ ಕಟು ಅನುಭವ ಬಂದಿತ್ತು). ತಜ್ಞರ ಸಮಿತಿಗಂತೂ ಅವಸರವು ಅನಿಷ್ಟವಾದುದೆ. ತಜ್ಞರು, ಬಹುವಿದ್ದವರು, ಸಮಿತಿಯಲ್ಲಿ ದುಡಿಯಲು ಒಪ್ಪುವವರು, ಸಹಾನುಭೂತಿಗರು—ಇಂತಹರನ್ನು ವಿಚಾರಪೂರ್ವಕವಾಗಿಯೆ ಗೊತ್ತುಪಡಿಸಬೇಕಾಗುವುದು. ಆದಕ್ಕೂ ಮುಂಚಿತ ಈ ತಜ್ಞರ ಸಮಿತಿಯ ವಿಚಾರಣೆಗೆ ಅವಶ್ಯವಿದ್ದ ವೆಚ್ಚದ ವ್ಯವಸ್ಥೆಯನ್ನೂ ಮಾಡಬೇಕಾಗುವುದು. ಈ ವ್ಯವಸ್ಥೆಗಾಗಿಯೆ ಮೊದಲು ವಿ. ವಿ. ಮಂಟಪವು ಅಸ್ತಿತ್ವದಲ್ಲಿ ಬರಬೇಕಾಗುವುದು. ಈ ಮಂಟಪಕ್ಕೆ ಘಟನೆಯನ್ನೂ ಅಸ್ತಿತ್ವವನ್ನೂ ಬೇಗನೆ ತಂದುಕೊಡುವ ಉದ್ದೇಶದಿಂದ, ಕ. ವಿ. ವಿ. ಪರಿಷತ್ತು ಚಿಕ್ಕದೊಂದು ಉಪಸಮಿತಿಯನ್ನು ಗೊತ್ತುಮಾಡಿದೆ. ಈ ಉಪಸಮಿತಿ ಆದಷ್ಟು ಬೇಗ ತನ್ನ ಕೆಲಸವನ್ನು ಪ್ರಾರಂಭಿಸಿ



ಶರಣಸಂದೇಶ

(ವಾರಪತ್ರಿಕೆ)

ಸಂಪಾದಕರು : ಶ್ರೀ. ಹರ್ಡೇಕರ್ ಮಂಜಪ್ಪನವರು

ಹಿಂದೂ ಸಂಘಟನೆಯ ಗುರಿಯನ್ನಿಟ್ಟುಕೊಂಡು ಯಶಸ್ವಿಯಾಗಿ ಕಾರ್ಯನಡಸುತ್ತಿರುವ ಕನ್ನಡ ವೃತ್ತಪತ್ರಿಕೆಯೆಂದರೆ ಇದೊಂದೆ. ದೇಶ-ವಿದೇಶದ ವರ್ತಮಾನಗಳನ್ನೂ ವಿಚಾರಪೂರ್ಣ ಲೇಖನಗಳನ್ನೂ ಇದರಲ್ಲಿ ಓದಬಹುದು.

ವಾರ್ಷಿಕವರ್ಗಣಿ ಅಂಚೆವೆಚ್ಚ ಸೇರಿ ೩-೦-೦ ಗಳು.

' ಶರಣಸಂದೇಶ '

ಪೋಸ್ಟ : ಆಲಮಟ್ಟಿ, ಜಿಲ್ಲಾ: ವಿಜಾಪೂರ.

ಕ್ರಮಬದ್ಧವಾದ ಮಂಟಪಕ್ಕೆ ಎಡೆಮಾಡಿಕೊಡಬೇಕೆಂದು ಎಲ್ಲರ ಆಶೆ.

(೨) ಕರ್ನಾಟಕವು ಹರಿದುಹಂಚಿಹೋದುದು ಮಾತ್ರವಲ್ಲ ; ಅನೇಕ ಚಿಕ್ಕದೊಡ್ಡ ದೇಶೀಯ ಸಂಸ್ಥಾನಗಳಲ್ಲಿ ಸಿಕ್ಕಿಕೊಂಡಿವೆ, ಕೆಲವೆಡೆ ಸಂಧಿವಾತದಿಂದ ಬಳಲುವ ದೇಹಭಾಗದಂತಿದೆ. ಮೈಸೂರಲ್ಲಿ ಕನ್ನಡ (?) ವಿಶ್ವವಿದ್ಯಾಲಯವಿದ್ದರೆ, ನಿಜಾಂ ಹೈದ್ರಾಬಾದದಲ್ಲಿ ಕನ್ನಡಕ್ಕೆ ತಕ್ಕ ಸ್ಥಾನವೆ ಇಲ್ಲ, ಇನ್ನು ಕೆಲವು ಸಂಸ್ಥಾನಗಳಲ್ಲಿ ಯಾವ ಸ್ಥಾನವೂ ಇಲ್ಲ ! ಈ ಸ್ಥಿತಿಯನ್ನು ಸುಧಾರಿಸಿಕೊಳ್ಳುವುದು ಹೇಗೆ? ನಾಳೆ ಕರ್ನಾಟಕ ವಿಶ್ವವಿದ್ಯಾಲಯವಾಗಿ ಅದರಲ್ಲಿ ಇವುಗಳ ಸೇರ್ಪಡೆಯಾಗುವುದಾದರೆ ಇಂದಿನಿಂದ ಅಲ್ಲಿ ಮೊದಲು ಕನ್ನಡಕ್ಕೆ ಸ್ಥಾನವಾದರೂ ಬೇಕಲ್ಲವೆ ? ಪರಿಷತ್ತಿಗೆ ಈ ವಿಷಯದಲ್ಲಿ ಒಂದು ಮಾರ್ಗದರ್ಶಕವಾದ ಅಭಿಪ್ರಾಯವನ್ನು ಹೇಳುವ ಹೊರತು ಬೇರೆ ಏನೂ ಮಾಡಲು ಸಾಧ್ಯವಿರಲಿಲ್ಲ, ಮಾಡಬೇಕೆಂಬ ಉತ್ಸಾಹದ ಅಧ್ವಾರಿಗೂ ಪರಿಷತ್ತು ಬೀಳಲಿಲ್ಲ. ಯಾಕೆಂದರೆ, ಒಂದು ಸ್ಥಾಯಿ ಸಂಸ್ಥೆ ಅಸ್ತಿತ್ವದಲ್ಲಿ ಬರುವುದಿದೆ. ಕ.ವಿ.ವಿ. ಪರಿಷತ್ತಿನ ಕಾರ್ಯದಕ್ಷತೆಯನ್ನು ಲಕ್ಷ್ಯದಲ್ಲಿಟ್ಟು ಈ ಸ್ಥಾಯಿ ಸಂಸ್ಥೆಯು—ಎಂದರೆ ವಿ. ವಿ. ಮಂಟಪವು—ಸಂಸ್ಥಾನಗಳಲ್ಲಿ ಕನ್ನಡಕ್ಕೆ ಸ್ಥಾನಮಾನಗಳನ್ನು ಕಾಯ್ದುಕೊಳ್ಳುವಂತೆ ನೋಡಬೇಕು. ಮೈಸೂರಿನ ಪ್ರಶ್ನೆ ಸದ್ಯಕ್ಕೆ ಏಳುವುದೆ ಇಲ್ಲ, ಹೈದರಾಬಾದಿನಲ್ಲಿ ಮತ್ತು ಮಿಕ್ಕ ಸಂಸ್ಥಾನಗಳಲ್ಲಿ ಸದ್ಯಕ್ಕೆ ಕನ್ನಡದ ಸ್ಥಾನ-ಮಾನಗಳು ಬದುಕಬೇಕು, ಮುಂದೆ ಆ ಕನ್ನಡ ಭಾಗಗಳು ಕ. ವಿ. ವಿದ್ಯಾಲಯಕ್ಕೆ ಸೇರಬೇಕು ಎಂದು ಪರಿಷತ್ತು ಬಯಸಿದೆ.

(೩) ಕೊನೆಯದಾಗಿ, ಮಹಾರಾಷ್ಟ್ರ ವಿಶ್ವವಿದ್ಯಾಲಯ ವಿಚಾರಣಾಸಮಿತಿಯಿಂದ ಉದ್ಭವಿಸಿದ ಪ್ರಶ್ನೆಗಳು. 'ಮುಂಬರಿದ ಮಹಾರಾಷ್ಟ್ರಕ್ಕೆ ವಿಶ್ವವಿದ್ಯಾಲಯ ಬೇಗ ದೊರೆತಷ್ಟು ತಮಗೆ ಆನಂದವೆ ಇದೆ' ಎಂಬ ಕನ್ನಡಿಗರ ಅಭಿಪ್ರಾಯವನ್ನು ಪರಿಷತ್ತು ವ್ಯಕ್ತಮಾಡಿದೆ. ಆದರೆ ಎರಡು ವಿಷಯಗಳಲ್ಲಿ ಮಾತ್ರ ನಾವು ಕಣ್ದೆರೆದೇ ನಡೆಯಬೇಕಾಗಿದೆ. ಒಂದು, ಕೆಲವು ಕಿಡಿಗೇಡಿ ಕನ್ನಡಕಂಟಕರ ಅಪಪ್ರಚಾರ. ಮ. ವಿ. ವಿದ್ಯಾಲಯಕ್ಕೆ ಕರ್ನಾಟಕದ ಭಾಗವನ್ನು (ಕೆಲವು) ಕೂಡಿಸಬೇಕೆಂದು ಈ 'ಮಂಗಮಹಾರಾಷ್ಟ್ರೀಯ'ರ ದುರಾಶೆ. ಅಂತಹರಿಗೆ ಪರಿಷತ್ತು ಖಂಡತುಂಡವಾದ ಮಾತುಗಳಲ್ಲಿ ಎಚ್ಚರಿಕೆಯನ್ನೂ ಕೊಟ್ಟಿದೆ. ಗಡಿನಾಡಿನ ಗೊಂದಲವನ್ನೆಬ್ಬಿಸಿದಲ್ಲಿ ಯಾರಿಗೂ ಸುಖವಾಗಲಿಕ್ಕಿಲ್ಲ, ತಮ್ಮ ಕಾರ್ಯಸಿದ್ಧಿಯೂ ಆಗಲಿಕ್ಕಿಲ್ಲ—ಎಂದು ಆ ಕಿಡಿಗೇಡಿಗಳು ತಿಳಿಯಲಿ. ಮಹಾರಾಷ್ಟ್ರದ ನಿಜವಾದ ಮುಂದಾಳುಗಳು ಈ ಅಪಪ್ರಚಾರಕ್ಕೆ ಆಹುತಿಯಾಗಿಲ್ಲವಾದರೂ ಕರ್ನಾಟಕದಲ್ಲಿದ್ದ 'ಕ. ಮ. ಕಂಪನಿ' ಪಂಚಮುದಲದವರಿಗೆ ಈ ಎಚ್ಚರಿಕೆಯನ್ನು ಕೊಡುವುದು ಅವಶ್ಯವಾಗಿದೆ. ಎರಡನೆಯ ವಿಷಯ, ಮಹಾರಾಷ್ಟ್ರ ವಿಶ್ವವಿದ್ಯಾಲಯವು ನಮ್ಮದಕ್ಕಿಂತ ಮುಂಚೆ ಅಸ್ತಿತ್ವದಲ್ಲಿ ಬಂದರೆ. ಅಂತಹ ಪರಿಸ್ಥಿತಿಯಲ್ಲಿ ಕರ್ನಾಟಕದ ಅನೇಕ ಶಿಕ್ಷಣಸಂಸ್ಥೆಗಳು ಮ. ವಿ. ವಿದ್ಯಾಲಯದ ಮಾನ್ಯತೆ (affiliation) ಯನ್ನು ಪಡೆದುಕೊಳ್ಳುವ ವ್ಯಾಮೋಹಕ್ಕೆ ಸಿಕ್ಕಬಹುದು. ಅಂತಹರಿಗೆ ಕ. ವಿ. ವಿ. ಪರಿಷತ್ತು ಒಂದು ಮಹತ್ತ್ವದ ಸೂಚನೆಯನ್ನು ಕೊಟ್ಟಿದೆ : ಆ ಸಮಯದಲ್ಲಿ ಕನ್ನಡಸಂಸ್ಥೆಗಳು ಕೇವಲ ವ್ಯಾವಹಾರಿಕ ಅನುಕೂಲತೆಗಳನ್ನು ನೋಡಬಾರದು. ಯಾವ ಕಾರಣಕ್ಕಾಗಿಯೂ ಮ. ವಿ. ವಿದ್ಯಾಲಯದ ಮಾನ್ಯತೆಯನ್ನು ಪಡೆದುಕೊಳ್ಳಬಾರದು; ಈಗಿದ್ದಂತೆ ಮುಂಬಯಿ ವಿಶ್ವವಿದ್ಯಾಲಯದಲ್ಲಿಯೆ ಉಳಿದುಕೊಳ್ಳಬೇಕು.

ಒಟ್ಟಿನಲ್ಲಿ ಕರ್ನಾಟಕ ವಿಶ್ವವಿದ್ಯಾಲಯ ಪರಿಷತ್ತು ಅತ್ಯಂತ ಸಮರ್ಪಕವಾದ ಧೋರಣೆಯನ್ನು ತಾಳಿದೆ, ಚೆನ್ನಾದ ಕಾರ್ಯಕ್ಷಮತೆಯನ್ನು ತೋರಿಸಿದೆ, ತನ್ನ ಮುಂದಿದ್ದ ಪ್ರಶ್ನೆಯನ್ನು ನೇರವಾಗಿ ನೋಡಿಕೊಂಡಿದೆ ಎಂದು ಹೇಳಬಹುದು. ಕೆಲಕಾಲ ಮುಂಬಯಿ ಪ್ರಾಂತದ ಶಿಕ್ಷಣಮಂತ್ರಿಗಳಾಗಿದ್ದ ಸರ್ ಸಿದ್ದಪ್ಪ ಕಂಬಳಿಯವರು ಈ ಪರಿಷತ್ತಿನ ಉದ್ಘಾಟನೆಯನ್ನು ನೆರವೇರಿಸಿದ್ದು ಯೋಗ್ಯ ಸಂದರ್ಭ, ಶುಭಚಿಹ್ನ ಎಂದು ಹೇಳಬಹುದು. ಸರ್ ಸಿದ್ದಪ್ಪನವರು ಏಕೀಕರಣದ ಉತ್ಸಾಹಿಗಳು, ಕರ್ನಾಟಕದಲ್ಲಿ ಹಿರಿಯರು, ಇಡಿಯ ಪ್ರಾಂತದಲ್ಲಿ ಗೌರವಸ್ಥರು, ಶಿಕ್ಷಣಸಮಸ್ಯೆಗಳ ತಜ್ಞರು; ಇಂತಹರ ಸಹಾಯ-ಸಹಾನುಭೂತಿಗಳೆಂದರೆ ದೊಡ್ಡ ಬಂಡವಾಳವಿದ್ದಂತೆ. ಪರಿಷತ್ತಿನಲ್ಲಿ ಕಂಡುಬಂದ ಸೌಹಾರ್ದ, ಏಕಮತ್ಯ, ಕಾರ್ಯನಿರ್ಧಾರ ಇವು ಘಟನಾಸಮಿತಿಯವರಲ್ಲೂ ಮೂಡಲಿ, ಮುಂಬರುವ **ಕ. ವಿ. ವಿ. ಮಂಟಪದಲ್ಲೂ** ಬೆಳಗಲಿ ಎಂದು ಪ್ರತಿಯೊಬ್ಬ ಕನ್ನಡಿಗನ ಹಾರಯಿಕೆ.

ನಿರ್ಭಾಗ್ಯ ಕೋರಿಯಾ! ★

ಶ್ರೀ. ಸಿ. ಬಿ. ಬೆಲ್ಲದ ಇಟಗಿ

★

ಸಿರಿಸಂಪತ್ತುಗಳಿಂದ, ಪ್ರಾಚೀನ ಸಂಸ್ಕೃತಿಯಿಂದ, ರಾಜಕೀಯ ಇತಿಹಾಸದ ಉಜ್ವಲತೆಯಿಂದ, ಜನತೆಯ ಬುದ್ಧಿವೈಭವದಿಂದ ಕೋರಿಯಾದ ಯೋಗ್ಯತೆಯು ಮೇಲಿನ ಮಟ್ಟಕ್ಕೇರಿ ನಿಲ್ಲುವುದು; ಆದರೂ ಇಂದದು ಪರಾಧೀನತೆಯ ನರಕದಲ್ಲಿ ಹೊರಳಾಡುತ್ತಿದೆ.

★

ಕೋರಿಯಾ ದೇಶದ ಸ್ವಾತಂತ್ರ್ಯಾಪಹರಣದ ಇತಿಹಾಸವು ತೀರ ಹೊಸದು. ಇಂದಿಗೆ ಸುಮಾರು ೪೦೦೦ ವರ್ಷಗಳಿಂದ ಅಖಂಡವಾಗಿ ಸ್ವಾತಂತ್ರ್ಯಸುಖವನ್ನನುಭವಿಸುತ್ತ ಬಂದ ಈ ಪ್ರಾಚೀನ ರಾಷ್ಟ್ರವು ಪರದಾಸ್ಯಶೃಂಖಲೆಗಳಿಂದ ಬಂಧಿತವಾಗಿ, ಈಗ ತಾನೇ ಕಾಲುಶತಕವು ಪೂರ್ತಿಯಾಗಿದೆ. ಈ ಉದ್ವೇಗಜನಕ ಇತಿಹಾಸವು, ವಿಸ್ಮಯಜನಕವಾಗಿರುವಂತೆ ಉದ್ಬೋಧಕವೂ ಆಗಿದೆ.

ಯಾವ ತೀರ ಚಿಕ್ಕ ರಾಷ್ಟ್ರವು, ಪಾಶವಶಕ್ತಿಬಲದಿಂದ ಅರ್ಧಾಧಿಕ ಸೃಷ್ಟಿಯನ್ನೂ ಥರಥರ ನಡುಗಿಸಿದ ಕ್ರೂರ ಮುಸಲ್ಮಾನೀ ಖಡ್ಗಕ್ಕೆ ಸೊಪ್ಪು ಹಾಕಲಿಲ್ಲವೋ, ಅದರಂತೆ ಜಗತ್ತನ್ನೆಲ್ಲ ವ್ಯಾಪಿಸಿದ ಕ್ರೈಸ್ತ ಧರ್ಮೀಯರಿಗೂ ಎಡೆಗೊಡದೆ, ಶತಕಾನುಶತಕ ತನ್ನ ಸ್ವಾತಂತ್ರ್ಯವನ್ನು ಅಬಾಧಿತವಾಗಿ ಕಾಪಾಡಿಕೊಂಡು ಬಂದಿತೊ, ಅಂತಹ ಈ ಪ್ರಾಚೀನ ರಾಷ್ಟ್ರದ ಸ್ವಾತಂತ್ರ್ಯವನ್ನು, ಅದರ ನೆರೆಯ ಪೌರ್ವಾತ್ಯರಾಷ್ಟ್ರವೇ ಒಂದು—ಜಪಾನವು—ಹೇಗೆ ವಿಶ್ವಾಸಘಾತದಿಂದ ಹೀರಿಕೊಂಡಿತೆಂಬುದರ ಹೃದಯದ್ರಾವಕ ಇತಿಹಾಸವನ್ನು ವಿವೇಚಿಸುವ ಪೂರ್ವದಲ್ಲಿ, ಓದುಗರಿಗೆ ಚೆನ್ನಾಗಿ ಅದರ ಕಲ್ಪನೆಯಾಗುವುದಕ್ಕಾಗಿ ಕೋರಿಯಾದ ಭೌಗೋಲಿಕ ಪರಿಸ್ಥಿತಿ—ಪೂರ್ವೇತಿಹಾಸಗಳನ್ನು ಸ್ವಲ್ಪದರಲ್ಲಿ ವಿವರಿಸಲಿರುವೆ.

ಕೋರಿಯಾ ದೇಶದ ಭೂಮಿಯು ಅತ್ಯಂತ ಬೆಳೆಯುಳ್ಳದ್ದು. ಅಲ್ಲಿ ಬಂಗಾರ-ಬೆಳ್ಳಿ-ಗ್ರಾಫಾಯಿಟ್- ಕಲ್ಲಿದ್ದಲಿ ಮೊದಲಾದ ಧಾತುಗಳು ಹೇರಳವಾಗಿ ದೊರೆಯುತ್ತವೆ.

ಈ ದೇಶದ ಜನವಸತಿಯು ಸುಮಾರು ೨ ಕೋಟಿ. ಇವರಲ್ಲಿ ಬಹುಸಂಖ್ಯಾಕರು ಬೌದ್ಧಧರ್ಮೀಯರಿರುವರು. ಇದಕ್ಕೆ 'ಕೋರಿಯಾ' ಎಂಬ ಹೆಸರು, 'ಕೋರ್ಯೊ' ಎಂಬ ಅತ್ಯಂತ ಪ್ರಬಲ ವೈಭವಶಾಲಿ ರಾಜಮನೆತನದಿಂದ (ಇ. ಸ. ೯೧೮–೧೩೯೨) ಪ್ರಾಪ್ತವಾಯಿತು. ಆ ರಾಜವಂಶದ ಆಳಿಕೆಯಲ್ಲಿ ಕೋರಿಯಾವು ಎಲ್ಲ ವಿಧದಿಂದಲೂ ಘನತೆಗೇರಿತ್ತು. ಎಲ್ಲ ಬಗೆಯ ಕಲೆಗಳಿಗೂ ಉತ್ತೇಜನ ದೊರೆತು ಅವೆಲ್ಲ ವೈಭವಶಿಖರಕ್ಕೇರಿದ್ದುವು. ಆ ಉತ್ಕರ್ಷದ ಕಾಲದಲ್ಲಿ ಏಶಿಯದ ಪೂರ್ವಭಾಗದಲ್ಲೆಲ್ಲ ಈ ಕೋರಿಯಾ ದೇಶದ ವರ್ಚಸ್ಸವೇ ಸ್ಥಾಪಿತವಾಗಿದ್ದಿತು. ಆ ಕಾಲದ ಕೋರಿಯನ್ ವಾಙ್ಮಯದ ಅಧ್ಯಯನವನ್ನು ಜಪಾನಿನ ಪಂಡಿತರು ಈಗಲೂ ಪರಿಶ್ರಮಪೂರ್ವಕವಾಗಿ ಮಾಡುತ್ತಿದ್ದಾರೆ. ಹಾಗೂ ಅದಕ್ಕೆ ಸಂಸಮಾನವಾದ ಜಪಾನಿ ವಾಙ್ಮಯವು ಎಂದು ನಿರ್ಮಾಣವಾಗುವುದೋ ಎಂದು ತಳಮಳಿಸುತ್ತಿದ್ದಾರೆ. ಅದರಂತೆಯೆ ಮಣ್ಣಿನ ಪಾತ್ರೆಗಳು, ಛಾಪಿಸುವ ಕಲೆ, ಕಾಗದ, ಹಿತ್ತಾಳೆಯ ಪಾತ್ರೆಗಳು ಮತ್ತು ಅನೇಕಾನೇಕ ಸುಂದರ ವಸ್ತುನಿರ್ಮಾಣದಲ್ಲಿಯೂ ಕೋರಿಯನರ ಕೌಶಲ್ಯವು ಹೊಗಳತಕ್ಕಂತಹದಿತ್ತು. ಇದರಲ್ಲಿಯ ಕೆಲಕೆಲವು ಕಲ್ಪನೆಗಳನ್ನು ಕೋರಿಯಾವು ಚೀನದಿಂದಲೂ ಹಿಂದುಸ್ಥಾನದಿಂದಲೂ ತಿಳಿದುಕೊಂಡಿತ್ತಾದರೂ, ಯಾವುದೊಂದು ಕಲ್ಪನೆಯನ್ನು ಮೂಲವಾಗಿರಿಸಿ ತನ್ನ ಸ್ವತಂತ್ರಬುದ್ಧಿಯಿಂದ ಅದನ್ನು ವಿಕಾಸಗೊಳಿಸುವ ಕೋರಿಯನ್ನರ ಜಾಣ್ಮೆಯು ವಿಲಕ್ಷಣವಾಗಿದ್ದಿತು.

ಈಗ ಉಪಲಬ್ಧವಿರುವ ಕೋರಿಯಾದ ತೀರ ಪ್ರಾಚೀನ ಇತಿಹಾಸವು ಕ್ರಿ. ಶ. ಪೂರ್ವ ೨೩೩೩ ರಿಂದ ಆರಂಭವಾಗುತ್ತದೆ. ಈ ೪೦೦೦ ವರ್ಷಗಳ ಸುದೀರ್ಘ ಅವಧಿಯಲ್ಲಿ, ಕೋರಿಯಾದ ಮೇಲೆ ಪಾರತಂತ್ರ್ಯ ಪ್ರಸಂಗಗಳು ತೀರ ಕ್ವಚಿತ್ತಾಗಿ ಬಂದಿದ್ದುವು. ಆದರೆ ಅವೂ ಕೂಡ ತೀರ ಅಲ್ಪಕಾಲೀನವಾಗಿದ್ದುವು. ಅವುಗಳಲ್ಲಿ ಎಲ್ಲಕ್ಕೂ ಮೊದಲನೆಯ ದೊಡ್ಡ ಗಂಡಾಂತರವು ಕ್ರಿ. ಶ. ೧೨೧೮ ರಲ್ಲಿ ಚೆಂಗೀಜ್‌ಖಾನನ ದಾಳಿಯಿಂದ ಪ್ರಾಪ್ತವಾಯಿತು. ಆದರೆ ಅವನು ತನ್ನ ದೇಶಕ್ಕೆ ಹಿಂದಿರುಗಿದ ಕೂಡಲೆ, ಕೋರಿಯನರು ಅವನ ಅನುಯಾಯಿಗಳನ್ನೆಲ್ಲ ತಮ್ಮ ದೇಶದಿಂದ ಹೊಡೆದೋಡಿಸಿ, ತಮ್ಮ ಮಾತೃಭೂಮಿಯ ಸ್ವಾತಂತ್ರ್ಯವನ್ನು ಕಾಯ್ದುಕೊಂಡರು. ತದನಂತರದ ಎರಡನೆಯ ದೊಡ್ಡ ಗಂಡಾಂತರವೆಂದರೆ ಜಪಾನಿಗಳು 'ಹಿದೆಯೊಶಿ' ಯವರ ನೇತೃತ್ವದಲ್ಲಿ ಮಾಡಿದ ಸ್ವಾರಿಯು (೧೫೯೨). ಈ ಪ್ರಸಂಗವು ಕೋರಿಯಾದ ಇತಿಹಾಸದಲ್ಲಿ ಅತ್ಯಂತ ಭೀಕರವೂ, ಹೃದಯದ್ರಾವಕವೂ ಆದುದು. ಈ ಸಪ್ತವಾರ್ಷಿಕ

ಯುದ್ಧದಲ್ಲಿ, ಜಪಾನವು ಮಾಡಿದ ಅಮಾನುಷ ಅತ್ಯಾಚಾರಗಳೂ, ತಮ್ಮ ಸ್ವಾತಂತ್ರ್ಯಸಂರಕ್ಷಣೆಗಾಗಿ ಜನಸಂಖ್ಯೆಯ ಸುಮಾರು ೧/೫ ಎಂದರೆ ಸುಮಾರು ೩೦ ಲಕ್ಷ ಜನರನ್ನು ಬಲಿಗೊಟ್ಟ ಕೋರಿಯನ್ನರ, ಸ್ವಾರ್ಥತ್ಯಾಗ-ಸ್ವದೇಶಪ್ರೇಮಗಳೂ ಅವರ್ಣನೀಯವಾದುವು. ಜಪಾನದ ಹಳೆಯ ರಾಜಧಾನಿಯಾದ ಕ್ಯೋಟೋ ನಗರದಲ್ಲಿರುವ "ಕರ್ಣನಾಸಿಕಾ" ಎಂಬ ಸ್ತಂಭವು ಇಂದಿಗೂ ಆ ನರಮೇಧವನ್ನು ನೆನಪು ಮಾಡಿಕೊಡುತ್ತದೆ. ಈ ಸ್ತಂಭದ ಬುಡದಲ್ಲಿ ಲಕ್ಷಾವಧಿ ಕೋರಿಯನರ ಕತ್ತರಿಸಿದ ಕಿವಿ-ಮೂಗುಗಳು ಹುಗಿಯಲ್ಪಟ್ಟವೆಯಂತೆ. ಸುದೈವದಿಂದ ಕೋರಿಯಾವು ಈ ಭಯಂಕರ ವಿಪತ್ತಿನೊಳಗಿಂದಲೂ ಪಾರಾಯಿತು. ಸತತವಾಗಿ ೭ ವರ್ಷಗಳ ವರೆಗೆ ಹೋರಾಡಿ, ಜಪಾನಿಗಳನ್ನು ತನ್ನಲ್ಲಿಂದ ಹೊರದೂಡಿತು. ತದನಂತರ ಕೋರಿಯಾಕ್ಕೆ ಮೂರು ಶತಮಾನಗಳ ವರೆಗೂ ಶಾಂತತೆಯು ಲಭಿಸಿತು.

ನಾವಿನ್ನು ಕೋರಿಯಾದ ಪಾರತಂತ್ರ್ಯದ ಇತಿಹಾಸದ ಕಡೆಗೆ ಹೊರಳುವಾ.

ಕಪ್ಪು ವರ್ಣದ ಕಾಡು (?) ಜನಾಂಗಗಳಲ್ಲಿ, ಯೇಸುವಿನ ದಯಾಮಯ ಸಂದೇಶವನ್ನು ಬೀರಿ ಅವರನ್ನು ಸುಧಾರಿಸಬೇಕೆಂಬ ಸದುದ್ದೇಶ (?) ಪ್ರೇರಿತರಾಗಿ, ಬಿಳಿಯ ಕ್ರಿಸ್ತದೂತರು (ಮಿಶನರಿ), ಏಶಿಯಾ ಖಂಡದಲ್ಲಿ ಹೊಕ್ಕು ತಾಂಡವವಾಡುತ್ತಿರುವಾಗ, ಕೋರಿಯಾವೂ ಅವರ ವೃಷ್ಟಿಕ್ಷೇಪದೊಳಗಿಂದ ಪಾರಾಗಿರಲಿಲ್ಲ. ಆದರೆ ಆ ಕಾಲಕ್ಕೆ ಕೋರಿಯಾದಲ್ಲಿ ದೇಶದ್ರೋಹವು ಅಷ್ಟೊಂದು ಬೆಳವಣಿಗೆ ಹೊಂದದ್ದರಿಂದ, ಅವರ ಚಂಚುಪ್ರವೇಶಕ್ಕೆ ಆಸ್ಪದ ದೊರೆಯಲಿಲ್ಲ. ತನ್ನ ನೆರೆಯ ರಾಷ್ಟ್ರಗಳ ಜನರಿಗೆ ಈ ಕ್ರಿಸ್ತದೂತರಿಂದುಂಟಾದ ದುರವಸ್ಥೆಯನ್ನು ನೋಡಿ ಕೋರಿಯಾದ ರಾಜನು ಅವರಿಗೆ ಎಡೆಗೊಡಲಿಲ್ಲ. ಇಷ್ಟೇ ಅಲ್ಲ, ಬೇಕುಬೇಕಾದ ಆಮಿಷಗಳನ್ನು ತೋರಿಸಿ, ಕೋರಿಯಾದಲ್ಲಿ ಪ್ರವೇಶಲಿಚ್ಛಿಸುವ ಎಲ್ಲ ರಾಷ್ಟ್ರಗಳಿಗೂ ಕೋರಿಯನ್ ಮುತ್ಸದ್ದಿಗಳು ಕೊಡುತ್ತಿದ್ದ ನಿಶ್ಚಿತ ಉತ್ತರವಿಷ್ಟೆ: "ಪರರನ್ನು ನಮ್ಮ ದೇಶದಲ್ಲಿ ಬರಮಾಡಿಕೊಂಡು ನಮ್ಮಲ್ಲಿ ಒಡಕು ಹುಟ್ಟಿಸಿಕೊಳ್ಳುವಂತಹ ದುಷ್ಕರ್ಮವನ್ನು ನಾವು ಮಾಡಲಾರೆವು" ಎಂದು. ಈ ರೀತಿಯಾಗಿ ಪರರಾಷ್ಟ್ರಗಳ ಸಂಪರ್ಕವಿಲ್ಲದೆ ಏಕಾಕಿಯಾಗಿರುವ ಧೋರಣವನ್ನು ಕೋರಿಯವು ಬಹು ದಿವಸಗಳ ವರೆಗೆ ಅನುಸರಿಸುತ್ತ ಬಂದಿತು. ಇದರಿಂದ ಪಾಶ್ಚಾತ್ಯ ರಾಷ್ಟ್ರಗಳು ಇದಕ್ಕೆ 'ವನವಾಸಿ ರಾಷ್ಟ್ರ (Hermit Kingdom)' ಎಂದೆನ್ನುತ್ತಿದ್ದುವು.

ಆದರೆ ೧೯ನೆಯ ಶತಮಾನದಲ್ಲಿ ಜಗತ್ತಿನ ರಾಜಕಾರಣವು ಹೆಚ್ಚು ಹೆಚ್ಚಿಗೆ ಜಟಿಲವಾಗಹತ್ತಿತು. ಹೊಸ ಹೊಸ ಸುಧಾರಣೆಗಳಿಂದ ಮತ್ತು ವ್ಯಾಪಾರದಿಂದ ರಾಷ್ಟ್ರ-ರಾಷ್ಟ್ರಗಳ ಪರಸ್ಪರ ಸಂಬಂಧವು ಹೆಚ್ಚಿಗೆ ಬೆಳೆಯತೊಡಗಿತು. ಕೋರಿಯಾದ ಸುತ್ತಲಿನ ವಾತಾವರಣದಲ್ಲಿ ಕೂಡ ಅನೇಕ ಸ್ಥಿತ್ಯಂತರಗಳಾಗಲು ತೊಡಗಿದ್ದುವು. ಒಂದು ಕಡೆಗೆ ಇಂಗ್ಲೆಂಡ್, ಫ್ರಾನ್ಸ್, ಜರ್ಮನಿ, ಅಮೇರಿಕಾ ಮೊದಲಾದ ಪಾಶ್ಚಿಮಾತ್ಯ ರಾಷ್ಟ್ರಗಳು ಚೀನದ ಬೇರೆ ಬೇರೆ ಭಾಗಗಳನ್ನು ಸ್ವಾಹಾಕಾರ ಮಾಡುವ ಪ್ರಯತ್ನಗಳನ್ನು ವ್ಯವಸ್ಥಿತವಾಗಿ ನಡೆಯಿಸಿದ್ದುವು. ಮತ್ತೊಂಡೆಡೆಗೆ ರಷ್ಯವು ಮೆಲ್ಲಗೆ ತನ್ನ ಕೈಕಾಲುಗಳನ್ನು ಚಾಚುತ್ತಿದ್ದಿತು.

ಇತ್ತ ಜಪಾನದಲ್ಲಿಯೂ ನವಜಾಗೃತಿಯುಂಟಾಗಿ, ಜಪಾನ್ ದೇಶವನ್ನು ಅಧುನಿಕ ಪರಿಸ್ಥಿತಿಗನುಸರಿಸಿ ಸುಧಾರಿಸುವ ಕೆಲಸವು ಭರದಿಂದ ಸಾಗಿದ್ದಿತು. ಅದರ ವ್ಯಾಪಾರವು ಬೆಳೆಯತೊಡಗಿತ್ತು. ಮತ್ತು ಸೈನ್ಯ—ಹಡಗುಪಡೆಗಳ ಪುನರ್ಘಟನೆಯೂ ಹೊಸ ಪದ್ಧತಿಗನುಸರಿಸಿ ವೇಗದಿಂದ ಮಾಡಲ್ಪಡುತ್ತಿದ್ದಿತು.

ಈಗ ಮಾತ್ರ, ಕೋರಿಯಾಕ್ಕೆ, ಏಕಾಕಿಯಾಗಿರುವ ತನ್ನ ಹಳೆಯ ಧೋರಣವನ್ನೇ ಮುಂದುವರಿಸುವುದು ಆತ್ಮಘಾತಕದ್ದೆನಿಸಹತ್ತಿತು. ಅಧುನಿಕ ಶಸ್ತ್ರಾಸ್ತ್ರಗಳಿಂದ ಸುಸಜ್ಜಿತವಾದ ತನ್ನ ಚಿರಶತ್ರು ಜಪಾನ್ ಆಗಲಿ ಇಲ್ಲವೆ ರಷ್ಯವಾಗಲಿ ಅಥವಾ ಚೀನವನ್ನು ಆಕ್ರಮಿಸುವ ಕಾರ್ಯದಲ್ಲಿ ನಿಮಗ್ನವಾದ ಯಾವುದೊಂದು ಪಾಶ್ಚಿಮಾತ್ಯ ರಾಷ್ಟ್ರವಾಗಲಿ, ಒಮ್ಮಿಲ್ಲೊಮ್ಮೆ ಏನನಾದರೂ ನೆವ ಮುಂದೆ ಮಾಡಿ, ತಮ್ಮ ಚಿಕ್ಕ ಅಸಾಹಾಯ್ಯ ರಾಷ್ಟ್ರವನ್ನು ನುಂಗದೆ ಬಿಡವೆಂಬ ಭೀತಿಯು ಕೋರಿಯನ್ ಮುತ್ಸದ್ದಿಗಳನ್ನು ಬಾಧಿಸತೊಡಗಿತು. ಇಂತಹ ಸಂಕಟಸಮಯದಲ್ಲಿ ಸಹಾಯಮಾಡಲು ಸಮರ್ಥವಿದ್ದ—ಯಾವುದಾದರೊಂದು ಬಲಿಷ್ಠ ರಾಷ್ಟ್ರದ ಮೈತ್ರಿಯನ್ನು ಸಂಪಾದಿಸುವುದು ಅವಶ್ಯವೆನಿಸಿದ್ದರಿಂದ, ಅಮೇರಿಕೆಯೊಡನೆ ಸ್ನೇಹ ಬೆಳೆಸಬೇಕೆಂದು ಕೋರಿಯಾವು ನಿಶ್ಚಯಿಸಿತು. ಬಹುದಿನಗಳಿಂದಲೂ ಕೋರಿಯಾದಲ್ಲಿ ಪ್ರವೇಶಿಸಬೇಕೆಂದು ಧಡಪಡಿಸುತ್ತಿದ್ದ ಅಮೇರಿಕನ್ ಮಿಶನರಿಗಳ—ವ್ಯಾಪಾರಿಗಳ—ಪ್ರಯತ್ನವೀಗ ಸಫಲವಾದಂತಾಯಿತು. ಸನ್ ೧೮೮೨ರಲ್ಲಿ, ಕೋರಿಯಾ ಅಮೇರಿಕೆಗಳಲ್ಲಿ ವ್ಯಾಪಾರಿ-ರಾಜಕೀಯ ಒಡಂಬಡಿಕೆಯಾಯಿತು. ಇದರಿಂದ ಅಮೇರಿಕೆಯ ಬಂಡವಾಳಕ್ಕೂ ಮಿಶನರಿಗಳಿಗೂ ಕೋರಿಯಾದಲ್ಲಿ ಅನೇಕ ಸೌಕರ್ಯಗಳು ದೊರೆತುವು. ಪ್ರತಿಫಲವಾಗಿ ಕೋರಿಯಾದ ಸಂರಕ್ಷಣೆ ಮಾಡುವ ಭಾರವನ್ನು ಅಮೇರಿಕೆಯು ವಹಿಸಿತು. ಕೋರಿಯಾದ ಧೋರಣೆಯಲ್ಲಿ ಒಮ್ಮೆ ಬದಲಾಗಿ ಅಮೇರಿಕೆಗೆ ಪ್ರವೇಶ ದೊರೆತದ್ದೇ ತಡ, ಇತರ ರಾಷ್ಟ್ರಗಳು ಕೂಡ ತಮ್ಮ ಚಂಚುಪ್ರವೇಶದ ಕಾರ್ಯವನ್ನು ಬಲವಾಗಿ ಸಾಗಿಸಿದುವು. ಹೀಗಾಗಿ ಕಡೆಗೆ ಇಂಗ್ಲಂಡ್, ಫ್ರಾನ್ಸ್, ಜರ್ಮನಿ, ಇಟಲಿ, ಆಸ್ಟ್ರಿಯಾ, ರಷ್ಯ, ಚೀನಾ, ಜಪಾನಗಳೊಡನೆಯೂ ಕೋರಿಯವು ವ್ಯಾಪಾರೀ-ರಾಜಕೀಯ ಕರಾರುಗಳನ್ನು ಮಾಡಿಕೊಳ್ಳಬೇಕಾಯಿತು. ಆದರೆ ಈ ಎಲ್ಲ ಸಂಧಾನಗಳಲ್ಲಿಯೂ, ತಮ್ಮ ಸ್ವಾತಂತ್ರ್ಯವನ್ನು ಮಾನ್ಯಮಾಡಬೇಕೆಂಬ ತತ್ತ್ವಕ್ಕೆ ಪ್ರಾಮುಖ್ಯತೆಯನ್ನು ಕೊಡಲು ಕೋರಿಯನ್ ಮುತ್ಸದ್ದಿಗಳು ಮರೆತಿರಲಿಲ್ಲ.

ಹೀಗೆ ಎಲ್ಲಬಗೆಯಿಂದಲೂ ದಕ್ಷತೆಯನ್ನು ವಹಿಸಿದ್ದರೂ, ಜಪಾನು ಕೆಲವರ ಕಣ್ಣಲ್ಲಿ ಮಣ್ಣೆರಚಿ, ಹಲವು ರಾಷ್ಟ್ರಗಳ ಮೂಕ ಸಮ್ಮತಿಯಿಂದ, ಇನ್ನಿತರರ ಕಣ್ಣುತಪ್ಪಿಸಿ, ಕೋರಿಯಾದಲ್ಲಿ ತನ್ನ

ವರ್ಚಸ್ಸನ್ನು ಪ್ರಸ್ಥಾಪಿಸುವ ಕೆಲಸವನ್ನು ಅವ್ಯಾಹತವಾಗಿ ಸಾಗಿಸಿದ್ದಿತು. ಸನ್ ೧೮೯೫ರಲ್ಲಿ ಕೋರಿಯಾದ ರಾಣಿಯನ್ನು ಕೊಲೆಮಾಡಿ ಜಪಾನ್ ದೇಶವು ಹೆಚ್ಚಿನ ಸವಲತ್ತನ್ನು ದೊರಕಿಸಿದಾಗಾಗಲಿ ಇಲ್ಲವೆ ವಿಶ್ವಾಸಘಾತದಿಂದ ತನ್ನ ಸಂರಕ್ಷಣೆಯ ಕೆಳಗೆ (Protectorate) ಎಂದು ತೆಗೆದುಕೊಂಡಾಗಾಗಲಿ, ಕಡೆಗೆ ಸನ್ ೧೯೧೦ರಲ್ಲಿ ಸಂಪೂರ್ಣವಾಗಿ ತನ್ನ ಸ್ವಾಧೀನಪಡಿಸಿಕೊಂಡೆನೆಂದು ಸಾರಿದಾಗಾಗಲಿ, ಈ ಎಲ್ಲ ಮಿತ್ರರಾಷ್ಟ್ರಗಳಲ್ಲಿ ಒಂದಾದರೂ ಸಹಾಯ-ಸಂರಕ್ಷಣೆಗಾಗಿ ಮುಂದುವರಿಯಲಿಲ್ಲ. ಇಷ್ಟೇ ಅಲ್ಲ, ಕೇವಲ ಮಧ್ಯಸ್ಥಿಕೆ ಮಾಡುವ ಸೌಜನ್ಯವನ್ನು ಕೂಡ ತೋರಿಸಲಿಲ್ಲ !

ಕೋರಿಯಾದಲ್ಲಿ ಜಪಾನರ ಪ್ರವೇಶ

ತನ್ನ ಚಿರಶತ್ರುವಾದ ಜಪಾನವು 'ಹಿದೆಯೊಶಿ'ಯವರ ನೇತೃತ್ವದ ಕೆಳಗೆ ಮಾಡಿದ ದಾಳಿಯ ಕಾಲಕ್ಕೆ ಸಂಭವಿಸಿದ ಭೀಕರ ಕೊಲೆ-ಸುಲಿಗೆ, ಅತ್ಯಾಚಾರಗಳನ್ನು ಕೋರಿಯಾವು ಕಾಲತ್ರಯದಲ್ಲಿಯೂ ಮರೆಯುವುದು ಶಕ್ಯವಿರಲಿಲ್ಲ. ಆದುದರಿಂದ ಜಪಾನವು ಪ್ರಥಮಕ್ಕೆ ಒಪ್ಪಂದದ ಮಾತು-ಕತೆ ಪ್ರಾರಂಭಿಸಿದ ಕೂಡಲೆ, ಕೋರಿಯವು ಅತ್ಯಂತ ದ್ವೇಷದಿಂದ ಅದನ್ನು ನಿರಾಕರಿಸಿತು. ಅದರಿಂದ ಕ್ರುದ್ಧವಾದ ಜಪಾನವು ಅಲ್ಲದ-ಸಲ್ಲದ ನೆಪ ಮುಂದೆ ಮಾಡಿ, ತನ್ನ ಕೆಲವು ಸೈನ್ಯವನ್ನು ಬಲವಂತದಿಂದ ಕೋರಿಯದ ಗಡಿಯಲ್ಲಿ ತಂದಿರಿಸಿ, ತನಗೆ ಬೇಕಾದ ಕೆಲವು ಹಕ್ಕುಗಳನ್ನೂ ದೊರಕಿಸಿಕೊಂಡಿತು. ಈ ಒಪ್ಪಂದಕ್ಕೆ ಸರಿಯೆನಿಸುವ ಉತ್ತಮ ಉದಾಹರಣೆಯೆಂದು, ಹಿಂದೀ-ಸಂಸ್ಥಾನಿಕರು ಇಂಗ್ಲಿಷ್ ಸರಕಾರದೊಡನೆ ಮಾಡಿಕೊಂಡ— ಅತ್ಯಂತ ಆತ್ಮಘಾತಕ, ಮಾನಹಾನಿಕರ ಒಡಂಬಡಿಕೆಯ ಕಡೆಗೆ ಬೆರಳನ್ನು ತೋರಿಸಬಹುದು.

ಈ ಒಪ್ಪಂದವಾದ ಕೂಡಲೆ, ಜಪಾನವು ಕೋರಿಯಾದ ಸುತ್ತಲು ತನ್ನ ಬಲೆಯನ್ನು ಬೀಸಲು ಪ್ರಾರಂಭಿಸಿತು. ಕೋರಿಯಾದ ರಕ್ಷಣೆಗೆಂದು ಅದರ ಬಂದರಗಳಲ್ಲಿ ತನ್ನ ಸೈನ್ಯ-ಹಡಗುಪಡೆಗಳ ಸ್ಥಿರಿಸಿ, ಅವುಗಳನ್ನು ತನ್ನ ಸ್ವಾಧೀನಪಡಿಸಿಕೊಂಡಿತು. ಜಪಾನಿನ ವ್ಯಾಪಾರಿಗಳು,ವಕೀಲರು,ಗುಮಾಸ್ತರು ಕೋರಿಯಾದಲ್ಲಿ ಸುಳಿಯತೊಡಗಿದರು. ಅವರಿಗೆ ಬೇಕುಬೇಕಾದ ಸೌಲಭ್ಯಗಳು ನಿರಾತಂಕವಾಗಿ ದೊರೆಯತೊಡಗಿದುವು. ಇಷ್ಟೇ ಅಲ್ಲ, ಸ್ವತಃ ಜಪಾನಿ ಸರಕಾರವೇ ನೀರಿನಂತೆ ಹಣ ವೆಚ್ಚಮಾಡಿ, ಕೋರಿಯಾದಲ್ಲಿ ಎಲ್ಲ ಮಹತ್ತ್ವದ ವ್ಯಾಪಾರ-ಉದ್ದಿಮೆಗಳನ್ನು ಆಕ್ರಮಿಸಿಕೊಂಡಿತು. ಆದರೆ ಇದೆಲ್ಲ ಕೋರಿಯಾದ ಹಿತಸಂರಕ್ಷಣೆಗಾಗಿ ಅದರ ಇಚ್ಛಾನುಸಾರವಾಗಿಯೇ ಕೈಕೊಳ್ಳಲ್ಪಟ್ಟಿದೆಯೆಂದೂ, ಅದರ ಮೇಲೆ ಒತ್ತಾಯದಿಂದ ಹೇರಲ್ಪಟ್ಟ ಒಪ್ಪಂದವು ಕೋರಿಯಾವೇ ಸ್ವಸಂತೋಷದಿಂದ ಮಾಡಿಕೊಂಡದ್ದೆಂದೂ ಜಗತ್ತಿಗೆ ಭಾಸವಾಗಬೇಕೆಂದು, ಜಪಾನವು ಪ್ರಚಾರತಂತ್ರವನ್ನು ಮಾತ್ರ ಒಳ್ಳೆ ಕೌಶಲ್ಯದಿಂದ ಸಾಗಿಸಿದ್ದಿತು. ಅಪಪ್ರಚಾರದಿಂದ ಜನಮತವನ್ನು ತನಗನುಕೂಲವಾಗುವಂತೆ ಮಾಡಿಕೊಳ್ಳುವ ಈ ಕಲೆಯು, ಇಂಗ್ಲಿಷರಂತೆ ಜಪಾನಿಗಳಿಗೂ ಚೆನ್ನಾಗಿ ಸಾಧಿಸಿದೆ !

ಆದರೆ ಜಪಾನವೀಗ ಬೇರೊಬ್ಬ ಪ್ರಬಲ ಶತ್ರುವನ್ನು ಎದುರಿಸಬೇಕಾಗಿ ಬಂದಿತು. ಆ ಶತ್ರುವೆಂದರೆ ಕೋರಿಯಾದ ರಾಣಿ 'ಮೀನ'ಳು. ಈ ರಾಣಿಯು ಅತ್ಯಂತ ದೇಶಾಭಿಮಾನಿಯೂ ಧೂರ್ತಳೂ ಕಾರಸ್ಥಾನಿಯೂ ಆಗಿದ್ದಳು. ಕೋರಿಯನ್ ಇತಿಹಾಸಕಾರರು ಇವಳನ್ನು ತುಂಬ ಪ್ರಶಂಸಿಸಿದ್ದಾರೆ. ನಂದುತ್ತಿರುವ ಕೋರಿಯದ ಸ್ವಾತಂತ್ರ್ಯಜ್ಯೋತಿಯ ದೃಶ್ಯವು ಇವಳನ್ನು ತುಂಬ ವ್ಯಥೆಗೊಳಿಸಿತು. ಜಪಾನಿಗಳ ದೌರ್ಜನ್ಯದಿಂದ ದ್ವೇಷಗೊಂಡವಳಾದ ರಾಣಿಯು, ಅವರನ್ನು ಮಾತೃಭೂಮಿಯಿಂದ ಹೊಡೆದೋಡಿಸುವ ದೃಢನಿಶ್ಚಯಮಾಡಿ, ತನ್ನ ಸಂಕಲ್ಪಸಿದ್ಧಿಗಾಗಿ ಕೋರಿಯನರಲ್ಲಿ ಸಂಘಟನೆಮಾಡಿ, ಪರರಾಷ್ಟ್ರಗಳೊಡನೆ ಸಂಧಾನವನ್ನು ನಡೆಯಿಸಿದಳು.

ಆದರೆ ಕೋರಿಯಾದ ದುರ್ದೈವದಿಂದ ಅವಳ ಪ್ರಯತ್ನವು ಫಲಿಸದೆ, ಅವಳೇ ತನ್ನ ಶಿರವನ್ನು ಜಪಾನಿ ಕೊಲೆಗಡುಕರ ಖಡ್ಗಕ್ಕೆ ಬಲಿ ತೆರಬೇಕಾಯಿತು !! ಕೇವಲ ತಮ್ಮೊಬ್ಬರ ಸುಖ-ಸ್ವಾರ್ಥಗಳ ಅಭಿಲಾಷೆಯಿಂದ, ರಾಷ್ಟ್ರವನ್ನೆ ಸಂಕಟಸಾಗರದಲ್ಲಿ ನೂಕಲು ಹಿಂಜರಿಯದ ದೇಶದ್ರೋಹಿಗಳು ಪ್ರತಿಯೊಂದು ರಾಷ್ಟ್ರದ ಅವನತಿಕಾಲದಲ್ಲಿಯೂ ಜನ್ಮಿಸಿರುತ್ತಾರೆ. ಕೋರಿಯಾ ಆದರೂ ಇದಕ್ಕೆ ಅಪವಾದವಾಗುವ ಬಗೆ ಹೇಗೆ ?

ಸಿಯೂಲದಲ್ಲಿಯ ಜಪಾನಿ ವಕೀಲನಾದ ವ್ಹಾಯಕೌಂಟ್ ಮ್ಯೂರಾ ಎಂಬವನು, ಕೆಲವು ದೇಶದ್ರೋಹಿ ಕೋರಿಯನರೊಡನೆ 'ಮೀನ' ರಾಣಿಯನ್ನು ಕೊಲ್ಲುವ ಸಂಚು ನಡೆಯಿಸಿದ್ದನು. ಈ ಸಂಚುಗಾರರಲ್ಲಿ 'ತಾಯಿಬೋನ್ ಕುನ್' ಎಂಬೊಬ್ಬ ಕೋರಿಯನ್ ಸರದಾರನೂ ಸಮಾವೇಶವಾಗಿದ್ದನು. ರಾಣಿಯ ಧೋರಣವು ಸರಿಬಾರದ್ದರಿಂದ, ಈ ಸರದಾರನು ಅವಳನ್ನು-ತುಂಬಾ ದ್ವೇಷಿಸುತ್ತಿದ್ದನು. ಮ್ಯೂರಾನು ಇವನ ಸಹಾಯದಿಂದ ರಾಣಿಯನ್ನು ಕೊಲೆಮಾಡಲು ನಿಶ್ಚಯಿಸಿ, ತಾಯಿಬೋನ್ ಕುನ್‌ನಿಗೆ ಭೆಟ್ಟಿ ಕೊಟ್ಟು, ಅವನ ಹೇಳಿಕೆಯನ್ನು ಕೇಳಿಕೊಳ್ಳಬೇಕೆಂದು ರಾಣಿಗೆ ಹೇಳಿ ಕಳುಹಿದನು. ಹಾಗೂ ಆ ಕೋರಿಯನ್ ಸರದಾರನೊಡನೆ ಕೆಲವು ಜಪಾನಿ ಸೈನ್ಯವನ್ನೂ ಓಕಾಮೋಟೋ ಎಂಬೊಬ್ಬ ಜಪಾನಿ ಕೊಲೆಗಡುಕನನ್ನೂ ಕಳುಹಿಸಿಕೊಟ್ಟನು. ಅವರೊಂದು ದಿನ ಬಲವಂತದಿಂದ ಅರಮನೆಯಲ್ಲಿ ಪ್ರವೇಶಿಸಿ, ರಾಣಿಗೆ ಭೆಟ್ಟಿಯಾಗಲು ಹವಣಿಸತೊಡಗಿದರು. ಅದರಿಂದ ತುಂಬಾ ಗೊಂದಲವೆದ್ದಿತು. ಈ ಸಮಯವನ್ನು ಸಾಧಿಸಿ ಒಳಹೊಕ್ಕು, ಓಕಾಮೋಟನು ರಾಣಿಯ ಶಿರವನ್ನು ತನ್ನ ಕರಾಲಖಡ್ಗದಿಂದ ಧರೆಗಿಳಿಸಿದನು.

ಮೊದ-ಮೊದಲು ಈ ಕೃಷ್ಣಕೃತ್ಯದ ಸುದ್ದಿಯನ್ನು ಬಚ್ಚಿಡಲು ಜಪಾನವು ಬಹಳ ಯತ್ನಿಸಿತು. ಆದರೆ ಈ ಸುದ್ದಿಯು ಅಲ್ಪಾವಧಿಯಲ್ಲಿಯೇ ದೇಶದ ತುಂಬಾ ಪಸರಿಸಿ, ಜನರನ್ನು ಪ್ರಕ್ಷುಬ್ಧಗೊಳಿಸಿತು. ಬಂಡುಗಳೇಳುವ ಭೀತಿಯು ಉತ್ಪನ್ನವಾಯಿತು. ಆಗ ಮಾತ್ರ ಜಪಾನಿ ವಕೀಲನು, ರಾಣಿಯ ವೈರಿಗಳಾದ ಕೋರಿಯನ್ ಜನರಿಂದಲೇ ಈ ಕೃತ್ಯವಾಗಿರಬಹುದೆಂದೂ ಜಪಾನಿ ಸರಕಾರಕ್ಕೆ

ಈ ವಿಷಯಕ್ಕೆ ಏನೊಂದೂ ಗೊತ್ತಿಲ್ಲವೆಂದೂ ಜಾಹೀರುಮಾಡಿ, ಕಿವಿಯಮೇಲೆ ಕೈಯಿಟ್ಟುಕೊಂಡನು. ಆದರೆ ಈ ಭೀಷಣಕೃತ್ಯದಿಂದ ಪರದೇಶದಲ್ಲಿ ಉಂಟಾದ ಕೋಲಾಹಲವು ಮಾತ್ರ ಇಷ್ಟರಿಂದಲೆ ಕಡಿಮೆಯಾಗಲಿಲ್ಲ. ಆದರಿಂದ ಅನಿವಾರ್ಯವಾಗಿ ಜಪಾನವು ತನ್ನ ವಕೀಲನನ್ನು ಹಿಂದಕ್ಕೆ ಕರೆಯಿಸಿಕೊಂಡು ನ್ಯಾಯಾಸನದೆದುರು ನಿಲ್ಲಿಸಬೇಕಾಯಿತು. ಆದರಿದು ಕೇವಲ ಜಗತ್ತಿನ ಪ್ರತ್ಯಕ್ಷ ಜನತೆಯನ್ನು ಸಂತಯಿಸಲು ಮಾಡಿದ್ದೊಂದು 'ಫಾರ್ಸು' ಮಾತ್ರವಾಗಿದ್ದಿತು. ತಕ್ಕಷ್ಟು ಸಾಕ್ಷಿಗಳಿಲ್ಲವೆಂದು ಅಪರಾಧಿಗಳೆಲ್ಲ ದೋಷಮುಕ್ತರಾಗಿ ಮಾಡಲ್ಪಟ್ಟರು. ಜಪಾನಿ ವೃತ್ತಪತ್ರಿಕೆಗಳಂತೂ 'ಗಾಝು' ಎಂದು 'ಮ್ಯುರಾ'ನ ಸ್ತುತಿ-ಸ್ತೋತ್ರ ಮಾಡತೊಡಗಿದುವು, ನಂದಕುಮಾರನ ಕೊಲೆಯಾದದ್ದು ಇಂಗ್ಲಂಡಿನ ಹಿತದ ದೃಷ್ಟಿಯಿಂದಲೇ ಎಂದು ನಿರ್ಣಯಿತವಾಗಿ ಹೆಸ್ಟಿಂಗ್ಸ್‌ನು ದೋಷಮುಕ್ತನಾಗಿದ್ದನಷ್ಟೆ ! ಈಗಲಾದರೂ ಅದರ ಪುನರಾವೃತ್ತಿಯೇ ಸಂಭವಿಸಿತು. ಮ್ಯೂರಾನ ವಕೀಲನು ಕೋರ್ಟಿನಲ್ಲಿ "ದುರ್ಬಲ ಹೃದಯದ ಜನರು ಏನೇ ಅನ್ನಲೊಲ್ಲರೇಕೆ, ಈಗ ಸಂಭವಿಸಿದ ಘಟನೆಯು ಕೋರಿಯಾದ ಶಾಂತತೆ-ಸುರಕ್ಷಿತತೆಗಳ ದೃಷ್ಟಿಯಿಂದ ವಿಹಿತವೇ ಆಗಿದೆ. ರಾಣಿಯ ಕಾರಸ್ಥಾನವು ಯಶಸ್ವಿಯಾಗಿದ್ದರೆ, ಜಪಾನವು ಇದುವರೆಗೆ ಕೋರಿಯಾದ ಸುಧಾರಣೆಯ ದೃಷ್ಟಿಯಿಂದ ಮಾಡಿದ ಪ್ರಯತ್ನಗಳೆಲ್ಲ ವಿಫಲವಾಗುತ್ತಿದ್ದುವು." ಎಂದು ಸ್ಪಷ್ಟವಾಗಿ ನುಡಿದನು.

ಆದರೆ ಇದರಿಂದ ಜಪಾನವು ಇನ್ನುಮುಂದೆ ಜಪಾನಿ 'ಸೋಶಿ' (ಕೊಲೆಗಡುಕ) ಗಳನ್ನು ಪೂರ್ಣ ನಿಯಂತ್ರಿಸುವೆನೆಂದೂ, ಕೋರಿಯನರು ಜಪಾನಿ ವಸಾಹತುಗಳ ಮೇಲೆ ಹಾಳುಮಾಡುವ ಭೀತಿಯು ತಪ್ಪಿದ ಕೂಡಲೆ, ಕೋರಿಯಾದಲ್ಲಿಯ ತನ್ನ ಸೈನ್ಯವನ್ನು ಹಿಂದಕ್ಕೆ ತಕ್ಕೊಳ್ಳುವೆನೆಂದೂ ರಶಿಯಕ್ಕೆ ವಚನಕೊಡಬೇಕಾಯಿತು. ಅನಂತರ ಸನ್ ೧೮೯೮ ರಲ್ಲಿ ರಷ್ಯ-ಜಪಾನಿಗಳಲ್ಲಾದ ಒಡಂಬಡಿಕೆಯ ಮೊದಲನೆಯ ಕಲಮಿನಲ್ಲಿ "ರಶಿಯಾ-ಜಪಾನ್ ಸರಕಾರಗಳೆರಡೂ ಕೋರಿಯಾದ ಸ್ವಾತಂತ್ರ್ಯವನ್ನು ಮನ್ನಿಸುತ್ತವೆ, ಹಾಗೂ ಕೋರಿಯಾದ ಅಂತರ್ವ್ಯವಸ್ಥೆಯಲ್ಲಿ ಕೈಹಾಕುವದಿಲ್ಲವೆಂದು ಪರಸ್ಪರರಿಗೆ ವಚನ ಕೊಡುತ್ತವೆ" ಎಂದು ಉಲ್ಲೇಖಿಸಿದೆ. ಅನಂತರ ಸನ್ ೧೯೦೨ ರ ಜನೆವರಿಯಲ್ಲಾದ ಆಂಗ್ಲೋ-ಜಪಾನ್ ಪ್ಯಾಕ್ಟಿನಲ್ಲಿ ಕೂಡ ಈ ತತ್ತ್ವವೇ ಪ್ರಾಮುಖ್ಯವಾಗಿದೆ. ಅದು ಈ ಬಗೆಯಾಗಿದೆ : "ಪೂರ್ವ ಆಶಿಯಾದಲ್ಲಿ ಈಗಿದ್ದ ಸ್ಥಿತಿಯನ್ನು (Status) ಕಾಯಲು ಎರಡೂ ರಾಷ್ಟ್ರಗಳು ಪ್ರಯತ್ನ ಮಾಡುತ್ತವೆ. ಹಾಗೂ ಚೀನ್-ಕೋರಿಯಾಗಳ ವಿಷಯದಲ್ಲಿ ಏರಿಕೆಯ ಧೋರಣವನ್ನು (Aggressive tendencies) ಅನುಸರಿಸುವುದಿಲ್ಲ."

ಹೀಗೆ ಜಪಾನಿ ಮುತ್ಸದ್ದಿಗಳು ಅತ್ಯಂತ ಸಾವಧಾನತೆಯಿಂದಲೂ ಕುಶಲತೆಯಿಂದಲೂ ಆಟವಾಡುತ್ತ, ಸವಿಮಾತುಗಳಿಂದ ಕೋರಿಯನರನ್ನು ತಮ್ಮ ಬಲೆಯಲ್ಲಿ ಕೆಡಹಿಕೊಳ್ಳತೊಡಗಿದ್ದರು.

"ಕೋರಿಯಾವನ್ನು ಆಕ್ರಮಿಸಬೇಕೆಂಬ ಯೋಚನೆಯು ನಮಗೆ ಕನಸಿನಲ್ಲಿಯೂ ಬರುವುದು ಶಕ್ಯವಿಲ್ಲ. ಪೂರ್ವ ಆಶಿಯಾದಲ್ಲಿ ಹಬ್ಬಿದ ಪಾಶ್ಚಾತ್ಯ ರಾಷ್ಟ್ರಗಳ ವರ್ಚಸ್ಸನ್ನು ಕಡಿಮೆಮಾಡಿ, ಅವುಗಳನ್ನು ಮುರಿಬಡಿಯಬೇಕಾದರೆ ಚೀನ್-ಜಪಾನ್-ಕೋರಿಯಾ ಈ ಪೀತವರ್ಣದ ತ್ರಿರಾಷ್ಟ್ರಗಳದೊಂದು ಸಂಘಟನೆಯನ್ನೇರ್ಪಡಿಸುವುದತ್ಯವಶ್ಯ. ಅದಕ್ಕಾಗಿಯೆ ನಾವು ಪರಿಶ್ರಮಿಸುತ್ತಿರುವುದು" ಎಂದು ಜಪಾನಿಗಳೆನ್ನುತ್ತಿದ್ದರು. ಇದರಿಂದ 'ಏಶಿಯಾವು ಏಶಿಯನ್ನರಿಗಾಗಿ' ಎಂಬ ಧ್ಯೇಯವಾಕ್ಯದ (slogan) ಮರೆಯಲ್ಲಿ, ಪೂರ್ವ ಏಶಿಯಾದಲ್ಲಿ ತಮ್ಮ ಸಾಮ್ರಾಜ್ಯವನ್ನು ಸ್ಥಾಪಿಸುವ ಕನಸನ್ನು ಜಪಾನಿಗಳು ಬಹುದಿನಗಳ ಹಿಂದೆಯೆ ಕಾಣುತ್ತಿದ್ದರೆಂದು ವ್ಯಕ್ತವಾಗುತ್ತದೆ.

ತನ್ನ ಈ ಮಹೇಚ್ಛೆಯನ್ನು ಪೂರ್ಣಗೊಳಿಸಿಕೊಳ್ಳುವ ಮಾರ್ಗದಲ್ಲಿ ರಷ್ಯವೊಂದು ಜಪಾನದೆದುರಿಗೆ ವಿಘ್ನಕಾರಿಯಾಗಿ ನಿಂತಿತ್ತು. ಆದುದರಿಂದ ಮೊಟ್ಟಮೊದಲು ರಷ್ಯವನ್ನು ಮುರಿಬಡಿಯುವುದು ಜಪಾನಿಗಳಿಗೆ ಕ್ರಮಪ್ರಾಪ್ತವಾಗಿದ್ದಿತು. ಇದೇ ಸನ್ ೧೯೦೪ ರಲ್ಲಿಯ ರಷ್ಯ-ಜಪಾನುಗಳ ಯುದ್ಧಸ್ಫೋಟನೆಗೆ ಕಾರಣ. ಈ ಯುದ್ಧದಲ್ಲಿ ಕೋರಿಯನರ ಒಲವು ರಷ್ಯದ ಕಡೆಗಿರುವುದು ಸ್ವಾಭಾವಿಕ. ಆದರೆ ಜಪಾನಕ್ಕಾದರೂ ಕೋರಿಯದ ಸೈನ್ಯ-ಸಾಧನೆಗಳ ಆವಶ್ಯಕತೆಯಿದ್ದಿತು. ಅಲ್ಲದೆ ರಷ್ಯನ್-ಸೈಬೀರಿಯಾಕ್ಕೆ ಹೋಗುವ ತನ್ನ ಸೈನ್ಯಕ್ಕೆ ಕೋರಿಯಾದೊಳಗಿಂದ ಮಾರ್ಗ ಪಡೆದುಕೊಳ್ಳಬೇಕಾಗಿತ್ತು. ಅಂತೆಯೆ ಧೂರ್ತತನದಿಂದ ಒಡಂಬಡಿಕೆಮಾಡಿಕೊಂಡು, ಕೋರಿಯಾಕ್ಕೆ ಸ್ವಾತಂತ್ರ್ಯರಕ್ಷಣೆಯ ಅಭಿವಚನಕೊಟ್ಟು, ತನಗೆ ಬೇಕಾದ ಸಹಾಯ-ಸೌಕರ್ಯಗಳನ್ನೆಲ್ಲ ಕೋರಿಯಾದಿಂದ ಪಡೆದುಕೊಂಡಿತು. ಹಾಗೂ ಯುದ್ಧಾರಂಭವಾಗುವ ಮೊದಲೆ, ಕೋರಿಯಾದ ಸಂರಕ್ಷಣೆ ಮಾಡುವುದು ತಮ್ಮ ಆದ್ಯಕರ್ತವ್ಯವೆಂದೂ, ಏಕೆಂದರೆ ಕೋರಿಯಾದ ಸ್ವತಂತ್ರತೆಯು ತಮ್ಮ ರಾಷ್ಟ್ರದ ಸುರಕ್ಷಿತತೆಗೆ ಅತ್ಯವಶ್ಯವೆಂದೂ ಜಪಾನವು ಉದ್ಘೋಷಿಸಿತ್ತು. ಈ ಎಲ್ಲ ಆಶ್ವಾಸನ-ಪ್ರೋತ್ಸಾಹನೆಗಳಿಂದ ಉಬ್ಬಿ ಕೋರಿಯಾವು ಜಪಾನಿಗೆ ತನ್ನ ತನು-ಮನ-ಧನಗಳಿಂದ ಸಹಾಯಮಾಡಿತು. ಅಂತೂ ಕಡೆಗೆ ಜಪಾನವು ಜಯಶಾಲಿಯಾಯಿತು. ಕೋರಿಯಾವೂ ಸಮಾಧಾನದ ಉಸಿರ್ಗರೆಯಿತು. ಇನ್ನುಳಿಯಿತು—ಜಪಾನವು ತನಗೆ ಸಹಾಯ ಕೊಟ್ಟ ಕೋರಿಯಾಕ್ಕೆ, ಅದರ ಸೇವೆಗಾಗಿ ಸಲ್ಲಿಸತಕ್ಕ ಪ್ರತಿಫಲ. ಜಪಾನವು ದಿನಾವಧಿ ಮಾಡಲಿಲ್ಲ ; ತುಸು ದಿವಸಗಳಲ್ಲಿಯೇ ಕೋರಿಯಾವನ್ನು Protectorate ಎಂದು ತನ್ನ ಸಂರಕ್ಷಣೆಯ ಕೆಳಗೆ ತೆಗೆದುಕೊಂಡು, ತನ್ನ ವಚನಪರಿಪಾಲನೆ ಮಾಡಿತು ; ಕೋರಿಯಾಕ್ಕೆ ಅದರ ಅವಿಚಾರಿ ಕೃತ್ಯಕ್ಕೆ ತಕ್ಕ ಫಲವು ಸಿಕ್ಕಂತಾಯಿತು.

ಇಷ್ಟಾದನಂತರ ಜಪಾನವು ಕೋರಿಯಾದ ಮೇಲೆ ಅನೇಕ ಕರಾರುಗಳನ್ನುಹೇರಿ, ಪೋಸ್ಟ್, ಟೆಲಿಗ್ರಾಫ್, ರೇಲ್ವೆ, ಬಂದರಗಳನ್ನು ಸಂಪೂರ್ಣವಾಗಿ ಆಕ್ರಮಿಸಿಕೊಂಡಿತು. ಇಷ್ಟೇ ಅಲ್ಲ, ಕೋರಿಯಾದ

ಅಂತರ್ಗತ ಕಾರಭಾರವೆಲ್ಲ ಜಪಾನೀ ಸಲ್ಲಾಗಾರರ ಸಲಹೆಯಂತೆಯೆ ನಡೆಯಬೇಕೆಂದೂ ನಿರ್ಬಂಧಹಾಕಿತು. ಪರದೆಯ ಮರೆಗೆ ನಡೆದಿರುವ ಜಪಾನಿಗಳ ಈ ಕಾರಸ್ಥಾನದ ಕಡೆಗೆ ಯಾರ ಲಕ್ಷ್ಯವೂ ಇರಲಿಲ್ಲ. ಅಥವಾ ರಶ್ಯದ ಯುದ್ಧದಿಂದ ಜಗತ್ತಿಗೆ ತನ್ನ ಸಾಮರ್ಥ್ಯ ಪ್ರದರ್ಶನಮಾಡಿದ ಜಪಾನವನ್ನು ಕೆಣಕುವ ಧೈರ್ಯವು ಇಲ್ಲದ್ದರಿಂದ, ಅತ್ತಕಡೆಗೆ ಎಲ್ಲ ರಾಷ್ಟ್ರಗಳೂ ಬುದ್ಧಿಪೂರ್ವಕವಾಗಿ ದುರ್ಲಕ್ಷಿಸುತ್ತಿದ್ದುವೆನ್ನಬಹುದು. ಈ ರೀತಿ ಪೂರ್ವಸಿದ್ಧತೆಯಾದನಂತರ, ಕೋರಿಯಾದ ರಾಜನೊಡನೆ ಹೊಸ ಒಡಂಬಡಿಕೆಯೊಂದನ್ನು ಮಾಡಿಕೊಳ್ಳಲು ಜಪಾನವು 'ಪ್ರಿನ್ಸ ಇಟೊ' ಎಂಬ ತನ್ನ ಮುತ್ಸದ್ದಿಯನ್ನು ಕಳುಹಿಕೊಟ್ಟಿತು.

ಪ್ರಿನ್ಸ್ ಇಟೋನು ಒಪ್ಪಂದದ ಕರಾರುಪತ್ರವನ್ನು ತಕ್ಕೊಂಡು ರಾಜನ ಬಳಿ ಹೋದಾಗ ಅರಸನು ಅದನ್ನು ಓದಿ "ಜಪಾನವು ಈ ಪರಿ ನಮ್ಮನ್ನು ಮೋಸಗೊಳಿಸುವುದೆಂಬುದರ ಮೇಲೆ ನನ್ನ ನಂಬಿಗೆಯಿನ್ನೂ ಕೂಡಲೊಲ್ಲದು! ನನ್ನ ಕಣ್ಣುಗಳ ಮೇಲೆಯೆ ನನಗೆ ವಿಶ್ವಾಸವಿಲ್ಲವಾಗಿದೆ! ನಮ್ಮ ಸಂರಕ್ಷಣೆಯ ಭಾರವನ್ನು ನೀವು ವಹಿಸಿದ್ದನ್ನು ಕಂಡು ನನಗೆ ಅದೆಷ್ಟು ಆನಂದವಾಗಿತ್ತು? ನಮ್ಮಿಬ್ಬರಲ್ಲಿಯ ಸ್ನೇಹ-ಸೌಹಾರ್ದಗಳು ದಿನ-ದಿನಕ್ಕೆ ಬೆಳೆದು ದೃಢವಾಗುವುವೆಂದು ನಾನಾಶಿಸಿದ್ದೆ. ಆದರೆ ನಿಮ್ಮೀ ಕರಾರುಗಳನ್ನು ಕಂಡು ದಿಗ್ಭ್ರಮೆಯೆನಿಸಿದೆ ನನಗೆ!" ಎಂದು ಉದಾಸೀನವಾಣಿಯಿಂದ ನುಡಿದನು. ಅದಕ್ಕೆ ಇಟೋನು "ಸಾಮ್ರಾಜ್ಯ ಸರಕಾರದ ಆಜ್ಞೆಗನುಸರಿಸಿಯೇ ಈ ಕರಾರುನಾಮೆಯು ಬರೆಯಲ್ಪಟ್ಟಿದೆ. ಇದಕ್ಕೆ ನೀವು ಒಪ್ಪಲೇಬೇಕು!" ಎಂದು ನಿಷ್ಠುರವಾಗಿ ಹೇಳಿದನು. ಇದರ ಬಗ್ಗೆ ೪-೫ ತಾಸು ವಾಗ್ವಾದವಾದರೂ ಕೂಡ ಅರಸನು ಮಂತ್ರಿಮಂಡಳದ ಸಮ್ಮತಿಯಿಲ್ಲದೆ ನಾನಿದಕ್ಕೆ ರುಜು ಮಾಡಲಾರೆನೆಂದು ಸ್ಪಷ್ಟವಾಗಿ ಉತ್ತರ ಕೊಟ್ಟನು.

ಅನಂತರ ಇಟೋನು ಮಂತ್ರಿಗಳ ಮನವೊಲಿಸಲು ಸಾಮ-ದಾನಾದಿ ಚತುರೋಪಾಯಗಳನ್ನು ಯೋಜಿಸಿ ಕಾರ್ಯ ನಡೆಯಿಸಿದನು. ಕಡೆಗೆ ಮಂತ್ರಿಮಂಡಲದ ಸಭೆ ಕೂಡುವ ದಿವಸ, ಎಲ್ಲೆಡೆಗಳಲ್ಲಿಯೂ ಸೈನ್ಯದ ಸಂಪೂರ್ಣ ಸಿದ್ಧತೆಯು ಇಡಲ್ಪಟ್ಟಿತು. ಬೀದಿ-ಬೀದಿಗಳೊಳಗಿಂದ ಸುಸಜ್ಜಿತ ಜಪಾನೀ ಸೈನಿಕರು ಕೂಚು ಮಾಡಲಾರಂಭಿಸಿದರು. ಹಾಗೂ ಅರಮನೆ, ಕೌನ್ಸಿಲ್‌ಭವನಗಳ ಸುತ್ತಲೂ ಸೈನಿಕರ ಪಹರೆಯು ಇಡಲ್ಪಟ್ಟಿತು. ಇಷ್ಟೆಲ್ಲ ಪೂರ್ವಸಿದ್ಧತೆ ಮಾಡಿ ಇಟೋನು, ಮಾರ್ಶಲ್ ಹಸಗಾವಾನೊಡನೆ ಕೌನ್ಸಿಲ್ ಭವನವನ್ನು ಹೊಕ್ಕು, ತಾನು ಸಿದ್ಧಪಡಿಸಿದ ಕರಾರು-ನಾಮೆಯನ್ನು ಓದಿ ತೋರಿಸಿ, ಸಹಿ ಮಾಡಲು ಮಂತ್ರಿಗಳಿಗೆ ತಿಳುಹಿದನು. ಅದನ್ನು ಕೇಳಿ ಮಂತ್ರಿಗಳ ಮುಖಮಂಡಲಗಳಲ್ಲಿ ವಿವಿಧ ಭಾವನಾತರಂಗಗಳು ಸುಳಿಯತೊಡಗಿದುವು. ಭವನದಲ್ಲೆಲ್ಲ ನೀರವ-ನಿಸ್ತಬ್ಧತೆ. ಮಂತ್ರಿಗಳಾರೂ ಸಮ್ಮತಿಸುವ ಲಕ್ಷಣವು ಕಂಡುಬರಲಿಲ್ಲ. ಏನಿದು? ಸಾಮ್ರಾಜ್ಯ ಸರಕಾರದ ಆಜ್ಞೆಗೆ ಈ ಬಗೆಯ ಅನಾದರವೆ? ಅವಮಾನವೆ? ಎಷ್ಟೊಂದು ಔದ್ಧತ್ಯವಿದು ಈ ಕುನ್ನಿ ಕೋರಿಯನ್‌ರದು? ಮಾರ್ಶಲ್ ಹಸಗಾವಾನ ಪಿತ್ಥವು ನೆತ್ತಿಗೇರಿತು. ಹಸಗಾವಾನು ಸರ್ರನೆ ಖಡ್ಗವನ್ನು ಒರೆಗಳೆದು ಝಳಪಿಸುತ್ತ ಸಭೆಯನ್ನುದ್ದೇಶಿಸಿ "ಈ ಕರಾರುನಾಮೆಗೆ ಒಪ್ಪಿಗೆ ಕೊಟ್ಟು ನಿಮ್ಮ ಹಿತ ಮಾಡಿಕೊಳ್ಳಿರಿ; ಇಲ್ಲವೆ ಸರ್ವನಾಶಕ್ಕಾಗಿ ಸಿದ್ಧರಾಗಿರಿ" ಎಂದು ಗರ್ಜಿಸಿದನು.

ಮಾರ್ಶಲ್‌ನ ಈ ಉದ್ದಾಮತನದಿಂದ ಖತಿಗೊಂಡವನಾದ ಕೋರಿಯಾದ ಪ್ರಧಾನಮಂತ್ರಿ ಹಾನ ಕ್ಯೂ ಸುಲನು ಅಷ್ಟೇ ಆವೇಶದಿಂದ "ಅಷ್ಟೊಂದು ಶಕ್ತಿಯಿದ್ದರೆ ನಮ್ಮೆಲ್ಲರನ್ನೂ ಈಗಲೇ ತುಂಡರಿಸಿರಿ. ಕೇವಲ ಜೀವದಾಶೆಗಾಗಿ ಮಾತೃಭೂಮಿಯನ್ನು ಪರದಾಸ್ಯಪಂಕದಲ್ಲಿ ನೂಕುವಂತಹ ಅಧಮಕೆಲಸವು ನಮ್ಮಿಂದ ಕಾಲತ್ರಯದಲ್ಲಿಯೂ ಆಗದು" ಎಂದು ಉತ್ತರ ಕೊಟ್ಟನು. ಕೂಡಲೆ ಅವನು ಸೆರೆ ಹಿಡಿಯಲ್ಪಟ್ಟನು. ಉಳಿದ ಮಂತ್ರಿಗಳ ಹಾಡೂ ಹೀಗೆಯೆ ಆಯಿತು.

ಇಟೋನು ಒಬ್ಬೊಬ್ಬರನ್ನೇ ಪ್ರತ್ಯೇಕ ಕೊಠಡಿಗಳಲ್ಲಿರಿಸಿ, ತನ್ನ ಎಲ್ಲ ಬುದ್ಧಿ-ಸಾಮರ್ಥ್ಯಗಳನ್ನು ಪ್ರಯೋಗಿಸಿ, ಹೇಗೋ ಮೂವರ ಸಹಿಗಳನ್ನು ದೊರಕಿಸಿ, ಮರುದಿನವೇ ಆ ಜಾಹೀರ್‌ನಾಮೆಯನ್ನು ಪ್ರಕಟಮಾಡಿದನು.

ಗೀತಾಗಾಂಭೀರ್ಯ

ಶ್ರೀಕೃಷ್ಣನ ಸಮಾಜಧರ್ಮ

ಬರೆದವರು: 'ಶ್ರೀರಂಗ'

"ಸಾವಿರಾರು ವರ್ಷಗಳ ಹಿಂದೆ ಪ್ರಸ್ಥಾನತ್ರಯಿಗಳ ಮೇಲೆ ಇಪ್ಪತ್ತೊಂದು ಭಾಷ್ಯಗಳಿದ್ದುವೆಂದು ತಿಳಿದು ಬರುತ್ತದೆ. ಅವುಗಳಲ್ಲಿ ಈ ಗ್ರಂಥಕಾರರ ವಿಚಾರಗಳಂತಹ ವಿಚಾರಗಳು ಕಂಡುಬರುತ್ತವೆ..........

"....ಪರಂಪರೆ, ಸಂಪ್ರದಾಯ, ಧರ್ಮ, ಪರಮಾತ್ಮ, ಭಕ್ತಿ, ಪ್ರಕೃತಿ, ಪುರುಷ, ಸೃಷ್ಟಿ ಕ್ರಮ ಮೊದಲಾದುವುಗಳಿಂದ ಶ್ರೀರಂಗರು ಅಲಿಪ್ತರಾಗಿದ್ದು, ಗೀತೆಯಂತಹ ಗ್ರಂಥದ ಬಗ್ಗೆ ಬರೆದದ್ದು ಒಂದು ರೀತಿಯಿಂದ ಅಪೂರ್ವವೆಂದೇ ಹೇಳಬಹುದು." —ಕರ್ಮವೀರ ಮಬ್ಬಳ್ಳಿ

ಬೆಲೆ ಸಾದಾಪ್ರತಿ ೧-೦-೦; ಉತ್ತಮಪ್ರತಿ ೧-೮-೦

ಬೇಕಾದವರು ಗ್ರಂಥಕರ್ತರಿಗಾಗಲಿ, ಜಯಂತಿ ಕಾರ್ಯಾಲಯಕ್ಕೆ ಆಗಲಿ ಬರೆದು ತರಿಸಿಕೊಳ್ಳಬೇಕು.

೫೦ ವರ್ಷಗಳಿಂದ ಅನುಭವಪಟ್ಟ
ಕರ್ಕಿ ಮತ್ತು ಕಂಪನಿ
ಇವರ
ಜ್ವರದ ಗುಳಿಗೆ
ಬಾಟ್ಲಿಗೆ ೧ ರೂ.
ಎಲ್ಲಪ್ರಕಾರದ ಜ್ವರಗಳ ಮೇಲೆ ದಿವ್ಯ ಔಷಧ !
ವಿಳಾಸ:— ಗಣೇಶ ರಾಮಚಂದ್ರ ಕರ್ಕಿ ಮತ್ತು ಕಂಪನಿ,
ಗಿರಗಾಂವ, ಮುಂಬಯಿ.

ಆದರಿಂದ ಕೋರಿಯಾದಲ್ಲೆಲ್ಲ ಭಯಂಕರ ಗಲಾಟೆಯೆದ್ದಿತು. ಪ್ರತಿಯೊಬ್ಬ ಕೋರಿಯನ್‍ನೂ ದ್ವೇಷದಿಂದ ಹಲ್ಲುಕಡಿಯಹತ್ತಿದನು. ಜನರು ತಮ್ಮ ರಾಜನೆಡೆಗೆ ಒಂದು ಮನವಿಯನ್ನು ಕಳುಹಿಸಿ, ಈ ಒಪ್ಪಂದವನ್ನು ಕೂಡಲೆ ರದ್ದುಗೊಳಿಸಬೇಕೆಂದೂ, ಹಾಗೂ ಅದಕ್ಕೆ ರುಜು ಮಾಡಿದ ದೇಶದ್ರೋಹಿಗಳಿಗೆ ತಕ್ಕ ಶಾಸನ ವಿಧಿಸಬೇಕೆಂದೂ ಬಿನ್ನವಿಸಿಕೊಂಡರು. ಜನರೆಲ್ಲ ತೀರ ಸಂತಪ್ತರಾಗಿದ್ದರು. ದೇಶದಲ್ಲಿ ಅಲ್ಲಲ್ಲಿ ದಂಗೆಗಳಾಗಹತ್ತಿದುವು. ಹಾಗೂ ಜಪಾನಿಗಳ ದಬ್ಬಾಳಿಕೆಯ ಚಕ್ರವು ವೇಗದಿಂದ ತಿರುಗತೊಡಗಿತು.

ಈ ವಿಷಯ ಅಗ್ರಲೇಖ ಬರೆಯುತ್ತ ಕೋರಿಯನ್ ವೃತ್ತಪತ್ರಿಕೆಯೊಂದು ಹೀಗೆ ಉದ್ಗಾರ ತೆಗೆದಿದೆ : "ಇನ್ನುಮುಂದೆ ನಮ್ಮಲ್ಲಿ ಒಬ್ಬರಾದರೂ ಜೀವಂತರಾಗಿರುವುದು ಯೋಗ್ಯವೆನಿಸುವುದೇ ? ನಾವಿನ್ನು ಪರರ ಗುಲಾಮರಾಗಿ ಜೀವನವನ್ನು ಸಾಗಿಸಬೇಕಾಯಿತು !! ತಾನಕೂನ್ ವಂಶಜನಿಂದ ಇದುವರೆಗೆ ಅಖಂಡ ೪೦೦೦ ವರ್ಷ ಅವ್ಯಾಹತವಾಗಿ ಅಧ್ವಿತೆಯಿಂದ ಮೆರೆಯುತ್ತಿದ್ದ ನಮ್ಮ ಸ್ವಾತಂತ್ರ್ಯಧ್ವಜವಿಂದು ಮಣ್ಣುಗೂಡಿತು ! ದೇಶಬಾಂಧವರೇ, ಧಿಕ್ಕಾರವಿರಲಿ ನಮ್ಮ ಬಾಳಿಗೆ !!"

ಮಂತ್ರಿಗಳಲ್ಲೊಬ್ಬನಾದ ಮಿನ್ ಯಾಂಗವ್ಹಾನ್ ಎಂಬವನು ಒಂದು ದಿವಸ ಕೂಡ ತಾನು ಪರತಂತ್ರನಾಗಿರಲಾರೆನೆಂದು ಆತ್ಮಹತ್ಯೆ ಮಾಡಿಕೊಂಡನು.

ಮುಂದೆ ಕೋರಿಯನ್ ರಾಜನು ಸ್ಥಾನಬದ್ಧ ಮಾಡಲ್ಪಟ್ಟನು. ಎಲ್ಲ ಅಧಿಕಾರಪದಗಳನ್ನೂ ಜಪಾನಿಗಳು ಆಕ್ರಮಿಸಿಕೊಂಡರು. ಇಂತಹ ನಿರ್ಬಂಧವಿದ್ದರೂ ಕೂಡ ಜಪಾನಿಗಳಿಗೆ ತಿಳಿಯದಂತೆ ಒಬ್ಬ ದೂತನು, ಹೇಗ್‍ನಲ್ಲಿಯ ಆಂತರರಾಷ್ಟ್ರೀಯ ಕೋರ್ಟಿಗೆ ತಮ್ಮ ದೂರು ಹೇಳಲು ಅರಸನಿಂದ ಕಳುಹಲ್ಪಟ್ಟನು. ಈ ಆಂತರರಾಷ್ಟ್ರೀಯ ಕೋರ್ಟು ಅದೆಷ್ಟು ನ್ಯಾಯಪರಿಪಾಲನೆ ಮಾಡುತ್ತಿದೆಯೆಂಬದು ಸರ್ವಶ್ರುತವಾದ ಮಾತೇ! ಪ್ರಬಲ ರಾಷ್ಟ್ರಗಳ ತಾಂಡವನೃತ್ಯಗಳೆಲ್ಲ ಕ್ರಮಬದ್ಧವಾಗಿವೆಯೆಂದು ಭಾಷ್ಯ ಮಾಡುವುದಕ್ಕಾಗಿ ಆ ರಾಷ್ಟ್ರಗಳಿಂದ ಸ್ಥಾಪಿಸಲ್ಪಟ್ಟ ಈ ಕೋರ್ಟಿನಿಂದ ನ್ಯಾಯದಾನವನ್ನಪೇಕ್ಷಿಸುವುದು ಮೂರ್ಖತನವೆ ಸರಿ. ಹೇಗ್ ಕೋರ್ಟು ಕೋರಿಯಾದ ಆರ್ತಧ್ವನಿಯ ಕಡೆಗೆ ಕಿವಿಗೊಡಲಿಲ್ಲ. ಕೋರಿಯಾದಲ್ಲಿಯ ಜಪಾನಿಗಳ ದಬ್ಬಾಳಿಕೆಗೆ ಮಾತ್ರ ಇದರಿಂದ ಮತ್ತಿಷ್ಟು ಪುಷ್ಟಿದೊರೆಕಿದಂತಾಯಿತು.

ಕೋರಿಯಾದ ರಾಜನು ತನ್ನ ಮಗನಿಗೆ ಗಾದಿಯನ್ನೊಪ್ಪಿಸಿಬಿಡಬೇಕೆಂದೂ, ಇಲ್ಲದೆ ಹೋದರೆ ಅರಸನನ್ನು ಪದಚ್ಯುತಗೊಳಿಸಿ ಅವರ ಸಂಬಂಧಿಕರನ್ನೆಲ್ಲ ಸಂಹರಿಸಲಾಗುವುದೆಂದೂ ಬೆದರಿಕೆಯು ಹಾಕಲ್ಪಟ್ಟಿತು. ಕಡೆಗೆ ಈ ಜುಲುಮೆಗೆ ಬೇಸತ್ತು, ಅರಸನು ಜಪಾನಿಗಳ ಹೇಳಿಕೆಯಂತೆ ತನ್ನ ಹುಚ್ಚುಮಗನಿಗೆ ಸಿಂಹಾಸನವನ್ನೊಪ್ಪಿಸಿಬಿಟ್ಟನು. ಈ ಹೊಸ ರಾಜನು ಪದಾರೂಢನಾದ ೫ ದಿನಗಳಲ್ಲಿಯೆ ಅವನೊಡನೆ ಹೊಸ ಒಡಂಬಡಿಕೆಯೊಂದು ಮಾಡಿಕೊಳ್ಳಲ್ಪಟ್ಟಿತು. ಅದರಿಂದ ಕೋರಿಯಾದ ಅಂತರ್ವ್ಯವಸ್ಥೆಯೆಲ್ಲ ಜಪಾನಿ ರೆಸಿಡೆಂಟ್–ಜನರಲ್‍ನಿಗೆ ಒಪ್ಪಿಸಲ್ಪಟ್ಟಿತು.

ಆಯಿತು ! ಅಂದಿನಿಂದ ಕೋರಿಯಾದ ಸ್ವಾತಂತ್ರ್ಯರವಿಯು ಸಂಪೂರ್ಣ ಅಸ್ತಂಗತನಾದನು. ಮೊದಲೇ ಆರ್ಥಿಕಪಾಶದಲ್ಲಿ ಸಿಕ್ಕಿಬಿದ್ದ ಕೋರಿಯಾಕ್ಕೆ, ಈಗ ಬೌದ್ಧಿಕ ಪಾರತಂತ್ರ್ಯವೂ ಜೋಡಾಯಿತು. ಕೋರಿಯನ್ ವಿದ್ಯಾಲಯಗಳನ್ನು ಮುಚ್ಚಿ, ಸುಧಾರಣೆಯ ಹೆಸರಿನಲ್ಲಿ ಜಪಾನಿ ಶಾಲೆ–ಕಾಲೇಜುಗಳು ಸ್ಥಾಪಿಸಲ್ಪಟ್ಟುವು. ಜನರನ್ನು ವ್ಯಸನಾಧೀನರನ್ನಾಗಿ ಮಾಡುವುದಕ್ಕಾಗಿ, ಮದ್ಯ–ಅಫು ಮೊದಲಾದ ವ್ಯಾಪಾರಗಳಿಗೆ ಉತ್ತೇಜನ ಕೊಡಲ್ಪಟ್ಟಿತು.

ಕಡೆಗೆ ಸನ್ ೧೯೧೦ ಆಗಸ್ಟ್ ೨೯ನೆಯ ತಾರೀಖಿನ ದಿನ ನಾಮಮಾತ್ರ ಶೇಷವಾಗಿದ್ದ 'ಕೋರಿಯಾ' ಎಂಬುದನ್ನೂ ಬದಲಿಸಿ 'ಚೋಜನ್' ಎಂಬ ಹೆಸರು ಕೊಡಲ್ಪಟ್ಟು ಜಪಾನ ಸಾಮ್ರಾಜ್ಯಕ್ಕೆ ಜೋಡಿಸಲ್ಪಟ್ಟಿತು. ಅಂದಿನಿಂದ ಜಗತ್ತಿನ ನಕ್ಷೆಯಿಂದ 'ಕೋರಿಯಾ' ಎಂಬ ಹೆಸರೇ ಅಳಿಸಿಹೋದಂತಾಯಿತು.

ಪಾಶವ ಶಕ್ತಿಬಲದಿಂದ ಹೇರಲ್ಪಟ್ಟ ಈ ಗುಲಾಮಗಿರಿಗೆ ಕೋರಿಯನ್‍ರು ನಿಷ್ಕ್ರಿಯತೆಯಿಂದ ಸಮ್ಮತಿಸಿದರೇ ? ನಮ್ಮಂತೆ ಪರದಾಸ್ಯ ಶೃಂಖಲೆಯೂ ಒಂದು ಭೂಷಣ ಮಾತ್ರವೆಂದು ತಿಳಿದು ಸಮಾಧಾನ ಹೊಂದುವಷ್ಟು ಅವರು ಸ್ವಾಭಿಮಾನಶೂನ್ಯರೂ, ನಿರ್ವೀರ್ಯರೂ ಆಗಿರುವರೇ ? ಇಲ್ಲ, ಸರ್ವಥಾ ಇಲ್ಲ ! ಅಂದಿನಿಂದ ಇದುವರೆಗೆ ಈ ಚಿಕ್ಕ ರಾಷ್ಟ್ರವು ತನ್ನ ಬಂಧವಿಮೋಚನೆಗಾಗಿ ಮಾಡಿದ ಬಲಿದಾನಗಳನ್ನು ನೆನೆದರೆ, ಹೃದಯವು ಥರಥರ ಕಂಪಿಸದಿರದು. ಸ್ವಾತಂತ್ರ್ಯ ಪ್ರಾಪ್ತಿಗಾಗಿ ಅವರಿಗಿರುವ ತಳಮಳ, ಅವರು ಪಟ್ಟ ಕಷ್ಟ–ನಷ್ಟ, ಕೊಟ್ಟ ಬಲಿದಾನ, ಇವುಗಳ ರೋಮಾಂಚಕಾರಿ—ಹೃದಯವಿದಾರಕ ಸಂಗತಿಗಳ ವರ್ಣನೆಯು ಒಂದು ಸ್ವತಂತ್ರ ವಿಷಯವೇ ಆಗುವುದು.

ವಿಶ್ವಾಸಘಾತ, ಕಳವು, ಕೊಲೆ, ಸುಲಿಗೆ ಮೊದಲಾದ ವೈಯಕ್ತಿಕ ಅಪಾದನೆಗಳ ಬಗ್ಗೆ ದಂಡನೆ ವಿಧಿಸುವ ನ್ಯಾಯಾಲಯಗಳು ಎಲ್ಲೆಡೆಗಳಲ್ಲಿಯೂ ಉಂಟು. ಆದರೆ ಇವುಗಳನ್ನೇ ಪ್ರಚಂಡ ಪ್ರಮಾಣದಲ್ಲಿ ನಿರ್ಭೀತಿಯಿಂದ ಮಾಡುವ ನೀಚ—ಸಾಮ್ರಾಜ್ಯಲೋಭಿ—ರಾಷ್ಟ್ರಗಳಿಗೆ, ಅವುಗಳ ಕೃತ್ಯಕ್ಕನುಗುಣವಾದ ಶಿಕ್ಷೆ ವಿಧಿಸುವ ನ್ಯಾಯಾಸನಗಳೆಲ್ಲಿವೆ ? ಈ ಕೊರತೆಯನ್ನು ಹೋಗಲಾಡಿಸುವುದಕ್ಕಾಗಿಯೇ ಇಂದು ರಣದೇವತೆಯು ಮೈದೋರಿ, ತನ್ನ ರೌದ್ರಲೀಲೆಯನ್ನು ಪ್ರಾರಂಭಿಸಿರಬಹುದಲ್ಲವೇ ?

ಮನೆಯಲ್ಲಿಯೆ ಹೊಲಿಗೆ ಕಲಿಯಿರಿ!

ಶ್ರೀ. ಹಳಪೇಟೆ ಚಿಂತಾಮಣಿರಾಯರು ಟಿ. ಸಿ. ಡಿ.
ಹೊಲಿಗೆಯ ಶಿಕ್ಷಕರು, ಕ. ಎ. ಬೋರ್ಡ್, ಧಾರವಾಡ.

★

ಉಬ್ಬು ತೋಳು

ಜಂಪರು, ಫ್ರಾಕುಗಳಿಗೆ ಹಚ್ಚುತ್ತಿರುವ ಸಾದಾ ತೋಳು, ನಿರಿಗೆತೋಳು, ಅಲೆದಾಡುವ ತೋಳುಗಳಂತೆಯೇ, ಇದೀಗ ಹೆಚ್ಚಾಗಿ ಪ್ರಚಾರಕ್ಕೆ ಬರುತ್ತಿರುವ ಉಬ್ಬುತೋಳಿನ ಕತ್ತರಿಸುವ ರೀತಿಯನ್ನು ಇಲ್ಲಿ ಕೊಡಲಾಗಿದೆ :

ಅಳತೆಗಳು:—

೩೨ ಇಂಚು ಎದೆ. ೫ ಇಂಚು ತೋಳಿನ ಉದ್ದ.

ಚಿತ್ರಿಸುವುದು:—

ಬ, ಅ, ಕ. ಕಾಟಕೋನ.



ತೋಳಿನ ಮಾದರಿ

ಅ, ಕ=೫" ತೋಳಿನ ಉದ್ದ.

ಆ, ಬ ೬" ಎಂದರೆ ಎದೆಯ ೧/೪—೧"

ಅ ಮೇಲ್ಬದಿಗೆ ಡ= ೩೧/೨". ಭುಜದ ಹತ್ತಿರದ ತೋಳಿನ ಉಬ್ಬಿನ ಹೆಚ್ಚು ಕಡಿಮೆ ಬೇಕಾದಂತೆ— ಈ ೧/೨" ನಲ್ಲಿ ಹೆಚ್ಚು ಕಡಿಮೆ ಮಾಡಿಕೊಳ್ಳಬೇಕು.

ಬ, ಇ = ೩" ಎಂದರೆ ಎದೆಯ ೧/೧೬+೧/೪".

ಇ, ಡ ಸರಳವಾಗಿ ಕೂಡಿಸಿದ ನಂತರ, ಚಿತ್ರದಲ್ಲಿ ತೋರಿಸಿದಂತೆ ಡೊಂಕಾಗಿ ಕೂಡಿಸಬೇಕು.



ತೋಳಿನ ಆಕೃತಿ

ಕ, ಗ=೬" ಎಂದರೆ ಎದೆಯ, ೧/೮+೨"

ಇ, ಗ ಕೂಡಿಸುವುದು.

ಕ, ರ = ೧/೨"

ರ, ಗ ಕೂಡಿಸುವುದು.

ಕ, ದ = ೩"

ರ, ನ = ೧/೨"

ದ, ನ ಕೂಡಿಸುವುದು. ಬಟ್ಟೆಯ ಸುತ್ತಳತೆಯ ಪ್ರಮಾಣಕ್ಕನುಸರಿಸಿ ದ, ನ, ಡಾಚಿನ ಎಡಬಲಕ್ಕೆ, ಒಂದೊಂದು ಡಾಚನ್ನು ಹಿಡಿಯಬಹುದು.

ಕತ್ತರಿಸುವುದು:—

೮೧/೨" ಉದ್ದ ೧೪" ಅಗಲು ಉಳ್ಳ ಬಟ್ಟೆಯನ್ನು ಅಗಲಿನಲ್ಲಿ ಮಡಿಕೆ ಮಾಡಿ, ಅದು ಡ, ಅ, ಕ ಗಳ ಕಡೆಗೆ ಬರುವಂತೆ ಇಡುವುದು.

ರ, ಗ, ಇ ದಿಂದ ಡೊಂಕು ಗೆರೆಯ ಗುಂಟ ಡ ದ ವರೆಗೆ ಕತ್ತರಿಸಬೇಕು. ಅಡ್ಡತಿಡ್ಡ (Cross) ಬಟ್ಟೆಯಲ್ಲಿ ಕೂಡ ಈ ತೋಳನ್ನು ಕತ್ತರಿಸಬಹುದು. ಮಾತ್ರ ಬಟ್ಟೆಯ ಮೇಲಿನ ಹೂವುಗಳಾಗಲಿ ಗೆರೆಗಳಾಗಲಿ ತಪ್ಪು ಬಾರದಂತೆ, ಜಂಪರಿನ ಅಂದಕ್ಕೆ ಕುಂದುಬಾರದಂತೆ ಲಕ್ಷ್ಯವಿರಬೇಕು. ತೋಳಿನ ಕೆಳಭಾಗಕ್ಕೆ (ನ, ಗ) ಡಾಚು ಹಿಡಿದ ನಂತರ, ಗೋಟನ್ನು ಕಟ್ಟಬೇಕು.

ವಿ. ಸೂ :— ಮುಂದಿನ ಸಂಚಿಕೆಯಲ್ಲಿ 'ನೆಹರೂ ಶರ್ಟ' ನೋಡಿರಿ.

ನಾಡಗುಡಿಯ ಮಾನವೆ ಮಾನ ! ಅದಕಾಗಿ ಮುಡಿಪು ನಮ್ಮಯ ಪ್ರಾಣ!

ಕನ್ನಡ ಸೈನಿಕ

“ಸೊಕ್ಕಿದ ಹಗೆಗಳ ಬೊಗ್ಗಿಸಿ ಮೆರೆಯುವ ಸೋಲರಿಯದ ಕರಿನಾಡಗುಡಿ !”

ಸಂಪುಟ ೧ | ಬೇಕಾದಾಗ ಹೊರಡುವ ಪತ್ರಿಕೆ | ಸಂಚಿಕೆ ೫

ಕರ್ನಾಟಕ ವಿಶ್ವವಿದ್ಯಾಲಯ

(ಪರಿಷದಧ್ಯಕ್ಷರೊಡನೆ ಪ್ರಶ್ನೋತ್ತರ)

ಕರ್ನಾಟಕ ವಿಶ್ವವಿದ್ಯಾನಿಲಯ ಪರಿಷತ್ತಿಗೆ ಅಧ್ಯಕ್ಷರಾಗಿದ್ದ ಶ್ರೀಮಾನ್ ಆರ್. ಎ. ಜಾಹಗಿರದಾರ ಎಂ. ಎ. ಎಲ್ ಎಲ್.ಬಿ. ಅವರನ್ನು ಸಂದರ್ಶಿಸಿ, ಮುಂಬಯಿಯಲ್ಲಿರುವ ಕನ್ನಡ ಸೈನಿಕರೊಬ್ಬರು ಮಾತು-ಕತೆ ನಡೆಯಿಸಿದುದರ ವರದಿಯಿದು. ಸಂ.

“ಕಳೆದ ತಿಂಗಳು ಸೇರಿದ ಕರ್ನಾಟಕ ವಿಶ್ವವಿದ್ಯಾಲಯ ಪರಿಷತ್ತಿನ ಅಧ್ಯಕ್ಷೀಯ ಭಾಷಣದ ಒಂದು ವಾಕ್ಯ ‘ನಮ್ಮ ಕರ್ನಾಟಕ ವಿ. ವಿ. ಸ್ಥಾಪನೆಯ ಉದ್ದೇಶವು ನೆರವೇರಬೇಕಾದರೆ ನಾವು ಇನ್ನು ಎಷ್ಟು ಹಾದಿಯನ್ನು ತುಳಿಯಬೇಕು ಎಂಬುದು ತಮ್ಮ ಮನವರಿಕೆಯಾಗಬಹುದು’ ಎಂದಿದೆ. ನಮ್ಮ ಪ್ರಯತ್ನವು ಈಗ ಯಾವ ನಿಲುವಿಗೆ ಬಂದಿರುವುದು? ಅದು ಇನ್ನೂ ಅರ್ಭಕಾವಸ್ಥೆಯಲ್ಲಿಯೆ ಇರುವುದೊ—ಇಲ್ಲವೆ ಬಾಲಕಾವಸ್ಥೆಗೆ ಬಂದಿರುವುದೊ—ಬಟುವಾಗಬಹುದೊ ಎಂಬುದೊಂದು ವಿಚಾರ. ಹಾಗೆ ನೋಡಿದರೆ, ನಾವು ಬಹಳ ಕಾಲದವರೆಗೇನೂ ದಾರಿನೋಡುವ ಹಾಗು ಬಹುದೊಡ್ಡ ದಾರಿ ನಡೆಯುವ ಹಾಗೇನೂ ಆಗಲಿಕ್ಕಿಲ್ಲ ಎಂದು ಅನುಮಾನ. ಅದಕ್ಕೆ ೧೯೪೮ ನೆಯ ಇಸವಿಯ ಸಟಲವಾಡ ಸಮಿತಿಯವರು ಒಂದೆರಡು ಮಹತ್ತ್ವದ ತತ್ತ್ವಗಳ ತೀರ್ಮಾನವನ್ನು ಕೊಟ್ಟಿರುವರು” ಎಂದು ನಾನು ಮೊದಲು ಮಾತನ್ನು ಆರಂಭಿಸಿದೆ ನನ್ನ ಮಾತನ್ನೆ ಮುಂದುವರಿಸಿ “ಅದಲ್ಲದೆ ಈಗಾಗಲೆ ಆಂಧ್ರರು ಪ್ರಾದೇಶಿಕ ಅಥವಾ ಭಾಷಾನುಗುಣ ವಿಶ್ವವಿದ್ಯಾಲಯವನ್ನು ಪಡೆದು—ಒಂದು ಹಾದಿಯನ್ನು ಹಾಕಿಕೊಟ್ಟಿದ್ದಾರೆ; ಮತ್ತು ನಿಜವಾಗಿಯೂ ಎರಡು ಮೂರು ನುಡಿಗಳು ಒಂದೇ ವಿಶ್ವವಿದ್ಯಾಲಯದಲ್ಲಿ ತೊಡಕುಬಿದ್ದು ಹೊಳಲಾಡುವ ಪ್ರಾಂತಗಳಲ್ಲಿ ಪ್ರಾದೇಶಿಕ ವಿ. ವಿ. ಗಳ ಸ್ಥಾಪನೆಯಾಗಬೇಕು—ಎಂಬ ಮಾತಿಗೆ ಯಾರಿಂದಲೂ ವಿರೋಧವುಂಟಾಗಿಲ್ಲ,” ಎಂದು ಹೇಳಿದರು ಶ್ರೀ. ಜಾಹಗೀರದಾರರು.

“ಅದೆಲ್ಲ ಸರಿ, ಆದರೆ ಎಲ್ಲ ತತ್ತ್ವಗಳಿಗೂ ಕಾರ್ಯರೂಪವು ಒಮ್ಮೆಲೆ ದೊರೆಯುತ್ತಿದ್ದರೆ, ಇಷ್ಟೊಂದು ಕಲಹಕ್ಕೆ ಕಾರಣವೆ ಉಳಿಯುತ್ತಿದ್ದಿಲ್ಲ—ಜಗತ್ತಿನಲ್ಲಿ. ತತ್ತ್ವಗಳಿಗೆಲ್ಲ ಒಪ್ಪಿಗೆ.. ಆದರೆ ಕಾರ್ಯದಲ್ಲಿ ಮಾತ್ರ ಟೊಪ್ಪಿಗೆ ಹೀಗಾಗುವುದೇ ಹೆಚ್ಚು. ಅಂತೆಯೆ ಇಂದಿನ ಈ ನಮ್ಮ ಪ್ರಯತ್ನಗಳು ವ್ಯವಹಾರ್ಯವಾಗುವಂತೆ ನೋಡಿಕೊಳ್ಳಬೇಕಲ್ಲವೆ? ಅದರಲ್ಲಿಯೂ ಕನ್ನಡದಲ್ಲಿ ಸಮಸ್ಯೆಗಳಿಗೇನು ಕೊರತೆಯಿಲ್ಲ. ಇಲ್ಲಿಯ ಸಮಸ್ಯೆಗಳ ಪಟ್ಟಿಯೊಂದನ್ನು ಯಾರಾದರೂ ಸಿದ್ಧಪಡಿಸಿದರೆ, ಇಡಿಯ ಪ್ರಪಂಚದಲ್ಲಿಯೆ ಬೇರೆ ಪ್ರಮೇಯಗಳು ದೊರೆಯಲಿಕ್ಕಿಲ್ಲ. ಮತ್ತು ‘ಇಲ್ಲಿಯ ತೊಡಕುಗಳನ್ನು ಬಗೆಹರಿಸಿದರೆ—ಜಗತ್ತಿನ ಎಲ್ಲ ಸಮಸ್ಯೆಗಳನ್ನೂ ಪರಿಹಾರಮಾಡಿದಂತೆಯೆ ಆಗುವುದು’ ಎಂಬ ಮಾತೂ ಅಷ್ಟೇ ನಿಜ. ಈಗ ಜರುಗಿದ ಪರಿಷತ್ತಿನಲ್ಲಿ ಒಂದು ಸಮಿತಿಯು ನೇಮಕವಾಗಿದೆ. ಅದರ ಕಾರ್ಯ ಹೇಗೆ ಸಾಗಬಹುದು—ಎಷ್ಟು ಯಶಸ್ವಿಯಾಗಬಹುದು?” ನಾನು ಕೇಳಿದೆ.

ಇದು ಕೇವಲ ಪ್ರಾಥಮಿಕ ಪ್ರಯತ್ನ. ಇಡಿಯ ಕನ್ನಡದಲ್ಲಿ ಕಾರ್ಯಪ್ರಚಾರ, ವಿಚಾರವಿನಿಮಯ, ಹಣಸಂಗ್ರಹ ಮುಂತಾದುವುಗಳನ್ನು ಮಾಡಲು ಒಂದು ‘ಕರ್ನಾಟಕ ವಿಶ್ವವಿದ್ಯಾಲಯ ಮಂಡಲ’ ಎಂಬ ಪ್ರಾತಿನಿಧಿಕ ಸಂಘದ ಸ್ಥಾಪನೆಗೈಯಲು ಸಮಿತಿಯಿದೆ. ಎಲ್ಲ ಭಾಗಗಳ ಅಭಿಪ್ರಾಯಗಳನ್ನೂ ತಿಳಿದುಕೊಳ್ಳಲಿಕ್ಕೆಂದೆ, ಈಗಾಗಲೆ ಪ್ರಸಿದ್ಧವಾದ ಜನರಲ್ಲದೆ ಇನ್ನೂ ೨-೩ ಜನರನ್ನು ಆ ಸಮಿತಿಯಲ್ಲಿ ಸೇರಿಸಿಕೊಳ್ಳಲು—ಅನುವು ಇಟ್ಟಿದೆ,” ಎಂದು ಹೇಳಿದ್ದಲ್ಲದೆ “ಈಗ ಬೇಕು—ಮುಖ್ಯವಾಗಿ—ಸರ್ವತೋಮುಖವಾದ—ಕಾರ್ಯ” ಎಂದರು ಶ್ರೀ. ಜಾಹಗೀರದಾರರು.

“ಹೌದು, ನಾವೇ ಮೊದಲು ನಮ್ಮ ಎಲ್ಲ ವ್ಯವಸ್ಥೆಯನ್ನು ಮಾಡಿಕೊಳ್ಳದಿದ್ದರೆ—ಸರಕಾರವಾಗಲಿ ಪರಕೀಯರಾಗಲಿ ನೆರವು ನೀಡಲಾರರು. ವಿಶ್ವವಿದ್ಯಾಲಯದಂತಹ ಮಾತು ಸಣ್ಣದಲ್ಲ....

ಜಯಂತಿ

ನಿಜ! ಅದನ್ನು ಕೇವಲ ಜನರ ಸಹಾಯ-ಪ್ರಯತ್ನಗಳಿಂದಲೆ ನೆರವೇರಿಸುವುದೂ ಬಿಗಿ....ಇದೂ ನಿಜ! ಅದಕ್ಕೆ ಸರಕಾರದ ಸಹಾನುಭೂತಿ ಬೇಕು. ಮೇಲಾಗಿ ಕೊನೆಗೆ ವಿಶ್ವವಿದ್ಯಾಲಯದ ಸ್ಥಾಪನೆ ಮಾಡುವುದು ಹೆಚ್ಚಾಗಿ ಸರಕಾರದ ಕರ್ತವ್ಯವೆ ಆಗಿದ್ದರೂ—ಮೊದಲ ಕೆಲಸ ಎಲ್ಲವೂ ಜನರಿಂದ ಆಗಬೇಕಾಗುವುದು. ಜನರಲ್ಲಿ ಬೇಡಿಕೆಯೆ ಇರದಿದ್ದರೆ, ಸರಕಾರದವರು—ಅದರಲ್ಲಿ ನಮ್ಮ ದೇಶದಂತಹ ಪರಿಸ್ಥಿತಿಯಿದ್ದಲ್ಲಿ—ಮಾಡಬೇಕಾದರೂ ಏನು; ಏಕೆ? " ನಾನು ಕೇಳಿದೆ.

" ಅದಕ್ಕಾಗಿಯೆ ಈಗ ನಾನು ಹೇಳುವುದು ಈ ರೀತಿಯಾಗಿ: ಈಗ ಮೊನ್ನೆಯ ಪರಿಷತ್ತಿನಲ್ಲಿ ಎಲ್ಲ ಪಕ್ಷ-ಪಂಗಡಗಳ ಜನರೂ ಒಂದೆಡೆಗೆ ನೆರೆದಿದ್ದಿಲ್ಲವೆ? ವಿದ್ಯೆಯು ಎಷ್ಟೆಂದರೂ ಪಕ್ಷಾತೀತ. ಅಂತೆಯೆ ಈ ಸಂಗತಿಯಲ್ಲಿ ನಾವು ನಮ್ಮಲ್ಲಿರುವ ಎಲ್ಲ ಕೃತಕ ಇರಲಿ—ಘಾತಕ ಇರಲಿ—ಭೇದಭಾವಗಳನ್ನು ಮರೆತು, ಈ ಪ್ರಯತ್ನದಲ್ಲಿ ಒಮ್ಮತದಿಂದ ತೊಡಗಬೇಕು. ಭರದಿಂದ ನಮ್ಮ ಹೆಜ್ಜೆಗಳನ್ನು ಮುಂದಿರಿಸಬೇಕು. ಒಂದು ವಿಶ್ವವಿದ್ಯಾಲಯದ ಕಾರ್ಯವ್ಯಾಪ್ತಿ, ಗಳಿಕೆ-ಬಳಕೆ ಮೊದಲಾದುವುಗಳನ್ನೊಳಗೊಂಡ ಒಂದು ರೂಪರೇಷೆಯನ್ನು ಸಿದ್ಧಗೊಳಿಸಲು, ಮೊದಲು ಲೋಕಮತವನ್ನೂ ಧನಸಂಗ್ರಹವನ್ನೂ ಪಡೆಯಲು ಉಜ್ಜುಗಿಸಬೇಕು," ಎಂದರವರು.

" ಆದರೆ—! ಇವೆಲ್ಲ ನಿರ್ಣಯುಗಳು, ಗೊತ್ತುವಳಿಗಳು, ಪ್ರತಿಜ್ಞೆಗಳು. ಇಂತಹ ಪರಿಷತ್ತುಗಳು ಬರುಗುವುವು, ಕರಗುವುವು. ಗೊತ್ತುವಳಿಗಳು ಆಗುವುವು ಹೋಗುವುವು. 'ಪ್ರತಿಜ್ಞೆಗಳನ್ನು ಆಗಾಗ್ಗೆ ಮಾಡುವರು' ಎಂದರೆ, ಮಾಡಿದುವುಗಳನ್ನು ಮುರಿಯುವರು— ಎಂದರ್ಥವು ಮೊದಲೆ ಹೊರಡುವುದು. ಅಂತೆಯೆ ಈಗಿನ 'ಧಂಧೆಗಾರ' ಮುಂದಾಳುಗಳ ಮೇಲಿನ ನಂಬುಗೆಯೆ ಹಾರಹತ್ತಿದೆ ಯುವಕರ ಮನಸ್ಸಿನಲ್ಲಿ. ಇದಕ್ಕೆ ಉಪಾಯ? ಒಂದೆ ಬಾಣ, ಫಲಕಾರಿ; ಮಾಡಿದ ನಿರ್ಣಯವು ಒಂದೆ ಆದರೂ ಚಿಂತೆಯಿಲ್ಲ ದೃಢನಿಶ್ಚಯ; ತೊಟ್ಟಪಣ ಕೊನೆಗಾಣುವುದು ಹೀಗೆ ಎಂದು ಆಗಬಹುದು?" ನಾನು ಭಾವನಾವಶನಾಗಿ ಕೇಳಿದೆ.

" ಅದೇ ನಮ್ಮ ವೈಶಿಷ್ಟ್ಯವಾಗಿದೆ" ಎಂದರು ಶ್ರೀ. ಜಾಹಗೀರದಾರರು. " ನಮ್ಮ ಪ್ರಾಂತದಲ್ಲಿ ಪ್ರಯತ್ನಗಳೇನೊ ಅನೇಕಮುಖವಾಗಿ ನಡೆಯುತ್ತವೆ. ಬೇಕಾದಷ್ಟು ವೈವಿಧ್ಯವಿದೆ ನಮ್ಮಲ್ಲಿ. ಆದರೆ ಅದೆಲ್ಲ ನಡೆಯುವುದು ಕೆಲವು ವಿಶಿಷ್ಟ ಜನರಿಂದ. ಅದಕ್ಕೆ ಅವರನ್ನೇ ದೋಷಿಗಳೆಂದು ಸಹ ಹಿಡಿಯಲು ಬರುವುದಿಲ್ಲ. ಅವರ ಕಾರ್ಯವನ್ನು ಮುಂದಿನ ಪೀಳಿಗೆಯ ಜನರು ಮುಂದುವರಿಸಿದರೆ—ಅವರಿಗೆ ಅದರಿಂದ ಆನಂದವೆ ಆಗಬೇಕು ಅಲ್ಲವೆ? ಒಬ್ಬೊಬ್ಬನು ಒಂದೊಂದು ಕೆಲಸಕ್ಕೆ ತನ್ನ ಜೀವನವನ್ನು ಧಾರೆಯೆರೆಯಲು ಮನಸ್ಸುಮಾಡಿದರೆ ತೊಂದರೆಯೆ ಇಲ್ಲ. ಶ್ರಮವಿಭಾಗವಾಗಿ ಎಲ್ಲವೂ ಕೈಗೂಡುವುದು. ಇಂದು ತರುಣರು ಮುಂದೆ ಬರಬೇಕು, ತಮಗೆ ಮೆಚ್ಚಿಗೆಯಾದ ವಿಷಯದಲ್ಲಿ ತಾವು ತನ್ಮಯರಾಗಿ ಹೆಣಗಬೇಕು. ಮಿಕ್ಕ ಕಡೆಗೆಲ್ಲ ಇದು ನಡೆದಿದೆ, ನೋಡಲಿಕ್ಕೆ ಸಿಕ್ಕುತ್ತಿದೆ. ಆದರೆ ನಮ್ಮಲ್ಲಿ ಮಾತ್ರ ಎಲ್ಲ ಕಾರ್ಯ ಕೆಲವರ ಗುತ್ತಿಗೆಯಾಗಿದೆ. ಇದು ಹೋಗಿ, ಒಂದೊಂದು ಕೆಲಸಕ್ಕೆ ಒಬ್ಬೊಬ್ಬರು ಟೊಂಕಕಟ್ಟಿ ನಿಂತರೆ ಅದಾವುದು ಅಸಾಧ್ಯ?" ತರುಣರನ್ನು ಕೆಣಕುವ ದನಿಯಲ್ಲಿ ಶ್ರೀ. ಜಾಹಗೀರದಾರರು ನುಡಿದರು.

" ಇದೂ ಒಂದು ಸಮಸ್ಯೆಯೆ ಅಲ್ಲವೇನು? ಆದರೆ ಒಗಟಗಳನ್ನು ಕಟ್ಟುವವರಿಗೆ ಅವುಗಳ ಉತ್ತರಗಳೂ ಗೊತ್ತಿರುತ್ತವೆ. ಅದರಂತೆಯೆ ಸಮಸ್ಯೆಗಳನ್ನು ಎತ್ತುವವರಿಗೆ ಅವುಗಳ ಪರಿಹಾರಮಾರ್ಗವೂ ತಿಳಿದಿರುತ್ತದೆ, ತಿಳಿದಿರಬೇಕಾಗುತ್ತದೆ. ಈಗ ಕರ್ನಾಟಕ ವಿಶ್ವವಿದ್ಯಾಲಯದ ಮಾತನ್ನೆ ತೆಗೆದುಕೊಂಡರೆ 'ಧಾರವಾಡ-ಬೆಳಗಾಂವಿಗಳಲ್ಲಿಯ ಒಂದೆರಡು ಕಾಲೇಜುಗಳಿಂದ ವಿದ್ಯಾಪೀಠವೇನಾಗುವುದು?' ಎಂಬ ಪ್ರಶ್ನೆಯೂ ಏಳುವುದು. ಒಂದು ವಿಶ್ವವಿದ್ಯಾಲಯ ಎಂದ ಕೂಡಲೆ ವಿಶ್ವದೊಳಗಿನ ಎಲ್ಲ ವಿದ್ಯೆಗಳನ್ನೂ ಕಲಿಯಲು ಮತ್ತು ಕಲಿಸಲು ಅಲ್ಲಿ ಅನುವು ಇರಬೇಕು ಇದು ನಿಜ; ಆದರೆ ಎಲ್ಲ ಕಡೆಯಲ್ಲಿಯೂ ಆರ್ಟ್ಸ್, ಸಾಯಿನ್ಸ್, ನ್ಯಾಯ, ಶಿಕ್ಷಣ, ವ್ಯಾಪಾರ ಮೊದಲಾದ ಎಲ್ಲ ವಿಭಾಗಗಳನ್ನೂ ಸಿದ್ಧವಾಗಿಟ್ಟುಕೊಂಡೆ ಸಾಗಿದ ಉದಾಹರಣೆಗಳಿವೆಯೆ? ಹಾಗೆ ಇರಲು ಸಾಧ್ಯವಾದರೂ ಇದೆಯೆ? ಎಷ್ಟೆಂದರೂ ಇಂತಹ ಪ್ರಯತ್ನ ಸಣ್ಣ ಪ್ರಮಾಣದಲ್ಲಿಯೆ ಸಾಗತಕ್ಕದು. ಈಗ ನಮ್ಮಲ್ಲಿ ಆರ್ಟ್ಸ್, ಸಾಯಿನ್ಸ್, ನ್ಯಾಯ, ಶಿಕ್ಷಣ, ವ್ಯಾಯಾಮ, ಸಂಶೋಧನ, ಇತಿಹಾಸ-ಸಾಂಸ್ಕೃತಿಕ ಶಿಕ್ಷಣ, ಆಯುರ್ವೇದ, ಧರ್ಮ ಮೊದಲಾದುವುಗಳ ಶಿಕ್ಷಣಸಂಸ್ಥೆಗಳಿವೆ. ಇವುಗಳಲ್ಲಿಯ ವ್ಯಾಪಾರ, ಸಮಾಜಶಾಸ್ತ್ರ, ರಾಜಕಾರಣ ಮೊದಲಾದುವುಗಳ ವಿಶಿಷ್ಟ ಶಿಕ್ಷಣದ ಸಂಸ್ಥೆಗಳೂ ಏರ್ಪಡಬಹುದು. ಆದರೂ ಈಗ ಇದ್ದ ಕಾಲೇಜುಗಳು ಮತ್ತು ವಿದ್ಯಾರ್ಥಿಗಳ ಸಂಖ್ಯೆ ಇದನ್ನೆ ಲೆಕ್ಕದಲ್ಲಿ ಹಿಡಿದು ಸಹ ಕಾರ್ಯವನ್ನಾರಂಭಿಸಬಹುದು. ಬರುಬರುತ್ತ ಒಂದೊಂದಾಗಿ ಎಲ್ಲ ಶಾಖೆಗಳನ್ನೂ ನಿರ್ಮಿಸಬಹುದು. ಅಲ್ಲದೆ ಮೇ ತಿಂಗಳ '**ಜಯಂತಿ**'ಯಲ್ಲಿ ಬಂದ 'ಕರ್ನಾಟಕ ವಿಶ್ವವಿದ್ಯಾಲಯ' ಎಂಬ ಬರೆಹದಲ್ಲಿಯೂ, ಮತ್ತೆ ಬೇರೆ ಒಂದೆರಡು ಕಡೆಗೂ ಒಂದು ವಿಚಾರದ ಪ್ರತಿಪಾದನೆಯಾಗಿದೆ. ಹಿಂದುಸ್ತಾನದಲ್ಲಿ ಅನೇಕ ಪ್ರಾಂತಗಳಿವೆ. ಅವುಗಳಲ್ಲಿ ಎಲ್ಲ ಕಡೆಗೂ ಪ್ರಾದೇಶಿಕ ವಿ. ವಿ. ಗಳ ಸ್ಥಾಪನೆಯಾದರೆ, ಜ್ಞಾನದ ಎಲ್ಲ ಶಾಖೆ (Faculty) ಗಳನ್ನು ಆರಂಭಿಸುವುದರಿಂದ ಅನ್ಯಥಾ ಹಣದ ಅಪವ್ಯಯವೂ, ಅನಾವಶ್ಯಕ ಶ್ರಮವೂ ಆಗುತ್ತವೆ. ಅದೇ, ಅವರವರ ವೈಶಿಷ್ಟ್ಯಗಳನ್ನು ನೋಡಿಕೊಂಡು, ಆ ಆ ಪ್ರಾಂತಗಳಿಗೆ ಒಂದೆರಡು ಶಾಖೆಗಳ ವಿಶಿಷ್ಟ ಮತ್ತು ಹೆಚ್ಚಿನ ಜ್ಞಾನದಾನವನ್ನು ಮಾಡುವ ಏರ್ಪಾಡನ್ನು ಇಟ್ಟರೆ ಒಳಿತಾಗುವುದಿಲ್ಲವೆ? – ಎಂಬುದೆ ಆ ವಿಚಾರಪ್ರಣಾಲಿ. ಈಗ

ಮುಂಬಯಿ ವಿ. ವಿದ್ಯಾಲಯದಲ್ಲೇ ಇದ್ದ, ಉದ್ಯೋಗಕಲಾ ವಿಜ್ಞಾನ (Technological Institute) ಮತ್ತು ಸಮಾಜಶಾಸ್ತ್ರ-ಅರ್ಥಶಾಸ್ತ್ರಗಳ ವಿಭಾಗ ಇವೆ. ಅದರಂತೆಯೆ ಮತ್ತೊಂದು ಪ್ರಾಂತಕ್ಕೆ ರಾಜಕಾರಣ, ವ್ಯಾಪಾರವಿಜ್ಞಾನ, ಹಾಗೆಯೆ ಕರ್ನಾಟಕಕ್ಕೆ ಭೌತಶಾಸ್ತ್ರ ಮೊದಲಾದ ಒಂದೆರಡು ವಿಷಯಗಳನ್ನು ಕೊಟ್ಟು, ಅವುಗಳನ್ನು ಅಖಿಲ ಭಾರತದ ಶಿಕ್ಷಣ ಕೇಂದ್ರಗಳನ್ನಾಗಿ ಮಾಡಿದರೆ ಹೆಚ್ಚಿನ ಸೌಕರ್ಯ, ಕಡಿಮೆ ತೊಂದರೆ, ಹೆಚ್ಚಿನ ಅನುಕೂಲತೆ ಆಗಲಿಕ್ಕಿಲ್ಲವೆ ? " ಎಂದಾಗ, ಶ್ರೀ. ಜಾಹಗೀರದಾರರು ಬೇರೆ ಬಗೆಯ ಅಭಿಪ್ರಾಯ ವ್ಯಕ್ತಪಡಿಸಿದರು: " ಹಾಗೆ ಮಾಡುವುದರಿಂದ ಮಿಕ್ಕ ಪ್ರಾಂತಗಳಿಗೆ ಸಾಕಷ್ಟು ಅವಕಾಶ ಸಿಕ್ಕದೆ, ಈಗ ನಾವು ನಡೆಯಿಸಿದ ಪ್ರಯತ್ನದ ಸಾಫಲ್ಯವೆ ಆಗುವುದಿಲ್ಲ. ಅದೂ ಅಲ್ಲದೆ ಅಂತಹ ಸಂಸ್ಥೆಗೆ ಅಖಿಲ ಭಾರತದ ರೂಪು ಇರುವುದರಿಂದ, ಅದರ ಆಡಳಿತದಲ್ಲಿ ಎಲ್ಲ ಪ್ರಾಂತಗಳ ಪ್ರತಿನಿಧಿಗಳಿರಬೇಕಾಗುವುದು. ಮೇಲಾಗಿ ಬೋಧಭಾಷೆಯ ತೊಡಕೊಂದು ಇದ್ದೇ ಇದೆ. ಹೀಗಾಗಿ ಇಂತಹ ವ್ಯವಸ್ಥೆಯು ವ್ಯವಹಾರ್ಯವೂ, ಲಾಭಕರವೂ ಆಗಲಿಕ್ಕಿಲ್ಲ. "

ನಾನು ಮಾತಿಗೆ ಮೊದಲುಮಾಡಿದೆ :

" ಇದರಿಂದಲೆ ಮುಂದಿನ ಪ್ರಶ್ನೆಯ ಉಗಮವೊಂದುವುದು ಎಂದರೂ ಸಲ್ಲುವುದು. ಅದೆಂದರೆ 'ಬೋಧಭಾಷೆಯು ವಿಕಲ್ಪವೆ? ಪ್ರಾದೇಶಿಕ ವಿ. ವಿ. ಯದ ಹುಟ್ಟು ಮತ್ತು ಆವಶ್ಯಕತೆಯೆಲ್ಲವೂ ಅದರ ಮೇಲೆ ಅವಲಂಬಿಸಿದೆ. ನಮ್ಮ ಸಾಂಸ್ಕೃತಿಕ ಬೆಳವಣಿಗೆ ನಮ್ಮ ಸಂಸ್ಕೃತಿ ಸಂರಕ್ಷಣೆ ಇವು, ಈಗಿನ ಸ್ಥಿತಿಯಲ್ಲಿ ಅಷ್ಟು— ಎಂದರೆ ಬೇಕಾದಷ್ಟು ಸಾಧ್ಯ ಇಲ್ಲ; ಅದಕ್ಕಾಗಿ ನಮಗೆ ಬೇರೆ ವಿ.ವಿ. ಯ ಬೇಕು. ಮಾತೃಭಾಷೆಯಲ್ಲಿ ಆಗುವ ಶಿಕ್ಷಣದ ಮಟ್ಟ ಅನ್ಯಭಾಷೆಯಲ್ಲಾದರೆ ಬರಲಾರದು'ಎಂದು ಮುಂತಾಗಿ ವಾದಿಸಿ ನಾವು ಈ ಪ್ರಯತ್ನಕ್ಕೆ ತೊಡಗಿದ್ದೇವೆ.ನಮ್ಮ ಏಕೀಕರಣದ ಮೂಲ ನಮ್ಮ ಸಾಂಸ್ಕೃತಿಕ ನವನಿರ್ಮಾಣದ ಸ್ಫೂರ್ತಿ ಇವೆಲ್ಲವುಗಳಿಗೆ ತಾಯಿನುಡಿಯೆಂದರೆ ಕಲ್ಪವೃಕ್ಷದಂತಿದೆ. ಹೀಗಿರಲು ಈಗ ಈ ಬಗೆಯ ಪ್ರಾದೇಶಿಕ ವಿ.ವಿ. ಯಗಳು ಸ್ಥಾಪನೆಯಾದಲ್ಲಿ, ಮತ್ತು ಅವುಗಳಿಗಾಗಿ ಪ್ರಯತ್ನ ನಡೆದಲ್ಲಿ ' ಬೋಧಭಾಷೆಯು ಒಂದು ವಿಕಲ್ಪವಾಗಿದೆ. ಅದಕ್ಕಾಗಿ ಈ ನಿಯೋಜಕರಲ್ಲಿ ಅಂತಹ ಉತ್ಸಾಹ ಇಲ್ಲ ' ಎಂಬುದೊಂದು ವಿಚಿತ್ರ ಸಂಗತಿಯೆ ಅಲ್ಲವೆ? ಸ್ವಭಾಷೆಯ ಅಭಿಮಾನದಿಂದಲೆ ಹೊರಟ ನಮ್ಮ ಯತ್ನ ಕೊನೆಯ ಮಟ್ಟಕ್ಕೆ ಬರುವಷ್ಟರಲ್ಲಿಯೆ, ಅದನ್ನೆ ಬಿಟ್ಟುಬಿಡುವುದೆಂದರೆ ? ಮದುಮಗನನ್ನು ಬಿಟ್ಟು ಮದುವೆಗೆ ಹೊರಟಂತೆ ! ನಮ್ಮದು ' ಕನ್ನಡ ವಿಶ್ವವಿದ್ಯಾಲಯ ' ಆಗಲಿಕ್ಕೆ ಸಾಧ್ಯ ಇಲ್ಲವೆ? ಯೋಗ್ಯ ಅಲ್ಲವೆ ? "

" ನಮ್ಮ ಭಾರತ ಬೆಳೆದು ಬೆಳಗಬೇಕಾದುದು. ಒಂದಾಗಿ ಉಳಿದು ಮುಂದಾಗಬೇಕಾದುದು ನಮ್ಮ ನಾಡು. ಆದರೆ ಇಲ್ಲಿ ಅನೇಕ ಭಾಷೆಗಳಿವೆ. ಅದಕಾಗಿ ಏಕರಾಷ್ಟ್ರದ ದೃಷ್ಟಿಯಿಂದ ನೋಡಿದರೆ, ಮತ್ತು ಇಂತಹ ವಿ. ವಿ. ಯಗಳು ಕಾಯ್ದುಕೊಳ್ಳಬೇಕಾದ ಏಕರೂಪತೆ, ಅವುಗಳು ಕೊಡುವ ಪದವಿಗಳಿಗಿರಬೇಕಾದ ಒಂದೇ ಮಟ್ಟ ಇವೆಲ್ಲವುಗಳ ವಿಚಾರ ಮಾಡಲಾಗಿ, ಬೋಧ-ಭಾಷೆಯು ಪ್ರಾಂತದ ಭಾಷೆಯೆ ಎಂದು ಕಡ್ಡಾಯವಾಗಿರಬೇಕು ಎಂಬುದು ಸಮಂಜಸ ಎನಿಸುವುದಿಲ್ಲ; ಮತ್ತು ಈಗಿದ್ದ ಸಲಕರಣೆಗಳನ್ನು ನೋಡಲಾಗಿ ಅದು ವ್ಯವಹಾರ್ಯ ಎಂದೂ ತೋರುವು-ದಿಲ್ಲ. ಆದರೂ ಇಂದಿಲ್ಲ ನಾಳೆ ನಮ್ಮ ನಾಡಿಗೆ ಸ್ವಾತಂತ್ರ್ಯ, ನಮಗೆ ಸ್ವಪ್ರಾಂತ ದೊರೆಯಲಿಕ್ಕೆ ಬೇಕು ; ಆಗ ನಾವು ನಮ್ಮ ನಾಡಿಗೆ ಎಲ್ಲ ಬಗೆಯ ಪ್ರಾಧಾನ್ಯ ಕೊಡಲಿಕ್ಕೆ ಬರುವುದು. ಅಲ್ಲಿಯವರೆಗೆ ಮಾತ್ರ ವಿದ್ಯಾರ್ಥಿಗೆ ಭಾಷೆಯನ್ನಾರಿಸುವ ಐಚ್ಛಿಕವನ್ನಿಟ್ಟು, ಆ ಆ ನುಡಿಗಳಲ್ಲಿ ಶಿಕ್ಷಣ ಕೊಡುವ ವ್ಯವಸ್ಥೆಯನ್ನಿಡಬೇಕು. ಅದರಿಂದ ನಮಗೆ ಲಾಭಗಳೆ ಹೆಚ್ಚಾಗುವವು ಹೊರತು ಹಾನಿಯಿಲ್ಲ," ಶ್ರೀ. ಜಾಹಗೀರದಾರರ ಅಭಿಪ್ರಾಯವಿದು.

" ಹೀಗೆ ಲಾಭಹಾನಿಯ ಲೆಕ್ಕವನ್ನೆ ಹಾಕುವುದಾದರೆ, ಈಗ ನಮ್ಮ ಪಕ್ಕದಲ್ಲಿ ಒಂದೆಡೆ ಪಡೆದ ಫಲದಿಂದ ಹಾಗೂ ಒಂದೆಡೆ ನಡೆದ ಪ್ರಯತ್ನದಿಂದ ನಮ್ಮ ಮೇಲೆ ಯಾವಬಗೆಯ ಪರಿಣಾಮ-ವಾಗುವುದು ? ಈಗ ನಮ್ಮ ಧೋರಣೆಯೆಂತಹದಿರಬೇಕು ? ಅದರಲ್ಲಿಯೂ ಕನ್ನಡದ ಸಂಸ್ಥಾನಗಳ ಪರಿಸ್ಥಿತಿಯೇನು ? "

" ಈ ಬಗೆಯ ಪ್ರಯತ್ನಗಳಿಂದ ನಮ್ಮ ಇಚ್ಛೆಯು ನೆರವೇರಲು ಅನುಕೂಲವೆ ಆಗುವುದು. ಈಗ ಮಹಾರಾಷ್ಟ್ರ ವಿ. ವಿ. ಲಯದ ಸ್ಥಾಪನೆಯಾದರೆ, ಮುಂಬಯಿಯ ಸಿನೇಟಿನಲ್ಲಿ ನಮ್ಮ ಜನರು ಹೆಚ್ಚಾಗಿ, ನಮ್ಮ ಕೂಗಿಗೆ ಬೇಗನೆ 'ಓ' ಸಿಕ್ಕಬಹುದು. ಅದಲ್ಲದೆ ಕನ್ನಡದ ನಮ್ಮ ಭಾಗ ಹಾಗೂ ಮುಂಬಯಿ ವಿ. ವಿದ್ಯಾಲಯ ಇವುಗಳ ನಡುವೆ ಮಹಾರಾಷ್ಟ್ರ ವಿ.ವಿ. ಯವು ಆಗುವುದರಿಂದ, ನಮ್ಮ ವಿ. ವಿ. ಯದ ಅಗತ್ಯವು ನಮಗೆ ಹೆಚ್ಚಾಗಿ, ನಮ್ಮ ಪ್ರಯತ್ನಕ್ಕೆ ಪುಟವು ದೊರೆತು, ಬೇಗನೆ ಅದು ಫಲಕಾರಿಯಾಗಬಹುದು. ಆದರೂ ನಾವು ಈಗ ಎಚ್ಚರಿಕೆಯಿಂದ ಇರುವುದು ಯುಕ್ತ. ಮೊನ್ನೆ ನಾನು ಮಾನ್ಯ ಜಯಕರರನ್ನು ಭೆಟ್ಟಿಯಾದೆ. ಆಗ ಇದನ್ನೆ ಹೇಳಿದೆ ನಾನು ' ಈಗ ಈ ಪ್ರಾದೇಶಿಕ ವಿ. ವಿ. ಗಳಿಗಾಗಿ ವ್ಯಾಪ್ತಿಯನ್ನು ನಿರ್ಣಯಿಸುವ ಗೊಡವೆ ದೇಡ; ಮುಂದೆ ಹೊಸತಾಗಿ ಪ್ರಾಂತಗಳಾಗುವಾಗ ಗಡಿನಾಡನ್ನು ನಿಶ್ಚಯಿಸಲು ಬಂದೀತು. ಕಾರಣ ಈಗ ಸದ್ಯಕ್ಕೆ ಕಾಂಗ್ರೆಸು ನಿರ್ಣಯಿಸಿದ ಪ್ರಾಂತವಿಭಾಗವನ್ನೆ ತಳಹದಿಯನ್ನಾಗಿಟ್ಟುಕೊಂಡು ಸಾಗೋಣ' ಎಂದೆ. ಯಾಕೆಂದರೆ ಈಗ ಅವರು ಬೆಳಗಾಂವಿಯ ಕೆಲಭಾಗವನ್ನು ಬೇಡಿದರೆ, ನಾವು ಸೊಲ್ಲಾಪುರದ ಕೆಲಭಾಗವನ್ನು ಬೇಡುವೆವು. ಅದಕ್ಕಾಗಿಯೆ ನಾವು ಪರಸ್ಪರ ಪ್ರೀತಿ-ವಿಶ್ವಾಸಗಳಿಂದ ಕೆಲಸ ಸಾಗಿಸತಕ್ಕದ್ದು. ಮತ್ತು ಜನರಲ್ಲಿ ಹೆಚ್ಚುಹೆಚ್ಚಾಗಿ ವಿ. ವಿ. ಯ ಅಗತ್ಯ ಎನಿಸುವಂತೆ ಪ್ರಚಾರಕಾರ್ಯ ಮಾಡುವುದೆ ಇಂದಿನ ನಮ್ಮ ಕರ್ತವ್ಯ ! "

ನಗೀಗೆ ನೇವಿದ್ಯಾ

ಒಬ್ಬರು ಮಾತ್ರ ಇದ್ದಾರೆ!

"ಮದಿವೀ ಮಾಡಿಕೊಂಡ ಮ್ಯಾಲೆ ಸೊಗಸಾಗಿ ವಿನೋದದಿಂದ ಕಾಲಕಳೆಯು-ವವರು ಯಾರಾದರೂ ಇರಬಹುದೇನ್ರೀ ಜಗತ್ತಿನೊಳಗ?"

"ಋಕ್ಯವರದೇನೂ ನನಗೆ ಗೊತ್ತಿಲ್ಲ; ಒಬ್ಬರು ಮಾತ್ರ ಇದ್ದಾರೆ ಅಂತ ಖಂಡಿತ ಹೇಳಬಲ್ಲೆ!"

"ಅವರು ಯಾರ್ರೀ?"

"ನನ್ನ ಹೆಂಡತಿ!"

* * *

'ಮಹಾ' ಅಂತ ಅಂದಿಲ್ಲ!

"ಅಲ್ರೀ ನಿನ್ನೆ ನೆರೆಮನಿಯೊಳಗ ಕೂತುಕೊಂಡು ಹರಟೀ ಹೊಡೆಯೂ ಮುಂದ, ನನಗ 'ಮಹಾಮೂರ್ಖ' ಅಂದಿ-ರಂತೆ; ಇದರ ಅರ್ಥ ಏನು!"

"ನೋಡ್ರಿ, ನೀವೀಗ ಎರಡು ವಿಷಯದ ಬಗ್ಗೆ ನನ್ನ ಕೇಳಿದಿರಿ. ಮೊದಲನೆಯದು 'ಮಹಾ' ಅಂತ ನಿಮಗ ಅಂದಿಲ್ಲ! ಎರಡನೆಯದು 'ಮಹಾಮೂರ್ಖ' ಎಂಬು-ದರ ಅರ್ಥ ತಿಳಿಯದಷ್ಟು ತಾವು ಮೂರ್ಖ-ರಲ್ಲವೆಂಬ ಸಂಗತಿ ನನಗೆ ಗೊತ್ತಿಲ್ಲದೆ ಇಲ್ಲ!"

* * *

ಅವರದೇ ತೊಗೊಂಡೆ!

"ಇದೇನೇ ಹುಚ್ಚು.. ಗೌರೀ! ಕುಮಾರಿಕೆಯರು ಯಾರಿಗೂ ಮುತ್ತು ಕೊಡಬಾರದೂ ಅಂತ ಹೇಳಿದ್ದಿಲ್ಲೇನು ನಿನಗ?"

"ಹೌದು, ಹೇಳಿದ್ದಿ ಸರಿ! ಆದರ ನಾ ಈಗ ಕೊಟ್ಟೆನೇನು? ಅವರದೇ ತೊಗೊಂಡೆ!"

* * *

ಆಕೆ-ಆತರ ಮಾತು

ಆಕೆ:— ಇಷ್ಟೆಲ್ಲಾ ಫಲಾಹಾರದ ಪದಾ-ರ್ಥದೊಳಗ ಒಂದೆರಡೇನಾರೆ ಕೆಟ್ಟಿರ-ಬಹುದು! ಎಲ್ಲಾನೂ ಒಳ್ಳೇದs ಆಗ ಬೇಕಂದರ, ನಾ ಏನು ಹೋಟೆಲ್ ಮಾಲೀ-ಕರ ಮಗಳೂ ಅಂತ ಭಾವಿಸಿದ್ದಿರೇನು?

ಆತ:— ನಾನೇನೂ ಹಾಂಗ ಭಾವಿ-ಸಿಲ್ಲ; ನೀನು ಕೊಟ್ಟಿರುವ ಒಡವೆ–ತೊಡ-ವುಗಳ ಪಟ್ಟಿಯನ್ನು ನೋಡಿದರೆ, ನಾ ಒಬ್ಬ ದೊರೆಯ ಮಗಾ ಇದ್ದೀನಿ ಅಂತ, ನೀನು ಮಾತ್ರ ಭಾವಿಸಿದ್ಹಾಂಗ ನನಗ ಅನಿಸತsದ!

* * *

ಗಂಡನ ಗುಟ್ಟು.

"ನಮ್ಮ ತಂದೀ ದುಡ್ಡಿನ ಮಾರೀ ನೋಡೇ ಇವರು ನನ್ನ ಮದಿವೀ ಮಾಡಿ ಕೊಂಡಾರೆಂಬೂದು ದಿನದಿನಕ್ಕ ನನಗ ಹೆಚ್ಚೆಚ್ಚು ಖಾತ್ರೀ ಆಗಲಿಕ್ಕೆ ಹತ್ತೇದ!"

"ಅದ್ಹ್ಯಾಂಗs? ನಿನ್ನ ಗಂಡಗ ಲಾಭ–ಹಾನೀ ವಿಷಯ ಕೂಡಾ ಏನೂ ತಿಳಿಯೂ ದಿಲ್ಲಾ ಅಂತ ಹೇಳಿದ್ದೆಲ್ಲs.... ನೀನs ಹಿಂದ.... ಹಗಲೆಲ್ಲಾ!"

* * *

ಕೂಡಲಿಕ್ಕೆ ಕೊಡಬಾರದೆ?

ಆಕೆ:— ನಾನು ಖುರ್ಚೀ ಮ್ಯಾಲ ಕೂತಿ-ರಬೇಕು; ನೀವು ಬಳಿಯಲ್ಲೇ ನಿಂತಿರ-ಬೇಕು.. ಹೀಂಗ ಒಂದು ಫೋಟೋ ಯಾಕ ತಗಿಸಬಾರದು ನಾವು?

ಆತ:— ಇಷ್ಟತ್ತುನಾಲ್ಕು ತಾಸೂ ನಿನ್ನ ಮುಂದೆ ಎದ್ದು ನಿಂತುಕೊಂಡೇ ಇರತೀನಿ; ಫೋಟೋದೊಳಗಾರೆ ಒಂದಿಷ್ಟು ಕೂಡಲಿಕ್ಕೆ ಕೊಡಬಾರದೇ ನನಗ?

* * *

ವಿದ್ಯಾರ್ಥಿಯ ಪ್ರಶ್ನೆ

ಶಿಕ್ಷಕ:— ಗುರುತ್ವಾಕರ್ಷಣ ಶಕ್ತಿಯ ಮೂಲಕವೇ ನಾವು ಭೂಮಿಯ ಮ್ಯಾಲೆ ನಿಂತುಕೊಳ್ಳಬಲ್ಲೆವೆಂಬ ಶೋಧ ೧೬೪೦ನೆಯ ಇಸವಿಯಲ್ಲಾಯಿತು.

ವಿದ್ಯಾರ್ಥಿ:— ಹಾಂಗಾದರ ಅದಕಿಂತಾ ಮೊದಲು ನಾವು ಹ್ಯಾಂಗ ನಿಂತುಕೊಳ್ಳತಿದ್ದಿವಿ ಸರ್?

* * *

ನೀರಿನ ಸಾಮರ್ಥ್ಯ!

"ಇಲ್ಲಿ ನೋಡ್ರಿ, ಇಷ್ಟೊಂದು ದೊಡ್ಡ ಗಿರಣಿ ಧಡ್‌ಧಡ್ ಅಂತ ಜೋರಿನಿಂದ ನಡ-ದsದ! ಇದು ಯಾತರಿಂದ ಗೊತ್ತೇನು? ನೀರಿನ ಶಕ್ತಿಯಿಂದ! ನೀರಿನ ಶಕ್ತಿಯ ಮಹತ್ತ್ವ ತಮಗೂ ಗೊತ್ತಿರಬಹುದು!"

"ಗೊತ್ತಿರದೇ ಏನ್ರೀ! ಹೆಂಡತೀ ಕಣ್ಣಾಗ ನೀರು ಬಂದದ್ದು ಕಣ್ಣಿಗೆ ಬೀಳೋದೇ ತಡ; ಎದಿ ಹಾಂಗs ಧಡ್‌ಧಡ್ ಅನ್ನಲಿಕ್ಕೆ ಹತ್ತ ತsದ!"

* * *

ಅಡಿಗೆಯವಳಿಗೆ ಸರ್ಟಿಫಿಕೇಟು

"ನಾನು ಈ ತಿಂಗಳೆಲ್ಲಾ ನಿಮ್ಮ ಮನ್ಯಾಗ ಅಡಿಗೀ ಮಾಡಿಕೊಂಡು ಇದ್ದೆ. ನನಗೊಂದು ಸಮಾಧಾನ ಸೂಚಕವಾದ ಸರ್ಟಿಫೀಕಿಟು ಕೊಡತೀರಾ?"

"ಆಗಲಿ! ಇದು ನೋಡ್ರಿಲ್ಲೆ— ಹೀಂಗೆ ಬರೆದೀನಿ: 'ಈ ಹೆಣ್ಣುಮಗಳು ನಮ್ಮ ಮನೆಯಲ್ಲಿ ಒಂದು ತಿಂಗಳ ವರೆಗೆ ಅಡಿಗೆಗೆ ಇದ್ದಳು. ಇಂದು ಕೆಲಸವನ್ನು ಬಿಟ್ಟು ಹೊರಟಿದ್ದಾಳೆ. ನಮಗೆಲ್ಲಾ ತುಂಬಾ ಸಮಾ-ಧಾನವೆನಿಸಿದೆ!"

* * *



ಮಹಾತ್ಮರೂ ಪಂಡಿತರೂ

ಶ್ರೀ. ರಾಜಗೋಪಾಲಾಚಾರಿಯವರು ತಮ್ಮ ರಾಷ್ಟ್ರೀಯ ಸರಕಾರ (.National Government) ದ ಪ್ರಚಾರವನ್ನು ನಡೆಸುವಾಗ, ಮಹಾತ್ಮರ ಹರಿಜನಪತ್ರಿಕೆಯಲ್ಲಿಯ ಅಭಿಪ್ರಾಯಗಳು ತಮಗೆ ಹೇಗೆ ಅನುಕೂಲವಾಗಿವೆ ಎಂಬುದನ್ನು ತೋರಿಸಲು ಪ್ರಯತ್ನಪಟ್ಟಿದ್ದಾರೆ. ಅದು ಅಷ್ಟೊಂದು ಸರಿಯಾದುದಲ್ಲ ಎಂದು ಸಿದ್ಧಮಾಡಲು ಮಹಾತ್ಮರು ಮತ್ತೆ ಕೆಲವು ಲೇಖಗಳನ್ನು ಬರೆದಿದ್ದಾರೆ. ಇದೊಂದು ಕಡೆ. ಇನ್ನೊಂದು ಕಡೆ 'ಕಾಂಗ್ರೆಸ್ಸು ಕೂಡ ದಿಲ್ಲಿಯ (ವರ್ಕಿಂಗ್ ಕಮಿಟಿಯ) ಗೊತ್ತುವಳಿಯಲ್ಲಿ ತನ್ನಂತೆಯೆ ಅಭಿಪ್ರಾಯವನ್ನು ಸಾರಿದೆ' ಎಂಬ.ರಾಜಾಜಿಯವರನ್ನು ಎದುರಿಸಲು ಪಂಡಿತ ಜವಾಹರರು ಭಾಷಣಗಳನ್ನೂ ಹೇಳಿಕೆಗಳನ್ನೂ ಸುರಿಸುತ್ತಿದ್ದಾರೆ. ಇದನ್ನೆಲ್ಲ ನೋಡುವಾಗ ಈ ಆಚಾರ್ಯರೂ ಪಂಡಿತರೂ ಮಹಾತ್ಮರೂ ವಾಗ್ವಿವಾದಸಂಘ (Debating Society) ವನ್ನು ಏರ್ಪಡಿಸುವುದರಲ್ಲಿದ್ದಾರೆಯೆ ಇಲ್ಲವೆ ಬಾಗಿಲಿಗೆ ಶತ್ರು ಬಂದ ಗಂಡಾತರದ ಮಹತ್ತ್ವವನ್ನು ಯಾವ ಕಾರಣಕ್ಕಾಗಿಯೊ ವಿಗಡಿಸುತ್ತಿದ್ದಾರೆಯೆ ಎಂಬುದು ತಿಳಿಯುವುದೆ ಕಷ್ಟವಾಗಿದೆ. ಸದ್ಯಕ್ಕೆ ಈ ಮುವ್ವರ ಮಾತುಗಳಿಗೆ ಉತ್ತರ ಕೊಡಬೇಕಾಗಿಲ್ಲ (ಅವರೇ ಒಬ್ಬರೊಬ್ಬರನ್ನು ಖಂಡಿಸುತ್ತಿದ್ದುದರಿಂದ, ಇನ್ನೊಬ್ಬರು ಆ ಕಾರ್ಯವನ್ನು ಮಾಡಬೇಕಾಗಿಲ್ಲ). ಆದರೆ ದೇಶದ ಪರಿಸ್ಥಿತಿಗಾಗಿ ಅವರು ಹೇಳುತ್ತಿದ್ದ ಧೋರಣೆಯ ವಿಚಾರವನ್ನು ಮಾಡಲೇಬೇಕಾಗಿದೆ. ಇಂದಿನ ಪರಿಸ್ಥಿತಿಗಾಗಿ ಸಮರ್ಪಕವಾದ, ಸಮರ್ಥವಾದ ಧೋರಣೆಯನ್ನು ತಾಳುವುದು ಮುಂದಾಳೆನಿಸಿಕೊಳ್ಳುವವರ ಹೊಣೆಯಾದ್ದರಿಂದ, ಅವರ ಅಭಿಪ್ರಾಯಗಳನ್ನು ಒರೆಗೆ ಹಚ್ಚುವುದಗತ್ಯವಾಗಿದೆ. ಸದ್ಯಕ್ಕೆ ನಮಗೆ ಬೇಕಾದದ್ದು ನಿಶ್ಚಿತವಾದ ಧೋರಣೆ; ಬರಿಯ ತತ್ತ್ವದ ಪಾಂಡಿತ್ಯವಲ್ಲ, ಮಾಹಾತ್ಮ್ಯದ ಮಾಯಾಶಕ್ತಿಯಲ್ಲ, ಬುದ್ಧಿಗಾರಿಕೆಯ ಬಯಲಾಟವಲ್ಲ.

ಗಾಂಧೀಜಿಯವರ ಗುಂಬಗಾರಿಕೆ (Mysticism)

ಮೊದಲು ಮಹಾತ್ಮರ ಮಾಟಗಾರಿಕೆ—ಅಥವಾ ಮಾತುಗಾರಿಕೆ ಎನ್ನೋಣ— ಅದು ಹೀಗೆ: (೧) ಬ್ರಿಟಿಶರು ಹಿಂದುಸ್ತಾನವನ್ನು ಬಿಟ್ಟು ಹೋಗಬೇಕು, (೨) ಮುಸಲ್ಮಾನರು ಹಿಂದುಸ್ತಾನವನ್ನು ಬಿಡಲು ನಿಶ್ಚಯಿಸಿದರೆ ಅವರನ್ನು ತಡೆಯಲಾಗದು (ತಡೆಯಕೂಡದು), (೩) ಪಾಕಿಸ್ತಾನವನ್ನು ಬೇಡುವುದು (ಎಂದರೆ ಹಿಂದುಸ್ತಾನವನ್ನು ಛಿನ್ನವಿಚ್ಛಿನ್ನ ಮಾಡುವುದು) ಪಾಪ, (೪) ಹಿಂದು-ಮುಸಲ್ಮಾನರು ಒಂದಾಗದೆ ಬ್ರಿಟಿಶರು ಬಿಟ್ಟು ಹೋಗುವುದಿಲ್ಲ, (೫) ಜಪಾನಿಗಳು ನಮ್ಮಲ್ಲಿ ಬರಬಾರದು, ನಾವು ಅವರನ್ನು ಕರೆಯುವುದಿಲ್ಲ, ಅವರಾಗಿಯೆ ನುಗ್ಗಿದರೆ ಅವರನ್ನು ಎದುರಿಸುವೆವು; ಮತ್ತು (೬) ಯಾರು ಏನು ಹೇಳಿದರೂ ಎಲ್ಲವನ್ನೂ ಸಾಧಿಸಲು ಅಹಿಂಸೆಯೆ ಬಲವಾದ ಮತ್ತು ನಿಜವಾದ ಸಾಧನ. ಮೇಲಿನ ಮಾತುಗಳಲ್ಲಿ ಏಕವಾಕ್ಯತೆಯು ಹೊಂದಿಕೆಯಾಗದಿದ್ದರೆ ಅದಕ್ಕೆ ಮಹಾತ್ಮರೆ ಕಾರಣರೆಂದು ಹೇಳಬಹುದು. ಅವರು ಆ ರೀತಿ ಮತ್ತು ಅಂತಹ ಅಭಿಪ್ರಾಯಗಳನ್ನೆ ಹೊರಗೆಡಹುತ್ತಿದ್ದಾರೆ. ಈ ಅಭಿಪ್ರಾಯಗಳಿಂದ ಇಂದಿನ ನಮ್ಮ ಪರಿಸ್ಥಿತಿಗೆ ಯಾವ ಸಮಾಧಾನವಿದೆ? ಬ್ರಿಟಿಶರು ಬಿಟ್ಟು ಹೋಗಲಿಲ್ಲ, ಜಪಾನಿಗಳು ನುಗ್ಗದೆ ಬಿಡಲಿಲ್ಲ ಎಂದರೆ ನಾವು ಮಾಡತಕ್ಕದ್ದೇನು? ಪಾಕಿಸ್ತಾನದ ಬೇಡಿಕೆ ಪುಷ್ಟಿಗೊಳ್ಳುತ್ತ ನಡೆದರೆ ನಾವು ಮಾಡತಕ್ಕದ್ದೇನು? ಹತ್ತು-ಸಾವಿರ ಅಡಿ ಎತ್ತರದಿಂದ ಬಾಂಬು ಬೀಳುವಾಗ, ವಿಮಾನದಾಳಿ ನಿರೋಧಕ ವೃತ್ತಿಯನ್ನು ತಾಳಬೇಕೆ ಇಲ್ಲವೆ ಸತ್ಯಾಗ್ರಹಿ ಎಂದು ಹೆಂಡಿರು-ಮಕ್ಕಳೊಡನೆ ಬಾಂಬಿನ ಧಾರೆಯೊಳಗುಂಟ ತಲೆಕೊಡಬೇಕೆ? ದೇಶದ ಸಂರಕ್ಷಣೆ, ಬ್ರಿಟಿಶರಿಗೆ ವಿರೋಧ, ಸ್ವಾತಂತ್ರ್ಯ ತತ್ತ್ವಕ್ಕಾಗಿ ಯುದ್ಧ, ಸರ್ವಾಧಿಕಾರಿತ್ವದ ಪ್ರತಿಭಟನೆ, ಸತ್ಯಾಗ್ರಹದ ಸತ್ತ್ವಪರೀಕ್ಷೆ—ಇವುಗಳಲ್ಲಿ ನಮ್ಮ ಧ್ಯೇಯವಾವುದು? ಒಂದಾದರೂ ಧ್ಯೇಯ ಇದೆಯೆ?

(೬-೬-೪೨)

ಪಾಂಡಿತ್ಯದ ಪ್ರಖರತೆ

ಮೇಲಿನದೊಂದು ದಾರಿಯಾದರೆ ಇನ್ನೊಂದು ದಿಕ್ಕಿಗೆ ಪಂಡಿತ ಜವಾಹರರು ಎಳೆಯುತ್ತಿದ್ದಾರೆ. 'ಯುದ್ಧಕಾರ್ಯಕ್ಕೆ ಸಹಾಯ-ಮಾಡಬೇಕೊ ಮಾಡಬಾರದೊ?' ಈ ಪ್ರಶ್ನೆಗೆ ಪಂಡಿತರು ಎರಡು ಉತ್ತರಗಳ ಕತ್ತರಿಯನ್ನು ಕಟ್ಟಿದ್ದಾರೆ. (೧) ಸರ್ವಾಧಿಕಾರಿತ್ವದ ರಾವಣರಾಜ್ಯವನ್ನು ಕಿತ್ತೊಗೆಯಲು ನಾವು ಸಿದ್ಧರಾಗಬೇಕು;

(೨) ಹಿಂದುಸ್ಥಾನಕ್ಕೆ ಸ್ವಾತಂತ್ರ್ಯ ದೊರೆಯದ ಹೊರತು ನಮ್ಮ ಸಹಾಯದ ಮಾತೇ ಹೊರಡುವುದಿಲ್ಲ. ಮೊದಲದರ ಬಗ್ಗೆ ಪಂಡಿತರು ಜಾಗತಿಕ ಸಾಮ್ಯವಾದ (International socialism) ದ ತತ್ತ್ವಗಳನ್ನು ಸಾರುತ್ತಾರೆ ; ಎರಡನೆಯದರ ಬಗ್ಗೆ ಸಾಮ್ರಾಜ್ಯವಾದದ ಸ್ವಾರ್ಥನಿಷ್ಠ ಘಾತುಕತನವನ್ನು ನಿಷೇಧಿಸುತ್ತಾರೆ. ಆದರೆ ಮುಂದೇನು? ಸರ್ವಾಧಿಕಾರದ ಸ್ವೈರ-ತಾಂಡವವನ್ನು ತಡೆಯುವ ಬಗೆ ಹೇಗೆ? ನಾವು (ಅನಿವಾರ್ಯವಾಗಿಯೆ ಆಗಲಿ) ಅಹಿಂಸಾಶಸ್ತ್ರದಿಂದ ಹೊರಗಿನ ದಾಳಿಯನ್ನು ಎದುರಿಸಬೇಕಂತೆ ! ಜವಾಹರರ ರಾಮರಾಜ್ಯದಂತಿದ್ದ ರಶಿಯಾ ದೇಶವೆ ಆಧುನಿಕ ಹಿಂಸಾಶಸ್ತ್ರಗಳನ್ನು ಪಯೋಗಿಸಿಯೂ ಕಷ್ಟನಷ್ಟಗಳನ್ನು ತಪ್ಪಿಸಲಾರದಾದಾಗ, ಈ ಅಹಿಂಸೆಯಲ್ಲಿ ಪಂಡಿತರು ಸಮಾಧಾನವನ್ನು ಕಾಣುವುದು ಆಶ್ಚರ್ಯವೆ ಸರಿ. ' ಸರಕಾರದವರು ನಮಗೆ ಶಸ್ತ್ರಶಿಕ್ಷಣವನ್ನು ಕೊಡಲು ಸಿದ್ಧರಿಲ್ಲದಿದ್ದಾಗ (ಮತ್ತು ಸಿದ್ಧರಿಲ್ಲವೆಂದು), ಅಹಿಂಸೆಯೆ ನಮ್ಮ ಶಸ್ತ್ರವಾಗಬೇಕಾಗಿದೆ ' ಎಂದು ಕಾಂಗ್ರೆಸಿನ ಒಂದು ವಾದವಿದೆ. ಆದರೆ ಒಮ್ಮೆಲೆ ಪ್ರತಿಯೊಬ್ಬ ನಾಗರಿಕನಿಗೆಯೆ ಶಸ್ತ್ರವನ್ನು ಧರಿಸುವ ಅಧಿಕಾರ ಬೇಕೆಂಬ ಆತುರ ಯಾಕೆ ? ಸೈನ್ಯಭರತಿಯ ನಿಮಿತ್ತದಿಂದ, ಸೈನ್ಯಾಧಿಕಾರದ ಕಮಿಶನ್ ಪಡೆವ ಸಾಧನದಿಂದ ಹೆಚ್ಚೆಚ್ಚು ಜನರು ಶಸ್ತ್ರಶಿಕ್ಷಣವನ್ನು ಪಡೆವಂತೆ ಬುದ್ಧಿಪೂರ್ವಕವಾದ ಪ್ರೋತ್ಸಾಹವನ್ನೂ ಪ್ರಯತ್ನವನ್ನೂ ಕೈಕೊಳ್ಳಬಾರದೇಕೆ ? ಇತ್ತ ಬ್ರಿಟಿಶರದು ಸಾಮ್ರಾಜ್ಯವಾದ, ಅತ್ತ ಶತ್ರುಗಳದು ಸರ್ವಾಧಿಕಾರವಾದ. ನಮ್ಮದು ಮಾತ್ರ ಅನಿವಾರ್ಯದಿಂದ ಅಹಿಂಸಾವಾದ! ಹೀಗೆ ಮಾತನಾಡುವಾಗ 'ಧ್ಯೇಯದಲ್ಲಾದರೂ ತೊಡಕಿದೆ; ಇಲ್ಲವೆ ಧೋರಣೆಗಾಗಿ ಧೈರ್ಯವಿಲ್ಲ'ಎಂದು ಹೇಳಬಹುದಲ್ಲವೆ? ಆಚಾರವನ್ನು ಮುಂದೆ ಹಾಕಿ, ಬರಿಯ ತತ್ತ್ವಗಳ ಪ್ರಚಾರವನ್ನು ನಡೆಯಿಸಿದರೆ ತತ್ತ್ವವು ತಲೆತಿರುಕತನ (Obsession) ಕ್ಕೆ ಇಳಿಯುವ ಹೆದರಿಕೆ ಇದೆ ಎಂಬುದು ಪಂಡಿತರಿಗೂ ಗೊತ್ತಿರಲು ಸಾಕು. ಪಾಂಡಿತ್ಯವು ಇಷ್ಟೊಂದು ಪ್ರಖರವಾದರೆ, ಕಣ್ಣು ಕುಕ್ಕಿ ದಾರಿ ಕಾಣದಂತಾದೀತು.

ಬುದ್ಧಿಯು ಬಿಸಿಲ್ಗುದುರೆ

ಕೊನೆಗೆ ರಾಜಾಜಿಯವರ ಮಾತು. ಜವಾಹರರು ಕೇವಲ ಜಗತ್ತಿನ ಪರಿಸ್ಥಿತಿಯನ್ನು ಲಕ್ಷ್ಯದಲ್ಲಿಟ್ಟುಕೊಂಡು ಮಾತನಾಡಿದರೆ, ರಾಜಾಜಿಯವರು ಕೇವಲ ನಮ್ಮೊಳಗಿನ ಪರಿಸ್ಥಿತಿಯನ್ನೆ ಲಕ್ಷ್ಯದಲ್ಲಿಟ್ಟುಕೊಂಡು ಮಾತನಾಡುತ್ತಾರೆ. ಜಪಾನರಿಂದಾಗಬಹುದಾದ ದಾಳಿಯನ್ನು ಎದುರಿಸುವುದೆ ಅವರ ಗಮ್ಯ; ಹಿಂದು-ಮುಸಲ್ಮಾನರು ಒಂದಾಗಿ ರಾಷ್ಟ್ರೀಯ ಸರಕಾರಗಳನ್ನು (ಪ್ರಾಂತಗಳಲ್ಲಿ) ಸ್ಥಾಪಿಸುವುದೆ ಗತಿ. ಮುಸಲ್ಮಾನರಿಗೆ ಪಾಕಿಸ್ತಾನವನ್ನು ಕೊಡಲೊಪ್ಪಿದರೆ ಜಾತಿ-ಜನಾಂಗಗಳ ಭೇದದ ಮೇಲೆ ನಿಂತ ಸರ್ವಾಧಿಕಾರತ್ವವನ್ನು ಒಪ್ಪಿದಂತೆಯೆ ಎಂಬುದು ರಾಜಾಜಿಯವರಿಗೆ ಹೇಗೆ ಹೊಳೆದಿಲ್ಲವೊ! ತತ್ತ್ವತಃ ಮೊದಲ ಹೆಜ್ಜೆಗೇ ಸರ್ವಾಧಿಕಾರಿತ್ವಕ್ಕೆ ಶರಣುಹೋದರೆ, ಮುಂದೆ ಆಚಾರದಲ್ಲಿ ಅದನ್ನು ಸೋಲಿಸುವುದು ಆತ್ಮವಂಚನೆಯಾಗುವುದು. ಆರ್ಯ-ಅನಾರ್ಯ ಎಂದು ಹಿಟ್ಲರನು, ಪೌರ್ವಾತ್ಯ-ಪಾಶ್ಚಿಮಾತ್ಯ ಎಂದು ಜಪಾನರು ಕೃತ್ರಿಮ ಭೇದಭಾವವನ್ನು ಇಟ್ಟುಕೊಂಡಿದ್ದಾರೆ ; ಅದೇ ರೀತಿ ರಾಜಾಜಿಯವರು ಹಿಂದು-ಮುಸಲ್ಮಾನ್ ಎಂಬ ಭೇದವನ್ನು ಒಪ್ಪುತ್ತಲಿದ್ದಾರೆ. ಸ್ವಾತಂತ್ರ್ಯ ತತ್ತ್ವವು ಇಂತಹ ಭೇದಗಳಿರುವಾಗ ಸಾಧಿಸುವುದೆ ಇಲ್ಲ ; ಯಾಕೆಂದರೆ, ಆಗ 'ಇಂತಹ ಜಾತಿಗೆ ಇಲ್ಲವೆ ಇಂತಹ ಜನಾಂಗಕ್ಕೆ ಮಾತ್ರ ಸ್ವಾತಂತ್ರ್ಯ' ಎಂಬ ಪರಿಸ್ಥಿತಿ ಎದ್ದು ನಿಲ್ಲುವುದು. ಈ ಕಾರಣಕ್ಕಾಗಿಯೂ (ಮಿಕ್ಕ ಅನೇಕ ಕಾರಣಗಳನ್ನು ಈ ಮುಂಚೆಯೆ ಹೇಳಿದ್ದೇವೆ) ಪಾಕಿಸ್ತಾನವನ್ನು ದತ್ತಕ ತೆಗೆದುಕೊಳ್ಳುವುದು ಅನಿಷ್ಟವಾದುದೆಂದು ನಮ್ಮ ಸ್ಪಷ್ಟವಾದ ಅಭಿಪ್ರಾಯ. ಪಂಡಿತ ಜವಾಹರರು ಭಾವನೆಗೆ ಒಳಗಾದಂತೆ, ಶ್ರೀ. ರಾಜಗೋಪಾಲಾಚಾರಿಯವರು ಬುದ್ಧಿಗೆ ಒಳಗಾಗಿದ್ದಾರೆ. ಆದರೆ ಕೊನೆಗೆ ತಮ್ಮ ಬುದ್ಧಿಮತ್ತೆಗೆ ತಾವೇ ಬೆರಗಾಗಿ, ಅದನ್ನೆ ಬಿಸಿಲ್ಗುದುರೆಯೆಂತೆ ಬೆನ್ನಟ್ಟುವ ಭಯ ಇಳಿವಯಸ್ಸಿನ ರಾಜಾಜಿಯವರಿಗೆ ಬರಬಹುದೆ ಎಂದು ನಮ್ಮ ಸಂದೇಹ.

(೧೨-೬-೪೨)

ವಿವೇಕದ ವಿಕಾಸ

' (ಕಾಂಗ್ರೆಸು) ರಾಜಕೀಯ ಧ್ಯೇಯವನ್ನು ಪೂರ್ತಿಯಾಗಿ ಬಿಡಬೇಕಾಗಿಲ್ಲ. ಆದರೆ ಯುದ್ಧದಂತಹ ಸಂಕ್ರಾಂತಿಸಮಯದ ತರುವಾಯ ಜೀವನದ ನೆಲೆ-ಬೆಲೆಗಳೇ ಬದಲಾಯಿಸಬಹುದಾದ್ದರಿಂದ, ಅಲ್ಲಿಯವರೆಗೆ ತಮ್ಮ ಭಾವನಾವೇಶವನ್ನು ತಡೆಯಬೇಕು. ಅದರಂತೆಯೆ ಮುಸಲ್ಮಾನ್ ಬಂಧುಗಳೂ ಪಾಕಿಸ್ತಾನವನ್ನು ಬಿಡಬೇಕಾಗಿಲ್ಲ.... ಯುದ್ಧ ಮುಗಿಯುವವರೆಗೆ ಅವರೂ ಪಾಕಿಸ್ತಾನವನ್ನು ಮರೆಯಬೇಕು. ' ಈ ಮಾತುಗಳನ್ನು ಕಳೆದ ಸಲ ನಮ್ಮ ನೋಟದಲ್ಲಿ ಬರೆದಿದ್ದೇವೆ. ಈಗ ಅವೇ ಮಾತುಗಳನ್ನು ಎತ್ತಿ ಬರೆಯುತ್ತಿದ್ದೇವೆ. ಯಾಕೆಂದರೆ, ಇದೊಂದನ್ನು—ನಾವು

ಲಲಿತ ಸಾಹಿತ್ಯ ಮಾಲೆ

ವರುಷಕ್ಕೆ ನೂರು ನೂರು ಪುಟದ ೬ ಪುಸ್ತಕಗಳು

ಚಂದಾ : ಅಂಚೆಸೇರಿ ೩-೦-೦

೧. ಚಿಗುರು (ಸೌ. ಗೌರಮ್ಮ) ಪ್ರಕಟವಾಗಿದೆ.

೨. ಕುಲದೀಪ (ಸಿದ್ದವ್ವನಹಳ್ಳಿ ಕೃ.) ಅಚ್ಚಿನಲ್ಲಿ.

ಇಂದೇ ಚಂದಾದಾರರಾಗಿರಿ !

ಲಲಿತ ಸಾಹಿತ್ಯಮಾಲೆ, ಧಾರವಾಡ

ಸರ್ವಮಾನ್ಯ !
ಚಳಿಗಾಲದಲ್ಲಿ ಶಕ್ತಿಯ ಬಗ್ಗೆ
ಸರ್ವೋತ್ಕೃಷ್ಟವೆಂದು
ರಕ್ತವರ್ಧಕವನ್ನೇ
ಎಲ್ಲ ಜನರು ಉಪಯೋಗಿಸುತ್ತಿರುವರು.

ಅಷ್ಟವರ್ಗ
ಚ್ಯವನಪ್ರಾಶ
●
ಸುವರ್ಣ
ಮಾಲಿನೀ ವಸಂತ
●
ಮಕರಧ್ವಜಗುಟಿ
●
ಮುಂತಾದ
ಶಕ್ತಿವರ್ಧಕ
ಔಷಧಗಳನ್ನು
ತರಿಸಿರಿ.

ಕರ್ನಾಟಕ ಕೇಂದ್ರ ಮರಾಠಾಗಲ್ಲಿ, ಹುಬ್ಬಳ್ಳಿ.

ಹೇಳಿದ ರೀತಿಯನ್ನು—ಬಿಟ್ಟರೆ ಮತ್ತೆ ಯಾವ ರೀತಿಯಿಂದಲೂ ಸದ್ಯದ ಪ್ರಸಂಗದಲ್ಲಿ ನಮಗೆ ಹಿತವಾಗದು ಎಂದು ನಮ್ಮ ದೃಢಾಭಿಪ್ರಾಯವಿದೆ. ಈ ಅಭಿಪ್ರಾಯವೂ ಮಿಕ್ಕವರಲ್ಲೂ ದೃಢವಾಗುವ ಚಿಹ್ನಗಳು ತೋರುತ್ತಲಿವೆ. ಮೇಲಿನ ನಮ್ಮ ಮಾತುಗಳನ್ನು ಬರೆದ (೧೮–೫–೪೨) ಒಂದು ತಿಂಗಳೊಳಗಾಗಿ ಮುಂಬಯಿ ಕ್ರಾನಿಕಲ್‌ನಂತಹ ಕಾಂಗ್ರೆಸ್‌ನಿಷ್ಠ ದಿನಪತ್ರಿಕೆಯು ಅಂತಹ ಅಭಿಪ್ರಾಯವನ್ನೆ ಎತ್ತಿಹಿಡಿಯುತ್ತಲಿದೆ. ಜೂನ್ ೫ನೆಯ ತಾ|| ನ ಸಂಚಿಕೆಯಲ್ಲಿ 'ಗೊಂದಲ (The Muddle)' ಎಂಬ ಶಿರೋಲೇಖದ ಅಗ್ರಲೇಖವಿದೆ. 'ನಮ್ಮ ಮುಂದಾಳುಗಳು ಒಂದೇ ಒಂದು ಸರಿಯಾದ ಮಾರ್ಗವನ್ನು ತೋರಿಸುತ್ತಿಲ್ಲ, ಸದ್ಯದ ಪರಿಸ್ಥಿತಿಯ ಮಹತ್ತ್ವವನ್ನವರು ಅರಿತಿಲ್ಲ' ಎಂದು ದೂರುತ್ತ, ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗಗಳ ನಡುವೆ ಹೊಸತಾಗಿ ಸಂಧಾನವಾಗಬೇಕೆಂದು ಹೇಳುವಾಗ, ಆ ಪತ್ರಿಕೆ ಈ ರೀತಿ ಅಭಿಪ್ರಾಯಪಟ್ಟಿದೆ: 'In view of sharp controversics regarding the future, the fresh negotiations should be for an interim war-time National Goyernment without any prejudice to any party's ultimate aims.' (ಇಡಿಯ ವಾಕ್ಯವೆ ನಾವು ಕಳೆದ ಸಲ ಬರೆದ ಮಾತಿನ ಭಾಷಾಂತರವಿದ್ದಂತಿದ್ದುದರಿಂದ ಇದನ್ನು ಕನ್ನಡಿಸುವ ಕಾರಣವೆ ಇಲ್ಲ). ಕಾಂಗ್ರೆಸ್‌ನಿಷ್ಠರಲ್ಲಿಯೆ ಈ ಸದಭಿಪ್ರಾಯವು ಮೂಡುತ್ತಿರುವುದು ಸುಚಿಹ್ನವಾಗಿದೆ.

(೧೧–೬–೪೨)

ವಿಶ್ವವಿದ್ಯಾಲಯ

ಕರ್ನಾಟಕ ವಿಶ್ವವಿದ್ಯಾಲಯ ಪರಿಷತ್ತು ಬೆಳಗಾಂವಿಯಲ್ಲಿ ಮೇ ತಿಂಗಳ ಕೊನೆಗೆ ಸೇರಿತ್ತಷ್ಟೆ. ಎರಡು ದಿವಸಗಳ ಅಧಿವೇಶನದಲ್ಲಿ ಅಧ್ಯಕ್ಷರೂ ಸ್ವಾಗತಾಧ್ಯಕ್ಷರೂ ಪ್ರತಿನಿಧಿಗಳೂ ಸೇರಿ ಅತ್ಯಂತ ವ್ಯವಹಾರ್ಯವಾದ ಗೊತ್ತುವಳಿಗಳನ್ನು ಸ್ವೀಕರಿಸಿದ್ದಾರೆನಬಹುದು. ಈ ವಿಷಯವಾಗಿ ಬರೆಯುವ ಮುಂಚೆ ಇನ್ನೊಂದು ಮಾತಿನ ಕಡೆಗೆ ವಾಚಕರ ಲಕ್ಷ್ಯವನ್ನು ಎಳೆಯಬೇಕಾಗಿದೆ. ಕ. ವಿ. ವಿ. ಪರಿಷತ್ತನ್ನು ಕುರಿತು ಬೆಳಗಾಂವಿಯ ಮಹನೀಯರೊಬ್ಬರು ಬೆಂಗಳೂರಿನ 'ಕನ್ನಡ ನುಡಿ'ಯಲ್ಲಿ ಒಂದು ಲೇಖನವನ್ನು ಬರೆದಿದ್ದಾರೆ. 'ಬೆಳಗಾಂವಿಯ ಪರಿಷತ್ತು ಏಕೀಕರಣವನ್ನು ಮುಂದೆ ಹಾಕಿದೆ' ಎಂದು ಅವರ ಪ್ರತಿಪಾದನೆ! ಈ ಮಹನೀಯರಿಗೆ 'ಒಂದು ಪ್ರಾಂತ ಎಂದರೆ ಒಂದೇ ವಿಶ್ವವಿದ್ಯಾಲಯವಿರಬೇಕಾದುದು' ಎಂಬ ರೂಢಿಯಲ್ಲಿಯ ಅಗ್ಗದ ಕಲ್ಪನೆಯೆ ಇದ್ದಂತೆ ಕಾಣುವುದು! 'ಪ್ರೇಕ್ಷಕ–ಪ್ರತಿನಿಧಿಗಳ ಸಂಖ್ಯೆಯಿಂದ ಅತ್ಯಂತ ಅಯಶಸ್ವಿ' ಎಂದು ಬೆಳಗಾಂವಿಯವರೆ ಹೇಳಿಕೊಳ್ಳುವುದು ಸತ್ಯಪ್ರಿಯತೆ ಇಲ್ಲವೆ ನಿರಹಂಕಾರದ ನಿದರ್ಶನ ಎಂದು ಈ ಲೇಖಕರು ತಿಳಿದಂತಿದೆ. ವಿಶ್ವವಿದ್ಯಾಲಯದಂತಹ ವಿಷಯದಲ್ಲಿ ಎಷ್ಟು ಜನರು ಸಾಮಾನ್ಯವಾಗಿ ಆಸಕ್ತಿಯನ್ನು ವಹಿಸಬಹುದಾಗಿದೆ? ಪ್ರತಿಯೊಂದು ಮಾತಿಗಾಗಿ–ಗೊತ್ತಿರಲಿ ಇಲ್ಲದಿರಲಿ–ಅವಸರದಿಂದ ಬರೆವವ ತರುಣ ಮುಂದಾಳು ಎಂಬ ಭಾವನೆಯೂ ಈ ಲೇಖಕರಿಗಿದ್ದಂತಿದೆ. 'ನೂರು ದೇವರನ್ನು ನಂಬಿದರೆ ಊರ–ದೇವರು ಕೂಡ ಕೇಳಲಿಕ್ಕಿಲ್ಲ' ಎಂಬ ಎಚ್ಚರಿಕೆಯನ್ನು ಇವರಿಗೆ ಕೊಡಬೇಕೆಂದೆನಿಸುವುದು.

ಕಾರ್ಯತತ್ಪರತೆ

ಕ. ವಿ. ವಿ. ಪರಿಷತ್ತಿನ ಗೊತ್ತುವಳಿಗಳು ಅಲ್ಲಿ ನೆರೆದವರ ಕಾರ್ಯತತ್ಪರತೆಯ ಸೂಚಕಗಳಾಗಿವೆ. ಕರ್ನಾಟಕದಲ್ಲಿ ಯಾವ ಕೆಲಸಗಳೂ ಸಿದ್ಧಿಸಿಲ್ಲ. ಅದಕಾಗಿ ಇನ್ನು ಮುಂದಾದರೂ ಯಾವುವೂ ಸಿದ್ಧಿಸಬಾರದು ಎಂಬ ತರ್ಕಬುದ್ಧಿ ಅಲ್ಲಿಯ 'ತರುಣ ಮುಂದಾಳು'ಗಳಿಗಿರಬಹುದು; ಆದರೆ ಪರಿಷತ್ತಿಗೆ ಅಂತಹ 'ನಿರಹಂಕಾರ' ಬುದ್ಧಿ ಇಲ್ಲ. ಇದು ಒಂದು ದಿವಸದ ಕಾರ್ಯವಲ್ಲ ಎಂಬುದನ್ನರಿತು ಪರಿಷತ್ತು ಒಂದು ಶಾಶ್ವತ ವಿ. ವಿ. ಸಮಿತಿಯ ಯೋಜನೆಯನ್ನು ಒಪ್ಪಿದೆ. ಈ ಇಡಿಯ ಯೋಜನೆಯನ್ನು ತೀವ್ರವೆ ಸಿದ್ಧಪಡಿಸಲು ಒಂದು ಸಮಿತಿಯನ್ನೂ ನಿಯಮಿಸಲಾಗಿದೆ. ಒಂದು ದೃಷ್ಟಿಯಿಂದ ಯೋಜನೆಯ ಯಶಸ್ಸು ಇಲ್ಲವೆ ಅಯಶಸ್ಸು ಸಮಿತಿಯನ್ನೆ ಕೂಡಿದೆ ಎಂದು

ಹೇಳಬಹುದು. ಕರ್ನಾಟಕದಲ್ಲಿ ಸಾಮಾನ್ಯವಾಗಿ ಮೂರು ತರದ ತೊಂದರೆಗಳು :— (೧) ಕೆಲಸಗಾರರಲ್ಲಿ ಸಂಘಟನೆಯ ಅಭಾವ, (೨) ಸಾರ್ವಜನಿಕರಲ್ಲಿ ಕೆಲಸಗಾರರಿಗಾಗಿ ಅವಿಶ್ವಾಸ, ಮತ್ತು (೩) ಕನ್ನಡ ಧನವಂತರಲ್ಲಿ ಕನ್ನಡತನ ಮೈಗೂಡದೆ ಇದ್ದುದು. ಈ ಮಾತುಗಳನ್ನು ಲಕ್ಷ್ಯದಲ್ಲಿಟ್ಟುಕೊಂಡು, ತಮ್ಮ ಹೊಣೆಗಾರಿಕೆಯನ್ನೂ ತಾವು ಹೊತ್ತ ಕಾರ್ಯದ ಮಹತ್ತ್ವವನ್ನೂ ಅರಿತು, ಆಶಾವಾದಿಗಳಾಗಿ ಮತ್ತು ಸಹನಶೀಲರಾಗಿ ಸಮಿತಿಯವರು ಕಾರ್ಯೋನ್ಮುಖರಾದರೆ, ಕರ್ನಾಟಕದ ಹಿರಿಗನಸುಗಳಲ್ಲಿ ಒಂದಾದರೂ ಶೀಘ್ರದಲ್ಲಿ ನಿಜವಾಗುವುದು ಎಂದು ಧೈರ್ಯದಿಂದ ಹೇಳಬಹುದು.

(೧೪–೭–೪೨)

ಧೈರ್ಯದ ಧೋರಣೆ

ಇತ್ತೀಚೆಗೆ ಮಹಾತ್ಮರು ತಮ್ಮ ಯೋಜನೆಗೊಂದು ಸ್ವರೂಪವನ್ನು ಕೊಡುತ್ತಲಿದ್ದಾರೆ. ಪಂಡಿತ ಜವಾಹರರು ಆ ಯೋಜನೆಗೆ ತಮ್ಮ ಪೂರ್ಣ ಸಮ್ಮತಿ ಇದೆ ಎಂದು ಸಾರಿದ್ದಾರೆ. 'ಬ್ರಿಟಿಶರು ಸ್ವಸಂತೋಷದಿಂದ ಹಿಂದುಸ್ತಾನವನ್ನು ಬಿಟ್ಟುಕೊಡಬೇಕು ಎಂದರೆ ಹಿಂದುಸ್ತಾನಕ್ಕೆ ಸಂಪೂರ್ಣ ಸ್ವಾತಂತ್ರ್ಯವನ್ನು ಒಪ್ಪಿಕೊಳ್ಳಬೇಕು ಎಂದರ್ಥ' ಎಂದು ಪಂಡಿತ ಜವಾಹರರು ಮಹಾತ್ಮರ ಯೋಜನೆಗೆ ಭಾಷ್ಯವನ್ನು ಬರೆದಿದ್ದಾರೆ. ಆದರೆ ಕೇವಲ ಅಷ್ಟೆ ಅರ್ಥವಲ್ಲ ಎಂದು ನಮ್ಮ ಕಲ್ಪನೆ. ಮಹಾತ್ಮರು ಹೇಳುವ ರೀತಿಯಲ್ಲಿ ಅದಕ್ಕೊಂದು ವಿಶಿಷ್ಟಮಹತ್ತ್ವವಿದೆ. 'ಸಂಪೂರ್ಣ ಸ್ವಾತಂತ್ರ್ಯವನ್ನು ಒಪ್ಪಿಕೊಳ್ಳಬೇಕು' ಎನುವಾಗ, ಬಿಡದಿದ್ದರೆ ಅದಕಾಗಿ ಒಂದು ತರದ ಸತ್ಯಾಗ್ರಹವನ್ನೂ ಒಂದು ಸ್ವಯಂಸೈನಿಕ ದಳವನ್ನೂ ಹೂಡಿ ಮಹಾತ್ಮರು ತಮ್ಮ ಅಭಿಪ್ರಾಯಕ್ಕೆ ಕಾರ್ಯರೂಪವನ್ನು ಕೊಡಬಹುದಾಗಿದೆ. 'ಒಂದು ವೇಳೆ ಯುದ್ಧನೀತಿ (strategy) ಗಾಗಿ ಬ್ರಿಟಿಶರು ಹಿಂದುಸ್ತಾನವನ್ನು ಬಿಟ್ಟರೆ ನಾವು ಮಾಡಬೇಕೇನು ? ಅದಕಾಗಿ ನನ್ನದು ಪೂರ್ವಯೋಜನೆ' ಎಂದು ಮಹಾತ್ಮರು ಅಮೇರಿಕೆಯ ಸುದ್ದಿಗಾರರಿಗೆ ಸ್ಪಷ್ಟಪಡಿಸಿದ್ದಾರೆ. ಈ ಧೋರಣೆ ಇದ್ದರೆ, ರಾಜಾಜಿಯವರೂ ಒಂದು ದೃಷ್ಟಿಯಿಂದ ಮಹಾತ್ಮರ ಯೋಜನೆಗೆ ಒಪ್ಪಬಹುದು ಎಂದು ನಮ್ಮ ಭರವಸೆ. ಲೀಗದೊಡನೆ ಸಂಧಾನ ಮಾಡುವುದರಲ್ಲಿ ಹೊತ್ತುಗಳೆಯದೆ, ಮುಸ್ಲಿಂಲೀಗದ ಒಂದು ಧೋರಣೆಯನ್ನು ನಿಶ್ಚಯಿಸಲು ಅನಿವಾರ್ಯವೆನಿಸುವಂತಹ ಪರಿಸ್ಥಿತಿಯು ಮಹಾತ್ಮರ ಚಟುವಟಿಕೆಯಿಂದ ಉದ್ಭವಿಸಬಹುದಾಗಿದೆ. ಸದ್ಯಕ್ಕೆ—ಯಾವುದೇ ರೀತಿಯಲ್ಲಾಗಲಿ—ತತ್ತ್ವೋಪದೇಶವನ್ನು ಬಿಟ್ಟು ಕಾರ್ಯರಂಗಕ್ಕೆ ಮುಂದಾಳುಗಳು ಇಳಿಯಬೇಕೆನ್ನುವುದು ಎಷ್ಟೊ ಸಮಾಧಾನದ ಸಂಗತಿ.

(೧೯–೭–೪೨)

ಅಭಿನಂದನೆ

ಮೈಸೂರು ವಿಶ್ವವಿದ್ಯಾಲಯದ ಕಾಲೇಜುಗಳು ಭಾಷೇತರ ವಿಷಯಗಳನ್ನು ಕನ್ನಡದಲ್ಲಿ ಕಲಿಸಬೇಕೆಂಬ ನಿರ್ಣಯವನ್ನು, ದೊಡ್ಡ ಬಹುಮತದಿಂದ ಸ್ವೀಕರಿಸಿದ್ದಕ್ಕೆ ನಾವು ಮೈಸೂರು ಪ್ರಜಾಪ್ರತಿನಿಧಿಸಭೆಯನ್ನು ಅಭಿನಂದಿಸುತ್ತೇವೆ. ಸಂಸ್ಥಾನದ ಎಲ್ಲ ಪಕ್ಷಗಳೂ ಏಕಾಭಿಪ್ರಾಯವಾಗಿ ಈ ಮಾತನ್ನು ಒಪ್ಪಿಕೊಂಡುದು ಹೆಚ್ಚು ಮಹತ್ತ್ವದ ಸಂಗತಿಯಾಗಿದೆ. ಒಂದೇ ಭಾಷೆಯ ಮೂಲಕ ಜಾತಿಭೇದಗಳು ಮರೆಯಾಗುವುವೆಂಬುದಕ್ಕೂ ಭಾಷಾನುಗುಣ ಪ್ರಾಂತರಚನೆ ಪ್ರಗತಿದಾಯಕ ಎಂಬುವುದಕ್ಕೂ ಈ ಮಾತು ನಿದರ್ಶಕವಾಗಿದೆ. ಈ ವಿಷಯ ಸದ್ಯಕ್ಕೆ ನಮಗೆ ಮಹತ್ತ್ವದ್ದಾದುದರಿಂದ, ಇನ್ನೊಂದು ಸಂದರ್ಭದಲ್ಲಿ ಹೆಚ್ಚಾಗಿ ಬರೆಯಬೇಕೆಂದಿದ್ದೇವೆ.

(೨೧–೭–೪೨)

ಅಲ್ಲಲ್ಲಿಯ ನಮ್ಮ ಏಜಂಟರು

ಅಂಕೋಲಾ

ಶ್ರೀ. ಕೇಶವ ವಿಠ್ಠಲ ಪ್ರಭು, ಸ್ಟೇಶನರಿ ಡಿಪೊ.

ಬಾಗಲಕೋಟೆ

ಶ್ರೀ. ಜಿ. ವಿ. ಜೋರಾಪುರ, ಬಿ. ಎ., ಎಲ್‌ಎಲ್. ಬಿ. ವಕೀಲರು.

ಬೆಂಗಳೂರು

ಶ್ರೀ. ಎಚ್. ವೆಂಕೋಬರಾವ್, ನ್ಯೂಜ್ ಏಜಂಟ್. ಚಿನೆಯ ಬೀದಿ, ಚಾಮರಾಜಪೇಟೆ.

ಬೆಳಗಾಂವಿ

ಮ್ಯಾನೇಜರ್ 'ಕನ್ನಡ ಪುಸ್ತಕಾಲಯ' ಖಡೇಬಜಾರ.

ಬಂಕಾಪುರ

ಶ್ರೀ. ಎ. ಕೆ. ಗಲಗಲಿ, ಟೇಲರ್ ಮತ್ತು ನ್ಯೂಜ್ ಏಜಂಟ್.

ಬಿಜಾಪುರ (ವಿಜಾಪುರ)

ಮ್ಯಾನೇಜರ್ ಯುನಿಕ್ ಸ್ಪೋರ್ಟ್ಸ್, ನ್ಯೂಜ್ ಪೇಪರ್ ಏಜಂಟ್.

ಬಾಂಬೆ

ದಿ ಕರ್ನಾಟಕ ಹಿತೈಷಿ ಕಂಪನಿ, ಮರ್ಚಂಟ್ ಆ್ಯಂಡ್ ಕಮಿಶನ್ ಏಜಂಟ್, ಕಾವಸಜಿ ಪಟೇಲ ಸ್ಟ್ರೀಟ್, ಫೋರ್ಟ್.

ಸೊಲ್ಲಾಪುರ

ಶ್ರೀ. ಎಸ್. ಎಚ್. ದೇಶಪಾಂಡೆ c/o ಕೋಟಕುಂಡೆ ಭವನ, ಹಾಜೀಭಾಯಿ ಚೌಕು, S. ಕಸಬಾ, H. no. 473.



ಈ ತಿಂಗಳವರೆಗೂ ಅರ್ಧ ಕ್ರಯ

Original Price Rs. 13-8-0] **GRAND CLEARANCE SALE** [Sale Price Rs. 6-12-0

Pretty Shape and design. Watch No. 54.



ಮುಂಚಿನ ಕ್ರಯ ೧೩-೮-೦ ಈಗಿನ ಕ್ರಯ ೬-೧೨-೦

ಭಂಗಾರದ ಲೀವರ್ ರಿಸ್ಟ್‌ವಾಚ್ ಎಂಬ ಇಂಗ್ಲೀಷ್ ನಮೂನೆ ಕೈಗಡಿಯಾರ

ಸ್ವಿಸ್ ಮೇಕರ್, ಲಿವರ್ ಮೂವ್‌ಮೆಂಟ್ಸ್. ಇಂಡಿಯಾ ದೇಶದಲ್ಲಿ ಎಷ್ಟೋ ಗಡಿಯಾರಗಳು ಖರ್ಚಾಗಿ ಅನೇಕ ಯೋಗ್ಯತಾಪತ್ರಗಳು ಬಂದಿರುವವು. ಇವು ಒಂದು ನಿಮಿಷವಾದರೂ ವ್ಯತ್ಯಾಸವಿಲ್ಲದೆ ಕಾಲವನ್ನು ತೋರಿಸುವವು. ನೋಡುವುದಕ್ಕೆ ಅಂದವಾಗಿಯೂ ಇರುತ್ತೆ. ಇದನ್ನು ಸ್ತ್ರೀಪುರುಷರು ಕೈಯಲ್ಲಿ ಕಟ್ಟಿಕೊಳ್ಳಲು ಬಹು ಚೆನ್ನಾಗಿದೆ. ಭಂಗಾರದ ಗಡಿಯಾರಗಳನ್ನು ನಾವು ತರಿಸಿರುವುದರಿಂದ ಸುಲಭ ಕ್ರಯಕ್ಕೆ ಕೊಡುತ್ತೇವೆ. ಒಂದನ್ನು ತರಿಸಿ ನೋಡಿದರೆ ಸಂತೋಷಪಡುವಿರಿ. ೩ ವರ್ಷ ಗ್ಯಾರಂಟಿ. ನಂ. ೫೪ ಕಡಿಮೆ ಕ್ರಯ ವಾಚ್ ೧ಕ್ಕೆ ರೂ. ೬-೧೨-೦. ಜಾಗ್ರತೆ ತರಿಸಿದವರಿಗೆ ಮಾತ್ರ ದೊರೆಯುತ್ತೆ

ಜಿನೀವ ಟ್ರೇಡಿಂಗ್ ಕಂಪನಿ, ೨೬೦ ಚೈನಬಜಾರ್ ರೋಡ್, ಜಿ. ಟಿ. ಮದರಾಸ್.

GENEVA TRADING Co. 260 CHINA BAZAR ROAD, G.T. MADRAS

French Raiso Cupid Cream

Powerful Sexual Cream

(External use for men)

It is extensively in use in European and Foreign countries. A few minutes after application enables rapid development of size of male organ and improves power of erection never experienced before and gives abundant pleasure by long retentive power to old or young. It is quite favourite for rich men who keep many wives. Simple application strengthens weak nerves and restores lost vitality. It is also excellent treatment for partial impotency, too rapid ejaculation or deformity of the organ, curved, shrivelled condition or shortness in size, weak erection owing to various causes, masterbation, prolonged abstinence or advanced age. Gives lasting pleasure and increases sexual desire. Per bottle Rs. 2.

CHANDRABHAN AND Co.
No. 3. Krishnappa Naick Tank
St. G. T. MADRAS

ಮದನಕಳಾ ಶಾಸ್ತ್ರ

ಎಂಬ ಪ್ರೇಮರಹಸ್ಯಗಳು ರೂ. ೧-೪-೦

ಕನ್ನಡ ಭಾಷೆಯಲ್ಲಿ ಸ್ತ್ರೀಪುರುಷರ ಪ್ರೀತಿಯ ಫೋಟೋಗಳೊಡನೆ ಮುದ್ರಿಸಿದೆ. ಇದರಲ್ಲಿ ಎಲ್ಲ ದೇಶದ ವೇಶ್ಯೆಯರ

ಕನ್ಯೆಗಳು ಮೋಹಿಸುವ ರಹಸ್ಯಗಳು, ಹಾಸಿಗೆಯ ಸುಖವಿಲಾಸಗಳು, ಸ್ತ್ರೀ-ಪುರುಷರು ದಿಗಂಬರರಾಗಿರುವ ಗುಟ್ಟುಗಳು, ಪ್ರಪಂಚದಲ್ಲಿ ಇರುವ ಎಲ್ಲಾ ದೇಶಗಳ ವ್ಯಭಿಚಾರಿಗಳು, ಪ್ರೀತಿಸುವ ರಹಸ್ಯಗಳು, ಮುತ್ತಿಡುವ ವಿಧಗಳು, ಕನ್ಯೆಗಳ ಪ್ರೇಮ ಮತ್ತು ಸಂಯೋಗ ಕಾಲದ ಮಾರ್ಗಗಳು, ಇನ್ನೂ ಅನೇಕ ಪ್ರೀತಿಯ, ಮುತ್ತಿಡುವ, ಮಲಗುವ ಮನೆಯ ಶೃಂಗಾರ ರಹಸ್ಯ ಫೋಟೋಗಳು ಅಡಗಿವೆ. ೩೦೦ ಪುಟಗಳು ಇರುವ ಪುಸ್ತಕ; ಕ್ರಯ ಪುಸ್ತಕ ಒಂದಕ್ಕೆ ರೂ. ೧-೪-೦.

ಟಿ. ಆರ್. ರಾಯಲ್ ಕಂಪನಿ,

ನಂ. ೩. ಕೃಷ್ಣನಾಯ್ಕನ್ ಟ್ಯಾಂಕ್ ಬೀದಿ, ಸಾಹುಕಾರ್‌ಪೇಟೆ, ಜಿ. ಟಿ. ಮದರಾಸು.

ಫ್ರೆಂಚ್ ದೇಶದಲ್ಲಿ ತಯಾರಿಸಿದ ರಬ್ಬರ್ ಸುಖಸಾಧನಗಳು!

ಈ ಪ್ರಪಂಚದಲ್ಲಿ ಅನೇಕರು ಕೆಟ್ಟ ಸಹವಾಸಕ್ಕೆ ಸಿಕ್ಕು, ಸ್ತ್ರೀವ್ಯಾಧಿಗಳನ್ನು ಅಂಟಿಸಿಕೊಂಡು ಮರಣಾಂತರವೂ ವ್ಯಸನಕ್ಕೆ ಗುರಿಯಾಗುವರು. ತಮ್ಮ ಸಂತಾನದಲ್ಲಿಯೂ ಕೆಟ್ಟ ವ್ಯಾಧಿಯನ್ನು ಅಂಟಿಸಿ, ಸ್ತ್ರೀಸುಖವನ್ನು ಮರೆತುಬಿಡುವಂತೆ ಮಾಡುವರು. ಆದ್ದರಿಂದ ಸ್ತ್ರೀವ್ಯಾಧಿಗಳು ಯಾವುದೂ ಸೇರದಂತೆ ಡಾಕ್ಟರುಗಳು ಈ ರಹಸ್ಯ ರಬ್ಬರ ಚೀಲವನ್ನು ಕಂಡುಹಿಡಿದಿರುವರು. ಈ ಚೀಲವನ್ನು ಸಂಭೋಗಸಮಯದಲ್ಲಿ ಉಪಯೋಗಿಸುವುದರಿಂದ—ಮೇಲೆ ತಿಳಿಸಿರುವ ಕೆಟ್ಟ ವ್ಯಾಧಿಗಳು ಯಾವುವೂ ಸೇರದಂತೆ ಶರೀರವನ್ನು ಬಹು ಜಾಗ್ರತೆಯಿಂದ ಕಾಪಾಡುವುದಲ್ಲದೆ, ಸ್ತ್ರೀಸಂಗದಲ್ಲಿ ಆನಂದವನ್ನು ಕೊಡುವುದು.

ರತಿಕ್ರೀಡೆಗೆ ಆತಂಕವಿಲ್ಲ! ಮೇಹರೋಗದ ಹೆದರಿಕೆಯಿಲ್ಲ!! ಗರ್ಭಧರಿಸುವ ಭಯವಿಲ್ಲ!!!

ಗಂಡುಸರ ಮರ್ಮದ ರಬ್ಬರ್ ಚೀಲ ೧ಕ್ಕೆ ೧-೬-೦ ★ ಹೆಂಗುಸರ ಮರ್ಮದ ರಬ್ಬರ್ ಚೀಲ ೧ಕ್ಕೆ ೨-೮-೦.

ಕಿಂಗ್ ಆ್ಯಂಡ್ ಕೋ., ೧೫ ಮೆಲ್ಲರ್ಸ್ ರೋಡ್, Kilpavk, MADRAS.

ದಿ ಯುನಾಯಿಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪನಿ, ಲಿಮಿಟೆಡ್

ಹೆಡ್ ಆಫೀಸ್ **ಧಾರವಾಡ.**

★ ನೀವು ಮಾಡುವ ಅನುಕೂಲವುಳ್ಳ ಕರ್ನಾಟಕಸ್ಥರು, ಈ ಭರದಿಂದ ಬೆಳೆಯುತ್ತಿರುವ ಕನ್ನಡ ಕಂಪನಿಯ ಪಾಲಿಸಿಯನ್ನೇ ಪಡೆಯಬೇಕು !

★ ಮೊದಲನೆಯ ಮೌಲ್ಯಮಾಪನದಲ್ಲಿ (Valuation) ಲಾಭವನ್ನು ಹಂಚುವುದಲ್ಲದೆ, ಹೊಸ ವಿಮಾಕಾಯಿದೆಯ ನಿರ್ಬಂಧಗಳಿಗೆ ತಕ್ಕಂತೆ ನಡೆದು, ಎಲ್ಲ ಪಾಲಿಸಿದಾರರ ಪ್ರೋತ್ಸಾಹಕ್ಕೂ ಪಾತ್ರವಾಗಿದೆ.

★ ಮರಣಹೊಂದಿದ ಪಾಲಿಸಿದಾರರ ವಾರಸದಾರರಿಗೆ ವಿಲಂಬವಿಲ್ಲದೆ ಹಕ್ಕಿನ ಹಣ (Claim) ವನ್ನು ಸಲ್ಲಿಸಿರುವುದರಿಂದ, ಎಲ್ಲರ ನಂಬಿಗೆಗೂ ತಕ್ಕುದಾಗಿದೆ.

★ ಕರ್ನಾಟಕದ ಏಳ್ಗೆಗಾಗಿ ಹಂಬಲಿಸುವವರೂ ಕನ್ನಡನಾಡಿನ ಹಿತಚಿಂತಕರೂ, ಇದೇ ಕಂಪನಿಯ ಪಾಲಿಸಿಗಳನ್ನೂ ಪಾಲುಗಳನ್ನೂ ಕೊಂಡುಕೊಳ್ಳಲೇ ಬೇಕು.

ಏಜಂಟರಿಗೆ ಧಾರಾಳವಾದ ಕಮಿಶನ್ ಕೊಡಲಾಗುವುದು.

ವಿಶೇಷವಿರಕ್ಕೆ ಬರೆಯಬೇಕು :— ಎಮ್. ಗೋವರ್ಧನರಾವ್, ಮ್ಯಾನೇಜರ್

The United Karnatak Insurance Co. Ltd., DHARWAR

ಗನೋರಿಯಾ, ಪರಮಾರೋಗ, ಉಷ್ಣರೋಗದ ಮೇಲೆ

ಔಷಧ

೭ ದಿವಸಗಳಲ್ಲಿ ಈ ರೋಗ ಗುಣಹೊಂದುವುದು ಗ್ಯಾರಂಟಿ :

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದಿ ಡಾಗು ಹತ್ತುತ್ತಿದ್ದರೆ ಶರೀರದಿಂದ ಬಾವು, ಶರೀರದಿಂದ ತೊಗಲು ಹಿಂದಕ್ಕೆ ಸರಿಯದಿದ್ದರೆ ಶರೀರದ ಸುತ್ತು ಘಾಯವಾಗಿದ್ದರೆ, ಚಟ್ಟಿಬಿದ್ದಿದ್ದರೆ, ಉಷ್ಣದಿಂದ ಜೇನು ಇಳಿದಿದ್ದರೆ, ಉರುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗವಾಯು, ನಡುನೋಯುವುದು, ಸ್ತ್ರೀಯರ ಬಿಳಿ ಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕಟ್ಟು, ಗರ್ಮಿಯಿಂದ ಗರ್ಭಕೋಶನಾಶವಾಗಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲು ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧ ತೊಲಿ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ಮುಂಜಾನೆ, ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ-ಮಳೆಗಾಲದಲ್ಲಿ ಜೇನುತುಪ್ಪದಲ್ಲಿ ತಕ್ಕೊಳ್ಳಬೇಕು.

ಪಥ್ಯ : ಹುಳಿಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ ರೂ. ಪೋಸ್ಟ್ ಚಾರ್ಜು ೧೦ ಆಣೆ.

ಮಕ್ಕಳನ್ನು ಹಡೆಯುವದು ಸಾಕು

ಅಶಕ್ತ ಹೆಣ್ಣುಮಕ್ಕಳಿಗೆ ★ ರೋಗಗ್ರಸ್ತ ಸ್ತ್ರೀಯರಿಗೆ

ಬರ್ಥ್ ಕಂಟ್ರೋಲ್

★

ಏಳು ದಿವಸದ ಈ ಮಾತ್ರೆಗಳನ್ನು ಸೇವನೆ ಮಾಡಿದರೆ, ಮುಂದೆ ಖಂಡಿತವಾಗಿಯೂ ಮಕ್ಕಳಾಗುವುದಿಲ್ಲ, ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವುದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ : ಪ್ರತಿ ದಿವಸ ಮುಂಜಾನೆ ೧ ಗುಳಿಗೆ, ಮಧ್ಯಾಹ್ನಕ್ಕೆ ೧ ಗುಳಿಗೆ, ಸಂಜೆ ೧ ಗುಳಿಗೆ ಯಂತೆ ಊಟಕ್ಕೆ ಮೊದಲು ತಕ್ಕೊಳ್ಳಬೇಕು. ೭ ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ : ಹರವೀಪಲ್ಲೆ ಬಿಡಬೇಕು.

೭ ದಿವಸದ ಸಂಪೂರ್ಣ ಔಷಧದ ಕಿಮ್ಮತ್ತು

೫ ರೂಪಾಯಿ ಪೋಸ್ಟ್ ಚಾರ್ಜು ೧೦ ಆಣೆ.

ಏಜಂಟರು :

ಗದಗ ಫಾರ್ಮಸಿ, ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ ಫಾರ್ಮಸಿ

ವಿಳಾಸ :— ಹಾಲಪ್ಪಾ ದಾವಣಗೇರಿ, ಆಯುರ್ವೇದ ಔಷಧಗಳ ದವಾಖಾನೆ, ಗದಗ

ಜಯಂತಿ ಸಣ್ಣಕತೆಗಳ ಮೇಲಾಟ

(೫ ನೆಯ ವರ್ಷಕ್ಕಾಗಿ)

ಕಳೆದ ಸಲದಂತೆ ಈ ಸಲಕ್ಕೂ ಸಣ್ಣಕತೆಗಳ ಸ್ಪರ್ಧೆಯನ್ನು ಏರ್ಪಡಿಸಲಾಗಿದೆ.
ಕತೆಗಾರರೆಲ್ಲರೂ ಅವಶ್ಯವಾಗಿ ಭಾಗವಹಿಸಬೇಕು.

* ಬಹುಮಾನಗಳು *

೧ ನೆಯದು ೧೫ ರೂಪಾಯಿ; ★ ೨ ನೆಯದು ೮ ರೂಪಾಯಿ!

೩ ನೆಯದು ೫ ರೂಪಾಯಿ!

೧೯೪೨ ಸಪ್ಟಂಬರ್ ೨೦ ತಾರೀಖಿನೊಳಗಾಗಿ ಮೇಲಾಟದ ಕತೆಗಳು ಬರಬೇಕು.

★ 'ಜಯಂತಿ' ಸಣ್ಣಕತೆಗಳ ಮೇಲಾಟದ ನಿಯಮಗಳು ★

೧. ಕತೆಯು ಸ್ವತಂತ್ರವಾಗಿದ್ದು ಸಾಮಾಜಿಕಸಂಗತಿಯಿಂದ ಕೂಡಿದುದಿರಬೇಕು. ಐತಿಹಾಸಿಕ ಕತೆಗೆ ಈ ಮೇಲಾಟದಲ್ಲಿ ಸ್ಥಾನವಿಲ್ಲ.

೨. ಜಯಂತಿಯ ೫ ಪುಟಗಳಿಗೆ ಮೀರದಷ್ಟು, ಎಂದರೆ ಕೈಬರೆಹದಲ್ಲಿ ಫೂಲ್ಸ್‌ಕ್ಯಾಪ್ ಅರ್ಧಹಾಳೆಗಳು ೧೦ಕ್ಕೆ ಮೀರದಷ್ಟು ಕತೆಯಿರಬೇಕು.

೩. ಅಂದವಾದ ಸ್ಪಷ್ಟವಾದ ಅಕ್ಷರಗಳಿರಬೇಕಲ್ಲದೆ, ಮಾರ್ಜಿನು ಬಿಟ್ಟು ಹಾಳೆಯಲ್ಲಿ ಒಂದೆ ಕಡೆಗೆ ಬರೆದಿರಬೇಕು.

೪. ವಯಸ್ಸಿನ ನಿರ್ಬಂಧವಿಲ್ಲ. ಸಣ್ಣವರು ದೊಡ್ಡವರು ಎಲ್ಲರೂ ಇದರಲ್ಲಿ ಭಾಗ ವಹಿಸಬಹುದು.

೫. "ಜಯಂತಿ ಸಣ್ಣ ಕತೆಗಳ ಮೇಲಾಟಕ್ಕಾಗಿ" ಎಂದು ಕೈಬರೆಹದ ಪ್ರತಿಗಳ ಮೇಲೆ ಸ್ಪಷ್ಟವಾಗಿ ಬರೆಯಬೇಕು.

೬. ಒಬ್ಬರೆ ಲೇಖಕರು ತಮ್ಮ ಎರಡು-ಮೂರು ಕತೆಗಳನ್ನೂ ಮೇಲಾಟಕ್ಕಾಗಿ ಕಳುಹಬಹುದು; ಆದರೆ ಎಲ್ಲ ಬಹುಮಾನಗಳು ಒಬ್ಬರಿಗೇ ದೊರೆಯಲಾರವು.

೭. ಕತೆಯನ್ನು ಕಳುಹಬೇಕಾದ ಕೊನೆಯ ದಿನವೆಂದರೆ ಸಪ್ಟಂಬರ್ ೨೦ನೆಯ ತಾರೀಖು. ಅಕ್ಟೋಬರ್ ಸಂಚಿಕೆಯಲ್ಲಿ ಮೇಲಾಟದ ನಿರ್ಣಯವನ್ನೂ ಬಹುಮಾನ ಪಡೆದ ಕತೆಗಳನ್ನೂ ಪ್ರಕಟಿಸಲಾಗುವುದು.

೮. ಮಿಕ್ಕ ಕತೆಗಳಲ್ಲಿ ಪ್ರಕಟನಾರ್ಹವೆಂದು ಕಂಡುಬಂದ ಕತೆಗಳನ್ನು, ಲೇಖಕರ ಒಪ್ಪಿಗೆ ಪಡೆದು ಜಯಂತಿಯಲ್ಲಿ ಪ್ರಕಟಿಸಲಾಗುವುದು.

೯. ಬಹುಮಾನಕ್ಕೆ ತಕ್ಕ ಕತೆಗಳು ಬಾರದೆ ಇದ್ದಲ್ಲಿ, ಬಹುಮಾನ ಕೊಡದೆ ಇರುವುದಕ್ಕೂ ಬಂದ ಕತೆಗಳಲ್ಲಿ ಒಳ್ಳೆಯದೆಂದು ಎನಿಸಿದುದಕ್ಕೆ ತಕ್ಕ ಮನ್ನಣೆ ಸಲ್ಲಿಸುವುದಕ್ಕೂ ಜಯಂತಿಯ ಸಂಪಾದಕ ಮಂಡಲಿ ತನ್ನ ಕಡೆಗೆ ಅಧಿಕಾರವನ್ನು ಇರಿಸಿಕೊಂಡಿದೆ.

೧೦. ಮೇಲಾಟಕ್ಕಾಗಿ ಕತೆಗಳನ್ನು ಕಳುಹುವವರು ಪ್ರವೇಶಧನವನ್ನೇನೂ ಕೊಡಬೇಕಾಗಿಲ್ಲ. ಕತೆಗಳು ಮರಳಿ ಬೇಕಾದರೆ ಅದಕ್ಕೆ ಅವಶ್ಯವಿದ್ದ ಅಂಚೆಯ ಚೀಟಿ ಕಳುಹಬೇಕು.

ಸಂಪಾದಕರು : 'ಜಯಂತಿ' ಧಾರವಾಡ

* ಜಯಂತಿಯ ಹಿತಚಿಂತಕರೊಬ್ಬರು ೧ ನೆಯ ೩ ನೆಯ ಬಹುಮಾನದ ಹೆಚ್ಚಿನ ಹೊಣೆ ಹೊತ್ತುದರಿಂದ, ಬಹುಮಾನದ ಬೆಲೆಯನ್ನು ಹೆಚ್ಚಿಸಿರುವುದಲ್ಲದೆ, ಸಂಖ್ಯೆಯನ್ನೂ ಹೆಚ್ಚಿಸಲಾಗಿದೆ; ಅವಧಿಯನ್ನೂ ಬೆಳೆಯಿಸಲಾಗಿದೆ.

Printed by V. Y. Jathar at the Karnatak Printing Works, Dharwar. Edited and Published by M. G. Patil at Jayanti Office, Dharwar.

ಜಯಂತಿ

ಆಗಸ್ಟ್ ೧೯೪೧

ಜ್ವೀಕರ ಗುರುರಾಯರು
ಮು' ಬಳ್ಳಾರಿ
ನೋಳಕರ ಶ್ರೀಧರರಾವ್
. ಎಸ್. ಆರ್. ಜಯಲಕ್ಷ್ಮಿ
ಶಿವರಾಯರು

ಬೆಲೆ ನಾಲ್ಕಾಣೆ

ಪ್ರತಿತಿಂಗಳ ಮೊದಲನೆಯ ತಾರೀಖಿಗೆ ಪ್ರಕಟವಾಗುವುದು.

ವಾ. ವರ್ಗಣಿ ಅಂಚೆವೆಚ್ಚ ಸೇರಿ ೩—೦—೦ .... ವ್ಹಿ. ಪಿ. ಯಿಂದ ೩-೫-೦ .... ಬಿಡಿಸಂಚಿಕೆಗೆ ೪ ಆಣೆ.

ಸಂಪಾದಕರು

ಬೆಟಗೇರಿ ಕೃಷ್ಣಶರ್ಮರು

೫ನೆಯ ವರ್ಷ	ಆಗಸ್ಟ ೧೯೪೨	೩ನೆಯ ಸಂಚಿಕೆ

ಮುಖ್ಯವಿಷಯಗಳ ಪರಿವಿಡಿ

ಸಾಮಾಜಿಕನ ಸಂವಚನಗಳು (ವಿಚಾರತರಂಗ)	'ಸಾಮಾಜಿಕ'	೧೦೧
ಸಂಪಾದಕೀಯ	ಸಂಪಾದಕರು	೧೦೨
ಮಂಗನ ಮಲ್ಲಿನಾಥತನ	'ಮಲ್ಲಿನಾಥ'	೧೦೩
ಕಳೆದ ಯುದ್ಧಾನಂತರದ ಆರ್ಥಿಕ ಸ್ಥಿತ್ಯಂತರಗಳು	ಶ್ರೀ. ವಾಳ್ವೇಕರ್ ಗುರುರಾಯರು, ಎಲ್‌ಎಲ್. ಬಿ.	೧೦೫
ಧರ್ಮ ಪ್ರಭು (ಸಣ್ಣಕತೆ)	'ವಿಶ್ವಕರ್ಮ' ಮದರಾಸ್	೧೦೯
ಕಲಾಪ್ರಕಾರಗಳು (ಪರಿಚಯಾತ್ಮಕ ಲೇಖನ)	ಶ್ರೀ. ಖಾನೋಳಕರ ಶ್ರೀಧರರಾಯರು, ಪುಣೆ	೧೧೪
ಹೆಣ್ಣಿಗೆ :— (ಕವನ)	ಶ್ರೀ. ಜಿ. ವರದರಾಜರಾವ್, ಬಿ. ಎ., ಮೈಸೂರು	೧೧೮
ಆರಾಧನೆ (ಚಿಕ್ಕ ನಾಟಕ)	ಶ್ರೀ. 'ಶ್ಯಾಮೂ' ಬಳ್ಳಾರಿ	೧೧೯
'ವಿದ್ವಾನ'ರ ಬುದ್ಧಿ ಭಾವನೆ (ಪ್ರತ್ಯುತ್ತರ)	ಶ್ರೀ. ಗೌರೀಶ ಕಾಯಕಿಣಿ, ಗೋಕರ್ಣ	೧೨೭
ರಾಮುವಿನ ರಹಸ್ಯ (ತಮಿಳುಕತೆಯ ಅನುವಾದ)	ಶ್ರೀಮತಿ ಜಯಲಕ್ಷ್ಮಿ ಆರ್. ಶ್ರೀನಿವಾಸನ್	೧೨೯
ನನ್ನ ಗೆಳೆಯ ಸ್ಟ್ಯಾಲಿನ್ ! (ವ್ಯಕ್ತಿ ಪರಿಚಯ)	ಶ್ರೀ. ಕು. ಶಿವರಾಯರು, ಮಂಗಳೂರು	೧೩೫
ಮನೆಯಲ್ಲಿಯೆ ಹೊಲಿಗೆ ಕಲಿಯಿರಿ ! (ನೆಹರೂ ಅಂಗಿ)	ಶ್ರೀ. ಹಳಪೇಟೆ ಚಿಂತಾಮಣಿರಾಯರು, ಟಿ. ಸಿ. ಡಿ.	೧೩೮
ಪುಸ್ತಕ ವಿಮರ್ಶೆ	ಬೇರೆ ಬೇರೆ ವಿಮರ್ಶಕರು	೧೪೦
ನಗೀಗೆ ನೇವೀದ್ಯ	'ನಕಲೀ ನಾರಾಯಣಾಚಾರ್ರು'	೧೪೨
ಕನ್ನಡ ಸೈನಿಕ (ಸೊಂಡೂರಲ್ಲಿ ಕನ್ನಡದ ಕೈಗೆ ಶಂಖ)	'ಸಂ. ಕ. ಸೈ'	೧೪೩
ನಾಲ್ಕೂ ನಿಟ್ಟಿನ ನೋಟ	'ನಿರೀಕ್ಷಕರು'	೧೪೫
ಸಾದರ ಸ್ವೀಕಾರ		೧೪೯

ಆಗಸ್ಟ ಸಂಚಿಕೆಗೆ ಚಂದಾ ಅವಧಿ ಮುಗಿಯುವ ಚಂದಾದಾರರೆಲ್ಲರೂ ತಂತಮ್ಮ ಚಂದಾಹಣವನ್ನು ಕೂಡಲೆ ಮನಿಯಾರ್ಡರ್ ಮೂಲಕ ಕಳುಹಬೇಕು. ಮುಂದೆ ಚಂದಾದಾರರಾಗಲು ಮನಸ್ಸಿಲ್ಲದವರು, ದಯೆಯಿಟ್ಟು ಕೂಡಲೆ ಕಾಗದ ಬರೆದು ತಿಳಿಸಬೇಕು. ಸಂ. ಜ.

ನಮ್ಮ ಸೊಲ್ಲಾಪುರದ ಏಜಂಟರು : ಶ್ರೀ. ನಾರಾಯಣರಾವ್ ಎಚ್. ದೇಶಪಾಂಡೆ
C/o. ಕೋಟಕುಂಡೆ ಭವನ, ಹಾಜೀಭಾಯಿ ಚೌಕು, ಎಸ್. ಕಸಬಾ, H. No. 473.

ಜಯಂತಿ

ಸಂಪುಟ ೫ | ೧ನೆಯ ಆಗಸ್ಟ್ ೧೯೪೨ | ಸಂಚಿಕೆ ೩

ಸಾಮಾಜಿಕನ ಸಂವೇದನಗಳು

ಅಜ್ಞಾನದ ಬೂತುಗ ತಲೆಯೊಳೆತ್ತಿ ನಿಂದಿದೆ ಅನ್ನದ ಉಗ್ರಾಣವನು; ಜ್ಞಾನದ ದೇವತೆ ಹಸಿದ ನಾಯಂತದರ ಹಿಂದೆ ಹಿಂದೆ ಅಲೆಯುತಿದೆ ನೋಡಾ! ಜ್ಞಾನಜ್ಯೋತಿಯ ಅಕ್ಷಯ ಅಮರ ಪ್ರಭೆಯನು ಅನ್ನದಾಶೆಯ ಮುಸುಕು ಮರೆಸಿ ಬಿಟ್ಟಿದೆ ನೋಡಾ! ಎತ್ತಲೂ ಮಂಜು, ಸುತ್ತಲೂ ಮಬ್ಬು! ಮುಂದುವರಿವ ದಾರಿಯನರಿಯದೆ ಮಂಕುವಟ್ಟಿದೆ ಮಾನವ ಸಂಕುಲ ಕೇಳಾ! ಅನ್ನದ ಅಧಿಷ್ಠಾನ ದೊರೆತರೆ, ಅಲ್ಲಿ ತಾನು ತೊಳಗಿ ಲೋಕವನೆ ಬೆಳಗುವೆನೆಂಬುದು ಜ್ಞಾನಜ್ಯೋತಿ! ಅನ್ನವಿಲ್ಲದಿದ್ದರೆ ತನ್ನನಾರು ಕೇಳುವರೆಂದು ಅಜ್ಞಾನಕೆ ಭೀತಿ! ಎಂತಲೆ ಎತ್ತಿಹಿಡಿದ ಉಗ್ರಾಣವನು ಇಳೆಗಿಳಿಸದಿದೆಯಾ ಕುರುಡುಕೋತಿ! ಕೋತಿಯ ರೀತಿಯನೆ ನೀತಿಯೆಂದು ಮೆಚ್ಚಿ, ಲೋಕವೇ ಹಾಡುವುದದರ ಖ್ಯಾತಿ! ಇಂತಿದನೆಲ್ಲ ಅರಿತೂ ಅರಿಯದಂತೆ—ಮೌನಿಯಾಗಿ ನಡೆದಿರುವ ನಮ್ಮ ಕಾಲಮಹಾವಿಭೂತಿ!

* * *

ಹುರುಳು-ತಿರುಳುಗಳಿರದ ಹೇಡಿ ಹಂದೆತನವೆಂದು, ಶಿರದೊಳು ಹೊತ್ತು ನಿಂದಿದೆ ನೋಡಾ ಕೂಳಿನ ಕಣಜವನು! ಹುಲಿ-ಸಿಂಗಗಳಂದದ ಬೀರ-ಬಂಟತನಗಳು, ಇಲಿ-ಮಂಗಗಳಂತಾಗಿ ಹಿಂಬಾಲಿಸುತಿವೆ ನೋಡಾ ಹಂದೆಯನು! ಲೋಕರಕ್ಷಣೆಗಾಗಿ ಬೇಕಿರುವ ಬಿಡುಕನ್ನು ಹಾಕಿದೆ ತನ್ನ ತೊಡಕುಬಲೆಯೊಳಗೆ ಹಸಿವೆಯು ಹಿರಿದೆವ್ವ! ಎಲ್ಲೆಲ್ಲಿಯೂ ಜಾಡ್ಯ, ಎಲ್ಲೆಲ್ಲಿಯೂ ಮೌಢ್ಯ! ಅನ್ನದ ಅಧಿಷ್ಠಾನ ದೊರೆತರೆ ಅಲ್ಲಿ ತಾನು ಬೆಳೆದು, ಇಳೆಯೊಳೆಲ್ಲ ಹುರುಳಿನ ಹೊಳೆ ಹರಿಸುವೆನೆಂಬುದಾ ಬೀರದ ಬಲ್ಪು! ಅನ್ನವನು ಬಿಟ್ಟರೆ ತನ್ನನಾರು ಕೇಳುವರೆಂದು, ಎತ್ತಿದ ಕಣಜವನು ಇಳೆಗಿಳಿಸದೆ ನಿಂದಿದೆಯಾ ಹಂದೆತನದ ಬೆಪ್ಪು! ಈ ಹಂದೆಯ ದಂದುಗವನೆ ಹಿರಿಯ ನಡತೆಯೆಂದು ತಿಳಿದು, ಹುಳಿಯುತಿದೆ ಮನುಜಕುಲ ಹಾಲೊಳಗುಪ್ಪು! ಇಂತಿದನ್ನೆಲ್ಲ ಕಂಡೂಕಾಣದಂತೆ ಮುಂದುವರಿಯುತಿಹುದೆ ನಮ್ಮ ಕಾಲರಾಯನಿಗೊಂದು ಒಪ್ಪು!

ಅಲಸಿಕೆ ಹೊತ್ತು ನಿಂದಿದೆ ಆಹಾರದ ಪಡಿಗವ ನೆತ್ತಿಯಲಿ; ಕೆಲಸಿಕೆ ಹಸಿದು ಹಸಿದು ಬಿದ್ದು ಒದ್ದಾಡುತಿದೆ ಅದರಡಿಗಳೆಡೆಯಲ್ಲಿ! ಅನ್ನದಾಶೆಯು ಹುರಿಹಗ್ಗದ ಗಂಟು ಬಲಿದು ಬಿಟ್ಟಿದೆ ನೋಡಾ ಕೆಲಸಿಕೆಯ ಕೈ-ಕಾಲ್‌ಗಳನು! ಕೂಳು-ಕೂಳೆಂಬ ಮಾನವಕುನ್ನಿಗಳ ಕೂಗು ಕಿವುಡುಗೊಳಿಸಿದೆ ನೋಡಾ ಲೋಕದ ಕಿವಿಗಳನು! ಎಲ್ಲಿಯೂ ಮರುಗು, ಎಲ್ಲಿಯೂ ಕೊರಗು! ಅನ್ನದ ಅಧಿಷ್ಠಾನದ ಮೇಲೆ ನಿಂದು, ಲೋಕದ ಕೊರಗು-ಮರುಗುಗಳನೆಲ್ಲ ಕಳೆವೆನೆಂಬುದಾ ಕೆಲಸಿಕೆ ಕೂಗಿ ಕೂಗಿ! ಅನ್ನವನುಳಿದರೆ ತನ್ನನಾರು ಕೇಳುವರೆಂದು ಹೊತ್ತ ಪಡಿಗವನು ಹೊತ್ತುಕೊಂಡೆ ನಿಂದಿದೆಯಾ ಅಲಸಿಕೆ ಬಿಮ್ಮಗೆ ಬೀಗಿ! ಈ ಹೊಲೆಗೆಲಸವನೆ ಹಿರಿಯದೆಂದು ಹೊಗಳಿ ಲೋಕವೇ ಹಾಡುತಿದೆ ತಲೆವಾಗಿ! ಇಂತಿದನೆಲ್ಲ ಅರಿತೂ ಅರಿಯದಂತೆ ಸಾಗಿರುವ ನಮ್ಮ ಕಾಲಮಹಾಯೋಗಿ!

* * *

ಸಾಹಿತ್ಯಶಾರದೆಯ ನವಿಲು ನಿಟ್ಟಿಸುತಿದೆ ಕೂಳಿನ ಕಣಜವನು! ಸಂಗೀತ ಸರಸ್ವತಿಯ ಶುಕ-ಪಿಕಂಗಳು ನೋಡುತಿವೆ ಆಹಾರದ ಉಗ್ರಾಣವನು! ಚಿತ್ರಕಾರನ ಬಣ್ಣಗುಂಚ ಕಣ್ಣಿಟ್ಟಿದೆ ಅನ್ನದ ಕಡೆಗೆ; ಶಿಲ್ಪಕಾರನ ಕುಸುರುಗೈದುಗಳು ಕೈಯೊಡ್ಡಿ ನಿಂತಿವೆ ಕೂಳಿನ ಕಡೆಗೆ! ರಸವನರಿಯದ-ಭಾವವ ಬಗೆಯದ—ಕಲೆಯನೆಂದೂ ಕಾಣದ—ಅರಸಿಕತೆ ಕಟ್ಟಿಕೊಂಡು ನಿಂತಿದೆ ಕೂಳಿನ ಮೊಟ್ಟೆಯನು! ಅಯ್ಯಾ, ಅನ್ನದ ಅಧಿಷ್ಠಾನದ ಮೇಲೆ ನಿಂತು, ಕಲೆಯ ಬಲೆಗಳ ಹೆಣೆವೆನೆಂಬುದಾ ರಸಿಕತೆ! ಅನ್ನವಿಲ್ಲದಿರೆ ತನ್ನನಾರು ಕೇಳುವರೆಂದು, ಕಟ್ಟಿದ ಮೊಟ್ಟೆಯ ಕೆಳಕ್ಕಿಳಿಸದೆ ನಿಂದಿದೆ ಅರಸಿಕತೆ! ಈ ಅರಸಿಕತೆಯನೆ ಅರಸನೆಂದು ಓಲಯಿಸುತಿದೆ ಪತಿತ ಮಾನವತೆ! ಇದನ್ನೆಲ್ಲ ಕಂಡೂಕಾಣದಂತೆ ಸಾಗಿರುವುದೆ ಕಾಲರಾಯನದೊಂದು ಬಿನದದ ಕತೆ!

ಸಂಪಾದಕೀಯ

ಜಾತೀಯ ಜಗಳಾಟದ ಜೊಳ್ಳುತನ

ಜಾತಿ-ಕುಲ-ಮತಗಳು ಭಾರತದಲ್ಲಿ ಹಲವು ಕಾಲದಿಂದಲೂ ನಡೆದುಕೊಂಡು ಬಂದಿವೆ. ಈಗಲೂ ಇವೆ; ಇನ್ನು ಮುಂದೆ ಕೂಡ ಒಂದಿಲ್ಲೊಂದು ರೀತಿಯಲ್ಲಿ ಅವು ಇದ್ದೇ ತೀರುವುವು. ಉದ್ಯಮಭೇದದಿಂದ ಜಾತಿಗಳು ತಲೆದೋರಿದುವು; ಇದ್ದ ಪ್ರದೇಶ-ಭೇದಗಳಿಂದ ಕುಲಗಳು ತಲೆದೋರಿದುವು; ಆಧ್ಯಾತ್ಮಿಕ ಬುದ್ಧಿಯ ಭೇದಗಳಿಂದ ಮತಗಳು ತಲೆದೋರಿದುವು. ಜಗತ್ತಿನಲ್ಲಿಯ ಯಾವ ಪ್ರದೇಶದಲ್ಲಿಯೂ ಈ ಜಾತಿ- ಕುಲ- ಮತಗಳ ಪ್ರಭೇದಗಳು ಒಂದಿಲ್ಲೊಂದು ರೀತಿಯಿಂದ ಇದ್ದೇ ಇರುವುವು. ಅದರಂತೆಯೆ ಭಾರತದಲ್ಲೂ ಇರುತ್ತಿದ್ದರೆ ಅದು ಅಸ್ವಾಭಾವಿಕವೂ ಅಲ್ಲ, ಆಶ್ಚರ್ಯವೂ ಅಲ್ಲ. ಆದರೆ ಈ ಜಾತಿ- ಕುಲ- ಮತಗಳು ಭಾರತೀಯರ ಹೃದಯಕ್ಕೆ ಇಂದು ಮುಳ್ಳಾಗಿ ಚುಚ್ಚುತ್ತಲಿರುವಂತೆ ಹಿಂದೆಯೆಂದೂ ಚುಚ್ಚುತ್ತಲಿರಲಿಲ್ಲ, ಎಲ್ಲಿಯೂ ಚುಚ್ಚುತ್ತಲಿಲ್ಲ.

ನಿಜವಾಗಿ ನೋಡಿದರೆ ಈ ಜಾತಿ- ಕುಲ- ಮತಗಳ ತೀಕ್ಷ್ಣತೆ ಹಿಂದಿನ ಕಾಲದಷ್ಟು ಇಂದು ಇಲ್ಲವೆಂಬುದನ್ನು ಯಾರೂ ಒಪ್ಪಬಹುದು. ಹಿಂದಿನ ಕಾಲದಲ್ಲಿ ತೀಕ್ಷ್ಣತೆಯಿದ್ದರೂ ಒಬ್ಬರೊಬ್ಬರ ವಿಷಯದಲ್ಲಿ ಸಾಮಾಜಿಕ ಅವಿಶ್ವಾಸ-ಅಸಹಿಷ್ಣುತೆಗಳಿರಲಿಲ್ಲ. ಇಂದು ಆ ತೀಕ್ಷ್ಣತೆಯಿರದಿದ್ದರೂ ಪರಸ್ಪರರಲ್ಲಿ ಅವಿಶ್ವಾಸ-ಅಸಹಿಷ್ಣುತೆಗಳು ದಿನದಿನಕ್ಕೆ ಹೆಚ್ಚುತ್ತಲಿವೆ. ಹೀಗಾದುದಕ್ಕೆ ಕಾರಣವನ್ನು ಹಲವರು ಹಲವು ರೀತಿಯಿಂದ ವಿವರಿಸುತ್ತಿರುವರು. ಇದು ಕಡಿಮೆಯಾಗಬೇಕಾದರೆ ಮತ್ತೆ ಕೃತಯುಗ-ತ್ರೇತಾಯುಗಗಳ ವಾತಾವರಣ ನೆಲೆಗೊಂಡು, ಚಾತುರ್ವರ್ಣ್ಯ ಧರ್ಮ ನೆಲೆಗೊಳ್ಳಬೇಕೆಂದು ಪುರಾಣ ಮತವಾದಿಗಳು ಹೇಳಿದರೆ, ಇದ್ದ ಜಾತಿ- ಕುಲ- ಮತಗಳೆಲ್ಲ ತಂತಮ್ಮ ವಿಶಿಷ್ಟ ಆಚಾರ ವಿಚಾರಗಳನ್ನು ಒದ್ದೊಗೆದು ಎಲ್ಲರೂ ಒಂದಾಗಿ ಬೆರೆಯಬೇಕೆಂದು ಹೊಸಮಾರ್ಗದವರು ಹೇಳುವರು. ಜಾತಿ- ಕುಲ- ಮತಗಳ ಜಗಳಾಟಗಳಲ್ಲದೆ, ಈ ಹೊಸ- ಹಳೆಯ ಮಾರ್ಗದವರ ಜಗಳಗಳೂ ಭಾರತದ ಜಗಳಗಳ ಸಂಖ್ಯೆಯನ್ನು ಹೆಚ್ಚಿಸಿವೆ. ತರ್ಕಶುದ್ಧವಾದ ರೀತಿಯಿಂದ ಈ ಜಗಳಗಳನ್ನು ವಿಶ್ಲೇಷಿಸಿ ನೋಡಿದವರು ತೀರ ಕಡಿಮೆ ಜನರು; ಎಂತಲೆ ಈ ಜಾತಿ-ಕುಲ-ಮತಗಳು ಇಂದು ನಮಗೆ ನುಂಗಲಾರದ ತುತ್ತುಗಳಾಗಿ ಕುಳಿತಿವೆ; ಎಂತೆಂತಹ ವಿಚಾರ ವೀರರನ್ನೂ ಕರ್ಮವೀರರನ್ನೂ ಹಣ್ಣುಹಣ್ಣು ಮಾಡಿಬಿಟ್ಟಿವೆ.

ಹಿಂದಿನ ಕಾಲದ ನಮ್ಮ ಸಮಾಜದಲ್ಲಿ ಜಾತಿ-ಕುಲ-ಮತಗಳ ಜಗಳಗಳು ಇರಲಿಲ್ಲವೇಕೆಂಬುದನ್ನು, ಸಮಾಜಶಾಸ್ತ್ರ-ಮನಶ್ಶಾಸ್ತ್ರಗಳ ಅಭ್ಯಾಸದ ಸೂಕ್ಷ್ಮ ದೃಷ್ಟಿಗಳಿಂದ ನೋಡಿದರೆ ವಾಸ್ತವ ಕಾರಣ ಗೊತ್ತಾಗದಿರದು:

ಸಬಲತೆ-ದುರ್ಬಲತೆಗಳಿಂದ ಕೂಡಿದ ಜನಸಮುದಾಯಕ್ಕೆ, ಸರ್ವೇಸಮಾನವಾದ ಸಂರಕ್ಷಣೆಯ ರಾಜ್ಯಶಾಸನ ಬೇಕು. ಇಹಲೋಕದ ಸುಖದಲ್ಲಿ ತೃಪ್ತಿ ಕಾಣದ ಕುತೂಹಲಿಗಳಾದ ವ್ಯಕ್ತಿಗಳಿಗೆ ಧರ್ಮಶಾಸನದ ಆಧ್ಯಾತ್ಮಿಕ ಸಮಾಧಾನ ಬೇಕು. ಹಿಂದಿನಕಾಲದಲ್ಲಿ ಸಮಾಜವು, ಶ್ರದ್ಧೆಯಿಂದ— ವಿಶ್ವಾಸದಿಂದ— ಒಬ್ಬೊಬ್ಬರ ಕಡೆಗೆ ಇದನ್ನು ಒಪ್ಪಿಸಿ ಕೊಟ್ಟು, ಅವರ ಶಾಸನಗಳಂತೆಯೆ ನಡೆದುಕೊಳ್ಳುತ್ತಲಿತ್ತು. ಬಲಿಷ್ಠವಾದ ರಾಜ್ಯಶಾಸನ ಸಮಾಜದ ಭೌತಿಕಸಮಾಧಾನಕ್ಕೆ ಕಾರಣವಾಗುತ್ತಿತ್ತು. ಆದರ್ಶವನ್ನು ಬೋಧಿಸುತ್ತಿದ್ದ ಧರ್ಮಶಾಸನ ಆಧ್ಯಾತ್ಮಿಕ ಶಾಂತಿಗೆ ಕಾರಣವಾಗುತ್ತಿತ್ತು. ಅಂದಿನವರಿಗೆ—ಕಾಣದಿರುವ ಆ ಸೃಷ್ಟಿನಿಯಾಮಕನೂ ದೇವರು; ಕಣ್ಣಿಗೆಕಾಣುವ ಆ ಸಮಾಜನಿಯಾಮಕನಾದ ದೊರೆಯೂ ದೇವರು. ಆದುದರಿಂದಲೆ ಸಮಾಜ ನಿಯಮನದ ಸೂತ್ರಗಳೆಲ್ಲವೂ ರಾಜ್ಯಶಾಸನದ ಕಡೆಗೆ ಇದ್ದುಬಿಟ್ಟಿದ್ದುವು. ಆ ಶಾಸನ ರಾಜನೆಂಬ ಸರ್ವಾಧಿಕಾರಿಯ ಕಡೆಗೆ ಇದ್ದುಬಿಡುತ್ತಿದ್ದಿತು. ಜನತೆ ಅದರಲ್ಲಿ ಯಾವ ರೀತಿಯಿಂದಲೂ ಕೈ ಹಾಕುವ ಸ್ವಾತಂತ್ರ್ಯವನ್ನು ಇಟ್ಟುಕೊಂಡಿರಲಿಲ್ಲ. ಆದುದರಿಂದಲೆ ರಾಜಕಾರ್ಯದಲ್ಲಿ ಪಕ್ಷ-ಪಂಗಡಗಳು ತಲೆದೋರಬೇಕಾದ ಕಾರಣವಿರಲಿಲ್ಲ. ರಾಜಶಾಸನ ಜನರೆಲ್ಲರಿಗೂ ಒಂದೆ ಬಗೆಯಿಂದ ಸಂರಕ್ಷಣಕಾರಿಯಾಗಿತ್ತು—ಶಿಕ್ಷಾಕಾರಿಯಾಗಿತ್ತು.

ಇಂದಿನ ರಾಜಕಾರ್ಯ ಹಾಗಿಲ್ಲ. ಭಾರತವನ್ನು ಆಳುವ ಸ್ವಾತಂತ್ರ್ಯ ಹಿಂದಿನಂತೆ ಭಾರತೀಯ ದೊರೆಯ ಕಡೆಗೆ ಇಲ್ಲ; ಇಂದು ಬಿಕ್ಕ ಕಡೆಗಿದ್ದಂತೆ ಭಾರತೀಯ ಜನರ ಕಡೆಗೂ ಇಲ್ಲ. ಸ್ವಾತಂತ್ರ್ಯದ ಎಲ್ಲ ಸೂತ್ರಗಳೂ ಅನ್ಯರ ಕಡೆಗೆ. ಆದುದರಿಂದಲೆ ಭಾರತೀಯರ ದುಡಿತದ ಪ್ರತಿಫಲ ಭಾರತೀಯರಿಗೆ ಸಿಕ್ಕುತ್ತಲಿಲ್ಲ. ಭಾರತದಲ್ಲಿ ಬೆಳೆದ ಅನ್ನ-ಅರಿವೆ ಭಾರತೀಯರ ಬದುಕಿಗೆ ಉಪಯೋಗವಾಗುತ್ತಲಿಲ್ಲ. ಭಾರತೀಯರ ಆಧಿಭೌತಿಕ ಸಮಾಧಾನ ಯಾವರೀತಿಯಿಂದಲೂ ಇಂದಿನ ರಾಜ್ಯಶಾಸನದಿಂದ ಆಗುತ್ತಿಲ್ಲ. ಈ ಅಸಮಾಧಾನಕ್ಕೆ ಕಾರಣ ತಿಳಿಯದೆ ಜನತೆ ಕಂಗೆಟ್ಟು ಹೋಗಿರುವುದು; ಅಪರಾಧದ ಆಭಾಸವನ್ನು ಯಾರಲ್ಲಿಯೊ ಕಂಡು, ತನ್ನೊಳಗೆ ತಾನೇ ಬಡಿದಾಟ ನಡೆಸಿರುವುದು.

ನಮ್ಮಲ್ಲಿಯ ರಾಜ್ಯಶಾಸನವೀಗ ಎರಡು ಮುಖದಿಂದ ಸಾಗಿದೆ. ಒಂದು ನಿಜವಾದ ಸರ್ವಾಧಿಕಾರಿತ್ವದ ಮುಖ; ಇನ್ನೊಂದು ಸೋಗಿನ ಪ್ರಜಾಪ್ರಭುತ್ವದ ಮುಖ. ಸ್ವಾರ್ಥವನ್ನು ಸಾಧಿಸಬೇಕಾಗಿರುವ ಆ ಸರ್ವಾಧಿಕಾರಿತ್ವ ಈ ಸೋಗಿನ ಪ್ರಜಾಪ್ರಭುತ್ವವನ್ನು ತನ್ನ ಸಹಕಾರಿಯನ್ನಾಗಿ ಮಾಡಿಕೊಂಡು, ಸಾಕಷ್ಟು ಕೃತಕೃತ್ಯತೆಯನ್ನು ಪಡೆದಿದೆ. ಈ ಪ್ರಜಾಪ್ರಭುತ್ವದ ಕರಟಕ ಇನ್ನಾವ ಒಳ್ಳೆಯದನ್ನೂ ಮಾಡಲಾರದಾದರೂ, ಪ್ರಜೆಗಳಲ್ಲಿ ಪಕ್ಷ-ಪಂಗಡಗಳನ್ನು ಹುಟ್ಟಿಸುವ ಕಾರ್ಯವನ್ನು ಚೆನ್ನಾಗಿ ಮಾಡಬಲ್ಲದು. ಅದರಂತೆ ಮಾಡಿಯೂ ಬಿಟ್ಟಿದೆ. ನಮ್ಮಲ್ಲಿಯ ಪ್ರಜಾಪ್ರಭುತ್ವದ

(೧೧೮ ನೆಯ ಪುಟ ನೋಡಿರಿ.)



ಡಾಂಬರ ಮೀಮಾಂಸೆ

ಶ್ರೀ. ರಾಜಗೋಪಾಲಾಚಾರಿಯವರು ಒಂದು ಸಭೆಗೆ ಹೋಗುವಾಗ, ಯಾರೋ ಡಾಂಬರವ (ಕೀಲೆಣ್ಣೆಯ) ನ್ನು ಅವರ ಮೇಲೆ ಸುರುವಿದರಂತೆ. ಇದಕ್ಕಾಗಿ ಆಚಾರ್ಯರೆ ಸಿಟ್ಟಿಗೆ ಬಾರದಿದ್ದಾಗ, ಮಿಕ್ಕವರೆಲ್ಲ ಕನಲಿದ್ದು ಮಂಗರಾಯನಿಗೆ ಆಶ್ಚರ್ಯವನ್ನುಂಟುಮಾಡಿದೆ. ಯಾಕೆಂದರೆ ನಿಜವಾಗಿ ಇದು ವಿಚಾರಸ್ವಾತಂತ್ರ್ಯದ ಲಕ್ಷಣ; ಎಂದರೆ ನಮ್ಮ ತರುಣರಿಗೆ ಡಾಂಬರವನ್ನು ಸಭೆಯವರೆಗೆ ತರಬೇಕೆಂಬ ಸ್ವತಂತ್ರವಿಚಾರ ಬಂದುದು ನಮ್ಮ ಪ್ರಗತಿಯ ದ್ಯೋತಕವಲ್ಲವೆ? ಅಥವಾ— ಸ್ಪಷ್ಟ ಮಾತನಾಡುವುದಕ್ಕೆ ಕ್ಷಮೆ ಇರಲಿ— ಯಾರೂ ಡಾಂಬರವನ್ನು ಚೆಲ್ಲಿರಲಿಕ್ಕೇ ಇಲ್ಲ. ಸಭೆಯಾದದ್ದು ಮುಂಬಯಿ ನಗರದ ಮಾತುಂಗದ ಭಾಗದಲ್ಲಿ. ಮಾತುಂಗದಲ್ಲಿ ಹೆಚ್ಚಾಗಿ ಮದ್ರಾಸಿಗಳೇ ತುಂಬಿರುವರು. ಮದ್ರಾಸಿನ ಮುಂದಾಳಾದ ರಾಜಗೋಪಾಲಾಚಾರಿಯವರ ಮೇಲೆ ಮದ್ರಾಸಿಗಳೇ ಹೀಗೆ ಕೈ ಎತ್ತುವುದು ಎಂದಿಗೂ ಶಕ್ಯವಿಲ್ಲ. ಬದಲೆಂದರೆ ಆಚಾರ್ಯರನ್ನು ಸ್ವಾಗತಿಸುವ ಉತ್ಸಾಹದಲ್ಲಿ, ಯಾರೋ ಕೈತುಂಬಿ ನೀರು ಚೆಲ್ಲಿರಬಹುದು. ಮದ್ರಾಸಿಯ ಕೈಯಿಂದ ಬಂದ ನೀರು ಡಾಂಬರದಂತೆ ಕಂಡರೆ ಆಶ್ಚರ್ಯವೇನು? ಅಥವಾ—ಹೀಗಿರಬಹುದೆ? ಯಾವಾಗಲೂ ಪುರಾಣಕತೆಗಳ ಉಪಮೆಯನ್ನು ತಮ್ಮ ಉಪನ್ಯಾಸಗಳಲ್ಲಿ ರಾಜಾಜಿಯವರು ಕೊಡುತ್ತಿರುವುದರಿಂದ, ಅವರಿಗೆ ಅರ್ಥವಾಗುವಂತೆ—ಉಪಮೆಗಾಗಿ—ಶಿವನಿಗೆ ತಟ್ಟಿದ ವಿಷದಂತೆ ಆಚಾರ್ಯರಿಗೆ ಕೀಲೆಣ್ಣೆಯನ್ನು ಕವಿದಿರಬಹುದೆ? ರಾಜಾಜಿಯವರೂ ಸದ್ಯಕ್ಕೆ ಶಿವನಂತೆ ಸ್ಮಶಾನವಾಸಿಗಳಾಗಬೇಕಾಗಿದೆ—ಅಲ್ಲವೆ? ಅಥವಾ— ಬೆಚ್ಚಗೆ ಹೇಳುವುದೇನು? ಒಂದಾನೊಂದು ಕಾಲದಲ್ಲಿ ರಾಜಾಜಿಯವರು ಮಹಾತ್ಮರಿಗೆ ಬಲಗೈಯಾಗಿದ್ದರು. ಬಲಗೈ ಕಳಚಿತು, ಮಸಿಯ ಪಾತಿ ಉರುಳಿತು. ಅಥವಾ—ಕೊನೆಯದಾಗಿ— ಒಬ್ಬ ಮದ್ರಾಸಿ ಬಿದ್ದನೆಂದು ಇನ್ನೊಬ್ಬ ಮದ್ರಾಸಿ ಹುರುಪಿನಿಂದ ಮೀಸೆ ತಿದ್ದುವಾಗ, ಅವನ ಕೈಯಿಂದ ಮೀಸೆಗೆ ಹಚ್ಚುವ ಬಣ್ಣ ಸಿಡಿದಿರಬಾರದೇಕೆ?

* * *

ಮಂಗನಿಗೇಕೆ ಮಹಾತ್ಮರ ಗೊಡವೆ?

'ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ಬ್ರಿಟಿಶರು ಭಾರತವನ್ನು ಬಿಡಬೇಕೆಂದು ಮಾಡಿದ ಗೊತ್ತುವಳಿಯ ಬಗ್ಗೆ ಎಲ್ಲರೂ ಹೇಳಿಕೆಗಳನ್ನು ಹೊರಡಿಸಿದ್ದಾರೆ, ಈ ವಿಷಯ ಮಂಗರಾಯನ ಅಭಿಪ್ರಾಯವೇನು?' ಎಂದು ಕೆಲ ವಾಚಕರು ಕುತೂಹಲವನ್ನು ವ್ಯಕ್ತಪಡಿಸಿದ್ದಾರೆ. ಆದರೆ ಮಂಗರಾಯನು ಹೇಳಿಕೆಗಳನ್ನು ಹೊರಡಿಸುವ ಜಾತಿಯ ಮುಂದಾಳು ಅಲ್ಲ ಎಂಬುದು ಅನೇಕ ವಾಚಕರಿಗೆ ಹೊಳೆದಿಲ್ಲ ಎಂಬುದನ್ನು ಮಂಗರಾಯನು ವಿಷಾದದಿಂದ ಒಪ್ಪಿಕೊಳ್ಳಬೇಕಾಗಿದೆ. ಮಂಗರಾಯನಿಂದ ಪ್ರಮಾದ ಘಟಿಸುವಂತಿಲ್ಲ. ಮಂಗರಾಯನಿಗೆ ಪ್ರಾಯಶ್ಚಿತ್ತವಿಲ್ಲ, ಮೌನಸೇವೆಯ ಅಗತ್ಯವಿಲ್ಲ; ಆದಕಾಗಿ ಹೇಳಿಕೆಗಳನ್ನು ಹೊರಡಿಸುವ ರೂಢಿಯು ಮಂಗರಾಯನಿಗಿಲ್ಲ. ಇದಲ್ಲದೆ ಕಾಂಗ್ರೆಸಿನಂತಹ ಕರ್ಮನಿಷ್ಠ ಸಂಸ್ಥೆಯ ಗೊತ್ತುವಳಿಯ ಬಗ್ಗೆ ಮಂಗರಾಯನ ಅಭಿಪ್ರಾಯವೆ? ಶಾಂತಂ ಪಾಪಂ! ಉಫ್ ಅಂಧೂಪಂ!! ಇಂತಹರನ್ನು ಹೊರಗೆ ಹಾಕಬೇಕೆಂದು ಕಾಂಗ್ರೆಸು ನಿಶ್ಚಯಿಸಿದರೆ ಅಸಾಧ್ಯವೆ? ಪಾಪ! ಸುಭಾಷಚಂದ್ರ ಬೋಸರನ್ನು ಕೇಳಿರಿ (ಅವರ ಪೋಸ್ಟಲ್ ವಿಳಾಸ ಗೊತ್ತಿದ್ದರೆ). ನಾಗಪುರದ ಡಾಕ್ಟರ್ (ಈಗ 'ಪೇಶಂಟ್'ರಾಗಿದ್ದಾರೊ ಏನೊ!) ಖರೆ ಎಂಬವರನ್ನು ಕೇಳಿರಿ; ....ಅಷ್ಟೇಕೆ? ನಮ್ಮ ವೀರ ನರೀಮನರು ಟ್ಯಾಕ್ಸಿ ಡ್ರೈವರ್ ಸಂಘಗಳಲ್ಲಿ ಮಾತನಾಡುವುದನ್ನು ಕೇಳಿರಿ ಕೊನೆಗೆ ಚಕ್ರವರ್ತಿ (!) ರಾಜಗೋಪಾಲಾಚಾರಿ ಎಂಬುವರನ್ನು ಕೇಳಿಕೊಳ್ಳಿರಿ. ತಾತ್ಪರ್ಯವೇನೆಂದರೆ, ತಮ್ಮವರನ್ನು ಕೂಡಾ ಹೊರಗೆ ಹಾಕುವ ಧೈರ್ಯವಿದ್ದ ಕಾಂಗ್ರೆಸಿನ ಹಿರಿಹುದ್ದರಿಗಳು—ಈಗಾಗಲೆ ಇಷ್ಟು ಜನರನ್ನು ಹೊರಗೆ ಹಾಕಿ ಸಾಕಷ್ಟು ರೂಢಿಯೂ ಆದುದಕ್ಕಾಗಿ—ಅಥವಾ ಅಂಗೈ ಮಾಹಾತ್ಮ್ಯಕ್ಕೆ ಮಂಗಯ್ಯನ ಭಾಷ್ಯವೇಕೆ? ಕಳೆದುಹೋದುದಕ್ಕೆ ಚಳವಳವೇಕೆ— ಅಲ್ಲಲ್ಲ, ಕ್ಷಮಿಸಿರಿ— ಹಳಹಳಿಯೇಕೆ?

* * *

ಒಂದೇ ಆಣೆಯ 'ಅಗ್ಗರಲೇಖ'

ಮಂಗರಾಯನು ಯಾವಾಗಲೂ ಉಪಯೋಗಿಸುತ್ತಿರುವ 'ಅಗ್ಗರಲೇಖ' ಎಂಬ ಪದಕ್ಕಾಗಿ ಕೆಲ ವಾಚಕರು ಭ್ರಮೆಗೊಂಡಂತಿದೆ. ನಿಜ. ಮಂಗರಾಯನು ಉಪಯೋಗಿಸುತ್ತಿದ್ದ ಪದವು ರೂಢಿಯಲ್ಲಿದ್ದ ಸಂಸ್ಕೃತ 'ಅಗ್ರಲೇಖ' ಎಂಬ ಪದದ ಅಚ್ಚಕನ್ನಡ ರೂಪಾಂತರ. ಆದರೆ ಮೂಲ ಅರ್ಥದಲ್ಲಿ ಸದ್ಯಕ್ಕೆ ಕನ್ನಡ ಪತ್ರಿಕೆಗಳಲ್ಲಿ ಕಂಡುಬರುತ್ತಿಲ್ಲವಾದ್ದರಿಂದ, ಮಂಗರಾಯನು ಕನ್ನಡ ರೂಪಾಂತರವನ್ನೆ ಉಪಯೋಗಿಸಬೇಕಾಗಿದೆ. 'ಅಗ್ರಲೇಖ' ಎಂಬ ಸಂಸ್ಕೃತ ಶಬ್ದದಲ್ಲಿ ಎರಡು ಪದಗಳಿವೆ; ಅಗ್ರ+ಲೇಖ. ಅಗ್ರ ಎಂದರೆ ಮುಂದೆ ಎಂದರ್ಥ. ಮುಂದೆ ಇದ್ದ ಲೇಖವನ್ನು ನೋಡಿ ಬರೆವುದಕ್ಕೆ 'ಅಗ್ರಲೇಖ' ಎಂದರ್ಥ. ಉದಾಹರಣೆಗಾಗಿ, ಒಂದು ಇಂಗ್ಲಿಶ್ ಪತ್ರಿಕೆಯನ್ನು ಮುಂದಿಟ್ಟುಕೊಂಡು ಬರೆವುದು—ಇದ್ದುದನ್ನು ಇದ್ದಂತೆಯೆ ಬರೆವುದು. ಆದರೆ ಕನ್ನಡ ಪತ್ರಿಕೆಗಳು ಹೀಗೆ ಬರೆಯುವುದಿಲ್ಲ. ಮುಂದಿದ್ದ ಇಂಗ್ಲಿಶ್ ಲೇಖವನ್ನು ಇದ್ದಂತೆಯೆ ಬರೆಯದೆ, ಅಲ್ಲೊಂದು ಇಲ್ಲೊಂದು ಎತ್ತಿ—ಅರ್ಥಾತ್ ತಿಳಿದಷ್ಟೆ ಬರೆವ ಸುಲಭ ಕೆಲಸವನ್ನು ಕನ್ನಡ ಪತ್ರಿಕೆಗಳು ಲೇಖಿಸುವುವು. ಈ ರೀತಿ ಅಗ್ಗವಾದುದರಿಂದ ಅದಕ್ಕೆ 'ಅಗ್ಗರಲೇಖ' ಎಂದು ಮಂಗರಾಯನು ಹೆಸರಿಟ್ಟದ್ದು. ಸದ್ಯಕ್ಕೇನೊ ಯುದ್ಧದ ನಿಮಿತ್ತವಾಗಿ ಇಂಗ್ಲಿಶ್ ಪತ್ರಿಕೆಗಳ ಬೆಲೆ ಏರಿದ್ದರಿಂದ ತಾತ್ಕಾಲಿಕವಾಗಿ 'ತುಟ್ಟಾಗ್ಗರಲೇಖ' ಎಂದು ಶಬ್ದವನ್ನು ಬದಲಾಯಿಸಲೂ ಮಂಗರಾಯನು ಸಿದ್ಧನಿದ್ದಾನೆ. ಸಾರಾಂಶ, ಅಗ್ಗರಲೇಖಗಳ ಸ್ವರೂಪ

ಹೀಗಿರುವುದರಿಂದಲೆ 'ಸಂಪಾದಕರು ಅದಕ್ಕೆ ಹೊಣೆಗಾರರಲ್ಲ' ಎಂದು ಹೇಳುವುದುಂಟು. ನಮ್ಮ ತಾತ್ಕಾಲಿಕವಾಗಿ ಯಾವುದು ಅಗ್ಗವೊ —ಕನ್ನಡಮಾತೆಯೆ ಆಗಲಿ, ಭಾರತಮಾತೆಯೆ ಆಗಲಿ—ಅಥವಾ ಹೆಚ್ಚಾದರೂ ಯಾಕೆ ? ಏನಿದ್ದರೂ ಬೆಲೆ ಒಂದೇ ಆಣೆ ಎಂದು ಬರೆವವರ ಒಪ್ಪುವಾಗ--

ಬರೆದುದು ಆಣೆ, ಮಂಗ
ಬರೆದವನೂ ಆಣೆ ,,

* * *

ಬೆಳಗಾಂವಿಯ ಬೋರ್ಡ್ ಪುರಾಣ

ಬೆಳಗಾಂವಿಯ ಕನ್ನಡಿಗರೊಬ್ಬರಿಂದ ಮಂಗರಾಯನಿಗೆ ಕನಿಕರದ ಕಾಗದವೊಂದು ಬಂದಿದೆ. ಕಳವಳದಿಂದ ಮುಂಗಾಣದವರಾಗಿಯೆ ಅವರು ಅದನ್ನು ಬರೆದಿದ್ದಾರೆ. ಪತ್ರದಲ್ಲಿಯ ಸಂಗತಿ ಹೀಗಿದೆ :

" ಬಾಲದ ಬಂಟ ! ಕನ್ನಡದ ನಂಟ !

ಬೆಳಗಾಂವಿಯ ಜಿಲ್ಲಾ ಬೋರ್ಡಿಗೆ ಈ ಸಲ ಶ್ರೀಮಾನ್ ಅರಗಾಂವಿ ಬಸಪ್ಪನವರು ಅಧ್ಯಕ್ಷರಾಗಿ ಆರಿಸಲ್ಪಟ್ಟಿದ್ದಾರೆಂಬುದನ್ನು ಕೇಳಿ 'ನಿಜವಾದ ಕನ್ನಡಿಗರು ಈ ಸಲ ಬಂದರು' ಎಂದು ಅಭಿಮಾನದಿಂದ ಕುಣಿದಾಡಿದ್ದೆ; ಆದರೆ ಅವರ ಅಧ್ಯಕ್ಷತೆಯಲ್ಲಿ ನಡೆದ ಮೊದಲನೆಯ ಸಭೆಯಲ್ಲಿಯೆ ಕನ್ನಡದ ಕೊರಳಿಗೆ ದೊರೆತ ಅರ್ಧಚಂದ್ರದ ಸುದ್ದಿಯನ್ನು ಕೇಳಿ ಬಸವಳಿದು ಬಿದ್ದುಬಿಟ್ಟೆ. ಕನ್ನಡಿಗರೆನಿಸಿಕೊಳ್ಳುವವರೂ ಕನ್ನಡವನ್ನು ಹೀಗೆ ಕೀಳ್ಗಳೆಯುತ್ತ ಬೀಳ್ಗಳೆಯುತ್ತ ನಡೆದರೆ, ಬೆಳಗಾಂವಿಯಲ್ಲಿ ಕನ್ನಡಕ್ಕೆ ಗತಿ ಏನು ? ಒಳಗಿನವರಿಂದ ಈ ಬಗೆಯ ಒಳಹೊಡೆತ, ಹೊರಗಿನವರಿಂದ ದಾಳಿಯ ಮೇಲೆ ದಾಳಿ ! ಹೀಗಾದರೆ ನಾವು ಮಾಡಬೇಕೇನು ? 'ನೀವು ಕನ್ನಡಿಗರು, ಕನ್ನಡದಲ್ಲಿಯೆ ಮಾತನಾಡಬೇಕು' ಎಂದು ಹೇಳಿದರೆ 'ಇದು ಮರಾಟಿಗರ ದ್ವೇಷ' ಎಂದು ನಮ್ಮವರೂ ಹೊರಗಿನವರೂ ಕೂಡಿಯೆ ಬೊಬ್ಬೆಯೆಬ್ಬಿಸುವರು. 'ನೀವು ಕನ್ನಡ ನಾಡಿನಲ್ಲಿಯೆ ಇದ್ದೀರಿ! ಇಲ್ಲಿಯ ಸಾರ್ವಜನಿಕ ಜೀವನದಲ್ಲಿ ಭಾಗವಹಿಸುವುದಾದರೆ ಕನ್ನಡ ಕಲಿಯಲೆ ಬೇಕು!' ಎಂದು ಯಾರಾದರೂ ಇಲ್ಲಿಯ ಮರಾಟಿಗರಿಗೆ ಹೇಳಿದರೆ 'ಇದು ನಮ್ಮ ಸ್ವಾತಂತ್ರ್ಯದ ಮೇಲೆ ಹಾಕುವ ಆಘಾತ' ಎಂದು ಮರಾಟಿಗರು ಕೂಗು ಎಬ್ಬಿಸುವರು. ಕನ್ನಡಿಗರೆಂದು ಹೇಳಿಕೊಳ್ಳುವ ಕೆಲವರೂ ಅವರ ದನಿಗೆ ದನಿ ಕೂಡಿಸುವರು. ಕನ್ನಡಿಗರಾದ ನಾವು ನಮ್ಮ ಹಕ್ಕುಗಳ ಸಂರಕ್ಷಣೆಗಾಗಿ ಏನು ಮಾಡಬೇಕೆಂಬುದೇ ತಿಳಿಯದಾಗಿದೆ. ನಿನಗೇನಾದರೂ ಹೊಳೆದರೆ ನಮಗೆ ಬೆಳಕು ತೋರಿಸಿ, ಈ ಕತ್ತಲೆಯಿಂದ 'ಕೈಹಿಡಿದು' ನಡೆಸಬೇಕು ! "

ಕಳವಳಿಸುವ ಕನ್ನಡಿಗರೆ, ಮಂಗರಾಯ ಮೈ ಕೆರೆಯುತ್ತಿರುವ. ಹಲ್ಲು ಕಿರಿಯುತ್ತಿರುವ. ಬೆಳಗಾಂವಿಯ ಕನ್ನಡದ ಒಗಟವೇ ಅವನಿಗೆ ಬಿಡಿಸಲಿಕ್ಕೆ ಬಾರದಂತಾಗಿದೆ. ಹಾಂ! ಕೇಳಿಕೇಳಿ! ಬೆಳಗಾಂವಿಯ ಕಾಂಗ್ರೆಸ್ ಮುಂದಾಳುಗಳಿಲ್ಲ ಮರಾಟಿಯಲ್ಲಿಯೆ ತಮ್ಮ ಕಾರ್ಯ ನಡೆಯಿಸುವ ಸಂಪ್ರದಾಯವಿದೆಯಲ್ಲವೆ ? ಜಿಲ್ಲಾ ಬೋರ್ಡಿನ ಅಧ್ಯಕ್ಷರಾದ ಅರಗಾಂವಿ ಬಸಪ್ಪನವರು ಆ ಸಂಪ್ರದಾಯದ 'ನಿಶಾಣ'ವನ್ನೇ ಎತ್ತಿ ಹಿಡಿದರೆ ಅದರಲ್ಲಿ ಅವರ ತಪ್ಪೇನಿದೆ? ಅವರು ಕನ್ನಡಿಗರೆಂದು ನೀವು ಭಾವಿಸಿದ್ದುದು ತಪ್ಪೇನೂ ಅಲ್ಲ. ಹಿಂಬಾಳುಗಳಾಗಿರುವಾಗ ಅವರು ಕನ್ನಡಿಗರೇ ಇದ್ದರು. ಅಧ್ಯಕ್ಷರಾದರು, ಮುಂದಾಳುತನ ಬಂದಿತು ; ಮರಾಟಿಗರಾದರು. ಈ ಗುರುಪರಂಪರೆ ಕನಿಷ್ಠಪಕ್ಷ ಗುರುಗಳು ಬದುಕಿರುವವರೆಗಾದರೂ ನಡೆಯಬೇಕಲ್ಲವೆ? ನಾಳೆ ನಿಮಗೂ ಮುಂದಾಳುತನ ಬರಲಿ ; ಆಗ ನೋಡಿ, ನೀವೂ ಈ ಗುರುಪರಂಪರೆಯನ್ನು ಎತ್ತಿ ಹಿಡಿಯಲೇ ಬೇಕಾಗುವುದು. ಹಾಗೆ ಎತ್ತಿ ಹಿಡಿಯದೆ ಹೋದರೆ ನಿಮಗೆ ಮುಂದಾಳುತನವೇ ಸಿಕ್ಕಲಾರದು. ಬೇಕಾದರೆ ನಾಮದಾರ್ ಲಟ್ಠೆಯವರನ್ನು ಕೇಳಿರಿ! ಪಾಪ! ನಾರಾಯಣರಾವ್ ಜೋಶಿಯವರನ್ನು ಕೇಳಿರಿ! ಇನ್ನು ಮರಾಟಿಯ ದ್ವೇಷದ ಕೂಗಿನ—ಬೊಬ್ಬೆಯ—ಹೆದರಿಕೆಯ ವಿಚಾರ! ನೀವು ದ್ವೇಷಮಾಡುತ್ತಲಿಲ್ಲವೆಂದು ಅವರು ಕೂಗು ಎಬ್ಬಿಸುತ್ತಾರೆ—ನೀವು ಹೆದರುತ್ತೀರಿ! ನೀವು ಇನ್ನು ಮೇಲೆ ನಿಜವಾಗಿ ದ್ವೇಷಮಾಡುವ ಪರಿಪಾಠವನ್ನು ಇಡಿರಿ; ಎಂದರೆ ಯಾರೂ ಕೂಗು-ಬೊಬ್ಬೆಗಳನ್ನೂ ಎಬ್ಬಿಸುವುದಿಲ್ಲ; ಎಬ್ಬಿಸಿದರೂ ನಿಜವಿದ್ದುದರಿಂದ ನೀವು ಹೆದರಬೇಕಾಗಿಲ್ಲ.

ಕನ್ನಡಕ್ಕೆ ಜೈ! ಮರಾಟಿಗೆ ಟೈ!

(೧೪೪ ನೆಯ ಪುಟದಿಂದ ಮುಂದುವರಿದುದು.)

ವನ್ನು ನೆರವೇರಿಸಿದರು. ಕನ್ನಡಕ್ಕೆ ತನು-ಮನೋ-ಧನಗಳಿಂದ ನೆರವಾಗುವುದಾಗಿ ಪ್ರತಿಜ್ಞೆ ಮಾಡಿದಂತೆ ಮಾತನಾಡಿ, ಕನ್ನಡಿಗರ ಅಭಿಮಾನವನ್ನು ಕುಣಿದಾಡಿಸಿಬಿಟ್ಟರು. ಹೋದ ವರ್ಷದ (ಜಮಖಂಡಿ) ಪ್ರಾರಂಭೋತ್ಸವ ಜರುಗಿಸಿದ ಮಹನೀಯರು (ದೇ. ಭ. ಗಂಗಾಧರರಾಯರು) ಸಭಾಮಂಟಪದಲ್ಲಿ ಹರಡಿದಂತಹ ಉತ್ಸಾಹವನ್ನು, ಈ ಸಲದ ಪ್ರಾರಂಭೋತ್ಸವಕಾರರಾದ ಸೊಂಡೂರು ಮಹಾರಾಜರು ಸ್ಮರಿಸಿಕೊಳ್ಳಲು ಹಚ್ಚಿದರು. ಯಾನಿಂದ ನೆರವು ಸಿಕ್ಕಬೇಕಾದರೂ ನಮ್ಮ ಕಾರ್ಯಶಕ್ತಿ ಮುಂದಾಗಿ ಕೆಲಸಮಾಡಬೇಕೆಂಬುದನ್ನು, ಅಂದು ಸಭೆಯಲ್ಲಿ ಉಲ್ಲಾಸದಿಂದ ಕುಣಿದಾಡಿ ಕಣ್ಣೀರುಸುರಿಸಿದ ಕನ್ನಡಿಗರು ಯಾವಾಗಲೂ ಮರೆಯಬಾರದೆಂದು ನನ್ನ ಪ್ರಾರ್ಥನೆ. (ಜಯಂತಿ ಸಂಪುಟ ೧. ಸಂಚಿಕೆ ೧೦) "

'ಏಹಂಗವು'ನ ಮಾತಿನ ಸತ್ಯತೆಯನ್ನು ಕನ್ನಡಿಗರು ಮರೆತು ನಡೆಯಲಾಗದು. ಪ್ರಜೆಗಳು ತಮ್ಮ ಆದರ್ಶವನ್ನೂ ಕರ್ತವ್ಯ ಜಾಗೃತಿಯನ್ನೂ ಅರಿತುಕೊಂಡು ನಡೆದರೆ ಯಾವ ಸಾರ್ವಭೌಮನ ಬಲುಮೆಯು ಶಾಸನವೂ ಏನನ್ನೂ ಮಾಡಲಾರದೆಂದುದು ಎಲ್ಲರ ನೆನಪಿನಲ್ಲಿ ಇರಲಿ. ಸೊಂಡೂರಿನವರೂ ಸುಮ್ಮನಿರದೆ ತಮ್ಮ ಹಕ್ಕನ್ನು ಸಂರಕ್ಷಿಸಿಕೊಳ್ಳಲಿ !

—ಸಂ. ಕ. ಸ್ವ.

ಕಳೆದ ಮಹಾಯುದ್ಧದ ನಂತರದ ಕೆಲವು ಆರ್ಥಿಕ ಸ್ಥಿತ್ಯಂತರಗಳು

ಶ್ರೀ. ನಾಳ್ವೀಕರ ಗುರುರಾಯರು ಎಲ್‌ಎಲ್. ಬಿ. ಹುಬ್ಬಳ್ಳಿ

ಲೇಖಾಂಕ ೧

ಐ. ಸಿ. ಎಸ್. ಜನರ ಸರ್ವಜ್ಞತಾಭಾವದ ಅಹಂಮನ್ಯತೆಯಿಂದ, ದೇಶದಲ್ಲಿ ಆರ್ಥಿಕ ವ್ಯವಸ್ಥೆಯು ಕೆಟ್ಟುಹೋಯಿತು. ಆದರೂ ಆಳುವ ಸರಕಾರವು ಆ ಐ. ಸಿ. ಎಸ್. ಜನರ ಬೆನ್ನನ್ನೆ 'ಭಲೆ' ಎಂದು ತಟ್ಟಿತು!

★

ಕಳೆದ ಮಹಾಯುದ್ಧದಲ್ಲಿ ಬ್ರಿಟಿಶರಿಗೆ ಭಾರತೀಯರು ಪರಿಪರಿಯಾಗಿ ಮಾಡಿದ ನಾನಾತರದ ಸಹಾಯದ ಸಂಕ್ಷೇಪ ವಿವೇಚನೆಯನ್ನು ಜಯಂತಿಯಲ್ಲಿ ಈ ಮೊದಲೇ ಮಾಡಿದ್ದೇನೆ. ಮಹಾಯುದ್ಧದ ನಂತರ ಬ್ರಿಟಿಶರಿಗೆ ಈ ನಮ್ಮ ಯಾವ ನೆರವಿನ ನೆನಪೂ ಉಳಿಯಲಿಲ್ಲ. ಬ್ರಿಟಿಶರ ಆಡಳಿತದಲ್ಲಿ ಹಿಂದೀ ಜನರ ಹಿತದ ದೃಷ್ಟಿಯಿಂದ ಆಗಬೇಕಾದ ಬದಲಾವಣೆಗಳು ಆಗಲಿಲ್ಲ. ಸತ್ತ್ವಹರಣದ (exploitation) ಧೋರಣವು ಅಚ್ಚಳಿಯದೆ ಉಳಿದಿದೆ. ಕರಗಳು ಹೆಚ್ಚಾದುವು. ಬಡಬಗ್ಗರ ಗೋಳನ್ನು ಕೇಳುವವರಾರು? ಜೀವಿತಕ್ಕೆ ಅತ್ಯವಶ್ಯವಾದ, ಎಲ್ಲರಿಗೂ ಪ್ರತಿನಿತ್ಯ ಬೇಕಾದ ಉಪ್ಪಿನ ಮೇಲೆ ಸಹ ಕರ ಕೂಡಿಸುವ ಶ್ರೇಯಸ್ಸನ್ನು ಆಳರಸರು ಪಡೆದುಕೊಂಡರು. ಬ್ರಿಟಿಶರ ಹೇಳಿಕೆಯಂತೆ ಕಾನೂನುಗಳನ್ನು ನಿರ್ಮಾಣಮಾಡುವುದಕ್ಕಾಗಿ ಅಸ್ತಿತ್ವದಲ್ಲಿ ಬಂದ ಕಾನೂನು ಮಂಡಳಗಳಿಂದ ಆಗುವುದೇನು? ಈ ಮಂಡಳಗಳಿಗೆ ಇರುವ ಅಧಿಕಾರವೆಷ್ಟು? ಅಲ್ಲದೆ ಇಬ್ಬಣ ಮಾಡುವ ನೀತಿಯಲ್ಲಿ ನಿಪುಣರಾದ ಬ್ರಿಟಿಶ್ ಆಳರಸರ ಆಳಿಕೆಯಲ್ಲಿ, ಭಾರತೀಯರಿಗೆ ಒಂದುಗೂಡುವುದಕ್ಕೆ ಆಸ್ಪದ ಉಳಿಯಬೇಕಾದರೂ ಹೇಗೆ? ಆಯ-ವ್ಯಯದ ವಿಷಯದಲ್ಲಿ "Voted" and "non-voted" ಎಂದು ಭಾಗಗಳಾದುವು. ಶಿಕ್ಷಣ, ಆರೋಗ್ಯ ಮುಂತಾದ ಖಾತೆಗಳಿಗೆ ಹೆಚ್ಚಿನ ಹಣ ಬೇಕಾದರೆ, ಹೆಚ್ಚಿನ ಕರ ಕೂಡಿಸಿದ ಹೊರತು ಗತ್ಯಂತರವಿರದಂತಾಯಿತು. ದ್ವಿದಲ ಪದ್ಧತಿಯ (Diarchy) ದುಷ್ಪರಿಣಾಮಗಳಿಗೆ ಎಣೆಯೆ ಇಲ್ಲ. ಮಹಾಯುದ್ಧದ ನಂತರ ಎಲ್ಲವೂ ಒಳಿತಾಗುವುದು, ಸುಸ್ಥಿತಿ ಬರುವುದೆಂದು ಜನರ ತಿಳಿವಳಿಕೆಯಾಯಿತು. ಇದಲ್ಲದೆ ನೀತಿವಂತ—ಕೃತಜ್ಞ—ಬ್ರಿಟಿಶರು, ಭಾರತೀಯರು ಮಾಡಿದ ಸಹಾಯಕ್ಕಾಗಿ ಅವರ ಆರ್ಥಿಕಸ್ಥಿತಿ ಸುಧಾರಿಸುವ ಬಗ್ಗೆ ಹೊಸ ಯೋಜನೆಗಳನ್ನು ತಯಾರಿಸುವರೆಂದೂ ಜನರು ಭಾವಿಸಿದರು. ಆದರೆ ಅದರ ಬದಲು, ಹುಂಡಿಯ ದರದ ಏರಿಳಿತದಿಂದ ಮಹಾ-ಯುದ್ಧದ ಕಾಲದಲ್ಲಿ ಆದ ಲಾಭವು ಮಾಯವಾಯಿತು. ಆಡಳಿತದ ವೆಚ್ಚವು ವಿಪರೀತ ಬೆಳೆಯಿತು. ಕೆಂಪು ಕಪ್ಪು ಅಧಿಕಾರಿಗಳ ಸಂಬಳಗಳು ಅತಿ ಹೆಚ್ಚಾದುವು. ಪ್ರಾಂತಿಕ ಹಾಗು ಮಧ್ಯವರ್ತಿ ಸರಕಾರಗಳಲ್ಲಿ ಆಯಕ್ಕಿಂತ ವ್ಯಯ ಹೆಚ್ಚಾಯಿತು. ನಿತ್ಯದ ಖರ್ಚಿಗಾಗಿ ಸಹ ಸಾಲ ಮಾಡುವ ಪ್ರಸಂಗ ಬಂದಿತು.

ಮೇಳವಿಲ್ಲದ ಮುಂಗಡ ಪತ್ರಿಕೆಗಳು

ಆಯಕ್ಕಿಂತ ವ್ಯಯ ಹೆಚ್ಚಿರುವ ಮುಂಗಡ ಪತ್ರಿಕೆಗಳನ್ನು, ಕಾನೂನು ಮಂಡಳಗಳಲ್ಲಿ ಮಂಜೂರಿಗಾಗಿ ಸಾದರಪಡಿಸುವುದರಲ್ಲಿ ಬಂದಿತು. ಚರ್ಚೆಯ ನಾಟಕವು ಪ್ರತಿ ವರ್ಷ ನಡೆಯುತ್ತಲೇ ಇತ್ತು. ಈ ಚರ್ಚೆಯಿಂದ—ಜನತೆಯಲ್ಲಿ ಆಡಳಿತದ ವಿಷಯಕ್ಕೆ ಅಲ್ಪ ಸ್ವಲ್ಪ ಜಾಗ್ರತಿಯಾಗುವುದಕ್ಕಿಂತ ಆಚೆಗೆ—ಯಾವ ಇಷ್ಟ ಪರಿಣಾಮವೂ ಆಗಲಿಲ್ಲ. ಕಾನೂನು ಮಂಡಳದ ಸದಸ್ಯರು ಕೂಡ ಬಹುಮತದಿಂದ ಮಂಜೂರ ಕೊಡದ ವೆಚ್ಚವನ್ನು, ವೈಸ್‌ರಾಯ್ ಅವರು ತಮ್ಮ 'ವಿಶೇಷ ಅಧಿಕಾರದ' ಉಪಯೋಗಮಾಡಿ, ಅದಕ್ಕೆ ತಮ್ಮ ಮನ್ನಣೆಯನ್ನು ಕೊಡು-ತ್ತಿದ್ದರು. ಸ್ವರಾಜ್ಯಪಕ್ಷದವರು ಮಧ್ಯವರ್ತಿ ಕಾನೂನು ಮಂಡಳದಲ್ಲಿ Finance Bill ಪಾಸು ಮಾಡಲಿಲ್ಲ. ಈ ಬಿಲ್ಲು ಪಾಸಾದ ಹೊರತು ಸರಕಾರಕ್ಕೆ ಹಣ ವೆಚ್ಚಮಾಡಲಿಕ್ಕೆ ಬರುವುದಿಲ್ಲ. ಆದರೆ ಆಳರಸರು ಪ್ರಜೆಗಳ ಪ್ರತಿನಿಧಿಗಳ ಮತ-ಗಳನ್ನು ಕಾಲುಕಸಕ್ಕಿಂತ ಕಡಿಮೆಮಾಡಿ, ಈ ಬಿಲ್ಲುಗಳನ್ನು

ಪಾಸುಮಾಡಿಕೊಂಡರು. ಮಹಾಯುದ್ಧದ ನಂತರ ಮದ್ರಾಸ್ ಇಲಾಖೆಯೊಂದನ್ನು ಬಿಟ್ಟು ಬಹುತರ ಎಲ್ಲ ಪ್ರಾಂತಗಳ ವ್ಯಯವು ಆಯಕ್ಕಿಂತ ಹೆಚ್ಚಿತ್ತು. ಕೊರತೆ ಬಿದ್ದ ರಕಮುಗಳು (deficits):

೧೯೧೮	೬	ಲಕ್ಷ	ರೂ.
೧೯೧೯	೨೪	,,	,,
೧೯೨೦	೨೬	,,	,,
೧೯೨೧	೨೬೩	,,	,,

ರೇಲ್ವೆಗಳ ಆಯ-ವ್ಯಯಗಳು ಸಾಮಾನ್ಯ ಆಯ-ವ್ಯಯಗಳಿಂದ ಬೇರೆ ಮಾಡಲ್ಪಟ್ಟುವು. ಈ ಕ್ರಮದ ಇಷ್ಟಾನಿಷ್ಟತೆ, ಅದರಿಂದಾದ ಪರಿಣಾಮ ಹಾಗು ರೇಲ್ವೆಗಳ ಆರ್ಥಿಕ ಪರಿಸ್ಥಿತಿ ಮೊದಲಾದುವುಗಳ ಬಗ್ಗೆ ಹೆಚ್ಚು ವಿವರವಾಗಿ ಬೇರೆ ಬರೆಹದಲ್ಲಿ ಬರೆಯುವೆ. ರೇಲ್ವೆಗಳ ಕಾರಭಾರವನ್ನು ನಿಷ್ಪಕ್ಷಪಾತಬುದ್ಧಿಯಿಂದ ಪರೀಕ್ಷಿಸಿದವರು, ರೇಲ್ವೆಗಳ ಆಡಳಿತ ಮೊದಲಿನಿಂದ ಕೊನೆಯವರೆಗೆ ಬ್ರಿಟಿಶ್ ಬಂಡವಾಳಗಾರರ — ಬ್ರಿಟಿಶ್ ಉದ್ಯೋಗಗಳ — ಹಿತಕ್ಕಾಗಿ ಹಾಗೂ ಭಾರತೀಯರ ಹಾನಿಗಾಗಿ ನಡೆದಿದೆಯೆಂಬ ನಿರ್ಣಯವನ್ನು, ಯಾರೂ ಕೊಡದೆ ಇರರು. ೧೯೧೪ ರಿಂದ ೧೯೨೦ರ ವರೆಗಿನ ಕಾಲಾವಧಿಯಲ್ಲಿ ವೆಚ್ಚವು ಇಮ್ಮಡಿಯಾಯಿತು. ಎಂದರೆ ೧೨೪ ಕೋಟಿ ರೂ. ಗಳಿಂದ ೨೩೪ ಕೋಟಿ ರೂ. ಗಳಿಗೆ ಏರಿತು. ಇದೇ ಕಾಲಾವಧಿಯಲ್ಲಿ ವ್ಯಯ ಬೆಳೆದದ್ದರಿಂದ, ಕರಕೂಡಿಸಿ ಆಯ ಹೆಚ್ಚಿಸುವ ಕ್ರಮವು ಪ್ರಾರಂಭವಾಯಿತು. ಈ ಕಾಲಾವಧಿಯಲ್ಲಿ ೪೪ ಕೋಟಿ ರೂಪಾಯಿಗಳಷ್ಟು ಕರಭಾರವು ಹೆಚ್ಚಾಯಿತು; ಎಂದರೆ ಜನತೆಯು ೪೪ ಕೋಟಿ ರೂಪಾಯಿಗಳನ್ನು ಕರರೂಪದಿಂದ ಕೊಡಬೇಕಾಯಿತು.

ಸೋಗಿನ ಕಡಿತ

ಕಾನೂನು ಮಂಡಳಗಳಲ್ಲಿಯ ಪ್ರತಿನಿಧಿಗಳು, ಈ ಪರಿಯಾಗಿ ಬೆಳೆದ ವ್ಯಯದ ಮೇಲೆ ಟೀಕೆಯ ಮಳೆಗರೆಯಹತ್ತಿದರು. ವರ್ತಕಸಂಘದವರು ಹಾಗು ಬೇರೆ ಸಾರ್ವಜನಿಕ ಸಂಸ್ಥೆಗಳು ಸಹ ಈ ತರದ ಆರ್ಥಿಕ ಆಡಳಿತವು ಇರಕೂಡದೆಂದು ಹೇಳತೊಡಗಿದುವು. ಈ ಟೀಕೆಗೆ ತಡೆಹಾಕುವುದಕ್ಕಾಗಿ ಕಡಿತದ ಕಮಿಶನ್‌ಗಳ ಏರ್ಪಾಡು ಆಯಿತು. ಕಮಿಟಿ ಕಮಿಶನ್‌ಗಳ ನಿರ್ಮಾಣಗಳು ಕಾಲಹರಣದ ಅನೇಕ ಮಾರ್ಗಗಳಲ್ಲಿ ಒಂದಾಗಿದೆ. ಇಂತಹ ಕಮಿಟಿ-ಕಮಿಶನ್‌ಗಳಲ್ಲಿ ಒಬ್ಬಿಬ್ಬರು ಹಿಂದೀ ಮೆಂಬರರನ್ನು ಸಮಾವೇಶಮಾಡುವ ಪದ್ಧತಿ ಇತ್ತು. ಅವರಲ್ಲಿ ಅನೇಕರು ಪದವಿಗಳ ಮೋಹಕ್ಕಾಗಿ ಇಲ್ಲವೆ ಆಪ್ತೇಷ್ಟರ ನೌಕರಿಯ ಆಶೆಗಾಗಿ, ಯುರೋಪಿಯನ್ ಸದಸ್ಯರು ಬರೆದ ವರದಿಗೆ ರುಜು ಮಾಡತಕ್ಕವರು ಇರುವುದು ಸಹಜ. ಸ್ವಲ್ಪ ಗಟ್ಟಿಗನಾದ ಭಾರತೀಯನಿದ್ದರೆ, ಭಿನ್ನಮತಪತ್ರಿಕೆಯನ್ನು ಬರೆಯುತ್ತಿದ್ದನು. ಕೆಲವು ಕಮಿಟಿಗಳು ಅನೇಕ ತಿಂಗಳುಗಳ ನಂತರ ವರದಿಯನ್ನು ಬರೆದುವು. **ಲಾರ್ಡ್ ಇಂಚ್‌ಕೇಪ್‌ರ** ಅಧ್ಯಕ್ಷತೆಯಲ್ಲಿ ಕೂಡಿದ ಕಮಿಟಿಯವರು ೧೯೩ ಕೋಟಿ ರೂಪಾಯಿಗಳ ಕಡಿತವನ್ನು ಸಿಫಾರಸು ಮಾಡಿದರು. ಸರಕಾರದವರು, ಯುರೋಪಿಯನ್ ತಜ್ಞರ ಅಧ್ಯಕ್ಷತೆಯಲ್ಲಿ ನೇಮಿಸಿದ ಈ ಕಮಿಟಿಯವರು ಮಾಡಿದ ಸಿಫಾರಸನ್ನು ಕೂಡ ಪೂರ್ಣ ಅಮಲಿನಲ್ಲಿ ತರಲಿಲ್ಲ. ೧೯೨೩-೨೪ ರ ಅಂದಾಜುಪತ್ರಿಕೆಯಲ್ಲಿ ಕೇವಲ ೧೨ ಕೋಟಿ ಚಿಲ್ಲರು ರೂಪಾಯಿಗಳ ಕಡಿತವನ್ನು ಸ್ವೀಕರಿಸುವುದರಲ್ಲಿ ಬಂದಿತು. ವೆಚ್ಚಕ್ಕೆ ಬೇಕಾದ ಉಳಿದ ಹೆಚ್ಚಿನ ಹಣವನ್ನು, ಕಾಗದದ ಚಲನದ ನಿಧಿಯೊಳಗಿಂದ ತಕ್ಕೊಳ್ಳುವುದರಲ್ಲಿ ಬಂದಿತು. ದಿಲ್ಲಿ ರಾಜಧಾನಿಯನ್ನು ಕಟ್ಟುವುದಕ್ಕಾಗಿ, ಕೋಟ್ಯವಧಿ ರೂಪಾಯಿಗಳು ವೆಚ್ಚವಾದುವು. 'ದಿಲ್ಲಿ ಪಟ್ಟಣವು ಅನೇಕ ಸಾಮ್ರಾಜ್ಯಗಳ ಸ್ಮಶಾನ ಭೂಮಿ, ಆ ಪಟ್ಟಣಕ್ಕೆ ರಾಜಧಾನಿಯನ್ನು ತಕ್ಕೊಂಡು ಹೋಗಬಾರದು' ಎಂದು ಅನೇಕರ ಮತವಿತ್ತು. ಹಿಂದಿನವರು ಕಟ್ಟಿದ ಅರಮನೆಗಳು ಸಭಾಮಂಟಪಗಳು, ಗೋರಿಗಳು ೨೦೦-೩೦೦ ವರ್ಷಗಳಾದರೂ ಮೊನ್ನೆ ಮೊನ್ನೆ ಕಟ್ಟಿದಂತೆ ಕಾಣುತ್ತವೆ. ಈಗಿನ ಕಟ್ಟಡಗಳು ಹೇಗಿವೆಯೆಂಬುದನ್ನು ಹೊಸದಿಲ್ಲಿ ನೋಡಿದವರಿಗೆ ಹೇಳಬೇಕಾಗಿಲ್ಲ. ಹೊಸದಾಗಿ ಕಟ್ಟಿದ ಕಾನೂನುಮಂಡಳದ–ಮೇಲಿನ ಒಂದು ಭಾಗದ–ಗಚ್ಚಿನ ಗಿಲಾಯಿ, ಕಟ್ಟಿದ ೮–೧೦ ವರ್ಷಗಳಲ್ಲಿ ಮುರಿದುಕೊಂಡು ಬಿತ್ತು. ಅದರಿಂದ ಯಾವ ಸದಸ್ಯನಿಗೂ ಗಾಯವಾಗಲಿಲ್ಲವೆಂಬುದು ಕ್ಷೇಮದ ಸಂಗತಿ. ಪ್ರಾಂತೀಯ ಸರಕಾರಗಳು ಕಡಿತದ ಕಮಿಟಿಗಳನ್ನು ನೇಮಿಸಿದುವು. ಮೇಲಿನ ಅಧಿಕಾರಿಗಳ ಸಂಬಳಗಳಲ್ಲಿ ಸೂಚಿಸಿದ ಕಡಿತಗಳು ಸೋಗಿನವಿದ್ದುವೆಂಬ ಸಂಗತಿ ಶೋಚನೀಯವಾಗಿದೆ. ಕಾರಕೂನರ—ಸೀಪಾಯಿಗಳ—ಸಂಬಳಗಳ ಕಡಿತದಲ್ಲಿ ಹಾಗೂ ಅವರ ಸಂಖ್ಯೆಯನ್ನು ಕಡಿಮೆಮಾಡುವುದರಲ್ಲಿ, ಈ ಕಡಿತದ ಕಮಿಟಿಗಳ ಸಿಫಾರಸುಗಳ ಉಪಯೋಗವಾಯಿತು. ಹಿಂದಿನ ಮಹಾಯುದ್ಧದನಂತರ ಏರಿದ ಸಂಬಳಗಳು ಇಂದಿನ ಯುದ್ಧದ ವರೆಗೆ ಹಾಗೆಯೆ ಇವೆಯೆಂದು ಹೇಳಿದರೆ ಅತಿಶಯೋಕ್ತಿಯಾಗಲಿಕ್ಕಿಲ್ಲ. ಈಗ ಕಾಳುಕಡಿಗಳ ಧಾರಣೆ ಹೆಚ್ಚಾಗಿದೆಯೆಂದು ಮೇಲಿನ ತರಗತಿಯ ಅಧಿಕಾರಿಗಳು ತಮ್ಮ ಸಂಬಳಗಳನ್ನು ಇನ್ನೂ ಹೆಚ್ಚು ಮಾಡಲು ಬಯಸುತ್ತಾರೇನೋ ತಿಳಿಯದು. ಪೂರಯಿಕೆ ಖಾತೆಯ ಅಧಿಕಾರಿಗಳ ಸಂಬಳಗಳ ಏರಿಕೆಯಿಂದ ಗಾಬರಿಯುಂಟಾಗಿದೆ. ಕಡಿತದ ಕಮಿಟಿಗಳ ಸಿಫಾರಸುಗಳ ಪರಿಣಾಮ ಹೇಗಾಗುತ್ತದೆ ನೋಡಿ : ಎಲ್ಲ ಸರಕಾರಿ ನೌಕರರ ಸಂಬಳಗಳನ್ನು ೧೦೦ ಕ್ಕೆ ೧೦ ರಂತೆ ಕಡಿಮೆಮಾಡಬೇಕೆಂದು ಸಿಫಾರಸು ಆಯಿತು. ತಿಂಗಳಿಗೆ ೨೦೦೦ ರೂ. ಸಂಬಳ ಉಳ್ಳವನಿಗೆ ೨೦೦ ರೂ. ಗಳ ಕಡಿತದಿಂದ ಬಹಳ ಹಾನಿ ಎಂದರೆ ಅವನ ಉಳಿತಾಯದರ್ಥವು (Savings) ಇಲ್ಲದಂತಾಗಬಹುದು. ಅದೇ ೨೦ ರೂ. ಸಂಬಳದವನಿಗೆ ೨ ರೂ. ಕಡಿಮೆಯಾದರೆ, ಅವನಿಗೆ ಹೊಟ್ಟೆತುಂಬಿಕೊಳ್ಳುವುದೇ ದುಸ್ತರವಾಗುವುದು.

ಅಜ್ಞರಾದ ಅರ್ಥಸಚಿವರು !

ಕಳೆದ ಮಹಾಯುದ್ಧ ಮುಗಿದ ಬಳಿಕ ಅಮಲಿನಲ್ಲಿ ಬಂದ ರಾಜಕೀಯ ಸುಧಾರಣೆಗಳ ಮೇಲೆ ಬಹಿಷ್ಕಾರ ಹಾಕುವುದರಲ್ಲಿ

ಬಂದಿತು. ಜಾತೀಯ ಪ್ರಶ್ನೆಗೆ ಪ್ರಾಧಾನ್ಯ ಬಂದಂತಾಗಿ, ಆಳರಸರ ಆಳಿಕೆಯ ಸಮರ್ಥಕರಿಗೆ ಕಳೆ ಏರಹತ್ತಿತು. ಆಯ್. ಸಿ. ಎಸ್. ಜನರ ಸಂಬಳ, ನಾನಾತರದ ಅವರ ಭತ್ತೆಗಳು ಅಚ್ಚಳಿಯದೆ ಉಳಿಯಬೇಕೆಂಬ ಬಗ್ಗೆ ಬ್ರಿಟಿಶ್ ಪಾರ್ಲಮೆಂಟಿನಲ್ಲಿ ಕಾನೂನು ಪಾಸಾಯಿತು. ಭರತಖಂಡದ ಆರ್ಥಿಕ ಆಡಳಿತದಲ್ಲಿ ಆಯ್. ಸಿ. ಎಸ್. ಜನರು ತೋಡಿದ ಗುದ್ದುಗಳನ್ನು ಮುಚ್ಚಲು ಕುಬೇರನ ಭಾಂಡಾರವು ಕೂಡ ಈಡಾಗುವುದೋ ಇಲ್ಲವೋ ಸಂಶಯವಿದೆ. ಆಯ್. ಸಿ. ಎಸ್. ಅಧಿಕಾರಿಗಳು, ಭಾರತದ ಆಡಳಿತದ ಭದ್ರವಾದ ಕಟ್ಟಡದ ಉಕ್ಕಿನ ಮಡಿಗೆ (Steal frame) ಯಂತೆ. ಬಡಭಾರತಕ್ಕೆ ಈ ಉಕ್ಕಿನ ಮಡಿಗೆಯು ಬೇಡ; ಈ ಭವ್ಯವಾದ ಆಡಳಿತದ ಕಟ್ಟಡವೂ ಬೇಡ. ಅವು ಮುಟ್ಟದ ಗಿಡವಿಲ್ಲವೆಂಬಂತೆ. ಆಯ್. ಸಿ. ಎಸ್. ರು ಅರಿಯದ ವಿಷಯವಿಲ್ಲ. ಅವರು ಶಿಕ್ಷಣದ ತಜ್ಞರೆಂದು ಶಿಕ್ಷಣ ಖಾತೆಯಲ್ಲಿ ಎಲ್ಲಕ್ಕೂ ವರಿಷ್ಠ ಅಧಿಕಾರಿಗಳಾಗಬಲ್ಲರು. ಒಕ್ಕಲುತನದ ಇಂಗಿತ ಬಲ್ಲವರೆಂದು ಶೇತಕೀ ಖಾತೆಯ ಡೈರೆಕ್ಟರ್‌ರಾಗಬಲ್ಲರು. ಉದ್ಯೋಗಗಳನ್ನೆಲ್ಲ ಬಲ್ಲವರೆಂದು ಔದ್ಯೋಗಿಕ ಖಾತೆಯ ಮುಖ್ಯಾಧಿಕಾರಿಗಳಾಗಬಲ್ಲರು. ಅರ್ಥಶಾಸ್ತ್ರವಿಶಾರದರೆಂದು ಪ್ರಾಂತಿಕ ಸರಕಾರಗಳಲ್ಲಷ್ಟೇ ಅಲ್ಲ—ಅಬ್ಜಗಟ್ಟಲೆ ಆಯವ್ಯಯ ಮಾಡುವ—ವರಿಷ್ಠ ಸರಕಾರದ ಅರ್ಥಸಚಿವರಾಗಬಲ್ಲರು. ಇಂತಹ ಸರ್ವಜ್ಞರಾಗಿರುವ ಸಿವ್ಹಿಲ್ ಸರ್ವಂಟರ ಸ್ತುತಿ-ಸ್ತೋತ್ರಗಳನ್ನು ಹಿಂದುಸ್ಥಾನದ ಸ್ಟೇಟ್ ಸೆಕ್ರೆಟರಿಗಳು ಪಠಿಸುವುದು ಸಹಜವಿದೆ. ಆಯ್. ಸಿ. ಎಸ್. ಅರ್ಥಸಚಿವರ (Finance member) ಆರ್ಥಿಕ ಆಡಳಿತ ಎಷ್ಟು ಅಂದವಾಗಿರುತ್ತದೆಂಬುದಕ್ಕೆ ಉದಾಹರಣೆಗಳನ್ನು ಮುಂದಿನ ಬರೆಹದಲ್ಲಿ ಕೊಡುವೆ. ಆಯ್. ಸಿ. ಎಸ್. ಅಲ್ಲದ ಅರ್ಥಸಚಿವರೆಲ್ಲರ ಆಡಳಿತ ಬಹು ಚೆನ್ನಾಗಿತ್ತೆಂದು ನನ್ನ ಅಭಿಪ್ರಾಯವಲ್ಲ. ಕಳೆದ ಮಹಾಯುದ್ಧದ ನಂತರದ ಕಾಲದಲ್ಲಿಯ ಆರ್ಥಿಕ ಆಡಳಿತದಲ್ಲಿ, ಅನೇಕ ಸೋಜಿಗದ ಸಂಗತಿಗಳಾಗಿ ಹೋದುವು. ಕೆಲವು ಪ್ರಾಂತಗಳಲ್ಲಿಯ ಅರ್ಥಸಚಿವರು ಆ ಪ್ರಾಂತದ ಆರ್ಥಿಕ ಆಡಳಿತವನ್ನು ಕೈಕೊಳ್ಳುವುದಕ್ಕೆ ಮೊದಲು, ಈ ಶಾಸ್ತ್ರದ ವಿಷಯದಲ್ಲಿರುವ ತಮ್ಮ ಅಗಾಧಜ್ಞಾನದ ಪರಿಚಯವನ್ನು ಜನರಿಗೆ ಮಾಡಿ ಕೊಟ್ಟಿದ್ದಿಲ್ಲ. ಕೆಲವರಂತು ಸಾರ್ವಜನಿಕ ಆಯವ್ಯಯದ (Public Finance) ಪ್ರಾಥಮಿಕ ಪುಸ್ತಕವನ್ನೂ ಕೂಡ ಮುಟ್ಟಿದಂತೆ ಕಾಣುತ್ತಿದ್ದಿಲ್ಲ. ಅವರ ಮತಾಂತರಕ್ಕೆ ಕಾಲ ಹತ್ತುತ್ತಿದ್ದಿಲ್ಲ. ಸ್ಥಳಾಂತರ ಮಾಡಿದರೆ ಮತಾಂತರ ಮಾಡಲಿಕ್ಕೆ ಅಡ್ಡಿ ಇಲ್ಲೆಂಬ ಅನುಕೂಲಸಿಂಧುವನ್ನು ಒಬ್ಬಗಾಗಾ ಧಟ್ಟನು ಅವರಿಗೆ ಸಿದ್ಧಮಾಡಿ ಕೊಟ್ಟಿದ್ದನು. ಸರಕಾರದ ಮದ್ಯಪಾನದ ಸಮರ್ಥನೆಯ ಧೋರಣವನ್ನು ಕಠೋರವಾಗಿ ಟೀಕಿಸಿದ ಕಾನೂನು ಮಂಡಳದ ಸದಸ್ಯರು, ಮಂತ್ರಿಪದದ ಮಾಲೆಯನ್ನು ಹಾಕಿಕೊಂಡು, ಸಾಧಾರಣ ಸದಸ್ಯರ ಖುರ್ಚಿಯನ್ನು ಬಿಟ್ಟು ಸ್ಥಳಾಂತರಿಸಿ, ಮಂತ್ರಿಗಳಾಗಿ ಕೂಳಿಲ್ಲದ ಬಡಜನರು ಕೊಟ್ಟ ಕರದ ಹಣದಿಂದ ಮಾಡಿಸಿಟ್ಟ ಮೆತ್ತಗಿನ ಖುರ್ಚಿಯ ಮೇಲೆ ಚಂದವಾಗಿ ಕುಳಿತುಕೊಂಡು, ಸರಕಾರದ ಧೋರಣವನ್ನು ಸಮರ್ಥಿಸಿದ ಉದಾಹರಣೆಗಳು ಹಲವು ಉಂಟು. ಅವರ ಹಿಂದಿನ ಮಾತುಗಳನ್ನು ಅವರ ಮುಖಕ್ಕೆ ತಿವಿಯಲಿಕ್ಕೆ, ಕೆಲವು ನಿರ್ದಾಕ್ಷಿಣ್ಯಸ್ವಭಾವದ ಕಾನೂನು ಮಂಡಳದ ಸದಸ್ಯರು ಸಿದ್ಧರಾದರು. ಆದರೆ ಅನೇಕ ವರ್ಷದಿಂದಲೂ ದಾಸ್ಯದಲ್ಲಿದ್ದ ರಾಷ್ಟ್ರದಲ್ಲಿ ನೀತಿಯು ಹಸಗೆಡುವುದು ಸಹಜವಿದೆ. ಆದುದರಿಂದಲೆ ಮಹಾತ್ಮಾಜಿಯವರು 'ಈ ದಾಸ್ಯಬೇಡ, ಸ್ವಾತಂತ್ರ್ಯಬೇಕು! ಪೂರ್ಣಸ್ವರಾಜ್ಯದ ಹೊರತು ನಮ್ಮ ಏಳಿಗೆಯಾಗದು!' ಎಂದು ಇಪ್ಪತ್ತು ವರ್ಷಗಳಿಂದ ಹೇಳುತ್ತಿದ್ದಾರೆ. ಸ್ವಲ್ಪ ವಿಷಯಾಂತರವಾದರೂ ಚಿಂತೆಯಿಲ್ಲ; ಬಹುದಿವಸದ ದಾಸ್ಯದ ದುಷ್ಪರಿಣಾಮದ ಉದಾಹರಣೆಯೊಂದನ್ನು ಇಲ್ಲಿ ಕೊಡುತ್ತೇನೆ, ಪರಾಮರಿಸಬೇಕು:

ಪಬ್ಲಿಕ್ ಸರ್ವಿಸ್ ಕಮಿಶನಿನ ಮುಂದೆ ಕಾಂಗ್ರೆಸಿನ ಅಧ್ಯಕ್ಷರಾದ--ಹಿಂದುಗಡೆ ಹಾಯಕೋರ್ಟಿನ ನ್ಯಾಯಾಧೀಶರಾದ— ಒಬ್ಬ ಮಹಾಪುರುಷರ ಸಾಕ್ಷಿಯಾಯಿತು. **ನಾಮದಾರ್ ಗೋಖಲೆ** ಹಾಗೂ ಹಿಂದುಗಡೆ ಮುಖ್ಯ ಮಂತ್ರಿಗಳಾದ **ರ್‍ಯಾಮ್ಸೆ ಮ್ಯಾಕ್ಡೊನಾಲ್ಡ**ರು ಈ ಕಮೀಶನಿನ ಮೆಂಬರರಿದ್ದರು. ಆ ನಮ್ಮ ನ್ಯಾಯಾಧೀಶರು ತಮ್ಮ ಸಾಕ್ಷಿಯಲ್ಲಿ, ಕಾಂಗ್ರೆಸಿನ ಧೋರಣವನ್ನು ಬದಿಗೊತ್ತಿ ಆಳರಸರ ಆಡಳಿತ ಹಾಗೂ ಮತಗಳನ್ನು ಸಮರ್ಥಿಸಹತ್ತಿದರು. ಆಗ ನಾಮದಾರ್ ಗೋಖಲೆಯವರು, ಕಾಂಗ್ರೆಸಿನ ವೇದಿಕೆಯ ಮೇಲೆ ನಿಂತು ಜಿಗಿಜಿಗಿದು ಮಾಡಿದ ಅವರ ಭಾಷಣಗಳೊಳಗಿನ ಅವತರಣಿಕೆಗಳನ್ನು ಓದಿ ತೋರಿಸಿದರು. ಆಗ ನ್ಯಾಯಾಧೀಶರು "I have grown since" ಎಂದರೆ "ನಾನು ಬೆಳೆದಿದ್ದೇನೆ. ನನ್ನ ಬುದ್ಧಿ ಬಲಿತಿದೆ!" ಎಂದು ಉತ್ತರ ಕೊಟ್ಟರು. ಚೀಫ ಜಸ್ಟಿಸ್ ಆಗುವ ಮೋಹ ಮತ್ತು ಹೆಚ್ಚಿನ ಸಂಬಳದ ಆಶೆಗಾಗಿ ನ್ಯಾಯಾಧೀಶರ ಪದವಿಗೇರಿದ— ದಾಸ್ಯದಲ್ಲಿದ್ದ ದೇಶದ— ಗೃಹಸ್ಥನು ಹೇಗೆ ನಡೆದುಕೊಳ್ಳುತ್ತಾನೆಂಬುದಕ್ಕಿದ್ದ ಅನೇಕ ಉದಾಹರಣೆಗಳಲ್ಲಿ ಇದೊಂದಾಗಿದೆ. ನಮ್ಮ ದೇಶದ ಆರ್ಥಿಕ ಆಡಳಿತ ನಮ್ಮ ಹಿತ ಬಯಸುವವರ ಅಧೀನದಲ್ಲಿರದುದರಿಂದ, ಹಾಗೂ ಅಜ್ಞರು ಅರ್ಥಸಚಿವರಾದುದರಿಂದ, ಕಳೆದ ಯುದ್ಧಾನಂತರದ ಕಾಲದಲ್ಲಿ ನಮ್ಮ ದೇಶಕ್ಕೆ ವಿಪರೀತ ಹಾನಿಯು ಉಂಟಾಗಿದೆ.

ಉದ್ಯೋಗಗಳ ಬೆಳೆವಣಿಗೆಯ ಅಭ್ಯಾಸ

ಕಳೆದ ಮಹಾಯುದ್ಧದ ಕಾಲದಲ್ಲಿ ಹಿಂದುಸ್ಥಾನವು ಅನೇಕ ವಸ್ತುಗಳ ಬಗ್ಗೆ ಪೂರ್ಣ ಪರಾವಲಂಬಿಯಾಗಿತ್ತು. ಸಾಕಷ್ಟು ಕಡ್ಡಿಪೆಟ್ಟಿಗೆಗಳು ಕೂಡ ಸಿಕ್ಕುತ್ತಿದ್ದಿಲ್ಲ. ಇದರ ಕಟು ಅನುಭವ ಬಂದರೂ ಆಳರಸರು ಹಿಂದೀ ಉದ್ಯೋಗಗಳಿಗೆ ಸಾಕಷ್ಟು ಉತ್ತೇಜನ ಕೊಡಲಿಲ್ಲ. ಈಗಲೂ ಅದೇ ಧೋರಣವನ್ನು ಅವರು ಅನುಕರಿಸುತ್ತ ನಡೆದಿದ್ದಾರೆ. ಅಮೇರಿಕಾ, ಜಪಾನ್ ಮೊದಲಾದ

ದೇಶಗಳು ಬಾಲ್ಯಾವಸ್ಥೆಯಲ್ಲಿದ್ದು, ಉದ್ಯೋಗಗಳ ಬೆಳೆವಣಿಗೆಯನ್ನು ಮಾಡಿಕೊಂಡು ತಮ್ಮ ಆರ್ಥಿಕಜೀವನವನ್ನು ಭದ್ರವಾಗಿ ಮಾಡಿಕೊಂಡುವು. ಬೇರೆ ದೇಶಗಳ ಪೇಟೆಗಳನ್ನು ಕೈವಶ ಮಾಡಿಕೊಂಡುವು. ಸರಕಾರದ ಸಹಾಯವಿದ್ದರೆ ಪೌರ್ವಾತ್ಯ ರಾಷ್ಟ್ರವು ಕೂಡ ಏನುಮಾಡಬಲ್ಲದೆಂಬುದನ್ನು ಜಪಾನಿಗಳು ಸಿದ್ಧಮಾಡಿ ತೋರಿಸಿದರು. ಸ್ವಕೀಯತೆಯ ಸ್ವಾತಂತ್ರ್ಯದ ಬಲವು ಅಗಾಧವಾದದ್ದಿರುತ್ತದೆ. ಕಳೆದ ಮಹಾಯುದ್ಧದ ಕಾಲದಲ್ಲಿ ಅದರ ನಂತರ ಸ್ಥಾಪಿತವಾದ ಅನೇಕ ಉದ್ಯೋಗಗಳು ಅಲ್ಪಕಾಲದಲ್ಲಿಯೇ ಕುಕ್ಕರಿಸಿದುವು. ಕೆಲವು ಗಿರಣಿಗಳು ಒಂದು ಸಾವಿರ ರೂಪಾಯಿಯ ಪಾಲಿಗೆ (Share) ಒಂದು ಸಾವಿರ ರೂಪಾಯಿ ಡಿವ್ಹಿಡಂಡನ್ನು ಒಂದೆರಡು ವರ್ಷ ಕೊಟ್ಟ ಉದಾಹರಣೆಗಳಿವೆ. ಇವುಗಳನ್ನು ಮುಂದೆ ಚಾಚಿ, ನಮ್ಮ ನೂಲುವ ಮತ್ತು ನೇಯುವ ಉದ್ಯೋಗದ ಬೆಳೆವಣಿಗೆ ತಮ್ಮ ಆಡಳಿತದಲ್ಲಿ ಆಯಿತೆಂದು ಹೇಳುವ ಆಳರಸರಿದ್ದಾರೆ. ಆದರೆ ಈ ಲಾಭವು ಎಷ್ಟು ಕ್ಷಣಿಕವಾಗಿತ್ತೆಂಬುದು, ಹಿಂದುಗಡೆ ಹೊರಟ ದಿವಾಳಿ ತೆಗೆದ ಉದ್ಯೋಗಗಳ ಸಂಖ್ಯೆಯ ಮೇಲಿಂದ ಗೊತ್ತಾಗುತ್ತದೆ. ಮುರಳಿ-ಹುಂಡಿಗಳು ಪರದೇಶಿ ಮಾಲಿನ ಆಯಾತಕ್ಕೆ ಹೇಗೆ ಸಹಾಯಮಾಡಿದುವೆಂಬದು ಎಲ್ಲರಿಗೆ ಗೊತ್ತಿದ್ದ ಸಂಗತಿಯಾಗಿದೆ. ಬಂಡವಾಳದಷ್ಟೇ ಲಾಭವನ್ನು ಕೊಡುವ ಕಂಪನಿಗಳ ಸಮರ್ಥನೆಯನ್ನು ನಾನು ಮಾಡುತ್ತೇನೆಂದು ಅಥವಾ ತೀರ ಹೆಚ್ಚಿನ ಡಿವ್ಹಿಡಂಡ್ ಕೊಡುವ ಬಂಡವಾಳಿಗರು ಬಲಿಯಬೇಕೆಂಬ ಉದ್ದೇಶ ನನ್ನದಿದೆಯೆಂದು ಓದುಗರು ತಿಳಿಯಬಾರದು. ಸಂಪತ್ತಿಯ ಹಂಚಿಕೆಯಲ್ಲಿ ಅಸಹ್ಯವಾದ ವಿಷಮತೆಯುಳ್ಳ ಸಮಾಜದಲ್ಲಿ ಕ್ರಾಂತಿಯಾಗದೆ ಇರದು; ಆದರೆ ಹಿಂದುಸ್ಥಾನದಲ್ಲಿ ಆ ತರದ ಸಂಪತ್ತಿಯೇ ಇಲ್ಲವೆಂದ ಬಳಿಕ ಆದರ ಹಂಚಿಕೆಯಲ್ಲಿ ಹೆಚ್ಚಿನ ವಿಷಮತೆ ಸದ್ಯದಲ್ಲೇನೂ ಬರುವ ಸಂಭವವಿಲ್ಲ. ಉದ್ಯೋಗಗಳ ಬೆಳೆವಣಿಗೆಗೆ ಕಳೆದ ಮಹಾಯುದ್ಧದ ಹಾಗು ತದನಂತರದ ಕಾಲವು ಒಂದು ಉತ್ತಮ ಯೋಗವಾಗಿತ್ತು. ಆದರೆ ಅದರ ಲಾಭಪಡಕೊಳ್ಳಲಿಕ್ಕೆ ಆಳರಸರ ಆಡಳಿತದಿಂದ ಅನುವು ದೊರೆಯಲಿಲ್ಲ. ಉದ್ಯೋಗಗಳಿಗೆ ಬೇಕಾಗುವ ಸಾಧನಸಂಪತ್ತು ಬೇಕಾದಷ್ಟು ದೊರೆಯುವ ದೇಶದಲ್ಲಿ ಉದ್ಯೋಗಗಳ ಈ ಪರಿಯ ದುರವಸ್ಥೆ ಇದ್ದದ್ದನ್ನು ಕಂಡು, ಬ್ರಿಟಿಶ್ ಆಡಳಿತವನ್ನು ಕೆಲವು ಜನ ಪರಕೀಯರು ಕೂಡ ದೂಷಿಸಿದ್ದಾರೆ. ಹಿಂದುಸ್ಥಾನದಲ್ಲಿಯ ರೇಲ್ವೆ ವರ್ಕ್‌ಶಾಪ್‌ಗಳಲ್ಲಿ ಹಿಂದೀ ರೇಲ್ವೆಗಳಿಗೆ ಬೇಕಾಗುವ ಸಾಮಾನುಗಳನ್ನು ತಯಾರಿಸಿಕೊಳ್ಳುವ ಧ್ಯೇಯವನ್ನು ಮುಂದಿಟ್ಟುಕೊಂಡಿದ್ದರೆ, ಈಗ ಅನುಭವಿಸುವ ಅನಾನುಕೂಲತೆಗಳು ಬಹಳ ಕಡಿಮೆಯಾಗುತ್ತಿದ್ದುವು. ಅಜಮಾರದಲ್ಲಿ ರೇಲ್ವೆ ಎಂಜಿನುಗಳನ್ನು ಕಟ್ಟಲಿಕ್ಕೆ ಅನುಕೂಲತೆಗಳಿವೆ. ಸದ್ಯದ ಯುದ್ಧ ಪ್ರಾರಂಭವಾದಾಗ, ಅವುಗಳನ್ನು ಕಟ್ಟುವ ಕೆಲಸವನ್ನು ಅವಶ್ಯವಾಗಿ ಕೈಕೊಳ್ಳಬೇಕೆಂದು ತಜ್ಞರ ಕಮಿಟಿಯ ಮತವಿದ್ದರೂ, ಈ ಕೆಲಸವು ಸಾಕಷ್ಟು ರಭಸದಿಂದ ಸಾಗಲಿಲ್ಲ.

(೧೦೨ ನೆಯ ಪುಟದಿಂದ ಮುಂದುವರಿದುದು.)

ಕೊಡುಗೆಯೆಂದರೆ ಆಡಳಿತವಲ್ಲಿಯ ಕೆಲವೊಂದು ಅಧಿಕಾರಸ್ಥಾನಗಳು. ಈ ಸ್ಥಾನಗಳ ಸಂಪಾದನೆಗಾಗಿ ವ್ಯಕ್ತಿ-ವ್ಯಕ್ತಿಗಳಲ್ಲಿ ಸ್ಪರ್ಧೆಗೆ ಮೊದಲಾಯಿತು, ಈ ಸ್ಪರ್ಧೆಗಾಗಿ ವ್ಯಕ್ತಿಗಳಿಗೆ ಬಹುಜನಮತದ ಆವಶ್ಯಕತೆ ಉಂಟಾಯಿತು, ಈ ಆವಶ್ಯಕತೆಗಾಗಿ ಪಕ್ಷಗಳ ನಿರ್ಮಾಣವಾಗಬೇಕಾಯಿತು, ಈ ಪಕ್ಷ ನಿರ್ಮಾಣಕಾರ್ಯದಲ್ಲಿ ವ್ಯಕ್ತಿಯ ಜಾತಿ- ಕುಲ- ಮತಗಳೆ ಆತನಿಗೆ ಸುಲಭಸಾಧನಗಳಾಗಿ ಪರಿಣಮಿಸಿದುವು. ನಿಜವಾಗಿ ನೋಡಿದರೆ ರಾಜಕಾರ್ಯದಲ್ಲಿಯ ಪಕ್ಷಗಳು ಸಮಾನ ವಿಚಾರಗಳ ಮೂಲಕ ರೂಪುಗೊಳ್ಳಬೇಕು. ಆದರೆ ನಮ್ಮಲ್ಲಿ ಇಂದು ವ್ಯಕ್ತಿಗಳು ತಮ್ಮ ಸ್ವಾರ್ಥಸಾಧನೆಗಾಗಿ ಜಾತಿ- ಕುಲ- ಮತದ ಜನಜಂಗುಳಿಯಲ್ಲಿ ಇಲ್ಲದ ಹುಚ್ಚು ಅಭಿನಿವೇಶವನ್ನು ಹಬ್ಬಿಸಿ, ಪಕ್ಷಗಳನ್ನು ಕಟ್ಟಿಕೊಂಡು ಕುಳಿತಿದ್ದಾರೆ. ಭಾರತದಲ್ಲಿ ಈಗಿರುವ ರಾಜಕೀಯ ಪಕ್ಷಗಳಲ್ಲಿ, ವಿಚಾರಸಮತೆಯಿಂದ ರೂಪುಗೊಂಡ ಪ್ರಭಾವಿಯಾದ ಪಕ್ಷವೆಂದರೆ ರಾಷ್ಟ್ರೀಯ ಸಭೆಯ ಅನುಯಾಯಿಗಳದೊಂದೆ! ಆದರೆ ಮಧ್ಯೆ ಕೆಲವು ದಿನ ಕೈಕೊಂಡ ಶಾಸನಸಭೆಗಳ ಅಧಿಕಾರದ ಮೂಲಕ ಅದರಲ್ಲಿಯೂ ಒಳಪಂಗಡ ತಲೆದೋರಿದುವು. ಅವು ಕೂಡ ಈ ಜಾತಿ-ಕುಲ-ಮತಗಳ ಆಧಾರದಿಂದಲೆ ಎದ್ದು ನಿಂತುಕೊಂಡಿದ್ದುವು. ಅದುದರಿಂದಲೆ ನಾಡಿನ- ಸಮಾಜದ- ಕಾರ್ಯವನ್ನಿಂದು ಮನವಾರೆ ಮಾಡಬೇಕೆನ್ನುವವರಿಗೆ ಈ ಜಾತಿ-ಮತಗಳ ಮುಳ್ಳು ದಾರಿಯಲ್ಲಿ ಆಗಾಗ ಆತಂಕಗೊಳಿಸುತ್ತದೆ. ಮುಖ್ಯವಾದ ರಾಜಕೀಯ ಅಧಿಕಾರ ಸೂತ್ರಗಳು ನಮ್ಮ ದೇಶದ—ನಮ್ಮವನೇ ಆದ—ಸರ್ವಾಧಿಕಾರಿಯ ಕೈಸೇರಲಿ, ಇಲ್ಲವೆ ನಮ್ಮವರಾದ ಪ್ರಜಾಪ್ರತಿನಿಧಿಗಳ ಕೈಸೇರಲಿ! ಆಗ ನೋಡಬಹುದು; ಈ ಜಾತೀಯ ಜಗಳಗಳೆಲ್ಲ ಎಲ್ಲಿಯೋ ಮಾಯವಾಗಿರುವುವು. ನಮ್ಮ ನಾಡಿನ ಇತಿಹಾಸವನ್ನು ನೋಡಿದರೆ, ನಮ್ಮಲ್ಲಿ ಕಂಡುಬರುವಷ್ಟು ಅನ್ಯ ಜಾತಿ-ಕುಲ-ಮತಗಳ ವಿಷಯಕವಾದ ಸಹಾನುಭೂತಿ ಇನ್ನಾವ ದೇಶದಲ್ಲಿಯೂ ಕಂಡುಬರುವುದಿಲ್ಲ. ಜಾತಿ-ಕುಲ-ಮತ-ಪಂಥಗಳು, ಬಲಿಷ್ಠವಾದ ರಾಷ್ಟ್ರಕ್ಕೆ ಅಲಂಕಾರಗಳಾಗಿ ಪರಿಣಮಿಸುವುವು; ಬಲಹೀನ ರಾಷ್ಟ್ರಗಳಿಗೆ ಆ ಅಲಂಕಾರಗಳೆ ಶೃಂಖಲೆಗಳಾಗಿ ಪರಿಣಮಿಸುವುವು. ಆರೋಗ್ಯಶಾಲಿಗಳಾದವರು ಅಲಂಕಾರಗಳನ್ನಿಟ್ಟುಕೊಂಡರೆ ಅಂದ ಹೆಚ್ಚಾಗುವುದು. ರೋಗಿಷ್ಠರು ಅವೇ ಅಲಂಕಾರಗಳನ್ನು ಧರಿಸಿದರೆ ಅಂದಕಾಣದಿಷ್ಟೇ ಅಲ್ಲ; ರೋಗಿಗೆ ಭಾರವಾಗಿ ಅವು ಬೇಡವೆನಿಸುವುವು. ಈ ರೋಗಿಯ ಪರಿಸ್ಥಿತಿಯಲ್ಲಿದೆ ನಮ್ಮ ದೇಶವಿಂದು!

'ಜಯಂತಿ' ಸಣ್ಣಕತೆಗಳ ಮೇಲಾಟ

ಕನ್ನಡ ನಾಡಿನ ಎಲ್ಲ ಭಾಗದ ಲೇಖಕರೂ ಉತ್ಸಾಹದಿಂದ ಇದರಲ್ಲಿ ಭಾಗ ವಹಿಸಬೇಕು, ಮೇಲಾಟವನ್ನು ಯಶಸ್ವಿಯಾಗಿಸಬೇಕು—ಎಂದು ನಮ್ಮ ಒತ್ತಾಯದ ಬಿನ್ನಹ.

—ಸಂಪಾದಕರು.

ಧರ್ಮಪ್ರಭು

(ಸಣ್ಣ ಕತೆ)

ಶ್ರೀ. "ವಿಶ್ವಕರ್ಮ" (ಹೂವಿನಹಡಗಲಿ), ಮದರಾಸು

ವಿಮಲೆ ತನ್ನ ಕೊನೆಯ ಪತ್ರದಲ್ಲಿ ಬರೆದ ಮನಸ್ಸನ್ನು ಕೆಣಕಿ ಕೇಳಿದ ಪ್ರಶ್ನೆಗೆ ಫೌಜುದಾರರು ಅಥವಾ ಅಂತಹ ಮನೋವೃತ್ತಿಯ ಪುರುಷರು ಏನೆಂದು ಉತ್ತರ ಕೊಡಬಹುದು?

★

ವಿಮಲೆಯು ಪಡಸಾಲೆಯಲ್ಲಿ ಕುಳಿತು 'ಪರಬಂಧೆ ಮಾತೆಯಾ ಗೌರವಕೆ ಕುಂದು' ಎಂಬ ಹಾಡನ್ನು ಗಾಂಧಾರದಲ್ಲಿ, ತದೇಕ ಚಿತ್ತದಿಂದ ಹಾಡುತ್ತಿದ್ದಳು. ಅವಳಲ್ಲಿ ಉಪಚಾರೋಕ್ತಿ, ಸಭ್ಯವರ್ತನೆ, ಸವಿನಯ ವಚನ ಮುಂತಾದ ಸುಗುಣಗಳು ನೆಲೆಮಾಡಿಕೊಂಡಿದ್ದುವು. ರೂಪು-ಯೌವನಗಳಿಗೇನೂ ಕೊರತೆಯಿರಲಿಲ್ಲ. ಕಾಲಕ್ಕೆ ತಕ್ಕಂತೆ, ಕನ್ನಡದ ಜೊತೆಗೆ ಇಂಗ್ಲಿಷನ್ನೂ ಸ್ವಲ್ಪ ಹಿಂದಿಯನ್ನೂ ಕಲಿತಿದ್ದು, ಆ ಊರ 'ಹಿಂದು ಹುಡುಗಿಯರ ಶಾಲೆ'ಯಲ್ಲಿ ಸಂಗೀತ ಉಪಾಧ್ಯಾಯಿನಿಯಾಗಿದ್ದಳು. ವಯಸ್ಸು ಹದಿನೆಂಟು; ಯಾವುದೋ ಒಂದು ಕಾರಣದಿಂದ ಇನ್ನೂ ವಿವಾಹವಾಗಿರಲಿಲ್ಲವಾದರೂ, ಮೂರ್ತಿ ಎಂಬೊರ್ವನನ್ನು ಲಗ್ನವಾಗಲು ನಿಶ್ಚಯಿಸಿದ್ದಳು— ಅವಳು ಹಾಡನ್ನು ಮುಗಿಸುವ ಸಮಯಕ್ಕೆ ಒಬ್ಬ ಸಿಪಾಯಿ, ಫೌಜದಾರ್ ಪ್ರಭಾಕರನ ಮನೆಯಿಂದ ಬಂದು 'ಹಾರ್ಮೋನಿಯಂ'ನ್ನೂ ಅದರ ಜೊತೆಯಲ್ಲಿ ಒಂದು ಪತ್ರವನ್ನೂ ಕೊಟ್ಟು ಹೊರಟು ಹೋದ. ಪತ್ರದೊಳಗಿನ ಸಂಗತಿ ಈ ರೀತಿ ಇತ್ತು :

"**ಮಿಸ್ ವಿಮಲಾಬಾಯಿ !**

ನಿಮ್ಮ 'ಹಾರ್ಮೋನಿಯಂ'ನಿಂದ ಕಾರ್ಯಕ್ರಮವು ಸರ್ವಾಂಗ ಸುಂದರವಾಗಿ ನೆರವೇರಿದ್ದಕ್ಕಾಗಿ, ನಿಮಗೆ ನಾನು ಆಭಾರಿಯಾಗಿದ್ದೇನೆ; ಆದರೆ ಒಂದು ವಿಷಯ: ನಿಮ್ಮ ಹಾರ್ಮೋನಿಯಮ್ಮಿನ ಒಂದೆರಡು ಶ್ರುತಿಗಳು ಅಪಸ್ವರ ಬಿದ್ದಿವೆ. ನಿಮ್ಮ ಅನುಮತಿಯಿಲ್ಲದೆ ಹೇಗೆ ಸರಿಪಡಿಸುವುದೆಂದು ಹಾಗೆಯೆ ಕಳಿಸಿರುತ್ತೇನೆ ಅವಶ್ಯವಿದ್ದಲ್ಲಿ ತಿರುಗಿ ಕಳುಹಬೇಕು; ಸರಿಮಾಡಿಸಿ ಕಳಿಸುತ್ತೇನೆ."

ವಿಮಲೆಗೆ ಆವಶ್ಯಕತೆಯೇನೂ ಕಂಡುಬರಲಿಲ್ಲ ; ಅವಳ ಮೂರ್ತಿಯು ಬಂದಾಗ ಎಲ್ಲಾ ಸರಿಪಡಿಸುತ್ತಾನೆಂದು ನಂಬಿಗೆ.

ಮೂರ್ತಿ ವಿಮಲೆಯನ್ನು ಚೆನ್ನಾಗಿ ಬಲ್ಲ. ಆಧುನಿಕ ರೀತಿಯ ಮನುಷ್ಯ; ಆದರೂ ತನ್ನ ತಂದೆ-ತಾಯಿಗಳ ಮಾತಿನ ಕಟ್ಟಿನೊಳಗೆ ಸಿಕ್ಕಿ ಬಿದ್ದು, ಅವಳೊಡನೆ ಒಪ್ಪಿಕೊಂಡಿದ್ದ ಪ್ರೇಮ-ವಿವಾಹಕ್ಕೆ ಅವನ ಮನಸ್ಥೈರ್ಯವು ಉಳಿಯಲಿಲ್ಲ. ಕೊನೆಗೆ ತನ್ನ ಹಿರಿಯರ ಅನುಮತಿಯ ಮೇರೆಗೆ ಬೇರೊಬ್ಬಳನ್ನು ಲಗ್ನವಾಗಲು ಒಪ್ಪಿದನು. ಆದರೆ ಈ ಜೀವನದಲ್ಲಿ ಪ್ರೇಮಬಂಧಿತ ವಿಮಲೆಯನ್ನು ಮರೆತಿರಲು ಹೇಗೆ ಸಾಧ್ಯವೆಂಬ ಯೋಚನೆಯು ಬಹುವಾಗಿ ಅವನನ್ನು ಬಾಧಿಸುತ್ತಿತ್ತು.

* * *

ಮೂರ್ತಿಗೊಂದು ಪತ್ರ :

"ನನ್ನ ಮನೋನಾಯಕ ಮೂರ್ತಿಯ ಸನ್ನಿಧಿಗೆ,

ನೀನು ನನ್ನನ್ನು ಕೈಬಿಡಬಹುದಾದ ಸಂಭವವಿದೆಯಂತೆ! ಎಲ್ಲಾ ದೈವೇಚ್ಛೆ! ನೀನು ಈಗ ಇಲ್ಲಿಗೆ ಬರುವುದಕ್ಕೆ ಯಾವ ತರದಿಂದಲೂ ಗಾಬರಿಯಾಗುವ ಕಾರಣವಿಲ್ಲ. ಒಂದು ಮಹತ್ತ್ವದ ವಿಷಯವಿದೆ. ಅದನ್ನು ನಿನಗೆ ತಿಳುಹಿ ಮನದ ಭಾರವನ್ನು ಇಳುಹಬೇಕೆಂದು ಹಾತೊರೆಯುತ್ತಿದ್ದೇನೆ. ನೀನು ಕೂಡಲೆ ಹೊರಟು ಬಂದು, ಮುಂದಾಲೋಚನೆಯನ್ನು ತಿಳಿಸಿ ಹೋಗಬೇಕು. ಸ್ನೇಹಿತಳೆಂಬ ಭಾವನೆ ಇಟ್ಟುಕೊಂಡು ಬಂದರೆ ಸಾಕು.

ಮಿಕ್ಕ ಸಂಗತಿಗಳು ಮುಖತಃ ತಿಳಿಯುವುವು.

ನಿನ್ನ,
ವಿಮಲೆ"

ಮೂರ್ತಿಯ ಅಂತರಂಗ ನಿಜವಾಗಿಯೂ ವಿಮಲೆಯನ್ನು ಪ್ರೀತಿಸುತ್ತದೆ. ಅವಳ ವಿಷಯದಲ್ಲಿ ಇವನಿಗೆ ತುಂಬಾ ಕನಿಕರ. ಅವಳ ಹಿತಚಿಂತಕ ಇವನು. ಅಂತೆಯೇ ಇವನು ಅವಳನ್ನು ವಂಚಿಸಿ ಬೇರೆ ವಿವಾಹವಾಗುವ ಸ್ಥಿತಿಯಲ್ಲಿದ್ದರೂ, ವಿಮಲೆ ತನಗೊದಗಿದ ಆಪತ್ಕಾಲದಲ್ಲಿ ಅವನ ಸಲಹೆಯನ್ನು ಬಯಸಿದಳು.

* * *

ಇಂದು ವಿಮಲೆಯ ಕೋಣೆಯಲ್ಲಿ ಮೂರ್ತಿ.

"ವಿಮಲಾ, ಸೌಖ್ಯವೇ ?"

"ಸೌಖ್ಯವೆಂದೇ ಹೇಳುವುದು ಉಚಿತ; ಆದರೂ ನನ್ನ ಜೀವಕ್ಕೆ ಅದೆಲ್ಲಿಯ ಸೌಖ್ಯ? ನನ್ನ ಜೀವನವೇ ದುಃಖಮಯ; ನಾನು ದುಃಖಜೀವಿ; ನನ್ನ ಬರೆಹ ದುಃಖಚಿತ್ರ! ಈ ನಿರ್ಭಾಗ್ಯಳಿಗೆ ಈ ದುಃಖಮಯ ಪ್ರಪಂಚದಿಂದ ಬಿಡುಗಡೆ ಎಂದಿಗೊ !"

"ವಿಮಲಾ, ದುಃಖಿಸದಿರು! ಜೀವನ ಸಮಸ್ಯೆಗಳು ಕಷ್ಟವಾಗಿ ಕಾಣತೊಡಗಿರುವುದು ನಿಜ; ಆದರೆ ನಿರಾಶೆಯನ್ನು ತಂದುಕೊಳ್ಳ-

ದಿರುವುದೇ ಜಾಣತನ. ಬುದ್ಧಿಬಲವೂ ನೀತಿಬಲವೂ ಸಡಿಲವಾಗದಿರಲಿ! ಇದೇ ಜೀವನ ಧ್ಯೇಯ, ಮುಕ್ತಿ! ನೊಂದ ಜೀವಿಗಳ ಕೊನೆ ಯಾವ ಸಮಯದಲ್ಲಿ ಯಾವ ಆಕಾರವನ್ನು ಹೊಂದುವುದೊ ಹೇಳುವುದು ಕಷ್ಟ. ನಿನ್ನನ್ನು ನನ್ನ ಜೀವದ ಗೆಳತಿಯನ್ನಾಗಿಸುವ ಹಿರಿಯಾಶೆ ಅಂತರಾಳದಲ್ಲಿ ಮಲಗಿದೆ. ನಮ್ಮಿಬ್ಬರ ಭಾವೀಜೀವನದ ಅನೇಕ ಸುವರ್ಣಸ್ವಪ್ನಗಳನ್ನು ಕಂಡಿದ್ದೆ, ಹಿಗ್ಗಿದ್ದೆ. ವಿಧಿಯೇ ಬೇರೆಯೆಣಿಸಿತು. 'ನೀನೇ ನನ್ನ ಜೀವದ ಗೆಳತಿ, ನಾನೇ ನಿನ್ನ ಪ್ರೇಮದ ನಲ್ಲ' ಎಂದು ಪರಸ್ಪರ ಭಾವಿಸಿಕೊಂಡಿರಲಿಲ್ಲವೇ? ಒಬ್ಬ ಅಬಲೆಯನ್ನು ನೋಯಿಸಿದ ಪಾಪವನ್ನು ನಾನು ಮಾಡಿದೆನು. 'ನನ್ನನ್ನೇ ನಂಬಿದ ನಿಷ್ಕಲ್ಮಷ ಹೃದಯವೊಂದಕ್ಕೆ ಅಂಕುಶ ಪ್ರಾಯನಾದೆನಲ್ಲವೇ?' ಎಂದು ನನ್ನ ಅಂತರಾಳದಲ್ಲಿ ಚುಚ್ಚುತ್ತದೆ....ಯೋಚಿಸಿದರೆ ಏನೂ ತಿಳಿಯುವುದಿಲ್ಲ. ನನ್ನ ದುರದೃಷ್ಟಕ್ಕಾಗಿ ನನ್ನನ್ನೇ ಹಳಿದುಕೊಳ್ಳುತ್ತೇನೆ. ಉಕ್ಕಿಬರುವ ದುಃಖವನ್ನು ತಡೆಯಲಾರದೆ ಎಷ್ಟೋ ಸಲ ಅತ್ತುಬಿಡುತ್ತೇನೆ; ಯಾರು ಸಂತಯಿಸುವರು?......." ಹಟಾತ್ತಾಗಿ ಮಾತು ನಿಂತಿತು. ಕಣ್ಣುಗಳಲ್ಲಿ ನೀರು ಬಂದಿತು. ಕಂಠ ಗದ್ಗದಿತವಾಯಿತು. ಅಷ್ಟರಲ್ಲಿಯೆ ತರತರನೆ ನಡುಗುವ ದೇಹವೊಂದು ಅವನ ದೇಹಕ್ಕೆ ಒರಗಲು, ಎರಡೂ ದೇಹಗಳು ಒಂದಕ್ಕೊಂದು ಆಸರವಾದುವು. 'ಪೂರ್ಣ ತೆರೆದವರು ಪಾಪಿ' ಎಂಬಂತೆ ನಾಲ್ಕು ಕಣ್ಣುಗಳೂ ಅರ್ಧ ಮುಚ್ಚಿಕೊಂಡಿದ್ದುವು. ಮೌನವೇ ಆ ಸಮಯದ ದೊರೆ........ಅವಳ ಕಣ್ಣೀರುಗಳಿಗೆ ಅವನ ಕೈಬೆರಳುಗಳ ಪರಿಚಯವಾಯಿತು. ಸ್ವಲ್ಪ ಹೊತ್ತು ಎರಡೂ ಮನಸ್ಸುಗಳು ಅನೇಕ ಲೋಕಗಳಲ್ಲಿ ಸಂಚರಿಸಿ ಬಂದು ಮನೆಸೇರಿದುವು.

ಆಗ ಮೂರ್ತಿ ಮೆಲುದನಿಯಲ್ಲಿ, "ವಿಮಲಾ, ಮುಂದಿನ ಕಾರ್ಯಕ್ರಮವೇನು?" ಎಂದ. ವಿಮಲೆ 'ಸೂಟ್‌ಕೇಸ'ನ್ನು ತೆರೆದು, ಅದರಲ್ಲಿದ್ದ ಕೆಲವು ಕಾಗದ-ಪತ್ರಗಳನ್ನು ತಂದು ಮೂರ್ತಿಯ ಮುಂದೆ ಚೆಲ್ಲಿದಳು. ಅವನು ಒಂದೊಂದನ್ನೇ ಓದತೊಡಗಿದ:

" ಮಿಸ್ ವಿಮಲಾಬಾಯಿ,

ಮೊನ್ನೆ ನಿಮ್ಮ 'ಹಾರ್ಮೋನಿಯಂ' ವಾಪಸು ಕಳಿಸುವಾಗ ಅದರೊಟ್ಟಿಗೆ ಒಂದು ಪತ್ರವನ್ನೂ ಕಳಿಸಿದ್ದೆ. ಪತ್ರದ ಕೊನೆಯಲ್ಲಿ ಹೆಸರಿಲ್ಲದ್ದರಿಂದ, ಯಾರೋ ಬರೆದಿರಬಹುದೆಂದು ಸಂಶಯಗೊಂಡು ಉತ್ತರ ಬರೆಯದೆ ಬಿಟ್ಟೆಯಾ? ನೀನು ಯಾವುದಕ್ಕೂ ಸಂಕೋಚಪಡಬೇಕಾಗಿಲ್ಲ. ನನಗೂ ಸಂಗೀತದಲ್ಲಿ ಅಭಿರುಚಿಯುಂಟು. ನಿಮ್ಮ 'ಹಾರ್ಮೋನಿಯಂ'ಗಿಂತ ಉತ್ತಮವಾದದ್ದು ಕೂಡಾ ನನ್ನಲ್ಲಿದೆ. ನಿಮಗೆ ಬೇಕಾದಾಗ ತಿಳಿಸಿದರೆ, ಕಳಿಸಿಕೊಡುತ್ತೇನೆ. ನಿಮ್ಮ ಇಷ್ಟಪ್ರಕಾರ ಉಪಯೋಗಿಸಿಕೊಳ್ಳಬಹುದು. ನಿಮ್ಮ ಉತ್ತರವನ್ನೇ ನಿರೀಕ್ಷಿಸುತ್ತಿರುವ,

ಪ್ರಭಾಕರ "

ಮೂರ್ತಿ ಈ ಪತ್ರದಲ್ಲಿ ವಿಶೇಷವೇನನ್ನೂ ಕಾಣಲಿಲ್ಲ. ಆದರೆ "ವಿಮಲಾ, ಈ ಪ್ರಭಾಕರನಾರು?" ಎಂದ. "ಈ ಊರಿನ ಫೌಜುದಾರರು" ಎಂದು ವಿಮಲೆ ಉತ್ತರವಿತ್ತಳು.

ಎರಡನೆಯ ಪತ್ರ ನೋಡತೊಡಗಿದ ಮೂರ್ತಿ. ವಿಮಲೆಯ ಬರೆಹ; ಅವಳು ತಾನು ಬರೆದ ಪ್ರತ್ಯುತ್ತರಗಳ ಪ್ರತಿಗಳನ್ನಿಟ್ಟಿದ್ದಳು:

" ಅಣ್ಣಯ್ಯಾ,

ನೀವು ಬರೆದ ಪತ್ರದೊಳಗಿನ ವಿಷಯಗಳಲ್ಲಿ ನನಗೆ ಅವಶ್ಯವಾದುದೇನೂ ಇರುವುದಿಲ್ಲ; ಕ್ಷಮಿಸಿರಿ!

ನಿಮ್ಮ ಸಹೋದರಿ
ವಿಮಲಾಬಾಯಿ "

ಮುಂದಿನ ಪತ್ರಗಳನ್ನು ನೋಡತೊಡಗಿದ:

" ಪ್ರೀತಿಯ ಮಿಸ್ ವಿಮಲಾ,

ನೀನು ಅನ್ಯಥಾ ಭಾವಿಸಿಕೊಂಡಂತೆ ತೋರುತ್ತದೆ. ನೀನು ಯಾವ ರೀತಿಯಲ್ಲೂ ತೊಂದರೆಗೊಳ್ಳಬೇಡ. ಏನಿದ್ದರೂ ತಿಳಿಸಿಬಿಡು. ನನ್ನ ಯೋಗ್ಯತೆ ಮೀರಿ ನಿನಗೆ ಸಹಾಯಮಾಡಲು ಪ್ರಯತ್ನಿಸುತ್ತೇನೆ. ನಾನು ನಾಳೆಯ ದಿವಸ ಸಾಯಂಕಾಲ ಬೆಂಗಳೂರಿಗೆ ಹೋಗುವವನಿದ್ದೇನೆ. ಆಲಸ್ಯಮಾಡದೆ ಉತ್ತರ ಬರೆ; ಮತ್ತು ಬೆಂಗಳೂರಿನಿಂದ ನಿನಗೇನು 'ಫ್ಯಾನ್ಸಿ' ಸಾಮಾನುಗಳನ್ನು ತರಬೇಕೆಂಬುದನ್ನು ಮರೆಯದೆ ತಿಳಿಸು!

ನಿನ್ನ ಪ್ರೇಮಪಾತ್ರನಾದ
ಪ್ರಭಾಕರ "

" ಅಣ್ಣಾ,

ನಾನು ನಿಮಗೆ ತಿಳಿಸಬೇಕಾದುದೇನೂ ಸದ್ಯಕ್ಕೆ ಇಲ್ಲ. ಅಂತಹ ವಿಪತ್ತಿನ ಸಂದರ್ಭ ಬಂದರೆ ಖುದ್ದು ಪೋಲೀಸು ಠಾಣಾಕ್ಕೆ ಬಂದು ತಿಳಿಸುತ್ತೇನೆ. ಇನ್ನು ಬೆಂಗಳೂರು, ಫ್ಯಾನ್ಸಿ ಸಾಮಾನುಗಳು, ಇವು ಏನು? ಏತಕ್ಕೆ? ಯಾರಿಗೆ ಸಂಬಂಧಿಸಿದುವುಗಳು? ನಾನಾದರೊ ಬೆಂಗಳೂರನ್ನೇ ನೋಡಿಲ್ಲ; ಅಲ್ಲೇ ನಿರುತ್ತದೆಯೋ ಗೊತ್ತಿಲ್ಲ; ಎಂದಮೇಲೆ ನೀವು ಹಾಕಿರುವ ಪ್ರಶ್ನೆಯು ಅಸಮಂಜಸವಲ್ಲವೆ? ಸಹೋದರಾ, ಕೊನೆಗೆ 'ಪ್ರೇಮಪಾತ್ರನಾದ' ಎಂಬ ಶಬ್ದವನ್ನು ಉಪಯೋಗಿಸಿದುದೇಕೆ? ಅದರಿಂದ ನನ್ನ ಮನಕ್ಕೆ ಬಾಧೆಯಾಗುವುದಿಲ್ಲವೇ? ದಯೆಯಿಟ್ಟು ಇನ್ನುಮೇಲೆ ಹಾಗೆ ಬರೆಯಬಾರದೆಂದು ಬೇಡಿಕೊಳ್ಳುತ್ತೇನೆ.

ನಿನ್ನ ಸಹೋದರಿ
ವಿಮಲಾಬಾಯಿ "

" ಪ್ರೀತಿಯ ಮಿಸ್ ವಿಮಲೆ,

ನಾನು ಈ ದಿನವೇ ಸಾಯಂಕಾಲ ಬೆಂಗಳೂರಿಗೆ ಹೊರಡುತ್ತೇನೆ. ನೀನು ಬೆಂಗಳೂರು ನೋಡಿರದಿದ್ದರೆ ನನ್ನೊಡನೆ ಬರಬಹುದು. ಬೆಂಗಳೂರನ್ನು ತೋರಿಸಿಕೊಂಡು ಬರುತ್ತೇನೆ. ಮತ್ತು ವೆಚ್ಚದ ಸಲುವಾಗಿ ಹಣದ ಚಿಂತೆಯ ಗೋಜಿಗೆ ನೀ ಹೋಗಬೇಡ. ನಾನು ಎಲ್ಲಾ ವ್ಯವಸ್ಥೆ ಮಾಡುತ್ತೇನೆ. ಇನ್ನು

‘ ಪ್ರೇಮಪಾತ್ರನಾದ ’ ಎಂಬ ಮಾತಿನ ಅರ್ಥ ಮತ್ತು ಸಂದರ್ಭ-ಗಳು ನಿನಗೆ ತಿಳಿಯಲಿಲ್ಲವೆಂದರೆ ಆಶ್ಚರ್ಯವಾಗುತ್ತದೆ. ನೀನು ನಾಗರೀಕ ಪ್ರಪಂಚದಿಂದ ಇನ್ನೂ ಅಷ್ಟುದೂರ ಇರುವೆಯಾ ? ನಾನು ನಿನ್ನನ್ನು ಪ್ರೀತಿಸುತ್ತೇನೆ. ನನ್ನ ಪ್ರೇಮದಾಹವನ್ನು ನೀನು ಅರಿಯೆಯಾ? ಈ ಸಂದರ್ಭದಲ್ಲಿ ನಿನ್ನ ಸಲುವಾಗಿ ಏನು-ಮಾಡಲೂ ಸಿದ್ಧನಿರುವೆನು ; ಕೂಡಲೇ ಉತ್ತರ ಬರೆ !

ನಿನ್ನ ಪ್ರೇಮಿ
ಪ್ರಭಾಕರ ”

ಸಹೋದರಾ,

ಅಂದು ನೀವು ಬರೆದ ಪತ್ರವನ್ನೋದಿ ನನಗೆ ಬಹಳ ದುಃಖ-ವಾಯಿತು. ನಿಮ್ಮಲ್ಲಿ ಇಂತಹ ಕುಕಲ್ಪನೆಗಳೇ? ಸರಕಾರವು “ ಧರ್ಮ ಭಾಂಡಾರ ” ಎಂದೇ ನನ್ನ ಕಲ್ಪನೆ. ನೀವು ಗೌರವ-ಯುತರು. ಪ್ರಾಮಾಣಿಕತೆ, ಸತ್ಯ, ನ್ಯಾಯ, ಧರ್ಮ, ನೀತಿಗಳು ನಿಮಗೆ ಭೂಷಣ. ಸುಳ್ಳು, ಮೋಸ, ಕಪಟ, ವಂಚನೆಗಳಿಂದ ಜನರನ್ನು ರಕ್ಷಿಸುವುದು ನಿಮ್ಮ ಕರ್ತವ್ಯ. ಅಧಿಕಾರಸ್ಥರೆಲ್ಲಾ ದೈವಸ್ವರೂಪಿಗಳಾಗಿರಬೇಕು. ಅಣ್ಣಾ, ಬೇಲಿಯೇ ಎದ್ದು ಹೊಲ-ಮೇಯುವುದಾದರೆ ಹೇಗೆ?

ಇನ್ನು ನೀನು ಧೊರೆ, ಪರರು ನಿನ್ನ ದಾಸರು, ನಿನ್ನ ಮುಂದೆ ಅತ್ಯಲ್ಪರು ಎಂಬ ಭಾವನೆಯನ್ನಿಟ್ಟುಕೊಂಡಿದ್ದರೆ, ಅದು ಶುದ್ಧ ತಪ್ಪು. ಈ ನನ್ನ ಪತ್ರಾಭಿಪ್ರಾಯವು ಸಫಲವಾಗುವುದೆಂದು ನಂಬಿರುವ,

ನಿಮ್ಮ ದೀನ ಸಹೋದರಿ,
ವಿಮಲಾಬಾಯಿ ”

ಪ್ರಿಯ ವಿಮಲೆ,

ಇಷ್ಟೆಲ್ಲಾ ವೇದಾಂತವನ್ನೆಲ್ಲಿ ಕಲಿತಿರುವೆ? ನೀಹೇಳುವುದು ನಿಜವಿರಬಹುದು; ಆದರೂ ನಿನ್ನ ರೂಪವು ನನ್ನನ್ನು ಮುಗ್ಧ-ನನ್ನಾಗಿ ಮಾಡಿದೆ. ನನ್ನ ಮನವು ಸೋತು ಹೋಗಿ ನಿನ್ನ ಆಶ್ರಯಬಯಸಿದೆ. ನನ್ನಕೈಗೆ ಸಿಕ್ಕದೆ ನೀ ಹೇಗೆ ಹೋಗುವಿಯೋ ನೋಡುವೆನು. ಆದರೂ, ನೀನಾಗಿಯೇ ಪ್ರೀತಿಯಿಂದ ಒಲಿದರೆ ಅದೆಂತಹ ಸ್ವರ್ಗಸುಖವನ್ನನುಭವಿಸಬಹುದು ನೋಡು !

ಒಂದು ಹೂ—ಗುಲಾಬಿ ಹೂವು—ಆಗ ತಾನೇ ಅರಳಿ ಸುವಾ-ಸನೆಯನ್ನು ಬೀರುತ್ತಿರುತ್ತದೆ. ಅದನ್ನು ನೋಡಿದ ಕಣ್ಣುಗಳು ಅರಳುತ್ತವೆ; ಕೈಗಳು ಗಿಡದಿಂದ ಆ ಗುಲಾಬಿಯನ್ನು ಕಿತ್ತು ತೆಗೆಯುತ್ತವೆ; ನಾಸಿಕವು ಅದರ ಗಂಧವನ್ನು ಘ್ರಾಣಿಸುತ್ತದೆ; ಆತ್ಮವು ಸಂತೋಷಿಸುತ್ತದೆ. ಇದರಲ್ಲಿ ಗುಲಾಬಿಯ ತಪ್ಪೋ, ಮೂಸುವವನ ತಪ್ಪೋ ? ಗುಲಾಬಿಯನ್ನು ಹೊಂದಿ ಆನಂದಿಸದೆ ಅಜ್ಞಾತವಾಸಕ್ಕೆ ತಳ್ಳುವುದೇ? ಸುಮ್ಮನೆ ಹಲವಾರು ಯೋಚನೆ-ಮಾಡಿ ಚಿಂತೆಗೊಳಗಾಗಬೇಡ. ಬೇಗನೆ ನಿನ್ನ ಪ್ರೇಮಭಿಕ್ಷೆ-ಯನ್ನು ನೀಡು!

ನಿನ್ನ ಪ್ರೇಮಿ,
ಪ್ರಭಾಕರ ”

“ ಅಣ್ಣಯ್ಯಾ,

ನಿನ್ನಂತಹ ತಿಳಿದವರಲ್ಲಿ ನನ್ನ ಮಾತುಗಳು ‘ ಕೋಣನ ಮುಂದೆ ಕಿನ್ನರಿ ಬಾರಿಸಿದಂತೆ ’ ಆಗುವುವೆಂದು ನಂಬಿರಲಿಲ್ಲ. ನಾನು ರೂಪವತಿ ಎಂಬ ಮಾತಿಗೆ ಒಪ್ಪಲಾರೆ. ಆದರೆ, ಅದೊಂದು ಮಾನವನ ಮನ;—ಮನುಷ್ಯನು ತನಗೆ ಸುಲಭವಾಗಿ ದೊರೆತ ವಸ್ತುವನ್ನು ಪ್ರೀತಿಸುವುದಕ್ಕಿಂತಲೂ ದೊರೆಯದ ವಸ್ತುವಿಗಾಗಿ ಹಂಬಲಿಸುವುದು ಹೆಚ್ಚು. ದೊರೆಯದ, ಅಸ್ತಿತ್ವವಿಲ್ಲದ, ಸ್ವಪ್ನ-ತುಲ್ಯವಾದ ಮಾಯೆಯನ್ನು ಕಲ್ಪಿಸಿಕೊಂಡು ಪ್ರೀತಿಸುವುದು, ಹಂಬಲಿಸುವುದು ಹುಚ್ಚುತನ. ಏಕಾದಶಿಯ ಉಪವಾಸವ್ರತ ಮಾಡುವವನು, ಬಜಾರಿನಲ್ಲಿ ಅಂಗಡಿಯೊಳಗಿನ ಮಿಠಾಯಿ ನೋಡಿಬಾಯಿಯಲ್ಲಿ ನೀರು ತಂದುಕೊಂಡರೆ ತಪ್ಪುಂಟಾಗದು ? ನೀವು ಸುಖವೆಂದು ಯೋಚಿಸುವುದು ಮಿಥ್ಯವು—ಮಾಯವು. ನಿಮ್ಮಪತ್ರದಲ್ಲಿ ನಿಮ್ಮ ಅಧಿಕಾರದರ್ಪವನ್ನೂ ತೋರಿಸಿದಂತಿದೆ. ನಿಮ್ಮ ಮನೋಭಾವವು ನಿಮ್ಮ ಬರೆಹದಲ್ಲಿ ಸ್ಪಷ್ಟವಾಗಿ ಕಾಣು-ತ್ತಲಿದೆ. ಆದರೆ ಈ ವಿಮಲೆಯ ವಿವೇಕವು ಸಂಪೂರ್ಣವಾಗಿ ನಾಶ-ವಾಗಿಲ್ಲ. ನನ್ನ ದೇವರಿಂದ,—ನನ್ನ ಹೃದಯವನ್ನಾಕ್ರಮಿಸಿರುವ ‘ ಮೂರ್ತಿ ’ಯಿಂದ ನಾನು ರಕ್ಷಿಸಲ್ಪಡುವುದರಲ್ಲಿ ಸಂದೇಹ-ವಿಲ್ಲ. ಇನ್ನಾದರೂ ಹುಚ್ಚಾಟಗಳಿಗೆ ಹೋಗದೆ ಬುದ್ಧಿ ತಂದು-

ಸರ್ವಮಾನ್ಯ !
ಚಳಿಗಾಲದಲ್ಲಿ ಶಕ್ತಿಯ ಬಗ್ಗೆ
ಸರ್ವೋತ್ಕೃಷ್ಟವೆಂದು
ರಕ್ತವರ್ಧಕವನ್ನೇ
ಎಲ್ಲ ಜನರು ಉಪಯೋಗಿಸುತ್ತಿರುವರು.



ಅಷ್ಟವರ್ಗ
ಚ್ಯವನಪ್ರಾಶ
ಸುವರ್ಣ ಮಾಲಿನೀ ವಸಂತ
ಮಕರಧ್ವಜಗುಟಿ
ಮುಂತಾದ ಶಕ್ತಿವರ್ಧಕ ಔಷಧಗಳನ್ನು ತರಿಸಿರಿ.

ಕರ್ನಾಟಕ ಕೇಂದ್ರ ಮರಾಠಾಗಲ್ಲಿ, ಹುಬ್ಬಳ್ಳಿ.

ಕೊಳ್ಳಿರಿ. ನನ್ನನ್ನು ಸಂಬೋಧಿಸುವಾಗ ‘ ವಿಮಲಾಬಾಯಿ ’ ಎನ್ನಿರಿ. ನಿಮ್ಮ ಸಹೋದರಿಯೆಂಬ ಭಾವನೆಯನ್ನು ನಿಮ್ಮ ಮನದಲ್ಲಿ ಬಿತ್ತಿಕೊಳ್ಳಿರಿ. ಅಣ್ಣಾ, ಶ್ರೇಯಸ್ಕರ ಕರ್ತವ್ಯಗಳಲ್ಲಿ ನಿರತರಾಗಿರಿ. ನಿಮ್ಮ ಅವಹೇಳನದ ಕಾರ್ಯಗಳಿಗೆ ಇಂಬು-ಗೊಡಬೇಡಿರಿ. ಅಣ್ಣಾ, ನಿಮ್ಮ ತಂಗಿಯೆಂದು ನನ್ನನ್ನು ಸಂಬೋಧಿಸಿ ನನ್ನನ್ನು ಸಂತೋಷಗೊಳಿಸಿರಿ. ನೀವು ಗೃಹಸ್ಥ-ರಲ್ಲವೇ ? ನಿಮ್ಮ ಮಡದಿಯೊಡನೆ ಸುಖವಾಗಿ ಸಂಸಾರ ಮಾಡಿಕೊಂಡು, ಪರಸ್ತ್ರೀಯರಲ್ಲಿ ಪೂಜ್ಯಭಾವವನ್ನು ತಂದುಕೊಳ್ಳಿರಿ!

ನಿಮ್ಮ ಹೃದಯದ ಉಲ್ಲೋಲ ಕಲ್ಲೋಲವು ಶಾಂತವಾಗ-ಲೆಂದು ಭಾರತಾಂಬೆಯ ಚರಣಗಳಲ್ಲಿ ಪ್ರಾರ್ಥಿಸುವೆನು.

ನಿಮ್ಮ ಪ್ರೀತಿಯ ಸಹೋದರಿ,
ವಿಮಲಾಬಾಯಿ ’’

“ ಪ್ರಿಯೆ, ವಿಮಲಾ !

ನಿನ್ನ ‘ ನೀತಿ ಚಿಂತಾಮಣಿ ’ ಪುಸ್ತಕದ ಗಂಟನ್ನು ನನ್ನ ಮುಂದೆ ಬಿಚ್ಚುವುದರಿಂದ ಏನೂ ಪ್ರಯೋಜನವಿಲ್ಲ. ನಾನಾ-ದರೂ ಈವರೆಗೂ ನಿನ್ನ ಗೋಜಿಗೆ ಬರಲು ಇಚ್ಛಿಸಿರಲಿಲ್ಲ. ಒಳ್ಳೆ-ಯವಳೆಂದು ಭಾವಿಸಿದ್ದೆ. ಈಗ ನಿನ್ನ ಗುಣ ತಿಳಿದು, ನಿನ್ನ ಯೋಗ್ಯತೆಯನ್ನರಿತು, ನಿನ್ನೊಡನೆ ಸಂಬಂಧ ಮಾಡಿಕೊಳ್ಳ ಬಯಸಿರುವೆನು. ನೀನು ಸುಮ್ಮನೆ ದೇವರನ್ನು ನಂಬಿದರೆ, ದೇವರು ಬಂದು ನಿನ್ನನ್ನು ಕಾಯುವನೇ ? ಎಲ್ಲಾ ಹುಚ್ಚು ! ನಿನ್ನ ದುರ್ಘಟನೆಯ ವಿಷಯವಾಗಿ ಎಲ್ಲೆಲ್ಲಿಯೂ ವ್ಯಾಖ್ಯಾನಗಳು ನಡೆಯುತ್ತಿರುವಾಗ, ನೀನು ಮಾತ್ರ ದ್ರೌಪತಿಯ ತುಣುಕಿನಂತೆ ನಟಿಸುವೆ. ನಿನ್ನ ಕಾರಸ್ಥಾನ ನನಗೆ ಎಲ್ಲಾ ತಿಳಿದಿದೆ. ಸುಮ್ಮನೆ ಜಂಭ ಕೊಚ್ಚಿಕೊಳ್ಳಬೇಡ. ಅಥವಾ ನೀನು ‘ ಈವರೆಗೂ ಯಾರನ್ನೂ ಪ್ರೀತಿಸಿಲ್ಲ, ಯಾರಿಗೂ ಹೃದಯವನ್ನರ್ಪಿಸಿಲ್ಲ, ಪುರುಷರೆಲ್ಲರೂ ಸಹೋದರ ಸಮಾನರು ’ ಎಂದು ಮನಸ್ಸಾಕ್ಷಿ-ಯಿಂದ ಸತ್ಯವಾಗಿ ಹೇಳು! ನಾನು ನಿನ್ನನ್ನು ತಂಗಿಯೆಂದೇ ಕರೆಯುವೆನು. ಸುಮ್ಮನೇ ಪತ್ರವ್ಯವಹಾರವನ್ನು ಬೆಳಸುತ್ತಾ ಹೋಗುವುದರಲ್ಲಿ ಪ್ರಯೋಜನವಿಲ್ಲ. ಆಗುವ ಕಾರ್ಯವು ಬೇಗನೇ ಆಗಲಿ !

ನಿನ್ನ ಪ್ರೇಮಿ,
ಪ್ರಭಾಕರ ’’

“ ಪ್ರಿಯ ಸಹೋದರಾ,

ನೀನು ನನ್ನ ನಡತೆ ಗುಣಗಳ ವ್ಯಾಖ್ಯಾನಗಳನ್ನು ಕೇಳಿ ತಿಳಿದು-ಕೊಂಡುದರಲ್ಲಿ ನನ್ನ ಮೂರ್ತಿಯ ಹೆಸರೇ ಇರಬಹುದು. ಅವನೇ ನನ್ನ ದೇವರು, ನನ್ನ ರಕ್ಷಕನು. ಅವನಿರುವವರೆಗೂ ನನಗೆ ಯಾವ ಭಯವೂ ಇಲ್ಲ. ಆದೊಂದು ನಿಷ್ಕಲ್ಮಷ ಪ್ರೇಮ-ಮಯವ್ಯಕ್ತಿ. ನಾವಿಬ್ಬರೂ ಪ್ರೀತಿಸಿದುದುಂಟು. ನಮ್ಮ ಪ್ರೇಮ–ಜೀವನದಲ್ಲಿ–ನಡತೆಯಲ್ಲಿ ಅತಿಕ್ರಮಣವನ್ನು ಕಲ್ಪಿಸಿಕೊಂಡವರು ತಪ್ಪದೆ ನರಕಕ್ಕೆ ಹೋಗುವರು. ಲೋಕವನ್ನು ಮೆಚ್ಚಿಸಿ ನಡೆ-ಯುತ್ತೇನೆಂಬುದು ಸುಳ್ಳು, ಸಾಧ್ಯವಿಲ್ಲ! ನಾನು ನಿಜವಾಗಿಯೂ, ಆತ್ಮಸಾಕ್ಷಿಯಾಗಿಯೂ ನನ್ನ ಮೂರ್ತಿಯನ್ನುಳಿದು ಮಿಕ್ಕ ಪುರುಷರನ್ನೆಲ್ಲಾ ನನ್ನ ಒಡಹುಟ್ಟಿದವರೆಂದು ಹೇಳುತ್ತೇನೆ. ನೀನು ಮಾತ್ರ ಇನ್ನುಮೇಲೆ ದೋಷಕಲ್ಪಿತ ಮಾತುಗಳನ್ನುಪ-ಯೋಗಿಸಬೇಡ.

ನಿನ್ನ ಮನವು ಸುಗುಣಗಳ ತವರುಮನೆಯಾಗಲಿ !

ನಿನ್ನ ಸಹೋದರೀ,
ವಿಮಲಾಬಾಯಿ ’’

ಸಹೋದರಿ ವಿಮಲೆ,

ನಿನ್ನ ಬರವಣಿಗೆಯು ಸಹಜವಾಗಿಯೇ ಇದೆ. ನಿನ್ನ ದುಃಖ-ವನ್ನು ನೋಡಿ ನನಗೆ ಕನಿಕರವೆನಿಸುತ್ತದೆ. ಬೇರೊಬ್ಬಳನ್ನು ಮದುವೆಯಾಗಲು ಪ್ರಯತ್ನ ನಡೆಯಿಸಿರುವ ಆ ಮೂರ್ತಿಯನ್ನು, ನೀನೇಕೆ ನಂಬಿಕೊಂಡಿರುವೆ ? ಓಡಿಹೋದ ಆ ಸತ್ಯವಾನನನ್ನು ಸಾವಿತ್ರಿಯಾದ ನೀನು ಹಿಂದಕ್ಕೆ ತರಲು ಸಾಧ್ಯವೇ ? ಇಲ್ಲ, ಇನ್ನು ಮುಂದೆ ನಾನು ನಿನ್ನನ್ನು ಸಹೋದರಿಯೆಂದು ಸಂಬೋ-ಧಿಸಲಾರೆ ! ಪ್ರಿಯೆ ಎನ್ನಲಿಕ್ಕೆ ನನಗೆ ಸ್ವಾತಂತ್ರ್ಯವಿರಲಿ ! ಬೇಗನೆ ನಮ್ಮ ಪ್ರೇಮವನ್ನು ಸಫಲಗೊಳಿಸು ! ನಾನು ಇನ್ನು ನಿನ್ನ ಅನೇಕ ಸಲಹೆಗಳನ್ನು ಕೇಳುತ್ತಾ ಕೊರಗಲಾರೆ ; ನಾನಾ-ರೆಂಬುದು ನಿನಗೆ ಗೊತ್ತಿದೆಯಷ್ಟೇ ?

ನಿನ್ನ ಪ್ರೇಮದ ನಲ್ಲ,
ಪ್ರಭಾಕರ
ಫೌಜುದಾರ್ ’’

ಪತ್ರಗಳು ಮುಗಿದುವು. ಮೂರ್ತಿ ತಲೆಯೆತ್ತಿ ನೋಡಿದ. ವಿಮಲೆಯು ಪ್ರಸನ್ನಮುಖಿಯಾಗಿದ್ದಳು. “ ಮುಂದೇನು, ವಿಮಲಾ ? ’’ ಎಂದು ಕೇಳಿದ.

“ ಅದಕ್ಕಾಗಿಯೇ ನಿನ್ನನ್ನು ಕರೆಯಿಸಿದುದು........ಪೋಲೀಸು ಅಧಿಕಾರಿಗಳು ನಿಷ್ಕಾರಣವಾಗಿ ತೊಂದರೆ ಕೊಡಬಹುದು; ಅಷ್ಟೆ ಅಲ್ಲವೆ ? ....ಮೂರ್ತಿ, ಮೊನ್ನೆ ಪ್ರಭಾಕರನ ಹೆಂಡತಿ ತನ್ನ ತವರುಮನೆಗೆ ಹೋದಳು. ನಾನು ಅದೇ ಮೊದಲು ಅವಳನ್ನು ನೋಡಿದ್ದು. ಪಾಪ ! ಇನ್ನೂ ಚಿಕ್ಕ ವಯಸ್ಸು ; ಏನನ್ನೂ ಅರಿಯ-ದವಳು. ಪ್ರಕಾಶಮಾನವಾದ ಕಣ್ಣುಗಳುಳ್ಳ ಚಂದ್ರನಂತಹ ಮುಖ. ಅದಕ್ಕೆ ಗಂಡನ ಈ ಮುಖ ! ಯಾವಾಗಲೂ ಪುರುಷ-ರನ್ನೇ ನಂಬಬಾರದು. ಮೋಸಗಾರರು ! ಒಂದೇ ವ್ಯಕ್ತಿಯನ್ನು ಪ್ರೀತಿಸಿಕೊಂಡು ಹೋಗುವ ಗುಣವೇ ಶೂನ್ಯ ಅವರಲ್ಲಿ........ ’’

ಮೂರ್ತಿಗೂ ಮನಸ್ಸಿನಲ್ಲಿ ಅಳುಕಿತು. ಆದರೂ ಮುಂದೆ ಬಿದ್ದಿರುವ ಕಾರ್ಯದ ಕಡೆಗೆ ಲಕ್ಷ್ಯಗೊಟ್ಟು, ಬೇಗಬೇಗನೆ ಒಂದು ಪತ್ರ ಗೀಚಿ, ವಿಮಲೆಯ ಕೈಗಿತ್ತು. “ ವಿಮಲಾ, ಇದನ್ನು ಪ್ರಭಾಕರನಿಗೆ ಕಳಿಸು ; ಬಹುಶಃ ಪ್ರತ್ಯುತ್ತರ ಬರುವುದಿಲ್ಲ. ಒಂದುವೇಳೆ ಬಂದರೆ ನನಗೆ ತಿಳಿಸು ’’ ಎಂದು ಹೇಳಿ ಹೊರಟು-ಹೋದ. ವಿಮಲೆಯೂ ಅದನ್ನು ಓದಿದಳು ; ನಿಜವಾಗಿಯೂ ಮೂರ್ತಿಯ ಸ್ಫೂರ್ತಿಗೆ ಮೆಚ್ಚಿದಳು.

* * *

ಪ್ರಭಾಕರನು ಇಂದು ತನ್ನ ಇಷ್ಟಾರ್ಥ ನೆರವೇರಬಹುದೆಂದು ಯೋಚಿಸುತ್ತಾ, ಆನಂದದಿಂದ ವಿಮಲೆಯ ಪತ್ರವನ್ನು ಓದ-ತೊಡಗಿದ.

ಅಣ್ಣಯ್ಯಾ,

ಮೊನ್ನೆ ನಿಮ್ಮ ಹೆಂಡತಿಯನ್ನು ನೋಡಿದೆ. ಚಂದ್ರನನ್ನು ಹೋಲುವಂತಹ ಆ ಮುಖಮಂಡಲ. ಅಷ್ಟೇ ನಿಷ್ಕಲ್ಮಷಭಾವ! ಆ ಮಧುರ ಭಾವ! ಪ್ರೇಮಸಾಗರದಂತಿರುವ ಆ ನೀಲನಯನ-ಗಳ ಮುಗ್ಧನೋಟ! ಮದ-ಮಾತ್ಸರ್ಯಗಳನ್ನರಿಯದ ಆ ಮೃದು-ಹಾಸ! ನೈಜ ಸೌಂದರ್ಯವನ್ನು ತೋರುವ ಆ ಎಸಳು ಮೂಗು! ನಿಜಸುಖವನ್ನೀಯುವ ಆಹ್ಲಾದ—ಇಂತಹದನ್ನೆಲ್ಲ ಬಿಟ್ಟು, ಪರ-ಸ್ತ್ರೀಯರಿಗೆ ಆಶೆ ಪಡಲು ನಿಮ್ಮ ಮನದಲ್ಲಿ ಅಳುಕಾಗುವು-ದಿಲ್ಲವೇ? ನೀವು ಆಶಿಸಿದಂತೆ ನಿಮ್ಮ ಪತ್ನಿಯೂ ಪರಪುರುಷ ರನ್ನು ಆಶಿಸುವುದಾದರೆ?"

ನಿಮ್ಮ ಸಹೋದರಿ,
ವಿಮಲಾಬಾಯಿ"

ಪ್ರಭಾಕರನು ನಿಜವಾಗಿಯೂ ಯೋಚನೆಗೆ ಬಿದ್ದ. ಅವನ ಹೆಂಡತಿ ಊರಲ್ಲಿರಲಿಲ್ಲ. ಕೂಡಲೆ ಅವಳಿದ್ದ ಊರಿಗೆ ಹೋಗ-ಬೇಕೆಂದೆನಿಸಿತು. ಹಾಗೆಯೇ ಅವನ ದೃಷ್ಟಿಯು ಗೋಡೆಗೆ ತಗಲ-ಸಿದ್ದ ತನ್ನ ಹೆಂಡತಿಯ 'ಫೋಟೊ'ದ ಕಡೆ ಹೊರಳಿತು. ಕೂಡಲೆ ಅದನ್ನು ಕೈಗೆ ತೆಗೆದುಕೊಂಡು ದಿಟ್ಟಿಸಿ ನೋಡಿದ. ಏನೋ ಮನಸ್ಸು ಅಳುಕಿದಂತಾಯಿತು; ಆ ಫೋಟೊ ಈ ರೀತಿ ಹೇಳಿ-ದಂತಾಯಿತು: "ಅಯ್ಯೋ ನಿಮ್ಮ ಹುಚ್ಚುತನವೇ! ನಿಮ್ಮ ಸುಖಕ್ಕೆ ನಾನಿಲ್ಲವೇ? ನಿಮಗೇನು ಸುಖ ಬೇಕಾದರೂ ನಾನು ಕೊಡಲಾರೆನೇ? ಯಾರಾದರೂ ಅಮೃತಬಿಟ್ಟು ವಿಷ ಕುಡಿಯು-ವರೇ? ಪರರ ಮನೆಯ ಹೆಣ್ಣುಮಕ್ಕಳ ಮೇಲೆ ದುರಾಶೆಯೇ? ನಿಮಗೆ ನಾಚಿಕೆಯಾಗುವುದಿಲ್ಲವೇ? ವಿಮಲೆಯ ಕೊನೆಯ ಪ್ರಶ್ನೆಗೆ ಫೌಜುದಾರರು-ಧರ್ಮಪ್ರಭುಗಳು—ತಾವು ಏನೆಂದು ಉತ್ತರವನ್ನು ಕೊಡುತ್ತೀರಿ?........"*

---

*ಮೂರ್ತಿ, ವಿಮಲೆ, ಪ್ರಭಾಕರ, ಇವರು ಕೇವಲ ಕಲ್ಪನಾ-ಪ್ರಪಂಚದಿಂದ ಬಂದವರು. ಲೇಖಕ.

ಜಾಹೀರಾತು ಮಾಡಬೇಕೆನ್ನುವ ವ್ಯಾಪಾರಿಗಳು ಜಯಂತಿಯನ್ನು ಮರೆಯಲಾಗದು!

ಗನೋರಿಯಾ, ಪರಮಾರೋಗ, ಉಷ್ಣರೋಗದ ಮೇಲೆ
ಔಷಧ

೭ ದಿವಸಗಳಲ್ಲಿ ಈ ರೋಗ ಗುಣಹೊಂದುವುದು ಗ್ಯಾರಂಟಿ!

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದಿ ಡಾಗು ಹತ್ತುತ್ತಿದ್ದರೆ ಶರೀರದಿಂದ ಬಾವು, ಶರೀರದಿಂದ ತೊಗಲು ಹಿಂದಕ್ಕೆ ಸರಿಯದಿದ್ದರೆ ಶರೀರದ ಸುತ್ತು ಘಾಯವಾಗಿದ್ದರೆ, ಚಟ್ಟೆಬಿದ್ದಿ-ದ್ದರೆ, ಉಷ್ಣದಿಂದ ಜೇರು ಇಳಿದಿದ್ದರೆ, ಉಪದಂಶ ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡಮಾಲಿ, ಕೈಕಾಲು ಶೂಲಿ, ಅರ್ಧಾಂಗವಾಯು, ನಡುನೋಯುವುದು, ಸ್ತ್ರೀಯರ ಬಿಳಿ ಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕಟ್ಟು, ಗರ್ಭಿಯಿಂದ ಗರ್ಭ-ಕೋಶನಾಶವಾಗಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲ ಬೇನೆಗಳಿಗೆ ಈ ನಮ್ಮ ಔಷಧವು ಇರು-ವುದು. ಮೊದಲು ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧ ತೊಲಿ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ಮುಂಜಾನೆ, ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧ ವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ-ಮಳೆಗಾಲದಲ್ಲಿ ಜೇನುತುಪ್ಪ ದಲ್ಲಿ ತಕ್ಕೊಳ್ಳಬೇಕು.

ಪಥ್ಯ: ಹಸೀಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ ರೂ. ಪೋಸ್ಟ್ ಚಾರ್ಜ ೧೦ ಆಣೆ.

ಮಕ್ಕಳನ್ನು ಹಡೆಯುವುದು ಸಾಕು

ಅಶಕ್ತ ಹೆಣ್ಣುಮಕ್ಕಳಿಗೆ ★ ರೋಗಗ್ರಸ್ತ ಸ್ತ್ರೀಯರಿಗೆ

ಬರ್ಥ್ ಕಂಟ್ರೋಲ್

★

ಏಳು ದಿವಸದ ಈ ಮಾತ್ರೆಗಳನ್ನು ಸೇವನೆ ಮಾಡಿದರೆ, ಮುಂದೆ ಖಂಡಿತವಾಗಿಯೂ ಮಕ್ಕಳಾಗುವುದಿಲ್ಲ, ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿ ಯಾಗುವುದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿ ದಿವಸ ಮುಂಜಾನೆ ೧ ಗುಳಿಗೆ, ಮಧ್ಯಾಹ್ನಕ್ಕೆ ೧ ಗುಳಿಗೆ, ಸಂಜೆ ೧ ಗುಳಿಗೆ ಯಂತೆ ಊಟಕ್ಕೆ ಮೊದಲು ತಕ್ಕೊಳ್ಳಬೇಕು. ೭ ದಿವಸ ಈ ಔಷಧ ವನ್ನು ಬಿಸನೀರಿನಲ್ಲಿ ಸೇವಿಸಬೇಕು.

ಪಥ್ಯ: ಹರಮೀಪಲ್ಲೆ ಬಿಡಬೇಕು.

೭ ದಿವಸದ ಸಂಪೂರ್ಣ ಔಷಧದ ಕಿಮ್ಮತ್ತು

೫ ರೂಪಾಯಿ ಪೋಸ್ಟ್ ಚಾರ್ಜ ೧೦ ಆ.

ಏಜಂಟರು:

ಗದಗ ಫಾರ್ಮಸಿ, ಹುಬ್ಬಳ್ಳಿಫಾರ್ಮಸಿ, ಬಾಗಲಕೋಟೆ ಫಾರ್ಮಸಿ

ವಿಳಾಸ:— ಹಾಲಪ್ಪಾ ಡಾವಣಗೇರಿ, ಆಯುರ್ವೇದ ಔಷಧಗಳ ದವಾಖಾನೆ, ಗದಗ

ಕಲಾಪ್ರಕಾರಗಳು

ಶ್ರೀ. ಖಾನೋಳಕರ ಶ್ರೀಧರರಾಯರು

★

ನನ್ನ ಮಗಳು—ಐದುವರ್ಷದಾಕೆ—ಟಾಯಿಮ್ಸ್—ಓದುತ್ತಾಳೆ! ಎಂದರೆ ಅದರೊಳಗಿನ ಚಿತ್ರಗಳನ್ನು ನೋಡುತ್ತಾಳೆ. ಆದರೆ ಆಕೆಯನ್ನು ಕೇಳಿದರೆ 'ನಾನು ಟಾಯಿಮ್ಸ್ ಓದುತ್ತೇನೆ' ಎಂತಲೇ ಹೇಳುವಳು. ನನ್ನ ನಿರುದ್ಯೋಗಿಯಾದ ತಮ್ಮನು ಉದ್ಯೋಗವನ್ನು ಹುಡುಕುವುದಕ್ಕಾಗಿ ಅದರೊಳಗಿನ "**ಬೇಕಂ** (wanted)" ಜಾಹೀರಾತುಗಳನ್ನು ಓದಿದರೂ 'ಟಾಯಿಮ್ಸ್ ಓದಿದೆ' ಎಂದೆ ಹೇಳುತ್ತಾನೆ. ನನ್ನ ಎ. ಬಿ. ಸಿ. ಕಲಿಯುವ ಮಗನೂ '**ಟಿ ಆಯ್ ಎಮ್ ಈ ಎಸ್**—ಟಾಯಿಮ್ಸ್ ಓದಿದೆ' ಎನ್ನುವನು. ಹೀಗಿದೆ ಶಬ್ದ ಮತ್ತು ಅರ್ಥ ಇವುಗಳ ವ್ಯಾಪ್ತಿಯ ಸಂಬಂಧ. ಇದರಂತೆಯೆ ವ್ಯವಹಾರದಲ್ಲಿ ಕಲೆಯ ಅರ್ಥವು. ಕಲೆಯೆಂದರೇನು? ಸೌಂದರ್ಯವೆಂದರೇನು?— ಎಂಬುವೇ ಮೊದಲಾದ ವಿಚಾರಗಳನ್ನು ಮಾಡದಲೆ, ಜನರು ಸಾಮಾನ್ಯತಃ ಕಲಾಕೃತಿಯ ಬಗ್ಗೆ ಮಾತನಾಡುವುದನ್ನು ನಾವು ಕೇಳುತ್ತೇವೆ—ಅನೇಕ ಮಾತನಾಡುತ್ತೇವೆ. ಆದುದರಿಂದಲೇ ಕಲೆಯೆಂದರೇನು? ಅಭಿರುಚಿಯೆಂದರೇನು?— ಮುಂತಾದ ಸೌಂದರ್ಯ ಶಾಸ್ತ್ರದಲ್ಲಿ ಬರುವ ಮೂಲ ಪ್ರಶ್ನೆಗಳ ವಿಚಾರವನ್ನು ಮಾಡಬೇಕಾಗುತ್ತದೆ. ಕಲೆಯ ವಿಚಾರವನ್ನು ಕಂಡುಹಿಡಿದ ಮೇಲೆ, ಕಲಾಕೃತಿಗಳ ಕಡೆಗೆ ಲಕ್ಷ್ಯವನ್ನು ಕೊಟ್ಟರೆ, ಅದರ ಅರ್ಥವೂ ಆಳವೂ ತಿಳಿಯುವುದಲ್ಲದೆ, ನಮಗೆ ಅನುಪಮವಾದ ಆನಂದವೂ ಆಗುವುದುಂಟು.

ಕಲಾಪ್ರಕಾರಗಳು ಎಷ್ಟಿವೆಯೆಂಬುದನ್ನು ತಿಳಿಯುವ ಮೊದಲು, 'ಕಲೆಯೆಂದರೇನು?' ಎಂಬುದರ ವಿಚಾರವನ್ನು ಮಾಡುವಾ-ಮಾಡುವುದಗತ್ಯವಿದೆ. ಯಾವುದೊಂದು ವಿಚಾರವನ್ನೇ ಆಗಲಿ, ಭಾವವನ್ನೇ ಆಗಲಿ ರೂಪದಿಂದ ದರ್ಶಿಸುವುದೇ ಕಲೆ. ಸಾಮಾನ್ಯವಾದ ವಿಚಾರ-ಭಾವಗಳನ್ನು, ವ್ಯವಹಾರದಲ್ಲಿ ನಾವು ದಿನಾಲು ಹತ್ತುರೂಪಗಳಿಂದ ದರ್ಶಿಸುತ್ತೇವೆ. ನಮ್ಮ ದಿನದ ವ್ಯವಹಾರವೆಂದರೆಯೇ ವಿಚಾರ-ಭಾವ, ಆನಂದ-ದುಃಖಗಳ ರೂಪವಾಗಿರುತ್ತದೆ. ಸಾಮಾನ್ಯವಾದದ್ದರಲ್ಲಿ ಯಾವ ರಸವೂ ಹುಟ್ಟುವುದಿಲ್ಲ. ವಿಶೇಷವಾದದ್ದೇನಾದರೂ ಕಂಡುಬಂದರೆ, ನಮ್ಮ ಲಕ್ಷ್ಯವು ಅತ್ತಕಡೆಗೆ ಹೊರಳುತ್ತದೆ. ಲಕ್ಷ್ಯವು ಯಾವುದೊಂದು ವಸ್ತುವಿನಲ್ಲಿ ನೆಟ್ಟಿತೆಂದರೆ, ಅದರ ಪೂರ್ಣರೂಪವು ನಮ್ಮ ಮನಸ್ಸಿನಲ್ಲಿ ಕುಣಿದಾಡ ಹತ್ತುವುದು. ಇದೇ ಅದರ ಭಾವ. ಈ ಭಾವವು ಉಕ್ಕುಕ್ಕಿ ಹರಿಯುಹತ್ತುತ್ತದೆ. ಮನಸ್ಸು-ಬುದ್ಧಿಗಳ ಮೇರೆ ಮೀರಿ ಭಾವವು ಹರಿದಾಡಹತ್ತಿತೆಂದರೆ, **ಅದಕ್ಕೆ ರೂಪುಗೊಡುವುದು** ಕಲೆ. ರೂಪವಿಲ್ಲದೆ ಕಲೆಯಿಲ್ಲ. ರೂಪವಿಲ್ಲದುದು **ಕಲೆಯಲ್ಲ**. ಕಲೆಯೇ ರೂಪು. ಯಾವುದೊಂದು ಬಲವಾದ ಬಗೆಯು ಮಾನವನ ಮನಸ್ಸಿನಿಂದ ಹೊರಬಿದ್ದಿತೆಂದರೆ—ಬಗೆಯು ಅಸಾಮಾನ್ಯವಾದ ಬಲವುಳ್ಳದಿದ್ದರೆ ಮಾತ್ರ—ಅದರ ರೂಪು ತನ್ನಿಂದ ತಾನೇ ಸೌಂದರ್ಯಮಯವಾಗಿರುವುದು. ಆ ರೂಪಿನಲ್ಲಿ ಕೌಶಲ್ಯವಿದ್ದರೆ, ಅದು ಅತ್ಯಂತ ಸುಂದರವಾದ ಕಲಾಕೃತಿಯಾಗುವುದು; ಇಲ್ಲದಿದ್ದರೆ ಸಾಮಾನ್ಯವಾದ ಕಲಾಕೃತಿಯಾಗುವುದು. ಆದರೆ ಅದು ಎಂದೆಂದಿಗೂ ಕುರೂಪತೆಯನ್ನು ಹೊಂದುವುದಿಲ್ಲವೆಂಬುದು ಅನುಭವದಿಂದ ಸಿದ್ಧವಾದ ಮಾತು. **ಕಲಾಕೋವಿದನ ಪ್ರತಿಭಾಶಾಲಿಯಾದ ಆತ್ಮನಲ್ಲಿ ಹೊಳೆದ ಬಲವಾದ ಬಗೆಯ ಅಥವಾ ಭಾವನೆಯ ಪುನರ್ದರ್ಶನವೇ ಕಲೆ;** ಕಲೆಯನ್ನು ಮುಚ್ಚಿರುವ ಬೆಳಕೇ ಸೌಂದರ್ಯವೆಂದು ಹೇಳಿದಂತಾಯಿತು. ಬಲವಾದ ಉದ್ಗಾರವೇ ಕಲೆ. ಸೌಂದರ್ಯವು ಕಲೆಯ ಪರಿಣಾಮ. ಕಲೆಯೆಂದರೆ ಬಲವಾದ ಬಗೆ-ಭಾವನೆಗಳು ರೂಪುಗೊಂಡ ಮೂರ್ತಿ. ಆ ಮೂರ್ತಿಯಲ್ಲಿ ಪ್ರತಿಕ್ಷಣಕ್ಕೂ ವ್ಯಕ್ತವಾಗುವ, ಪ್ರತಿನಿಮಿಷಕ್ಕೂ ಆನಂದವನ್ನೀಯುವ— ಬುದ್ಧಿಯ ದೃಷ್ಟಿಗೆ ನಿಲುಕದಂತಹದೊಂದು—ಹೃದಯದ ಸಮರಸ ಭಾವಕ್ಕೇ ವಶವಾಗುವಂತಹದೊಂದು—ಅವೇದ್ಯವಾದ ರಮಣೀಯತೆಯೇ ಸೌಂದರ್ಯ! ಕಲೆಯೊಳಗಿನ ಕೌಶಲ್ಯವನ್ನು ಕಂಡು ಮನವು ಬೆರಗಾಗುವುದು. ಕಲೆಯೊಳಗಿನ ಸೌಂದರ್ಯವನ್ನು ಕಂಡು ಮನಸ್ಸು ಏಕಾಗ್ರವಾಗುವುದು. ಕಲೆಯ ಅನೇಕತ್ವದೊಳಗೆ ಅನೇಕತ್ವದಿಂದ ಹೊಳೆಯುತ್ತಿರುವುದೇ ಸೌಂದರ್ಯ. "ಕ್ಷಣೇ ಕ್ಷಣೇಯನ್ನವತಾಮುಪೈತಿ ತದೇವ ರೂಪಂ ರಮಣೀಯತಾಯಾ" ಎಂಬುದರ ಅರ್ಥವೂ ಇದೇ ಆಗಿದೆ.

★

ವಾಸ್ತುಶಿಲ್ಪ, ಮೂರ್ತಿಶಿಲ್ಪ, ಚಿತ್ರಲೇಖನ, ಸಂಗೀತ, ಕಾವ್ಯ ಈ ಐದು ಅವಯವಗಳಿಂದ ಕೂಡಿದೆ ಕಲಾದೇವತೆಯ ಮೂರ್ತಿ! ಈ ಒಂದೊಂದು ಅವಯವವೂ ಮಾನವನ ಜೀವನದಲ್ಲಿ ಸೌಂದರ್ಯವನ್ನೂ ಸುಖವನ್ನೂ ತುಂಬುತ್ತಲಿರುವುದು!

★

ಕಲಾನದಿಯ ಉಗಮವು ನಮ್ಮ ಹೃದಯದಲ್ಲಿ, ದೇವರು ಅಡಗಿಸಿರುವ ಅನುಕರಣ ಮತ್ತು ಅಲಂಕಾರದ ಭಾವನೆಯಿಂದಲೇ ಆಗಿದೆ. ಯಾವುದೊಂದು ಹೊಸತನವನ್ನು ಅನುಕರಣ ಮಾಡು

ವುದು ಮಾನವನ ಹುಟ್ಟುಗುಣವಾಗಿದೆ. ಸದ್ಯಕ್ಕೆ ವೈಮಾನಿಕ ಹಲ್ಲೆಯನ್ನು ತಪ್ಪಿಸುವುದಕ್ಕೋಸ್ಕರ ಆಗುವ ಸಾಯರೆನ್ಸ್ ತುತೂರಿಯು ಒಮ್ಮೆ 'ಭೋಂ' ಎಂದಿತೆಂದರೆ, ಊರೊಳಗಿನ ಸಾವಿರಾರು ಹುಡುಗರು ಸಾವಿರಾರು ತರದ ಸಾಯರೆನ್ ಊದು-ವರು. ಸಿನೇಮಾದೊಳಗಿನ ಯುವಕ-ಯುವತಿಯರು ಮುದ್ದು ಕೊಡುವುದನ್ನು ನೋಡಿ, ಹುಡುಗರಿಗೆ ಅದೊಂದು ಏನೋ ಚೋದ್ಯವೆನಿಸಿ, ಸಿಕ್ಕ ಹುಡುಗಿಯರ ಕೈಗೆ ಮುದ್ದು ಕೊಡುವು ಗಾದರೂ ಅನುಕರಣವಿಲಾಸಿನಿಯ ಲೀಲೆಯೆ. ಅದರಂತೆಯೇ ಶೃಂಗಾರ, ಅಲಂಕಾರ! ಜರದ ರುಮಾಲವೇ ಯಾಕೆ? ಜರದ ರುಮಾಲವಿದ್ದರೂ ಜರದ ಪಟ್ಟಿಯು ಎದ್ದು ಕಾಣಬೇಕೇಕೆ? ಹೊರಗೆ ಹೋಗುವ ಮುಂದೆ ಕುಂಕುಮವನ್ನು ತಿದ್ದಬೇಕೇಕೆ? ಕನ್ನಡಿಯನ್ನು ನೋಡಬೇಕೇಕೆ? ಈ ಕಲಾಕಾಮಿನಿಯ ಪ್ರಪಂಚ ವನ್ನು ಎಷ್ಟೆಂದು ಬಣ್ಣಿಸಬೇಕು? ಮೊದಲು **ವಾಸ್ತು,** ಆ ಮೇಲೆ **ಶಿಲ್ಪ,** ಆ ಮೇಲೆ **ಚಿತ್ರ,** ಆ ಮೇಲೆ **ಸಂಗೀತ,** ಆ ಮೇಲೆ **ಕಾವ್ಯ;** ಈ ಪಂಚಬಾಣಗಳಿಂದ ಧರೆಯನ್ನೇ ಗೆದ್ದ ರತಿದೇವಿಯಂತೆ ಇದ್ದಾಳೆ ಕಲಾಕಾಮಿನಿ—ಸೌಂದರ್ಯ ಮದನನನ್ನೊಡಗೂಡಿ.

ಕಲೆಗಳಲ್ಲಿ ತೀರ ಸ್ಥೂಲವಾದದ್ದು ವಾಸ್ತು. ಕಟ್ಟಡಗಳು, ಮನೆಗಳು, ಗುಡಿಗಳು, ಪ್ರಾಸಾದಗಳು, ಪ್ರವಚನ ಮಂದಿರಗಳು ಪುಸ್ತಕಾಲಯಗಳು, ಮಂತ್ರಣಗಳು—ಎಷ್ಟೆಂದು ಹೇಳಬೇಕು?- ಇವೆಲ್ಲವುಗಳಲ್ಲಿ ಅನುಕರಣವೇ ಮುಖ್ಯವಾದ ವಸ್ತು. ಕಾಡು-ಸ್ಥಿತಿಯಲ್ಲಿದ್ದ ಮಾನವನಿಗೆ ತನ್ನ ಆತ್ಮಸಂರಕ್ಷಣೆಗಾಗಿ ಕಟ್ಟಡ ವನ್ನು ಕಟ್ಟುವ ಪ್ರಸಂಗ ಬಂದೊದಗಿತು. ಒಂದರ ಮೇಲೊಂದು ಕಲ್ಲು; ಆಯಿತು ಕಟ್ಟಡ. ಮೇಲೆ ಛಪ್ಪರ ಬೇಕಾಯಿತು, ಮಳೆ-ಬಿಸಿಲು ತಾಗದಂತೆ. ಗುಮ್ಮಟ-ಗೋಪುರಗಳಾದುವು. ಕಟ್ಟಡವು ದೊಡ್ಡದಾಯಿತು; ಛಪ್ಪರವೂ ದೊಡ್ಡದಾಗ ಬೇಕಾಗಿ ಬಂದಿತು. ಆದ್ದರಿಂದ ನಡುನಡುವೆ ಕಂಬಗಳಾದುವು. ಕಟ್ಟಡದ ವ್ಯೈವ್ಯೈಂಪ್ಯ ನಡುವೆ ಕಂಭದ ಸಾಲುಗಳು, ಛಪ್ಪರ (ಗೋಪುರ, ಗುಮ್ಮಟ), ಕಳಸ, ಒಂದು ಕಂಭದಿಂದ ಮತ್ತೊಂದು ಕಂಭದ ವರೆಗಿನ ಸಣ್ಣ ದೊಡ್ಡ ಕಮಾನುಗಳು, ಗೋಡೆಗಳ ಮೂಲೆಗಳ ಚೌಕುಗಳು, ಕಿಟಕಿಗಳು: ಇಷ್ಟು ಪ್ರಪಂಚ ವಾಸ್ತುವಿನದು. ಜಗತ್ತಿನಲ್ಲಿ ಪುರಾತನ ಕಾಲದಿಂದಲೂ ಹುಟ್ಟಿಬೆಳೆದ ದೊಡ್ಡದಾದ ಕಲೆಯಿದು ವಾಸ್ತು. ರಾಜನಿಲ್ಲದ ರಾಜ್ಯವಿಲ್ಲ; ಪ್ರಾಸಾದವಿಲ್ಲದ ರಾಜನಿಲ್ಲ. ಪ್ರಾಸಾದವೆಂದರೆ ವಾಸ್ತುವಿದ್ಯೆ. ಎಲ್ಲ ಕಲಾಕೋವಿದರ ಆಶ್ರಯ-ಸ್ಥಾನವೆಂದರೆ ಪ್ರಾಸಾದ. ಎಲ್ಲ ರಾಜರ ಸುಲಿಗೆಯ ಬೊಕ್ಕಸ ವೆಂದರೆ ಪ್ರಾಸಾದ ಎಂದ ಮೇಲೆ ಕೇಳುವುದೇನಿದೆ? ಬುನಾದಿ ಯಲ್ಲಿ ಕಟ್ಟಿದ ಪ್ರಾಸಾದಗಳು, ಅಂತಃಪುರಗಳು ಇನ್ನೂ ನಿಂತಿವೆ. ವಿಜಯನಗರದ ಹಾಳಾದ ವೈಭವವೇ ಇದಕ್ಕೆ ಸಾಕ್ಷಿ. ಅದರಲ್ಲಿ ಮತ್ತೆ ಧರ್ಮದ ಬೆಳಗು. ಇಡೀ ವಿಜಯನಗರವು ಮಣ್ಣು-ಗೂಡಿದರೂ ಪಂಪಾಪತಿಯ ದೇವಾಲಯವೂ ಭಿಷ್ಟಪ್ಪಯ್ಯನ ಅಜರಾಮರವಾದ ಗೋಪುರವೂ ಇನ್ನೂ ನಿಂತಿವೆ. ರೋಮನ್ ಮತ್ತು ಗ್ರೀಕ್ ಜನರಿಗೆ ಕಟ್ಟಡಗಳನ್ನು ಕಟ್ಟುವುದೆಂದರೆ ಹುಚ್ಚು. ಒಂದು ಸಾವಿರ ವರ್ಷಗಳವರೆಗೆ ಅವರು ಯಾವ ಉದ್ಯೋಗವನ್ನೇ ಮಾಡಲಿಲ್ಲ. ದೇಶಗಳನ್ನು ಗೆಲ್ಲುವುದು, ರಕ್ತದ ನದಿಗಳನ್ನು ಹರಿ-ಸುವುದು, ಕಲ್ಲುಗಳನ್ನು ಕೂಡಿಸುವುದು, ಕಟ್ಟಡಗಳನ್ನೂ ಪಟ್ಟಣ ಗಳನ್ನೂ ಕಟ್ಟುವುದು. ಕ್ರಿಶ್ಚಿಯನ್ ಧರ್ಮದ ಪ್ರಸಾರವಾದಂದಿ ನಿಂದ ಕ್ರೈಸ್ತನ ಗುಡಿಗಳು ನೋಡಿದಲ್ಲೆಲ್ಲ ನೋಡಿದಲ್ಲೆಲ್ಲ ಲಕ್ಷಾವಧಿ ಚರ್ಚುಗಳು ಸೆಂಟಪೀಟರ್ಸ್ ಕ್ಯಾಥೆಡ್ರಲ್, ಸೆಂಟ್ ಸೋಫಿಯಾ, ಕಾನ್‌ಸ್ಟಾಂಟಿನೋಪಲ್ಲಿನಂತಹ ಪಟ್ಟಣಗಳು. ಮುಸಲ್ಮಾನ್ ಧರ್ಮದ ಪ್ರಸಾರವಾದಂದಿನಿಂದ ಅವರು ಗೆದ್ದ ರಾಜ್ಯಗಳಲ್ಲೆಲ್ಲ ಜುಮ್ಮಾಮಸೀದೆಗಳು, ಮಸೀದೆಯ ಮುಂದೆ ಭವ್ಯವಾದ ಸರೋವರಗಳು, ಸರೋವರಗಳನ್ನು ತಮ್ಮ ನೆರಳಿನಿಂದ ತಂಪು ಮಾಡುವ ಉದ್ಯಾನಗಳು ಕಟ್ಟಡಗಳ ಸುತ್ತಲೂ ಉದ್ಯಾನ ಗಳನ್ನು ನಿರ್ಮಿಸುವುದೊಂದು ಕಲೆಯೇ ಆಗಿ ಹೋಯಿತು! ನೆಪೋಲಿಯನ್ನನು ಪ್ಯಾರೀಸ್ಸಿನಲ್ಲಿ ಒಂದು ಭವ್ಯವಾದ ಪ್ರಾಸಾದ ವನ್ನು ಒಂದು ಮಾದರಿಯಾಗಿ ಕಟ್ಟಿಸಿದನಂತೆ! ಯುರೋಪಿ ನಲ್ಲಿ ನೋಡಿದಲ್ಲೆಲ್ಲ ಅದೇ ಪಿಡುಗು! ವ್ಹರ್ಸಾಯಿಯಲ್ಲಿ ಕನ್ನಡಿಯ ಪ್ರಾಸಾದವಾಯಿತು (Palace of Mirror). ಈ ಕನ್ನಡಿಯ ಪ್ರಾಸಾದವನ್ನು ತಮ್ಮ ತಮ್ಮ ರಾಜಧಾನಿಗಳಲ್ಲಿ ಕಟ್ಟುವುದು ಯುರೋಪಿನಲ್ಲಿ ಅದೊಂದು ಧರ್ಮವಾಯಿತು! ಹೇಮಾದ್ರಿ, ಜಕ್ಕಣಾಚಾರ್ಯರು ಒಂದು ಮಾದರಿಯ ಗುಡಿ ಗಳನ್ನು ಕಟ್ಟಿದರು; ಇಡೀ ಭರತಖಂಡದಲ್ಲೆಲ್ಲ ಅಂತಹ ಗುಡಿಗಳು ಒಡಮೂಡ ಹತ್ತಿದುವು. ಕೆಲವರು ಕಲ್ಲುಗಳನ್ನು ಒಟ್ಟುಗೂಡಿ ಸುವ ಉಪದ್ವ್ಯಾಪವೇ ಬೇಡವೆಂದರು: ದೊಡ್ಡ ದೊಡ್ಡ ಬಂಡೆ ಗಳನ್ನೂ ಬೆಟ್ಟಗಳನ್ನೂ ಕೊರೆದು ಗುಡಿಗಳನ್ನು ನಿರ್ಮಿಸಿದರು. ಬಾದಾಮಿ-ಅಜಂತೆಯ ಗುಹೆಗಳನ್ನೂ ಕಾರ್ಲೆಯ ಗುಡಿ ಗಳನ್ನೂ ಇನ್ನೂ ಕಾಣಬಹುದು.........ಕಲೆಗಳಲ್ಲಿ ಸ್ವತಂತ್ರ ಕಲೆ ಮತ್ತು ಪರತಂತ್ರಕಲೆಗಳೆಂದು ಭೇದವಿದೆ. ವಾಸ್ತುವು ಪರತಂತ್ರ ಕಲೆ—ತೀರ ಪರತಂತ್ರಕಲೆಯೆಂದು ಹೇಳಬಹುದು. ಒಬ್ಬನೇ ಕುಳಿತು—ಏನೂ ಇಲ್ಲದಿದ್ದರೂ—ಒಂದು ಇದ್ದಲಿಯ ಚೂರಿನಿಂದ ಒಂದು ಕಲ್ಲಿನ ಮೇಲೆ ಚಿತ್ರವನ್ನು ಬರೆಯಬಹುದು. ವಾಸ್ತು ವಿನದು ಹಾಗಲ್ಲ. ಒಂದೊಂದು ತಾಜಮಹಾಲಿಗೆ ಒಬ್ಬೊಬ್ಬ ಶಹಾಜಹಾನನಂತಹ ದೊರೆಯು ಬೇಕು. ತಾಜಮಹಾಲನ್ನು ಕಟ್ಟಲಿಕ್ಕೆ ಇಷ್ಟು ಸಂಗಮರವರಿ ಕಲ್ಲನ್ನು ಎಲ್ಲಿಂದ ತಂದರೊ! 'ಹನುಮಂತ ದೇವರು ತಾನೇ ಅವತಾರ ತಾಳಿ ಕಲ್ಲಿನ ಗುಡ್ಡ ವನ್ನೇ ತಂದಿಟ್ಟನೋ ಏನೋ' ಎನ್ನುವಂತೆ ಆಗುತ್ತದೆ—ಬರೀ ಗೋಳಗುಮ್ಮಟವನ್ನು ನೋಡಿದವರಿಗೆ. ಎಂದಮೇಲೆ ತಾಜ-ಮಹಾಲನ್ನು ಕಟ್ಟಲಿಕ್ಕೆ ಯಾವ ಅವತಾರವಾಗಿರಬೇಕು? ಮೂರು ಲಕ್ಷ ಮಂದಿ ಮೂರು ನಾಲ್ಕು ವರ್ಷ ದುಡಿಯುತ್ತಿದ್ದ ರಂತೆ! ಇಷ್ಟು ಜನರಿಗೆ ದುಡ್ಡು ಪೂರಯಿಸುವ ದೊಡ್ಡ ದೊರೆ-ಯಿದ್ದರೆಯೆ ಇಂತಹ ಅಸಾಮಾನ್ಯಕಟ್ಟಡಗಳು ಅಜರಾಮರವಾಗಿ

ಉಳಿಯುವುದು. ವಾಸ್ತುಕಲೋಪಾಸಕನಿಗೆ ಕೌಶಲ್ಯವೂ ವಿದ್ಯೆಯೂ ಬೇಕೇಬೇಕು, ಆದರೆ ಅದರಿಂದೇನು ಫಲ! ದೈವದಲ್ಲಿ ಒಬ್ಬ ದೊರೆಯ ಅವತಾರವೂ ಬರೆದಿರಬೇಕು. ಕಟ್ಟಡವನ್ನು ಕಟ್ಟಿದರೂ ಅವರ ಪಾರತಂತ್ರ್ಯ ತೀರಲಿಲ್ಲ; ಗೋಡೆಗಳಿಗೆ ಚಿತ್ರಗಳು ಬೇಕು— ಓಡಬೇಕಾಗುವುದು ಚಿತ್ರಕಾರನ ಕಡೆಗೆ! ಗುಡಿಯನ್ನು ಕಟ್ಟಿದರೆ ಇವನ ಹಣೆಬರೆಹ! ಗುಡಿಯೊಳಗೊಂದು ಸುಂದರವಾದ ಮೂರ್ತಿ ಬೇಕು—ಹಿಡಿಯಬೇಕಾಗುವುದು ಮೂರ್ತಿಶಿಲ್ಪಿಯ ಕಾಲನ್ನು. ಒಬ್ಬ ದೊರೆ, ತನ್ನ ವಿದ್ಯೆ, ಚಿತ್ರ-ಮೂರ್ತಿ ಶಿಲ್ಪಿಗಳಿಂದ ಸಾಧ್ಯವಾಗುವುದು ಒಂದು ಕಟ್ಟಡ. ವಾಸ್ತುವಿದ್ಯೆಗೆ 'ಸ್ಥೂಲ-ಕಲೆ' ಎಂಬುದುಂಟು. ಏಕೆಂದರೆ ಇದರಲ್ಲಿ ವಾಸ್ತುಶಿಲ್ಪಿಯು ತನ್ನ ರೀತಿಯನ್ನಷ್ಟೇ ತೋರಿಸಬಲ್ಲನು. ಅವನ ವ್ಯಕ್ತಿತ್ವದ (individuality) ಸದ್ದು ಇಲ್ಲಿ ಕೇಳಬರುವುದಿಲ್ಲ. ವಾಸ್ತು-ವಿದ್ಯೆಯ ಕಲೆಯಲ್ಲಿ ಪ್ರದೇಶವ್ಯಾಪ್ತಿ ಬಹಳ; ಬೇಕಾದಷ್ಟು ಕಟ್ಟಬಹುದು. ಅಮೇರಿಕೆಯಲ್ಲಿ ೪೦-೪೪ ಅಂತಸ್ತಿನ ಕಟ್ಟಡಗಳಿವೆಯಂತೆ. ಅದರಂತೆಯೆ ಬೇಕಾದಷ್ಟು ಅಗಲವಾಗಿಯೂ ಕಟ್ಟಬಹುದು. ಇನ್ನುಳಿದ ಕಲೆಗಳಲ್ಲಿ ಪ್ರದೇಶವ್ಯಾಪ್ತಿಯು ಬಹಳೇ ಕಡಿಮೆ. ವಾಸ್ತುವಿನಲ್ಲಿ ಕಲೋಪಾಸಕನ ವಿದ್ಯೆಗೆ ಹೆಚ್ಚು ಮಹತ್ವ; ಕೌಶಲ್ಯಕ್ಕೆ ಹೆಚ್ಚು ಪ್ರಾಶಸ್ತ್ಯ. ಒಮ್ಮೆ ಒಂದು ನಕಾಶೆಯನ್ನು (plan) ಮಾಡಿದ ನಂತರ ಅವನ ಕೆಲಸ ಅರ್ಧ ತೀರಿತು. ಉಳಿದದ್ದನ್ನೆಲ್ಲ ಮೇಲ್ವಿಚಾರಕನಾಗಿ ಇತರ ಜನರಿಂದಲೆ ಮಾಡಿಸಿಕೊಳ್ಳುವನು. ಆದುದರಿಂದ ವಾಸ್ತುವಿನಲ್ಲಿ ಕಲೋ-ಪಾಸಕನ ವ್ಯಕ್ತಿತ್ವ ಕಡಿಮೆ.

ನಯನ ಮನೋಹರ ಕಲೆಗಳಲ್ಲಿ ವಾಸ್ತುವಿಗಿಂತಲೂ ಮೇಲಿನ ತರಗತಿಯ ಕಲೆಯೆಂದರೆ ಮೂರ್ತಿಶಿಲ್ಪ. ಇಲ್ಲಿಯೂ ಕಲಾಶಿಲ್ಪಿಯು ಪರತಂತ್ರನೇ ಆಗಿರುವನು. ಆದರೂ ಇಲ್ಲಿ ದೊರೆಯೂ ದುಡ್ಡೂ ಬೇಕಾಗಿರುವುದಿಲ್ಲ; ಜನರೂ ಬೇಕಾಗಿರುವುದಿಲ್ಲ. ಅವನ ದಾರಿದ್ರ್ಯವೆಂದರೆ ಪ್ರದೇಶ (space) ದಾರಿದ್ರ್ಯ. ಒಂದೇ ಕಲ್ಲಿನಲ್ಲಿ, ಅದೂ ಮೂರ್ತಿಯ ಮುಖದಲ್ಲಿ, ಅದೂ ಮೂರ್ತಿಯ ಮುಖದ ಕಣ್ಣುಗಳಲ್ಲಿ ತೋರಿಸಬೇಕು....ಅವನು ತನ್ನ ಕೌಶಲ್ಯ-ವ್ಯಕ್ತಿತ್ವ-ಸೌಂದರ್ಯ-ಕಲೆಗಳನ್ನು! ವಸ್ತುನಿಷ್ಠವಾದ ವ್ಯಕ್ತಿತ್ವ (objective characteristic) ವನ್ನೂ ಆತ್ಮನಿಷ್ಠವಾದ ವ್ಯಕ್ತಿತ್ವವನ್ನೂ (subjective individuality) ಸಂಗಡವಾಗಿ ತೋರಿಸುವುದು ಮೂರ್ತಿಶಿಲ್ಪಿಯ ಕಲೆಯ ತುಟ್ಟತುದಿ.......

ರೋಮುದಲ್ಲಿ ಒಬ್ಬ ದೊಡ್ಡ ಶಿಲ್ಪಿಯು ಕಡೆದ ಮೂರ್ತಿಯನ್ನು ತಿದ್ದಬೇಕಾಗಿತ್ತು—ಅದು ಹಳೆಯದಾದುದರಿಂದ. ಕ್ರಿಸ್ತನ ತಾಯಿಯ ಮೂರ್ತಿಯದು. ತಾಯಿಯ ಮಡಿಲಲ್ಲಿ ನೂತನವಾದ ಕ್ರಿಸ್ತ. ಜಾಹೀರಾತು ಕೊಟ್ಟರು. ಕಟ್ಟಕಡೆಗೆ ಒಬ್ಬನು ಸಿದ್ಧನಾದನು. ಮೂರು ವರ್ಷಗಳ ಅವಧಿಯು ಕೊಡಲ್ಪಟ್ಟಿತು. ತಿದ್ದುವ ಕಲೋಪಾಸಕನು, ದಿನಾಲು ನಾಲ್ಕೆಂಟು ತಾಸುಗಳವರೆಗೆ ಮೂರ್ತಿಯನ್ನು ನೋಡುತ್ತ ಕುಳಿತುಕೊಳ್ಳುತ್ತಿದ್ದನು. ಒಂದು ವರ್ಷ ಕಳೆಯಿತು; ಎರಡು ವರ್ಷಗಳು ಕಳೆದುವು ಮೂರನೆಯ ವರ್ಷದ ೫ರು ತಿಂಗಳುಗಳೂ ಹಾರಿ ಹೋದುವು ಆದರೂ ಅವನು ಆ ಮೂರ್ತಿಯನ್ನು ನಿರೀಕ್ಷಿಸುವುದನ್ನು ಬಿಟ್ಟಿರಲಿಲ್ಲ. ಆ ಕೆಲಸದ ಮೇಲಧಿಕಾರಿಯು ಬೇಸತ್ತು ಅವನನು ಕೇಳಿದನು: "ಸ್ವಾಮಿ, ಈ ಮೂರ್ತಿಯನ್ನು ತಿದ್ದುವುದಕ್ಕಾಗಿ ನಿಮಗೆ ಲಕ್ಷ ರೂಪಾಯಿ ಕೊಟ್ಟು ನೇಮಿಸಿರುತ್ತದೆ. ನೀವು ಇನ್ನೂ ಮೂರ್ತಿಯ ಮೇಲಿನ ಧೂಳಿಯನ್ನು ಕೂಡ ಜಾಡಿಸಿಲ್ಲ. ನೀವು ತಿದ್ದುವುದು ಎಂದು?". ಅದಕ್ಕೆ ಆ ಕಲಾವಿದನು "ರಾಯರೇ, ನಾನು ಮೂರು ವರ್ಷಗಳ ಅವಧಿಯನ್ನು ಸುಮ್ಮನೆ ಬೇಡಿಕೊಂಡಿಲ್ಲ. ಆ ಮೂರ್ತಿಯ ಸಾಕ್ಷಾತ್ಕಾರವಾದ ಹೊರತು ಅದನ್ನು ತಿದ್ದುವುದೆಂತು? ಆ ಮೂರ್ತಿಯು ನಮ್ಮ ನಿಮ್ಮದು ಅಲ್ಲ, ಪರಮಾತ್ಮನ ಮೂರ್ತಿಯಲ್ಲ, ಆತನ ತಾಯಿಯ ಮೂರ್ತಿ! ಆ ಮೂರ್ತಿಯ ದರ್ಶನವಾಗದೆ ನಾನು ಅದಕ್ಕೆ ಕೈಹಚ್ಚುವುದಿಲ್ಲ, ತಿದ್ದುವುದಂತೂ ಒತ್ತಟ್ಟಿಗಿರಲಿ! ಅವಧಿಯು ಪೂರ್ಣವಾದರೆ ನಿಮ್ಮ ಹಣವನ್ನು ತಿರುಗಿ ಕೊಡುವೆನು," ಹೀಗೆಂದ ಮೇಲೆ, ಒಂದು ದಿನ ಅವನು ಆನಂದದಿಂದ ಕುಣಿದಾಡಹತ್ತಿದನು. ಅವನಿಗೆ ಆ ದಿನ ಸಾಕ್ಷಾತ್ಕಾರವಾಯಿತು. ಮೂರು ವರ್ಷ ಧ್ಯಾನ ಮಾಡಿ, ಮುಂದೆ ಎಂಟು ದಿವಸಗಳಲ್ಲಿ ಮೂರ್ತಿಯನ್ನು ತಿದ್ದಿ ಪೂರ್ಣಮಾಡಿದನಂತೆ. ಒಂದು ಮೂರ್ತಿಯನ್ನು ತಿದ್ದುವುದು ಈ ಪರಿ ಎಂದ ಮೇಲೆ, ಹೊಸ ಪ್ರತಿಮೆಯನ್ನು ನಿರ್ಮಿಸುವ ಶಿಲ್ಪಕಾರನಿಗೆ ಯಾವ ಆಧ್ಯಾತ್ಮಿಕ ಶಕ್ತಿಯು ಇರಬೇಕಾಗುವುದೆಂಬುದು ಈ ಕಥೆಯಿಂದ ಕಂಡು ಬರುವುದು. ಕಿರಿಯದಾದ ಒಂದು ಕಲ್ಲಿನಲ್ಲಿ ಒಂದು ಮುಖವನ್ನೂ ದೇಹಕ್ಕೆ ಒಂದು ನಿಲುವನ್ನೂ (pose) ಕೊಟ್ಟು, ತನ್ನ ಆತ್ಮದೊಳಗಿನ ಆಧ್ಯಾತ್ಮಿಕ ಬೆಳಕನ್ನು ಮೂಡಿಸುವುದು ಸಾಮಾನ್ಯ ಕೆಲಸವಲ್ಲ— ದೇವದತ್ತ ಶಕ್ತಿಯೂ ಬೇಕು, ಮಾನವ-ಅಭ್ಯಾಸವೂ ಬೇಕು—ಈ ಕಲೆಗೆ ಕಲ್ಲಿನ ಆಳಿನಾಳಾಗಿ, ಅದರಲ್ಲಿ ಒಂದುಗೂಡಿ, ಅದನ್ನು ತಡವದೆ ತಟ್ಟದೆ, ತನ್ನ ಮನಸ್ಸಿನ ಭಾವಕ್ಕೆ ಹಾಳತಾಗಿ ಹಗುರಾಗಿ, ಮೆಲ್ಲಗೆ ಕೆತ್ತಿ, ಮೂರ್ತಿಸುವುದು ಶಿಲ್ಪಿಯ ಗುರಿ. ಆರ್ಕಿಮಿಡಿಸನು ತನ್ನ ಜೀವನದ ಶೋಧದ ಗಂಟು ಬಿಚ್ಚಲು, ನೀರೊಳಗಿನಿಂದ ಎದ್ದು "ಯುರೇಕಾ" (I have found ನನಗೆ ದೊರೆಯಿತು) ಎಂದು ಆನಂದದಿಂದ ಬತ್ತಲೆಯಾಗಿ ಕುಣಿದನಂತೆ! ಆ ದಿವ್ಯಶಕ್ತಿಯು ಹೊಳೆಯದೆ ಮೂರ್ತಿಯಲ್ಲೆಲ್ಲಿಂದ ಬಂದೀತು. ಮೂರ್ತಿಶಿಲ್ಪವೆಂದರೊಂದು ಪರಕಾಯಪ್ರವೇಶ—ಒಂದು ಯೋಗವೆಂತಲೂ ಎನ್ನಬಹುದು. ತನ್ನ ವ್ಯಕ್ತಿತ್ವದ ಸಾಕ್ಷಾತ್ಕಾರವೂ ವಸ್ತುವಿನ ಗುಣಗಳ ಸಾಕ್ಷಾತ್ಕಾರವೂ ಅವನಿಗಿರಬೇಕಾಗಿರುವುದು. ವಸ್ತುವಿನ ಸಾರವನ್ನು ಕಂಡುಹಿಡಿಯಬೇಕಾಗುವುದು. ಶಿವಾಜಿ ಮಹಾರಾಜರ ಪ್ರತಿಮೆ! ಶಿವಾಜಿ ಎಂದ ಕೂಡಲೆ ಕುದುರೆ ಬಂತು! ಕುದುರೆಯೂ (ಪಶುಸೃಷ್ಟಿಯೂ) ಶಿವಾಜಿಯೂ ಸಮರಸವಾಗಿರಬೇಕು. ಇಲ

ದಿದ್ದರೆ ' ರಚಯೂವಾಸವಾನರಂ ' ಆಗುವುದು. ಕಿರಿದರೊಳು ಪಿರಿದುಮರ್ಥವನ್ನೇ ಅಲ್ಲ, ತನ್ನ ಆತ್ಮವನ್ನೇ ಹೊಯ್ಯುವನು ಶಿಲ್ಪಿ.... ಅದೂ ಒಂದು ಮುಖದ ಕಣ್ಣಿನೊಳಗೆ!

ಮೂರ್ತಿಶಿಲ್ಪದ ಗುಣಗಳೆಲ್ಲ ಚಿತ್ರಶಿಲ್ಪಿಯಲ್ಲಿರಲೇ ಬೇಕು. ಚಿತ್ರಶಿಲ್ಪಿಯು ಬಣ್ಣಗಳ ಭಗವಾನ! ವಾಸ್ತುಶಿಲ್ಪದಲ್ಲಿ ಬೇಕಾದ ಕಲ್ಲುಗಳು ನಡೆಯಬಹುದು; ಮೂರ್ತಿಶಿಲ್ಪದಲ್ಲಿ ಒಂದು ವಿಶಿಷ್ಟ-ರೀತಿಯ ಕಲ್ಲು ಬೇಕು. ಚಿತ್ರಶಿಲ್ಪದಲ್ಲಿ ಒಂದು ವಿಶಿಷ್ಟ ರೇಷೆ, ಒಂದು ವಿಶಿಷ್ಟ ಬಣ್ಣ ಬೇಕಾಗುವುದು. ಚಿತ್ರದಲ್ಲಿ ಅರ್ಥವಿಲ್ಲದ ಚಿತ್ರ (design), ಅರ್ಥವುಳ್ಳ ಚಿತ್ರ ಎಂದೆರಡು ಭೇದಗಳು. ಸೀರೆಯ ಅಂಚು, ರಂಗೋಲಿ, ಭೂಮಿತಿಯ ತತ್ತ್ವಗಳ ಸಹಾಯ-ದಿಂದ ತೆಗೆದ ವಿಧವಿಧದ ರೂಪುಗಳು ಇದರಲ್ಲಿ ಅಡಕವಾಗುವುವು. ಮೂರ್ತಿಶಿಲ್ಪಿಗೆ ಮಾನವಸ್ವಭಾವದ ಪರಿಚಯವು ಬೇಕಾದರೂ ಅದು ಕೆಲವೊಂದು ವಿಶಿಷ್ಟಗುಣಗಳದೇ ಇರಬೇಕಾಗಿರುತ್ತದೆ. ಹಾಗಲ್ಲ ಚಿತ್ರಕಾರನದು; ಚಿತ್ರದ ವ್ಯಾಪ್ತಿಯು ವಿಶಾಲವಾದುದರಿಂದ, ಅವನಿಗೆ ವನಸ್ಪತಿಶಾಸ್ತ್ರದಿಂದ ಎಲ್ಲ ಶಾಸ್ತ್ರಗಳ ಪರಿಚಯವೂ ಬೇಕಾಗುವುದು. ತೋಟದ ಮೂರ್ತಿಯನ್ನು ಶಿಲ್ಪಿಯು ಮಾಡಲಾರನು; ಒಂದು ಸಭೆಯನ್ನು ತೋರಿಸಲಾರನು; ಒಂದು ತೊಡಕುಳ್ಳ ಸಂಗತಿಯನ್ನು ಪ್ರದರ್ಶಿಸಲಾರನು. ಚಿತ್ರಕಾರನು ಸಭೆಯನ್ನು ತೋರಿಸಬಲ್ಲನು, ಗುಡಿಗೋಪುರಗಳನ್ನೂ (ವಾಸ್ತು) ತೋರಿಸಬಲ್ಲನು, ಮೂರ್ತಿಗಳನ್ನೂ ತೋರಿಸಬಲ್ಲನು; ದ್ರೌಪದೀ-ವಸ್ತ್ರಾಪಹರಣ, ಸೀತಾಸ್ವಯಂವರ, ದ್ರೌಪದೀ ಸ್ವಯಂವರದಂತಹ ತೊಡಕಿನ ನೋಟಗಳನ್ನೂ ತೋರಿಸಬಲ್ಲನು. ಚಿತ್ರಶಿಲ್ಪಿಗೆ ವಾಸ್ತುಕಲೆಯಂತೆ ಪ್ರದೇಶವು ಸಿಕ್ಕುವದಿಲ್ಲ. ಪ್ರದೇಶದ ವಿಶಾಲತ್ವಕ್ಕೆ ವಾಸ್ತುವಿನ ಜನ್ಮ. ಮೂರ್ತಿಶಿಲ್ಪಿಗೆ ಒಂದು ಕಲ್ಲು; ಚಿತ್ರಶಿಲ್ಪಿಗೆ ಒಂದು ಪಟ. ಶಿಲ್ಪಿಯು ಒಂದೇ ಭಾವವನ್ನು ತೋರಿಸಬಲ್ಲನು—ಒಂದು ಕಲ್ಲಿನ ಪ್ರದೇಶದಲ್ಲಿ. ಚಿತ್ರಕಾರನು ಒಂದೇ ಪಟದ ಮರ್ಯಾದೆಯಲ್ಲಿ ಬೇಕಾದುದನ್ನು ಬರೆಯುವನು. ಚಿತ್ರಕಾರನಿಗೂ ಅಭ್ಯಾಸವು ಮುಖ್ಯವಾದದ್ದು. ಆ ಎಲ್ಲ ಅಭ್ಯಾಸದ ಸಾರವನ್ನು ತೋರಿಸಲಿಕ್ಕೆ ಒಬ್ಬೊಬ್ಬ ಶಿಲ್ಪಿಗೆ ಎಷ್ಟೋ ವರುಷಗಳು ಬೇಕಾಗುವುವು. ' ಫಿಡಿಯಸ್' ಎಂಬ ಶಿಲ್ಪಿಯು ಝೂಸ್ (ಸೂರ್ಯ)ನ ಪ್ರತಿಮೆಯನ್ನು ಹದಿನೈದು ವರ್ಷ ದುಡಿದು ಮಾಡಿದನಂತೆ! ಆದರೆ ಚಿತ್ರಕಾರನದು ಹಾಗಲ್ಲ. ಅವನು ತರತರದ ಚಿತ್ರಗಳನ್ನು ಒಂದೊಂದೇ ರೇಖೆಯಿಂದ ಚಿತ್ರಿಸಬಲ್ಲನು. ಒಬ್ಬ ರಾಜನು ಚಿತ್ರಗಳ ಪಂದ್ಯಾಟವನ್ನು ನಡೆಯಿಸಿದನು. ಎಷ್ಟೋ ಜನ ಕಲೆಗಾರರು ಎಂಟು ದಿವಸ, ತಿಂಗಳು, ಆರು-ತಿಂಗಳು ದುಡಿದು ಚಿತ್ರಗಳನ್ನು ತೆಗೆದರು. ಕಟ್ಟಕಡೆಯ ದಿವಸ ಒಬ್ಬ ಚಿತ್ರಕಾರನು ಐದೇ ನಿಮಿಷಗಳಲ್ಲಿ ಒಂದು ಚಿತ್ರವನ್ನು ತೆಗೆದ. ಅದು ಎಲ್ಲಕ್ಕೂ ಉತ್ಕೃಷ್ಟವಾಗಿದ್ದಿತು. ಆದರೆ ಅವನು ಸ್ವಲ್ಪೇ ವೇಳೆಯಲ್ಲಿ ತೆಗೆದಿದ್ದನಾದುದರಿಂದ ಅವನಿಗೆ ಪಾರಿ-ತೋಷಕವು ಸಿಕ್ಕಲಿಲ್ಲ. ಆಗ ಅವನು ರಾಜರ ಮುಂದೆ ಕೈಮುಗಿದು "ರಾಜಾಧಿರಾಜರೇ, ವೇಳೆಯು ಕಲೆಯ ಮಾನ-ವಲ್ಲ. ಇಂತಹ ಉತ್ಕೃಷ್ಟ ಚಿತ್ರವನ್ನು ಬರೆಯಲಿಕ್ಕೆ— ಐದೇ ನಿಮಿಷದಲ್ಲಿ ಬರೆಯಲಿಕ್ಕೆ—ನನಗೆ ಮೂವತ್ತು ವರುಷ ಅಭ್ಯಾಸ ಮಾಡಬೇಕಾಯಿತು" ಎಂದು ಹೇಳಿದನು. ಅವನಿಗೆ ಪಾರಿ-ತೋಷಕ ಸಿಕ್ಕಿತು. ಇರಲಿ.

ಇವು ಮೂರು ನಯನ ಮನೋಹರವಾದ ಕಲೆಗಳು. ಇನ್ನು ಶ್ರುತಿಮನೋಹರವಾದಂತಹವು ಸಂಗೀತ ಮತ್ತು ಕಾವ್ಯ. ಸಂಗೀತದಲ್ಲಿ ಸ್ವರವೇ ಮಾಧ್ಯಮ. ಆದರಲ್ಲಿ ರಸದಿಂದಾಗುವ ಆನಂದವಿಲ್ಲ. ರಸವನ್ನೂ ಮೀರಿದಂತಹ ಅನುಪಮೇಯವಾದ ಆನಂದವು ಶುದ್ಧ ಸಂಗೀತದಲ್ಲಿರುವುದು. ಸಂಗೀತವು—ಎಂದರೆ ಬರಿ ರಾಗ, ತಾನ, ಆಲಾಪ ಮುಂತಾದ್ದರಿಂದ ಕೂಡಿದ ಶುದ್ಧ ಸಂಗೀತವು— ಜನಸಾಮಾನ್ಯಕ್ಕೆ ಮನೋಹಾರಿಯಾಗುವುದಿಲ್ಲವೆಂಬುದು ಸಿದ್ಧವಾದ ಮಾತೇ ಆಗಿದೆ. ಏಕೆಂದರೆ ಶುದ್ಧ ಸಂಗೀತದ ಉಪಭೋಗಕ್ಕೆ, ಅದಕ್ಕೆ ತಕ್ಕಂತಹ ಅಭ್ಯಾಸವು ಕೇಳುವವನಲ್ಲಿಯೂ ಇರಬೇಕಾಗುವುದು. ಸಂಗೀತದಲ್ಲಿ ಸಾಹಿತ್ಯ ಕೂಡಿತೆಂದರೆ ಅದು ಬಲ್ಲೆ ಶ್ರುತಿ ಮನೋಹರವಾಗುವುದು. ಸಾಹಿತ್ಯದಲ್ಲಿಯ ಭಾವಗಳನ್ನು ಸುಂದರವಾದ ಶಾಸ್ತ್ರಶುದ್ಧವಾದ ರಾಗಗಳಲ್ಲಿ ಕೇಳುವುದರಿಂದುಂಟಾಗುವ ಆನಂದಕ್ಕೆ ಪಾರವೇ ಇಲ್ಲ.

ಇನ್ನುಳಿದದ್ದು ಕಾವ್ಯ. ಕಾವ್ಯವು ಶ್ರುತಿ ಮನೋಹರವಾದ ಕಲೆ. ಇದರಲ್ಲಿ ಪ್ರತ್ಯಕ್ಷವಾಗಿ ಏನನೂ ಕಾಣದೆ, ತರತರದ ಭಾವಗಳು ಅತಿ ಸೂಕ್ಷ್ಮವಾಗಿ ಮನಸ್ಸಿನಲ್ಲಿ ಮೂಡುವುದರಿಂದ, ಸರ್ವಕಲೆಗಳಲ್ಲಿ ಕಾವ್ಯಕಲೆಯೇ ಶ್ರೇಷ್ಠವಾಗಿದೆ. ಕಲಾ ಸೀಮಾ ಕಾವ್ಯಂ! ಕಾವ್ಯಗಳ ಅಭ್ಯಾಸವು ಚೆನ್ನಾಗಿ ನಡೆಯುತ್ತಿದ್ದುದರಿಂದ ಇದರ ಬಗ್ಗೆ ವಿಶೇಷ ಬರೆಯಬೇಕಾಗಿಲ್ಲ. ವಾಸ್ತುವಿನ ಭವ್ಯ-ವಿಶಾಲತೆಯೂ, ಶಿಲ್ಪಿಯ ವಸ್ತುನಿಷ್ಠ – ಆತ್ಮನಿಷ್ಠತೆಯ ಸಂಗಮವೂ, ಚಿತ್ರಕಲೆಯ ಸೂಕ್ಷ್ಮತೆಯೂ, ತೊಡಕುಳ್ಳ ಭಾವದರ್ಶನವೂ, ಸಂಗೀತದ ಪರಾನುಭವವೂ ಕಾವ್ಯದಲ್ಲಿದೆಯೆಂದು ಹೇಳಿದರೆ ಸಾಕಷ್ಟು ಹೇಳಿದಂತಾಯಿತು: ಕಾವ್ಯದಲ್ಲಿಯೂ ನಾಟಕವೇ ಶ್ರೇಷ್ಠ. ಕಾವ್ಯೇಷು ನಾಟಕಂ ರಮ್ಯಂ! ಪಂಡಿತರಿಗೂ ಪಾಮರರಿಗೂ, ಬಾಲಕರಿಗೂ ಎಲ್ಲ ಕಲೆಗಳ ಅನುಭವದ ಸಾಮರಸ್ಯವನ್ನು ಕೊಡುವುದೇ ನಾಟಕ. ಕಲೆಗಳು ವಾಸ್ತು, ಶಿಲ್ಪ, ಚಿತ್ರ, ಸಂಗೀತ, ಕಾವ್ಯವೆಂದು ಹೇಳಿದ್ದಾಯಿತು. ಇವುಗಳ ಪರಿಚಯವನ್ನು ಸಾಕಷ್ಟು ಮಾಡಿಕೊಡುವುದೇ ಉದ್ದೇಶ.

ನಮ್ಮ ಹಾನಗಲ್ಲ ಏಜಂಟರು

ಶ್ರೀ. ತ್ರಿ. ಸು. ಕಾಶೀಕರ

ನ್ಯೂಜ್ ಪೇಪರ್ ಏಜಂಟ್

ಹೆಣ್ಣಿಗೆ:—

ಶ್ರೀ. ಟಿ. ವರದರಾಜರಾವ್, ಬಿ. ಎ.

ಕಣ್ಮುಂದೆ ಸುಳಿಯದಿರು
ಎಲೆ ಚೆಲುವೆ ಹೆಣ್ಣೆ!
ಸುಳಿದು, ಮನ ಕಲಕದಿರು,
ಬೇಡುವೆನು ಹೆಣ್ಣೆ!
ಪ್ರೇಮದಾ ಮೊಟ್ಟಮೊದಲಿನ ನೋಟ
ಈಗ ತಾ ಸಾರಿಹುದು ಬಳಿಗೆ;
ಹಿಂದಿನಾ ಹುಡುಗಾಟ ಚೆಲ್ಲಾಟ
ಅಳಿದಿಲ್ಲ ಉಳಿದಿಹುದು ಒಳಗೆ! ೧

ಹೊಸ ಬಾಳಿನೊಡಗೂಡಿ
ಬಯಕೆ ಹೆಚ್ಚುವುದು.
ಬಿಸಿ ರಕುತ ಹರಿದಾಡಿ
ಎದೆ ಮಿಡಿಯುತಿಹುದು!
ಆಲೋಚನೆಯ ಪರಿಯು ಇನಿತಿಲ್ಲ,
ಆತುರವು ಸೆಳೆಯುತಿದೆ ಎನ್ನ.
ಕೆಡಕು-ಕೀರ್ತಿಗಳ ಅಂತರವಿಲ್ಲ
ಭಯವಿಲ್ಲ, ಕೆಣಕದಿರು ಎನ್ನ! ೨

ಹೊಸ ಬಗೆಯ ಅನುರಾಗ
ಇಬ್ಬರಲಿ ಬೆಳೆದು—
ಮೆಲುಮೆಲನೆ ಹೊಸ ಭೋಗ-
ದಾಸರೆಗೆ ಸೆಳೆದು—
ಕಾಪುತಿದೆ, ನಕ್ಕು ನಲಿಯುತಿದೆ ಸಿಂದು
ತಪ್ಪಿದರೆ ಆಹುತಿಗೆ ಕೀಡಲು.
ಎಲ್ಲ ಅಸ್ಪಷ್ಟವಾಗಿಹುದಿಂದು
ಕಣ್ಗೆ ಕಾಣುವುದು ಬರಿ ನೆಳಲು! ೩

ಇಂದಿನಾ ಬಲುಮೆಯನು
ಎದೆಯೊಳಗೆ ಬೆಳಸಿ,
ಆಶೆ, ಆಕಾಂಕ್ಷೆಯನು
ತಡೆಗಟ್ಟಿ ನಿಲಿಸಿ,
ಹುಲುಸಾದ ಬೆಳೆಬಂದು ತೂಗುತಿರೆ
ಎಲ್ಲರೆದುರಲ್ಲಿ ಕೈಹಿಡಿದು
ಕನಸು ನನಸಾಗುತಿರೆ, ಫಲಿಸುತಿರೆ
ಹೃದಯ ಹಿಗ್ಗುವುದು ಮೆರೆಮೆರೆದು! ೪

ನಿರುತ ನಾವ್ಗಳು ಕೂಡಿ
ಬಾಳ್ಗೆ ಸಿರಿ ಮುಡಿಸಿ,
ಒಂದೆ ಹಾಡನು ಹಾಡಿ
ಪ್ರೇಮವನು ನುತಿಸಿ,
ನಿತ್ಯ ಪೂಜೆಯ ಕಾಣ್ಕೆಯನು ನೀಡಿ
ನಲ್ಮೆ ತೆರೆಮಾಲೆಯಲಿ ಮೆರೆಯೆ—
ನೂರು ಕಣ್ಣುಗಳು ನಮ್ಮನೆ ನೋಡಿ
ಹೊಗಳಿ ಪಾಡುವುವು ನೀನರಿಯೆ! ೫

ದುಡುಕಿ ನೀ ಕೆಡಬೇಡ,
ಎದುರು ಬಾರದಿರು!
ಕೆಟ್ಟು ದೂಷಿಸ ಬೇಡ,
ಬಳಲಿ ಬಾಡದಿರು!
ನವ ಯೌವನದ ಬಿರುಸು ಬಿಂಕದಲಿ
ಬಲುಮೆವೆಣ್ಣಿನ ಬಲೆಯು ಸೆರೆಯು,
ಇದೆ ಪ್ರೇಮ ಮುಂದಿನಾ ದಿನಗಳಲಿ
ಸತ್ಸಂಗದಲಿ ಮೊಳೆವ ಸಿರಿಯು! ೬

ನೀತಿ ಪ್ರೇತವಾ ಕಡೆ
ಹಲ್ಕಿರಿಯುತಿಹುದು;
ಭೀತಿ ಭೂತವೀ ಕಡೆ
ಬಲು ಕೆರಳುತಿಹುದು!
ಕದ್ದು ನಲಿಯುವ ಪ್ರೇಮವನು ಬಿಡು
ಅಪವಾದ ಹಿಂದು ಮುಂದಿಹುದು;
ಹಗಲಿರುಳು ನಿಶ್ಚಲತೆಯನು ತೊಡು
ಸೊಗದ ಸುಗ್ಗಿಯು ತಡೆದು ಬಹುದು! ೭

ಮುಂದೆ ನಮಗಾಗಿರುವ
ವೈಭವವ ನೆನೆದು,
ಇಂದು ಮುಂಬರುತಿರುವ
ಆಶೆಗಳ ಹಿಡಿದು,
ಮುಂದು ಮುಂದಕೆ ಸಾಗು ಎಲೆ ಜೀವ
ಸ್ಥೈರ್ಯದಾಶ್ರಯವ ಮರೆ ಹೋಗುತ!
ಈ ಒಂದು ಅಧಿಕಾರ ಕೊಡು ದೇವ
ಬದುಕಿ ಬಾಳುವೆನು ಅನವರತ! ೮

ಆರಾಧನೆ

★ ಶ್ರೀ. "ಶ್ಯಾಮೂ" ಬಳ್ಳಾರಿ ★

(ಚಿಕ್ಕನಾಟಕ)

" ಹೊಲೆಯ ಹೊರಗಿಹನೆ, ಊರೊಳಗಿಲ್ಲವೇ ? "

— ಪುರಂದರ ದಾಸರು

—: ಪಾತ್ರಗಳು :—

ಸೀಮಂತಿನಿ	..	ದೇವದಾಸಿ — ಸೂಳೆ	ಶಿವಗುರು	..	ಶೂದ್ರ
ಶರ್ಮ	..	ಪೂಜಾರಿ	ಆತ್ಮಾರಾಮ	..	ಮಾದಿಗ ಭಕ್ತ
ಹರಿನಾರಾಯಣ	..	ಧರ್ಮಕರ್ತ	ಪದ್ಮನಾಭ	..	ವೃದ್ಧಪಾರ
ರಾಮಕ್ಕ	..	ಪುಣ್ಯಸ್ತ್ರೀ	ಮಹಮ್ಮದೀಯ	..	ಪೋಲ್ಸೀ

ಕ್ರೈಸ್ತರವ .. ಮಿಷನರಿ.

ಸ್ಥಳ — ಒಂದು ಶಿವಾಲಯ. ದಿನ — ಒಂದು ಪರ್ವದಿನ. ಕಾಲ — ಬೆಳಗಾದ್ದೇ.

ಪ್ರಥಮ ರಂಗ

(ಆಲಯ ಪ್ರಾಂಗಣವು—ಆಲಯದ್ವಾರದ ಬಳಿ ಸೀಮಂತಿನಿ ಪೂಜಾ-ದ್ರವ್ಯಗಳೊಂದಿಗೆ ಪ್ರವೇಶಿಸುವಳು.)

ಸೀಮಂತಿನಿ:— ಹರಿನಾರಾಯಣನಿನ್ನೂ ಬಂದಿಲ್ಲ ; ಸ್ನಾನ-ಸಂಧ್ಯಾದಿಗಳಿನ್ನೂ ಪೂರ್ತಿಯಾಗಿಲ್ಲವೇನೊ !....ಪೂಜಾರಿ ಪೂಜೆಯಲ್ಲಿ ಮಗ್ನನಾಗಿದ್ದಾನೆ.......ಅದೆಲ್ಲವೂ ಒಂದು ವಿಧವಾದ ದೀಕ್ಷೆ—ದೀಕ್ಷೆಯಲ್ಲಿದ್ದಂತೆ ನಟನೆ—ನಟನೆಗನುಕೂಲವಾದ ವೇಷ—ವೇಷಕ್ಕೆ ತಕ್ಕ ಪಾತ್ರ !....ನಾನು ಬಂದ ಸಮಾಚಾರ-ವನ್ನರಿತೂ ಈಚೆಗೆ ಬಂದಿಲ್ಲವಲ್ಲ ?

(ಪ್ರವೇಶ—ಹರಿನಾರಾಯಣ)

.... ಆ ! — ಬರುತ್ತಿರುವರು. (ಕೊಂಚ ಮುಂದಕ್ಕೆ ನಡೆದು) ಸ್ವಾಮೀ, ನಮಸ್ಕಾರಗಳು— ದಯೆಮಾಡಿಸಿ !

ಹರಿ:— (ಕೈಯೆತ್ತಿ) ದೀರ್ಘ ಸುಮಂಗಲೀಭವ !

ಸೀಮಂ:— ನಿಮ್ಮಂತಹ ಹಿರಿಯರಿಷ್ಟು ಜನ ಸುಖವಾಗಿರಲಾಗಿ ನನಗೇನು ಭಯ ?—ನನ್ನ ಮಾಂಗಲ್ಯಕ್ಕೇನು ಲೋಪ? ....ಏನೋ ತಮ್ಮ ದಯೆಯಿರಬೇಕು ಅಷ್ಟೆ ! (ಎನ್ನುತ್ತ ಒಳಗೆ ಹೋಗುತ್ತಿರಲು, ಅವಳ ತುರುಬಿನೊಳಗಿನ ಹೂವೊಂದು ಜಾರಿಬೀಳುವುದು)

ಹರಿ:— ಓಹೋ ! ಸೀಮಂತಿನೀ ! ನಿಲ್ಲು—ನಿಲ್ಲು ! ಹೂಗಳು ತಲೆಯೊಳಗಿಂದ ಜಾರುತ್ತಲಿವೆ. ಹಸುರು ಹೂಗಳು ಕೆಳಗೆ ಬೀಳಲಾಗದು !

(ಆಕೆ ನಿಲ್ಲುವಳು, ಅವನು ಆಕೆಯ ತಲೆಯಲ್ಲಿ ಹೂವನ್ನು ಮುಡಿ-ಸುವನು.)

ಸೀಮಂ:— ಪೂಜೆಯ ಸಮಯವೀಗ ! ಪೂಜಾದ್ರವ್ಯಗಳನ್ನೊದಗಿಸಬೇಕಾಗಿದೆ. ಆಗಲೇ ಬಾಲಭಾನುವು ಗಿಡಗಳೆಡೆಯಿಂದ ಗಗನಕ್ಕೆ ಹಾರುತ್ತಿರುವನು. ಹೋಗಬೇಕು ! (ಹೊರಡುವಳು.)

ಹರಿ:— ಸೀಮಂತಿನೀ ಒಂದು ಮಾತು.......ಹೋಗಬಹು-ದೇಳು !—ಅಯ್ಯೋ ! ನನ್ನ ಮಾತನ್ನು ಕೇಳೆಯಾ ? (ಮೆಲ್ಲನೆ) ನನ್ನ ಆರಾಧನೆಯನ್ನು ಸ್ವೀಕರಿಸಲಾರೆಯಾ ?.......ನಿನಗೆ ಆ ಪೂಜಾರಿ ಶರ್ಮನೆ ಮೆಚ್ಚಿಗೆಯವನಾಗಿರುವನೇನು ?....ಅವನು ಶುದ್ಧ ಪಶುವೆಂದು ನಿನಗಿನ್ನೂ ಗೊತ್ತಾಗಿಲ್ಲವೆ !.......ಅಬ್ಬಬ್ಬ ! ಸೀಮಂತಿನೀ ! ಇದೋ, ಒಂದು ಮಾತು—! (ಅವಳು ಬರುವಳು) ಆ....ಕರೆದಲ್ಲಿ ಬಂದರೆ ಸಾಕು ! ಈಗ ನೀನೆಂದರೆ ನನಗೆಷ್ಟೋ ಮುದ್ದು—ಗೌರವವು !

ಸೀಮಂ:— ಜೋರಾಗಿ ಕೂಗಬೇಡಿ ! ಶರ್ಮ ಅವರು ಕೇಳಿ-ಯಾರು— ಆ ಬದಿಯಲ್ಲೇ ಇರುವರು.

ಹರಿ:— ಮನೆ ಹಾಳಾಗ ! — ಈಗ ಕೇಳಲಿಲ್ಲವಲ್ಲ ?

ಸೀಮಂ:— ಇಲ್ಲವೇಳಿ ; ಕೇಳಬಹುದೆಂದು ಮೊದಲೇ ಎಚ್ಚರಿಕೆ ಹೇಳಿದೆನು. ಇನ್ನು ಹೋಗುತ್ತೇನೆ.......ಆರಾಧನೆಗೆ ಸಮಯವು ಮೀರಿದೆ. ಇದು ಸಮಯವಲ್ಲ........ಅನಂತರ ಸಾವಕಾಶವಾಗಿ ಮಾತನಾಡಬಹುದು !

(ಹೋಗುವಳು.)

ಹರಿ:— (ಅವಳ ಕಡೆಗೆ ನೋಡುತ್ತ) ....ಎಷ್ಟು ಸುಂದರವಳೇ—! ಶೃಂಗಾರಿ ಹೋದಳು—ಇಷ್ಟಕ್ಕೂ ಸಮಯವು ಮಿಂಚಿಹೋಯಿತು! ....ಅಬ್ಬಾ! ಸೀಮಂತಿನೀ! ಅತನ ಆರಾಧನೆಗೆ ಸಮಯ ಮೀರಿದೆಯೋ? ನನ್ನ ಆರಾಧನೆಯನ್ನು ಎಂದು ಸ್ವೀಕರಿಸುವೆ? ಸರಿ! ನಾಳೆ, ಉತ್ಸವದ ರಾತ್ರಿಯಲ್ಲಾದರೂ ನನಗೆ ಸಿಕ್ಕಲಾರೆಯಾ?.... ಹೇಗಾದರೂ— ಅದೇ ಒಳ್ಳೆಯ ಸಮಯವೇಳು!

(ಪ್ರವೇಶ—ಪೂಜಾರಿ ಶರ್ಮ.)

ಹರಿ:— ನಮೋನಮಃ.

ಶರ್ಮ:— ನಮೋನಮಃ! ಸೀಮಂತಿನೀ— ಸೀಮಂತಿನೀ! ಆರಾಧನೆಗೆ ಹೊತ್ತು ಮೀರಿದೆ....ಅವಳೆಲ್ಲಿ ಹೋದಳೋ!

ಹರಿ:— ಯಾರು!—ಸೀಮಂತಿನಿಯೇನು?........ಹೀಗೆಯೇ ಹೋದಳೇನೊ! ಇದೇ ಈಗ ಹೋದವಳು ಅವಳೇ ಅಲ್ಲವೆ?

ಶರ್ಮ:— (ಸಂಶಯದಿಂದ) ಇಲ್ಲಿಗೆ ಬಂದಿದ್ದಳೇನು?

ಹರಿ:— ಅಪ್ಪಣೆ—ಅಯ್ಯೋ ಬಂದಿಲ್ಲ ಸ್ವಾಮಿ....ಅಪ್ಪಣೆ— ದೇವದಾಸೀ ಜನರೆಲ್ಲರೂ ಕ್ಷೇಮವೇನು?

ಶರ್ಮ:— ಅವರಿಗೇನು ಕಡ್ಮೆ? — ಸಾಕ್ಷಾತ್ತಾಗಿ ದೇವದೇವನ ಸೇವೆಮಾಡುವ ದೇವದಾಸಿಯರು; ಅವರು ದೇವರ ಪರವಾಗಿ ಜನಿಸಿದವರು—ಕಲಾದೇವಿಯ ಅವತಾರಗಳು!.... ಅವರ ಕ್ಷೇಮಕ್ಕೇನು ಲೋಪ?

ಹರಿ:— ಏನೋ—ತಮ್ಮ ದಯವಿರಬೇಕಾಗಲಿ—ದೇವದಾಸಿಯರಿಗೇನು ಲೋಪವಿದೆ?

(ಶರ್ಮನು ಕೇಳಿಯೂ ಕೇಳದಂತೆ ನಟಿಸುತ್ತ ಹೋಗುವನು.)

ಹರಿ:—ಎಲೋ! ಎಷ್ಟು ವೇದಾಂತವನ್ನು ಹೇಳುತ್ತಿರುವೆಯೋ! ನೋಡತಕ್ಕುವು ಶಿವಪೂಜೆಗಳು, ತೂರತಕ್ಕುವು ಡೊಂಬರ ಗುಡಿಸಿಲುಗಳು—! ಇಲ್ಲಿಯವರೆಗೂ, ನಿನ್ನ ರಾಜ್ಯ ಸಾಗುತ್ತಿದೆ.... ಆಳಿಕೋ! .... ಈ ದೇವದಾಸೀಜನ ನಿನ್ನದು! ಈ ದೇವಾಲಯ ನಿನ್ನದು! ಈ ಕಾಣತಕ್ಕ ಸಮುದ್ರ ನಿನ್ನದು! ಈ ಲೋಕವೇ ನಿನ್ನದು. ....ಎಲ್ಲವೂ ನೀನೇ........ದೇವರಿಗಿಂತಲೂ ಅಧಿಕನು! ....ಎಲೋ, ಪೂಜಾರೀ! ಆ ಕಲ್ಲಿನ ದೇವರು ಒಳಗೆಲ್ಲಿ ಇರುವನೋ ಏನೋ! ನೀನೇ ದೇವರು....! ಲೋಕವನ್ನುದ್ಧರಿಸುವುದಕ್ಕೂ, ಲೋಕಕ್ಕೂ ದೇವರಿಗೂ ಮಧ್ಯೆ ಮಧ್ಯವರ್ತಿತ್ವವನ್ನು ನಡೆಯಿಸುವುದಕ್ಕೂ, ಜನರ ಕಷ್ಟ-ಸುಖಗಳನ್ನು ವಿನಯ ವಿಧೇಯತೆಗಳಿಂದ ಕೇಳುವುದಕ್ಕೂ—ಈ ಭೂಮಿಯಲ್ಲಿ ಅವತರಿಸಿರುವೆ!........ನಿನಗೆ ಹುಟ್ಟಿನಿಂದ ಬಂದ ಆ ಅಧಿಕಾರಕ್ಕೂ ತಂದಿಟ್ಟುಕೊಂಡ ಪಾಂಡಿತ್ಯ-ಗೌರವವು ಅಲಂಕಾರ ಪ್ರಾಯವಾಗಿದೆ................

(ಅಡಿಗಳು ನಡುಗುತ್ತಿರೆ, ಬಳುಕುತ್ತ, ನಿತ್ರಾಣದಿಂದ ಸುತ್ತಲೂ ನೋಡುತ್ತ ಆತ್ಮಾರಾಮನು ಪ್ರವೇಶಿಸುವನು.)

ಗಂಟೆಯು ಬಾರಿಸುತ್ತದೆ. ಆರಾಧನೆಯು ಆರಂಭವಾಯಿತು. ....ನಾರಾಯಣ—ನಾರಾಯಣ! ಹರಹರ ಶಂಭೋಶಂಕರ!!

(ಹೋಗುವನು.)

ಆತ್ಮಾ:—ಅಮ್ಮಯ್ಯಾ,! ಎಷ್ಟು ದೂರ! ಹದಿನಾರು ಗಾವುದ ದೂರ! ಇಂದಿಗೆ—ನನ್ನ ತಂದೆಯ ಮಂದಿರದಲ್ಲಿಗೆ ಬಂದೆ— ನನ್ನ ರಾಜನು—ನನ್ನ ತಂದೆ—ನನ್ನ ದೇವನು—ಅದೋ—! ಆ ಆಲಯದಲ್ಲಿರುವನು!....ಎಷ್ಟು ದಿನಗಳಿಗೆ ನನ್ನ ಸ್ವಾಮಿಯನ್ನು ಕಾಣಬಂದೆನು? ....ಸಾವಿರಾರು ಜನರು ಇಲ್ಲಿಗೆ ಬರುವರು— ದರ್ಶನವನ್ನು ಪಡೆದು ಹೋಗುವರು! ಅವರ ಪಾಪಗಳು ನಾಶವಾಗುತ್ತವೆ! ನನ್ನ ದೇವದೇವನ ಪಾದಗಳಲ್ಲಿ ನನ್ನ ಪ್ರಾಣಗಳನ್ನು ಬಿಡುವೆನು........

(ಪ್ರವೇಶ —ರಾಮಕ್ಕ)

(ಆತ್ಮಾರಾಮನು ಸಹಜ ಭಯದಿಂದ ಸರಿದು ನಿಲ್ಲುವನು.)

ರಾಮಕ್ಕ:—ಯಾರೋ ನೀನು?

ಆತ್ಮಾ:— (ನಡುಗುವನು)

ರಾಮಕ್ಕ:— (ಕೋಪದಿಂದ) **ಚಾಂಡಾಲಾ**! ಛಿ! ಛಿ! ನಡೆ, ಆಚೆಗೆ ನಡೆ!........ಇನ್ನೂ ನಿಂತಿರುವೆಯಲ್ಲ! ನಿನಗೆಷ್ಟು ಎದೆ. ಗರ್ವವೋ?— ಇಂತಹ ಪವಿತ್ರಸ್ಥಳದಲ್ಲಿ ಕಾಲಿಟ್ಟಿರುವೆಯಾ? ನಿನಗೇನು ಸೋಕಾಲವು ಬಂದಿದೆಯೋ! ಅಯ್ಯೋ! ಅಯ್ಯೋ! ಏನು ಕರ್ಮ ಬಂತು ದೇವರೇ! ನಿನಗೇನು ಕರ್ಮ ಬಂತು ಶಂಕರಾ!

ಆತ್ಮಾ:—ತಾಯಿಾ! (ಕಂಪಿತಸ್ವರದಿಂದ) ತಾಯಿಾ!

ರಾಮ:—ಛೀ! ಛೀ! ಪಾಪೀ, ನನ್ನನ್ನು ತಾಯಿಾ ಎನ್ನುವೆಯಾ? ನಿನ್ನ ಬಾಯಿಗೆ ಏನು ರೋಗ ಬಂದಿರುವುದೋ....ಅಯ್ಯೋ! ಈ ಪವಿತ್ರಸ್ಥಳವೆಲ್ಲವೂ ಮೈಲಿಗೆಯಾಗಿ ಹೋಗಿದೆ! ಇನ್ನೇನು ಗತಿ ದೇವರೆ—ಏನೋ! ಗುಡಿಯೊಳಗೆ ಬರತಕ್ಕವರಿಗೆ ಆತಂಕವಾಗಿ, ಇನ್ನೂ ಅಲ್ಲೇ ನಿಂತಿರುವೆ ಏಕೋ! ನಡೆ—ಇಲ್ಲದಿದ್ದಲ್ಲಿ ನೂಕಿಸುವೆನು ನೋಡು!

(ಹಾದಿಯುದ್ದಕ್ಕೂ ನೀರನ್ನು ಚಿಮುಕಿಸುತ್ತ ಹೋಗುವಳು.)

ಆತ್ಮಾ:—ಅಯ್ಯೋ! ದೇವಾಧಿದೇವಾ! ನನ್ನ ಪ್ರಭುವಿನ ಆಲಯದಲ್ಲಿ ಪ್ರವೇಶಿಸುವುದಕ್ಕೂ ನನಗೆ ಅರ್ಹತೆಯಿಲ್ಲವೇ? ದೇವಾ! ನಿನ್ನನ್ನು ನೋಡಬೇಕೆಂದು ಎಷ್ಟೋ ಹರಿದಾರಿಗಳನ್ನು ನಡೆದು ಬಂದೆನೇ! ನಿನ್ನನ್ನು ನೊಡಲೇ ಬಾರದೇನು?

(ಪ್ರವೇಶ: —ಹರಿನಾರಾಯಣ)

ಹರಿ:—ಎಲೋ—ಯಾರೋ ಅದು? ಯಾರವನೋ ನೀನು? ಆರಾಧನೆಗೆ ಬರತಕ್ಕವರನ್ನು ಅಡ್ಡಿಮಾಡುತ್ತಿರುವೆಯಂತೆ— ನಿನಗ್ಯಾರು ಕೊಟ್ಟರೋ ಅಧಿಕಾರ?

ಆತ್ಮಾ:— (ಗದಗದ ನಡುಗುತ್ತ —ಅಮಾಯಕನಾಗಿ) ನನ್ನ ದೇವನು....ನನ್ನತಂದೆ! ನನ್ನ ದೇವನು —ಅದೋ!

(ಪ್ರವೇಶ—ಶಿವಗುರು)

ಶಿವ:—ರಾಮಾಪತೇ- ಸೀತಾಪತೇ, **ಗಂಗಾಜಟಾಜೂಟ**-ಗೌರೀಪತೇ!!

ಹರಿ:—ನಿನ್ನ ದೇವನೆ? ನಿನ್ನ ದೇವನಾರು? ನಿನಗೂ ದೇವರೇನು? ಚಾಂಡಾಲಾ! ನಿನಗೂ ಇವನೇ ದೇವನೆ ಆದಲ್ಲಿ— ಈ ದೇವನೂ ಚಾಂಡಾಲನೇ ಆಗುತ್ತಿದ್ದನು!

ಶಿವ:—ಹರಹರ! ಚಾಂಡಾಲರು ಆಲಯವನ್ನು ಪ್ರವೇಶಿಸಲು ಪ್ರಯತ್ನಿಸುತ್ತಿರುವರೇ! **ಕಲಿಕಾಲ! ಕಲಿಕಾಲ!!**

ಆತ್ಮಾ:—ಎಲ್ಲ ಕುಲಗಳವರೂ ಬರುತ್ತಿರುವರಲ್ಲ..... ನನಗೆ ಮಾತ್ರವೇ ಆತಂಕವೇನು?

ಹರಿ:—ನಿನಗೊಬ್ಬನಿಗೇ ಅಲ್ಲ; ನಿನ್ನ ಚಾಂಡಾಲ ಕುಲಕ್ಕೇ ಈಗಲೇ ಹಿಡಿದಿದೆ........ಬೇಗ ನಡೆ—

ಶಿವ:—ಇಲ್ಲವಾದಲ್ಲಿ ನಾನು ಕೈಹಾಕಿಕೊಳ್ಳಬೇಕಾಗಿ ಬರುತ್ತದೆ. ಅನಂತರ ಸ್ನಾನವೂ ಬಿಡದು.!

ಹರಿ:— ನಡೆ—ನಡೆ—ಅದೋ ಅರ್ಚಕರು ಬರುತ್ತಿರುವರು. ಅನಂತರ, ಕಷ್ಟಪಡುತ್ತೀಯೆ—ಹೊರಟು ಹೋಗು!

ಆತ್ಮಾ:— ಅಯ್ಯೋ! ನನ್ನ ದೇವರು, ಆತನನ್ನು ನೋಡಗೊಡಿ. ನನ್ನ ತಂದೆಯನ್ನು ನೋಡಲಪ್ಪಣೆಯನ್ನು ಕೊಡಿ— ನನ್ನ ಪಾಪಗಳನ್ನು ಕಳೆದುಕೊಳ್ಳಬೇಕಾಗಿದೆ.

(ಪ್ರವೇಶ— ಪೂಜಾರಿ ಶರ್ಮ.)

ಶರ್ಮ:— ಪಾಪೀ! ಪಾಪವನ್ನು ಮಾಡಿಕೊಂಡಿದ್ದಿಯಾದ್ದರಿಂದಲೇ ಈ ಜನ್ಮದಲ್ಲಿ ಈ ಪಾಪವನ್ನನುಭವಿಸು! ಈ ಚಾಂಡಾಲಜನ್ಮವನ್ನು ನಿನಗೆ ವಿಧಿಯು ಬರೆದಿರುವನು. ಈ ವಿಧಿಯ ಬರೆಹವನ್ನು ಅಳಿಸಲು ಯಾರಿಗೆ ಸಾಧ್ಯ?—ಆರಾಧನೆಗನೇಕರು ಬರುತ್ತಿರುವರು. ಅವರಿಗಾತಂಕವಾಗಿ ನಿಲ್ಲಬೇಡ. ಆರಾಧನೆಗೆ ಬರುವ ಜನರಿಗೆ ಅಡ್ಡಿಯನ್ನು ಮಾಡಿದುದಕ್ಕಾಗಿ, ಆ ದೇವದೇವನಿಗೆ ನಿನ್ನ ಮೇಲೆ ಆಗ್ರಹ ಉಂಟಾಗುವುದು. ಈ ವಿಷಯವನ್ನು ಜನರು ಮಹಾರಾಜರಿಗೆ ತಿಳಿಸುವರು. ನಿನಗೆ ಮರಣದಂಡನೆಯು ತಪ್ಪದು.—

ಹರಿ:— ಆದ್ದರಿಂದ—ಆದಕಾರಣ—ಇಲ್ಲಿ ರಾಜದಂಡನೆಗೂ ಅಲ್ಲಿ ದೈವದಂಡನೆಗೂ ಗುರಿಯಾಗದೆ, ಎರಡರಿಂದಲೂ ತಪ್ಪಿಸಿಕೊಳ್ಳು; ಕೆಡಬೇಡ! ಯಾರಾದರೂ ಈ ವಿಷಯವನ್ನು ಕಂಡರೂ, ಕೇಳಿದರೂ ನಮಗೆ ಗೌರವವಲ್ಲ. ಒಳ್ಳೆಯ ಮಾತಿನಿಂದ ಆಚೆಗೆ ನಡೆ. ನಮಗೆ ಮಹೋಪಕಾರವನ್ನು ಮಾಡಿದವನಾಗುವೆ!

ಆತ್ಮಾ:— ಆದರೆ—ಸ್ವಾಮೀ!—ನನ್ನ ದೇವ—ನನ್ನ ದೇವದೇವ! ನಾನು ನನ್ನ ದೇವನನ್ನು ನೋಡಲಾಗದೇ?

(ಪ್ರವೇಶ—ಪದ್ಮನಾಭ)

ಪದ್ಮ:— ಹರಹರ! ಶಂಭೋ! ಶಂಕರ! — ಏನು ಗತಿ! ಎಂತಹ ದುರ್ದಶೆಯು ಪ್ರಾಪ್ತವಾಗಿದೆ!—ನಮ್ಮಂತಹ ಮುಪ್ಪಿನ ಜೀವಗಳಿನ್ನೂ ಇರಲಾಗಿಯೇ—ಇಂತಹ ಹಾಳುಕಾಲವು ಪ್ರಾಪ್ತವಾಯಿತೇ!—ಆಶ್ಚರ್ಯವೇಕೆ—ಕಲಿಕಾಲ ನಮ್ಮಪ್ಪಾ! —ಕಲಿಕಲಿಮಹಿಮೆ— ಯಾವ ದಿಕ್ಕಿನಲ್ಲಿ ನೋಡಿದರೂ ಕಲಿಸಮುದ್ರವು ತುಂಬಿ, ಉಕ್ಕಿ ಬರುತ್ತಲಿದೆ!— ಈ ಕಲಿರಾಜ್ಯದಲ್ಲಿ ಆಚಾರವೂ ಅನಾಚಾರವೂ —ಎಲ್ಲವೂ ಒಂದೇ ....ನನ್ನ ತಂದೇ! .... ಹಾದಿ ಬಿಡು,....ಬಿಡಪ್ಪಾ ತಂದೇ!....ಹಾಗೆ ಬೆಪ್ಪಾಗಿ....ಹುಚ್ಚನಂತೆ— ಪಾಪ! ಅಮಾಯಕನಂತೆ ನೋಡುವೆ ಏಕೆ? ಬಿಡು—ನಾನು ಒಳಗೆ ಹೋಗಲು ಹಾದಿಯನ್ನು ಬಿಡು!—ಪ್ರಾಯಶ್ಚಿತ್ತಕ್ಕೆ ಕೂಡ ಅನುಕೂಲವಿಲ್ಲದೆ— ಪ್ರಪಂಚವೆಲ್ಲಾ— ಗೇಣು ಸ್ಥಳವಾದರೂ ಇಲ್ಲದಂತೆ— ಸಗಣಿಯ ಹುಳುಗಳಂತೆ ತುಂಬಿಬಿಟ್ಟಿರುವರು ಮಾದಿಗರು! ನಮ್ಮ ಕಾಲದಲ್ಲಿ ಮೈಲು ದೂರ ನಿಂತಿರುತ್ತಿದ್ದರು ಮಾದಿಗರು! ಇದು ಮಾದಿಗರ ಕಾಲವಾಯಿತಪ್ಪಾ! ಇದು ಮ್ಲೇಚ್ಛರ ರಾಜ್ಯವಯ್ಯೋ!—

(ಒಳಗೆ ಹೋಗುತ್ತಿರುವನು.)

ಶರ್ಮ:— (ಕೋಪದಿಂದ) ಎಲಾ! ನಿನಗಲ್ಲವೇನು ಹೇಳೋದು? ಬ್ರಾಹ್ಮಣರಿಗೆಲ್ಲರಿಗೂ—ಎಂತಹ ಆತಂಕವನ್ನು ಮಾಡುತ್ತಿರುವೆಯೋ! ಇನ್ನೂ ಹೋಗುವುದಿಲ್ಲವೇ? ಮಿಕ್ಕವರೆಲ್ಲರನ್ನೂ ಮೈಲಿಗೆ ಮಾಡುವವರೆಗೂ ಕದಲುವುದಿಲ್ಲವೇನು?

ಹರಿ:— ಇವರಿಗೆ ಶಾಸ್ತ್ರಪ್ರಕಾರವಾಗಿ ಪ್ರಾಯಶ್ಚಿತ್ತಗಳನ್ನು ಮಾಡಿಸುತ್ತಾ ಬಂದರೂ ಬುದ್ಧಿಯೇನೂ ಬರುವುದಿಲ್ಲ. ಈ ಹಾಳು ಸರಕಾರದವರು ಇವರಿಗೆ ಬೆಂಬಲವಾಗಿ, ಇವರಿಗೆ ಓದುಬರೆಹ ಹೇಳಿಕೊಟ್ಟು, ಇನ್ನಿಷ್ಟು ಮೂಲ ಮಾಡಿರುವರು. ಸ್ವಾಮಿ, ಇವನನ್ನು ದೇಶದಿಂದ ಬಹಿಷ್ಕರಿಸಬೇಕು; ಕುಲದವರಿಂದ ಹೊರ ಹಾಕಿಸಬೇಕು, ಮತ್ತೂ........

ಆತ್ಮಾ:— ಸ್ವಾಮೀ! ನಾನೇನು ಮಾಡಿದೆನು? ಯಾರನ್ನೂ ಏನೂ ಅಂದಿಲ್ಲವಲ್ಲ! ಇಲ್ಲಿ ಸುಮ್ಮನೆ ನಿಂತಿರುವೆನಲ್ಲವೇ?

ಶರ್ಮ:— ಇಲ್ಲಿ ನೀನು ನಿಲ್ಲಬಾರದು! ಮುಖ್ಯವಾಗಿ ಇಲ್ಲಿಗೆ ಬರಲೇಬಾರದು! ಬಂದುದೇ ನಿನ್ನ ಅಪರಾಧ!

ಆತ್ಮಾ:— ಅಯ್ಯೋ! ನಾನು ಬರಲೇಬಾರದೆ? ಇಲ್ಲಿ ನಿಲ್ಲಲೇ ಕೂಡದೇ? ಇಲ್ಲಿದ್ದರೆಯೆ ತಪ್ಪೇನು?....ನಾನು ಬರಲೇಬಾರದೆ? ಏಕೆ ಮಹಾಸ್ವಾಮೀ? ನಾನೂ ನಿಮ್ಮಂತೆಯೇ ಮನುಷ್ಯನಲ್ಲವೇ?

ಶರ್ಮ:— ನಮ್ಮಂತಹವನು ಹೇಗಾಗುವೆ? ನಾವು ಬ್ರಾಹ್ಮಣರು—ನಮ್ಮದು ಪವಿತ್ರ ಕುಲವು, ಅಗ್ರಜಾತಿ! ಇದು ಪೂಜಾಮಂದಿರವು! ದೇವರ ನಿಲಯವು! ಪರಮ ಪವಿತ್ರಸ್ಥಲವು! ನಿನ್ನ ಜನ್ಮವು ಚಾಂಡಾಲ ಜನ್ಮವು—ಪರಮ ನೀಚನು—ನೀನೀ ಪವಿತ್ರ ಸ್ಥಳವನ್ನು ಮುಟ್ಟಲೇಬಾರದು!

ಆತ್ಮಾ:— ಏತಕ್ಕೆ? ನಾನು ಮಾದಿಗನಾದ ಮಾತ್ರಕ್ಕೆ ನೀಚನೇ? ಹಾಗಾದರೆ ಈ ಮಾದಿಗನಾಗಿ ಏಕೆ ಜನಿಸಿದೆ?

ಶಿವ:— ಎಲಾ ಹುಚ್ಚಪ್ಪಾ! ಹರಟೆಯ ಪೋಟಿಗೆ ನಿಲ್ಲದೆ ಹೊರಟು ಹೋಗು,—ನಿನ್ನ ಹರಟೆ—ನಿನ್ನ ಧರ್ಮಸಂದೇಹಗಳು— ಕೇಳಿದರೆ ನನಗೇ ನಗೆ ಬರುತ್ತದೆ. ಆದರೇನು? ಈ ಹುಚ್ಚುಹರಟೆಯನ್ನು ಕೇಳಿದರೆ ನನಗೇನು ಪುಣ್ಯವೇ ಪುರುಷಾರ್ಥವೇ?

(**ಹೋಗುವನು.**)

ಶರ್ವ :— ಶಾಸ್ತ್ರಗಳ ಹೇಳಿಕೆಯಂತೆ—ಕಳೆದ ಜನ್ಮದಲ್ಲಿ ನೀನು ಮಾಡಿದ ಕರ್ಮಕ್ಕಾಗಿ ಈ ಹಾಳು ಜನ್ಮದಲ್ಲಿ ಜನಿಸಿದೆ! ನೀನು ಪಾಪಿಯು! ನಿಮ್ಮ ಕುಲದವರೆಲ್ಲರೂ ಪಾಪಿಗಳಾದ್ದರಿಂದ, ನಿಮ್ಮ ಕುಲವು ಮುಟ್ಟಬಾರದ್ದಾಗಿರುವುದು! ಹಿಂದಿನ ಪಾಪಕ್ಕೆ ಪ್ರಾಯಶ್ಚಿತ್ತವನ್ನನುಭವಿಸಬೇಕು—ತಪ್ಪದು!

ಆತ್ಮಾ :— ಅಯ್ಯೋ! ಅರಿತೋ ಅರಿಯದೆಯೋ, ಗತಜನ್ಮದಲ್ಲಿ ಪಾಪವನ್ನೋ ಪುಣ್ಯವನ್ನೋ ಮಾಡಿದೆವು— ಆ ಪಾಪಗಳಿಗೆ ಪ್ರಾಯಶ್ಚಿತ್ತವೇ ಇದು! ಈ ಜನ್ಮದಲ್ಲಾದರೂ ಸ್ವಲ್ಪ ಪುಣ್ಯವನ್ನು ಸಂಪಾದಿಸಲು ಬಿಡಿ—ದೈವಪ್ರಾರ್ಥನೆಯನ್ನು ಮಾಡಲು ಕೊಡಿ—ಬರುವ ಜನ್ಮದಲ್ಲಾದರೂ—ಸ್ವಲ್ಪ ಒಳ್ಳೆಯ ಕುಲದಲ್ಲಿ ಜನಿಸುವೆನೇನೋ!....ನೀವು ಹೇಳಿದಂತೆ ಅಸ್ಪೃಶ್ಯನೇ!—ದೇವರನ್ನು ಪೂಜೆ ಮಾಡಗೊಡಿರಿ—ದಯವಿಟ್ಟು!

ಶರ್ವ :— ನಿನಗೂ ದೇವರಿಗೂ ಎಷ್ಟುಮಾತ್ರವೂ ಸಂಬಂಧವಿಲ್ಲ—ಇಲ್ಲಿ ದೇವರನ್ನು ಪ್ರಾರ್ಥನೆಮಾಡಲಾಗದು—ವೇದವಾಕ್ಕು ನಿಮ್ಮ ಕಿವಿಗಳಲ್ಲಿ ಬೀಳಬಾರದು....ಪೂಜೆಯು ನಿಮ್ಮ ಕಣ್ಣಳಲ್ಲಿ ಬೀಳಬಾರದು....ಇಲ್ಲಿ ನಿನಗೆ ದೇವರೇ? ನಿನಗೆ ದೇವರೇ ಇದ್ದಲ್ಲಿ—ಅಧಮಪಕ್ಷಕ್ಕೆ ಶೂದ್ರಕುಲದಲ್ಲಿಯಾದರೂ ಇರುತ್ತಿದ್ದೆ!

ಆತ್ಮಾ :— ಸೂಳೆಯ ಕುಲದಲ್ಲಾದರೂ ಇರಬಾರದಾಗಿತ್ತೇ! ನಿಮ್ಮ ಪಾದಸೇವೆಯಲ್ಲಿ, ಶುಶ್ರೂಷೆಯಲ್ಲಿ, ದೇವದಾಸಿಯೆಂಬ ಉತ್ತಮವಾದ ಹೆಸರನ್ನು ಪಡೆಯುತ್ತಿದ್ದೆ!— ಅಯ್ಯೋ — ಅನ್ಯಾಯವನ್ನು ಮಾಡಿದ ಕಣ್ರೀ—ದೇವರು ನನಗೆ ಅನ್ಯಾಯ ಮಾಡಿದನು!

(ಪ್ರವೇಶ—ಸೀಮಂತಿನಿ)

ಸೀಮಂ :— ದೇವರಲ್ಲವಯ್ಯಾ ಅನ್ಯಾಯಮಾಡಿದ್ದು — ದೇವರು ಬರಿಯ ಅಮಾಯಕನು—ಆ ಅಮಾಯಕ ದೇವರನ್ನು ಸೃಷ್ಟಿಮಾಡಿದ ಮಾನವರಪ್ಪಾ— ನಿನಗೆ ಅನ್ಯಾಯವನ್ನು ಮಾಡಿದ್ದು!— ಎಲ್ಲವೂ ತಿಳಿದಿದ್ದರೂ ತಿಳಿಯದವನಂತೆ ಸುಮ್ಮನಿರುತ್ತಾನೆ ಕಣೋ, ಆ ದೇವನು!

ಶರ್ವ :— (ಕೋಪದಿಂದ) ಸೀಮಂತಿನೀ, ಸುಮ್ಮನಿರು! (ಆತ್ಮಾರಾಮನಿಗೆ) ಪಾಪೀ—ನಿನಗೆ ದೇವಾಲಯಪ್ರವೇಶವು ಈ ಜನ್ಮದಲ್ಲಿಲ್ಲ! ನಿನಗೆ ದೇವರು ಇಲ್ಲದಂತೆಯೇ—

ಹರಿ :— ಹೂಂ—ತಿಳಿಯಿತೇ? ನಿನಗೆ ದೇವರು ಇಲ್ಲದಂತೆಯೇ—ದಯಮಾಡು! ನಿನ್ನ ಕರ್ಮವನ್ನನುಭವಿಸು!

ಆತ್ಮಾ :— ನನಗೆ ದೇವರೇ ಇಲ್ಲವೇ? ಇಷ್ಟು ಜನ ಮಾನವರಿಗಿದ್ದು — ನನಗೆ ಮಾತ್ರ ದೇವರಿಲ್ಲವೇ?— ನನ್ನ ಕರ್ಮ—ನಾನು ಪಾಪಿಯು!

(ವಿಚಾರದಿಂದ, ದೀನದೃಷ್ಟಿಗಳಿಂದ, ಹೊರಟು ಹೋಗುತ್ತಾ)

ದೇವಾ, ನನಗೆ ನೀನಿಲ್ಲವೆಂದು ಎಲ್ಲರೂ ಹೇಳುತ್ತಿರುವರು. ನನ್ನ ಮನಸ್ಸಿನಲ್ಲಿ ನೀನಿರುವೆ! ನಿನ್ನನ್ನುನೋಡಲಾರದೆ ಹೋದರೂ—ಇಲ್ಲಿಂದಲೇ ನಿನಗೆ ನಮಸ್ಕಾರವನ್ನು ಮಾಡುತ್ತಿರುವೆನು—ದೇವಾ! ನನಗೆ ನೀನಿರುವೆ! ನಿನ್ನ ಪಾದಗಳಲ್ಲೇ ನನ್ನ ಜೀವಗಳಿವೆ!

(ಮೆಲ್ಲಗೆ ಹೋಗುವನು)

ಹರಿ :— ಶನಿ ಬಿಟ್ಟಂತಾಯಿತು!

ಶರ್ವ :— ಈ ಹಾಳು ದೆವ್ವ ಇನ್ನೂ ಬಿಟ್ಟಂತೆ ಕಾಣುವುದಿಲ್ಲ.

ಸೀಮಂ :— ಎಷ್ಟೊಂದು ಅಳುತ್ತಿರುವನಲ್ಲ! ಎಂತಹ ಭಕ್ತನೋ! ಅಲ್ಲವೇ! ಭಕ್ತರ ಹೃದಯವನ್ನು ನೋಯಿಸಿ, ಎಷ್ಟು ಪಾಪವನ್ನು ಸೇರಿಡುತ್ತಿರುವಿರಿ? ದೈವಭಕ್ತಿಗೂ ಕುಲಕ್ಕೂ ಸಂಬಂಧವೇನಿದೆ?

ಶರ್ವ :— (ನಗುತ್ತ) ಓಹೋ! ಸೀಮಂತಿನೀ! ನೀನು ಪ್ರವಕ್ತೃವಾಗಿ ತಯಾರಾಗುತ್ತಿರುವೆಯೇನು........

ಸೀಮಂ :— ನಿಮ್ಮಂತಹ ಪಂಡಿತರು ಶಾಸ್ತ್ರಗಳಿಂದ ತೆಗೆಯುವ ಅರ್ಥಗಳನ್ನು ವಿಮರ್ಶನೆ ಮಾಡುವುದಕ್ಕಾದರೂ ತಯಾರಾಗಬೇಕು!

ಶರ್ವ :— ಇನ್ನು ಶಾಸ್ತ್ರಗಳನ್ನು ಕಟ್ಟಿಟ್ಟು ಸರಸಗಳಲ್ಲಿದ್ದರೆ ಚೆನ್ನಾಗಿರುತ್ತೆ!

ಹರಿ :— (ಭಯದಿಂದ) ನಾಸ್ತಿಕಳಾಗಿಯೇ! .... (ಹಿಂಪಕ್ಕೆ ಸರಿಯುತ್ತಾನೆ.)

ಶರ್ವ :— ಸೀಮಂತಿನೀ, ಒಂದು ಮುದ್ದು! ಬೇಗ.... ಹೂಂ....

ಸೀಮಂ :— ಅಯ್ಯೋ! ನಿಮ್ಮ ಮಡಿ?

ಶರ್ವ :— ಇರಲಿ....ಬೇಗ....

ಸೀಮಂ :— ಆ ಭಕ್ತನ ಪಾದಗಳ ಮೇಲೆ ಬಿದ್ದರೆ ಸಾಕು; ನಮಗೆಲ್ಲರಿಗೂ ಪುಣ್ಯವು ಬರುತ್ತೆ!

ದ್ವಿತೀಯ ರಂಗ

(ಆಲಯದೊಳಭಾಗದಲ್ಲಿ ; ಕೋಪದಿಂದ ಸೀಮಂತಿನಿಯ ಪ್ರವೇಶ)

ಸೀಮಂ :— ವ್ಯಭಿಚಾರ-ಅನ್ಯಾಯ-ಅಸತ್ಯ- ದುರಹಂಕಾರ- ಅಸೂಯೆ— ಆಗ್ರಹ— ಎಲ್ಲವೂ ಕಲೆತ ಕೂಪವೆಂದರೆ—ಈ ದೇವಾಲಯ! ಯಾವಸ್ಥಾನವು ಪರಮ ಪವಿತ್ರವಾಗಿರುವುದೋ, ಯಾವ ಕ್ಷೇತ್ರವು ಸನ್ಮಾರ್ಗಕ್ಕೂ ಸತ್ಯಕ್ಕೂ ಮಾರ್ಗವೋ—ಅದೇ ಎಲ್ಲದೌಷ್ಟ್ಯಕ್ಕೂ ನಿಲಯವಾಗಿದೆ!....ಪೂಜಾರಿ! ಪರಮ ಪೂಜ್ಯಸ್ಥಾನವನ್ನು ವಹಿಸಬೇಕಾದ ಪೂಜಾರಿ! — ಜಾರನು! ದೇವದಾಸೀ ಮನೋಹರನು!....ಇವಳು ದೇವದಾಸಿಯಲ್ಲ—ಪೂಜಾರಿಯದಾಸಿ! ದೇವಾಲಯ ಪ್ರವೇಶಕರ ಪಾದದಾಸಿ! ಅರ್ಚನೆಯ ಪೂರ್ವದಲ್ಲೂ ಪೂಜಾರಿಗೆ ಮುದ್ದುಗಳ ನೈವೇದ್ಯ! ದೇವರ ನೈವೇದ್ಯಕ್ಕೆಮುಂಚಿತವಾಗಿ ಪೂಜಾರಿಗೆ ದೇವದಾಸಿಯ ಸಮರ್ಪಣೆ! ಇದು ಮಡಿಗೆ ಲೋಪವಲ್ಲ! ದೇವದರ್ಶನಾರ್ಥ-

ಪಾಗಿ ಬಂದ ಅಂತ್ಯಜನ ದರ್ಶನವು ಮಾತ್ರ ಮೈಲಿಗೆ! ಶರ್ಮ! ಅದ್ದರಿಂದಲೇ—ಇಂತಹ ಕೆಟ್ಟ ಸ್ಥಳವಾದ್ದರಿಂದಲೇ—ಅಮಾಯಕನಾದ ಭಕ್ತನು ಇದರೊಳಗೆ ಪ್ರವೇಶಿಸಲಾರದೆ ಹೋದನು! ಪಾಪಗಳ ಪುಟ್ಟಿಗೆ ದೇವಾಲಯವೂ ದೇವರೂ ಆಗಲಿ! ಅಮಾಯಕ ಭಕ್ತನಿಗೆ ಬೇರೆಯ ದೇವರೇ ಆವಶ್ಯಕವು! —ಯಾರದು? ಹರಿನಾರಾಯಣನೇ? ರಹಸ್ಯವಿಟಮೂರ್ತಿ! ಆಲಯದಲ್ಲಿ ಸರಸವನ್ನು ಬೆಳೆಯಿಸುವವನು! ದೇವರ ತಲೆಯಮೇಲೆ ಹೂವನ್ನು ಹಾಕದಿದ್ದರೂ, ವೇಶ್ಯೆಯ ತಲೆಯೊಳಗೆ ಹೂವನ್ನು ಮುಡಿಸುವ ಪ್ರಣಯ ಭಕ್ತಿಶಿಖಾಮಣಿ!........ ಹೇ! ಅಲ್ಲ.—ಶಿವಗುರುವು! ಮುದಿಮಂಗ! ಪೂಜಾರಿಗಳ ಕಾಲಹುಳುವು! ಇದೊಂದು ನಿರ್ಭಾಗ್ಯ ಹೆಣವು! ದೌರ್ಭಾಗ್ಯರಿಗೆ ಆಲಯವಾಗುತ್ತಿದೆ ಈ ದೇವಾಲಯ!

(ಪ್ರವೇಶ:—ಶಿವಗುರುವು)

ಶಿವ:— (ನಗುತ್ತ) ಸೀಮಂತಿನೀ, ಹಳೆಯದಿನಗಳನ್ನು ಮರೆತು ಬಿಟ್ಟೆಯಾ? ಅಂದು ಕಾಸಿನಸರವನ್ನು ತಂದು ಕೊಟ್ಟೆನಲ್ಲ!····ಕ್ಷೇಮವೆ?

ಸೀಮಂ:—ಅಯ್ಯೋ! ಆಲಯದಲ್ಲಿ ವೇಶ್ಯಾಸರಸವಾಡುವ ನಿಮ್ಮಂತಹ ವಿಟಶ್ರೇಷ್ಠರು—ಅಲ್ಲ ಭಕ್ತಶ್ರೇಷ್ಠರಿರಲಾಗಿ—ನನಗೆ ಕ್ಷೇಮಕ್ಕೆ ಲೋಪವೇ? ....ವಿಶೇಷವೇನು?

ಶಿವ:—ಆ ಮಾದಿಗ ಮುಂಡೇಮಗನು ಇನ್ನೂ ಸಿಂಹದ್ವಾರದ ಬಳಿಯಲ್ಲಿ ಕಾವಲುಕಾಯುತ್ತಿರುವನು!

ಸೀಮಂ:— ಅವನು ಕಾವಲು ಕಾಯುದ್ದರಿಂದಲೇ ನೀವು ಕುಲುಕುತ್ತಿರುವಿರಿ! ಅವನಿಲ್ಲದ ದಿನದಲ್ಲಿ ಮಣ್ಣು ತಿನ್ನಬೇಕಾದ್ದೇ! ನಿಮ್ಮೆಲ್ಲರಿಗಿಂತಲೂ ಅವನೇ ಉತ್ತಮ!

(ಪ್ರವೇಶ—ಶರ್ಮ)

ಶರ್ಮ:—ಯಾರು ಸ್ವಾಮೀ! ಆ ಉತ್ತಮನೆಂದದ್ದು?

ಶಿವ:—ಮಾದಿಗ! ಅವನ ಮೇಲೆ ಕಣ್ಣು ಬಿತ್ತೇನೋ ಪಾಪ!

ಸೀಮಂ:—ಬಾಯಿಮುಚ್ಚು! ಎಷ್ಟು ಮಾನ ಮರ್ಯಾದೆಗಳಿಲ್ಲದವಳಾದರೂ, ಹೃದಯವೆಂಬುದೊಂದನ್ನು ಇದ್ದವಳಿದ್ದೇನೆಂದು ತಿಳಿ! ಬಾಯಿ ಸರಿಯಾಗಿ ಬರಲಿ. —ಈ ಒಂದು ಉದಾಹರಣೆಯೆ ಸಾಕು····ಮಾದಿಗರು ನಿಮಗಿಂತಲೂ ಉತ್ತಮರೆಂಬ ನುಡಿಯ ತಾರ್ಕಣ್ಯಕ್ಕೆ!

ಶರ್ಮ:— ಎಲೋ! ನೀನು ಹೋಗಿ—ಆ ಚಾಂಡಾಲನನ್ನು ಅಲ್ಲಿಂದ ಓಡಿಸಿಬಿಡು!

(ಶಿವಗುರು ಹೋಗುವನು.)

ಸೀಮಂ:— ಪಾಪ! ಬೆಳಗಿನಿಂದಲೂ ಉಪವಾಸದೀಕ್ಷೆಯಿಂದ ತಪಸ್ಸುಮಾಡುತ್ತಿರುವನು, ದೇವರ ಸಲುವಾಗಿ!

ಶರ್ಮ:— ಆದಲ್ಲಿ, ನೀನು ಪ್ರತ್ಯಕ್ಷಳಾಗಿ ವರಗಳನ್ನು ಕೊಡು! ಸಾವಿರಾರು ವರ್ಷಗಳು ತಪವನ್ನು ಮಾಡಿದ ಋಷಿಗಳಿಗೆ ಪ್ರತ್ಯಕ್ಷನಾದ ದೇವರಿಗೆ ಬದಲು ನೀನು ಸಾಕು!

ಸೀಮಂ:—ನಿಮ್ಮದಾಯಿತಲ್ಲವೇ? ರಾತ್ರೀ ಶಯ್ಯಾಭೋಗ! ಬೆಳಗ್ಗೆ ಮುದ್ದುಗಳ ಆರಾಧನೆ! ಅದು ನಿಮ್ಮ ತಪಃಫಲ ಅಲ್ಲವೇ?

ಶರ್ಮ:— ನೀನು ದೇವದಾಸಿ—ಆಲಯದ ದಾಸಿಯು! ಇದಕ್ಕಾಗಿಯೇ ನಿನ್ನ ಜನ್ಮ.....ಇದರಿಂದಲೇ ನೀನು ಪಾವನೆ!

ಸೀಮಂ:—ದೇವದಾಸಿಯಲ್ಲ—ಪೂಜಾರಿಯ ದಾಸಿ! ದೇವರ ಸೇವೆಯಲ್ಲ—ಪೂಜಾರಿಯ ಕಾಮಕ್ಕೆ ತೃಪ್ತಿ! ಇದಕ್ಕೆ ಜನ್ಮವೇ? ಪಾವನೆ! ಅಯ್ಯೋ! ಅಮಾಯಕರಾದ ನಿಜವಾದ ಭಕ್ತರಿಗೆ, ಹೃದಯವಿಲ್ಲದ ಸಮಾಜವೇ ರಕ್ಷಣೆಯು? ಇಂತಹ ಸಮಾಜಕ್ಕೆ ದೀಪಸ್ತಂಭಗಳಲ್ಲವೇ ನಿಮ್ಮಂತಹ ಮಹಾಪುರುಷರು? ನಿಮ್ಮ ಮುದ್ದುಗಳ ಮಡಿಯ ಆರಾಧನೆಯು ನಡೆಯಿತೇ? ದೇವನು ಎದ್ದು ಬಂದು ಆ ಮಡಿಯ ನೈವೇದ್ಯವನ್ನು ತಿಂದನೇ? ಮಾದಿಗನು ನೋಡಿದರೆ ಮಾತ್ರ....!ನಾನೇ ನೈವೇದ್ಯವನ್ನು ಮಾಡಲೇ? ಇಂದಿನ ರಾತ್ರಿಯ ಸಂಭೋಗವು ದೇವರಿಗೋ—ನಿಮಗೋ?—ಸೇವೆ! —ರಾತ್ರಿ ಪೂಜೆ! —ಮಹಾಪುರುಷರು ಪೂಜಾರಿಗಳು!

ಶರ್ಮ:— ಅಹುದು; ನನ್ನಂತಹವರು ಇನ್ನೂ ಕೆಲವು ಮಂದಿ ಇರುವುದರಿಂದಲ್ಲವೇ ಇನ್ನೂ ಸನಾತನಮತವು ತನ್ನ ಧರ್ಮದಿಂದ ನಾಲ್ಕು ಪಾದಗಳ ಮೇಲೆ ನಡೆಯುತ್ತಿದೆ?

ಸೀಮಂ:— ಯಾವ ದಿನದಲ್ಲಿ ನಿಮ್ಮಂತಹ ಪರಮಪೂಜ್ಯರು ನಾಶವಾಗುವರೋ—ಅಂದೆಯೆ ಸತ್ಯಮತವಾದ ಹಿಂದೂಮತವು ಉದ್ಧಾರವಾಗುತ್ತದೆ! ನಿಮ್ಮದು ಎಂದೂ ಮತವಲ್ಲ; ಪಕ್ಷಪಾತದ ಮತ!— ದೇವದಾಸೀ ಸಂಭೋಗಲಾಲಸೆಯ ಮತ!—ಅನಾವಶ್ಯಕ ಕಲಹದ ಮತ! ಸತ್ಯವರಿಯದ ಅಜ್ಞಾನ ತಿಮಿರ!.... ಆ ಆತ್ಮಾರಾಮನೇ ನಿಜವಾದ ಭಕ್ತನು!

ಶರ್ಮ:— ಅತನಂತಹ ಭಕ್ತರು ಲಕ್ಷೋಪಲಕ್ಷ—

ಸೀಮಂ:— ಇರುವರು— ಅಮಾಯಕರಲ್ಲಿ — ಹೀನಜಾತಿಗಳಲ್ಲಿ! ಆದರೆ ನಿಮ್ಮಂತಹ ಬೂಟಾಟಿಕೆಯ ಭಕ್ತರು--ಕಪಟ ನಾಟಕ ಸೂತ್ರಧಾರರು!

ಶರ್ಮ:— ಇದರಲ್ಲಿ ಬೂಟಾಟಿಕೆಯು ಇಲ್ಲ!—ಯಾವುದು ಶಾಸ್ತ್ರಬದ್ಧವೋ—ಅದರಂತೆಯೇ ನಾನು ನಡೆಯುತ್ತಿರುವೆನು!

ಸೀಮಂ:— ಅಹುದು—ರಾತ್ರಿ ದೇವರ ಸೇವೆಯನಂತರ ದೇವದಾಸೀ ಸಂಪರ್ಕವು ಶಾಸ್ತ್ರಬದ್ಧವೇ? ಪೂಜೆಗೆ ಮುಂಚೆ ಸೂಳೆಯ ಮುದ್ದುಗಳು ಶಾಸ್ತ್ರಬದ್ಧವೇ? ಅಲ್ಲವೇ ಪೂಜ್ಯರೇ?

ಶರ್ಮ:— ನಿನ್ನಂತಹ ಚಪಲ ಸ್ತ್ರೀಯ ಸಂಗಡ ವಾದೋಪವಾದಗಳು ನನಗೆ ಅನಾವಶ್ಯಕ....(ಹೋಗುವನು.)

ಸೀಮಂ:— ಚಪಲ ಸ್ತ್ರೀ—ಬೇಡ! ನಾನು ಚಪಲೆಯು!—ದೇವದಾಸಿಯ ಕೆಲಸಕ್ಕೆ ನಿಯಮಿಸಲ್ಪಟ್ಟ ನನ್ನನ್ನು ಕೆಡಿಸಿದವನು ಚಪಲನೋ—ನಾನೋ?— ನನ್ನ ವಿಧಿಗೆ ತಲೆಬಾಗಿ ನಿಲ್ಲದ ನನಗೆ—ಬರುವ ಜನ್ಮವೆಲ್ಲಿ? ಮೂರು ಸಾಲು, ಈ ಜನ್ಮದಲ್ಲಿಯ ಪಾಪಪರಿಹಾರಾರ್ಥವಾಗಿ ಬಹುಶಃ ಪುನರ್ಜನ್ಮದಲ್ಲಿ ಪೂಜಾರ

ಯಾಗಿ ಹುಟ್ಟುವೆನೇನೋ ?— ಎಲೈ, ದೇವರೇ, ಬೇಡ! ಆ ಪಾಪಿಷ್ಠ ಪೂಜಾರಿಯನ್ನಾಗಿ ಮಾತ್ರ ಹುಟ್ಟಿಸಬೇಡ!— ಅದಕ್ಕಿಂತಲೂ—ಚಾಂಡಾಲ ಜನ್ಮ— ಆ ಭಕ್ತನಂತಹ ಜೀವನ— ಅದನ್ನೇ ಬೇಡುವೆನು!—ಈಹಾಳು ಸಮಾಜದಿಂದ ಚಪಲೆಯೆಂದು ಕರೆಯಲ್ಪಡುವ ಈ ಸ್ತ್ರೀಯು, ಮಾನವ ಹೃದಯವನ್ನುಳ್ಳವಳೆಂದು ಇಂದಾದರೂ ಪ್ರಪಂಚವು ತಿಳಿದುಕೊಳ್ಳಲಿ!.. ಅಯ್ಯೋ, ಆ ಆತ್ಮಾರಾಮುನನ್ನು ಈ ಹಾಳು ಪೂಜಾರಿಶನಿಯು ಏನು ಬಾಧಿಸುತ್ತಿರುವನಲ್ಲ! (ಹೋಗುವಳು.)

ತೃತೀಯ ರಂಗ

(ಆಲಯ ಸಿಂಹದ್ವಾರ—ಆತ್ಮಾರಾಮುನು ನಿಂತಿರುವನು.)

ಆತ್ಮಾ :— ನನಗೆ ದೇವರೂ—ಇಲ್ಲ—ನನ್ನ ಪಾಪಗಳು ಕಳೆಯುವ ದಾರಿಯೂ ಇಲ್ಲ—ನಾನು ನೀಚನು—ಚಾಂಡಾಲನು!

(ಪ್ರವೇಶ—ಶಿವಗುರು)

ಶಿವ :— ಏನು ಸ್ವಾಮೀ! ಚಾಂಡಾಲರೇ! ಏನಾದರೂ ತಪವು ಫಲಿಸಿರುವುದೇ?

ಆತ್ಮಾ :— ನನಗೆ ದೇವರೇ ಇಲ್ಲ!

ಶಿವ :— ಅಹುದು; ಆ ಮಾತಿನಲ್ಲಿ ಎಳ್ಳುಕಾಳಷ್ಟಾದರೂ ಅಸತ್ಯವಿಲ್ಲ— ಮತ್ತೆ ನಿಮ್ಮ ತಪಸ್ಸು?—

ಆತ್ಮಾ :—ಯಾತಕ್ಕೂ ಕೆಲಸಕ್ಕೆ ಬಾರದ ಜೀವಿ ನಾನು— ನನಗೂ ದೇವರಿಗೂ ಯಾವ ಸಂಬಂಧವೂ ಇಲ್ಲ! ನನಗೆ ದೇವರು ಇಲ್ಲ!

ಶಿವ :—ಈ ಒದರುವುದನ್ನು ಬಿಡು— ಇಲ್ಲಿಂದ ನಡೆ! ಶನಿಗ್ರಹ!— ಹಾದಿ ಕಾಯುತ್ತಾ ಕೂತಿದ್ದೆ, ಸಾಕಿನ್ನು! —

ಆತ್ಮಾ :— ದೇವರನ್ನು ನೋಡದೆ ಇಲ್ಲಿಂದ ಹೋಗಲಾರೆನು. ದೇವರ ಪಾದಗಳಲ್ಲೇ ಪ್ರಾಣಗಳನ್ನು ಬಿಡುವೆನು!

ಶಿವ:—ನಿನ್ನಲ್ಲಿ ನನಗೆ ವಾದವೇಕೆ?—ಇಷ್ಟಕ್ಕೂ ಹೋಗುವುದಿಲ್ಲವೆಂದಂತಾಯಿತು....ಈ ವಿಷಯವನ್ನು ಯಾವತ್ತೂ ರಾಜಭಟರಿಗೆ ತಿಳಿಸುವೆನು!

(ಹೋಗುವನು)

ಆತ್ಮಾ :— ಪೂರ್ವಜನ್ಮ ಪಾಪದ ಫಲವು!

(ಪ್ರವೇಶ—ಶರ್ಮ)

ಶರ್ಮ :—ಎಲೋ! ಭೂತವೇ! ಇನ್ನೂ ಹೋಗಲಿಲ್ಲವೇ? ತಿಂಡಿ ತಿನ್ನದೆ ಇಲ್ಲೇ ಸಾಯುವೆಯೇನು? ನೀನು ಸತ್ತಲ್ಲಿ ಈ ಆಲಯದ ಗೋಡೆಗಳೆಲ್ಲವೂ ಮೈಲಿಗೆಯಾಗುವುವು! ಸಂಪ್ರೋಕ್ಷಣೆಗೆ ಹಾಳು ಖರ್ಚು! ನಿನ್ನ ಹೆಣದಿಂದ—ಶ್ರುತಿಯು ಹೆಚ್ಚಾಗಿ ರಾಗದಲ್ಲಿ ಬೀಳುವಂತಿದೆ!

ಆತ್ಮಾ:— ತಂದೆಯೇ! ದೇವರೇ ಇಲ್ಲದಿದ್ದಲ್ಲಿ—ನನ್ನ ಪಾಪಗಳು ಹೋಗುವ ದಾರಿ?

ಶರ್ಮ :— ನಿನ್ನ ಕುಲದವರು ಮಾಡತಕ್ಕ ವಿಧಿಯನ್ನು ನಿರ್ವಹಿಸು!—ನಿನಗೆ ಮುಂದೆ ಉಂಟಾಗತಕ್ಕ ಸುಖದ ಸಲುವಾಗಿ, ಸ್ವಸ್ತಿವಾಚನದಲ್ಲಿ ಎಲ್ಲರಸಂಗಡ ನಿನಗೂ ಆಶೀರ್ವಾದ ಮಾಡುವೆನು, ನಡೆ!

ಆತ್ಮಾ :— ಹಾಗಾದರೆ ನಾನು ಮಾಡತಕ್ಕ ಕೆಲಸವೇನು?

ಶರ್ಮ :— ವಿನಯ-ವಿಧೇಯನಾಗಿರು! ಬೇಸಾಯದ ಕೆಲಸವನ್ನು ಮಾಡಿ—ಈ ವಿಧವಾಗಿ ಅನ್ನದಾನ ಫಲವನ್ನು ಹೊಂದು!— ಬ್ರಾಹ್ಮಣಭಕ್ತಿಯಿಂದ ಅವರನ್ನು ಸೇವಿಸಿ ಜೀವಿಸು!—ಇದು ನೀನು ಮಾಡತಕ್ಕ ವಿಧಿ - ನಡೆ!

ಆತ್ಮಾ :—ಹಾಗಾದರೆ ದೇವನನ್ನು ನೋಡಗೊಡಲಾರಿರೇನು?

ಶರ್ಮ :— ಇನ್ನು ಬೇರೇ ಮಾತಿಲ್ಲ; ಹೋಗುತ್ತೀಯೋ? ಹೋಗು! ಇಲ್ಲವಾದಲ್ಲಿ ರಾಜಭಟರಿಗೆ ಹೇಳಿಕಳಿಸುವೆನು.

ಆತ್ಮಾ :— ನನ್ನ ದೇವರೋ, ಮತ್ತೆ?

ಶರ್ಮ :— ಇನ್ನುಮೇಲೆ ನಿನ್ನ ಕರ್ಮ! ದೇವರೂ ಇಲ್ಲ, ದೆವ್ವವೂ ಇಲ್ಲ!

(ಹೋಗುವನು.)

ಆತ್ಮಾ :— ಅಯ್ಯೋ! ದೇವಾ! ಕಾಲು ಸವೆಯುವಂತೆ ಅಲೆದುಬಂದರೂ ನಿನ್ನನ್ನು ಕಾಣಲಾರದೆ ಹೋದೆನಲ್ಲವೆ? ನೀನು—ನನಗೆ—ಈ ಪಾಪಿಗೆ ಕಾಣಿಸುವೆಯಾ? ನನ್ನ ಪಾಪಗಳು ಹೇಗೆ ಕಳೆಯುವುವು? ಇನ್ನು ನನಗೆ ದಾರಿ ಯಾವುದು? ದಿಕ್ಕೇನು? ನನ್ನನ್ನು ರಕ್ಷಿಸುವ ದೇವರೇ ಇಲ್ಲವೇ?

(ಪ್ರವೇಶ—ಮುಹಮ್ಮದೀಯ ಮೌಲ್ವಿ)

ಮೌಲ್ವಿ:— ಇಲ್ಲವೇಕೆ?—ಇರುವರು— ಅದೋ, ಪ್ರವಕ್ತರಾದ ಮುಹಮ್ಮದ್ ಪೈಗಂಬರರು, ಸ್ವರ್ಗದ ಬೀದಿಯಿಂದ ನಿನ್ನನ್ನಾಹ್ವಾನಿಸುತ್ತಿರುವರು, ಆತನ ಆಲಿಂಗನದೊಳಕ್ಕೆ ಬಾ!

ಆತ್ಮಾ :— ಅಂ!....... ನಿಜವಾಗಿಯೇ? ನನಗೂ ದೇವರಿದ್ದಾನೆಯೇ? ನನ್ನನ್ನು ಬಾಯೆಂದು ಕರೆಯುತ್ತಿರುವನೇ?

ಮೌಲ್ವಿ :— ನಮ್ಮ ದೇವನು ಅಲ್ಲಾ! ಅಲ್ಲಾಗೆ ಎಲ್ಲರೂ ಸಮಾನರೇ! ಪಾಪಿಗಳ ಪಾಪಗಳನ್ನು ಕಳೆದು ರಕ್ಷಿಸುವನು! ನನ್ನಪ್ಪಾ! ಬಾ! ನನ್ನೊಡನೆ ಬಾ! ಆ ಮಸೀದೆಯ ಆಲಯದಲ್ಲಿ, ಭಕ್ತಿಯಿಂದ ನಮ್ಮೆಲ್ಲರ ಸಂಗಡ ದೇವರನ್ನು ಪ್ರಾರ್ಥಿಸುವೆಯಂತೆ....

ಆತ್ಮಾ :— ಅಮ್ಮಯ್ಯಾ....ನನ್ನ ದೇವನಿಗೆ—ನನ್ನ ರಾಮನಿಗೆ ಇಂದಿಗೆ ದಯೆಯು ಬಂದಿರುವುದು!

ಮೌಲ್ವಿ:— ಛೇ! ರಾಮನಲ್ಲ—ಅಲ್ಲಾ ಎನ್ನು!

(ಪ್ರವೇಶ ಕ್ರೈಸ್ತರವ—ಮಿಷನರಿ)

ಕ್ರೈಸ್ತ :— ಸೋದರಾ! ನಿನ್ನನ್ನು ರಕ್ಷಿಸತಕ್ಕವನು ನಮ್ಮ ಆ ಏಸು ಪ್ರಭುವೊಬ್ಬನೇ! ಮಿಕ್ಕ ಮತಗಳೆಲ್ಲವೂ ಬರಿಯ ಬೂಟಾಟಗಳೇ! ಪವಿತ್ರ ಗ್ರಂಥದಲ್ಲಿ "ಮಾನವರೆಲ್ಲರೂ ದೇವರ ಪ್ರೀತಿಗೆ ಪಾತ್ರರು!" ಎಂದಿದೆ.

ಆತ್ಮಾ :—ತಾವಾರು ? ನನ್ನನ್ನು ' ಸೋದರಾ ' ಎನ್ನುತ್ತಿರುವಿರಿ ? ನಾನು ಮಾದಿಗ—ಅಂತ್ಯಜ—

ಕ್ರೈಸ್ತ :—ನಮ್ಮಲ್ಲಿ ಅಸ್ಪೃಶ್ಯರಿಲ್ಲ—ಎಲ್ಲರೂ ಸಮಾನರೆ—ಏಸು ಪ್ರಭುವೇ ನಿಜವಾದ ದೇವನು! ಆತನನ್ನು ಯಾವಾಗಲೂ ನಂಬಿರು ; ನಿನ್ನ ಆಶೆಗಳೆಲ್ಲವನ್ನೂ ತೀರಿಸುವನು ! ನಿನ್ನ ಮನವು ಪವಿತ್ರಗ್ರಂಥವನ್ನು ತಿಳಿದೊಡನೆಯೆ ಪರಿಶುದ್ಧತೆಯನ್ನು ಹೊಂದುವುದು....ಏಸು ಒಬ್ಬನೇ ದೇವನು !

ಮೌಲ್ವಿ :— ಅಲ್ಲ—ಅಲ್ಲಾ ಒಬ್ಬನೇ ದೇವನು !

ಕ್ರೈಸ್ತ :—ಏಸು ದೇವರೆಂದು ನಮ್ಮ ಬೈಬಲ್‌ನಲ್ಲಿ ಘಂಟಾಘೋಷವಾಗಿ ಹೇಳಿದೆ !

ಮೌಲ್ವಿ :— ಅಲ್ಲ, ನಮ್ಮ ಮಸೀದಿಯಲ್ಲಿ ಘಂಟೆಯು ಇಲ್ಲವಾದರೂ—ಅಲ್ಲಾನೇ ದೈವವೆಂದು ಖೊರಾನಿನಲ್ಲಿ ಹೇಳಿದೆ !

ಕ್ರೈಸ್ತ :— ನಮ್ಮ ಮಂದಿರಗಳಲ್ಲಿಯೂ ಘಂಟೆಗಳು ಇಲ್ಲ !

ಮೌಲ್ವಿ :— ಮತ್ತೆ ಘಂಟಾಘೋಷವೆಂದು ಹೇಗೆ ಅಂದೆ? ಅದು ಕಾಫರರ ಮಾತು !

(ಪ್ರವೇಶ—ಸೀಮಂತಿನಿ)

ಸೀಮಂ :— (ಸ್ವಗತ) ದೇವಾ ! ನೀನು ಕುರುಡನೇನು? ಸೂಳೆಯ ಎಂಜಲಿನಿಂದ ತೊಯ್ದ ನೀರನ್ನು ಸ್ನಾನಮಾಡಿಸಿ, ತೀರ್ಥವೆಂದು ಕೊಡುತ್ತಿರಲು ಸುಮ್ಮನಿರುವೆಯಾ? ನಿನ್ನ ಆಲಯದಲ್ಲಿಯೇ ನಿನ್ನ ಅರ್ಚಕ, ಧರ್ಮಕರ್ತ ಇತ್ಯಾದಿ ಭಕ್ತಶ್ರೇಷ್ಠರು ಬಾಯಿಂದ ನಿನ್ನ ನಾಮಸ್ಮರಣೆಮಾಡುತ್ತ, ಕೈಯಿಂದ ಕಾಮುಕವೃತ್ತಿಯನ್ನು—ಕೊನೆಗೆ ಸೂಳೆಯ ತಲೆಯಿಂದ ಬಿದ್ದ ಹೂವನ್ನೆತ್ತಿ ಮುಟ್ಟಿಸುತ್ತಿರಲೂ—ನೋಡುತ್ತ ಕುಳಿತಿರುವೆಯಾ? ನಿಜವಾದ ಭಕ್ತರು ನಿನ್ನನ್ನು ಕಾಣದೆ ಅಲೆಯುತ್ತಿರಲು, ಅವರನ್ನು ಸಮಾಜದಿಂದ ಹೊರಕ್ಕೆ ನೆಟ್ಟು ನೋಡುವೆಯಾ? ನೋಡು, ನಿನ್ನ ಆಲಯದ ಹೊರಭಾಗದಲ್ಲಿಯೇ, ಹಿಂದು ಸಮಾಜ ಬಹಿಷ್ಕೃತನಾದವನನ್ನು ಮತಾಂತರರು ಬೇಕಾಗಿ ಕರೆಯುತ್ತಿರುವರು. ಹೀಗೆ ದಿನೇ ದಿನೇ ಸಮಾಜವು ನಾಶವಾಗುತ್ತದೆ; ಕೊನೆಗೆ ನಿನಗೆ ಉಳಿಯುವವರು ಈ ಪೂಜಾರಿಯಂತಹ ಪೂಜೆಯ ಉಚ್ಛಿಷ್ಟದ ಅರ್ಚಕರು—ವೇಶ್ಯಾದಾಸರಾದ ಹರಿನಾರಾಯಣನಂತಹ ಧರ್ಮಕರ್ತರು— ನನ್ನಂತಹ ದೇವದಾಸಿಯರು—ಅಲ್ಲ ಪೂಜಾರಿಯ ದಾಸಿಯರು. ಎಷ್ಟು ದಿನಗಳು ನೋಡುತ್ತ ಸುಮ್ಮನಿರುವೆ? ಇನ್ನೂ ಪಾಪವು ಪಕ್ವವಾಗಿಲ್ಲವೇ ! "ಯದಾ ಯದಾಹಿ ಧರ್ಮಸ್ಯ ಗ್ಲಾನಿರ್ಭವತಿ........" ಎಂದದ್ದನ್ನು ಮರೆತೆಯೋ—ಅಯ್ಯೋ—ನನ್ನ ಕರ್ಮ !

(ಅವರನ್ನು ನೋಡಿ)

ನಿಮ್ಮ ಮತಗಳೆಲ್ಲಕ್ಕಿಂತಲೂ ಹಿಂದುಮತವೇ. ಶ್ರೇಷ್ಠವಾದುದು ! ನಮ್ಮ ಗೀತೆಯಲ್ಲೂ, ಪುರಾಣಗಳಲ್ಲೂ—ಓ—ಇನ್ನೂ ಅನೇಕ ದೊಡ್ಡ ಗ್ರಂಥಗಳಲ್ಲೂ ಎಲ್ಲವೂ ಇದೆ !

ಕ್ರೈಸ್ತ :— ಸೋದರಾ ! ನಿನ್ನನ್ನು ಚೆನ್ನಾಗಿ ಓದಿಸುವೆವು ಸರಕಾರದ ಉದ್ಯೋಗವನ್ನು ಕೊಡಿಸುವೆವು !

ಮೌಲ್ವಿ :— ನಿನ್ನನ್ನು ದೊಡ್ಡ ಮತಪ್ರಚಾರಕನನ್ನಾಗಿ ಮಾಡಿ ಮಕ್ಕಾಕ್ಕೆ ಕಳಿಸುವೆವು !

ಸೀಮಂ :— ಅಪ್ಪಾ, ಇವರ ಮಾತುಗಳನ್ನು ನಂಬಬೇಡ ! ನಿನ್ನ ಮತವೇ ಒಳ್ಳೆಯದು ; ನಿನ್ನ ರಾಮನೇ ದೇವನು ; ನಿನ್ನ ಮತದಲ್ಲಿ ನಿನಗೂ ದೇವರಿದ್ದಾನೆ !

ಕ್ರೈಸ್ತ :— ಆದರೆ-ಸೋದರಾ ! ನಿಮ್ಮ ಮತವು ನಿನ್ನನ್ನು ಆಲಯದ ಹೊರಭಾಗದಲ್ಲಿಟ್ಟು ಅಸ್ಪೃಶ್ಯನನ್ನಾಗಿ ಮಾಡಿದೆ ಏಕೆ ?

ಸೀಮಂ :— ಅಣ್ಣಾ ! ದೇವರು ಒಬ್ಬನೇ ! ಎಲ್ಲರಿಗೂ ಒಬ್ಬನೇ ! ಕೃಷ್ಣನೆಂದರೂ, ಕ್ರಿಸ್ತನೆಂದರೂ, ಕರೀಮನೆಂದರೂ ಆತನೇ ! ದೇವರು ಪ್ರತಿಶಿಲೆಯಲ್ಲೂ, ಪ್ರತಿವಸ್ತುವಿನಲ್ಲೂ, ಪ್ರತಿರೂಪದಲ್ಲೂ ಇದ್ದಾನೆ ! ನಿನ್ನಲ್ಲೂ ಇದ್ದಾನೆ, ನನ್ನಲ್ಲೂ ಇದ್ದಾನೆ ! ಆಲಯದಲ್ಲಿ ಮಾತ್ರವೇ ? ಆತ್ಮಾರಾಮಾ ! ರಾಮನು ನಿನ್ನ ಆತ್ಮದಲ್ಲೇ ಇರುವನು! ಕಣ್ತೆರೆದು ನೋಡಿಕೋ!—ಈ ವಿಶ್ವಪ್ರಪಂಚವೆಲ್ಲವೂ ದೇವರ ಆಲಯವೇ ! ನಿನ್ನಂತಹ ಸ್ವೇಚ್ಛಾಜೀವಿಗಳಿಗೆ—ಅಮಾಯಕರಿಗೆ—ಭಕ್ತರಿಗೆ, ದೇವರು ಆ ಗುಡಿಯಲ್ಲಿಲ್ಲ. ಆ ಗುಡಿಯಲ್ಲಿರತಕ್ಕವನು ಕೃತ್ರಿಮ ಸ್ವರೂಪಿಯು !



ಪೂಜಾರಿಯ ಸೃಷ್ಟಿಕಾರಣನು! ಆ ಗುಡಿಯಲ್ಲಲ್ಲದ ಮಿಕ್ಕ ವಿಶ್ವ-ಪ್ರಪಂಚವೆಲ್ಲವೂ ತುಂಬಿದ್ದ ಆ ದೇವನಲ್ಲಿ ವಿಲೀನನಾಗು; ಧನ್ಯನಾಗುತ್ತೀಯೆ!

ಕ್ರೈಸ್ತ :— ಯಾರೋ ಹುಚ್ಚಳು!

ಆತ್ಮಾ :— ನನಗೂ ನನ್ನ ರಾಮನಿದ್ದಾನೆ!

ಪಾಲ್ವಿ :— ಎರಡೂ ಎರಡೇ! ನನಗೇತಕ್ಕೆ?

(ಹೋಗುವನು.)

ಕ್ರೈಸ್ತ :— ಇಂತಹ ಹುಚ್ಚರು ನಮ್ಮ ಮತದೊಳಗೆ ಕೆಲಸಕ್ಕೆ ಬಾರರು!

(ಹೋಗುವನು.)

ಸೀವಂ :— ತಂದೆಯೇ!

ಆತ್ಮಾ :— ತಾಯಿ! ನಾನು ಯಾರನ್ನು ಆರಾಧಿಸಲಿ?

ಸೀವಂ :— ಆ ವಿಶ್ವದೇವಾಲಯದಲ್ಲಿರುವ ದೇವನನ್ನು! ಆ ದೇವನು ವಿಗ್ರಹ ಸ್ವರೂಪನಲ್ಲ! ಆ ತಂಪಾದ ಗಾಳಿಯಲ್ಲಿ— ಆ ಸಮುದ್ರದ ಅಲೆಗಳ ನೊರೆಗಿನಲ್ಲಿ—ನಿರ್ಮಲವಾದ ನಿಶ್ಚಲ ಮನಸ್ಸುಗಳನ್ನು ಆಕರ್ಷಿಸುತ್ತಿರುವನು!........ನನ್ನ ತಂದೆಯೇ! ಆ ಹಾಳು ಗುಡಿಯ ತಂಟೆಗೆ ಹೋಗಬೇಡ!....ಅದರಲ್ಲಿ ರತಕ್ಕವರಾರು? ಅಖಿಲಾಂಡ ಕೋಟಿ ಬ್ರಹ್ಮಾಂಡನಾಯಕನನ್ನು— ನಿರಾಕಾರ-ನಿರಂಜನನನ್ನು ನಂಬಲಾರದವರು! ಪಾಪಿಗಳು! ಪ್ರಾಪಂಚಿಕ ಪಾಪಜಾಲಗಳೆಲ್ಲವನ್ನೂ ಒಂದುಗೂಡಿಸಿ ಪೂಜಾರಿಯನ್ನಾಗಿ ಮಾಡಿದ್ದಾನೆ ದೇವನು! ಆ ದೇವರಿಗೆ—ಅಲ್ಲ—ಆತನ ಪೂಜಾರಿಗೆ, ದೇವರ ಪರವಾಗಿ ಅಂಕಿತವನ್ನು ಮಾಡಿದ ದೇವದಾಸಿಯರು ಸ್ವಕೀಯರು! ಅಂಥವರಲ್ಲಿ ನಾನೊಬ್ಬ ನಿರ್ಭಾಗ್ಯಳು! ತಂದೆಯೇ, ನಾವು ಪಾಪಿಗಳು! ನಮಗೆ ನರಕವೇ ಶರಣ್ಯವು!.... ನೀನೋ ಅಪಾಮಕನು, ಪುಣ್ಯಮೂರ್ತಿಯು!....

ಆತ್ಮಾ :— ಮತ್ತೆ ನನ್ನ ದೇವನು?

ಸೀವಂ :— ವಿಶ್ವದಲ್ಲೆಲ್ಲವೂ— ಅದೋ— ಪಶ್ಚಿಮದಲ್ಲಿ— ಆ ಸಮುದ್ರವು! ಆ ಅಲೆಗಳ ಮೇಲೆ ನಾಟ್ಯವಾಡುವ ಸಕಲ ತೇಜೋಮಯ ರಾಶಿ ಭಾನುವು— ಅಸ್ತಂಗತ ಭಾನುವು, ಸಾಗರ ತರಂಗಗಳನ್ನು ಎಷ್ಟು ಎತ್ತಾಗಿ ಆಕರ್ಷಿಸುತ್ತಿರುವನು! ನಿನ್ನ ಮನವನ್ನು ಸಹ ಆಕರ್ಷಿಸಬಲ್ಲನು....ಅದೋ! ಸಂಧ್ಯಾರಾಗದಿಂದ ದಿಗಂತಮಣಿಯಂತೆ ಪ್ರಕಾಶಿಸುತ್ತಿರುವನು— ನಿನ್ನ ಪ್ರತ್ಯಕ್ಷ ದೈವವು ಆ ಅರುಣಕಿರಣನು! ಹೋಗು— ಹೋಗು— ಆ ನಿರ್ಮಲ ಪ್ರದೇಶದಲ್ಲಿ— ಆ ನಿರ್ಮಲವಾಯುವಿನಲ್ಲಿ ಆ ಸಚ್ಚಿದಾನಂದನಲ್ಲಿ ಲೀನನಾಗು! ತಂದೇ, ಆ ದೇವನನ್ನು ಆರಾಧಿಸು! ನಿನ್ನ ಆತ್ಮದಲ್ಲಿರುವ ರಾಮನನ್ನು ನೋಡಪ್ಪಾ! ಆ ದೇವನ ಆಲಯವನ್ನು ಬಿಡಬೇಡ!

ಆತ್ಮಾ :— ಆ!— ನಿಜವಾಗಿಯೂ— ನನ್ನ ದೇವನೇ ಏನು?— ಆತನೇ? ಆತನೇನು— ನನ್ನ ದೇವನು? (ಓಡುತ್ತ) ಹೇ ದೇವನೇ—ಎಷ್ಟು ದಿನಗಳಿಗೆ ನಿನ್ನನ್ನು ಕಂಡೆನು?— ಎಷ್ಟು ನಿರ್ಮಲವಾಗಿ— ಎಷ್ಟು ದೂರದಲ್ಲಿರುವೆಯಲ್ಲ!— ಆ ದೊಡ್ಡ ಅಲೆಯು ನಿನ್ನಲ್ಲಿಂದ ನನ್ನಲ್ಲಿಗೆ ಬರುತ್ತಿದೆ. ಅದರ ಮೇಲೆ ನಿಂತು ನಿನ್ನಲ್ಲಿಗೆ ಬರಬಲ್ಲೆನು! ನಿನ್ನ ಸನ್ನಿಧಿಗೇ ಬರುವೆನು! ನಿನ್ನಲ್ಲಿ ಲೀನನಾಗುವೆನು! ಇದೋ— ಬರುತ್ತಿರುವೆನು— ಪಾಪಿಯು— ರಕ್ಷಿಸು— ದೇವಾ!

(ಓಡಿ ಹೋಗುವನು.)

ಸೀವಂ :— ಅಯ್ಯೋ! ಅಯ್ಯೋ!—ದೇವರಲ್ಲಿ ಲೀನನಾಗಿ ಹೋದನು...........ಗುಡಿಯಲ್ಲಿ ತಾಸು ಬಾರಿಸುತ್ತದೆ; ಆರಾಧನೆ ನಡೆಯುವುದು!....ದೇವರೆಲ್ಲಿ?

(ಹೋಗುವಳು.)

ಪುಣೆಯ ಪ್ರದರ್ಶನದಲ್ಲಿ ಒಂದನೆಯ ತರಗತಿಯ ಬಂಗಾರದ ಪದಕವು ದೊರೆತಿದೆ!

ದ್ರಾಕ್ಷಾರ್ಕಮಧು

MANE

ಬೆಲೆ :— ೧ ಬಾ॥ ೧-೪-೦, ೩ ಬಾ॥ ೩-೪-೦, ೧೨ ಬಾ॥ ೧೨-೦-೦.

ಹೊರತು ೧ ಬಾ॥ ಕಮಿಶನ್. ಪೋಸ್ಟ್ ವೆಚ್ಚ ಬೇರೆ.

ಮ್ಯಾನೇಜರ್, ದ್ರಾಕ್ಷಾರ್ಕಮಧು ಆಫೀಸ್, ನಿಪ್ಪಾಣಿ (ಜಿ. ಬೆಳಗಾಂವಿ)

ಎಷ್ಟೋ ತಪಗಳ ತಪಶ್ಚರ್ಯೆಯಿಂದ ಪ್ರಸಿದ್ಧಿ ಹೊಂದಿದ ಮತ್ತು ಎಲ್ಲರಿಗೂ ಪ್ರಿಯವಾದ, ಅತ್ಯಂತ ಗುಣಕಾರಿ

ಟಾನಿಕ್!

"ವಿದ್ವಾನ"ರ ಬುದ್ಧಿ-ಭಾವನೆ

(ಪೂರ್ವಪಕ್ಷದವರ ಪ್ರತ್ಯುತ್ತರ)

ಶ್ರೀ. ಗೌರೀಶ ಕಾಯ್ಕಿಣಿ, ಗೋಕರ್ಣ

★

ವಿದ್ವಾನರು ಮಾಡಿದ ವಿವೇಚನೆಯಲ್ಲಿ ಒಳಿತಾದ ಭಾಗಗಳೂ ಇವೆ; ಹೊಸತಾದ ಭಾಗಗಳೂ ಇವೆ. ಆದರೆ ಒಳಿತಾದ ಭಾಗಗಳಲ್ಲಿ ಹೊಸತೇನೂ ಇಲ್ಲ, ಹೊಸತಾದ ಭಾಗದಲ್ಲಿ ಹುರುಳೇನೂ ಇಲ್ಲ!

'ಜಯಂತಿ'ಯ ಜೂನ್ ತಿಂಗಳ ಸಂಚಿಕೆಯಲ್ಲಿ ಶ್ರೀ. ರಾ. ಭ. ಹಾಸಣಗಿ 'ವಿದ್ವಾನ್' ಎಂಬವರು, ಬುದ್ಧಿ-ಭಾವನೆಗಳ ಪೂರ್ವಚರ್ಚಿತ ವಿಷಯವನ್ನು ಕುರಿತು ಒಂದು ಸುದೀರ್ಘವಾದ ಲೇಖನವನ್ನು ಬರೆದಿರುವರಷ್ಟೇ! ನಿಜವಾಗಿಯೂ ಅತ್ಯಂತ ಚಿತ್ತವೇಧಕವಾದ ಈ ಮನೋವೈಜ್ಞಾನಿಕ ಸಮಸ್ಯೆಯ ಕುರಿತು 'ಮತ್ತೊಂದು ಬದಿ'ಯಿಂದ ಬೆಳಕು ಬೀರುವುದಕ್ಕೇ ವಿದ್ವಾನರು ಬದ್ಧಕಂಕಣರಾಗಿರಬಹುದೆಂಬ ಸಾದರ ಕುತೂಹಲದಿಂದ ಲೇಖನವನ್ನು ಓದಲಾರಂಭಿಸಿದೆನು. ಆದರೆ ಓದುತ್ತ ಮುಂದುವರಿದಂತೆ, ಆದರವು ಎಷ್ಟು ಹೆಚ್ಚಾಯಿತೋ ಕುತೂಹಲವು ಅಷ್ಟೇ ಕಡಿಮೆಯಾಯಿತು. ಆದರವು ಹೆಚ್ಚಾಗಲು ಕಾರಣವು ವಿದ್ವಾನರ ದುರ್ಧರ್ಷವಾದ ಧೈರ್ಯದ ಬಗ್ಗೆ. ವಿದ್ವಜ್ಜನ ಪರಿಶ್ರಮವು ವಿದ್ವಾನರಿಗೇ ಗೊತ್ತಾಗುವುದೆಂಬುದೊಂದು ನಿಯಮವಾದರೂ, ಪ್ರತಿಯೊಂದು ನಿಯಮಕ್ಕಿರುವಂತೆ ಅದಕ್ಕೂ ಒಂದು ಅಪವಾದವಿರುವುದೆಂಬುದು ತಮ್ಮ ತೀರ ಮೌಲಿಕವಾದ ವಿಚಾರಸರಣಿ ಮತ್ತು ವಿವಾದಧೋರಣೆಗಳಿಂದ ಲೇಖಕ 'ವಿದ್ವಾನರು' ಕಾಣಿಸಿಕೊಟ್ಟುದಕ್ಕಾಗಿ, ಅವರ ಅದ್ವಿತೀಯ ಪ್ರತಿಭೆಯ ಬಗೆಗೂ ಆದರವು ಹೆಚ್ಚಿತು. ಆದರೆ ಕುತೂಹಲವು ಕಡಿಮೆಯಾಗುತ್ತ ಹೋದದ್ದೂ ಇದೇ ಕಾರಣಕ್ಕಾಗಿ. ಏಕೆಂದರೆ ದಿನದಿನಕ್ಕೂ ಜ್ಞಾನದ ಪ್ರಗತಿಯು ವಿಮಾನಯೋಗದಿಂದ ಆಗುತ್ತಿರುವ ಇಂದಿನ ಸಂಶೋಧನಯುಗದಲ್ಲಿ ಯಾವುದೇ ವಿಚಾರವಾಗಲಿ, ವಿಧಾನವಾಗಲಿ, ಮೌಲಿಕವೆಂಬ ಮಾತ್ರಕ್ಕೆ ಅಧಿಕೃತವಾಗುವುದಿಲ್ಲ, ಪ್ರಮಾಣವೆನಿಸುವುದಿಲ್ಲ. ಆದರೆ ತಮ್ಮ ವಾದದ ಆವೇಶ-ಅಭಿನಿವೇಶಗಳಲ್ಲಿ ಈ ಚಿಕ್ಕಮಾತನ್ನು ವಿದ್ವಾನರು ಮರೆತಿದ್ದರಿಂದ, ಅವರ ಬರೆಹದಲ್ಲಿ ಶ್ರೀ. ಕಾಯ್ಕಿಣಿಯವರ ನಿರುಪದ್ರವಿ ತಲೆಯ ಮೇಲೆ ಸಂಸ್ಕೃತ ಪ್ರಚುರವಾದ ಬಿರುನುಡಿಗಳ ಕಿಟಿಮಳೆಯನ್ನು ಕರೆಯುವ ಅಂಶಗಳನ್ನು ಬಿಟ್ಟರೆ ಮತ್ತಾವ ಶ್ರೇಯಸ್ಕರ ತತ್ತ್ವವಿವೇಚನೆಯೂ ನಿಷ್ಪನ್ನವಾಗಿಲ್ಲ. ಶ್ರೀ. ಕಾಯ್ಕಿಣಿಯವರು, ಇವರು ಅಟ್ಟಹಾಸದಿಂದ ಸಾಧಿಸಲು ಹೆಣಗಿದಷ್ಟು ತರ್ಕಶೂನ್ಯರೂ ವಿಫಲರೂ ದಿಙ್ಮೂಢರೂ ಇರಲಿ ಇಲ್ಲದಿರಲಿ; ವಿದ್ವಾನರು ಒಂದು ಸಂಗತಿಯನ್ನು ನೆನಪಿಡುವುದು ಹಿತಾವಹವಾಗಿತ್ತು. ಅದೇನೆಂದರೆ, ಒಬ್ಬರನ್ನು ಮೂರ್ಖರೆಂದು ಸಿದ್ಧಮಾಡಿದ ಮಾತ್ರಕ್ಕೆ, ಹಾಗೆ ಸಿದ್ಧಮಾಡುವವನು ಸ್ವತಃ ಸಮ್ಯಗ್‌ಜ್ಞಾನಿಯೆಂದು ಸಾರಿದಂತೆ ಆಗುವುದಿಲ್ಲ. ಅದಕ್ಕಾಗಿ ಸ್ವತಂತ್ರವಾದ ಪ್ರಮಾಣ ಪ್ರತಿಪಾದನೆಗಳನ್ನು ಮಾಡುವುದು ಅಗತ್ಯವಿರುತ್ತದೆ.

ಈ ದೃಷ್ಟಿಯಿಂದ ನೋಡಿದರೆ, ವಿದ್ವಾನರ ಪ್ರತಿಭೆಯ ಪಾಲಿಗೆ ಕೇವಲ ಪ್ರಸವವೇದನೆಯೇ ಬಂದಂತಿದೆ. ಅವರು ಮಾಡಿದ ವಿವೇಚನೆಯಲ್ಲಿ ಒಳಿತಾದ ಭಾಗಗಳೂ ಇವೆ, ಹೊಸತಾದ ಭಾಗಗಳೂ ಇವೆ. ಆದರೆ ದುರ್ದೈವವೇನೆಂದರೆ, ಒಳಿತಾದ ಭಾಗಗಳಲ್ಲಿ ಹೊಸತೇನೂ ಇಲ್ಲ; ಹೊಸತಾದ ಅಂಶಗಳಲ್ಲಿ ಒಳಿತೇನೂ ಇಲ್ಲ. ಆದರೂ ಇಷ್ಟೊಂದು ಮಾತಿಗಾಗಿ ಅವರಿಗೆ ವಾಚಕರ ನತಿಯಿಂದ ಧನ್ಯವಾದಗಳನ್ನು ಅರ್ಪಿಸಲೇಬೇಕು—ಅದೇನೆಂದರೆ: ಒಂದು ಗಂಭೀರವಾದ ವಿಷಯದ ವಿವೇಚನೆಯ ರಭಸದಲ್ಲಿ ಕೂಡ ಅವರು ಅಭಾವಿತವಾಗಿ ವಿನೋದವನ್ನುಂಟುಮಾಡುವುದರಲ್ಲಿ ಯಶಸ್ವಿಯಾಗಿದ್ದಾರೆ. ಆದರೂ ಈ ಯಶವೂ ಅಷ್ಟೊಂದು ಶ್ಲಾಘ್ಯವಾದದ್ದಲ್ಲ. ಏಕೆಂದರೆ, ಹಾಸ್ಯರಸವನ್ನು ನಿರ್ಮಿಸುವುದಕ್ಕೆ ಸ್ವತಃ ಹಾಸ್ಯಾಸ್ಪದವಾಗುವುದು ತೀರ ಸುಲಭವಾದ ತಂತ್ರವಾದರೂ, ಅದು ಅಷ್ಟೊಂದು ಪ್ರಶಸ್ತ ಉಪಾಯವಲ್ಲ. ಇರಲಿ, ವಿದ್ವಾನರು ಹೀಗೆ ಎಲ್ಲಿ ಹಾಸ್ಯಾಸ್ಪದ ವಿಧಾನಗಳನ್ನು ಮಾಡಿಲ್ಲವೋ ಅಲ್ಲಿ, ಕೇವಲ ಪ್ರಾಥಮಿಕ ಅವಸ್ಥೆಯ ಜ್ಞಾನವನ್ನು ತಮ್ಮ ವಿಶೇಷಜ್ಞತೆಯ ಅಭಿಪ್ರಾಯವೆಂದು ತುರುಕಿದ್ದಾರೆ. ಇದೂ ಸಾಧಿಸದಿದ್ದಲ್ಲಿ, ಶ್ರೀ. ಕಾಯ್ಕಿಣಿಯವರ ಲೇಖಾಂಶಗಳ ಕುರಿತು ತಪ್ಪುತಿಳಿವಳಿಕೆಗಳನ್ನೂ ತಿಳಿಗೇಡಿ ತಪ್ಪು ವಿಧಾನಗಳನ್ನೂ ಹೂಡುತ್ತ, ಅವರು ಬರೆದ ಮಾತುಗಳಿಗಾಗಿ ದೂಷಣೆಯನ್ನೂ ಬರೆಯದ ಮಾತುಗಳಲ್ಲಿ ದೋಷಾರೋಪಣೆಯನ್ನೂ, ಹೇರುತ್ತ, ತಮ್ಮ ಉದ್ದ ಲೇಖನವನ್ನು ಮತ್ತಿಷ್ಟು ಉದ್ದಮಾಡಿದ್ದಾರೆ!

ನಿಜವಾಗಿಯೂ, **ಬುದ್ಧಿ, ಭಾವನೆ, ಪ್ರವೃತ್ತಿ ಮುಂತಾದ ಮೂಲಭೂತ ಸಂಗತಿಗಳ ಕುರಿತು ವಿದ್ವಾನರು ಕೊಟ್ಟ** ವ್ಯಾಖ್ಯೆ-ವಿವರಗಳು ಎಷ್ಟು **ಅವೈಜ್ಞಾನಿಕವಾಗಿವೆಯೋ ಅಷ್ಟೇ ಅವೈಥವಾಗಿವೆ.** ಬುದ್ಧಿ-ಭಾವನೆಗಳಲ್ಲಿ ಅವರು ಕಲ್ಪಿಸಿದ ಕೇವಲ ಸಮಾಸ ಮುಂತಾದ ಭೇದಗಳು, ಮನೋವಿಜ್ಞಾನದ ದೃಷ್ಟಿಯಿಂದ ತೀರ ಅನಧಿಕೃತವಾದುವೂ ಅಶಾಸ್ತ್ರೀಯವಾದುವೂ ಇರುತ್ತವೆ. ಪ್ರತ್ಯಕ್ಷ, ಅನುಮಿತಿ, ಉಪಮಿತಿ ಮುಂತಾದ ತೀರ ಪ್ರಾಥಮಿಕ ತರಗತಿಯ ಜ್ಞಾನವಿಭಾಗದಲ್ಲಿಯ ತನ್ನ ವ್ಯಾಸಂಗವನ್ನೂ, ಸಾಂಖ್ಯ ದೃಷ್ಟಾಂತವನ್ನೇ ಆಧಾರವಾಗಿಟ್ಟು-ಕೊಂಡ ತನ್ನ ಭಾವನಾ-ಮೀಮಾಂಸೆಯ ವೈಚಿತ್ರ್ಯವನ್ನೂ, "ಸ್ಥಾ" ಧಾತುವಿಗೆ ಅಧಿ-ಪ್ರತಿಗಳನ್ನು ಹಚ್ಚಿ ಮಾಡುವ ಅರ್ಥ-ಭೇದದ ವ್ಯಾಕರಣಜ್ಞಾನವನ್ನೂ ಅವರು ಧಾರಾಳವಾಗಿ ವಾಚಕರ ಬಗ್ಗೆ ದಯಪಾಲಿಸಿದ್ದು ಯೋಗ್ಯವೇ ಸರಿ. ಆದರೆ ಇವೆಲ್ಲದರ ಉಪಯೋಗವೇನು? ಬುದ್ಧಿ-ಭಾವನೆಗಳಲ್ಲಿಯ ನಿಯತಕಾರ್ಯದ ದೃಷ್ಟಿಯಿಂದ ಇರುವ ಮುಖ್ಯಭೇದ, ಅವುಗಳ ತಾರತಮ್ಯ ಮುಂತಾದುವುಗಳನ್ನು ಒಳಪಟ್ಟ—ಕೇವಲ ಯುಕ್ತಿವಾದಗಳಿಂದ ತುಂಬಿರಬೇಕಾದ—ಮನೋವೈಜ್ಞಾನಿಕ **ವಿವೇಚನೆಯನ್ನು** ಅಪೇಕ್ಷಿಸುವ ಜಿಜ್ಞಾಸುಗಳು ಮಾತ್ರ ವಿದ್ವಾ-ನರ ವಾಗ್ವೈಖರಿಯಿಂದ ನಿರಾಶರೇ ಆಗುತ್ತಾರೆ. ಆದರೆ ಇದರಲ್ಲಿ ವಿದ್ವಾನರ ತಪ್ಪಿಲ್ಲ; ಅವರಿಂದ ಅಶಕ್ಯವನ್ನು ಅಪೇಕ್ಷಿಸುವ ಜಿಜ್ಞಾಸುಗಳದೇ ತಪ್ಪಿದೆ.

ವಿದ್ವಾನರು ನಿರ್ವಚನ ಮಾಡಿದ ವ್ಯಾಖ್ಯೆ-ವಿವರಣೆಗಳನ್ನು ಮೇಲೆ ಒಂದೆ ಮಾತಿನಿಂದ ಅಲ್ಲಗಳೆಯಲಾಗಿದೆ. ಏಕೆಂದರೆ **ಇಂತಹ ವಿಷಯವಿವೇಚನೆಗೆ ಅವಶ್ಯವಾಗಿ ಬೇಕಾಗುವ ವೈಜ್ಞಾನಿಕ ಪರಿಭಾಷೆಯ ಪ್ರಭುತ್ವವು ಕೂಡ ಅವರಲ್ಲಿ ಇಲ್ಲ**ವೆಂಬುದು ಅವರ ಸುದೀರ್ಘ ಲೇಖನವು ಸಾರುತ್ತದೆ. "ಕೆಲಸ ವೆಂಬುದು ಕ್ರಿಯೆ (!), ಅದು ಆತ್ಮನಲ್ಲಿರುತ್ತದೆಯೇ ಹೊರತು ಬೇರೆ ವಸ್ತುಗಳಲ್ಲಿರುವದಿಲ್ಲ (!)", "ಬುದ್ಧಿಯು ಆತ್ಮನಲ್ಲಿರುವ ಪದಾರ್ಥ, ಶಕ್ತಿ, ಹಾಗೆಯೇ ಕ್ರಿಯೆಯೂ ಆಗಿದೆ!" "ಬುದ್ಧಿ ಜ್ಞಾನ ಇವೆರಡೂ ಪರ್ಯಾಯವಾಚಕ" "ಭಾವಾವೇಶಕ್ಕೆ ಭಾವನೆಯೆಂದು ಹೆಸರು" "ಮೂರ್ಛೆ ಉನ್ಮಾದ....ಭಾವನೆಯ ರೂಪಾಂತರಗಳು!" "ಭಾವನೆಯು ಅನಾದ್ಯನಂತವಾಗಿ ಒಂದೇಸವನೆ ಹರಿಯುತ್ತಿರುವ ವಸ್ತು (!!)" ಇವೇ ಮುಂತಾದ ಹೇರಳವಾದ ವಿಚಾರದ ಬಿಡಿ ಮುತ್ತುಗಳನ್ನು ಒಡೆದುನೋಡಿದರೆ, ಅವುಗಳಲ್ಲಿ ತಥ್ಯದ ರಾಮನಿಲ್ಲೆಂಬುದು, ಹನುಮಂತನಿಗಲ್ಲ—ಯಾವನೇ ಮಂಗಬುದ್ಧಿಯವನಿಗೂ ಎನಿಸದಿರಲಾರದು. ಇಂತಹ ಮಾತುಗಳನ್ನೇ ತಮ್ಮ ಶಾಸ್ತ್ರೀಯ ಮತಗಳೆಂದು ಪ್ರತಿವಾದದಲ್ಲಿ ಸಾರುವ ಮಹಾನುಭಾವರ ವಿಚಾರಗಳನ್ನು ವಿಮರ್ಶಿಸಿ, ವಾಚಕರ ಬುದ್ಧಿಯ ಅಪಮಾನ ಮಾಡುವುದು ಯುಕ್ತವಲ್ಲ. ಅವರು ಹೇಳಿದ ಒಂದು ಮಾತು ಕೇವಲ ಸತ್ಯವಿದೆ. ನಿಜವಾಗಿಯೂ ಶ್ರೀ. ಕಾಯಕಿಣಿಯವರು ಮಾಡಿದ ವಿಧಾನಗಳ ಇತ್ಯರ್ಥ ಅವರಿಗೆ ಆಗಿಲ್ಲ—ಶಬ್ದಗಳ ಅರ್ಥ ಸಹ ಮನದಟ್ಟಾಗಿಲ್ಲ. **"ಪ್ರತಿಕ್ರಿಯೆ" ಎಂಬ ಶಬ್ದಕ್ಕೆ ನಮ್ಮ ವಿದ್ವಾನರ ಕೋಶ-ದಲ್ಲಿ "ಮುಯ್ಯ" ಎಂಬ ಅರ್ಥವ ಹೊರತು ಬೇರೆ ಅರ್ಥವೇ ಇಲ್ಲ.** ಇಷ್ಟೊಂದು ಪಾರಿಭಾಷಿಕ ಪಾಥೇಯ-ದೊಂದಿಗೆ ಅವರು ವೈಜ್ಞಾನಿಕ ವಿಚಾರಮಾರ್ಗದಲ್ಲಿ ನುಗ್ಗಲು ದುಡುಕಿದ್ದಾರೆ! ಹಲವರು ಹೆಜ್ಜೆಯಿಡಲು ಅಂಜುವಲ್ಲಿಯೂ ದುಡುಕುವ ಕೆಲವರು ಇದ್ದೇ ಇರುತ್ತಾರೆ! ಇರಲಿ! ಹಾಗೆಯೇ ಕಾಯಕಿಣಿಯವರು ತರ್ಕವೆಂದರೆ 'ವಿಚಾರ ನಿಯಾಮಕ ಶಾಸ್ತ್ರ (logic)' ಎಂದಿಟ್ಟುಕೊಂಡಿರುವರು. ಆದರೆ ವಿದ್ವಾನರು ತರ್ಕವೆಂದರೆ ಅನುಮಾನದ ಪರ್ಯಾಯವಾಗಿ ಗ್ರಹೀತವಿಟ್ಟು ಟೀಕಿಸತೊಡಗಿದ್ದಾರೆ. ವಾದದಲ್ಲಿ ಬರುವ ಪರಿಭಾಷೆ, ಪದಪ್ರಯೋಗಗಳ ವ್ಯಾಖ್ಯೆ ವ್ಯಾಪ್ತಿಗಳನ್ನು ಉಭಯ ಸಮ್ಮತವಾಗಿ ಇಟ್ಟುಕೊಂಡು ಮುಂದರಿವುದು ಒಂದು ಸಾಮಾನ್ಯ ನಿಯಮ. ಅದನ್ನು ವಿದ್ವಾನರು ತಮ್ಮ ಅನುಕೂಲತೆಗಾಗಿ ಗಮನಿಸಿಲ್ಲ. ಅದೇ ಮಾತು "ಶಕ್ತಿಕೇಂದ್ರ"ದ್ದು. "ಬಲಿಕೊಡುವದೆಂದ-ರೇನು?" ಎಂದ ಕೇಳಿ ವಿದ್ವಾನರು ಉತ್ತರಕ್ಕಾಗಿ ತಡೆಯದೆ ನಡೆದಿದ್ದಾರೆ. ಈ ಪ್ರಶ್ನೆಯನ್ನು ಮುದ್ರಾರಾಕ್ಷಸನಿಗೆ ಕೇಳಬೇಕಾ ಗಿತ್ತು. ಮೂಲವು 'ಬಲ ಕೊಡುವುದು' ಎಂದಿದೆ. ಇರಲಿ. ಮೂಲ-ಪ್ರವೃತ್ತಿಗಳೆಂದರೇನೆಂಬುದರ ತಿಳಿವಳಿಕೆ ವಿದ್ವಾನರಿಗೆ ಕೊನೆಯ-ವರೆಗೂ ಆಗಿಲ್ಲ. ಅವರು ಕೊಟ್ಟ ಪ್ರವೃತ್ತಿಯ ವ್ಯಾಖ್ಯೆಯು ಆತ್ಮ-ವಸ್ತುವಿನಷ್ಟೇ ಅಗಮ್ಯವಾಗಿದೆ; ಆದರೆ ಇದರಲ್ಲಿ ಆಶ್ಚರ್ಯವೇನೂ ಇಲ್ಲ. ಶ್ರೀ. ಕಾಯಕಿಣಿಯವರು ಉಪಯೋಗಿಸಿದ ಕೆಲವೊಂದು ಶಬ್ದಪ್ರಯೋಗಗಳನ್ನೇ ನಮ್ಮ ವಿದ್ವಾನರು ಬಳಸಿದ್ದರೂ **ಅವರಿರ್ವರ ವಿಚಾರ ಪ್ರಪಂಚಗಳು ಪರಸ್ಪರ ತೀರ ಭಿನ್ನ ವಿರುತ್ತವೆ** ಆದರೆ ಇದು ವಿದ್ವಾನರ ದೃಷ್ಟಿಗೆ ಹೊಳೆದಿಲ್ಲ. ಅವರು ತಮ್ಮ ತಿಳಿವಳಿಕೆಯನ್ನೇ ಜ್ಞಾನದ ಮಾನದಂಡ-ವೆಂದಿಟ್ಟುಕೊಂಡಂತಿದೆ; ತಮಗೆ ಬಗೆಹರಿಯದ ಮನವರಿಕೆ-ಯಾಗದ ವಿಚಾರವಿಧಾನಗಳೆಲ್ಲ ತಿಳಿವಳಿಕೆಗೆ ತಕ್ಕುವೇ ಅಲ್ಲವೆಂಬ ಭೂಮಿಕೆಯಿಂದ ಪಕ್ಷ ಪ್ರತಿಪಕ್ಷಗಳಲ್ಲಿ ನ್ಯಾಯ ಮಾಡಲು ಹೊರಟಿರುವರು. ಕಾಯಕಿಣಿಯವರ ಲೇಖನದಲ್ಲಿಯ ಪರಿಭಾಷೆಗಳ ಅರ್ಥಗಳು ವೈಯಕ್ತಿಕ ಸಂಕೇತಾರ್ಥಗಳಲ್ಲ; ಅವು ವಿಜ್ಞಾನಸಮ್ಮತವಾದ ಪದಪ್ರಯೋಗಗಳು! ಅವು ಕೇವಲ ಹಾಸಣಗಿಯ ವಿದ್ವಾನರ ಪರಿಮಿತ ಪ್ರಜ್ಞಾಪ್ರಪಂಚಕ್ಕಷ್ಟೇ ಅಗಮ್ಯವಿರುವುದು ಸಹಜ. ಆದರೆ ಅದಕ್ಕಾಗಿಯೇ ಇಷ್ಟೊಂದು ದೀರ್ಘವಾದ ಲೇಖನವನ್ನು ಅಚ್ಚು ಹಾಕಿಸಿ, ಜಯಂತಿಯ ಸಂಪಾದಕರ ಸೌಜನ್ಯವನ್ನೂ ವಾಚಕರ ಸಹನಶೀಲತೆಯನ್ನೂ ಪರೀಕ್ಷಿಸಿ, ಮೇಲ ಮತ್ತೆ "ಸಾರ್ವಜನಿಕ ಹಿತದೃಷ್ಟಿ"ಯ ಮ್ಯುನಿಸಿಪಲ್ ದೀಪಸ್ತಂಭದ ಲೋಕೋಪಕಾರಿ ವೃತ್ತಿಯನ್ನು ತೋರಿಸುವ ಶ್ರಮ ವೇಕೆ ಬೇಕಿತ್ತು? ಆದರೆ ಇವೆಲ್ಲ ಅಡ್ಡಾತಿಡ್ಡಾ ವಿಚಾರಗಳು "ವಿದ್ವಾನ"ರಿಗೆ ಹೇಗೆ ತೋಚಬೇಕು?

ರಾಮುವಿನ ರಹಸ್ಯ

(ಒಂದು ಸಣ್ಣ ಕತೆ)

★

ಶ್ರೀ. ಶ್ರೀವಾನ್ ಕೆ. ವಿ. ಜಗನ್ನಾಥನ್*

★

" ಆದರೂ ಇಷ್ಟೊಂದು ಮಂದಬುದ್ಧಿಯುಂಟಾಗುವು-ದೆಂದು ಭಾವಿಸಿಯೇ ಇರಲಿಲ್ಲ. ಮನುಷ್ಯನಿಗೊಂದು ಅಂತಸ್ತಿದೆಯೆಂಬುದನ್ನು ಸ್ವಲ್ಪವಾದರೂ ಪರಿಗಣಿಸಬೇಡವೇ! ವಕೀಲರ ಅಂತಸ್ತೆಂದರೇನು, ಅಡಿಗೆಯವನ ಅಂತಸ್ತೆಂದರೇನು? ಇಬ್ಬರೂ ಕೂಡಿಕೂಡಿ ಹೀಗೆ ಮಾತನಾಡಿದರೆ ಅವನು ಹೇಗೆ ದಾರಿಗೆ ಬರುವನು! ಸಾರಿಗೆ ಉಪ್ಪು ಹಾಕಿದರೆ ಹುಳಿ ಇರುವುದಿಲ್ಲ; ಹುಳಿ ಇದ್ದರೆ ಉಪ್ಪಿರುವುದಿಲ್ಲ. ಈ ಲಕ್ಷಣಕ್ಕೆ ಸಂಬಳ ಮಾತ್ರ ತಿಂಗಳ ಮೊದಲನೆಯ ತಾರೀಖಿನ ದಿನವೇ ಇಪ್ಪತ್ತೈದು ರೂಪಾಯಿ-ಗಳನ್ನು ಎಣಿಸಿಡಬೇಕು!" ಎಂದು ಅಲಮೇಲಮ್ಮ ನಡು-ಮನೆಯಲ್ಲಿ ಉಪನ್ಯಾಸಮಾಡುತ್ತಲಿದ್ದಳು. ಅದನ್ನು ಕೇಳು-ವವರೆಂದರೆ ಅವಳ ಪುತ್ರಿಯಾದ ಸುಶೀಲೆ, ನಾಲ್ಕುವರ್ಷದ ಬಾಲಕನಾದ ಶಂಕರ, ಪಕ್ಕದ ಮನೆಯ ಅಜ್ಜಿ, ನಾಲ್ಕೈದು ಕಂಬಗಳು—ಇವಿಷ್ಟೆ!

" ನಾಲ್ಕು ಜನರು ಊರಿಂದ ಬಂದಿಳಿದಲ್ಲಿ, ಸರಸರನೆ ಅಡಿಗೆ-ಮಾಡಿ, ರುಚಿರುಚಿಯಾಗಿಷ್ಟು ಪಾಯಸವೋ ಭಕ್ಷ್ಯವೋ ತಯಾರಿಸಿ, ಹೊತ್ತಿಗೆ ಸರಿಯಾಗಿ ಬಡಿಸಿ ಒಳ್ಳೆಯ ಹೆಸರನ್ನು ಗಳಿಸಬೇಡವೇ? ಯಾರಾದರೂ ಹಾಗೆ ಬಂದುಬಿಟ್ಟಲ್ಲಿ ನನ್ನ ತಲೆಗೆ ಹಿಡಿಯಿತು ಶನಿ! ಇವರಂತೂ ನನ್ನ ಮೇಲೆ ರೇಗಾಡಲು ಹೊರಟು ಬಿಡುತ್ತಾರೆ. ನಾನೂ ಅಡಿಗೆಯವನಿಗೆ ಸಹಾಯ ಮಾಡಬೇಕಂತೆ! ಹ್ಯಾಗಿದೆ? ಈ ನಾಚಿಕೆಗೇಡನ್ನು ಯಾರಹತ್ತಿರ ಹೋಗಿ ಹೇಳಿಕೊಳ್ಳಲಿ? ಈ ಮನೆಯ ಕಟ್ಟು ನಿಟ್ಟುಗಳೇ ಒಂದು ರೀತಿ!"

" ಯಾಕಮ್ಮಾ ಹೀಗೆ ಸುಳ್ಳೂ ಪಳ್ಳೂ ಆಡುತ್ತೀಯೆ? ಅವರು ಎಷ್ಟು ಒಳ್ಳೆಯವರಾಗಿದ್ದಾರೆ! ನೀನು ಎಷ್ಟು ಬೈದರೂ ಕೂಡ ನಗುನಗುತ್ತಾ ಇರುತ್ತಾರಲ್ಲಾ!" ಎಂದು ಮಧ್ಯದಲ್ಲಿ ಅಮ್ಮ-ನನ್ನು ತಡೆದು ಕೇಳಿದಳು ಸುಶೀಲೆ.

" ಛೀ, ತಲೆಹರಟೆಯ ಹುಡುಗಿ! ಅವರಂತೆ, ಅವರು! ಏನು ಬೇಕಾಗಿದೆ, ಅವರು! ಅಡಿಗೆಯವನಿಗೆಷ್ಟೊಂದು ಮರ್ಯಾದೆ! ಎಷ್ಟು ಕೂಡ ಹೊಡೆದರೆ ರೋಷವಿಲ್ಲದೆ ನಿಂತಲ್ಲಿಯೇ ನಿಂತಿರುತ್ತದೆ; ಅದು ಬಹಳ ಒಳ್ಳೆಯದೇನು?" ಎಂದು ರೇಗಿ ಬಿದ್ದಳು ಅಲಮೇಲಮ್ಮ.

" ಎಲ್ಲರ ಹತ್ತಿರಲೂ ಮರ್ಯಾದೆಯಾಗಿ ನಡೆದುಕೊಳ್ಳ-ಬೇಕೆಂದು ನಮ್ಮ ಉಪಾಧ್ಯಾಯಿನಿ ಹೇಳಿರುವರು. ನಮ್ಮ ಹಿಂದಿನ ಪ್ರಧಾನ ಮಂತ್ರಿಗಳು ಕೂಡ, ತಮ್ಮ ಕೆಳಗಿರುವ ಉದ್ಯೋಗಸ್ಥರು ಸೇವಕನನ್ನು 'ಪ್ಯೂನ್ (Peon)' ಎಂದು ಕರೆದಾಗ, ಹೆಸರಿಟ್ಟು ಕರೆಯ ಹೇಳಿದರಂತೆ!"

" ಸಾಕೇ, ಬಾಯಿ ಮುಚ್ಚು! ನಿಮ್ಮ ಮಂತ್ರಿಯೂ ಆಯಿತು, ಮಹಾರಾಜನೂ ಆಯಿತು! ಮೇಲು ಕೀಳು ಎಂಬುದು ಗೊತ್ತಾಗಲಿಲ್ಲ; ಎಡಗೈ ಬಲಗೈ ಎಂಬುದು ಗೊತ್ತಾಗಲಿಲ್ಲ! ಕಾಲ ಕೆಟ್ಟುಹೋಯಿತು!"

★

ನಾರಾಯಣರಾಯರಂತಹ ದೊಡ್ಡಮನೆತನದ ಜನ ರಾಮುವಿನಂತಹ ಅಡಿಗೆಯವನನ್ನು ಅಳಿಯನನ್ನಾಗಿ ಆರಿಸಬೇಕಾದರೆ, ಆತನ ಚಾರಿತ್ರ್ಯರಹಸ್ಯ ಏನಿರಬಹುದು?

★

ಅಲಮೇಲಮ್ಮನ ಮಾತು ವೈದಿಕ ಸಂಪ್ರದಾಯವನ್ನು ಇಣಿಕಿ ನೋಡಿತು. ಅಡಿಗೆಯವನ ಮೇಲೆ ಹೂಡಿದ ಕೋಪವು ಮಂತ್ರಿಯ ಹತ್ತಿರದಲ್ಲಿ ಬಂದು ನಿಂತಿತು. ಅವಳಿಗೇಕೆ ಇಷ್ಟೊಂದು ಕೋಪ? ನ್ಯಾಯವಿಲ್ಲದೆಯೆ ಕೋಪಿಸಿಕೊಂಡಿ-ರುವಳೇನು?

* * *

ನಾರಾಯಣರಾಯರು ಒಂದು ಗೌರವವಾದ ಕುಟುಂಬದಲ್ಲಿ ಜನಿಸಿದವರು. ಪರಂಪರೆಯಾಗಿ ಅರಿಯೂರಿನಲ್ಲಿ ಶಾನುಭೋಗ-ತನವನ್ನು ವಹಿಸಿದ ಕುಟುಂಬ ಅವರದು. ಅವರ ತಂದೆಯವರು ಒಟ್ಟಿನಲ್ಲಿ ನೋಡಿದ್ದರೆ ಒಳ್ಳೆಯವರೇ ಹೌದು. ಇಂಗ್ಲಿಷ್ ಭಾಷೆಯನ್ನು ಅವರು ಕಲಿತಿರಲಿಲ್ಲ; ಆದರೆ ಆ ಕೊರತೆಯು ತಮ್ಮ ಏಕಮಾತ್ರಪುತ್ರನಿಗೆ ಇರಬಾರದೆಂದು, ಹುಡುಗನನ್ನು **ಬಿ. ಎ. ಬಿ. ಎಲ್** ವರೆಗೂ ಓದಿಸಿದರು. ಅನಂತರದಲ್ಲಿ ಹುಡುಗ "ಅಪ್ರೆಂಟಿಸ್" ಆಗಿ ಇದ್ದಾಗಲೇ ಸ್ವರ್ಗಸ್ಥರಾದರು.

ನಾರಾಯಣರಾಯರು ತಿರುಚಿನಾಪಳ್ಳಿಯಲ್ಲಿರುವ ನೂರಾರು ಮಂದಿ ವಕೀಲರಲ್ಲೊಬ್ಬರು ಅಷ್ಟೇ. ಅವರ ವ್ಯಕ್ತಿತ್ವವನ್ನು ಪ್ರತ್ಯೇಕಿಸಿ

---

* ತಮಿಳು ನಾಡಿನಲ್ಲಿ ಪ್ರಸಿದ್ಧ ಕತೆಗಾರರಿವರು. ಇವರ ಮೂಲ ತಮಿಳು ಕತೆಯನ್ನು **ಶ್ರೀಮತಿ ಜಯಲಕ್ಷ್ಮಿ ಆರ್. ಶ್ರೀನಿವಾಸನ್** ಅವರು ಕನ್ನಡಿಸಿದ್ದಾರೆ. ಸಂ. ಜ.

ಹೇಳುವಂತಹ ಇನ್ನಾವ ಸಂಗತಿಗಳೂ ಅವರಲ್ಲಿರಲಿಲ್ಲ. ಉದ್ಯೋಗದಿಂದ ನಿವೃತ್ತರಾದ ಅಮಲ್ದಾರರೊಬ್ಬರ ಪುತ್ರಿಯನ್ನು ಅವರು ವಿವಾಹವಾದ ವಿಷಯವನ್ನು ಬೇಕಾದರೆ– ಅವರದೊಂದು ವಿಶೇಷ ವ್ಯಕ್ತಿತ್ವಕ್ಕೆ ಗುರುತಾಗಿ ಹೇಳಬಹುದು. ಅಲಮೇಲಮ್ಮನು ಔದ್ಯೋಗಿಕ ಘೋರಣೆಯಲ್ಲಿ, ಆಕೆಯ ತಂದೆ ರಾಜ್ಯಭಾರವನ್ನು ಜರುಗಿಸುತ್ತಲಿದ್ದಾಗ ಹುಟ್ಟಿಬೆಳೆದವಳು. ಆದುದರಿಂದ ಆಕೆಯಲ್ಲಿ ಅಧಿಕಾರಗುಣವು,ಸ್ವಲ್ಪಮಾತ್ರ ನೆಲೆಸಿದ್ದಿತು. ಆದರೂ ಮೃದುವಾದ ಸ್ವಭಾವದವಳು ; ಉಪಕಾರಿ ; ಬಾಯಿಮಾತ್ರ ಸ್ವಲ್ಪ ದೊಡ್ಡದು. ಅದರಿಂದೇನೀಗ ? ಎಲ್ಲ ಜನರಲ್ಲಿಯೂ ಎಲ್ಲ ಗುಣಗಳು ಒಂದುಗೂಡುವುವೇನು ?

ವಕೀಲವೃತ್ತಿಯನ್ನು ಕೈಕೊಂಡವರಿಗೆ ಅನುಕೂಲವಲ್ಲದ ಕಾಲವದು. ಸುಮ್ಮನೆ ಬೋರ್ಡ (Board) ನ್ನು ತೆಗೆದಿರಿಸಿಬಿಟ್ಟು, ಸ್ವಂತ ಗ್ರಾಮಕ್ಕೆ ಹಿಂದಿರುಗಿ 'ಹಾಯ್' ಎಂದು ನೆಲೆಸಿಬಿಡೋಣವೆಂದು— ಕೆಲವು ಸಮಯಗಳಲ್ಲಿ— ನಾರಾಯಣರಾಯರು ಆಲೋಚಿಸುವರು. "ಅರ್ಧಹೊಟ್ಟೆಗೆ ಗಂಜಿ ಸಿಕ್ಕುವಷ್ಟು ತಂದೆಯವರಂತೂ ಇಟ್ಟುಹೋಗಿರುವರು. ಸ್ನಾನ, ಪಾನ, ಪೂಜೆ, ಪುರಸ್ಕಾರವೆಂದು–ಅರುವತ್ತು ವಯಸ್ಸಿನ ನಂತರದಲ್ಲಿ ಮಾಡುವುದನ್ನು—ನಲುವತ್ತು ವಯಸ್ಸಿನಲ್ಲಿಯೆ ಮಾಡಿಬಿಟ್ಟರೇನೀಗ ? "ಎಂದು ಭಾವಿಸುವರು. ಆಗೆಲ್ಲ ತಮ್ಮ ಪ್ರಿಯಪುತ್ರಿಯಾದ ಸುಶೀಲೆಯು ಎದುರಿಗೆ ಬಂದುಬಿಡುವಳು; ಆಗ ಅವರ ಹಳ್ಳಿಯವಾಸದ ಜ್ಞಾಪಕವು ಅಳಿದುಹೋಗಿಬಿಡುವುದು. "ಇವಳಿಗೊಂದು ಒಳ್ಳೆಯ ವರ ಸಿಕ್ಕಬೇಕು. ಅದಕ್ಕೋಸ್ಕರವಾಗಿಯಾದರೂ ಈ ಹಲಗೆಯನ್ನು ತಗಲುಹಾಕಿಬಿಟ್ಟು ಈ ಊರಿನಲ್ಲಿರಬೇಕು. ಹಳ್ಳಿಯವಾಸಕ್ಕೆಂದು ಹೋಗಿಬಿಟ್ಟಲ್ಲಿ ಒಳ್ಳೆಯ ವರ ನಮಗೆ ಎಲ್ಲಿ ಸಿಕ್ಕುವನು ? "ಎಂದು ಮನದೊಳಗೆ ಎಂದುಕೊಂಡು ನಿಟ್ಟುಸಿರುಬಿಡುವರು.

ಈ ರೀತಿಯಾಗಿ, ಅವರ ನಿತ್ಯಜೀವನದಲ್ಲಿ ಅವರಿಗೆ ಹೊಳೆಯುವ ಹಗಲುಗನಸುಗಳು ಒಮ್ಮೆ ಕೂಡುತ್ತಲೂ, ಮತ್ತೊಮ್ಮೆ ಚೆದರಿಹೋಗುತ್ತಲೂ ಇದ್ದುವು. ಬೀದಿಯಲ್ಲಿ ತಗಲುಹಾಕಿದ್ದ ಹಲಗೆಯಂತೂ ಹಾಕಿದ್ದಂತೆಯೇ ಇದ್ದಿತು. ಬಿಸಿಲು ತಗಲಿ ತಗಲಿ ಅದರಲ್ಲಿದ್ದ ಅಕ್ಷರಗಳು ಸೀಳಿಹೋಗಿ, ಅಳಿದುಹೋಗಲಾರಂಭಿಸಿದ್ದುವು. ಹಳ್ಳಿಯಿಂದ ಬೆಳೆದುಬರುವ ಭತ್ತವನ್ನೂ ತಿರುಚಿನಾಪಳ್ಳಿಯಲ್ಲಿ ಸಿಕ್ಕುವ ಸಂಪಾದನೆಯನ್ನೂ ಇಟ್ಟುಕೊಂಡು, ಯಾವುದೋ ಒಂದು ರೀತಿಯಾಗಿ ಕಾಲಕ್ಷೇಪವನ್ನು ನಡೆಯಿಸುತ್ತಲಿದ್ದರು—ನಾರಾಯಣರಾಯರು.

ರಾಯರ ಮನೆಯಲ್ಲಿ ಲಕ್ಷ್ಮೀಕರಕ್ಕೇನೊಂದು ಕೊರತೆಯೂ ಇರಲಿಲ್ಲ. ಸುಶೀಲೆಯ (ಹೂ ಹೊಲಿಗೆಯ) ಕಸೂತಿ ಕೆಲಸದ ಪಟಗಳು,ತಿಂಗಳಿಗೊಂದೊಂದಾಗಿ ಗೋಡೆಯನ್ನಲಂಕರಿಸಿದುವು. ಅಲಮೇಲಮ್ಮನ ಆಧುನಿಕ ನಾಗರಿಕ ಜೀವನಕ್ಕಂತೂ ಸ್ವಲ್ಪವೂ ಕೊರತೆಯೊದಗಲಿಲ್ಲ. ಮನೆಯಲ್ಲಿ ಅಡಿಗೆಯವನ ಅಡಿಗೆ; ಒಬ್ಬ ಸೇವಕ ದನವನ್ನು ಪೋಷಿಸಿ ಹಾಲು ಕರೆದುಕೊಡುತ್ತಾನೆ; ಇನ್ನೊಬ್ಬ ಸೇವಕ "ಆಫೀಸ್" ಕೆಲಸವನ್ನು ಮಾಡಿಕೊಳ್ಳುತ್ತಾನೆ. ಸಾಲದುದಕ್ಕೆ ಗುಮಾಸ್ತರೊಬ್ಬರಿದ್ದಾರೆ. ಆದರೂ ಕೂಡ ರಾಯರಿಗೆ ತೃಪ್ತಿಯಿಲ್ಲ; ಏಕೆಂದರೆ ಸಂಪಾದನೆಯು ಅಷ್ಟೊಂದು ತೃಪ್ತಿಕರವಾಗಿರಲಿಲ್ಲ.

* *

ಈ ಪರಿಸ್ಥಿತಿಯಲ್ಲಿರುವಾಗಲೆ ಅಡಿಗೆಯವನಾದ ರಾಮುವು ಅವರ ಮನೆಯನ್ನು ಸೇರಿದ. ಅವನು ನಾರಾಯಣರಾಯರ ಮನೆಗೆ ಬರುವುದಕ್ಕೆ ನಾಲ್ಕು ದಿವಸಗಳು ಮುಂಚೆ ತಾನೇ, ಆ ಮನೆಯಲ್ಲಿದ್ದ ಪಾಲಘಾಟಿನ ಅಡಿಗೆಯವನು ಹೇಳದೆ ಕೇಳದೆ ಹೊರಟುಹೋಗಿಬಿಟ್ಟಿದ್ದ. ಒಳ್ಳೆಯ ಯೋಗ್ಯನಾಗಿಯೂ, ಚುರುಕಾಗಿಯೂ ಇರುವ ಅಡಿಗೆಯವನೊಬ್ಬನನ್ನು ರಾಯರು ಹುಡುಕುತ್ತಲಿದ್ದರು ಅದೇ ಕಾಲಕ್ಕೆ ರಾಮುವು ಬಂದ.

ರಾಮುವಿನ ಮುಖದಲ್ಲಿ ಅದೆಷ್ಟೊಂದು ತೇಜಸ್ಸು! ದೇಹವಂತೂ ತುಂಬ ದಾರ್ಢ್ಯವುಳ್ಳದ್ದು ! ಅವನನ್ನು ಕಂಡೊಡನೆಯೆ ರಾಯರ ಮನಸ್ಸು ಅವನಲ್ಲಿ ನೆಟ್ಟುಹೋಯಿತು ; "ಚೆನ್ನಾಗಿ ಅಡಿಗೆ ಮಾಡಬಲ್ಲೆಯಾ ? " ಎಂದು ಕೇಳಿದರು.

"ಚೆನ್ನಾಗಿ ಎಂದು ಹೇಳಿಕೊಳ್ಳುವಷ್ಟು ಧೈರ್ಯವಿಲ್ಲ. ಅಡಿಗೆ ಮಾಡಬಲ್ಲೆ, ಅದು ಚೆನ್ನಾಗಿರುವುದೆಂಬ ಮಾತು ನಮ್ಮಿಬ್ಬರ ಮನಸ್ಸನ್ನು ಅವಲಂಬಿಸಿದೆ ಅಷ್ಟೇ ! ನಾನು ನಿಮ್ಮ ಮನಸ್ಸಿನ ಇಷ್ಟವನ್ನರಿತು ಮಾಡಬೇಕು; ನೀವು ಕೂಡ ನನ್ನಲ್ಲಿ ಮಮತೆಯನ್ನೂ ದಯೆಯನ್ನೂ ತೋರಿಸಬೇಕು ! " ಎಂದು ರಾಮುವು ಉತ್ತರವಿತ್ತನು.

"ಏನಿದು ! ಕಾನೂನು ಓದಿದವನಂತೆ ಲಾ-ಪಾಯಿಂಟಾಗಿ ಮಾತನಾಡುವೆಯಲ್ಲಾ ! ಸಂಬಳವೆಷ್ಟು ಬೇಕು ? "

"ಅದನ್ನು ಕುರಿತು ನಾನು ಹೇಳುವುದಿಲ್ಲ. ಇಪ್ಪತ್ತು ರೂಪಾಯಿ ಕೊಟ್ಟರೆ ನನಗೆ ಶ್ರಮವಿಲ್ಲದೆ ಇರುವುದು. ಹದಿನೈದು ಕೊಟ್ಟಲ್ಲಿ ಕಷ್ಟವಾಗಿದ್ದರೂ ಕೂಡ ಒಪ್ಪಿಕೊಳ್ಳಲೆ ಬೇಕು ! "

ಅವನ ಮಾತಿನ ಕುಶಲತೆಯೂ ಕಣ್ಣಿನೋಟವೂ ರಾಯರಿಗೆ ಆಶ್ಚರ್ಯವನ್ನುಂಟುಮಾಡಿದುವು; "ಇದೇನಾಶ್ಚರ್ಯ! ಭಗವಂತನು ಎಲ್ಲೆಲ್ಲಿಯೂ ವಶೀಕರಣವನ್ನು ಹಬ್ಬಿಸಿರುವನಲ್ಲಾ ! " ಎಂದು ಅವರು ಮನದೊಳಗೆ ಎಂದುಕೊಂಡರು.

"ಸರಿ, ಎರಡೂ ಬೇಡ, ಹದಿನೆಂಟು ರೂಪಾಯಿ ತೆಗೆದುಕೊ! ಸರಿಯಾಗಿ ಕೆಲಸಮಾಡಿದಲ್ಲಿ ಅನಂತರ ನೋಡೋಣ! " ಎಂದು ರಾಯರು ಅಪ್ಪಣೆಯಿತ್ತರು.

"ತಮ್ಮಿಷ್ಟ" ಎಂದು ಹೇಳಿ, ದೈನ್ಯಭಾವವನ್ನೂ ವಿಶ್ವಾಸವನ್ನೂ ತೋರಿಸುವ ದೃಷ್ಟಿಗಳಿಂದ ನಾರಾಯಣರಾಯರ ಹೃದಯದಲ್ಲಿ ಮಂಡಿಸಿಬಿಟ್ಟನು ರಾಮು.

* * *

ಅಪೂರ್ವದಲ್ಲೂ ಅತ್ಯಂತ ಅಪೂರ್ವವಾದೊಂದು ಕ್ರಿಮಿನಲ್ ವಾದವು ವಕೀಲರಾದ ರಾಯರ ಹತ್ತಿರದಲ್ಲಿ ಬಂದಿತು. ವಾದವನ್ನು ತಂದು ಹೂಡಿದವರು ಒಬ್ಬ ಭಾರಿ ಶ್ರೀಮಂತರು. ಅವರಿಗಂತೂ ತಮ್ಮ ವಾದವು ಜಯಹೊಂದುವುದೆಂಬ ನಂಬಿಕೆ ಯಿರಲಿಲ್ಲ; ಆದರೂ ಕೂಡ ಸ್ನೇಹಿತರ ಹಿಂಸೆಯನ್ನು ಸಹಿಸ ಲಾರದೆ, ಅನಿವಾರ್ಯವಾಗಿ ಆ ವಾದವನ್ನು ಹೂಡಲು ಬಂದರು. "ಇದು ಸೋತುಹೋಗುವ ವಾದ ತಾನೇ! ಇದಕ್ಕೋಸ್ಕರ ವಾಗಿ ದೊಡ್ಡ ವಕೀಲರನ್ನೇಕೆ ಹುಡುಕಬೇಕು?" ಎಂದು ಯೋಚಿಸಿ, ನಾರಾಯಣರಾಯರ ಹತ್ತಿರದಲ್ಲಿ ಬಂದರು. ರಾಯರೂ ಅದನ್ನು ಅಂಗೀಕರಿಸಿದರು. ವಾದವನ್ನು ಹೂಡಲು ಒಂದು ವಾರ ಸಾವಕಾಶವಿದ್ದಿತು. ವಾದಕ್ಕೆ ಸಂಬಂಧಪಟ್ಟ ಸಕಲ ವಿಷಯಗಳನ್ನೂ ತಿಳಿದುಕೊಳ್ಳುವ ನಿಮಿತ್ತವಾಗಿ ಹಗಲಿರುಳೂ ರಾಯರು ಆ ಕಟ್ಟುಗಳನ್ನು ಓದಿ ನೋಡಿದರು. ಅದನ್ನು ಹೇಗೆ ನಡೆಯಿಸಿದರೆ ಜಯಲಭಿಸುವುದೆಂದು ಆಲೋಚಿಸಿದರು. ಅಂತಹ ವಾದ-ವಿವಾದಗಳಲ್ಲಿ ಅವರು ಹಿಂದೆ ಪಳಗಿದ್ದರೆ ಅಲ್ಲವೇ....ಅವರಿಗೆ ದಾರಿಯು ವಿಶದವಾಗಿ ತೋರ-ಬಲ್ಲದು? "ಈ ವಾದದಲ್ಲಿ ಜಯ ಲಭಿಸಿದಲ್ಲಿ ನಮ್ಮ ಅಂತಸ್ತು ಒಂದು ಮೆಟ್ಟಲು ಹತ್ತುವುದು!" ಎಂದು ಅವರ ನಂಬಿಕೆ. ಜಯ ಲಭಿಸಿದರೆ ಅಲ್ಲವೇ? ಅದಕ್ಕೆ ಆವಶ್ಯಕವಾದ ದಾರಿಯಾವುದೆಂದು ಮಿದುಳನ್ನು ಕೊರೆದುಕೊಳ್ಳುತ್ತಲಿದ್ದರು.

ರಾತ್ರಿಯ ಒಂಬತ್ತು ಘಂಟೆಯ ಸುಮಾರಿಗೆ ರಾಯರು ತಮ್ಮ ಆಫೀಸುರೂಮಿನಲ್ಲಿ ಕುಳಿತು ಆಲೋಚಿಸುತ್ತಲಿದ್ದರು. ಅವರಿಗೆ ಹಾಲನ್ನೂ ಕಿತ್ತಳೆಯಹಣ್ಣನ್ನೂ ತಂದಿಡುವುದಕ್ಕಾಗಿ ಕೊಠಡಿಯೊಳಗೆ ಪ್ರವೇಶಿಸಿದನು ರಾಮು. ರಾಯರು ಎರಡೂ ಕೈಗಳಿಂದಲೂ ತಮ್ಮ ತಲೆಯನ್ನು ತಡೆದುಕೊಂಡು, ಕೆಳಗೆ ಬಾಗಿದವರಾಗಿ ಕುಳಿತಿದ್ದರು. ರಾಮು ಬಂದುದನ್ನು ಕೂಡ ಗಮನಿಸಲಿಲ್ಲ.

ಮೇಜಿನ ಮೇಲೆ ಹಾಲನ್ನೂ ಹಂಪಲನ್ನೂ ಇರಿಸಿ, ಮಾತನಾಡದೆ ಸ್ವಲ್ಪಕಾಲ ನಿಂತಿದ್ದನು ರಾಮು. ಅನಂತರ, "ಹಾಲನ್ನಿಟ್ಟಿದ್ದೇನೆ" ಎಂದನು. ನಾರಾಯಣರಾಯರು ತಲೆಯೆತ್ತಿ ನೋಡಿದರು. "ಯಾವಾಗ ಬಂದೆ? ಏನನ್ನೋ ಯೋಚಿಸುತ್ತಲಿದ್ದೆ, ನಿನ್ನನ್ನು ನೋಡಲಿಲ್ಲ!" ಎಂದು ಹೇಳಿ, ಅವನು ಸುಲಿದುಕೊಟ್ಟ ಹಣ್ಣಿನ ತುಸುವನ್ನು ಬಾಯಿಗೆ ಹಾಕಿಕೊಂಡರು.

"ಬಹಳ ಆಯಾಸಹೊಂದಿರುವಿರಲ್ಲಾ! ಈಗ ಸುಮ್ಮನೆ ಮಲಗಿಬಿಟ್ಟು, ಬೆಳಗ್ಗೆ ಎದ್ದು ಕೆಲಸವನ್ನು ಗಮನಿಸಬಹುದಲ್ಲಾ! ಮುಂಜಾನೆಯಲ್ಲಿ ಯೋಚಿಸಿದರೆ ಎಲ್ಲವೂ ವಿಶದವಾಗಿ ತೋರು-ವುದೆಂದು ಹೇಳುವ ವಾಡಿಕೆ!" ಎಂದನು ರಾಮು. ಅವನು ಅಡಿಗೆಯವನಂತೆ ವಳಗದೆ, ಒಂದು ಮೆಟ್ಟಲು ಅಧಿಕವಾದ ಪ್ರೀತಿ-ವಾತ್ಸಲ್ಯದೊಡನೆ ಪಳಗಿದ್ದನಾದುದರಿಂದ ಹೀಗೆ ನುಡಿದನು.

ರಾಯರು ತಲೆಯನ್ನು ಕೆರೆಯುತ್ತಾ ಹಾಲನ್ನು ಕುಡಿದು, ಕಾಗದ-ಪತ್ರಗಳನ್ನು ಮುಚ್ಚಿಡಲಾರಂಭಿಸಿದರು.

"ನಾನು ಎಲ್ಲವನ್ನೂ ಸರಿಯಾಗಿ ಜೋಡಿಸಿಡುತ್ತೇನೆ. ನೀವು ಮಲಗಲು ಹೋಗಿ" ಎಂದು ಹೇಳಿ ರಾಮುವು ಅವುಗಳನ್ನು ಜೋಡಿಸಿಡಲಾರಂಭಿಸಿದನು. ಅನೇಕ ದಿವಸಗಳಿಂದಲೂ ಅವನು ಹೀಗೆ ಮಾಡುವುದು ಪದ್ಧತಿ.

ಬೆಳಗ್ಗೆ ಎದ್ದ ತಕ್ಷಣ ಆಫೀಸು ರೂಮಿಗೆ ಬಂದರು ರಾಯರು. ನಿಜವಾಗಿಯೂ ಅವರಿಗೂ ಮನಸ್ಸು ಹಗುರವಾಗಿದ್ದಿತು. ಕೊಠಡಿಯೊಳಗೆ ಪ್ರವೇಶಿಸಿ ಕುಳಿತರು; ಕಟ್ಟುಗಳನ್ನು ಬಿಚ್ಚಿದರು. ಅದರಲ್ಲಿ ಯಾವುದನ್ನೋ ಓದಿ ನೋಡಿದರು. ಆಶ್ಚರ್ಯವನ್ನು ವ್ಯಕ್ತ ಮಾಡುವಂತಹ ಅನುಭಾವಗಳು ಅವರ ಮುಖದಲ್ಲಿ ಪ್ರತಿಬಿಂಬಿಸಿದುವು. ಚಿಮ್ಮಿದರು; ಕುಣಿದರು. "ಓ, ರಾಮು!" ಎಂದು ಕರೆದರು. ರಾಮುವು ಓಡಿ ಬಂದನು; ಅವನ ಸಂಗಡ ಏನೇನೋ ಮಾತನಾಡಿದರು.

*

ಆ ವಾದದಲ್ಲಿ ಅನಿರೀಕ್ಷಿತವಾದ ವಿಜಯವು ಲಭಿಸಿತು. ವಾದ ಹೂಡಿದವರಿಗೆ ಅತ್ಯಂತ ಆಶ್ಚರ್ಯವುಂಟಾಯಿತು. "ಈ ವಾದವನ್ನು ಇವರು ಗೆದ್ದದ್ದು ಪರಮಾಶ್ಚರ್ಯವೇ ಹೌದು! ಇವರನ್ನು ಊರಿನವರೆಲ್ಲರೂ ಕೆಲಸಕ್ಕೆ ಬಾರದ ವಕೀಲರೆಂದು ಹೇಳುವುದು ಶುದ್ಧ ಸುಳ್ಳು. ಇವರೊಬ್ಬ ಗಟ್ಟಿಗರಾದ ವಕೀಲರು!" ಎಂಬ ಭಾವವು ಏರ್ಪಟ್ಟಿತು. ಆ ವಾದಕ್ಕೆ ತಕ್ಕಷ್ಟು ಒಳ್ಳೆಯ ಸಂಭಾವನೆ-ಯನ್ನು ಕೊಟ್ಟುದಲ್ಲದೆ ಆ ವಾದಿಗಳು ನಾರಾಯಣರಾಯರ ಪ್ರಭಾವವನ್ನು ಹಲವು ಸ್ನೇಹಿತರಿಗೆ ತಿಳಿಸಿ, ಹಲವು 'ಕೇಸು'ಗಳನ್ನು ಅವರಿಗೆ ಕೊಡಿಸಿದರು. ರಾಯರ ಸಂಪಾದನೆಯೂ ಅಂತಸ್ತೂ ಒಂದಕ್ಕೆ ಹತ್ತರಷ್ಟು ಅಭಿವೃದ್ಧಿ ಹೊಂದತೊಡಗಿತು.

ಈ ರೀತಿಯಾಗಿ ರಾಯರ ಗೌರವವು ಹೆಚ್ಚಲು ಪ್ರಾರಂಭ-ವಾದಾಗಿನಿಂದ, ಅಲಮೇಲಮ್ಮನು ಆಕ್ಷೇಪಿಸುವ 'ರಹಸ್ಯ ಸಂಭಾಷಣೆ'ಯು ಕೂಡ ಅಭಿವೃದ್ಧಿಹೊಂದಲಾರಂಭಿಸಿತು. ಹೆಚ್ಚಾಗಿ ರಾತ್ರಿಯ ವೇಳೆಯಲ್ಲಿ ರಾಮುವೂ ರಾಯರೂ ಹಲವು ಘಂಟೆಗಳ ಕಾಲ ಸಂಭಾಷಿಸುತ್ತಲಿರುವರು. ರಾಯರು ಅವನೊಡನೆ ನಡೆದುಕೊಳ್ಳುವ ರೀತಿಯನ್ನು ಕಂಡರೆ, ಅವನನ್ನು ಯಾರೂ ಅಡಿಗೆಯವನೆಂದು ಭಾವಿಸಲಾರರು. ಆದರೆ ಅವನಾದರೂ ಎಂದಿನಂತೆಯೆ ಇರುವ ನಯ-ವಿನಯಗಳೊಡನೆಯೂ, ಸದ್ಭಕ್ತಿಯೊಡನೆಯೂ ಇರುತ್ತ ಬಂದನು.

ಭಾಗ್ಯಚಕ್ರವು ಸುತ್ತುತ್ತಲಿದೆ. ನಾರಾಯಣರಾಯರು ದೈವಿಕ ಶಕ್ತಿಯಿಂದ ಪ್ರೇರೇಪಿಸಲ್ಪಟ್ಟವರಂತೆ ಒಂದೊಂದು ವಾದದಲ್ಲಿಯೂ ಜಯ ಹೊಂದುತ್ತಲೇ ಬಂದರು. ಅವರು ಕೋರ್ಟಿನಲ್ಲಿ ನಡೆಯಿಸುವ ವಾದವು ಈಚೆಗೆಲ್ಲಾ ಬಹಳ ಅಚ್ಚು-ಮೆಚ್ಚಾಗಿದ್ದುವು. ಹರಳೆಣ್ಣೆಯಂತಹ— ಹಳೆಯ— ಸ್ವಾರಸ್ಯ-ವಿಲ್ಲದ ವಾದವಲ್ಲ ಈಗ.

“ಇವರಿಗೆ ಹೀಗೆ ಅತಿಶಯವಾದ ಶಕ್ತಿಯೊಂದು ಬರಲು ಕಾರಣವೇನು? ಏನಾದರೂ ಉಪಾಸನೆಯನ್ನು ಮಾಡುತ್ತಾರೇನು?” ಎಂದು ಜನರೆಲ್ಲರೂ ಆಡಿಕೊಳ್ಳುತ್ತಿದ್ದರು. ಮನೆಯಲ್ಲಂತೂ ಅಲಮೇಲಮ್ಮನಿಗೆ ಒಂದು ಕಡೆಗೆ ಆನಂದ; ಮತ್ತೊಂದು ಕಡೆಗೆ ರೋಷ. ಅಂತಸ್ತು ಹೆಚ್ಚುತ್ತಾ ಹೆಚ್ಚುತ್ತಾ ಬಂದಂತೆ ಅಡಿಗೆಯವನ ಸಂಗಡ ಸಂಭಾಷಿಸುವುದೂ ಅಧಿಕವಾಗಲು ಅವಳಿಗೆ ಕೋಪ ಬಾರದಿರುವುದೆ? ಅವಳು ಎಷ್ಟೋ ದಿನಗಳ ವರೆಗೆ, ಪತ್ನೀದಾಕ್ಷಿಣ್ಯದ ಮೂಲಕ ಬಾಯಿಬಿಟ್ಟು ಕೇಳಲು ಹಿಂಜರಿದಳು. ಎಷ್ಟೊಂದು ದಿವಸಗಳು ತಾನೇ ಸಹಿಸಬಲ್ಲಳು? ಒಂದು ದಿವಸ ಕೇಳಿಯೇ ಬಿಟ್ಟಳು:

“ಅದೇನ್ರೀ ಅದು? ಪ್ರತಿದಿವಸವೂ—ವರ್ಷ ಮುನ್ನೂರರುವತ್ತು ದಿವಸಗಳೂ— ರಾತ್ರಿಯ ಎಂಟು ಘಂಟೆಯಾದ ಮೇಲೆ, ಆ ಅಡಿಗೆಯವನೊಡನೆ ಅದೆಂತಹ ಸಂಭಾಷಣೆ? ನಿಮಗೆ ಗೌರವ, ಅಂತಸ್ತು, ನಾಚೋಕು ಏನೊಂದೂ ಗೊತ್ತಿಲ್ಲವೇನು?” ಎಂದಳು.

“ಆ ವಿಷಯವಾಗಿ ನಿನಗೇಕೆ ಇಷ್ಟು ಚಿಂತೆ?”

“ನಾನು ಈ ಮನೆಯಲ್ಲಿರುವುದರಿಂದಲೇ ಇಷ್ಟೊಂದು ಚಿಂತೆ! ಅವನಂತೂ ಬರುಬರುತ್ತಾ ಬಹಳ ಮೋಸವಾಗಿ ಬಿಟ್ಟಿದ್ದಾನೆ. ನೀವು ಕರೆದರಂತೂ ಕೈಯಲ್ಲಿದ್ದ ಪಾತ್ರೆಯನ್ನು ನಿಂತಲ್ಲಿಯೇ ಬೀಸಾಡಿಬಿಟ್ಟು ಹೊರಟುಬಿಡುತ್ತಾನೆ. ಬರುಬರುತ್ತಾ ನನಗೆ ಕೆಲಸ ಹೆಚ್ಚಾಗುತ್ತಲಿದೆ. ನೀವು ಕೂಡ ನನ್ನನ್ನೇ ಗದರಿಸುತ್ತೀರಿ; ರಾತ್ರಿಯ ಎಂಟು ಗಂಟೆ ಹೊಡೆಯುತ್ತಲೇ ಅವನನ್ನು ಕೆಲಸದಿಂದ ಬಿಡಿಸಿಬಿಡಬೇಕೆಂದು ಕಟ್ಟಪ್ಪಣೆ ಮಾಡುತ್ತೀರಿ! ಇವೆಲ್ಲವೂ ಯಾರ ಕಿವಿಗಾದರೂ ಬಿದ್ದಲ್ಲಿ ಏನೆಂದುಕೊಂಡಾರು?

“ಹೋಗೇ ಹುಚ್ಚಿ, ಸುಮ್ಮನಿರು! ನಿನಗಿರುವಷ್ಟು ಬುದ್ಧಿ ನನಗಿಲ್ಲವೇನು? ಅವನು ಬಹಳ ಒಳ್ಳೆಯ ಹುಡುಗ! ಏನೋ ನಮ್ಮ ಒಳ್ಳೆಯ ಅದೃಷ್ಟದಿಂದಲೇ ನಮಗೆ ಸಿಕ್ಕಿರುವನು!”

“ಹೌಹೌದು, ನೀವೇ ಮೆಚ್ಚಿಕೊಳ್ಳಬೇಕು! ಅರ್ಧಂಪರ್ಧವಾಗಿ ಅಡಿಗೆಮಾಡಿ ಹಾಕುವವನಿಗೆ ತೋಡಾಮಾಡಿಸಿ ಹಾಕಿದರೂ ಹಾಕುವಿರಲ್ಲವೆ? ಯಾಕೆ! ನೀವಿರುವ ರೀತಿಯನ್ನು ಕಂಡರೆ, ಅವನಿಗೆ ನಿಮ್ಮ ಮಗಳನ್ನು ಕೊಟ್ಟರೂ ಕೊಟ್ಟು ಬಿಡುವಿರೆಂದು ತೋರುತ್ತದೆ!”

ಈ ಕೊನೆಯ ವಾಕ್ಯವನ್ನು ಕೇಳಿದೊಡನೆಯೇ ವಕೀಲರು—ಯಾವುದೋ ಒಂದು ವಿಷಯವನ್ನು ಅರಿತವರಂತೆ, ಆಶ್ಚರ್ಯವೂ ಸಂತೋಷವೂ ಉಕ್ಕುತ್ತಿರಲು—‘ಹಾ’ಎಂದು ಕೂಗಿದರು. ಅಲಮೇಲಮ್ಮನಿಗೆ ಆ ಧ್ವನಿಯ ಅರ್ಥವೇನೆಂಬುದು ಹೊಳೆಯಲಿಲ್ಲ. ಅದು ಅವರ ಹೃದಯದ ಭಾವನೆಗಳು ಹುಮ್ಮಸ್ಸಿನಿಂದ ಹೊಮ್ಮಿ ತುಂಬಿ ತುಳುಕಿ ಕೋಡಿಹರಿದು ಹೋದುದರ ಪ್ರತಿಚ್ಛಾಯೆಯೆಂಬುದನ್ನು ಆಕೆ ಹೇಗೆ ತಿಳಿಯಬಲ್ಲಳು! ತಾನು ಹೇಳಿದುದನ್ನು ಪ್ರತಿಭಟಿಸಿ ಹೇಳುತ್ತಾರೆಂದೇ ಅವಳು ಭಾವಿಸಿದಳು.

“ಇಷ್ಟು ಮಾತ್ರವಾದರೂ ನಿಮಗೆ ನಿಮ್ಮ ಅಂತಸ್ತಿನ ಜ್ಞಾಪಕ ಏದೆಯಲ್ಲಾ! ಸುಶೀಲೆಯ ವಿವಾಹದ ಏರ್ಪಾಡನ್ನು ಮಾಡಬೇಡವೇ?” ಎಂದಳು.

ಅಂದು ರಾಯರು ತಮ್ಮ ಮನದೊಳಗೆ ಒಂದು ತೀರ್ಮಾನವನ್ನು ಮಾಡಿಕೊಂಡರು. ಅವರಿಗೇಕೆ ಅಷ್ಟೊಂದು ಉತ್ಸಾಹ! ಆ ಘಳಿಗೆಯಲ್ಲಿ, ಅವರ ಮುಖದಲ್ಲಿ ತೃಪ್ತಿಕರವಾದ ಒಂದು ಭಾವನೆಯು ಅದೆಷ್ಟೊಂದು ವಿಶದವಾಗಿ ತೋರಿತು!

ಮರುದಿನ ರಾತ್ರಿ, ಒಂದು ಘಂಟೆಯುವರೆಗೂ ರಾಮುವೂ ನಾರಾಯಣರಾಯರೂ ರಹಸ್ಯವಾಗಿ ಪರ್ಯಾಲೋಚನೆಯನ್ನು ಮಾಡಿದರು. ದೊಡ್ಡದೊಂದು ವಾಗ್ವಿವಾದವು ನಡೆದಂತೆ ತೋರಿತು. ನಾರಾಯಣರಾಯರು ಆ ವಾದದಲ್ಲಿಯೂ ವಿಜಯ ಪಡೆದಿರಬೇಕು. ಅವರ ಮುಖದಲ್ಲಿ ಆ ಜಯಭೇರಿಯ ಚಿನ್ಹೆಯು ಪ್ರತಿಫಲಿಸುತ್ತಲಿದ್ದಿತು.

* * *

ಒಂದು ವಾರ ಕಳೆಯಿತು. ಅಂದು ರಾತ್ರಿ ಅಲಮೇಲಮ್ಮನು ಹಸನ್ಮುಖಿಯಾಗಿದ್ದಳು ರಾಯರು ಅತ್ಯಂತ ಪ್ರೇಮಪೂರ್ವಕವಾಗಿ ಸರಸಸಲ್ಲಾಪ ಮಾಡುತ್ತಿದ್ದರು.

“ನಾನು ಮದರಾಸಿಗೆ ಹೋಗಬೇಕೆಂದು ಉದ್ದೇಶಿಸಿದ್ದೇನೆ!” ಎಂದು ರಾಯರು ನಿಧಾನವಾಗಿ ಮಾತನಾಡಲು ಮೊದಲು ಮಾಡಿದರು.

“ಹೋಗಿ ಬರಲು ಎಷ್ಟುದಿನಗಳಾಗುವುವು?” ಎಂದು ರಾಯರ ಮೇಲೆ ಪ್ರೇಮದೃಷ್ಟಿಯನ್ನು ಬೀರುತ್ತಾ ಪ್ರಶ್ನೆ ಮಾಡಿದಳು ಅವರ ಸಹಧರ್ಮಿಣಿ.

“ಹೋಗಿ ಬರುವುದೆಲ್ಲಿ? ಅಲ್ಲಿಗೇ ಹೋಗಿ ವಕೀಲಿಯನ್ನು ನಡೆಯಿಸೋಣವೆಂದು ಉದ್ದೇಶ!”

“ಅಲ್ಲಿಗೆ ಹೋದರೆ ನಿಮಗೆ ಅನುಕೂಲವಾಗುವುದೇ?”

“ಯಾಕೆ ಅನುಕೂಲದೊರೆಯದು? ಎಷ್ಟೆಷ್ಟೋ ‘ಕೇಸ್’ಗಳು ಸಿಕ್ಕುವುವು. ಈಗ ಕೂಡ ನಾನು ಪದೇಪದೇ ಅಲ್ಲಿಗೆ ಹೋಗಿ ಬರುವುದಿಲ್ಲವೇನು?”

“ಹಾಗಾದರೆ ಸುಶೀಲೆಯ ಮದುವೆಯ ವಿಷಯವಾಗಿ ಯಾವಾಗ ಯೋಚಿಸುವುದು?”

“ಅದಕ್ಕೇನಂತೆ ಪ್ರಮಾದ? ಅಲ್ಲಿಗೇ ಹೋಗಿ ನಡೆಯಿಸಿದರಾಯಿತು?

“ಸರಿ, ಅಲ್ಲಿ ಒಳ್ಳೆಯ ಅಡಿಗೆಯವನು ಸಿಕ್ಕುವನೇ?”

“ಬೇಕಾದ ಅಡಿಗೆಯವನು ಸಿಕ್ಕುವನು!”

“ಈ ಉತ್ತರದಿಂದ ತನ್ನ ಕೋರಿಕೆಯು ಪೂರ್ತಿಗೊಂಡಿತೆಂದು ಅಮ್ಮನವರು ಪುಲಕಿತರಾದರು. “ರಾಮೂ ತೊಲಗಿ ಹೋಗು-

ವನು. ರಹಸ್ಯ ಸಂಭಾಷಣೆಯು ನಿಂತು ಹೋಗುವುದು. ಏನೋ ಒಳ್ಳೆಯ ಕಾಲ ಒದಗಿದೆ ನಮಗೆ ” ಎಂದು ಆಕೆ ಭಾವಿಸಿಕೊಂಡು ಹಿಗ್ಗಿದಳು.

“ ರಾಮುವಿಗೆ ಬಾಕಿಯೆಲ್ಲವನ್ನೂ ತೀರಿಸಿ ಕಳುಹಿಸಿ ಬಿಡಲೇ? ಇನ್ನುಮೇಲೆ ಅವನ ಅಡಿಗೆ ನಮಗೆ ಆವಶ್ಯಕವಿಲ್ಲವಲ್ಲಾ ! ”

“ ಆವಶ್ಯಕವಿಲ್ಲ, ಆದರೆ ಅವನನ್ನು ಸಹ ನಮ್ಮ ಜೊತೆಯಲ್ಲಿ ಕರೆದುಕೊಂಡು ಹೋಗಬೇಕು ! ”

“ ಇದೇನಪ್ಪಾ ಇದು ? ರಾಮೇಶ್ವರಕ್ಕೆ ಹೋದರೂ ಶನೀಶ್ವರನು ಹಿಂಬಾಲಿಸಿಯೇ ತೀರಬೇಕೇನು ? ”

“ ಛೀ, ಹಾಗೆ ಹೇಳಬೇಡ! ಸುಶೀಲೆಯ ಮದುವೆಯು ಅವನಿಲ್ಲದೆ ಹೇಗೆ ನಡೆಯಲು ಸಾಧ್ಯ ? ”

“ ಅವನು ಏನನ್ನು ಮಾಡಬೇಕಾಗಿದೆ ? ವರನನ್ನು ಹುಡುಕಿ ತರುವನೇನು ? ಅಥವಾ ಮದುವೆಯ ಏರ್ಪಾಡನ್ನೇನಾದರೂ ಮಾಡುವನೋ ? ”

“ ಎಲ್ಲವನ್ನೂ ಮಾಡಬಲ್ಲನು! ಅವನೇ ವರನಾಗಿಯೂ ಇರುವನು ! ನೀನೇ ಒಂದು ದಿನ ಹೇಳಿ ಬಿಟ್ಟೆಯಲ್ಲಾ; ಅವನಿಗೇ ಸುಶೀಲೆಯನ್ನು ಕೊಡುವೆನೆಂದು ! ”

“ ಇದೇನು; ಹುಡುಗಾಟವಾಡುತ್ತೀರಾ ? ” ಎಂದು ಸಿಟಸಿಟನೆ ನುಡಿದಳು, ಆಲಮೇಲಮ್ಮ.

“ಹುಡುಗಾಟವಲ್ಲ, ವಾಸ್ತವವೇ! ನಮಗೆ ಅಂತಸ್ತು ಅಭಿವೃದ್ಧಿ ಹೊಂದುತ್ತಿರುವುದು ಅವನದೆಸೆಯಿಂದಲೆ; ನಾನು ಮದರಾಸಿಗೆ ಹೋಗುವುದೂ ಅವನಿಂದಲೆ; ಸುಶೀಲೆಗೂ ಅವನಿಗೂ ವಿವಾಹ ಜರುಗುವುದು ನಿಶ್ಚಯ ! ನಾನು ಸುಶೀಲೆಯ ಸಮ್ಮತವನ್ನು ಕೇಳಿ ತಿಳಿದುಕೊಂಡುಬಿಟ್ಟಿರುವೆನು ! ”

“ ಏನ್ರೀ ಇದು ? ನಿಮಗೆ ಹುಚ್ಚು ಹಿಡಿದುಬಿಟ್ಟಿರುವುದೇನು ? ಏನೋ ಕನವರಿಸುತ್ತಿರುವಿರಲ್ಲಾ ! ” ಎಂದು ತ್ವೇಷವೂ ರೋಷವೂ ಬೆರೆತ ಮನಸ್ಕಳಾಗಿ ಆಕೆಯು ಕೇಳಿದಳು. ರಾಯರು ಅದಕ್ಕೆ— ಅನಂತರದಲ್ಲಿ ಹೇಳಿದ— ಅತಿಶಯವಾದ ವಿಷಯಗಳನ್ನು ಕೇಳುತ್ತಾ ಕೇಳುತ್ತಾ ಆಕೆಯು ಸ್ತಂಭೀಭೂತಳಾದಳು. ಒಂದೊಂದೂ ರಹಸ್ಯವಾಗಿ ಹೊರಬೀಳುತ್ತಿರಲು, ಆಕೆಯು ತಾನು ಸ್ವಪ್ನ ಕಾಣುತ್ತಿರುವುದಾಗಿ ಭಾವಿಸಿದಳು. ಹೀಗೆ ಅವಳು ಅತೀವವಾಗಿ ಆಶ್ಚರ್ಯಗೊಳ್ಳುವಂತಹ ವಿಷಯ ಯಾವುದನ್ನು ರಾಯರು ಹೇಳಿದರು ? ರಾಮುವನ್ನು ಕುರಿತ ರಹಸ್ಯವೇ ಇರಬಹುದೇನು ?

೩

ರಾಮುವು ಒಂದು ಯೋಗ್ಯವಾದ ಕುಟುಂಬದಲ್ಲಿ ಜನಿಸಿದವನೆ. ಬಾಲ್ಯದಲ್ಲಿಯೆ ತಾಯಿಯನ್ನು ಕಳೆದುಕೊಂಡನು. **ಬಿ. ಏ. ಬಿ. ಎಲ್.** ವರೆಗೂ ಓದಿದನು. ಅವನ ತಾಯಿಯ ನಂತರದಲ್ಲಿ ಅವನ ತಂದೆ ದ್ವಿತೀಯವಿವಾಹವನ್ನು ಮಾಡಿಕೊಂಡರು. ತನ್ನ ದ್ವಿತೀಯ ಪತ್ನಿಯ ಉಪದೇಶದ ಪರಿಣಾಮದಿಂದ ರಾಮುವಿನ ವಿಷಯದಲ್ಲಿ ಅವನ ತಂದೆಯವರಿಗಿದ್ದ ಪ್ರೀತಿವಾತ್ಸಲ್ಯವು ಅಳಿಸಿಹೋಯಿತು. ಅವರೂ ಕೂಡ ಹಲವು ವಿಧಗಳಲ್ಲಿ ತಮ್ಮ ಆಸ್ತಿಪಾಸ್ತಿಯೆಲ್ಲವನ್ನೂ ಕಳೆದುಕೊಂಡವರಾಗಿ ಗತಿಸಿಹೋದರು. ಅವರ ದ್ವಿತೀಯ ಪತ್ನಿಯಾದರೋ, ಇದ್ದ ಅಲ್ಪಸ್ವಲ್ಪವನ್ನು ಕಸಿದುಕೊಂಡು ತವರುಮನೆಗೆ ಹೊರಟು ಹೋದಳು.

ಬಿ. ಏ. ಬಿ. ಎಲ್. ಪಟ್ಟವನ್ನು ಕಾಗದದಲ್ಲಿ ಬರೆದು ಕೈಯ್ಯಲ್ಲಿ ಹಿಡಿದವನಾಗಿ, ಊರೂರು ಅಲೆದಾಡುತ್ತ ಉದ್ಯೋಗಕ್ಕಾಗಿ ಪೇಚಾಡಿದನು ರಾಮು. ಒಂದೂ ದೊರಕಲಿಲ್ಲ. ಅವನಿಗೂ ಮುಂಚಿತವಾಗಿ ಪ್ರತಿಯೊಂದು ಕೆಲಸದ ಸ್ಥಳವನ್ನೂ ನೂರಾರು ಮಂದಿ ಉಮೇದವಾರರು ದಾಳಿಯಿಕ್ಕಿ ಹೋಗಿದ್ದರು. ಎಲ್ಲೆಲ್ಲಿಯೊ ಹೋಗಿ, ಹೇಗೆಹೇಗೋ ಅಲೆದು ಅಲೆದು ಅಕ್ಕೀಕಾಳಾಗಿ, ಒಬ್ಬ ವಕೀಲರ ಹತ್ತಿರದಲ್ಲಿ, ಇಪ್ಪತ್ತು ರೂಪಾಯಿಗಳ ಸಂಬಳದಲ್ಲಿ ಒಬ್ಬ ಗುಮಾಸ್ತನಾಗಿ ನೆಲಸಿದನು. ಮೆಲ್ಲಗೆ “ ಅಪ್ರೆಂಟೀಸ್ ” ಪರೀಕ್ಷೆಯಲ್ಲಿ ಉತ್ತೀರ್ಣನಾದನು. ಅನಂತರ ವಕೀಲಿಯ ಸನ್ನದ್ದಿಗೆ ೮೦೦ ರೂಪಾಯಿಗಳು ಬೇಕಲ್ಲಾ ! ಕೊಡುವವರು ಯಾರು ? ಅವನ ದುರದೃಷ್ಟ; ವಕೀಲರ ಹತ್ತಿರದಲ್ಲಿ ಕೆಲವರು ಚಾಡಿಹೇಳಿ, ಅವನನ್ನು ಅವರಿಂದ ಪ್ರತ್ಯೇಕ ಮಾಡಲು ಪ್ರಯತ್ನಿಸಿದರು. ಅವರೊಡನೆ ಇದ್ದ ಕಾಲದಲ್ಲಿ ರಾಮುವು ಹಲವು ಪುಸ್ತಕಗಳನ್ನು ಓದಿ ಓದಿ, ಹಲವು ಕಾನೂನುಗಳ ಸೂಕ್ಷ್ಮಗಳನ್ನು ಅರಿತುಕೊಂಡಿದ್ದನು. ಅವನ ಜ್ಞಾನವು ಅಪರಿಮಿತವಾದದ್ದು; ಆದರೆ ಹಠಾತ್ತನೆ ಕೆಲಸವನ್ನು ಬಿಡಿಸಿ ಹೊರಡಿಸಲು, ಅವನೆಲ್ಲಿಗೆ ಹೋಗಿ ಆಶ್ರಯಬೇಡುವನು ? ಪಾಪ ! ಹೋಟಲಿನಲ್ಲಾದರೂ ಕೆಲಸಮಾಡುವುದೆಂದು ಹೊರಟುಬಿಟ್ಟನು. ಅಡಿಗೆಮಾಡಲು ಕಲಿತನು. ತಾನು ಹೋದ ಸ್ಥಳಗಳಲ್ಲಿರುವ ಅಸಭ್ಯತೆಗಳನ್ನು ಕಂಡು, ಅಸಹ್ಯದಿಂದ ಒಂದೊಂದನ್ನಾಗಿ ಬಿಟ್ಟುಬಂದನು. ಕೊನೆಗೆ ತಿರುಚಿನಾಪಳ್ಳಿಯಲ್ಲಿ ನಾರಾಯಣರಾಯರ ಮನೆಯಲ್ಲಿ ಬಂದು ಸೇರಿದನು.

ಅವನ ಮುಖದ ತೇಜಸ್ಸನ್ನು ಕಂಡು ಆಶ್ಚರ್ಯಗೊಂಡ ರಾಯರು ಅವನನ್ನು ಅಧಿಕವಾದ ಪ್ರೀತಿ-ವಾತ್ಸಲ್ಯದೊಡನೆ

೫೦ ವರ್ಷಗಳಿಂದ ಅನುಭವಪಟ್ಟ

ಕರ್ಕಿ ಮತ್ತು ಕಂಪನಿ

ಇವರ

ಜ್ವರಗಡ್ಡೆಯ ಗುಳಿಗೆ

ಬಾಟ್ಲಿಗೆ ೧ ರೂ.

ಎಂತಹ ಜ್ವರಗಡ್ಡೆಯನ್ನೂ ಕಳೆಯುವುದು.

ವಿಳಾಸ:— ಗಣೇಶ ರಾಮಚಂದ ಕರ್ಕಿ ಮತ್ತು ಕಂಪನಿ.
ಗಿರಗಾಂವ, ಮುಂಬಯಿ.

“ಕಾಡುಕೋಣ” ದ ಗುರುತಿನ

ಕಾಗದವು

ಕನ್ನಡ ನಾಡಿನದು!

ಬರೆಯಲಿಕ್ಕೂ ಮುದ್ರಣಕ್ಕೂ ತಕ್ಕುದಾದುದು.

ಅಧಿಕೃತ ಪ್ರಸಾರಕರು: ಜಿ. ಕೆ. ಕೇಳಕರ

ಸ್ವದೇಶಿ ಪೇಪರ್ ಮಾರ್ಟ್, ಧಾರವಾಡ.

ಕಾಣುತ್ತಲಿದ್ದರು. ಪ್ರತಿಯೊಂದು ದಿವಸವೂ ರಾತ್ರಿ ಮಲಗಲು ಹೋಗುವುದಕ್ಕೆ ಮುಂಚಿತವಾಗಿ, ಆಫೀಸುರೂಮಿನಲ್ಲಿರುವ ಕಾಗದ-ಪತ್ರಗಳನ್ನು ಸರಿಯಾಗಿ ಜೋಡಿಸಿಡುವಂತೆ ರಾಮುವಿಗೆ ಹೇಳಿ, ರಾಯರು ಮಲಗಲು ಹೋಗುತ್ತಲಿದ್ದರು. ಅವನು ಇದೇ ತಕ್ಕ ಸಮಯವೆಂದು ಅಲ್ಲಿರುವ ಪುಸ್ತಕಗಳನ್ನು ಓದುವನು. ಅವನ ಜ್ಞಾನವು ಬಹು ಸೂಕ್ಷ್ಮವಾದದ್ದು, ಜ್ಞಾಪಕಶಕ್ತಿಯಾದರೋ ಅಪಾರವಾದದ್ದು!

ಒಂದು ದಿವಸ— ಅಪೂರ್ವವಾಗಿ ಬಂದಿದ್ದ ಕ್ರಿಮಿನಲ್ ಕೇಸನ್ನು ಹೇಗೆ ನಡೆಯಿಸುವುದೆಂದು ತಿಳಿಯದವರಾಗಿ ರಾಯರು ಚಿಂತಿಸುತ್ತಿದ್ದು, ರಾತ್ರಿ ಪದ್ಧತಿಯಂತೆ—ಅವನನ್ನು ತಮ್ಮ ಕೊಠಡಿಯಲ್ಲಿದ್ದ ಕಾಗದ-ಪತ್ರಗಳನ್ನು ಅಣಿಮಾಡೆಂದು ಹೇಳಿ ಮಲಗಲು ಹೊರಟುಹೋದರು.

ರಾಮುವು ತನ್ನ ಯಜಮಾನರು ಆಶ್ಚರ್ಯಗೊಳ್ಳುವಂತೆ, ಕೇಸನ್ನು ಓದಿ ಪರಿಶೀಲಿಸಿದನು. ತಕ್ಷಣ, ಈ ರೀತಿಯಾಗಿ ನಡೆದುಕೊಂಡಲ್ಲಿ ಅನುಕೂಲವಾಗುವುದೆಂದು ಬರೆದು ಆ ಪತ್ರದ ಕಟ್ಟಿನೊಳಗೆಯೆ ಇಟ್ಟುಬಿಟ್ಟನು. ಆ ಬರೆಹವೇ ಮೊಟ್ಟಮೊದಲು ರಾಮುವಿನ ರಹಸ್ಯವು ಬಹಿರಂಗವಾಗುವುದಕ್ಕೆ ಮೂಲ ಕಾರಣವಾಯಿತು. ಮರುದಿನ ಅದನ್ನು ಓದಿ ಆಶ್ಚರ್ಯಗೊಂಡ ವಕೀಲರು ರಾಮುವನ್ನು ಕರೆದು, “ಈ ಕಾಗದ ಯಾವುದು?” ಎಂದು ಕೇಳಿದರು. ಅವನು ತನಗೆ ಗೊತ್ತಿಲ್ಲವೆಂದು ಹೇಳಿಬಿಟ್ಟನು. ಕೇಸು ಪ್ರಾರಂಭವಾಯಿತು; ಪ್ರತಿಯೊಂದು ದಿವಸವೂ ಅದನ್ನು ನಡೆಯಿಸುವ ದಾರಿಯನ್ನು ಕುರಿತು ವಿವರಿಸುವ ಕಾಗದವು ರಾಯರಿಗೆ ದೊರೆಯಿತು. ಅವರು ತಾನೇ ಎಷ್ಟು ದಿನಗಳವರೆಗೆ ಇದನ್ನು ಅರಿಯದೆ ಇರಬಲ್ಲರು? ಒಂದು ದಿನ ಕೈಯೂ ಕಳವೂ ಆಗಿ ರಾಮುವನ್ನು ಹಿಡಿದುಬಿಟ್ಟರು. ಅನಂತರದಲ್ಲಿ ಅವನ ಪೂರ್ವಚರಿತ್ರೆಯೆಲ್ಲವನ್ನೂ ಕೇಳಿ ತಿಳಿದರು. ಅವರಿಗಲ್ಲದೆ ಮಿಕ್ಕವರಿಗೆಲ್ಲವೂ ತಾನು ಅಡಿಗೆಯವನಾಗಿಯೇ ಇರಬೇಕೆಂದು ರಾಮುವು ಕೇಳಿಕೊಂಡನು. ಅದೇ ತನಗೆ ರಾಯರು ಮಾಡಬೇಕಾದ ಪ್ರತ್ಯುಪಕಾರವೆಂದು ಪ್ರಾರ್ಥಿಸಿದನು. ಎಂತಹ ನಮ್ರತೆ! ಎಂತಹ ಸದ್ಗುಣ!

ಕ್ರಮೇಣ ರಾಯರಿಗೆ ಈ ರಹಸ್ಯವಾದ ಪರಿಸ್ಥಿತಿಯು ಸರಿಯಾಗಿ ತೋರಲಿಲ್ಲ. ತನ್ನ ಪತ್ನಿಯು ಅಂದು ಅಕಸ್ಮಾತ್ತಾಗಿ ಸುಶೀಲೆಯ ವಿವಾಹದಲ್ಲಿ ರಾಮುವನ್ನು ಸಂಬಂಧಪಡಿಸಿ ಮಾತನಾಡುವಲ್ಲಿ, ರಾಯರು ಜ್ಞಾನೋದಯವಾದವರಂತೆ ಆನಂದಗೊಂಡರು; “ಹಾಗೆ ಮಾಡಬಾರದೇಕೆ?” ಎಂದು ಆಲೋಚಿಸಿದರು. ಆ ಊರಿನಲ್ಲಿ ಮಾಡಿದರೆ ಚೆನ್ನಾಗಿರಲಾರದೆಂದು ಭಾವಿಸಿದರು. ಹಲವು ದಿವಸಗಳವರೆಗೆ ಆಲೋಚಿಸಿದ ನಂತರದಲ್ಲಿ, ಮದರಾಸಿಗೆ ಹೋಗಿಬಿಟ್ಟಲ್ಲಿ ರಾಮುವು ಅಡಿಗೆಯ ಕೆಲಸವನ್ನು ತೊರೆದುಬಿಟ್ಟು ವಕೀಲನಾಗಬಹುದು; ಸುಶೀಲೆಗೆ ಪತಿಯೂ ಆಗಬಹುದು’ ಎಂದು ನಿಶ್ಚಯಿಸಿದರು.

ಇವೆಲ್ಲ ಸಮಾಚಾರಗಳನ್ನು ಅಲಮೇಲಮ್ಮನು ರಾಯರಿಂದ ಕೇಳಿದಳು. ಅವಳಿಗೆ ಪ್ರತ್ಯುತ್ತರ ಕೊಡಲು ಸಾಧ್ಯವಾಗಲಿಲ್ಲ. “ಈಗ ನಿನಗೆಲ್ಲವೂ ತಿಳಿದುಬಿಟ್ಟಿತಲ್ಲವೇ? ಅವನಿಲ್ಲದಿದ್ದಲ್ಲಿ ನಾನು ಒಂದು ಸವೆದುಹೋದ ಕಾಸಿಗೆ ಸರಿಸಮಾನನಾದವನಷ್ಟೇ! ಅವನೂ ವಕೀಲನಾಗಿ ನನ್ನೊಡನೆ ಸೇರಿ ಬಿಟ್ಟಲ್ಲಿ, ಅನಂತರದಲ್ಲಿ ನಮ್ಮಿಬ್ಬರನ್ನೂ ತಡೆಯಬಲ್ಲವರಾರು!” ಎಂದರು ರಾಯರು.

ಹೇಗೋ ರಾಯರು ಅಲಮೇಲಮ್ಮನ ಸಮ್ಮತಿಯನ್ನು ಪಡೆದುಬಿಟ್ಟರು. ಉದ್ಯೋಗದಿಂದ ಮೇಲುಕೀಳು ಎಂಬುದು ಒಂದೂ ತಾರತಮ್ಯವಿಲ್ಲವೆಂಬುದನ್ನು ಸುಶೀಲೆಯು ಪ್ರಾರಂಭಪಾಠದಿಂದಲೂ ಕಲಿತವಳು. ಆದುದರಿಂದ ಅವಳಿಗೆ ರಾಮುವಿನ ಹತ್ತಿರದಲ್ಲಿ ಎಂದೂ ಕೀಳುಭಾವನೆಯು ತೋರಲಿಲ್ಲ. ಅಲ್ಲದೆ ಕ್ರಮೇಣ ಅವಳಿಗೆ ತಿಳಿಯದಂತೆಯೆ ರಾಮುವಿನ ವಿಷಯದಲ್ಲಿ ಒಂದು ರೀತಿಯಾದ ಪ್ರೇಮಭಾವವು ಆಕೆಯ ಹೃದಯದಲ್ಲಿ ಜನಿಸುತ್ತ ಬಂದಿತು.

* * *

ಈಗ ಮದರಾಸಿನಲ್ಲಿ ರಾಮರಾಯರೂ ನಾರಾಯಣರಾಯರೂ ಒಂದುಗೂಡಿ ವಕೀಲವೃತ್ತಿಯನ್ನು ನಡೆಯಿಸುತ್ತಲಿರುವರು. “ಎಲ್ಲವೂ ಸುಶೀಲೆಯ ಭಾಗ್ಯವಿಶೇಷ” ಎಂದು ತಾವು ಉನ್ನತವಾದ ಪದವಿಯನ್ನು ಹೊಂದಲು ಕಾರಣವನ್ನು ಹೇಳಿಕೊಳ್ಳುತ್ತಾ, ಅಲಮೇಲಮ್ಮ ತನ್ನ ದೇಹದಲ್ಲಿ ಧರಿಸಿರುವ ವಜ್ರಖಚಿತವಾದ ಆಭರಣಗಳನ್ನು ಒಂದು ಕುಲುಕು ಕುಲುಕುತ್ತಾಳೆ. ರಾಮು ತನ್ನ ಅಡಿಗೆಯ ಕೆಲಸವನ್ನು ತೊರೆದು ವಕೀಲವೃತ್ತಿಯನ್ನವಲಂಬಿಸಿದರೂ, ಅವನ ಹಿಂದಿನ ನಮ್ರತೆಯೂ ವಿನಯವೂ ಅವನನ್ನು ಬಿಟ್ಟು ಆಗಲಲಿಲ್ಲ. ಆ ಸದ್ಗುಣಗಳು ಸುಶೀಲೆಯ ಹತ್ತಿರದಲ್ಲೂ ಪ್ರತಿಫಲಿಸುತ್ತಲಿವೆ. ಇಬ್ಬರೂ ಪ್ರೇಮದಿಂದ ಬಂಧಿತರಾಗಿ ಯಾವಾಗಲೂ ಒಂದೇರೀತಿಯಾಗಿ ಬಾಳುತ್ತಲಿದ್ದಾರೆ.

ನನ್ನ ಗೆಳೆಯ ★ ಸ್ಟ್ಯಾಲಿನ್

ಶ್ರೀ. ಕು. ಶಿ. ರಾಯರು,
ಮಂಗಳೂರು

ರಷ್ಯನರ ರಕ್ತವನ್ನು ನಿರಂತರವೂ ಬಿಸಿಗೊಳಿಸುತ್ತಿರುವ ವೀರ ಸ್ಟ್ಯಾಲಿನ್

★

ಮಿಸ್ ರೊಸಿಟಾ ಫ್ಫೋರ್ಬ್ಸ್—ಹೆಸರಾಂತ ಒಬ್ಬ ಆಂಗ್ಲಪತ್ರಿಕೋದ್ಯೋಗಿನಿ—ಹಲವೊಮ್ಮೆ ಸ್ಟ್ಯಾಲಿನನ್ನು ಸಂಧಿಸಿದ್ದಳು ; ಆದರೆ ಆತ ಮುಗುಳು ನಕ್ಕುದು ಒಮ್ಮೆಯೇ ಒಮ್ಮೆ. ಆ ಮಿಸ್, “ ನೀನು ಜೀವನದಲ್ಲಿ ಅತಿಯಾಗಿ ದ್ವೇಷಿಸುವುದು ಯಾವುದನ್ನು?” ಎಂದು ಪ್ರಶ್ನಿಸಿದಾಗ, ಮುಗುಳ್ನಗುವಿನೊಡನೆ ಉತ್ತರವೂ ಬಂತು : “ ದೊಡ್ಡ, ಗುಡ್ಡ-ಗಾತ್ರದ— ವಾಚಾಳಿಗಳಾದ— ಹೆಂಗುಸರನ್ನು ” ಎಂದು.

★

ನಾನು ಉತ್ತರರಶ್ಯಕ್ಕೆ ಮೊದಲ ಬಾರಿಗೆ ಹೋದಾಗ, ಅಲ್ಲಿಯ ದರ್ಶನೀಯ ವಿಷಯಗಳಲ್ಲೆಲ್ಲ ಪ್ರಥಮವಾಗಿ “ ಸ್ಟ್ಯಾಲಿನ್ ” ಎಂದು ಗುರುತುಮಾಡಿಕೊಂಡೆ.....ಆತನನ್ನು ನೋಡುವ ಸುಯೋಗವಾದರೂ ನನಗೆ ದೊರೆಯದೆ ಹೋಗಲಿಲ್ಲ.

ಅಲ್ಲಿಯ ಸಾಮಾನ್ಯ ಜನತೆಯ ರೀತಿ ಮಟ್ಟಗಳ ಸೂಕ್ಷ್ಮ ನಿರೀಕ್ಷಣೆ ಮಾಡೋಣವೆಂದು, ಗಂಟೆ-ಗಂಟೆಗಳನ್ನೇ ನಾನು ಸಾಮಾನ್ಯ ನ್ಯಾಯಾಸ್ಥಾನಗಳಲ್ಲಿ ಕಳೆದೆ.

ನನಗೆ ಆಶ್ಚರ್ಯವಾಯಿತು,—ತಮ್ಮ ಮಟ್ಟದಿಂದಲೇ ತಾತ್ಕಾಲಿಕ ನ್ಯಾಯಾಧೀಶರಾಗಿ ಆರಿಸಲ್ಪಟ್ಟ ಗಂಡುಸು-ಹೆಂಗುಸುರು, ತಮ್ಮವರೇ ಆದ ಹಳ್ಳಿಗರಿಗೆ ಅಷ್ಟು ಚೆನ್ನಾಗಿ ತೀರ್ಪು ಕೊಡುವುದನ್ನು ಕಂಡು.

ಇಂತಹರಲ್ಲೇ ಒಬ್ಬ ನ್ಯಾಯಶಾಸ್ತ್ರದ ಗಂಧ-ಗಾಳಿಯಿಲ್ಲದಿದ್ದ, ಆದರೆ ಚೆನ್ನಾದ ‘ ತಲೆ ’ ಹೊದ್ದುಳಿದ್ದ, ಬಿರಿದ ಎದುರುಹಲ್ಲಿನ, ದೊರಗಾದ ಕರಿತಲೆಯ ಮನುಷ್ಯ, ನನ್ನನ್ನು ನಾಲ್ಕೇ ಕೋಣೆಗಳ ಒಂದು ಮನೆಗೆ—ಸತ್ಕರಿಸುವುದಕ್ಕಾಗಿ— ಆಹ್ವಾನಿಸಿದ.

ಆ ಕಿರಿಯದಾದ ಸ್ಥಳದಲ್ಲಿ ಕೆಲವೊಂದು ಜನ ಯುವಕರು, ಬಿಡುವಿಲ್ಲದೆ ಮಾತನಾಡುತ್ತಾ, ಕೊನೆಯಿಲ್ಲದೆ ಧೂಮ್ರಪಾನ ಮಾಡುತ್ತಾ, ಗ್ಲಾಸುಗಟ್ಟಲೆ ಕೆಳತರಗತಿಯ ಚಾ ಕುಡಿಯುತ್ತಾ ಹೊತ್ತುಗಳೆಯುತ್ತಿದ್ದರು.

ಹೊರಗೆ ಹಿಮ ಬೀಳುತ್ತಿದ್ದು, ಶೀತವಾಯು ಒಳಕ್ಕೆ ಬೀಸದಂತೆ ಕಿಟಕಿಗಳನ್ನು ಬಲವಾಗಿ ಮುಚ್ಚಿದ್ದರು. ಕೋಣೆಯಲ್ಲಿ ಒಟ್ಟು ನಾಲ್ಕೇ ಕುರ್ಚಿಗಳಿದ್ದುವು. ಹೀಗಾಗಿ ಅತಿಥಿಗಳೆಲ್ಲ, ಸ್ಥಳಸಿಕ್ಕಲ್ಲಿ—ಮೇಜಿನ ಮೇಲೂ ಮುರಿದು ಬಿದ್ದಿದ್ದ ಸ್ಟ್ಯಾಂಡ್—ಪಾತ್ರಗಳ ಮೇಲೂ—ಕುಳಿತುಕೊಂಡರು.

ಸರ್ವಾಧಿಕಾರಿಯ ಪತ್ನಿ

ಅವರನಡುವೆ, ಸಣ್ಣಪ್ರಾಯದ—ಮುದುರಿ ಬಿದ್ದದ್ದೊಂದು ಬ್ಲೌಸ್ ತೊಟ್ಟಿದ್ದ—ಕರಿಯ ಹಳತಾದ ಲಂಗ ಧರಿಸಿದ್ದ—ಹೆಂಗುಸೊಬ್ಬಳಿದ್ದಳು. ಅವಳ ಮುಖದಲ್ಲಿ ಗೆಲುವಿರಲಿಲ್ಲ. ಆ ಕರಿಯ ಕೇಶರಾಶಿ, ಸುರುಳಿ ಸುರುಳಿಯಾಗಿ ಆಳೆಯ ಕತ್ತಿನ ಸುತ್ತು ಬಿದ್ದಿತ್ತು. ಕಣ್ಣುಗಳು ಚೈತನ್ಯಯುಕ್ತವಾಗಿದ್ದುವು.

ಆಕೆ ಮಾತನಾಡುತ್ತಿದ್ದಂತೆಲ್ಲಾ, ಆಕೆಯ ಎರಡೂ ಕೈಗಳು ಮಾಡುತ್ತಿದ್ದ ಚಲನವಲನವನ್ನು ನೋಡುತ್ತಾ, ರಷ್ಯದಲ್ಲೆಲ್ಲೂ ಕಂಡು ಬಾರದಿರುವ ರಸಿಕತೆ ಅವಳೊಬ್ಬಳಲ್ಲಾದರೂ ಇದೆ-ಯೆಂಬುದನ್ನರಿತುಕೊಂಡೆ.

“ ಆಕೆ ಕಾಮ್ರೇಡ್ ಸ್ಟ್ಯಾಲಿನ್‌ನ ಹೆಂಡತಿ ” ಎಂದು ಆ ನ್ಯಾಯಾಧೀಶನು ನನಗೆ ತಿಳಿಯ ಹೇಳಿ, ಅವಳೊಡನೆ ಸ್ವಾಭಾವಿಕ ಸಲುಗೆಯಿಂದ ಮಾತನಾಡಿದನು.

ಬಹುಶಃ ಅವರು ಸ್ಟ್ಯಾಲಿನ್‌ನನ್ನು ನಾನು ಸಂಧಿಸುವ ಸಂಭವಗಳ ಕುರಿತು ಮಾತನಾಡುತ್ತಿದ್ದಿರಬೇಕು.

“ ಭೇಟಿಗೆ ನೀನು ಕೇಳಿದರೆ, ಅವನು ಸಮ್ಮತಿಸಲಾರ; ಆದರೂ ಅವನನ್ನು ಸಂಧಿಸಬಹುದು ! ” ಎಂದು ಆ ನ್ಯಾಯಾಧೀಶ ಆಶ್ವಾಸನವನ್ನಿತ್ತ.

ಅಷ್ಟು ಅಲ್ಪ ಹೊತ್ತಿನಲ್ಲಿ ನಾನು ಹಲವು ಮಂದಿಯ ಗೆಳೆತನ ಮಾಡಿಕೊಂಡು ಬಿಟ್ಟಿದ್ದೆ; ಹಲವಾರು ಭಾಷೆಗಳ ತುಣುಕುಗಳನ್ನು ಒಂದುಗೂಡಿಸಿ ನಾನು ಸ್ಟ್ಯಾಲಿನ್ನನ ಪತ್ನಿಯೊಡನೆ ಸಂಭಾಷಿಸಿದ್ದೆ. ಆವಳೊಂದು ಕಾರ್ಖಾನೆಯಲ್ಲಿ ಮಜೂರಳೂ ಉಪಾಧ್ಯಾಯಿನಿಯೂ ಆಗಿದ್ದವಳು. ನಮ್ಮಿರ್ವರೊಳಗೆ ಹಲವು ಹೋಲಿಕೆಗಳಿದ್ದುವು.

" ಭೇಟಿಗೆ ಬೇಕಾದ ಏರ್ಪಾಡಾಗುವುದು! " ಎಂದು ನಾವು ಅಗಲುವಾಗ ಆಕೆ ಹೇಳಿದಳು.

ಆದರೆ ಈ ಏರ್ಪಾಡುಗಳು ಫಲಪ್ರದವಾಗಲಿಲ್ಲ. ಮೊದಲ ಬಾರಿಗೆ ನ್ಯಾಯಾಧೀಶನು ನನ್ನನ್ನು ಕರೆದೊಯ್ದಾಗ, ಸೆರೆಮನೆಯಂತಿದ್ದ ಕ್ರೆಮ್ಲಿನ್ನಿನ ಹೆಬ್ಬಾಗಿಲ ಹತ್ತಿರದಿಂದಲೇ ಹಿಂದಿರುಗಬೇಕಾಯಿತು. ಎಷ್ಟು ವಾದಿಸಿದರೂ ಪ್ರಯೋಜನವಾಗಲಿಲ್ಲ.

ಆ ಕ್ಯಾಬೇಜ್ ಮತ್ತು ಬೆವರಿನ ಗಂಧಹೊಡೆಯುತ್ತಿದ್ದ ಕೀಲ್ತರಗತಿಯ ಕೋಣೆಗಳಲ್ಲಿ ಇನ್ನಷ್ಟು ಜನರ ಗುಂಪು; ಕೊನೆಯಿಲ್ಲದ ಮಾತುಕತೆ.

ಮರಳಿ ಆ ನ್ಯಾಯಾಧೀಶ ನನ್ನನ್ನು ಕರೆದೊಯ್ಯಲು ಬಂದ. ಈ ಬಾರಿ ಅಧಿಕಾರಿಯೊಬ್ಬ ನನ್ನನ್ನು ಕ್ರೆಮ್ಲಿನ್ನಿನ ಒಳಗೆ ಸಾಗಿಸಿದ. ಹಲವೆಡೆಗಳಲ್ಲಿ, ಅಲ್ಲಲ್ಲಿ ನಿಂತು, ಅಧಿಕಾರಿಗಳ ಪೋಷಾಕಿನಲ್ಲಿದ್ದವರ-ಮತ್ತು ಮಾರ್ಗಗುಡಿಸುವವರ ಉಡುಗೆಯಲ್ಲೇ ಇದ್ದವರ ಸಾವಿರಾರು ಪ್ರಶ್ನೆಗಳಿಗೆ ಉತ್ತರವೀಯುತ್ತ, ವಿಶಾಲವಾದ ಮುರುಕು ಡೆಸ್ಕೊಂದರ ಎದುರು ಕುಳಿತಿದ್ದ, ೧೬೦ ಮಿಲಿಯ ಮಂದಿಯ ಅಧಿಪನ ಕೋಣೆಯತ್ತ ಸಾಗಿದೆವು.

ಸ್ಟ್ಯಾಲಿನ್‌ನನ್ನು ಕಂಡೆ

ನಾನು ಮೊದಲನೆಯ ಬಾರಿಗೆ ಸ್ಟ್ಯಾಲಿನ್‌ನನ್ನು—ಚೌಕ ಆಯ-ಕಟ್ಟಿನ, ದೀರ್ಘ ಬಾಹುಗಳ, ಮುಗುಳು ನಗೆಯಿರದ, ಮುಖದ ಮೇಲೆ ಆಳವಾದ ನೀಳವಾದ ರೇಖೆಗಳಿದ್ದ, ದಪ್ಪನಾಗಿ ಕೊನೆಗೊಳ್ಳುವ ಮೂಗಿನ, ಹಿರಿದಾದ ಕಪ್ಪಗಿನ ಮೀಸೆಯ, ಅಗಲ ಕಿರಿದಾದ-ಎವೆಯಿಕ್ಕುತ್ತಿದ್ದ ಕಣ್ಣುಗಳ, ದೊರಗಾದ ತಲೆಗೂದಲ, ಹಲವು ಜೇಬುಗಳಿದ್ದು-ಕೊರಳ ಬಳಿ ಬಿಗಿಯಾಗಿದ್ದ-ಖಾಕಿ ತರಟನ್ನು ತೊಟ್ಟಿದ್ದ ಸ್ಟ್ಯಾಲಿನ್‌ನನ್ನು ಕಂಡೆ.

ಸ್ಟ್ಯಾಲಿನ್ ಬೆಳಕಿಗೆ ಬೆನ್ನುಮಾಡಿ ಕುಳಿತಿದ್ದು ರಷ್ಯನ್ ಭಾಷೆಯಲ್ಲಿ ಮಾತನಾಡಿದ. ಭಾಷಾಂತರಕಾರನೊಬ್ಬನ ಸಹಾಯದಿಂದ ನಾನು ಸಂಭಾಷಣೆ ನಡೆಯಿಸಿದೆ. ಆತ ನನ್ನನ್ನು ಸರಿಯಾಗಿ ಕಣ್ಣೆತ್ತಿ ನೋಡಿದುದೇ ಇಲ್ಲ. ಮೆಲ್ಲನೆ, ಕಷ್ಟದಿಂದ—ಕೆಲವು ಅರ್ಥಹೀನ ಗೆರೆಗಳನ್ನು ಕೊಳಕಾಗಿದ್ದ ಬ್ಲಾಟಿಂಗ್ ಪೇಪರಿನ ಮೇಲೆ ಎಳೆಯುತ್ತಿದ್ದ.

ನಾನು ಸರ್ವಾಧಿಕಾರಿಗಳನ್ನು ಕುರಿತು ಮಾತನಾಡಿದಾಗಲಷ್ಟೇ ಆ ಬೃಹದಾಕೃತಿಯ ಆಳು ಸಂಭಾಷಣೆಯಲ್ಲಿ ಆಸಕ್ತಿ ತೋರಿದ. ಅವನು ಹೇಳಿದುದಿದು: " ನಾನು ಸರ್ವಾಧಿಕಾರಿಯಲ್ಲ; ಮುಂದೆ ಎಂದಿಗೂ ಸರ್ವಾಧಿಕಾರಿಯಾಗಲಾರೆ! "

ತನ್ನ ಕುರಿತಾಗಿ ಆತ ಹೇಳುತ್ತ ನಡೆದ: " ನನ್ನನ್ನೊಂದು ಮಂತ್ರಿಮಂಡಲದ ಅಧ್ಯಕ್ಷನೆನ್ನಿರಿ.... ನಾನು ಲೆನಿನ್‌ರ ಕಾರ್ಯಕ್ರಮದಂತೆ ಮುಂದೆ ಸಾಗುತ್ತಿರುವೆನು; ಅಷ್ಟೆ! ತಡೆಯಿಲ್ಲದೆ, ತಡವರಿಸದೆ, ಸ್ಥಿರಣೆಯಿಂದ ಮುಂದೆ ಸಾಗುವೆನು! "

ರಷ್ಯದ ಕುರಿತು ಮಾತನಾಡಿದಾಗಲೆಲ್ಲ ಸ್ಟ್ಯಾಲಿನ್‌ನನ್ನನ್ನು ತಿದ್ದುತ್ತಿದ್ದ.

ಒಮ್ಮೆ, " ನಾನು ಜನತೆಗಾಗಿ ದುಡಿಯುತ್ತಿದ್ದೇನೆ, ರಷ್ಯಕ್ಕೋಸ್ಕರವಲ್ಲ " ಎಂದೂ, ಇನ್ನೊಮ್ಮೆ "ನನ್ನ ಆಸಕ್ತಿಯಿರುವುದು ರಷ್ಯದಲ್ಲಲ್ಲ; ಜಗತ್ತಿನಲ್ಲಿ " ಎಂದೂ ಆತ ತಿದ್ದಿ ಹೇಳಿದುದು ನೆನಪಿದೆ.

ಕರಗದ ಕಲ್ಲೆದೆ

ಆ ಸಂದರ್ಶನಕ್ಕೆ ಒಂದು ವರುಷದ ಮೊದಲು ಪರ್ಸಿಯಾ—ಆರ್ಮೇನಿಯನ್ ಗಡಿಗೆ ಬೇರೆ ಯಾವುದೋ ಕಾರಣದಿಂದ ನಾನು ಹೋಗಿದ್ದೆ. ಅಲ್ಲಿಯ ಧನಿಕ-ಕೃಷಿಕ '**ಕುಲಕ** (Kulaks)' ರೆಂಬ ಜಮೀನ್ದಾರರನ್ನು, ರಷ್ಯನರು ಹಿಂಸೆಯನ್ನುಪಯೋಗಿಸಿ—ಒಂದೋ ಈಸಿ ಪಾರಾಗುವುದಕ್ಕಾಗಿ-ಇಲ್ಲವೆ ಮುಳುಗಿ ಸಾಯುವುದಕ್ಕಾಗಿ—ಆರಾಸ್ ಹೊಳೆಗೆ ನೂಕಿ ಹಾಕಿದ್ದುದನ್ನು ನಾನು ಕಂಡಿದ್ದೆ.

ನಾನು ಈ ಕುರಿತು ಸ್ಟ್ಯಾಲಿನ್‌ನೊಡನೆ ಮಾತನಾಡಿದೆ. ಕ್ರಾಂತಿಯ ಮೊದಲ ವರುಷಗಳಲ್ಲಿ, ಮಧ್ಯ ಆಸ್ಯದ ಕಿಸಾನರನ್ನು ತಮ್ಮ ಆಹಾರವನ್ನು ಬೆಳೆಯಿಸಗೊಡುವುದರ ಬದಲು, ರಫ್ತುಗೊಳಿಸುವುದಕ್ಕಾಗಿ ಹತ್ತಿಯ ಕೃಷಿ ಮಾಡುವಂತೆ ಒತ್ತಾಯಪಡಿಸಿದುದನ್ನೂ, ತತ್ಫಲವಾಗಿ ಉದರಂಭರಣ ಮಾಡಿಕೊಳ್ಳಲಾರದೆ ಅಸಂಖ್ಯಾತ ಮಂದಿ ಸತ್ತುದನ್ನೂ ಸ್ಟ್ಯಾಲಿನ್‌ನ ನೆನಪಿಗೆ ತಂದುಕೊಟ್ಟೆ.

ನನ್ನ ನುಡಿ ಸ್ಟ್ಯಾಲಿನ್ನಿನ ಮೇಲೆ ಯಾವಬಗೆಯ ಪರಿಣಾಮವನ್ನೂ ಮಾಡಲು ಶಕ್ತವಾಗಲಿಲ್ಲ. " ಮಹಾಯುದ್ಧದಲ್ಲಿ ಮಡಿದವರೆಷ್ಟು ಮಂದಿ ? " ಎಂದು ಆತ ಪ್ರಶ್ನಿಸಿದ.

" ೭,೪೦೦,೦೦೦ " ಎಂದು ಸಂಖ್ಯೆಯನ್ನೊದಗಿಸಿದವನು ಭಾಷಾಂತರಕಾರನೆಂದು ತೋರುತ್ತದೆ. ನಾನು ಸಮ್ಮತಿಸಿದೆ.

ಸ್ಟ್ಯಾಲಿನ್ ಹೇಳಿದ:— " ನಿಷ್ಕಾರಣವಾಗಿ ೭,೪೦೦,೦೦೦ ಮರಣಗಳು! ಎಂದ ಮೇಲೆ ನಮ್ಮ ನಷ್ಟಗಳನ್ನು ಅತ್ಯಲ್ಪವೆಂದು ಪರಿಗಣಿಸಬೇಕು. ಏಕೆಂದರೆ ಮಹಾಯುದ್ಧವು ಕೊನೆಗೊಂಡುದು ಅಶಾಂತಿಯಲ್ಲಿ; ಆದರೆ ನಮ್ಮ ಕ್ರಾಂತಿಯು ಫಲವಾಗಿ ಅಖಿಲ ಮಾನವ ಕೋಟಿಯ ಉದ್ಧಾರಕ್ಕಾಗಿರುವ ಒಂದು ಯೋಜನೆಯಲ್ಲಿ ಕೈಯಿಕ್ಕುವುದಕ್ಕೆ ನಾವು ಶಕ್ತರಾಗಿದ್ದೇವೆ! "

ಪರಿಪಕ್ವ ಯೋಜನೆಯಿಲ್ಲದೆ ಅವನು, ಹಲವೊಮ್ಮೆ ಭವಿಷ್ಯತ್ತನ್ನು ಕುರಿತು ಮಾತನಾಡಿದನು....ರೈತನೊಬ್ಬ ಮುಂದಿನ ವರುಷದ ಬೆಳೆಯ ಕುರಿತು ಹೇಳುವಂತೆ. ಮಾತನಾಡಲು ಶಬ್ದಗಳನ್ನು ಹುಡುಕುವುದು ಸ್ಟ್ಯಾಲಿನಿಗೆ ಕಷ್ಟದ ಕೆಲಸವಾಗಿತ್ತು:

"ಹತ್ತಿಪ್ಪತ್ತು ವರ್ಷಗಳ ಅವಧಿಯಲ್ಲೇ ಹೊಸ ನಾಗರಿಕತೆಯೊಂದರ ಮೇಲೆ ನೀವು ತೀರ್ಪನ್ನು ಕೊಡಬಾರದು. ನಾವೀಗ ನಿರ್ಮಿಸುತ್ತಿರುವುದರ ಮೇಲೆ ಭಾವೀ ನಾಗರಿಕತೆ ಆಧರಿಸಿದೆ. ನಾವಿನ್ನೂ ಕಾರ್ಯಾಸಕ್ತರಾಗಿರುವೆವಷ್ಟೆ,—" ಸ್ಟ್ಯಾಲಿನ್ ಹೇಳಿದ.

ರಷ್ಯದಲ್ಲಾಗುತ್ತಿರುವ ಬಂಧನ-ಶಿಕ್ಷೆಗಳನ್ನು ಕುರಿತು ನಾನು ಮಾತನಾಡಿದೆ. ನಡುರಾತ್ರಿಯಲ್ಲಿ ಕೈದಾಗುತ್ತಿರುವ ಕಥೆಗಳನ್ನೂ ಸಂಶಯಕ್ಕೊಳಗಾದವರು ಒಮ್ಮಿಂದೊಮ್ಮೆಲೆ ಅದೃಶ್ಯರಾಗುತ್ತಿರುವುದನ್ನೂ ಜನತೆ ಸದಾ ಭೀತಿಗ್ರಸ್ತವಾಗಿ ಜೀವಿಸುತ್ತಿರುವುದನ್ನೂ ಸ್ಟಾಲಿನ್‌ನಿಗೆ ತಿಳಿಯಹೇಳಿದೆ.

ನನಗೆ ದೊರೆತ ಉತ್ತರವಿದು :—"ರಷ್ಯದಲ್ಲಿ ಅದು ಯಾವಾಗಲೂ ಹಾಗೆಯೇ! ನೀವು,-ಟೀಕಾಕಾರರು-ಬೊಲ್ಶೆವಿಜಂ ಮತ್ತು ಮರ್ದನ ನೀತಿಗಳೊಳಗೆ ಭೇದವನ್ನು ಕಲ್ಪಿಸಲು ಇಚ್ಛಿಸುವುದಿಲ್ಲ."

ಮಜೂರರ ಜಗತ್ತು

"ಅಟ್ಲಾಂಟಿಕ್‌ನಿಂದ ಮೊದಲ್ಗೊಂಡು ಭಾರತ-ಚೈನಾಗಳ ತನಕ ಮಜೂರ್ ಜಗತ್ತೊಂದು ಹಬ್ಬಿದೆ." ಎಂದು ಸ್ಟ್ಯಾಲಿನ್ ಪ್ರಥಮ ಸಂದರ್ಶನದ ಕಾಲದಲ್ಲಿ ನುಡಿದುದು ನನಗೆ ನೆನಪಿದೆ. "ಯುದ್ಧವಿಲ್ಲದೆ ಆ ರಾಷ್ಟ್ರಗಳಲ್ಲಿ ಪರಿವರ್ತನೆ ಹೇಗೆ ಸಾಧ್ಯ?" ಎಂದು ನಾನು ಪ್ರಶ್ನಿಸಿದ್ದೆ.

"ಎಂದಿಗೂ— ಎಂದೆಂದಿಗೂ— ಸೊವಿಯೆಟ್ ರಿಪಬ್ಲಿಕ್ ಅಗ್ರೇಸರವೃತ್ತಿಯನ್ನು ಕೈಕೊಳ್ಳದು" ಎಂದು ಸ್ಟಾಲಿನ್ ಆಶ್ವಾಸನಪೂರ್ಣವಾಗಿ ನುಡಿದಿದ್ದ.

ಮೂರನೆಯ ಇಂಟರ್ ನ್ಯಾಶನಲ್ ಪರಿಷತ್ತನ್ನು ಕುರಿತು ನಾನು ಮಾತನಾಡಿದಾಗ, "ರಾಷ್ಟ್ರೀಯ ಸ್ವಾತಂತ್ರ್ಯಾಪಹರಣಕ್ಕಾಗಿ ಯುದ್ಧಹೂಡುವುದು ಬೊಲ್ಶೆವಿಕರ ಧರ್ಮವಲ್ಲ. ಧಂಡವಾಳ ರಾಷ್ಟ್ರಗಳಲ್ಲಿಯ ಪರಿಸ್ಥಿತಿಯ ಸೂಕ್ಷ್ಮ ನಿರೀಕ್ಷಣೆಯನ್ನು ನಾವು ಮಾಡುತ್ತಲೇ ಇರುವೆವು. ಅಲ್ಲಿಯ ಮಜೂರರಿಗಾಗಿ, ಅವಶ್ಯವಿದ್ದರೆ ಎಂತಹ ತ್ಯಾಗಗಳನ್ನು ಮಾಡುವುದಕ್ಕೂ ನಾವು ಹಿಂಜರಿಯಲಾರೆವು!" ಎಂದು ಸ್ಟ್ಯಾಲಿನ್ ಉತ್ತರಕೊಟ್ಟ.

ಇತರ ರಾಷ್ಟ್ರಗಳ ಜನತೆಯನ್ನು ಆಕರ್ಷಿಸುವುದಕ್ಕಾಗಿ ತಾವು ಉಪಯೋಗಿಸುವ ವಿಧಾನಗಳನ್ನು ವಿವರಿಸುತ್ತಾ, ರಷ್ಯದ ಆಕ್ರಮಣದ ಪ್ರಶ್ನೆ ಬಂದಾಗ ಸ್ಟ್ಯಾಲಿನ್ ಗರ್ಜಿಸಿದ್ದ: "ಆ ದಿನವನ್ನು— ಐದು ವಿದೇಶೀಯ ಸೇನೆಗಳು ನಮ್ಮ ನೆಲವನ್ನು ತುಳಿದ ದಿನವನ್ನು,—ನಾವು ಮರೆತಿಲ್ಲ. ನಮ್ಮ ಮಾತೃಭೂಮಿ ಮುಂದೆಂದೂ ಆತೆರನಾಗಿ ಭ್ರಷ್ಟವಾಗದು!"

....ನಾನು ಹೇಳುತ್ತೇನೆ. ಅಂತಹ ಭೀತಿ ತೋರಿಬಂದುದೇ ಆದರೆ, ಅದಕ್ಕುತ್ತರವಾಗಿ ನೀವು ಐಕ್ಯತೆಯನ್ನು ಕಾಣುವಿರಿ. ಪ್ರತಿಯೊಬ್ಬ ಗಂಡುಸೂ ಹೆಂಗುಸೂ ಮಗುವೂ—ನೀನು ಆ ಇಗರ್ಜಿಗಳಲ್ಲಿ ಕಂಡಿರಬಹುದಾದ ಹಳೆಯ ರೀತಿಯ ಜನರೂ— ಒಂದುಗೂಡುವರು. .... ಈ ಬಾರಿ ಸಶಸ್ತ್ರರಾಗಿ!"

ಸರ್ವಾಧಿಪನ ಸದನ

ಸ್ಟ್ಯಾಲಿನ್‌ನ ಪತ್ನಿಯೊಡನೆ ನಾನು ಹಲವೆಡೆಗಳಲ್ಲಿ ತಿರುಗಾಡಿದೆ. ಒಂದು ದಿನ ಅವರ ವಸತಿಗೂ ಹೋಗುವ ಯೋಗ ಒದಗಿತು. ಕ್ಯಾಬೇಜು ಪದಾರ್ಥ, ಕೀಳ್ತರಗತಿಯ ಸಾಬೂನು, ಕರಡುಕಾಗದ, ಕೊಳೆತ ನೀರು, ಹಳೆಯ ಚಾ ಇವುಗಳ ಪರಿಮಳದ ಮನೆಯಲ್ಲಿ ಸ್ಟ್ಯಾಲಿನನ್ ಪತ್ನಿಯ ವಾಸ. ಅದು ಒಂದು ಗುಡಿಸಿಲೂ ಅಲ್ಲ- ಮನೆಯೂ ಅಲ್ಲ! ಅಸೌಕರ್ಯದ ವಸತಿ!

ವಿದ್ಯುತ್ತಿನ ಬಲ್ಬೊಂದು ಮಸುಕಾಗಿತ್ತು. ಅದರ ಸರಿಗೆಯ ಮೇಲೆ ಧೂಳು ತುಂಬಿತ್ತು. ವಿದ್ಯುತ್ತಿನ ಒಲೆಯನ್ನು ಮೂಲಗುವ ಕೋಣೆಯ ಮೇಜಿನ ಮೇಲೆಯೆ ಇಟ್ಟಿದ್ದರು. ಅಡಿಗೆಯ ಅವಶಿಷ್ಟ ಒಲೆಯಮೇಲಿತ್ತು.... .... ಇದು ಸರ್ವಾಧಿಪನ ಸದನ!

ಕೆಲವೊಮ್ಮೆ ಸ್ಟ್ಯಾಲಿನ್ ಒಟ್ಟನೆ ಯೋಚಿಸುತ್ತಾ ಕುಳಿತುಬಿಡುತ್ತಿದ್ದ; ಇಲ್ಲವೆ ತನ್ನ ಬಲಗೈಯ ಹಿರಿಬೆರಳನ್ನು ಮುಂದೆ ಚಾಚಿ, ನನಗೆ ಒಂದಕ್ಷರವೂ ತಿಳಿಯದ ರಷ್ಯನ್ ಭಾಷೆಯಲ್ಲಿ ಮಾತನಾಡುತ್ತ ಇರುತ್ತಿದ್ದ. ಹಾಗೆ ಮಾತನಾಡುವುದು ಅಧಿಕಾರಿ ಜನಮಂಡಲಿಯೊಡನಲ್ಲ; ಸಾಮಾನ್ಯಮಜೂರರೊಡನೆ!

ಹೆಸರಿಲ್ಲದವಳು

ಒಮ್ಮೆ ಜರ್ಮನ್ ಭಾಷೆಯಲ್ಲಿ ಸ್ಟ್ಯಾಲಿನ್ ಥಕ್ಕನೆ ಹೇಳಿದ: "ಮಜೂರರಿಗೆ ಸಾಕಷ್ಟು ಸಿಕ್ಕಬೇಕು,.... ಇದಿಷ್ಟೇ ನನ್ನ ಆಶೆ!"

ಭವಿಷ್ಯತ್ತಿಗಾಗಿ ಆ ಯೋಜನೆಯನ್ನು ಕಾರ್ಯರೂಪಕ್ಕೆ ತರುತ್ತಿದ್ದರು. ಎಷ್ಟು ಜನ ಕಷ್ಟಪಟ್ಟರೇನು? ದುಃಖಿಗಳಾದರೇನು? ಅದೆಲ್ಲದರ ಬಳಿಕ, 'ಸಮಾನ ಕೆಲಸದ ಮಜೂರರಿಗಳ ಹೊಸ ಮಾನವಕೋಟಿ'ಯೊಂದರ ನಿರ್ಮಾಣವಾಗುವುದು.

ನಾನವನನ್ನು ಹಲವುಬಾರಿ ಸಂಧಿಸಿದೆನಾದರೂ ನನ್ನ ಗುರುತನ್ನು ಹಿಡಿಯಲು ಆತ ಸಮರ್ಥನಾಗುತ್ತಿರಲಿಲ್ಲ. ನನ್ನ ಹೆಸರಂತೂ ಆತನಿಗೆ ಗೊತ್ತೇ ಇರಲಿಲ್ಲ.

ನಾನು ಇಂಗ್ಲಿಷು ಹೇಳಿಕೊಟ್ಟೆನಾದುದರಿಂದ, ಸ್ಟ್ಯಾಲಿನ್‌ನ ಪತ್ನಿಯ ಮಿತ್ರರೆಲ್ಲ ನನ್ನನ್ನು "ಇಂಗ್ಲಿಷ್ ಟೀಚರ್!" ಎಂದು ಕರೆದರು........ ನಾನು ಪುನಃ ಮೋಸ್ಕೋವನ್ನು ಸಂದರ್ಶಿಸಿದಾಗ, ಸ್ಟ್ಯಾಲಿನ್‌ನ ಪತ್ನಿ ತೀರಿಕೊಂಡಿದ್ದಳು.

ನನ್ನ ಹ್ಯಾಟ್

ಸ್ಟ್ಯಾಲಿನ್ ನನ್ನನ್ನು "ಧನಿಕರ ಹ್ಯಾಟಿನಲ್ಲಿರುವ ಹೆಂಗುಸು" ಎಂದು ಗಣಿಸಿದ್ದರೂ ಇರಬಹುದು. ಖಂಡಿತ ಹೇಳಲಾರೆ!

(೧೪೯ ನೆಯ ಪುಟಕ್ಕೆ ಮುಂದುವರಿದಿದೆ.)

ಮನೆಯಲ್ಲಿಯೆ ಹೊಲಿಗೆ ಕಲಿಯಿರಿ!

ಶ್ರೀ. ಹಳಪೇಟಿ ಚಿಂತಾಮಣಿರಾಯರು ಟಿ. ಸಿ. ಡಿ.

ಹೊಲಿಗೆಯ ಶಿಕ್ಷಕರು, ಕ. ಎ. ಬೋರ್ಡ್ ಧಾರವಾಡ.

★

ನೆಹರೂ ಅಂಗಿ

ಅಳತೆಗಳು :

೩೨ ಇಂಚು ಎದೆ. ೧೦೩/೪ ಇಂಚು ನಡು ಉದ್ದ. ೨೧ ಇಂಚು ಉದ್ದ. ೫೩/೪ ಇಂಚು ಭುಜ. ೧೬ ಇಂಚು ತೋಳು. ೧೧ ಇಂಚು ಕುತ್ತಿಗೆ

ಎಡಬಲಗಳಿಗೆ 'ಚೀಲಕಿಸೆ' ಗಳು. ಎದೆಯ ಮೇಲೊಂದು ಕಿಸೆ. ಸಾದಾ ಕೊರಳುಪಟ್ಟಿ.

ಚಿತ್ರಿಸುವುದು :

ಮುಂಭಾಗ

ಬ, ಅ, ಕ, ಕಾಟಕೋನ

ಅ, ದ=೫೩/೪" ಎಂದರೆ ಎದೆಯ ೧/೬

ಅ, ಟ=೧೦೩/೪" ನಡುಉದ್ದ.



ಆಕೃತಿ ನಂ. ೨

ಅ, ಕ=೨೧" ಉದ್ದ. ಅರಿವೆ ಕತ್ತರಿಸುವಾಗ, ಕೆಳಗಿನ ಮಡಿಕೆಗಾಗಿ ಉದ್ದಕ್ಕಿಂತ ೧ ಇಂಚು ಹೆಚ್ಚು ಇಟ್ಟುಕೊಳ್ಳಿ.

ದ, ಟ, ಕ ಬಿಂದುಗಳನ್ನು ಮುಂದೆ ಬೆಳೆಯಿಸುವುದು.

ಅ, ಇ =೧೩/೪ ಇಂಚು ಎಂದರೆ ಕುತ್ತಿಗೆಯ ೧/೬.



ಆಕೃತಿ ನಂ. ೧

ಅ, ಫ=೨ ಇಂಚು ಎಂದರೆ ಕುತ್ತಿಗೆಯ ೧/೬+೧/೬".

ಫ, ಇ ಚಿತ್ರದಂತೆ ಕೂಡಿಸುವುದು.

ಅ, ಬ=೫೩/೪" ಎಂದರೆ ಭುಜ.

ಬ, ವನ್ನು ನ, ಕ್ಕೆ ಸರಳ.

ಬ, ಗ=೩/೪" ಇ, ಗ ಭುಜ ಕೂಡಿಸುವುದು.

ನ, ಬ=೧"

ನ, ರ=೧೩/೪"

ಗ, ಲ, ರ ಬಗಲಿನ ಬಾಗನ್ನು ಚಿತ್ರದಂತೆ.

ಪ, ಚ= ೧/೬ ಇಂಚು.

ಪ, ಠ ಇದು. ಪ, ತ ಗಳ ೧/೨–೧ ಇಂಚು.

ಠ, ಎ=೧/೬ ಇಂಚು.

ರ, ಚ ಕೂಡಿಸುವುದು.

ಚ, ವನ್ನು ಮುಂದೆ ಎ, ಬಿಂದುವಿನಲ್ಲಿ ಹಾಯಿಸಿ ತಳಕ್ಕೆ ಕೂಡಿಸುವುದು.

ಹಿಂಭಾಗ

ಅ, ಡ=೧/೨"

ಡ, ಇ ಚಿತ್ರದಂತೆ ಕೂಡಿಸುವುದು.

ಲ, ದಿಂದ ಮುಂದೆ ೩ ನೂಲು ತೆಗೆದುಕೊಂಡು ಗ, ರ ಮುಂದಿನ ಬಾಗನ್ನು ಕೂಡಿಸುವುದು.

ಬಕ್ಕಣ

ದ, ಜ=೧ ಇಂಚು.

ನ, ಜ ಕೂಡಿಸುವುದು.

ನ, ದ ಮುಂದೆ ೩/೪ ಇಂಚು ತೆಗೆದುಕೊಂಡು, ಎದೆಯ ೧/೬ ಅಗಲು ಹಾಗೂ ಅಗಲಿಗಿಂತ ೧/೬ ಇಂಚು ಹೆಚ್ಚು ಉದ್ದ ಅಳತೆಯುಳ್ಳ ಕಿಸೆಯನ್ನು ಸಿದ್ಧಗೊಳಿಸಿಕೊಂಡು, ಚಿತ್ರದಲ್ಲಿ ತೋರಿಸಿದಂತೆ ಹಚ್ಚಬೇಕು.

ಚೀಲಕಿಸೆ

ರ, ಸ=೪ ಇಂಚು.

ಸ, ಣ= ೪ ಇಂಚು ಎಂದರೆ ಎದೆಯ ೧/೮+೧/೨ ಇಂಚು.

ಸ, ಣ ಕಿಸೆಯ ಬಾಯಿಯ ಕಚ್ಚುಗಳು.

ಎ, ತಳದ ಕಚ್ಚು.

ಚೀಲಕಿಸೆಯನ್ನು ತಯಾರಿಸುವಾಗ ೧೩ ಇಂಚು ಉದ್ದ ೪ ಇಂಚು ಅಗಲ ಉಳ್ಳ ಬಟ್ಟೆಯನ್ನು ತೆಗೆದುಕೊಂಡು, ಚಿತ್ರದಲ್ಲಿ ತೋರಿಸಿದಂತೆ ಕೆಳಭಾಗಕ್ಕೆ ೪ ಇಂಚಿನ ಚೀಲ ಮಾಡಬೇಕು. ಮೇಲಿನ ೫ ಇಂಚಿನ ಒಂಟಿ ಪದರನ್ನು ಣ, ಸ ಭಾಗಕ್ಕೆ ಹಚ್ಚಬೇಕು. ಕೆಳಗಿನ ಚೀಲವನ್ನು ಣ ದಿಂದ ಕೆಳಕ್ಕೆ ಜೋತಾಡುವಂತೆ ಹಚ್ಚಬೇಕು.

ತೋಳು

ಬ, ಅ, ಕ ಕಾಟಕೋನ.

ಅ, ಬ=೫೩/೮" ಎಂದರೆ ಎದೆಯ ೧/೪.

ಅ, ಕ=೧೬೩/೮ ಇಂಚು. ಎಂದರೆ ಉದ್ದ + ೩/೮".

ಡ, ಅ, ಬ ಗಳ ಮಧ್ಯ.

ಬ, ಇ=೨" ಎಂದರೆ ಎದೆಯ ೧/೧೬+೧/೪"

ಇ, ಡ, ಅ, ಇ ಗಳನ್ನು ಚಿತ್ರದಂತೆ.

ಕ, ತ = ೪ಇಂಚು. ಅಥವಾ ಎದೆಯ ೧/೬+೩/೮"

ಇ, ತ ಕೂಡಿಸುವುದು!

ಕೆಳಕ್ಕೆ ಕ, ತ, ಕತ್ತರಿಸುವಾಗ, ೨ಇಂಚು ಮಡಿಚುವುದಕ್ಕಾಗಿ ಹೆಚ್ಚು ಬಟ್ಟೆ ಇಟ್ಟುಕೊಳ್ಳಬೇಕು.

ಕೊರಳುಪಟ್ಟಿ

ಕೊರಳು ೧೧+೨'=೧೩"

ಅಗಲ ೧೧/೪" ಉದ್ದ ಬಟ್ಟೆ ತೆಗೆದುಕೊಂಡು ಅಗಲದಲ್ಲಿ ಮಡಿಕೆ ಮಾಡಿ ಅ, ಕ ಮಡಿಕೆ ಬರುವಂತೆ ಇಡುವುದು.

ಇ, ಗ=೧"

ಗ, ರ=೧/೪"

ಇ, ೧=೧/೨"

ಇ, ಡ=೧೧/೪"

ಕ, ರ=೧, ಡ, ಅ. ಚಿತ್ರದಂತೆ ಕೂಡಿಸುವುದು.

ಇದರಂತೆಯೇ ಕತ್ತರಿಸುವುದು!

ಬೇಕಾಗುವ ಬಟ್ಟೆ

೨೭ ಇಂಚು ಅಗಲ ಉಳ್ಳ ಬಟ್ಟೆಯಲ್ಲಿ ಮೇಲಿನ ಅಳತೆಯದಕ್ಕೆ ೧೧/೪ ವಾರು ಬೇಕು.

೩೬ ಇಂಚು ಅಗಲ ಉಳ್ಳ ಬಟ್ಟೆಯು ೧ ವಾರು ೨ ಗೆರೆ ಸಾಕಾಗುವುದು.

(ಮುಂದಿನ ಸಲ "ಸೆಕ್ಸಪಿಯರ್ ಕೊರಳಿನ ಕಪ್‌ಶರ್ಟ್")

ಪುಸ್ತಕ ದೊರೆಯುವ ಸ್ಥಳ:
ವಾಗ್ವಿಲಾಸ ಬುಕ್-ಡಿಪೋ, ಹುಬ್ಬಳ್ಳಿ.

(೧೩೭ ನೆಯ ಪುಟದಿಂದ ಮುಂದುವರಿದದ್ದು)

ಒಂದುದಿನ, ತನ್ನ ಅಗಲಕಿರಿದಾದ ಕಣ್ಣುಗಳೆಡೆಯಿಂದ,— ಜಾರ್ ಚಕ್ರವರ್ತಿಯ ಕಾಲದಲ್ಲಿ ಸೈಬೀರಿಯಕ್ಕೆ ಗಡಿಪಾರು ಮಾಡಲ್ಪಟ್ಟಿದ್ದಾಗ, ಹಿಮದೋಷದಿಂದಾಗಿ ಕಣ್ಣು ಹಾಗಾಗಿತ್ತು;— ಕೊಂಚ ದೀರ್ಘವಾಗಿ ಸ್ಟಾಲಿನ್ ನನ್ನನ್ನೇ ನೋಡುತ್ತ ಕುಳಿತ.

ನಾನು ಕಾರಣವನ್ನು ಕೇಳಿದಾಗ, "ನಿನ್ನ ಹ್ಯಾಟು," ಎಂದು ಉತ್ತರ ಬಂತು.

ಗಾಬರಿಯಾಗಿ ನನ್ನ ಅಂದವಾದ ಹ್ಯಾಟಿನತ್ತ ಕೈಹಾಕಿದೆ. ನೀಳವಾದೊಂದು ಗರಿಯನ್ನು ಅದಕ್ಕೆ ಸುತ್ತಿದ್ದರು. ರಷ್ಯನರಿಗೆ ಅದು ಸೋಜಿಗದ ನೋಟವಾಗಿತ್ತು.

"ಹಂ! ಅದು ನಿಶ್ಚಯವಾಗಿಯೂ ಧನಿಕರ ಟೊಪ್ಪಿಗೆ," ಎಂದು ಮಹಾಶಯರ ಪತ್ನಿ ಪತಿಯ ನುಡಿಗೆ ದನಿಗೂಡಿಸಿದಳು.

ಆ ಮುಗುಳ್ನಗು

ತನ್ನ ಆರುಬಾರಿಯ ಜೈಲುವಾಸದ ಕುರಿತೂ, ಪಾದ್ರಿಯಾಗಲಿಕ್ಕೆಂದು ೧೬ ವರ್ಷಗಳ ತನಕ ತಾನು ಅಭ್ಯಸಿಸಿದ ಧರ್ಮಶಾಸ್ತ್ರದ ಕುರಿತೂ ಸ್ಟಾಲಿನ್ ಒಮ್ಮೆ ಮಾತನಾಡುತ್ತಿದ್ದಾಗ, "ನಿನ್ನ ಧ್ಯೇಯವನ್ನು ಬಿಟ್ಟು ನೀನು ಜೀವನದಲ್ಲಿ ಅತ್ಯಂತ ಪ್ರೀತಿಸುವುದೇನನ್ನು?" ಎಂದು ಕೇಳಿದೆ.

ಸ್ಟಾಲಿನ್ ಕೊಂಚ ಯೋಚಿಸಿ, "ನಾಯಿಗಳು, ಮಕ್ಕಳು, ನನ್ನ ಜನರು, ಜಾರ್ಜಿಯದ ಕೂಲಿಗಳು," ಎಂದು ಹೇಳಿದ.

"ನೀನು ಜೀವನದಲ್ಲಿ ಅತ್ಯಂತ ದ್ವೇಷಿಸುವುದೇನನ್ನು?" ಎಂದು ಇನ್ನೊಂದು ಪ್ರಶ್ನೆ ಕೇಳಿದೆ.

ಉತ್ತರ ನನ್ನನ್ನು ಆಶ್ಚರ್ಯಗೊಳಿಸಿತು. ಸ್ಟಾಲಿನ್ ತಟ್ಟನೆ, ನೇರವಾಗಿ, ತನ್ನ ಪತ್ನಿಯ ಮುಖವನ್ನು ನೋಡಿ. ಮುಗುಳ್ನಗುತ್ತ ನನ್ನ ಪ್ರಶ್ನೆಗೆ ಉತ್ತರವನ್ನಿತ್ತ.

ಕೈಯಲ್ಲೊಂದು ಕೆಟಲ್ ಹಿಡಿದುಕೊಂಡು ನಗುತ್ತಾ ಅವನ ಪತ್ನಿ ಆ ಉತ್ತರವನ್ನು ಭಾಷಾಂತರಿಸಿದಳು:— "ದೊಡ್ಡ, ಗುಡ್ಡಗಾತ್ರದ, ವಾಚಾಳಿಗಳಾದ ಹೆಂಗುಸರನ್ನು.... ಎಂದು ಅವನು ಹೇಳುತ್ತಾನೆ." ಎಂದು.

೮೯ ಉರ್ದು ಕಥಾವಳಿ

ಅನುವಾದಕರು :– ಶ್ರೀ. ಗುರುನಾಥ ಜೋಶಿ. ಧಾರವಾಡ

ಇವರಲ್ಲಿ ಬೇರೆ ಬೇರೆ ಕತೆಗಾರರ ನೂರು ಕತೆಗಳ ಅನುವಾದ ಅಡಕಗೊಂಡಿವೆ. ಮೊದಲನೆಯ ಕತೆಯಾದ 'ಅಬ್ಬೂಖಾನರ ಆಡು' ಎಂಬುದು ಡಾ. ಜಾಕಿರ್ ಹುಸೇನ್‌ಸಾಹಬ್ ಎಂಬವರು ಬರೆದುದು. ಸ್ವಾತಂತ್ರ್ಯ ಜೀವನದ ಮೇಲ್ಮೆಯನ್ನು ಪ್ರಚಾರಪಡಿಸುವುದಕ್ಕಾಗಿ ಬರೆದ ಕತೆಯಿದು. ಅಬ್ಬೂಖಾನರು ಎಷ್ಟೇ ಅಕ್ಕರೆ ಮೆಚ್ಚಿನಿಂದ ಸಾಕಿದರೂ ಅವರ ಆಡುಗಳು ಮನೆಯಲ್ಲಿ ನಿಲ್ಲದೆ ಕಾಡಿಗೆ ಓಡಿಹೋಗುವುವು. ಅಲ್ಲಿ ತೋಳನ ಹೆದರಿಕೆ ಇದೆಯೆಂಬುದು ಗೊತ್ತಿದ್ದರೂ, ಸ್ವಾತಂತ್ರ್ಯದ ಆಶೆ ಅಬ್ಬೂಖಾನರ ಸೆರೆಯಿಂದ ಬಿಡುಗಡೆಹೊಂದಲು ಪ್ರೇರಿಸುವುದು; ಓಡಿಹೋಗುವುವು. ಕಾಡಿನಲ್ಲಿ ಎದುರಿಸಿದ ತೋಳನೊಂದಿಗೆ, ಇದ್ದ ಸಾಮರ್ಥ್ಯವನ್ನೇ ಉಪಯೋಗಿಸಿ ಜಗಳವಾಡಿ, ಕೊನೆಗೆ ಅದರ ಬಾಯಿಗೆ ಬೀಳುವುವು. ಇದೇ ರೀತಿಯಲ್ಲಿ ಆತನ ಕೊನೆಯ ಆಡಾದ 'ಚಂದ್ರಿಕೆ' ಎಂಬುದು, ಕಾಡಿಗೆ ಓಡಿಹೋಗಿ ತೋಳನೊಂದಿಗೆ ಕಾಳಗವಾಡಿ ಸೋತು ಸತ್ತ ಸಂಗತಿ ಈ ಕತೆಯಲ್ಲಿದೆ. ಪ್ರಚಾರದ ಉದ್ದೇಶವೇ ಮುಖ್ಯವಾದುದರಿಂದ ಇದರಲ್ಲಿಯ ಆಡುಗಳು ಮನುಷ್ಯರೊಂದಿಗೆ ಮಾತನಾಡುವುವು.

'ಮಂಗಣ' ಎಂಬ ಎರಡನೆಯ ಕತೆಯನ್ನು ಶ್ರೀ. ಅಖ್ತರ್ ಹುಸೇನ್ ರಾಯಪುರಿ ಎಂಬ ತರುಣ ಲೇಖಕರು ಬರೆದಿರುವರು. ಬಂಡವಾಳದ ಭೂತ ಯಾವ ಉದಾರಮತದ ಸಂಸ್ಥೆಯಲ್ಲಿಯೂ ಹೇಗೆ ಆಟವಾಡುತ್ತದೆಯೆಂಬುದನ್ನು ಪರಿಣಾಮಕಾರಕವಾಗಿ ಚಿತ್ರಿಸಿದ್ದಾರೆ. ಲಕ್ಕೂ ಎಂಬ ಹೆಸರಿನ ಬಡವ ಕಮ್ಮಾರ; ಆತನ ಮಗ ರಾಷ್ಟ್ರೀಯ ಚಳವಳಿಯಲ್ಲಿ ಸೇರಿ, ಸತ್ಯಾಗ್ರಹ ಮಾಡಿ ಪೋಲಿಸರ ಗುಂಡಿಗೆ ಆಹುತಿಯಾಗಿರುವನು. ಆ ಬಡವನ ಪ್ರೇತಸಂಸ್ಕಾರದ ಕಾಲಕ್ಕೆ ದೊಡ್ಡ-ಮನುಷ್ಯರೆನಿಸಿಕೊಳ್ಳುವ ಸ್ಥಳೀಯ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷ, ಉಪಾಧ್ಯಕ್ಷ, ಕಾರ್ಯದರ್ಶಿ ಯಾರೂ ಬಂದಿರುವುದಿಲ್ಲ. ತನ್ನ ಜೀವನಾಧಾರವಾದ ಮಗನಿಗೆ ಲಕ್ಕುವು ತನ್ನ ಕೈಯಿಂದಲೆ ಚಿತೆ ಕೊಟ್ಟು, ಕೊನೆಗೆ ಅವನ ದಹನಸ್ಥಾನದಲ್ಲಿ ಅವನ ನೆತ್ತರಿನಿಂದಲೆ ನನೆದ ತ್ರಿವರ್ಣ ಧ್ವಜವನ್ನು ನಿಲ್ಲಿಸುವನು. ಕತೆಯಲ್ಲಿ ಬೆಳೆದು ಬಂದ ಕರುಣಭಾವ ಕೊನೆಯವರೆಗೂ ಆಭಾಸವಿಲ್ಲದೆ ಹರಿದಿದೆ.

ನೂರನೆಯ ಕತೆಯಾದ 'ತಾರೂ' ಎಂಬುದು ಡಾಕ್ಟರ್ ಸದೀಕ ಹುಸೇನ್ ನಜಮಿ ಎಂಬವರು ಬರೆದುದು. ಪಂಜಾಬದಲ್ಲಿಯ ಹಳ್ಳಿಗರಾದ ಸೀಖ ಸಮಾಜದ ಅನಾಗರಿಕ ವೀರಜೀವನವನ್ನು ಅತ್ಯದ್ಭುತವಾಗಿ ಚಿತ್ರಿಸಿರುವುದು. ತಾರೂ ಎಂಬ ಬಂಟ ಈ ಕಥೆಯ ನಾಯಕ. ತನ್ನ ತಂದೆಯನ್ನು ಕೊಂದ ಶಂಘಾರಾ ಸಿಂಗನ ಮಗನನ್ನು ತನ್ನ ಪ್ರಿಯತಮೆಗಾಗಿ ಕೊಂದು, ಗಲ್ಲಿನ ಶಿಕ್ಷೆಗೆ ಗುರಿಯಾದ ಭೀಕರ ಸಂಗತಿಯೇ ಈ ಕಥೆಯ ವಸ್ತು. ಸಿಖ್ ಜಾನಪದ ಜೀವನವನ್ನು ಇದರಿಂದ ಚೆನ್ನಾಗಿ ಕಂಡುಕೊಳ್ಳಬಹುದು.

ಅನುವಾದದ ಭಾಷೆ ಕನ್ನಡದ ಹದಕ್ಕೆ ಇಳಿದಿಲ್ಲ. ಮುದ್ರಣ–ಬಂಧನದ ಕಡೆಗೆ ಇನ್ನಿಷ್ಟು ಲಕ್ಷ್ಯಕೊಡಬೇಕಾದುದು ಅವಶ್ಯ. ಶ್ರೀ. ಗುರುನಾಥ ಜೋಶಿಯವರು ತಮ್ಮ ಅನುವಾದ ಸಾಹಿತ್ಯದಿಂದ ಕನ್ನಡ ವಾಙ್ಮಯವನ್ನು ಪುಷ್ಟಿಗೊಳಿಸುತ್ತಿರುವುದು ಅಭಿನಂದನೀಯ ಸಂಗತಿ. ಕನ್ನಡವನ್ನು ಮರೆಯದ ಹಿಂದೀ ಪ್ರಚಾರಕರಲ್ಲಿ ಶ್ರೀ. ಗುರುನಾಥ ಜೋಶಿಯವರು ಒಬ್ಬರೆಂಬುದನ್ನು, ಅವರ ಈ ಕಾರ್ಯಗಳೆಲ್ಲ ಸಿದ್ಧಪಡಿಸುತ್ತಲಿವೆ.

—ಬಿ. ಪಿ. ಎಸ್. ರಾವ್

೮ ತಾರಾಮಂಡಲ

ಗುರುದೇವ ರವೀಂದ್ರನಾಥ ಠಾಕೂರರ ಕವನ ಸಂಗ್ರಹ. ಕನ್ನಡ ಅನುವಾದಕರು ಶ್ರೀ. ಪದ್ಮರಾಜ ಹುನಗುಂದ.

ಕವೀಂದ್ರ ರವೀಂದ್ರರ ಸುಪ್ರಸಿದ್ಧ ಇಂಗ್ಲಿಷ್ ಕವನಸಂಗ್ರಹಗಳಾದ 'ಫ್ರುಟ್ ಗ್ಯಾದರಿಂಗ್' 'ಲವ್ಹರ್ಸ್ ಗಿಫ್ಟ್' 'ಕ್ರಿಸೆಂಟ್ ಮೂನ್' 'ಗಾರ್ಡನರ್' 'ಕ್ರಾಸಿಂಗ್' 'ಗೀತಾಂಜಲಿ'ಗಳಲ್ಲಿಯ ಆಯ್ದ ಕವನಗಳ ಅನುವಾದಗಳಲ್ಲದೆ, 'ಚಿತ್ರಾ' ಎಂಬ ಹೆಸರಿನ ಭಾವನಾಟಕದ ಅನುವಾದವೂ ಇದರಲ್ಲಿದೆ. ಎಲ್ಲ ಕವನಗಳೂ ವಚನದಲ್ಲಿಯೆ ಅನುವಾದಿತವಾಗಿರುವುವು. ಮುನ್ನುಡಿಕಾರರಾದ ಶ್ರೀಮಾನ್ 'ಶ್ರೀನಿವಾಸ'ರು. ಈ ವಚನಗಳ ಶೈಲಿಯನ್ನು ಕುರಿತು ಬರೆಯುವಾಗ 'ಶೈಲಿಯಲ್ಲಿ ಒಂದು ರೀತಿಯ ಪ್ರಯೋಗ ಕಾಣುತ್ತಿದೆ' ಎಂದಿದ್ದಾರೆ. ರವೀಂದ್ರರ ಕವನಗಳನ್ನು ಸೂಕ್ಷ್ಮವಾಗಿ ಅಭ್ಯಸಿಸಿ ವಿಮರ್ಶೆಮಾಡಿದ ಶ್ರೀ. ಬೇಂದ್ರೆಯವರು, ಅನುವಾದಿತ ಕವನವೊಂದೊಂದನ್ನೂ ತಮ್ಮ 'ಸೂಚನೆ'ಯಲ್ಲಿ—ಒಂದೆರಡು ಮಾತುಗಳಲ್ಲಿಯೆ—ಪರಿಚಯ ಮಾಡಿಕೊಟ್ಟಿದ್ದಾರೆ.

ಅನುವಾದಿತವಾಗಿ ಸಂಗ್ರಹಗೊಂಡಿರುವ ಇಲ್ಲಿಯ ಕವನಗಳೂ ಗೀತಗಳೂ ನಾಟಕವೂ ಈಗಾಗಲೆ ಹಲವು ರಸಿಕರ

ಮನಸ್ಸನ್ನು ಜಯಿಸಿ ಜಗತ್ತಿನ ಸಾಹಿತ್ಯದಲ್ಲಿ ಒಂದು ಶ್ರೇಷ್ಠ ಸ್ಥಾನವನ್ನು ಪಡೆದುವುಗಳಾದುದರಿಂದ, ಕವನಗಳ ವಿಷಯದ ವಿಮರ್ಶೆಯಿಾಗ ಆವಶ್ಯಕವಲ್ಲ. ಅನುವಾದಕರು ತಮ್ಮ ಕೆಲಸವನ್ನು ಸರಿಯಾಗಿ ನಿರ್ವಹಿಸಿದ್ದಾರೋ ಇಲ್ಲವೋ ಎಂಬುದು ವಿಚಾರಮಾಡತಕ್ಕ ವಿಷಯ.

ಶ್ರೀ. ಪದ್ಮರಾಜ ಹುನಗುಂದರು ತುಂಬ ರಸಜ್ಞರು. ಸಾಹಿತ್ಯಾಭ್ಯಾಸ ಅದರಲ್ಲಿಯೂ ರವೀಂದ್ರರ ಸಾಹಿತ್ಯದ ಅಭ್ಯಾಸ ಅವರಿಗೆ ಬಹು ಮೆಚ್ಚಿಕೆಯಾದ ವಿಷಯ. ರವೀಂದ್ರರ ಕವನಗಳ ಮೂಲಭಾವಗಳನ್ನು ಚೆನ್ನಾಗಿ ಅರಿತುಕೊಂಡು ಅನುವಾದ ಮಾಡಿದ್ದಾರೆ. ಆದರೆ ಬಂಗಾಲಿಯಲ್ಲಿ ರಚಿತವಾದ ಹಲವು ಗೀತ-ಕವನಗಳು, ಮೂಲದ ಸೌಂದರ್ಯವನ್ನು ಯಾವ ಭಾಷೆಯ ಅನುವಾದದಲ್ಲಿಯೂ ತೋರಿಸಲಾರವು. ಗೀತದಲ್ಲಿರುವ ಭಾವನರ್ತನ, ಭಾವಾನರ್ತನಗಳು ವಚನದಲ್ಲಿ ಎಂದೂ ಬರಲಾರವು. ಆದುದರಿಂದಲೇ ಇಂಗ್ಲಿಷ್ ಅನುವಾದಗಳು ಕೂಡ ಮೂಲ ಕವನದ ಭಾವಗಳ ಪಾತ್ರಗಳಾಗಿವೆಯಷ್ಟೇ ಅಲ್ಲದೆ, ಆ ಭಾವಗಳ 'ಬಾಸಿಗ'ಗಳಾಗಿಲ್ಲ. ಗೀತದ ನೆರವಿನಿಂದ ಭಾವಕ್ಕೆ ಸಿಕ್ಕುವ ಪೋಷಣೆ ವಚನದಲ್ಲಿ ಸ್ವಾರಸ್ಯ ಸಿಕ್ಕುವುದಿಲ್ಲ. ಆದುದರಿಂದಲೆ ಗೀತಾಂಜಲಿಯಿಂದ ಅನುವಾದಿತವಾಗಿ ಬಂದಿರುವ ಇದರಲ್ಲಿಯ ಕವನಗಳು, ಮೂಲದ ಸಮಗ್ರ ಸೌಂದರ್ಯವನ್ನು ತೋರಿಸುವುಕ್ಕೆ ಸಮರ್ಥವಾಗಿಲ್ಲ. ಮಿಕ್ಕ ಕಥನಕವನಗಳೂ ಭಾವಗೀತಗಳೂ ಪೂರ್ಣಾರ್ಥದೊಂದಿಗೆ ಅನುವಾದಿತವಾಗಿ, ರವೀಂದ್ರರ ಹೃದಯದ ಪರಿಚಯವನ್ನು ಚೆನ್ನಾಗಿ ಮಾಡಿಕೊಡುತ್ತವೆ.

'ಚಿತ್ರಾ' ನಾಟಕವು ಮನಶ್ಶಾಸ್ತ್ರದ ಒಂದು ಅತ್ಯುತ್ತಮ ಅಭ್ಯಾಸವನ್ನೊಳಗೊಂಡ ಒಂದು ಸಂಕೇತರೂಪಕ. ಸಾಮಾನ್ಯರ ಮನಸ್ಸನ್ನಿದು ಒಮ್ಮೆಲೆ ಹಿಡಿಯದು. ಎರಡು ಮೂರು ಸಲ ಓದಿಕೊಂಡು, ಚೆನ್ನಾಗಿ ಮನನಮಾಡಿಕೊಂಡು ರಸಗ್ರಹಣವನ್ನು ಮಾಡುವಂತಹ ನಾರಿಕೇಳಪಾಕವಿದು. ಇದರ ಅನುವಾದವೂ ತೃಪ್ತಿಕರವಾಗಿಯೆ ಇದೆಯೆಂದು ಹೇಳಬಹುದು.

ಶ್ರೀರವೀಂದ್ರರ ಸಾಹಿತ್ಯ, ಕನ್ನಡಕ್ಕೆ—ಒಳ್ಳೆಯ ರೀತಿಯಿಂದ—ಒಂದು ಸಂಪುಟರೂಪದಲ್ಲಿ ಇಳಿದುಬಂದುದು ಕಡಿಮೆಯೆಂದೇ ಹೇಳಬಹುದು. ಆ ಕೊರತೆಯನ್ನು ಶ್ರೀ. ಪದ್ಮರಾಜರ ಈ ಸರ್ವಾಂಗ ಸುಂದರವಾದ ಪುಸ್ತಕವು ಕಳೆಯಲು ಸಹಕಾರಿಯಾಗುವುದೆಂದು ನಮ್ಮ ಭರವಸೆ.

—ಸಂ....ಕ.

೧೮೧ ಶೈಕ್ಷಣಿಕ ಮನಶ್ಶಾಸ್ತ್ರ

ಬರೆದವರು :—ಶ್ರೀ. ವ್ಹಿ. ಕೆ. ಜವಳಿ, ಬಿ. ಎ., (ಆನರ್ಸ್) ಬಿ. ಟಿ., ಡಿಪ್. ಪಿ. ಇಡಿ

ಪ್ರಕಾಶಕರು :— ಕರ್ನಾಟಕ ಸಾಹಿತ್ಯ-ಮಂದಿರ, ಧಾರವಾಡ.

ಶಿಕ್ಷಣ ಕಾರ್ಯಕ್ಕೆ ಬೇಕಾಗುವ ಮೂರು ಅಂಗ (ಶಿಕ್ಷಕ, ಶಿಶು, ವಿಷಯ) ಗಳಲ್ಲಿ ಶಿಶುವಿನ ಬಗೆಗೆ ಜ್ಞಾನಮಾಡಿಕೊಡುವುದು ಮಾನಸಶಾಸ್ತ್ರ. ಶಿಕ್ಷಣದ ಕಾರ್ಯಕ್ಕಾಗಿ ಬೇಕಾಗುವ ಮಾನಸಶಾಸ್ತ್ರದ ವಿಭಾಗಕ್ಕೆ 'ಶೈಕ್ಷಣಿಕ ಮಾನಸಶಾಸ್ತ್ರ' ಎಂದು ಹೆಸರು ಬಂದಿದೆ. ಈ ವಿಷಯದ ವಿವೇಚನೆಯನ್ನು ಮಾಡಿರುವುದು ಈ ಗ್ರಂಥ.

ಗ್ರಂಥವನ್ನು ಓದುತ್ತ ಹೋದ ಹಾಗೆ ಇದೊಂದು ಇಂಗ್ಲಿಶ್ ಪುಸ್ತಕದ— Ground work of Educational Psychology, by Ross,—ರೂಪಾಂತರವೊ, ಭಾಷಾಂತರವೊ ಎನ್ನಿಸುವುದು. ಹಾಗಿದ್ದರೆ ಅದೇನು ತಪ್ಪೆಂದಲ್ಲ, ಆದರೆ ಗ್ರಂಥವನ್ನು ಬರೆವಾಗ ಇಟ್ಟುಕೊಂಡ ಉದ್ದೇಶ ಸಾಧಿಸುವುದೆ?—ಎಂಬುದೆ ಪ್ರಶ್ನೆ.

ಈ ಗ್ರಂಥವು ಕನ್ನಡದಲ್ಲಿ ಇದೆ. ಇದರ ಓದುಗರು ಕನ್ನಡ ಓದುಗರು; ಪ್ರಾಥಮಿಕ ಶಿಕ್ಷಕರು. ಸದ್ಯದ ಸ್ಥಿತಿಯಲ್ಲಿಯ ಪ್ರಾಥಮಿಕ ಶಿಕ್ಷಕರ ಬುದ್ಧಿಯ ಮಟ್ಟ, ಪ್ರಪಂಚದ ಪರಿಜ್ಞಾನ ಇವುಗಳು ಶೋಚನೀಯ ಸ್ಥಿತಿಯಲ್ಲಿವೆ. ಅವರಿಗೆ ಯಾವುದೊಂದು ವಿಷಯದ ತಿಳಿವು ಆಗಬೇಕಾದರೆ, ಆ ವಿಷಯವನ್ನು 'ನೀರಿಗಿಂತ ತೆಳ್ಳಗೆ, ಗಾಳಿಗಿಂತ ಹಗುರು' ಮಾಡಿದಾಗ ಏನೋ ತಿಳಿಯಬಹುದೆಂದು ಭಾವಿಸುವಂತಿದೆ. ಇದು ನಮ್ಮ ದೇಶದ ದುರ್ದೈವ. ಆ ಓದುಗರನ್ನು ಕಣ್ಣುಮುಂದಿಟ್ಟುಕೊಂಡರೆ, ಅವರಿಗಾಗಿಯೆ ಬರೆದಿರುವ ಈ ಪುಸ್ತಕವು ಗಡುಚೆಂದು ಎನಿಸದಿರದು. ಇನ್ನಿಷ್ಟು ಆತ್ಮೀಯವಾಗುವಂತೆ, ನಮ್ಮ ವಾತಾವರಣದಲ್ಲಿಯ ಪ್ರತಿನಿತ್ಯದ ಬಳಕೆಯಲ್ಲಿಯ ಉದಾಹರಣೆಗಳಿಂದ ವಿವೇಚನೆ ಮಾಡಬಹುದಿತ್ತು. ಇಂಗ್ಲಿಶ್ ಬಲ್ಲವರಿಗೆ ಮಾತ್ರ ಇದರಿಂದ ಹೆಚ್ಚಿನ ಸಹಾಯವಾಗುವುದು. ಆದರೆ ಗ್ರಂಥಕರ್ತರ ಎದುರು ಇಂಗ್ಲಿಶ್ ಬಲ್ಲ ಕನ್ನಡ ಓದುಗರು ಇದ್ದಂತೆ ಕಾಣುವುದಿಲ್ಲ.

'ಉಂಡರೆ ಉಂಡಿಯ ಊಟವೇ ಬೇಕು; ಇಲ್ಲದಿದ್ದರೆ ಉಪವಾಸ' ಎಂಬ ತತ್ತ್ವವಿರಬಾರದು. 'ಕಟುಕು ರೊಟ್ಟಿಯು ಬೇಕಾಗಲೊಲ್ಲದು; ತಿಂದು ಬದುಕೋಣ. ಬದುಕಿ ಮುಂದೆ ಬರೋಣ' ಎಂಬುದು ನಮ್ಮ ಪ್ರವೃತ್ತಿಯಾಗಬೇಕು. ಕನ್ನಡದಲ್ಲಿ ಬರೆಯುವವರಿಗೆ ಈ ತೊಂದರೆಗಳು ಬರುವುದುಂಟು. ಈ ಮೊದಲಿನ ಅವಸ್ಥೆಯನ್ನು ನಾವು ಹೇಗಾದರೂ ದಾಟಲೇಬೇಕಾಗಿದೆ. ಪ್ರಾರಂಭ ಮಾಡಿದ ಶ್ರೇಯಸ್ಸು ನಮ್ಮ ಶ್ರೀ. ಜವಳಿಯವರಿಗೆ ಸಲ್ಲುವುದು. ಈ ಗ್ರಂಥದ ಉಪಯೋಗದಿಂದ ಆಗಾಗ ಕಂಡು ಬರಬಹುದಾದ ಕೊರತೆ-ತೊಂದರೆಗಳನ್ನು ತಿದ್ದಿ, ಮುಂದೆ ಹೆಚ್ಚು ಸುಗಮವನ್ನಾಗಿ ಮಾಡಲಿ-ಎಂದು ಹಾರಯಿಸುತ್ತೇವೆ.

—ನೆಗಳೂರ ರಂಗನಾಥ.

ನಗೀಗೆ ನೈವಿದ್ಯ

ಯುದ್ಧಾರಂಭವೆಂದು?

ಶಿಕ್ಷಕ:— ಯುದ್ಧಪ್ರಾರಂಭವಾಗಿ ಎಷ್ಟು ದಿನ ಆಯಿತು—ಗೊತ್ತು ಅದs ಏನು ನಿನಗ?

ಗುಂಡ :— ಗೊತ್ತು ಅದsರಿ! ಇಪ್ಪತ್ತು ನಾಲ್ಕು ವರ್ಷ ಆಯಿತಂತರಿ!

ಶಿಕ್ಷಕ :— ಅದು ಹ್ಯಾಂಗೋ ಗುಂಡಾ?

ಗುಂಡ :— ನನ್ನ ಅಪ್ಪ ಹೇಳತಿದ್ದನ್ರಿ; ಅವ್ವನ ಜೋಡಿ ಅವನ ಮದಿವಿ ಆಗಿ, ಇಪ್ಪತ್ತು ನಾಲ್ಕು ವರ್ಷ ಆಗೇದಂತರಿ!

* * *

ಗಂಡಸ ಗೋಳು

"ನೋಡ್ರಿ ರಾಯರs! ಮೂರನೆಯ ಅಂತಸ್ತಿನ ಮ್ಯಾಲ ಇದ್ದಾಳಲ್ಲಾ ಆ ಹೆಂಗಸು; ರಾತ್ರಿಯೆಲ್ಲಾ ತನ್ನ ಗಂಡನ ಕೂಡ ಜಗಳಾ ಕಾಯುತಿರತಾಳ! ಇದರಿಂದ ನೆರೆಹೊರೆಯುವರಿಗೆ ಎಷ್ಟು ತ್ರಾಸ ನೋಡ್ರಿ! ನೀವು ಮನೀ ಮಾಲಕರೂ ಅಂಬೂ ಅಧಿಕಾರದಿಂದ, ಆಕೀಗೆ ಸ್ವಲ್ಪ ಬೈದು ಬುದ್ಧೀ ಹೇಳಬೇಕು!"

"ನೀವೇನು ಅವರ ನೆರಿಮನಿಯವರೇ?"

"ನೆರೆಮನಿಯವ ಅಲ್ರೀ! ಆಕೀ ಗಂಡ ನಾನು!"

* * *

ಗವಳಿಗ ಶ್ರೇಷ್ಠ!

"ಅಪ್ಪಾ ಆಕಳು ಹೆಚ್ಚಿನದೋ ಗವಳಿಗ ಹೆಚ್ಚಿನವನೋ?"

"ಎಂಥಾ ಹುಚ್ಚನಪ್ಪಾ, ಇಷ್ಟೂ ತಿಳಿಯೂದಿಲ್ಲೇನು? ಆಕಳು ಹಾಲು ಕೊಡತsದಂತ ಗವಳಿಗ ಹಾಲನ್ನ ನೆಪುಗ ಹಾಕತಾನ! ಅಂದಮ್ಯಾಲ ಆಕಳು ಶ್ರೇಷ್ಠ ಅಹುದೋ ಅಲ್ಲೋ?"

"ಅದೆಲ್ಲಾ ಸರಿಯಪ್ಪಾ! ನಮುಗ ಉದ್ದರಿ ಹಾಲು ಹಾಕಾಂವ ಗವಳಿಗನೋ ಆಕಳೋ? ಆಕಳೆಂದಾದರೂ ಉದ್ದರಿ ಹಾಲು ಕೊಡೂದು ಶಕ್ಯ ಅದs ಏನು?"

* * *

ಅಂತರ್ಜಾತೀಯ ವಿವಾಹ

ಶಿಕ್ಷಕ :— ಹೇಳೋ ರಂಗಾ ನೀನು! ನಮ್ಮ ಒಂದೂ ಜನರೊಳಗ, ಬೇರೆ ಬೇರೆ ಜಾತೀ ಜನರೊಳಗ ಮದಿವಿ ಆಗತsದೋ ಇಲ್ಲೋ?

ರಂಗ :— ಆಗತsದರಿ! ನಮ್ಮ ಮನ್ಯಾಗ ನಮ್ಮ ಚಿಕ್ಕ ಇದ್ದಾನ ರಶಿಯನ್; ಚಿಕ್ಕಿ ಇದ್ದಾಳ ಜರ್ಮನ್!

ಶಿಕ್ಷಕ :— (ಆಶ್ಚರ್ಯದಿಂದ) ಅಂದರೇನೋ ರಂಗಾ ಹುಚ್ಚುಚ್ಚು?

ರಂಗ :— ಹುಚ್ಚುಚ್ಚು ಅಲ್ರೀ! ನಿಜವಾದ ಸಂಗತಿ! ನಮ್ಮ ಚಿಕ್ಕಿ ಯಾವಾಗಲೂ ಮುಂದೆ ಬಿದ್ದು ಮುತ್ತಿಗೀ ಹಾಕತಿರತಾಳ! ನಮ್ಮ ಚಿಕ್ಕ ಯಾವಾಗಲೂ ಒಂದು ಸಿಸ್ತಿನಿಂದ ಒಂದೆ ಸರೀತಿರತಾನ!

* * *

ನಿರಾಕರಣೆಗೆ ಕಾರಣ

"ನನ್ನ ಬೇಡಿಕೆಯನ್ನು ನಿಮ್ಮ ಮಗಳು ನಿರಾಕರಿಸಿದ ಕಾರಣಾ ತಿಳಕೊಳ್ಳಬೇಕಂತ ನಾನೀಗ ಬಂದದ್ದು!"

"ಹೀಂಗೇನು? ಅದಕ್ಕ ಇಲ್ಲೀತನಕಾ ಬರೂ ಶ್ರಮ ಯಾಕ ತಕ್ಕೊಂಡಿರಿ? ತಮ್ಮ ಮನಿಯೊಳಗ ದೊಡ್ಡ ಕನ್ನಡಿ ಇಲ್ಲವೇನು? ಇಲ್ಲದಿದ್ದರೆ ಅಲ್ಲಿ ಅದs ನೋಡ್ರಿ! ಮುಂದ ನಿಂತುಕೊಳ್ರಿ.. ಕಾರಣ ಗೊತ್ತಾಗತsದ!"

* * *

ಯಾವ ಕಂಪನೀದು?

"ತಾವು ಯಾವಾಗಲೂ ಸೇದತಿರೂದು ಯಾವ ಕಂಪನೀ ಸಿಗರೆಟು?"

"ಹೆಚ್ಚಾಗಿ ನಾನು ಸೇದತಿರೂದೆಂದರ.. ಹಂ! ಕೊಡುವವರ ಹತ್ತರ ಯಾವ ಕಂಪನೀ ದಿರತsದೋ ಅದು!"

* * *

ಅದರೊಳಗೇನು ದೊಡ್ಡ ಮಾತು?

ಗಂಗೂ :— ಅಲ್ಲs, ನೀನು ಗಂಡನ ಕಡಿಂದs ಇಷ್ಟೊಂದು ರೊಕ್ಕಾ ಇಸುಗೊಳ್ಳತೀ ಯಾಪರೂ ಹ್ಯಾಂಗ?

ರಂಗೂ :— ಅದರೊಳಗೇನು ದೊಡ್ಡ ಮಾತು ಅದನs! 'ನಾನು ಈಗಿಂದೀಗ ತವರಮನಿಗೆ ಹೋಗತೀನಿ' ಅಂತೀನಿ. ಆಗ ಕೂಡಲೆ ಅವರು ರೇಲ್ವೇ ಖರ್ಚಿಗೆ ಅಂತ ಹಣಾ ಕೊಡತಾರ! ಆ ಮ್ಯಾಲ ನಾನು ತವರ ಮನೀಗೆ ಹೋಗುವುದೇ ಇಲ್ಲ.. ಆಯಿತು!

* * *

ಅಪಘಾತದ ತೂರ್ಯಧ್ವನ!

"ಕೇಳ್ರಿ ಕೇಳ್ರಿ ಅಲ್ಲೆ. ವಿಮಾನದ ದಾಳಿಯೇನೊ! ಅಪಘಾತದ ತುತೂರಿಯ ಧ್ವನಿ ಕೇಳಿಸತsದ ನೋಡ್ರಿ!"

"ಅದು ಅಪಘಾತದ ತುತೂರಿಯ ಧ್ವನಿ ಅಲ್ಲರೀ! ನಮ್ಮ ಅಶ್ವತ್ಥಾಮಾಚಾರ್ರ ಸಂಗೀತದ ತಾಲೀಮ್ ನಡದsದ! ತಾನ್ ಹೊಡೀಲಿಕ್ಕ ಹತ್ಯಾರ; ಅದರ ಧ್ವನೀರೆಪಾ ಅದು!"

* * *

ಬಾಂಬು ಬಿತ್ತಂತ!

"ಪಾಪ ನಮ್ಮ ನಾಯಿಕ ನಾರಾಯಣನ ಮ್ಯಾಲ ಬಾಂಬ್ ಬಿತ್ತಂತಲ್ರೀ ನಿನ್ನೆ!"

"ಅದ್ಹ್ಯಾಂಗ್ರೀ; ಇಂದ ಮುಂಜಾನೆ ಅವನ್ನ ನಾನೋಡೀನಿ. ಕೆರೀ ದಂಡೀಮ್ಯಾಲೆ!"

"ನೋಡಿರಬಹುದರೀ; ಬಾಂಬು ಬಿದ್ದದ್ದೇನು ಸುಳ್ಳು ಅಂತೀರಾ? ಪತ್ರ! ರಂಜನಾಗೀ ರಂಗರಾಯರ ಮಗಳ ಮದಿವೀ ಪತ್ರ ನಿನ್ನೆಯ ಟಪಾಲಿನಿಂದಲೇನೆ ಅವನಿಗೆ ಸಿಕ್ಕಿತಂತ!"

* * *

ನಾಡಗುಡಿಯ ಪೂಜನವೆ ಪೂಜನ ! ಅದಕಾಗಿ ಮುಡಿಪು ನಮ್ಮಯ ಪ್ರಾಣ !

ಕನ್ನಡ ಸೈನಿಕ

"ಸೊಕ್ಕಿದ ಪಗೆಗಳ ಬೊಗ್ಗಿಸಿ ಮೆರೆಯುವ ಸೋಲರಿಯದ ಕರಿನಾಡಗುಡಿ !"

ಸಂಪುಟ ೧ | ಬೇಕಾದಾಗ ಹೊರಡುವ ಪತ್ರಿಕೆ | ಸಂಚಿಕೆ ೬

ಸೊಂಡೂರಲ್ಲಿ ಕನ್ನಡದ ಕೈಗೆ ಶಂಖ

ಸೊಂಡೂರು ಅಚ್ಚ ಕನ್ನಡ ಸಂಸ್ಥಾನ. ಪ್ರಜೆಗಳಲ್ಲಿ ನೂರಕ್ಕೆ ನೂರರಷ್ಟು ಜನರು ಕನ್ನಡಿಗರು. ಸಂಸ್ಥಾನಿಕರು ಮಾತ್ರ ಮರಾಟಿಗರೆಂದು ಹೇಳಬೇಕಾಗಿದೆ; ಹುಟ್ಟಿದೂರು ಧಾರವಾಡ ಜಿಲ್ಲೆಯ ಗಜೇಂದ್ರಗಡವಾದರೂ, ಬೆಳೆದುದು ಉತ್ತರದ ಕಡೆಯ ಯಾವುದೋ ಸಂಸ್ಥಾನದಲ್ಲಿ. ಆದುದರಿಂದ ಉತ್ತರದ ಮರಾಟಿಗರೊಂದಿಗೇ ಹೆಚ್ಚಾಗಿ ಬಳೆದು, ಸಂಸ್ಥಾನದ ಹೊಣೆಗಾರಿಕೆಯ ಅಧಿಕಾರಗಳೆಲ್ಲ ಆ ಕಡೆಯ ಮರಾಟಿಗರ ಕೈಯಲ್ಲಿಯೇ ಬಂದಿವೆ. ಆದುದರಿಂದಲೆ ಎಂದೂ ಇಲ್ಲದ ಬೃಹನ್-ಮಹಾರಾಷ್ಟ್ರದ ಭೂತ ಸೊಂಡೂರು ಸಂಸ್ಥಾನದಲ್ಲಿಯೂ ಕಾಲಿಕ್ಕಿದೆ. ಮರಾಟಿ ಮಾತನಾಡುವವರ ಸಂಖ್ಯೆ ಅಲ್ಲಿ ಕೈಬೆರಳಿನಿಂದ ಎಣಿಸಿ ಹೇಳುವಷ್ಟಿದ್ದರೂ, ಮರಾಟಿಯು ಪ್ರಾದೇಶಿಕ ಭಾಷೆಯೆಂಬ ಒಪ್ಪಿಗೆಯ ಬಂಟಿಮರಿಯನ್ನು ಸಂಸ್ಥಾನ ಸರಕಾರವೆಂದು ಹೊರಕ್ಕೆ ಬಿಟ್ಟಿದೆ. ಈ ಬಂಟಿಮರಿ ಬಳೆದು, ಆಡಳಿತದಲ್ಲೆಲ್ಲ ವ್ಯಾಪಿಸಿ, ಕನ್ನಡವನ್ನು ಹೊರಕ್ಕೆ ಹಾಕುವ ಪೂರ್ವಚಿಹ್ನಗಳಿಂದು ಅಲ್ಲಿ ಸಾಕಷ್ಟು ಕಾಣುತ್ತಲಿವೆ. ಆದುದರಿಂದ ಸಂಸ್ಥಾನದ ಕನ್ನಡಿಗರು ಮುನ್ನೆಚ್ಚರಿಕೆಯಿಂದ ವರ್ತಿಸಬೇಕು. ಹೊರಗಿನ ಕನ್ನಡಿಗರು ಅವರ ಹಕ್ಕಿನ ಸಂರಕ್ಷಣೆಗೆಂದು ಆವಶ್ಯಕ ನೆರವನ್ನು ಕೊಡಬೇಕು. ಇದರ ವಿಚಾರದಲ್ಲಿ ಸ್ವಯಂ-ಸೈನಿಕರೊಬ್ಬರು 'ಕನ್ನಡ ಸೈನಿಕ'ದ ಸಂಪಾದಕರಿಗೆ ಹೀಗೊಂದು ಕಾಗದ ಬರೆದಿದ್ದಾರೆ:

"ಮಹಾಶಯ,

ಬೆಳಗಾಂವಿಯಂಥ ಗಡಿನಾಡಿನ ಕನ್ನಡ-ಮರಾಠಿ ಗೊಂದಲವನ್ನು ನೋಡಿ ಕನ್ನಡಕ್ಕಾಗುತ್ತಿರುವ ಹಾನಿಗಾಗಿ ಸಿಡಿಮಿಡಿಗೊಂಡು 'ಕನ್ನಡ ಸೈನಿಕ'ವನ್ನು ಆರಂಭಿಸಿರುವ ತಾವು, ಕರ್ನಾಟಕದ ಒಳಭಾಗವಾದ ಸೊಂಡೂರು ಸಂಸ್ಥಾನದಲ್ಲಿ ನಡೆಯುತ್ತಿರುವ ಕನ್ನಡದ ದ್ರೋಹವನ್ನು ಕಂಡು ಏನು ಮಾಡುವಿರೊ ! ಸಂಗತಿ ಹೀಗಿದೆ:

ಸೊಂಡೂರು ಸಂಸ್ಥಾನದವರು 'ವಿದ್ಯಾಪ್ರಸಾರಕ ಮಂಡಳ'ವನ್ನು ನಿರ್ಮಿಸಿರುವರು, ಮತ್ತು 'ಸೊಂಡೂರ್ ಎಜ್ಯುಕೇಶನಲ್ ಕೋಡ್' ಎಂದು, ವಿದ್ಯಾಭ್ಯಾಸದ ವಿಷಯವಾಗಿ ತಮ್ಮ ಧೋರಣೆ, ಅಭ್ಯಾಸದ ಕ್ರಮ, ಕಲಿಯಬೇಕಾದ ವಿಷಯಗಳು ಇವೇ ಮೊದಲಾದುವನ್ನು ಒಳಗೊಂಡ ಒಂದು ಗ್ರಂಥವನ್ನು ಪ್ರಸಿದ್ಧಿಸಿರುವರು. ಅದರ ನಾಲ್ಕನೆಯ ಪರಿಚ್ಛೇದ (Chapter) ದಲ್ಲಿ ವಿದ್ಯಾರ್ಥಿಗಳು ಅಭ್ಯಾಸಮಾಡತಕ್ಕ ವಿಷಯಗಳನ್ನು ಕುರಿತು ಹೇಳಲಾಗಿದೆ. ಕನ್ನಡಕ್ಕೆ ಸಂಬಂಧಪಟ್ಟುದನ್ನು ಮಾತ್ರ ಇಲ್ಲಿ ಎತ್ತಿ ಬರೆಯುವೆನು:

ಪ್ರಾಥಮಿಕ ಶಿಕ್ಷಣ

೨೫ (ಅ) ಪ್ರಾಥಮಿಕ ಶಿಕ್ಷಣ ವಿಭಾಗದಲ್ಲಿ ಬೋಧಭಾಷೆ ಯಾವುದಾದರೊಂದು ದೇಶಭಾಷೆಯಾಗಿರಬೇಕು. ದೇಶಭಾಷೆಯೆಂದರೆ ಮರಾಠಿ ಅಥವಾ ಕನ್ನಡ. ಎಲ್ಲ ವಿಷಯಗಳೂ ವಿದ್ಯಾರ್ಥಿಗಳು ಸೆಕೆಂಡರಿ ತರಗತಿಗೆ ಅಣಿಯಾಗುವಂತೆ ಕಲಿಸಲ್ಪಡಬೇಕು.

ಪ್ರಾಥಮಿಕ ತರಗತಿಗಳಲ್ಲಿ ಮರಾಟಿ ಅಥವಾ ಕನ್ನಡ ಓದು-ಬರೆಹ, ವ್ಯಾಕರಣ, ಕನ್ನಡ ಮತ್ತು ಮರಾಟಿ ಲಿಪಿಗಳ ಜ್ಞಾನ ಒತ್ತಾಯವಾಗಿ ಕಲಿಸಲ್ಪಡಬೇಕು. ಮರಾಟೀ ವಿದ್ಯಾರ್ಥಿಗಳಿಗೆ ಮರಾಟಿಯನ್ನು ಕಡ್ಡಾಯವಾಗಿ ಕಲಿಸಬೇಕು.

* *

ಮಾಧ್ಯಮಿಕ ಶಿಕ್ಷಣ

೨೫ (ಬ) ಭಾರತದ ಯಾವುದಾದರೂ ವಿ. ವಿ. ನಿಲಯದಲ್ಲಿ, ಮರಾಟಿ ಅಥವಾ ಕನ್ನಡದಂತಹ ದೇಶಭಾಷೆಯಲ್ಲಿ ಎಲ್ಲ ವಿಷಯಗಳನ್ನೂ ಬೋಧಿಸುವ ಕಾಲ ಮುಂದೆ ಬಂದು, ಪಠ್ಯಪುಸ್ತಕಗಳು ದೇಶ-ಭಾಷೆಯಲ್ಲಿಯೆ ಸಿದ್ಧವಾಗುವವರೆಗೆ, ಮಾಧ್ಯಮಿಕ ಶಿಕ್ಷಣ ವಿಭಾಗದಲ್ಲಿ, ದೇಶಭಾಷೆಯ ಪಾಠವನ್ನುಳಿದು ಮಿಕ್ಕೆಲ್ಲ ಪಾಠಗಳನ್ನೂ ಇಂಗ್ಲಿಷಿನಲ್ಲಿ ಕಲಿಸಬೇಕು.

(ಕ) ಮಾಧ್ಯಮಿಕ ಪ್ರಾರಂಭ ತರಗತಿಗಳಲ್ಲಿ ಕೆಳಗೆ ಹೇಳಿದ ವಿಷಯಗಳ ಅಭ್ಯಾಸ ನಡೆಯಬೇಕು.

i) ಮುಖ್ಯ ಭಾಷೆ ಎಂದರೆ ಇಂಗ್ಲಿಷ್ (ಮುಂದೆ ದೇಶಭಾಷೆಯೊಂದನ್ನು ಮಾಧ್ಯಮವನ್ನಾಗಿಸುವ ವರೆಗೆ).

ii) ದ್ವಿತೀಯ ಭಾಷೆ (ಇಂಗ್ಲಿಷ್ ಮುಖ್ಯ ಭಾಷೆಯಾಗಿರುವವರೆಗೆ, ಯಾವುದಾದರೂ ಒಂದು ದೇಶಭಾಷೆಯನ್ನು ಕಲಿಸಬಹುದು.

ಮುಂದೆ ದೇಶಭಾಷೆಯೆ ಮಾಧ್ಯಮ ಭಾಷೆಯಾದಲ್ಲಿ, ಇಂಗ್ಲಿಷ್-ಸಂಸ್ಕೃತಗಳು ದ್ವಿತೀಯ ಭಾಷೆಗಳಾಗುವುವು).

(ಡ) ಮಾಧ್ಯಮಿಕ ಶಿಕ್ಷಣವಿಭಾಗದ ಮೇಲಿನ ತರಗತಿಯಲ್ಲಿ ವ್ಯಾಸಂಗದ ವಿಷಯಗಳು.

i) ಮುಖ್ಯಭಾಷೆ ಇಂಗ್ಲಿಷ್ (ಮುಂದೆ ದೇಶಭಾಷೆ ಮಾಧ್ಯಮವಾಗುವ ತನಕ).

ii) ದ್ವಿತೀಯ ಭಾಷೆ (ಇಂಗ್ಲಿಷ್ ಮುಖ್ಯ ಭಾಷೆಯಾಗಿರುವವರೆಗೂ ಸಂಸ್ಕೃತ ಎರಡನೆಯ ಭಾಷೆಯಾಗಿರುತ್ತದೆ. ದೇಶಭಾಷೆ ಮಾಧ್ಯಮವಾದಾಗ ಸಂಸ್ಕೃತ ಮತ್ತು ಇಂಗ್ಲಿಷ್‌ಗಳಲ್ಲಿ ಯಾವುದಾದರೊಂದನ್ನು ಆರಿಸಿಕೊಳ್ಳಬಹುದು).

(ಇ) ಮರಾಟಿ ವಿದ್ಯಾರ್ಥಿಗಳೆಲ್ಲರಿಗೂ ಪ್ರಾಥಮಿಕ ಮತ್ತು ಮಾಧ್ಯಮಿಕ ತರಗತಿಗಳಲ್ಲಿ ಮರಾಟಿ ಕಡ್ಡಾಯವಾಗಿರಬೇಕು.

* * *

ಮೇಲಿನದನ್ನು ತಾವು ಓದಿಕೊಂಡರೆ, ಕನ್ನಡವನ್ನಿಲ್ಲಿ ಯಾವ ಸ್ಥಾನಕ್ಕೆ ಎಳೆದಿದ್ದಾರೆಂಬುದು ತಮಗೆ ಗೊತ್ತಾಗುವುದು. ಸೊಂಡೂರು ಕರ್ನಾಟಕದ ಸಂಸ್ಥಾನ. ಅಲ್ಲಿಯ ರಾಜರು ೧೯೩೮ ನೆಯ ಇಸವಿಯ ಬಳ್ಳಾರಿ ಸಾಹಿತ್ಯಸಮ್ಮೇಳನದ ಉದ್ಘಾಟನೆಯನ್ನು ಮಾಡುತ್ತ ತೆಗೆದ ಉದ್ಗಾರಗಳು ತಮಗೆ ನೆನಪಿರಬಹುದು. ಆ ಅಂದಿನ ಉದ್ಗಾರಗಳಿಗೂ ಈಗಿನ ಈ ಧೋರಣೆಗೂ ಎಲ್ಲಿಯ ಸಂಬಂಧ? 'ಕನ್ನಡ-ಸೈನಿಕ'ನು ಈ ಕಡೆಗೆ ತನ್ನ ಕೈಚಳಕ ತೋರಿಸಲು ಮನಸ್ಸು ಮಾಡುವನೊ?"

ಮೇಲಿನ ಕಾಗದದೊಳಗಿನ ಸಂಗತಿಯನ್ನೆಲ್ಲ ವಿಚಾರಿಸಿ ನೋಡಿದರೆ ಈ ಮಾತುಗಳು ಸ್ಪಷ್ಟವಾಗಿ ಕಾಣುತ್ತಲಿವೆ:

೧. ಸೊಂಡೂರು ಸರಕಾರವು ಕನ್ನಡ ದೇಶಭಾಷೆಯೆಂದು ಒಪ್ಪಿದ್ದರೂ, ಅದಕ್ಕೆ ಕೊಟ್ಟ ಸ್ಥಾನ ಎರಡನೆಯದಾಗಿದೆ.

೨. ಮರಾಟಿಗರು ಮರಾಟಿಯನ್ನು ಕಡ್ಡಾಯವಾಗಿ ಕಲಿಯಬೇಕೆಂದಂತೆ ಕನ್ನಡಿಗರು ಕನ್ನಡವನ್ನ ಕಡ್ಡಾಯವಾಗಿ ಕಲಿಯಬೇಕೆಂಬ ವಿಧಿ ಇಲ್ಲ.

೩. ಭಾರತದ ಎಲ್ಲ ಪ್ರಾಂತೀಯ ಸರಕಾರಗಳು ಮಾಧ್ಯಮಿಕ ಶಿಕ್ಷಣವಿಭಾಗದ ಎಲ್ಲ ವಿಷಯಗಳನ್ನೂ ಪ್ರಾದೇಶಿಕ ಭಾಷೆಯಲ್ಲಿ ಕಲಿಸಬೇಕೆಂಬ ತತ್ತ್ವವನ್ನು ಒಪ್ಪಿ ಪ್ರಚಾರದಲ್ಲಿ ತಂದಿದ್ದರೂ, ಒಂದೆ ಒಂದು ಮಾಧ್ಯಮಿಕ ಶಾಲೆಯನ್ನುಳ್ಳ ಈ ಪುಟ್ಟ ಸಂಸ್ಥಾನ ಒಪ್ಪುತ್ತಿಲ್ಲ.

೪. ಕನ್ನಡ ಹುಡುಗರು ಮರಾಟಿ ಲಿಪಿಯನ್ನೂ ಕಡ್ಡಾಯವಾಗಿ ಕಲಿಯಬೇಕಂತೆ. (ಮರಾಟಿ ಹುಡುಗರಿಗೆ ಕನ್ನಡವನ್ನು ಕಡ್ಡಾಯವಾಗಿ ಕಲಿಯಬೇಕೆಂಬುದು ಇದ್ದಂತಿಲ್ಲ.)

ಇದನ್ನೆಲ್ಲ ನೋಡಿದರೆ, ಸೊಂಡೂರು ಸರಕಾರಕ್ಕೆ ಕನ್ನಡವನ್ನು ಅಲಕ್ಷ್ಯದಿಂದ ಕಾಣಬೇಕೆಂಬ ಬುದ್ಧಿಯಿದೆಯೆಂಬುದು ಸ್ಪಷ್ಟವಾಗಿ ಕಂಡುಬರುವುದು. ೧೦೦ ಕ್ಕೆ ೧೦೦ ಜನ ಕನ್ನಡ ಪ್ರಜೆಗಳೆ ಇರುವಾಗ, ಮರಾಟಿ ಭಾಷೆಗೆ ದೇಶಭಾಷೆಯ ಸ್ಥಾನ ಏಕೆ ಬರಬೇಕು? ದೊರೆಗಳು ಮರಾಟಿಗರಾದುದರಿಂದ. ಅವರ ಊಳಿಗಕ್ಕಾಗಿ ಬಂದಿದ್ದ ಕೆಲವರೂ—ಇತ್ತೀಚೆಗೆ ಅಧಿಕಾರಿಗಳಾಗಿ ಬಂದ ಕೆಲವರೂ—ಮರಾಟಿಗರಿರಬಹುದು; ಇದ್ದರೂ ಅವರ ಸಂಖ್ಯೆಯೆಷ್ಟು? ಅವರ ಸಂಖ್ಯೆಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಆಂಧ್ರ, ಹಿಂದುಸ್ತಾನಿ ಮಾತನಾಡುವವರೂ ಆ ಸಂಸ್ಥಾನದಲ್ಲಿ ಇದ್ದಾರೆ; ಅವರ ಭಾಷೆಯನ್ನೂ ದೇಶಭಾಷೆಯೆಂದು ಗಣಿಸಬಾರದೇಕೆ? ಮರಾಟಿಯನ್ನೂ ದೇಶಭಾಷೆಯೆಂದು ಹೇಳುವ ಸೊಂಡೂರು-ಸರಕಾರವು 'ದೇಶಭಾಷೆ' ಎಂಬುದಕ್ಕೆ ಯಾವ ವ್ಯಾಖ್ಯೆಯನ್ನು ನಿರ್ಮಿಸಿಕೊಂಡಿದೆ? ಮರಾಟಿ ಭಾಷೆ ಆವಶ್ಯಕವೇ ಇಲ್ಲದಿರುವ ಪ್ರದೇಶದ ಶಿಕ್ಷಣಕ್ಷೇತ್ರದಲ್ಲಿ, ಆ ಭಾಷೆಗೆ ಪ್ರಥಮ ಸ್ಥಾನ ಸಿಕ್ಕುವುದೆಂದರೆ, ಇದನ್ನು ಆಡಳಿತದ ದುರಭಿಮಾನದ ಒತ್ತಾಯವೆಂದಲ್ಲದೆ ಇನ್ನೇನು ಹೇಳಬೇಕು? ವಸ್ತುಸ್ಥಿತಿಯನ್ನೆಲ್ಲ ವಿಮರ್ಶಿಸಿ ನೋಡಿದರೆ, ಸೊಂಡೂರು ಸಂಸ್ಥಾನದಲ್ಲಿ ಆಡಳಿತದ ಭಾಷೆಯನ್ನು ಮರಾಟಿಯನ್ನೇ ಮಾಡಬೇಕೆಂಬ ಆಂತರಿಕ ಉದ್ದೇಶವಿದ್ದುದನ್ನು ಯಾವ ಮುಂಗಣ್ಣಿನವನೂ ಕಂಡುಹಿಡಿಯಬಹುದು. ಸಂಸ್ಥಾನದ ಪ್ರಜೆಗಳು ತಮ್ಮ ಭಾಷೆಯ ಕೊರಳಿಗೆ ಬಂದಿರುವ ಈ ಅರ್ಧಚಂದ್ರವನ್ನು ಚೆನ್ನಾಗಿ ಕಂಡುಕೊಳ್ಳಬೇಕು; ಈ ಅರ್ಧಚಂದ್ರದಿಂದ ಸುರಕ್ಷಿತರಾಗಿರುವುದಕ್ಕೆ ಈಗಿನಿಂದಲೂ ಚಟುವಟಿಕೆಯ ಚೈತನ್ಯವನ್ನು ತೋರಿಸುತ್ತಿರಬೇಕು.

ಸೊಂಡೂರಿನ ಅರಸರು ಬಳ್ಳಾರಿಯ ಸಾಹಿತ್ಯಸಮ್ಮೇಳನದ ಪ್ರಾರಂಭೋತ್ಸವಕ್ಕೆ ದಯಮಾಡಿಸಿದ್ದಾಗ, ಜಯಂತಿಯ ಪ್ರತಿನಿಧಿಯಾದ 'ವಿಹಂಗಮ' ಅವರನ್ನು ಕಂಡ. ಅಂದೆಯೆ ಅವರ ಹೃದಯವನ್ನು ಗುರುತಿಸಿದನೇನೊ! ತನ್ನ ಅಂದಿನ 'ಅವಲೋಕನ'ದಲ್ಲಿ ಹೀಗೆ ಬರೆದಿದ್ದಾನೆ:

"ಕನ್ನಡಿಗರು ತಮ್ಮ ಭವಿಷ್ಯದ ಸುಖಜೀವನದ ಆಶೆಯಿಂದ 'ಇವರಿಂದ ಸುಖ ದೊರೆತೀತೇ? ಅವರಿಂದ ಸುಖ ದೊರೆತೀತೆ?' ಎಂದು, 'ಆಗುವವರಲ್ಲಿಯೂ ಆಗದವರಲ್ಲಿಯೂ' ಆತ್ಮೀಯತೆಯನ್ನು ಬೆಳೆಯಿಸಿ, ಅವರಿಗೆ ಮರ್ಯಾದೆ ಸಲ್ಲಿಸಲು ಮುಂದುವರಿಯುವರು. ಮರ್ಯಾದೆ ಸಲ್ಲುವವರೆಗಷ್ಟು ಆತ್ಮೀಯರಾಗಿದ್ದು, ತಮ್ಮ ಹೆಸರನ್ನು ಮೆರಯಿಸಿಕೊಂಡು, ಕೆಲಸ ತೀರಿದ ಮೇಲೆ ಆ ಮಹನೀಯರಿಂದಲೆ ಪೆಟ್ಟುತಿಂದು ಮುಖಬಾಯಿಸಿಕೊಂಡ ಸಂದರ್ಭಗಳು ಬೇಕಾದಷ್ಟು. ಹೋದಸಲ ಜಮಖಂಡಿಯ ಶ್ರೀಮಂತರನ್ನು ಕರೆದಾಗ, ಅವರು ನಿಜವಾಗಿಯೂ ತಮ್ಮ ಪ್ರಾಮಾಣಿಕತನವನ್ನು ವ್ಯಕ್ತಪಡಿಸಿದರು. 'ಕನ್ನಡಿಗರ ಆತ್ಮೀಯತೆಯೂ ಬೇಡ, ಮರ್ಯಾದೆಯೂ ಬೇಡ; ಅವರಿಗೆ ನಾವು ನೆರವು ಕೊಡುವೆವೆಂಬ ಸುಳ್ಳು ಭರವಸೆಯುಂಟಾಗುವುದೂ ಬೇಡ' ಎಂದು ಅರಮನೆಯಲ್ಲಿಯೆ ಸುಮ್ಮನಿದ್ದು ಬಿಟ್ಟರು. ಈ ಸಲ ಸೊಂಡೂರಿನ ಶ್ರೀಮಂತರು ಕನ್ನಡಿಗರಿಗಿಂತ ಕನ್ನಡಿಗರಾಗಿ ಮುಂದೆ ಬಂದು, ಅಭಿಮಾನದಿಂದ ಪ್ರಾರಂಭೋತ್ಸವದ ಕಾರ್ಯ

(೧೦೪ ನೆಯ ಪುಟಕ್ಕೆ ಮುಂದುವರಿದಿದೆ.)



ಸ್ವದೇಶೀ ಸರ್ವಾಧಿಕಾರ !

ಕೊನೆಗೊಮ್ಮೆ ರಾಜಾಜಿಯವರಿಗೆ ಕಾಂಗ್ರೆಸನ್ನೆ ಬಿಟ್ಟುಬಿಡುವ ಪ್ರಸಂಗ ಬಂದಿತು. ಭಿನ್ನಾಭಿಪ್ರಾಯವಾದಲ್ಲಿ ಶಿಸ್ತುಭಂಗದ ಕೊಡಲಿಯನ್ನೆತ್ತಿ, ಕಾಂಗ್ರೆಸು ಪರಶುರಾಮನಂತೆ ಕ್ಷತ್ರಿಯವಂಶವನ್ನೆ ನಿರ್ಮೂಲಮಾಡಬೇಕೆಂದಿದೆಯೆ ? ರಾಜಾಜಿಯವರ ಅಪರಾಧವೇನು ? 'ಹಿಂದು-ಮುಸ್ಲಿಂ ಐಕ್ಯವಾಗದೆ ಸ್ವಾತಂತ್ರ್ಯ ದೊರೆಯದು, ಅದಕಾಗಿ ಸದ್ಯಕ್ಕೆ ಮುಸಲ್ಮಾನರಿಗಾಗಿ ಸ್ವಯಂ ನಿರ್ಣಯ ತತ್ತ್ವದ ಅಧಿಕಾರವನ್ನೊಪ್ಪಿ ಮೊದಲು ಐಕ್ಯವನ್ನುಂಟು ಮಾಡಿಕೊಳ್ಳಬೇಕು'—ಎಂದುದು! ೧೯೨೦ ರಿಂದ ಇಂದಿನ ವರೆಗೆ ಮಹಾತ್ಮಾ ಗಾಂಧಿಯವರು ಈ ಮಾತನ್ನೆ ಹೇಳುತ್ತ ಬಂದಿದ್ದಾರೆ. ಅದೇ ಮಾತನ್ನು ರಾಜಾಜಿಯವರು ಹೇಳಿದರೆ ಅಪರಾಧವೆನಿಸಿತು ! ಯಾಕೆ ? 'ಇಂದು ಕಾಂಗ್ರೆಸು ಇಡಿಯ ದೇಶದ ಪ್ರತಿನಿಧಿಯಲ್ಲ, ಕೇವಲ ಒಂದು ರಾಜಕೀಯ ಪಕ್ಷವಾಗಿದೆ'ಎಂದು ಆಚಾರ್ಯರು ಹೇಳುವುದು ನಿಜವಿರಬಹುದೆ ? ಇಡಿಯ ದೇಶದ ಪ್ರತಿನಿಧಿಯಾದ ಸಂಸ್ಥೆಯಾಗಿದ್ದರೆ, ಇಂತಹ ಭಿನ್ನಾಭಿಪ್ರಾಯಕ್ಕೆ ವನವಾಸದ ಶಿಕ್ಷೆ ಇರುತ್ತಿರಲಿಲ್ಲ. ಅದೇ ಕಾಂಗ್ರೆಸು ತಾನೂ ಒಂದು ರಾಜಕೀಯ ಪಕ್ಷ ಎನಿಸಿದರೆ, ಬೇರೆ ಪಕ್ಷಗಳಿಗಾಗಿ ಸಹಾನುಭೂತಿಯನ್ನು ತೋರಿಸುವುದು ಅಪರಾಧವಾಗುವುದು. ಏನೆ ಇರಲಿ, ಇತ್ತಿತ್ತಲಾಗಿ ಕಾಂಗ್ರೆಸಿನಲ್ಲಿ ಕೇವಲ ಸ್ವಾತಂತ್ರ್ಯಪ್ರಿಯ ದೇಶಭಕ್ತರಿಗೆ ಸ್ಥಾನವಿಲ್ಲ ಎಂಬುದು ಸ್ಪಷ್ಟವಾಗತೊಡಗಿದೆ. ಅದರಂತೆಯೆ ವಿಚಾರಸ್ವಾತಂತ್ರ್ಯಕ್ಕಾಗಲಿ ಧೋರಣೆಯ (ಧ್ಯೇಯದ್ದಲ್ಲ) ಚರ್ಚೆಗಾಗಲಿ ಎಳ್ಳಷ್ಟೂ ಅವಕಾಶವಿಲ್ಲ ಎಂಬುದೂ ಸ್ಪಷ್ಟವಿದೆ. ಇಂತಹ ಅಸಹನೆಯ ನೀತಿಯಿಂದ ವೈಯಕ್ತಿಕ ಲಾಲಸೆ ಇದ್ದವರಿಗೆ, ಅಧಿಕಾರಪದಗಳನ್ನು ಆಶಿಸುವವರಿಗೆ ಪ್ರೋತ್ಸಾಹ ದೊರೆಯುತ್ತಿಲ್ಲ. ದಿನದಿನಕ್ಕೆ ಎಲ್ಲ ಕಡೆ ಸ್ಥಳಿಕ ಕಾಂಗ್ರೆಸ್ ಸಂಸ್ಥೆಗಳಲ್ಲಿ ವ್ಯಕ್ತಿ-ವ್ಯಕ್ತಿಗಳ ರಾಜಕಾರಣ ಬೆಳೆಯುತ್ತಿರುವುದು, ಜಾತೀಯ ವೈಮನಸ್ಯ ಹೆಚ್ಚಾಗುತ್ತಿರುವುದು, ತಂತ್ರಕ್ಕಿಂತ ಮಂತ್ರದ ಬುರುಗೇ ಕಾಣುತ್ತಿರುವುದು—ನಮ್ಮ ಮೇಲಿನ ಅಭಿಪ್ರಾಯವನ್ನು ಸಮರ್ಥಿಸುವುವು. ದೇಶದಲ್ಲಿದ್ದ ಅನೇಕ ಯುವಕಸಂಘಗಳು ಕಾಂಗ್ರೆಸಿಗಾಗಿ ಅಷ್ಟೊಂದು ಆಸ್ಥೆಯನ್ನು ತೋರಿಸದಿರುವುದು ಆಶ್ಚರ್ಯವಲ್ಲ. ವಿಚಾರಸ್ವಾತಂತ್ರ್ಯವು ಯುವಕರ ಆರಾಧ್ಯ ದೇವತೆ; ಆದರೆ ಅದಕ್ಕೆ ಕಾಂಗ್ರೆಸಿನಲ್ಲಿ ಜಾಗೆ ಇಲ್ಲ.

(೧೨-೭-೪೨)

ಕಾಂಗ್ರೆಸಿನ ಕಠೋರ ನಿಶ್ಚಯ

ದಿನದಿನಕ್ಕೆ ಹದಗೆಡುತ್ತಲಿದ್ದ ಭಾರತೀಯ ರಾಜಕೀಯ ಪರಿಸ್ಥಿತಿಯಲ್ಲಿ ಕೊನೆಗೊಮ್ಮೆ ಕಾರ್ಯಾವೇಶದ ವಿದ್ಯುತ್ಸಂಚಾರವಾಯಿತು. ಇದೇ ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ಹತ್ತು ದಿವಸಗಳ ಚರ್ಚೆಯ ನಂತರ ಒಪ್ಪಿ ಪ್ರಕಟಿಸಿದ ಗೊತ್ತುವಳಿಯು ಮಹತ್ತ್ವ. ಇಂದಿನ ವರೆಗೆ ಕಾಂಗ್ರೆಸೂ ಪ್ರಬಲರಂತೆ ಮಾತಿಗೂ ಕೃತಿಗೂ ಸಂಬಂಧವನ್ನಿಟ್ಟಿರಲಿಲ್ಲ. ಇಂದು ಒಂದು ನಿಶ್ಚಿತ ಧೋರಣೆಯನ್ನು ಸಾರಿದೆ. (೧) ಸರ್ವಾಧಿಕಾರಿತ್ವವನ್ನು ಕಾಂಗ್ರೆಸು ಅತ್ಯಂತವಾಗಿ ವಿರೋಧಿಸುವುದು; (೨) ಸರ್ವಾಧಿಕಾರಿತ್ವದ ವಿನಾಶಕ್ಕಾಗಿ ಕೈಕೊಂಡ ಯುದ್ಧದಲ್ಲಿ, ಮಿತ್ರರಾಷ್ಟ್ರಗಳಿಗೆ ಶಕ್ತಿ ಕಡಿಮೆಯಾಗುವಂತೆ ಕಾಂಗ್ರೆಸು ಏನನ್ನೂ ಮಾಡಬಯಸುವುದಿಲ್ಲ; (೩) ಹಿಂದುಸ್ಥಾನಕ್ಕೆ ಜಪಾನಿಗಳು ಬಾರದಂತೆ ಎಲ್ಲ ವಿಧವಾಗಿ ಯತ್ನಿಸಲು ಕಾಂಗ್ರೆಸು ಸಿದ್ಧವಿದೆ. ಇಷ್ಟೇಕೆ ? (೪) ರಾಷ್ಟ್ರಾಧ್ಯಕ್ಷರು ಹೇಳಿದಂತೆ ಶಸ್ತ್ರಗಳಿಂದ ಹೋರಾಡಲು, ಸೈನ್ಯಭರತಿಯನ್ನು ಮಾಡಲು ಕೂಡ ಕಾಂಗ್ರೆಸು ಸಿದ್ಧವಿದೆ. ಈ ನಾಲ್ಕು ಮಹತ್ತ್ವದ ಮಾತುಗಳನ್ನು ಕಾಂಗ್ರೆಸು ಸ್ಪಷ್ಟವಾಗಿ ಹೇಳಿದೆ. ಹೀಗಿರುವಾಗ ಕಾಂಗ್ರೆಸಿಗೆ ಯಾರಾದರೂ ದುರುದ್ದೇಶವನ್ನು ಕಲ್ಪಿಸಿದರೆ ಅದು ಅವರವರ ಹೊಟ್ಟೆನೋವಿಗಾಗಿ, ಸ್ವಾರ್ಥಸಾಧಕ ಭೀತಿಗಾಗಿ, ಇಲ್ಲವೆ ಧಾಂಧಿಕತನದ ಉದ್ದಾಮ ಪ್ರದರ್ಶನಕ್ಕಾಗಿ ಎಂದು ಹೇಳಲು ಯಾವ ಅಡ್ಡಿಯೂ ಇಲ್ಲ.

(೧೪-೭-'೪೨)

ಕುರುಡ-ಕಿವುಡರ ಕೂಟ

ಅಪಪ್ರಚಾರದ ಅಂತರಂಗವನ್ನು ತುಸು ಹೊತ್ತಿನಲ್ಲಿಯೆ ತೋರಿಸುವವರಿದ್ದೇವೆ. ಅದಕ್ಕೂ ಮುಂಚೆ ಅವರ ಅಪಹಾಸ್ಯ ಪರಿಸ್ಥಿತಿಯನ್ನು ನೋಡೋಣ. ಇತಿಹಾಸದ ಪಾಠವನ್ನು ಕಾಣಲೊಲ್ಲರು ಇವರು ; ತಮ್ಮ ಕಣ್ಮುಂದೆಯೆ ನಡೆದ ಮಲಯ, ಬ್ರಹ್ಮದೇಶ, ಸಿಂಗಾಪುರಗಳ ಸ್ಥಿತಿಯನ್ನು ಕಾಣಲೊಲ್ಲರು ; ಸದ್ಯಕ್ಕೆ ನಮ್ಮಲ್ಲಿಯೆ ಯುದ್ಧಕ್ಕಾಗಿ ಜನರಲ್ಲಿದ್ದ ವಿಚಾರಗಳನ್ನೂ

ಕಾಣಲೊಲ್ಲರು! ಎಲ್ಲರೂ ಇಂತಹರೆ ಎಂದು ನಮ್ಮ ಅಭಿಪ್ರಾಯವಿಲ್ಲ ; ಎಲ್ಲರೂ ಬ್ರಿಟಿಶರೆ ಎಂದೂ ನಮ್ಮ ಅಭಿಪ್ರಾಯವಿಲ್ಲ. ಜಿನ್ನಾ-ಪಟೆಲ್‌ವಾಡ-ಸಾವರಕರ-ಆಮೆರಿ-ಅಮೇರಿಕನ್ ಹೀಗೆ, ವಿಶ್ವವ್ಯಾಪಕವಾಗಿದೆ ಈ ಅಂಧಪಕ್ಷ. ಇವರ ಜೊತೆಗೆ ಸತ್ಯವನ್ನು ಎಂದೂ ಕೇಳದ್ದಕ್ಕೆ, ಅಪಪ್ರಚಾರದ ಗುಡುಗಿನಿಂದಲೆ ಗಡುಚಿಟ್ಟಿದ್ದಕ್ಕೆ ಕಿವುಡರಾದ ಅನೇಕರಿದ್ದಾರೆ. ಕುರುಡರು ಕಾಣದ್ದನ್ನು ಹೇಳುವರು ; ಕೇಳಿಸದಿದ್ದರೂ ತಿಳಿದವರಂತೆ ಕಿವುಡರು ತಲೆತೂಗುವವರು! ಈ ಕುರುಡ-ಕಿವುಡರ ಕೂಟದಿಂದ ನಡೆಯಲಿದ್ದ ಅಪಪ್ರಚಾರವು ಇಂದು ಅಸಹ್ಯವಾದಂತೆ, ಎಂದಿಗೂ ಅಪಹಾಸ್ಯವೂ ಆಗುವುದು.

(೧೭-೭-'೪೨)

ಅಪಪ್ರಚಾರದ ಅಂತರಂಗ

ನಿಜವಾಗಿ ನೋಡಿದರೆ ವರ್ಕಿಂಗ್ ಕಮಿಟಿಯ ಗೊತ್ತುವಳಿಯನ್ನಾಗಲಿ, ಆ ತರುವಾಯದ ಮುಂದಾಳುಗಳ ಸಂದರ್ಶನಗಳನ್ನಾಗಲಿ ಓದಿದರೆ ಅಪಾರ್ಥಕ್ಕೆ ಆಸ್ಪದವೆ ಇಲ್ಲ. 'ಸದ್ಯದ ಪರಿಸ್ಥಿತಿಯನ್ನೆ ಗಾಂಧಿಯವರು ಮರೆತಿದ್ದಾರೆ' ಎಂದು ಒಂದೆರಡು ಬ್ರಿಟಿಶ-ಅಮೇರಿಕನ್ ಪತ್ರಿಕೆಗಳ ಅಭಿಪ್ರಾಯ! ಅದು ಹೇಗೆ? ಯುದ್ಧ ಪರಿಸ್ಥಿತಿಯ ಪೂರ್ತಿಯಾದ ಸಮಾಲೋಚನೆ ಗೊತ್ತುವಳಿಯಲ್ಲಿದೆ. 'ಈ ಪರಿಸ್ಥಿತಿಯಲ್ಲಿ ಮಿತ್ರರಾಷ್ಟ್ರಗಳ ಯುದ್ಧ ಪ್ರಯತ್ನಕ್ಕೆ ಅಡ್ಡಬರುವ ಇಚ್ಛೆಯು ಇಲ್ಲ' ಎಂದೂ ಸ್ಪಷ್ಟವಾಗಿದೆ. ಸ್ವಾತಂತ್ರ್ಯದ ತತ್ತ್ವವನ್ನು ಸಾರಿ ಹಿಂದುಸ್ತಾನಕ್ಕೆ ಸ್ವಾತಂತ್ರ್ಯ ಒಪ್ಪದಿರುವುದೆ- ಈ ಬ್ರಿಟಿಶ ನೀತಿಯೆ—ಅಡ್ಡಿಯಾಗಿದೆ, ಅದನ್ನು ತೆಗೆದೊಗೆಯಲು ಕಾಂಗ್ರೆಸಿನ ಯತ್ನ. ಹೀಗಿರುವಾಗಲೂ ಮೇಲಿನ ಮಾತನ್ನು ಹೇಳುವುದೆಂದರೆ ಅಪಪ್ರಚಾರವಲ್ಲವೆ? 'ಕಾಂಗ್ರೆಸು ತನ್ನ ಇಭ್ರುತ್ವನ್ನು ಪುನರುತ್ಥಾಪಿಸಲು ಈ ಆಟವನ್ನು ಹೂಡಿದೆ' ಎಂದು ಇನ್ನೊಂದು ಕುತ್ಸಿತಟೀಕೆ. ಕಾಂಗ್ರೆಸಿನ ಇಭ್ರುತ್ವನ್ನು ಕಸಿದುಕೊಳ್ಳುವಂತಹ ರಾಜಕೀಯ ಪಕ್ಷವಾಗಲಿ, ಘಟನೆಯಾಗಲಿ ಇದುವರೆಗ ತಲೆಯನ್ನೆ ಎತ್ತಿಲ್ಲ. ಇದಲ್ಲದೆ 'ಹಿಂದುಸ್ತಾನಕ್ಕೆ ಸ್ವಾತಂತ್ರ್ಯ ಒಪ್ಪಿದಾಕ್ಷಣ, ಕಾಂಗ್ರೆಸು ತನ್ನ ರಾಜಕೀಯ ಪಕ್ಷವೆಂಬ ಅಸ್ತಿತ್ವವನ್ನು ಬಿಟ್ಟುಕೊಡುವುದು' ಎಂದು ಮಹಾತ್ಮರು ಸ್ಪಷ್ಟವಾಗಿ ಸಾರಿದ್ದಾರೆ. 'ಇನ್ನೂ ಬೇರೆ ಅನೇಕ ಪಕ್ಷಗಳಿವೆ' ಎಂಬುದೊಂದು ಹೆಮ್ಮೆ. ಹಾಗಿದ್ದರೆ ಕಾಂಗ್ರೆಸಿನ ಧೋರಣದಿಂದ ಯುದ್ಧಕಾರ್ಯಕ್ಕೆ ತಡೆಯಾಗುವುದೆಂಬ ಹೆದರಿಕೆಯಾಗಲಿ ಆಕ್ರೋಶವಾಗಲಿ ಯಾಕೆ? 'ಹಿಂದುಸ್ತಾನದಲ್ಲಿ ಐಕ್ಯವೆ ಇಲ್ಲದಾಗ ಕಾಂಗ್ರೆಸಿನ ಬೇಡಿಕೆಯನು ಪೂರಯಿಸುವುದು ಹೇಗೆ?' ಎಂಬ ಹಿರಿತನದ ಮಾತೂ ಇದೆ. ಆದರೆ ಐಕ್ಯವಾದರೂ ಪೂರಯಿಸಲಾಗದು (ಸಂರಕ್ಷಣಾಖಾತೆಯನ್ನು ಒಪ್ಪಿಸಲಾಗದು, ಉದಾ :) ಎಂದು ಕ್ರಿಪ್ಸರೇ ಹೇಳಿದರಲ್ಲ?

(೧೪-೭-'೪೨)

ಯುದ್ಧಪ್ರಸಂಗದ ಆಪದ್ಧರ್ಮ

'ಸದ್ಯದ ಪ್ರಸಂಗವು ಯುದ್ಧದ ಪ್ರಸಂಗವು ; ಈ ಕಾಲದಲ್ಲಿ ರಾಜಕೀಯ ಘಟನಾತ್ಮಕ ಬದಲಾವಣೆಗಳಲ್ಲಿ ತೊಡಗುವುದಕ್ಕೆ ಸಮಯವಿಲ್ಲ. ಇದಲ್ಲದೆ ಈ ಕಾಲದಲ್ಲಿ ಬ್ರಿಟಿಶ್ ಸೈನ್ಯವನ್ನು ಸ್ಥಳಾಂತರಿಸುವುದೂ ಶಕ್ಯವಿಲ್ಲ' ಎಂದು ತಟಸ್ಥರೂ ಸರಕಾರದವರೂ ವಾದಿಸುತ್ತಲಿದ್ದಾರೆ. ಆದರೆ ಈ ವಾದಕ್ಕೆ ಆಸ್ಪದವೂ ಇಲ್ಲ, ಈ ವಾದದಲ್ಲಿ ಹುರುಳಿಲ್ಲ ಎಂಬುದು ದಿನದಿನಕ್ಕೆ ಹೆಚ್ಚೆಚ್ಚು ಸ್ಪಷ್ಟವಾಗುತ್ತಲಿದೆ. ಮೊದಲನೆಯದು, ಘಟನಾತ್ಮಕ ಬದಲಾವಣೆಗಳ ಪ್ರಶ್ನೆಯೆ ಇಲ್ಲ. ಯಾಕೆಂದರೆ, ಬ್ರಿಟಿಶ ಮತ್ತು ಹಿಂದುಸ್ತಾನ ಇವುಗಳ ನಡುವೆ ಒಪ್ಪಂದದ ರೂಪದಲ್ಲಿ ಬದಲಾವಣೆಯಾಗುತ್ತಿದೆ. ಯುದ್ಧ ಸಹಾಯಕ್ಕಾಗಿ, ಅಮೇರಿಕೆ-ರಶಿಯಾಗಳ ಕೂಡ ಕಾಲಕಾಲಕ್ಕೆ ಬೇರೆ ಬೇರೆ ಒಪ್ಪಂದಗಳು ನಡೆದಿಲ್ಲವೆ? ಹಾಗೆಯೆ ಹಿಂದುಸ್ತಾನದೊಡನೆಯೂ ಆಗಬಾರದೇಕೆ? 'ಹಿಂದುಸ್ತಾನದಲ್ಲಿ ಯಾರಕೂಡ ಒಪ್ಪಂದಮಾಡಿಕೊಳ್ಳತಕ್ಕದ್ದು' ಎಂಬ ಕುಂಟು ನೆವ ಮುಂದೆ ಮಾಡಬೇಕಾಗಿಲ್ಲ. ಈ ವಿಷಯವಾಗಿ ಮೌಲಾನಾ ಆಝಾದರು, ಪಂಡಿತ ಜವಾಹರರು ಸ್ಪಷ್ಟವಾಗಿ ಹೇಳಿದ್ದಾರೆ. 'ಹಿಂದುಸ್ತಾನದ ಸ್ವಾತಂತ್ರ್ಯವನ್ನು ಒಪ್ಪಿಕೊಂಡು (ಇದು ಮುಂಚೆ ಆಗತಕ್ಕದ್ದು), ಆ ಮೇಲೆ ಸಂಧಾನಕ್ಕೆ ಬಂದರೆ, ಪ್ರತಿಯೊಂದು ಪ್ರಮುಖ ಪಕ್ಷದಿಂದ ಒಬ್ಬೊಬ್ಬನೆ ಪ್ರತಿನಿಧಿ ಬರುವನು (ಸರಕಾರದವರು ಆಮಂತ್ರಿಸಿದರೆ ಮಾತ್ರ ಪರಸ್ಪರ ಸಂಖ್ಯೆಯ ಪ್ರಮಾಣದ ಲೆಕ್ಕ ಪ್ರಾರಂಭವಾಗುವುದು). ಇಷ್ಟೇಕೆ? ಹಿಂದುಸ್ತಾನಕ್ಕೆ ಮೊದಲು ಸ್ವಾತಂತ್ರ್ಯ ಒಪ್ಪಿದ್ದಾದರೆ, ಮುಸ್ಲಿಂ ಲೀಗಿನೊಡನೆಯೆ ಸಂಧಾನವನ್ನು ಮಾಡಿಕೊಳ್ಳಲಿ; ಆ ಮೇಲೆ ಕಾಂಗ್ರೆಸು ಲೀಗಿಗೆ ಸಹಕಾರ ಕೊಡುವುದು' ಎಂದು ರಾಷ್ಟ್ರಾಧ್ಯಕ್ಷರೆ ತಮ್ಮ ಅಧಿಕಾರಯುಕ್ತರೀತಿಯಲ್ಲಿ ಹೇಳಿದ್ದಾರೆ.

ಬದಲಾವಣೆ ಬೇಕೇ ಬೇಕು!

'ಯುದ್ಧಕಾಲದಲ್ಲಿ ಸಹಾಯ ಮಾಡುವುದು ಈಗ— ರಶಿಯಾದಲ್ಲೂ ಇಜಿಪ್ತದಲ್ಲೂ ಈ ಸ್ಥಿತಿ ಇದ್ದಾಗ—ಅಗತ್ಯವಾಗಿದೆ, ಈ ಕಾಲದಲ್ಲಿ ಇಂತಹ ಬದಲಾವಣೆಗಾಗಿ ಹೊತ್ತುಗಳೆಯುವುದು ಅನವಶ್ಯವಿಲ್ಲ. ಯುದ್ಧದ ತರುವಾಯದಲ್ಲಿ ಮಿಕ್ಕವರಂತೆ ಹಿಂದುಸ್ತಾನಕ್ಕೂ ಸ್ವಾತಂತ್ರ್ಯ ಕಟ್ಟಿಟ್ಟದ್ದು, ಈ ಮಾತನ್ನು ನಾವು ಒಪ್ಪಿದ್ದೇವೆ, ಇಷ್ಟೇ ಸದ್ಯಕ್ಕೆ ಸಾಕಲ್ಲವೆ?'— ಎಂಬುದೊಂದು ತರ್ಕ ಬ್ರಿಟಿಶರಂತೆ ಕೆಲವು ಭಾರತೀಯರಿಗೂ ತಲೆಯನ್ನು ತುಂಬಿಕೊಂಡಿದೆ. ಈ ತರ್ಕಕ್ಕೆ ಕಾಂಗ್ರೆಸಿನ ವತಿಯಿಂದ ಅತ್ಯಂತ ಸಮರ್ಪಕವಾದ ಉತ್ತರ ದೊರೆತಿದೆ. ಒಂದು, ಹಿಂದಿನ ಅನುಭವದಿಂದ ಬ್ರಿಟಿಶರ ವಚನದಲ್ಲಿ ಪೂರ್ತಿಯಾಗಿ ವಿಶ್ವಾಸವನ್ನಿಡಲಾಗದು. ೧೯೧೪-೧೮ರ ಯುದ್ಧವೂ ಸ್ವಾತಂತ್ರ್ಯತತ್ತ್ವಕ್ಕಾಗಿಯೆ ಇದ್ದಿತಲ್ಲವೆ? ಆ ಯುದ್ಧದಲ್ಲಿ ಸಹಾಯ ಮಾಡಿ ಇಂದಿಗೆ ೧೫-೨೦ ವರ್ಷಗಳಾದುವು. ಇನ್ನೂ ಸ್ವಾತಂತ್ರ್ಯಕ್ಕಾಗಿ ನಾವು

ಅರ್ಹತೆಯನ್ನು ಪಡೆದುಕೊಳ್ಳಬೇಕೆಂಬ ಉಪನ್ಯಾಸಗಳೇ ಹೆಚ್ಚಾಗಿವೆಯಲ್ಲದೆ ಸ್ವಾತಂತ್ರ್ಯದ ನೆರಳು ಕೂಡ ಇಲ್ಲ! ಯುದ್ಧದ ಗಂಡಾಂತರವನ್ನು ಎದುರಿಸುವುದಕ್ಕಾಗಿ, ಎಂದಿಗೂ ಹೊಂದಿಕೆಯಾಗದ ಕಾನ್ಸರ್ವೇಟಿವ್–ಸೋಶಾಲಿಸ್ಟ್ ಪಕ್ಷಗಳು ಇಂಗ್ಲಂಡಿನಲ್ಲಿ ಒಂದಾಗಿಲ್ಲವೆ? ಹಾಗೆಯೆ ನಮ್ಮಲ್ಲೂ ಆಗಬಹುದಾಗಿದೆ. ಆದರೆ ಬ್ರಿಟಿಶರು ರಕ್ಷಕರಾಗಿರುವವರೆಗೆ—ನಮಗೆ ಆ ಗಂಡಾಂತರ ಮೈಮೇಲೆ ಬಂದಂತೆನಿಸುವುದಿಲ್ಲ. ಹಾಗೆ ಎನಿಸದಿದ್ದರೆ ಯುದ್ಧಕಾರ್ಯಕ್ಕೆ ಶಕ್ತಿಮೀರಿ ಸಹಾಯಮಾಡುವುದೂ ಸಂಭವವಿಲ್ಲ. ಅದಕಾಗಿ ಯುದ್ಧಸಹಾಯವು ಹೆಚ್ಚಾಗಲೆಂಬ ಉದ್ದೇಶಕ್ಕಾಗಿಯೆ ಕಾಂಗ್ರೆಸಿನ ಇಂದಿನ ಬೇಡಿಕೆ. ಆ ಬೇಡಿಕೆಯಲ್ಲಿ ಸೈನ್ಯಗಳ ವಿಷಯವಾಗಿ ಸ್ಪಷ್ಟವಾದ ಅಭಿಪ್ರಾಯವಿದೆ. ಮಿತ್ರ ರಾಷ್ಟ್ರಗಳ ಸೈನ್ಯಗಳು ಹಿಂದುಸ್ತಾನವನ್ನು ಬಿಟ್ಟು ಹೋಗಬೇಕಾಗಿಲ್ಲ. ಯುದ್ಧಕಾರ್ಯಕ್ಕಾಗಿ ಆ ಸೈನ್ಯಗಳು ಹಿಂದುಸ್ತಾನದಲ್ಲಿ ಎಲ್ಲ ಸವಲತ್ತುಗಳನ್ನೂ ಪಡೆಯಬಹುದು. ಇಷ್ಟೊಂದು ಸ್ಪಷ್ಟವಾದ ಬೇಡಿಕೆ ಕೂಡ ಅಪಪ್ರಚಾರಕ್ಕೆ ಗುರಿಯಾಗುವುದಾದರೆ, ಅದು ಕಾಂಗ್ರೆಸಿನ ಸಂಶಯವನ್ನೆ ದೃಢಪಡಿಸುವುದು; ಅಲ್ಲವೆ?

(೧೯-೭-'೪೨)

ಅನ್ಯಾಯದ ಅತಿರೇಕ

ಆದರೆ ಇಂತಹ ಎಲ್ಲ ಆರೋಪಗಳಿಗಿಂತ ತೀರ ಅನ್ಯಾಯದ್ದಾದ ಇನ್ನೊಂದು ಆರೋಪವಿದೆ. ಅದೆಂದರೆ, ಜಪಾನಕ್ಕೆ ಹಿಂದುಸ್ತಾನದ ಆಕ್ರಮಣವನ್ನು ಸುಲಭಶಕ್ಯಮಾಡಿಕೊಡುವುದು. ವರ್ಕಿಂಗ್ ಕಮಿಟಿಯ ನಿರ್ಣಯದಿಂದ ಬಿಕ್ಕಟ್ಟಂತಾದುದಕ್ಕಾಗಿಯೆ ಇಂತಹ ಅಸತ್ಯ, ಅಸಂಬದ್ಧ, ಅವಹೇಳನೀಯ ಆರೋಪವನ್ನು ಕಲ್ಪಿಸಿದ್ದಾರೆಂದು ಧೈರ್ಯದಿಂದ ಹೇಳಬಹುದು. ಯಾಕೆಂದರೆ—ವರ್ಕಿಂಗ್ ಕಮಿಟಿಯ ನಿರ್ಣಯದ ಪುರಸ್ಕರ್ತರಾದ ಮಹಾತ್ಮರ ಇಲ್ಲವೆ ಇಂದಿನ ಯುವಕರ ಏಕಮೇವಾದ್ವಿತೀಯ ಪ್ರತಿನಿಧಿ ಎನಿಸಿದ ಜವಾಹರರ ಮಾತಿನಲ್ಲಿ, ಈ ವಿಷಯವಾಗಿ ಖಂಡತುಂಡವಾದ ಅಭಿಪ್ರಾಯವಿದೆ. 'ನನ್ನ ಚಳವಳವು ಹಿಂದುಸ್ತಾನದ ಸ್ವಾತಂತ್ರ್ಯಕ್ಕಾಗಿ; ಆದ್ದರಿಂದ ಜಪಾನವನ್ನೂ ನಾನು ಎದುರಿಸುವೆ' ಎಂದು ಮಹಾತ್ಮರು; 'ಜಪಾನರನ್ನು ಪ್ರತಿಭಟಿಸುವ ಮನೋವೃತ್ತಿಯನ್ನು ಪ್ರತಿಯೊಬ್ಬ ಭಾರತೀಯನಲ್ಲಿ ಹುಟ್ಟಿಸಲು ನನ್ನ ಯತ್ನವಿದೆ' ಎಂದು ಜವಾಹರರು ಅಸ್ಖಲಿತ ಶಬ್ದಗಳಲ್ಲಿ ತಮ್ಮ ಉದಾತ್ತ ಧ್ಯೇಯವನ್ನು ಸಾರಿದ್ದಾರೆ. 'ಧ್ಯೇಯವೇನೆ ಇರಲಿ, ಮಹಾತ್ಮರ ಚಳವಳದ ವ್ಯಾವಹಾರಿಕ ಪರಿಣಾಮವು ಶತ್ರುಗಳಿಗೆ ಸಹಾಯಕಾರಕವಾಗುವುದು' ಎಂದು ಒಂದು ಬ್ರಿಟಿಶ್ ಪತ್ರಿಕೆ ಸಾಧಿಸಿದೆ! ಹಾಗಾದುದೇ ಆದರೆ ಕಾಂಗ್ರೆಸನ್ನು ಈ ನಿರಾಶೆಯ ನೀತಿಗೆ ದೂಡಿದುದರ ಮೊದಲ ಹೊಣೆಯು ಇಂಗ್ಲಂಡಿನ— ಅಲ್ಲಿಯ ಸರಕಾರದ— ತಲೆಯ ಮೇಲೆ ಇದೆ ಎನಬಹುದಲ್ಲ? ಹಿಂದುಸ್ತಾನದಲ್ಲಿ ಅಸಂತೋಷವನ್ನು ಹೆಚ್ಚಿಸಿದರೆ ದೇಶದ ಯುದ್ಧಸಹಾಯವು ಸಾಕಷ್ಟಾಗದೆ ಆ ಅಸಂತೋಷಕ್ಕೆ ಕಾರಣವಾದ ಬ್ರಿಟಿಶ್ ನೀತಿಯಿಂದಲೆ ಹಾಗಾಗಬಹುದು ಎಂದು ಕಾಂಗ್ರೆಸೂ ವಾದಿಸುವುದಲ್ಲ?

ಮತಿಗಾಣದ ಮುಂದಾಳುತನ

ನಿಜವಿದ್ದ ಮಾತೆಂದರೆ ಎರಡೂ ಪಕ್ಷದವರ ಮುಂದಾಳುತನ ಮತಿಗೆಟ್ಟಿದೆ. ಕಾಂಗ್ರೆಸಿನ ಮುಂದಾಳುಗಳ ಮೇಲೆ ಬಂದ ಆರೋಪಗಳನ್ನು ಇಷ್ಟೊಂದು ನಾವು ಅಲ್ಲಗಳೆದರೂ, ಅವರ ನಿರ್ಣಯವನ್ನು ಸಮರ್ಥಿಸಲು ನಮ್ಮ ಬುದ್ಧಿ ಒಪ್ಪುವುದಿಲ್ಲ. ಇಂದಿನ ಯುದ್ಧವನ್ನು ಜಾಗತಿಕ ದೃಷ್ಟಿಯಿಂದ ನಾವು ನೋಡಬೇಕಾಗಿದೆ. ಸರ್ವಾಧಿಕಾರ ಪಕ್ಷಕ್ಕೆ ಜಯವಾದರೆ ಜಗತ್ತಿನಲ್ಲಿ ಸ್ವಾತಂತ್ರ್ಯವೆಂಬುದೆ ಉಳಿಯುವುದಿಲ್ಲ. ಅದಕಾಗಿ ಆ ಶತ್ರುಗಳನ್ನು ಎದುರಿಸುವ ಶಕ್ತಿಗೆ ಎಳ್ಳಷ್ಟು ಕೊರತೆ ತರುವುದೂ ಸ್ವಾತಂತ್ರ್ಯಾಭಿಮಾನಿಗಳ ಕರ್ತವ್ಯವಲ್ಲ. ಅದೇ ಮೇರೆಗೆ ಸ್ವಾತಂತ್ರ್ಯತತ್ತ್ವವನ್ನು ಸಾರುವ ರಾಷ್ಟ್ರಗಳಾದರೂ ಹಿಂದುಸ್ತಾನದ ಬಗ್ಗೆ ತಮ್ಮ ತತ್ತ್ವವನ್ನು ತಡೆದು ಹಿಡಿಯಲು ಇಷ್ಟೊಂದು ಹಟತೊಡುವುದೂ ಘಾತುಕವೆ ಸರಿ. 'ಪರತಂತ್ರದಲ್ಲಿದ್ದ ದೇಶಕ್ಕೆ ಸ್ವಾತಂತ್ರ್ಯವನ್ನು ದೊರಕಿಸಲು ಬೇಕಾದಂತಹ ಉಪಾಯವನ್ನೂ ಕೈಕೊಳ್ಳುವ ಸ್ವಾತಂತ್ರ್ಯವಿದೆ' ಎಂಬ ಮಾತನ್ನು ಮದ್ರಾಸಿನ ಸ್ವಾಯತ್ತಬುದ್ಧಿಯ ಹಿಂದು ಪತ್ರಿಕೆಯು ಕೂಡ ಬರೆಯುವಾಗ, ಸರಕಾರದವರು ಹಿಂದೀಯರ ಮನಃಕ್ಷೋಭವನ್ನು ಇನ್ನೂ ಕೆಣಕುವುದು, ಮಿತ್ರರಾಷ್ಟ್ರಗಳ ಯುದ್ಧನೀತಿಗೆ ಭೂಷಣವೂ ಅಲ್ಲ, ಹಿತವೂ ಅಲ್ಲ. ಅದರಂತೆಯೆ ಪ್ರತಿಕರನ್ನು ಒಳಗೆ ಹಚ್ಚಲು ಹಟತೊಡುವ ಸಮಯವಿದಲ್ಲ ಎಂದು ಕಾಂಗ್ರೆಸಿನ ಮುಂದಾಳುಗಳೂ ತಿಳಿಯಬೇಕಾಗಿದೆ.

ವಿಮಾನದಾಳಿ!

ಭವಿಷ್ಯ ಹೇಗಿದೆಯೊ ಬಲ್ಲವರಾರು?
ಭಾರತೀಯರಿಗೂ ಆ ವಿಷಮಸಂದರ್ಭ ಒದಗಬಹುದಾಗಿದೆ!
ಅದರಿಂದ ಸುರಕ್ಷಿತರಾಗುವುದಕ್ಕಾಗಿ

"ವಿಮಾನ ದಾಳಿ ಸಂರಕ್ಷಣೆ"

ಎಂಬ ಪುಸ್ತಕವನ್ನೋದಿರಿ!

ಬರೆದವರು ಟಿ. ಆರ್. ಭಾಗವತ, ಬಿ.ಎ.

ಕ್ರಾ. ಅ. ೮೦ ಪುಟಗಳು. ಬೆಲೆ ೦–೬–೦

ಬೇಕಾದವರು ಜಯಂತಿ ಕಾರ್ಯಾಲಯಕ್ಕೆ
ಬರೆದು ತರಿಸಿಕೊಳ್ಳಬೇಕು!

ಜಯಂತಿ ಸಣ್ಣಕತೆಗಳ ಮೇಲಾಟ

(೫ ನೆಯ ವರ್ಷಕ್ಕಾಗಿ)

ಕಳೆದ ಸಲದಂತೆ ಈ ಸಲಕ್ಕೂ ಸಣ್ಣಕತೆಗಳ ಸ್ಪರ್ಧೆಯನ್ನು ಏರ್ಪಡಿಸಲಾಗಿದೆ. ಕತೆಗಾರರೆಲ್ಲರೂ ಅವಶ್ಯವಾಗಿ ಭಾಗವಹಿಸಬೇಕು.

೩ ಬಹುಮಾನಗಳು*

೧ ನೆಯದು ೧೫ ರೂಪಾಯಿ; ★ ೨ ನೆಯದು ೮ ರೂಪಾಯಿ!

೩ ನೆಯದು ೫ ರೂಪಾಯಿ!

೧೯೪೨ ಸಪ್ಟಂಬರ್ ೨೦ ತಾರೀಖಿನೊಳಗಾಗಿ ಮೇಲಾಟದ ಕತೆಗಳು ಬರಬೇಕು.

★ 'ಜಯಂತಿ' ಸಣ್ಣಕತೆಗಳ ಮೇಲಾಟದ ನಿಯಮಗಳು ★

೧. ಕತೆಯು ಸ್ವತಂತ್ರವಾಗಿದ್ದು ಸಾಮಾಜಿಕಸಂಗತಿಯಿಂದ ಕೂಡಿದುದಿರಬೇಕು. ಐತಿಹಾಸಿಕ ಕತೆಗೆ ಈ ಮೇಲಾಟದಲ್ಲಿ ಸ್ಥಾನವಿಲ್ಲ.

೨. ಜಯಂತಿಯ ೫ ಪುಟಗಳಿಗೆ ಮೀರದಷ್ಟು, ಎಂದರೆ ಕೈಬರೆಹದಲ್ಲಿ ಫೂಲ್ಸ್‌ಕ್ಯಾಪ್ ಅರ್ಧಹಾಳೆಗಳು ೧೦ಕ್ಕೆ ಮೀರದಷ್ಟು ಕತೆಯಿರಬೇಕು.

೩. ಅಂದವಾದ ಸ್ಪಷ್ಟವಾದ ಅಕ್ಷರಗಳಿರಬೇಕಲ್ಲದೆ, ಮಾರ್ಜೀನು ಬಿಟ್ಟು ಹಾಳೆಯಲ್ಲಿ ಒಂದೆ ಕಡೆಗೆ ಬರೆದಿರಬೇಕು.

೪. ವಯಸ್ಸಿನ ನಿರ್ಬಂಧವಿಲ್ಲ. ಸಣ್ಣವರು ದೊಡ್ಡವರು ಎಲ್ಲರೂ ಇದರಲ್ಲಿ ಭಾಗ ವಹಿಸಬಹುದು.

೫. " ಜಯಂತಿ ಸಣ್ಣ ಕತೆಗಳ ಮೇಲಾಟಕ್ಕಾಗಿ " ಎಂದು ಕೈಬರೆಹದ ಪ್ರತಿಗಳ ಮೇಲೆ ಸ್ಪಷ್ಟವಾಗಿ ಬರೆಯಬೇಕು.

೬. ಒಬ್ಬರೆ ಲೇಖಕರು ತಮ್ಮ ಎರಡು-ಮೂರು ಕತೆಗಳನ್ನೂ ಮೇಲಾಟಕ್ಕಾಗಿ ಕಳುಹಬಹುದು; ಆದರೆ ಎಲ್ಲ ಬಹುಮಾನಗಳು ಒಬ್ಬರಿಗೇ ದೊರೆಯಲಾರವು.

೭. ಕತೆಯನ್ನು ಕಳುಹಬೇಕಾದ ಕೊನೆಯ ದಿನವೆಂದರೆ ಸಪ್ಟಂಬರ್ ೨೦ನೆಯ ತಾರೀಖು. ಅಕ್ಟೋಬರ್ ಸಂಚಿಕೆಯಲ್ಲಿ ಮೇಲಾಟದ ನಿರ್ಣಯವನ್ನೂ ಬಹುಮಾನ ಪಡೆದ ಕತೆಗಳನ್ನೂ ಪ್ರಕಟಿಸಲಾಗುವುದು.

೮. ಮಿಕ್ಕ ಕತೆಗಳಲ್ಲಿ ಪ್ರಕಟನಾರ್ಹವೆಂದು ಕಂಡುಬಂದ ಕತೆಗಳನ್ನು, ಲೇಖಕರ ಒಪ್ಪಿಗೆ ಪಡೆದು ಜಯಂತಿಯಲ್ಲಿ ಪ್ರಕಟಿಸಲಾಗುವುದು.

೯. ಬಹುಮಾನಕ್ಕೆ ತಕ್ಕ ಕತೆಗಳು ಬಾರದೆ ಇದ್ದಲ್ಲಿ, ಬಹುಮಾನ ಕೊಡದೆ ಇರುವುದಕ್ಕೂ ಬಂದ ಕತೆಗಳಲ್ಲಿ ಒಳ್ಳೆಯದೆಂದು ಎನಿಸಿದುದಕ್ಕೆ ತಕ್ಕ ಮನ್ನಣೆ ಸಲ್ಲಿಸುವುದಕ್ಕೂ ಜಯಂತಿಯ ಸಂಪಾದಕ ಮಂಡಲಿ ತನ್ನ ಕಡೆಗೆ ಅಧಿಕಾರವನ್ನು ಇರಿಸಿಕೊಂಡಿದೆ.

೧೦. ಮೇಲಾಟಕ್ಕಾಗಿ ಕತೆಗಳನ್ನು ಕಳುಹುವವರು ಪ್ರವೇಶಧನವನ್ನೇನೂ ಕೊಡಬೇಕಾಗಿಲ್ಲ. ಕತೆಗಳು ಮರಳಿ ಬೇಕಾದರೆ ಅದಕ್ಕೆ ಅವಶ್ಯವಿದ್ದ ಅಂಚೆಯ ಚೀಟಿ ಕಳುಹಬೇಕು.

ಸಂಪಾದಕರು : **'ಜಯಂತಿ' ಧಾರವಾಡ**

---

* ಜಯಂತಿಯ ಹಿತಚಿಂತಕರಿಬ್ಬರು ೧ ನೆಯ ೩ ನೆಯ ಬಹುಮಾನದ ಹೆಚ್ಚಿನ ಹೊಣೆ ಹೊತ್ತುದರಿಂದ, ಬಹುಮಾನದ ಬೆಲೆಯನ್ನು ಹೆಚ್ಚಿಸಿರುವುದಲ್ಲದೆ, ಸಂಖ್ಯೆಯನ್ನೂ ಹೆಚ್ಚಿಸಲಾಗಿದೆ; ಅವಧಿಯನ್ನೂ ಬೆಳೆಯಿಸಲಾಗಿದೆ.

ಸಾದರ ಸ್ವೀಕಾರ

೧೨. **ಕುಮಾರವ್ಯಾಸ ವಾಣಿ** (ಕಾವ್ಯ ಸಂಗ್ರಹ). ಆಯ್ಕೆಗಾರರು ಶ್ರೀಮಾನ್ ಎಸ್. ವಿ. ರಂಗಣ್ಣ ಎಂ. ಎ., ಅವರು. ಮೈಸೂರು ವಿಶ್ವವಿದ್ಯಾನಿಲಯದ ಪ್ರಚಾರ ಪುಸ್ತಕಮಾಲೆಯ ೩೫ನೆಯ ಪುಸ್ತಕ. ಫೂ. ಕ್ಯಾ. ೮. ೬೪ ಪುಟ. ಬೆಲೆ: ೦-೨-೦.

"ಪ್ರಚಾರ ಪುಸ್ತಕಮಾಲೆಯಲ್ಲಿ ಆರನೆಯದಾದ 'ಕುಮಾರವ್ಯಾಸ' ವಿಮರ್ಶಾ ಗ್ರಂಥಕ್ಕೆ ಈ 'ಕುಮಾರವ್ಯಾಸ ವಾಣಿ' ಒಂದು ಅನುಬಂಧ. ಅಲ್ಲಿ ಕವಿಯ ಹಿರಿಮೆಯನ್ನು ಕುರಿತು ಉಚ್ಚರಿಸಿರುವ ಅಭಿಪ್ರಾಯಗಳಿಗೆ, ಇಲ್ಲಿ ಆದಷ್ಟು ಉದಾಹರಣೆಗಳನ್ನು ಕಾಣಬಹುದು......." ಎಂದು ಲೇಖಕರು ತಮ್ಮ ಪೀಠಿಕೆಯಲ್ಲಿ ಹೇಳಿದ್ದಾರೆ. ಇದರಲ್ಲಿ ಆರು ಭಾಗಗಳಿದ್ದು ಮೊದಲಿನ ಎರಡರಲ್ಲಿ ಕ್ರಮವಾಗಿ ಶ್ರೀಕೃಷ್ಣ-ದ್ರೌಪದಿಯರ ಪಾತ್ರಪರಿಪೋಷಕ ಪದ್ಯಗಳನ್ನಾಯ್ದು ಸಂಗ್ರಹಿಸಿದ್ದಾರೆ. ೩ನೆಯದರಲ್ಲಿ ಕೀಚಕನ ಕಥೆಯಿದೆ. ೪ನೆಯದರಲ್ಲಿ ಉತ್ತರನ ಪೌರುಷದ ಚಿತ್ರವಿದೆ. ೫ನೆಯದರಲ್ಲಿ ಕವಿಯ ಹಾಸ್ಯರಸಕ್ಕೆ ಉದಾಹರಣೆಯಾಗಿರುವ ಪದ್ಯಗಳನ್ನು ಸಂಗ್ರಹಿಸಲಾಗಿದೆ. ೬ನೆಯ ಭಾಗವಾದ 'ಸಮಾಪ್ತಿ'ಯಲ್ಲಿ ಬೇರೆ ಬೇರೆ ಸಂದರ್ಭಗಳನ್ನು ಬಣ್ಣಿಸುವ ಪದ್ಯಗಳು ಸಂಗ್ರಹಗೊಂಡಿವೆ. ಕುಮಾರವ್ಯಾಸನ ಭಾರತವೇ ರಸದ ಘಟ್ಟಿ. ಅದರಲ್ಲಿಯ ಸ್ವಾರಸ್ಯವನ್ನು ತೆಗೆದು ರಸಿಕರಾದ ಶ್ರೀಮಾನ್ ರಂಗಣ್ಣನವರು ಕನ್ನಡಿಗರ ಮುಂದೆ ಇರಿಸಿದ್ದಾರೆ. ಎಲ್ಲರೂ ಇದರ ಸವಿಯನ್ನುಂಡು ತಣಿಯಬೇಕು.

೧೩. **ಅಷ್ಟಾಂಗ ಹೃದಯ** (ಆಯುರ್ವೇದ ಗ್ರಂಥ) ವಾಗ್ಭಟಾಚಾರ್ಯರು ಸಂಸ್ಕೃತದಲ್ಲಿ ಬರೆದ ಮೂಲಗ್ರಂಥದ ಅನುವಾದವಿದು. ವಿಜಾಪುರದ ಪ್ರಸಿದ್ಧ ವಿದ್ವಾಂಸರಾದ ಆಯುರ್ವೇದ ತೀರ್ಥ ಆದ್ಯ ಅನಂತಾಚಾರ್ಯರು ಕನ್ನಡದಲ್ಲಿ ವಿಶದವಾಗಿ ಟಿಪ್ಪಣಿಗಳನ್ನು ಬರೆದು 'ರಹಸ್ಯ ಪ್ರಕಾಶಿನಿ' ಎಂಬ ಹೆಸರಿನಿಂದ ಅನುವಾದಿಸಿರುವರು. ವಿಜಾಪುರದ ಆಯುರ್ವೈದ್ಯಕ ಗ್ರಂಥಮಾಲೆಯ ೪ನೆಯ ಪುಷ್ಪ. ಡೆ. ೮. ೨೪+೫೧೦ ಪುಟಗಳು. ಬೆಲೆ ೫-೦-೦.

೧೪. **ಕಂಡೂ ಕಾಣದ ನೋಟಗಳು** (ಕಥಾಸಂಗ್ರಹ): ಲೇಖಕರು ಉಡುಪಿಯ ವಿವಿಧ ಕತೆಗಾರರು. ಉಡುಪಿಯ ಲ್ಯಾಸಿಯಂ ಗ್ರಂಥಮಾಲೆಯ ದ್ವಿತೀಯ ಕುಸುಮ. ಕ್ರೌ. ೮. ೧೩+೧೧೬ ಪುಟ. ಬೆಲೆ ೦-೬-೦.

೧೫. **ಚಿಗುರು** (ಕಥಾಸಂಗ್ರಹ). ಬರೆದವರು ದಿವಂಗತಾ ಸೌ. ಗೌರಮ್ಮ (ಮಿಸೆಸ್. ಬಿ. ಟಿ. ಜಿ. ಕೃಷ್ಣ) ಅವರು. ಧಾರವಾಡದಲ್ಲಿ ಹೊಸತಾಗಿ ಹೊರಟಿರುವ 'ಲಲಿತ ಸಾಹಿತ್ಯಮಾಲೆ'ಯ ಮೊದಲನೆಯ ಹೊತ್ತಿಗೆ. ಸಂಪಾದಕರು ಶ್ರೀ. ಹುಳಕಿ ಗೋವಿಂದರಾಯರು. ಪ್ರಕಾಶಕರು ಶ್ರೀ. ದ. ಬಾ. ಕುಲಕರ್ಣಿ, ಮನೋಹರ ಗ್ರಂಥಭಾಂಡಾರ, ಧಾರವಾಡ. ಕ್ರೌ. ೮. ೧೧೨ ಪುಟ. ಬೆಲೆ: ೦-೧೪-೦.

೧೬. **ಕನ್ನಡ ಲಿಪಿ ಸುಧಾರಣೆ.** ಬರೆದವರು ಶ್ರೀಮಾನ್ 'ಕೆ. ಮಾಧವ' ಅವರು. ಪ್ರಕಾಶಕರು ಶ್ರೀಮಾನ್ ರಂಗನಾಥ ರಾಮಚಂದ್ರ ದಿವಾಕರ, ರಾಷ್ಟ್ರೀಯ ವಾಙ್ಮಯ ಪ್ರಕಾಶನ ಟ್ರಸ್ಟ್, ಹುಬ್ಬಳ್ಳಿ. ಡೆ. ೮. ೩೬ ಪುಟಗಳು. ಬೆಲೆ ೦-೩-೦.

೧೭. **ವಿಮಾನದಾಳಿ ಸಂರಕ್ಷಣೆ** (ಪರಿಚಯಾತ್ಮಕ ಗ್ರಂಥ). ಶ್ರೀ. ಟಿ. ಆರ್. ಭಾಗವತ ಬಿ. ಎ. ಅವರು ಬರೆದು ಪ್ರಕಟಿಸಿದುದು. ಕ್ರೌ. ೮. ೭೨ ಪುಟ. ಬೆಲೆ ೦-೬-೦.

೧೮. **ಮೈಸೂರು ವೈಶ್ಯ ಪತ್ರಿಕೆ** (ಮಾಸಪತ್ರಿಕೆ). ಸಂಪಾದಕರು: ಶ್ರೀ. ಸಿ. ಗೋಪಾಲಕೃಷ್ಣ ಸೆಟ್ಟರು ಬಿ. ಎ. ಬಿ. ಎಲ್. ಉಪಸಂಪಾದಕರು ಶ್ರೀ. ಎಸ್. ಆರ್. ಕೃಷ್ಣಸೆಟ್ಟರು ಬಿ. ಎ. ಪ್ರಕಾಶನ ಸ್ಥಳ: ವಾಸವಾಂಬಾ ಭವನ, ಅಶೋಕ ರೋಡ್, ಮೈಸೂರು, ಮೈಸೂರು ಸಂಸ್ಥಾನದ ವೈಶ್ಯ ಯುವಕ ಮಹಾ ಸಭೆಯ ಮುಖಪತ್ರಿಕೆ. ಕ್ರೌ. ೪ದ ೭೦ ಪುಟಗಳು. ಬಿಡಿ ಸಂಚಿಕೆಗೆ ೦-೪-೦. ವಾರ್ಷಿಕ ಚಂದಾ ೨-೮-೦.

ನಮ್ಮ ಕಡೆಗೆ ಬಂದುದಿದು ೧ನೆಯ ವರ್ಷದ ೧೧ನೆಯ ಸಂಚಿಕೆ. ೬೨ ಪುಟಗಳು ಕನ್ನಡಕ್ಕಿವೆ; ೮ ಪುಟಗಳು ತೆಲುಗಿಗೆ ಇವೆ. ಜಾತೀಯ ಸಂಸ್ಥೆಯ ಪತ್ರಿಕೆಯಾದರೂ ಎಲ್ಲ ಜಾತಿಯ ಜನರು ಬರೆದ ಲೇಖನಗಳನ್ನೂ ಇದರಲ್ಲಿ ಕಾಣಬಹುದು. ವೈಶ್ಯ ಸಮಾಜಕ್ಕೆ ಮತ್ತು ಅವರ ಸಂಸ್ಥೆಗೆ ಸಂಬಂಧಿಸಿದ ಪರಿಚಯಾತ್ಮಕ ಲೇಖನಗಳೂ ಸುದ್ದಿಗಳೂ ಅಲ್ಲದೆ ಬೇರೆ ಕವನ, ಸಣ್ಣಕಥೆ, ಪ್ರಬಂಧಗಳೂ ಇರುವುವು. ಮೈಸೂರು ರಾಜಕಾರ್ಯಕ್ಕೆ ಸಂಬಂಧಿಸಿದ ವಾರ್ತೆ, ಮಾಸಭವಿಷ್ಯ, ಯುದ್ಧವಾರ್ತೆಗಳಿಗೂ ಎಡೆಯಿದೆ. ವೈಶ್ಯ ಸಮಾಜದವರಷ್ಟೇ ಅಲ್ಲದೆ ಎಲ್ಲರೂ ಓದಲು ತಕ್ಕುದಾಗಿದೆ. ಬಹುಕಾಲ ಬಾಳಿ ಕನ್ನಡನಾಡಿನ ಸೇವೆಯನ್ನು ಮಾಡಲಿ!

೧೯. **ಆಳ್ವಾರುಗಳು** (ತಮಿಳು ದೇಶದ ವೈಷ್ಣವ ಪುರಾತನರ ವ್ಯಕ್ತಿ-ಕೃತಿ ಪರಿಚಯ). ಶ್ರೀಮಾನ್ ಎಂ. ಯಾಮುನಾಚಾರ್ಯ ಎಂ. ಎ. ಅವರು ಬರೆದುದು. ಮೈಸೂರು ವಿ. ವಿ. ನಿಲಯದ ಪ್ರಚಾರ ಪುಸ್ತಕಮಾಲೆಯ ೩೬ನೆಯ ಪುಸ್ತಕ. ಫೂ. ಕ್ಯಾ. ೮. ೯೮ ಪುಟ. ಬೆಲೆ ೦-೩-೦

೨೦. **ಹಿಂದೂ-ಮುಸ್ಲಿಂ ಮೈತ್ರಿಯನ್ನು ಬೆಳಸಿದ ರಾಜರು** (ಚರಿತ್ರ ಪ್ರಬಂಧ) ಶ್ರೀಮಾನ್ ವಿ. ರಾಘವೇಂದ್ರರಾವ್ ಎಂ.ಎ. ಅವರು ಬರೆದುದು. ಮೇಲಿನ ಪ್ರಚಾರ ಪುಸ್ತಕ ಮಾಲೆಯ ೩೭ನೆಯ ಪುಸ್ತಕ. ಫೂ. ಕ್ಯಾ. ೮. ೫೪ ಪುಟಗಳು. ಬೆಲೆ ೦-೩-೦.

ಅಲ್ಲಲ್ಲಿಯ ನಮ್ಮ ಏಜಂಟರು

ಬೈಲಹೊಂಗಲ
ಶ್ರೀ. ಎಸ್. ಕೆ. ಕಾಮುಕರ, ದಿ ನೆಹರು ನ್ಯೂಸ್ಟೋರ್ಸ್.

ಚಿಂತಾಮಣಿ
ಶ್ರೀ. ಕೆ. ವಿಶ್ವನಾಥ ಗುಪ್ತ, ನ್ಯೂಜ್-ಪೇಪರ್ ಏಜಂಟ್.

ಹುಬ್ಬಳ್ಳಿ
ಶ್ರೀ. ವಿ. ಡಿ. ಗೋಖಲೆ, ಜನರಲ್ ಮರ್ಚಂಟ್, ಮಲ್ಲಿಕಾರ್ಜುನ ಥೇಟರಿನ ಹತ್ತಿರ.

ಗೋಕಾಕ
ಶ್ರೀ. ಪಿ. ಎಂ. ಶಿರಗಾಂವಕರ, ನ್ಯೂಜ್-ಪೇಪರ್ ಏಜಂಟ್.

ಗುಳೇದಗುಡ್ಡ
ಶ್ರೀ. ಬಿ. ಎಸ್. ಪರ್ವತೀಕರ.

ಹಾವೇರಿ
ಶ್ರೀ. ಜಿ. ಆರ್. ಮಹಾರಾಜ ಪೇಟೆ, ನ್ಯೂಜ್ ಪೇಪರ್ ಏಜಂಟ್.

ಹಾನಗಲ್ಲ
ಶ್ರೀ. ಟಿ. ಎಸ್. ಕಾಶೀಕರ, ನ್ಯೂಜ್-ಪೇಪರ್ ಏಜಂಟ್.

ಹೈದರಾಬಾದ್
ಶ್ರೀ. ಹರಿಬಲ, ಶಾರದಾ ಮಂದಿರ ಸುಲ್ತಾನ ಬಜಾರ್

ಹೊಸಪೇಟೆ
ಶ್ರೀ. ಕೆ. ರಂಗಪ್ಪ, ನ್ಯೂಜ್ ಏಜಂಟ್.

ಕಲಘಟಗಿ
ಶ್ರೀ. ಎ. ಜಿ. ಮುತ್ತಗಿ, ನ್ಯೂಜ್ ಪೇಪರ್ ಏಜಂಟ್.

ಕಾಸರಗೋಡು
ಮೆಸರ್ಸ್ ಭಕ್ತ ಬ್ರದರ್ಸ್, ನ್ಯೂಜ್ ಆ್ಯಂಡ್ ಬಸ್ ಏಜಂಟ್.

ಕುಂದಾಪುರ
ಶ್ರೀ. ಸಿ. ರಾಘವೇಂದ್ರಭಟ್ಟ, ಸಚ್ಚಿದಾನಂದ ಸ್ಟೋರ್ಸ್-ಬುಕ್‌ಸ್ಟಾಲ್

ವಿಜಾಪುರ (ರೇಲ್ವೆ ಸ್ಟೇಶನ್)
ಮೆಸರ್ಸ್ ಕುಲಕರ್ಣಿ ಬ್ರದರ್ಸ್, ಫೋಟೊಗ್ರಾಫರ್ ಆ್ಯಂಡ್ ನ್ಯೂಜ್ ಏಜಂಟ್.

ಗದಗ
ಶ್ರೀ. ಆರ್. ಕೆ. ಅಸುಂಡಿ, ನ್ಯೂಜ್‌ಪೇಪರ್ ಏಜಂಟ್.

ದಾವಣಗೇರಿ
ಶ್ರೀ. ಬಿ. ನಾರಾಯಣಪ್ಪ C/o. ದುರ್ಗದ ಹೊಟೆಲು, ಬಿನ್ನಿ ಮಿಲ್ ರೋಡು.

ಸಾಗರ
ಶ್ರೀ. ಜೋಇಸ ವೆಂಕಟರಾವ ನ್ಯೂಜ-ಪೇಪರ್ ಏಜಂಟ್.

ಪುತ್ತೂರು
ಶ್ರೀ. ಶಂಕರ ನಾರಾಯಣಮಯ್ಯ ಮರ್ಚಂಟ್.

ರಾಣೇಬೆನ್ನೂರು
ಶ್ರೀ. ಜಿ. ಎಮ್. ಅದಿವೆಪ್ಪನವರ ಬುಕ್ಕಸೆಲರ್.

ಸಂಗೀತಕಲಾಭಿಮಾನಿಗಳಿಗೆ ಸುಸಂಧಿ

ಮುಂಬಯಿ ವಿದ್ಯಾಖಾತೆಯವರಿಂದ ಮಂಜೂರಾದ "**ಸಂಗೀತಕಲಾಪ್ರವೇಶ**"
ಎಂಬ ಪುಸ್ತಕಕ್ಕೆ ಒಳ್ಳೆಯ ಅಭಿಪ್ರಾಯಕೊಟ್ಟಿರುವ ತಜ್ಞರ ಹೆಸರುಗಳನ್ನು ಇಲ್ಲಿ ಕೊಡಲಾಗಿದೆ.

ಶ್ರೀ. ಸವಾಯಿಗಂಧರ್ವರು ಕುಂದಗೋಳ, ಪ್ರೊ. ರಂಗರಾವ ದಿವಾಕರ ಹುಬ್ಬಳ್ಳಿ, ಶ್ರೀ. ಪಿತ್ರೆ ವಕೀಲರು ಧಾರವಾಡ,
ಶ್ರೀ. ಪಂಡಿತ ಪಂಚಾಕ್ಷರಿ ಗವಯರು ಶಿವಯೋಗಮಂದಿರ, ಶ್ರೀ. ದತ್ತಾತ್ರಯ ದೇಸಾಯಿ ಹುಬ್ಬಳ್ಳಿ.

- ಈ ಪುಸ್ತಕವನ್ನು ವಿಮರ್ಶಿಸಿದ ಪ್ರಸಿದ್ಧ ಪತ್ರಕಾರರ ಹೆಸರುಗಳನ್ನು ಇಲ್ಲಿ ಕೊಡಲಾಗಿದೆ. ಸಂಯುಕ್ತ ಕರ್ನಾಟಕ, ಮುಂಬಯಿ ಗೆಜೆಟ್, ತರುಣ ಕರ್ನಾಟಕ, ಜಯಂತಿ, ಕರ್ನಾಟಕ ಬಂಧು, ಪ್ರಜಾಮತ, ತಾಯಿನಾಡು, ನವಚೇತನ, ಆರೋಗ್ಯಮಂದಿರ.
- ಈ ಪುಸ್ತಕದಲ್ಲಿ ಸಂಗೀತ ಸಂಬಂಧದ ಯಾವತ್ತೂ ವಾದ್ಯಗಳನ್ನು ಸ್ವತಃ ಕಲಿಯಲು ಒಳ್ಳೇ ಅನುಕೂಲವಿರುತ್ತದೆ. ಮತ್ತು ಹೊಸ-ಧಾಟಿಯಿಂದ ಮಾಡಿದ ಕನ್ನಡ ದಾಸರ ಪದಗಳು, ಹಿಂದುಸ್ತಾನೀ ಚೀಜುಗಳು, ಮರಾಠೀ ತೆಲುಗು ಮೊದಲಾದ ಪದಗಳು ಇರುತ್ತವೆ.
- ಅಖಿಲ ಕರ್ನಾಟಕದಲ್ಲಿ ಪ್ರಖ್ಯಾತಿಯನ್ನು ಪಡೆದ ಈ ಪುಸ್ತಕದಿಂದ ಸ್ವಲ್ಪೇ ದಿವಸಗಳಲ್ಲಿ ಯಾವತ್ತೂ ಕಲಾಪ್ರೇಮಿಗಳು ವಿಶೇಷ ಪ್ರಗತಿಯನ್ನು ಹೊಂದಿದ್ದಾರೆ.

ಮೂರು ಭಾಗವುಳ್ಳ ಪುಸ್ತಕದ ಬೆಲೆ. ೧೦ ಆ. ★ ಸ್ವಲ್ಪೇ ಪ್ರತಿಗಳು ಮಾತ್ರ ಉಳಿದಿರುವವು.

ಪುಸ್ತಕ ವ್ಯಾಪಾರಿಗಳಿಗೆ ತುಂಬಾ ಕಮೀಶನ್ ಹೆಚ್ಚಿನ ವಿವರಗಳಿಗಾಗಿ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಶ್ರೀಸರಸ್ವತಿ ಸಂಗೀತ ವಿದ್ಯಾಲಯ, ಗಣೇಶ ಪೇಟೆ ಚೌಕು, ಹುಬ್ಬಳ್ಳಿ (ಸ್ಥಾಪನಾ ೧೯೨೮)



ಶಿಲಾಪ್ರವಂಗ

SHILAPRAVANG

★

ಯಾವುದೇ ವಿಧವಾದ ಉಷ್ಣತೆಯಿಂದ
ಬಳಲಿರುವ ನಿಮ್ಮ ಹೃದಯ, ಮಿದುಳು,
ರಕ್ತ, ವೀರ್ಯಗಳಿಗೆ ಆಯಾಸವನ್ನು
ಹೋಗಲಾಡಿಸಿ, ತಂಪು ಕೊಟ್ಟು,
ಶರೀರದಲ್ಲಿ ನವಚೈತನ್ಯವನ್ನು ಹುಟ್ಟಿಸು
ವುದಕ್ಕೆ ಶ್ರೇಷ್ಠವಾದ ಔಷಧವು.

★

ಶ್ರೀಧೂತಪಾಪೇಶ್ವರ
ಪನವೇಲ, ಲಿಮಿಟೆಡ್.

ಪನವೇಲ ಕುಲಾಬಾ

★

SHRI DHOOTAPAPESHWAR
PANVEL Ltd., PANVEL.

ದಿ ಯುನಾಯಿಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪನಿ, ಲಿಮಿಟೆಡ್

ಹೆಡ್ ಆಫೀಸ್ ಧಾರವಾಡ.

★ ವಿಮೆ ಮಾಡುವ ಅನುಕೂಲವುಳ್ಳ ಕರ್ನಾಟಕಸ್ಥರು, ಈ ಭರದಿಂದ ಬೆಳೆಯುತ್ತಿರುವ ಕನ್ನಡ ಕಂಪನಿಯ ಪಾಲಿಸಿಯನ್ನೇ ಪಡೆಯಬೇಕು!

★ ಮೊದಲನೆಯ ಮೌಲ್ಯಮಾಪನದಲ್ಲಿ (Valuation) ಲಾಭವನ್ನು ಹಂಚುವುದಲ್ಲದೆ, ಹೊಸ ವಿಮಾಕಾಯಿದೆಯ ನಿರ್ಬಂಧಗಳಿಗೆ ತಕ್ಕಂತೆ ನಡೆದು, ಎಲ್ಲ ಪಾಲಿಸಿದಾರರ ಪ್ರೋತ್ಸಾಹಕ್ಕೂ ಪಾತ್ರವಾಗಿದೆ.

★ ಮರಣಹೊಂದಿದ ಪಾಲಿಸಿದಾರರ ವಾರಸದಾರರಿಗೆ ವಿಲಂಬವಿಲ್ಲದೆ ಹಕ್ಕಿನ ಹಣ (Claim) ವನ್ನು ಸಲ್ಲಿಸುವುದರಿಂದ, ಎಲ್ಲರ ನಂಬಿಗೆಗೂ ತಕ್ಕುದಾಗಿದೆ.

★ ಕರ್ನಾಟಕದ ಏಳ್ಗೆಗಾಗಿ ಹಂಬಲಿಸುವವರೂ ಕನ್ನಡನಾಡಿನ ಹಿತಚಿಂತಕರೂ, ಇದೇ ಕಂಪನಿಯ ಪಾಲಿಸಿಗಳನ್ನೂ ಪಾಲುಗಳನ್ನೂ ಕೊಂಡುಕೊಳ್ಳಲೇ ಬೇಕು.

ಏಜಂಟರಿಗೆ ಧಾರಾಳವಾದ ಕಮಿಶನ್ ಕೊಡಲಾಗುವುದು.

ವಿಶೇಷವಿವರಕ್ಕೆ ಬರೆಯಬೇಕು:— ಎಮ್. ಗೋವರ್ಧನರಾವ್, ಮ್ಯಾನೇಜರ್

The United Karnatak Insurance Co. Ltd., DHARWAR

ತಲೆಗೂದಲು ಚೆನ್ನಾಗಿದ್ದರೆ ಚೆಲುವಿಗೊಂದು ಬೆಲೆ!

ಹಾಗೆ ಚೆನ್ನಾಗಿರುವುದೆಂದರೇನು?

ತಲೆಗೂದಲು ಕಪ್ಪಗೆ ಇರಬೇಕು, ದಟ್ಟವಾಗಿ, ನೀಳವಾಗಿ ಇರಬೇಕು!

ಹಾಗಾಗಬೇಕಾದರೆ '**ಮುಕುಲ**' ಉಪಯೋಗಿಸಿರಿ!

ತರುಣ-ತರುಣಿಯರು ಬರಿಯೆ ಕಣ್ಣು-ಮೂಗು-ಬಣ್ಣಗಳಿಂದ ಚೆನ್ನಾಗಿದ್ದರೆ ಏನಾಯಿತು! ತಲೆಗೆ ಕೂದಲು ಚೆನ್ನಾಗಿರದಿದ್ದರೆ ಎಷ್ಟು ಚೆಲುವಿಕೆಯಿದ್ದರೂ ಅದು ವ್ಯರ್ಥವೆನಿಸುವುದು. ಅದಕ್ಕಾಗಿಯೆ

ಆಯುರ್ವೇದ ತಜ್ಞರಿಂದ ಶುದ್ಧ ಕೊಬ್ಬರಿಯೆಣ್ಣೆಯಲ್ಲಿ ತಯಾರಿಸಲಾದ 'ಮುಕುಲ' ಎಂಬ ಕೇಶವರ್ಧಕ ತೈಲವನ್ನು ಯಾವಾಗಲೂ ಬಳಸುತ್ತಿದ್ದರೆ, ನಿಮ್ಮ ಚೆಲುವಿಕೆ ಪೂರ್ಣತೆ ಪಡೆಯುವುದೆಂಬುದನ್ನು ಮರೆಯಬೇಡಿರಿ.

ಆಯುರ್ವೇದಾಶ್ರಮ ಫಾರ್ಮಸಿ ಲಿ., ಅಹಮ್ಮದನಗರ

ಕರ್ನಾಟಕ ಶಾಖೆ: ಸ್ಟೇಶನ್‌ರೋಡು, ಹುಬ್ಬಳ್ಳಿ.

Printed by Mr. V. Y. Jathar at the Karnatak Printing Works, Dharwar, and Published for the Proprietors Jayanti Publications, by M. V. Mellegatti at the Jayanti Office, Dharwar.

ಜಯಂತಿ

ಸಪ್ಟೆಂಬರ್ ೧೯೪೨

ಗುಂಡುರಾವ್ ಪಾಟ್ಕೀಕರ್
ಎಂ. ಪಿ. ಟಿ. ಆಚಾರ್ಯ
ಕಲವಾಟೆ ಸುಬ್ಬರಾಯರು
ಟಿ. ಆರ್. ಹೆಗಡೆ
ಬೆನಗಲ್ಲ ರಾಮರಾಯರು

ಬೆಲೆ ನಾಲ್ಕಾಣೆ

ಪ್ರತಿತಿಂಗಳ ಮೊದಲನೆಯ ತಾರೀಖಿಗೆ ಪ್ರಕಟವಾಗುವುದು.

ವಾ. ವರ್ಗಣಿ ಅಂಚೆವೆಚ್ಚ ಸೇರಿ ೩—೦—೦ ...... ವ್ಹಿ. ಪಿ. ಯಿಂದ ೩–೫–೦ ...... ಬಿಡಿಸಂಚಿಕೆಗೆ ೪ ಆಣೆ.

ಸಂಪಾದಕರು

ಟಿಗೇರಿ ಕೃಷ್ಣಶರ್ಮರು

೫ನೆಯ ವರ್ಷ	ಸಪ್ಟಂಬರ್ ೧೯೪೨	೪ನೆಯ ಸಂಚಿಕೆ

ಮುಖ್ಯವಿಷಯಗಳ ಪರಿವಿಡಿ

ಸಾಮಾಜಿಕನ ಸಂವಚನಗಳು (ವಿಚಾರತರಂಗ)	‘ ಸಾಮಾಜಿಕ ’	೧೫೧
ಸಂಪಾದಕೀಯ	ಸಂಪಾದಕರು	೧೫೨
ಮಂಗನ ಮಲ್ಲಿನಾಥತನ	‘ ಮಲ್ಲಿನಾಥ ’	೧೫೩
ಕಳೆದ ಯುದ್ಧಾನಂತರದ ಆರ್ಥಿಕ ಸ್ಥಿತ್ಯಂತರಗಳು	ಶ್ರೀ. ವಾಳ್ವೇಕರ್ ಗುರುರಾಯರು, ಎಲ್ಎಲ್. ಬಿ.	೧೫೪
ಸಾಹಿತಿಯಾಗುವವರಿಗೆ ಸಲಹೆಗಳು (ವ್ಯಂಗ್ಯಲೇಖನ)	ಶ್ರೀ. ವ್ಹಿ. ಜಿ. ಭಟ್ಟ, ಪುಣೆ	೧೫೮
ರಕ್ತರಂಜಿತ ಬಾವುಟ (ಸಣ್ಣಕತೆ)	ಶ್ರೀ. ಜಿ. ಆರ್. ಹೆಗಡೆ, ಕರ್ನಾಟಕ ಸಂಘ, ಕುಮಟಾ	೧೫೯
ನಮ್ಮ ಪತನಕ್ಕೆ ಕಾರಣವೇನು ? (ವಿಚಾರಚರ್ಚೆ)	ಶ್ರೀ. ಎಸ್. ಎಲ್. ಸುಬ್ರಹ್ಮಣ್ಯಂ, ಮೈಸೂರು	೧೬೪
ಮಳೆ ಬೀಳಲು (ಕವನ)	ಶ್ರೀ. ಎಚ್. ಎಂ. ನಾರಾಯಣಭಟ್ಟ, ಕುಂಬಳೆ	೧೬೭
ತಾಯಿನಾಡ ಹಂಬಲು (ಕವನ)	ಶ್ರೀ. ಲಕ್ಷ್ಮಣ ವಿ. ಜೋಶಿ, ಮುಂಬಯಿ	೧೬೭
ಕೌತುಕದ ಕನ್ನಿಗೆ (ಕವನ)	‘ ಗೀತಾಪ್ರಿಯ ’	೧೬೭
ಪಾರಿತೋಷಕದ ಪದಕ (ಕವನ)	ಶ್ರೀ. ವಿ. ಜಿ. ಭಟ್ಟ, ಕಡತೋಕಾ	೧೬೭
ಕಿಂಗ್ ಎಲಿಫಂಟ್ (ಸತ್ಯಕತೆ)	ಶ್ರೀ. ‘ ಕನ್ನಡ ಕುವರ ’ ಮಂಗಳೂರು	೧೬೮
ಸಸ್ಯರೋಗಾಭಿಜ್ಞನಾದ ಕನ್ನಡ ತರುಣ (ವ್ಯಕ್ತಿಪರಿಚಯ)	‘ ತಂತ್ರಿ ’	೧೭೧
ಸಿಡುಬು ಅಥವಾ ಮೈಲಿ (ಪ್ರತ್ಯುತ್ತರಕ್ಕೆ ಉತ್ತರ)	ಶ್ರೀ. ಬಿದರಕುಂದಿ ವೆಂಕಟರಾಯರು, ನಂದಗಡ	೧೭೪
ಏನನ್ನು ಕಂಡನು ? (ಸಣ್ಣ ಕತೆ)	ಶ್ರೀ. ಎಸ್ ಬಿ. ಪಾದೇಕಲ್ಲು, ಕುಂಬಳೆ	೧೭೬
ಕೋಪಿಸಲೂ ಕಲಿಯಬೇಕು (ಲಘುಪ್ರಬಂಧ)	ಶ್ರೀ. ತಲವಾಟ ಸುಬ್ಬರಾಯ ಶರ್ಮರು	೧೮೦
ಪಂಜರದ ಹಕ್ಕಿಯ ಪಾಡು ! (ಸ್ವಾನುಭವ)	‘ ಸಿರಿವಂತರ ಮನೆಯ ಸೆರೆಯಾಳು ’	೧೮೪
ಸ್ವಾತಂತ್ರ್ಯ ಸ್ವರ್ಗ (ಕವನ)	ಶ್ರೀ. ಬೆನಗಲ್ ರಾಮರಾಯರು, ಎಂ.ಎ., ಎಲ್ಎಲ್.ಬಿ..	೧೮೫
ನಾನು ಭಾರತವನ್ನು ಬಿಟ್ಟದ್ದೇಕೆ? (ಆತ್ಮಚರಿತ್ರೆ)	ಶ್ರೀ. ಎಂ. ಪಿ. ಟಿ. ಆಚಾರ್ಯ, ಮುಂಬಯಿ	೧೮೬
ಕನ್ನಡ ಸೈನಿಕ (ಬೆಳಗಾಂವಿಯಲ್ಲಿ ಬಿ.ಟಿ. ಕಾಲೇಜ್ ಮತ್ತು ಬೇರೆ)	‘ ಸಂ. ಕ. ಸೈ ’	೧೯೦
ಪುಸ್ತಕ ವಿಮರ್ಶೆ	‘ಎನ್ಕೆ’ ‘ವ. ಕಾ.’ ‘ನೆರಂಗ’	೧೯೨
ಮಾಧವೀ ಲಿಪಿ (ಲಿಪಿಸುಧಾರಣಾ ವಿಚಾರ)	ಶ್ರೀ. ಕ. ಮಾಧವ, ಧಾರವಾಡ	೧೯೪
ಮನೆಯಲ್ಲಿಯು ಹೊಲಿಗೆ ಕಲಿಯಿರಿ ! (ಫುಲ್ ಶರ್ಟ್)	ಶ್ರೀ. ಹಳಪೇಟೆ ಚಿಂತಾಮಣಿರಾಯರು, ಟಿ.ಸಿ.ಡಿ.	೧೯೬
ನ್ಯಾಯಮೂರ್ತಿ ಲೋಕೂರರವರಿಗೆ ಅಭಿನಂದನೆ	....	೧೯೭
ಸಾದರ ಸ್ವೀಕಾರ	....	೧೯೮
ನಗೀಗೆ ನೇವೇದ್ಯ	‘ ನಕಲೀ ನಾರಾಯಣಾಚಾರ್ಯ ’	೧೯೯
ನಾಲ್ಕೂ ದಿಕ್ಕಿನ ನೋಟ	‘ ನಿರೀಕ್ಷಕರು ’	೨೦೦

ಸಂಪುಟ ೫ | ೧ನೆಯ ಸಪ್ಟೆಂಬರ್ ೧೯೪೨ | ಸಂಚಿಕೆ ೪

ಸಾಮಾಜಿಕನ ಸಂವಚನಗಳು

ಕಾಯಲೆಂದು ನೆಟ್ಟ ಬೇಲಿ ಮೇಯುವಕ್ಕಲಮಂದೆಯಾಗಿ ಹೊಲವ ಹಾಳ್‌ಗೆಡಹಹತ್ತಿದರೆ, ಮುರಿದುಚೆಲ್ಲುವುದಲ್ಲದೆ ಮಿಕ್ಕ ಮಾರ್ಗವೇನಿದೆಯಯ್ಯಾ! ನೆಳಲೆಂದು ನಿಲಿಸಿದ ಚಪ್ಪರ ಬರಸಿಡಿಲ ಬಾಣವಾಗಿ ನಿಂತರೆ, ಒಡೆದು ಹಾರಿಸುವುದಲ್ಲದೆ ಬೇರೆಯ ದಾರಿ ಏನಿದೆಯಯ್ಯಾ! ನೋವ ಮಾಣಿಸಲು ಲೇಪಿಸಿದ ಮದ್ದು ತೀವ್ರ-ನೆತ್ತರ ಹರಿಯಿಸಲು ಹತ್ತಿ-ದರೆ, ತೊಳೆದು ಕಳೆವುದಲ್ಲದೆ ಉಳಿದ ಉಪಾಯವೇನಿದೆ-ಯಯ್ಯಾ! ಹಾವುಗೆಯೆಂದು ಮೆಟ್ಟಿದ ಮೆಟ್ಟು ಹಾವು-ಚೇಳು-ಗಳಂತೆ ಕಚ್ಚತೊಡಗಿದರೆ, ದೂರಕ್ಕೆಸೆವುದಲ್ಲದೆ ಬೇರೆಯ ಹಂಚಿಕೆ ಏನಿದೆಯಯ್ಯಾ! ಅಯ್ಯಾ, ಬೇಲಿ ಬೇಲಿಯಾಗಿ ಹೊಲದ ಎಲ್ಲೆಯಲಿಯೆ ನಿಲ್ಲಬೇಕು ನೋಡಾ! ಮೇಲಿನ ಚಪ್ಪರ ಚಪ್ಪರವಾಗಿಯೆ ನಿಂತು ಬಿರುಬಿಸಿಲನ್ನು ಮರೆಮಾಡಬೇಕು ಕಾಣಾ! ಮದ್ದು ಮದ್ದಾಗಿಯೆ ಇದ್ದು ನೋವನಳಿಸಿ ಶುದ್ಧಿಯನೆ ಹೊದ್ದಿಕೊಂಡಿರಬೇಕು ನೋಡಾ! ಹಾವುಗೆ ಹಾವುಗೆಯಾಗಿಯೆ ಇದ್ದು ಕಲ್‌-ಮುಳ್ಳುಗಳಿಂದ ಕಾಲನ್ನು ಕಾಪಾಡಬೇಕು ಕಾಣಾ! ಇಂತಿರಲಿಲ್ಲವಾದರೆ ಜೀವನವೆ ಸಾವೆಂದು ಸಾರುವ ನಮ್ಮ ಕೆರಳಿದ ಕಾಲರಾಯ!

※ ※ ※

ಇರುವೆ ಕಿರಿಯದಾದರೂ ಅರಿಯದಯ್ಯಾ ಸೆರೆಯಾಳಿನ ಸಂಕಟವನ್ನು! ಆನೆ ಹಿರಿಯದಾದರೂ ಬಗಿಯುವುದಯ್ಯಾ ಬರಸರ ಸರಪಣಿಯದರ ಅಡಿಗಳನು! ಅಯ್ಯಾ, ಗಗನಕ್ಕೇರಿ ಹಾರುವ ಹಕ್ಕಿಯನು ಏರುವ ತೇರನ್ನಾಗಿಸಿಕೊಳ್ಳುವ ಎದೆ-ಗಾರಿಕೆ ಯಾರದು? ನೆಲದಲಿಯೆ ನಡೆದಾಡುವ ಎತ್ತು-ಕತ್ತೆ-ಗಳ ಮೇಲೆ ಇಮ್ಮಡಿ ಹೊರೆಯನಲ್ಲವೇ ಲೋಕ ಹೊರಿಸು-ವುದು? ತಾನೆತಾನಾಗಿ ಹೂವಿನಿಂದ ಹೂವಿಗೆ ಹಾರಾಡುವ ಮರಿದುಂಬಿ ಉಣ್ಣುವುದು ಇನಿಜೇನ ರಸವನ್ನು! ಕೊರಳು ಕಟ್ಟಿಸಿಕೊಂಡು ಇರುಳು-ಹಗಲೂ ಕೆಲಸಮಾಡುವ ಜೋಗಿ-ಕತ್ತೆಗಳು ತಿನ್ನುವುವು ತಿಪ್ಪೆಯ ಕಸವನ್ನು! ಸಿಂಗ ಹೆದರಿಕೆ-ಯಿಂದ ತನ್ನತನವ ತೊರೆದರೆ ಮಂಗನಂತೆ ಲಾಗಹಾಕಬೇಕಾಗುವುದಯ್ಯಾ! ಹಾವು ತನ್ನ ಹಲ್ಲನ್ನು ಕಳೆದುಕೊಂಡರೆ ಹುಳುವಿನ ಹುಳುಬಾಳನ್ನು ಬಾಳಬೇಕಾಗುವುದಯ್ಯಾ! ಜೀವಿಯ ಜೀವನದಲ್ಲಿ ಸವಿಯ ಸವನಿಸುವುದೆಂದರೆ ಸ್ವ-ಸ್ವರೂಪ ಜಾಗೃತಿ— ಸ್ವಾತಂತ್ರ್ಯ ಪ್ರೀತಿ! ಇದೇ ಕಾಲ-ರಾಯನಾವಾಗಲೂ ಸಾರುವ ನೀತಿ!

ಹೇಡಿಯಾಗಿ ನೆಲದಲ್ಲಿ ಬದುಕುವುದಕ್ಕಿಂತ ಹುಡಿಯಾಗಿ ನೀರೊಳಗೀಜಾಡುತಿರುವುದೇ ಲೇಸು ಕಾಣಾ! ಮಾನವನಾಗಿ ಹುಟ್ಟಿ ಮಾನವ ಕಳೆದುಕೊಂಡು ಬಾಳುವುದಕಿಂತ, ದಾನವ-ನಾಗಿ ಹುಟ್ಟಿ ದಾಳಿಯೆಬ್ಬಿಸುತಲಿರುವುದು ಲೇಸು ಕಾಣಾ! ಪಂಜರದ ಗಿಳಿಯ ಮೆಲುನುಡಿಗಿಂತ ಬಂಜೆಯ ಹಕ್ಕಿಗಳ ಕಲ-ಕಲಾಟ ಕಡುಲೇಸು ಕಾಣಾ! ಕೆರೆಯಲ್ಲಿ ಮಡುಗೊಂಡು ನಿಂತು ಕೊಳೆತುನಾರುವ ನೀರಿಗಿಂತ ತೊರೆಯಲ್ಲಿ ಹರಿಯು-ತಲಿರುವ ಕಿರುಪೊನಲೇ ಕಡಲೇಸು ಕಾಣಾ! ಅಯ್ಯಾ, ನುಡಿಯದ ನಾಲಗೆಯಿದ್ದು ಫಲವೇನು, ನಡೆಯದ ಕಾಲುಗಳಿದ್ದು ಪ್ರಯೋಜನವೇನು? ಮಾಡದ ಕೈಗಳಿದ್ದು ಫಲವೇನು, ನೋಡದ ಕಣ್ಣುಗಳಿದ್ದು ಪ್ರಯೋಜನವೇನು? ಪೌರುಷವಿಲ್ಲದ ಪಹನಿಗೆ ಬೆಲೆಯೇನು, ಸುಖವಿಲ್ಲದ ಶಾಂತಿಯಿಂದ ಲಾಭವೇನು? ಮಾನಸಕ್ಕಾಗಿ ಮರುಗದ ಮನವಿದ್ದರೇನು, ಕರುಣೆಗಾಗಿ ಕರಗದ ಕರುಳಿದ್ದರೇನು? ಜಗದೊಳಿದ್ದು ಜೀವಿಸಬೇಕೆಂಬ ಜನಜಂಗುಳಿಗೆ ಕಾಲರಾಯ ಹೇಳಕೇಳುವನಿದೇ ನೀತಿಯನು!

※ ※ ※

ಬಾಯುಸಿರಿಗೆ ಮೆಚ್ಚಿ ಬಲುಹನು ಮಾರಿಕೊಳ್ಳದಿರಣ್ಣಾ! ಕಾಯುಸುಖಕೆ ಮೆಚ್ಚಿ ತಿರುಳನು ತೂರಿಕೊಳ್ಳದಿರಣ್ಣಾ! ಬಯಲು ನುಡಿಗಳ ನೆಚ್ಚಿ ನಿಷ್ಕ್ರಿಯನಾಗಬೇಡಣ್ಣಾ! ಹುಯಿಲಿನಬ್ಬರಕೆ ಹೆದರಿ ಹಿಂಜರಿದು— ಕುಂಯ್‌ಗುಡುತ್ತ ಬಿದ್ದುಕೊಳ್ಳದಿರಣ್ಣಾ! ಹೊನ್ನು ಹಣಕ್ಕೆ ಮರುಳಾಗಿ ಮನ್ನೆಯ ತನವ ಮರೆಯದಿರಣ್ಣಾ! ಸೊಮ್ಮು-ಸಿರಿಗೆ ಸೋತುಹೋಗಿ ಬಿಮ್ಮು-ಬಿಂಕವ ತೊರೆಯದಿರಣ್ಣಾ! ಅಯ್ಯಾ, ಉರುಳು-ಗಣ್ಣಿಗೆ ಕೊರಳನ್ನು ಕೊಡಲು ಕರುವು ಕೂಡ ಸಮ್ಮತಿಸದು ಕಾಣಾ! ಇರುವನಿತೆ ಬಲುಹನು ಬಳಸಿ ಇರುವೆ ಕೂಡ ಎದುರಿನೊಂದಿಗೆ ಹೋರಾಡುವುದು ಕಾಣಾ! ಹೇಡಿಗಳಿಗೆ ಎಡೆಯಿಲ್ಲ ನೋಡಾ ಸ್ವಾತಂತ್ರ್ಯಸ್ವರ್ಗದಲಿ! ಅಂಜುಗುಳಿ-ಗಳಿಗೆ ಪಂಜರವೇ ಗತಿನೋಡು ಪರಾಕ್ರಮಿಗಳ ಲೋಕದಲಿ! ಹೆಮ್ಮೆ–ಬಿಮ್ಮುಗಳಿರದ ಹೆಣಗಳಿಗೆ ಮಸಣದಲ್ಲಿಯೂ ಮಾನದ ಸ್ಥಾನ ಸಿಕ್ಕದಯ್ಯಾ! ಈ ನೀತಿಯನರಿತು ಬಾಳುವವನೇ ಆಳುವವನಾಗುವನೆಂದು ಹೇಳುವ ನಮ್ಮ ನೀತಿಜ್ಞ ಕಾಲ-ರಾಯ!



ಪ್ರಳಯದ ಕೈಚಳಕ

'ಕುಂಬಾರನಿಗೆ ವರುಷ ದೊಣ್ಣೆಗೆ ನಿಮಿಷ' ಎಂಬ ಗಾದೆಯಂತೆ ಇಂದು ಪ್ರಪಂಚದ ಮೂಲೆಮೂಲೆಯಲ್ಲಿಯೂ ದೊಣ್ಣೆ ತನ್ನ ಕೈಯಾಟ ನಡೆಯಿಸಿಬಿಟ್ಟಿದೆ. ಕುಂಬಾರನ ಕಾರಖಾನೆಗಳು ಕೂಡ ಇಂದು ಗಡಿಗೆ-ಮಡಕೆಗಳನ್ನು ಬಿಟ್ಟು ಬರಿ ದೊಣ್ಣೆಗಳನ್ನೇ ನಿರ್ಮಿ-ಸುತ್ತಲಿವೆ. ಒಂದು ದೇಶದ ದೊಣ್ಣೆ ಇನ್ನೊಂದು ದೇಶದವರ ಗಡಿಗೆ-ಮಡಕೆಗಳನ್ನು ಪುಡಿ ಮಾಡುತ್ತಲಿದೆ. ಪ್ರಲಯ, ಎಲ್ಲೆಲ್ಲಿಯೂ ಪ್ರಲಯ! ಎಲ್ಲೆಲ್ಲಿಯೂ ಒಂದೊಂದು ಬಗೆಯ ದೊಣ್ಣೆಯ ಆಘಾತ; ಎಲ್ಲೆಲ್ಲಿಯೂ ಮಾನವಕುನ್ನಿಗಳ ನರಳಾಟ!

ಎಷ್ಟು ಜನ ಸೇರಿ ಕಷ್ಟಪಟ್ಟು ಭೂಮಿಯೊಳಗಿನ ಧಾತುಗಳನ್ನು ಹೊರತೆಗೆದಿಟ್ಟರು! ಎಷ್ಟೊಂದು ಜನಸೇರಿ ಕಲ್ಲೊಳಗಿಂದ ಎಣ್ಣೆ ತೆಗೆದು ಅಣಿಮಾಡಿಕೊಟ್ಟರು! ಎಷ್ಟೊಂದು ಜನ ಸೇರಿ ವಿಧವಿಧದ ರಸಾಯನಗಳನ್ನು ಅನುಗೊಳಿಸಿಟ್ಟರು! ಆದರೆ ಇದನ್ನೆಲ್ಲ ನಿರ್ಮಿಸಿದವರ ಉದ್ದೇಶವೆಂದು ಇನಿರಬಹುದು? ಜಗತ್ತನ್ನು ವಿಧಾಯಕ ಗೊಳಿಸಬೇಕೆಂದು; ಜನತೆಯಲ್ಲಿ ಶಾಂತಿ-ತೃಪ್ತಿ-ತುಷ್ಟಿಗಳನ್ನು ನೆಲೆಗೊಳಿಸಬೇಕೆಂದು! ಆದರೆ ಅವರು ಸಾಧಿಸಿದುದೇನು? ನಿರ್ಮಿಸಿದ ಸಾಮಗ್ರಿಗಳೆಲ್ಲ ಸಾಮ್ರಾಜ್ಯತೃಷ್ಣೆಯ ದೊಣ್ಣೆಗಾರರ ಕೈಗೆ ಸೇರಿದುವು! ನಾಡನ್ನು ಭದ್ರಗೊಳಿಸಬೇಕಾದ ವಿವಿಧಧಾತುಗಳಿಂದು ನಾಡನ್ನು ಹಾಳುಗೆಡಿಸುವ ಶಸ್ತ್ರಾಸ್ತ್ರಗಳಾಗುತ್ತಿವೆ. ನಾಡಿಗರಿಗೆ ಹಲವು ಬಗೆಯ ಸುಖಾನುಕೂಲತೆಗೆ ಕಾರಣವಾಗಿದ್ದ ಎಣ್ಣೆಯಿಂದು ಮಾರಿಯ ತೇರುಗಳನ್ನು ಮುಂದುವರಿಸುತ್ತಲಿದೆ. ಮರ್ತ್ಯರನ್ನು ಅಮರ್ತ್ಯರನ್ನಾಗಿಸಬಹುದಾಗಿದ್ದ ರಸಾಯನಗಳು ಮಾನವವಸತಿಗಳನ್ನು ಮಸಣವನ್ನಾಗಿಸುತ್ತಲಿವೆ.

ಮುಳುಗಿದ ಹಡಗುಗಳೆಷ್ಟು, ಸುಟ್ಟ ಹಳ್ಳಿ ಪಟ್ಟಣಗಳೆಷ್ಟು! ಇವುಗಳ ಮೂಲಕ ಸಮುದ್ರದ ತಳವನ್ನು ಕಂಡ—ಬೆಂದು ಬೂದಿಯಾದ— ಛಿನ್ನವಿಚ್ಛಿನ್ನರಾಗಿ ಸತ್ತ ಜನರೆಷ್ಟು! ಹೊಟ್ಟೆ ತುಂಬ-ಮಕ್ಕಳು ಮರಿಸೇರಿ ಉಣ್ಣಬೇಕೆಂದು ಒಕ್ಕಲಿಗ ಬೆಳೆದ ಬೆಳಸು, ಅವನ ಬಾಯಲ್ಲಿ ಬೀಳದೆ ಮುಳುಗಿದ ಹಡಗಿನೊಂದಿಗೆ ಕಡಲಡಿಯನ್ನು ಕಾಣುತ್ತಲಿದೆ; ಮುಳುಗದೆ ಉಳಿದುದು ಮರಣದ ದಾರಿಯಲ್ಲಿ ನಿಂತಿರುವ ವಿಧ್ವಂಸಕವೃತ್ತಿಯ ಸೈನಿಕರ ಒಡಲಡಿಯನ್ನು ಸೇರುತ್ತಲಿದೆ. ಉಂಡುಂಡು ಸಾಯುತ್ತಲಿದ್ದಾರೆ ಸೈನಿಕರು; ಉಪವಾಸ ಸಾಯುತ್ತಲಿದ್ದಾರೆ ಭಿಕ್ಷುಕರು! ಎಲ್ಲೆಲ್ಲಿಯೂ ಸಾವು! ಎಲ್ಲೆಲ್ಲಿಯೂ ನೋವು! ಪ್ರಳಯದ ಪಾಶ ಪ್ರಪಂಚವನ್ನೇ ಸೆಳೆಯುತ್ತಲಿದೆ.

ಭಾರತವನ್ನೂ ಈ ಪಾಶ ಸೆಳೆಯತೊಡಗಿದೆ. ಮಿಕ್ಕ ಕಡೆಗಿಂತ ನಮ್ಮಲ್ಲಿಯ ಪ್ರಳಯದ ಕೈಯಾಟ ವಿಚಿತ್ರವಾಗಿದೆ. ಒಂದು ರಾಷ್ಟ್ರದ ದೊಣ್ಣೆ ಇನ್ನೊಂದು ವೈರಿರಾಷ್ಟ್ರವನ್ನು ಒಡೆಯುವುದು ಮಿಕ್ಕ ಕಡೆಗಿದ್ದರೆ, ಭಾರತ ತನ್ನ ದೊಣ್ಣೆಯಿಂದ ತನ್ನ ಒಡಲನ್ನೇ ತಾನಿಂದು ಒಡೆದುಕೊಳ್ಳತೊಡಗಿದೆ. ಇದಕ್ಕೆ ಕಾರಣವೆಂದರೆ ಭಾರತದ ಪರಾಧೀನ ಜೀವನ. ಜನತೆಯ ಸ್ವಾತಂತ್ರ್ಯಪ್ರೀತಿ ಅವರನ್ನು ಕಾರ್ಯಜಾಗೃತರನ್ನಾಗಿಸುತ್ತಲಿದೆ; ಆಡಳಿತದ ಭೇದನೀತಿ ಜನತೆ-ಯನ್ನು ಕಂಗೆಡಿಸತೊಡಗಿದೆ. ನಾಡಿನ ಬಡತನ, ಹೇಡಿತನ, ಮೂರ್ಖತನಗಳು ಕಂಗೆಟ್ಟ ಜನತೆಯನ್ನು ಇನ್ನಷ್ಟು ಕಂಗೆಡಿಸ-ತೊಡಗಿವೆ. ಆಡಳಿತದ ಭೇದನೀತಿ ಮೇಲಿನ 'ಮೂರು ತನ'ಗಳನ್ನು ಚೆನ್ನಾಗಿ ತನ್ನ ಕಾರ್ಯಕ್ಕೆ ಉಪಯೋಗಿಸಿಕೊಳ್ಳುತ್ತಿರುವುದರಿಂದ, ಸ್ವಕೀಯರೇ ಸ್ವಕೀಯರನ್ನು ಪೀಡಿಸುವ ಹಿಂಸಿಸುವ ಸಂದರ್ಭವಿಂದು ಒದಗುತ್ತಲಿದೆ. ಸ್ವಾತಂತ್ರ್ಯಪ್ರೀತಿಯ ಜನರು ಒತ್ತಾಯದ ಆಡಳಿತ ಮುರಿಯಲೆಂದು ಚಳವಳಿ ಹೂಡುತ್ತಾರೆ. ಆ ಚಳವಳಿಗಾರ-ರನ್ನು ಮುರಿಯಲು— ಶಿಕ್ಷಿಸಲು— ಸರಕಾರದವರು ನಮ್ಮವರಾದ ಪೋಲಿಸರನ್ನು-ಅಧಿಕಾರಿಗಳನ್ನು ಮುಂದೆ ಚಾಚುತ್ತಾರೆ. ಉದ್ರೇಕದ ಮೂಲಕ, ಸ್ವಾತಂತ್ರ್ಯ ಸಾಧಿಸಲೆಂದು ಹೊರಟ ಜನರು, ಮಾರ್ಗದಲ್ಲಿ ಎದುರಾದವರು ಯಾರೆಂಬುದನ್ನು ಪರಿಗಣಿಸದೆ ಪೋಲೀಸರಾದ ಭಾರತೀಯರನ್ನೇ ಅಧಿಕಾರಿಗಳಾದ ಭಾರತೀಯರನ್ನೇ ಪೀಡಿಸತೊಡ-ಗಿದ್ದಾರೆ. ಸರಕಾರಕ್ಕೆ ಅನುಕೂಲ ಸಾಧನಗಳಾಗಿವೆಯೆಂಬ ತಿಳಿವಳಿಕೆ-ಯಿಂದ ರೈಲು-ತಂತಿ-ಟೆಲಿಫೋನುಗಳನ್ನು ನಷ್ಟಗೊಳಿಸಿ, ತಮ್ಮ ಅನನುಕೂಲತೆಯನ್ನೇ ಹೆಚ್ಚಿಸತೊಡಗಿದ್ದಾರೆ.

ರೈಲುಗಾಡಿಗಳು ಬಿದ್ದು ಮುರಿದರೆ ಕಂಪನಿಗಳಿಗೆ ಸ್ವಲ್ಪ ನಷ್ಟ-ವಾಗಬಹುದು; ಆದರೆ ಅದು ಪ್ರವಾಸಿಕರ ಗಾಡಿಯಿದ್ದರೆ ನಮ್ಮ ಜನರೇ ಸಂಕಟಕ್ಕೆ ತುತ್ತಾಗುವರು; ಸಾಮಾನಿನ ಗಾಡಿಯಿದ್ದರೆ ನಮ್ಮ ಜನರ ಸಾಮಾನುಗಳೇ ನಷ್ಟವಾಗಿ ವ್ಯಾಪಾರ-ವ್ಯವಹಾರ ಕಟ್ಟಾಗು-ವುವು. ನಮ್ಮ ಸರಕಾರದ ಶಕ್ತಿ ದೊಡ್ಡದಿದೆ. ರೈಲುಗಳು ಹಾಳಾದರೆ ಜನತೆಯ ಮೇಲೆ ಭಾರವಾದ ಕರವನ್ನು ಹೇರಿ, ವಿಮಾನಗಳ ಮೂಲಕ ಕಾರ್ಯ ಸಾಗಿಸಿಕೊಳ್ಳಬಹುದು. ತಂತಿಗಳನ್ನು ಕಿತ್ತಿದರೆ ತಂತಿ-ಯಿಲ್ಲದ ಸಾಧನದಿಂದ ಸುದ್ದಿಗಳನ್ನರಿತುಕೊಳ್ಳಬಹುದು. ಆದರೆ ಜನರಿಗೆ ಎರಡು ರೀತಿಯ ನಷ್ಟ. ಉದ್ರಿಕ್ತ ಚಳವಳಿಗಾರರ ವಿಧ್ವಂಸಕ ಚಳವಳಿಯ ಮೂಲಕವೂ ನಷ್ಟ. ಯಾರದೋ ತಪ್ಪನ್ನು ಯಾರ ಮೇಲೆಯೋ ಹಾಕಿ, ಬಲುಮೆಯ ಶಾಸನದ ಬಿಗುಹಿಗೆ ಗುರಿ ಮಾಡಬಲ್ಲ ಸರಕಾರದ ಮೂಲಕವೂ ನಷ್ಟ. ಭಾರತೀಯರು ಪರಾಧೀನರಿದ್ದುದು ಸುಳ್ಳಲ್ಲ; ಆದರೆ ಪರಕೀಯರು ಪ್ರತ್ಯಕ್ಷವಾಗಿ ಭಾರತೀಯರ ಸ್ವಾತಂತ್ರ್ಯದ ಚಳವಳಿಯ ಬಲೆಯಲ್ಲಿ ಸಿಕ್ಕದಂತೆ ಚಾತುರ್ಯದ ವಿಸ್ತಾರ ಪಡಿದೆ. ಸ್ವಾತಂತ್ರ್ಯಪ್ರೀತಿಯ ಜನತೆ ಸ್ವಲ್ಪ ಮಿಸುಕಾಡಿದರೆ ಸಾಕು; ಅವರ ಬೆರಳೇ ಅವರ ಕಣ್ಣನ್ನು ಚುಚ್ಚ-ತೊಡಗುವುದು. ಸಿಟ್ಟಿನ ಭರದಲ್ಲಿ ಅಡ್ಡ ಬಂದ ಬೆರಳನ್ನು ಕೊಯ್ದು ಬಿಟ್ಟರೆ ವ್ಯಥೆ ಸರಕಾರಕ್ಕೆ ಏನೂ ಇಲ್ಲ; ಕೊಯ್ದ ಬೆರಳು ತಮ್ಮದೇ ಆದುದರಿಂದ, ತಾವೇ ಗೋಳಿಗೆ ಗುರಿಯಾಗಬೇಕಾಗುವುದು. ಎಲ್ಲಿಯ

(೧೫೭ ನೆಯ ಪುಟ ನೋಡಿರಿ)

‘ ಸಿ ಪಿ ಆರ್ ’ ಸುದ್ದಿಗಳು

ಸರ್. ಸಿ. ಪಿ. ರಾಮಸ್ವಾಮಿ ಅಯ್ಯರರು ವೈಸರಾಯರ ಉಪದೇಶಕ ಮಂಡಳದಲ್ಲಿ ಸೇರಿ ಪ್ರಕಟನಾಖಾತೆಯ ಸರ್ವಾಧಿಕಾರಿಗಳಾದಂದಿನಿಂದ, ವೃತ್ತಪತ್ರಗಳ ಸತ್ತ್ವವೂ ಸ್ವಾರಸ್ಯವೂ ಬೆಳೆದಿವೆ. ದೇಶೀಯ ಸಂಸ್ಥಾನದ ದಿವಾಣರಾಗಿ ದುಡಿದ ಸರ್ ಸಿ. ಪಿ. ಯವರು, ಮೋಜಿನ ಮೊಗಲಾಯಿಯ ಪ್ರವರ್ತಕರಾದರೆ ಆಶ್ಚರ್ಯವೇನು....ಎಂದು ಮಂಗರಾಯನು—ಅರ್ಥಾತ್ ಮೌಲುದನಿಯಲ್ಲಿ—ಕಿರಿಚುತ್ತಾನೆ. ನೋಡಿರಿ ಒಂದು ಮಾದರಿಯನ್ನು:

‘ ಎಲ್ಲ ಕಡೆಯಲ್ಲೂ ಶಾಂತ ವಾತಾವರಣ
ಆದರೆ ತಂತಿಯ ವ್ಯವಹಾರಕ್ಕೆ ಅಲ್ಲಲ್ಲಿ ತಡೆ!’

ಸಾಮಾನ್ಯವಾಗಿ ಅನೇಕ ಪತ್ರಿಕೆಗಳಲ್ಲಿ ಕಂಡು ಬರುವ ಶಿರೋಲೇಖಗಳಿವು. ಇವುಗಳ ಮೋಜನ್ನು ಬಲ್ಲಿರಾ? ಎಲ್ಲ ಕಡೆಯಲ್ಲೂ ಶಾಂತವಿದ್ದರೆ ಎರಡನೆಯ ವಾಕ್ಯದ ಅಗತ್ಯವಿಲ್ಲ; ಎರಡನೆಯ ವಾಕ್ಯವೆ ನಿಜವಿದ್ದರೆ ಮೊದಲನೆಯ ಮಾತು ವಿನೋದಕರವೆನಿಸುವುದು. ಅಲ್ಲವೆ? ತಂತಿಯ ವ್ಯವಹಾರಕ್ಕೆ ತಡೆ ಇದ್ದರೆ ‘ ಎಲ್ಲ ಕಡೆಯಲ್ಲೂ ಶಾಂತ ವಾತಾವರಣ ’ ಎಂಬ ತಂತಿಯೂ ತಡವಾಗಿಯೆ ಮುಟ್ಟಿರಬಹುದಲ್ಲವೆ? ಎಂದರೆ ಪ್ರಕಟವಾಗುವ ಅನೇಕ ದಿನಗಳ—ಉದಾಹರಣೆಗಾಗಿ, ಸಿ. ಪಿ. ಯವರು ಅಧಿಕಾರ ವಹಿಸುವ ಮುಂಚೆ—ಶಾಂತವಿದ್ದಿತು ಎಂದು ಹೇಳಬಹುದಲ್ಲವೆ? ವಾಚಕರೆ, ತಟ್ಟನೆ ಮಂಗನಂತೆ ‘ ಅಹುದು ’ ಎನ್ನಬೇಡಿರಿ; ಡಿಫೆನ್ಸ್ ಆಫ್ ಇಂಡಿಯಾ ಆಕ್ಟಿನ ಅನ್ವಯ ಅಫೆನ್ಸ (ಅಪರಾಧ)ಕ್ಕೆ ಗುರಿಯಾದಿರಿ! ‘ ಎ. ಪಿ. ’ ಮತ್ತು ‘ ರಾಯ್ಟರ್ ’ ಎರಡೂ ಸುದ್ದಿಸಂಸ್ಥೆಗಳನ್ನು ಹಿಂಡಿ ತೆಗೆದ ರಸಗಟ್ಟಿ ಇದು ‘ ಸಿ. ಪಿ. ಆರ್ ’ ಎಂಬುದು! ಸಿ, ಎಂದರೆ ಸಂಸ್ಥಾನ, ಪಿ—ಎಂದರೆ ಪದ್ಧತಿ, ಆರ್—ಎಂದರೆ ರಿಪ್ರೆಶನ್—ಅಲ್ಲ—ಅಂದ್ರೆ—ಹೆಹೆ! ರಾಮ ಯಾರ ಸ್ವಾಮಿ ಅವ—ಎಂದರೆ—ಅರ್ಥಾತ್ ಮಂಗರಾಯ ಅಂತ! ಹೆಹೆ!

* * *

ಜ್ಯೋತಿಷಿಗೆ ಜೋಕೆ!

‘ ಆಗಸ್ಟ್ ತಿಂಗಳಲ್ಲಿ ಸರಕಾರಕ್ಕೂ ಕಾಂಗ್ರೆಸಿಗೂ ಒಪ್ಪಂದವಾಗಿ, ಆಮೇಲೆ ಒಂದು ದುಂಡು ಮೇಜಿನ ಪರಿಷತ್ತು ಕೂಡಿ, ಹಿಂದುಸ್ತಾನಕ್ಕೆ ಸ್ವಾತಂತ್ರ್ಯವೂ ಸುಖವೂ ದೊರೆಯುವುದೆಂದು ಒಬ್ಬ ಹೆಸರಾದ ಜ್ಯೋತಿಷಿ ಕನ್ನಡಪತ್ರಿಕೆಯಲ್ಲಿ ಪ್ರಕಟಿಸಿದ್ದನು. ಆದೀಗ ತೀರ ವಿರುದ್ಧವಾಗಿವೆ. ಈ ಸ್ಥಿತಿಗೆ ಏನಾದರೂ ಉಪಾಯವಿದೆಯೆ?’ ಎಂದು ವಾಚಕನೊಬ್ಬನು ಮಂಗರಾಯನನ್ನು ಕೇಳಿದ್ದಾನೆ. ಉಪಾಯವೆಂದರೇನು? ಕನ್ನಡ ಪತ್ರಿಕೆಯಲ್ಲಿ ಪ್ರಕಟವಾದುದು ಎಂದರೆ ಇಷ್ಟು ತೊಡಕು—ಅಥವಾ—ಹಾ! ತಡೆಯಿರಿ—ಮಂಗರಾಯನಿಗೆ ಸ್ಫೂರ್ತಿ ಸುರಿಸಿತು, ಅರ್ಥಾತ್ ಮೈತುಳಿಸಿತು. ಸಂದೇಹವೇನು? ಅದರಲ್ಲಿ ವಾಡಿಕೆಯ ಅಚ್ಚಿನ ದೋಷವಿರಲೇಬೇಕು. ‘ದುಂಡು ಮೇಜಿನ ಪರಿಷತ್ತು’ ಎಂಬುವದ ಬದಲಾಗಿ ನಿಜವಾಗಿ ‘ ದಂಡುಮೋಜಿನ ಪರಿಷತ್ತು ’ ಎಂದಿದ್ದಿರಬಹುದಲ್ಲವೆ? ಹಾಗಾದರೆ ಜ್ಯೋತಿಷಿ ಇಂದಿನ ಸ್ಥಿತಿಯನ್ನು ಬಣ್ಣಿಸಿರಬಹುದಲ್ಲವೆ? ಜ್ಯೋತಿಷಿಮಹಾಶಯಾ, ‘ ಅದುದು ’ ಎಂದು ಜಂಬ ಕೊಚ್ಚಬೇಡ. ಇಂದಿನ ಸುದ್ದಿಯನ್ನು ಪ್ರಕಟಿಸುವುದೆ ಅಪರಾಧವೆನಿಸುವಾಗ ಮುಂದಿನ ಸುದ್ದಿಯನ್ನು ಪ್ರಕಟಿಸುವುದು ಆನುವಂಶಿಕ ಅಪರಾಧವೆನಿಸೀತು! ಜೋಕೆ! ಚಹದಂಗಡಿಗಳ ವಿನಾ ಮತ್ತಾವ ಸಾರ್ವಜನಿಕ ಸ್ಥಾನದಲ್ಲೂ ದುಂಡುಮೇಜುಗಳಿಲ್ಲದಿರುವಾಗ— ಅಥವಾ ಹೆಚ್ಚೇನು? ‘ ಪಂಚಭವತಿ ’ ಎಂದೆಯೆಂದರೆ ನಿನ್ನ ಪ್ರಪಂಚೇ ನಭವತಿ ಏದೀತು--ಜೋಕೆ!

* * *

ರಾಜಕೀಯ ಒಗಟುಗಳು

೧. ‘ ಸರಕಾರ ಮತ್ತು ಅಡ ಒಂದು ’ ಎಂದರೇನು?

೨. ‘ ಸಂರಕ್ಷಣೆಯ ಮೆಂಬರರು ಸೂಸರು ’ ಎಂದರೇನು?

೩. ‘ ಪಾಕಿಸ್ತಾನದಲ್ಲಿ ಹಕ್ಕು ಇಲ್ಲ ’— ಎಂದರೇನು?

೪. ‘ ಪಂಜಾಬದಲ್ಲಿ ಸಿಕಂದರನ ರಾಜ್ಯ ’ ಎಂದರೇನು?

೫. ‘ ದೇವರನ್ನು ಬಂಧಿಸಿದರು ’—??

೬. ‘ ಕೂಲಿಕಾರರಿಗೆ ಅನ್ನಬೇಡ, ಕರಬೇಕು ’—!!

ವಾಚಕರು ಈ ಒಗಟುಗಳಿಗೆ ಸಮರ್ಪಕವಾದ ಉತ್ತರಗಳನ್ನು ಕಾಣಿಸಿ, ಜೊತೆಗೆ ಒಂದೂವರೆ ಆಣೆಯ ಸ್ಟಾಂಪನ್ನು ಇರಿಸಿ, ಉತ್ತರವನ್ನು ತಮ್ಮ ಕಡೆಗೆ ಸ್ಟಾಂಪನ್ನು ಮಂಗರಾಯನ ಕಡೆಗೆ ರವಾನಿಸಬೇಕು.

* * *

ಸೆನ್ಸರರ ಪ್ರಚಾರಕಾರ್ಯ

ಮಿಕ್ಕ ಪತ್ರಗಳೆಲ್ಲ ಅವ್ಯವಸ್ಥಿತವಾಗಿ ತಲ್ಪುತ್ತಿವೆಯಾದರೂ ಮಂಗರಾಯನಿಗೆ ಬರುವ ಪತ್ರಗಳು ಸರಿಯಾಗಿ ಬಂದೇ ಬರುತ್ತಲಿವೆ. ಈ ಸಲ ಬಂದ ಪತ್ರಗಳಲ್ಲಿ ಒಂದು ತೀರ ಸೂಕ್ಷ್ಮ ವಿಚಾರವನ್ನು ಒಳಗೊಂಡಿರುವುದು. ಸೂಕ್ಷ್ಮವಿಚಾರವೆಂದು ಹೇಳಿ ವಾಚಕರಲ್ಲಿ ಇಲ್ಲದ ಆತುರವನ್ನು ಹುಟ್ಟಿಸುವುದಾದರೂ ಏಕೆ? ಆ ಪತ್ರ ಹೀಗಿದೆ ನೋಡಿ:

“ ಸಾಗರವನ್ನು ಹಾರಿ ಸೀತೆಯ ಸುದ್ದಿಯನ್ನು ತಂದ ಕಪಿಕುಲ ಸಂಭೂತಾ, ನನ್ನದೊಂದು ಸಂಶಯವನ್ನು ದೂರಮಾಡುವೆಯಾ? ಸದ್ಯದ ಮಬ್ಬಾಳಿಕೆಯಲ್ಲಿ ಸರಕಾರದವರು ಸೆರೆಹಿಡಿದು ಇಡುತ್ತಿರುವವರ ಹೆಸರುಗಳನ್ನು ನೋಡಿದರೆ, ಕನ್ನಡ ನಾಡಿನಲ್ಲಿ, ಹೆಚ್ಚಾಗಿ ಲಿಂಗಾಯತರವೇ ಇದ್ದಂತೆ ಕಾಣುವುದು. ಅಲ್ಲದೆ ಬ್ರಿಟಿಷ್ ಕರ್ನಾಟಕದ ಜಿಲ್ಲೆ ಜಿಲ್ಲೆಗಳಲ್ಲಿಯೇ ಆಗಲಿ, ಮೈಸೂರು ಸಂಸ್ಥಾನ ಕಾಂಗ್ರೆಸ್ಸಿನಲ್ಲಿಯೆ ಆಗಲಿ, ಕೆಲಸಗಾರರಲ್ಲಿ ಹೆಚ್ಚಿನ ಜನರು ಲಿಂಗಾಯತರೇ ಇರುವರೆಂಬುವನ್ನೂ ಕೇಳಿ ನೋಡಿ ಬಲ್ಲೆ. ಅಲ್ಲದೆ ಈಗ

ದಬ್ಬಾಳಿಕೆ ನಡೆದಿರುವ ಸ್ಥಳಗಳನ್ನು ವಿಮರ್ಶಿಸಿದರೆ ಅವೆಲ್ಲ ಲಿಂಗಾಯತ ಬಹುಸಂಖ್ಯಾತರ ವಸತಿಸ್ಥಾನಗಳೇ ಆಗಿರುವುವು. ಹೀಗಿರುವಾಗ 'ಆಲ್ ಇಂಡಿಯಾ ಲಿಂಗಾಯತ ಯುನಿಟಿ ಲೀಗ್' ಎಂಬ ಸಂಸ್ಥೆಯೊಂದು, ಕಾಂಗ್ರೆಸನ್ನು ತಿರಸ್ಕರಿಸುತ್ತಲೂ, ಸರಕಾರದ ದಬ್ಬಾಳಿಕೆಯನ್ನು ಪುರಸ್ಕರಿಸುತ್ತಲೂ ಇದೆ. ಈ 'ಆಲ್ ಇಂಡಿಯಾ ಲಿಂಗಾಯತ ಯುನಿಟಿ ಲೀಗ್' ಎಂದರೆ ಯಾವುದು? ಇದರ ಗೊತ್ತು-ಗುರಿಗಳೇನು? ಇದರಲ್ಲಿರುವ ಮುಂದಾಳುಗಳು ಯಾರು? ದಯೆಯಿಟ್ಟು ಇವೆಲ್ಲವನ್ನೂ ತಿಳಿಸಿದರೆ ತುಂಬ ಉಪಕಾರವಾಗುವುದು!"

ಪತ್ರ ಬರೆದವರಿಗೆ ಉತ್ತರವಿದು:

ಸ್ವಾಮೀ! ಮಂಗರಾಯನಿಗೆ ನಿಜವಾಗಿಯೂ ಈ ವಿಷಯದ ಊಹಾಪೋಹ ಬೇಕಾಗಿಲ್ಲ. ತಮಗೆ ಈ ವಿಷಯ ಕೂಲಂಕಷವಾಗಿ ತಿಳಿಯಬೇಕಾದರೆ ಶ್ರೀ. ಎಸ್. ಕೆ. ಒಡೆಯರ್ ರಿಟಾಯರ್ಡ್ ಡಿ. ಎ. ಸಿ. ಅವರನ್ನು ಬರೆದು ಕೇಳಿರಿ. ಆಲ್ ಇಂಡಿಯಾದ ಲಿಂಗಾಯತರನ್ನು ತಮ್ಮ ಅಭಿಪ್ರಾಯದಂತೆ 'ಯುನಿಟಿ' ಮಾಡಬೇಕೆಂದು ಪಾಪ! ಆ ಸಂಸ್ಥೆಯ (!) ಸಂಸ್ಥಾಪಕರ ಉದ್ದೇಶವಿರಬಹುದು! ಆದರೆ ಕನ್ನಡನಾಡಿನ ಲಿಂಗಾಯತರೆಲ್ಲರೂ ಆ ಸಂಸ್ಥೆಯ ಸಂಸ್ಥಾಪಕರಂತೆ ಸರಕಾರದ ಪೇನ್‌ಶನ್ ತಿನ್ನುತ್ತ ದಿನಗಳೆಯುವವರಲ್ಲವೆಂಬುದನ್ನು ಅವರು ವಿಚಾರಮಾಡಿದಂತೆ ಕಾಣುವುದಿಲ್ಲ. ಇದಕ್ಕೂ ಹೆಚ್ಚಿಗೆ ಹೇಳುವುದಕ್ಕೆ ಮಂಗರಾಯನು ಹೇಸುತ್ತಾನೆ.

* * *

ಲಟ್ಟೆಯವರಿಗೆ ಪ್ರಶಸ್ತಿ

ಕನ್ನಡನಾಡಿನ ಮುಂದಾಳುಗಳಲ್ಲಿ ಲಟ್ಟೆಯವರಿಗಿರುವಷ್ಟು ಬುದ್ಧಿ ಇನ್ನಾರಿಗೂ ಇಲ್ಲವೆಂದು ಮಂಗರಾಯ ಒಪ್ಪಿ ಪ್ರಶಸ್ತಿಪತ್ರವನ್ನು ಕೊಡುತ್ತಲಿದ್ದಾನೆ. ಬುನಾದಿಯಿಂದಲೂ ರಾಜಕಾರ್ಯದಲ್ಲಿ ಬಿದ್ದು ಕಷ್ಟನಷ್ಟಗಳನ್ನು ಅನುಭವಿಸಿದ 'ಬುದರೂಕ್' ಬ್ರಾಹ್ಮಣ ಮುಂದಾಳುಗಳಿಗೂ ಮುಂಬೈ ಮಂತ್ರಿಪದ ಸಿಕ್ಕಲಿಲ್ಲ. ಬಹುಸಂಖ್ಯಾತರ ಪ್ರತಿನಿಧಿಗಳಾಗಿ ಬಹುಸಂಖ್ಯೆಯಲ್ಲಿ ಹೋದ ಲಿಂಗಾಯತ ಮುಂದಾಳುಗಳಿಗೂ ಆ ಮನ್ನಣೆ ಸಿಕ್ಕಲಿಲ್ಲ. ಆದರೆ ನಾ. ಲಟ್ಟೆಯವರು ಕೊಲ್ಹಾಪುರದ ಮಂತ್ರಿಯ ಕಿರೀಟವನ್ನು ಕಳೆದುಕೊಂಡು, ಕೂಡಲೆ ಕಾಂಗ್ರೆಸಿಗೆ ಸೇರಿ ಮುಂಬಯಿ ಮಂತ್ರಿತ್ವದ ಮುಂದಾಸನ ಸುತ್ತಿಕೊಂಡರು. ಈಗ ಮಿಕ್ಕವರೆಲ್ಲ ಕಾರಾಗೃಹದಲ್ಲಿ ಬಳಲುತ್ತ ಬಿದ್ದಿರುವಾಗ— ದೇಶದಲ್ಲಿ ದಬ್ಬಾಳಿಕೆಯ ದಳ್ಳುರಿ ಹೊತ್ತಿ ಜನತೆಯನ್ನು ದಹಿಸತೊಡಗಿರುವಾಗ— ದೇವಾಸ ಸಂಸ್ಥಾನದ ದಿವಾಣಗಿರಿಯು ಸಗಡಿತೊಟ್ಟು ಹೊರಟಿತು. ದೇವಾಸ ಸಂಸ್ಥಾನದಲ್ಲಿಯೂ ಪ್ರಜೆಗಳು ಹಕ್ಕಿಗಾಗಿ ಕಾದಾಡುವ ಸಂಘರ್ಷಣವನ್ನು ಮಾಡುತ್ತಲೆ ಇರಬಹುದು. ಎಂತಲೆ ಕೊಲ್ಹಾಪುರದ ಅಕ್ಕಾಸಾಹೇಬರ ಮಕ್ಕಳಾದ ದೇವಾಸದ ದೊರೆಗಳು, ಶ್ರೀಮಾನ್ ಲಟ್ಟೆಯವರ ದಮನಶಕ್ತಿಯನ್ನು ಬಲ್ಲವರಾದ್ದರಿಂದಲೆ ದಿವಾಣಗಿರಿಗೆ ಅವರನ್ನು ಆಯ್ದುಕೊಂಡಿರಬಹುದು. ಪ್ರಜಾಪ್ರಭುತ್ವದ ಪುರಾಣ ಹೇಳಿದ ಬಾಯಿಂದಲೆ ಇನ್ನು ಲಟ್ಟೆಯವರು ಪ್ರಜೆಗಳ ಎದೆಯನ್ನು ಉರಿಸುವ ರಾಜಶಾಸನವನ್ನು ಉಗ್ಗಡಿಸಲಿರುವರು. ಹೊತ್ತು ಬಂದಂತೆ ಕೊಡೆ ಹಿಡಿಯುವುದು ನಿಜವಾದ ಪುರುಷಸಿಂಹರ ಲಕ್ಷಣವೆಂದು ಲಟ್ಟೆಯವರಂತೆ ಮಂಗರಾಯನದೂ ಅಭಿಮತವಿದೆ. ಆದುದರಿಂದಲೆ ಮಂಗರಾಯ ಲಟ್ಟೆಯವರ ಬಿರುದು ಬಾವಲಿಗಳನ್ನು ಹೊಗಳಿ ಹಾಡಲು ಬಯಸುತ್ತಾನೆ:

"ಇಮ್ಮೊಗದ ಗಂಡಭೇರುಂಡಾ!
ಮಂತ್ರಿಯಾಗಲಿಕೆಂದೆ ಹುಟ್ಟಿದ ಪ್ರಚಂಡಾ!
ಪುಂಡ ಕಾಂಗ್ರೆಸಿಗರಿಗೆಲ್ಲ ನೀನು ಗಂಡಾ!
ಲಟ್ಟೇ ಅಣ್ಣಾಸಾಹೇಬಾ ಭೋಪರಾಕು!"

ಕಳೆದ ಮಹಾಯುದ್ಧದ ನಂತರದ ಕೆಲವು ಆರ್ಥಿಕ ಸ್ಥಿತ್ಯಂತರಗಳು

ಶ್ರೀ. ವಾಳ್ವೇಕರ ಗುರುರಾಯರು ಬಿ. ಎ., ಎಲ್‌ಎಲ್. ಬಿ. ಹುಬ್ಬಳ್ಳಿ

ಲೇಖಾಂಕ ೨

★

ಸಾಲಗಾರರೂ ಸಾವುಕಾರರಾದರು

ಹಿಂದಿನ ಮಹಾಯುದ್ಧದ ಮಹಾಪರ್ವಣಿಯಲ್ಲಿ, ಯುದ್ಧದಲ್ಲಿ ತೊಡಗಿದ ಮತ್ತು ತೊಡಗದೆ ಇದ್ದ ರಾಷ್ಟ್ರಗಳು ತಮ್ಮ ಆರ್ಥಿಕ ಸ್ಥಿತಿಯನ್ನು ಹೇಗೆ ಸುಧಾರಿಸಿಕೊಂಡುವೆಂಬ ಹಾಗೂ ಹಿಂದುಸ್ಥಾನವು ಈ ವಿಚಾರದಲ್ಲಿ ಹೇಗೆ ಹೇಗೆ ಹಿಂದುಳಿದಿದೆಯೆಂಬ ವಿಷಯವನ್ನು ಸಂಕ್ಷೇಪವಾಗಿ ನಾವಿಲ್ಲಿ ವಿಚಾರಿಸುವಾ. ಬೇರೆ ರಾಷ್ಟ್ರಗಳು ಮುಂದುವರಿಯಲಿಕ್ಕೆ—ನಾವು ಇದ್ದಲ್ಲಿಯೇ ಉಳಿಯಲಿಕ್ಕೆ ಅಥವಾ ಹಿಂದೆ ಸರಿಯಲಿಕ್ಕೆ—ಒಂದೇ ಕಾರಣವಿದೆ: ಆ ರಾಷ್ಟ್ರಗಳು ಸ್ವತಂತ್ರವಿವೆ; ಆ ರಾಷ್ಟ್ರಗಳು ತಮ್ಮ ಆಡಳಿತವನ್ನು ತಾವೇ ನಡೆಯಿಸುತ್ತಲಿವೆ! ಅವುಗಳಲ್ಲಿಯ ಆಡಳಿತವು ಅಲ್ಲಿಯ ಜನತೆಯ ಏಳಿಗೆಗಾಗಿ ನಡೆಯುತ್ತದೆ! ಭರತಖಂಡದಲ್ಲಿ ಬ್ರಿಟಿಶ್ ಆಡಳಿತಗಾರರ ಆಡಳಿತವಿದೆ! ಭಾರತೀಯರಿಗೆ ಸ್ವರಾಜ್ಯವಿಲ್ಲ! ಜನರ ಹಿತಕ್ಕಾಗಿ ಈ ಆಡಳಿತ ನಡೆದಿದೆಯೆಂದು ಬ್ರಿಟಿಶರು ಸಾರುತ್ತಾರೆ; ಆದರೆ ಭಾರತೀಯ ಮುಖಂಡರು 'ಅವರಿಂದ ದೇಶದ ಉನ್ನತಿಯಾಗಿಲ್ಲ—ಆಗುವ ಸಂಭವವಿಲ್ಲ' ಎಂದು ಹೇಳುತ್ತ ಬಂದಿದ್ದಾರೆ— ಆದರೆ ಕೇಳುವವರು ಯಾರು? ಅನೇಕ ಅಂಕೆಗಳನ್ನು ಅಥವಾ ಹಲವು ಉದಾಹರಣೆಗಳನ್ನು ಕೊಟ್ಟು ನಾನೀಗ ಓದುಗರನ್ನು ಬೇಸರುಗೊಳಿಸುವುದಿಲ್ಲ. ಆದರೆ ಅಂಕೆಗಳಿಲ್ಲದೆ ನಾನು ಬರೆಯುವುದಿಲ್ಲ, ಆ ಅಂಕೆಗಳನ್ನು ಕಂಡರೆ ಓದುವುದಕ್ಕೆ ಉತ್ಸುಕತೆ ಉಂಟಾಗುವುದಿಲ್ಲವೆಂದು ಕೆಲವರು ಹೇಳುತ್ತಾರೆ. ಆದರೂ ನಾನು ಮಾಡುವ ವಿಧಾನಗಳ ಸಮರ್ಥನಕ್ಕಾಗಿ ಕೆಲವು ಅಂಕೆಗಳನ್ನಾದರೂ ಕೊಡುವುದು ಅವಶ್ಯವಿರುತ್ತದೆ. ಹೆಚ್ಚಿನ ಅಂಕೆಗಳನ್ನು ಕೊಡುವ ಗೋಜಿಗೆ ಹೋಗುವ ಹವ್ಯಾಸವನ್ನು ನಾನು ಬಿಡಬೇಕೆಂದಿದ್ದೇನೆ. ಆದುದರಿಂದ ಓದುಗರು ಅಂಕೆಗಳಿಗೆ ಬೇಸರುಗೊಳ್ಳಬಾರದೆಂದು ಅವರಲ್ಲಿ ನನ್ನ ಅರಿಕೆ.

ಅಮೇರಿಕೆಯು, ಕಳೆದ ಮಹಾಯುದ್ಧವು ಪ್ರಾರಂಭವಾದ ಕೂಡಲೆ ಯುದ್ಧದಲ್ಲಿ ಧುಮುಕಲಿಲ್ಲ. ಕೆಲವು ಕಾಲ ತಾಟಸ್ಥ್ಯವನ್ನು ವಹಿಸಿದ್ದಿತು. ಮುಂದೆ ಬ್ರಿಟಿಶರು ಅಮೇರಿಕೆಯ ಮನವನ್ನು ಒಲಿಸಿ ಅದನ್ನು ಯುದ್ಧದಲ್ಲಿ ಎಳೆದರು. ಪ್ರಪಂಚದ ಎಲ್ಲ ರಾಷ್ಟ್ರಗಳಲ್ಲಿ ಅಮೇರಿಕೆಯು (U. S. A.) ಸಂಪಾದನೆ ಮಾಡಿದಷ್ಟು ಸಂಪತ್ತನ್ನೂ, ಅವರು ಸಂಗ್ರಹಿಸಿದಷ್ಟು ಚಿನ್ನವನ್ನೂ ಬೇರೆ ಯಾವ ರಾಷ್ಟ್ರವೂ ಸಂಪಾದಿಸಲಿಲ್ಲ ಅಥವಾ ಸಂಗ್ರಹಿಸಲಿಲ್ಲ. ಕಳೆದ ಮಹಾಯುದ್ಧಕ್ಕಿಂತ ಮೊದಲು ಅಮೇರಿಕೆಯು ಸಾಲಗಾರ ರಾಷ್ಟ್ರವಿತ್ತು. ಅದು ಬೇರೆ ಬೇರೆ ರಾಷ್ಟ್ರಗಳಿಂದ ತೆಗೆದ ಸಾಲದ ಬಗ್ಗೆ ಪ್ರತಿವರ್ಷ ಬಡ್ಡಿ ಕೊಡಬೇಕಾಗುತ್ತಿತ್ತು. ಹೀಗೆ ಪ್ರತಿವರ್ಷ ಕೊಡುವ ಬಡ್ಡಿಯ ಹಣ ೫೫ ಕೋಟಿ ಡಾಲರ್ ಇತ್ತು. ಆದರೆ ಮಹಾಯುದ್ಧದ ಕಾಲದಲ್ಲಿಯೂ ತದನಂತರವೂ ಅಮೇರಿಕೆಯು, ಬೇರೆ ರಾಷ್ಟ್ರಗಳಿಗೆ ತಾನು ಕೊಡಲಿದ್ದ ಸಾಲವನ್ನು ತೀರಿಸಿ, ಮರಳಿ ತಾನೇ ಅವುಗಳಿಗೆ ಸಾಲ ಕೊಟ್ಟಿತು. ಹೀಗೆ ಸಾಲಕೊಟ್ಟ ಹಣದಿಂದ ಅಮೇರಿಕೆಗೆ— ಬೇರೆ ಬೇರೆ ರಾಷ್ಟ್ರಗಳಿಂದ—ಪ್ರತಿವರ್ಷ ಸುಮಾರು ಅರುವತ್ತು ಕೋಟಿ ಡಾಲರ್ ಬಡ್ಡಿ ಬರುತ್ತಲಿದೆ.* ಸಾಲಗಾರರು ಸಾವುಕಾರರಾಗುವ ಕಪಿಲಾಷಷ್ಠಿಯ ಯೋಗ ಒಂದದ್ದರ ಫಲವಿದು. ಸ್ವತಂತ್ರ ರಾಷ್ಟ್ರಗಳು ಆ ಫಲವನ್ನು ಪಡೆದುಕೊಂಡುವು. ಹಿಂದುಸ್ಥಾನವು ಸ್ವರಾಜ್ಯವನ್ನನುಭವಿಸುತ್ತಿದ್ದರೆ ಅದು ಕೂಡ ತನ್ನ ಸಾಲವನ್ನು ಸಹಜವಾಗಿ ತೀರಿಸಬಹುದಾಗಿತ್ತು. ಸ್ವರಾಜ್ಯದ—ಸ್ವಾತಂತ್ರ್ಯದ—ಕಲ್ಪತರು ದೊರೆಯುವವರೆಗೆ, ನಮ್ಮ ಆರ್ಥಿಕ ಉನ್ನತಿಯಾಗುವುದಿಲ್ಲ. ೧೯೧೮ ರಲ್ಲಿ ಕಳೆದ ಮಹಾಯುದ್ಧವು ಮುಗಿಯಿತು. ೧೯೧೯ ರ ಅಮೇರಿಕೆಯ ಆಯವ್ಯಯ ಪಟ್ಟಿಯನ್ನು ಕೆಳಗೆ ಕೊಟ್ಟಿದ್ದೇನೆ. ಈ ಅಂಕೆಗಳು ಸುಪ್ರಸಿದ್ಧ ಹಿಂದೀ ಅರ್ಥಶಾಸ್ತ್ರವಿಶಾರದರಾದ ಶ್ರೀ. ಕೆ. ಟಿ. ಶಹಾ ಅವರು ಕೊಟ್ಟುವು ಇವೆ:

ಅಮೇರಿಕೆಯ ಆಯ.	ಡಾಲರುಗಳು.
ಸರಕುಗಳ ಹಾಗೂ ಬೆಳ್ಳಿಯ ನಿರ್ಗತದಿಂದ	೮,೧೫೧,೦೦೦,೦೦೦
ಬಂಗಾರದ ನಿರ್ಗತದಿಂದ	೩೬೮ ೦೦೦,೦೦೦

* ಒಂದು ಡಾಲರ್ ಅಂದರೆ ಸುಮಾರು ३॥ ರೂಪಾಯಿಗಳು. —ಲೇ.

ಯುರೋಪಿಯನ್ ರಾಷ್ಟ್ರಗಳಿಗೆ ಅಮೇರಿಕೆಯು ಕೊಟ್ಟ ಸಾಲದ ಬಗ್ಗೆ ಅಮೇರಿಕೆಗೆ ಅವರಿಂದ ಬರತಕ್ಕ ಬಡ್ಡಿ	೬೨೨ 000,000
ಅಮೇರಿಕೆಯ ಹಡಗುಗಳಿಗೆ ಬರತಕ್ಕ ಬಾಡಿಗೆ	೭೩ 000,000
ವ್ಯಯ.	ಡಾಲರುಗಳು.
ಪರದೇಶಗಳಿಂದ ಬಂದ ಸರಕುಗಳ ಹಾಗೂ ಬೆಳ್ಳಿಯ ಆಯಾತಕ್ಕೆ ಅಮೇರಿಕೆಯು ಕೊಡತಕ್ಕ ರಕಮು	೩ ೯೯೩ 000,000
ಅಮೇರಿಕೆಯ ಧನಿಕರು ಬೇರೆ ದೇಶಗಳಲ್ಲಿ ಮಾಡಿದ ಪ್ರವಾಸದ ವೆಚ್ಚದ ಬಗ್ಗೆ	೫೦ 000,000
ಅಮೇರಿಕನ್ನರು ತಮ್ಮ ಸ್ನೇಹಿತರಿಗೆ ಕಳಿಸಿದ ರಕಮುಗಳು	೩೦೦ 000,000
ಅಮೇರಿಕೆಗೆ ಉಳಿದ ಬಾಕಿ ರಕಮು	೫ ೭೭೧ 000,000

೧೯೧೯ ನೆಯ ಇಸ್ವಿಯಲ್ಲಿ ಲಾಭದ ಪರಮಾವಧಿಯಾಯಿತೆಂಬ ಸಂಗತಿಯನ್ನು ಗಮನಕ್ಕೆ ತಕ್ಕೊಂಡರೂ, ಅಮೇರಿಕೆಯು ಜಗತ್ತಿನಲ್ಲಿ ಧನಸಂಪನ್ನ ರಾಷ್ಟ್ರಗಳಲ್ಲಿ ಮೊದಲನೆಯ ಸ್ಥಾನವನ್ನು ಪಡೆದಿದೆಯೆಂಬ ಮಾತಿನ ಬಗ್ಗೆ ಮತಭೇದವಿಲ್ಲ.

ಅಮೇರಿಕೆಯು ಸಾಲಗಾರವಾದ ದೇಶ ಹೋಗಿ ಸಾವುಕಾರ ದೇಶ ಹೇಗಾಯಿತೆಂಬ ಬಗ್ಗೆ ವಿಸ್ತಾರವಾಗಿ ಈ ಬರೆಪದಲ್ಲಿ ಬರೆಯುವುದು ಶಕ್ಯವಿಲ್ಲ. ಅಮೇರಿಕೆಯು ಫಲವತ್ತಾದ ಪ್ರದೇಶವಿದೆ; ಸಾಧನ ಸಂಪತ್ತಿಯಿಂದ ತುಂಬಿ ತುಳುಕುತ್ತಲಿದೆ. ಕಾಳುಕಡಿ, ಹತ್ತಿ, ಎಣ್ಣೆಯ ಕಾಳು ಕಲ್ಲೆಣ್ಣೆ ಇವೆಲ್ಲ ಸಾಕಷ್ಟಿವೆ. ಕಬ್ಬಿಣ, ಬೆಳ್ಳಿ ಮೊದಲಾದ ಖನಿಜಗಳ ಕಣಿಗಳಿವೆ. ಈ ಎಲ್ಲ ತರದ ಸಂಪತ್ತಿಯ ಲಾಭ ಪಡೆಯುವ ಸುಯೋಗವು ಬಂದಾಗ, ಉದ್ಯೋಗ-ವ್ಯಾಪಾರಗಳಲ್ಲಿ ಮುಂದುವರಿಯುವ ಅಮೇರಿಕನ್ನರು ಸುಮ್ಮನೆ ಇರುವರೇ? ಭರತಖಂಡವು ಈ ಯಾವ ಸಂಗತಿಗಳಲ್ಲಿಯೂ ಅಮೇರಿಕೆಗಿಂತ ಹಿಂದೆ ಇಲ್ಲ, ಆದರೆ ನಮ್ಮ ಔದ್ಯೋಗಿಕ ಪ್ರಗತಿ ಕುಂಠಿತವಾಗುತ್ತಲಿದೆ. ಅಮೇರಿಕನ್ನರು ವಿಮಾನದಲ್ಲಿ ಕುಳಿತು ನಡೆದಾಗ,ನಾವು ಕುಂಟುಕುದುರೆಯನ್ನೇರಿಕೊಂಡು ಹೊರಟಿದ್ದೇವೆ.

ಅಮೇರಿಕನ್ ಪ್ರವಾಸಿಕರು ಕೋಟ್ಯವಧಿ ಡಾಲರ್ ಪ್ರತಿವರ್ಷ ಪರದೇಶಗಳಲ್ಲಿಯ ಪ್ರವಾಸಗಳಲ್ಲಿ ವೆಚ್ಚ ಮಾಡುತ್ತಾರೆ. ಹಿಂದುಸ್ಥಾನಕ್ಕೆ ನೂರಾರು ಜನರು 'ಸ್ಪೆಶಲ್ ಲಗ್ಝರೀ ಸ್ಟೀಮರ್' ನಲ್ಲಿ (ಎಲ್ಲತರದ ಸುಖಸಾಧನೆಗಳುಳ್ಳ ಹಡಗಿನಲ್ಲಿ) ಬರುತ್ತಾರೆ. ಕೆಲವರು ಹೊಸ ಮೋಟಾರುಗಳನ್ನು ಕೊಂಡುಕೊಂಡು ಅವುಗಳಲ್ಲಿ ಪ್ರವಾಸ ಮಾಡುತ್ತಾರೆ. ಅವರು ಹಿಂದುಸ್ಥಾನದಲ್ಲಿ ಮಾಡುವ ಹಣದ ಅಲ್ಪ ಭಾಗವಾದರೂ ಕರ್ನಾಟಕಕ್ಕೆ ದೊರೆಯಬೇಕು! ಕರ್ನಾಟಕದ ಕಲಾಕೌಶಲ್ಯದ ಹಾಗೂ ಸಂಸ್ಕೃತಿಯ ಪರಿಚಯವು ಅವರಿಗಾಗಬೇಕು! **ಬೇಲೂರು-ಹಳೆಬೀಡುಗಳು** ತಾಜಮಹಾಲಿನಷ್ಟೇ ಪ್ರೇಕ್ಷಣೀಯವಾಗಿವೆ, ಚೆನ್ನಕೇಶವನ ದೇವಾಲಯದಂತಹ ದೇವಾಲಯವು ಬೇರೆ ಕಡೆಗಿಲ್ಲ; ಆದರೆ ಹಿಂದುಸ್ಥಾನಕ್ಕೆ ಬಂದ ಅಮೇರಿಕೆಯ ಪ್ರವಾಸಿಕರಲ್ಲಿ ತೀರ ಕಡಿಮೆ ಪ್ರವಾಸಿಕರು ಹಳೆಬೀಡು-ಬೇಲೂರುಗಳಿಗೆ ಹೋಗುತ್ತಾರೆ. ಇದಲ್ಲದೆ **ಚಾಮರ್ಾಡಿ** ಬೆಟ್ಟದ ನೋಟವು ಸ್ವಿಡ್ಝರ್‌ಲಂಡ್‌ನ ಒಳ್ಳೆ ಅಂದವಾದ ನೈಸರ್ಗಿಕದೃಶ್ಯಕ್ಕಿಂತ ರಮಣೀಯವಾಗಿದೆಯಂತೆ. ಇಂತಹ ಸ್ಥಳಗಳಿಗೆ ಪ್ರವಾಸಿಕರು ಬಂದು ಇರುವುದಕ್ಕೆ ತಕ್ಕ ಬಂಗಲೆಗಳೂ ಹೊಟೆಲಗಳೂ ಬೇಕು. ಕರ್ನಾಟಕದೊಳಗಿನ ಹಾಗೂ ಬೇರೆ ಪ್ರಾಂತದಲ್ಲಿಯ ಕಲಿತವರಲ್ಲಿ ಎಷ್ಟು ಜನರು ಈ ಸ್ಥಳಗಳನ್ನು ತಮ್ಮ ಪ್ರವಾಸದ ಕ್ಷೇತ್ರದಲ್ಲಿ ಸೇರಿಸುತ್ತಾರೆ? ಇವುಗಳ ಬಗ್ಗೆ ಜಾಹೀರಾತುಗಳ ದ್ವಾರಾ—ಸ್ಲಾಯಿಡುಗಳ ಮುಖಾಂತರ—ಜನತೆಯಲ್ಲಿ ನೋಡುವ ಇಚ್ಛೆಯನ್ನು ಹುಟ್ಟಿಸಬೇಕು. ಸ್ವಿಡ್ಝರಲಂಡ್‌ನ ರಾಷ್ಟ್ರೀಯ ಉತ್ಪನ್ನವನ್ನು ಬೆಳೆಯಿಸಲಿಕ್ಕೆ ಹೊರಗಿನಿಂದ ಬರುವ ಪ್ರವಾಸಿಕರ ಹಣವೇ ಎಷ್ಟೋ ಅಂಶದಿಂದ ಕಾರಣೀಭೂತವಾಗಿದೆ.

ಇಂದೂ ಅದೇ ಹಾಡು!

ಹಿಂದಿನ ಮಹಾಯುದ್ಧದಲ್ಲಿ ಭಾರತದಲ್ಲಿಯ ಉದ್ಯೋಗಗಳನ್ನು ಬೆಳೆಯಿಸಲಿಕ್ಕೆ ಸರಕಾರದಿಂದ ಸಾಕಷ್ಟು ಸಹಾಯ ಸಿಕ್ಕಲಿಲ್ಲವಾದರೂ, ಆ ತಪ್ಪನ್ನು ಸುಧಾರಿಸಿಕೊಂಡು ಇಂದಿನ ಯುದ್ಧದಲ್ಲಿಯಾದರೂ ಹಿಂದೀ ಉದ್ಯೋಗಗಳಿಗೆ ಸರಕಾರದ ನೆರವು ದೊರೆಯುವುದೆಂಬ ಭಾರತೀಯರ ಆಶೆಗೆ, ಈ ವರೆಗೂ ಇಂಬುದೊರೆತಿಲ್ಲ. ಪೂರಯಿಕೆ ಖಾತೆಯ ಅಧಿಕಾರಿಗಳ ಸಂಬಳ ಮಿತಿಮೀರಿ ಏರಿದೆ. ಬ್ರಿಟಿಶ್ ಆಡಳಿತಗಾರರು ಯುದ್ಧಕ್ಕೆ ಬೇಕಾಗುವ ಸಾಮಾನುಗಳನ್ನು ಪೂರಯಿಸುವ ಆಚೆಗೆ ಯತ್ನಿಸುವುದಿಲ್ಲ. ಸರಕಾರದ ಪೂರಯಿಕೆ ಮಂಡಳದ ಮುಖ್ಯಸ್ಥರಾದ ಸರ್ **ಅಲೆಕ್ಝಾಂಡರ್ ರೋಜರ್‌ರು** ಸಾಮ್ರಾಜ್ಯದ ಪತ್ರಕಾರರ ಪ್ರತಿನಿಧಿಗಳಿಗೆ ಒಂದು ಹೇಳಿಕೆಯನ್ನು ಕೊಟ್ಟರು. ಅದರೊಳಗಿನ ಕೆಲವು ಅವತರಣಿಕೆಗಳನ್ನು ಹಿಂದೂ ಪತ್ರಿಕಾಕಾರರು ಕೊಟ್ಟಿದ್ದಾರೆ:—

"While he (Roger) gave a glowing account of the progress in Australia, he said that in general there was not the drive in India that was so vivid in Australia" ಇದರ ಕಾರಣವನ್ನು ಅವರು ಹುಡುಕಿ ಹೀಗೆ ಹೇಳಿದರು: "Australians had an intense national consciousness that they were working and fighting for their own country." ಹಿಂದುಸ್ತಾನದಲ್ಲಿ ಈ ಭಾವನೆ ಇಲ್ಲ. ಆಸ್ಟ್ರೇಲಿಯದಂತೆ ಹಿಂದುಸ್ತಾನದಲ್ಲಿ ಸ್ವರಾಜ್ಯವಿಲ್ಲ. ನಮ್ಮ ಸರಕಾರವೆಂಬ ಭಾವನೆ ಎಲ್ಲಿಂದ ಬರಬೇಕು? ಸರ್ ರೋಜರ್‌ರು ಹಿಂದೀ ಉದ್ಯೋಗಗಳ ವಿಸ್ತಾರದ ವಿಷಯವನ್ನು ವಿಚಾರಿಸುವುದಕ್ಕಾಗಿ ಹಿಂದುಸ್ತಾನಕ್ಕೆ ಬಂದ ಬ್ರಿಟಿಶ್ ಮಂಡಳದ ಮುಖ್ಯಸ್ಥರಿದ್ದರು. ಅವರು ಹಿಂದುಸ್ತಾನದ ಬಗ್ಗೆ ಹೀಗೆ ಹೇಳಿದರಂತೆ:

"In India, on the other hand the British official, an employee, tended to have regard first for his pay, and then for his pension on which he would retire out of the country." ಸಾರಾಂಶ: ಭರತಖಂಡಕ್ಕೆ ಬಂದ ಬ್ರಿಟಿಶ್ ಅಧಿಕಾರಿಯು ಜಾಗರೂಕರಾಗಿರತಕ್ಕ ಮುಖ್ಯ ವಿವರಗಳು ಎರಡು: (೧) ತನ್ನ ಸಂಬಳ (೨) ಸೇವಾನಿವೃತ್ತನಾಗಿ ಈ ದೇಶವನ್ನು ಬಿಟ್ಟು ಹೋದಬಳಿಕ ತನಗೆ ದೊರೆಯುವ ಪೆನಶನ್ನು.

ಬೆಂಗಳೂರಲ್ಲಿಯ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸಾಯನ್ಸ್‌ನ ಡಿರೆಕ್ಟರರಾದ **ಶ್ರೀಯುತ ಘೋಸರಿಗೆ** ಆಸ್ಟ್ರೇಲಿಯಾದ ಪೂರಯಿಕೆ ಮಂತ್ರಿಮಂಡಳದ ಮುಖ್ಯಸ್ಥರಾದ **ಸರ್ ಬರ್ಟ್ರ್ಯಾಮ್ ಸ್ಟಿವ್ಹನ್ಸ್** (Sir Bertram Stevens) ಎಂಬವರು ಹೀಗೆ ಹೇಳಿದರು: "೧೯೩೨ ರಲ್ಲಿ ಆಸ್ಟ್ರೇಲಿಯದಲ್ಲಿ ಒಂದು ಔಂಸು ಸಹ ಕಬ್ಬಿಣದ ಉತ್ಪತ್ತಿಯಾಗುತ್ತಿದ್ದಿಲ್ಲ. ಈ ಸುಮಾರಿಗೆ ಆಸ್ಟ್ರೇಲಿಯಾ ಆರ್ಥಿಕ ಮುಗ್ಗಟ್ಟಿನ ಹಿಡಿತದಲ್ಲಿ (World trade depression) ಸಿಕ್ಕು ಒದ್ದಾಡುತ್ತಿತ್ತು." ಆಸ್ಟ್ರೇಲಿಯಾ ಹಾಗೂ ಹಿಂದೀ ಸರಕಾರಗಳು ಈ ಸಂದರ್ಭದಲ್ಲಿ ಹೇಗೆ ವರ್ತಿಸಿದುವೆಂಬುದನ್ನು ಶ್ರೀಯುತ ಘೋಸರು ಹೀಗೆ ಹೇಳಿದ್ದಾರೆ:—

"In India, the Government thought that the best remedy for that depression was to ask the people to tighten their belt and bring out their distressed gold. No Government with that policy had any chance of survival in Australia for a day, and try adopted different remedies. At one stroke, the problems of unemployment, of defence, and of key industries were solved by a bold policy of industrial development." ಸಾರಾಂಶ: ಆರ್ಥಿಕ ಮುಗ್ಗಟ್ಟನ್ನು ಬಗೆಹರಿಸಲಿಕ್ಕೆ ಹಿಂದುಸ್ತಾನ ಸರಕಾರವು ಕೈಕೊಂಡ ಉಪಾಯವು ಹೀಗಿತ್ತು. ಹೊಟ್ಟೆಗಿಲ್ಲದ್ದಕ್ಕಾಗಿ ತಮ್ಮ ಹತ್ತಿರಿದ್ದ ಅಲ್ಪ ಸ್ವಲ್ಪ ಹೊನ್ನನ್ನು ಹಿಂದೀಯರಿಗೆ ಮಾರಿಕೊಳ್ಳುವ ಹೊತ್ತು ಬರುವಂತೆ ಮಾಡುವುದರಲ್ಲಿ ಬಂತು. ದೇಶದಲ್ಲಿದ್ದ ಚಿನ್ನವನ್ನೆಲ್ಲ ದೇಶದ ಹೊರಗೆ ಹಾಕುವ ಸರಕಾರವು ಆಸ್ಟ್ರೇಲಿಯಾದಲ್ಲಿ ಒಂದು ದಿವಸ ಕೂಡ ಸ್ಥಿರವಾಗಿ ಉಳಿಯುತ್ತಿದ್ದಿಲ್ಲ. ಆಸ್ಟ್ರೇಲಿಯನರು ಉದ್ಯೋಗಗಳ ಉನ್ನತಿಯ ವಿಶಾಲವಾದ ಧೋರಣವನ್ನವಲಂಬಿಸುವುದೊಂದೇ ಉಪಾಯವೆಂದು ಕಂಡು, ಅದರಿಂದ ನಿರುದ್ಯೋಗತನವನ್ನು ಹೋಗಲಾಡಿಸಿದರು, ದೇಶದ ಸಂರಕ್ಷಣೆಯ ಸಾಧನಗಳನ್ನು ಸಿದ್ಧಪಡಿಸಿದರು.

ಮುಂದೆ ಘೋಸರು ಆಸ್ಟ್ರೇಲಿಯದ ಪ್ರಗತಿಯು ಹೇಗಾಗಿದೆಯೆಂಬದನ್ನು ಹೇಳಿದ್ದಾರೆ: ಈಗ ೧೯೪೧ ರಲ್ಲಿ ಆಸ್ಟ್ರೇಲಿಯಾದಲ್ಲಿ ೧೫ ಲಕ್ಷ ಟನ್ ಉಕ್ಕು ತಯಾರಾಗುತ್ತದೆ. ಇದು ಹಿಂದುಸ್ಥಾನದಲ್ಲಿಯ ಒಂದು ವರ್ಷದ ಉಕ್ಕಿಗಿಂತ ಹೆಚ್ಚಾಯಿತು. ಅಲ್ಲಿಯ ವಿಮಾನದ ಕಾರಖಾನೆಗಳಲ್ಲಿ ವರ್ಷಕ್ಕೆ ಒಂದು ಸಾವಿರ ವಿಮಾನಗಳು (Bomber & fighter planes) ತಯಾರಾಗುತ್ತವೆ. ಹಡಗುಪಡೆ ಕಟ್ಟುವ ಕಾರಖಾನೆಯಲ್ಲಿ ವಿನಾಶಿಕೆಗಳು (destroyers) ಕ್ರುಯಿಜರ್‌ಗಳು, ಸರಕುಗಳನ್ನು ತಕ್ಕೊಂಡು ಹೋಗುವ ಹಡಗುಗಳು ಸಿದ್ಧವಾಗುತ್ತವೆ. ಮೋಟರ್ ಕಾರಖಾನೆಗಳಲ್ಲಿ ಐವತ್ತು ಸಾವಿರ ಮೋಟರುಗಳನ್ನು ಕಟ್ಟುತ್ತಾರೆ. ಲಕ್ಷಾವಧಿ ರಾಯಫಲ್‌ಗಳನ್ನು, ಸಾವಿರಗಟ್ಲೆ Bren guns ಗಳನ್ನು ಮಾಡುವ ಕಾರಖಾನೆಗಳಿವೆ. ಇಷ್ಟೆಲ್ಲ ಸಿದ್ಧವಾಗುವ ಆಸ್ಟ್ರೇಲಿಯದ ಜನವಸತಿ ಕೇವಲ ೭೦ ಲಕ್ಷ ಇದೆ. ಹತ್ತುವರ್ಷಗಳ ಮೊದಲು ಆಸ್ಟ್ರೇಲಿಯಾ ದೇಶವು ಅಮೇರಿಕಾ, ಬ್ರಿಟನ್, ಜಪಾನುಗಳಿಗೆ ಬರೀ ಕಚ್ಚಾ ಮಾಲನ್ನು ಪೂರಯಿಸುವುದರಲ್ಲಿಯೆ ತೊಡಗಿತ್ತು. ನಾಲ್ವತ್ತು ಕೋಟಿ ಜನಸಂಖ್ಯೆಯುಳ್ಳ ಹಿಂದುಸ್ತಾನವನ್ನು ಹಿಂದೆಹಾಕುವಷ್ಟು ಔದ್ಯೋಗಿಕ ಪ್ರಗತಿಯನ್ನು ೭೦ ಲಕ್ಷ ಆಸ್ಟ್ರೇಲಿಯನರು ಹತ್ತು ವರ್ಷಗಳಲ್ಲಿ ಮಾಡಿದುದು ಪ್ರಶಂಸನೀಯವಾದದ್ದೇ ಸರಿ. ಈ ಪ್ರಗತಿಗೆ ಮುಖ್ಯಸಾಧನೆ ಎಂದರೆ ಸ್ವರಾಜ್ಯ, ಸಂಪೂರ್ಣ ಸ್ವರಾಜ್ಯ. ಹಿಂದುಸ್ತಾನದಲ್ಲಿ ಆಸ್ಟ್ರೇಲಿಯಕ್ಕಿಂತ ಹೆಚ್ಚಿನ ಸಾಧನಸಂಪತ್ತಿ ಇದೆ. ಜನರು ಹೆಚ್ಚು ಬುದ್ಧಿವಂತರಿದ್ದಾರೆ. ಭೌತಿಕಶಾಸ್ತ್ರಗಳಲ್ಲಿ ಪಾರಂಗತರಿದ್ದಾರೆ. **ಸರ್ ಪಿ. ಸಿ. ರೇ, ಸರ್ ರಾಮನ್, ಪ್ರೊಫೆಸರ್ ಭಾಟನಾಗರ** ಮೊದಲಾದ ಅನೇಕ ಶಾಸ್ತ್ರಜ್ಞರು ಹಿಂದುಸ್ತಾನದಲ್ಲಿ ಔದ್ಯೋಗೀಕರಣವನ್ನು ಬೆಳೆಯಿಸಲು ಬಲವಂತರಿದ್ದಾರೆ. ಆದರೆ ಸತ್ವಹರಣಧೋರಣವನ್ನು ಬ್ರಿಟಿಶರು ಬದಿಗಿಟ್ಟ ಹೊರತು ನಮ್ಮ ಉದ್ಯೋಗಗಳ ಬೆಳವಣಿಗೆಯಾಗುವುದಿಲ್ಲ. ಹಿಂದುಸ್ತಾನದಲ್ಲಿ ಮೋಟರ್ ಹಾಗೂ ವಿಮಾನಗಳನ್ನು ಕಟ್ಟುವ ಕಾರಖಾನೆಗಳನ್ನು, ಸದ್ಯದ ಮಹಾಯುದ್ಧವು ಪ್ರಾರಂಭವಾದ ಕೂಡಲೆ ಅಥವಾ ಅದಕ್ಕೂ ಮೊದಲು ಸ್ಥಾಪಿಸಲಿಕ್ಕೆ ಸರಕಾರದಿಂದ ಸಾಕಷ್ಟು ಸವಲತ್ತುಗಳು ಸಿಕ್ಕಿದ್ದರೆ, ಸಧನರು ಅಂತಹ ಕಂಪನಿಗಳನ್ನು ತೆಗೆಯುತ್ತಿದ್ದರು. ಅದರಿಂದ ಈ ದೇಶದಲ್ಲಿ ಸಂಪದಭಿವೃದ್ಧಿಯಾಗಿ ಸರಕಾರಕ್ಕೆ ಕರರೂಪದಿಂದ ಹೆಚ್ಚಿನ ಉತ್ಪನ್ನವು ದೊರೆಯುತ್ತಿತ್ತು. ಭರತಖಂಡವು ಆಸ್ಟ್ರೇಲಿಯಕ್ಕಿಂತ ಹೆಚ್ಚು ವಿಮಾನಗಳನ್ನು ಹಾಗೂ ಹೆಚ್ಚು ಮೋಟರುಗಳನ್ನು ಕಟ್ಟಿ ಕೊಡಬಹುದಾಗಿತ್ತು.

(೧೧೨ ನೆಯ ಪುಟದಿಂದ ಮುಂದುವರಿದದ್ದು)

ವರೆಗೆ ಭಾರತ ರಾಷ್ಟ್ರದಲ್ಲಿ ತನ್ನ ಬೆರಳು ತನ್ನ ಕಣ್ಣಲ್ಲಿಯೆ ಚುಚ್ಚುವ ಸಂದರ್ಭವಿರುವುದೋ, ಅಲ್ಲಿಯವರೆಗೆ ಭಾರತೀಯರಿಗೆ ಮುಕ್ತಿಯಿಲ್ಲ. ಭಾರತೀಯರನ್ನು ಪರಾಧೀನರನ್ನಾಗಿ ಮಾಡುವ ಯೋಗ್ಯತೆ ಇನ್ನಾರಲ್ಲಿಯೂ ಇಲ್ಲ. ಅವರ ಅಜ್ಞಾನ-ಹೇಡಿತನ-ಕೆಲಸಗೇಡಿತನಗಳೇ ಅವರನ್ನು ಪಾರತಂತ್ರ್ಯ ಪಂಕದಲ್ಲಿ ಕಾಲ್ಕಟ್ಟಿ ಕೆಡಹಿರುವುವು. ಇವು ಹೋದಾಗಲೇ ಭಾರತೀಯರಿಗೆ ಸ್ವಾತಂತ್ರ್ಯದ ಬೆಳಕು ಸಿಕ್ಕುವುದು. ಇಲ್ಲವಾದರೆ ನಮ್ಮ ಜನತೆಗೆ ನಿರಂತರವಾದ ಅಂಧಂತಮಸ್ಸು ತಪ್ಪುದುದಲ್ಲ! ತಮಸೋ ಮಾ ಜ್ಯೋತಿರ್ಗಮಯ!

—ಸಂಪಾದಕರು.

ಸಾಹಿತಿಯಾಗುವವರಿಗೆ ಸಲಹೆಗಳು

★ ಶ್ರೀ. ವಿ. ಜಿ. ಭಟ್ಟ, ಪುಣೆ ★

ಪತ್ರಿಕೆಗಳಲ್ಲಿ ಲೇಖಕಮಿತ್ರರ ಹೆಸರನ್ನು ನೋಡಿ ಎಷ್ಟು ಹೃದಯಗಳು (ತಲೆಗಳು ?) 'ನಾನೂ ಸಾಹಿತಿಯಾದರೆ!' ಎಂದು ಏನೇನೋ ಎಣಿಕೆಹಾಕಲಿಲ್ಲ ? 'ನಾನು ಸಾಹಿತಿಯೆಂದು ತಿಳಿದ ಮೇಲಾದರೂ ಅವಳು ನನ್ನನ್ನು ಪ್ರೀತಿಸಲಿಕ್ಕಿಲ್ಲವೇ ?'....ಇತ್ಯಾದಿ ಎಷ್ಟು ಗೋಪುರಗಳನ್ನು ಕಟ್ಟುತ್ತಿಲ್ಲ ? ಸಾಹಿತಿಯಾಗಬೇಕೆಂದು ಗುಣಾಕಾರಹಾಕುತ್ತ ಕುಳಿತರೆ, ಕುಳಿತೇ ಬಿಡುವುದು ನಿಮ್ಮ ಗೋಪುರ— ನೆಲಕ್ಕೆ. ಆದುದರಿಂದ ಅಂತಹ ಬಾಂಧವರಿಗೆ ನನ್ನ ಕೆಲವು ಸಲಹೆಗಳು ತುಂಬಾ ಉಪಯೋಗವಾಗುವುವೆಂದು ತಿಳಿದು ಈ ಲೇಖನ :

೧. 'ಬಿರುದಾವಳಿಗಳೇ ಬಾಳಿಗೆ ಬೋನ' ಎಂಬ ನನ್ನ ದೊಂದು ಕಿರುನುಡಿಯನ್ನು ಮನಸ್ಸಿನಲ್ಲಿಡಬೇಕು. ಒಂದೇ ಉದಾಹರಣೆಯಿಂದ ಇದರ ಸತ್ಯತೆಯ ಮೇಲೆ ಬೆಳಕು ಚೆಲ್ಲಿ ಬಿಡುವೆ. ಕಳೆದ ವರ್ಷ ಒಂದು ಕತೆ ಬರೆದು 'ಜ್ಞಾ' ಪತ್ರಿಕೆಗೆ ಕಳುಹಿಸಿದೆ, ನನಗೆ ಯಾವ ಡಿಗ್ರಿಯೂ ಇದ್ದಿಲ್ಲ. ಪಾಪ, ನನ್ನ ಕತೆಯು ಚಿತೆಯೇರಿತು. ಅದೇ ಕತೆಯನ್ನು ಈ ವರ್ಷ ನಮ್ಮಣ್ಣನ [ಅವ ಕೇಂಬ್ರಿಜ್ ಯುನಿವ್ಹರ್ಸಿಟಿಯ ಎಮ್ಮೆ (M. A.)] ಹೆಸರಿನಲ್ಲಿ ಕಳುಹಿಸಿದೆ. ಕೇಳಬೇಕೇ? ಅವನ ಚರಿತ್ರೆ, ಚಿತ್ರ ಎಲ್ಲವೂ 'ಜ್ಞಾ' ಪತ್ರಿಕೆಯಲ್ಲಿಯೆ ಪ್ರಸಿದ್ಧ ವಾದುವು. ತಿಳಿಯಿತೇ.... ಬಿರುದಿನ ಭಾಗ್ಯ ? ಆದರಿಂದ ಆದಷ್ಟು ಬೇಗ ಏನಾದರೊಂದು ಡಿಗ್ರಿಯನ್ನು ನಿನ್ನ ಹೆಸರಿಗೆ ಸಿಕ್ಕಿಸಿಬಿಡು!

೨. ಪತ್ರಿಕೆಯು ಹೊರಡುವ ನೆಲದಿಂದ ಆದಷ್ಟು ದೂರ ವಾಸಿಸು! ನನ್ನ ತಮ್ಮನು ನಾಲ್ಕು ವರುಷದ ಹಿಂದೆ ಲಂಡನ್ನಿನಲ್ಲಿ (C/O ಅದ್ಭುತವಿಲಾಸ) ಇದ್ದ. ಅಲ್ಲಿಂದ 'ಬೆಳ್ಳುಳ್ಳಿಯ ಸಿಪ್ಪೆ' ಎಂಬ ಪ್ರಬಂಧವನ್ನು 'ಸು' ಪತ್ರಿಕೆಗೆ ಕಳುಹಿಸಿದ. "ಲಂಡನ್ನಿನಿಂದ ಬಂದ ಲೇಖನ ನಮ್ಮ ಭಾಗ್ಯ! ಅಷ್ಟು ದೂರದಿಂದ ...." ಎನ್ನುತ್ತಾ ಸಂಪಾದಕರು ಅದಕ್ಕೆ ಮೊದಲನೆಯ ಸ್ಥಾನ ಕೊಟ್ಟರು. ಊರಿಗೆ ಬಂದ ಮೇಲೆ ತಮ್ಮ ಎರಡು ವರುಷಗಳಿಂದಲೂ ಲೇಖನ ಕಳಿಸುತ್ತಿದ್ದಾನೆ, ಒಂದೂ ಪ್ರಕಟವಿಲ್ಲ. ತಿಳಿಯಿತೇ ? ನೀನು ಆದಷ್ಟು ದೂರದೇಶಕ್ಕೆ ಹೋಗಿ ಲೇಖನ ಕಳುಹಿಸು. (ಅತಿ ದೂರದ ನಾಡೆಂದರೆ ಆ....ಕಾ....ಶ).

೩. ಇನ್ನೊಂದು ಸಣ್ಣ ಉಪಾಯ. ದೊಡ್ಡ ಸಾಹಿತಿಯ ಬಾಲಬಡಿಯುವುದು. ಶ್ರೀಮಾನ್ (ದರಿದ್ರಮಾನರ ಅಣ್ಣ) ತಂಗಳನ್ನ ಎಸ್. ಸಿ. ಸಿಕ್. ಅವರು ಮುನ್ನುಡಿ ಬರೆದರೆ ತೀರಿತು. ಒಳಗೆ ಏನೇ ಬರೆದರೂ ನಡೆಯುತ್ತದೆ.

೪. ಯಾವುದಾದರೊಂದು ಪತ್ರಿಕೆಯ ಸಂಪಾದಕರ ಗೆಳೆಯನಾಗುವುದು. ಅವರೇ ಅಲ್ಲವೇ— ನಿನ್ನ ಲೇಖನಶಕ್ತಿಯ ಪ್ರಕಾಶದ ಕಾಂತಿಯುಕ್ತ ತೇಜೋರಾಶಿಯನ್ನು ಬೆಳಕಿಗೆ ತರುವವರು? ಆದುದರಿಂದ ಅವರ ಕಿಸೆ ಯಾವಾಗಲೂ ಬಿಸಿಯಿರಿಸಿರಿ!

೫. ಶ್ರೀಮಂತನೇ ಆಗಿದ್ದರೆ ಅಂಜುವ ಕಾರಣವಿಲ್ಲ. ನಿನ್ನದೇ ಆದ ಒಂದು ಪ್ರೆಸ್ಸು— ಒಂದು ಪತ್ರಿಕೆ— ಅದರಲ್ಲಿ ನಿನ್ನ ವಿಚಾರಪ್ರವಾಹದ ಝರಿಯು ತೆರೆಯು ಬಂದು ಬಂದು. ಗಳು— ಹೆಚ್ಚೇನು ಹೇಳಲಿ ಗೆಳೆಯಾ ?

೬. ಅದೂ ಆಗದಿದ್ದರೆ ದೊಡ್ಡ ಸಾಹಿತಿಗಳ ಕೃತಿಗಳನ್ನು ಪ್ರಸಿದ್ಧಿಸುವುದು. ಅನಂತರ ನಿನ್ನ ಮಿಾಸೆಯನ್ನು ಸೇರಿಸುವುದು!

೭. ಏನೇ ಬರೆಯುವುದಾದರೂ 'ಬಾಳು' 'ತಿರುಳು' 'ಜೇನು.' 'ತಳಿರು' 'ಪ್ರೇಮ' ಮುಂತಾದ 'ಕೈಶಬ್ದ'ಗಳನ್ನು ಸಾಧ್ಯವಾದ ಕಡೆಯಲ್ಲೆಲ್ಲಾ ಉಪಯೋಗಿಸು. ಗಡಚುವಾಕ್ಯಗಳನ್ನು ಹೇರಳವಾಗಿ ಉಪಯೋಗಿಸು! ಉದಾ: 'ಡೆಂಕಣಿಯ ಮೇಲೆ ಡೇಗೆ ಕೂತಂತಾಯಿತಲ್ಲವೆ—ನನ್ನ ಬಾಳು!' ಇತ್ಯಾದಿ!

೮. ಯಾವುದಾದರೊಂದು ಗ್ರಂಥಮಾಲೆಗೆ ಒಂದೆರಡು ಸಾವಿರ ದಾನಮಾಡಿಬಿಟ್ಟರೆ, ನಿನ್ನ ತುಟಿಯಿಂದ ಬರುವ ವಾಕ್ಯಗಳೆಲ್ಲಾ ಕಾವ್ಯವಾಗುವುವು.

೯. ನಿನ್ನ ಬರೆಹದಲ್ಲಿ 'ಶೇಕ್ಸಪಿಯರನು ಹೀಗೆ ಹೇಳುತ್ತಾನೆ ಮಿಲ್ಟನ್‌ನು ಹೀಗೆಂದಿದ್ದಾನೆ— ರನ್ನನ ಕೃತಿಯಲ್ಲಿ ಹೀ ಬರೆದಿದೆ....' ಮುಂತಾದ 'ರೆಫರೆನ್ಸು' ತುಂಬಿತುಳುಕಬೇಕು ಪತ್ರಿಕೆಗೆ ಬರೆಯುವುದಾದರೆ ಹೊಸಹೆಸರನ್ನು (ಉದಾ: ಕವಿವರ 'ಎಬ್ರೂವಿಸ್ಕಿ') ಹುಟ್ಟಿಸಲೂ ಬಹುದು. ಅದೂ ನಿನ್ನ ಧೈರ್ಯ

೧೦ ಇನ್ನು ಊಟಕ್ಕಿಲ್ಲದೆ ಚಟಪಡಿಸುವ ಕವಿಗಳು ಸಿಕ್ಕಿದರೆ ಅವರನ್ನು ಪೋಷಿಸಿ, ಅವರಿಂದ ಕವಿತೆ-ಲೇಖನಗಳನ್ನು ಬರೆಯಿಸಿಕೊಂಡು, ನಿನ್ನ ಹೆಸರಿನಲ್ಲಿ 'ಪ್ರೆಸ್ಸಿ'ಗೆ ಕಳುಹಿಸಿಬಿಡಬೇಕು ಆದರೆ ಆ ಕವಿ ಈ ಗುಟ್ಟನ್ನು ರಟ್ಟುಮಾಡದಂತೆ ನೀನೇ ನೋಡಿಕೊಳ್ಳಬೇಕು.

ಪ್ರಿಯ ಬಂಧು, ಸಲಹೆಗಳು ಇನ್ನೂ ಇವೆ. ಅವನ್ನೆಲ್ಲ ಬರೆಯುತ್ತಹೋದರೆ ನೂರಾರು ಪುಟಗಳು ಬೇಕು. ಆದರೆ ಕಾಗದದ ಧಾರಣೆ ಎಷ್ಟು ತುಟ್ಟಿಯಾಗಿದೆಯೆಂಬುದು ನಿನಗೆ ಗೊತ್ತಿದೆಯಷ್ಟೇ ?

---

* ಈ ಸಲಹೆಗಳನ್ನೋದಿ, ಇದರಂತೆಯೆ ನಡೆದುಕೊಂಡು 'ಜಯಂತಿ' ಲೇಖನ ಬರೆದು ಕಳುಹಿ, ಬಿಳಿಯ ಹಾಳೆಗಳನ್ನೂ ಅಂಚೆಯ ವೆಚ್ಚವನು ಯಾರೂ ಹಾಳುಮಾಡಿಕೊಳ್ಳಬಾರದಾಗಿ ಬಿನ್ನಹ. ಬೇಕಿದ್ದರೆ ಮಿಕ್ಕ ಪತ್ರಿಗಳೊಂದಿಗೆ ಪ್ರಯೋಗ ಮಾಡಿನೋಡಿ ಯಶಸ್ವಿಗಳಾದರೆ 'ಜಯಂತಿ'ಗೆ ಮುಖಾಂತರ 'ಗುರುದಕ್ಷಿಣೆ' ಕಳುಹಿರಿ. —ಸಂ. ಜ.

ರಕ್ತರಂಜಿತ-ಬಾವುಟ *

(ಸಣ್ಣ ಕತೆ)

ಶ್ರೀ. ಜಿ. ಆರ್. ಹೆಗಡೆ, ಕರ್ನಾಟಕಸಂಘ, ಕುಮಟಾ

ಚಿಕ್ಕಯ್ಯ ಸುಬ್ಬರಾಯ ಇಬ್ಬರೂ ರೇಲ್ವೆಯ ವಾಚ್‌ಮನ್ನರು. ಇಬ್ಬರ ಸ್ವಭಾವಗಳಲ್ಲಿ ಪೂರ್ವ - ಪಶ್ಚಿಮಗಳಷ್ಟು ಅಂತರವಾದರೂ ಇಬ್ಬರೂ ಸ್ನೇಹಿತರು. ಕ್ರಾಂತಿಕಾರಿ ಸುಬ್ಬರಾಯನನ್ನು ಸರಳ ಸ್ವಭಾವದ ಚಿಕ್ಕಯ್ಯ ಕೊನೆಗೆ ಜಯಿಸಿಯೆ ಬಿಟ್ಟ!

★

ಚಿಕ್ಕಯ್ಯನು ರೇಲ್ವೆಲಾಯನಿನ ಮೇಲೆ ವಾಚಮನ್‌ನಾಗಿದ್ದನು. ಅವನ ವಾಚ್‌ಹೌಸ್‌ನಿಂದ ಹತ್ತಿರದ ಸ್ಟೇಶನ್ನಿಗೆ ಹೋಗಬೇಕಾದರೆ ಒಂದು ಬದಿಗೆ ೧೨ ಮೈಲು, ಮತ್ತೊಂದು ಬದಿಗೆ ೧೦ ಮೈಲು ಹೋಗಬೇಕು. ೩-೪ ಮೈಲುಗಳ ದೂರದ ಲಂಬಾಪುರದಲ್ಲಿ, ಹೋದವರ್ಷ ಒಂದು ಗಿರಣಿ ಸ್ಥಾಪನೆಯಾಗಿತ್ತು. ಅದರ ಎತ್ತರವಾದ ಹೊಗೆಬಂಬು, ಕಪ್ಪಾಗಿ ಇವನಿದ್ದಲ್ಲಿಂದಲೆ ಕಾಣುತ್ತಿತ್ತು. ಅದನ್ನು ಬಿಟ್ಟರೆ, ಅಲ್ಲಲ್ಲಿದ್ದ ವಾಚ್‌ಹೌಸ್‌ಗಳನ್ನು ಬಿಟ್ಟರೆ ಬೇರೆ ಜನವಸತಿಯಿರಲಿಲ್ಲ.

ಚಿಕ್ಕಯ್ಯನಿಗೆ ಈಗ ೪೦ ವರ್ಷ. ಆಳು ನಿರೋಗಿಯಲ್ಲ. ಹೋದ ಯುದ್ಧದಲ್ಲಿ ಸೈನ್ಯದಲ್ಲಿ ಸೇರಿ, ಯುದ್ಧ ಮುಗಿಯುವವರೆಗೆ ಕೆಲಸಮಾಡಿದ್ದನು. ಆಗ ಹಸಿವು ಚಳಿ ಬಿಸಿಗಳನ್ನು ಸಹಿಸಿಕೊಂಡು, ೩೦-೪೦ ಮೈಲುಗಳಷ್ಟು ಕೂಚುಮಾಡಿದ್ದನು. ಆದರೆ ಅವನ ಪುಣ್ಯಕ್ಕೆ ಯುದ್ಧದಲ್ಲಿ ಒಂದೂ ಗುಂಡು ತಾಗಿರಲಿಲ್ಲ. ಕಪ್ತಾನನು ಸೈನ್ಯದ ಮುಂಭಾಗದಲ್ಲಿದ್ದಾಗ, ಕ್ಯಾಂಪಿನಿಂದ ದಿನಕ್ಕೆರಡುಬಾರಿ ಆಹಾರವನ್ನು ಒಯ್ಯುವ ಕೆಲಸವನ್ನು ಒಪ್ಪಿಸಿದ್ದರು. ಆಹಾರವನ್ನು ತೆಗೆದುಕೊಂಡು ಬಯಲನ್ನು ದಾಟುವಾಗ, ಇವನ ಆಚೆ ಈಚೆ ಗುಂಡುಗಳು ಸುಂಯ್‌ಗುಡುತ್ತ ಹೋಗುವುದು ಕೇಳಿಸುತ್ತಿತ್ತು. ಪ್ರತಿಯೊಂದು ಸಾರಿ ಬಯಲನ್ನು ದಾಟುವಾಗಲೂ ಇವನಿಗೆ ಮರುಳುವೆನೆಂದು ವಿಶ್ವಾಸವಿರಲಿಲ್ಲ. ದೇವರನ್ನು ಸ್ಮರಿಸಿ ಪ್ರಾರ್ಥಿಸುತ್ತಿದ್ದ, ಅಳುತ್ತಿದ್ದ ; ಆದರೂ ಹೋಗಲೇ ಬೇಕಿತ್ತು. ಕಪ್ತಾನನಿಗೆ ವೇಳೆಗೆ ಸರಿಯಾಗಿ ಆಹಾರ ಮುಟ್ಟುತ್ತಿದ್ದುದರಿಂದ ಅವನಿಗೆ ಚಿಕ್ಕಯ್ಯನ ಮೇಲೆ ಬಹಳ ಪ್ರೇಮವಿತ್ತು.

ಯುದ್ಧದಿಂದ ಹಿಂದಿರುಗುವಾಗ ಚಿಕ್ಕಯ್ಯನ ಮೈಮೇಲೆ ಒಂದೂ ಗಾಯವಿರಲಿಲ್ಲ ; ಆದರೆ ಪ್ರತಿದಿವಸ ಅವನ ಮನಸ್ಸಿನ ಮೇಲೇಳುತ್ತಿದ್ದ ಹೆದರಿಕೆಯ ಪರಿಣಾಮವಾಗಿ, ಅವನ ನರಗಳೆಲ್ಲ ನಿಶ್ಶಕ್ತಿ ಹೊಂದಿದ್ದುವು. ಕೀಲು-ಕೀಲುಗಳಲ್ಲಿ ನೋವು ಪ್ರಾರಂಭವಾಗಿತ್ತು. ಯುದ್ಧಾನಂತರ ಮನೆಗೆ ಬರುವಷ್ಟರಲ್ಲಿ ಇವನ ತಂದೆ ತೀರಿಹೋಗಿದ್ದ. ಸ್ವಲ್ಪ ದಿವಸಗಳಲ್ಲಿಯೆ ಇವನ ಇದ್ದೊಬ್ಬ ಮಗನೂ—ಗಂಟಲಲ್ಲಿ ಏನೋ ರೋಗವಾಗಿ—ಸತ್ತುಹೋದನು. ಈಗ ಚಿಕ್ಕಯ್ಯ ಅವನ ಹೆಂಡತಿ ಇಬ್ಬರೇ ಉಳಿದರು. ಇವನ ನಿಶ್ಶಕ್ತಿಯ ಮೂಲಕವಾಗಿ, ಇದ್ದ ಗದ್ದೆಯನ್ನೂ ಸಾಗುಮಾಡುವಂತಿರಲಿಲ್ಲ. ಕೊನೆಗೆ ಅವರಿಗೆ ತಮ್ಮ ಹಳ್ಳಿ ಬೇಸರವಾಗಿ, ಜಮೀನು ಮಾರಿ, ಬೇರೆಕಡೆಗೆ ನೌಕರಿಹುಡುಕುತ್ತ ಹೊರಟುಹೋದರು. ನೌಕರಿಗಾಗಿ ಅನೇಕ ಕಡೆಗೆ ಪ್ರಯತ್ನ ಮಾಡಲಾಯಿತು. ಸಿದ್ದೂರಿನಲ್ಲಿ, ಒಬ್ಬ ಪರಿಚಯಸ್ಥರ ಮನೆಯಲ್ಲಿ ಚಿಕ್ಕಯ್ಯನ ಹೆಂಡತಿ ಕೆಲಸಕ್ಕೆ ಉಳಿದಳು ; ಇವನಿಗೆ ಅಲೆದಾಟ ತಪ್ಪಲಿಲ್ಲ.

ಒಂದು ದಿವಸ ಚಿಕ್ಕಯ್ಯನು ಉಗಿಬಂಡಿಯಲ್ಲಿ ಹೋಗುಹೋಗುತ್ತ, ಹಾದಿಯಲ್ಲಿ ಒಂದು ಸಣ್ಣ ಸ್ಟೇಶನಿನಲ್ಲಿ ಇಳಿದನು. ಅಲ್ಲಿ ಸುಮ್ಮನೆ ಅಲೆದಾಡುತ್ತಿರುವಾಗ, ಅಲ್ಲಿಯ ಸ್ಟೇಶನ್‌ಮಾಸ್ತರನ ಗುರುತು ಹತ್ತಿದಂತಾಯಿತು. ಒಬ್ಬರನ್ನೊಬ್ಬರು ನೋಡಿದರು ಚಿಕ್ಕಯ್ಯನಿಗೆ ಗುರುತು ಸಿಕ್ಕಿತು. ಅವನು ಹಿಂದೆ ಚಿಕ್ಕಯ್ಯನು ಕೆಲಸಮಾಡುತ್ತಿರುವ ರೆಜಿಮೆಂಟಿನಲ್ಲಿ ಅಧಿಕಾರಿಯಾಗಿದ್ದ.

"ಚಿಕ್ಕಯ್ಯನಲ್ಲವೆ?" ಸ್ಟೇಶನ್‌ಮಾಸ್ತರು ಕೇಳಿದ.

"ಹೌದು ರಾಯರೆ!"

"ಇಲ್ಲಿ ಹೇಗೆ ಬಂದೆ?"

ಚಿಕ್ಕಯ್ಯ ತನ್ನ ಕಥೆಯನ್ನು ಹೇಳಿದ.

"ಹಾಗಾದರೆ ಈಗ ಎಲ್ಲಿಗೆ ಹೋಗುವೆ?"

"ನನಗೇ ಗೊತ್ತಿಲ್ಲ!"

"ಏನು ಹಾಗೆಂದರೆ?"

"ನಿಜವಾಗಿ ನನ್ನ ಸ್ಥಿತಿಯೇ ಹಾಗಿದೆ ರಾಯರೆ! ನನಗೆ ನೌಕರಿ ಕೊಡುವವರು ಯಾರು? ಎಷ್ಟು ದಿವಸ ಹೀಗೇ ಇರಬೇಕಾಗುತ್ತದೆಯೋ ಯಾರು ಬಲ್ಲರು?"

ಸ್ಟೇಶನ್‌ಮಾಸ್ತರನಿಗೆ ಕನಿಕರವೆನಿಸಿತು. ಅವನು ಸ್ವಲ್ಪ ವಿಚಾರ ಮಾಡಿ ನೋಡಿ "ಇಲ್ಲಿಯೇ ಸ್ವಲ್ಪ ದಿವಸ ಇರು! ನಿನಗೆ ಮದುವೆಯಾಗಿದೆಯಲ್ಲವೆ?" ಎಂದು ಕೇಳಿದ.

* ರಶಿಯನ್ ಕತೆಯೊಂದನ್ನು ಓದಿ ಬರೆದುದು. ಲೇ.

"ಹೌದು, ಹೆಂಡತಿ ಸಿದ್ದೂರಿನಲ್ಲಿ ಒಬ್ಬರ ಮನೆಯಲ್ಲಿ ಚಾಕರಿಗಿದ್ದಾಳೆ!"

"ನಿನ್ನ ಹೆಂಡತಿಗೆ ಇಲ್ಲಿಗೆ ಬರಲಿಕ್ಕೆ ಪತ್ರ ಹಾಕು. ನಮ್ಮ ವಾಚಮನ್‌ನೊಬ್ಬನು ಕೆಲಸದಿಂದ ನಿವೃತ್ತನಾಗುವವನಿದ್ದಾನೆ, ಸದ್ಯದಲ್ಲಿ. ಅವನ ಸ್ಥಳದ ಬಗ್ಗೆ ನಿನ್ನನ್ನು ಮೇಲಧಿಕಾರಿಗಳ ಕಡೆಗೆ ಸಿಫಾರಸು ಮಾಡುತ್ತೇನೆ!"

"ಅಷ್ಟು ಮಾಡಿ ನನ್ನ ಉದ್ಧಾರಮಾಡಿರಿ ರಾಯರೆ! ಎಲ್ಲ ನಿಮ್ಮ ಕೈಯಲ್ಲಿದೆ!" ಎಂದು ಚಿಕ್ಕಯ್ಯನು ಕೈಮುಗಿದನು.

ಚಿಕ್ಕಯ್ಯ ಮುಂದೆ ಹೋಗಲಿಲ್ಲ. ಸ್ಟೇಶನ್‌ಮಾಸ್ತರರ ಮನೆಯಲ್ಲಿ ನೀರುತುಂಬುವುದು ಕಸಗುಡಿಸುವುದು ಮುಂತಾದ ಕೆಲಸ ಮಾಡಿಕೊಂಡಿದ್ದನು. ೧೫ ದಿನಗಳಲ್ಲಿ ಅವನ ಹೆಂಡತಿ ಬಂದಳು. ಚಿಕ್ಕಯ್ಯ ತನ್ನ ಸಾಮಾನುಗಳನ್ನೆಲ್ಲ ತೆಗೆದುಕೊಂಡು ವಾಚ್-ಹೌಸಿಗೆ ಹೋದನು. ಅಲ್ಲಿ ಮನೆ ಚೆನ್ನಾಗಿ ಇತ್ತು. ಇವನಿಗಿಂತಲೂ ಮೊದಲು ಕೆಲಸಮಾಡುತ್ತಿದ್ದವನು, ಅದರ ಸುತ್ತಲೂ ಒಂದು ಸುಂದರವಾದ ಚಿಕ್ಕ ತೋಟವನ್ನು ಮಾಡಿಕೊಂಡಿದ್ದನು. ಹಳಿಗುಂಟ ರೇಲ್ವೆಯವರದೇ ಅರ್ಧ-ಎಕರೆಯಷ್ಟು ಜಮೀನಿತ್ತು. ಅಲ್ಲಿ ಬೇಕಾದರೆ ಕಾಯಿ-ಪಲ್ಲೆ ಬೆಳೆದುಕೊಳ್ಳಬಹುದಾಗಿತ್ತು. ಹತ್ತಿರದಲ್ಲಿ ಕಾಡು ಇದ್ದುದರಿಂದ, ಕಟ್ಟಿಗೆಗೆ ಕೊರತೆಯಾಗುವಂತಿರಲಿಲ್ಲ.

ಹಸಿರು ಬಾವುಟ, ಕೆಂಪು ಬಾವುಟ, ಒಂದು ದೀಪ, ಹಾರೆ, ಗುದ್ದಲಿ, ಇಕ್ಕಳ, ಸುತ್ತಿಗೆ, ಬೋಲ್ಟು ಗಟ್ಟಿಮಾಡುವ ಆಯುಧ ಮುಂತಾದ ಎಲ್ಲ ಬೇಕಾಗುವ ಸಾಮಾನುಗಳನ್ನೂ ಕೊಟ್ಟಿದ್ದರು. ಒಂದು ವೇಳಾಪತ್ರಿಕೆಯನ್ನೂ ಒಂದು ರೇಲ್ವೆ ಕಾಯಿದೆ ಪುಸ್ತಕವನ್ನೂ ಕೊಟ್ಟಿದ್ದರು.

ಮೊದಮೊದಲು ಚಿಕ್ಕಯ್ಯನಿಗೆ ರಾತ್ರಿ ನಿದ್ದೆಯೇ ಬರುತ್ತಿರಲಿಲ್ಲ. ಇಡಿ ದಿವಸ ವೇಳಾಪತ್ರಿಕೆಯ ಅಭ್ಯಾಸವನ್ನು ಮಾಡುತ್ತಲೇ ಇರುತ್ತಿದ್ದನು. ಗಾಡಿಬರಲು ಇನ್ನೂ ಎರಡು ತಾಸು ಇರುವಾಗಲೆ ಇವನು ಹಳಿಗಳ ಹತ್ತಿರ ಹೋಗಿ ನಿಲ್ಲುವನು. ಹಳಿಗಳು ಅದುರಲು ಪ್ರಾರಂಭವಾಯಿತೇ, ಎಂಜಿನ್‌ಸಪ್ಪಳಾಗುತ್ತದೆಯೇ—ಎಂದು ನಿರೀಕ್ಷಿಸುತ್ತಿದ್ದನು. ರೇಲ್ವೆ ಕಾಯಿದೆ ಪುಸ್ತಕವನ್ನು ಕಂಠಪಾಠ ಮಾಡಿಟ್ಟನು.

ಜೀವನಗೆ ಪ್ರಾರಂಭವಾಗುವ ಹೊತ್ತಿಗೆ ಚಿಕ್ಕಯ್ಯನಿಗೆ ಕೆಲಸ ರೂಢಿಯಾಗಿ ಹೋಗಿತ್ತು. ಇವನು ಕೆಲಸಮಾಡುತ್ತಿದ್ದ ಲೈನಿನಲ್ಲಿ ಹೆಚ್ಚಿಗೆ ಗಾಡಿಗಳು ಓಡಾಡುತ್ತಿರಲಿಲ್ಲ. ದಿನಕ್ಕೆರಡು ಬಾರಿ ಹಳಿಗಳ ಗುಂಟ ಗಸ್ತಿ ಹೊಡೆದು, ಒಂದೆರಡು ಬೋಲ್ಟುಗಳನ್ನು ತಿರುವಿ, ಹೂಲುಗಳನ್ನು ನೋಡಿಕೊಂಡು ಮನೆಗೆ ಬಂದರಾಯಿತು ... ಅವನ ಹೆಚ್ಚಿನ ಕೆಲಸ. ಕಡೆಗೆ ಮನೆಯಲ್ಲಿಯ, ತನ್ನ ಮನೆಯ ಹತ್ತಿರ ಇದ್ದ ಜಾಗದಲ್ಲಿ ಏನು ಬೆಳೆದುಕೊಳ್ಳುವುದು ಎಂದು ಆಲೋಚನೆ ಹಾಕುವನು. ಆದರೆ ಆ ಜಾಗದಲ್ಲಿ ಏನನಾದರೂ ಬೆಳೆಯುವುದಾದರೆ, ಅದನ್ನು ರಸ್ತೆಯ ಅಧಿಕಾರಿಯ ಕಡೆಗೆ ಬೇಡಿಕೊಳ್ಳಬೇಕು, ಅವನು ಆ ಸೆಕ್ಶನ್ ಮುಖ್ಯಸ್ಥನಿಂದ ಪರವಾನಿಗೆಯನ್ನು ಪಡೆಯಬೇಕು; ಅವನು ಅದನ್ನು ಮೇಲಿನವರಿಗೆ ತಿಳಿಸಿ ಸಿಫಾರಸುಮಾಡಿ ಅಪ್ಪಣೆಪಡೆದುಕೊಳ್ಳಬೇಕು. ಇಷ್ಟೆಲ್ಲ ವಿಧಾನ ಮುಗಿಯುವುದರೊಳಗೆ ಅದನ್ನು ಬೆಳೆಯುವ ಕಾಲವೇ ಮುಗಿದುಹೋಗುತ್ತಿತ್ತು. ಹೀಗಾಗಿ ಚಿಕ್ಕಯ್ಯ ಮತ್ತು ಅವನ ಹೆಂಡತಿಗೆ ಬಹು ಬೇಸರವಾಗುತ್ತಿತ್ತು.

ಎರಡು ತಿಂಗಳುಗಳು ಕಳೆಯುತ್ತ ಬಂದುವು. ಚಿಕ್ಕಯ್ಯನು ಹತ್ತಿರದ ವಾಚ್‌ಮನ್ನರ ಗುರುತು ಮಾಡಿಕೊಳ್ಳಲಾರಂಭಿಸಿದನು. ಒಬ್ಬನು ಬಹಳ ಮುದುಕನಾಗಿದ್ದನು. ಅವನನ್ನು ಸದ್ಯದಲ್ಲಿಯೆ ಕೆಲಸದಿಂದ ತೆಗೆದುಹಾಕುವವರಿದ್ದರು. ಅವನ ಹೆಂಡತಿಯೇ ಅವನ ಕೆಲಸವನ್ನು ಮಾಡುತ್ತಿದ್ದಳು. ಮತ್ತೊಬ್ಬ ವಾಚ್‌ಮನ್ನನು ತೆಳ್ಳಗಾಗಿ ಬಲಿಷ್ಠನಾಗಿದ್ದ ತರುಣ. ಚಿಕ್ಕಯ್ಯನು ಅವನನ್ನು ಮೊದಲನೆಯಸಾರಿ ಕಂಡದ್ದು, ಒಂದು ದಿವಸ ಹಳಿಗುಂಟ ಗಸ್ತಿ ಮಾಡುತ್ತಿದ್ದಾಗ. ಅವನನ್ನು ಕಂಡು ಇವನು ಮಾತನಾಡಿಸಬೇಕೆಂದು ನಮಸ್ಕಾರಮಾಡಿದನು. ಆ ತರುಣನು ಪ್ರತಿನಮಸ್ಕಾರಮಾಡಿ, ಏನನ್ನೂ ಮಾತನಾಡದೆ ಹೊರಟುಹೋದನು. ಸ್ವಲ್ಪ ದಿವಸಗಳ ನಂತರ ಚಿಕ್ಕಯ್ಯನ ಹೆಂಡತಿಯು ಆ ತರುಣನ ಹೆಂಡತಿಯನ್ನು ಕಂಡು ಮಾತನಾಡಿದಳು. ಅವಳೂ ಹೆಚ್ಚಿಗೆ ಮಾತನಾಡಲಿಲ್ಲ.

ಮತ್ತೊಂದು ತಿಂಗಳು ಕಳೆಯುವುದರೊಳಗಾಗಿ ಗೆಳೆತನ ಬೆಳೆಯಿತು. ಅವನ ಹೆಸರು 'ಸುಬ್ಬರಾಯ' ಎಂದು ತಿಳಿಯಿತು.

ಸುಬ್ಬರಾಯ-ಚಿಕ್ಕಯ್ಯರು ಒಬ್ಬರಿಗೊಬ್ಬರು ಭೆಟ್ಟಿಯಾದಾಗ, ತಮ್ಮ ತಮ್ಮ ಸುಖ-ದುಃಖಗಳನ್ನು ಹೇಳಿಕೊಳ್ಳುತ್ತಿದ್ದರು; ತಂಬಾಕು ಸೇದುತ್ತಿದ್ದರು. ಸುಬ್ಬರಾಯನು ಹೆಚ್ಚಾಗಿ ಮಾತನ್ನೆ ಆಡುತ್ತಿರಲಿಲ್ಲ. ಚಿಕ್ಕಯ್ಯನು ತನ್ನ ಯುದ್ಧದ ಅನುಭವಗಳನ್ನು ಹೇಳುವನು.

ಒಂದು ಸಾರೆ ಚಿಕ್ಕಯ್ಯನು "ನಾನು ಆಗ ಪಟ್ಟ ಕಷ್ಟವೇನು ಸ್ವಲ್ಪವಲ್ಲ. ಆಗಲಿ, ಅದರಲ್ಲಿಯೇ ಸತ್ತುಹೋಗಲಿಲ್ಲ. ದೇವರು ಹಣೆಯಲ್ಲಿ ಬರೆದದ್ದನ್ನು ತಪ್ಪಿಸಲಾಗುತ್ತದೆಯೇ? ಜಗತ್ತು ಹೀಗೆಯೇ ಸಾಗಬೇಕು!" ಎಂದು ನಿಟ್ಟುಸಿರಿಟ್ಟನು.

"ನಮಗೆ ದುಃಖವಾಗಲಿ—ಎಂದು ದೇವರು ಬರೆಯುತ್ತಾನೆಯೆ ಎಂದಾದರೂ? ಅದೆಲ್ಲವೂ ಮನುಷ್ಯನಿಂದಲೆ ಆದದ್ದು! ಮನುಷ್ಯನಿಗಿಂತಲೂ ಹಿಂಸ್ರ—ಕ್ರೂರ—ಪಶುವೇ ಬೇರೆ ಇಲ್ಲ ಚಿಕ್ಕಯ್ಯ!"

"ಹಾಗಲ್ಲ...."

"ಹೇಗಾದರೂ ಸರಿಯೆ, ಕಷ್ಟ ಹುಟ್ಟುವುದೆಲ್ಲವೂ ಮನುಷ್ಯನ ಸ್ವಾರ್ಥ ಮತ್ತು ನೀಚತನಗಳಿಂದಲೆ! ಪ್ರತಿಯೊಬ್ಬನಿಗೂ ಮತ್ತೊಬ್ಬನು ಸುಖವಾಗಿ ತಿನ್ನುತ್ತಿರುವುದರಮೇಲೆಯೆ ಕಣ್ಣು!"

"ಅದೇನೋ ಗೊತ್ತಿಲ್ಲ! ಅದನ್ನಾದರೂ ದೇವರೇ ಮಾಡಿದ್ದಲ್ಲವೆ?"

" ಹಾಗಾದರೆ ನಿನ್ನ ಕೂಡ ಮಾತನಾಡುವುದು ಉಳಿಯಲಿಲ್ಲ. 'ಎಲ್ಲವನ್ನೂ ದೇವರೇ ಮಾಡುತ್ತಾನೆ' ಎಂದುಕೊಂಡು, ಬಂದದ್ದನ್ನೆಲ್ಲ ಅನುಭವಿಸಿ ಅಳುತ್ತ ಕುಳಿತರೆ— ನಾವು ಪಶುಗಳು, ಮನುಷ್ಯರಲ್ಲ!" ಹೀಗೆಂದು ಸಿಟ್ಟಿಗೆದ್ದವರಂತೆ ಸರಕ್ಕನೆ ಎದ್ದು ಬಿರಬಿರನೆ ಹೊರಟುಹೋದನು.

" ಅರೆ! ನನ್ನ ಮೇಲೆ ಯಾಕಪ್ಪ ಸಿಟ್ಟು ?" ಎಂದು ಚಿಕ್ಕಯ್ಯ ಅವನು ಹೋಗುತ್ತಿದ್ದ ಹಾಗೆ ಒದರಿ ಹೇಳಿದ ಸುಬ್ಬರಾಯ ತಿರುಗಿ ಸಹ ನೋಡಲಿಲ್ಲ. ಅವನು ಕಣ್ಣಿಗೆ ಮರೆಯಾಗುವ ವರೆಗೂ ನೋಡುತ್ತಿದ್ದು " ಇವನೊಬ್ಬ ಮೂರ್ಖ" ಎಂದು ತನ್ನೊಳಗೆ ತಾನೇ ನಕ್ಕು, ಚಿಕ್ಕಯ್ಯ ಮನೆಗೆ ಬಂದ.

ಆದರೆ ಅವರು ಜಗಳವಾಡಲಿಲ್ಲ, ಒಂದೆರಡು ದಿವಸಗಳಲ್ಲಿ ಮತ್ತೆ ಭೆಟ್ಟಿಯಾದರು. ಕುಳಿತು ಮಾತನಾಡಿದರು. ಸುಬ್ಬರಾಯನು ಯಾವಾಗಲೂ ಅದೇ ವಿಷಯವನ್ನು ತೆಗೆಯುತ್ತಿದ್ದ:

" ಈ ಅಧಿಕಾರಿ ಜನರ ಸಲುವಾಗಿಯೇ ನಾವು ಇಂತಹ ವಾಚ್‌ಹೌಸುಗಳಲ್ಲುಳಿಯಬೇಕಾಗಿದೆ. ನಿನಗೇನು ತಿಳಿಯದೆ ? " ಎಂದು ಒಂದು ದಿವಸ ಸುಬ್ಬರಾಯ ಮಾತಿಗಾರಂಭಿಸಿದನು.

" ವಾಚ್‌ಹೌಸುಗಳಿಗೇನಾಗಿದೆ? ಅವೇನು ಅಷ್ಟು ಕೀಳಾಗಿಲ್ಲ! ಒಂದು ಸಂಸಾರ ಅಲ್ಲಿ ಜೀವನ ಮಾಡಿಕೊಂಡಿರಬಹುದು!"

"ಒಂದು ಸಂಸಾರ ಅಲ್ಲಿ ಜೀವನ ಮಾಡಿಕೊಂಡಿರಬಹುದು! ಚಿಕ್ಕಯ್ಯ, ನಿನಗೆ ವಯಸ್ಸು ಬಹಳವಾಗಿದೆ; ಆದರೆ ಅನುಭವ ಕಡಿಮೆ! ಕಣ್ಣಿಂದ ನೋಡಿದರೂ ಆಳವಾಗಿ ವಿಚಾರಮಾಡುವುದಿಲ್ಲ ನೀನು! ವಾಚ್‌ಹೌಸಿನಲ್ಲಿಲ್ಲದ ಬಡಜನರು ಎಷ್ಟು ಸುಖದಿಂದ ಇದ್ದಾರೆ, ಗೊತ್ತಿಲ್ಲ ನಿನಗೆ! ಈ ಅಧಿಕಾರಿಗಳು ನಮ್ಮನ್ನು ಜೀವಂತ ತಿನ್ನುತ್ತಾರೆ. ಇಲ್ಲಿ ಅವರು, ನಿನ್ನಲ್ಲಿ ಶಕ್ತಿಯಿದ್ದಷ್ಟು ದಿನ ದುಡಿಸಿಕೊಳ್ಳುತ್ತಾರೆ; ಕೈಸಾಗದಾದ ಮೇಲೆ ಹೊರದೂಡಿಬಿಡುತ್ತಾರೆ. ಅವರು ನಮಗೆ ಕೊಡುವ ಸಂಬಳವೆಷ್ಟು? ಹದಿನೈದು! ನಾನು ಮೊನ್ನೆ ಸ್ಟೇಶನ್ನಿಗೆ ಹೋಗಿದ್ದೆ. ಆಗ ನಮ್ಮ ಡೈರೆಕ್ಟರ್ ಹೋದ. ಅವನು ಬಂದಾಗ ಅವನಿಗೆ ಸ್ಪೆಶಲ್ ಕಾರೇನು, ಕೈಗೊಬ್ಬರು ಕಾಲಿಗೊಬ್ಬರು ಆಳುಗಳೇನು, ಅವನನ್ನು ಕಂಡುಕಂಡಾಗ ಸಲಾಮೇನು, ಚಹಾಪಾರ್ಟಿಯೇನು!........ಚಿಕ್ಕಯ್ಯ, ನಾನಿನ್ನು ಇಲ್ಲಿ ಇರಲಾರೆ–ಎಂದುಕೊಂಡಿದ್ದೇನೆ! ಹುಟ್ಟಿಸಿದವನು ಹುಲ್ಲು ಬೇರೆ ಮೇಯಿಸಲಿಕ್ಕಿಲ್ಲವಷ್ಟೆ ?"

"ಸುಮ್ಮನಿರು, ಹುಚ್ಚರಂತೆ ಮಾಡಬೇಡ! ಇಲ್ಲಿ ನಿನಗೆ ಏನು ಕಮ್ಮಿಯಾಗಿದೆ? ಮನೆಯಿದೆ, ತಿಂಗಳಾದ ಕೂಡಲೆ ಸಂಬಳ ಸಿಕ್ಕುತ್ತದೆ, ತುಂಡು ಜಾಗ ಇದೆ, ಹೆಂಡತಿಯಿದ್ದಾಳೆ. ಎಲ್ಲಾ ಬಿಟ್ಟು ಎಲ್ಲಿ ಹೋಗುವುದು ?"

" ತುಂಡುಜಾಗ ಅಂದೆಯಾ? ಅದನ್ನು ನೀನು ಬಂದು ನೋಡು! ಅದರ ಮೇಲೆ ಏನಾದರೂ ಬೆಳೆದರೆ ಇಟ್ಟಾಣಿ! ಹೋದ ಮಳೆಗಾಲದಲ್ಲಿ ನಾನು ಕೆಲವು ಕಾಯಿ-ಪಲ್ಲೆ ಹಾಕಿದ್ದೆ. ರೋಡ್ ಮಾಸ್ತರು ಬಂದವನೇ 'ಇದೇನಿದು? ಇದನ್ನು ಯಾರನ್ನು ಕೇಳಿ ಹಾಕಿದೆ? ನಿನ್ನ ಅಪ್ಪನ ಮನೆಯ ಜಾಗವೋ ಇದು? ಮೇಲಿಂದ ಅಪ್ಪಣೆ ಪಡೆದುಕೊಂಡಿದ್ದೀಯೋ? ಇವನ್ನೆಲ್ಲ ಕಿತ್ತು ಹಾಕು! ಈ ಕ್ಷಣ ಕಿತ್ತು ಬಿಸಾಕು!' ಎಂದು ಜೋರುಮಾಡಿ ಕೀಳಿಸಿಯೇ ಬಿಟ್ಟನು. ಇನ್ನೊಂದು ಸಾರಿ ಅವನು ಬಂದಾಗ, ಅವನಿಗೆ ಬೈಯಲಿಕ್ಕೆ ಏನೂ ಕಾರಣ ಸಿಕ್ಕಲಿಲ್ಲ; ಆದರೆ ಯಾಕೋ, ಹೋಗುವಾಗ 'ಒಂದು ರೂಪಾಯಿ ದಂಡ ಹಾಕಿದೆ' ಎಂದು ಹೋದ. ಇನ್ನೊಂದು ಚಕಾರ ಶಬ್ದವಾಡಿದ್ದರೆ 'ಒಂದು ಕೈನೋಡಿಬಿಡುವ' ಎನ್ನುವಷ್ಟು ಸಿಟ್ಟು ಬಂದಿತ್ತು!"

ಸುಬ್ಬರಾಯ ಉಸಿರುಕಟ್ಟುವ ಹಾಗೆ ತಂಬಾಕಿನ ಧುರಿಕೆಯನ್ನು ಹೊಡೆದನು. ಸಿಟ್ಟಿನಿಂದ ಅವನ ಮೋರೆ ತಂಬಾಕಿನ ತುದಿಗಿರುವ ಬೆಂಕಿಯಷ್ಟು ಕೆಂಪಾಗಿತ್ತು.

"ನಿನಗೆ ಬಹಳ ಬೇಗನೆ ತಲೆಕಾಯ್ದು ಹೋಗುತ್ತದೆ!" ಚಿಕ್ಕಯ್ಯನೆಂದ. " ನನಗೆ ತಲೆ ಕಾಯುವುದಿಲ್ಲ. ನಾನು ವಿಚಾರಮಾಡಿ ಕಂಡದ್ದನ್ನು ಅಡಗಿಸಿಕೊಳ್ಳದೆ ಆಡಿಬಿಡುತ್ತೇನೆ.. ಅಷ್ಟೇ! ನಮ್ಮ ಸೆಕ್ಷನ್‌ನ ಮುಖ್ಯಸ್ಥನ ಕೂಡ ಇದರ ವಿಷಯ ತಕರಾರು ಮಾಡದೆ ಬಿಡುವವನಲ್ಲ; ನೋಡು ಬೇಕಾದರೆ!"

ಅವನು ತಕರಾರು ಮಾಡದೆ ಇರಲಿಲ್ಲ. ಐದಾರು ದಿವಸಗಳಲ್ಲಿ ಗವರ್ನರರು ಆ ದಾರಿಯಾಗಿ ಹೋಗುವವರಿದ್ದರು. ಅವರು ಬರುವುದರೊಳಗೆ ಎಲ್ಲವನ್ನೂ ಚೊಕ್ಕಟವಾಗಿರಿಸಬೇಕಿತ್ತು. ಸ್ಲೀಪರ್ ತಪಾಸಿಸಿ, ಬೋಲ್ಟುಗಳನ್ನು ಗಟ್ಟಿಯಾಗಿ ಮಾಡುವುದು, ಬೋರ್ಡುಗಳಿಗೆ ಬಣ್ಣ ಹಚ್ಚುವುದು ಮಾಡುವುದಿತ್ತು. ಚಿಕ್ಕಯ್ಯ, ಸುಬ್ಬರಾಯ, ಆ ಮುದುಕ ಇವರು ಹಗಲು ರಾತ್ರಿ ದುಡಿದು, ಎಲ್ಲ ಸರಿಮಾಡಿದರು. ಮುದುಕನ ಹೆಂಡತಿಯಂತೂ ಮೂರುದಿನಗಳ ವರೆಗೆ ನಿದ್ದೆ ಮಾಡಲಿಲ್ಲ.

ಮೂರನೆಯ ದಿನ ಸೆಕ್ಷನ್ನಿನ ಮುಖ್ಯಸ್ಥನು ಲೈನ್ ತಪಾಸಿಗೆ ಬಂದನು. ಚಿಕ್ಕಯ್ಯನು ತನ್ನ ಮಿಲಿಟರಿ ಸಲಾಂ ಹೊಡೆದು ಎಲ್ಲವನ್ನೂ ತೋರಿಸಿದನು; ಎಲ್ಲವೂ ಸಮಾಧಾನಕರವಾಗಿತ್ತು. "ನೀನು ಇಲ್ಲಿ ಇರಲಿಕ್ಕೆ ಹತ್ತಿ ಎಷ್ಟು ದಿನಗಳಾದುವು ?" ಮುಖ್ಯಸ್ಥನು ಚಿಕ್ಕಯ್ಯನನ್ನು ಕೇಳಿದನು.

" ಎಂಟು ತಿಂಗಳಾಯಿತು ರಾಯರೆ!"

" ಅರುವತ್ತುನಾಲ್ಕನೆಯ ನಂಬರಿಗೆ ಯಾರಿದ್ದಾರೆ?"

ಅವರ ಸಂಗಡ ಇದ್ದ ರೋಡ್ ಮಾಸ್ತರನು " ಸುಬ್ಬರಾಯ ಹನುಮಂತ ಶೆಟ್ಟಿ " ಎಂದನು.

" ಶೆಟ್ಟಿ....ಶೆಟ್ಟಿ! ಓಹೋ ಹೋದ ವರ್ಷ ಅವನಿಗೆ ಹಿಂಬಡತಿ ಮಾಡಿತ್ತಲ್ಲ!"

" ಹೌದು ಅವನೇ!"

"ನಾವು ಅವನನ್ನು ಚೆನ್ನಾಗಿ ಪರೀಕ್ಷಿಸಬೇಕು, ಹೋಗೋಣ!' ಚಿಕ್ಕಯ್ಯ ಸಲಾಂ ಮಾಡಿದ. ಅವರು ಮುಂದೆ ಹೋದರು.

" ಅವನಿಗೆ ಶನಿದಶೆ "ಎಂದುಕೊಂಡು, ಅವರು ಹೋದ ಕಡೆಗೆ ನೋಡಿದ ಚಿಕ್ಕಯ್ಯ.

ಎರಡು ತಾಸುಗಳಾದ ಮೇಲೆ ಚಿಕ್ಕಯ್ಯ ಗಸ್ತಿಯ ಮೇಲೆ ಹೋದಾಗ, ಮೋರೆಗೆ ಬೆಳ್ಳಗಿನದನ್ನು ಕಟ್ಟಿಕೊಂಡು, ಹಳಿಗಳ ಗುಂಟ ಯಾರೋ ಬರುತ್ತಿದ್ದುದನ್ನು ಕಂಡನು. ಹತ್ತಿರಕ್ಕೆ ಹೋಗಿ ನೋಡಿದರೆ ಸುಬ್ಬರಾಯ. ಕೈಯಲ್ಲಿ ಒಂದು ಕೋಲು ಹಿಡಿದುಕೊಂಡು, ಹೆಗಲ ಮೇಲೆ ಒಂದು ಗಂಟನ್ನು ಹೊತ್ತು ಕೊಂಡು ಬರುತ್ತಿದ್ದನು. ಮೋರೆಗೆ ವಸ್ತ್ರ ಸುತ್ತಿಕೊಂಡಿದ್ದನು. ಕಣ್ಣು ಕೆಂಪಗೆ ಉರಿಯುತ್ತಿದ್ದುವು. ಅವನ ರೀತಿಯನ್ನು ಕಂಡು ಚಿಕ್ಕಯ್ಯನಿಗೆ ಆಶ್ಚರ್ಯ-ಭೀತಿಗಳುಂಟಾದುವು.

" ಎಲ್ಲಿಗೆ ಹೊರಟೆ ಮತ್ತೆ ? " ಚಿಕ್ಕಯ್ಯ ಕೇಳಿದ.

" ನಾನು ಮೈಲಿಗೆ ಹೋಗುತ್ತೇನೆ—ಬೋರ್ಡಿಗೆ ಹೋಗುತ್ತೇನೆ! " ಅವನು ಸಿಟ್ಟಿನಿಂದ ನಡುಗುತ್ತಿದ್ದನು. ಮಾತನಾಡಲಿಕ್ಕೆ ಆಗುತ್ತಿರಲಿಲ್ಲ.

" ಬೋರ್ಡಿಗೆ ?....ಆಂ! ತಕರಾರು ಮಾಡಲಿಕ್ಕೆ ?.... ಸ್ವಲ್ಪ ತಡೆದುಕೋ ಸಿಟ್ಟನ್ನು ! "

" ಚಿಕ್ಕಯ್ಯ, ಅದು ನಿನಗೆ ತಿಳಿಯಲಿಕ್ಕಿಲ್ಲ. ನಾನದನ್ನು ಮರೆಯಲಾರೆ! ಇನ್ನು ತಡೆಯುವುದು ಸಾಧ್ಯವಿಲ್ಲ! ಮೋರೆಯ ಮೇಲೆ ಹೊಡೆದು ರಕ್ತ ಇಳಿಸಿದ್ದಾನೆ; ನಾನು ಬದುಕಿರುವವರೆಗೆ ಇದನ್ನು ಮರೆಯಲಾರೆ! "

ಚಿಕ್ಕಯ್ಯ ಅವನ ಕೈಯನ್ನು ಹಿಡಿದು ತಡೆದನು.

" ಹೀಗೆ ಮಾಡಿದರೆ ಪ್ರಕರಣ ಬೆಳೆಯುತ್ತದೆಯೇ ಹೊರತು ಅವರು ನಮ್ಮ ಮಾತು ಬೇರೆ ಕೇಳುವುದಿಲ್ಲ ! "

" ಬೆಳೆದರೆ ಬೆಳೆಯಲಿ! ನನ್ನ ಹಣೆಯಲ್ಲಿ—ನೀನು ಹೇಳಿದ ಹಾಗೆ—ದೇವರು ಬರೆದದ್ದನ್ನು ಅನುಭವಿಸುತ್ತೇನೆ! ಸತ್ಯಕ್ಕೆ ಸ್ವಲ್ಪವಾದರೂ ಜಯವಾಗಲಿಕ್ಕಿಲ್ಲವೆ ? ನೋಡೇ ಬಿಡುತ್ತೇನೆ! "

" ಈಗ ಮತ್ತೇನಾಯಿತು....ಜಗಳವಾಡಲಿಕ್ಕೆ ? "

" ಏನಾಯಿತು ! ಅವನು ಬರುವಾಗಲೇ ಗೊತ್ತಿತ್ತು, ಎಲ್ಲವನ್ನೂ ಪರೀಕ್ಷೆ ಮಾಡುತ್ತಾನೆ—ಎಂತ. ಎಲ್ಲವನ್ನೂ ಸರಿಮಾಡಿ ಇಟ್ಟಿದ್ದೆ. ಅವನು ಬಂದು ಎಲ್ಲವನ್ನೂ ನೋಡಿದ. ಅವನು ಹೋಗಲಿಕ್ಕೆ ಹೊರಟಾಗ, ಖುಶಿಯಾಗಿದ್ದಾನೆಂದುಕೊಂಡು ನನ್ನ ತಕರಾರನ್ನು ಅವನ ಮುಂದೆ ಹೇಳಿದೆ. ಅವನಿಗೆ ಸಿಟ್ಟು ಬಂದು ಹೋಯಿತು. ' ಸರಕಾರಿ ಕೆಲಸಕ್ಕೆ ಬಂದಾಗ ನಿನ್ನ ಕಾಯಿ-ಪಲ್ಲೆ, ಅದು ಇದು ಎಲ್ಲ ತಕರಾರು ! ಅಂ? ನಾಡಿದ್ದು ಗವ್ಹರನರು ಬರುತ್ತಾರೆ ; ಇವನು ಕಾಯಿ-ಪಲ್ಲ್ಯೆದ್ದೇ ಕಥೆ ಹಚ್ಚಿಕೊಂಡು ಕುಳಿತಿದ್ದಾನೆ, ' ಎಂದ. ನನಗೆ ತಡೆಯಲಾಗಲಿಲ್ಲ. ಒಂದೆರಡು ಮಾತುಗಳನ್ನು ಹೇಳಿದೆ. ಬರಿಯ ಒಂದೆರಡು ಮಾತುಗಳು ! ಅವನಿಗೆ ಎದುರುತ್ತರ ಕೊಟ್ಟಂತಾಯಿತು ಎಂದು ಕಾಣುತ್ತದೆ. ಹಾರಿ, ಮೋರೆಯ ಮೇಲೆ ಗುದ್ದಿದನು. ಮೂಗು ಒಡೆದು ರಕ್ತ ಬಂದಿತು. ನನಗೆ ಎಚ್ಚರು ತಪ್ಪಿಹೋಯಿತು. ನನಗೆ ಎಚ್ಚರು ಬಂದಾಗ, ನನ್ನ ಹೆಂಡತಿ ನನ್ನ ಮೋರೆಗೆ ಪಟ್ಟಿಯನ್ನು ಕಟ್ಟಿ ಅಳುತ್ತಿದ್ದಳು. " ಸುಬ್ಬರಾಯನ ಕಣ್ಣಿಂದ ಕಿಡಿಗಳುದುರುತ್ತಿದ್ದುವು.

" ನೀನು ಹೋದ ಮೇಲೆ ವಾಚ್ ಹೌಸು ! "

" ನನ್ನ ಹೆಂಡತಿಯಿದ್ದಾಳೆ; ಅವಳು ನೋಡಿಕೊಳ್ಳುತ್ತಾಳೆ. ಅವರೂ ಅವರ ರೇಲ್ವೆಯೂ ಹಾಳುಬಿದ್ದು ಹೋಗಲಿ! " ಸುಬ್ಬರಾಯ ಕೈ ಬಿಡಿಸಿಕೊಂಡು ಮುಂದಕ್ಕೆ ಹೊರಟ.

" ನಡೆದೇ ಹೋಗುತ್ತೀಯಾ ? " ಚಿಕ್ಕಯ್ಯ ಕೇಳಿದ.

"ನೋಡಬೇಕು, ಗೂಡ್ಸ್ ಗಾಡಿಯಿಂದ ಹೋಗಲಿಕ್ಕೆ ಆಗುತ್ತದೆಯೋ ನೋಡಬೇಕು ! "

ಸುಬ್ಬರಾಯ ವೇಗವಾಗಿ ಹೊರಟುಹೋದ.

ಸುಬ್ಬರಾಯನ ಹೆಂಡತಿ ಅವನ ಕೆಲಸವನ್ನು ಸಮರ್ಪಕವಾಗಿ ಮಾಡುತ್ತಿದ್ದಳು. ಮೂರನೆಯ ದಿವಸ ಗವ್ಹರ್‌ನರರ ಗಾಡಿ ಹೋಯಿತು. ಸುಬ್ಬರಾಯ ಬರಲಿಲ್ಲ. ನಾಲ್ಕನೆಯ ದಿನ ಚಿಕ್ಕಯ್ಯ ಸುಬ್ಬರಾಯನ ಮನೆಗೆ ಹೋಗಿ, ಅವನ ಹೆಂಡತಿಯನ್ನು ನೋಡಿದ. ಅತ್ತು ಅತ್ತು ಅವಳ ಕಣ್ಣುಗಳು ಬಾತು ಹೋಗಿದ್ದುವು. ನಾಲ್ಕೇ ದಿವಸಗಳಲ್ಲಿ ಕರಗಿ ಹೋಗಿದ್ದಳು.

"ಸುಬ್ಬರಾಯ ಯಾವಾಗ ಬರುತ್ತೇನೆ—ಎಂದು ಹೇಳಿ ಹೋಗಿದ್ದಾನೆ ? " ಎಂದು ಚಿಕ್ಕಯ್ಯ ಕೇಳಿದನು.

ಅವಳು ಮಾತನಾಡಲಿಲ್ಲ. ಮೋರೆ ಮುಚ್ಚಿಕೊಂಡು ಅಳಹತ್ತಿದಳು. ಅವನು ನಿಂತಷ್ಟು ಹೊತ್ತೂ ಅವಳು ಅಳುತ್ತಲೇ ಇದ್ದಳು.

* * *

ಚಿಕ್ಕಯ್ಯನಿಗೆ ಚಿಕ್ಕಂದಿನಿಂದಲೂ ಒಂದು ವಿದ್ಯೆ ಚೆನ್ನಾಗಿ ಸಾಧಿಸಿತ್ತು. ಬಿದುರನ್ನು ಕತ್ತರಿಸಿ ಸರಿಯಾಗಿ ತೂತುಗಳನು ಹೊಡೆದು, ಬಾಯಿಮಾಡಿ, ಅತ್ಯಂತ ಇಂಪಾಗಿ ಧ್ವನಿ ಹೊರಡುವಂತೆ ಕೊಳಲುಗಳನ್ನು ತಯಾರಿಸುತ್ತಿದ್ದನು. ಅವನ ವಾಚ್-ಹೌಸಿನ ಹತ್ತಿರದ ಕಾಡಿನಲ್ಲಿ ಬಿದಿರು ಯಥೇಚ್ಛವಾಗಿ ಬೆಳೆದಿತ್ತು. ಅವನು ಪುರಸೊತ್ತು ಸಿಕ್ಕಿದಾಗಲೆಲ್ಲ ಅವುಗಳನ್ನು ತಯಾರು ಮಾಡಿ—ತನ್ನ ಪರಿಚಯದ ಗೂಡ್ಸ್‌ಗಾಡಿಯ ಗಾರ್ಡರೊಂದಿಗೆ ಪಟ್ಟಣಕ್ಕೆ ಕಳುಹುತ್ತಿದ್ದನು. ಅಲ್ಲಿ ಅವು ಆಣೆ-ಎರಡಾಣೆಗೊಂದರಂತೆ ಖರ್ಚಾಗುತ್ತಿದ್ದುವು.

ಗವ್ಹರ್ನರ್‌ರು ಬಂದುಹೋಗಿ ೪-೬ ದಿನಗಳು ಕಳೆದಿದ್ದುವು. ಚಿಕ್ಕಯ್ಯನು ಆರುಗಂಟೆಯ ಗಾಡಿಯನ್ನು ನೋಡಿಕೊಳ್ಳಲು ಹೆಂಡತಿಗೆ ಹೇಳಿ, ಚಾಕುವನ್ನು ತೆಗೆದುಕೊಂಡು, ಕೊಳಲುಗಳನ್ನು ಮಾಡಲು ಬಿದಿರನ್ನು ತರಲು ಕಾಡಿಗೆ ಹೋದನು. ಅರ್ಧ ಮೈಲಿಗಳಷ್ಟು ಹೋದರೆ ಅಲ್ಲಿ ಬಿದಿರು ಚೆನ್ನಾಗಿ ಬೆಳೆದಿತ್ತು. ಅವನು ಅಲ್ಲಿಂದ ಒಂದು ಹೊರೆ ತುಂಡುಗಳನ್ನು ಕತ್ತರಿಸಿಕೊಂಡು ಹೊರಟನು.

ಸೂರ್ಯನು ಮುಳುಗುತ್ತಿದ್ದನು. ಸುತ್ತಲೂ ಶಾಂತತೆ ಪಸರಿಸಿತ್ತು. ಕಾಲಬುಡದಲ್ಲಿ ಮುರುಗುಡುವ ಒಣ ಎಲೆಗಳ ಸಪ್ಪಳ ಹೊರತು ಬೇರೆ ಯಾವ ಸಪ್ಪಳವೂ ಕೇಳಿಸುತ್ತಿದ್ದಿಲ್ಲ.

ಚಿಕ್ಕಯ್ಯನು ನಡೆದು ಹಳಿಗಳು ಇದ್ದಲ್ಲಿಗೆ ಹೋದನು. ಅವನು ಹತ್ತಿರಕ್ಕೆ ಬಂದಹಾಗೆ, ಸುತ್ತಿಗೆಯಿಂದ ಕಬ್ಬಿಣವನ್ನು ಬಡಿಯುವ ಸಪ್ಪಳವು ಕೇಳಿಸಿತು. ಚಿಕ್ಕಯ್ಯನು ಜೋರಿನಿಂದ ನಡೆದನು. ಆ ಭಾಗದಲ್ಲಿ ಹಳಿಗಳ ದುರಸ್ತಿ ಎಲ್ಲಿಯೂ ನಡೆದಿದ್ದಿಲ್ಲ. "ಇದೇನು ಮತ್ತೆ ?" ಎಂದುಕೊಳ್ಳುತ್ತ ಮತ್ತೂ ಮುಂದೆ ಹೋದನು.

ಅವನಿಗೆ ಈಗ ಹಳಿಗಳು ಕಾಣಹತ್ತಿದುವು. ಹಳಿಯ ಮೇಲೆ ಬಗ್ಗಿ ಒಬ್ಬ ಮನುಷ್ಯ ಏನನ್ನೋ ಮಾಡುತ್ತಿದ್ದನು. 'ಯಾರೋ ಸ್ಕ್ರೂಗಳನ್ನು ಕಳವುಮಾಡಲಿಕ್ಕೆ ಬಂದಿದ್ದಾರೆ' ಎಂದುಕೊಂಡು, ಮೆಲ್ಲನೆ ಹೋದನು. ಆ ಮನುಷ್ಯನು ಎದ್ದು ನಿಂತನು. ಅವನ ಕೈಯಲ್ಲಿ ಒಂದು ಹಾರೆಯ ತುದಿಯಿತ್ತು; ಇನ್ನೊಂದು ತುದಿಯನ್ನು ಹಳಿಯ ಕೆಳಕ್ಕೆ ಸೇರಿಸಿದ್ದನು. ಚಿಕ್ಕಯ್ಯ ಇನ್ನೂ ಹತ್ತಿರಕ್ಕೆ ಹೋದನು. ಅಲ್ಲಿ ನಿಂತಿದ್ದ ವ್ಯಕ್ತಿಯ ಗುರುತು ಸಿಕ್ಕಿತು. ಅವನಿಗೆ ಕಣ್ಣಿಗೆ ಕತ್ತಲು ಕವಿದಂತಾಯಿತು. ಅಲ್ಲಿ ನಿಂತಿದ್ದವನು ಸುಬ್ಬರಾಯ. ಚಿಕ್ಕಯ್ಯನು ಅವನನ್ನು ಹಿಡಿಯಲು ಹೋದನು. ಆದರೆ ಸುಬ್ಬರಾಯನು ಇವನನ್ನು ಕಂಡು, ಹಾರೆ-ಸುತ್ತಿಗೆಗಳನ್ನು ತೆಗೆದುಕೊಂಡು ಜೋರಿನಿಂದ ಓಡಿದನು.

"ಸುಬ್ರಾಯ, ಓ ಸುಬ್ರಾಯ, ಹಿಂತಿರುಗಿ ಬಾ! ಹಾರೆಯನ್ನು ತಾ! ಸರಿದುಹೋದ ಹಳಿಗಳನ್ನು ತಿರುಗಿ ಕೂಡಿಸಿಬಿಡೋಣ! ಯಾರಿಗೂ ಗೊತ್ತಾಗುವುದಿಲ್ಲ, ಮರಳಿ ಬಾ!" ಎಂದು ಕೂಗುತ್ತ ಅವನ ಹಿಂದೆಯೇ ಓಡಿದನು.

ಸುಬ್ಬರಾಯ ಬರಲಿಲ್ಲ; ಓಡಿ ಓಡಿ ಅಡವಿಯೊಳಗೆ ಹೋಗಿ ಅಡಗಿ ಬಿಟ್ಟನು.

ಚಿಕ್ಕಯ್ಯನು ಹಿಂದಿರುಗಿ, ಸರಿದುಹೋಗಿದ್ದ ಹಳಿಗಳಿದ್ದಲ್ಲಿಗೆ ಬಂದನು. ತಲೆಯ ಮೇಲಿದ್ದ ಬಿದಿರುತುಂಡುಗಳನ್ನು ಅಲ್ಲಿ ಒಗೆದನು. ಸರಿದು ಹೋದ ಹಳಿಯನ್ನು ಕೈಯಿಂದ ಸರಿಮಾಡಲು ಬರುವಂತಿದ್ದಿಲ್ಲ. ಈಗ ಬರುವುದು ಗೂಡ್ಸ್‌ಗಾಡಿಯಲ್ಲ; ಪ್ಯಾಸೆಂಜರ್ ಟ್ರೇನು! ಅವನು ಈಗ ಮನೆಗೆ ದುರಸ್ತಿಯ ಸಾಮಾನುಗಳಿಗಾಗಿ ಓಡಬೇಕು! 'ದೇವರೇ ರಕ್ಷಿಸು' ಎಂದು ಓಡತೊಡಗಿದನು.

ಏರು-ತಗ್ಗುಗಳನ್ನೂ ಕಲ್ಲು-ಮುಳ್ಳುಗಳನ್ನೂ ನೋಡದೆ ಓಡಿದನು. ಮನೆ ಎರಡು ಫರ್ಲಾಂಗಿನಷ್ಟು ದೂರ ಇತ್ತು........ ದೂರದಲ್ಲಿ ಗಿರಣಿಯ ಸೀಟಿ ಊದಿತು— ಆರುಗಂಟೆಯಾಯಿತು. ಆರುಗಂಟೆಯಾಗಿ ಎರಡು ಮಿನಿಟಿಗೆ ಗಾಡಿ ಬರುವುದಿತ್ತು. "ಭವಿಷ್ಯದ ಕಲ್ಪನೆಯಿಲ್ಲದೆ ಕುಳಿತುಬರುತ್ತಿರುವ ಅನೇಕರು.... ಎಂಜಿನಿನ ಎಡಗಾಲಿಗಳು ಸರಿದುಹೋದ ಹಳಿಗಳಲ್ಲಿ ಸಿಕ್ಕುವುವು. ಬಲದ ಗಾಲಿಗಳು ಎತ್ತರವಾಗುವುವು. ಗಾಡಿ ಗಡಗಡವೆಂದು ಉರುಳುವುದು.... ಕೆಳಗೆ, ಆ ಪೂಟುಗಳ ಕೆಳಗೆ!.... ಮೂರನೆ ಕ್ಲಾಸಿನ ಡಬ್ಬಿಯಲ್ಲಿ ಹೆಂಗುಸರು, ಹುಡುಗರು.... ಮುಂದಿನ ಕಲ್ಪನೆಯಿಲ್ಲದೆ ಕುಳಿತಿರುವರು.... ಅಯ್ಯೋ ದೇವರೇ! ನಾನೇನು ಮಾಡಲಿ! ಇಲ್ಲ! ಮನೆಗೆ ಹೋಗಿ ಹಿಂದಿರುಗಿ ಬರಲು ಸಾಧ್ಯವಿಲ್ಲ!"

ಚಿಕ್ಕಯ್ಯನು ಮುಂದೆ ಓಡಲಿಲ್ಲ. ಹಿಂದಿರುಗಿ ಓಡತೊಡಗಿದನು. ಮೊದಲಿಗಿಂತಲೂ ವೇಗವಾಗಿ ಓಡಹತ್ತಿದನು. ಮುಂದೆ ಏನು ಮಾಡಬೇಕೆಂಬುದರ ಅರಿವಿಲ್ಲದೆ, ಎಚ್ಚರು ತಪ್ಪಿದವರಂತೆ ಓಡುತ್ತಿದ್ದನು. ಹಳಿ ಸರಿದುಹೋದಲ್ಲಿಗೆ ಬಂದನು. ಅಲ್ಲಿ ಬಿದಿರಿನ ತುಂಡುಗಳು ಬಿದ್ದಿದ್ದುವು. ಒಂದು ತುಂಡು ಬಿದಿರನ್ನು ಕೈಯಲ್ಲಿ ತೆಗೆದುಕೊಂಡು ಮುಂದೆ ಓಡಹತ್ತಿದನು.

ಗಾಡಿ ಬರುವುದು ಕೇಳಿಸಿದಂತೆ ಆಯಿತು. ಅವನು ಓಡುತ್ತಲೇ ಇದ್ದನು. ದೂರದಲ್ಲಿ ಗಾಡಿಯ ಸಿಳ್ಳು ಕೇಳಿಸಿತು. ಹಳಿಗಳು ಅದುರತೊಡಗಿದುವು. ಅವನಿಗೆ ಇನ್ನೂ ಮುಂದೆ ಓಡುವುದು ಸಾಧ್ಯವಿರಲಿಲ್ಲ. ಗಂಡಾಂತರದ ಪ್ರದೇಶದಿಂದ ಐವತ್ತು ಮಾರುಗಳ ದೂರದಲ್ಲಿ ನಿಂತನು. ಅಷ್ಟರಲ್ಲಿ ಒಂದು ಯೋಚನೆ ಅವನಿಗೆ ಹೊಳೆಯಿತು. ಅವನು ತನ್ನ ದೋತರವನ್ನು ಹರಿದು ತುಂಡನ್ನು ತೆಗೆದನು. ಚಾಕುವನ್ನು ತೆಗೆದುಕೊಂಡು, ದೇವರನ್ನು ನೆನೆದು, ಎಡಗೈಯಲ್ಲಿ ಇರಿದುಕೊಂಡನು. ಚಿಳ್ಳೆಂದು ಬಿಸಿರಕ್ತ ಹಾರಿ ಹರಿಯತೊಡಗಿತು. ದೋತರದ ತುಂಡನ್ನು ತೋಯಿಸಿ ಹಿಂಡಿದನು. ಕೈಯಲ್ಲಿ ತಂದ ಬಿದಿರಿನ ತುಂಡಿನ ತುದಿಗೆ ಅದನ್ನು ಸಿಕ್ಕಿಸಿ ಎತ್ತಿ ಹಿಡಿದನು— ಅದು ಅವನ ಕೆಂಪು ಬಾವುಟ.

ಗಾಡಿ ಕಣ್ಣಿಗೆ ಕಾಣಿಸತೊಡಗಿತ್ತು. "ಇಂಜಿನ್ ಡ್ರೈವರ್! ನನ್ನನ್ನು ನೋಡದಿದ್ದರೆ? ಜೋರಿನಿಂದ ಬರುವ ಗಾಡಿಯನ್ನು ಇಷ್ಟು ಸ್ವಲ್ಪ ಅಂತರದಲ್ಲಿ ನಿಲ್ಲಿಸಲಿಕ್ಕಾಗದಿದ್ದರೆ?....?....?"

ರಕ್ತ ಜೋರಿನಿಂದ ಹರಿಯುತ್ತಿತ್ತು. ರಕ್ತ ನಿಲ್ಲಿಸಲು ಬಲಗೈಯಿಂದ ಒತ್ತಿ ಹಿಡಿದನು. ಆದರೆ ರಕ್ತ ನಿಲ್ಲಲಿಲ್ಲ. ಗಾಯವು ಆಳವಾಗಿತ್ತು. ಹಿಡಿದ ಕೈಬೆರಳುಗಳ ಮಧ್ಯದೊಳಗಿಂದ ರಕ್ತ ಹರಿದು ಬರುತ್ತಿತ್ತು. ಕಣ್ಣು ಮಂಜಾಗತೊಡಗಿತು.—ಕಿವಿಯಲ್ಲಿ ಗಂಟೆ ಹೊಡೆದಂತಾಗುತ್ತಿತ್ತು— ಗಾಡಿಬರುವ ಶಬ್ದ ಕೇಳಿಸುತ್ತಿರಲಿಲ್ಲ. ಅವನ ತಲೆಯಲ್ಲಿ ಒಂದೇ ವಿಚಾರ: "ನಾನು ಇನ್ನು ನಿಲ್ಲಲಾರೆ, ...ನಾನು ಬಿದ್ದುಹೋಗುತ್ತೇನೆ....ಬಾವುಟ ಬಿದ್ದು ಹೋಗುತ್ತದೆ, ಗಾಡಿ ಮುಂದೆ ಹೋಗಿಬಿಡುತ್ತದೆ...."

ಅವನ ಸುತ್ತಲೂ ಕತ್ತಲು ಕವಿದುಕೊಂಡಿತು. ಬಾವುಟ ಕೈಯಿಂದ ಜಾರಿತು....ಆದರೆ ರಕ್ತರಂಜಿತ....ಕೆಂಪು ಬಾವುಟ ನೆಲಕ್ಕೆ ಬೀಳಲಿಲ್ಲ; ಯಾರೋ ಅದನ್ನು ಹಿಡಿದು ಎತ್ತರವಾಗಿ ಬೀಸಲು ಪ್ರಾರಂಭಿಸಿದರು. ಡ್ರೈವರ್ ನೋಡಿದ. ಗಾಡಿ ಒಮ್ಮೆಲೆ ನಿಂತಿತು. ಜನರು ಗಾಡಿಯಿಂದಿಳಿದರು. ಅಲ್ಲಿ ರಕ್ತದಲ್ಲಿ ಮುಳುಗಿದ ಒಬ್ಬನು ಮೂರ್ಛೆ ಬಂದು ಬಿದ್ದಿರುವುದನ್ನೂ, ಹತ್ತಿರವೇ ಇನ್ನೊಬ್ಬನು ನಿಂತು ರಕ್ತರಂಜಿತ ಬಾವುಟವನ್ನು ಎತ್ತಿ ಹಿಡಿದಿರುವುದನ್ನೂ ನೋಡಿದರು.

ಸುಬ್ಬರಾಯ ಸುತ್ತಲೂ ನೋಡಿ, ತಲೆ ಕೆಳಗೆ ಮಾಡಿದನು. "ನಾನು ಹಳಿಗಳನ್ನು ಕಿತ್ತವನು! ನನ್ನನ್ನು ಹಿಡಿಯಿರಿ!" ಎಂದು ಅಲ್ಲಿಗೆ ಬಂದಿದ್ದ ಅಧಿಕಾರಿಗಳೆದುರು ಹೇಳಿದನು.

ನಮ್ಮ ಪತನಕ್ಕೆ ಕಾರಣವೇನು?

ಶ್ರೀ. ಎಸ್. ಎಲ್. ಸುಬ್ರಹ್ಮಣ್ಯಂ, ಕೊಡಗನೂರು

★

ಧಾರ್ಮಿಕ ಅನೈಕ್ಯತೆ ಮತ್ತು ಪಂಥ-ಉಪಪಂಥಗಳ ಆವಿರ್ಭಾವವು ನಮ್ಮ ಬುದ್ಧಿಯನ್ನು ಭ್ರಮೆಗೆ ಈಡುಮಾಡಿತು. ನಾವು ಪರಾಧೀನರಾಗಿ 'ಕಲಿಯುಗದಲ್ಲಿ ಭಾರತವರ್ಷವು ಮ್ಲೇಚ್ಛರ ಅಧೀನವಾಗುವುದು ಅನಿವಾರ್ಯ' ಎಂಬ ಕಿಂವದಂತಿಯಲ್ಲಿ ನಂಬಿಕೆಯಿಟ್ಟೆವು!

★

ನಮ್ಮ ಭಾರತೀಯ—ಹಿಂದೂ—ಸಮಾಜದ ಪ್ರವೃತ್ತಿಯು ಇಂದಿಗೂ ಭೌತಿಕವಾದದ ಪರವಾಗಿಲ್ಲವೆಂಬುದಕ್ಕೆ ಭಕ್ತಿ-ಪ್ರಚಾರಕ ಧಾರ್ಮಿಕ ಸಾಹಿತ್ಯದ ಪ್ರಚಾರವೇ ಪ್ರಮಾಣವಾಗಿದೆ. ಅಷ್ಟೇ ಅಲ್ಲ, ಭೌತಿಕ ಜಗತ್ತಿನಲ್ಲಿ ನಮ್ಮದೇಶದ ಪತನವು ಇಷ್ಟು ಆಗಿರುವುದರಿಂದಲೇ ನಾವು ಪರಲೋಕ ಸಾಧನೆಯ ಬಗ್ಗೆ ಹುಚ್ಚರಾಗಿರುವುದು. 'ಕಲಿಕಾಲ ಬಂತು, ಜಪ-ತಪಗಳು ಮಾಯವಾದುವು; ಧರ್ಮಕ್ಕೆ ನಾಶಬಂದಿತು!' ಎಂದು ಹೇಳುತ್ತ, ಆ ಬಗ್ಗೆ ಅನೇಕ ಪ್ರಮಾಣಗಳನ್ನು ಕೊಡುತ್ತಿರುವರು. ಈ ಎಲ್ಲ ಪ್ರಮಾಣಗಳ ಪರಿಣಾಮವಾಗಿ ಇಂದಿನ ಜ್ಞಾನ-ವಿವೇಕವಿಹೀನನಾದ ಹಿಂದುವು, ಹಿಂದುಧರ್ಮದ ಇತರ ಮಹತ್ತ್ವಗಳನ್ನು ಮರೆತಿರುವುದರಲ್ಲಿ ಆಶ್ಚರ್ಯವೇನಿದೆ? ಈಗಿನ ಕಾಲದಲ್ಲಿ ಮಾತ್ರವಲ್ಲ; ಶತಮಾನಗಳಿಂದಲೂ, 'ನಿಜವಾದ ಹಿಂದು ಎಂದರೇನು?' 'ಆರ್ಯಧರ್ಮವೆಂದರೇನು?' ಎಂಬುದನ್ನು ಸರಿಯಾಗಿ ತಿಳಿಯುವ ಪ್ರಯತ್ನವನ್ನೇ ಮಾಡಿರುವುದಿಲ್ಲ. ಎಂದಿನಿಂದ ಈ ಮಹತ್ತ್ವದ ವಿಷಯವನ್ನು ಹಿಂದುವು ಮರೆಯಲಾರಂಭಿಸಿದನೋ, ಅಂದಿನಿಂದಲೇ ಅವನ ಅಧಃಪತನಕ್ಕೆ ಪ್ರಾರಂಭವಾಯಿತು.

"ಮಾನವನು ಮೊದಲು ಪ್ರವೃತ್ತಿಮಾರ್ಗದಲ್ಲಿದ್ದು, ಪ್ರವೃತ್ತ-ಕರ್ಮಗಳನ್ನು ಮಾಡಿ, ಮೂರು ಪುರುಷಾರ್ಥಗಳನ್ನು ಸಾಧಿಸಬೇಕು; ಅನಂತರ ನಾಲ್ಕನೆಯದಾದ ಮೋಕ್ಷಕ್ಕೆ ಯತ್ನಿಸಬೇಕು" ಎಂದು ವೇದಗಳಲ್ಲಿ ಅರ್ಥಾತ್ ಸತ್ಯಜ್ಞಾನ, ವೇದಾಂತ ಶಾಸ್ತ್ರಗಳಲ್ಲಿ ಹೇಳಿದೆ. ನಿಜವಾದ ಸಾಧನೆ ಯಾವುದು? ಬ್ರಹ್ಮಚರ್ಯದಲ್ಲಿ ನಿಜವಾದ ಜ್ಞಾನವನ್ನು ಹೊಂದುವುದು; ಗೃಹಸ್ಥಾಶ್ರಮದಲ್ಲಿ ಉತ್ತಮ ಸಂತಾನದ ಉತ್ಪಾದನೆ ಮಾಡುವುದು (ತಾನು ಎಷ್ಟು ಮಂದಿ ಮಕ್ಕಳನ್ನು ಉತ್ತಮ ರೀತಿಯಿಂದ ಪೋಷಣೆ ಮಾಡಲು ಸಾಧ್ಯವೋ ಅಷ್ಟೇ ಸಂತಾನವನ್ನು ಪಡೆಯಬೇಕೆಂದು ಶಾಸ್ತ್ರದಲ್ಲಿ ಹೇಳಿದೆ); ವಾನಪ್ರಸ್ಥದಲ್ಲಿ ಪಾರಮಾರ್ಥಿಕ ಜ್ಞಾನಕ್ಕಾಗಿ ಯಜ್ಞಮಾಡುವುದು– ಇತರರಿಗೆ ಹಿತವನ್ನುಂಟುಮಾಡುವಂತಹ ಸಾರ್ವಜನಿಕ ಕಾರ್ಯರೂಪದ ಯಜ್ಞಮಾಡುವುದು. ಅನಂತರ ಎಲ್ಲ ವ್ಯವಹಾರಗಳ ನ್ಯಾಸಮಾಡಿ ಸಂನ್ಯಾಸಾಶ್ರಮದಲ್ಲಿದ್ದು, ಪರಮಾತ್ಮನನ್ನು ಧ್ಯಾನಮಾಡುವುದು. ಈ ಧರ್ಮಕ್ಕೆ ವಿರೋಧವಾಗಿ ಆಚರಿಸುವವರು ಕ್ರಮವಾಗಿ ಋಷಿ, ಪಿತೃ, ದೇವತೆಗಳ ಋಣದಿಂದ ಮುಕ್ತರಾಗಲಾರರು; ಅರ್ಥ, ಕಾಮ, ಧರ್ಮಗಳ ಅರ್ಜನೆಯನ್ನು ಮಾಡಲಾರರು. "ಆಜನ್ಮ ಬ್ರಹ್ಮಚಾರಿ ಅಥವಾ ಬಾಲಸಂನ್ಯಾಸಿಗಳಾಗಬೇಕೆನ್ನುವವರು ಪ್ರಾಯಶಃ ಅಧಃಪತನಕ್ಕೆ ಇಳಿಯುವರು. ಅರ್ಥದ ಭಾವನೆಯಿಂದ ಜಪಮಾಡುವುದು ಉತ್ತಮ ಯಜ್ಞ" ಹೀಗೆಂದು **ಡಾ. ಭಗವಾನ್ ದಾಸರು** ಹೇಳಿದ್ದಾರೆ.

'ನವೀನ ಭಕ್ತಿಮಾರ್ಗ'ದ ವಿವೇಚನೆಯನ್ನು ಮಾಡುತ್ತ 'ಮಹಾಭಾರತದ ಮೀಮಾಂಸೆ' ಎಂಬುದರಲ್ಲಿ, ಒಬ್ಬ ಪ್ರಮುಖ ವಿದ್ವಾಂಸರು ಈ ರೀತಿ ಹೇಳಿದ್ದಾರೆ:

"ಹಿಂದೆ ಯಜ್ಞ, ಸಂನ್ಯಾಸ ಅಥವಾ ಯೋಗಮಾರ್ಗಗಳು ಬಹಳ ಮಂದಿಗೆ ಇಲ್ಲದಂತಾದುವು. ಅಂತಹ ಸ್ಥಿತಿಯಲ್ಲಿ 'ಅಜ್ಞಾನಿ ಜನರಿಗೆ ಪರಮಪದದ ಪ್ರಾಪ್ತಿಯು ಸಂಭವವುಂಟೇ, ಇಲ್ಲವೇ?' ಎಂಬ ಪ್ರಶ್ನೆಯುಂಟಾಯಿತು. 'ಅಂತಹವರು ಮೋಕ್ಷಪ್ರಾಪ್ತಿಗೆ ಯೋಗ್ಯರಲ್ಲ,' ಎಂದೇ ಬ್ರಾಹ್ಮಣರ ಮತ್ತು ಕ್ಷತ್ರಿಯರ ಮತವಾಗಿದ್ದಿತು. ಸಾಮಾನ್ಯ ಜನಸಮೂಹದ ಮೇಲೆ ಶ್ರೀಕೃಷ್ಣನ ಅತ್ಯಂತ ಪ್ರೇಮವಿದ್ದಿತು. ಧರ್ಮದೃಷ್ಟಿಯಿಂದ ಶ್ರೀಕೃಷ್ಣನೇ ಅವರ ಉದ್ಧಾರಕ್ಕೆ ಅವತಾರಮಾಡಿದನೆಂದು ಹೇಳಬಹುದು. ಶ್ರೀಕೃಷ್ಣನ ಬಾಲ್ಯವು ಸ್ತ್ರೀಯರಲ್ಲಿ, ವೈಶ್ಯರಲ್ಲಿ, ಮತ್ತು ಶೂದ್ರರಲ್ಲಿಯೇ ಕಳೆಯಿತು. ಅವರು ತನ್ನಲ್ಲಿ ಎಂತಹ

ನಿಸ್ಸೀಮ ಮತ್ತು ನಿಷ್ಕಾಮವಾದ ಪ್ರೇಮವನ್ನಿಟ್ಟಿದ್ದರೆಂಬುದನ್ನು ಶ್ರೀಕೃಷ್ಣನು ಸ್ವತಃ ನೋಡಿದ್ದನು. ಆದುದರಿಂದಲೇ ಶ್ರೀಕೃಷ್ಣನು **'ಪರಮೇಶ್ವರನಲ್ಲಿ ಅಥವಾ ಅವನ ಯಾವುದೇ ಒಂದು ದಿವ್ಯ-ವಿಭೂತಿಯಲ್ಲಿ ನಿರತಿಶಯವಾದ ಪ್ರೇಮವನ್ನಿಟ್ಟಲ್ಲಿ, ಭಕ್ತಿಯಿಂದಿದ್ದಲ್ಲಿ, ಜನರಿಗೆ ಮೋಕ್ಷ ದೊರೆಯುವುದು'** ಎಂಬ ಉದಾತ್ತ ಭಾವನೆಯನ್ನು ಪ್ರತಿಪಾದಿಸಿದನು.

'ಸಂನ್ಯಾಸ ಮತ್ತು ಯಜ್ಞಾದಿಗಳ ವಿನಾ ಮೋಕ್ಷ ದೊರೆಯುವುದೇ ಇಲ್ಲ' ಎಂದು ಹೇಳುವ ವೇದದ ಗುತ್ತಿಗೆಗಾರರಿಗೇ (?) ಈ ಉಪದೇಶವು ಕೊಡಲ್ಪಟ್ಟಿದೆ. 'ಬುದ್ಧಿವಂತರಿಗೆ, ಶಾಸ್ತ್ರಗಳ ಸೂಕ್ಷ್ಮ ಜ್ಞಾನವುಳ್ಳವರಿಗೆ ಮಾತ್ರ ಮೋಕ್ಷದೊರೆಯುವುದು' ಎಂದೇ ಅವರ ನಂಬಿಗೆ (ಈಗಲೂ ಅದೇ ರೀತಿ ಇದೆ). ಈಗ ಈಸಾಯಿಗಳು ಈಸಾಯಿಗಳಾದ ಹೊರತು, ಮುಸಲ್ಮಾನರು, ಮುಸಲ್ಮಾನರಾದ ವಿನಾ ಯಾರಿಗೂ ಮೋಕ್ಷದೊರೆಯುವುದಿಲ್ಲ-ವೆಂದು ಹೇಳುತ್ತಿರುವಂತೆ, ಬ್ರಾಹ್ಮಣರಿಗೆ ಮಾತ್ರ (ಅದೂ ಸಂನ್ಯಾಸಗ್ರಹಣ ಮಾಡಿದನಂತರವೇ) ಮೋಕ್ಷದೊರೆಯುವು-ದೆಂಬ ಭಾವನೆಯು ಬಲವಾಗಿ ಬೇರೂರಿತು. ಕರ್ಮಯೋಗಿ ಶ್ರೀಕೃಷ್ಣನು ಗೀತೆಯಲ್ಲಿ, 'ಮನುಷ್ಯನು ಮೋಕ್ಷವನ್ನು ಹೊಂದಲು ವೇದದ ಯಜ್ಞ-ಯಾಗ, ವೇದಾಂತದ ಸಂನ್ಯಾಸ, ಸಾಂಖ್ಯಮಾರ್ಗದ ಜ್ಞಾನ, ಯೋಗದ ಚಿತ್ತವೃತ್ತಿನಿರೋಧ ಅಥವಾ ಭಕ್ತಿಮಾರ್ಗದ ನಾಮಜಪ ಮತ್ತು ಭಜನೆ ಇವುಗಳಲ್ಲಿ ಯಾವುದನ್ನೇ ಸ್ವೀಕರಿಸಲಿ, ಅವನು ಕರ್ಮಮಾಡಲೇಬೇಕು!' ಎಂದು ಸ್ಪಷ್ಟವಾಗಿ ಹೇಳಿದ್ದಾನೆ. ಇಷ್ಟಾದರೂ ಆತನ ಅನು-ಯಾಯಿಗಳು (?) ಅದೆಲ್ಲವನ್ನೂ ಮರೆಸಿ, ಈಗ ಕೇವಲ ನಾಮ-ಸ್ಮರಣೆಯಿಂದಲೇ—ಅದೂ ಕೂಡ ಹಾಸ್ಯಕ್ಕೋ, ರಾಗಾಲಾಪ-ನೆಗೋ—ಸಮಸ್ತ ಪಾಪಗಳೂ ನಾಶವಾಗಿ, ಮೋಕ್ಷದೊರೆಯುವು-ದೆಂದು ಹೇಳುತ್ತಲಿರುವರು. ಇದರಿಂದ, ಇಂತಹ ದಾಂಭಿಕರಿಂದ ಧೂರ್ತರಿಂದ ಪಾಖಂಡರಿಂದ ಹಿಂದುಧರ್ಮಕ್ಕೆ ಹೇಳಲಾರದಷ್ಟು ಹಾನಿಯುಂಟಾಗಿದೆ.

ಶ್ರೀಕೃಷ್ಣನ ಗೀತೋಪದೇಶದಿಂದಲೇ ಭಕ್ತಿಮಾರ್ಗದ ಅಂಕುರಾರ್ಪಣೆಯಾಗಿದ್ದರೂ, ಆ ಉಪದೇಶಕ್ಕೆ ವಿಶಾಲವಾದ ರೂಪು ದೊರೆತುದು ೧೧ನೆಯ ಶತಮಾನದ ನಂತರವೇ ಎಂದು ಗೊತ್ತಾಗುತ್ತದೆ. ರಾವ್‌ಬಹದ್ದೂರ್ ಮಹಾಮಹೋಪಾಧ್ಯಾಯ ಪಂಡಿತ ಗೌರೀಶಂಕರಜೀಯವರು, ತಮ್ಮ "ಮಧ್ಯಕಾಲೀನ ಭಾರತೀಯ ಸಂಸ್ಕೃತಿ"ಯಲ್ಲಿ ಈ ರೀತಿ ಹೇಳಿದ್ದಾರೆ :

"ಶಂಕರಾಚಾರ್ಯರ ಅದ್ವೈತವಾದದ ಪ್ರಚಾರದಿಂದ ಭಕ್ತಿ-ಮಾರ್ಗಕ್ಕೆ ಬಲವಾದ ಧಕ್ಕೆತಗುಲಿತು. 'ಆತ್ಮ ಮತ್ತು ಬ್ರಹ್ಮನಲ್ಲಿ ಐಕ್ಯತೆಯುಂಟಾದನಂತರ, ಯಾರಿಗೇ ಆಗಲಿ ಭಕ್ತಿಯ ಆಗತ್ಯ-ವಿರುವುದಿಲ್ಲ' ಎಂಬುದು ಅವರ ಮತ. ಆದುದರಿಂದಲೇ ೧೦೧೭ರಲ್ಲಿ ಜನ್ಮಿಸಿದ ರಾಮಾನುಜರು ಭಕ್ತಿಮಾರ್ಗವನ್ನು ಪ್ರಚಾರ-ಮಾಡಲು, ಅದ್ವೈತವಾದವನ್ನು ಖಂಡಿಸಲಾರಂಭಿಸಿದರು. ೧೧ನೆಯ ಶತಮಾನ ಮತ್ತು ಅದಕ್ಕೆ ಹಿಂದಿನ ವೈಷ್ಣವ ಆಚಾರ್ಯರ ಮುಖ್ಯೋದ್ದೇಶವು, ಅದ್ವೈತವಾದವನ್ನು ದೂರಮಾಡಿ ಭಕ್ತಿಸಂಪ್ರ-ದಾಯವನ್ನು ಸ್ಥಾಪಿಸುವುದೇ ಆಗಿದ್ದಿತು. ಆನರೆ ೧೧೯೮ರಲ್ಲಿ ಜನ್ಮವೆತ್ತಿದ ಮಧ್ವಾಚಾರ್ಯರು ಸೀತಾ-ರಾಮರ ಮೂರ್ತಿಗಳ ಪೂಜೆ ಮತ್ತು ಭಕ್ತಿಗಳ ಬಗ್ಗೆ ಒತ್ತಾಯಪಡಿಸಿದರು.......ರಾಮನು ವಿಷ್ಣುವಿನ ಅವತಾರವೇ ಆಗಿದ್ದರೂ, ೧೦ನೆಯ ಶತಾಬ್ದಿಯ-ವರೆಗೆ ಶ್ರೀರಾಮನ ಮಂದಿರಗಳಾಗಲಿ, ಮೂರ್ತಿಗಳಾಗಲಿ ಇಲ್ಲದಿರುವುದು ಆಶ್ಚರ್ಯಕರವಾದ ವಿಷಯ. ಆದುದರಿಂದ ಶ್ರೀಕೃಷ್ಣನಿಗೆ ಸಮಾನವಾಗಿ ಶ್ರೀರಾಮನಲ್ಲಿ— ಪ್ರಾಚೀನಕಾಲದಲ್ಲಿ— ಭಕ್ತಿ ಇದ್ದಿತೋ ಇಲ್ಲವೋ ಎಂಬುದು ಅನುಮಾನಾಸ್ಪದವಾಗಿದೆ."

ಶ್ರೀರಾಮಾನುಜಾಚಾರ್ಯರ ನಂತರವಂತೂ ಸಗುಣ ಮತ್ತು ನಿರ್ಗುಣ ಭಕ್ತಿಮಾರ್ಗದ ಉಪದೇಶಕರ ಸಂಖ್ಯೆಯು ಮಿತಿ-ಮೀರಿತು. ಆಗಿನಿಂದ ಜ್ಞಾನ ಮತ್ತು ಕರ್ಮಗಳು ಗೌಣವಾಗಿ, ಈಶ್ವರಪ್ರಾಪ್ತಿಯ ಏಕಮಾತ್ರ ಸಾಧನೆಯು ಕೇವಲ ಭಕ್ತಿಯೊಂದೇ ಆಗಿರದೆ, ನಾಮಜಪವೂ ಸಹ ಅದರ ಸಾಧನೆಯಾಗಿದೆ. ೧೪ನೆಯ ಶತಮಾನದಲ್ಲಿ ಶ್ರೀರಾಮಾನಂದ ಸ್ವಾಮಿ ಮತ್ತು ಅವರ ಶಿಷ್ಯರಾದ ಕಬೀರ್, ರೈದಾಸ್ ಮುಂತಾದವರು ಆಗಿ, ಭಕ್ತಿಸಾಹಿತ್ಯದ ನಿರ್ಮಾಣವಾಯಿತು. ಸುಪ್ರಸಿದ್ಧ ಕವಿಗಳಾದ ಸೂರ್ ಮತ್ತು ತುಲಸೀದಾಸರೂ ಇದೇ ಸಂಪ್ರದಾಯದ ಅನುಯಾಯಿಗಳೇ ಆಗಿದ್ದರು. ೧೬ನೆಯ ಶತಮಾನದಲ್ಲಿ ಶ್ರೀವಲ್ಲಭಾಚಾರ್ಯರು ಬಂದು ರಾಧಾಕೃಷ್ಣರ ಕ್ರೀಡೆ ಮತ್ತು ಪ್ರೇಮಪೂರ್ಣ ಭಕ್ತಿಯ ಉಪದೇಶ ಮಾಡಿ, 'ತಪಸ್ಯಾದಿಗಳಿಂದ ಶರೀರಕ್ಕೆ ತೊಂದರೆಯನ್ನು ಕೊಟ್ಟು ಪರಮಾತ್ಮ ಪ್ರಾಪ್ತಿಯನ್ನು ಮಾಡಿಕೊಳ್ಳುವುದು ನಿರರ್ಥಕ' ಎಂದು ಬೋಧಿಸಿದರು. ೧೪೮೬ರಲ್ಲಿ ಶ್ರೀಚೈತನ್ಯ ದೇವರು ಜನ್ಮಿಸಿದರು. ಅವರ ಸಂಪ್ರದಾಯದಲ್ಲಿ ನಾಮಸಂಕೀರ್ತನೆಯೇ ಪ್ರಧಾನ ಕರ್ತವ್ಯವಾಗಿದೆ. ಕಾಲಾಂತರದಲ್ಲಿ ಇವೆಲ್ಲ ಸಂಪ್ರದಾಯಗಳಲ್ಲಿಯೂ ಅನೇಕ ಉಪಸಂಪ್ರದಾಯಗಳುಂಟಾದುವು.

ಇದೇ ಕಾಲದಲ್ಲೇ ಪಂಜಾಬಿನಲ್ಲಿ ಮಹಾತ್ಮಾ ನಾನಕರು ಹುಟ್ಟಿ, ಸಿಖ್ ಸಂಪ್ರದಾಯವನ್ನು ಸ್ಥಾಪಿಸಿದರು. ಈ ರೀತಿ ಭಾರತದ ಎಲ್ಲ ಪ್ರಾಂತ್ಯಗಳಲ್ಲಿಯೂ ಧರ್ಮಬೋಧಕರು ಜನ್ಮಿಸಿ, ಹಿಂದುಗಳನ್ನು ಒಬ್ಬರೊಡನೊಬ್ಬರು ಸೇರದಂತೆ ಬೇರ್ಪಡಿಸಿ ಬಿಟ್ಟರು! ಈಗ ಹಿಂದೂಧರ್ಮದಲ್ಲಿ ನಾನಾ ಶಾಖೆಗಳು, ಸಂಪ್ರ-ದಾಯಗಳು, ಪಂಥಗಳು ಇದ್ದು, ಅವುಗಳ ಸಂಖ್ಯೆಯು ಎಣಿಸ-ಲಾರದಷ್ಟಿದೆ. ಏಕೆಂದರೆ ಅನೇಕ ಸಂಪ್ರದಾಯಗಳ ಪ್ರಚಾರವು ಅವುಗಳ ಪ್ರವರ್ತಕರ ಲೀಲಾಸ್ಥಾನಗಳಲ್ಲಿಯೇ ಪರಿಮಿತವಾಗಿದ್ದಿತು! ಜಗತ್ತಿನಲ್ಲಿ ಈಗ ಸುಮಾರು ೧ ಲಕ್ಷದಷ್ಟು ಮತ-ಮತಾಂತರಗಳು ಪ್ರಚಲಿತವಾಗಿವೆಯೆಂದೂ, ಭಾರತವೊಂದರಲ್ಲೇ ಅನೇಕ ಸಾವಿರ ಮತಗಳಿವೆ ಎಂದೂ ಭಾವಿಸಲಾಗಿದೆ. ೧೭ನೆಯ ಶತಮಾನದನಂತರ ನಮ್ಮ ದೇಶದಲ್ಲಿ ಇಷ್ಟು ಮತ-ಮತಾಂತರಗಳ

೩೦ ವರ್ಷಗಳಿಂದ ಅನುಭವಪಟ್ಟ
ಕರ್ಕೆ ಮತ್ತು ಕಂಪನಿ
ಇವರ
ಜ್ವರದ ಗುಳಿಗೆ
ಬಾಟ್ಲಿಗೆ ೧ ರೂ.
ಎಲ್ಲ ಪ್ರಕಾರದ ಜ್ವರಗಳಮೇಲೆ ದಿವ್ಯ ಔಷಧ!
ವಿಳಾಸ:— ಗಣೇಶ ರಾಮಚಂದ್ರ ಕರ್ಕೆ ಮತ್ತು ಕಂಪನಿ,
ಗಿರಗಾಂವ, ಮುಂಬಯಿ.

ಉದ್ಭವ ಮತ್ತು ಪ್ರಚಾರವಾಗಲು ಕಾರಣವೇನೆಂಬುದು ಒಂದು ಐತಿಹಾಸಿಕ ಸಂಶೋಧನೆಗೆ ಸೇರಿದ ವಿಷಯವಾಗಿದೆ. 'ಹಿಂದೂ ಭಾರತದ ಉತ್ಕರ್ಷ' ಎಂಬ ಉದ್ಗ್ರಂಥದಲ್ಲಿ ಈ ರೀತಿ ಇದೆ:—

"ಇದುವರೆಗಿನ ಭಾರತದ ಇತಿಹಾಸದಲ್ಲಿ, ಕ್ರಿ. ಶ. ೮೦೦ ರಿಂದ ೧೧೦೦ರ ವರೆಗಿನ ೩ ಶತಮಾನಗಳಷ್ಟು ವೈಭವಸಂಪನ್ನವೂ, ಸಮೃದ್ಧವೂ ಮತ್ತು ಸುಖದಿಂದ ಕೂಡಿದ ಕಾಲವು ಬೇರೆ ಯಾವ ಶತಮಾನದಲ್ಲಿಯೂ ಕಾಣಬರುವುದಿಲ್ಲ. ಈ ಶತಮಾನಗಳಲ್ಲಿ ಭಾರತವು ಪೂರ್ಣ ಸ್ವತಂತ್ರವಾಗಿದ್ದಿತು. ಧಾರ್ಮಿಕ ಪರಿಸ್ಥಿತಿಯು ನಿರ್ದೋಷವಾಗಿದ್ದಿತು. ಸಮಗ್ರದೇಶದಲ್ಲಿ ಒಂದೇ ಧರ್ಮವು ಪ್ರಚಲಿತವಾಗಿದ್ದುದರಿಂದ, ಜನತೆಯಲ್ಲಿ ವೈಮನಸ್ಯವಾಗಲಿ, ಅನೈಕಮತ್ಯವಾಗಲಿ ಇರಲಿಲ್ಲ. ಬೇರೆ ಬೇರೆ ಜಾತಿಗಳಲ್ಲಿ ಭೇದ-ಭಾವಗಳಿರಲಿಲ್ಲವಾದುದರಿಂದ, ವಿರೋಧಕ್ಕೆ ಅವಕಾಶವೇ ಇರ-ಲಿಲ್ಲ. ಸೈನ್ಯದ ಉತ್ತಮ ವ್ಯವಸ್ಥೆ ಇದ್ದಿತು, ಆದುದರಿಂದ ವಿದೇಶೀ ಆಕ್ರಮಣದ ಭಯವಿರಲಿಲ್ಲ. ಇಂತಹ ಸಮೃದ್ಧಿ ಮತ್ತು ಶಾಂತಿಯ ಸಮಯವು ಪ್ರಾಯಶಃ ವೇದಗಳ ಕಾಲದಲ್ಲಿ ಅಥವಾ ಬುದ್ಧನಿಗೆ ಮೊದಲು ಇದ್ದಿತೋ ಏನೋ! ಆದರೆ ಬೌದ್ಧಕಾಲದಿಂದ ಇದುವರೆಗೆ ಇಂತಹ ಸುವರ್ಣಸಮಯವು ಇದ್ದಂತೆ ತೋರುವುದಿಲ್ಲ. ಆಗಿನ ಕಾಲದ ಅತ್ಯಂತ ಮಹತ್ತ್ವದ ವಿಷಯವೇನೆಂದರೆ: ದೇಶಾದ್ಯಂತವೂ ಒಂದೇ ಧರ್ಮದ ಪ್ರಭಾವವೇ ಇದ್ದಿತು. ಸಾಂಪ್ರದಾಯಿಕ ಪಂಥಗಳು, ಮತಭೇದ, ಜಾತಿಕಲಹಗಳಿರಲಿಲ್ಲ. ಶಂಕರಾಚಾರ್ಯರ ಅದ್ವೈತಮತವು ಸರ್ವಮಾನ್ಯವಾಗಿದ್ದಿತು. ಮತ್ತು ಸಮಾಜದಲ್ಲಿ ಶಿವ, ವಿಷ್ಣು, ಭಗವತಿ, ಆದಿತ್ಯ ಅಥವಾ ಗಣಪತಿ ಮುಂತಾದುವುಗಳ ಉಪಾಸನೆಯು ಪ್ರಚಲಿತವಾಗಿದ್ದಿತು. ಆದರೂ ಬೇರೆ ಬೇರೆ ದೇವತೆಗಳ ಉಪಾಸಕರಲ್ಲಿ ದ್ವೇಷಬುದ್ಧಿಯಾಗಲಿ, ಉಪಾಸ್ಯ ದೇವರ ವಿಷಯದಲ್ಲಿ ಹಟ ಅಥವಾ ದುರಾಗ್ರಹವಾಗಲಿ ಉತ್ಪನ್ನವಾಗಿರಲಿಲ್ಲ!"

ಆದರೆ ಇದೆಲ್ಲವೂ ನಿಜವಲ್ಲ; ಏಕೆಂದರೆ, ಶ್ರೀಶಂಕರಾ-ಚಾರ್ಯರು ಬೌದ್ಧ ಧರ್ಮವನ್ನು ಭಾರತದಿಂದ ಹೊರಗೋಡಿಸಿದ್ದರು. ಜೊತೆಗೆ ಜನರಲ್ಲಿ ಜೈನಧರ್ಮದ ಪ್ರಭಾವವು ಕಡಿಮೆಯಾಗುತ್ತಿತ್ತು; ಆದರೂ ಅದು ಪೂರ್ತಿಯಾಗಿ ಅಳಿದು ಹೋಗಿರಲಿಲ್ಲ. ಆದರೆ ಒಂದು ಮಾತು ಸತ್ಯವಾದುದು. ಏನೆಂದರೆ: ವೈದಿಕಧರ್ಮದ ಶಂಕರಾಚಾರ್ಯರಂತಹ ಸಮರ್ಥ ವಿದ್ವಾಂಸರ ಮೂಲಕ ನಡೆದ ಪ್ರಚಾರವು ಆಗಿನ ಕಾಲದ ಜನರಲ್ಲಿ ಹೊಸ ಜೀವನವನ್ನುಂಟು-ಮಾಡಿತ್ತು. ಹೇಗೆಂದರೆ ಅದಕ್ಕೆ ಹಿಂದೆ ಬೌದ್ಧ ಮತ್ತು ಜೈನ ಧರ್ಮಗಳ ಪ್ರಚಾರ ಮತ್ತು ಶಕ್ತಿಶಾಲಿಗಳಾದ ಸಮ್ರಾಟರ ಧಾರ್ಮಿಕ ಪಕ್ಷಪಾತಗಳ ಕಾರಣ ಇವುಗಳಿಂದ ಜನರಲ್ಲಿ ಜೀವನವು ಲುಪ್ತಪ್ರಾಯವಾಗಿದ್ದಿತು. ಆದರೆ ಈ ಧಾರ್ಮಿಕ ಐಕ್ಯತೆಯು ಬಹಳ ಕಾಲ ನಿಲ್ಲಲಿಲ್ಲ. ಅದು ಎಷ್ಟು ಬೇಗ ಸ್ಥಾಪಿತವಾಗಿದ್ದಿತೋ, ಅಷ್ಟೇ ಬೇಗ ನಾಶವೂ ಆಯಿತು. ಇದರ ಪರಿಣಾಮವಾಗಿ, ದೇಶದ ಸಮೃದ್ಧಿ, ಶಾಂತಿ, ಮತ್ತು ಏಕರಾಷ್ಟ್ರಭಾವನೆಯು ನಾಶವಾಗಿ, ಈಗ ನಾವು ನೋಡುತ್ತಿರುವ ಸ್ಥಿತಿಯುಂಟಾಯಿತು.

ಈ ಧಾರ್ಮಿಕ ಅನೈಕ್ಯತೆ ಮತ್ತು ಪಂಥ- ಉಪಪಂಥಗಳ ಆವಿ-ರ್ಭಾವವು ನಮ್ಮ ಬುದ್ಧಿಯನ್ನು ಭ್ರಮೆಗೀಡುಮಾಡಿತು. ನಾವು ಪರಾಧೀನರಾಗಿ, 'ಕಲಿಯುಗದಲ್ಲಿ ಭಾರತವರ್ಷವು ಮ್ಲೇಚ್ಛರ ಅಧೀನವಾಗುವುದು ಅನಿವಾರ್ಯ' ಎಂಬ ಕಿಂವದಂತಿಯಲ್ಲಿ ನಂಬಿಕೆ ಇಟ್ಟೆವು. 'ರಾಜನು ಯಾರೇ ಆಗಲಿ, ಈಶ್ವರಾಂಶನು. ಆದುದ-ರಿಂದ ಅವನನ್ನು ಪೂಜಿಸಿ ಪರಲೋಕಸಾಧನೆಗೆ ಪ್ರಯತ್ನಿಸು-ವುದೇ ಮನುಷ್ಯನಿಗೆ ಸರ್ವಶ್ರೇಯಸ್ಕರವು. ಇಹಲೋಕಕ್ಕಿಂತ ಪರಲೋಕದ ಸಾಧನೆಯೇ ಆವಶ್ಯಕವು' ಎಂಬಭಾವನೆಗಳುಂಟಾಗಿ, ಅದಕ್ಕೆ ಸಂಬಂಧಪಟ್ಟ ಸಾಹಿತ್ಯವೂ ಸಹ ನಿರ್ಮಿತವಾಯಿತು. ನಮ್ಮ ಪಂಡಿತರ ಬುದ್ಧಿಯು ಭಕ್ತಿಸಾಹಿತ್ಯದ ಕಡೆಗೇ ಹೊರಳಿತು. ಅವರು ಅಲಂಕಾರ ಶಾಸ್ತ್ರವನ್ನೇ ತಮ್ಮ ಅಸ್ತ್ರವನ್ನಾಗಿ ಮಾಡಿ-ಕೊಂಡರು. ರಾಜರು ಸಹ ಅದಕ್ಕೆ ಪ್ರೋತ್ಸಾಹವನ್ನಿತ್ತರು. ರಾಜರ ಸಂಪತ್ತು ಮತ್ತು ದೃಷ್ಟಿಯು ಸೇನಾನಾಯಕರಿಗಿಂತ ರಾಜಕವಿಗಳ ಕಡೆಗೆಯೆ ಇತ್ತು. ರಣಭೂಮಿಯನ್ನು ಉಪೇಕ್ಷಿಸಿ, ರಂಗಭೂಮಿಯನ್ನು ಅಪೇಕ್ಷಿಸಿದರು. ನಿಯಮನಿಷ್ಠರಾದ ಬ್ರಾಹ್ಮಣರಿಗೆ ಕೊಡಲ್ಪಟ್ಟ ದಾನಪತ್ರಗಳಲ್ಲಿ ಸಹ ಶೃಂಗಾರರಸದ ಶ್ಲೋಕಗಳಿರುತ್ತಿದ್ದುವು. ಸಾಹಿತಿಗಳು ಶೃಂಗಾರರಸಕ್ಕೆ ಶ್ರೀಕೃಷ್ಣ-ನನ್ನು ಪ್ರಧಾನಮಾಡಿ, ಗೋಪಿಗಳೊಡನೆ ನಡೆಯಿಸಿದ ಲೀಲೆಗಳ ವರ್ಣನೆಯನ್ನು ಮಾಡಿದರು. ವಿದ್ವಾಂಸರು ಅದಕ್ಕೆ 'ಮಧುರ-ರಸ' 'ಶೃಂಗಾರರಸ' ಎಂಬ ಹೆಸರನ್ನು ಕೊಟ್ಟರು—ಇವೆರಡು ರಸಗಳಲ್ಲಿಯೂ ಅದ್ಭುತಸಾಮ್ಯವಿದ್ದರೂ, ವಿದ್ವಾಂಸರು ಮಾತ್ರವೇ ಮಧುರ ಮತ್ತು ಶೃಂಗಾರರಸಗಳ ವಿವೇಚನೆಯನ್ನು ಮಾಡಬಲ್ಲರು. ಆದರೆ ಈ ಜಗತ್ತಿನಲ್ಲಿ ವಿವೇಕಶೀಲರಾದ ವಿದ್ವಾಂಸರೆಷ್ಟು ಮಂದಿ ಇದ್ದಾರೆ? ನಿಜವಾಗಿಯೂ, ಭಕ್ತಿ-ಮಾರ್ಗವು ಪ್ರಾಕೃತ ಶೃಂಗಾರರಸಕ್ಕೆ ಸಮಾನವಾದ ಮಧುರರಸ ಪ್ರಧಾನವಾದ ಸಾಹಿತ್ಯವನ್ನು ರಚಿಸಿ, ಹಿಂದುಗಳಾದವರನ್ನು ಅಕರ್ಮಣ್ಯರನ್ನಾಗಿ ಮಾಡಿತು. ಇದೇ ನಮ್ಮ ಇದುವರೆಗಿನ ಇತಿ-ಹಾಸ. ನಮ್ಮ ವಿಚಾರಧಾರೆಯು ಮುಂದೆಯಾದರೂ ಬದಲಾ-ವಣೆಯಾಗುವುದೇ? ಇದೇ ಈಗ ನಮ್ಮ ಮುಂದಿರುವ ಪ್ರಶ್ನೆ?

ಮಳೆ ಬೀಳಲು:

ಶ್ರೀ. ಎಚ್. ಎಂ. ನಾರಾಯಣಭಟ್ಟ, ಕುಂಬಳೆ

ಹಿಂದೆ ಬತ್ತಿದ ಕೊಳವು ಇಂದು ತಿಳಿನೀರಿನಿಂ
ಸೌಂದರ್ಯದೆಡೆಯಂತೆ ರಂಜಿಸುವುದು!
ಕಂದಿ ಬರಲಾಗಿದ್ದ ಅಂದವಳಿದಾ ಗಿಡವು
ಚೆಂದಳಿರ ಗೊಂಚಲಿಂ ಮಾಲುತಿಹುದು! ೧

ಮನಬಂದವೊಲು ಪಾಡಿ ದನಿಯಡಗಿದಾ ವನದಿ
ದಿನಗಳೆಯುತಿದ್ದ ಧರೆಯೊಲಿಯುವಂತೆ;
ಹನಿಬೀಳೆ ಮೋಕ್ಷದಿಂ ಇನಿಗೊರಳ ಜಯಿಸಿದಾ
ಬನವಕ್ಕಿಗಳು ಮೌನತಳೆದುವಂತೆ! ೨

ಬಿಸಿಲ ಬಲು ಬೇಗೆಯಲಿ ಬಸವಳಿದು ಬೆಂಡಾಗಿ
ಮಸಣದಂದದಿ ಕಾಯುತಿದ್ದ ನೆಲವು,
ಕುಶಲದಿಂ ಸಿಂಗರಿಸಿ ಪಸುರುಡೆಯನುಟ್ಟೀಗ
ಪೊಸಬೆಡಗನಾಂತಿಹಳು, ತಿಳಿಯೆ ಗೆಲವು! ೩

ಕಾಳಿಮದ ಕೂಪದಲಿ ಬೀಳುತೇಳುತಲಿದ್ದ
ಕಾಳಕನ್ನಿಕೆಯಾಗಿ ಬಾಳ್ದದೇವಿ!
ಹಾಲಿನಿನಿಗಡಲಿನಲಿ ತೇಲುತ್ತ ಸಾಗಿಹಳು—
ಭೂಲಲನೆ— ನೋಡಬೋ ಹರ್ಷದಿಂದೆ! ೪

ತಾಯಿನಾಡ ಹಂಬಲು

ಶ್ರೀ. ಲಕ್ಷ್ಮಣ ವಿ. ಜೋಶಿ, ಮುಂಬಯಿ

ಕಡಲುಕ್ಕಲು ದಡಮೀರುತ ತೆರೆಬಂದರು ಮೇಗೆ,
ಎಷೆಯುಕ್ಕದೆ ಕಾಳ್ದೆಗೆಯದೆ ಗಿರಿಶಿಖರದ ಹಾಗೆ,
ಜಗವುಲ್ಲರು ಜನತೆಲ್ಲರು ಮೇಲ್ ಬಂದರು ಸಾಗಿ,
ಏನೆಂದರು ನೀ ನಿಂದಿರು ಬಲಗುಂದದೆ ಬೇಗಿ! ೧

ಎಣ್‌ದೆಸೆಗಳ ತೋಳ್‌ಬಲಗಳು ಗೋಣ್‌ಮುರಿಯಲು ಬಂದು,
ನಿನ್ನಿರಿಯಲು ಆ ಕಾಲನು ಕರವಾಳವ ತರಲು!
ಗೋಣೆಳುಹದೆ ಎದೆಯಳುಕದೆ ಬೆನ್‌ದೋರದೆ ನಿಲ್ಲು!
ಸತ್ಯಕೆ ಸ್ವಾತಂತ್ರ್ಯಕೆ ತಾಯ್‌ನಾಡಿಗೆ ಸಿಲ್ಲು! ೨

ಮೊಳಮೂರಿಹ ತೆಳುಚರ್ಮದ ಹುಲುಜೀಲವ ಚೆಲ್ಲು!
ತಾಯೊಲವಿಗೆ ತಾ ಬಾರದ ಈ ಕಾಯವು ಹುಲ್ಲು!
ಎದೆತಂತಿಯನಾವಾಗಲು ಮಿಡಿಟಲಿ ಈ ಸೊಲ್ಲು!
ಬಳಜೋತಿಯ ಎಳಲತೆ ಕುಡಿಬಿಡುವುದು ಎಲ್ಲೆಲ್ಲು! ೩

ಮುಂಬೆಳಗಿನ ಹೊಂಬೆಳಕಿನ ಚೆಂಬಾನಿಗೆ ಏರು!
ಸ್ಥಿರಚಿತ್ತದ ಮೇಲ್ಮೊತ್ತದಿ ಮೊಗವೆತ್ತುತ ತೋರು!
ಸ್ವಚ್ಛಂದದ ಸಂಗೀತದಿ ಸ್ವಾತಂತ್ರ್ಯವ ಸಾರು!
ಸ್ವಾತಂತ್ರ್ಯದ ಆನಂದದ ಬಾನಂಚಿಗೆ ಏರು!! ೪

ಕೌತುಕದ ಕನ್ನೆಗೆ:—

'ಗೀತಾಪ್ರಿಯ'

ಕೌತುಕದ ಕನ್ನೆ ನೀನೇತಕೀ ಪರಿಯೆನ್ನ
ನಿಡುನೋಟ ನಿಲ್ಲಿಸಿ ನೋಡುತಿಹೆ?
ನೋಟದೊಡನೆ ಎನ್ನಂತರಂಗವ ಪೊಕ್ಕು
ಮನದ ಕಿವಿಯೊಳೇನ ಹೇಳುತಿಹೆ? ೧

ಈಸು ದಿನಗಳ ವರೆಗು ವಿಕಾಸಲಿರಿಸಿದ ನನ್ನ
ಮನದ ಮಂದಾರವ ಮೂಸುತಿಹೆ!
ಅರೆಯರಳಿದ ಆತ್ಮದರವಿಂದ-ಮಕರಂದ
ನನಗೂ ಅರಿಯದಂತೆ ಹೀರುತಿಹೆ! ೨

ಮೋಹಿನಿ ರೂಪವ ತಾಳ್ದ ಮೋಹಕ ಬಾಲೆ,
ಏತಕೆ ನೀ ಮಂತ್ರ ಮಾಡುತಿಹೆ?
ಕಣ್ಣಿಗೆ ಕಾಣದ ಕಣ್ಣೆಕ್ಕೆಗಳ ನೀಡಿ
ಏನೆಂದಭಯವ ಬೇಡುತಿಹೆ? ೩

ಪಾರಿತೋಷಕದ ಪದಕ

ಶ್ರೀ. ವಿ. ಜಿ. ಭಟ್ಟ, ಕಡತೋಕಾ

ಅಂತು, ಬಂತಿಂದು ಈ ವರುಷದಾ ಕೊನೆಯು,
ಸಿಗಲಿಹುದು ಬಲುಹರುಷ, ನಮಗೆ ಫಲಗೊನೆಯು!
ಹರಿಸಿದವರಿಗೆ ವರುಷವೆಲ್ಲ ಬೆವರುದಕ—
ಗುರು ಕೊಡುವ ಹರಕೆ ಮೇಣ್ ಬೆಳ್ಳಿಯಾ ಪದಕ!
ನೋಡು, ಜಯಶಾಲಿಗಳು ಹೊಡೆಯುವರು ಕೇಕೆ!
ಬಾಡಿಹುದು ನಿನ್ನಮೊಗ, ದುಃಖಿಸುವೆಯೇಕೆ?
ಸಿಗಲಿಲ್ಲವೇಕೆ ಸಖ ನಿನಗೆ ಬಹುಮಾನ?
ಅಲಸಿಗನೆ, ತಿಳಿದಿರುವೆಯೇನದನು ದಾನ?

*　　　*　　　*

ಈ ವಿಶ್ವಶಾಲೆಯಲಿ—ಮನುಜ, ಮುನ್ನುಗ್ಗು!
ದೇವ ನೀಡುವ ಪದಕ,— ಸಗ್ಗದಾಹುಗ್ಗು!
ಅಲಸಿಗಗೆ ಫಲವೆಲ್ಲಿ? ಅವನೆಲ್ಲಿ ಮಾನ್ಯ?
ನ್ಯಾಯವಿರೆ ದೇವನಲಿ, ಪರದಿ ಸ್ಥಳ ಶೂನ್ಯ!

ಕಿಂಗ್ ಎಲಿಫಂಟ್

ಶ್ರೀ. 'ಕನ್ನಡ ಕುವರ' ಮಂಗಳೂರು

★

ಇದೊಂದು ಸತ್ಯಕಥೆಯಾದರೂ ಸಾಹಿತ್ಯದ ಒಪ್ಪನ್ನು ಕೊಟ್ಟಿದ್ದಾಗಿದೆ. ಕಥಾನಾಯಕರಾದ ಅಂಬ್ಲಿ ನರಸಿಂಹಭಟ್ಟರು ಕನ್ನಡನಾಡಿನಲ್ಲಿ ಬದುಕಿ ಬಾಳಿದ ಬೇಟೆಯ ಬಂಟರು. ಇವರ ಭಾವಚಿತ್ರ ಹಿಂದೊಮ್ಮೆ 'ಹಿಂದೂ' ಪತ್ರಿಕೆಯಲ್ಲಿ ಅಚ್ಚಾಗಿದೆಯಂತೆ!

★

ಸಾಯಂಕಾಲವಾಗುತ್ತಾ ಬಂದಿತು. ಬೆಳ್ಳಗೆ ಹೊಳೆಯುತ್ತಿದ್ದ ಸೂರ್ಯನು ಮುಗಿಲ ನಡುವಿನಿಂದ ಕೆಂಗದಿರನ್ನು ಕಳುಹಿಸಿದನು. ಕಾಸಿದ ಕಬ್ಬಿಣವು ಮೊದಲು ಬಿಳುಪಾಗಿದ್ದು, ತಣಿಯುತ್ತಾ ಬಂದಂತೆ ಕ್ರಮವಾಗಿ ಕೆಂಪು—ಕಪ್ಪು ಆಗುವಂತೆ, ಸೂರ್ಯನೂ ಬೆಳ್ಳಗಿದ್ದವನು ಕೆಂಪಾಗಿದ್ದವನು ಕಪ್ಪಾದನು. ಭೀಕರ ಅರಣ್ಯಾವೃತವಾಗಿರುವ ಸಂಪಾಜೆ ಗ್ರಾಮದಲ್ಲಿ ಸ್ಮಶಾನ ಭೀಕರತೆಯು ತಾಂಡವವಾಡಹತ್ತಿತು. ಹಕ್ಕಿಗಳ "ಚೀರ್" ಎಂಬ ಶಬ್ದವು ಮೊದಲು ಗಾಂಭೀರ್ಯವನ್ನೂ ಅನಂತರ ಭಯವನ್ನೂ ಹುಟ್ಟಿಸುತ್ತಿದ್ದವು. ಶರತ್ಸಮಯವಾದುದರಿಂದ, ಅರಣ್ಯವು ಬಹಳ ದಟ್ಟವಾಗಿಯೂ, ಪ್ರಕೃತಿಯು ಗಂಭೀರವಾಗಿಯೂ, ಆಕಾಶವು ಸಂಪೂರ್ಣ ಪ್ರಕಾಶಮಾನವಾಗಿಯೂ ಇದ್ದವು. ಸೂರ್ಯನು ಮುಳುಗಿ ಒಂದೆರಡು ತಾಸುಗಳಾಗಿರ ಬಹುದು.

ಕಾಡಿನ ಮಧ್ಯದಲ್ಲಿಯೆ ಸ್ವಲ್ಪ ಬಯಲಾಗಿರುವ ಒಂದು ಪ್ರದೇಶದಲ್ಲಿ ಒಂದು ಮನೆ—ಹಂಚಿನಿಂದ ಕಟ್ಟಲ್ಪಟ್ಟದ್ದು, ವಿಶಾಲವಾದ ಒಂದು ಅಂಗಳ, ಅಲ್ಲೇ ಕರೆಯಲ್ಲಿ ಒಂದು ಬಾವಿ, ಸುತ್ತಲೂ ಫಲವೃಕ್ಷಗಳು. ಈ ಮನೆಯೊಳಗಿಂದ ಮೊದಲು "ಕ್ರೊಂಯ್" ಎಂಬ ಶಬ್ದವು ಕೇಳಿಸಿತು. ಅನಂತರ ಮಂದಪ್ರಕಾಶವೊಂದು ಹೊರಗೆ ಹೊಮ್ಮಿತು. ಮೂರು ವ್ಯಕ್ತಿಗಳೆಂದು ತೋರುತ್ತದೆ—ಅಂಗಳಕ್ಕಿಳಿದುವು. ಬಾಗಿಲನ್ನು ಹಾಕಿಕೊಂಡು ಬೀಗ ಹಾಕಿದ ಶಬ್ದವೂ ಕೇಳಿಸಿತು. ಆಪಾದಮಸ್ತಕ ಪ್ರತಿಯೊಂದು ವ್ಯಕ್ತಿಯೂ ಕಪ್ಪಾಗಿ ತೋರುವುದು. ಆ ಶುಭ್ರಜ್ಯೋತ್ಸ್ನಾಮಯ ನಿಶೆಯಲ್ಲಿ, ಬಲವಾದ—ಎರಡುನಳಿಗೆಯ—ಕೋವಿಯನ್ನು ಹೆಗಲಮೇಲೆ ಇಟ್ಟು, ಕಂಬಳಿಯನ್ನು ಹೊದೆದು, ಪುಟ್ಟ ಲಾಂದ್ರವೊಂದನ್ನು ಹಿಡಿದು ಹೊರಟಿರುವ ಆ ವ್ಯಕ್ತಿಗಳು ಯಾರಿರಬಹುದು ?

"ಕಿಂಗ್ ಎಲಿಫಂಟ್"—ಎಂಬ ಒಂಟಿ ಗಂಡಾನೆಯು ಸಂಪಾಜೆಯವರ ಎದೆಯನ್ನು ನಡುಗಿಸುವಷ್ಟು ಶಕ್ತವಾಗಿತ್ತು. ಯಾವ ವೇಳೆಯಲ್ಲಿ ಅದು ಎಲ್ಲಿ ಹೋಗುವುದು ಎಂದು ಯಾರಿಗೂ ಗೊತ್ತಿಲ್ಲ. ಇವತ್ತು ಸಂಕಯ್ಯನ ಅಡಿಕೇ ಮರಗಳು ಅದರ ಹೊಟ್ಟೆಯಲ್ಲಿ ಅಡಗಿದರೆ, ನಾಳೆ ಗೊಲ್ಲರ ತಿಮ್ಮನ ದನುವಿನ ಕೊಟ್ಟಿಗೆ ಹುಡಿಹುಡಿ; ನಾಡಿದ್ದು ಡಂಕದ ಸಣ್ಣನ ಗದ್ದೆಯು ಮೈದಾನ! ಅದಕ್ಕೆ ಬೆಂಕಿಯುಗಣ್ಯ; ಜನರ ಭೀತಿ, ಇತರ ಪ್ರಾಣಿಗಳ ಬೆದರಿಕೆ ಏನೂ ಇರಲಿಲ್ಲ. ಯಾವರೀತಿ ಒಂದು ನದಿಯು ಅಡಚಣೆಗಳೊಂದನ್ನೂ ಲೆಕ್ಕಿಸದೆ ಹರಿದೋಡುವುದೋ, ಅದೇ ರೀತಿ ಆ 'ಕಿಂಗ್ ಎಲಿಫಂಟ್ (ರಾಜಗಜ)' ಕೂಡ ಮುಂಬರಿಯುತ್ತಿತ್ತು....ಸಂಪಾಜೆಯ ವನವಲಯದಲ್ಲಿ. ಸಂಪಾಜೆಯು ಕೊಡಗಿಗೂ ದಕ್ಷಿಣ ಕನ್ನಡಕ್ಕೂ ಮಧ್ಯದ ಎಲ್ಲೆಯಲ್ಲಿರುವ—ಕೊಡಗಿನ ಹಳ್ಳಿಯಾಗಿರುವುದು. ಆದುದರಿಂದ ಅಲ್ಲಿಯ ಜನರೆಲ್ಲರೂ ಕೊಡಗು ಚೀಫ್ ಕಮಿಶನರಿಗೆ, ಆನೆಯ ಉಪದ್ರವಗಳ ವಿಷಯ ವಿಸ್ತಾರವಾದ ಒಂದು ಪತ್ರವನ್ನು ಬರೆದರು. ಅಂತೆಯೆ ಚೀಫ್ ಕಮಿಶನರ್ ಸಾಹೇಬರು, ಯಾರು ಬೇಕಾದರೂ ಆ ಆನೆಯನ್ನು ಕೊಲ್ಲಬಹುದೆಂದೂ, ಹಾಗೆ ಕೊಂದವರು ಒಂದು ದಾಡೆಯನ್ನು ಸರಕಾರಕ್ಕೆ ಕೊಡಬೇಕೆಂದೂ, ಇನ್ನೊಂದನ್ನು ತಾವೇ ಇಟ್ಟುಕೊಳ್ಳಬಹುದೆಂದೂ ತಮ್ಮ ಅಪ್ಪಣೆಯನ್ನು ಸಾರಿದರು. ಆ ದಂತಕ್ಕೂ ಕೀರ್ತಿಗೂ ಆಸೆಪಟ್ಟು, ಹತ್ತಿರದ ರಬ್ಬರ್ ತೋಟದ ಯುರೋಪಿಯನ್ನರೂ ಕೊಡಗಿನ ಅನೇಕ ವೀರರೂ ಅನೇಕ ದಿನಗಳವರೆಗೆ ಅಲೆದಾಡಿದರೂ, ಆನೆಯ ನೆಲೆಯನ್ನು ಕಂಡುಹಿಡಿಯಲಾರದವರಾದರು. ಆದುದರಿಂದ ಅದಕ್ಕೆ '**ಕಿಂಗ್ ಎಲಿಫಂಟ್**' ಎಂಬ ನಾಮಧೇಯ ಬಂದಿತು.

ಹೊರಟ ಮೂರು ಜನರು ಸಂಪಾಜೆಯವರೇ. ಅವರಲ್ಲಿ ಮುಂದೆ ಸಾಗುತ್ತಾ ಲಾಂದ್ರಹಿಡಿದವರು **ನರಸಿಂಹ ಭಟ್ಟರು**. ಇನ್ನಿಬ್ಬರು ಸೇವಕರು—**ಮಾಯಿಲ** ಮತ್ತು **ತುಕ್ರಪ್ಪ**. ನರಸಿಂಹ ಭಟ್ಟರು ಸಂಪಾಜೆಯ ಪ್ರಸಿದ್ಧ ಜಮೀನ್ದಾರರು ಹಾಗು ಅಡಿಕೆ ತೋಟಗಾರರು. ಇವರ ಕೈಚಳಕವನ್ನು, ಹಿಂದಿನ ಅನೇಕ ಹುಲಿಯ ಮತ್ತು ಇತರ ಬೇಟೆಗಳಲ್ಲಿ ಜನರು ಅರಿತವರಾಗಿರುತ್ತಾರೆ. ಭಟ್ಟರ ಎತ್ತರ ಐದಡಿ ನಾಲ್ಕಂಚು. ಉದ್ದಕ್ಕೆ ಸರಿಯಾದ ದಪ್ಪ. ವರ್ಷ ೩೫–೪೦ ರೊಳಗಿರಬಹುದು. ಅವಿಶ್ರಾಂತ ಬೇಟೆಯಿಂದ ಒಂದೊಂದು ಕೂದಲು ಹಣ್ಣಾಗಿದೆ. ಬೇಟೆಯಾಡಿದ ಮಾತ್ರಕ್ಕೆ ಅವರು ಮಾಂಸತಿನ್ನುವರೆಂದು ತಿಳಿಯ ಬೇಡಿ. ಬ್ರಾಹ್ಮಣರು ಮಾಂಸ ತಿನ್ನುವರೇ ? "ಬೇಟೆಯು ನನಗೆ ಆಹ್ಲಾದಕರವಾದ ಆಟ!" ಎಂದು ಅವರೆಷ್ಟೋ ಸಾರಿ ನನ್ನೊಡನೆ ಹೇಳಿರುವರು.

ಸಾಗುತ್ತಿದ್ದ ಮೂವರು ಅರಮನೆಯ ತೋಟವನ್ನು ದಾಟಿ, ಗಜಾರಣ್ಯಕ್ಕೆ ಬಂದರು. ನರಸಿಂಹಭಟ್ಟರು ಚಿರಪರಿಚಿತ ವನಗಳಲ್ಲಿ, ನೇರವಾಗಿ ಆನೆ ವಾಸಿಸುವ ಗಜಾರಣ್ಯಕ್ಕೇ ತೆರಳಿದರು. ಈಗ ರಾತ್ರಿ ೧-೨ ಗಂಟೆಯಾಗಿರಬಹುದು. ಚಂದ್ರನು ಅಸ್ತಮಿಸುವುದರಲ್ಲಿದ್ದಾನೆ. ಅವರು ತಮ್ಮ ಲಾಂದ್ರದ ಬೆಳಕಿನಲ್ಲಿ ಮೆಲ್ಲಗೆ ಸಾಗಿದರು. ಮೊದಲು ಪರ್ವತವೊಂದನ್ನುತ್ತರಿಸಬೇಕು. ಆ ಭೀಕರ ನಿಶ್ಶಬ್ದತೆಯಲ್ಲಿ, ಅವರ ಎಕ್ಕಡಗಳಿಗೆ ಸಿಕ್ಕಿ 'ಚಟಕ್ ಚಟಕ್' ಎಂದು ಮರದ ಎಲೆಗಳು ಮುರಿಯುತ್ತಿದ್ದುವು. ಕಂಬಳಿಗೆಷ್ಟೋ ಮುಳ್ಳುಬಲ್ಲೆಗಳು ನಾಟಿಕೊಳ್ಳುತ್ತಿದ್ದುವು. ಆ ಪರ್ವತವನ್ನು ನೆಟ್ಟನೆ ಹತ್ತಲಾಗುವುದಿಲ್ಲ. ಪ್ರಾರಂಭದಲ್ಲಿ ಎಡಗಡೆಗೆ ಹೋಗಿ ಒಂದು ಕಂದಕವನ್ನು ದಾಟಬೇಕು; ಈ ಕಂದಕವೇಕೆ ಅಲ್ಲಿರುವುದೆಂದು ಅವರಿಗೂ ಗೊತ್ತಿಲ್ಲವಂತೆ. ಅನಂತರ ಸ್ವಲ್ಪ ಬಲಕ್ಕೆ ತಿರುಗಿ, ನೆಟ್ಟಗೆ ಹತ್ತಿ, ಸಮಭೂಮಿಗೆ ಬಂದರು. ಇಲ್ಲೆಲ್ಲ ತಮ್ಮ ಲಾಂದ್ರದ ಪ್ರಕಾಶವನ್ನು ಬಹುಮಟ್ಟಿಗೆ ಕಡಿಮೆಮಾಡಿ, ಹೆಜ್ಜೆಯಮೇಲೆ ಹೆಜ್ಜೆಯಿಟ್ಟು, ಜಾಗರೂಕತೆಯಿಂದ ಕಿವಿಗೊಟ್ಟು ಬಂದರು. ಎಲ್ಲಿಯೂ ಆನೆಯ ಸುಳಿವೇ ಇಲ್ಲ. ಆದರೂ ನರಸಿಂಹಭಟ್ಟರು ಹತಾಶರಾಗಲಿಲ್ಲ. ಜತೆಯ ಆಳುಗಳಂತೂ ಅವರಿಗಿಂತ ಹೆಚ್ಚು ಉತ್ಸಾಹಭರಿತರಾಗಿದ್ದರು. ಅನಂತರ ಬೆಟ್ಟದ ಆಚೆಯಕಡೆಗೆ ಮೆಲ್ಲನೆ ಇಳಿಯತೊಡಗಿದರು. ಅಲ್ಲಿ ಇಳಿಯುವುದು ಅಸಾಧ್ಯವೆಂದೇ ಹೇಳಬಹುದು. ಆದರೂ ಹೇಗೋ ಮರಗಳ ಮೇಲೆ ಕೆಲವುಸಾರಿ ನಡೆಯುತ್ತಾ, ಬಲ್ಲೆಗಳ ಕೆಳಗಕ್ಕಾಗಿ ನುಸುಳುತ್ತಾ, ಜಾರುತ್ತಾ ಬೀಳುತ್ತಾ ಮುಂದಕ್ಕೆ ಸಾಗಿದರು. ಕೊನೆಗೆ ಸ್ವಲ್ಪ ಸ್ವಲ್ಪ ಕೆಸರಿನ ಪ್ರದೇಶವು ಬಂದಿತು. ಅದು ಒಂದು ದೊಡ್ಡ ಕಣಿವೆ. ಆಚೆಕಡೆಯಿಂದ ಬರುವ ಇನ್ನೊಂದು ದೊಡ್ಡ ಪರ್ವತವೂ ಅಲ್ಲೇ ಮುಗಿವುದು. ಎಲ್ಲಿಯೂ ಎಳ್ಳಷ್ಟು ಶಬ್ದವಿಲ್ಲ. ನರಸಿಂಹಭಟ್ಟರು ಹತಾಶರಾದರು; ಸೇವಕರು ಮಾತಿಲ್ಲದವರಾದರು. 'ಇಷ್ಟುದೂರ ಬಂದು ಆನೆಯನ್ನು ಕಾಣದೆ ಹಿಂದಿರುಗಬೇಕಾದರೆ ತಾವೆಂತಹ ಹೇಡಿಗಳಾಗಿರಬೇಕು? ತಾವೇ ಏಕೆ ಗುಂಡು ಹೊಡೆದುಕೊಳ್ಳಬಾರದು?' ಎಂದೆನ್ನಿಸಿತವರಿಗೆ. ಆದರೂ ಕೊನೆಯ ಪ್ರಯತ್ನವೆಂದು, ಅರ್ಧ ಫರ್ಲಾಂಗಿನಷ್ಟು ದೂರವನ್ನು ಬಹಳ ಕಷ್ಟದಿಂದ ಗತಿಸಿದರು. ಇಷ್ಟರಲ್ಲಿ ಇದೇನು? 'ಚಟಿಪಿಟಿ, ಪಟ್, ಫಟ್'— ಎಂಬ ಶಬ್ದವು ಕೇಳುತ್ತಿದೆ! ಬೇಟೆಯಲ್ಲಿ ನಿಸ್ಸೀಮರಾದ ನರಸಿಂಹಭಟ್ಟರು ಶಬ್ದಬಂದೆಡೆ ದೃಷ್ಟಿಯನ್ನು ಬೀರಿ, ಅದು 'ಕಿಂಗ್ ಎಲಿಫಂಟ್' ಎಂದು ಕಂಡುಕೊಂಡರು. ಮೈಯಲ್ಲೆಲ್ಲಾ ವಿದ್ಯುತ್ಸಂಚಾರವಾದಂತಾಯ್ತು ಭಟ್ಟರಿಗೆ. ಅಂತೂ ಕೊನೆಗೊಮ್ಮೆ ಆನೆ ಅವರ ದೃಷ್ಟಿಪಥಕ್ಕೆ ಸಿಕ್ಕಿದುದಕ್ಕೆ, ಅಲ್ಲೇ ಅನನ್ಯಭಕ್ತಿಯಿಂದ ದೇವರನ್ನು ಸ್ತುತಿಸಿದರು. ಅವರ ದೇಹಕ್ಕಾಗ ನವಶಕ್ತಿ, ನವಚೇತನ ಬಂದಂತಾಗಿತ್ತು.

ಕೂಡಲೇ ಕಣಿವೆಯನ್ನು ದಾಟಿ ೨೦ ಗಜ ಹೋಗಿ, ಅವರ ಸೇವಕರನ್ನು ಅಲ್ಲಿ ದೊಡ್ಡ ಮರವೊಂದರಲ್ಲಿ ಏರಿ ಕುಳಿತುಕೊಳ್ಳುವಂತೆ ಹೇಳಿದರು. ಸೇವಕರಾದರೂ ನವಧೈರ್ಯೋತ್ಸಾಹದಿಂದ ಕೋವಿಯನ್ನು ಸಜ್ಜುಗೊಳಿಸಿ ಆ ಮರದ ಎತ್ತರವಾದ ಶಾಖೆಯೊಂದರಲ್ಲಿ ಕುಳಿತರು. ಭಟ್ಟರು ಇನ್ನೂ ೪೦ ಗಜಗಳಷ್ಟು ದೂರ, ಮೇಲೇರಿ, ಆನೆಯ ದಿಕ್ಕಿಗೆ ಸಮಾನಾಂತರವಾಗಿ ನಡೆದರು. ಇನ್ನೂ ಚಟಿಪಿಟಿ ಶಬ್ದ ಕೇಳಬರುತ್ತಿತ್ತು. ಶಬ್ದಭೇದಕರಾದ ಭಟ್ಟರು ಅಷ್ಟು ದೂರದಿಂದಲೇ ಆನೆಯನ್ನು ಗುರುತಿಸಿದರು. ಹತ್ತಿರದ ಎತ್ತರ ಮರವೊಂದನ್ನು ಶೀಘ್ರದಲ್ಲಿಯೆ ಏರಿದರು. ಡಬ್ಬಲ್‌ನಳಿಗೆಯ ಕೋವಿಯನ್ನು ಸಜ್ಜುಗೊಳಿಸಿದರು; ಆನೆಯ ತಲೆಯನ್ನು ಗುರುತಿಸಿದರು. "ಢೇಂಯ್" ಎಂಬ ಶಬ್ದವು ಕಾನನಾಂತರವನ್ನು ಅಲ್ಲೋಲಕಲ್ಲೋಲವಾಗಿಸಿ ದಿಗಂತಕ್ಕೆ ಚೆದರಿಹೋಯ್ತು; ಇನ್ನೊಂದು "ಢೇಂಯ್"! ಹತ್ತುಗಜಗಳಷ್ಟು ದೂರ ಕೆನ್ನೀರ ಓಕುಳಿಯಾಯ್ತು. ವಿಕಟವಾದ, ಭಯಂಕರವಾದ ಅದೊಂದು ಗರ್ಜನೆಯು ಗಹನಾರಣ್ಯಾಂತರವನ್ನು ನಡುಗಿಸಿಬಿಟ್ಟಿತು. ಕಲ್ಲೆದೆಯವರಾದಾ ಭಟ್ಟರೂ ಒಂದರೆಚಣ ನಡುಗಿಬಿಟ್ಟರಂತೆ! ಅವರೇ ಹೇಳಿದುದು. ತುಕ್ರಪ್ಪ, ಮಾಯಿಲರಂತೂ ತಾವು ಕುಳಿತಿದ್ದ ಕೊಂಬೆಗಳನ್ನೇ ಅಪ್ಪಿ-

ಸರ್ವಮಾನ್ಯ!

ಚಳಿಗಾಲದಲ್ಲಿ ಶಕ್ತಿಯ ಬಗ್ಗೆ

ಸರ್ವೋತ್ಕೃಷ್ಟವೆಂದು

ರಕ್ತವರ್ಧಕವನ್ನೇ

ಎಲ್ಲ ಜನರು ಉಪಯೋಗಿಸುತ್ತಿರುವರು.

ಅಷ್ಟವರ್ಗ
ಚ್ಯವನಪ್ರಾಶ
●
ಸುವರ್ಣ
ಮಾಲಿನೀ ವಸಂತ
●
ಮಕರಧ್ವಜಗುಟಿ
●
ಮುಂತಾದ
ಶಕ್ತಿವರ್ಧಕ
ಔಷಧಗಳನ್ನು
ತರಿಸಿರಿ.

ಕರ್ನಾಟಕ ಕೇಂದ್ರ, ಮರಾಠಾಗಲ್ಲಿ, ಹುಬ್ಬಳ್ಳಿ.

ಬಿಟ್ಟರು. ನರಸಿಂಹಭಟ್ಟರು ನಿಶ್ಶಬ್ದರಾಗಿ ಕುಳಿತಿದ್ದಾರೆ. ತುಕ್ರಪ್ಪ, ಮಾಯಿಲರ ರಭಸವಾದ ನಿಶ್ವಾಸೋಚ್ಛ್ವಾಸಗಳು ಭಟ್ಟರಿಗೆ ಕೇಳುತ್ತಿದ್ದುವು! ಆನೆಯು ಶ್ವಾಸದ ಶಬ್ದ ಬರುವಕಡೆಗೆ-ಕೆನ್ನೀರ ಜಳಕದಿಂದ—ಒಂದೇ ಉಸುರಿಗೆ ಓಡಿತು. ಸುಮಾರು ಅರ್ಧದಷ್ಟು ಬೆಟ್ಟವನ್ನು ಹತ್ತಿಬಿಟ್ಟಿತು. ತುಕ್ರಪ್ಪನು ಕೋವಿಯನ್ನು ಗುರಿಮಾಡಿದ್ದುದು ಆ ಹೆದರಿಕೆಯಲ್ಲಿ ಮಾಯಿಲನ ಎದೆಗಾಗಿತ್ತು! ಮಾಯಿಲನದೋ ಅವನ ತಲೆಗೇ ಆಗಿತ್ತು!! ಆನೆಯ ಓಟಕ್ಕೆ ಚಿಕ್ಕ ಚಿಕ್ಕ ಗಿಡ-ಮರಗಳೆಲ್ಲಾ ಪುಡಿ ಪುಡಿ. ಬಂಡೆಗಳು ಹಲವಾರು ಒಡೆದು ಉರುಳಿಬಿದ್ದುವು. ಅರ್ಧದಷ್ಟು ಓಡಿದ ಆನೆಗೆ ಬಲಕ್ಷಯವಾಗಿ, ಮತ್ತೆ ಓಡಲಾಗಲಿಲ್ಲ. ಅಲ್ಲೇ ಅದು ಬೆಟ್ಟದ ಮೇಲ್ಮುಖವಾಗಿ ಹಿಂದಿನ ಕಾಲುಗಳನ್ನು ಇಳಿಬಿಟ್ಟು ಮುಂದಿನ ಕಾಲುಗಳನ್ನು ಮಡಿಸಿ ಒಂದೇಸಾರಿ ಕೆಳಗೆ ಜಾರಿಬಿಟ್ಟಿತು— ತುಕ್ರಪ್ಪ ಮಾಯಿಲರ ಮರಕ್ಕೆ ನೇರವಾಗಿ. ಇನ್ನು ತಮ್ಮ ಸ್ಥಿತಿ ಮುಗಿಯಿತೆಂದು ಅವರು ತಿಳಿದರು. ದರ, ದರ, ದರ ಎಂದು ಆನೆಯು ಜಾರಿ, ಹೆದ್ದಾರಿಯೊಂದನ್ನು ಮಾಡಿ, ಢಪ್ ಎಂದು ದೊಡ್ಡ ಮರವೊಂದಕ್ಕೆ ಢಿಕ್ಕಿಹೊಡೆಯಿತು. ತುಕ್ರಪ್ಪ ಮಾಯಿಲರು ಕಣ್ಮುಚ್ಚಿ ಕೊಂಬೆಗಳನ್ನು ತಪ್ಪಿಬಿಟ್ಟರು; ಕೋವಿಗಳು ಬಿದ್ದುಕೊಂಡುವು. ಅವರಿಗಷ್ಟರಲ್ಲಿ ‘ ಛಟ, ಛಡ, ಛಟಾರ್, ಛಾಪ್’ ಎಂಬ ಶಬ್ದವು ಕೇಳಿಸಿತು. ಅವರು ಹತ್ತಿದ ಮರವಿಡೀ ನಡುಗಿದಂತೆ ಭಾಸವಾಯ್ತು.

“ ಇಳಿಯಿರೋ, ಇಳಿಯಿರೋ ! ಆನೆ ಸತ್ತ್ಹೋಯ್ತು ! ಬೇಗ ಇಳೀರಿ ಭಯವಿಲ್ಲ! ” “ ಆ, ಅಬ್ಬ ! ” ಎಂದು ಮಾಯಿಲ ಮತ್ತು ತುಕ್ರಪ್ಪ ಕಣ್ಣಿಟ್ಟರು. ತಾವು ಸತ್ತಿದ್ದೇವೋ ಬದುಕಿದ್ದೇವೋ ಎಂದು ತಿಳಿಯಲು ಪ್ರತಿಯೊಬ್ಬನೂ ಅವನವನ ಚರ್ಮವನ್ನು ಚಿವುಟಿ ನೋಡಿಕೊಂಡನು. ಅಂತೂ ತಾವು ಬದುಕಿರುವುದು ದೃಢವೆಂದಾದನಂತರವೂ, ನರಸಿಂಹ ಭಟ್ಟರನ್ನು ಕಂಡ ಮೇಲೂ, ಆನೆಯ ಶವವನ್ನು ನೋಡಿದೊಡನೆಯೂ, ಮರದಿಂದ ಮಾಯಿಲ ತುಕ್ರಪ್ಪರು ಇಳಿಯತೊಡಗಿದರು. ಇಳಿವಾಗ ನೋಡುತ್ತಾರೆ! ಅವರ ಕೊಂಬೆಯ ಪಕ್ಕದಲ್ಲಿದ್ದ ಕೊಂಬೆಯೇ ಇಲ್ಲ. ಕೆಳಗೆ ದೊಡ್ಡ ಮರವೊಂದು ಉರುಳಿ ಬಿದ್ದಿರುವುದು. ಆದದ್ದೇನೆಂದರೆ ಜಾರಿದ ಆನೆಯು ಇನ್ನೊಂದು ಮರಕ್ಕೆ ಢಿಕ್ಕಿ ಬಡಿಯಿತು; ಆ ಮರ ಬಂದು ಇವರು ಕುಳಿತಿದ್ದ ಮರಕ್ಕೆ ಹೊಡೆಯಿತು. ಪುಣ್ಯವಶಾತ್ ಇವರು ಬದುಕಿದರಷ್ಟೇ. ಅಂತೂ ‘ಕಿಂಗ್ ಎಲಿಫಂಟ್’ ಕೊನೆಗೂ ಸತ್ತುಹೋಯಿತು. ಮರದಿಂದಿಳಿದವರೇ ಭಟ್ಟರೊಡಗೂಡಿ ಆನೆಯ ದವಡೆಯನ್ನು ಸೀಳಿ, ದಂತಗಳೆರಡನ್ನೂ ಪ್ರತ್ಯೇಕಿಸಿದರು. ಮಾಯಿಲನೊಂದನ್ನೂ, ತುಕ್ರಪ್ಪ ಇನ್ನೊಂದನ್ನೂ ಹೊತ್ತುಕೊಂಡು, ಶೀಘ್ರವಾಗಿ ಮೂವರೂ ಮನೆಗಭಿಮುಖವಾಗಿ ಸಾಗಿದರು. ಅಲ್ಲಿಂದವರು ಹೊರಡುವಾಗ, ಬೆಳಗಿನ ೪ತ್ತಿ–೪ಕ್ಕೆ ಗಂಟೆಯಿರಬಹುದು. ಪುನಃ ಮೊದಲಿನಂತೆಯೇ ಬೆಟ್ಟವನ್ನು ಹತ್ತಿ, ಇಳಿದು, ಅರಮನೆಯ ತೋಟಕ್ಕೆ ಬಂದರು. ಅಲ್ಲಿಂದ ಮುಂದಕ್ಕೆ ಕಾಲ್ದಾರಿ ಇದೆಯೆನ್ನೋಣ. ಹಕ್ಕಿಗಳಾಗ ಚಿಲಿಪಿಲಿಗುಟ್ಟತೊಡಗಿದುವು. ಮೂಡು ಕೆಂಪಾಗತೊಡಗಿತು. ಬಹುಶಃ ಆನೆಯಲ್ಲಿ ಒಕಳಿಸುತ್ತಿದೆಯೋ ಎಂದೆನ್ನಿಸಿತು ಭಟ್ಟರಿಗೆ. ಅರಮನೆ ತೋಟದ ಅರ್ಧಕ್ಕೆ ಬಂದಿರಬಹುದು. ಅಲ್ಲಿಂದ ಒಂದು ಫರ್ಲಾಂಗಿನಷ್ಟು ದೂರ ಕಗ್ಗತ್ತಲಲ್ಲೇ ನಡೆಯಬೇಕಾಗುವುದು. ಏಕೆಂದರೆ ಎರಡು ಎಡೆಗಳಲ್ಲೂ ಬಿದಿರು. ಹಿಂಡಲುಗಳು ದಟ್ಟವಾಗಿ ಬೆಳೆದಿವೆ. ನಿಶ್ಶಬ್ದರಾಗಿ ಮೂವರೂ ಸಾಗುತ್ತಿರಲು ‘ಪಿಸಿ ಪಿಸಿ’ ಮಾತವರಿಗೆ ಕೇಳತೊಡಗಿತು. ಸೇವಕರನ್ನು ಅಲ್ಲೇ ನಿಲ್ಲಹೇಳಿ, ಭಟ್ಟರು ಶಬ್ದ ಬರುವ ಸ್ಥಳಕ್ಕಿಂತ ಸ್ವಲ್ಪ ಹಿಂದಿನವರೆಗೆ ಹೋಗಿ ಅಲ್ಲೇ ನಿಂತರು. ಬಲಗಡೆಯಿಂದ ಧ್ವನಿ ಬರುತ್ತಿತ್ತು. ಕತ್ತಲಾಗಿದ್ದುದರಿಂದ ಯಾರಿಗೂ ಗೊತ್ತಾಗುವ ಸಂಭವವಿರಲಿಲ್ಲ.

“ ಹೌದು ನರಸಿಂಹಭಟ್ಟರೇ ಬೇಟೆಗೆ ಹೋದದ್ದು ! ” “ ನಿಜ ನಿಜ. ಮೊನ್ನೆಯೇ ಅವರು ಇವತ್ತು ಆನೆ ಬೇಟೆಗಾಗಿ ಹೋಗುವರಾಗಿ ಗುಟ್ಟಾಗಿ ಯಾರಾರಿಗೋ ಹೇಳುತ್ತಿದ್ದರು! ” “ ಗುಂಡಿನ ಶಬ್ದ ಕೇಳಿತಲ್ಲವೇ ? ನಾವವರ ಮೇಲೆ ಬಿದ್ದು ದಂತವನ್ನು ಕಿತ್ತುಕೊಳ್ಳಬೇಕು ! ” “ ಸರಿ, ಸರಿ! ” ನಿಶ್ಶಬ್ದರಾಗಿ ಹಿಂದಕ್ಕೆ ತೆರಳಿ ಭಟ್ಟರು ದಂತವನ್ನು ಎಡಗಡೆ ಬಿದಿರಿನೊಳಗೆ ಮರೆಮಾಡಿಸಿಬಿಟ್ಟು, ಜೋರಾಗಿ ಆನೆ ಹೊಡೆದ ವಿಷಯವನ್ನು ತಮ್ಮ ಸೇವಕರ ಜತೆಯಲ್ಲಿ ಮಾತನಾಡುತ್ತಾ ಬಂದರು.

“ ನಿಲ್ಲಿ ಯಾರದು? ನರಸಿಂಹಭಟ್ಟರೋ ? ” “ ಹೌದು ! ” “ ಯಾಕೆ ಈ ಕಡೆಗೆ ಹೋಗಿದ್ದಿರಿ ? ” “ ಆನೆ ಹೊಡೆಯಲಿಕ್ಕೆ ! ಆನೆಯನ್ನೇನೋ ಗುಂಡ್ಹಾಕಿ ಕೊಂದೆ ; ಆದರೇನು ಮಾಡುವುದು ಹೇಳಿ ! ನಾನು ಕತ್ತಿಯನ್ನಾಗಲಿ ಮಚ್ಚನ್ನಾಗಲಿ ತೆಗೆದು ಕೊಳ್ಳದೆ ಹೋದ್ದರಿಂದ ದಂತವನ್ನಲ್ಲೇ ಬಿಟ್ಟು ಬರಬೇಕಾಯ್ತು ! ಇವತ್ತಿಡೀ ಆಯಾಸ ಪರಿಹರಿಸಿ, ನಾಳೆಯ ದಿನ ಬೆಳಗ್ಗೆ ಹೋಗಿ ದಂತವನ್ನು ತರಬೇಕೆಂದಿದ್ದೇನೆ ! ” “ ನೀವು ಆನೆ ಹೊಡೆದ ವಿಷಯವನ್ನು ಕೇಳಿ ಬಹಳ ಸಂತೋಷವಾಯ್ತು ಭಟ್ಟರೆ ! ನೋಡಿ, ನಮ್ಮ ಒಂದು ಕಂಟಕ ತಪ್ಪಿದಂತಾಯ್ತು ! ಮೊದಲೇ ತಿಳಿಸಿದ್ದರೆ ನಾವೂ ನಿಮ್ಮೊಡನೆ ಬರುತ್ತಿದ್ದೆನಲ್ಲ....ಚಿಂತೆಯಿಲ್ಲ. ನಾಳೆ ಬೆಳಗ್ಗೆ, ಜತೆಯಲ್ಲೇ ದಂತ ತರಲು ಹೋಗುವ ! ”

ನರಸಿಂಹಭಟ್ಟರೂ, ಇಬ್ಬರು ಸೇವಕರೂ ಬಹಳ ರಭಸದಿಂದ ಒಂದು ಫರ್ಲಾಂಗಿನಷ್ಟುದೂರ ಮಾತನಾಡುತ್ತಾ ಹೋದರು. ಇತ್ತ ಆ ವ್ಯಕ್ತಿಗಳಾದರೋ, ಆನೆ ಬಿದ್ದಲ್ಲಿಯೇ ದಂತವಿದೆಯೆಂದೂ, ನರಸಿಂಹ ಭಟ್ಟರನ್ನು ಮೋಸಮಾಡಿ ತಾವೇ ಆ ದಂತಗಳನ್ನು ಹೊಂದಿಕೊಳ್ಳಬಹುದೆಂದೂ ಗಜಾರಣ್ಯದತ್ತ ಓಡಿದರು. ಒಂದು ಫರ್ಲಾಂಗ್ ಹೋದ ಭಟ್ಟರು ಥಕ್ಕನೆ ಹಿಂದಿರುಗಿ,ಒಬ್ಬರೇ ಬಂದು ಅವಿತಿಟ್ಟ ದಂತಗಳೆರಡನ್ನೂ ಹೊತ್ತುಕೊಂಡು ಬಂದು, ತಮ್ಮ ಸೇವಕರನ್ನು ಕೂಡಿ ಶೀಘ್ರಗತಿಯಿಂದ ಮನೆಯೆಡೆ ಸಾಗಿದರು. “ ಹಿಂದೂ ” ಪತ್ರಿಕೆಯಲ್ಲಿ ಅವರ ಫೋಟೋ ಬಂದಿತ್ತು. ಇದು ನಡೆದ ಕಥೆ; ಅಲ್ಲದೆ ಭಟ್ಟರೇ ನನಗೆ ಹೇಳಿದುದಾಗಿದೆ.

ಸಸ್ಯರೋಗಾಭಿಜ್ಞನಾದ ಕನ್ನಡ ತರುಣ

ಡಾ. ಆರ್. ಎಸ್. ದೇಶಪಾಂಡೆ ಪಿಎಚ್. ಡಿ. ಅವರು

ಪರಿಚಯಕಾರರು 'ತಂತ್ರಿ' ★ (ಜೀವನಪರಿಚಯ)

ಬಿಳಿಯರ ಬಣ್ಣದ ಭಿನ್ನತೆಯ ದ್ವೇಷವನ್ನು ಕಣ್ಣಾರೆ ಕಂಡು ಸಂತಾಪಗೊಂಡರೂ—ಹಿಂದುಸ್ಥಾನದಿಂದ ವಿದ್ಯಾಭ್ಯಾಸಕ್ಕೆಂದು ಹೋದ ತರುಣರು—ಅದನ್ನು ಒಳಗೆ ಒತ್ತಿ ಇರಿಸಿಕೊಳ್ಳಲೇಬೇಕು; ಇಲ್ಲದೆ ಹೋದರೆ, ಎಷ್ಟೋ ಹಣ ವೆಚ್ಚಮಾಡಿ ಕಲಿಯಲಿಕ್ಕೆ ಹೋದವರು, ಹಾನಿಹೊಂದಿ ಹಿಂದಿರುಗಬೇಕಾಗುವುದು!

ಇದೆ ಮೇ ತಿಂಗಳ ಒಂದುದಿನದ ಮುಂಜಾವು. ನಾನು 'ಜಯಂತಿ' ಕಚೇರಿಯ ಕಡೆಗೆ ಹೊರಟಿದ್ದೆ. ನನ್ನ ಮಿತ್ರನೊಬ್ಬ ಸಂಧಿಸಿದ: 'ದೇಶಪಾಂಡೆ ಇಂಗ್ಲಂಡದಿಂದ ಬಂದಾನಂತಲ್ಲ!' ಎಂದ. ನಾನು ಸುಮ್ಮನೆ 'ಅಹುದು' ಎಂದು, ಮುಂದೆ ನನ್ನ ಕೆಲಸಕ್ಕೆ ಸಾಗಿದೆ. ದಾರಿಯಲ್ಲಿ ವಿಚಾರಿಸುತ್ತ ಸಾಗಿದೆ: 'ಇಂಗ್ಲಂಡಿಗೆ ಹೋಗುವ ಮುನ್ನ ನಮ್ಮಲ್ಲಿ ಪರಸ್ಪರ ಪರಿಚಯವಿತ್ತು. ಅವನೇ ಈಗ ಇಂಗ್ಲಂಡು ಕಂಡು ಬಂದವ. ಅಲ್ಲಿಯ ರೀತಿ-ನೀತಿಗಳನ್ನು ಎಷ್ಟು ವೈಗೂಡಿಸಿಕೊಂಡಿರುವನೊ ಏನೊ! ನನ್ನ ಗುರುತು ಅವನಿಗೆ ಸಿಕ್ಕಬಹುದೊ ಇಲ್ಲವೊ! ಭೇಟಿಯಾಗದೆ ಸುಮಾರು ೬-೭ ವರ್ಷಗಳಾಗಿರಬಹುದು! ....' ಇತ್ಯಾದಿ. ವಿಚಾರ ಅಲ್ಲಿಯೆ ನಿಂತಿತು. ಸಂಪಾದಕರೊಂದಿಗೆ ಬೇರೆ ಏನೊ ವಿಚಾರ ನಡೆಯಿತು.

ಮೂರು ನಾಲ್ಕು ದಿನಗಳ ನಂತರ ಒಮ್ಮೆ, ನಾನು ಸಂಪಾದಕರು ಸೇರಿ ಸಿನೆಮಾಕ್ಕೆ ಹೋಗಿದ್ದೆವು. ಸಂಪಾದಕರ ಜೊತೆಗೆ ಇದ್ದುದರಿಂದ, ನಾಲ್ಕಾಣೆಯ ಮೆಟ್ಟದಿಂದ ಏರಿ ೭ಆಣೆಯ ವರ್ಗಕ್ಕೆ ಹೋದೆವು. ಅಲ್ಲಿ ಡಾ. ದೇಶಪಾಂಡೆಯವರು ತಮ್ಮ ಮಿತ್ರರಿಬ್ಬರೊಂದಿಗೆ ಕುಳಿತಿದ್ದರು. ಅವರನ್ನು ಕಂಡ ಕೂಡಲೆ ಹಿಂದೆ ನಡೆದ ವಿಚಾರದ ಸುಳಿಯು ಮತ್ತೆ ಮನದಲ್ಲಿ ನುಸುಳತೊಡಗಿತು. ಸಂಪಾದಕರಿಗೆ ಡಾ. ದೇಶಪಾಂಡೆಯವರನ್ನು ಬೆನ್ನು ಹಿಂದಿನಿಂದ ಪರಿಚಯಮಾಡಿಕೊಟ್ಟೆ—ನಾನು ಮಾತ್ರ ಮಾತನಾಡುವ ಧೈರ್ಯಮಾಡಲಿಲ್ಲ. ಸಿನೆಮಾ ಮುಗಿಯಿತು; ಆ ವಿಚಾರ ಅಲ್ಲಿಯೆ ಉಳಿಯಿತು. ತಿಂಗಳು ಉರುಳಿತು.

ಕಾರ್ಯ ನಿಮಿತ್ತ ನಾನು ಬೆಳಗಾಂವಿಗೆ ಬಂದೆ. ಒಂದು ದಿನ ನಾನು ಅವರನ್ನು ಬೆಳಗಾಂವಿಯ ಬೀದಿಯಲ್ಲಿ ಕಂಡೆ. ಹಿಂದಿನ ವಿಚಾರ ಮತ್ತೆ ಬಂತು—ಬಲವಾಗಿ ಬಂತು. ಗೆಳೆಯನನ್ನು ನಡುವೆ ಮಾಡಿ ಮಾತನಾಡಿಸಿದೆ. ಮನದಲ್ಲಿ ಮಾಡಿಕೊಂಡ ಭ್ರಮೆಯು ಹಾರಿಹೋಯಿತು. ಇಂಗ್ಲಂಡನ್ನು ಕಂಡು ಬಂದಿದ್ದರೂ ಮೊದಲಿನ ಗುರುತನ್ನು ಮರೆತಿದ್ದಿಲ್ಲ. ಮೊದಲಿನ ಸೌಜನ್ಯದಲ್ಲಿ ಕೊಂಚವೂ ಕಡಿಮೆ ಇರಲಿಲ್ಲ. ಅಂದಿನ ಎಳೆಯತನದ ಗೆಳೆತನವನ್ನು ನೆನಪಿಗೆ ತಂದರು. ನನ್ನ ಬೇಡಾರಕ್ಕೆ ಒರುವುದಾಗಿ ವಚನವಿತ್ತರು.

ಡಾ. ದೇಶಪಾಂಡೆಯವರು ಮೂಲ ಪಾಚ್ಛಾಪುರದವರು. ೧೯೧೪ನೆಯ ಇಸ್ವಿಯ ಡಿಸೆಂಬರ್ ೨೩ನೆಯದಿನ ಇವರು ಹುಟ್ಟಿದರು. ಹುಟ್ಟಿದ ಊರು ಪಾಚ್ಛಾಪುರವೆ. ಪಾಚ್ಛಾಪುರವೆಂಬುದು ಬೆಳಗಾಂವಿ ಜಿಲ್ಲೆಯ ಹುಕ್ಕೇರಿ ತಾಲೂಕಿನ ಹಳ್ಳಿಯೊಂದು. ಇವರ ತಂದೆಯವರು ಮುಂಬಯಿ ವಿಶ್ವವಿದ್ಯಾಲಯದ ಬಿ. ಎ., ಪದವೀಧರರು. ಅವರು ಮಾಮಲೇದಾರರಾಗಿ ಸದ್ಯ ನಿವೃತ್ತರಾಗಿದ್ದಾರೆ. ಇವರಿಗೆ ಇಬ್ಬರು ಅಣ್ಣಂದಿರು. ಒಬ್ಬರು **ಬಿ. ಕಾಂ.** ಪದವಿ ಪಡೆದಿದ್ದಾರೆ; ಇನ್ನೊಬ್ಬರು ಯಾಂತ್ರಿಕ ಸ್ಥಾಪತ್ಯಶಾಸ್ತ್ರವಿಶಾರದರು. ಮನೆತನದಲ್ಲಿ ಎಲ್ಲರೂ ಕಲಿತವರು. ತಾಯಿ-ತಂಗಿ ಅವರೂ ಓದುಬರೆಯಲು ಬಲ್ಲವರು.

ತಂದೆಯವರು ಮಾಮಲತ್ ಕೆಲಸಮಾಡುತ್ತಿದ್ದುದರಿಂದ ಇವರು ವಿದ್ಯಾಭ್ಯಾಸಕ್ಕಾಗಿ ಅಲ್ಲಲ್ಲಿ ಅಲೆಯಬೇಕಾಯಿತು. ಪ್ರಾಥಮಿಕ ಶಿಕ್ಷಣ ೪ನೆಯ ಇಯತ್ತೆಯವರೆಗೆ ರಾಣೆಬೆನ್ನೂರಿನಲ್ಲಿ ಆಯಿತು. ಮಾಧ್ಯಮಿಕ ೫ನೆಯ ಇಯತ್ತೆಯವರೆಗೂ ಅಲ್ಲಿಯೆ ಇದ್ದು, ೬ನೆಯ ಇಯತ್ತೆಗೆ ಧಾರವಾಡ ವಿಕ್ಟೋರಿಯಾ ಹಾಯ್‌ಸ್ಕೂಲನ್ನು ಸೇರಿದರು. ಅದೇ ಶಾಲೆಯಿಂದ ೧೯೩೧ರಲ್ಲಿ, ಮ್ಯಾಟ್ರಿಕ್ಯುಲೇಶನ್ ಪರೀಕ್ಷೆಯಲ್ಲಿ ಹೆಚ್ಚು ಗುಣ ಪಡೆದು ಪಾಸಾದರು. ಧಾರವಾಡದಲ್ಲಿಯೆ ಉಚ್ಚ ಶಿಕ್ಷಣಾಲಯವು ಇದ್ದರೂ, ಕಾಲೇಜಿನ ಮೊದಲವರುಷಕ್ಕೆ ಸಾಂಗಲಿಯ ವಿಲಿಂಗ್ಡನ್ ಕಾಲೇಜಿಗೆ ಸೇರಿದರು; ಆದರೆ ಧಾರವಾಡದ ಕರೆ ಬಲವಾಗಿದ್ದುದರಿಂದ, ಇಂಟರ್ ಸಾಯಿನ್ಸ್‌ಗೆ ಕರ್ನಾಟಕ ಕಾಲೇಜಿಗೇ ಬಂದರು. ಕಾಲೇಜಿನಲ್ಲಿ ಅಭ್ಯಾಸದ ಕಡೆಯ ಒಲವು ಹೆಚ್ಚು. ಇಲ್ಲಿಯ ತನಕ ತಡೆಯಿಲ್ಲದೆ ತೇರ್ಗಡೆಹೊಂದುತ್ತ ಬಂದವರಾದರೂ ಇಲ್ಲಿ ಮಾತ್ರ ಒಂದು ವರುಷ ತಡೆಯ ಬೇಕಾಯಿತು. ಅದಕ್ಕೆ ಕಾರಣ ಇಲ್ಲದಿಲ್ಲ.

ಆ ವರುಷ ಇವರಿಗೊಂದು ಬಲವಾದ ಪೆಟ್ಟು. ತಂಗಿಯ ಗಂಡನಿಗೆ ಕಾಯಿಲೆ. ಕಾಯಿಲೆಯು ಕಡಿಮೆಯಾಗದೆ ತಂಗಿಯ ಜೀವನದ ಅಡಿಗಲ್ಲನ್ನು ಕುಗ್ಗಿಸಿತು. ಅದು ಅಂತಃಕರಣಿಯಾದ ಇವರ ಮನಸ್ಸಿನ ಮೇಲೆ ಮಾಯಲಾರದಂತಹ ಗಾಯವನ್ನು ಮಾಡಿತು. ಅಂತಹುದರಲ್ಲಿಯೆ ಇವರ ಪರೀಕ್ಷೆ ಬಂದು, ಇವರನ್ನು ಸೋಲಿಸಿಹೋಯಿತು.

ಮರುವರುಷ ಇಂಟರ್ ಸಾಯಿನ್ಸ್ ಪರೀಕ್ಷೆಯಲ್ಲಿ ಉತ್ತೀರ್ಣ-ರಾದರು. ಮುಂದೆ ಬಿ. ಎಸ್‌ಸಿ. ಗಾಗಿ ಪ್ರಾಣಿಶಾಸ್ತ್ರವನ್ನು ಮುಖ್ಯವಾಗಿಯೂ, ಸಸ್ಯಶಾಸ್ತ್ರವನ್ನು ಅನುಷಂಗಿಕವಾಗಿಯೂ ಇಟ್ಟುಕೊಂಡು ಅಭ್ಯಾಸಮಾಡಿದರು. ಮನೆತನದ ಅನಾನು-ಕೂಲತೆಗಳು ಇನ್ನೂ ಬೆನ್ನುಬಿಟ್ಟಿರಲಿಲ್ಲ. ಅವು ಸಂಧಿಸಾಧಿಸಿ ಪರೀಕ್ಷೆಯ ವೇಳೆಯಲ್ಲಿಯೆ ಇವರನ್ನು ಪರೀಕ್ಷೆಮಾಡುತ್ತಿದ್ದುವು. ಅಂತಃಕರಣಿಗಳಾದ ಇವರು, ಮನೆತನದ ಮಾತು ಮುಖ್ಯವೆಂದು ಆಸಲ ಬಿ ಎಸ್‌ಸಿ ಪರೀಕ್ಷೆಗೆ ಕೊಡುವುದನ್ನು ಬಿಟ್ಟರು. ಇಮ್ಮಡಿ ಉತ್ಸಾಹದಿಂದ ಮರುವರುಷ ಅಭ್ಯಾಸಮಾಡಿ, ೧೯೩೭ ಎಪ್ರಿಲ್-ನಲ್ಲಿ ಎರಡನೆಯ ವರ್ಗದಲ್ಲಿ ಮೇಲಿನ ನಂಬರನ್ನು ಪಡೆದರು.

ಪುಣೆಯಲ್ಲಿ ಒಕ್ಕಲುತನದ ವಿಭಾಗದಲ್ಲಿ ಎಂ. ಎಸ್‌ಸಿ. ಪದವಿಗಾಗಿ ಅಭ್ಯಾಸ ಪ್ರಾರಂಭಿಸಿದರು. ಆದರೆ ಇಲ್ಲಿಯ ವಿದ್ಯೆಯ ಮಟ್ಟಕ್ಕಿಂತ—ಹೆಚ್ಚಿನ ಮಟ್ಟದ— ಪರದೇಶದಲ್ಲಿಯ ವಿದ್ಯೆಯನ್ನು ಪಡೆದು ಬರಬೇಕೆಂಬ ಲವಲವಿಕೆಯು ಇವರಲ್ಲಿ ಚಿಮ್ಮತೊಡಗಿತು. ಪರದೇಶಕ್ಕೆ ಹೋಗುವ ವಿಚಾರ ಒಮ್ಮೆ ಬಂದಿತೆಂದರೆ ಮುಂದಿನ ಕಾರ್ಯವೆಲ್ಲ ಆ ದಿಕ್ಕಿನಲ್ಲಿಯೆ! ಮನೆಯಲ್ಲಿ ಮಾತು-ಕತೆ ಬೆಳೆಯಿಸಿದರು. ಇವರ ಉತ್ಕಟತೆಯು ಎಲ್ಲರಿಗೂ ಹುರುಪುಕೊಟ್ಟಿತು. ಮನೆಯವರು ಮರುಮಾತನ್ನು ಎತ್ತದೆ ಇವರಿಗೆ ಬೆಂಬಲ ಕೊಟ್ಟರು. ಅದೇ ವರುಷದ ಸಪ್ಟಂಬರ್ ತಿಂಗಳಲ್ಲಿ ಪಿ. ಮತ್ತು ಓ ಕಂಪನಿಯ ವಾಯಿಸ್‌ರಾಯ್ ಆಫ್ ಇಂಡಿಯಾ ಹಡಗನ್ನೇರಿ ಇಂಗ್ಲಂಡಿಗೆ ಪ್ರಯಾಣ ಬೆಳೆಸಿದರು.

ಇಂಗ್ಲಂಡಿಗೆ ಹೊರಡಬೇಕೆಂದು ಮಾಡಿದ ಕೂಡಲೆ ಹೊಸ ಉತ್ಸಾಹ ಚಿಮ್ಮುವುದು ನಿಜ; ಆದರೆ ಭಾರತದ ದಂಡೆಯನ್ನು ಬಿಟ್ಟು ತಾಯಿ-ನಾಡುಗಳನ್ನು ಬಿಟ್ಟು ದೂರ ಸಾಗಬೇಕಾದಾಗ, ಆತುರತೆಯು ಆವರಿಸಿ ಬಂದು ದುಃಖವಾಗುವುದು. ಅಂತಃ-ಕರಣಜೀವಿಗಳಿಗಂತೂ ಅದು ಏರಿ ಬರುವುದು. ಆದರೆ ತೋರುವುದು—ತೋಡಿಕೊಳ್ಳುವುದು ಯಾರ ಮುಂದೆ? ಹಡಗಿನ ಮೇಲೆ ಎಲ್ಲವೂ ಹೊಸದೆ. ಸ್ವದೇಶದಲ್ಲಿ ಸುತ್ತುಮುತ್ತಲು ಗೆಳೆ-ಯರು-ಬಳಗದವರು ಇರುವುದರಿಂದ, ಬಗೆಬಗೆಯಾಗಿ ನೆರವು ದೊರೆಯುವುದು. ಈಗ ಕೇವಲ ಒಂಟಿಗರಾಗಿರಬೇಕು. ಎಲ್ಲ-ವನ್ನೂ ಅನುಭವದಿಂದಲೆ ಕಲಿಯಬೇಕು. ಕಲಿತ ಅನುಭವವನ್ನು ಪ್ರಯೋಗಮಾಡಬೇಕು. ಪ್ರಯೋಗಕಾಲದ ಪರಿಣಾಮವನ್ನು ಪಡೆದುಕೊಳ್ಳಬೇಕು. ಹೊಸ ಜೀವನಕ್ಕೆ ಹೊಸ ಚೈತನ್ಯ ಬೇಕು. ಸಮುದ್ರದ ಮೇಲೆ ಹಡಗವು ಹೊರಟಾಗ ಆಗುವ ಹೊಯ್ದಾಟವು ಬೇನೆ-ಬಳಲಿಕೆ ತರುವುದು. ಮೆತ್ತನ್ನ ಮನದವರಿಗೆ— ಪ್ರಕೃತಿಯವರಿಗೆ— ಹೆಚ್ಚು ತೊಂದರೆಯಾಗುವುದು. ಡಾ. ದೇಶಪಾಂಡೆಯವರಿಗೆ ಈ ಹೊಯ್ದಾಟವು ತಡೆಯಲಿಲ್ಲ. ಭಾರತದ ದಂಡೆಯನ್ನು ನೋಡಿದವರು, ಏಡನ್ ಬರುವವರೆಗೂ ಕ್ಯಾಬಿನ್ ಬಿಟ್ಟು ಕದಲಲಿಲ್ಲ— ಐದು ದಿನಗಳ ವರೆಗೆ.

ಐದು ದಿನಗಳ ನಂತರ ಎಲ್ಲವೂ ಪರಿಚಯದ್ದಾಗತೊಡಗಿತು. ಹಡಗಿನ ಮೇಲೆ ಮಾಂಸಾಹಾರವು ಸಾಮಾನ್ಯವಾದುದು. ಶಾಕಾಹಾರವೂ ಸಿಕ್ಕುವುದುಂಟು; ಆದರೆ ಒಂದು ಮಾದರಿಯಿಂದ ಮತ್ತೊಂದಕ್ಕೆ ಬದಲಿಸಬೇಕಾದರೆ ಹಡಗಿನ ಹಿರಿಯನಿಗೆ ಹೇಳಬೇಕಾಗುವುದು. ಹಾಗೆ ಹೇಳಹೋಗುವುದೆಂದರೆ ದೇಶಪಾಂಡೆ-ಯವರಿಗೊಂದು ಕುತ್ತಾಗಿ ಕಂಡಿತು. ಮಾಂಸಾಹಾರವು ತಮಗೆ ತಡೆಯುವುದಿಲ್ಲವೆಂದು ಹೇಳುವುದೆಂದರೆ ಸ್ವಾಭಿಮಾನಕ್ಕೆ ಕುಂದೆಂದು ತಿಳಿದು, ಇದ್ದುದರಲ್ಲಿ ಸರಿಪಡಿಸಿಕೊಳ್ಳಬೇಕೆಂದು ಯಾರಿಗೂ ಹೇಳದೆ ಸಾಗಿಸಿದರು.

ಈ ಬಗೆಯ ತಮ್ಮ ಸಂಕೋಚವೃತ್ತಿಗೆ ಒಂದು ಕಾರಣವಿದ್ದಿತೆಂದು ಅವರ ಮನೋವಿಶ್ಲೇಷಣಾತ್ಮಕ ಅಭಿಪ್ರಾಯ: 'ಭಾರತದಲ್ಲಿ ನಾವು ಬೆಳೆಯುವುದು ಗುಲಾಮವೃತ್ತಿಯಲ್ಲಿ. ಮೂಗು ಮೇಲೆ ಮಾಡಿಕೊಂಡು ಮೆರೆದು ನಮಗೆ ಗೊತ್ತೇ ಇಲ್ಲ. ಬಿಳಿಯ ಮೋರೆಯವರನ್ನು ಕಂಡರೆ ಒಂದು ಬಗೆಯ ಬೆದರಿಕೆ. ನಮ್ಮನ್ನು ನಮ್ಮ ಕೀಳ್ತನದ ತೊಡಕು ತಿನ್ನುತ್ತಿದೆ. ಅಲ್ಲಿಯ ಆ ಜನರ ನಡೆವಳಿಕೆಯೂ ಹಾಗೆಯೆ ಇರುತ್ತದೆ.'

ಒಮ್ಮೆ ಒಂದು ಸಂಗತಿ ನಡೆಯಿತಂತೆ. ಒಂದು ಕಡೆ ಕೂಡಲು ಮೂರು ಸ್ಥಳಗಳು ಇದ್ದುವು. ಇಬ್ಬರು ಬಿಳಿಯರು ಎರಡು ಸ್ಥಳಗಳನ್ನು ಆಕ್ರಮಿಸಿದ್ದರು ; ಮೂರನೆಯದು ತೆರವು ಇತ್ತು. ಅಲ್ಲಿ ಭಾರತೀಯನೊಬ್ಬನು ಕೂಡಲು ಹೋದನಂತೆ. ಅದು ಬಿಳಿಯರಿಗೆ ಸೇರಿಕೆ ಬರಲಿಲ್ಲ; ಅವನನ್ನು ಕೂಡಲು ಕೊಡಲಿಲ್ಲ. ಗಲಭೆಯಾಗಿ ಇದರ ದೂರು ಹ ಡ ಗ ದ ಹಿರಿಯನ ಕಡೆಗೆ ಹೋಯಿತು. ಅವನಾದರೂ ಬಿಳಿಯನು, ಬಿಳಿಯರ ಪಕ್ಷಪಾತಿ. ಇವರು ಕೆಲವರು ಕೂಡಿಕೊಂಡು, ಹಡಗಿನ ಮೇಲೆಯೆ ಇದ್ದ ಒಬ್ಬ ಭಾರತೀಯ ಹಿರಿಯನ ಕಡೆಗೆ ಹೋದರಂತೆ. ಆ ಭಾರತೀಯನಿಗೆ ಜಗತ್ತಿನಲ್ಲಿಯೆ ಒಂದು ಸ್ಥಾನ ದೊರೆತಿದೆ; ಅಷ್ಟು ಮೇಲ್ಮಟ್ಟದಲ್ಲಿದ್ದವನು. ಈ ಭಾರತೀಯರ ದೂರನ್ನು ಕೇಳಿ ಹಡಗದ ಹಿರಿ-ಯನ ಜೊತೆಗೆ ಮಾತನಾಡಿದ್ದರೆ ಸರಿಹೋಗುತ್ತಿತ್ತು; ಆದರೆ....!

ಮಾರ್ಸೇಲ್ ಮುಟ್ಟಿದಾಗ ಸಂಜೆಯಾಗಿತ್ತು. ಇಡಿ ರಾತ್ರಿಯೆಲ್ಲ ಗಾಡಿಯಲ್ಲಿ ಹೋಯಿತು. ಫ್ರಾನ್ಸ್ ದೇಶದಲ್ಲಿ ಹಾಯ್ದು ಹೋಗುತ್ತಿದ್ದರೂ, ಕತ್ತಲೆಯು ಫ್ರಾನ್ಸ್ ದೇಶದ ಸೊಬಗನ್ನು ಮರೆ ಮಾಡಿತ್ತು. ಬೆಳಗು ಬಂದಾಗ ಫ್ರಾನ್ಸ್ ದಂಡೆಗೆ—ಕ್ಯಾಲೇಕ್ಕೆ—ಬಂದದ್ದರಿಂದ, ಫ್ರಾನ್ಸ ದೇಶದ ನವುರು ಬರಲಿಲ್ಲ—ತೋರಲಿಲ್ಲ. ಕ್ಯಾಲೆಯಿಂದ ಡೋವರ್, ಡೋವರ್‌ನಿಂದ ಲಂಡನ್! ಲಂಡನ್‌ನಲ್ಲಿ ಇಳಿದರು.

ಮುಂಬಯಿಯಲ್ಲಿ ವಾಸವಾಗಿದ್ದವರಿಗೆ ಲಂಡನ್ನು, ಅಂತಹ ದೇನು ಭ್ರಮೆಹುಟ್ಟಿಸುವಷ್ಟು ಭವ್ಯವಲ್ಲ— ಎಂದೆನಿಸುವುದಂತೆ. ಒಂದು ವಿಷಯ ಮಾತ್ರ ಒಡೆದು ಕಾಣುವುದಂತೆ: ಅದು ಅಚ್ಚುಕಟ್ಟುತನ— ಜನತೆಯ ಶಿಸ್ತು, ಓರಣ. ಇವನ್ನು ಬಿಟ್ಟರೆ ಲಂಡನ್ ಪಟ್ಟಣವೆಂದರೆ ದೊಡ್ಡ ಮುಂಬಯಿ. ಇನ್ನೂ ಒಂದು ವಿಷಯ ಎದ್ದು ಕಾಣುವುದು: ಅಲ್ಲಿಯ ಜನರು ಎತ್ತರವಾಗಿದ್ದಾರೆ—ಆರೋಗ್ಯವುಳ್ಳವರಾಗಿದ್ದಾರೆ. ಇದು ಭೌಗೋಲಿಕ ವಾತಾವರಣದ ಮೂಲಕವೋ, ಸ್ವಾತಂತ್ರ್ಯದ ವಾತಾವರಣದ ಮೂಲಕವೋ ತಿಳಿಯದು; ಸಂಗತಿ ಮಾತ್ರ ನಿಜ!

ಲಂಡನ್‌ನಲ್ಲಿಯ ಮೊದಲಿನ ಎಂಟು ತಿಂಗಳು ಶ್ರೀ. ದೇಶಪಾಂಡೆಯವರು, ಚಾಫೇಕರನ '**ಇಂಡಿಯನ್ ಬೋರ್ಡಿಂಗ್ ಹಾವುಸ್**'ನಲ್ಲಿ ಇದ್ದರು. ಆದರೆ ಅಲ್ಲಿಯ ವೆಚ್ಚವು—ವಾರಕ್ಕೆ ೩೫ ಶಿಲಿಂಗು ಹೆಚ್ಚಾಗುವುದೆಂದು, '**ಸ್ಲೋವ್**' ಎಂಬ ಭಾಗದಲ್ಲಿ, ಬೇರೆ ಬೋರ್ಡಿಂಗ್ ಹಾವುಸ್‌ನಲ್ಲಿರತೊಡಗಿದರು.

ಲಂಡನ್ ವಿಶ್ವವಿದ್ಯಾಲಯಕ್ಕೆ ಸೇರಿದ '**ದಿ ಇಂಪೀರಿಯಲ್ ಕಾಲೇಜ್ ಆಫ್ ಸಾಯಿನ್ಸ್ ಮತ್ತು ಟೆಕ್ನಾಲೋಜಿ**' ಎಂಬ ಕಾಲೇಜಿಗೆ ಸೇರಿದರು, ಸುತ್ತು ವಿದ್ಯಾರ್ಜನೆಯ ಮುಖ್ಯ ಉದ್ದೇಶವೆಂದು ಎರಡನೆಯ ವಿಷಯದ ಕಡೆಗೆ ಮನಸ್ಸು ಹರಿಯಗೊಡದೆ ಅಭ್ಯಾಸ ಸಾಗಿಸಿದರು. ಶಾಸ್ತ್ರೀಯ ಸಂಶೋಧನವು ಯಾವಾಗಲೂ ತಲೆಯಲ್ಲಿರುವುದರಿಂದ,ಉಳಿದ ಹವ್ಯಾಸಗಳಾವೂ ಹತ್ತಲಿಲ್ಲ; ಅಲ್ಲದೆ ಅಲ್ಲಿ ಜನರು ಭಾರತೀಯರನ್ನು ತಿರಸ್ಕಾರದಿಂದ ನೋಡುತ್ತಿದ್ದುದರಿಂದ, ಕೈ ತೋರಿಸಿ ಅವಲಕ್ಷಣ ಮಾಡಿಕೊಳ್ಳುವುದಕ್ಕಿಂತ ಅವುಗಳ ಗೋಜಿಗೆ ಹೋಗದೆ ಬಿಡುವುದೇ ಲೇಸೆಂದು ಬಿಡುತ್ತಿದ್ದರು. ಸ್ವಾಭಿಮಾನಿ ಮನುಷ್ಯನಿಗೆ ಅಲ್ಲಿಯ ಜನರ ವರ್ತನವು ಮೈಯನ್ನು ಉರಿಸುತ್ತದೆಯಂತೆ. ಆದರೂ 'ಹೊಟ್ಟೆಯಲ್ಲಿಯ ಸಿಟ್ಟು ರಟ್ಟೆಗೆ ಬಾರದು' ಎಂಬಂತಾಗಿ ಮನದೊಳಗೆ ಕುದಿಯುತ್ತಾ ಕುಳ್ಳಿರಬೇಕಾಗುವುದಂತೆ. ಡಾ. ದೇಶಪಾಂಡೆಯವರ ಅಭಿಪ್ರಾಯ ಹೀಗೆ:

"ಈ ಬಗೆಯ ತಿರಸ್ಕಾರ ಕೇವಲ ಭಾರತೀಯರ ಬಗೆಗೇ ಇವೆಯೆಂದಲ್ಲ. ಆ ದೇಶದ ಬೇರೆ ಬೇರೆ ವರ್ಗಗಳ ಜನತೆಯ ಬಯಲ್ಲಿಯೂ ಪರಸ್ಪರರಲ್ಲಿ ಹೆಚ್ಚು ಕಡಿಮೆ ಇದೇ ಪ್ರಕಾರದ ತಿರಸ್ಕಾರವಿದೆ. ಅವರ ಸಮಾಜವು ವರ್ಗಗಳಲ್ಲಿ ವಿಭಾಗಿತವಾಗಿದೆ. ಮೇಲಿನ ವರ್ಗದವನು ಕೆಳಗಿನ ವರ್ಗದವನೊಡನೆ ಸೇರಿಬೆರೆಯುವುದಿಲ್ಲ. ಈ ವರ್ಗೀಕರಣದ ಪಿಡುಗು ಬಂಡವಾಳಗಾರರ ದೇಶದಲ್ಲಿ ಇದ್ದದ್ದೆ. ಅದರಲ್ಲಿಯೂ ಇಂಗ್ಲಂಡು ಸಾಮ್ರಾಜ್ಯವಾದಿಯು, ಕೇಳುವುದೇನು?

ಇಂಗ್ಲಿಶರು ಸಾಮ್ರಾಜ್ಯವಾದಿಗಳಂತೆ ಕುಶಲವ್ಯಾಪಾರಿಗಳೂ ಅಹುದು. ಸಾಮಾಜಿಕ ಜೀವನದಲ್ಲಿ ತೋರುವ ವೈಷಮ್ಯವು ವ್ಯವಹಾರದಲ್ಲಿ ಕಾಣದು. ಅದು ದುಡ್ಡುಗಳಿಸುವ ವಿಷಯ; ದುಡ್ಡುಗಳಿಸುವಾಗ **ದೊಡ್ಡಿತೆಯ ಸೋಗನ್ನು ಹಾಕಿದರೆ ಹೇಗೆ?** ದುಡ್ಡು ಹೇಗೆ ಬಂದೀತು? ಅದನ್ನು ಸೆಳೆದುಕೊಳ್ಳಬೇಕಾದರೆ ನಮ್ರತೆಯ ಸೋಗನ್ನು ಹಾಕಲೇಬೇಕಾಗುವುದು. ಇದು 'ರಾತ್ರಿ ವಿಹಾರಮಂದಿರ'ದಲ್ಲಿ ನಿದರ್ಶನಕ್ಕೆ ಬರುವುದು" ಇತ್ಯಾದಿ.

"ಇಂಗ್ಲಂಡಿನವರು ಸೋಗಿನವರು" ಎಂದು ಮತ್ತೆ ತಮ್ಮ ಮಾತನ್ನು ಮುಂದುವರಿಸಿದರು ಡಾ. ದೇಶಪಾಂಡೆಯವರು: "ಕಾನೂನು ಸೂಳೆತನವನ್ನು ಒಪ್ಪುವುದೇ ಇಲ್ಲ; ಆದರೆ ಸೂಳೆತನವಿದೆ ಸೋಗಿನಲ್ಲಿ. ಹಗಲು ಸೂಳೆಯರೆಲ್ಲರು ಬೇರೆ ಬೇರೆ ಕೆಲಸಗಳಲ್ಲಿ ತೊಡಗುತ್ತಾರೆ. ಸೂಳೆತನವು ಮುಖ್ಯವಾಗಿದ್ದರೂ ಆನುಷಂಗಿಕವಾದ ಬೇರೆ ಉದ್ಯೋಗವನ್ನೆ ಮುಖ್ಯವೆಂದು ಸೋಗು ಹಾಕುತ್ತಾರೆ. ಆ ಸೋಗನ್ನು ಸತ್ಯವೆಂದು ಇಂಗ್ಲಿಶ್ ಕಾನೂನು ನಂಬುತ್ತದೆ. ಅದರಂತೆಯೆ ಬಿಕ್ಕೆಬೇಡುವುದು. ದುಡಿದು ದುಡ್ಡುಗಳಿಸಬೇಕೆಂಬುದು ತತ್ತ್ವ; ಆದರೆ ಕಡ್ಡಿಪೆಟ್ಟಿಗೆ ಮಾರುವ ನೆಪದಿಂದ ಹಣಕ್ಕಾಗಿ ಹಲ್ಲು ಕಿರಿಯುವುದು ಯಾವ ತತ್ತ್ವವನ್ನು ತೋರುವುದು?"

"ಇನ್ನೂ ಒಂದು ಉದಾಹರಣೆಯನ್ನು ಕೊಡಬಹುದು" ಎಂದು ಮತ್ತೆ ಹೇಳತೊಡಗಿದರು— ದೇಶಪಾಂಡೆಯವರು: "ಇಂಗ್ಲಂಡಿನ ಜನರಲ್ಲಿ ಸ್ವತಂತ್ರ ಅಭಿಪ್ರಾಯವುಳ್ಳವರು ಕಡಿಮೆ. ಅವರು ಅಭಿಪ್ರಾಯ ವ್ಯಕ್ತಮಾಡುವುದು ವೃತ್ತಪತ್ರಿಕೆಗಳ ಮೇಲಿಂದ. ವೃತ್ತಪತ್ರಿಕೆಗಳಾದರೊ ಸಾಹುಕಾರರ-ಬಂಡವಲುಗಾರರ ಸೊತ್ತು. ಹೆಚ್ಚು ಮಾರಾಟವಾಗಬೇಕೆಂದು ನಿರೀಕ್ಷಿಸುವ ಸುದ್ದಿಗಳನ್ನೇ ಅವರು ಪ್ರಕಟಿಸುವರು. ಅವು ದಿಟವಿರಲಿ ಸಟೆಯಿರಲಿ, ಅದರ ಚಿಂತೆಯಿಲ್ಲ. ಜನತೆ-ಪತ್ರಿಕೆಯಂತೆ ಕುಣಿವುದು. ಇಂತಹವರಿಗೆ ಭಾರತದ ಬಗೆಗೆ ಏನು ಕಲ್ಪನೆ ಬರಬಹುದು? ಪತ್ರಿಕೆ ಉಸಿರುವುದೇ ಪ್ರಮಾಣ! ಬಂಡವಲುಗಾರರಿಗೆ ಭಾರತವನ್ನು ಬಿಡುವುದೆಂದರೆ ಬರವನ್ನು ಎದುರಿಸಿದಂತೆಯೆ! ಭಾರತದ ವ್ಯಕ್ತಿಗಳಲ್ಲಿ ಜವಾಹರರ ಬಗೆಗೆ ಜನರಲ್ಲೆಲ್ಲ ತಿಳಿವಳಿಕೆ- ಆದರ ಹೆಚ್ಚಾಗಿದೆ. ಅದು ಅಲ್ಲಿಯೆ ಪ್ರಸಿದ್ಧವಾದ ಅವರ ಆತ್ಮಚರಿತ್ರೆಯ ಮೂಲಕವಿರಬಹುದು. ಆದರೂ ಅದು ಹಾಗಿದ್ದುದು ನಿಜ!"

ಅಲ್ಲಿಯ ಜನರ ಸ್ವಭಾವವಿಷಯದಲ್ಲಿ ಮಾತು ನಡೆದಾಗ, ದೇಶಪಾಂಡೆಯವರು ಹೇಳಿದುದು ಹೀಗೆ:

"ಯಾವುದೆ ಕಾರ್ಯವನ್ನು ಕೈಕೊಳ್ಳಲಿ ಅವರು ಅದನ್ನು ಕೊನೆಗಾಣಿಸದೆ ಬಿಡುವುದಿಲ್ಲ. ವಿದ್ಯಾರ್ಥಿಗಳು ಜಾಣರು, ಅಭ್ಯಾಸದಲ್ಲಿ ಆಸಕ್ತಿಯುಳ್ಳವರು; ಧ್ಯೇಯಸಾಧನೆಗಾಗಿ ಹಗಲಿರುಳು ಉತ್ಕಟತೆಯಿಂದ ದುಡಿವುದು ಅವರ ಪರಂಪರೆಯಲ್ಲಿ ಬೆರೆತು ಹೋಗಿದೆ. ಇದೆಲ್ಲವೂ ಸ್ವತಂತ್ರ ಸರಕಾರದ—ಜೀವನದ ಫಲವೆಂದು ನನಗೆ ಅಡಿಗಡಿಗೆ ಎನಿಸುತ್ತಿತ್ತು."

ಡಾ. ದೇಶಪಾಂಡೆಯವರು ಮೂರು ವರುಷಗಳ ಕಾಲ ಶ್ರೀ. ಬ್ರಾವುನ್ ಎಂಬ ಶಿಕ್ಷಕರಸಾನ್ನಿಧ್ಯದಲ್ಲಿ ಸಂಶೋಧನೆ ನಡೆಯಿಸಿ,

(೧೭೭ನೆಯ ಪುಟ ನೋಡಿರಿ)

ಸಿಡುಬು ★ ಅಥವಾ ಮೈಲಿ

(Smallpox) ★

ಪ್ರತ್ಯುತ್ತರಕ್ಕೆ ಉತ್ತರ *

ಶ್ರೀ. ವೆಂಕಟರಾವ ಬಿದರಕುಂದಿ, ವ್ಯಾಕ್ಸಿನೇಟರ್

ಮೇಲಿನ ತಲೆಬರೆಹದ ಒಕ್ಕಣಿಕೆಯು ಓದುಗರ ತಲೆಯನ್ನು ತುರಿಸುತ್ತಿರಬಹುದು; ಆದರೂ ಒಂದು ರೋಗದ ಪ್ರತಿಬಂಧ ಮಾಡುವ ಶಕ್ತಿಯು ಯಾವ ಔಷಧದಲ್ಲಿದೆಯೆಂಬುದನ್ನು ಅರಿತುಕೊಳ್ಳುವುದಕ್ಕೆ ಪ್ರತಿಯೊಬ್ಬ ಮನುಷ್ಯನಿಗೂ ಲವಲವಿಕೆ ಇರುವುದು ಸಹಜ.

"ರೋಗ ಬಂದ ಮೇಲೆ ಮದ್ದು ತಿಂದು ವಾಸಿ ಮಾಡಿಕೊಳ್ಳುವುದಕ್ಕಿಂತ, ರೋಗದ ಸೋಂಕು ತಗಲದಂತೆ ಕಾಪಾಡಿಕೊಳ್ಳುವುದು ಉತ್ತಮ"! ಆದುದರಿಂದ ಸಿಡುಬು ಅಥವಾ ಮೈಲಿ ರೋಗವು ಸಮೀಪಕ್ಕೆ ಬಾರದಂತೆ ಮಾಡಿಕೊಳ್ಳುವುದೆಂದರೆ ವ್ಯಾಕ್ಸೀನೇಶನ್; ಇದು ಪ್ರತಿಯೊಬ್ಬರಿಗೆ ಅನುಭವಸಿದ್ಧವಾಗಿರುವ ಮಾತು.

ಡಾ. ಎಚ್. ಪಿ. ಕುಲಕರ್ಣಿಯವರು ೧೯೪೧ ನೆಯ ಜೂನ್ ಸಂಚಿಕೆಯಲ್ಲಿ "ಹೋಮಿಯೋಪಾಥ್ ಪುಡಿಮದ್ದುಗಳನ್ನು ಹೊಟ್ಟೆಯಲ್ಲಿ ತೆಗೆದುಕೊಳ್ಳುವುದರಿಂದ ಸಿಡುಬುಬೇನೆಯನ್ನು ಪ್ರತಿಬಂಧಿಸಲೂ ಬಹುದು," ಎಂದು ಪ್ರತಿಪಾದಿಸಿರುವರು. ನನ್ನ ಡಿಶಂಬರ್ ತಿಂಗಳ ಉತ್ತರಕ್ಕೆ "ಬಹುದು ಕ್ರಿಯಾಪದದ ಅರ್ಥವು ಪೂರ್ಣ ಲೇಖನ ಓದುವುದರಿಂದಲೇ ಆಗುತ್ತದೆ. ಎಂಗಡಿಸಿ ಓದಲು ಪ್ರಯತ್ನಬಟ್ಟರೆ ನಾವು ಹೇಳಲು ಹೊರಟ ಅರ್ಥವು ಹೊರಡಲಿಕ್ಕಿಲ್ಲ. ಆದುದರಿಂದ ಆ ಭಾಗವನ್ನು ಆದೇ ಸಂದರ್ಭದಲ್ಲಿ ಓದಬೇಕಾಗಿ ಸೂಚಿಸುತ್ತೇವೆ" ಎಂದು ತಿದ್ದುಪಡಿ ಮಾಡಿರುವರು.

'ಬಹುದು' ಈ ಕ್ರಿಯಾಪದದ ಹಿಂದೆ ಬೇಕಾದಂತಹ ಸನ್ನಿವೇಶ, ಸಂದರ್ಭಗಳಿದ್ದರೂ ಅದು ಸಂಶಯವೆ. ಅಖಂಡ ಪೂರ್ಣವಿರಾಮವುಳ್ಳ "ಬರುತ್ತದೆ" ಎಂಬುದು ನಿಸ್ಸಂದಿಗ್ಧ ಕ್ರಿಯಾಪದವಿದ್ದರೂ (ಬಹುದು) 'ಪ್ರತಿಬಂಧಿಸಲೂ ಬಹುದು' ಯಾಕೆ? "ಪ್ರತಿಬಂಧಿಸುತ್ತದೆ" ಎಷ್ಟು ಧೈರ್ಯದ ಕ್ರಿಯಾಪದ! ಆ ಕೊಡಲಿಯ ಕಚ್ಚನ್ನು ಅಳಿಸುವರಾರು?

ಡಾಕ್ಟರ್ ಸಾಹೇಬರು ತಾವು ಬರೆದ ಲೇಖನಕ್ಕೆ ನನ್ನ ಉತ್ತರವನ್ನು ಓದಿ, ಎಪ್ರೀಲ್ ೧೯೪೨ ರ ಸಂಚಿಕೆಯಲ್ಲಿ 'ಉತ್ತರಕ್ಕೆ ಪ್ರತ್ಯುತ್ತರ'ಎಂದು ಬರೆಯುವಾಗ ರೇಗಿಗೆದ್ದು—'ನಾನು ಎಮ್. ಬಿ. ಬಿ. ಎಸ್. ಇವನಾರು....'ವ್ಯಾಕ್ಸೀನೇಟರ್'ಉತ್ತರ ಬರೆಯುವವ?' 'ಅಪೂರ್ತಿ ಜ್ಞಾನದ ಅರ್ಭಾಟವನ್ನೆ ಎಬ್ಬಿಸಿದ್ದಾರೆ,...' ಎಂದು ಬರೆದಿರುವುದು, ಡಿಗ್ರಿಗಳ ಮರೆಯಲ್ಲಿ ಪೂರ್ಣಜ್ಞರೆಂದು ತಿಳಿದುಕೊಳ್ಳುವವರಿಗೆ ಇದು ಅನುಚಿತವೆಂದು ಬರೆದರೆ ತಪ್ಪಾಗಲಿಕ್ಕಿಲ್ಲ.

ಡಾ. ಎಚ್. ಪಿ. ಕುಲಕರ್ಣಿಯವರದೂ, ನನ್ನದೂ ಪರಿಚಯವಿಲ್ಲ. ಜಯಂತಿಯು ಇಬ್ಬರನ್ನೂ ಮಾತನಾಡಿಸುತ್ತದೆ, ಅದನ್ನೇ 'ಬ್ರಾಡ್‌ಕಾಸ್ಟಿಂಗ್' ಮಾಡುತ್ತದೆ. ಈ ನಮ್ಮ-ನಿಮ್ಮ ಜುಜ್ಜು-ಮದ್ದಿಗೆ ಬೇಸರಾದವರು ಸೂಕ್ಷ್ಮದೃಷ್ಟಿಯಿಂದ ನೋಡುತ್ತಿರ

★

ಯಾವದೇಶದಲ್ಲಿ ಡಾ. ಜೇವ್ರೋಸ್ಕಿಯವರು ಸಿಡುಬುರೋಗದ ಪ್ರತಿಬಂಧಕ್ಕೆ ಹೋಮಿಯಾಪಾಥ್ ಪುಡಿಮದ್ದುಗಳನ್ನು ಕಂಡುಹಿಡಿದು ಕೀರ್ತಿವಂತರಾಗಿರುವರೆಂದು ಹೇಳುವರೊ, ಅದೇ ಜರ್ಮನಿಯಲ್ಲಿ ಇಂದಿಗೂ ವ್ಯಾಕ್ಸಿನೇಶನ್ ಪದ್ಧತಿಯೇ ಇರುವುದೇಕೆ? ಅಲ್ಲದೆ ಇದೇ ಪದ್ಧತಿಯಿಂದ ಮೈಲಿರೋಗದ ಉಚ್ಚಾಟಣೆಯನ್ನು ಮಾಡಿದ ಪ್ರಥಮ ಶ್ರೇಯಸ್ಸು, ಪ್ರಪಂಚದಲ್ಲಿ ಜರ್ಮನಿಗೇ ದೊರೆಯುವುದಲ್ಲ!

★

ಬಹುದು! ಡಾಕ್ಟರ್‌ಸಾಹೇಬರು ಎಷ್ಟೋ ತಜ್ಞಜನರ ಅಭಿಪ್ರಾಯಗಳನ್ನು ಕೊಟ್ಟಿರುವರು. ಮೊದಲಿನ ಲೇಖನದಲ್ಲಿ ಒಂದು ಮನೋರಂಜಕಕತೆ; ಎರಡನೆಯದರಲ್ಲಿ ಪುಸ್ತಕಗಳಲ್ಲಿಯ ಅವತರಣಿಕೆ—ಪುಟ.

ಇದಕ್ಕೆ ತಕ್ಕ ಉದಾಹರಣೆಯಾಗಿ ನಾನು ಪ್ರತ್ಯಕ್ಷವಾಗಿ ನೋಡಿದ ಮಾತೊಂದು ನೆನಪಾಗುತ್ತದೆ. "ನಾನು ಒಂದು ಹಳ್ಳಿಗೆ ವ್ಯಾಕ್ಸಿನೇಶನಿನ ಕೆಲಸಕ್ಕೆ ಹೋದಾಗ, ಬದಿಯಲ್ಲಿಯೆ ಇದ್ದ ಶಾಲೆಯಲ್ಲಿ ಒಬ್ಬ ವಿದ್ಯಾರ್ಥಿಯು 'ಪಾಂಡವರು ವನವಾಸಕ್ಕೆ ಹೋದಾಗ ಕಾಮ್ಯಕವನದಲ್ಲಿ ಇರುತ್ತಿದ್ದರು' ಎಂದು ಗಟ್ಟಿಯಾಗಿ ಓದಿ 'ಮಾಸ್ತರರೆ, ಕಾಮ್ಯಕವನ ಎಂದರೆಲ್ಲಿ?' ಎಂದು ಕೇಳಿದ. ಗೊತ್ತಿಲ್ಲದ ಮಾಸ್ತರರು ಹುಡುಗನಿಗೆ ಉತ್ತರ ಕೊಡಲು ತಿಳಿಯದವರಾಗಿ 'ಕಾಮ್ಯಕ-

---

* ಈ ವಿಷಯದಲ್ಲಿ ಸಾಕಷ್ಟು ಚರ್ಚೆ-ವಿಚರ್ಚೆಯಾಗಿದೆಯಾದುದರಿಂದ, ಇನ್ನು ಮೇಲೆ ಇದಕ್ಕೆ ಸಂಬಂಧಿಸಿದ ಯಾವ ಲೇಖನಕ್ಕೂ ಎಡೆ ದೊರೆಯದು.
—ಸಂ. ಜ.

ವನನಃ, ಇದು ಗೊತ್ತಿಲ್ಲೇನು...' ಎಂದು ಚೀರಿ ಒದರಿ, ಹುಡುಗನನ್ನು ಬೆದರಿಸಿ ಸುಮ್ಮಗಾದರು. ಪಾಪ ಹುಡುಗನೂ ಬೆದರಿ ಬೆಪ್ಪಾಗಿ ಕುಳಿತ. ಆದರಂತೆಯೆ ಡಾಕ್ಟರರು ಹಾಡಿದ್ದನ್ನೆ ಹಾಡಿರುವರು.

ಇನ್ನು ಡಾಕ್ಟರರಾಗಲಿ ನಾನಾಗಲಿ, ಸಿಡುಬುಬೇನೆಗೆ ಪ್ರತಿಬಂಧಕ ಉಪಾಯುಗಳನ್ನು ಕಂಡುಹಿಡಿದವರಲ್ಲ. ಅವನ್ನು ಕಂಡುಹಿಡಿದ ತಪಸ್ವಿಗಳು ಬೇರೆ, ಅದಕ್ಕೆ ಟೀಕಾಚಾರ್ಯರೂ ಅದೆಷ್ಟೋ ಜನರಿರುವರು. ನಾವು ಕೇವಲ ಅಂಗಡಿಯೊಳಗಿನ ಸಿದ್ಧೌಷಧಿಯಂತೆ ಅದನ್ನು ಉಪಯೋಗಿಸುತ್ತೇವೆ. ಉಪಯೋಗದ ಅನುಭವವನ್ನು ಓದುಗರ ಮುಂದೆ ಇಡಬೇಕು; ಅದೇ ಕೊನೆಯ ನಿರ್ಣಯ. ಅಂಗೈಯನ್ನು ನೋಡುವುದಕ್ಕೆ ಕನ್ನಡಿಯೇಕೆ ?

ಡಾಕ್ಟರ್ ಕುಲಕರ್ಣಿಯವರು ಕೊಟ್ಟ ಪುಸ್ತಕ- ಲೇಖನಗಳಲ್ಲಿಯ ಅವತರಣಿಕೆಗಳಂತೆ, ನಾನೂ ನನಗೆ ಪೋಷಕವೆನಿಸುವ ಅವತರಣಿಕೆಗಳನ್ನು ಸಾಕಷ್ಟು ಕೊಡಬಲ್ಲೆ. ಅಭ್ಯಾಸಿಗಳು ಓದಿರಬಹುದು; ಡಾಕ್ಟರರೂ ವ್ಯಾಕ್ಸೀನೇಟರರೂ ಪಾಠಮಾಡಿರಬಹುದು. ಓದುಗರ ಪುಟಗಳನ್ನು ಹೆಚ್ಚಾಗಿ ಹಿಡಿಯದೆ, ನೆನಪಿಗಾಗಿ ಕೆಲವು ಪುಸ್ತಕಗಳ ಹೆಸರನ್ನು ಮಾತ್ರ ಹೇಳುವೆನು.

ಸೀಟನ್ಸ್ ಹ್ಯಾಂಡ್‌ಬುಕ್ ಆಫ್ ವ್ಯಾಕ್ಸೀನೇಶನ್, ರೇನಾಲ್ಡ್ಸ ಸಿಸ್ಟಿಮ್ ಆಫ್ ಮೆಡಿಸಿನ್, ರಿಥುವರ್‌ಸೆನ್ಸ್ ಸಿಸ್ಟಿಮ್ ಆಫ್ ಮೆಡಿಸಿನ್,. ಕ್ವೀನ್ ಡಿಕ್ಶನರಿ ಆಫ್ ಮೆಡಿಸಿನ್, ರಿಪೋರ್ಟ್ಸ್ ಆಫ್ ರಾಯಲ್ ಕಮಿಶನ್ ಆನ್ ವ್ಯಾಕ್ಸೀನೇಶನ್, ಬ್ಯೂಸ್ಟ್ ಆನ್ ವ್ಯಾಕ್ಸೀನೇಶನ್, ಬಾಗ್ಲೇಜ್ ಫ್ಯಾಂಪ್ಲೇಟ್ ಆನ್ ಎನಿಮಲ್ ವ್ಯಾಕ್ಸೀನೇಶನ್, ಕೂಕ್ ಶಾಕ್ಸ್ ಬ್ಯಾಕ್ಟೋರಿಯಾಲಜಿ ಆ್ಯಂಡ್ ಪ್ಯಾಥಾಲಜಿ ಆಫ್ ವ್ಯಾಕ್ಸೀನೇಶನ್, ಹೆಲ್ಥ್ ಆ್ಯಂಡ್ ಸರ್ಜಿಕಲ್ ಡಿಕ್ಶನರಿ, ವ್ಯಾಕ್‌ನೆಲ್ಸ್ ವ್ಯಾಕ್ಸೀನೇಶನ್ ವ್ಹಿಂಡಿಕೇಟೆಡ್—ಇತ್ಯಾದಿ.

ಡಾ. ಕುಲಕರ್ಣಿಯವರು ಅಥಣಿಯೊಳಗೆ ನೂರಾರು ವ್ಯಾಕ್ಸೀನೇಶನ್ ಆಗದೆ ಇದ್ದ ಹುಡುಗರಿಗೆ ತಮ್ಮ ಹೋಮಿಯೋಪಥಿ ಪುಡಿಗಳನ್ನು ಕೊಟ್ಟು, ಮೈಲಿರೋಗ ಪ್ರತಿಬಂಧಮಾಡಿರುವುದಾಗಿ ಹೇಳುವರು. ಯಾವ ಊರಲ್ಲಿ ಸಕ್ತೀ ವ್ಯಾಕ್ಸೀನೇಶನಿನ ಕಾಯ್ದೆಯನ್ನು ಜಾರಿಯಲ್ಲಿ ತಂದಿರುವರೊ, ಅಲ್ಲಿ ಒಂದು ವರುಷದ ಮೇಲಿನ ಹುಡುಗರು ವ್ಯಾಕ್ಸೀನೇಶನ್ ಆಗದೆ ಇರಲು ಶಕ್ಯವಿಲ್ಲ. ಒಂದು ವರುಷದ ಒಳಗಿನ ಹುಡುಗರಿಗೆ ಡಾಕ್ಟರರು ತಮ್ಮ ಪುಡಿಗಳನ್ನು ಕೊಟ್ಟಿದ್ದರೆ, ಮುಂದಾದರೂ ವ್ಯಾಕ್ಸೀನೇಶನ್ ಆಗಿರಲೇಬೇಕು ; ಇದು ನಿಸ್ಸಂಶಯ ! ಇಲ್ಲದಿದ್ದರೆ ಮಕ್ಕಳ ಪಾಲನಕರ್ತರು ಶಿಕ್ಷೆಗೆ ಗುರಿಯಾಗುವರು.

ಮನುಷ್ಯರ ಶರೀರದಲ್ಲಿ ಯಾವುದೇ ಪ್ರಕಾರದ ಸಿಡುಬುಬೇನೆಯ ಪ್ರತಿಬಂಧಕಶಕ್ತಿಯು ಪೂರ್ಣವಿದ್ದರೆ, ಅವರಿಗೆ ನಮ್ಮ **ಗ್ಲೀಸರಾಯಿನೇಟೆಡ್ ಲಿಂಫಿನಿಂದ** ಮೈಲಿ ಚುಚ್ಚಿದರೆ ಉಬ್ಬುವುದೇ ಇಲ್ಲ (unsuccessful). ಆದುದರಿಂದ ಡಾಕ್ಟರ್ ಸಾಹೇಬರು ಈಗಲಾದರೂ ಪರೀಕ್ಷಿಸಬೇಕು. ತಮ್ಮ ಪೇಶಂಟುಗಳ ಯಾದಿಯಿಂದ ಸಹಜವಾಗಿ ಗೊತ್ತಾಗುವುದು (ಸಕ್ಸೆಸ್‌ಫುಲ್ ವ್ಯಾಕ್ಸೀನೇಶನ್ ಆಗಿದ್ದರೆ ಕಲೆಗಳು ಆಮರಣ ಉಳಿಯುತ್ತವೆ). ಇದಕ್ಕೆ ಗ್ರಂಥಗಳನ್ನು ಓದುವುದೂಬೇಡ, ಅಭ್ಯಾಸ ಮಾಡುವುದೂಬೇಡ, ಅನುಭವಿಗಳ ವಚನಗಳ ಅವತರಣಿಕೆಗಳೂ ಬೇಡ.

ಹಿಂದಿನ ಪೇಶಂಟುಗಳನ್ನು ಹುಡುಕಿ ನೋಡುವುದಕ್ಕೆ ವೇಳೆಯು ಅಪವ್ಯಯವಾಗುತ್ತಿದ್ದರೆ, ಈಗಲಾದರೂ ಡಾಕ್ಟರ್ ಸಾಹೇಬರು ಕಡಿಮೆಯೆಂದರೆ ೫ ಹುಡುಗರಿಗೆ ತಮ್ಮ ಹೋಮಿಯೊಪಥಿ ಪುಡಿಗಳನ್ನು ತಿನ್ನಿಸಿ, ನಡುವೆ ಬಿಡಬೇಕಾದಷ್ಟು ದಿನಬಿಟ್ಟು, ತಮ್ಮ ನಿದಾನಪದ್ಧತಿಯ ಪ್ರಕಾರ ಉಪಚಾರ ಮುಗಿದ ಮೇಲೆ, ನಮ್ಮ ಗ್ಲೀಸರಾಯಿನೇಟೆಡ್ ಲಿಂಫಿನಿಂದ (Vaccinator Athani ಅವರಿಂದ) ಆ ಮೈಲಿಚುಚ್ಚದೆ ಇದ್ದ ಹುಡುಗರಿಗೆ ವ್ಯಾಕ್ಸೀನೇಶನ್ ಮಾಡಿಸಲಿ; ನಿಯಮದಂತೆ ಗುಳ್ಳೆಗಳು ಎದ್ದರೆ (successful) ಅವರ ಪುಡಿಮದ್ದುಗಳಲ್ಲಿ ಅರ್ಥವಿಲ್ಲವೆಂದು ತಿಳಿಯಬೇಕು. ಮಾತ್ರ ಗುಳ್ಳೆಗಳು ಏಳದೆ (unsuccessful) ಇದ್ದರೆ, ತಮ್ಮದೂ ಒಂದು ಸಿಡುಬುರೋಗದ ಮೇಲೆ ಪ್ರತಿಬಂಧಕ ಶಕ್ತಿಯುಳ್ಳ ಔಷಧವಿದೆಯೆಂದು ತಿಳಿದುಕೊಳ್ಳಬಹುದು.

' ಜೇನರರು ಹುಟ್ಟಿದ ದೇಶದಲ್ಲಿಯೇ ಆ್ಯಂಟಿ ವ್ಯಾಕ್ಸೀನೇಶನ್ ಲೀಗವೆಂಬುದು ಇರುವದೇಕೆ ? ' ಎಂದು ಡಾಕ್ಟರ್ ಕುಲಕರ್ಣಿಯವರ ಪ್ರಶ್ನೆ. ಡಾಕ್ಟರ್ ಕುಲಕರ್ಣಿಯವರೆ, ಯಾವ ದೇಶದಲ್ಲಿಯ ಡಾಕ್ಟರ್ ಬೋರ್ವೋಸ್ಕಿಯವರು ಹೋಮಿಯೊಪಥಿ ಪುಡಿಗಳಿಂದ ಮೈಲೀರೋಗ ಪ್ರತಿಬಂಧವಾಗುತ್ತದೆಂದು ಜಗತ್ತಿನ ನಿದರ್ಶನಕ್ಕೆ ತಂದುಕೊಟ್ಟರೋ, ಅದೆ ಜರ್ಮನಿಯಲ್ಲಿ ಇಂದಿಗೂ ಮೈಲಿಚುಚ್ಚುವ ಪದ್ಧತಿಯೇ ಇರುವುದೇಕೆ ? ಅಲ್ಲದೆ ನಮ್ಮ ವ್ಯಾಕ್ಸೀನೇಶನ್ ಪದ್ಧತಿಯಿಂದಲೇ ಸಿಡುಬುರೋಗದ ಉಚ್ಚಾಟನೆಯನ್ನು ಮಾಡಿದ ಶ್ರೇಯಸ್ಸು ಪ್ರಪಂಚದಲ್ಲಿ ಜರ್ಮನಿಗೇ ಸಿಕ್ಕಿರುವುದಲ್ಲವೆ ?

' ಆ್ಯಂಟಿ ವ್ಯಾಕ್ಸೀನೇಶನ್ ಲೀಗ ' ವು ಇಂಗ್ಲಂಡಿನಲ್ಲಿ ಒಂದೇ ಏಕೆ, ಜಗತ್ತಿನ ಬಹುಭಾಗದಲ್ಲಿ ಹರಡಿರುವುದು. ಆದರೆ ವ್ಯಾಕ್ಸೀನೇಶನಿನ ಬದಲು 'ಹೋಮಿಯೊಪಥಿ'ಪುಡಿಗಳನ್ನು ತಿನ್ನುವುದಿಲ್ಲವೆಂಬುದನ್ನು ಡಾಕ್ಟರ್‌ಸಾಹೇಬರು ನೆನಪಿನಲ್ಲಿ ಇಡಲಿ !

ಏನನ್ನು ಕಂಡನು....? ★

ಶ್ರೀ. ಎಸ್. ಬಿ. ಪಾದೇಕಲ್ಲು
ಕಂಬಳಿ

★

ಲೋಕದಲ್ಲಿ ಸುಂದರನಂತೆ ಕುರುಡುದಾರಿಯಿಂದ ನಡೆದು, ಬಳಿಕ ಅಪರಾಧದ ಕಹಿಫಲವನ್ನು ಪಡೆಯುವವರೇ ಬಹಳ; ಆದರೆ ಈ ಅಪರಾಧದ ಅಗ್ನಿಕುಂಡದಲ್ಲಿ ಪದ್ಮೆಯಂತಹ ಶುದ್ಧಜೀವಿಗಳು ಬಿದ್ದು ಬಲಿಯಾಗುತ್ತಿರುವುದು ತುಂಬ ದುಃಖಕಾರಕ ವಿಷಯ!

★

"....ಪದ್ಮಾ!"

"..............."

"ಪದ್ಮಾ!.... ಏ ಪದ್ಮಾ...."

"ಹೂಂ...."

"ಕಣ್ಣು ತೆರೆ— ಈಗ ಹೇಗಿದೆ ಮಗಳೇ?...."

"....ಅಮ್ಮಾ...."

"ಗುಣವಿದೆಯೇ ಪದ್ಮಾ....?"

"ಇಲ್ಲವಮ್ಮಾ!...."

"ಡಾಕ್ಟರರು ಈಗ ಬರುವರು; ಮೂರ್ತಿ ಹೋಗಿರುವನು!"

"ಯಾಕೆ....?"

"ಅಯ್ಯೋ ಹುಚ್ಚಿ!.... ನೀನು ಬೇಗನೇ ಗುಣಹೊಂದಬೇಡವೇನು?"

"ಬೇಡ...."

"ಬೇಡ!.... ನನ್ನ ಪ್ರಾಣರತ್ನ, ಹಾಗೆನ್ನದಿರಮ್ಮಾ...."

"....ಯಾಕೆ ಬದುಕಲಿ, ತಾಯಿ? ....ಯಾತಕ್ಕಾಗಿ ಬದು....ಕಲಿ....?"

"ಸುಮ್ಮನಿರಮ್ಮಾ....ಪದ್ಮಾ, ನಿನಗೆ...."

"....ಏನೂ ಬೇಡ....ವ್ಯರ್ಥ...."

ಹೀಗೆನ್ನುತ್ತಾ ಪದ್ಮೆಯು ಕಣ್ಮುಚ್ಚಿದಳು. ಮಗಳ ಇರವನ್ನು ನೋಡಿ, ಆಕೆಯ ತಾಯಿ ವಿಮಲಮ್ಮನ ಕಣ್ಣುಗಳಲ್ಲಿ ಶೋಕಾಶ್ರುಬಿಂದು ಮೂಡಿ ಕೆಳಗೆ ಹರಿಯತೊಡಗಿತು.

"ಅಮ್ಮಾ....!" ಹೊರಗಣಿಂದ ಕರೆ ಕೇಳಿಸಿತು.

ವಿಮಲಮ್ಮ ಬಾಗಿಲನ್ನು ತೆರೆದಳು. ಹೊರಗೆ ಅಂಚೆಯಾಳು ನಿಂತಿದ್ದನು. 'ಪತ್ರವಿದೆಯೇ?' ಎಂದು ಕೇಳಿದಳು. ಆಳು ಉಂಟೆಂದು ತಲೆಯಾಡಿಸಿ, ಮೊಹರುಮಾಡಿದ ಕಾಗದವನ್ನು ಕೊಟ್ಟು ಹೊರಟುಹೋದನು.

"....ಏ-ನ-ಮ್ಮಾ....ಅದು?" ಕೇಳಿದಳು ಅರೆಗಣ್ದೆರೆಯುತ್ತಾ ಪದ್ಮೆ.

"ಪತ್ರಬಂದಿದೆ; ನೋಡು, ಇದೊ!...." ವಿಮಲಮ್ಮ ಮಗಳ ಕೈಗಿತ್ತಳದನ್ನು.

ಪದ್ಮೆಯು ನಡುನಡುಗುವ ಕೈಗಳಿಂದ ಕಾಗದವನ್ನು ಬಿಡಿಸಿ ಹಿಡಿದಳು. **ಆಕೆಯ ಕಾಂತಿವಿಹೀನವಾದ ಅಕ್ಷಿಯುಗಳವು, ಆ ಒಣಗಿದ ಎಲುಬುಗೂಡುಗಳಲ್ಲಿದ್ದಂತೆಯೆ ಪಿಳಪಿಳನೆ**—ಪತ್ರದಲ್ಲಿ ಸಾಲುಗೊಂಡಿದ್ದ ಅಕ್ಷರಗಳನ್ನು ನೋಡಿತು. ಒಮ್ಮಿಂದೊಮ್ಮೆಗೇ ಅದು ಉಜ್ವಲಗೊಂಡಿತು!.... ಒಡನೆಯೇ ಆ ಕಾಂತಿಯು ನಂದಿಯೇ ಹೋಯಿತು! ಆಕೆಯ ತುಟಿಗಳೆಡೆಯಲ್ಲಿ ಮಿಂಚಿದ ಸೆಳೆನಗುವೊಂದು, ಕಾರ್ಮುಗಿಲೆಡೆಯ ಎಳಮಿಂಚಿನಂತೆ ಉತ್ತರಕ್ಷಣದಲ್ಲಿ ಮರೆಗೊಂಡಿತು.

"ಪದ್ಮಾ....! ಏನೇನು ಬರೆದಿದೆ? ಎಲ್ಲಿಂದ ಬಂದುದು?" ವಿಮಲಮ್ಮ ಆತುರದಿಂದ ಪ್ರಶ್ನಿಸಿದಳು; ಉತ್ತರವಿಲ್ಲ....

ಪದ್ಮೆಯು ಆ ಕಾಗದವನ್ನು ಸರ್ರನೆ ಎರಡು ಹೋಳಾಗಿ ಸೀಳಿ, ಮುದ್ದೆಮಾಡಿ ನೆಲಕ್ಕೊಗೆದಳು. ಅವಳ ಮೋರೆಯಲ್ಲಿ ನಿರಾಶೆಯ ಕಳೆಯು ತುಂಬಿತ್ತು. ಆದರೂ ಸಮಾಧಾನದಿಂದಿದ್ದಳು. ಅಷ್ಟರಲ್ಲಿ ಹಾಸ್ಪಿಟಲಿಗೆ ಹೋದ ಕೃಷ್ಣಮೂರ್ತಿ, ಓಡಿಯೋಡಿ ಅತ್ತ ಬಂದನು.

"ಅಮ್ಮಾ! ಬೆಳಗ್ಗೆಯೇ ಬೇರೆಲ್ಲಿಗೋ ಹೋದ ಡಾಕ್ಟರರು ಇನ್ನೂ ಬಂದಿಲ್ಲ....ಕೆಲಸ ಕೆಟ್ಟಿತಲ್ಲ! ನನ್ನ ಪದ್ಮೆಯ ಗತಿಯು ಏನಮ್ಮಾ...." ಚಿಕ್ಕ ಹುಡುಗನಂತೆ ಮೂರ್ತಿಯು ಬಿಕ್ಕಿ ಬಿಕ್ಕಿ ಅತ್ತನು.

ವಿಮಲಮ್ಮ "ಮೂರ್ತಿ! ಒಂದು ಪತ್ರ ಬಂದಿರುತ್ತದೆ.... ಏನು ಸಮಾಚಾರವೋ ಗೊತ್ತಿಲ್ಲ....ತೆಗೆದು ನೋಡಪ್ಪಾ!" ಎಂದು ಪದ್ಮೆಯು ಹರಿದೆಸೆದ ಕಾಗದವನ್ನು ಹೆಕ್ಕಿ ಕೊಟ್ಟಳು.

(೧೬೪ ನೆಯ ಪುಟದಿಂದ ಮುಂದುವರಿದದ್ದು)

‘ ಸಸ್ಯಾದಿಗಳ ಬೇನೆಗಳು ’ ಎಂಬ ವಿಷಯದ ಮೇಲೆ ಪ್ರಬಂಧವನ್ನು ಬರೆದು ೧೯೪೦ ರಲ್ಲಿ ಸಲ್ಲಿಸಿದರು. ಅದಕ್ಕೆ **ಪಿಎಚ್. ಡಿ.** ಪದವಿ ದೊರೆಯಿತು.

ಕೂಡಲೆ ಹೊರಡಬೇಕೆಂದರೆ ಯುದ್ಧ, ಅಲ್ಲಿಯೆ ಉಳಿದರೆ ಹಣದ ವ್ಯಯ, ಅಭಿಮಾನಕ್ಕೆ ಪೆಟ್ಟು! ಹೀಗಾಗಿ ಕೆಲಕಾಲ ಅಲ್ಲಿಯೆ ಒಂದು ಸಂಸ್ಥೆಯಲ್ಲಿ ಕೆಲಸಮಾಡಿ ದಿನಗಳನ್ನು ಕಳೆಯತೊಡಗಿದರು. ಮುಂದೆ ಸಮಯ ನೋಡಿ **ಕೇಪ್. ಆಫ್. ಗುಡ್ ಹೋಪ್** ಮಾರ್ಗವಾಗಿ ಭಾರತಕ್ಕೆ ೧೯೪೨ ನೆಯ ಇಸ್ವಿಯ ಮೇ ೧೧ನೆಯ ತಾರೀಖಿಗೆ ಬಂದರು.

ಬರುವಾಗ ಇವರು ದಕ್ಷಿಣ ಆಫ್ರಿಕೆಯ **ದರ್ಬಾನಕ್ಕೆ** ಹೋಗಿದ್ದರು. ಅಲ್ಲಿಯ ವಾತಾವರಣವನ್ನು ಕಂಡು ಮನಸ್ಸು ಬಹಳ ವ್ಯಾಕುಲವಾಯಿತಂತೆ. ಅಲ್ಲಿ ಭಾರತೀಯರನ್ನು ಕಸವೆಂದು ಕಾಣುವ ಬಿಳಿಯರ ಪ್ರವೃತ್ತಿಯನ್ನು ಭಾರತೀಯರು ಹೇಗೆ ತಡೆದುಕೊಳ್ಳುತ್ತಾರೆಂಬುದು ಆಶ್ಚರ್ಯಪಡುವಂತಿದ್ದರೂ, ಇವರಿಗೆ ಕಳವಳವೆನಿಸದೆ ಇರಲಿಲ್ಲ. ಭಾರತೀಯರು ಸ್ವಾಭಿಮಾನ ಶೂನ್ಯರಾಗಿದ್ದಾರೆ. ಸ್ವಾತಂತ್ರ್ಯವಿಲ್ಲದುದಕ್ಕೆ ಸ್ವಾಭಿಮಾನಶೂನ್ಯತೆ ನಮ್ಮ ಜನರನ್ನಾವರಿಸಿಬಿಟ್ಟಿದೆ. ಈ ಸ್ವಾಭಿಮಾನಶೂನ್ಯತೆಗಾಗಿ ಕಳೆದುಕೊಂಡಿದ್ದ ಸ್ವಾತಂತ್ರ್ಯವನ್ನು ಮರಳಿ ಪಡೆಯುವೆವೊ ಇಲ್ಲವೊ ಎಂಬುದೇ ತಿಳಿಯದಾಗಿದೆ.

ಡಾ. ದೇಶಪಾಂಡೆಯವರು

ಸಸ್ಯಾದಿಗಳ ಬೇನೆಗಳ ವಿಷಯದಲ್ಲಿನ ಇವರ ಅಭ್ಯಾಸವು ಕರ್ನಾಟಕದ-ಭಾರತದ-ಕೃಷಿಕರ ಜೀವನಕ್ಕೆ ಸಹಾಯಕವಾಗಿ, ಭಾರತದ ಕೃಷಿಕರು ಹಾನಿಗೊಳಗಾಗದೆ ಲಾಭವನ್ನು ಪಡೆಯುಂತಾಗಲೆಂದು ಹಾರಯಿಸುವುದು ನಮ್ಮ ಕರ್ತವ್ಯವೆಂದು ನಾವು ಭಾವಿಸುತ್ತೇವೆ. ಜಾಣರ ಜಾಣತನದ ಉಪಯೋಗ ಜನತೆಗಾಗಿಯೆ ಆಗಬೇಕಲ್ಲವೆ?

ಮೂರ್ತಿಯು ಬೇಗಬೇಗನೇ ಓದಿದನು :—

ಮೆದ್ರಾಸ್

ತಾ. ೨೮ ಡಿಸೆಂಬರ್ ೧೯೪೦

“ ಪ್ರಿಯ ಪದ್ಮಾ....

ನನ್ನನ್ನು ಕ್ಷಮಿಸು!....ಕ್ಷಮಿಸಲಾರೆಯಾ?....ನೀನು ಯಾವಾಗಲೂ ಪತ್ರಗಳಲ್ಲಿ ಬರೆಯುತ್ತಿದ್ದ ಮಾತು ನಿಜವಾಯಿತು.... ಕೆಟ್ಟೆ! ನಾನು ನಿಜವಾಗಿಯೂ ಕೆಟ್ಟು ಹಾಳಾದೆ! ಪದ್ಮಾ,— ಅಯ್ಯೋ!....ಈ ಹಾಳು ಜೀವನವೇಕೆ?— ಹೆಚ್ಚು ಬರೆಯುವುದಿಲ್ಲ. ನಿಶ್ಚಯವಾಗಿ ಬರುತ್ತೇನೆ. ಇಗೋ—ಹೊರಟೆನೆಂದೇ ತಿಳಿ ನಾನು ಬಂದು ನಿನ್ನ....ನ್ನು.... ಕಾಣು....ವೇ....ನೆ....? ಹಾಯ್ !!

ನಿ-ನ್ನ-ವನೇ,

ಸುಂದರ ”

“ ....ಭಾವಯ್ಯನಿಗೆ ಈಗ ಈ ಬುದ್ಧಿ ಬಂದಿತೇನು? ಪ್ರಯೋಜನವೇನು! ” ಎಂದು ಮೂರ್ತಿ ನಿಟ್ಟುಸಿರುಬಿಟ್ಟನು, ವಿಮಲಮ್ಮನಿಗೆ ಏನೊಂದೂ ತೋರಲಿಲ್ಲ. ಜಡವಸ್ತುವಿನಂತೆ ನಿಂತಿದ್ದಳು.

“ ನನ್ನ ಪದ್ಮಾ....! ” ಮೂರ್ತಿಯು ಕಣ್ಣೀರೊರಸುತ್ತಾ ತಂಗಿಯ ದೇಹವನ್ನು ಮುಟ್ಟಿ ನೋಡಿದನು....ಸರ್ವಾಂಗಗಳೂ ತಣ್ಣಗಿವೆ!....ಬಾಳೆಯ ದಿಂಡಿನಂತೆ—ಹಿಮಜಲದಲ್ಲಿ ಮುಳುಗಿಸಿಟ್ಟ ವಸ್ತುವಿನಂತೆ— ತಣ್ಣಗಿವೆ.

ಮೃತ್ಯುಮುಖದಲ್ಲಿದ್ದ ಪದ್ಮೆಯು ದೊಡ್ಡವಾಗಿ ಕಣ್ದೆರೆದಳು: ಆ ಕಣ್ಣುಗಳಿಂದ ವಿಮಲಮ್ಮ-ಮೂರ್ತಿ ಇವರಿರ್ವರ ಮುಖಗಳನ್ನೂ ನೋಡಿದಳು....ಇಬ್ಬರ ತೋಳುಗಳನ್ನೂ ತನ್ನೆರಡು ಕೈಗಳಿಂದಲೂ ಬಿಗಿಹಿಡಿದಳು. “ ಅಣ್ಣಾ....ಅಮ್ಮಾ....” ಎಂದು ಅಸ್ಪಷ್ಟವಾಗಿ ಕರೆದಳು; ಕೇಳಿಸಲಿಲ್ಲ....ಅದೊಂದು ಮೂಕ ನಟನೆ! ಪೈಶಾಚಿಕ ನಟನೆ!....ಮೂರ್ತಿ-ವಿಮಲಮ್ಮರು ನಡುಗಿದರು....!!

“ ಅ-ವ-ರು....ಬಂದ-ರೆ....ಪದ್ಮಾ....ಹಾ-ರಿ-ಹೋಯಿ....ತೇ....ಳಿ....ನಾ....ಹೋ....ಗು....” ಪದ್ಮೆಯು ತಡೆತಡೆದು ಉಬ್ಬಸಪಡುತ್ತಾ ಕೊನೆಯ ಮಾತನ್ನು ನುಡಿದಳು. ತೆರೆದಿದ್ದ ಕಂಗಳು ಮುಗಿದುವು; ಬಾಯಿ ನಸು ತೆರೆಯಿತು.

“ ಪದ್ಮಾ!....ಅಯ್ಯೋ ಪದ್ಮಾ....ನನ್ನ ಪದ್ಮಾ!....” ಎಂದು ಗೋಳಿಡುತ್ತಾ ಅವರಿಬ್ಬರೂ ಪದ್ಮೆಯ ಮೇಲೆ ಕವಿದರು... ಆದರೇನು....?

ಅವಳು ‘ ಹೂಂ ’ ಎನ್ನುವಳೇ? ತುಟಿ ಮಿಡುಕುವಳೇ? ಕಣ್ದೆರೆವಳೇ....? ನಿಟ್ಟುಸಿರು ಬಿಡುವಳೇ....? ಎಲುಬು ಚರ್ಮಗಳ ಮಾತ್ರ ಉಳಿದಿದ್ದ ಪದ್ಮೆಯ ಆ ಕಳೇಬರವು, ಕಳೆಗುಂದುತ್ತ ಆನಂದದಿಂದ ಶೋಭಿಸುವುದಿನ್ನೆಂದಿಗೊ ....? ಹಾ! .... ನಿಜವಾಗಿಯೂ ಆಕೆಗೆ ಜೀವವಿಲ್ಲವೇನು....?....ನುಡುಕಿದರೆ....

* * *

ಪ್ರಾತಃಕಾಲ, ಮದ್ರಾಸಿನಿಂದ ಮೈಲ್‌ಟ್ರೈನ್ ಹೊರಡುವುದಕ್ಕೆ ಇನ್ನು ಹೆಚ್ಚಿನ ಸಮಯ ಉಳಿದಿರಲಿಲ್ಲ. ಕೆ. ಜಿ. ಸುಂದರರಾಜನು, ಸೆಕೆಂಡ್ ಕ್ಲಾಸ್ ಕಂಪಾರ್ಟ್‌ಮೆಂಟಿನಲ್ಲಿ, ತಲೆಯನ್ನು ಕರತಳದಲ್ಲೂರಿ ಚಿಂತಾಕ್ರಾಂತನಾಗಿ ಕುಳಿತಿದ್ದನು. ಅವನ ಸಮೀಪದಲ್ಲಿ ಇನ್ನಾರೂ ಇರಲಿಲ್ಲ. ಮನಸ್ಸಮಾಧಾನವಿಲ್ಲದುದರಿಂದ ಹಳೆ-ಹಳೆಯ ಜೀವನಚಿತ್ರಗಳು ಆತನ ಕಣ್ಣಿಗೆ ಕಟ್ಟಿದಂತಾಗುತ್ತಿದ್ದುವು.

" ರತ್ನದ ಗೊಂಬೆಯಂತಿರುವ ಸಿಂಗಾರದ ಮುದ್ದೆಯಂತಿರುವ ಪ್ರೇಮದ ಪತ್ನಿ ಪದ್ಮೆ !....ವಿದ್ಯಾವತಿ, ಗುಣವತಿ| ಪ್ರೀತಿಯಿಂದ ಕಂಡು ಮನಕ್ಕೊಪ್ಪುವ ರೀತಿ-ನೀತಿಯಿಂದ ನಡಕೊಳ್ಳುತ್ತಿರುವ ಕೋಮಲ ಹೃದಯೆ !.... ಸದಯೆ ! ಮಧುರ ಭಾಷಿಣಿ.... ಮನೋರಾಣಿ ! ಅವಳೀಗ .... ? ಅವಳನ್ನು ತೊರೆದೆನೇಕೊ.... ? ಪದ್ಮೆಯೊಡನಿದ್ದರೇ—ಸುಖ, ನಿತ್ಯ ಸುಖ ! ಸ್ವರ್ಗಸುಖ !! .... ಅಯ್ಯೊ ಕೆಟ್ಟೇ!....ಮೇರಿಜಾನಳ ಒನಪು-ಒಯ್ಯಾರಕ್ಕೆ ಸಿಲುಕಿ ಕೆಟ್ಟೆ !.... ನನ್ನ ಪದ್ಮೆಗೆ ನನ್ನಿಂದ ದೊರೆತುದು ಬರೇ ನಾಲ್ಕು ತಿಂಗಳ ಸೌಖ್ಯ....ಮರೆದೆನಲ್ಲವೆ....!.... ಎಷ್ಟು ಪತ್ರ ಬರೆದಳು ; ಗಣನೆಗೆ ಬರುವುವೇ !. . ಅವೆಲ್ಲವನ್ನು ಅಗ್ನಿಗಾಹುತಿ ಕೊಟ್ಟೆನಲ್ಲ! ನನ್ನ ಹೃದಯವು ಕರಗಲಿಲ್ಲ ! ಕಗ್ಗಲ್ಲೂ ನೀರಾಗುತ್ತಿತ್ತು !

....ಹೋದೊಡನೆ ಕ್ಷಮೆ ಬೇಡುವೆನು.... ತಪ್ಪನ್ನು ಮನ್ನಿಸುವಳೇ. . ? ಇಲ್ಲ—ನಿಶ್ಚಯ ! ಎಲ್ಲಾದರೂ ಗ-ತಾ-ಸುವಾದರೆ? ನನ್ನನ್ನು ಕಾಣುವ ಹಂಬಲವೆ ಆಕೆಗೆ ಮನೋವ್ಯಾಧಿಯಾಗಿ ಪರಿಣಮಿಸಿರಬಹುದಲ್ಲವೇ ?. . " ಎಂದು ಭಾವಿಸಿ, ಮಮ್ಮಲ ಮರುಗಿದನು ಸುಂದರ. .

ಟ್ರೈನು ಸಿಳ್ಳು ಹೊಡೆಯಿತು.... ' ಉಫ್....ಉಫ್ ಟಟ್ಟಾಂ ' ಎನ್ನುತ್ತಾ ಹೊರಟು ಮುಂದೋಡಲಾರಂಭಿಸಿತು. ಆದರೆ, ಉಗಿಬಂಡಿಯಿಂದಲೂ ಮುಂದಾಗಿ ' ಡಬ್ ಡಬ್ ' ಎನ್ನುವ 'ಸುಂದರರಾಜ'ನ ಹೃದಯವು, ಮನೋವೇಗದಿಂದ ಪದ್ಮೆಯನ್ನು ಅರಸುತ್ತಾ ಕುಂಬಳೆಗೆ ಸಾಗಿದ್ದಿತು !....

ತನ್ನ ಟ್ರಂಕ್‌ಬಾಕ್ಸಿನ ಬಾಗಿಲನ್ನು ತೆರೆದು, ಸುಂದರರಾಜನು ಏನನ್ನೋ ಅರಸಿದನು....ಪ್ರಮಾದವಶಾತ್ ಉಳಿದು ಹೋಗಿದ್ದ ಪದ್ಮೆಯ ಎರಡು ಪತ್ರಗಳು ಕೈಗೆ ದೊರೆತುವು.... ಅವುಗಳನ್ನು ಎದೆಗೊಂದಿಸಿದನು. . ಮುದ್ದಿಸಿದನು.... ನೋಡಿದನು :

೧

ಪುತ್ತೂರು,

ಸಚ್ಚಿನ- ಮೆಚ್ಚಿನ ನಲ್ಲ, ೧೫ ಒಕ್ಟೋಬರ್ ೩೯

ಅದೇಕೊ ಈಗೀಗ, ನಿಮ್ಮಲ್ಲಿ ನನಗೆ ತೋರಿದ ಸಂಶಯ ನಿಜವಾದುದೆಂದೇ ಬಗೆಯಬೇಕಾಗುತ್ತದೆ. ಹಿಂದಿನ ಪತ್ರ ಬರೆಯುವಾಗ ನಾನು ಕುಂಬಳೆಯಲ್ಲಿ ತಾಯಿ-ಅಣ್ಣಂದಿರೊಡನಿದ್ದೆ. ಈಗ ಇಲ್ಲಿಗೆ, ಮನೆಗೆ ಬಂದು ನಾಲ್ಕು ದಿನಗಳಾದುವು. ಅತ್ತೆ-ಮಾವಂದಿರು ನಿಮ್ಮ ಆಗಮನವನ್ನೇ ಸದಾ ಹಾರಯಿಸುತ್ತಿರುವರು. .

ಇನ್ನು ನನ್ನ ಅವಸ್ಥೆಯನ್ನು ಬೇರೆಯೇನು ಬರೆಯಲಿ. . ? ಬರೆಬರೆದು ಬರಿದಾಗಿದೆ.—ನೀವಿಲ್ಲಿಂದ ಹೋಗಿ ಇಂದಿಗೆ ಆರು ತಿಂಗಳು ಹದಿನೆಂಟು ದಿನಗಳಾದುವು. . ನನ್ನ ನೆನಪೇ ಇಲ್ಲ ನಿಮಗೆ!—ಎರಡು ತಿಂಗಳಿನಿಂದೀಚೆಗೆ, ನೀವು ಒಂದೇ ಒಂದು ಚೂರು ಕಾಗದವನ್ನೂ ನನಗೆ ಬರೆಯಲಿಲ್ಲ ! ಕಾರಣ ಗೊತ್ತಿದೆ ನನಗೆ!. . ಹುಂ .... ಅವಳೇ ಸಾಕು ನಿಮಗೆ !.... ಇದಕ್ಕಾದರೂ ನೀವು ಉತ್ತರ ಬರೆಯುವಿರೇ....? —ಎಲ್ಲಿಂದ ! ಬರಿಯ ಭ್ರಮೆ ! —ಆಗಲಿ. . !

ಇಂತೀ ನಿಮ್ಮ

ಪದ್ಮ . . "

* * *

ಕುಂಬಳೆ

" ಪ್ರಿಯಾ........! ತಾ. ೨೬ ಡಿಸೆಂಬರ್ ೪೦

ಇಂದು ಡಿಸೆಂಬರ್ ೨೬. ನಿಮ್ಮ ಜನ್ಮೋತ್ಸವದ ಸುದಿನ! ಆದರೆ. . ನನ್ನ ಪಾಲಿಗಿಂದು ದುರ್ದಿನ !. . ಅಂದೊಮ್ಮೆ ನಾನು, ಇಡಿಯ ದಿವಸ ಬಹಳ ಸಂತಸದಿಂದ ನಿಮ್ಮೊಟ್ಟಿಗೇ ಕುಳಿತು ಊಟ ಮಾಡಿದ್ದೆನು. . ಅಂದು ಅವಧಾನಿ ಮಾಧವಭಟ್ಟರು " ಪರಮಾನ್ನಕ್ಕೆ ಮೆಣಸೂ-ಹುಳಿಯೂ ಸರಿಯಾಗಿ ಬೀಳಬೇಕಿತ್ತು ! " ಎಂದು ತಮಾಷೆ ಮಾಡಿದುದು ನೆನಪಿದೆಯೆ ?. . . .

ಹೃದಯೇಶ್ವರಾ, ನಾನಿನ್ನು ಬದುಕುವುದಿಲ್ಲ !. . ಸಾಯುವುದು ನಿಶ್ಚಯ !. . ಬಡವಾಗಿ ಸುಕ್ಕುಗಟ್ಟಿದೆ ಮೈ!. . ಮದುವೆಯಾಗುವಾಗ ಇದ್ದ ಪ್ರೇಮಾತಿಶಯವು ಎಲ್ಲಡಗಿತೋ ನಿಮ್ಮಲ್ಲಿ. . ? ಅವಳಲ್ಲಿ !. . ಆ....ಬೇಡ, ಯಾಕೆ ಸುಮ್ಮನೆ ಬೈಯ್ಯುವೆನು ! ನೀವು, ಆನರ್ಸ್ ಬಿ. ಎ. ಡಿಗ್ರಿ ಪಡೆದುಕೊಂಡಿರುವುದರ ಫಲವಿದುವೇ?. . ಆವೊತ್ತೆ—ಕೆಲಸ ಸಿಕ್ಕಿದೊಡನೆ, ನನ್ನನ್ನು ಕರೆದುಕೊಂಡು ಹೋಗಿರೆಂದು ಬರೆದೆ; ಒಂದು ತಿಂಗಳು ದಾಟಲಿಯೆಂದಿರಿ ನೀವು! ನನ್ನ ತೀರ್ಥರೂಪರು ಪರಂಧಾಮವನ್ನೈದಿದ ವೃತ್ತಾಂತ, ನನ್ನ ತಾ. ೩೧ ಅಗಸ್ಟ್ ೪೦ ರ ಪತ್ರದಲ್ಲಿ ನೋಡಿರಬಹುದು!. . ಆ ದುಃಖದ ಮೇಲೆ ನನ್ನ ಸಂಕಟದ ಹೊಸ ದುಃಖ ಇಲ್ಲಿಯೂ—ಪುತ್ತೂರಿನಲ್ಲಿಯೂ!

ಸುಳ್ಳಲ್ಲ, ಇದೇ ನಾನು ಬರೆದ ನೂರಾರು ಪತ್ರಗಳಲ್ಲಿ ಕೊ—ನೆ.. ಯದು! ತಿಳಿದಿರಿ. . ಈ ಜನ್ಮದಲ್ಲಿ ನಾನು ನಿಮ್ಮನ್ನು ಕಾಣಲು ಸಾಧ್ಯವಿಲ್ಲವೆಂಬುದು ನಿಶ್ಚಯ !

ನನ್ನೀ ಅಂತಿಮಕಾಲದಲ್ಲಿಯೂ ನಿಮಗೆ ಸದಾ ಸೌಖ್ಯವಿರಲೆಂದು ಹಾರಯಿಸುತ್ತೇನೆ. .

ಮೃತ್ಯುಶಯ್ಯೆಯಲ್ಲಿರುವ,

ಪದ್ಮಾ "

* * *

ನಾಲ್ಕಾರು ಸಲ ಸುಂದರರಾಜನು ಈ ಪತ್ರಗಳೆರಡನ್ನೂ ಓದುತ್ತ ಕಣ್ಣೀರಿನಿಂದ ಅಭಿಷೇಕಮಾಡಿದನವಕ್ಕೆ;....ಈಗ ಅವನ ' ಪದ್ಮೆ'ಯು ಇಹಲೋಕದಲ್ಲಿರುವಳೇ ?....

ಎಷ್ಟೆಷ್ಟೋ ಸ್ಟೇಷನುಗಳು ಕಳೆಯುತ್ತಲಿದ್ದರೂ ಸುಂದರನಿಗೊಂದೂ ತಿಳಿಯಲೇ ಇಲ್ಲ! ....ಒಮ್ಮೆ ಕಲ್ಲಿಕೋಟೆಯಲ್ಲಿ ಕೆಳಗಿಳಿದು ಅಲ್ಪಾಹಾರ ಸ್ವೀಕರಿಸಿದ್ದನು.... ಅಷ್ಟೆ!

ಪಶ್ಚಿಮಾಂಬುಧಿಯ ನೀಲವರ್ಣವು ಅಲ್ಲಲ್ಲಿ ತೋರಿಬರುತ್ತಿತ್ತು. ಟ್ರೈನ್ 'ನೀಲೇಶ್ವರ'ವನ್ನು ದಾಟುವಾಗ ಆಕಡೆ ನೋಡಿದನು. ತಾನು ಮೊದಲು ಓದುವಾಗ ಇದ್ದಂತೆಯೇ ಈಗಲೂ ಅಲ್ಲಿಯ ದೊಡ್ಡ ಹೈಸ್ಕೂಲ್ ಕಟ್ಟಡವು ತಲೆಯೆತ್ತಿ ನಿಂತಿದ್ದಿತು— ಭವ್ಯವಾಗಿ!.... .... ಅದು ಕ್ಷಣಾರ್ಧದಲ್ಲಿ ಕಂಡೂ ಕಾಣದಂತಾಯಿತು!

ಕಾಸರಗೋಡಿನಲ್ಲಿ ಟಪ್ಪಾಲು ಬಂಡಿಯು ನಿಂತುದೇ ಸರಿ; ಸುಂದರರಾಜನು ಅವಸರವಸರದಿಂದ ಇಳಿದು ಬಂದನು. ಕುಂಬಳೆಯಲ್ಲಿ ಮೈಲ್ ನಿಲ್ಲುವುದಿಲ್ಲವಾದುದರಿಂದ, ೪-೪೫ ರ ಸ್ಪೆಷಲಿನಲ್ಲಿ ಕಾಯಬೇಕಿತ್ತು. . . . .

ಅಷ್ಟರಲ್ಲೆ ಲಂಬೋದರರಾಯರ ಸವಾರಿ ಬಂದಿತು.... ರಾಯರು ಸುಂದರನ ಸಮೀಪಬಂಧು. ಮೊದಲ ಗುರುತು ಹಿಡಿದು, "ಓಹೊ! ..ರಾಜರು....! ಯಾವಾಗ ಬಂದಿರಿ?.. ಈಗ?" ಎಂದು ಮಾತೆತ್ತಿದರು.

ಸುಂದರರಾಜನು ಹೌದೆಂದು ತಲೆಯೊಲೆದು, ತಗ್ಗಿದ ದನಿಯಲ್ಲಿ "ಸೌಖ್ಯತಾನೇ ..? ಪದ್ಮೆಯ ಸಮಾಚಾರ ಗೊತ್ತಿದೆಯೇ?" ಎಂದು ಕೇಳಿದರು. . . . .

"....ನಾನಿಲ್ಲಿಗೆ ಬೆಳಗಿನ ಗೂಡ್ಸಿಗೆ ಬಂದುದು; ಒಂದು 'ಕೇಸಿ'ನ ಬಗ್ಗೆ! .. ಆಗ ಅವಳಿಗೆ ಬಹಳ ಕಠಿಣತರವಾಗಿತ್ತೆಂಬುದನ್ನು ಮಾತ್ರ ಬಲ್ಲೆ!" ಎಂಬುದು ರಾಯರ ಉತ್ತರ.. ಸುಂದರ ರಾಜನಿಗೆ ಒಂದೊಂದು ನಿಮಿಷವೂ ಒಂದೊಂದು ಯುಗವಾಗಿ ಪರಿಣಮಿಸಿತು!

....ಗಂಟೆ ೪-೪೫ರ ಸ್ಪೆಷಲ್ ಬಂತು. ಇಬ್ಬರೂ ಹತ್ತಿ ಕುಳಿತುಕೊಂಡರು .. .. ೫-೧೫ ಕ್ಕೆ ಮುಂದೆ ಹೊರಟಿತು.... ಬರೇ ಎಂಟು ಮೈಲುಗಳ ಪ್ರಯಾಣವದು.. ಸಮಯ ಹೆಚ್ಚೇಕೆ?

ಕುಂಬಳೆಯಲ್ಲಿಳಿದೊಡನೆ ನೆಟ್ಟಗೆ ಪದ್ಮೆಯನ್ನು ಕಾಣುವ ತವಕದಿಂದ ಮುಂದೋಡಿದನು. ಆದರೆ, ಮೈದಾನಿಗೆ ಬಂದೊಡನೆ ತಟ್ಟನೆ ನಿಂತುಬಿಟ್ಟನು!.. ಕಾರಣ?

ಮೈದಾನಿನ ಬಡಗಣ ಇಳಿಜಾರಿನಲ್ಲಿ ಸ್ಮಶಾನವಿತ್ತು. ಸಮೀಪದ ಬಂಡೆಯಲ್ಲೂ, ಚುಬುಕಿನ ತೋಪಿನ ದರಿಯಮೇಲೂ ಕೆಲಕೆಲವು ಪೋಲಿಹುಡುಗರು ನಿಂತಿದ್ದು ಗುಲ್ಲೆಬ್ಬಿಸುತ್ತಿದ್ದರು.. ಸುಳಿಸುಳಿದು, ಭಯಂಕರವಾಗಿ ಒಂದೇಸವನೆ ಹೊಗೆ ಮೇಲೇರಿ ಗಗನದಲ್ಲಿ ಹರಡುತ್ತಿತ್ತು!.. ಇದನ್ನು ಕಂಡೇ ಸುಂದರರಾಜನು ಸ್ತಬ್ಧನಾಗಿದ್ದನು. "ನನ್ನ ಪದ್ಮೆಯು ಬದುಕಿಲ್ಲ...." ಎಂದು ತರ್ಕಿಸಿ ಅತ್ತ ಧಾವಿಸಿದನು .. ಬಾಲಕರು ಈತನನ್ನು ಕಂಡು ಗೇಲಿಮಾಡಿದರು.. ಕಲ್ಲು-ಮಣ್ಣೆರಚಿದರು.. ಆದರೆ,– ಆತನು ಕೊನೆಗೆ ಕಂಡನೇನನ್ನು..?

..ಪ್ರೇತವನದಲ್ಲಿ ಧಗಧಗಿಸುತ್ತಿರುವ ಪದ್ಮೆಯ ಚಿತೆಯನ್ನು! ಸುಂದರನು ಸ್ಮೃತಿತಪ್ಪಿ ಬಿದ್ದುಬಿಟ್ಟನು. . .

ಪದ್ಮೆಯನ್ನು ಮರೆದು ಮೇರಿಜಾನಳ ಪ್ರಣಯಭಾಗಿಯಾಗಿ ಕಾಲಕಳೆದರೇನು; ಆನರ್ಸ್ ಬಿ. ಎ., ತಾನಾಗಿದ್ದರೇನು; ಬಾಳ್ವೆಯ ನಿಜವಾದ ಕುರುಳನ್ನು ಕಂಡನೇ . . . .?

* * *

ವಿ. ಸೂ — ಇದರಲ್ಲಿರುವ ಜನರ ಹೆಸರುಗಳೆಲ್ಲ ಕಲ್ಪಿಸಲ್ಪಟ್ಟುವು— ಕುಂಬಳೆಯಲ್ಲಿ—ಪುತ್ತೂರಿನಲ್ಲಿ ಇವು ಯಾರಿಗೂ ಅನ್ವಯಿಸಲಾರವು. –ಲೇ.

* * *



ಕೋಪಿಸಲೂ ಕಲಿಯಬೇಕು!

(ಲಘುಪ್ರಬಂಧ)

ಶ್ರೀ. ತಲವಾಟ ಸುಬ್ಬರಾಯಶರ್ಮರು

ಕೋಪವೆಂಬುದು ಅನರ್ಥ ಕಾರಣವಂತೆ! ಕೋಪವೆಂಬುದು ಪಾಪದ ನೆಲೆಗಟ್ಟಂತೆ. ಎಂತಲೆ ಕೋಪವು ಅರಿಷಡ್ವರ್ಗದಲ್ಲಿ ಮೇಲಿನ ಸ್ಥಾನ ಪಡೆದಿದೆ ನಮ್ಮಲ್ಲಿ. ಆದರೆ ಕೋಪವಿಲ್ಲದ ಮನುಜನ ಬಾಳು ದನದ ಬಾಳಿಗಿಂತ ಕೀಳೆನಿಸುವುದರಲ್ಲಿ ಸಂದೇಹವಿಲ್ಲ!

★

ಮನುಷ್ಯನ ಜೀವನದಲ್ಲಿ ನಗು, ಆನಂದ, ಸುಖ, ದುಃಖಗಳಿಗಿರುವಂತೆಯೆ ಕೋಪಕ್ಕೂ ಒಂದು ಮಹತ್ತ್ವದ ಸ್ಥಾನವಿದೆ. ಕೋಪವಿಲ್ಲದವನ ಬಾಳು ವ್ಯರ್ಥ! ಆದಕ್ಕಾಗಿಯೆ ಮಾತನಾಡುವ ಮೊದಲು "ಕೋಪಿಸಬೇಡಿ, ಏನೋ ಹೇಳಬೇಕೆಂದಿದ್ದೇನೆ" ಎಂದು ಪ್ರಾರಂಭಿಸುವ ರೂಢಿ ಇದೆ. ಕೋಪಕ್ಕಾಗಿ ಅಂಜಲೇಬೇಕು; ಕೋಪದ ಭಯವಿಲ್ಲದವನು ಇಲ್ಲವೆ ಇಲ್ಲ!

ಕೋಪದಲ್ಲಿಯೂ ಅನೇಕ ರೀತಿ ಇವೆ. ಕೆಲವರು ಮಾತನಾಡುತ್ತಲೇ ಸಿಟ್ಟುಮಾಡಿ ಬಿಡುತ್ತಾರೆ. ಅಂಥವರಿಗೆ 'ಮುಂಗೋಪಿ'ಗಳು ಅಥವಾ 'ಇದಿರು ಸಿಟ್ಟಿನವ' ರೆಂದು ಹೆಸರು. ಇಂಥವರ ಕೋಪ ಬಹಳ ಹೊತ್ತಿನವರೆಗೆ ಇರುವುದಿಲ್ಲ. ಒಮ್ಮೆ ಬಾಯಿಗೆ ಬಂದಂತೆ ಕೂಗಾಡಿ ಕೊನೆಗೆ ಪಶ್ಚಾತ್ತಾಪ ಪಡುವ ವರ್ಗದವರಿವರು.

ಕೋಪಬರುವುದಕ್ಕಿಂತ ಮುಂಚೆಯೇ ನಾವು ಕೋಪಾಗಮನದ ಚಿಹ್ನೆಯನ್ನು ಕಾಣಬಹುದು. ಕೋಪದ ಮೊದಲಿಗೆ ಮುಖವೆಲ್ಲ ಕೆಂಪಗಾಗುತ್ತದೆ. ಆಮೇಲೆ ಹುಬ್ಬುಗಂಟಿಕ್ಕುತ್ತದೆ. ಕೆಳದುಟಿಯನ್ನು ಹಲ್ಲಿನಿಂದ ಯಾವಾಗ ಕಚ್ಚಿ ಹಿಡಿದನೊ, ಕೂಡಲೆ ಕೋಪಾತಿರೇಕವಾಯಿತೆಂದು ತಿಳಿಯಬೇಕು. ಆದರೆ ಇದನ್ನೇ ಪ್ರಧಾನವಾಗಿಟ್ಟುಕೊಂಡು ಮೋಸಹೋಗಬೇಡಿರಿ! ಕೆಲವು ಜನರು ಸಿಟ್ಟಿನ ಯಾವ ಚಿಹ್ನೆಯನ್ನೂ ಮುಖದಲ್ಲಿ ತೋರಿಸುವುದಿಲ್ಲ; ನಗುತ್ತಲೇ ಇರುತ್ತಾರೆ, ಆದರವರ ಒಡಲಿನಡಿಯಲ್ಲಿ—ನಗುವಿನ ಹಿನ್ನೆಲೆಯಲ್ಲಿ—ಕೋಪವಡಗಿರುತ್ತದೆ. ಇಂಥವರು ಕಟು–ಅಪ್ರಿಯವಾದ–ಮಾತುಗಳನ್ನೂ ಸಹಿಸಿಬಿಡುತ್ತಾರೆ. ಇಂಥವರ ಸಿಟ್ಟಿನ ಫಲ ಬಹಳ ಬಿರುಸಾಗಿರುತ್ತದೆ. ಇದು ಹೆಂಗಳೆಯರಿಗೆ (ಲಗ್ನವಾದವರಿಗೆ) ಗೊತ್ತಿರಬಹುದು. 'ಮನೆಯ ಗಂಡನ ನಗು ನಂಬಬಾರದು' ಎನ್ನುವ ಗಾದೆಯ ಮಾತು ಇಂಥವರ ಸಲುವಾಗಿಯೆ ಇರುತ್ತದೆ.

ಸಿಟ್ಟು ಮಾಡಿ ಜಯಶೀಲರಾಗಲು ಎಲ್ಲರೂ ಸಮರ್ಥರಾಗುವುದಿಲ್ಲ; ಆದಕ್ಕೂ ಸ್ವಲ್ಪ ಬಲಶಾಲಿ ಬೇಕು. 'ಬಡವನ ಸಿಟ್ಟು ದವಡೆಗೆ ಮೂಲ' ಎಂದೆನ್ನುತ್ತಾರೆ.

ಮಾತನ್ನಾಡುವಾಗ ಯಾರ ಮನಸ್ಸು ಹೇಗಿರುತ್ತದೆ ಎಂಬುದನ್ನು ತಿಳಿದೇ ಮಾತನಾಡಬೇಕಾಗುತ್ತದೆ. ಮೊದಲನೆಯವರ್ಗದ ಅರ್ಥಾತ್ ಮುಂಗೋಪಿಗಳ ಮುಂದೆ ಬಹಳ ಜಾಗರೂಕರಾಗಿ ಮಾತನಾಡಬೇಕಾಗುತ್ತದೆ. ಅವರಿಗೆ ಹಿಂದುಮುಂದಿನ ಯೋಚನೆ ಇರುವುದಿಲ್ಲ.

ನಮ್ಮೂರಿನಲ್ಲಿ ಒಬ್ಬ ರಾಯರಿದ್ದಾರೆ; ಅವರ ಹೆಸರು ಬೇಡ, ರಾಯರೆಂದೇ ಕರೆಯೋಣ. ಅವರು ಮೊದಲನೆಯ ವರ್ಗದವರು. ಅವರೊಡನೆ ಮಾತನಾಡುವುದೇ ಕಷ್ಟ. ಮಾತನಾಡದಿರುವುದು ಮತ್ತೂ ಕಷ್ಟ. ಯಾರಾದರೂ ಅವರನ್ನು ಕಂಡು, ಹಾಗೆಯೇ ಮಾತನಾಡದೆ ನಡೆದುಬಿಟ್ಟರೆ ಅವರು ರೇಗಿ ಬಿಡುತ್ತಾರೆ. "ಏನಯ್ಯಾ ಜಂಭ ನಿನ್ನದು! ಕಂಡರೂ ಕಾಣದಂತೆ ಹೊರಟು ಹೋಗುತ್ತಿದೀಯ! ಎಲ್ಲೋ ನಾಲ್ಕು ಕಾಳಕ್ಷರ ಕಲಿತರೆ, ಆಗ ತಾನೇ ಪ್ರಾರಂಭವಾಯಿತಲ್ಲ!" ಎನ್ನುವರು. ಅಕಸ್ಮಾತ್ತಾಗಿ ಮಾತನಾಡಿಸಿ ನಾನು ಬೈಸಿಕೊಂಡಿದ್ದೇನೆ. "ಏನು ರಾಯರೆ, ಬಹಳ ಅಪರೂಪವಾಗಿ ನಮ್ಮ ಮನೆಗೆ ಬಂದಿರಿ! ಕುಳಿತುಕೊಳ್ಳಿ! ತೃಷೆಗೆ ತರಿಸಲೋ?" ಎಂದು ಕೇಳಿದೆ ನಾನು. ಈ ಮಾತಿನಲ್ಲಿ ಅವರಿಗೆ ಯಾವುದು ಅಪ್ರಿಯವಾಯಿತೋ ನಾನರಿಯೆ. ಕೂಡಲೇ "ಏನಯ್ಯಾ, ಅಪರೂಪ ಅಂತೀಯಾ! ಏನು ಬರಬಾರದೆನ್ನುತ್ತೀಯಾ? ಇದೋ ಹೊರಟೆ!" ಎಂದು ಹೊರಟೇಬಿಟ್ಟರು. ನಾನೊಬ್ಬನೇ ಅಲ್ಲ, ಹೀಗೆಯೆ ಎಷ್ಟೋ ಜನರು ಬೈಸಿಕೊಂಡಿದ್ದಾರೆ.

ಒಂದು ದಿನ ನಮ್ಮೂರಿಗೆ ಪರವೂರಿನ ಸಭ್ಯಗೃಹಸ್ಥರೊಬ್ಬರು ಬಂದರು. ಎಲ್ಲರಂತೆ ರಾಯರೂ ಅವರಿಗೆ ಭೆಟ್ಟಿಯಾದರು. ಮಾತು ನಡೆಯುತ್ತಿರುವಾಗ, ಪರವೂರಿನವರು ರಾಯರ ಮುಖಕ್ಕೆ ಮಸಿ ಹತ್ತಿರುವುದನ್ನು ಕಂಡು "ರಾಯರೇ ಮೋರೆಗೆ ಮಸಿ ಹತ್ತಿದೆಯಲ್ರೀ" ಎಂದರು. ರಾಯರು ಹಿಂದುಮುಂದು ನೋಡದೆ ರೇಗಿಯೇ ಬಿಟ್ಟರು. "ನನ್ನ ಮೋರೆಗೆ ಮಸಿ ಹತ್ತಿದರೆ ನಿಮಗೇನಾಗಬೇಕಪ್ಪಾ! ಹೀಗೆಲ್ಲಾ ಮಾತನಾಡುವುದು ಚೆನ್ನಾಗಿರೋಲ್ಲ ನೋಡಿ!" ಎಂದುಬಿಟ್ಟರು. ಏನೋ ತಮಾಷೆಗೆ

ಹೇಳುತ್ತೇನೆಂದು ತಿಳಿಯಬೇಡಿ; ಇಂತಹವರಾದ ಮುಂಗೋಪಿಗಳಿರುತ್ತಾರೆ. ಇಂಥವರಿಗೇ "ಮೂಗಿನ ಮೇಲೆ ಮಸಿ ಎನ್ನಲಿಲ್ಲ, ಕೋಪ!" ಎನ್ನುವ ಹಿರಿಯರ ನುಡಿ ಅನ್ವಯಿಸುತ್ತದೆ.

ಕೋಪವು ಪೌರುಷದ ಹೆಗ್ಗುರುತು. ಕೋಪದಿಂದಲೇ ಹಿಂದಿನ ಎಷ್ಟೋ ಪುರುಷರು ಮಹತ್ಕಾರ್ಯಗಳನ್ನು ಮಾಡಿರುತ್ತಾರೆ. ಮಹಾಭಾರತದಲ್ಲಿಯ ಭೀಮನ ಕೋಪವನ್ನು ನೀವು ಕೇಳಿರಬಹುದು. ಆತನೂ ಬಹಳ ಕೋಪಿ. ಒಮ್ಮೆ ಸಿಟ್ಟಿಗೆದ್ದು ತನ್ನ ಭಾರವಾದ ಗದೆಯನ್ನೆತ್ತಿ, ಕೆಂಗಣ್ಣಿನಿಂದ ಕಿಡಿ ಸೂಸುತ್ತ ಮುಂದುವರಿದನೆಂದರೆ, ಆತನನ್ನು ನೋಡುವ ಧೈರ್ಯ ಯಾರಿಗೂ ಆಗುತ್ತಿರಲಿಲ್ಲವಂತೆ. ಮೊದಲೇ ಭಯಂಕರ ಮನುಷ್ಯನಾತ; ಕೋಪವು ಬೇರೆ ಬಂದ ಮೇಲೆ ಕೇಳುವುದಿದೆಯೇ? ಯಾರು ಯಾರು ಪ್ರಯತ್ನಪಟ್ಟರೂ ಆತನ ಕೋಪಶಮನ ಮಾಡುವುದು ಅಸಾಧ್ಯವಾಗುತ್ತಿತ್ತು.

ಜಮದಗ್ನಿಯ ಕೋಪವಂತೂ ಜಗತ್ಪ್ರಸಿದ್ಧವಾಗಿ ಬಿಟ್ಟಿದೆ. ಯಾರಿಗಾದರೂ ಬಹಳ ಕೋಪಬಂದರೆ ಜಮದಗ್ನಿಗೆ ಹೋಲಿಸುವ ರೂಢಿ ಇದೆ. ಕೋಪೋದ್ರೇಕದಿಂದಾತ ತನ್ನವಳೇ ಆದ ಹೆಂಡತಿಯನ್ನು ಕೊಲ್ಲಲು ಮಕ್ಕಳಿಗಾಜ್ಞೆ ಇತ್ತ. ತಾಯಿಯನ್ನು ಕೊಲ್ಲದಿರಲು ಅವರನ್ನು ಸಹ ಕೊಲ್ಲಿಸಿದ.... ಮುನಿ ಜಮದಗ್ನಿ. ಅವನ ಪುತ್ರನೇನು ಪರಶುರಾಮ ಸಾಮಾನ್ಯನೇ? ಕೋಪದಿಂದ ಇಪ್ಪತ್ತೊಂದು ಸಲ ಕ್ಷತ್ರಿಯರನ್ನು ನಾಶಮಾಡಿದ ಮಹನೀಯನಾತ. ಪರಶುರಾಮನ ಕೋಪ ಜಗತ್ತಿನಲ್ಲಿಯೇ ರಕ್ತದ ಕಾಲುವೆಯನ್ನು ಹರಿಸಿತು. ಕೋಪದಲ್ಲಿ ದೂರ್ವಾಸರೂ ಸಾಮಾನ್ಯರಲ್ಲ. ಅಷ್ಟೇಕೆ ನಮ್ಮ ಮುಕ್ಕಣ್ಣನ ಕೋಪ ಸಾಮಾನ್ಯದ್ದೇ? ತನ್ನ ಕೋಪಾಗ್ನಿಯಿಂದ ಮನ್ಮಥನನ್ನು ಭಸ್ಮಮಾಡಿದ. ಪ್ರಳಯ ರುದ್ರನಲ್ಲವೇ? ಅದಕ್ಕಾಗಿಯೇ ಯಕ್ಷಗಾನದಲ್ಲಿ "ನಿನ್ನ ಬಿಡು, ಮುಕ್ಕಣ್ಣ ಗಂಜಿ!" ಎಂದು ನುಡಿದಿದ್ದಾರೆ.

ಕೋಪಕ್ಕೆ ಸಾಹಿತ್ಯದಲ್ಲಿಯೂ ಸ್ಥಾನವಿದೆ. ಕೋಪದಿಂದ ಕಿಡಿ ಸೂಸುವ ಕೆಂಗಣ್ಣು, ಕೆಂಪಾದ ಮುಖ, ಆಕ್ರೋಶಾವೇಶದ ಭೀಕರ ನಡೆ-ನುಡಿಗಳನ್ನು ಕವಿಗಳು ತಮ್ಮ ಕಾವ್ಯದಲ್ಲಿ ಚೆನ್ನಾಗಿ ವರ್ಣಿಸಿದ್ದಾರೆ. ಇದಕ್ಕಾಗಿಯೆ 'ರೌದ್ರ' ಎಂಬ ರಸದ ನಿರ್ಮಾಣ ಮಾಡಿದ್ದಾರೆ.

ಕೋಪ ದಾಂಪತ್ಯಪ್ರೇಮದ ಜೀವನದಲ್ಲಿಯೂ ತನ್ನದೇ ಆದ ಒಂದು ಸ್ಥಾನವನ್ನು ಪಡೆದಿದೆ. ಎಷ್ಟೋ ಜನ ವಿವಾಹಿತ ತರುಣರು, ಏನಾದರೂ ಪ್ರಯತ್ನಪಟ್ಟು ಪತ್ನಿಗೆ ಕೋಪ ಬರುವಂತೆ ಮಾಡಿ, ಆ ಕೋಮಲೆಯ ಕೋಪವನ್ನು ಕಂಡು ಆನಂದಿಸುತ್ತಾರೆ. ಇಲ್ಲದಿದ್ದರೆ ಅವರಿಗೆ ಆನಂದವಿಲ್ಲವಂತೆ.

ಕೋಪವಿಲ್ಲದೆ ಶಾಂತನಾಗಿಯೆ ಇರುವ ಪತಿ ನಾರಿಗೆ ದೊರೆತರೆ, ಆತನನ್ನು ಕಾಲು ಕೆಳಗಿನ ಕಸದಂತೆ ಪರಿಗಣಿಸಬಹುದಾ ನಾರಿ. ಹಾಗೆಯೇ ಪತ್ನಿಗೂ ಸಿಟ್ಟನ್ನವಲಂಬಿಸದಿದ್ದರೆ ಆಕೆಯ ಕಾರ್ಯ ಸಾಧಿಸಲಾರದು. ಹೆಚ್ಚಾಗಿ ಸ್ತ್ರೀಯರ ಸಿಟ್ಟು ಅಶ್ರುಪಾತದಲ್ಲಿ ಕೊನೆಗಾಣುತ್ತದೆ. ನಾರಿಯರಿಗಾವುದಾದರೊಂದು ಆಭರಣ ಬೇಕಾಗಿದ್ದರೆ, ಅದನ್ನು ಜಾಗ್ರತೆ ದೊರಕಿಸಿ ಕೊಡುವುದು ಅವರ ಕೋಪವೇ. ನಾರಿಯರ ಕೋಪ ಬಹಳ ಕಟುವಾದದ್ದು. "ಒಲಿದರೆ ನಾರಿ ಮುನಿದರೆ ಮಾರಿ" ಎನ್ನುತ್ತಾರೆ. ಮಾರಿಯ ಕೋಪ ಬಹಳ ಹೆಚ್ಚಿನದು. ಆಕೆ ತನ್ನ ಕೆನ್ನಾಲಿಗೆಯನ್ನು ತೆರೆದು ರುಂಡಗಳನ್ನು ಧರಿಸಿ, ರಕ್ತಪಾನವನ್ನು ಮಾಡುವಳು. ಆಕೆಯ ಕೋಪ ಜಗತ್ತನ್ನೇ ನಾಶಮಾಡಿ ಬಿಡಬಲ್ಲದು. ಅದಕ್ಕಾಗಿಯೇ ಆಕೆಗೆ ಕೋಪ ಬರದಿರಲೆಂದು ಕೆಳೆಸುವರನ್ನು ಇಡುತ್ತಾರೆ. ದ್ರೌಪದಿಯ ಕ್ರೋಧವೇ ಕೌರವರ ನಾಶಕ್ಕೆ ಕಾರಣವಾಯಿತು. ಸೀತೆಯ ಕೋಪಾಗ್ನಿಯಿಂದಲೇ ರಾವಣನ ಸರ್ವನಾಶವಾಯಿತು. ಇಂದಿಗಾದರೂ ನಾರಿಯರು ಮುನಿದು ತಮ್ಮ ರೋದನಾಸ್ತ್ರ ಪ್ರಯೋಗಕ್ಕೆ ಪ್ರಾರಂಭಿಸಿದರೆಂದರೆ, ಅವರನ್ನು ಸಮಾಧಾನ ಪಡಿಸುವುದು ಎಷ್ಟು ಕಷ್ಟವಾಗುತ್ತದೆಂಬುದು ವಿವಾಹಿತರಿಗೆಲ್ಲ ಗೊತ್ತು. ಗೊತ್ತಿಲ್ಲದ ಕಿರಿಯರು ಹಿರಿಯರನ್ನು ಕೇಳಿರಿ, ಅವರು ಹೇಳುತ್ತಾರೆ. . ಆ ನಾರಿಯ ಕೋಪದ ಗುಟ್ಟನ್ನು!

ಕೋಪದಿಂದ ಲಾಭಪಡೆಯುವುದನ್ನು ನಮ್ಮ ಸಾಹುಕಾರರು ಚೆನ್ನಾಗಿ ಬಲ್ಲರು. ಕೂಲಿಕಾರರನ್ನು ಕೆರಳಿಸಿ ಕೋಪಬರುವಂತೆ ಮಾಡಿ, ಚೆನ್ನಾಗಿ ಕೆಲಸಮಾಡಿಸಿಕೊಳ್ಳುತ್ತಾರೆ. ಮನುಷ್ಯಪ್ರಾಣಿಯೊಂದೇ ಅಲ್ಲ, ಪ್ರತಿಯೊಂದು ಪ್ರಾಣಿಯಿಂದಲೂ ಕೋಪದಿಂದ ಹೆಚ್ಚು ಕಾರ್ಯಮಾಡಿಸಲಾಗುತ್ತದೆ. ಗಾಡಿಕಾರನನ್ನು ಕೇಳಿ, ಬಹಳ ಭಾರ ಹೇರಿದ ಎತ್ತು ಗಾಡಿಯನ್ನೆಳೆಯಲಾರದೆಯೆ ಅಥವಾ ಅಂಜಿಕೆಯಿಂದ—ಗಟ್ಟದಲ್ಲಿ ನಿಂತು ಬಿಟ್ಟರೆ, ಗಾಡಿಕಾರ ಮಾಡುವನೇನು? ಎತ್ತಿನ ಮೂಗುದಾರವನ್ನು ಚೆನ್ನಾಗಿ ಜಗ್ಗಿ, ಬಾರಕೋಲಿನಿಂದ ಬಲವಾದ ನಾಲ್ಕು ಏಟನ್ನು ಕೊಟ್ಟು, ಕೋಪ ಬರುವಂತೆ ಮಾಡುತ್ತಾನೆ. ಆಗ ಆ ಎತ್ತು ಬುಸುಗುಟ್ಟುತ್ತ, ತಲೆತಗ್ಗಿಸಿ, ಗಟ್ಟವನ್ನೇರಿ ಬಿಡುತ್ತದೆ.

ಬೇಟೆಗಾರನೂ ಈ ಮರ್ಮವನ್ನರಿತೇ—ಬೇಟೆ ನಾಯಿ ಯಾವುದಾದರೊಂದು ಬೇಟೆಯನ್ನು ಬೆನ್ನಟ್ಟಿ ಅದಕ್ಕಂಜಿ ಹಿಂದಿರುಗಿ ಬಂದರೆ— ಸ್ವಲ್ಪವೂ ಕರುಣೆ ಇಲ್ಲದೆ ನಾಯಿಯ ಕಿವಿಯನ್ನು ಕತ್ತರಿಸಿ ಬಿಡುತ್ತಾನೆ. ಆಗ ಆ ನಾಯಿ ತನ್ನ ಕೋಪಶಮನಕ್ಕಾಗಿ ಕಾಡಿಗೆ ಓಡಿ ಯಾವುದಾದರೊಂದು ಪ್ರಾಣಿಯನ್ನು ಹಿಡಿದುತರುತ್ತದೆ— ಎಂದು ಬೇಟೆಗಾರನ ಮತ.

ಮನುಷ್ಯನ ಎಲ್ಲ ಅವಯವಗಳು, ಒಬ್ಬನಿಗಿರುವಂತೆಯೇ ಮತ್ತೊಬ್ಬನಲ್ಲಿದ್ದರೂ ಆತನ ವಿಚಾರಗಳು ಬೇರೆಬೇರೆಯಾಗಿರುವಂತೆಯೆ, ಕೋಪವೂ ಒಬ್ಬೊಬ್ಬನಲ್ಲಿ ಒಂದೊಂದು ರೀತಿಯಾಗಿರುತ್ತದೆ. ಒಬ್ಬರಿಗೆ ಕೋಪ ಬಂದರೆ ಅವರೊಡನೆ ಮಾತನಾಡಲೇ ಆಗುವುದಿಲ್ಲ. ಮೈಯೆಲ್ಲಾ ಗಡಗಡನೆ ನಡುಗಿ ಬಾಯ್ದುಟಿಗಳು ಮುಚ್ಚಿಹೋಗುತ್ತವೆ. ಇಂಥವರು ಸಿಟ್ಟುಬಂದಕೂಡಲೆ, ಸುಮ್ಮನೆ ಯಾರೊಡನೆಯೂ ಮಾತನಾಡದೆ ಕುಳಿತುಬಿಡುತ್ತಾರೆ. ಇದು 'ಮೂಕ ಕೋಪ!'! ಇನ್ನೊಂದು ಕೋಪವಿದೆ;

ಶರಣಸಂದೇಶ

(ವಾರಪತ್ರಿಕೆ)

ಸಂಪಾದಕರು : ಶ್ರೀ. ಹರ್ಡೇಕರ್ ಮಂಜಪ್ಪನವರು

ಹಿಂದೂ ಸಂಘಟನೆಯ ಗುರಿಯನ್ನಿಟ್ಟುಕೊಂಡು ಯಶಸ್ವಿಯಾಗಿ ಕಾರ್ಯಮಾಡುತ್ತಿರುವ ಕನ್ನಡ ವೃತ್ತಪತ್ರಿಕೆಯೆಂದರೆ ಇದೊಂದೆ. ದೇಶ-ವಿದೇಶದ ವರ್ತಮಾನಗಳನ್ನೂ ವಿಚಾರಪೂರ್ಣ ಲೇಖನಗಳನ್ನೂ ಇವರಲ್ಲಿ ಓದಬಹುದು.

ವಾರ್ಷಿಕವರ್ಗಣಿ ಅಂಚೆವೆಚ್ಚ ಸೇರಿ ೩-೦-೦ ಗಳು.

‘ ಶರಣಸಂದೇಶ ’

ಪೋಸ್ಟ್ : ಆಲಮಟ್ಟಿ, ಜಿಲ್ಲಾ: ವಿಜಾಪೂರ.

ಅದು ಮಹಾ ಭಯಂಕರವಾದದ್ದು. ಅದಕ್ಕೆ ‘ ಹುಚ್ಚುಕೋಪ ’ ಎಂದು ಹೇಳಬಹುದು. ಆ ಕೋಪ ಏನೇನು ಮಾಡಿಸುತ್ತದೆ ಹೇಳಲಾಸಲ್ಲ. ಕೋಪ ಬಂದೊಡನೆಯೆ ಮನೆತುಂಬ ಹಾರಾಡಿ ಚೀರಾಡಿ, ಬಾಯಿಗೆ ಬಂದಂತೆ ಬೈಯುತ್ತ ತನ್ನದೇ ಮನೆಗೆ ಬೆಂಕಿ ಹಚ್ಚಿ, ಸಿಕ್ಕಸಿಕ್ಕ ಬಹವೆ ವಸ್ತುಗಳನ್ನೆಲ್ಲ ಬೀರಾಡಿಬಿಡುತ್ತಾರೆ. ಇದು ‘ ಹುಚ್ಚುಕೋಪ ! ’. ಇನ್ನೂ ಅನೇಕ ರೀತಿ ಇವೆ. ಕೆಲವರು ಸಿಟ್ಟು ಬಂದೊಡನೆಯೆ ಊಟ ಉಪಚಾರಗಳನ್ನೆಲ್ಲ ಬಿಟ್ಟು, ರೂಮಿಗೆ ಹೋಗಿ ಬಾಗಿಲನ್ನಿಕ್ಕಿ ಮಲಗಿದರೆ, ಇನ್ನು ಕೆಲವರು ಕ್ರೋಧಾವೇಶದಿಂದ ಮೈಮೇಲಿನ ಉಡಿಗೆತೊಡಿಗೆಗಳನ್ನೆಲ್ಲಾ ಕಿತ್ತು ಬಿಸುಡುತ್ತಾರೆ. ಕೆಲವರಿಗಂತೂ ಕೋಪ ಬಂದುಬಿಟ್ಟರೆ ಎಷ್ಟುಕಿಂದರೂ ಶಾಂತಿಯೆ ಆಗುವುದಿಲ್ಲ. ಕುಂಭಕರ್ಣನು ನಿದ್ದೆಯಲ್ಲಿ ಎಷ್ಟು ಪ್ರಖ್ಯಾತನೊ ಹಾಗೆಯೆ ಕ್ರೋಧದಲ್ಲಿಯೂ ಆತ ಮಹಾಶೂರನಂತೆ. ಆತನ ಕೋಪಕ್ಕೆ ಸಿಲುಕಿದ ಎಷ್ಟೋ ಕಪಿಗಳು ಆ ಕುಂಭಕರ್ಣನ ದೀರ್ಘೋದರಕ್ಕಾಹುತಿಯಾದ ಕತೆ ರಾಮಾಯಣದಲ್ಲಿ ಸಿಕ್ಕುತ್ತದೆ. ಕೋಪೋದ್ರೇಕದಿಂದ ಮೈಮರೆದಾ ರಕ್ಕಸವೀರನಿಗೆ, ತಾನೇನುಮಾಡುತ್ತಿದ್ದೇನೆಂಬ ಪರಿವೆಯೇ ಇರಲಿಲ್ಲವೇನೊ ! ಇಲ್ಲದಿದ್ದರೆ ಕಪಿಗಳ ಆ ಒರಟು ಕೂದಲು, ಹೊಲಸು ನಾರುವ ಮೈ, ಜಿಪರು ಇವುಗಳನ್ನು ಕೂಡ ಎಣಿಸದೆ ಆತ ತಿನ್ನುವುದಾದರೂ ಹೇಗೆ ?

. ಕೋಪದಲ್ಲಿ ವಿಚಾರಶಕ್ತಿಯನ್ನೆಲ್ಲ ಮೆಟ್ಟಿ ತಾನೇ ತನ್ನ ಆಧಿಪತ್ಯವನ್ನು ಮೆರೆಯಿಸುವ ಶಕ್ತಿ ಇದೆ. ಎಂತಹ ವಿಚಾರಶಾಲಿಯೇ ಆಗಿರಲಿ, ಆತನ ವಿಚಾರವನ್ನೆಲ್ಲಾ ಒಂದೇ ಒಂದು ಕೋಪ ಮೆಟ್ಟಿ ತುಳಿದುಬಿಡಬಹುದು. ಲಗ್ನ ಸಿದ್ಧಮಾಡಿ,ದಿಬ್ಬಣಿಗರೆಲ್ಲ ಬಂದಿದ್ದು, ಕೊಂಚ ಆದರ ಸತ್ಕಾರದಲ್ಲಿ ವ್ಯತ್ಯಾಸವಾದರೆ ಕೋಪ ಒಂದು ದಿಬ್ಬಣವನ್ನು ಹಿಂದೊಯ್ಯುವ ಉದಾಹರಣೆ ಬೇಕಷ್ಟಿವೆ !

ನಮ್ಮೀಗಿನ ನವತರುಣರು ಕೋಪದಿಂದ ಒಂದು ಬಗೆಯ ಲಾಭವನ್ನು ತೆಗೆದುಕೊಳ್ಳುತ್ತಾರೆ. ಮಾವ ‘ ವಾಚ್ ’, ಕೊಡದಿದ್ದರೆ— ‘ ಸೈಕಲ್ ’ ಕೊಡದಿದ್ದರೆ— ‘ ಫೋನೋ ’ ಕೊಡದಿದ್ದರೆ—ಕೋಪಬಂದು ಊಟ ಕೂಡ ಮಾಡದೆ ಹೆಂಡತಿಯನ್ನೇ ಬಿಡುವ ‘ ಧಮುಕಿ ’ ಕೊಟ್ಟು ವಸೂಲು ಮಾಡಿಬಿಡುತ್ತಾನೆ. ಅದಕ್ಕಾಗಿಯೇ “ ಕ್ಷಣೇರುಷ್ಟಾ ಕ್ಷಣೇತುಷ್ಟಾ ರುಷ್ಟಾಸ್ತುಷ್ಟಾ ಕ್ಷಣೇಕ್ಷಣೇ ” ಎಂದು ಅಳಿಯನಿಗಾಗಿ ಹೇಳುತ್ತಾರೆ. ಎಷ್ಟೋ ಸರ್ಕಾರೀ ಆಫೀಸರರೂ ಕೋಪವನ್ನು ನಟಿಸಿ, ಲಂಚವನ್ನೆತ್ತುವುದರಲ್ಲಿ ಕಡಿಮೆಮಾಡುವುದಿಲ್ಲ. ಆ ಕಾರಣದಿಂದಲೇ ಯಾರಾದರೊಬ್ಬ ಆಫೀಸರರ ಭೆಟ್ಟಿಯಾಗುವ ಮುಂಚೆ, ಅವರ ಮನಃಸ್ಥಿತಿಯನ್ನು ಕೇಳಿ ತಿಳಿದುಕೊಳ್ಳುವ ರೂಢಿ ಇದೆ.

ಕೋಪಿಯಾದವನಲ್ಲಿ ಪ್ರತಿಸ್ಪರ್ಧಾ ಗುಣವಿರುತ್ತದೆ. ಆತ ತನಗಾದ ಅಪಮಾನವನ್ನು ಎಂದಿಗಾದರೂ ತೀರಿಸದೆ ಬಿಡನು. ಹಗೆತನವನ್ನು ಸಾಧಿಸಿ, ತನ್ನ ಕೋಪವನ್ನುಪಯೋಗಿಸುವನು ಆತ. ತಾನಾಜಿಯ ಮರಣದಿಂದುಂಟಾದ ಮರಾಟ ವೀರರ ಕೋಪ, ಸಿಂಹಗಡದ ವಿಜಯದಲ್ಲಿ ಕೊನೆಗಾಣಲಿಲ್ಲವೇ ? ಹನುಮಂತ ತನಗಾದ ಅಪಮಾನವನ್ನು ತೀರಿಸಲು ಕೋಪತಪ್ತನಾಗಿ ಲಂಕೆಯನ್ನೇ ಭಸ್ಮಮಾಡಲಿಲ್ಲವೇ ?

ಕೋಪದಲ್ಲಿ ಒಳಿತೂ ಇದೆ, ಕೆಡುಕೂ ಇದೆ. ಕೋಪದಲ್ಲಿ ಸುಖವಿದೆ, ದುಃಖವಿದೆ. ಸ್ವರ್ಗ-ನರಕಗಳು ಕೋಪದ ಕೈಗೊಂಬೆ. ಕೋಪದ ಬಲದಿಂದ ಹೋದ ರಾಜ್ಯವನ್ನು ಗಳಿಸಬಹುದು. ಚಾಣಕ್ಯನ ಕೋಪವೇ ಮೌರ್ಯಸಿಂಹಾಸನವನ್ನು ಪ್ರತಿಷ್ಠಾಪಿಸಿತು. ಇನ್ನು ಅದೇ ಕೋಪದಿಂದಲೇ ಇದ್ದ ರಾಜ್ಯವನ್ನು ನಾಶಮಾಡಿಕೊಳ್ಳಲೂ ಬಹುದು. ಕೋಪವೇ ಶಾಂತಿ-ಅಶಾಂತಿಗಳ ತವರೂರು. ಮಾನವನ ಉನ್ನತಿ-ಅವನತಿಯ ನೆಲೆಬೀಡು.

ಭಾರತೀಯರು ಕೋಪವನ್ನು ನಿಂದಿಸಿದ್ದಾರೆ, ತುಚ್ಛೀಕರಿಸಿದ್ದಾರೆ; ಅದನ್ನು ಹೊಲೆಯನೆಂದು ಹೀನಾಯವಡಿಸಿದ್ದಾರೆ. ಕೋಪಬಂದರೆ ಸ್ನಾನಮಾಡಬೇಕೆಂದಿದ್ದಾರೆ. ‘ಮಾನವನ ಉನ್ನತಿಯ ಮಾರ್ಗಕ್ಕೆ ಮುಳ್ಳುದಾಸಿಗೆ’ ಎಂದಿದ್ದಾರೆ. ಆಧಾರಕ್ಕಾಗಿ “ ಕೋಪವೆಂಬುದನರ್ಥ ಸಾಧನ, ಕೋಪವೇ ಸಂಸಾರ ಬಂಧನ, ಕೋಪದಿಂದುರುತರದ ಸುಕೃತವು ಲಯವನೈದುವುದು” ಕೋಪವುಳ್ಳವನಾವನಾಗಲಿ ಕಾಪುರುಷನಿಹಪರಕೆ ಚಿತ್ತಯಿಸೆಂದನಾ ವಿದುರ ” ಎನ್ನುವ ವಿದುರನೀತಿಯನ್ನಿಟ್ಟುಕೊಂಡಿದ್ದಾರೆ. ‘ ಹಾಗಿದ್ದರೆ ಭಾರತೀಯರಿಗೆ ಕೋಪವೇ ಬರುವುದಿಲ್ಲವೇ ? ’ ಎಂದು ಕೇಳೀರಿ ! ಬಾರದೆ ಏನು ? ಪ್ರತಿಯೊಬ್ಬನಲ್ಲಿಯೂ ಕೋಪವಿದ್ದೇ ಇರುತ್ತದೆ. ಭಾರತೀಯರ ಕೋಪಕ್ಕೊಂದು ಗಡಿ ಇದೆ. ಮೇರೆಮೀರಿ ಮುಂದುವರಿಯಲಾರದಿವರ ಕೋಪ. ಅಶಕ್ತ—ಅಸಹಾಯ—ಜನರೆದುರಿಗೆ, ಕೋಪಮಾಡಲಡ್ಡಿ ಇಲ್ಲ. ಭಾರತೀಯರ ಕೋಪ, ತಮ್ಮ ರಾಷ್ಟ್ರ (ತಮ್ಮದು ಎನ್ನುವ ರಾಷ್ಟ್ರವೇ ಇಲ್ಲವೆನ್ನಿ) ತಮ್ಮ ಜನಾಂಗದ ಗಡಿಯನ್ನು ಮೀರಿ

ಲಲಿತ ಸಾಹಿತ್ಯಮಾಲೆ

ವರುಷಕ್ಕೆ ನೂರು ನೂರು ಪುಟದ ೬ ಪುಸ್ತಕಗಳು

ಚಂದಾ: ಅಂಚೆಸೇರಿ ೩-೦-೦

೧. ಚಿಗುರು (ಸೌ. ಗೌರಮ್ಮ) ಪ್ರಕಟವಾಗಿದೆ.
೨. ಅಕ್ಕಾಜಿ (ಅ. ಕಾದಂಬರಿ) ಪ್ರಕಟವಾಗಿದೆ.

ಇಂದೆಯೆ ಚಂದಾದಾರರಾಗಿರಿ !

ಲಲಿತ ಸಾಹಿತ್ಯಮಾಲೆ, ಧಾರವಾಡ

ಚಿಮ್ಮುವುದಿಲ್ಲ. ಶಾಂತರೂಪರಾದ ನಾವು ಪರದೇಶದ, ಪರಕೀಯ ಜನಾಂಗದವರೆದುರಿಗೆ ನಮ್ಮ ಕೋಪವನ್ನು—ಕೊಲೆತನವನ್ನು ತೋರಿಸಬಹುದೇ? ಛೇ ಅದೆಂತು ಸಾಧ್ಯ?

ಪರಕೀಯರಾದವರು ಬಂದು ನಮ್ಮನ್ನು ಸುಲಿಯುತ್ತಿದ್ದಾರೆ; ನಮ್ಮ ಮಕ್ಕಳಿಗೆ ಕೂಳಿಲ್ಲದಂತೆ— ಮಡದಿಯರಿಗೆ ವಸನವಿಲ್ಲದಂತೆ— ಮಾಡಿ, ನಮ್ಮೆದುರಿಗೇ ಅಪಮಾನವೆಸಗುತ್ತಿದ್ದಾರೆ. ನಮ್ಮ ತಾಯಿ ತನ್ನ ಅಚ್ಚ ಮುತ್ತೈದೆತನವನ್ನು ಕಾಪಾಡಿಕೊಳ್ಳಲಾಗದೆ, ವಿಧವೆಯಾಗಿ, ಸಹಾಯಕ್ಕೆ ಮಕ್ಕಳನ್ನು ಕೂಗಿಕೂಗಿ, ಗಂಟಲೊಣೆದು ದನಿ ಬಿದ್ದು ಚಲನೆ ಇಲ್ಲದವಳಾಗಿ ಕಾತರಗೊಂಡಿದ್ದಾಳೆ. ಕಾತರ— ಭೀತ— ಹತಾಶಳಾದ ತಾಯಿಯ ಆಭರಣಗಳನ್ನು ತೆಗೆದು, ಸುವರ್ಣಕಾಂತಿಯಿಂದ ಮಿರುಗುವ ಆಕೆಯ ಶೋಭೆಯನ್ನೇ ನೆಲಸಮ ಮಾಡುತ್ತಿದ್ದರೆ ನಾವು ನಗುತ್ತಿದ್ದೇವೆ; ನಲಿಯುತ್ತಿದ್ದೇವೆ! ಏತಕ್ಕಾಗಿ! ನಮ್ಮ ಚಿರಸುಖದಾಯಿಯಾದ ಶಾಂತಿಗಾಗಿ! ಸುಖಕ್ಕಾಗಿ! ಪಾರತಂತ್ರ್ಯದ ಬೇಡಿಯನ್ನು ದೃಢಪಡಿಸಲಿಕ್ಕಾಗಿ!! ಕೋಪಗೊಂಡರೆ ನಮ್ಮ ಶಾಂತಿ ಹಾಳಾಗುವುದಿಲ್ಲವೇ?— ಚಿರಸುಖದಾಯಿಯಾದ ಶಾಂತಿ— ಮಣ್ಣುಪಾಲಾಗುವುದಿಲ್ಲವೇ? ಇದೇ ಶಾಂತ ಮೂರ್ತಿ ನಡೆಯುವ ರಸ್ತೆಯ ಪಕ್ಕದಲ್ಲಿ ಒಬ್ಬ ಅಸ್ಪೃಶ್ಯ ಹೋದರೆ ಸಾಕು; ಶಾಂತ ಮೂರ್ತಿಗಳ ಕಣ್ಣು ರುದ್ರನ ಕೆಂಗಿಡಿ ಸೂಸುವ ನೇತ್ರಕ್ಕಿಂತಲೂ ಕರಾಳವಾಗುತ್ತದೆ. ಆ ಅಸ್ಪೃಶ್ಯ ತಿರುಗಿ ಮಾತನಾಡದಿದ್ದರಂತೂ ಇವರ ಕೋಪದ ಬರಸಿಡಿಲು ಆಕಾಶವನ್ನು ಭೇದಿಸುವಂತೆ ಧ್ವನಿಸ್ಸಯುತ್ತದೆ. ಇದೂ ಬೇಡ, ಮನೆಯಲ್ಲಿ ಸರಿಯಾದ ಸಮಯಕ್ಕೆ ಕಾಫಿ ತಯಾರಾಗದಿದ್ದರೆ, ಅಡಿಗೆ ಸಕಾಲಕ್ಕೆ ಒದಗದಿದ್ದರೆ, ನೋಡಬೇಕು—ಭಾರತೀಯರ ಶೌರ್ಯದ—ವೀರಕೋಪದ—ಪತಾಕೆ ಹೆಂಡತಿಯ ಮೇಲ್ವಾಯ್ದು ಹಾರಾಡುವ ರೀತಿಯನ್ನು! ಮೇಜಿನ ಮೇಲಿನ ಪುಸ್ತಕಗಳನ್ನೆಲ್ಲಾ ಬಿಸಾಡುವ ವೀರ ಕನ್ನಡಿಗರು ನಾವು, ವೀರ ಭಾರತಾಂಬೆಯ ಶೂರಪುತ್ರರು ನಾವು! (ಸ್ವಲ್ಪ ತಪ್ಪಿದೆ, ಕನ್ನಡಿಗರ ಮೇಜಿನ ಮೇಲೆ ಪುಸ್ತಕವಿದ್ದೇ ಇರುತ್ತದೆ ಎಂದು ಹೇಳುವುದು ತಪ್ಪು; ಅದಿಲ್ಲದಿದ್ದರೆ ಮನೆಯ ಪಾತ್ರೆಗಳನ್ನಾದರೂ ಬಿಸುಡುವ ಶೌರ್ಯ ತೋರಿಸದೆ ಬಿಡರೆಂಬುದರಲ್ಲಿ ಸಂದೇಹವಿಲ್ಲ.)

ಭಾರತೀಯರ ಪಾರತಂತ್ರ್ಯದ ಬೇಡಿ ಮತ್ತೂ ಜಡವಾಗಲು, ಎಂದೆಂದಿಗೂ ಬಿಡದಂತೆಯಾಗಲು—ಸರಿಯಾಗಿ ಸಮಯವನ್ನರಿತು ಕೋಪಿಸಲು ಬಾರದಿರುವುದೇ ಮೂಲಕಾರಣ! ಕೋಪದಿಂದ ಶೌರ್ಯ ಬರುತ್ತದೆ; ಕೆಚ್ಚು, ಕಲಿತನ, ವೀರತನ ಹೆಚ್ಚಾಗುತ್ತದೆ! ಹುಚ್ಚುತನ, ಹುಂಬತನವಿಲ್ಲದೆ ಸರಿಯಾಗಿ ಕೋಪಿಸುವುದನ್ನೂ ಕಲಿಯಬೇಕು. ಇಡಿಯ ಜನಾಂಗ ಕೋಪದಿಂದ ಕೆರಳಿ ನಿಂತರೆ ನಮ್ಮನ್ನು ಹಿಡಿಯುವವರಾರು? ಎಲ್ಲಿದೆ ಆ ಕೋಪ? ಸಾಹಸದ—ವೀರತನದ ಕಡುಕೋಪ? ಬೇಡಿ ಕಾದಿ ನಾಡನ್ನಾಳುವುದು ಶಕ್ಯವೇ? ಪಡೆದ ನಾಡಸಿರಿಯನ್ನು ಕಾಪಾಡಲು— ಸ್ಥಿರಸ್ವಾತಂತ್ರ್ಯವನ್ನು ಚಿರವಾಗುಳಿಸಲು—ಶಕ್ತಿಬೇಕು! ಕೋಪವು ಒಂದು ಕಲೆ; ಅದನ್ನು ಉಪಯೋಗಿಸುವುದನ್ನೂ ಕಲಿಯಬೇಕು. ಚೆನ್ನಾಗಿ ಅಭ್ಯಾಸಮಾಡಬೇಕು. ಮಾತು ಮಾತಿಗೆ ಕೋಪಿಸುವ ಸಾಹಸಕ್ಕೆ ಅಥವಾ ಮೂರ್ಖತನಕ್ಕೆ ಹೋಗಬಾರದು. ಮಾತುಮಾತಿಗೂ ಕೋಪಿಸಿದರೆ ಆ ಕೋಪದ ಬೆಲೆ ಕಡಿಮೆಯಾಗಿ ಬಿಡುತ್ತದೆ. “ತನ್ನ ಕೋಪ ತನ್ನನ್ನೇ ತಿನ್ನುತ್ತದೆ” ಎಂಬ ಗಾದೆಮಾತಿದೆ, ಇದು ಸುಳ್ಳಲ್ಲ. ಅಲ್ಲದೆ ಮಾತು ಮಾತಿಗೆ ಸಿಡುಕುವುದು ಅಶಕ್ತತೆಯನ್ನು ವ್ಯಕ್ತಪಡಿಸಿದಂತೆಯೇ ಸರಿ. ಅದರ ಮರ್ಮವನ್ನರಿತೇ “ಬಡವನಿಗೆ ಸಿಟ್ಟು ಹೆಚ್ಚು” ಎಂದೂ ಗಾದೆ ರೂಢಿಯಲ್ಲಿದೆ. ಗಾದೆಯ ಮಾತು ವೇದಕ್ಕೆ ಸಮಾನ! ಕೋಪದಲ್ಲಿ ಅವಿವೇಕಕ್ಕೆಡೆ ಇರಬಾರದು. ಅಭ್ಯಾಸ ಬಲದಿಂದ ಗಳಿಸಿದ ಕೋಪದ ವೃಕ್ಷ ಮಧುರ ಫಲವನ್ನು ಕೊಡದಿರದು. ಇಲ್ಲದಿದ್ದರೆ “ಒಂದು ಕೋಪದಿಂದ ಕುಯಿದ ಮೂಗು ಹತ್ತು ಕೋಪ ಬಂದರೂ ಬಾರದು” ಎನ್ನುವ ಗಾದೆಯಂತೆಯೆ. ಅವಿವೇಕತನದ ಕೋಪ ಮಾಡಿದರೆ ಸರ್ವನಾಶ, ಶೌರ್ಯನಾಶ. ಆತ್ಮನಾಶವೂ ಆಗುತ್ತವೆಂಬುದರಲ್ಲಿ ಸಂದೇಹವಿಲ್ಲ.

ಅದಕ್ಕಾಗಿಯೇ ಹೇಳುತ್ತೇನೆ “ಕೋಪಿಸಬೇಡಿ”! ಮತ್ತೆ ಕೋಪವನ್ನು ಸರಿಯಾಗಿ ಅಭ್ಯಾಸ ಮಾಡಿ ತಕ್ಕ ಸಮಯದಲ್ಲುಪಯೋಗಿಸುವ ಜಾಣತನವನ್ನು ತೋರಿಸಿದರೆ ಆ ಕೋಪ ಕಾಮಧೇನುವಾಗಿ ಪರಿಣಮಿಸಿ—ಇಷ್ಟಾರ್ಥ ಫಲ ಕೊಡದಿರಲಾರದು! ಕಲಿಯುಗದ ಕಾಮಧೇನುವೆಂದರೆಯೇ ಸರಿಯಾಗಿ ಕಲಿತು ಎಸಗುವ ಕೋಪ!

ಪಂಜರದ ಹಕ್ಕಿಯ ಹಾಡು!

ಶ್ರೀ. 'ಸಿರಿವಂತರ ಮನೆಯ ಸೆರೆಯಾಳು'*

★

ಇದೊಂದು ಬರೆಹಗಾತಿಯರ ಸ್ವಾನುಭವದ ಸಂಗತಿ ಇರಬಹುದು! ಓದುವ ಆಸೆ ಅವರ ನಿಶ್ಚಯದ ಕಗ್ಗಲ್ಲನ್ನು ನೀರಿನಂತೆ ಕರಗಿಸಿಬಿಟ್ಟಿತು; 'ಜಯಂತಿ' ಈ ಕಾರ್ಯದಲ್ಲಿ ನೆರವನ್ನು ಕೊಟ್ಟಿತು!

★

'ಜಯಂತಿ' ಎಂದರೆ ನೂರಾರು ಅಥವಾ ಸಾವಿರಾರು ಜನರು ಸೇರಿ, ವರುಷಕ್ಕೊಂದು ಸಲ, ಮಹನೀಯರ ನೆನಪಿಗಾಗಿ ಉತ್ಸಾಹದೊಡನೆ ಒಂದು ದಿನವನ್ನು ಆಚರಿಸುವುದು. ಎಲ್ಲರೂ ಮಾಡುವ 'ಜಯಂತಿ' ಇಂತಹದೆ; ಆದರೆ ನನಗೋ, ತಿಂಗಳಿಗೊಂದುಸಲ ಇಂತಹ 'ಜಯಂತಿ'ಯ ಉತ್ಸಾಹದ ದಿನವು ದೊರೆಯುತ್ತಿತ್ತು. ಉತ್ಸಾಹದ ದಿನವೆಂದರೆ ತಿಂಗಳಿನ ಮೊದಲ ನೆಯ ವಾರದೊಳಗಾಗಿ ಧಾರವಾಡದಲ್ಲಿ ಹೊರಡುವ 'ಜಯಂತಿ'ಯು ನನ್ನ ಕೈಸೇರುತ್ತಿದ್ದ ದಿನವೆ! ಎಂದೂ ಇಲ್ಲದಷ್ಟು ಉತ್ಸಾಹವು ನನಗೆ ಆ ದಿನ!

'ಜಯಂತಿ'ಯನ್ನು ಕಂಡಕೂಡಲೆ "ಅಯ್ಯೋ ಬಂದಿತೇ ಜಯಂತಿ?" ಎಂದು ಮೂರುಗ್ಗೆ ಮಾಡಿ, ಬೀಸುಗೈಯಿಂದ ತೆಗೆದುಕೊಳ್ಳುತ್ತಿದ್ದೆ. ಅಂದು ಜನವರಿ ಎರಡನೆಯ ತಾರೀಖು. 'ಜಯಂತಿ'ಯು ಎಂದಿನಂತೆ ನನ್ನ ಮನೆಯನ್ನು ಹೊಕ್ಕಿತು. ಆದರೇನು? ಅದಕ್ಕೆ ಸಂತೋಷದಿಂದ ಸುಸ್ವಾಗತವೀಯುವುದರ ಬದಲು, ಬದುಕಿದ್ದರೂ ಸತ್ತಸ್ವರದಲ್ಲಿ 'ಇನ್ನುಮೇಲೆ ತರಬೇಡಪ್ಪಾ!' ಎಂದು ಹೇಳುತ್ತಿರುವಾಗಲೆ, 'ಜಯಂತಿ' ನನಗೆ ಮುಸುಕು-ಮುಸುಕಾಗಿ ಕಂಡಿತು. ತಡೆದುಕೊಳ್ಳಬೇಕೆಂದರೂ ಕೇಳದೆ, ಕಣ್ಣುಗಳೆರಡೂ ತಮ್ಮ ಕೆಲಸವನ್ನು ತಾವು ನಿರ್ವಹಿಸಿದುವು. ಅವು ಮಾಡಿದ ಕೆಲಸಕ್ಕೆ 'ಛೀ' ಎನ್ನುತ್ತಾ, ಉದುರುತ್ತಿದ್ದ ಕಂಬನಿಗಳನ್ನು ಅಳಿಸಿಕೊಂಡು, ಮನೆಯ ಕೆಲಸಕ್ಕೆ ಮರಳಿದೆ.

ದೇಹವೇನೋ ಕೆಲಸಕ್ಕೆ ಬಗ್ಗಿತು; ಮನಸ್ಸುಮಾತ್ರ ಏನು ಮಾಡಿದರೂ ಒಗ್ಗಲೊಲ್ಲದು. 'ಜಯಂತಿ'ಯನ್ನು ಕೈಯಲ್ಲಿ ಹಿಡಿದು ಪರಿವಿಡಿಯನ್ನು ಈಕ್ಷಿಸಿ, '**ಸಂಪಾದಕೀಯ**'ವನ್ನು ಮರಳಿಸಿ, ಚೇಷ್ಟೆಯ ಮಾತುಗಳಿಂದ ಆ ಆ ವಿಷಯಗಳನ್ನು ಟೀಕಿಸುವ '**ಮಂಗನ ಮಲ್ಲಿನಾಥನ**'ದ ಓಲೆಯನ್ನು ಮಗುಚಿ, ಸಂಸಾರದ ಸಣ್ಣ ಸಣ್ಣ ಚಿತ್ರಗಳನ್ನು ಮೂಡಿಸಿ ಸಮಾಜದ ಅಂಧತನಕ್ಕೆ ಅಂಜನಹಾಕುವ ಬರೆಹಗಾರರ ಕೈಚಳಕದ 'ಸಣ್ಣಕಥೆ'ಗಳನ್ನು ಮುಗಿಸಿ, '**ನಾಲ್ಕು ನಿಟ್ಟಿನ ನೋಟ**' ನೋಡಿದಂತೆಯೇ ನನ್ನ ಭಾವನೆ. ಇದೇ ಹಗಲುಗನಸು ನನಗೆ. 'ನಾನು ಏಕೆ ಇಷ್ಟೆಲ್ಲಾ ಮಾಡಿಕೊಂಡೆ? **ಅವರು** ಹೇಳಿದ ಸತ್ಯಾಭಾಸದ ಮಾತನ್ನು ಒಪ್ಪಿ, ನಾನೂ ಒಂದು ಅಸತ್ಯವನ್ನಾಡಿದ್ದರೆ ಆಗುತಿತ್ತಲ್ಲಾ! ಇಂತಿರುವಾಗ ಕಡ್ಡಿಯನ್ನೇ ಗುಡ್ಡವನ್ನಾಗಿ ಮಾಡಿಕೊಂಡೆ..' ಎಂದು ಮಿಡುಕಿತು ಮನಸ್ಸು.

ಅವರು ಹೇಳಿದ ಸತ್ಯಾಭಾಸದ ಮಾತಾದರೂ ಏನು? ಅದೇನೂ ಅಷ್ಟು ಕಷ್ಟವಿರಲಿಲ್ಲ. 'ಕುರುಡಿಯನ್ನು ಚೆನ್ನಕ್ಕ ಎನ್ನಬೇಕು' ಎಂಬುದೇ ಅವರ ಮಾತಿನ ಸಾರವಾಗಿತ್ತು. ನಾನೋ "ಕುರುಡಿ ಕುರುಡಿಯಲ್ಲದೆ ಚೆನ್ನಕ್ಕನೆನ್ನುವುದು ಹೇಗೆ? ಎಂದರೂ ಅದು ಸತ್ಯವೆನಿಸಬಹುದೇ—ಅಲ್ಲಿ ಅದು ಬರಿ ಸೋಗಿನ ಮಾತು!" ಎನ್ನುವುದೇ ಅವರಿಗೆ ನನ್ನ ಎದುರುಮಾತು. ಹೀಗೆ ಮಾತಿಗೆ ಮಾತು ಆಗಿ "ಓದಬೇಕಾದ ಪುಸ್ತಕಗಳನ್ನು ಓದುವುದಿಲ್ಲ, ಹೊತ್ತುಗಳೆಯಲಿಕ್ಕೇ ಏನೇನೋ ನೀನು ಓದುವುದು!" ಎಂದರು. ನನಗೆ ಬಹು ಸಂಕಟವಾಯಿತು. "ಬ....ಇರುವ ಊರಲ್ಲಿ ಬಟ್ಟೆ ಉಟ್ಟವನೇ ಹುಚ್ಚ!" ಹೋಗಲಿ 'ನನ್ನಂತಹ ಬೆಲೆ ಬಾಳದ ಹುಲ್ಲುಕಡ್ಡಿಯಿಂದ ಬೆಲೆ ಇರುವ ಪುಸ್ತಕಗಳಿಗೆ ಇಂತಹ ಮಾತು ಬಂದಿತಲ್ಲಾ' ಎಂದು ನೊಂದುಕೊಂಡು, 'ಇನ್ನು ಮೇಲೆ ಪುಸ್ತಕಗಳನ್ನು ಮುಟ್ಟಿ ಅವುಗಳನ್ನು ಅಪವಿತ್ರಗೊಳಿಸುವುದು ಬೇಡ' ಎಂದು ನಿರ್ಧರಿಸಿಕೊಂಡೆ. ನಿರ್ಧರಿಸುವುದೇನೋ ಸುಲಭವಾಯಿತು, ಆದರೆ ಅದನ್ನು ಆಚರಣೆಯಲ್ಲಿ ತಂದು ಮೂರು ದಿನಗಳನ್ನು ಕಳೆಯುವುದೆಂದರೆ ಮೂರು ಜನ್ಮ-

* ಇವರೊಬ್ಬ ಮಾನ್ಯ ಮಹಿಳೆಯರು. 'ಜಯಂತಿ' ವಾಚಕರಿಗೆ ಪರಿಚಿತರೆ; ಆದರೂ ಈ ಬರೆಹದ ಮೇಲೆ ತಮ್ಮ ಹೆಸರನ್ನು ಹಾಕದಿರಲು ಸೂಚಿಸಿದ್ದಾರೆ.
ಸಂ. ಜ.

ಗಳನ್ನು ಉರುಳಿಸಿದಂತಹ ಕಷ್ಟವಾಯಿತು. ‘ ಅಯ್ಯೋ ಜೀವನವೇ! ಓದಿ ತಿಳಿಯುವುದನ್ನು ತಳ್ಳುವುದಕ್ಕಿಂತಲೂ ಗೋದಲೆಗೆ ನಿಂತ ಪಶುವಾಗಬಾರದಿತ್ತೇ? ಒಡೆಯನ ಕಂಡೊ-ಡನೆ ಬಾಲವಾಡಿಸುವ ನಾಯಿಯಾಗ ಬಾರದಿತ್ತೇ? ’ ಎನ್ನಿಸಿತು. ಜಾನಪದ ಸಾಹಿತ್ಯದಲ್ಲಿ ಒಂದು ನುಡಿ ಇದೆಯಲ್ಲಾ; ಯಾವುದೊ ಅನುಭವಜೀವಿ ಆಡಿದ ನುಡಿ! ಅದನ್ನು ನೆನಸಿಕೊಂಡೆ :—

‘ ಹೆಣ್ಣು ಹುಟ್ಟುದಕಿಂತ, ಮಣ್ಣು ಆಗೋದು ಲೇಸು| ಮಣ್ಣಿನ ಕೆಳಗೆ ಮರನಾಗಿ ಹುಟ್ಟಿದರೆ| ಪುಣ್ಯಾತ್ಮರಣ್ಣಾಗೆ ನೆರಳಾದೆ! ’ ಎಂದು ಮನದಲ್ಲೇ ಅದನ್ನು ಹಾಡಿಕೊಂಡೆ.

ಅಕ್ಕ-ಪಕ್ಕದ ಅಕ್ಕತಂಗಿಯರೊಂದಿಗೆ ಬೆರೆತು ಮಧ್ಯಾಹ್ನಗಳಲ್ಲಿ ‘ ಕಾಗೆ ಕಪ್ಪು, ಗುಬ್ಬಿ ಬಿಳಿ ’ ಹೀಗೆ ಊರ ಉದ್ದರಿಯನ್ನೆಲ್ಲಾ ಮಾತನಾಡಿ ಹೊತ್ತು ಕಳೆಯಲು ನನಗೆ ಇಷ್ಟವಿರಲಿಲ್ಲ. ಮೇಲಾಗಿ ದೊಡ್ಡಮನೆತನದ ಹೆಣ್ಣಿಗೆ ಹೊರಗೆ ಹೋಗುವ ಸ್ವಾತಂತ್ರ್ಯ-ವಾದರೂ ಎಲ್ಲಿಯದು? ಇಲ್ಲವೇ ಇಲ್ಲವಲ್ಲಾ! ಹಾಗೆಯೆ ಬಡವರ ಹೆಣ್ಣಿನ ಕಡೆಗೆ ಹೊರಳಿತು ಮನಸ್ಸು. “ ಸ್ವಕಷ್ಟದಿಂದ ದುಡಿದು ಜೀವಿಸುವ ಆ ಜೀವಿಗೂ, ನಿನಗೂ ಪೂರ್ವ-ಪಶ್ಚಿಮ ದಷ್ಟು ಅಂತರ! ಹೊಟ್ಟೆಗಿಲ್ಲದೆ ಅಳುವ ಸ್ವಾತಂತ್ರ್ಯಜೀವಿ ಅದು; ನೀನೋ ಹೊಟ್ಟೆ-ಬಟ್ಟೆಗಳಿಗಿದ್ದು ಅಳುವ ಸಿರಿವಂತರ ಮನೆಯ ಸೆರೆಯಾಳು! ಗಿಳಿಗೆ ಪಂಜರವು ಸುವರ್ಣದ್ದಾದರೇನು; ಅದು ಸುತ್ತಲೂ ಬಂಧನದ ಸಲಾಕೆಯೇ ಹೌದು ಅದಕ್ಕೆ! ಅಯ್ಯೋ ಬಡಜೀವಿ! ನೀನು ಸಲಾಕೆಗಳ ಮಧ್ಯೆ ಸಿಕ್ಕಿಬಿದ್ದು, ಕನ್ನಡಜಿಲ್ಲೆಯ ಅರಣ್ಯವನ್ನು ನೆನಸಿಕೊಂಡರೆ ಹೇಗೆ? ಸಾಕುಮಾಡು ನಿನ್ನ ಊಹೆ! ಸಾಕುವ ಸಾಹುಕಾರನಿಗೆ ಸಲಾಮು ಕೊಡು! ಅದೇ ನಿನಗೆ ಸದ್ಗತಿ! ಯಾರೋ ನೆಟ್ಟ ಆಲದಮರಕ್ಕೆ ಎಷ್ಟೋ ಜನರು ನೇಣು ಹಾಕಿಕೊಂಡರು—ಹಾಕಿಕೊಳ್ಳುತ್ತಾರೆ—ಹಾಕಿಕೊಳ್ಳಬಹುದು! ಇಂತಹ ಆಗಿಹೋಗುವ ಪ್ರಾಣಿಗಳಲ್ಲಿ ನೀನೂ ಒಂದು ಅಣು ಮಾತ್ರ! ‘ ನಾನು ನಾನೇ ’ ಎಂದು ಹೇಳುವ ಸ್ವಾತಂತ್ರ್ಯವು ನಿನಗಿಲ್ಲದ ಮೇಲೆ, ನಿನ್ನ ಜೀವನ ಒಂದು ಜೀವನವೆ? ಅಲ್ಲ! ನೀನು ನಿನ್ನ ಜೀವನವನ್ನೇ ಅಡವು ಹಿಡಿದ ಒಡೆಯನ ಮನೆಯ ಕೆಲಸವನ್ನು ಎಡೆಬಿಡದೆ ಮಾಡುವ ಮಾನವಯಂತ್ರ! ” ಎಂದು ಕೊಂಡು ‘ ಈಸು, ಇದ್ದು ಜೈಸು! ’ ಇದೇ ಸ್ತ್ರೀಯ ಜೀವನದ ಮುಖ್ಯ ಗುರಿ—ಎಂದು, ನನ್ನನ್ನು ನಾನೆ ಸಂತಯಿಸಿಕೊಂಡೆ.

ಆದರೆ! ಬರೆಯುವುದಕ್ಕೆ ಮೊದಲು ಮಾಡಿದಾಗ ಮಸಿಗುಡ್ಡೆಯೊಂದು ಕಾಗದದಮೇಲೆ ಬಿದ್ದರೆ ಶುಭಶಕುನವೆಂದು ಹೇಳು-ತ್ತಾರಲ್ಲಾ, ಹಾಗೆ. . ವರುಷಕ್ಕೆ ಮೊದಲನೆಯ ತಿಂಗಳಲ್ಲಿ ಬೇಡ ವಾದ ‘ಜಯಂತಿ’ಯು ನನಗಾವ ಶುಭಶಕುನವನ್ನು ಹೊತ್ತು ತರುವುದೋ ಎಂದು ದಾರಿಯನ್ನು ಕಾದೆ. ಆದರೇನು ಒಂದೆರಡು ತಿಂಗಳಲ್ಲಿ ‘ ಜಯಂತಿ ’ಯು ನನಗೆ ತಂದ ಶುಭ-ಶಕುನವೆಂದರೆ, ನನ್ನ ನಿರ್ಧಾರಕ್ಕೆ ನೀರು ಎರಚುವಂತೆ ನನ್ನ ಮನಸ್ಸನ್ನು ಚಂಚಲವಾಗಿಸಿದುದು. ‘ ಆಡಿದ್ದು ಮಾಡದವ ರಿಗೆ ನರಕ ತಪ್ಪಿದ್ದಲ್ಲ ’ಎನ್ನುವುದರಲ್ಲಿ ಭರವಸೆಯಿದ್ದರೂ, ಸತ್ತ ಮೇಲಿನ ನರಕ ಸುಖವಿರಬಹುದೇ ಹೊರತು, ಈ ಜೀವಿತ ಕ್ಷೇತ್ರದ ನರಕ ಭಯಂಕರವೆಂದು ನೆನಸಿ, ನಿರ್ಧಾರವನ್ನು ನೀರಿನಲ್ಲಿ ತೇಲಿಬಿಟ್ಟು, “ಜೀವನದಲ್ಲಿ ಸುಖ-ದುಃಖಗಳನ್ನು ಎದುರಿಸ ಬೇಕಾದರೆ, ಈ ಪುಸ್ತಕಾಸ್ತ್ರ ಒಂದೇ ಸಾಕು! ” ಎಂದು ಮತ್ತೆ ಆ ಅಸ್ತ್ರವನ್ನು ಕೈಯಲ್ಲಿ ಹಿಡಿದೆ!

ಸ್ವಾತಂತ್ರ್ಯಸ್ವರ್ಗ *

ಶ್ರೀಮಾನ್ ಬೆನಗಲ್ ರಾಮರಾಯರು, ಬೆಂಗಳೂರು

ಎಲ್ಲಿ ಬಗೆಯಳುಕರಿಯದೋ—ತಲೆ-
ಯೆತ್ತಿ ನಡೆಯಲಿಕಾರ್ಪರೋ!
ಎಲ್ಲಿ ನಿನ್ನರಿತು—ತನ್ನ ತೆಂದಿಳೆ
ಸುಚ್ಚುನೂರಾಗಿಲ್ಲವೋ!!—
ಎಲ್ಲಿ ನಡೆ-ನುಡಿ ಸತ್ಯ-ಪಾಯದ
ಆಳದಿಂ ಮೇಲೇಳ್ದುದೋ!
ಪೂರ್ಣತೆಯ ಪಡೆಯಲು ನಿರಂತರ
ಚಾಚಿ ಕೈಗಳ ದುಡಿವುದೋ!!—

ಎಲ್ಲಿ ಸರಳ ವಿವೇಚನೆಯ ತಿಳಿ-
ನೀರ ಹೊಳೆ ಹರಿದೋಡುತೆ
ಕುರುಡುನಂಬುಗೆ-ರೂಢಿಗಳ ಮರು-
ಭೂಮಿಯಡಿಗಿಳಿದಿಂಗದೋ!—
ಎಲ್ಲಿ ನಿನ್ನಯ ದಯದಿ ಚಿತ್ತದ
ಭಾವ-ಕಾರ್ಯಗಳೆಲ್ಲವು
ಒಯ್ಯನೊಯ್ಯನೆ ಬಲಿತು ಕಳಿತು ವಿ-
ಕಾಸಗೊಳುವುವೊ ಸಂತತ!—

ಅಲ್ಲಿ ಆ ಸ್ವಾತಂತ್ರ್ಯ ದಿವದಲಿ ತಾತ! ನನ್ನಯ ದೇಶವು।
ನನ್ನ ಗರುವದ ತಾಯಿ ನಗೆಗಣ್-ತೆರೆಯುತೇಳಲಿ, ಬಾಳಲಿ!

* ಶ್ರೀಕವೀಂದ್ರ ರವೀಂದ್ರರ ಗೀತೆಯೊಂದರ ಅನುವಾದ.

ನಾನು ಭಾರತವನ್ನು ಬಿಟ್ಟದ್ದೇಕೆ?*

ಶ್ರೀ. ಎಂ. ಪಿ. ಟಿ. ಆಚಾರ್ಯ, ಮುಂಬಯಿ

★

ಸ್ವತಂತ್ರವಿಚಾರದ ಜೀವಿಯ ಆತ್ಮಚರಿತ್ರೆಯ ಅಧ್ಯಾಯವೊಂದಿದು. ಪರಾಧೀನ ಭಾರತವನ್ನು ಸ್ವತಂತ್ರವನ್ನಾಗಿ ಮಾಡಬೇಕೆಂಬ ವಿಚಾರಬೀಜ, ಭಾರತದ ತರುಣರ ಹೃದಯದಲ್ಲಿ ಹೇಗೆ ಹೇಗೆ ಬೇರು ಬಿಡುತ್ತ ನಡೆಯಿತೆಂಬುದನ್ನು ಇದರಲ್ಲಿ ಕಾಣಬಹುದು!

ಗಡಿಪಾರಾಗಿ ಬಂದವರಿಗೆ ಕಾಟ

ಪಾಂಡಿಚೇರಿಯಲ್ಲಿ, ಪಾರಾಗಿ ಬಂದ ನಮ್ಮ ಜೀವನವು ಸುರಕ್ಷಿತವಾಗಿರಲಿಲ್ಲ. ಅಲ್ಲಿ ಬ್ರಿಟಿಶರ ಆಡಳಿತಕ್ಕೆ ಒಳಪಟ್ಟ ಅನೇಕ ಸ್ಥಳಗಳಿವೆ. ಅರಿವಿಲ್ಲದೆ ಆ ಸ್ಥಳಗಳ ಸಮೀಪ ಹಾಯುವ ಸಂಭವ ಹೆಚ್ಚು. ಅಲ್ಲದೆ ಅಲ್ಲಿಯ ಪೋಲೀಸ್ ಮುಖ್ಯಾಧಿಕಾರಿಯು ನಮ್ಮ ಇರವನ್ನು ನರಕವನ್ನಾಗಿ ಮಾಡಿದ್ದನು. ನಮ್ಮನ್ನು ದೇಶಬಿಟ್ಟು ಹೊರಗೆ ಹಾಕಬೇಕೆಂದು, ನಮಗೆ ಆಶ್ರಯವಿತ್ತ ಜನರಿಗೆ ಸೂಚಿಸುತ್ತಿದ್ದನು. ಈ ಸುದ್ದಿಯನ್ನು ಕೇಳಿ ನಾವು ಒಂದು ದಿನ, ಅಲ್ಲಿಯ ಗವರ್ನರರ ಕಾರ್ಯದರ್ಶಿಯನ್ನು ಕಂಡು, ಅದು ನಿಜವೇನೆಂದು ಕೇಳಿದೆವು. ಕಾರ್ಯದರ್ಶಿಯು ಪೋಲೀಸ್ ಮುಖ್ಯಾಧಿಕಾರಿಯನ್ನು ಕರೆಯಿಸಿ ಕೇಳಿದನು. ತನಗೇನೂ ಗೊತ್ತಿಲ್ಲವೆಂದು ಪೋಲೀಸ ಅಧಿಕಾರಿಯು ನಟಿಸಿದನು; ಆದರೆ ಮುಂದೆ ಅವನು ನಮ್ಮ ಬಗ್ಗೆ ಬಹಳ ನಿಷ್ಠುರನಾದನು. ಕಾರಣವೆಂದರೆ ಅವನೂ ಒಬ್ಬ ಭಾರತೀಯನೆ! ಪಾಂಡಿಚೇರಿಯಲ್ಲಿಯ ಗುಂಡುಗಾರರ ಸಹಾಯದಿಂದ ನಮ್ಮನ್ನು ಬ್ರಿಟಿಶ್ ಪ್ರದೇಶಕ್ಕೆ ಬಲುಮೆಯಿಂದ ಒಯ್ಯಬಹುದೆಂದೂ ನಮಗೆ ಹೇಳಿದರು; ಆದರೆ ನಾವಿರುವವರೆಗೆ ಅಂತಹದೇನೂ ಸಂಭವಿಸಲಿಲ್ಲ. ಮೋಸಗಾರಿಕೆ ಮಾತ್ರ ತಪ್ಪಲಿಲ್ಲ. ಆ ಅವಧಿಯಲ್ಲಿ ಅಲ್ಲಿ ಕೆಲವು ಫ್ರೆಂಚರು ಇದ್ದರು. ಅವರು ಸ್ವದೇಶಾಭಿಮಾನಿಗಳೂ ಭಾರತೀಯರ ಬಗ್ಗೆ ಪ್ರೇಮವುಳ್ಳವರೂ ಆಗಿದ್ದರು. ಆದರೆ ಸ್ಥಳೀಯ ಅರೆ-ಫ್ರೆಂಚ್ ಮತ್ತು ಮತಾಂತರ ಹೊಂದಿದ ಭಾರತೀಯರು ಮಾತ್ರ ಕೆಟ್ಟ ರೀತಿಯಿಂದ ನಡೆಯಿಸಿಕೊಳ್ಳುವ ಪ್ರವೃತ್ತಿಯವರಾಗಿದ್ದರು. ವಿಶೇಷವೆಂದರೆ ಅಲ್ಲಿಯ ಒಬ್ಬ ಹುಟ್ಟು ಫ್ರೆಂಚ್ ವಕೀಲನು ನಮ್ಮನ್ನು ಸಂತಯಿಸಿದನು. ಗಡಿಪಾರಾಗಿ ಬಂದವರೆಂದು ನಾವೇನು ಹೆದರಬೇಕಿಲ್ಲವೆಂದನು. ಅಲ್ಲದೆ ನಾವು ಸ್ಥಾನಭ್ರಷ್ಟರಾಗದಂತೆ ನೋಡಿಕೊಳ್ಳುವೆನೆಂದನು. ಅಲ್ಲಿಯೆ ಬಹುಕಾಲ ವಾಸಿಸಿದ್ದ ಇನ್ನೊಬ್ಬ ಫ್ರೆಂಚನು ಭಾರತೀಯ ಮಹಿಳೆಯನ್ನು ಮದುವೆಯಾಗುವಷ್ಟು ಭಾರತೀಯನಾಗಿದ್ದನು. ಅಲ್ಲಿ ನಾವಿದ್ದಾಗ ಏಸಿಯಾ ಖಂಡದ ಜನತೆಯ ಬಗೆಗೆ ತಿರಸ್ಕಾರವು ಒಡೆದು ಕಾಣುತ್ತಿತ್ತು. ಸಾಮ್ರಾಜ್ಯವಾದಿ ಪ್ರವೃತ್ತಿಯು ತಲೆದೋರ ತೊಡಗಿತ್ತು. ಕೆಲವು ಫ್ರೆಂಚ್ ಸಾಮ್ರಾಜ್ಯವಾದಿಗಳು ಬ್ರಿಟಿಶ್ ಭಾರತಕ್ಕೆ ಬಂದು, ಅಲ್ಲಿಯ ಆರ್ಥಿಕ ವ್ಯವಸ್ಥೆಯನ್ನು ಅಭ್ಯಾಸಿಸಿ, ಅದನ್ನು ಫ್ರೆಂಚ್ ಭಾರತದ ಆಡಳಿತಕ್ಕೆ ಒಪ್ಪಿಸಿದರು. ಅನಂತರ ಅದೇ ಆರ್ಥಿಕ ಯೋಜನೆಯೆ ಅಲ್ಲಿ ಮೇಲುಗೈಯನ್ನು ಪಡೆದಿದೆ.

ಇಂತಹ ಬ್ರಿಟಿಶ್‌ಪ್ರಭಾವಿಯಾದ ಪಾಂಡಿಚೇರಿಯಲ್ಲಿ, ಮುದುಗಿಕೊಂಡ ನನ್ನ ಜೀವನವು ನೆಮ್ಮದಿಯುಳ್ಳದಿರಲಿಲ್ಲ. ಈ ಸುತ್ತಲಿನ ವಾತಾವರಣದ ವಿಚಾರವನ್ನು ಮನವರಿಕೆ ಮಾಡಿಕೊಂಡು, ಭಾರತದ ದಂಡೆಯನ್ನು ಬಿಟ್ಟು ದೂರಹೋಗಬೇಕೆಂದು ನಿರ್ಧರಿಸಿದೆನು—ಒಂದು ರಾತ್ರಿ. ತಲೆಗೂದಲುಗಳನ್ನು ಕತ್ತರಿಸಿಕೊಂಡೆ; ಆ ನೋಗು ಸೊಗಸೆನಿಸಲಿಲ್ಲ. ಮಡಿವಂತ ಕರ್ಮಠ ಮನೆತನದಲ್ಲಿ ಹುಟ್ಟಿದವನು—ಜುಟ್ಟು ಬೋಳಿಸಿ ಕ್ರಾಪು ಬೆಳೆಯಿಸುವುದೆಂದರೆ! ಈ ಹೊಸ ವಿಧಿಯು ಮನವನ್ನು ಅಲುಗಿಸಿತು. ರಾಜದ್ರೋಹದ ಖಟ್ಲೆಯು ಮುಗಿದಕೂಡಲೆ, ತಿಯಾಲಿಯಲ್ಲಿ ಕಾಯಿಲೆಯಿಂದ ಬಳಲುತ್ತಿದ್ದ ನನ್ನ ತಂದೆಯನ್ನು ಕಾಣಲು ಕಳ್ಳತನದಿಂದ ಹೋದೆ. ಇಲ್ಲವಾದರೆ ಗುಪ್ತಪೋಲಿಸರು ನನ್ನ

---

* ಇದಕ್ಕಿಂತ ಮೊದಲಿನ ಸಂಗತಿಯು ಜಯಂತಿಯ ಕಳೆದ ೧೯೪೧ ಆಗಸ್ಟ್ ಸಂಚಿಕೆಯಲ್ಲಿ 'ನಾನು ಮನೆಯನ್ನು ಬಿಟ್ಟದು ಏಕೆ, ಹೇಗೆ?' ಎಂಬ ಶೀರ್ಷಿಕೆಯ ಕೆಳಗೆ ಪ್ರಕಟವಾಗಿದೆ. ಆದರಲ್ಲಿ ಲೇಖಕರು, ತಾವು ಮನೆಬಿಟ್ಟು ಪಾಂಡಿಚೇರಿಗೆ ಬಂದು ವಾಸಿಸತೊಡಗುವವರೆಗಿನ ಕತೆಯನ್ನು ವಿಶದವಾಗಿ ವಿವರಿಸಿರುವರು. ಸುರತ ಕಾಂಗ್ರೆಸಿನಲ್ಲಿ ನಡೆದ ಭಾರತೀಯರ ಒಳಜಗಳವನ್ನು ಕಣ್ಣಾರೆ ಕಂಡು, ಆ ಕಾಲದಲ್ಲಿ ಲೋಕಮಾನ್ಯ ತಿಲಕರ ಮೇಲೆ ಬೀಳಲಿರುವ ಏಟುಗಳನ್ನು ತಪ್ಪಿಸಲು ವ್ಯಗ್ರನಾಗಿ ನಿಂತವರಿವರು. ಮದರಾಸಿನಲ್ಲಿ ಇವರೂ ಇವರ ಸ್ನೇಹಿತರೂ ಸೇರಿ ನಡೆಯಿಸುತ್ತಿರುವ ತಮಿಳು ಪತ್ರಿಕೆಯೊಂದರ ಮೇಲೆ ಸರಕಾರದವರು ರಾಜದ್ರೋಹದ ಆರೋಪ ಹೊರಿಸಿದಾಗ, ತಮ್ಮ ಮಿತ್ರನನ್ನು ಉಳಿಸಲು ಇವರು ಮದರಾಸನ್ನು ಬಿಟ್ಟು ಪಾಂಡಿಚೇರಿಯೊಳಗೆ ಇರಲು ತೊಡಗಿದರು. ಅಲ್ಲಿಂದ ಮುಂದಣ ಸಂಗತಿ ಈ ಲೇಖಾಂಕದಲ್ಲಿ ಮುಂದುವರಿದಿದೆ. ಲೇ.

ತಂದೆಯನ್ನು ಪೀಡಿಸಬಹುದಾಗಿತ್ತು. ತಂದೆಯ ಬೇನೆಯು ಬಲವಾಗಿತ್ತು. ನಾನು ನನ್ನ ಕುಟುಂಬದೊಂದಿಗೆ ಉಳಿದಿದ್ದರೆ, ಆ ಕಾಲಕ್ಕೆ ಅವರಿಗೊಂದು ಭಾರ ಮಾತ್ರ ಆಗುತ್ತಿದ್ದೆನೆಂದು ಮನವರಿಕೆಯಾಯಿತು. ಆದರೆ ಮನೆಯನ್ನೂ ಜನರನ್ನೂ ಬಿಟ್ಟು ಹೋಗುವುದು ಕಠಿಣವೆನಿಸಿತು. ಬೇನೆಯವರಾದ ತಂದೆಯ ಉಪಚಾರಮಾಡಬೇಕೆಂದು ಮನವು ಹಾತೊರೆಯುತ್ತಿತ್ತು. ವಿಚಾರಿಸಿದಂತೆ ದುಃಖವು ಒತ್ತರಿಸಿ ಬಂದು ಅಳುಬರತೊಡಗಿತು. ಭಾರತ ಬಿಟ್ಟು ಹೋದರೆ ತಂದೆಯನ್ನು ಕಾಣುವ ಇನ್ನೊಂದು ಸುಯೋಗ ಲಭಿಸೀತೆಂದು ನನಗೆನಿಸಲಿಲ್ಲ. ಆದರೆ ಉಳಿದ ವಿಚಾರಗಳು ನನ್ನನ್ನು ಮುತ್ತಿ ಕಾಲ್ದೆಗೆಯುವಂತೆ ಪ್ರಚೋದಿಸ ತೊಡಗಿದುವು.

ಹೋಗುವುದಾದರೂ ಎಲ್ಲಿಗೆ?

ಚಿಕ್ಕದಾದ ಕೈಚೀಲವೊಂದನ್ನೂ ನನ್ನಲ್ಲಿದ್ದ ಮೂರುನೂರು ರೂಪಾಯಿಗಳನ್ನೂ ತೆಗೆದುಕೊಂಡೆ. ಪರದೇಶದಲ್ಲಿ ಅಗತ್ಯವೆನಿಸ ಬಹುದಾದ ವಸ್ತ್ರಗಳನ್ನೂ ತೊಡವುಗಳನ್ನೂ ನಾನು ಮಾಡಿಸಲಿಲ್ಲ. ದಾರಿಯವೆಚ್ಚಕ್ಕೂ ವಸ್ತುಗಳ ವೆಚ್ಚಕ್ಕೂ ಸಾಲುವಷ್ಟು ಹಣ ನನ್ನಲ್ಲಿ ಇರಲಿಲ್ಲ. ಅಲ್ಲದೆ ನಾನು ಎಲ್ಲಿಗೆ ಹೊರಡುವುದೆಂಬುದು ಕೂಡ ನಿಶ್ಚಿತವಿರಲಿಲ್ಲ. ರೇಲ್ವೆ ನಿಲ್ದಾಣದ ಕಡೆಗೆ ಹೊರಟೆ. ನಾನು ಹೊರಟ ಬಗೆಯು ವಿಚಿತ್ರವೆನಿಸುವಂತಹದಿತ್ತು. ನನ್ನ ಮನಸ್ಸನ್ನು ಬದಲುಮಾಡಬಹುದೆಂದು ನಾನಾಗಲಿ ನನ್ನ ಮನೆಯವರಾಗಲಿ ಎಣಿಸಿರಲಿಲ್ಲ. ನನ್ನ ಮನಸ್ಸಿನ ಸಮಾಧಾನಕ್ಕೂ ಅವರನ್ನು ಸಂತಯಿಸುವುದಕ್ಕೂ 'ಒಳ್ಳೇದು ತಿರುಗಿ ಬರುವೆ' ಎಂದು ಹೇಳಿದೆ. ನಾನು ಒಬ್ಬನೆ ಹೊರಟುದೂ, ಕೈಯಲ್ಲಿ ಚಿಕ್ಕ ಚೀಲವೊಂದೇ ಇದ್ದುದೂ ಮಾತ್ರ ನನ್ನ ಮನದ ನಿರ್ಧಾರವನ್ನು ಹೊರಗೆಡಹಲಿಲ್ಲ. ನನ್ನ ತಮ್ಮಂದಿರು ಕೂಡ ನಾನು ಕೇವಲ ಹುಡುಗಾಟಿಕೆ ಮಾಡುತ್ತಿರುವೆನೆಂದೇ ಭಾವಿಸಿದ್ದರು. ಆದರೆ ನಾನು ಕೋಲಂಬೋಕ್ಕೆ ಟಿಕೀಟು ಪಡೆದುಕೊಂಡು ಗಾಡಿಯಲ್ಲಿ ಕುಳಿತುಬಿಟ್ಟೆ. ಕಣ್ಣಮುಂದೆ ಕನಸನ್ನು ಕಟ್ಟಿಕೊಂಡು, ಅದರ ಬೆನ್ನುಹತ್ತಿ ನಡೆದಿರುವೆನೆಂಬುದರ ಅರಿವು ಬಂದು ನನ್ನ ಎದೆಯೊಡೆಯಿತು. 'ಹೆದರಿ ಹಿಂದಿರುಗಿ ಬಂದ' ಎಂಬುದನ್ನು ಆಡಿಸಿ ಕೊಳ್ಳಲು ಮನವು ಒಪ್ಪಲಿಲ್ಲ. ಒಂದುವೇಳೆ ತಿರುಗಿದರೆ, ಮುಂದೆ ಹೋಗಲಿಕ್ಕೆ ಹಣವುಳಿವುದಿಲ್ಲ—ಹೀಗೆ ಇಬ್ಬಣವಾಗಿ ಹೊಯ್ದಾಡು ತ್ತಿರುವ ಭಾರವಾದ ಮನದೊಂದಿಗೆ, ಗಾಡಿಯ ಮೂಲೆಯಲ್ಲಿ— ಮುದುಡಿಕೊಂಡು— ಏನು ಮಾಡಬೇಕೆಂಬುದು ತಿಳಿಯದೆ ಕುಳಿತೆ. 'ಟಿಕೀಟಿಗಾಗಿ ದುಡ್ಡು ಕೊಟ್ಟಿದ್ದೇನಲ್ಲ' ಎಂಬ ವಿಚಾರವು ಮಾತ್ರ ನನ್ನನ್ನು ಮುಂದೂಡುತ್ತಿತ್ತು.

ಯುರೋಪಕ್ಕೋ ಜಾವಾಕ್ಕೋ?

ನಾನು ಕೋಲಂಬೊದಲ್ಲಿ ಇಳಿದೆ. ಹಿಂದಕ್ಕೆ ಸ್ವದೇಶೀ ಉಗಿ ಹಡಗ ಕಂಪನಿಯನ್ನು ಚಿದಂಬರಂಪಿಳ್ಳೆ ಎಂಬವರು ನಡೆಯಿಸು ತ್ತಿದ್ದಾಗ ಅಲ್ಲಿಗೆ ಬಂದಿದ್ದೆ. ಅವರು ಈಗ ಅಲ್ಲಿಯೆ ಇರಬಹುದು, ಅಥವಾ ಭಾರತದ ಸೆರೆಮನೆಯಲ್ಲಿ ಕೊಳೆಯುತ್ತಿರಬಹುದು. ನಿಶ್ಚಿತ ಹೇಳಲಾರೆ. ಅವರನ್ನಾಗಲಿ ಬೇರೆ ಗೆಳೆಯರನ್ನಾಗಲಿ ಕಾಣುವ ಇಚ್ಛೆ ಇರಲಿಲ್ಲ. ಏಕೆಂದರೆ, ಅವರಲ್ಲಿಯ ಯಾರಾದರೂ ಒಲುಮೆ ಅಥವಾ ಒತ್ತಾಯದಿಂದ ಭಾರತಕ್ಕೆ ನನ್ನನ್ನು ಹೊತ್ತುಹಾಕಬಹುದೆಂಬ ಹೆದರಿಕೆ ನನಗಿತ್ತು. ಅಲ್ಲಿಯ ಒಂದು ಧರ್ಮಶಾಲೆಯಲ್ಲಿ ತಂಗಿದೆ. 'ಮುಂದೆ ಸಾಗಬೇಕೋ ಹಿಂದೆ ಹೊರಳಬೇಕೋ?' ವಿಚಾರ ಬಲವಾಗಿ ಬಾಧಿಸತೊಡಗಿತು. ತಂದೆಯ ಕಾಯಿಲೆಯ ಯೋಚನೆ ಬಂದು ಮನವನ್ನು ತಲ್ಲಣ ಗೊಳಿಸುತ್ತಿತ್ತು. ಮನೆಗೆ ಮರಳಬೇಕೆಂಬ ಬಗೆಯನ್ನು ತರುತ್ತಿತ್ತು. ಆದರೆ ಆ ಬೇನೆಯ ಮೂಲಕವಾಗಿಯೆ ನಾನು ಹೊರಬಿದ್ದಿರುವೆನೆಂಬುದು ಎಚ್ಚರುಕೊಡುತ್ತಿತ್ತು. ಆ ಅರಿವು ಬಂದೊಡನೆ ಮುಂದೆ ಸಾಗಬೇಕೆಂಬುದೇ ನನ್ನ ನಿರ್ಧಾರವಾಯಿತು. ನನ್ನೆದುರಿಗೆ ಕಾಣುತ್ತಿದ್ದುವು ಎರಡೆ ದಾರಿ: ಒಂದು ಜಾವಾ; ಇನ್ನೊಂದು ಯುರೋಪು. ಗುಪ್ತ ಪೋಲಿಸರು ನನ್ನನ್ನು ಬೆನ್ನಟ್ಟುವರೇನೋ ಎಂಬುದೊಂದು ಹೆದರಿಕೆ. ಇನ್ನೊಂದು, ಧರ್ಮಶಾಲೆಯಲ್ಲಿಯ ಜನರು ನನ್ನ ವಿಚಿತ್ರ ಬಗೆಗೆ— ಬ್ರಾಹ್ಮಣನಂತೆ ಕಂಡರೂ ಜುಟ್ಟು ಇಲ್ಲದುದನ್ನು ನೋಡಿ— ಕುತೂಹಲದ ಸಾಶಂಕವೃತ್ತಿಯುಳ್ಳವರಾಗಿದ್ದರು. ನನ್ನ ಇರವು ಹಾರುಸುದ್ದಿಯಿಂದ ಗುಪ್ತ-ಪೋಲಿಸರ ಕಿವಿಗೆ ಮುಟ್ಟಬಹುದಾಗಿತ್ತು. ಅವರು ನನ್ನನ್ನು ಗುರುತುಹಿಡಿಯಬಹುದಾಗಿತ್ತು. ಆದುದರಿಂದ ಯಾವ ದಾರಿಯಾದರೂ ಸರಿಯೆ, ಯಾವ ದೇಶವಾದರೂ ಸರಿಯೆ, ನಿರ್ಧಾರವು ಮಾತ್ರ ಬೇಗನೆ ಆಗಬೇಕಿತ್ತು. ಯುರೋಪಿಗೆ ತೆರಳಬೇಕೆಂದರೆ ಸಾಕಷ್ಟು ಹಣವಿಲ್ಲವೆಂಬ ಚಿಂತೆ. ಇನ್ನೇನು, ಮೂರನೆಯ ತರಗತಿಯ ಪ್ರವಾಸವನ್ನು ಕೈಕೊಳ್ಳಬಹುದಿತ್ತು—ಆ ಚಳಿಗಾಲದಲ್ಲಿಯೂ—ಉಣ್ಣೆಯ ಬಟ್ಟೆಗಳಿಲ್ಲದೆಯೆ. ಮರಳಿ ಹೊರಟು ಬರಬೇಕೆಂದರೆ ಆ ಸಾಧ್ಯವಾಗುವಷ್ಟು ದೂರವಿತ್ತು ಯುರೋಪು. ಕಣ್ಣೆದುರಿಗೆ ಬಂದುದು, ಅಳವಿನಲ್ಲಿದ್ದುದು ಜಾವಾ ಮಾತ್ರ!

ಭಾರತದಿಂದ ಬಿಡುಗಡೆ

ಈ ವಿಚಾರದ ಭರದಲ್ಲಿಯೆ 'ಕ್ಯಾರ್‌ಸನ್ ಮತ್ತು ಕಂಪನಿ'ಗೆ ಹೋಗಿ, 'ಜಾವಾಕ್ಕಾಗಿ ಹಡಗು ಇದೆಯೆ?' ಎಂದು ವಿಚಾರಿಸಿದೆ. ಅಲ್ಲಿಯ ಡಚ್ ಮುಖ್ಯಾಧಿಕಾರಿ (Consul)ಯು. ನೀನು ಅಲ್ಲಿಗೆ ಬರುವುದು ಹಿತಕರವಲ್ಲವೆಂದೂ, ದುಡಿದು ದುಡ್ಡು ಗಳಿಸುವುದು ಅಲ್ಲಿ ಸಾಧ್ಯವಿಲ್ಲವೆಂದೂ ತಿಳಿಸಿದನು. ಅದನ್ನು ಗಣನೆಗೆ ತಾರದೆಯೆ ನಾನು ಅಲ್ಲಿಗೇ ಹೊರಡಬೇಕೆಂದು ವಿಚಾರಿಸಿದೆ. ಪೌರ್ವಾತ್ಯ ಉಡುಪನ್ನು ಧರಿಸಿ, ಮೂರನೆಯ ತರಗತಿಯ ಪ್ರವಾಸವನ್ನು ಕೈಕೊಂಡು, ಕೆಲವು ಹಣ ಉಳಿಸಿ ಅಲ್ಲಿ ಜೀವನ ಮೊದಲು ಮಾಡಬೇಕೆಂಬ ವಿಚಾರ ನನ್ನದಿತ್ತು. ಆದರೆ 'ಕ್ಯಾರ್‌ಸನ್ ಕಂಪನಿ'ಯವರು ತಿಳಿಸಿದರು: ಒಂದು ವಾರಕ್ಕೆ ಮೊದಲು

ಆ ದಿಕ್ಕಿನಲ್ಲಿ ಹೊರಡುವ ಹಡಗವಿಲ್ಲವೆಂದು. ಕೋಲಂಬೋದಲ್ಲಿ ಕಾಲಕಳೆಯುವುದೆಂದರೆ ಇದ್ದ ದುಡ್ಡಿನ ವ್ಯಯ. ಆದುದರಿಂದ ದಿಕ್ಕುಗಾಣದೆ "ಎಲ್ಲಿಯಾದರೂ ಹೋಗುವ ಯಾವುದಾದರೊಂದು ಹಡಗವಿದೆಯೆ?" ಎಂದು ವಿಚಾರಿಸಿದೆ. ನನ್ನ ಈ ಪ್ರಶ್ನೆಗೆ ಆಶ್ಚರ್ಯವಾಗಿದ್ದರೂ ಗಾಬರಿಗೊಂಡಿದ್ದನವ. ನನ್ನ ಈ 'ದಿಕ್ಸೋಡಿತನ'ವು ನನ್ನ ಬಗೆಗೆ ಸಂಶಯ ಉಂಟುಮಾಡಿರಬಹುದು. ಆದರೆ ನನ್ನ ಎಳೆಯತನಕ್ಕಾಗಿ, ಸಂಶಯ ಹೆಚ್ಚಾಗಿ ಕಾಣದೆ ಆಶ್ಚರ್ಯವೆ ಕಂಡುಬರುತ್ತಿತ್ತು. ಅಂದೆಯೆ ಮಧ್ಯಾಹ್ನ ಯುರೋಪಿಗಾಗಿ ಜಪಾನಿ ಹಡಗೊಂದು ಹೊರಡುವುದೆಂದು ಹೇಳಿದರು. ಕೂಡಲೆ ನಾನು ಆ ಹಡಗಿನಿಂದ ಹೊರಡಬೇಕೆಂದು ನಿಶ್ಚಯಿಸಿ 'ಮಾರ್ಸೇಲ್'ನ ವರೆಗೆ ಮೂರನೆಯ ತರಗತಿಯ ಟಿಕೇಟನ್ನು ಪಡೆದುಕೊಂಡೆ. ಆದಕ್ಕಾಗಿ ಹನ್ನೊಂದು ಪೌಂಡನ್ನು ತೆತ್ತೆ. ಕೂಡಲೆ ಧರ್ಮಶಾಲೆಗೆ ಹೋಗಿ ನನ್ನ ಚೀಲವನ್ನು ತಂದು ಹಡಗನ್ನೇರಿದೆ. ಬೇಗನೆ ಹಡಗು ಮುಂದೆ ಸಾಗಿತು. ನನ್ನ ಭಾರತದಿಂದ ನಾನು ಬೇರೆಯಾದೆ, ದೂರವಾದೆ. ಮನಸ್ಸಿನ ಅರ್ಧಭಾಗ ನನ್ನ ಜೊತೆಯಲ್ಲಿ—ಉಳಿದರ್ಧ ಭಾರತದಲ್ಲಿ—ಮನೆಯಲ್ಲಿ! ಈಗ ವ್ಯಾಕುಲಪಡುವಂತೆಯೇನೂ ಇಲ್ಲ.

ಮೂರನೆಯ ತರಗತಿಯ ಪ್ರವಾಸಿಕರಲ್ಲಿ ಬಂಗಾಲದ ಯುವಕನೊಬ್ಬನನ್ನು ಕಂಡೆ. ಅವನು ಹೊರಟಿದ್ದುದು ನ್ಯೂ-ಓರ್ಲಿಯನ್ಸ್‌ಗೆ. ಆದರೆ ಲಂಡನ್ ಮುಟ್ಟುವ ವರೆಗೆ ಮಾತ್ರ ಬೇಕಾಗುವಷ್ಟು ಹಣವಿತ್ತು ಅವನ ಬಳಿಯಲ್ಲಿ. ಅವನೊಬ್ಬ ಮುಹಮ್ಮದೀಯ. ಅವನ ಹೆಸರು 'ಅಬ್‌ದುರಾಬ್'. ಅವನಿಗೆ ಇಂಗ್ಲೀಷು ತಿಳಿಯದು; ನನಗೆ ಉರ್ದು ಬಾರದು. ಲಂಡನ್‌ನಲ್ಲಿಯ ಪ್ರದರ್ಶನಕ್ಕಾಗಿ ಹೊರಟ ಜಪಾನಿ ಕೂಲಿಕಾರನೂ ಒಬ್ಬನಿದ್ದ ನಮ್ಮ ಜೊತೆಗೆ. ನಾವಿಷ್ಟೇ ಪ್ರವಾಸಿಕರು. ಅಲ್ಲಿ ಇದ್ದುವು ಮೂರೇ ಸ್ಥಳಗಳು. ನನ್ನ ದೈವಕ್ಕೆ ಅದರಲ್ಲಿ ನನಗೊಂದು ಸಿಕ್ಕಿದ್ದಿತು. ಆ ಜಪಾನಿ ಕೂಲಿಕಾರನೊಡನೆ ಮಾತಾಡುವುದು ಕಷ್ಟವಾಯಿತು. ಅವನೇನೊ ಜಪಾನಿ-ಇಂಗ್ಲಿಷು ನಿಘಂಟನ್ನು ಕೈಯಲ್ಲಿಯೆ ಹಿಡಿದಿರುತ್ತಿದ್ದ. ಆದರೆ ಮಾತನಾಡುವುದಕ್ಕಿಂತ ತಾತ್ತ್ವಿಕನಂತೆ ಚಿಲುಮೆ ಸೇದುವ ಕಡೆಗೇ ಅವನ ಒಲವು ಇದ್ದಂತಿತ್ತು.

ಮಾಂಸವನ್ನು ನೋಡಿ ತಡೆಯಲಾರದಷ್ಟು ಮನವು ಮುದುರಿಕೊಳ್ಳುತ್ತಿತ್ತು—ಭಾರತದಲ್ಲಿ. ವಾಸನೆ ಬಂದರೆ ಓಕರಿಕೆ ಬರುತ್ತಿತ್ತು. ಆದರೆ ಜಪಾನಿ ಹಡಗುಗಳಲ್ಲಿ ಬೇಯಿಸಿದ ಗೋಮಾಂಸ ಮಾತ್ರ ಸಿಕ್ಕುತ್ತಿತ್ತು. ಅದರ ವಾಸನೆಯು, ಅದರ ಜೊತೆಯಲ್ಲಿಯೆ ತಂದ ಬ್ರೆಡ್ ಮತ್ತು ಕಾಫಿ ಇವುಗಳನ್ನೂ ದೂರಸರಿಸುವಂತೆ ಮಾಡುತ್ತಿತ್ತು. ಕಾಫಿ-ಬ್ರೆಡ್ಡನ್ನು ಮಾತ್ರ ಪ್ರಾಣಧಾರಣದ ಸಲುವಾಗಿ ಔಷಧದಂತೆ ಸೇವಿಸುತ್ತಿದ್ದೆನು. ಮಾರ್ಸೇಲ್ ಮುಟ್ಟಬೇಕಾದರೆ ಇಪ್ಪತ್ತೆರಡು ದಿನಗಳು ಹಿಡಿಯುವು. ನಾನು ತೆಗೆದುಕೊಳ್ಳುತ್ತಿದ್ದ ಅಲ್ಪಾಹಾರದ ಮೂಲಕ ಅಶಕ್ತನಾಗತೊಡಗಿದೆ. ನನ್ನ ಕಣ್ಣು-ಕಿವಿಗಳು ಮಂದವಾಗತೊಡಗಿದುವು. ಮೊಗದ ಮೇಲಿನ ಕಳೆ ಕಾಣದಾಯಿತು. ಏನಾದರೂ ತಿನ್ನೆಂದು ಹೇಳುವವರು ಯಾರೂ ಇರಲಿಲ್ಲ. ಈ ಉಪವಾಸದಿಂದ ಒಂದು ಮಾತ್ರ ಲಾಭವಾಯಿತು. ಇಂದ್ರಿಯಗಳ ಶಕ್ತಿ ಮಂದವಾಗಿ, ನನಗೆ ಚಳಿಯು ಹತ್ತುತ್ತಿರಲಿಲ್ಲ. ಮಾರ್ಸೇಲ್ ಮುಟ್ಟುವ ಮೊದಲು ಒಂದು ದಿನ, ನಮ್ಮ ಹಡಗು ಇಟಲಿ ಮತ್ತು ಸಿಸಿಲಿ ಇವುಗಳ ನಡುವೆ ಹಾಯ್ದು ಹೊರಟಿತ್ತು. ಇಟಲಿಯ ದಂಡೆಯ ಮೇಲಿದ್ದ ಬಂಡೆಯ ಮೇಲೆ ಕಟ್ಟಿದ ಬಿಳಿಯ ಮನೆಗಳು ಸೂರ್ಯಪ್ರಕಾಶದಲ್ಲಿ ಕಣ್ಣು ಕುಕ್ಕಿಸಿ ಕರೆಯುತ್ತಿದ್ದವು. ಇಟಲಿಗೆ ಹಾರಬೇಕೆಂದು ಮನವು ಹಾತೊರೆಯುತ್ತಿತ್ತು. 'ಜೋಸೆಫ್ ಮ್ಯಾಝಿನಿ'ಯ ಹೊತ್ತಗೆಗಳನ್ನು ಓದಿ ಅನೇಕ ಕನಸುಗಳನ್ನು ಕಟ್ಟುತ್ತಿದ್ದೆ. ನನ್ನ ಕನಸಿನ ನಾಡು ನೆರೆಯಲ್ಲಿಯೆ ನಿಂತಿತು. ನಾನು ಹೊರಟಿದ್ದುದು ಹೆಚ್ಚಿನ ಚಳಿಯುಳ್ಳ ಪ್ರದೇಶ. ಹಡಗಿನಲ್ಲಿಯ ಅಡಿಗೆಯವನು ಒಂದು ದಿನ ಸಿಟ್ಟುಮಾಡಿದನು: 'ನೀನೇನಾದರೂ ಆಹಾರವನ್ನು ತೆಗೆದುಕೊಳ್ಳದಿದ್ದರೆ ಮಾರ್ಸೇಲಿಗೆ ಮುಟ್ಟುವುದು ನೀನಲ್ಲ, ನಿನ್ನ ಹೆಣ' ಎಂದು ಬೆದರಿಸಿದನು. 'ನೀನು ಆಚಾರ್ಯನೊ?' ಎಂದು ವಿಚಾರಿಸಿದನು. 'ಅಹುದು' ಎಂದು ನಾನು ತಲೆಯಲ್ಲಾಡಿಸಿದೆನು. ಅವನಿಗೆ ಕರುಣೆ ಬಂತು. ಒಂದು ಸೇಬು ಹಣ್ಣನ್ನು ತಂದುಕೊಟ್ಟ. ಮೂರನೆಯ ತರಗತಿಯವರಿಗೆ ಹಣ್ಣು ಹಂಪಲು ಕೊಡುವ ಸೌಕರ್ಯವಿರಲಿಲ್ಲ; ತನಗಾಗಿ ಬಂದ ಆಹಾರದೊಳಗಿನದೊಂದು ಹಣ್ಣನ್ನು ನನಗೆ ಕೊಟ್ಟ.

ಮಾರ್ಸೇಲಿಗೆ ಹಡಗು ಮುಟ್ಟಿದ ಕೂಡಲೆ, ನನ್ನೆದೆ 'ಧಡಧಡ' ಬಡಿಯತೊಡಗಿತು. ನನ್ನ ಸಂಕಟಗಳು ಪ್ರಾರಂಭವಾದುವು. ಪ್ರವಾಸದುದ್ದಕ್ಕೂ ಇದ್ದ ಹಣವೆಲ್ಲ ವೆಚ್ಚವಾಗಿತ್ತು. ಯಾವುದೋ ಗೊತ್ತಿಲ್ಲದ ದೇಶದಲ್ಲಿ, ದೇಶಭಾಷೆ ಗೊತ್ತಿಲ್ಲದೆ, ಏನು ಮಾಡಬೇಕೆಂದು ತಿಳಿಯದೆ ಇಳಿದವ ನಾನು. "ಸ್ವಾತಂತ್ರ್ಯ—ಸಮತೆ—ಬಂಧುತ್ವ" ಎಂಬುವಾಗ ಎಲ್ಲೆಡೆಗೂ ಬರೆಯಲ್ಪಟ್ಟಿದ್ದರೂ, ಅದರಿಂದ ನನ್ನ ಉಪಜೀವನ ಸಾಗುವುದು ಹೇಗೆ? ಉಪವಾಸದಿಂದ ಮತ್ತು ಚಳಿಯಿಂದ ನಾನು ಸಾಯಬಹುದೆಂದೂ, ಫ್ರಾನ್ಸ್‌ನಲ್ಲಿಯೆ ನನ್ನ ಸಮಾಧಿಯಾಗಬಹುದೆಂದೂ ಹೆದರಿಕೆ ಬರತೊಡಗಿತು. ಈ ಹೆದರಿಕೆಯ ಮೂಲಕ ನಾನು ಹಡಗನ್ನು ಬಿಟ್ಟು ಇಳಿಯದಾದೆನು. ಮನಸ್ಸಿನಲ್ಲಿ ವಿಚಿತ್ರ ವಿಚಾರ ಸುಳಿಯತೊಡಗಿದುವು: 'ಕಾನೂನು ನನ್ನನ್ನು ಇಲ್ಲಿ ಇಳಿಯಲಿಕ್ಕೇಕೆ ಹಚ್ಚುವುದು? ವೆಚ್ಚವಿಲ್ಲದೆ ಹಿಂದಿರುಗಿ ನನ್ನನ್ನು ಏಕೆ ಮುಟ್ಟಿಸಬಾರದು?' ಎಂದು. ಆದರೆ ಫ್ರಾನ್ಸ್ ದೇಶವು ಸ್ವತಂತ್ರ ವಾತಾವರಣವುಳ್ಳದ್ದು. ಆದರ ಭಾವವುಳ್ಳದ್ದು; ಅಲ್ಲದೆ ನಾನು ಬಿಡಿಕಾಸು ಕೂಡ ಇಲ್ಲದ ಬಿಕಾರಿ ಎಂದು ಅಧಿಕಾರಿಗಳಿಗೆ ತಿಳಿದರೆ, ಆ ಕ್ಷಣವೆ 'ಸ್ವಾತಂತ್ರ್ಯ, ಸಮತೆ, ಬಾಂಧವ್ಯ, ಆದರ, ಆತಿಥ್ಯ' ಎಲ್ಲವೂ ಹಾರಿಹೋಗುವುವು. ಅದೇಕೊ, ಅವರು 'ದುಡ್ಡಿದೆಯೊ ಇಲ್ಲವೋ?' ಎಂಬುದನ್ನು

ನನ್ನನ್ನು ಕೇಳಲಿಲ್ಲ; ಅದೇನೊ ನನ್ನ ಪರೀಕ್ಷೆಯಯನ್ನೇನೂ ಅವರು ಮಾಡಲಿಲ್ಲ!

ಎಲ್ಲ ಪ್ರವಾಸಿಕರು ಹೊರಟು ಹೋಗಿದ್ದರೂ ನಾನು ಮೂಲೆಯಲ್ಲಿ ಮುದುಡಿಕೊಂಡು ಕುಳಿತೇ ಇದ್ದೆ. ನನ್ನ ಜೊತೆಯಲ್ಲಿ ಆ ಬಂಗಾಲಿ ಮುಸ್ಲಿಮ್ ಪ್ರವಾಸಿ ಮಾತ್ರ ಉಳಿದಿದ್ದ. ಅವನು ಇಂಗ್ಲಂಡಿನ ವರೆಗೆ ಹೋಗುವವನು. ಸಂಜೆಗೆ ಅಧಿಕಾರಿಗಳು ಬಂದು, ಹಡಗಿನಿಂದ ಹೊರಡಲಿಲ್ಲವೇಕೆಂದು ಕೇಳಿದರು. ಹಡಗಿನಿಂದ ಇಳಿಯಲು ನನ್ನನ್ನು ಒತ್ತಾಯಪಡಿಸಿದರು. ಆಗ ಕತ್ತಲೆಯಾಗಿತ್ತು. ಹಡಗಿನಲ್ಲಿಯೆ ಮಲಗಬೇಕೆಂದರೆ, ಅದಕ್ಕಾಗಿ ಹಣಕೊಡಬೇಕಾಗುವುದೆಂದು ಹೇಳಿದರು. ಹಣದ ಮಾತೆತ್ತಿದ ಕೂಡಲೆ ನಾನು ಅಲ್ಲಿಂದ ಎದ್ದೆ. 'ಇಂತಹ ಹೊತ್ತಿನಲ್ಲಿ ಸುಂಕದಕಟ್ಟೆಯನ್ನು ದಾಟಿ ನನ್ನನ್ನು ಬಿಡಬಹುದೆ?' ಎಂದು ಕೇಳಿದೆ. ಎಲ್ಲ ಕಚೇರಿಗಳೂ ಆಗ ಮುಚ್ಚಿದ್ದುವು. ಈ ನಮ್ಮ ಸಂಭಾಷಣೆಯನ್ನು ನನ್ನ ಸುದೈವದಿಂದ 'ಥಾಮಸ್ ಕುಕ್' ಕಂಪನಿಯ ಮಾರ್ಗದರ್ಶಿಯು ಕೇಳುತ್ತಿದ್ದ. ಅವನು ನನ್ನನ್ನು ಕರೆದೊಯ್ಯುವ ಹೊಣೆಹೊತ್ತ. ಅವನೇ ಒಬ್ಬ ಕೂಲಿಯನ್ನೂ ಗೊತ್ತುಮಾಡಿದ. ನಾನು ಅವನ ಜೊತೆಗೆ ಹೊರಟೆ. ಸುಂಕದ ಕಟ್ಟೆಯ ಸಮೀಪಕ್ಕೆ ಬಂದಾಗ 'ಯಾರಲ್ಲಿ?' ಎಂಬ ಕೂಗು ಕೇಳಬಂದಿತು. ಅದು ಒಬ್ಬ ಸೈನಿಕನದಾಗಿತ್ತು. ಫ್ರೆಂಚ್‌ಭಾಷೆಯಲ್ಲಿ 'ಮಾರ್ಗದರ್ಶಿ'ಯು ಅವನಿಗೆ ಉತ್ತರಕೊಟ್ಟ. ಮರುಕ್ಷಣವೆ ನನಗೆ ಸನ್ನೆಮಾಡಿ 'ಎರಡು ಶಿಲಿಂಗಿನ ನಾಣ್ಯವನ್ನು ಅವನ ಕೈಗಿಡು' ಎಂದು ಹೇಳಿದ. ಆ ಹಣದ ತುಣುಕು ನನ್ನ ಪರವಾಗಿ ಮಾತನಾಡಿತು. 'ಸಾಗಲಿ' ಎಂದು ಕೂಗಿದ ಸೈನಿಕ. ಲಂಚಗೂಳಿತನವಿಲ್ಲವೆಂಬುದನ್ನು ಫ್ರಾನ್ಸಿನ ಬಗೆಗೆ ನಾನು ಕೇಳಿದ್ದೆ. ಹಾಗೆ "ಕೈಬೆಚ್ಚಗೆ" ಮಾಡುವಾಗ, ನನಗೆ ಭಾರತದನೆನಪೇ ಆಯಿತು. 'ಹಣ ಹೋದರೂ ಹೋಗಲಿ, ಸುಂಕದ ಕಟ್ಟೆಯ ಸಂಕಟ ತಪ್ಪಿತಲ್ಲ' ಎಂದು ಸಮಾಧಾನ. ಬಂಧುಗಳಿಬ್ಬರೂ ಕಾನೂನಿಗಿಂತ ಹೆಚ್ಚಾಗಿಯೆ ಸಹಾನುಭೂತಿಯನ್ನು ತೋರಿಸಿದ್ದರು. ಇದು ಹಣದ ಪ್ರಭಾವವಲ್ಲವೆ?

ಸುಂಕದ ಕಟ್ಟೆಗೆ ನಿಜವಾಗಿಯೂ ನಾನು ಅಷ್ಟು ಹೆದರುವ ಕಾರಣವಿದ್ದಿಲ್ಲ. ಯಾಕೆಂದರೆ ನನ್ನ ಹತ್ತಿರ ಬೆಲೆಬಾಳುವ ಒಡವೆಗಳೇ ಇದ್ದಿಲ್ಲ. ಕಟ್ಟೆಯನ್ನು ದಾಟಿದ ಕೂಡಲೆ ಮಾರ್ಗದರ್ಶಿಯನ್ನು ಕೇಳಿದೆ. 'ಪಾರಿಸಕ್ಕೆ ನಾನು ಈಗಲೆ ಹೊರಡಲೆ?' ಎಂದು. ಮುಂದಿನ ಗಾಡಿಗೆ ತಲುಪುವಷ್ಟು ವೇಳೆಯಿರಲಿಲ್ಲ. ಆದರೂ ಆತ ನನ್ನನ್ನು ಗಾಡಿಗೆ ಮುಟ್ಟಿಸುವ ಆಶ್ವಾಸನವನ್ನು ಇತ್ತ. ಒಂದು ಕುದುರೆ ಬಂಡಿಯಲ್ಲಿ ಕುಳಿತು ನಿಲ್ದಾಣದೆಡೆಗೆ ಓಡಿದೆವು. ಮತ್ತೆ ನನಗಾಗಿ ಅವನು ಒಂದು ಟಿಕೇಟನ್ನು ಪಡೆದುಕೊಂಡು ಬಂದು, ಗಾಡಿಯಲ್ಲಿ ನನ್ನನ್ನು ಕುಳ್ಳಿರಿಸಿದ. ಈ ಆದರಾತಿಥ್ಯವನ್ನು ತನ್ನ ಲಾಭಪಡೆಯದೆ ಅವನೇನೂ ಮಾಡಲಿಲ್ಲ. ಆದರೆ ಆ ಪ್ರಸಂಗದಲ್ಲಿ ಆದಷ್ಟು ಕಡಿಮೆ ಹಣ ನನ್ನ ಕೈಬಿಡಬೇಕೆಂದು ನನಗೆ ಎನಿಸುತ್ತಿತ್ತು. ನನ್ನಂತಹನು ಅವನಿಗೆ ಹಿಂದೆ ಸಿಕ್ಕಿರಲಿಕ್ಕಿಲ್ಲ. ಸಾಮಾನ್ಯವಾಗಿ ಸಿರಿವಂತ ಪ್ರಯಾಣಿಕರ ಜೊತೆಗೇ ಅವನ ಸಹವಾಸ. ಅವರಿಗೇನು ಹಣದ ಕೊರತೆ? ಅಷ್ಟರಲ್ಲಿ ಗಾಡಿ ಕೂಗಿತು. ಮುಂದೆ ಸಾಗಿತು. ನಾನು ಅವನ ಆಭಾರ ಮನ್ನಿಸಿದೆ ಮತ್ತು ಆಶ್ವಾಸನವಿತ್ತೆ. 'ಮುಂದೆ ಎಂದಾದರೂ ಮಾರ್ಸೇಲ್‌ನ ಮೇಲೆ ಹಾಯ್ದು ಹೋಗುವ ಪ್ರಸಂಗಬಂದರೆ, ನಿನ್ನ ಋಣವನ್ನು ತೀರಿಸುವೆ' ಎಂದು. ನನ್ನ ಮಾತಿನಲ್ಲಿ ಅವನಿಗೆ ನಂಬಿಕೆ ಹುಟ್ಟಲಿಲ್ಲವೆಂದು ಬೇರೆ ಹೇಳಬೇಕಿಲ್ಲ.

ಕ್ರಾಂತಿಗಳ ತವರು

ಗಾಡಿಯಲ್ಲಿ ದೈವಯೋಗದಿಂದ ನಾವಿಬ್ಬರೆ ಇದ್ದೆವು. ಎದುರಿಗೆ ಕುಳಿತವನು ಒಬ್ಬ ಫ್ರೆಂಚ್ ಮನುಷ್ಯ. ನನ್ನ ವಿಚಿತ್ರವೇಷದಕಡೆಗೆ ಅವನು ದುರುಗುಟ್ಟಿ ನೋಡತೊಡಗಿದ. ಅಂದಿನ ರಾತ್ರಿಯೆ ನನ್ನ ಜನ್ಮದಲ್ಲಿ ನಾನು ಹಿಮುಬೀಳುವುದನ್ನು ನೋಡಿದೆ. ಆ ಗಾಡಿಯಲ್ಲಿ ನಾನು ಬೆಚ್ಚಗೆ ಕುಳಿತಿದ್ದೆ. ಹಿಮನೋಡಿದ ಅನುಭವ ಮೊದಲೂ ಇತ್ತು; ಆದರೆ ಅದು ಚಿತ್ರದಲ್ಲಿ. ಏನೆ ಎಂದರೂ ಪಾರೀಸ್ ಪಟ್ಟಣಕ್ಕೆ—ಕ್ರಾಂತಿಗಳ ತವರಾದ ಪಾರೀಸ್ ಪಟ್ಟಣಕ್ಕೆ—ಹೋಗಲು ಆನಂದವೆನಿಸತೊಡಗಿತು. ಅಲ್ಲಿಯ ಒಬ್ಬ ತಮಿಳು ಭಾಷೆಯ ಪ್ರೊಫೆಸರನನ್ನು ಉದ್ದೇಶಿಸಿ ಬರೆದ ಪರಿಚಯಪತ್ರವೊಂದು ನನ್ನ ಹತ್ತಿರ ಇತ್ತು. ನನ್ನ ಈ ದುರವಸ್ಥೆಯನ್ನು ಕಂಡು ಅವನು ಕನಿಕರ-ಪಡಬಹುದೆಂದೂ ಆಶೆಯಿತ್ತು. ಅವನು ಕೆಲಕಾಲ ಪಾಂಡಿಚೇರಿಯಲ್ಲಿ ಇದ್ದ.

ಗಾಡಿ ಪಾರಿಸ್ ಮುಟ್ಟಿದ ಕೂಡಲೆ, ಇದಿರು ಕುಳಿತ ಗೃಹಸ್ಥನು ತನ್ನಷ್ಟಕ್ಕೆ ತಾನು ಹೊರಟು ಹೋಗದೆ ನನಗಾಗಿ ಕಾದಿದ್ದ. ನಿಲ್ದಾಣದ ಹೊರಗೆ ನನ್ನನ್ನು ಕರೆದೊಯ್ದು, ಟ್ರ್ಯಾಮ್ ನಡೆಯಿಸುವವನಿಗೆ ನನ್ನನ್ನು ಅಗ್ಗದ ದರದ ಊಟದ ಮನೆಗೆ ಮುಟ್ಟಿಸೆಂದು ಹೇಳಿದನು. ಆ ಊಟದ ಮನೆಯು ಶ್ರೀಯುತ ವಿಲ್ಸನ್‌ರ ಮನೆಯ ಹತ್ತಿರವೆ ಇತ್ತು. ನನಗೆ ತೋರಿಸಿರುವ ಈ ದಯೆಗಾಗಿ ಆ ಟ್ರ್ಯಾಮು ನಡೆಯಿಸುವವನಿಗೂ ಆ ಗೃಹಸ್ಥನು 'ಖುಸಿ' ಕೊಟ್ಟಿರಬಹುದು.

ಆ ಟ್ರ್ಯಾಮಿನವನು ಊಟದ ಮನೆಯನ್ನು ನನಗೆ ತೋರಿಸಿದ. ನಾನು ಒಳಕ್ಕೆ ಹೊರಟೆ. ನನ್ನ ಕೈಯಲ್ಲಿ ಚಿಕ್ಕ ಚೀಲವೊಂದೇ ಒಂದು. ನನ್ನ ಈ ಸ್ಥಿತಿಯನ್ನು ನೋಡಿದವರು ನಾನು ಬಡವನೆಂದು ತಿಳಿಯದೆ ಇರಲಾರರು. ಅಲ್ಲದೆ ಈ ಬಡತನ ಆ ಊಟದ ಮನೆಯ ಒಡತಿಯನ್ನು ಗಾಬರಿಮಾಡಿತ್ತು. ಅಲ್ಲಿಯ ಆಳುಗಳಾದರೂ "ಇವನೆಲ್ಲಿಯ 'ಮಿಕ' ಬಂದಿರುವನು?" ಎಂದು ಕುತೂಹಲಿಗಳಾಗಿರಬಹುದು.

ಬೆಳಗಿನೂಟ ಆದಕೂಡಲೆ, ಅದೇ ಬೀದಿಯಲ್ಲಿದ್ದ ಪ್ರೊಫೆಸರ್ ವಿಲ್ಸನ್ ಅವರ ಮನೆಗೆ ನಾನು ಹೊರಟೆ. ಅನೇಕ ಸಲ ಬಾಗಿಲನ್ನು ತಟ್ಟಿದೆ. ಬದಿಯಲ್ಲಿಯೆ ಇಳಿಬಿದ್ದ ಹಗ್ಗವನ್ನು ಜಗ್ಗಿದೆ. ತರುಣನೊಬ್ಬ ಬಾಗಿಲನ್ನು ತೆರೆದ. ನನಗೇನು ಬೇಕಿದೆಯೆಂದು ವಿಚಾರಿಸಿದ

(೧೧೯ನೆಯ ಪುಟಕ್ಕೆ ಮುಂದುವರಿದಿದೆ)

ನಾಡಗುಡಿಯು ಮಾನವೆ ಮಾನ !

ಅದಕಾಗಿ ಮುಡಿಪು ನಮ್ಮಯ ಪ್ರಾಣ !

ಕನ್ನಡ ಸೈನಿಕ

" ಸೊಕ್ಕಿದ ಹಗೆಗಳ ಬೊಗ್ಗಿಸಿ ಮರೆಯುವ ಸೋಲರಿಯದ ಕರಿನಾಡಗುಡಿ ! "

ಸಂಪುಟ ೧ | ಬೇಕಾದಾಗ ಹೊರಡುವ ಪತ್ರಿಕೆ | ಸಂಚಿಕೆ ೭

ಬಿ. ಟಿ. ಕಾಲೇಜೂ ಕನ್ನಡವೂ

ಕರ್ನಾಟಕದಲ್ಲಿ ಉಚ್ಚ ಶಿಕ್ಷಣದ ಹೆಚ್ಚಿನ ಅನುಕೂಲತೆಗಳು ಇಲ್ಲವೆಂಬ ಕೂಗು ಬಹುದಿನಗಳಿಂದಲೂ ಕೇಳಬರುತ್ತಿದೆ. ಈ ಕೊರತೆಯು ಹೆಚ್ಚು ಮನವರಿಕೆಯಾಗಿ, ಇತ್ತೀಚೆಗೆ ಕರ್ನಾಟಕಕ್ಕೊಂದು ವಿಶ್ವವಿದ್ಯಾಲಯವು ಬೇಕು ಎಂದೂ ಸಾಹಸ ನಡೆದಿದೆ. ಈ ನಮ್ಮ ಕೂಗು-ಸಾಹಸಗಳು ಕೆಚ್ಚು ಕನ್ನಡದಿಂದ ನಡೆವುದಿಲ್ಲವೆಂಬಂತೆ ಭಾಸವಾಗುತ್ತದೆ. ನಮ್ಮ ಉಚ್ಚ ಶಿಕ್ಷಣದ ಕೂಗಿಗೆ ಮಾರುತ್ತರವೆಂದು ಆಗಾಗ ಅಲ್ಲಲ್ಲಿ ಉಚ್ಚ ಶಿಕ್ಷಣಾಲಯಗಳು ಹುಟ್ಟಿ ಬರತೊಡಗಿವೆ. ಈ ಶಿಕ್ಷಣಾಲಯಗಳು ಕನ್ನಡ ನಾಡಿನಲ್ಲಿಯೆ 'ಸ್ಥಾನ' ಪಡೆದಿವೆ. ಆದರೆ ಇವು ಎಷ್ಟರಮಟ್ಟಿಗೆ ಕನ್ನಡಕ್ಕೆ ಬೆನ್ನೆಲುಬಾಗಿವೆಯೆಂಬುದನ್ನು ತಿಳಿವುದಗತ್ಯ.

ಬಿ. ಟಿ. ಕಾಲೇಜು ಬೆಳಗಾಂವಿಯಲ್ಲಿ ಅವತರಿಸಿತು. ಈ ಕಾಲೇಜಿಗೆ ಬೆಳಗಾಂವಿಯ ಬೇನೆ ಬಡಿದುಕೊಂಡಿತು. ಬಿ. ಟಿ. ಕಾಲೇಜು ಕರ್ನಾಟಕಕ್ಕೆ ಅಗತ್ಯವಾಗಿದ್ದರೂ ಅದು ಸಂಪೂರ್ಣ ಕನ್ನಡವಾಗಲಿಲ್ಲ. ಉಳಿದ ಪ್ರಾಂತಗಳಲ್ಲಿಯ ಬಿ. ಟಿ. ಕಾಲೇಜುಗಳು ಹೀಗಲ್ಲ ; ಅವರು ತಮ್ಮ ಪ್ರಾಂತದ ಮುದ್ರೆಯನ್ನು ಒತ್ತಿಯೆ ಅದನ್ನು ಒಳಕ್ಕೆ ಕರೆಯುವರು. ನಮ್ಮದರ ಮುಖಕ್ಕೆ ಮಾತ್ರ ಕನ್ನಡದ ಮುದ್ರೆಯೆ ಇಲ್ಲ. ಹಿರಿಯರಿಂದ ಹರಿದು ಬಂದ ಈ ಹರುಕು ಕನ್ನಡತನ ಇಂದು ನಮ್ಮ ತಲೆ ತಿನ್ನತೊಡಗಿದೆ. ಕನ್ನಡ ನಾಡಿನಲ್ಲಿ ಹುಟ್ಟಿದ ಈ ಸಂಸ್ಥೆ ಕನ್ನಡಕ್ಕೆಯೆ ಮೀಸಲಾಗಿರಬೇಕಲ್ಲವೆ? ವಿದ್ಯಾರ್ಥಿಗಳಲ್ಲಿ ಮರಾಟಿ ಮಾಧ್ಯಮದವರು ಹಲವರು; ಪ್ರಾಧ್ಯಾಪಕವರ್ಗದಲ್ಲಿ ಕನ್ನಡಿಗರಾದವರು ಕಡಿಮೆ. ಪ್ರಾಧ್ಯಾಪಕರು ಸರಕಾರದ ಬಲುಮೆಯಿಂದ ಕನ್ನಡ ಕಲಿತಿರಬಹುದು ; ಆದರೆ ಆದರಿಂದ ಅವರಿಗೆ 'ಕನ್ನಡತನ' ಬಂದಂತಾಯಿತೆ ? ತರಬೇತು ಹೊಂದಲು ಬಂದ ಶಿಕ್ಷಕರು ಇಲ್ಲಿಂದ ಹಂಜು ಹೊತ್ತಿಸಿಕೊಂಡು ಹೋಗುವವರು ; ಕನ್ನಡನಾಡಿನ ಶಿಕ್ಷಣ ಸಂಸ್ಥೆಗಳಲ್ಲಿ ಕಾರ್ಯಪ್ರವೃತ್ತರಾಗುವವರು. ಇಂತಹರಿಂದ ನಮ್ಮ ಮುಂದಿನ ಪೀಳಿಗೆಯ ಉದ್ಧಾರವಾಗಬೇಕು. ಇವರಲ್ಲಿ ಅಚ್ಚ ಕನ್ನಡದ ಕೆಚ್ಚು ಬೆಳೆಯದಿದ್ದರೆ, ಮುಂಬರುವ ಹುಡುಗರಿಗೆ ಸ್ಫೂರ್ತಿದಾಯಕರಾಗಬಹುದೆ? ಬಾಲಕರು ಶಿಕ್ಷಕರನ್ನು ಮಾರ್ಗದರ್ಶಿಗಳೆಂದು ನೋಡುತ್ತಿರುತ್ತಾರೆ. ಅವರಿಂದ ತಮ್ಮ ಮುಂದಿನ ಜೀವನದ ಬೆಳಕನ್ನು ಪಡೆಯಬೇಕೆಂದಿರುತ್ತಾರೆ. ಆದರೆ ಕನ್ನಡತನವನ್ನು ಬಿತ್ತಿ ಬೆಳೆಯುವ ಹಂಬಲು ಶಿಕ್ಷಕರಲ್ಲಿ ಬಂದಿರಬೇಕು. ಶಿಕ್ಷಣಕ್ಕೊಂದು ಉದ್ದೇಶವಿದೆ, ಆ ಉದ್ದೇಶಸಾಧನೆಯಾಗಬೇಕು. ಬಿ. ಟಿ. ಕಾಲೇಜಿನಲ್ಲಿ ಮರಾಟಿ ಪ್ರಾಧ್ಯಾಪಕರದೂ ಮರಾಟಿ ವಿದ್ಯಾರ್ಥಿಗಳದೂ ಸೋಂಕಲ್ಲದೆ, ಈ ಬಿ. ಟಿ. ಕಾಲೇಜಕ್ಕೆ ಇನ್ನೊಂದು ಬೇನೆಯಿದೆ. ಬಿ. ಟಿ. ಕಾಲೇಜಿಗೆ ಅಂಟಿಕೊಂಡ ಸರದಾರ್ ಹೈಸ್ಕೂಲು ಸರಕಾರಿಯದು. ಅದರಲ್ಲಿರುವ ಶಿಕ್ಷಕರು ಸರಕಾರಿ ವೇತನದವರು. ಹುಡುಗರು ಹೆಚ್ಚು-ಕಡಿಮೆಯಾದರೂ ಅವರಿಗೆ ಸಂಬಳದ ಸಂಕಟವಿಲ್ಲ. ಅವರು ದುಡಿವುದು ದುಡ್ಡಿಗಾಗಿ. ೧೧ ರಿಂದ ೧ ರ ವರೆಗೆ ನೊಗಹೊತ್ತಂತೆ ಮಾಡಿ ಇಳುಹಿ ಹೋಗುವರು. ಅವರಿಗೆ ಕನ್ನಡತನದ ಧ್ಯೇಯ–ಧೋರಣೆಗಳು ಅಗತ್ಯವಿಲ್ಲ. ಈ ಸ್ಥಿತಿಯಲ್ಲಿ ಶಿಕ್ಷಕವೃಂದವಿರುವಾಗ, ಅಲ್ಲಿಯ ಕನ್ನಡ ಹುಡುಗರ ಸಂಖ್ಯೆಯು ಕರಗದಿರಬಾರದೇಕೆ ? ಈ ಸಂಖ್ಯೆ ಕರಗುವುದಕ್ಕೆ ಮತ್ತೊಂದು ಕಾರಣ ತೋರಬಹುದು. 'ತರಬೇತು ಹೊಂದಲು ಬಂದ ಶಿಕ್ಷಕರ ಶಿಕ್ಷಣಕಾರ್ಯ ಚೆನ್ನಾಗುವುದಿಲ್ಲ ; ಅದಕ್ಕೆ ಪಾಲಕರು ತಮ್ಮ ಮಕ್ಕಳನ್ನು ಬೇರೆ ಶಾಲೆಗೆ ಹಾಕುತ್ತಾರೆ'—ಎಂದು. ಆದರೆ ಈ ಮಾತು ಮರಾಟಿ ವಿದ್ಯಾರ್ಥಿಗಳಿಗೇಕೆ ಅನ್ವಯಿಸುವುದಿಲ್ಲ ? ತರಬೇತುಹೊಂದಲು ಬಂದ ಶಿಕ್ಷಕರ ಶಿಕ್ಷಣದಿಂದ ಏನಾದರೂ ಕುಂದು-ಕೊರತೆಯುಂಟಾದರೆ, ಶಾಲೆಯ ಸ್ಥಾಯೀ ಶಿಕ್ಷಕರು ಅದನ್ನು ಸರಿಪಡಿಸುವುದು ತಮ್ಮ 'ಕರ್ತವ್ಯವೆಂದು ತಿಳಿಯಬಾರದೇಕೆ? ಕನ್ನಡಿಗರ ಈ ಆಲಸ್ಯ-ಅರಿವುಗೇಡಿತನಗಳ ಮೂಲಕ ಕನ್ನಡವರ್ಗದಲ್ಲಿ ಹುಡುಗರು ಕಡಿಮೆ. ಕನ್ನಡ ಮಾಧ್ಯಮದಿಂದ ತರಬೇತು ಹೊಂದಬೇಕೆನ್ನುವವರಿಗೆ ಸ್ಫೂರ್ತಿ ಕಡಿಮೆ— ಕನ್ನಡವು ಅನಾಥವಾಗತೊಡಗಿದೆ. ಇದರ ಹೊಣೆಯಾರದು? ಬಿ. ಟಿ. ಕಾಲೇಜಿನ ಪ್ರಾಧ್ಯಾಪಕ ವರ್ಗದವರದೊ ? ಸರದಾರ್ ಹಾಯಸ್ಕೂಲಿನ ಶಿಕ್ಷಕ ವರ್ಗದವರದೊ ? ಊರಲ್ಲಿಯ ಕನ್ನಡ ಮಕ್ಕಳ ಪಾಲಕರದೊ ? ವಿಚಾರಿಸುವಂತಹ ಮಾತಿದು ! ಇಂದು ನಾವು ಉದಾಸೀನರಾದರೆ ಮುಂದೆ

ಕರ್ನಾಟಕದಲ್ಲಿದ್ದ ಈ ಬಿ. ಟಿ. ಕಾಲೇಜು ಕೇವಲ ಮರಾಟಿ ಮಾಧ್ಯಮದ ಶಿಕ್ಷಣಾಲಯವಾಗಬಹುದು—

ಈ ಕಾರಣದ ಮೂಲಕವೆ ಬಿ. ಟಿ. ಕಾಲೇಜನ್ನು ಬೆಳಗಾಂವಿಯ ಬೇನೆಯಿಂದ ಬಳಲಿಸಬಾರದೆಂದು ಕನ್ನಡಿಗರು ಪ್ರಯತ್ನ ಮಾಡಬೇಕು. ಬೆಳಗಾಂವಿಯ ಬೇನೆಯ ಪರಿಹಾರವಾಗಬೇಕು. ಕನ್ನಡ ಉಳಿಯಬೇಕು, ಬೆಳೆಯಬೇಕು!

ಕಾಲೇಜಿನ ಶಿಷ್ಯವೃತ್ತಿಗಳು

ಕಾಲೇಜಿಗೆ ೨೫ ಶಿಷ್ಯವೃತ್ತಿಗಳು ಇವೆ. ಅವುಗಳಲ್ಲಿ ಸುಮಾರು ೧೫ ರಷ್ಟು ಮರಾಟಿಗರಿಗೆ ದೊರೆತಿವೆಯೆಂದು ತಿಳಿದುಬರುತ್ತದೆ. ಬಿ. ಟಿ. ಕಾಲೇಜು ಬೆಳಗಾಂವಿಯಲ್ಲಿದ್ದುದು ಕರ್ನಾಟಕದವರ ಹಿತಕ್ಕೆಂದು ತಿಳಿಯಲ್ಪಟ್ಟಿತ್ತು; ಆದರೆ ಅಲ್ಲಿಯ ಕೆಲವು ಸಂಗತಿಗಳು ಸಂಶಯವನ್ನು ಹುಟ್ಟಿಸುತ್ತಲಿವೆ. ಶಿಷ್ಯವೃತ್ತಿಗಳನ್ನು ಕೊಡಲು ಯಾವ ಪ್ರಮಾಣವಿಟ್ಟುಕೊಂಡಿದ್ದಾರೆ? ಉಚ್ಚ ಶಿಕ್ಷಣ ಪಡೆದವರು ಇರಬೇಕೆ? ಹಾಗಿದ್ದರೆ ಹೆಚ್ಚು ಉಚ್ಚಶಿಕ್ಷಣ ಪಡೆದವರುಕನ್ನಡಿಗರಿಗಿಂತ ಮರಾಟಿಗರೇ ಹೆಚ್ಚು. ಅವರ ಪ್ರಾಂತದಲ್ಲಿ ಉಚ್ಚ ಶಿಕ್ಷಣಾಲಯಗಳು ಹೆಚ್ಚು; ವಿದ್ಯಾಪ್ರಸಾರ ಹೆಚ್ಚು! ಹೀಗಾಗಿ ಅವರಿಗೆ ಹೆಚ್ಚು ಸವಲತ್ತು ಸಿಕ್ಕುವುದು ಸಹಜ. ಈ ಸಹಜತೆಯು ನಮ್ಮ ಪ್ರಾಂತವನ್ನು ಇನ್ನೂ ಹಿಂದೆ ಹಾಕುತ್ತಿದೆಯೆಂಬುದನ್ನು ಲಕ್ಷ್ಯದಲ್ಲಿಡಬೇಕು. ಬಿ.ಟಿ. ಕಾಲೇಜು ಕರ್ನಾಟಕದಸಲುವಾಗಿಯೆ ಬೆಳಗಾಂವಿಯಲ್ಲಿ ಅವತರಿಸಿದೆ. ಮರಾಟಿಗರಿಗೆ ಮುಂಬಯಿಯಲ್ಲಿ ಕೊಲ್ಲಾಪುರದಲ್ಲಿ ಅನುವು ಇದೆ. ಆದರೆ ಕನ್ನಡ ಮಾಧ್ಯಮವಿದ್ದ ಬಿ. ಟಿ. ಕಾಲೇಜು ಎಂದರೆ ಕರ್ನಾಟಕದಲ್ಲಿದ್ದ ಬೆಳಗಾಂವಿಯದೆ! ಹೀಗಿದ್ದು ಕನ್ನಡಿಗರಿಗೆ ಹೆಚ್ಚಿನ ಸವಲತ್ತು ಕೊಡುವುದು ಉಚಿತವಲ್ಲವೆ? ಈ ಶಿಷ್ಯವೃತ್ತಿಗಳನ್ನು ಹಂಚುವವರು ಯಾವ ಧೋರಣೆಯನ್ನು ಅನುಸರಿಸುತ್ತಿದ್ದಾರೆ? ಏನೇ ಇದ್ದರೂ ಅದು ಕನ್ನಡನಾಡಿಗೆ ಘಾತುಕವು!

ಮೈಸೂರಿನಲ್ಲಿ ಕನ್ನಡಕ್ಕೆ ವನವಾಸ

ಮೈಸೂರು ದೇಶ ಅಚ್ಚಗನ್ನಡ ನಾಡಾದರೂ, ಅಲ್ಲಿಯ ಮಹಾರಾಜರು ಕೆಚ್ಚು ಕನ್ನಡ ಕುಲಕ್ಕೆ ಸೇರಿದವರಾದರೂ, ಅಲ್ಲಿಯ ಆಡಳಿತವಿನ್ನೂ ಕನ್ನಡದ ದ್ರೋಹಿಗಳಿಂದಲೆ ನಡೆಯುತ್ತಿದೆ. ಕನ್ನಡವನ್ನು ಮನವಾರೆ ಔದಾಸೀನ್ಯದಿಂದ ಕಾಣುವ ಅಲ್ಲಿಯ ಅಧಿಕಾರಿಗಳು, ಕನ್ನಡವನ್ನು ಪ್ರತ್ಯಕ್ಷವಾಗಿ ಅಲ್ಲವಾದರೂ ಅಪ್ರತ್ಯಕ್ಷ ರೀತಿಯಿಂದ ಹಿಂದೂಡಲು ಹವಣಿಸುತ್ತಿರುವರು. ಸರಕಾರದ ಮಿಕ್ಕಶಾಖೆಗಳಿಗಿಂತ ವಿದ್ಯಾಭ್ಯಾಸದ ಇಲಾಖೆಯಲ್ಲಿಯೂ ವಿಶ್ವವಿದ್ಯಾನಿಲಯದಲ್ಲಿಯೂ ಈ ಸಂಗತಿ ದಿನದಿನಕ್ಕೂ ಹೆಚ್ಚುಹೆಚ್ಚು ದೃಷ್ಟ್ಯೋತ್ಪತ್ತಿಗೆ ಬರಲು ತೊಡಗಿದೆ. ಈಗ ಮೊನ್ನೆಮೊನ್ನೆಯೆ ಅಲ್ಲಿಯ ವಿದ್ಯಾಭ್ಯಾಸದ ಇಲಾಖೆಯ ಮುಖ್ಯಾಧಿಕಾರಿಗಳು ಒಂದು ಪರಿಪತ್ರವನ್ನು ಹೊರಡಿಸಿ 'ಮಾಧ್ಯಮಿಕ ಶಾಲೆಗಳಲ್ಲಿ ಹಿಂದಿಯನ್ನು ದ್ವಿತೀಯ ಭಾಷೆಯನ್ನಾಗಿ ಇರಿಸಿಕೊಳ್ಳಬಹುದು'—ಎಂದು ತಿಳುಹಿದ್ದಾರೆ. ಇದುವರೆಗೆ ಕನ್ನಡ, ಸಂಸ್ಕೃತ ಎರಡೇ ದ್ವಿತೀಯ ಭಾಷೆಯ ಮನ್ನಣೆ ಪಡೆದಿದ್ದುವು. ಈಗ ಆಗಂತುಕವಾಗಿ ಬಂದಿರುವ ಹಿಂದಿಗೂ ಆಡಳಿತದವರು—'ಸವತಿಯ ಗಂಡ ಸಾಯಲಿ' ಎಂಬ ನೀತಿಯಂತೆ—ಆ ಮನ್ನಣೆಯನ್ನು ಕೊಟ್ಟರು. ಇದರಿಂದ ಕನ್ನಡಕ್ಕೆ ಆಗುವ ಹಾನಿ ಅಷ್ಟಿಷ್ಟೆಂದು ಹೇಳಲು ಬರುವಂತಿಲ್ಲ.

ನಿಜವಾಗಿ ನೋಡಿದರೆ ಮೈಸೂರಿನ ಕನ್ನಡರಾಜ್ಯದಲ್ಲಿ, ಇಷ್ಟರಲ್ಲಿಯೆ-ಹೈಸ್ಕೂಲು ಕಾಲೇಜಗಳಲ್ಲಿ-ಕನ್ನಡಕ್ಕೆ ಪ್ರಥಮಭಾಷೆಯ ಸನ್ಮಾನ ದೊರೆಯಬೇಕಿತ್ತು. ಆದರೆ ಅದು ದೊರೆತಿಲ್ಲ; ಇಷ್ಟೇ ಅಲ್ಲ, ಪ್ರಾದೇಶಿಕ ಭಾಷೆಯೆಂದು ಎಲ್ಲರೂ ಕನ್ನಡವನ್ನು ಕಲಿತೇತೀರಬೇಕೆಂಬ ನಿರ್ಬಂಧವೂ ಇಲ್ಲ. ದ್ವಿತೀಯ ಭಾಷೆಯಲ್ಲಿ ಐಚ್ಛಿಕವಾಗಿ ಕನ್ನಡಕ್ಕೊಂದು ಸ್ಥಾನ ದೊರೆತಿದೆಯಷ್ಟೆ! ಸಂಸ್ಕೃತ ದ್ವಿತೀಯ ಭಾಷೆಯಿದ್ದರೆ ಅದು ಕನ್ನಡಕ್ಕೆ ತೊಂದರೆಯನ್ನು ಉಂಟುಮಾಡಲಾರದಷ್ಟೇ ಅಲ್ಲ, ಕನ್ನಡಕ್ಕೆ ಪೋಷಕವಾಗಿ ಕಾರ್ಯಮಾಡಬಲ್ಲದು; ಆದರೆ ಈಗ ಹಿಂದಿಯನ್ನು ದ್ವಿತೀಯಭಾಷೆಯೆಂದು ಒಪ್ಪಿಗೆ ಕೊಟ್ಟುದು ಕನ್ನಡಕ್ಕೆ ವಿಧ್ವಂಸಕವಾಗಿ ಪರಿಣಮಿಸದೆ ಇರದು.

ಮೈಸೂರಿನ ವಿದ್ಯಾಭ್ಯಾಸದ ಇಲಾಖೆಯವರು ಕನ್ನಡವನ್ನು ಪ್ರಥಮ ಭಾಷೆಯೆಂದೊಪ್ಪಿ, ಮಿಕ್ಕ ಯಾವ ಭಾಷೆಗಳನ್ನೂ ದ್ವಿತೀಯ ಭಾಷಾಭ್ಯಾಸಕ್ಕಾಗಿ ಇರಿಸಿದರೆ ಅಡ್ಡಿಯಿಲ್ಲ. ಏಕೆಂದರೆ ಕನ್ನಡವನ್ನು ಪ್ರಥಮಭಾಷೆಯೆಂದು ಒಪ್ಪಿದರೆ ಎಲ್ಲರೂ ಕನ್ನಡವನ್ನು ಕಲಿತೇ ತೀರಬೇಕಾಗುವುದು. ಹಾಗಿಲ್ಲದೆ ಇಂಗ್ಲಿಷನ್ನೇ ಪ್ರಥಮಭಾಷೆಯನ್ನಾಗಿರಿಸಿಕೊಂಡರೆ, ಹಲವು ವಿದ್ಯಾರ್ಥಿಗಳಿಗೆ ಕನ್ನಡದ ಮುಖಪರಿಚಯಮಾಡಿಕೊಳ್ಳುವ ಕಾರಣವೂ ಉಳಿಯಲಾರದು. ಕನ್ನಡ ಬೇಡವಾದವರೆಲ್ಲರೂ ಹಿಂದಿಯನ್ನು ದ್ವಿತೀಯಭಾಷೆಯನ್ನಾಗಿ ತೆಗೆದುಕೊಳ್ಳುವರಾದುದರಿಂದ, ಅಷ್ಟು ವಿದ್ಯಾರ್ಥಿಗಳನ್ನು ಕನ್ನಡದ ಪ್ರೀತಿ-ಅಭಿಮಾನಗಳಿಂದ ದೂರಕ್ಕೆ ಇರಿಸಿದಂತಾಗುವುದು.

ಮೈಸೂರಿನ ಜನರಲ್ಲಿ ಬಹುಸಂಖ್ಯಾಕರು ಕನ್ನಡಿಗರಿರುವರಾದರೂ, ಅಲ್ಲಿಯ ವಿಶಿಷ್ಟ ಪರಿಸ್ಥಿತಿಯ ಮೂಲಕ—ಕೆಲವೊಂದು ಪಟ್ಟಣಗಳ—ಸುಶಿಕ್ಷಿತರಲ್ಲಿ ಕನ್ನಡಿಗರಲ್ಲದವರೂ ಬಹು ಹೆಚ್ಚಿನ ಪ್ರಮಾಣದಲ್ಲಿರುವರು; ಆದುದರಿಂದ ಮಾಧ್ಯಮಿಕ ಸ್ಕೂಲುಗಳಲ್ಲಿ ಅಂತಹ ವಿದ್ಯಾರ್ಥಿಗಳ ಸಂಖ್ಯೆಯೂ ಹೆಚ್ಚಿನ ಪ್ರಮಾಣದಲ್ಲಿರುವುದು. ಅವರೆಲ್ಲ ಕನ್ನಡವನ್ನು ಸಂಪೂರ್ಣವಾಗಿ ಬಿಟ್ಟುಕೊಟ್ಟು ಹಿಂದಿಯನ್ನೇ ದ್ವಿತೀಯ ಭಾಷೆಯನ್ನಾಗಿ ತೆಗೆದುಕೊಳ್ಳತೊಡಗಿದರೆ ಕರ್ನಾಟಕತ್ವಕ್ಕೆ ಎಷ್ಟೊಂದು ಹಾನಿ! ಅಖಂಡ ಕರ್ನಾಟಕದ ಆದರ್ಶಕ್ಕೆ ಎಂತಹ ದೊಡ್ಡ ಆಘಾತ! ಮೈಸೂರಿನ ಕನ್ನಡಿಗರೆಲ್ಲ ಒಟ್ಟಾಗಿ ಮುನ್ನೆಚ್ಚರಿಕೆ ತೆಗೆದುಕೊಂಡು, ವಿದ್ಯಾಭ್ಯಾಸ ಇಲಾಖೆಯ ಅಧಿಕಾರಿಗಳಿಂದ ಹೊರಟಿರುವ ಈ ಪರಿಪತ್ರ ಹಿಂದಿರುಗುವಂತೆ ಮಾಡಬೇಕು! —ಸಂ. ಕ. ಸೈ.

ಶೂರ್ಪಾಲಿಯ ಆಚಾರ್ಯರು

(ಸಾಮಾಜಿಕಕಾದಂಬರಿ)

ಬರೆದವರು :— ಶ್ರೀ. ಕಟ್ಟಿ ಶೇಷಾಚಾರ್ಯರು ಬಿ. ಎ., ಎಲ್‌ಎಲ್. ಬಿ. ೧೪೦ ಪುಟಗಳು

ಬೆಲೆ : ೧೨ ಆಣೆ.

ನಿಮಿತ್ತಮಾತ್ರವಾಗಿ ಇಂಗ್ಲಿಷ್ ಕಾದಂಬರಿ 'The Vicar of Wakefild'— ವನ್ನು ಮಾದರಿಯಾಗಿ ಇಟ್ಟುಕೊಂಡು, ಸುಮಾರು ಇಪ್ಪತ್ತನೆಯ ಶತಮಾನದ ಆರಂಭದಿಂದ ಇಲ್ಲಿಯ ವರೆಗಿನ ಎಂದರೆ ೩೫-೪೦ ವರುಷಗಳ— ನಮ್ಮ ಸಾಮಾಜಿಕ ಜೀವನವನ್ನು ಇಲ್ಲಿ ಚಿತ್ರಿಸಲಾಗಿದೆ. ಈ ನಾಲ್ವತ್ತು ವರುಷಗಳ ಅವಧಿಯಲ್ಲಿ ನಮ್ಮ ಸಮಾಜದಲ್ಲಿ, ವಿಶೇಷವಾಗಿ ನಮ್ಮ ಬ್ರಾಹ್ಮಣ ಸಮಾಜದಲ್ಲಿ ಯಾವ ಯಾವ ಕ್ರಾಂತಿ ಉತ್ಕ್ರಾಂತಿಗಳು ನಡೆದಿವೆಯೆಂಬುದನ್ನು ಈ ಕಾದಂಬರಿಯು ಅಚ್ಚಳಿಯದೆ ಕಾಲಕ್ರಮಾನುಗತವಾಗಿ ಚಿತ್ರಿಸುತ್ತದೆ. ಶಿಕ್ಷಣ, ವಿವಾಹ, ಧರ್ಮ, ಧರ್ಮದ ಆಚಾರ-ವಿಚಾರ, ದಾಂಪತ್ಯ-ಜೀವನ ಇವೇ ಮೊದಲಾದ ವಿಷಯಗಳನ್ನು ಹಳೆಯ ಹೊಸದೃಷ್ಟಿಕೋನದಿಂದ ನೋಡಿ, ಅದನ್ನು ಪಡಿಮೂಡಿಸುವುದೆ ಈ ಕಾದಂಬರಿಯ ಮೂಲಗುರಿಯೆಂದೆನ್ನಬಹುದು. ಅಂತೆಯೇ ಇದೇ ಪ್ರಕಾರದ ಒಂದು ಇಂಗ್ಲಿಷ್ ಕಾದಂಬರಿಯನ್ನು ಆದರ್ಶವಾಗಿಟ್ಟುಕೊಳ್ಳಲಾಗಿದೆ. ಈ ವಿಷಯಗಳನೆಲ್ಲ ಚಿತ್ರಿಸುವುದಕ್ಕಾಗಿಯೇ ಮಧ್ಯಮ ತರಗತಿಯ ಬ್ರಾಹ್ಮಣಸಮಾಜದ ಒಂದು ಪ್ರಪಂಚದಲ್ಲಿ ತಲೆಯೆತ್ತುವ ಕಷ್ಟ-ನಷ್ಟಗಳು— ಸುಖ-ಸಂಪತ್ತುಗಳು ಇವುಗಳ ಮೇಲೆ ನಿಂತ, ಆಧಾರಮಾತ್ರವಾದ, ಕಥಾವಸ್ತುವೊಂದನ್ನು ಆಯ್ದುಕೊಂಡಂತಿದೆ. ಶೂರ್ಪಾಲಿಯ ಅಶ್ವತ್ಥಾಚಾರ್ಯರ ಮಗ ನರಸಿಂಹಾಚಾರ್ಯರ ವಿವಾಹ, ಸಂಸಾರ, ಸಂತಾನ, ಬಡತನ, ಸಿರಿತನ, ನಾಗರಿಕ ಸುಧಾರಣೆಯಿಂದ ಆಚಾರ್ಯರ ಮೇಲೆ ಆಗುವ ಆಘಾತ, ಮುಪ್ಪು, ಮಕ್ಕಳ ಸುಖ-ದುಃಖ ಇವೇ ಈ ಕಾದಂಬರಿಯು ಚಿತ್ರಿಸುವ ಅಂಶಗಳು.

ಕಥೆಯು ಉದ್ದಕ್ಕೂ ವೈದಿಕ ಬ್ರಾಹ್ಮಣರ ಒಂದು ಮನೆತನವನ್ನು ಕೂಲಂಕಷವಾಗಿ ಚಿತ್ರಿಸುವ ಸೂಕ್ಷ್ಮದೃಷ್ಟಿ, ಶಿಕ್ಷಣ-ವಿವಾಹ ಪದ್ಧತಿಗಳಲ್ಲಿ ಹಳೆಯ ಜನರಲ್ಲಿದ್ದ ಮುಗ್ಧತನವನ್ನು ಪಡಿಮೂಡಿಸುವ ನಗೆಯ ವಿಡಂಬನೆ, ಸರಳವಾಗಿಯೂ ಸುಗಮವಾಗಿಯೂ ಪಾತ್ರ-ಸನ್ನಿವೇಶಗಳಿಗೆ ಹೊಂದಿಕೆಯಾಗಿಯೂ ಇರುವ ನಿರೂಪಣಶೈಲಿ ಇವೆಲ್ಲ ಗುಣಗಳೂ ಈ ಕಾದಂಬರಿಯ ಯೋಗ್ಯತೆಯನ್ನು ಹೆಚ್ಚಿಸುತ್ತವೆ.

ಆದರೆ ಕಾದಂಬರಿಗೆ ಅವಶ್ಯವಾಗಿ ಬೇಕಾಗುವ ಸುಂದರ ಕಥಾಜಾಲ, ವಿವಿಧ ಸಮಾಜದ ವಿಸ್ತೃತವರ್ಣನೆ, ಪಾತ್ರವೈವಿಧ್ಯಗಳು ಇಲ್ಲಿ ಕಾಣುವುದಿಲ್ಲ. ಒಂದೇ ಒಂದು ವಿಶಿಷ್ಟ ಮನೆತನವನ್ನು ಇದು ಚಿತ್ರಿಸುವುದರಿಂದ ಬಹುಜನರ ಬಗೆಯನ್ನು ಇದು ಸೆರೆಹಿಡಿಯುವುದೊ ಇಲ್ಲವೊ ಎಂಬ ಅಂಜಿಕೆ.

ಆದರೂ ಈ ಕಾದಂಬರಿಗೆ ಒಂದು ವಿಶಿಷ್ಟ ಗುರಿ ಇದೆ. ಆ ಮಟ್ಟಿಗೆ ಇದು ಯಶಸ್ವಿಯಾಗಿದೆ ಎಂದೇ ಹೇಳಬೇಕು.

—ಎನ್ಕೆ.

ಕ್ರಾಂತಿ (ಸಾಮಾಜಿಕ ನಾಟಕ)

ಬರೆದವರು : ಗರುಡ ಸದಾಶಿವರಾಯರು.

ಪುಟಗಳು ಕ್ರೌ. ೧/೧೬ ವ ಸು. ೧೨೦ ಪುಟಗಳು.

ಬೆಲೆ : ೮ ಆಣೆ.

ಇದೊಂದು ಕಂಪನಿಯ ನಾಟಕದ ಅಭಿರುಚಿಗೆ ಸರಿಹೋಗುವಂತೆ ರಚಿಸಿದ ಸಾಮಾಜಿಕ ನಾಟಕ. ಸ್ವಾಭಾವಿಕತೆ ವಾಸ್ತವಿಕತೆಗಳು ಕೊಂಚ ದೂರವಾದರೂ ಚಿಂತೆಯಿಲ್ಲ, ವಿಶಿಷ್ಟಸಮಾಜಕ್ಕೆ ಅಲ್ಲ ಜನಸಮುದಾಯಕ್ಕೆ—ಬೇಕಾಗುವ ಹಲಕೆಲವು ದೃಶ್ಯ—ಪಾತ್ರ—ಸನ್ನಿವೇಶಗಳನ್ನು ಅದು ಚಿತ್ರಿಸಿದರೆ ಸಾಕು ಎನ್ನಬಹುದಾದರೆ, ಆ ಮಟ್ಟಕ್ಕೆ ಈ ನಾಟಕವು ತನ್ನ ಗುರಿಯನ್ನು ಸಾಧಿಸಿದೆ. ಮುಖ್ಯವಾಗಿ ನಮ್ಮಲ್ಲಿ ರೂಢವಾಗಿರುವ ವರದಕ್ಷಿಣೆಯ ಪದ್ಧತಿಯನ್ನು ಕಿತ್ತೊಗೆದು ವೈವಾಹಿಕ ಕ್ರಾಂತಿಯನ್ನೆಸಗುವುದೇ ಈ 'ಕ್ರಾಂತಿ'ಯ ಉದ್ದಿಷ್ಟವಾಗಿದೆಯಂತೆ.

ಬಹುಜನ ಸಮಾಜವು ಬೇಡುವ ರುಚಿಯನ್ನೇ ನಾಟಕವು ಕೊಡುವುದಕ್ಕಿಂತ ಅದಕ್ಕೆ ಅಗತ್ಯವಾಗಿ ಬೇಕಾಗುವ ರುಚಿಯನ್ನು ಅದು ನಿವೇದಿಸಬೇಕು. ಲೋಕರಂಜನೆಯೆಂದರೆ ಏನಕೇನ ಪ್ರಕಾರೇಣ ಲೋಕರಂಜನೆಯಾಗಬಾರದು. ಆ ಮಟ್ಟಿಗೆ ಇಲ್ಲಿಯ ವಿನೋದ, ಇಲ್ಲಿಯ ಪಾತ್ರನಿರೂಪಣೆ, ಇಲ್ಲಿಯ ರಸಪುಷ್ಟಿ, ಇಲ್ಲಿಯ ಎಲ್ಲವೂ ಸುಧಾರಿಸಬೇಕು.

ಶ್ರೀಮಾನ್ ಗರುಡರವರು ರಂಗಭೂಮಿಯಲ್ಲಿ ನುರಿತವರು. ಅಂತೆಯೆ ಈ ನಾಟಕವು ಅವರ ಗುಣ-ದೋಷವಾಗಿದೆ. ಉತ್ತಮ ಅಭಿನಯಕ್ಕೆ ಆಸ್ಪದಮಾಡಿಕೊಡುವಂತಹ ಕೆಲವು ಸ್ವತಂತ್ರ ಸನ್ನಿವೇಶಗಳನ್ನು ಅವರಿಲ್ಲಿ ಕಲ್ಪಿಸಿದ್ದಾರೆ. ಇಷ್ಟಲ್ಲದೆ ಇದನ್ನು ಸ್ವತಂತ್ರವಾಗಿ ಬರೆದಿದ್ದಾರೆ ಸಾಮಾಜಿಕ ದೃಷ್ಟಿಯಿಂದ ಬರೆದಿದ್ದಾರೆ, ಈ ಎಲ್ಲ ಕಾರಣಗಳಿಂದ ನಾವು ಶ್ರೀ. ಗರುಡರವರನ್ನು ಅಭಿನಂದಿಸಲೇ ಬೇಕು.

—ಎನ್ಕೆ.

ಕಂಡುಕಾಣದ ನೋಟಗಳು

ಇದೊಂದು ಹನ್ನೊಂದು ಕತೆಗಳ ಸಂಕಲನ ಉಡುಪಿಯ 'ಲೈಸಿಯಂ' ಪ್ರಕಟನಾಲಯದ ಗ್ರಂಥ.

ಇದರಲ್ಲಿ ಕಂಡೂ ಕಾಣದ ನೋಟಗಳಿವೆ; ಕಾಣದಿದ್ದರೂ ಕಂಡಂತಿದ್ದ ನೋಟಗಳೂ ಇವೆ. ಎಂತಹ ಅರಸಿಕನು ಕೂಡ ಈ ಸಂಕಲನವನ್ನು ಕೈಯಲ್ಲಿ ತೆಗೆದುಕೊಳ್ಳದೆ ಬಿಡನು. ಅದೇ ಓಘದಲ್ಲಿ 'ರಾಹುಗ್ರಾಸ' ಓದಿ ಮುಗಿಸಿದಾಗ, ಒಂದು ಕಾಣದ ಚಿತ್ರ ಕಣ್ಣೆದುರು ಬಂದು ನಿಲ್ಲುವುದು. ಶ್ರೀ. ಕೊರಡ್ಕಲ್ಲರವರದು ಮನಂಬುಗುವ ಶೈಲಿ. ಅಂತಃಕರಣವನ್ನು ಅರಳಿಸುವ ಭಾಷೆ. ಈ ಕತೆಯಲ್ಲಿ ಬಂದ 'ಅಕೆ' ಯ ಕರುಣಾರಸದುಂಬಿದ ಚಿತ್ರವು ಎಂತಹ ಕಲ್ಲೆದೆಯನ್ನೂ ಕರಗಿಸುವುದು. ಇಬ್ಬರು ಗೆಳೆಯರ ಕೂಡ ವಾಚಕವೃಂದವೂ ಕಣ್ಣೀರುದುರಿಸುವುದು. ಆದರೆ ಇದರಲ್ಲಿಯ ನಾಯಕನು ಮಾತ್ರ ಓದುಗರಿಗೆ ಅನಾದರಿಯಾಗುತ್ತಾನೆ. ಒರ್ವ ಗೃಹಿಣಿಯು "ಗಂಡುಸೆಂಬ ಪೀಳಿಗೆಯು ಸನಿಹದಲಿಲ್ಲವೆಂದು ತಿಳಿದು ನಿಸ್ಸಂಕೋಚದಿಂದಿದ್ದಾಗ್ಗೆ" ಅಲ್ಲದ ಸಲ್ಲದ ಚಿತ್ರವನ್ನು ತೆಗೆಯುವುದು ಒಳ್ಳೇಯದೇ ಎಂದು ಕೆಲವರಿಗೆ ಒಂದು ದೊಡ್ಡ ಸಮಸ್ಯೆಯಾಗುತ್ತದೆ. 'ಹಣ್ಣು ಮಾರುವವಳು' ಮೊದಲು ಬಯಸಿದ್ದನ್ನೇ ಕತೆಗಾರರು ತಂದೊಡ್ಡಿದ್ದಾರೆ ಕತೆಯ ಕೊನೆಗೆ. ಹೀಗಾಗಿ ಕತೆಯ ಕೊನೆ ಮೊನೆಯಾಗಿಲ್ಲ. 'ಪ್ಲಾಟ್‌ಕಟ್' ನಿಜವಾಗಿಯೂ ಈ ಸಂಕಲನದ ಓಟಕ್ಕೆ ಒಂದು ಕಟ್ಟೇ ಸರಿ. ನಲ್ಲ-ನಲ್ಲೆಯರಲ್ಲಿ ನಡೆದ ಸಂವಾದವನ್ನೇ ಕತೆಯ ರೂಪದಲ್ಲಿ ಬರೆದು ಬೆಳಕಿಗೆ ತಂದು ಬಹುಮಾನ ಪಡೆದಿದ್ದಾನೆಂಬ ಕತೆಯನ್ನೇ ಈ ಲೇಖಕರು ಬರೆದಿದ್ದಾರೆ. ಕತೆಗೆ ಜೀವವಿದ್ದಂತೆ ಜೀವನವೂ ಬೇಕು. "ನುಡಿಗೂ ನಡೆಗೂ ನಡುವೆ" ಎಂಬುದನ್ನು ಸುಮ್ಮನೆ ಇಲ್ಲಿ ನಡುವೇಕೆ ತಂದಿದ್ದಾರೋ! ಜೀವ-ಭಾವ ಸಂಗಮ ಸಣ್ಣಕತೆಗಳಲ್ಲಿ ಬೇಕು. "ಅವರು ನನ್ನ ದೇವರು" ಎಂಬ ಕತೆಗಳಲ್ಲಿಯ ಪಾತ್ರ ಜೀವಂತವಾಗಿವೆ. ಪಾತ್ರ ಪ್ರಧಾನವಾದ ಕತೆಯಿದು. ಕೊನೆಯು ಮೊದಲಿಗೆ ಹೊಳೆದರೂ ಕತೆಯು ಸರಿಯಾಗಿ ಬೆಳೆದು ಬಂದಿದೆ. 'ಪ್ರತೀಕ್ಷೆ' 'ಸೂಳೆಯ ಸಂಪತ್ತು' 'ಕೊನೆಯ ಗುರಿ.' ಸುಮಾರಾಗಿ ಒಂದೇ ಜಾತಿಯ ಕತೆಗಳು. ಶೈಲಿ ಸುಗಮವಾಗಿದ್ದರೂ ಸನ್ನಿವೇಶದಲ್ಲಿ ಸ್ವಾಭಾವಿಕತನವಿಲ್ಲ. "ಸೂಳೆಯ ಸಂಪತ್ತು" ಕತೆಯಲ್ಲಿಯ ಜಡಭರತ ಅಷ್ಟ ದರಿದ್ರನಾಗಿದ್ದು—ಭಿಕ್ಷೆಗಾಗಿ ಮನೆಮನೆ ಅಲೆಯುತ್ತಿದ್ದವನು. ನಾಲ್ಕು ವರುಷದಲ್ಲಿ ದೊಡ್ಡ ಶ್ರೀಮಂತನಾದುದು ಹೇಗೋ ಎಂದ ಕೆಲವರು, 'ಅದು ಒಂದು ಕತೆಯೆ' ಎಂದು ತಾವೇ ಸಮಾಧಾನ ಪಟ್ಟುಕೊಳ್ಳುವರು. 'ಹುಚ್ಚುಚ್ಚು ಕತೆ' ಒಂದು ಹುಚ್ಚೆ ಸರಿ. ಪಾಪ! ಹರಟೆಗಾರರಂತೆ ಈ ಕತೆಯ ಲೇಖಕರು ಪಾತ್ರಗಳನ್ನು ಕೊನೆಗೆ ಅಳಿಸಿ, ವಾಚಕರನ್ನು ನಗಿಸಲು ಪ್ರಯತ್ನಿಸಿದ್ದಾರೆ. "ಘಾತುಕ ಜಿಜ್ಞಾಸೆ" "ವಿಲಕ್ಷಣ ಪ್ರತಿಕಾರ" ಇನ್ನೆರಡು ಕತೆಗಳು. ವಿಲಕ್ಷಣ ಪ್ರತಿಕಾರದಲ್ಲಿ ಮಾನಸಿಕ ವಿಶ್ಲೇಷಣೆಗಳಿವೆ. ವಿಷಯದಲ್ಲಿ ಚಮತ್ಕೃತಿಯಿದೆ. 'ಘಾತುಕ ಜಿಜ್ಞಾಸೆ' ಡಾಯರಿಯ ರೀತಿಯಲ್ಲಿದ್ದರೂ ಡಾಯರಿಯ ಬರೆಬಡದಂತಿಲ್ಲ.

ಅಂತೂ ಇದರಲ್ಲಿಯ ಕೆಲವು ಕತೆಗಳನ್ನು ಬಿಟ್ಟರೆ, ಇದನ್ನೊಂದು ಪಠ್ಯಪುಸ್ತಕವನ್ನಾಗಿ ಮಾಡಲು ಒಳ್ಳೇದಾಗಿದೆಯೆಂದು ಹೇಳಬಹುದು. 'ಕನ್ನಡ ಸಾಹಿತ್ಯದಿಂದ ಉದ್ದೀಪಿತರಾಗಿ ಕೈದಿವಿಗೆಯನ್ನು ಹಚ್ಚಿದ ಲ್ಯಾಸಿಯಮ್ ಸಂಘವು ಬೆಳೆದು, ನಾಳಿನ ನಮ್ಮ ಪ್ಲೇಟೊ ಎರಿಸ್ಟೊಫೆನಸ್ ಜಗಾಧಾನರ ಹುಟ್ಟಿಗೆ ಕಾರಣವಾಗಲಿ' ಎಂಬ ಮುನ್ನುಡಿಕಾರರ ಮಾತಿಗೆ ನಾವೂ ದನಿಗೂಡಿಸುತ್ತೇವೆ. ಇದಕ್ಕೂ ಒಳ್ಳೆಯ ಪ್ರಕಟನೆಗಳನ್ನು ಬೆಳಕಿಗೆ ತಂದು, ಆ ಬೆಳಕಿನಿಂದ ಇದಿ ನಾಡೇ ದಾರಿಕಾಣಲೆಂದು ಹಾರೈಸುತ್ತೇನೆ.

ನ. ಕಾ.

ಶಿಕ್ಷಣ ಶಾಸ್ತ್ರ

ಬರೆದವರು ಶ್ರೀ. ಎಸ್. ಜಿ. ಬೈಚವಾಳ, ಎಂ.ಎ, ಪುಟಗಳು ಕ್ರಾ. ಅ. ೧೯೬. ಬೆಲೆ ರೂ. ೧-೪-೦. ಪ್ರಕಾಶಕರು ರಾಮಾಶ್ರಯ ಬುಕ್-ಡಿಪೊ ಧಾರವಾಡ.

'ಶಿಕ್ಷಣ ಶಾಸ್ತ್ರ'ವು, ಅದರ ಹೆಸರು ಸೂಚಿಸುವಂತೆ ಶಿಕ್ಷಣ ಶಾಸ್ತ್ರವನ್ನು ವಿವೇಚಿಸುವ ಪುಸ್ತಕವು. ಶಾಸ್ತ್ರೀಯ ವಿವೇಚನೆ ಮಾಡುವ ಪುಸ್ತಕಗಳು ಕನ್ನಡದಲ್ಲಿ ಕಡಿಮೆ; ಶಿಕ್ಷಣ ಶಾಸ್ತ್ರದ ಬಗೆಗೆ ತಿಳಿಹೇಳುವ ಪುಸ್ತಕಗಳು ಇನ್ನೂ ಕಡಿಮೆ. ಇಂತಹ ಪ್ರಸಂಗದಲ್ಲಿ ಶಿಕ್ಷಣಶಾಸ್ತ್ರದ ಬಗೆಗೆ ತಿಳಿಸಿಕೊಡುವ ಹೊತ್ತಗೆಯನ್ನು ಕನ್ನಡಿಗರೆದುರು ಮಂಡಿಸಿ ಅಭ್ಯಾಸಮಾಡಲು ಅನುವು ಮಾಡಿಕೊಟ್ಟ ಶ್ರೀ. ಬೈಚವಾಳರನ್ನು ಅಭಿನಂದಿಸಬೇಕಾಗಿದೆ.

ಗ್ರಂಥದಲ್ಲಿ ಅನೇಕಮುಖವಾದ ಚರ್ಚೆಯು ಕಂಡುಬರುವುದು. ಶಿಕ್ಷಣದ ಸ್ವರೂಪ, ಉದ್ದೇಶ—ಧ್ಯೇಯ ಧೋರಣೆಗಳು, ಹೊಸಯುಗದ ಲಕ್ಷಣ-ವೈಶಿಷ್ಟ್ಯಗಳು, ಶಿಕ್ಷಕನ ಸ್ವರೂಪ, ಸಂಸ್ಥೆಯ ಸ್ವರೂಪ ಮುಂತಾದ ವಿಷಯಗಳನ್ನೊಳಗೊಂಡುದಾಗಿದೆ. ಕನ್ನಡ ಓದುಗರಿಗೆ ಶಿಕ್ಷಣ ಶಾಸ್ತ್ರದಲ್ಲಿಯ ಜಾಗತಿಕ ಪ್ರವಾಹಗಳ ಅರಿವು ಚೆನ್ನಾಗಿ ಆಗುವಂತಿದೆ.

ಇಂಗ್ಲಿಶ್ ಬಲ್ಲ ಕನ್ನಡ ಓದುಗರಿಗೆ ಮಾತ್ರ ಒಂದು ತೊಂದರೆಯೆನಿಸುವುದು. ಪಾಶ್ಚಾತ್ಯ ಶಿಕ್ಷಣ ತಜ್ಞರ ಅವತರಣಿಕೆಗಳನ್ನು ಕೊಡುವಾಗ, ಅವುಗಳ ಇಂಗ್ಲಿಶ್ ಪ್ರತಿಯೊಂದಿಗೆ ಕೊಡಬೇಕಿತ್ತೆಂದೆನಿಸುವುದು. ತುಲನಾತ್ಮಕವಾಗಿ ಓದುವಾಗ ಮೂಲವು ಮೂಲಸ್ವರೂಪದಲ್ಲಿದ್ದರೆ ಸರಿಯೆನಿಸುವುದು. ಭಾಷಾಂತರವು ಒಮ್ಮೊಮ್ಮೆ ಮೂಲದ ಆವೇಗವನ್ನು ತಿಳಿಸಲಾರದು.

ಗ್ರಂಥಕ್ಕೆ—ಗ್ರಂಥದ ರಚನೆಗೆ—ಯಾವುದೋ ಒಂದು ಇಂಗ್ಲಿಶ್ ಗ್ರಂಥವು ಮಾದರಿಯಾಗಿದೆ. ಇಂಗ್ಲರ ಆಳಿಕೆಯಲ್ಲಿ ಬೆಳೆಯಲ್ಪಟ್ಟ ನಮಗೆ ಈ ಅನುಕರಣ ಹೊಸದಲ್ಲವಾದರೂ, ಅದೇಕೋ ಅಷ್ಟು ಮನ ಹಿಡಿಯುವುದಿಲ್ಲ. ಇಂದು ಭಾರತದಲ್ಲಿ ಹೊಸ ಬೆಳಕು ಒರುತ್ತಲಿದೆ. ಹೊಸ ಬೆಳಕಿನಲ್ಲಿ ಭಾರತೀಯವಾದ ಒಡವೆಗಳು

(೧೯೫ ನೆಯ ಪುಟ ನೋಡಿರಿ)

ಮಾಧವೀ ಲಿಪಿ

ಶ್ರೀ. ಕ. ಮಾಧವ

★

ಮುನ್ನುಡಿ

ಇಂದಿನ ಈ ಹೊಸಕಾಲದಲ್ಲಿ ನಿರ್ಮಾಣವಾಗಿರುವ ಅಚ್ಚಿನ ಯಂತ್ರಗಳಿಗೆ ಅನುಕೂಲವಾಗುವಂತೆ ಕನ್ನಡ ಲಿಪಿಯಲ್ಲಿ ಕೆಲ-ವೊಂದು ಸುಧಾರಣೆಯಾಗಬೇಕಾದುದು ಅನಿವಾರ್ಯ. ಇಲ್ಲ-ವಾದರೆ ಟೈಪ್‌ರಾಯಟರ್, ಮೊನೋ ಟೈಪ್ ಮೊದಲಾದ ಅನುಕೂಲತೆಗಳಿಂದ ಕನ್ನಡವು ದೂರವೇ ಉಳಿಯಬೇಕಾಗುವುದು. ಕನ್ನಡಲಿಪಿಯ ಸುಧಾರಣೆಯ ವಿಚಾರದಲ್ಲಿ ಹಲವರು ಹಲವು ಬಗೆಯ ಮಾರ್ಪಾಡುಗಳನ್ನು ಸೂಚಿಸುತ್ತಲಿದ್ದಾರೆ. ಈ 'ಮಾಧವೀ ಲಿಪಿ'ಯನ್ನು ಕಂಡುಹಿಡಿದ ಮಹನೀಯರು ತುಂಬ ಪರಿಶ್ರಮ ಪಟ್ಟು, ಬೇರೆ ಬೇರೆ ಅನುಕೂಲತೆಯ ವಿಷಯವನ್ನು ಚೆನ್ನಾಗಿ ಪರ್ಯಾಲೋಚಿಸಿ, ವೇಳೆಯೂ ಸ್ಥಳವೂ ಶ್ರಮವೂ ಉಳಿಯುವಂತೆ ಕೆಲವೊಂದು ಬದಲಾವಣೆಗಳನ್ನು ಮಾಡಿದ್ದಾರೆ. ತಮ್ಮ ಪರಿಶ್ರಮದ ಕಾಲದಲ್ಲಿ ಎತ್ತಿದ ಅನೇಕ ಆಕ್ಷೇಪಕರ ಆಕ್ಷೇಪಣೆಗಳನ್ನೂ ಕೂಲಂಕಷವಾಗಿ ವಿಚಾರಮಾಡಿದ್ದಾರೆ. ಈಗ ಜಯಂತಿಯ ವಾಚಕರೆದುರು ತಮ್ಮ 'ಲಿಪಿ ಸುಧಾರಣೆ'ಯ ರೀತಿಯನ್ನು ಇರಿಸಿದ್ದಾರೆ. ಇದರ ಬಗೆಗೆ ಯಾರಾದರೂ ಅಭ್ಯಾಸ ಮಾಡಿದವರಿದ್ದರೆ, ಅಂತಹರ ಅಭಿಪ್ರಾಯಗಳನ್ನೂ ಈ ಮಾಧವೀ ಲಿಪಿಯ ದ್ರಷ್ಟಾರರು ಅಪೇಕ್ಷಿಸುತ್ತಲಿದ್ದಾರೆ.

—ಸಂ. ಜ.

ಮೂಲಾಕ್ಷರಗಳು

ಸ್ವರ :- ಅ

ವ್ಯಂಜನಗಳು :-



ಚಿನ್ಹೆಗಳು :-

ಸ್ವರಚಿನ್ಹೆಗಳು :-



ಅ. ಇ. ಉ. ಎ. ಐ. ಒ. ಔ. ಅಂ. ಅಃ. ಋ. ದೀರ್ಘ.

ಇತರ ಚಿನ್ಹೆಗಳು.

ಸವರ್ಣದ್ವಿತ್ವ ಚಿನ್ಹೆ; ಸ್ವರರಹಿತ ವ್ಯಂಜನ ಅಥವಾ ಸಂಯೋಜಕ ಚಿನ್ಹೆ; ಮಹಾಪ್ರಾಣ ಚಿನ್ಹೆ.

ನಿಯಮಗಳು

೧) ಅಲ್ಪಪ್ರಾಣವ್ಯಂಜನದ ಮೂಲಾಕ್ಷರಗಳ ಬಲಕ್ಕೆ ಮಧ್ಯದಲ್ಲಿ ಮಹಾಪ್ರಾಣ ಚಿನ್ಹೆಯನ್ನಿಟ್ಟು, ಅವುಗಳ ಮಹಾಪ್ರಾಣ ಮೂಲಾಕ್ಷರಗಳನ್ನು ಮಾಡಿರಿ !

ಉದಾ:-



೨) ವ್ಯಂಜನ ಮೂಲಾಕ್ಷರ ರೂಪಗಳು 'ಅ'ಸ್ವರ ಕೂಡಿದುವುಗಳೆಂದು ತಿಳಿಯಿರಿ; ಅದರಂತೆಯೆ ಓದಿರಿ !

೩) ಮೂಲಾಕ್ಷರಗಳಿಗೆ ಸ್ವರಚಿನ್ಹೆಗಳನ್ನು ಹಚ್ಚಿ, ಅವುಗಳ ಬಳ್ಳಿ ಅಥವಾ ಗುಣಿತಾಕ್ಷರಗಳನ್ನು ಮಾಡಿರಿ. ಈ ಪ್ರಕಾರ ಮಾಡಿದ 'ಅ' ದ ಬಳ್ಳಿ ಅಥವಾ ಗುಣಿತಾಕ್ಷರಗಳೇ ಆ, ಇ, ಮುಂತಾದ ಸ್ವರಗಳು.

ಉದಾ:-



ಆ ಇ ಉ ಎ ಐ ಒ ಔ ಅಂ ಅಃ ಋ.

೪) ಯಾವ ಸ್ವರ ಅಥವಾ ಸ್ವರಚಿನ್ಹೆಯ ಮುಂದೆ ದೀರ್ಘ ಚಿನ್ಹೆ ಇರುವುದೋ, ಆ ಸ್ವರವು ದೀರ್ಘವಾದುದೆಂದು ತಿಳಿಯಿರಿ, ಅದನ್ನು ಎಳೆದು ಓದಿರಿ !

೫) ಯಾವ ವ್ಯಂಜನ ಅಥವಾ ವ್ಯಂಜನದ ಗುಣಿತಾಕ್ಷರದ ಮುಂದೆ ಸವರ್ಣದ್ವಿತ್ವ ಚಿನ್ಹೆ ಇರುವುದೋ, ಆ ವ್ಯಂಜನಕ್ಕೆ ಅದೇ ವ್ಯಂಜನದ ಒತ್ತು ಇದೆಯೆಂದು ತಿಳಿಯಿರಿ, ಅದರಂತೆಯೆ ಓದಿರಿ !

ಉದಾ:-



೬) ಯಾವ ವ್ಯಂಜನಕ್ಕೆ '' ಈ ಚಿನ್ಹೆಯು ಹತ್ತಿರುವುದೋ ಆ ವ್ಯಂಜನದಲ್ಲಿ ಯಾವ ಸ್ವರವೂ ಇಲ್ಲವೆಂದು ತಿಳಿಯಿರಿ ! ಈ ಚಿನ್ಹೆಗೆ 'ಸಂಯೋಜಕ ಚಿನ್ಹೆ' ಎಂದೂ ಹೆಸರು. ಒಂದು ವ್ಯಂಜನಕ್ಕೆ ಈ ಚಿನ್ಹೆಯನ್ನು ಹಚ್ಚಿ ಅದರ ಮುಂದೆ ಮತ್ತೊಂದು ವ್ಯಂಜನವನ್ನು ಬರೆದರೆ ಆವೆರಡೂ ವ್ಯಂಜನಗಳು ಒಂದರಲ್ಲೊಂದು ಕೂಡಿದುವುಗಳೆಂದು—ಸಂಯುಕ್ತವಾದುವುಗಳೆಂದು— ತಿಳಿಯಿರಿ ; ಅವುಗಳನ್ನು ಕೂಡಿಸಿ ಓದಿರಿ !

೭) ಒಂದು ವ್ಯಂಜನಕ್ಕೆ ಬೇರೆ ವ್ಯಂಜನದ ಒತ್ತು ಬರುವಲ್ಲಿ, ಮೊದಲು ಉಚ್ಚಾರವಾಗುವ ವ್ಯಂಜನ ಅಥವಾ ವ್ಯಂಜನಗಳಿಗೆ ಈ ಸಂಯೋಜಕ ಚಿನ್ಹೆಯನ್ನು ಹಚ್ಚಿ ಎಲ್ಲಕ್ಕೂ ಕೊನೆಗೆ ಉಚ್ಚಾರವಾಗುವ ವ್ಯಂಜನವನ್ನು ಸ್ವರಪೂರ್ಣವಾಗಿ ಬರೆಯಿರಿ !

ಉದಾ:-

೮) ಮಹಾಪ್ರಾಣ ಚಿನ್ಹೆಯೊಂದನ್ನು ಬಿಟ್ಟು ಉಳಿದ ಎಲ್ಲ ಚಿನ್ಹೆಗಳೂ ಅಕ್ಷರಗಳ ಮುಂದೆಯೆ ಬರಬೇಕು.



೯) ಮೇಲಿನ ಚಿನ್ಹೆಗಳ ಅಡ್ಡ ಸರಳ ರೇಷೆಯು ಮೂಲಾಕ್ಷರಗಳ ತಲೆ-ಕಟ್ಟಿನ ರೇಷೆಗೆ ಸರಿಯಾಗಿ ಬರುವಂತೆ ತಾಗಿಸಿ ಹಚ್ಚಿರಿ! '' ಇದನ್ನು ನಡುವಿಗೆ ತಾಗಿಸಿ ಹಚ್ಚಿರಿ. ೦, ಃ, , ಇವುಗಳನ್ನು ಬೇರೆ ಅಕ್ಷರ ಬರೆದಂತೆ ಬಿಡಿಸಿ ಇಡಿರಿ ! '' ಈ ಚಿನ್ಹೆಯ ತಳರೇಷೆಯು ಮೂಲಾಕ್ಷರಗಳ ತಳರೇಷೆಗಿಂತ ಕೊಂಚ ಕೆಳಗಿರಬೇಕು. ಸವರ್ಣದ್ವಿತ್ವ ಚಿನ್ಹೆಯು ತಲೆಕಟ್ಟಿನ ರೇಷೆಗಿಂತ ತುಸು ಮೇಲ್ಬದಿಯಲ್ಲಿ ಪ್ರಾರಂಭವಾಗಿ, ಆ ರೇಷೆಗಿಂತ ಸ್ವಲ್ಪ ಕೆಳಗಿಳಿಯಬೇಕು. ಕೊಂಚ ಓರೆಯಾಗಿರಬೇಕು, ಇದನ್ನೂ ಬಿಡಿಸಿ ಇಡಿರಿ! ಈ ಚಿನ್ಹೆಯೂ ದೀರ್ಘಚಿನ್ಹೆಯೂ ಕೂಡಿಯೇ ಬರುವಲ್ಲಿ, ಮೊದಲು ಈ ಚಿನ್ಹೆಯನ್ನು ಇಟ್ಟು ಆ ಮೇಲೆ ದೀರ್ಘವನ್ನಿಡಿರಿ !

ಓದುವುದಕ್ಕಾಗಿ ಮಾದರಿಗಳು

ಪಾಂಚಜನ್ಯ - ಕುವೆಂಪು -

ನಡೆ ಮುಂದೆ, ನಡೆ ಮುಂದೆ,
ನುಗ್ಗಿ ನಡೆ, ಮುಂದೆ!
ಜಗ್ಗದೆಯೆ, ಕುಗ್ಗದೆಯೆ,
ಹಿಗ್ಗಿ ನಡೆ ಮುಂದೆ!
ಬೆಚ್ಚಬೇಡ, ನೆಚ್ಚಬೇಡ
ಕೆಚ್ಚೆದೆಯ ಗುಡಿಯಲ್ಲಿ;
ಸ್ವಾರ್ಥಿಯ ಹರಿ, ಅರಿಯ ಸಿರಿ,
ಉರುಳಿಸು ಹುಡಿಯಲ್ಲಿ!
ನಾನಳಿವೆ, ನೀನಳಿವೆ,
ನಮ್ಮೆಲುಬುಗಳ ಮೇಲೆ
ಮೂಡುವುದು ಮೂಡುವುದು
ನವಭಾರತದ ಲೀಲೆ!
ಸಿಂಧು ದನಿ, ರಣ ಧ್ವನಿ,
ಬರಲಿದೆ ಎಂದೆದೆಯದಿರು!
ಕೆತ್ತರಣ, ಸತ್ತರಣ,
ಮುನ್ನೆಂದು ಹೆದರದಿರು!
ಹುಡುಗಿಯೆಲ್ಲ ಡಗಿರುವ
ಕಲ್ಲರಳಿಯ ತೆಗಳುವರ್!
ಕೊರೆಯುತಿರುವರ ಬನ್ನಿಯ
ಸಿರಿಯಿಂದ ಹೊಗಳುವರ್!
ಬಲ ಅಳಿದೆ, ಛಲ ಅಳಿದೆ,
ನೀತ್ಯತೆಯ ಗಚ್ಚದಲಿ;
ಮುಂದೆಯದು ತೋರುವದು
ಬಿಡುಗಡೆಯ ಹಬ್ಬದಲಿ!
ನೆಚ್ಚುಗೆಡಬೇಡ ನಡೆ,
ಕೆಚ್ಚೆಯ ಕಲಿಯೆ!
ಬೆಚ್ಚದರೆ, ಬೆದರಿದರೆ,
ಕಾಳಗದ ಬಲಿಯೆ!
ಭರತ ಖಂಡದ ಹಿತವೆ
ನನ್ನ ಹಿತ ಎಂದು
ಭಾರತಾಂಬೆಯ ಮುಕ್ತಿ
ಮುಕ್ತಿ ನನಗೆಂದು
ನುಗ್ಗು ಮುಂದಕೆ ಧೀರ,
ಕಾಳಗದ ಕಲೆಗೆ!
ನುಗ್ಗು ಕದನಕೆ, ವೀರ,
ಸಗ್ಗದಾ ನೆಲೆಗೆ!
ನೋಡದೋ, ನೋಡಲ್ಲಿ
ದರ್ಪರಥದಡಿಯಲ್ಲಿ
ಹೊರಳುತಿರುವಳು ತಾಯಿ
ನೆತ್ತರಿನ ಮಡಿಯಲ್ಲಿ!
ಬಾಳಸೆರೆಯಿಂದ ಹೊರೆಗೆ!
ನುಗ್ಗು, ನಡೆ, ಕಟ್ಟಾಣಿ!
ತಡೆಯ ಬಂದವರ ಹಣಿ!
ಅಸಿಲೆಯುದಯ ಖಡ್ಗ ಸಿರಿ!
ಜನ್ಮವೆಂದಳಿದರೇಂ,
ಸೋರಿಹದು ಬಲಿಗೆ!
ಕಾಳಗದೊಳಳಿಯಲೇಂ,
ಸಾವೆ ಸಿರಿ ಕಲಿಗೆ!
ನಿಂತೇನು ನೋಡುತಿಹೆ?
ಹೊಡುಗುವರ್ ಅಲ್ಲಿ
ಕಹಳವಾಗಲಿ ಅದೆಯು
ರಣರಂಗದಲ್ಲಿ
ಹಾ, ಸೋಮ! ಹಾ, ಸೋಮ
ಎಂದಲ್ಲಿ ಕೂಗುವರ್!
ಹಾ ನೀರು ಹಾ ನೀರು
ಎಂದಸುವ ನೀಗುವರ್!
ಕೂಗಿಗೆಡೆಗಂಗದಿರು!
ಬೇನೆಯಿರೆ ಅಳುಗದಿರು!
ಕಂಬನಿಯ ಕರೆಯದಿರು
ಗುರಿಯ ಮರೆಯದಿರು
ಕಲಿಯೆ, ಹಿಂಜರಿಯದಿರು,
ತಾಯ ತೊರೆಯದಿರು!
ಎಲುಬುಗಳ ತೊಲೆಗಳಲಿ,
ಮಾಂಸದಾ ಮಣ್ಣಿನಲಿ
ನೆತ್ತರಿನ ನೀರಿನಲಿ
ಬೇನೆ ಬೈಸುಸುಯ್ಲಿನಲಿ
ಬಿಡುಗಡೆಯ ಸೌಧಗುಡಿಯ
ಬಿಸಣದಲಿ ಕಟ್ಟು
ಮಾವನದ ತಾಯಡಿಯ
ಬಲ್ಮೆಯಲಿ ಮುಟ್ಟು
ಆತ್ಮವಬ್ಯುತವೆಂದು
ಜನ್ಮಗಳು ಬಹುವೆಂದು
ಅಂತ್ಯ ನಶ್ವರವೆಂದು
ಭಾರತಿಗೆ ಜಯ ಎಂದು
ನಡೆ ಮುಂದೆ, ನಡೆ ಮುಂದೆ,
ನುಗ್ಗಿ ನಡೆ ಮುಂದೆ
ಜಗ್ಗದೆಯೆ, ಕುಗ್ಗದೆಯೆ,
ಹಿಗ್ಗಿ ನಡೆ ಮುಂದೆ!

(ಕಿಂಚಿತಾಭಾರ್ಕರ)

ಪಕ್ಕದಲ್ಲಿ ಕೊಟ್ಟಿರುವ ಪದ್ಯವು ಶ್ರೀ. ಕೆ. ವಿ. ಪುಟ್ಟಪ್ಪನವರ ‘ಪಾಂಚಜನ್ಯ’ ಎಂಬ ಸಂಗ್ರಹದಲ್ಲಿಯ ಪದ್ಯ. ಮೇಲಿನ ನಿಯಮಗಳನ್ನು ಉಪಯೋಗಿಸಿ ಓದಲು ಪ್ರಯತ್ನಿಸಿರಿ.

ಕೆಳಗಿನ ಪದ್ಯ ದಿವಂಗತ ‘ಶಾಂತಕವಿ’ಗಳ ‘ನಮ್ಮದೀ ನಮ್ಮದೀ ಭರತ ಭೂಮಿ’ ಎಂಬ ಪದ್ಯ. ಬಹುಜನರಿಗೆ ಪರಿಚಿತವಾಗಿದೆಯಾದುದರಿಂದ, ಓದಲಿಕ್ಕೆ ಸುಲಭವಾಗಬಹುದು:

ನಮ್ಮದೀ ನಮ್ಮದೀ ಭರತಭೂಮಿ ॥ಪಲ್ಲ॥
ಹಿರಿಯರಂ ನಂಬದಲೆ ಜಗದೀಶ್ವರಂ ತಾನೆ।
ಧರಿಸಿ ನಾನಾವತಾರಂಗಳನ್ನು॥
ಕರೆವ ಸರ್ವಸ್ವವಂ ಧರೆಯ ಸಂರಕ್ಷಿಸುವ।
ತೆರವ ಕಲಿಸಿದ ಪೂರ್ವ ಪಾಠಶಾಲೆ ॥೧॥

ಋಷಿ ತತ್ವಾರ್ಥಗಳನಾಚರಿಸಿ ಲೋಕವಂ।
ನೆಚ್ಚರಿಸಿ ದೇವರಿಚ್ಛಾ ಜಯೋಕ್ತಿಯಂ॥
ಅಚ್ಚಳಿಯದೆಲ್ಲ ಗೆದ್ದ ಸುಶಿಷ್ಟ ಪದವೇಧರರು
ಸ್ವೇಚ್ಛೆಯಿಂ ನೆಲೆಗೊಂಡ ಸುಕ್ಷೇತ್ರವು ॥೨॥

ಪದವೇಧರರ್ ಪೇಳ್ದ ಪಥಗಳಂ ಬಿಡದೆ।
ಸದಭಿಮಾನ್ಯ ಶೌರ್ಯೋತ್ಸಾಹದಿಂ॥
ಉದಿತ ಸುಸ್ಫೂರ್ತಿಯಿಂದೆಮ್ಮ ಪೂರ್ವಜರಿದ್ದ
ಉದಯ ಭಾಗ್ಯದ ನಿಧಿಯ ಮಂದಿರವಿದು ॥೩॥

ದೇವಶಿಷ್ಟ ಪೂರ್ವಜರುದಾತ್ತ ಪ್ರತಿಭಾ।
ಭಾವನಾಶಿಲ್ಪ ವೃಷ್ಟಿಯಿಂ ಬೆಳೆಯುವ॥
ಭೂಮಿಸುಖಸಾಮ್ರಾಜ್ಯವೆಂಬ ಸತ್ಫಲಗಳಂ।
ನೀವ ಸರ್ವೋತ್ಕೃಷ್ಟ ನಂದನವನಂ ॥೪॥

ಶಾಂತಕವಿ.

(‘ಮಾಧವಲಿಪಿ’ಯ ಉಪಯುಕ್ತತೆ ಅನುಕೂಲತೆಗಳ ವಿಚಾರದಲ್ಲಿ ವಿವೇಚನಾತ್ಮಕ ಲೇಖನವೊಂದು ಮುಂದಿನ ಸಂಚಿಕೆಯಲ್ಲಿ ಬರಲಿದೆ. ಸಂ. ಜ.)

(೧೪೯ ನೆಯ ಪುಟದಿಂದ ಮುಂದುವರಿದದ್ದು)

‘ಪ್ರೊಫೆಸರ್ ವಿಲ್ಸನ್’ ಎಂಬ ಶಬ್ದಗಳು ನನ್ನ ಬಾಯಿಂದ ಹೊರಟುವು. ಹಣೆಯೇರಿಸಿ ಮೋರೆ ಮುದುಡಿಮಾಡಿದ. ನನಗೆ ಅದನ್ನು ನೋಡಿ ನಗು ಬಂತು. ಆದರೆ ಹಾಗೆ ಮುಖ ವಿಕಾರ ಮಾಡುವುದರ ಅರ್ಥ ನಕಾರವೆಂದು ನನಗೆ ತಿಳಿಯಲಿಲ್ಲ. ಪ್ರೊಫೆಸರ್ ವಿಲ್ಸನ್ನರ ಹೆಸರನ್ನು ನಾನು ಉಸಿರುತ್ತಲೆ ಇದ್ದೆ; ಅವನು ಹುಬ್ಬೇರಿಸಿ ಮೋರೆ ಮುದುಡಿಸುತ್ತಲೆ ಇದ್ದ. ಕೊನೆಗೊಮ್ಮೆ ಗೋಣನ್ನು ಅಲ್ಲಾಡಿಸಿದ, ಆಗ ನನಗೆ ಹೊಳೆಯಿತು. ಪ್ರೊಫೆಸರರು ಊರಲ್ಲಿಲ್ಲವೆಂದೂ ಕೆಲವು ದಿನಗಳಲ್ಲಿಯೆ ಬರಬಹುದೆಂದೂ ಅವನ ಹರಕು ಮುರುಕು ಇಂಗ್ಲಿಷ್‌ನಿಂದ ಆ ಮೇಲೆ ತಿಳಿದುಕೊಂಡೆ. ನಾನು ಪೆಚ್ಚಿಗೆ ಏನು ಮಾಡಬಹುದಾಗಿತ್ತು? ದಾರಿ ಕಾಯುವುದೊಂದೇ ನನ್ನ ಪಾಲಿನ ಕೆಲಸವಾಗ!

(೧೯೩ನೆಯ ಪುಟದಿಂದ ಮುಂದುವರಿದದ್ದು)

ಸ್ಫುಟವಾಗಿ ಕಾಣುತ್ತಿವೆ. ಯಾವ ಪರಕೀಯ ವಿಷಯ ಬರೆದರೂ ಅದನ್ನು ಭಾರತೀಯರ—ಕನ್ನಡರ—ದೃಷ್ಟಿಯಿಂದ ನೋಡಿ, ನಮ್ಮ ಪರಂಪರೆ ವಾತಾವರಣಕ್ಕೆ ಹೈಗೂಡಿಸಿಕೊಳ್ಳುವಂತಿರಬೇಕು. ಈ ಹೊತ್ತಗೆಯಲ್ಲಿ ನಮ್ಮ ಪ್ರಾಚೀನ ಪದ್ಧತಿಗಳ ವಿವರಣೆ, ಅವುಗಳ ವಿಚಾರವಿನ್ಯಾಸ ಬೇಕಿತ್ತು. ನಮ್ಮಲ್ಲಿ ಬೆಳೆದ ಶಾಸ್ತ್ರ ಪ್ರಾಯೋಗಿಕವಲ್ಲ ನಿಜ. ಆದರೆ ಪಾಶ್ಚಾತ್ಯರಲ್ಲಿಯಾದರೂ ಈ ಪ್ರಾಯೋಗಿಕತೆ ಬೆಳೆದುದು ಮೊನ್ನೆಮೊನ್ನೆ. ಇರಲಿ, ಈ ನಮ್ಮ ಧೋರಣೆ ಗ್ರಂಥಕ್ಕೆ ಅಡೆಯಿಲ್ಲ; ನಮ್ಮ ಕೊರತೆಗಳ ಸೂಚಿಕೆ. ‘ಕನ್ನಡದಲ್ಲಿ ಪುಸ್ತಕಗಳು ಬರಲಿ; ಅನೇಕ ಬರಲಿ! ಆ ಮೇಲೆ ಸುಧಾರಿಸುವಾ’ ಎಂಬುದು ನಮ್ಮ ಮತ. ಶ್ರೀ. ಬೈಚವಾಳರು ಇನ್ನೂ ಹಲವಾರು ಗ್ರಂಥಗಳನ್ನು ಬರೆವಿಸಲಿ.

ಸಿರ್ಸಿ ಏಜಂಟರು :
ಶ್ರೀ. ಎನ್. ಕೆ. ಭಗತ, ನ್ಯೂಜಪೇಪರ್, ಏಜಂಟ್.

ಗಜೇಂದ್ರಗಡ ಏಜಂಟರು :
ಶ್ರೀ. ಬಿ. ಎಂ. ಕೊಡಗನೇರ, ನ್ಯೂಜಪೇಪರ್ ಏಜಂಟ್

ಮನೆಯಲ್ಲಿಯೆ ಹೊಲಿಗೆ ಕಲಿಯಿರಿ!

ಶ್ರೀ. ಹಳಸೇಟೆ ಚಿಂತಾಮಣಿರಾಯರು ಟಿ. ಸಿ. ಡಿ.

★

ಫುಲ್ ಶರ್ಟ್

(ಪೂರ್ಣ ಅಂಗಿ)

ಆಳತೆ :

೩೪ ಇಂಚು ಎದೆ. ೧೧½ ಇಂಚು ನಡು ಉದ್ದ. ೩೧ ಇಂಚು ಅಂಗಿಯ ಉದ್ದ. ೬ ಇಂಚು ಭುಜ. ೧೯ ಇಂಚು ತೋಳು, ೧೧½ ಇಂಚು ಕೊರಳು. ಸೆಕ್ಸ್‌ಪಿಯರ್ ಕೊರಳುಪಟ್ಟಿ, ಕಫ್ ತೋಳು.

ಚಿತ್ರಿಸುವುದು :

ಮುಂಬದಿ

ಬ, ಅ, ಕ, ಕಾಟಕೋನ.

ಅ, ತ= ೮½" ಎಂದರೆ ಎದೆಯ ¼+½"

ಅ, ದ= ೧೧½" ಎಂದರೆ ನಡು ಉದ್ದ.

ಅ, ಕ= ೩೧" ಪೂರ್ಣ ಉದ್ದ.

ತ, ದ, ಕ, ಬಿಂದುಗಳನ್ನು ಮುಂದಳೆಯಿರಿ.

ಅ, ಡ= ೧½"

ಡ, ವನ್ನು ದ, ನಡುಗೆರೆಯುವರೆಗೆ.

ಡ, ಇ= ೧⅜" ಎಂದರೆ ಕುತ್ತಿಗೆಯ ⅛.

ಡ, ಫ= ೨⅜" ಎಂದರೆ ಕುತ್ತಿಗೆಯ ⅛+¼"

ಫ, ಇ, ಚಿತ್ರದಂತೆ ಕೊರಳು ಕೂಡಿಸುವುದು.

ಡ, ಬ= ೬" ಭುಜ.

ಬ, ವನ್ನು ಸರಳವಾಗಿ ಲ, ಕ್ಕೆ ಕೂಡಿಸಿರಿ.

ಬ, ಪ= ೧¼"

ಇ, ಪ, ಕೂಡಿಸಿರಿ.

ಲ, ಗ= ೧"

ಲ, ನ= ೨¼"

ಪ, ಗ, ನ, ಬಗಲಿನ ಭಾಗವನ್ನು ಚಿತ್ರದಂತೆ ಕೂಡಿಸಿರಿ!

ನ, ವನ್ನು ಸರಳವಾಗಿ ಚ, ಕ್ಕೆ

ಜ, ಇದು ಧ, ಚ, ಗಳ ಮಧ್ಯ.

ಧ, ಒಳಗೆ ½ ಇಂಚು.

ಜ, ಹೊರಗೆ ½ ಇಂಚು.

ನ, ½, ಜದ ಮುಂದಿನ ½, ದಿಂದ ಕದ ವರೆಗೆ ಚಿತ್ರದಂತೆ ಕೂಡಿಸಿರಿ.

ಹಿಂಬದಿ

ಅ, ರ= ⅝ ಇಂಚು.

ರ, ಪ, ಚಿತ್ರದಂತೆ ಕೂಡಿಸಿರಿ.

ಗ, ಮುಂದೆ ½" ತೆಗೆದುಕೊಂಡು ಪ, ನ, ಚಿತ್ರದಂತೆ ಕೂಡಿಸಿರಿ.

ಧ, ಜ, ಗಳ ಮಧ್ಯಕ್ಕೆ ಕಚ್ಚು ಹಾಕಿರಿ.

ಭುಜ ಪಟ್ಟಿ

ಬ, ಅ, ಕ, ಕಾಟಕೋನ.

ಅ, ಕ= ೩"

ಅ, ಬ= ೬¼" ಎಂದರೆ ಭುಜ + ¼"

ಅ, ಡ= ೧⅜" ಎಂದರೆ ಕೊರಳಿನ ⅛.

ಅ ಇ=೧"

ಇ, ಡ, ಚಿತ್ರದಂತೆ

ಬ, ಗ= ¼ ಇಂಚು

ಬ, ಫ= ೨¼"

ಗ, ಫ, ಕೂಡಿಸಿರಿ.

ಫ, ಕ, ಚಿತ್ರದಂತೆ.

ತೋಳು

ಬ, ಅ, ಕ, ಕಾಟಕೋನ.

ಅ, ಬ= ೬½" ಎದೆಯ ⅛+¼"

ಅ, ಕ= ೧೮½" ಎಂದರೆ ತೋಳು – ½"

ಬ, ಡ= ೨½" ಎದೆಯ ⅒+¼"

ಅ, ಫ= ೧"

ಡ, ಇ, ಫ, ಚಿತ್ರದಂತೆ ಕೂಡಿಸಿರಿ.

ದ, ಫ, ಒಳಭಾಗ ಚಿತ್ರದಂತೆ.

ರ, ಕ=೫½" ಎದೆಯ ¼–½"

ಕ, ಕೆಳಗೆ ½ ಇಂಚು ತೆಗೆದುಕೊಂಡು ಅ, ½" ಕೂಡಿಸಿರಿ.

ರ, ½" ಕೂಡಿಸಿರಿ.



ಮುಂಬದಿ-ಹಿಂಬದಿಯ ಚಿತ್ರ.

೧, ಸ= ೪" ಎಂದರೆ ಎದೆಯ ೧/೬
ಸ, ಕ್ಕೆ ಕಚ್ಚು ಹಾಕಿರಿ.



ತೋಳಿನ ಚಿತ್ರ

ಕಫ್

ಅ, ಬ, ಕ, ಕಾಟಕೋನ.

ಅ, ಬ= ೪೧/೨" ಎಂದರೆ ಎದೆಯ ೧/೬+೧/೨"

ಅ, ಕ= ೩೧/೨" ಎಂದರೆ ಎದೆಯ ೧/೧೨+೧/೨"

ಡ, ಇ= ೧/೪"

ಬ, ಇ, (ದುಂಡಗೆ) ಈ ಚಿತ್ರದಂತೆ ಕೂಡಿಸಿರಿ. ಇಂತಹ ನಾಲ್ಕು ತುಂಡುಗಳು ಬೇಕು.

ಸೆಕ್ಸ್‌ಪಿಯರ್ ಕೊರಳಿಂ ಪಟ್ಟಿ

(ಮೇಲ್ಭಾಗ)

ಅ, ಬ, ಕ, ಕಾಟಕೋನ.

ಅ, ಡ= ೫೧/೪" ಎಂದರೆ ಕುತ್ತಿಗೆಯ ೧/೩

ಅ, ಬ= ೭೧/೪" ಎಂದರೆ ಕುತ್ತಿಗೆಯ ೧/೨+೨"

ರ, ಅ= ೧/೪ ಇಂಚು.

ರ, ಡ, ಕೂಡಿಸಿರಿ.

ಡ, ಕ, ಕೂಡಿಸಿರಿ.

ಅ, ಡ= ೩೧/೪"

ಡ, ಕ, ಸರಳ ಕೂಡಿಸಿ, ಅನಂತರ ಚಿತ್ರದಲ್ಲಿ ತೋರಿಸಿದಂತೆ ಬಾಗು ಕೂಡಿಸಿರಿ.

(ಕೆಳಭಾಗ)

ರ, ಗ= ೧೧/೪ ಇಂಚು..

ಡ, ಇ= ೧/೪"

ಅ, ಡ, ಕೂಡಿಸಿರಿ.

ಇ, ಸ= ೧೧/೨" ಕೊಂಚ ವಕ್ರವಾಗಿ

ಇ, ಸ, ಕೂಡಿಸಿರಿ.

ಸ, ಗ, ಚಿತ್ರದಂತೆ.

ಬೇಕಾಗುವ ಬಟ್ಟೆ:— ಕತ್ತರಿಸುವಾಗ ಅಂಗಿಯ ಉದ್ದವನ್ನು ೧" ಹೆಚ್ಚು ಇಡಬೇಕು. (ಹೊಲಿಗೆಗಾಗಿ.)

೩೬" ಅಗಲು ಉಳ್ಳ ಬಟ್ಟೆ ೧೧/೪ ವಾರ್ ಬೇಕು.

ಅಭಿನಂದನೆ

ನ್ಯಾಯಮೂರ್ತಿ ಲೋಕೂರ ನಾರಾಯಣರಾಯರು ಮತ್ತೆ ಮುಂಬೈ ಹೈಕೋರ್ಟಿನ ನ್ಯಾಯಾಸನದ ಮೇಲೆ ಕುಳಿತುಕೊಳ್ಳುವ ಪ್ರಯೋಗ ಒದಗಿದುದು ಕನ್ನಡಿಗರೆಲ್ಲರಿಗೂ ಅಭಿಮಾನದಸಂಗತಿ. ಶ್ರೀಮಾನ್ ಲೋಕೂರ್ ಅವರ ಶಾಸನವಿಶಾರದತೆಯು ಇಷ್ಟರಲ್ಲಿಯೆ ಅವರಿಗೆ ಈ ಮರ್ಯಾದೆಯನ್ನು ಒದವಿಸಿ ಕೊಡಬೇಕಾಗಿದ್ದಿತು; ಆದರೆ ಮುಂಬಯಿ ಇಲಾಖೆಯ ರಾಜಕಾರ್ಯದಲ್ಲಿ ಎಂತಹ ಬುದ್ಧಿವಂತರಾದ ಕನ್ನಡಿಗರನ್ನೂ ಮೇಲಿನ ಸ್ಥಾನಕ್ಕೆ ಏರಿಸದಂತಹ ಕೈವಾಡವು ಕೆಲಸಮಾಡುತ್ತಿರುವುದು. ಈಗ ಕೂಡ ಅವರಿಗೀ ಮನ್ನಣೆ ದೊರೆತುದು ಎಂಟು ತಿಂಗಳವರೆಗೆ ಮಾತ್ರ. ಈ ಗೌರವ ಸ್ಥಾನವು ಬ್ರಹ್ಮದೇಶದಿಂದ ಅಧಿಕಾರ ಕಳೆದುಕೊಂಡು ಬಂದ ಯಾವನಾದರೊಬ್ಬ ಗೌರವರ್ಣದವನಿಗೆ ಸಿಕ್ಕಲಿದ್ದಿತಂತೆ. ಆದರೆ ಸರ್ ಚಿಮಣಲಾಲ ಸೆಟಲ್‌ವಾಡರವರು ಇದರ ಬಗ್ಗೆ ಗುಲ್ಲೆಬ್ಬಿಸಿದುದರಿಂದ, ಹಿಂದುಗಳಾದ–ಅದರಲ್ಲಿಯೂ ಕನ್ನಡಿಗರಾದ—ಶ್ರೀಮಾನ್ ಲೋಕೂರ ಅವರಿಗೆ ದೊರೆಯಿತಂತೆ. ಶಾಸನ ನೈಪುಣ್ಯದಲ್ಲಿ ಯಾವ ಗೌರ ಕಾಯದವರನ್ನೂ ಮೀರಿಸುವ ತಕ್ಕಮೆ ಲೋಕೂರರವರಲ್ಲಿ ಇದೆಯೆಂಬುದನ್ನು ಈ ಮೊದಲೆ ಅವರು ನಿದರ್ಶನಕ್ಕೆ ತಂದುಕೊಟ್ಟಿದ್ದಾರೆ. ಹೈಕೋರ್ಟಿನಲ್ಲಿಯ ಅವರ ಕಾರ್ಯವು ಕನ್ನಡಿಗರ ಹೆಸರನ್ನು ಮೆರೆಯಿಸಲಿ!

ನ್ಯಾಯಮೂರ್ತಿ ಲೋಕೂರ ನಾರಾಯಣರಾಯರು

ಸಾದರ ಸ್ವೀಕಾರ

೨೧. **ಸುಭಾಷಿತ ಸಂಗ್ರಹಗಳು:—** (ಸೋದಾಹರಣ ವಿಮರ್ಶಾತ್ಮಕ ಪ್ರಬಂಧ). ಲೇಖಕರು ಶ್ರೀಮಾನ್ ಎಂ. ಪಿ. ಲಕ್ಷ್ಮೀನೃಸಿಂಹ ಶಾಸ್ತ್ರಿ ಎಂ. ಎ. ಅವರು. ಮೈಸೂರು ವಿ. ವಿ. ನಿಲಯದ ಪ್ರಚಾರ ಪುಸ್ತಕಮಾಲೆಯ ೩೮ನೆಯ ಪುಸ್ತಕ. ಫ್ರೊ. ಕ್ಯಾ. ಅ. ೬೪ ಪುಟ; ಬೆಲೆ ೦-೨-೦.

ಇದು ಮೂರು ಭಾಗಗಳಿಂದ ಕೂಡಿದ್ದು ಮೊದಲನೆಯುದರಲ್ಲಿ ಸುಭಾಷಿತಗಳ ಹುಟ್ಟು ಮತ್ತು ಮಹತ್ತ್ವವನ್ನು ಕುರಿತು ವಿವೇಚಿಸಲಾಗಿದೆ. ಎರಡನೆಯ ಭಾಗದಲ್ಲಿ ಸಂಸ್ಕೃತ ಭಾಷೆಯಲ್ಲಿರುವ ಬೇರೆ ಬೇರೆ ಸುಭಾಷಿತ ಸಂಗ್ರಹ ಗ್ರಂಥಗಳ ಸಂಕ್ಷಿಪ್ತ ಪರಿಚಯವಿದೆ. ಮೂರನೆಯ ಭಾಗದಲ್ಲಿ ಹಲವು ಸಂಸ್ಕೃತ ಸುಭಾಷಿತಗಳನ್ನು ಅರ್ಥಸಹಿತ ಸಂಗ್ರಹಿಸಿ ಕೊಡಲಾಗಿದೆ. ಚಿಕ್ಕದಾದರೂ ಚೊಕ್ಕಟವಾದ ಪುಸ್ತಕ. ಎಲ್ಲರೂ ಓದಿ ಸುಭಾಷಿತಗಳ ಮಹತಿಯನ್ನು ಅರಿತುಕೊಳ್ಳಬೇಕು.

೨೨. **ಮಕ್ಕಳ ಭಾವಜೀವನ: —** (ಮನಶ್ಶಾಸ್ತ್ರ ವಿಷಯಕ) ಬರೆದವರು ಶ್ರೀಮಾನ್ ಬಿ. ಕುಪ್ಪುಸ್ವಾಮಿ ನಾಯ್ಡು ಎಂ. ಎ. ಅವರು. ಮೇಲಿನ ಪ್ರಚಾರ ಪುಸ್ತಕಮಾಲೆಯ ೩೯ನೆಯ ಗ್ರಂಥ. ಫ್ರೊ. ಕ್ಯಾ. ಅ. ೪೪ ಪುಟ. ಬೆಲೆ ೦-೨-೦.

೨೩. **ರತಿರಂಗ :—** (ಹೊಸ ಮಾಸಪತ್ರಿಕೆ). ಸಂಪಾದಕರು ಶ್ರೀ. ವೆಂಕಟ ಜಿ. ಘಸ್ಮೇ ಧಾರವಾಡ. ಕ್ರಾ. ಅ. ೩೨ ಪುಟಗಳು. ಬಿಡಿ ಸಂಚಿಕೆಗೆ ೦-೩-೦.

ಧಾರವಾಡದಲ್ಲಿ ಹೊರಟ ಕಾಮವಿಜ್ಞಾನ (?) ಮಾಸಪತ್ರಿಕೆಗಳಲ್ಲಿ ಮೂರನೆಯದಾಗಿ ಇದು ಇತ್ತೀಚೆಗೆ ಹೊರಟಿದೆ. ಇಂತಹ ಪತ್ರಿಕೆಗಳು ಅಂತಹ ವಿಷಯದಲ್ಲಿ ತಜ್ಞರಾಗಿರುವವರ ಸಂಪಾದಕತ್ವದಲ್ಲಿ ಹೊರಡುವುದು ಒಳ್ಳೆಯದು. ಇಲ್ಲವಾದರೆ ಕುರುಡನ ಬೆನ್ನು ಹತ್ತಿದ ಕುರುಡರೆಲ್ಲರೂ ಹಳ್ಳಕ್ಕೆ ಬೀಳುವ ಸಂಭವ ಹೆಚ್ಚು!

೨೪. **ಸಂತಸಖಾ :—** (ಚಿಕ್ಕ ನಾಟಕ). ಬರೆದವರು ಶ್ರೀ. ಹರಿದಾಸ ವಿದ್ವಾನ್, ಕಾರಕಳ. ಪ್ರಕಾಶಕರು ಸಂಗೀತ ಕಲಾಮಂದಿರ, ಕಾರಕಳ— ದಕ್ಷಿಣ ಕನ್ನಡ ಜಿಲ್ಲೆ. ಕ್ರಾ. ಅ. ೨೧ ಪುಟ. ಬೆಲೆ ೦-೩-೦.

೨೫. **ಮೊಗವೀರ ವ್ಯವಸ್ಥಾಪಕ ಮಂಡಲಿ** (ಮುಂಬೈ)ಯ ಮೂವತ್ತೊಂಬತ್ತನೆಯ ವಾರ್ಷಿಕ ವರದಿ. ಕಾರ್ಯದರ್ಶಿಗಳು ಶ್ರೀಯುತರುಗಳಾದ ನಾರಾಯಣ ಬಿ. ಬಂಗೇರ, ಐ. ಪಪ್ಪು ಪುತ್ರನ್, ಸುಬ್ಬರಾವ್ ಎ. ಕೋಟ್ಯಾನ್‌ಕಾರ್.

ಮುಂಬಯಿಯಲ್ಲಿ ಸುಸಂಘಟಿತವಾಗಿ ತನ್ನ ಸಮಾಜದ ಉನ್ನತಿಗಾಗಿ ದುಡಿಯುವುದಲ್ಲದೆ ಕನ್ನಡವನ್ನು ಸಂರಕ್ಷಿಸುವ ಕಾರ್ಯವನ್ನೂ ಅಖಂಡವಾಗಿ ನಡೆಯಿಸಿರುವ ಸಂಸ್ಥೆಯ ವರದಿಯಿದು. ಕನ್ನಡಿಗರ ಬೇರೆ ಹಲವು ಸಂಸ್ಥೆಗಳಿಗೆ ಈ ಮಂಡಲಿಯ ಕಾರ್ಯ ಮಾದರಿಯಾಗುವಂತಿದೆ. ತನ್ನ ಕಾರ್ಯಶಕ್ತಿಯ ಬಲದಿಂದ— ಯಾರ ಹಣ ಮಾತಿನ ಹರಕೆಯ ಆವಶ್ಯಕತೆಯೂ ಇಲ್ಲದೆ— ಈ ಸಂಸ್ಥೆ ಬಹುಕಾಲ ಬದುಕಬಲ್ಲದೆಂಬ ವಿಶ್ವಾಸ ನಮಗೆ ಇದೆ.

೨೬. **ವಿಶ್ವನೋಥ :—** (ಸದ್ಯದ ಮಹಾಯುದ್ಧದ ಪರಿಚಯಾತ್ಮಕ ಗ್ರಂಥ) ಶ್ರೀ. 'ಸಂಜಯ' ಬರೆದುದು. ಹುಬ್ಬಳ್ಳಿಯ ರಾಷ್ಟ್ರೀಯ ವಾಙ್ಮಯಪ್ರಕಾಶನ ಟ್ರಸ್ಟಿನಿಂದ ಪ್ರಕಾಶಿತವಾಗಿದೆ. ಕ್ರಾ. ಅ. ೨೩೮ ಪುಟಗಳು. ಬೆಲೆ ೦-೧೨-೦.

೨೭. **ಅಹಲ್ಯೆ:—** (ಗೀತನಾಟಕ). ಬರೆದವರು ಶ್ರೀಮಾನ್ ಪು.ತಿ. ನರಸಿಂಹಾಚಾರ್ಯರು. ಮೈಸೂರಿನ 'ಕಾವ್ಯಾಲಯ'ದಿಂದ ಪ್ರಕಟವಾಗುವ 'ಕಾವ್ಯಮಾಲೆ'ಯ ೧೩ನೆಯ ಪುಷ್ಪ. ಕ್ರಾ. ಅ. ೨೪+೧೨೪ ಪುಟಗಳು. ಬೆಲೆ ೧-೪-೦.

೨೮. **ರಾಕ್ಷಸನ ಮುದ್ರಿಕೆ :—** (ಸಂಸ್ಕೃತ 'ಮುದ್ರಾರಾಕ್ಷಸ ನಾಟಕ'ದ ರೂಪಾಂತರ). ಶ್ರೀಮಾನ್ ತೀ. ನಂ. ಶ್ರೀಕಂಠಯ್ಯನವರುರೂಪಾಂತರಿಸಿದುದು. ಮೇಲಿನ ಕಾವ್ಯಮಾಲೆಯ ೧೪ನೆಯ ಪುಷ್ಪ. ಕ್ರಾ. ಅ. ೧೦೮ ಪುಟಗಳು; ಬೆಲೆ ೧-೦-೦.

೨೯. **ಸಾಹಿತ್ಯದ ಜೀವಾಳ :—** (ಷೋಪನ್‌ಹಾರ್‌ನ ಪ್ರಬಂಧಗಳು). ಅನುವಾದಕರು ಶ್ರೀಮಾನ್ ಗೋರೂರು ರಾಮಸ್ವಾಮಿ ಐಯಂಗಾರ್ಯರು. ಮೈಸೂರಿನ 'ಕಾವ್ಯಾಲಯ'ದಿಂದ ಪ್ರಕಾಶಿತವಾಗಿದೆ. ಡೆ. ಅ. ೪೮ ಪುಟಗಳು. ಬೆಲೆ ೦-೧೦-೦.

೩೦. **ಪುರೋಗಾಮಿ ಶಿಕ್ಷಕನು:—** (ಶಿಕ್ಷಣ ವಿಷಯಕ ಗ್ರಂಥ). ಲೇಖಕರು ಶ್ರೀಮಾನ್ ಗಜೇಂದ್ರಗಡ ಶ್ಯಾಮರಾಯರು ಬಿ. ಎ., ಬಿ. ಟಿ. ಪಿ. ಡಿ. ಜೆ. ಹೈಸ್ಕೂಲ್ ವಿಜಯಪುರ. ಪ್ರಕಾಶಕರು: ಶ್ರೀ. ರಾ. ಗೋ. ಹುಕ್ಕೇರಿ ಸ್ಟೂಡಂಟ್ಸ್ ಓನ್ ಬುಕ್ ಡಿಪೋ, ಧಾರವಾಡ. ಕ್ರಾ. ಅ. ೩೨೮ ಪುಟಗಳು. ಬೆಲೆ ೨-೪-೦.

೩೧. **ಮನೋವಿಜ್ಞಾನ ರೂಪರೇಷೆ :—** (ಮನಶ್ಶಾಸ್ತ್ರ). ಬರೆದವರು ಶ್ರೀಮಾನ್ ಗೌರೀಶ ಕಾಯಕಿಣಿ, ಗೋಕರ್ಣ ಅವರು. ಧಾರವಾಡದ ಮಿಂಚಿನ ಬಳ್ಳಿಯ ೫ನೆಯ ವರ್ಷದ ೨ನೆಯ ಕುಡಿ. ಕ್ರಾ. ಅ. ೧೭೨ ಪುಟ. ಬೆಲೆ ೧-೪-೦.

೩೨. **ಸಹಕಾರ:—** (ಪರಿಚಯಾತ್ಮಕ ಪ್ರಬಂಧ). ಬರೆದವರು ಶ್ರೀಮಾನ್ ಎಸ್. ಗೋಪಾಲಸ್ವಾಮಿ ಎಂ. ಎ. ಮೈಸೂರು ವಿ. ವಿ. ನಿಲಯದ ಪ್ರಚಾರ ಪುಸ್ತಕಮಾಲೆಯ ೪೦ನೆಯ ಪುಸ್ತಕ. ಫ್ರೊ. ಕ್ಯಾ. ಅ. ೬೪ ಪುಟ. ಬೆಲೆ ೦-೨-೦.

ನಗೆಗೆ ನೈವೇದ್ಯ

ಸೆಟ್ಟಿಯ ವ್ಯವಹಾರ

ಮುದುಕ ವೆಂಕಟ ಸೆಟ್ಟಿಗೆ ಸಾವು ಸಮೀಪಿಸಿತ್ತು. ಮನೆಯವರೆಲ್ಲಾ ಸುತ್ತಲೂ ಗುಂಪುಗೂಡಿದ್ದರು. ಹಿರಿಯ ಮಗ ಕೇಳಿದ: 'ಯಾರು ಯಾರಿಂದ ಬಾಕಿ ಹಣ ಬರುವುದಿದೆ?' ಎಂದು.

ಸೆಟ್ಟಿ ಹತ್ತು ಹನ್ನೆರಡು ಜನರ ಹೆಸರನ್ನು, ಸಾವಧಾನವಾಗಿ—ತಟ್ಟುತ್ತ ತಡವುತ್ತ ಹೇಳಿದ.

ಕಿರಿಯ ಮಗ ಕೇಳಿದ:

'ನೀನು ಯಾರುಯಾರಿಗೆ ಎಷ್ಟೆಷ್ಟು ಕೊಡಬೇಕೋ ಅದನ್ನೂ ಅಷ್ಟು ಹೇಳಿಬಿಡು!'

ಮುದುಕ ತಲೆಯಲ್ಲಾಡಿಸಿ ಹೇಳಿದ:

'ಊಹುಂ, ಅವರೂ ನನ್ನ ಹಾಗೆ ಸಾಯ್ತಾ ಇದ್ದರೆ ಹೇಳಿ ಸಾಯಬೇಕು! ಅದರ ಜವಾಬ್ದಾರಿ ಅವರದು!'

❊ ❊ ❊

ಹ್ಯಾಂಗ ಆಗಬೇಕರೀ?

ಡಾಕ್ಟರ್:— ಅಲ್ರೀ, ನಿಮ್ಮ ರೋಗ ಇನ್ನೂ ಗುಣ ಆಗ್ಲಿಲ್ಲನ? ಊಟಕ್ಕಿಂತ ಒಂದು ತಾಸು ಮೊದಲು ಬಿಸಿನೀರು ಕುಡೀತಾ ಇರ್ರಿ—ಅಂತ ಹೇಳಿದ್ದೆ. ಹಾಂಗ ಮಾಡತಾ ಇದ್ದೀರಿ ಹೌದಲ್ಲೊ?

ರೋಗಿ.— ಕುಡೀಲಿಕ್ಕೆ ಪ್ರಯತ್ನವನ್ನೇನೋ ಮಾಡಿದೆ ಅನ್ರಿ! ಆದರ ಹತ್ತು ಮಿನಿಟಗಿಂತಾ ಹೆಚ್ಚಿಗೇನೂ ಕುಡೀತಿರಲಿಕ್ಕೆ ಆಗಲಿಲ್ಲ. ತಾಸಿಂತಾಸು ಬಿಸಿನೀರು ಕುಡಿತಾ ಇರೂದಂದರ ಹ್ಯಾಂಗ ಆಗಬೇಕರೀ?

❊ ❊ ❊

ಅಸಹ್ಯ ಕಾಣುತ್ತೆ ಅಲ್ಲವೆ?

ಮನೆಗಳ ಒಡತಿ ಒಬ್ಬಾಕೆ, ಮನೆಗಳ ಬಾಡಿಗೆ ವಸೂಲಿಗೆಂದು ತಾನೇ ಹೋದಳು. ಮೊದಲನೆಯ ಮನೆಗೆ ಹೋದಾಗಲೆ ಅಲ್ಲಿಯ ಗೋಡೆಗಳೆಲ್ಲ ಸುಣ್ಣ ಬಣ್ಣವಿಲ್ಲದೆ ಹಾಳಾದುದನ್ನು ನೋಡಿದಳು. ಬಾಡಿಗೆದಾರರು ಕಂಪ್ಲೆಂಟು ಹೇಳುವುದಕ್ಕೆ ಮೊದಲೆ ಸಹಾನುಭೂತಿಯ ಸ್ವರದಲ್ಲಿ ತಾನೇ ಕೇಳಿದಳು:

"ಮನೆಗೆ ಸುಣ್ಣ ಬಳೀದೇ ಇದ್ದುದರಿಂದ ಅಸಹ್ಯ ಕಾಣುತ್ತೆ ಅಲ್ಲವೇ?"

ಬಾಡಿಗೆದಾರ ಹೇಳಿದ:

"ಅಸಹ್ಯವೇನು ಬಂತು ಅಸಹ್ಯ? ಈಗ ತಮ್ಮ ಮುಖಕ್ಕೆ ಬಳಿದಿರೋ ಸುಣ್ಣ ಇಲ್ಲದೇ ಹೋದರೆ ಅದು ಹೇಗೆ ಕಾಣತ್ತೋ ಹಾಗಿದೆ; ಅಷ್ಟು!"

❊ ❊ ❊

ಕೊಡೆಯ ಕಳವು

ರಾಮರಾಯರು ಕ್ಲಬ್ಬಿನಲ್ಲಿ ತಮ್ಮ ಹೊಸ ಕೊಡೆಯನ್ನು ಕಳೆದುಕೊಂಡರು. ಎಂಟು ದಿನ ಹುಡುಕಿದರೂ ಸಿಕ್ಕಲಿಲ್ಲ. ಒಂಬತ್ತನೆಯ ದಿನ ಶಾಮರಾಯರು ತಮ್ಮ ಕೊಡೆ ಹಿಡಿದುಕೊಂಡು ದಾರಿಯಲ್ಲಿ ನಡೆದುದನ್ನು ನೋಡಿದರು. ದಾಕ್ಷಿಣ್ಯದ ನಗೆ ನಗುತ್ತ ರಾಮರಾಯರು ಕೇಳಿದರು:

"ಹಹ .... ಹಿಹಿ .... ಶಾಮರಾಯರೆ, ಕೊಡೆ ನನ್ನದು! ಎಂಟು ದಿನಗಳಾದುವು. ಇನ್ನಾದರೂ ಕೊಡತೀರೇನು?"

ಶ್ಯಾಮರಾಯರು ಕೋಪಗೊಂಡವರಾಗಿ ನುಡಿದರು;

"ಯಾರದ್ರೀ ಈ ಕೊಡೆ? ಹೆಸರದೆ ಏನು ಇದರ ಮ್ಯಾಲ? ನಂದು ಇದು! ಈಗ ತಿಂಗಳಾಯಿತು ತೊಗೊಂಡು!"

"ಹೂಂ, ನಿಮ್ಮದೇನು ಈ ಕೊಡೆ? ಸರಿ ಸರಿ! ಹಾಂಗಿದ್ದರೆ ಆ ಕೊಡೆಯ ಕಾವಿಗಿರೋ ಬೆಳ್ಳೀ ಹಿಡಿಕೀ ಕೊಟ್ಟುಬಿಡ್ರಿ; ಅದರ ಮ್ಯಾಲ ನನ್ನ ಹೆಸರು ಅದ!"

❊ ❊ ❊

ಉದ್ಧರೀ ಡಾಕ್ಟರು!

ಡಾಕ್ಟರ್:— ನಿತ್ಯವೂ ಡಝನ್ ಮೋಸಂಬೀ ಹಣ್ಣು ತಿನ್ನತಾ ಹೋಗರಿ; ಅಂದರ ಡಾಕ್ಟರ ಬಿಲ್ಲಿಗೆ ಹೆದರೂ ಕಾರಣ ನಿಮಗ ಒದಗೂದಿಲ್ಲ!

ರಾಯರು:—ಹಾಂಗೇನೂ ಬ್ಯಾಡ್ರೆಸಾ, ನಿಮ್ಮ ಬಿಲ್ಲs ಬರತಾ ಇರಲಿ ಬೇಕಾದರೆ! ಮೋಸಂಬಿ ಹಣ್ಣು ನಮಗ ಉದ್ಧರೀ ಸಿಗಬೇಕು ಹ್ಯಾಂಗ—ಹೇಳ್ರಿ!

❊ ❊ ❊

ಸಂಗೀತದ ಉಪಯೋಗ

ಜಮಾದಾರ:— (ಪೋಲೀಸರನ್ನೆಲ್ಲ ಕರೆಯಿಸಿ) ಹಾಂ! ನಿಮ್ಮಲ್ಲಿ ಸಂಗೀತದ ವಿಷಯ ತಿಳಿದವರು ಯಾರು ಇದ್ದೀರಿ?

ಹೊಸ ಸಿಪಾಯಿ:— ನಾನು ಇದ್ದೀನಿ ಸಾಹೇಬ್! ನಾನು ಮೊದಲು ಸಂಗೀತ ನಾಟಕದೊಳಗ ಮುಖ್ಯ ಪಾತ್ರ ಮಾಡತಿದ್ದೆ!

ಜಮಾದಾರ:—ಶಾಬಾಸ್! ಹಾಂಗಾದರೆ ದೊಡ್ಡಸಾಹೇಬರ ಮನೇಲಿ ಇರೋ ಹಾರ್ಮೋನಿಯಂ ಪೆಟ್ಟಿಗೇನ ಸ್ಟೇಷನ್‌ವರೆಗೆ ಹೊತ್ತುಗೊಂಡು ಹೋಗಿ ಇಟ್ಟು ಬಾ! ಬೇಗ ನಡೆ!



ಸೋಲ ಎಜಂಟರು.
ನಾಗ್ವಿಲಾಸ ಬುಕ್-ಡಿಪೋ, ಹುಬ್ಬಳ್ಳಿ



ಅವಿಶ್ವಾಸ, ಅವಸರ, ಅವ್ಯವಸ್ಥೆ

ಕಳೆದ ತಿಂಗಳು ಮುಂಬಯಿಯಲ್ಲಿ ಕೂಡಿದ ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿಯ ಅಧಿವೇಶನವು ಅತ್ಯಂತ ಮಹತ್ತ್ವದ್ದೆನಿಸುವುದೆಂದು ಎಲ್ಲರೂ ತಿಳಿದಿದ್ದರು; ಆ ಅಧಿವೇಶನದ ತರುವಾಯ ರಾಜಕೀಯ ವಾತಾವರಣದಲ್ಲಿ ಅವ್ಯವಸ್ಥೆಯ ಗೊಂದಲವೇಳಬಹುದೆಂದು ಮಾತ್ರ ಯಾರೂ ತಿಳಿದಿರಲಿಲ್ಲ. ಕಾಂಗ್ರೆಸು ಯಾವ ನಿರ್ಣಯವನ್ನು ಕೈಕೊಳ್ಳುವುದೆಂದು ಎಲ್ಲರೂ ಆತುರರಾಗಿದ್ದರು; ಆದರೆ ಇಂದಿನ ಪರಿಸ್ಥಿತಿಯಲ್ಲಿ ಆ ನಿರ್ಣಯದ ಅರಿವು ಕೂಡ ದೇಶಕ್ಕೆ ಉಳಿದಿಲ್ಲ. ಕಾಂಗ್ರೆಸು ಏನು ಮಾಡಬೇಕೆಂದಿತ್ತೆಂಬುದರ ಮಹತ್ತ್ವ ಕೂಡ ಈಗ ಉಳಿದಿಲ್ಲ. ಯಾಕೆಂದರೆ, ತನ್ನ ನಿರ್ಣಯದ ಹೊಣೆಗಾರಿಕೆಯನ್ನು ಹೊರುವಷ್ಟು ಕೂಡ ಅವಕಾಶ ಕಾಂಗ್ರೆಸಿಗೆ ದೊರೆಯಲಿಲ್ಲ. ಸದ್ಯದ 'ಅವ್ಯವಸ್ಥೆಯು ಸರಕಾರದ ಅವಸರದಿಂದ ಇನ್ನಿಷ್ಟು ಹದಗೆಟ್ಟಿದೆ' ಎಂದು ಅನೇಕ ಹಿಂದೀಯ ಮುಂದಾಳುಗಳೂ ಪತ್ರಿಕೆಯವರೂ ಅಭಿಪ್ರಾಯಪಡುತ್ತಿದ್ದಾರೆ; ಅಷ್ಟೊಂದು ಅವಸರ ಮಾಡಿದ್ದಿಲ್ಲವೆಂದರೆ ದೇಶದಲ್ಲಿ ಕೈಮೀರಿದ ಅರಾಜಕತೆ ಹಬ್ಬುವುದು ಖಂಡಿತವಾಗಿತ್ತು ಎಂದು ಸರಕಾರದವರೂ ಇಂಗ್ಲಿಶ್ ಪತ್ರಿಕೆಗಳವರೂ ಅಭಿಪ್ರಾಯಪಡುತ್ತಿದ್ದಾರೆ. 'ಕಾಂಗ್ರೆಸು ಒಪ್ಪಂದಕ್ಕೆ ಎಲ್ಲ ಪ್ರಯತ್ನಗಳನ್ನು ಮಾಡಿ ಕೊನೆಗೆ ಸತ್ಯಾಗ್ರಹವನ್ನು ಹೂಡುವ ವಿಚಾರದಲ್ಲಿದ್ದಿತು' ಎಂದು ಒಂದು ಪಕ್ಷ; 'ಸತ್ಯಾಗ್ರಹದ ಸಿದ್ಧತೆಗಾಗಿಯೆ ಕಾಂಗ್ರೆಸು ಒಪ್ಪಂದದ ನೆವದಿಂದ ಸಮಯವನ್ನು ಮುಂದೂಡುವುದರಲ್ಲಿದ್ದಿತು' ಎಂದು ಇನ್ನೊಂದು ಪಕ್ಷ. ಉಭಯಪಕ್ಷಗಳಲ್ಲೂ ಅಷ್ಟೊಂದು ಹಟ, ಅಷ್ಟೊಂದು ಪರಸ್ಪರ ಅವಿಶ್ವಾಸ ಇದೆ ಎಂಬುದು ಇದರಿಂದ ಸ್ಪಷ್ಟವಿದೆ.

ಯಾರಿಗೆ ಹಿತ?

ಕಾಂಗ್ರೆಸ್ ಮುಂದಾಳುಗಳನ್ನು ಬಂಧಿಸಲು ಸರಕಾರವು ಅವಸರ ಮಾಡಿದ್ದು ಜಾಣತನವಾಗಲಿಲ್ಲ ಎಂಬ ಮಾತನ್ನು ನಾವು ಒಪ್ಪುತ್ತೇವೆ. ಆ ಮುಂದಾಳುಗಳಿಗೆ ಕೆಲವೊಂದು ಸಮಯವನ್ನು ಕೊಟ್ಟು, ಆಗ ಸಂಧಾನವಿಲ್ಲದೆ ಅರಾಜಕತೆ ಬೆಳೆಯತೊಡಗಿದ್ದರೆ ಆ ಸ್ಥಿತಿಗೆ ಮುಂದಾಳುಗಳೆ ಹೊಣೆಗಾರರೆಂದು ಸರಕಾರವು ಸಾಧಿಸಿದ್ದರೆ ಯುಕ್ತವೆನಿಸಬಹುದಾಗಿತ್ತು; ಆದರೆ 'ಇಂದಿನ ಅರಾಜಕತೆಗೆ ಕಾಂಗ್ರೆಸ್ಸು ಹೊಣೆಗಾರ' ಎಂದು ಸಿದ್ಧ ಮಾಡುವಂತಿಲ್ಲ. 'ಕಾಂಗ್ರೆಸೂ ಇಂತಹ ಕೆಲಸವನ್ನೆ ಮಾಡಬಹುದಾಗಿತ್ತು' ಎಂಬ ಮಾತು ಶೋಭಿಸುವಂತಹದಲ್ಲ. ಕೆಲವು ದಿನಗಳವರೆಗೆ ಅಲ್ಲಲ್ಲಿ ನಡೆದದ್ದು ಪುಂಡಾಟಿಕೆ, ರಾಜಕೀಯ ಚಳವಳವಲ್ಲ ಎಂಬುದು ಸ್ಪಷ್ಟವಿದೆ. ಹಿಂದುಮುಂದು ವಿಚಾರವಿಲ್ಲದೆ ಘಾತುಕಕೃತ್ಯಗಳನ್ನು ಕೆಲವೆಡೆ ಕೈಕೊಂಡ ರೀತಿಯನ್ನು ನೋಡಿದರೆ, ಅದಕ್ಕೆ ಚಳವಳ ಎಂದು ಎಂದಿಗೂ ಹೇಳಲಾಗದು. ಹಿಂಸೆ-ಅತ್ಯಾಚಾರಗಳನ್ನು ನೋಡಿದರೆ ಅವು ಕಾಂಗ್ರೆಸಿಗೆ, ಅದರಲ್ಲೂ ನಾಯಕರಾದ ಮಹಾತ್ಮರಿಗೆ ಅಭಿಮತವಾದ ಮಾರ್ಗವಿದು ಎಂದು ಯಾರಿಗೂ ವಿಶ್ವಾಸ ಹುಟ್ಟದು. ಮುಂದಾಳುಗಳನ್ನು ಬಂಧಿಸಿದ್ದಕ್ಕಾಗಿ ಜನತೆಯು, ಇಡಿಯ ದೇಶದ ತುಂಬ ಹೇಗೆ ಗತಿಗಾಣದಂತಾಗಿ ರೊಚ್ಚಿಗೆದ್ದಿದೆ ಎಂಬುದರ ನಿದರ್ಶನ ಮಾತ್ರ ಈ ಗಲಭೆಗಳಲ್ಲಿ ಕಂಡುಬರುವುದು. ಪುಂಡರ ಅವಿವೇಕಕ್ಕಾಗಿ ದೇಶಕ್ಕೆ, ಕಾಂಗ್ರೆಸಿನ ಧ್ಯೇಯಕ್ಕೆ ಅಪಾಯಕಾರಕವಾದ ಸಂಗತಿಗಳು ಘಟಿಸುತ್ತಿದ್ದುದು ಅತ್ಯಂತ ಶೋಚನೀಯವಾದ ಮಾತಾಗಿದೆ.

ಮುಂದೇನು?

ಆದರೆ ಎಲ್ಲಕ್ಕೂ ಮಹತ್ತ್ವದ ಪ್ರಶ್ನೆ ಎಂದರೆ ಈ ಪರಿಸ್ಥಿತಿಯ ಕೊನೆ ಎಲ್ಲಿ? ದಬ್ಬಾಳಿಕೆಯೆ ಸರಕಾರದ ಕೊನೆಯ ಧ್ಯೇಯವೆ? ಎಂತಹ ಕಾಲದಲ್ಲೂ ದಬ್ಬಾಳಿಕೆಯಿಂದ ಸುಪರಿಣಾಮವಾಗದಿರುವಾಗ, ಇಂದಿನಂತಹ ಯುದ್ಧದ ಕಾಲದಲ್ಲಿ ಅದು ಇನ್ನಿಷ್ಟು ಅನಿಷ್ಟವೆಂದು ಬೇರೆ ಹೇಳಬೇಕಾಗಿಲ್ಲ. ಮೊದಲೇ ಮುಂದಾಳುಗಳನ್ನು ಕಳೆದುಕೊಂಡು ಹತಾಶವಾದ ಜನತೆ, ದಬ್ಬಾಳಿಕೆಯಿಂದ ಹುಚ್ಚಾಗಿ ಖತಿಗೊಳ್ಳಬಹುದಾಗಿದೆ. ಏನು ಮಾಡಬೇಕೆಂಬುದು ತಿಳಿಯದೆ—ಹೀಗೆ ಮಾಡಿರೆಂದು ಹೇಳುವವರಿಲ್ಲದೆ—ಜನತೆಯು ಶತ್ರುವಿಗೆಯೆ ಸಹಾಯಕವಾಗಬಹುದಾದ ಪುಂಡಾಟಿಕೆಗಾಗಿ ಕನಲದೆ ಕೈ ಕಟ್ಟಿಕೊಂಡರೆ ಅದಕ್ಕಿಂತ ಹೆಚ್ಚಿನ ದುರ್ದೈವ ದೇಶಕ್ಕೆ ಇನ್ನಾವುದು? ಸರ್ವಾಧಿಕಾರಿತ್ವವನ್ನು ಬಗ್ಗುಬಡಿಯಬೇಕೆಂದು ಬ್ರಿಟಿಶರಷ್ಟೆ ಕಾಂಗ್ರೆಸಿನವರೂ ದೃಢವಾಗಿ ನಂಬುತ್ತಿರುವಾಗ, ಇಂತಹ ಪರಿಸ್ಥಿತಿ ಬರುವುದೆಂದರೆ ದೇಶದ ದುರ್ದೈವ ಇಲ್ಲವೆ ದೊಡ್ಡವರೆಂಬವರ ದಡ್ಡತನ ಎನ್ನುವುದು ಅನಿವಾರ್ಯವಾಗುವುದು. ದೇಶವನ್ನು ರಕ್ಷಿಸುವುದೂ, ದೇಶದ ಯುದ್ಧಶಕ್ತಿ-

ಯನ್ನು ಬೆಳೆಯಿಸುವುದೂ ಮುಖ್ಯವಾಗಿ ಸರಕಾರದ ಹೊಣೆ ಎನಿಸುತ್ತಿರುವಾಗ, ಆ ಸರಕಾರವು ಕೇವಲ ದಬ್ಬಾಳಿಕೆಯಲ್ಲಿಯೆ ನ್ಯಾಯಮರೆಯಲಿಕ್ಕಿಲ್ಲವೆಂದು ನಂಬಿದ್ದೇವೆ. ಸದ್ಯಕ್ಕೆ ವೈಸರಾಯರ ಉಪದೇಶಕರು ಭಾರತೀಯರೆ ಇದ್ದಾರೆ ಎಂದು ಯಾರೂ ನಮ್ಮನ್ನು ನೋಯಿಸಬೇಕಾಗಿಲ್ಲ. ವೈಸರಾಯರ ಉಪದೇಶಕರೇಕೆ, ಪೋಲೀಸರೂ ಅಧಿಕಾರಿಗಳೂ ಇವರೂ ಭಾರತೀಯರೆ ಆಗಿದ್ದಾರೆ. ಅಷ್ಟಕ್ಕೆ ಪರಿಸ್ಥಿತಿ ಸಮಾಧಾನಕಾರಕವಾಗುವುದಿಲ್ಲ. ಜನತೆಯ ಮನ್ನಣೆಗೆ ಪಾತ್ರರಾದವರ ಮುಂದಾಳುತನ, ಉಪದೇಶ ಇಂದು ಬೇಕಾಗಿದೆ. ಯುದ್ಧದ ಧ್ಯೇಯಸಾಧನೆಗಾಗಿ, ಸಹಾಯಕ ರಾಷ್ಟ್ರಗಳ ಜಯಕ್ಕಾಗಿ, ನ್ಯಾಯಕ್ಕಾಗಿ, ಪರಸ್ಪರ ಸೌಹಾರ್ದಕ್ಕಾಗಿ, ತತ್ತ್ವಮನ್ನಣೆಗಾಗಿ ಸರಕಾರವು ತನ್ನ ಧೋರಣೆಯನ್ನು ಬದಲಾಯಿಸಬೇಕು. ಬದಲಾಯಿಸುವುದು ನ್ಯಾಯ, ಎಷ್ಟು ಶೀಘ್ರವೋ ಅಷ್ಟು ಶುಭ!

ಹಂಚಿದ ಹೊಣೆಗಾರಿಕೆ

ಸದ್ಯದ ಪುಂಡಾಟಿಕೆ ಕಾಂಗ್ರೆಸಿಗೆ ಇಷ್ಟವಿದೆಯೊ ಇಲ್ಲವೊ ಎಂಬುದು ಅಪ್ರಸ್ತುತ ಪ್ರಶ್ನೆ. ಕಾಂಗ್ರೆಸಿಗೆ ತನ್ನ ಕಾರ್ಯಕ್ರಮವನ್ನು ಹೇಳುವ ಅವಕಾಶವಿದ್ದಿರಲಿಲ್ಲ; ಅದನ್ನು ಕಲ್ಪಿಸುವುದು ಒಳ್ಳೆಯದಲ್ಲ. ಇದಲ್ಲದೆ ಈ ಪುಂಡಾಟಿಕೆಯನ್ನು ಕಾಂಗ್ರೆಸಿಗೆ ತಡೆಯುವುದೂ ಶಕ್ಯವಿಲ್ಲ; ಯಾಕೆಂದರೆ ಎಲ್ಲ ಮುಂದಾಳುಗಳು ಬಂಧನದಲ್ಲಿದ್ದಾರೆ. ರಾಜಕೀಯ ಪ್ರಶ್ನೆಯ ವಿಷಯವಾಗಿ ಕಾಂಗ್ರೆಸು ಸರಕಾರಕ್ಕೂ ಮಿಕ್ಕ ಭಾರತೀಯ ಪಕ್ಷಗಳಿಗೂ ತನ್ನ ಅಭಿಪ್ರಾಯವನ್ನು ಸ್ಪಷ್ಟವಾಗಿ ವ್ಯಕ್ತಪಡಿಸಿದೆ. ಸರಕಾರದವರೊಡನಾಗಲಿ ಮಿಕ್ಕವರೊಡನಾಗಲಿ ಅದನ್ನು ಚರ್ಚಿಸಲು (ಕಾಂಗ್ರೆಸಿನ ಇಷ್ಟೆ ಇದ್ದರೂ) ಕಾಂಗ್ರೆಸಿಗೆ ಸರಕಾರವೆ ಅವಕಾಶವನ್ನು ಕೊಟ್ಟಿಲ್ಲ. ಹೀಗಿರುವಾಗ ಕಾಂಗ್ರೆಸಿನ ಹೆಸರಿನಿಂದ ತಪ್ಪು-ತಡೆ, ಹೊಣೆ-ಹಂಚಿಕೆ, ವಾದ-ಅಪವಾದ ಇವುಗಳನ್ನು ಮಾಡುವುದೂ ಅಷ್ಟೇ ಅಪ್ರಸ್ತುತವೆನಿಸುವುದು. ಕಾಂಗ್ರೆಸಿನ ಧೋರಣೆಯನ್ನು ಒಪ್ಪದಿದ್ದರೂ ಆ ಧ್ಯೇಯವನ್ನು ಒಪ್ಪುವ ಅನೇಕ ಪಕ್ಷಗಳಿವೆ. ಇಂದಿನ ಸ್ಥಿತಿಯಲ್ಲಿ ಮುಂದಾಗಿ ಸರಕಾರವನ್ನೂ ಜನತೆಯನ್ನೂ ಪರಸ್ಪರ ವಿಶ್ವಾಸದಿಂದ ನಡೆಯಿಸುವುದು ಈ ಪಕ್ಷಗಳ ಹೊಣೆಯಾಗಿದೆ. ಕೇವಲ ಕಾಂಗ್ರೆಸಿಗೂ ತಮಗೂ ಎಲ್ಲಿ ಭಿನ್ನಾಭಿಪ್ರಾಯವಿದೆ ಎಂಬುವರ ಉಪನ್ಯಾಸ ಈಗ ಬೇಡವಾಗಿದೆ. (೧) ದೇಶಕ್ಕೆ ಸ್ವಾತಂತ್ರ್ಯ, (೨) ಸರ್ವಾಧಿಕಾರಿತ್ವದ ನಾಶ, (೩) ದೇಶದ ಯುದ್ಧಶಕ್ತಿಯ ಹೆಚ್ಚುವಿಕೆ— ಈ ಮೂರು ಮಹತ್ತ್ವದ ಮಾತುಗಳಿಗಾಗಿ ಕಾಂಗ್ರೆಸಿನೊಡನೆ ಒಮ್ಮತವಿರುವುದಾದರೆ, ಈ ಪಕ್ಷಗಳು ಅಂತಹ ವಿಶಾಲದೃಷ್ಟಿಯಿಂದಲೆ ಮುಂದಾಗಬೇಕು.

ಪಕ್ಷಾತೀತರು

ಕಳೆದ ಒಂದೆರಡು ವರ್ಷಗಳಿಂದ ಶ್ರೀಯುತರಾದ ಸಪ್ರು-ಜಯಕರರ ನೇತೃತ್ವದಲ್ಲಿ ಪಕ್ಷಾತೀತ (non-party) ಮುಂದಾಳುಗಳು ಸೇರಿದ್ದಾರೆ. 'ಪಕ್ಷದ ದುರಭಿಮಾನಕ್ಕಾಗಿ ದೇಶದ ಪ್ರಗತಿ ತಡೆದಿದೆ' ಎಂಬ ವಿಚಾರದಿಂದ ಇವರು ಪಕ್ಷಾಭಿಮಾನದಿಂದ ಹೊರಗಾದರು. ದೇಶಕ್ಕೆ ಗಂಡಾಂತರ ಇಲ್ಲವೆ ಬಿಕ್ಕಟ್ಟಿನ ಪ್ರಸಂಗ ಬಂದಾಗ ಒಳಗಿಂದೊಳಗೆಯೆ ಇವರು ಸಹಾಯಕವಾಗಿಯೂ ಉಪಯುಕ್ತವಾಗಿಯೂ ವರ್ತಿಸಿದ್ದುಂಟು. ಇಂದಿನ ಸಮಯದಲ್ಲಿ ನಮ್ಮ ದೃಷ್ಟಿ ಮೊದಲು ಸಪ್ರು-ಜಯಕರರ ಕಡೆಗೆ ಹೊರಳುವುದು ಸಹಜವಿದೆ. ಯಾವ ರೀತಿಯಿಂದಾದರೂ ಇವರು ಕಾಂಗ್ರೆಸ್-ಸರಕಾರಗಳಲ್ಲಿ ಸಂಧಾನವನ್ನು ತರಲು ಮುಂದಾಗಬಹುದೆಂಬ ಆಶೆ ಇದ್ದಿತು; ಆದರೆ ಸರ್ ತೇಜಬಹಾದ್ದೂರ್ ಸಪ್ರು ಅವರು, ಸದ್ಯದ ಪರಿಸ್ಥಿತಿಯಲ್ಲಿ ತಮಗೆ ಏನು ಮಾಡಲೂ ಶಕ್ಯವಿಲ್ಲವೆಂದು ಸ್ಪಷ್ಟವಾಗಿ ಹೇಳಿದ್ದಾರೆ! ಯಾಕೆ? ಸಂಧಾನಕ್ಕಾಗಿ ಎರಡೂ ಪಕ್ಷಗಳ ಒಲವಿಲ್ಲವೆಂದು ಅವರ ಅಭಿಪ್ರಾಯ. ಆಲ್ ಇಂಡಿಯಾ ಕಾಂಗ್ರೆಸ್ ಸಮಿತಿಯು ತನ್ನ ನಿರ್ಣಯದಲ್ಲಿಯೆ ಸಂಧಾನಕ್ಕಾಗಿ ಮಹಾತ್ಮರಿಗೆ ಅವಕಾಶವನ್ನೂ ಅಧಿಕಾರವನ್ನೂ ಕೊಟ್ಟುದು ಸಪ್ರುಮಹಾಶಯರಿಗೆ ಗೊತ್ತಿಲ್ಲವೆಂತಲ್ಲ. ಆದರೆ ಸರಕಾರವೆ ಸಂಧಾನಕ್ಕೆ ಸಿದ್ಧವಿಲ್ಲ ಎಂದು ಅವರ ಅಭಿಪ್ರಾಯ. ಇದು ನಿಜವಿದ್ದರೆ ಸರಕಾರದ ಹೊಣೆ ಇನ್ನಿಷ್ಟು ಭಾರವಾಗುವುದು. ವೈಸರಾಯರ ಉಪದೇಶಕರಲ್ಲಿ ಜನತೆಗಿದ್ದ ಅವಿಶ್ವಾಸ ಬಲಗೊಳ್ಳುವುದು.

ಪ್ರಾಗತಿಕರು

ಕೇವಲ ರಾಜಕಾರಣವನ್ನೇ ಮುಂದಿಟ್ಟುಕೊಂಡ ಇನ್ನೊಂದು ಪಕ್ಷವೆಂದರೆ ಪ್ರಾಗತಿಕರ (Liberals) ದು. ಈ ಪಕ್ಷದಲ್ಲಿ ಎಲ್ಲರೂ ಮುಂದಾಳುಗಳೆ ಎನಿಸಿದರೂ ಅವರ ಯೋಗ್ಯತೆಗೆ ಅದು ಧಕ್ಕೆತರುವಂತಹ ಮಾತಲ್ಲ. ಆದರೆ ಇಂದು ಇವರಲ್ಲಿ ಅನೇಕರು ಕಾಂಗ್ರೆಸನ್ನು ಬೈಯುವ ತಪ್ಪು ದಾರಿಯನ್ನು ಹಿಡಿದಿದ್ದಾರೆ. (ಒಂದು ದೃಷ್ಟಿಯಿಂದ ಎದುರಾಳಿಯು ಉತ್ತರ ಕೊಡಲಾರದ ಸ್ಥಿತಿಯಲ್ಲಿದ್ದಾಗ, ಅವನನ್ನು ಟೀಕಿಸುವುದು ಮನಸ್ಸಿನ ನೀಚತನವನ್ನು ವ್ಯಕ್ತಪಡಿಸುವುದೆಂದು ಹೇಳಬಹುದು.) ಕಾಂಗ್ರೆಸಿನ ಮೇಲೆ ಆರೋಪವನ್ನಿರಿಸುವುದಾಗಲಿ, ಕಾಂಗ್ರೆಸಿನಿಂದ ಮತಭೇದವನ್ನು ತೋರಿಸುವುದಾಗಲಿ ಹೇಗೆ ಅಪ್ರಸ್ತುತ ಎಂಬುದನ್ನು ನಾವು ಮೇಲೆಯೆ ಹೇಳಿದ್ದೇವೆ. ಇಂದಿನ ಪುಂಡಾಟಿಕೆಯನ್ನು—ಹೊರಗಿದ್ದರೆ—ಕಾಂಗ್ರೆಸಿನ ಮುಂದಾಳುಗಳು ಎಲ್ಲರಿಗಿಂತ ಕಠೋರವಾಗಿ ಖಂಡಿಸುತ್ತಿದ್ದರೆಂಬ ವಿಶ್ವಾಸ ನಮಗಿದೆ; ಇಷ್ಟೇಕೆ—ಅದನ್ನು ಕ್ರಿಯೆಯಿಂದ ಎದುರಿಸಲು ಕೂಡ ಅವರು ಸಿದ್ಧರಾಗುತ್ತಿದ್ದರು. ಹೀಗಿದ್ದು 'ಊರಿನಾ ಬೈಯುವ ಮುದುಕಿ' ಯಂತೆ ಯಾರೂ ವರ್ತಿಸಬೇಕಾಗಿಲ್ಲ. ಇನ್ನು ಕೆಲವುಪ್ರಾಗತಿಕರು ಸರಕಾರದ ದಬ್ಬಾಳಿಕೆಯನ್ನೂ ನಿಷೇಧಿಸುತ್ತಿದ್ದಾರೆ. ಆದರೇನು? ಕೇವಲ ನಿಷೇಧದಿಂದ ಸರಿಪಡುವಂತಹ ಸ್ಥಿತಿ ಈಗಿಲ್ಲೆಂಬುದನ್ನು

ಅರಿತೂ ಇವರು ಕಾರ್ಯೋನ್ಮುಖರಾಗದಿದ್ದರೆ ದೇಶಕ್ಕೆ ಇವರಿಂದಾಗುವ ಸಹಾಯವೇನು ?

ಜಾತಿಯ 'ಜಂಗಡ' ಗಳು

ರಾಜಕೀಯ ಪಕ್ಷಗಳನ್ನುಳಿದು ಇನ್ನೆರಡು ಪಕ್ಷಗಳಿವೆ—ಅಥವಾ 'ಜಂಗಡಗಳು' ಎನ್ನೋಣ. ಆದರೆ ಇವು ದೇಶಕ್ಕಿಂತ ಜಾತಿಗೇ ಹೆಚ್ಚು ಮಹತ್ತ್ವ ಕೊಟ್ಟುದರಿಂದ, ವೈಶಿಷ್ಟ್ಯಕ್ಕಾಗಿ ಇವುಗಳನ್ನು 'ಜಂಗಡ' ಎಂದು ಕರೆಯುವುದೆ ಯೋಗ್ಯವಾಗುವುದು. ಒಂದು, ಹಿಂದು ಮಹಾಸಭೆ; ಇನ್ನೊಂದು, ಮುಸ್ಲಿಂ ಲೀಗ. ಒಂದು ದೃಷ್ಟಿಯಿಂದ ಇವೆರಡೂ ಕಾಂಗ್ರೆಸಿನ ಶಾಖೆಗಳು. ಕಾಂಗ್ರೆಸಿನಂತಹ ಸಂಸ್ಥೆಯಲ್ಲಿ ಸನ್ಮಾನವನ್ನಾಗಲಿ ಸಂರಕ್ಷಣೆಯನ್ನಾಗಲಿ ಪಡೆದುಕೊಳ್ಳದ ಸ್ವಾಭಿಮಾನಿಗಳೇ ಇವುಗಳ ಆಧಾರಸ್ತಂಭರು. ಇತ್ತೀಚೆಗೆ ತಾವೂ ಕಾಂಗ್ರೆಸಿನಷ್ಟೆ ಮಹತ್ತ್ವದುವೆಂದು ತೋರಿಸಿಕೊಳ್ಳಲು ಇವು 'ಹಿಂದುಸ್ತಾನಕ್ಕೆ ಸ್ವಾತಂತ್ರ್ಯ ಬೇಕು' ಎಂಬ ತತ್ತ್ವವನ್ನು ಸಾರುತ್ತಿವೆ. ಆ ತತ್ತ್ವ ಗೌಣ. ಮುಖ್ಯವಾಗಿ ಈ ಸಂಸ್ಥೆಗಳು ಆಯಾ ಜಾತಿಗಳ 'ಸಂರಕ್ಷಣೆ' ಯನ್ನೇ ಧ್ಯೇಯವಾಗಿರಿಸಿಕೊಂಡಿವೆ. ಇಂತಹ ಸಂಸ್ಥೆಗಳಿಂದ ಈ ಪರಿಸ್ಥಿತಿಯಲ್ಲಿ ಸಹಾಯವನ್ನಾಗಲಿ ಸತ್ಕಾರ್ಯವನ್ನಾಗಲಿ ಆಶಿಸುವುದೆ ಮೋಸವಾಗುವುದು. 'ನಾವು ಕಾಂಗ್ರೆಸಿನ ಚಳವಳಕ್ಕೆ ಸಹಾಯವನ್ನೂ ಕೊಡುವುದಿಲ್ಲ, ವಿರೋಧವನ್ನೂ ಹೂಡುವುದಿಲ್ಲ' ಎಂದು ಹಿಂದು ಮಹಾಸಭೆಯ ಪತಿಯಿಂದ ಜಾಣತನದ ಪ್ರದರ್ಶನ! 'ದೇಶವನ್ನು ಎರಡಾಗಿಸುವ ಪಾಕಿಸ್ತಾನವನ್ನು ಒಪ್ಪುವವರಿಗೆ ನಾವು ರಾಷ್ಟ್ರೀಯ ಸರಕಾರವನ್ನು ಸ್ಥಾಪಿಸಲು ಸಹಾಯಕರಾಗುವೆವು' ಎಂದು ಲೀಗದ ಬಣಜಿಗತನ! ಇವರಿಬ್ಬರಿಗೂ ದೇಶಕ್ಕಿಂತ ಜಾತಿಯನ್ನು ರಕ್ಷಿಸುವುದೆ ಮುಖ್ಯವಾದುದರಿಂದ, ದೇಶದ ಸ್ವಾತಂತ್ರ್ಯಸಂಪಾದನೆಗಾಗಿ ತ್ಯಾಗಬುದ್ಧಿಯೆ ಮೂಡುವಂತಿಲ್ಲ. ಕಾಂಗ್ರೆಸು ಪಾಕಿಸ್ತಾನವನ್ನು ಒಪ್ಪಿದರೆ ಲೀಗದ ಸಹಕಾರ; ಪಾಕಿಸ್ತಾನವನ್ನು ಒದ್ದರೆ ಮಹಾಸಭೆಯ ಸಹಕಾರ! ಈ ಸವತಿ-ಮನೋವೃತ್ತಿಗೆ ಕಾಂಗ್ರೆಸು ಇದುವರೆಗೆ ಬಲಿ ಬಿದ್ದಿಲ್ಲ; ಇನ್ನು ಬೀಳುವ ಲಕ್ಷಣಗಳಿಲ್ಲ!

ಅಂತೂ ಇಂತೂ—

ಹೀಗಾಗಿ ಸದ್ಯಕ್ಕೆ ಜನತೆಗೆ ದಿಕ್ಕುಕಾಣದಂತಾಗಿದೆ. ಸರಕಾರದ ದಬ್ಬಾಳಿಕೆಯಿಂದ ಅಸಂತೋಷವೂ ಅಶಾಂತಿಯೂ ಹೆಚ್ಚ ಬಹುದಾಗಿದೆ; ಕಾಂಗ್ರೆಸು ಕಾರಾಗೃಹದಲ್ಲಿದ್ದುದಕ್ಕೆ ಸ್ವಾರ್ಥಸಾಧುಗಳ ಜಂಗಡ ಬೆಳೆಯಬಹುದಾಗಿದೆ. ದಬ್ಬಾಳಿಕೆಯಿಂದಾಗಲಿ ಸ್ವಾರ್ಥಸಾಧುಗಳ ಸಲಹೆಯಿಂದಾಗಲಿ ದೇಶಕ್ಕೂ ಹಿತವಿಲ್ಲ, ಸರಕಾರಕ್ಕೂ ಹಿತವಿಲ್ಲ. ಇಂದಿನ ಈ ಪರಿಸ್ಥಿತಿಗೆ ಸರಕಾರವೂ ಕಾಂಗ್ರೆಸೂ ಇಬ್ಬರೂ ಆಯಾ ಪಟ್ಟಿಗೆ ಹೊಣೆಗಾರರು. ಮುಖ್ಯವಾಗಿ ಇಬ್ಬರಿಗೂ ಮಹತ್ತ್ವದ್ದಾದ ಸರ್ವಾಧಿಕಾರನಾರವು ಫಲಕಾರಿಯಾಗಬೇಕಾದರೆ, ಇಬ್ಬರೂ ಸಂಧಾನವನ್ನು ಮಾಡಿಕೊಳ್ಳುವುದೆ ಅನಿವಾರ್ಯವಾಗಿದೆ. 'ಹಿಂದುಸ್ತಾನದ ಸ್ವಾತಂತ್ರ್ಯವು ಯುದ್ಧದ ತರುವಾಯ ಬಿಟ್ಟದ್ದಲ್ಲ' ಎಂಬ ಬ್ರಿಟಿಶರು ದೂರದೃಷ್ಟಿಯಿಂದ—ಧ್ಯೇಯಪರ ವಿಶಾಲಬುದ್ಧಿಯಿಂದ—ಹಿಂದುಸ್ತಾನಕ್ಕೆ ಸಾರ್ವಜನಿಕವಾದ ಮಾನ್ಯವೆನಿಸುವ ಮುಂದಾಳುಗಳಲ್ಲಿ ಹೆಚ್ಚು ಆದರವನ್ನೂ ವಿಶ್ವಾಸವನ್ನೂ ತೋರಿಸುವುದಗತ್ಯವಾಗಿದೆ; ಆ ರೀತಿ ತೋರಿಸಿದರೆ ಮಹಾತ್ಮರು ನಿಸ್ಸಂದೇಹವಾಗಿ ಬ್ರಿಟಿಶ್ ನೀತಿಯಲ್ಲಿ, ಮಿತ್ರರಾಷ್ಟ್ರದವರ ನ್ಯಾಯಬುದ್ಧಿಯಲ್ಲಿ ವಿಶ್ವಾಸವನ್ನಿಡುವರು. ಪುಂಡಾಟಿಕೆಯಿಂದ ಪರಿಸ್ಥಿತಿ ಹದಗೆಟ್ಟು ಪರಸ್ಪರ ಅವಿಶ್ವಾಸ ಬೆಳೆಯುವ ಮುಂಚೆ ಸರಕಾರದವರು ತಮ್ಮ ನೀತಿಯನ್ನು ಬದಲಾಯಿಸುವುದಗತ್ಯ ಎಂದು ನಮ್ಮ ಅಭಿಪ್ರಾಯ.

ಬ್ರಿಟಿಶರಲ್ಲಿಯ ಮನುಷ್ಯತ್ವ

ಇದು ಬರಿ ನಮ್ಮ—ಭಾರತೀಯರ—ಅಭಿಪ್ರಾಯವಷ್ಟೇ ಅಲ್ಲ. ಭಾರತವನ್ನು ಸರಿಯಾಗಿ ತಿಳಿದುಕೊಂಡ ಯಾವುದೇ ಸರಳ ಭಾರತೀಯೇತರರೂ ಒಪ್ಪತಕ್ಕಂತಹ ಮಾತಾಗಿದೆ. ಈ ರೀತಿಯ ಅಸಂತೋಷವು ಎಲ್ಲೆಡೆಯಲ್ಲಿಯೂ ಹಬ್ಬಿದ ಮೇಲೆ, ಮದ್ರಾಸಿನ ಕ್ರಿಶ್ಚನ್ ಸ್ತ್ರೀ ಕಾಲೇಜಿನ ಇಂಗ್ಲಿಷ್ ಪ್ರಾಧ್ಯಾಪಿಕೆಯರಾದ ಮಿಸ್ **ಮಾರ್ಜೋರಿ ಸಾಯಿಕ್ಸ್** ಎಂಬ ಬ್ರಿಟಿಷ್ ಮಹಿಳೆ ತೆಗೆದ ಒಂದು ಪ್ರಕಟನೆಯೇ ಮೇಲಿನ ಮಾತಿಗೆ ಒಂದು ಜೀವಂತ ಸಾಕ್ಷಿಯಾಗಿದೆ. ಅವರ ಮಾತನ್ನೇ ಕೇಳಿರಿ: "ಭಾರತದ ಕಾಂಗ್ರೆಸ್ ಮುಂದಾಳುಗಳನ್ನು ಸೆರೆಯಲ್ಲಿಡುವುದು, ಪತ್ರಿಕೆಗಳ ಪ್ರಕಟನಾ ಸ್ವಾತಂತ್ರವನ್ನು ಕಸಿದುಕೊಳ್ಳುವುದು—ಇವೇ ಮೊದಲಾದ ಸರಕಾರದ ರೀತಿ-ನೀತಿಗಳ ಬಗ್ಗೆ ಬ್ರಿಟಿಷ್ ಸಮಾಜವು ಮೌನತಾಳಿರುವುದರಿಂದ, ಇವುಗಳಿಗೆ ಆ ಸಮಾಜದ ಸಮ್ಮತಿಯಿದೆಯೆಂಬ ತಪ್ಪು ತಿಳಿವಳಿಕೆಯಾಗಲು ಅವಕಾಶವಿದೆ. ಆದರೆ ಈ ತಿಳಿವಳಿಕೆ ಸರಿಯಾಗಿಲ್ಲ. ಅಲ್ಲದೆ ಈ ಕಷ್ಟಕಾಲವನ್ನು ತಂದೊಡ್ಡಿದುದರಿಂದ ನಮ್ಮಲ್ಲಿಯ ಎಷ್ಟೋ ಜನರು ದುಃಖವನ್ನು ವ್ಯಕ್ತಮಾಡಿದ್ದಾರೆ. ಯಾಕೆಂದರೆ ಕಾಂಗ್ರೆಸಿನ ಬೇಡಿಕೆಗಳನ್ನು ಶಾಂತ ಮತ್ತು ಸಹಾನುಭೂತಿಯಿಂದ ವಿಚಾರಿಸಿದ್ದರೆ ಈ ದುರ್ಧರ ಪ್ರಸಂಗ ಒದಗುತ್ತಿರಲಿಲ್ಲ. ಭಾರತದ ಮೇಲೆ ಸಂಪೂರ್ಣ ವಿಶ್ವಾಸವಿಟ್ಟು, ಅವರಿಗೆ ಜವಾಬ್‌ದಾರ್ ಅಧಿಕಾರವನ್ನು ಕೊಡುವುದೊಂದೇ ದಾರಿಯಿದೆ. ಸರಕಾರದವರು ಈ ದಾರಿಯನ್ನು ಕೈಕೊಳ್ಳುವಂತೆ ನನ್ನ ಬ್ರಿಟಿಷ್ ಬಾಂಧವರು ಮಾಡಬೇಕೆಂದು ಅವರಲ್ಲಿ ನನ್ನ ಬೇಡಿಕೆಯಿದೆ" ಇದನ್ನು ನೋಡಿದರೆ, ಸರಕಾರದವರು ತಮ್ಮ ಈ ನೀತಿಯನ್ನು ಬದಲಾಯಿಸಬೇಕೆಂಬುದು ಸರ್ವಸಮ್ಮತವಾದುದು ಮತ್ತು ಅತ್ಯಾವಶ್ಯಕವಾದುದೆಂದು ಎಲ್ಲರೂ ಮನಗಾಣಬಹುದು.

ದಿ ಯುನಾಯಿಟೆಡ್ ಕರ್ನಾಟಕ ಇನ್ಸೂರೆನ್ಸ್ ಕಂಪನಿ, ಲಿಮಿಟೆಡ್

ಹೆಡ್ ಆಫೀಸ್ **ಧಾರವಾಡ.**

★ **ವಿಮೆ ಮಾಡುವ ಅನುಕೂಲವುಳ್ಳ ಕರ್ನಾಟಕಸ್ಥರು, ಈ ಭರದಿಂದ ಬೆಳೆಯುತ್ತಿರುವ ಕನ್ನಡ ಕಂಪನಿಯ ಪಾಲಿಸಿಯನ್ನೇ ಪಡೆಯಬೇಕು !**

★ ಮೊದಲನೆಯ ಮೌಲ್ಯಮಾಪನದಲ್ಲಿ (Valuation) ಲಾಭವನ್ನು ಹಂಚುವುದಲ್ಲದೆ, ಹೊಸ ವಿಮಾಕಾಯಿದೆಯ ನಿರ್ಬಂಧಗಳಿಗೆ ತಕ್ಕಂತೆ ನಡೆದು, ಎಲ್ಲ ಪಾಲಿಸಿದಾರರ ಪ್ರೋತ್ಸಾಹಕ್ಕೂ ಪಾತ್ರವಾಗಿದೆ.

★ ಮರಣಹೊಂದಿದ ಪಾಲಿಸಿದಾರರ ವಾರಸದಾರರಿಗೆ ವಿಲಂಬವಿಲ್ಲದೆ ಹಕ್ಕಿನ ಹಣ (Claim) ವನ್ನು ಸಲ್ಲಿಸಿರುವುದರಿಂದ, ಎಲ್ಲರ ನಂಬಿಗೆಗೂ ತಕ್ಕುದಾಗಿದೆ.

★ ಕರ್ನಾಟಕದ ಏಳ್ಗೆಗಾಗಿ ಹಂಬಲಿಸುವವರೂ ಕನ್ನಡನಾಡಿನ ಹಿತಚಿಂತಕರೂ, ಇದೇ ಕಂಪನಿಯ ಪಾಲಿಸಿಗಳನ್ನೂ ಪಾಲುಗಳನ್ನೂ ಕೊಂಡುಕೊಳ್ಳಲೇ ಬೇಕು.

ಏಜಂಟರಿಗೆ ಧಾರಾಳವಾದ ಕಮಿಶನ್ ಕೊಡಲಾಗುವುದು.

ವಿಶೇಷವಿವರಕ್ಕೆ ಬರೆಯಬೇಕು :— ಎಮ್. ಗೋವರ್ಧನರಾವ್, ಮ್ಯಾನೇಜರ್

The United Karnatak Insurance Co. Ltd., DHARWAR

ಗೀತಾಗಾಂಭೀರ್ಯ

ಶ್ರೀಕೃಷ್ಣನ ಸಮಾಜಧರ್ಮ

ಬರೆದವರು : ‘ಶ್ರೀರಂಗ’

“ಸಾವಿರಾರು ವರ್ಷಗಳ ಹಿಂದೆ ಪ್ರಸ್ಥಾನತ್ರಯಿಗಳ ಮೇಲೆ ಇಪ್ಪತ್ತೊಂದು ಭಾಷ್ಯಗಳಿದ್ದುವೆಂಬ ತಿಳಿದು ಬರುತ್ತದೆ. ಅವುಗಳಲ್ಲಿ ಈ ಗ್ರಂಥಕಾರರ ವಿಚಾರಗಳಂತಹ ವಿಚಾರಗಳು ಕಂಡುಬರುತ್ತವೆ...........

“....ಪರಂಪರೆ, ಸಂಪ್ರದಾಯ, ಧರ್ಮ, ಪರಮಾತ್ಮ, ಭಕ್ತಿ, ಪ್ರಕೃತಿ, ಪುರುಷ, ಸೃಷ್ಟಿಕ್ರಮ ಮೊದಲಾದುವುಗಳಿಂದ ‘ಶ್ರೀರಂಗ’ ಅಲಿಪ್ತರಾಗಿದ್ದು, ಗೀತೆಯಂತಹ ಗ್ರಂಥದ ಬಗ್ಗೆ ಬರೆದದ್ದು ಒಂದು ರೀತಿಯಿಂದ ಅಪೂರ್ವವೆಂದೇ ಹೇಳಬಹುದು.” —ಕರ್ಮವೀರ ಹುಬ್ಬಳ್ಳಿ

ಬೆಲೆ ಸಾದಾಪ್ರತಿ ೧-೦-೦; ಉತ್ತಮಪ್ರತಿ ೧-೮-೦

ಬೇಕಾದವರು ಗ್ರಂಥಕರ್ತರಿಗಾಗಲಿ, ಜಯಂತಿ ಕಾರ್ಯಾಲಯಕ್ಕೆ ಆಗಲಿ ಬರೆದು ತರಿಸಿಕೊಳ್ಳಬೇಕು.

ವಿಮಾನದಾಳಿ !

ಭವಿಷ್ಯ ಹೇಗಿದೆಯೊ ಬಲ್ಲವರಾರು ?

ಭಾರತೀಯರಿಗೂ ಆ ವಿಷಮಸಂದರ್ಭ ಒದಗಬಹುದಾಗಿದೆ !

ಆದರಿಂದ ಸುರಕ್ಷಿತರಾಗುವುದಕ್ಕಾಗಿ

“ವಿಮಾನ ದಾಳಿ ಸಂರಕ್ಷಣೆ”

ಎಂಬ ಪುಸ್ತಕವನ್ನೋದಿರಿ !

ಬರೆದವರು ಟಿ. ಆರ್. ಭಾಗವತ, ಬಿ.ಎ.

ಕ್ರಾ. ಅ. ೮೦ ಪುಟಗಳು. ಬೆಲೆ ೦-೬-೦

ಬೇಕಾದವರು ಜಯಂತಿ ಕಾರ್ಯಾಲಯಕ್ಕೆ ಬರೆದು ತರಿಸಿಕೊಳ್ಳಬೇಕು !

‘ಆನಂದಕಂದ’ರ ಗ್ರಂಥಗಳು

ಸುದರ್ಶನ	(ಸಾ. ಕಾದಂಬರಿ)	೦-೧೪-೦
ರಾಜಯೋಗಿ	(ಐ. ಕಾದಂಬರಿ)	೧-೦-೦

ಇವಲ್ಲದೆ ಅವರ ಯಾವ ಪುಸ್ತಕ ಬೇಕಾದರೂ

‘ಜಯಂತಿ’ ಕಾರ್ಯಾಲಯಕ್ಕೆ

ಬರೆದು ತರಿಸಿಕೊಳ್ಳಬೇಕು!

ಜಯಂತಿ ಸಣ್ಣಕತೆಗಳ ಮೇಲಾಟ

(೫ ನೆಯ ವರ್ಷಕ್ಕಾಗಿ)

ಕಳೆದ ಸಲದಂತೆ ಈ ಸಲಕ್ಕೂ ಸಣ್ಣ ಕತೆಗಳ ಸ್ಪರ್ಧೆಯನ್ನು ಏರ್ಪಡಿಸಲಾಗಿದೆ.
ಕತೆಗಾರರೆಲ್ಲರೂ ಅವಶ್ಯವಾಗಿ ಭಾಗವಹಿಸಬೇಕು.

* ಬಹುಮಾನಗಳು *

೧ ನೆಯದು ೧೫ ರೂಪಾಯಿ ; ★ ೨ ನೆಯದು ೮ ರೂಪಾಯಿ !

೩ ನೆಯದು ೫ ರೂಪಾಯಿ !

೧೯೪೨ ಸಪ್ಟಂಬರ್ ೨೦ ತಾರೀಖಿನೊಳಗಾಗಿ ಮೇಲಾಟದ ಕತೆಗಳು ಬರಬೇಕು.

★ ' ಜಯಂತಿ ' ಸಣ್ಣ ಕತೆಗಳ ಮೇಲಾಟದ ನಿಯಮಗಳು ★

೧. ಕತೆಯು ಸ್ವತಂತ್ರವಾಗಿದ್ದು ಸಾಮಾಜಿಕಸಂಗತಿಯಿಂದ ಕೂಡಿದುದಿರಬೇಕು. ಐತಿಹಾಸಿಕ ಕತೆಗೆ ಈ ಮೇಲಾಟದಲ್ಲಿ ಸ್ಥಾನವಿಲ್ಲ.

೨. ಜಯಂತಿಯ ೫ ಪುಟಗಳಿಗೆ ಮೀರದಷ್ಟು, ಎಂದರೆ ಕೈಬರಹದಲ್ಲಿ ಫೂಲ್ಸ್‌ಕ್ಯಾಪ್ ಅರ್ಧಹಾಳೆಗಳು ೧೦ಕ್ಕೆ ಮೀರದಷ್ಟು ಕತೆಯಿರಬೇಕು.

೩. ಅಂದವಾದ ಸ್ಪಷ್ಟವಾದ ಅಕ್ಷರಗಳಿರಬೇಕಲ್ಲದೆ, ಮಾರ್ಜಿನ್ ಬಿಟ್ಟು ಹಾಳೆಯಲ್ಲಿ ಒಂದೆ ಕಡೆಗೆ ಬರೆದಿರಬೇಕು

೪. ವಯಸ್ಸಿನ ನಿರ್ಬಂಧವಿಲ್ಲ. ಸಣ್ಣವರು ದೊಡ್ಡವರು ಎಲ್ಲರೂ ಇದರಲ್ಲಿ ಭಾಗ ವಹಿಸಬಹುದು.

೫. " ಜಯಂತಿ ಸಣ್ಣ ಕತೆಗಳ ಮೇಲಾಟಕ್ಕಾಗಿ " ಎಂದು ಕೈಬರಹದ ಪ್ರತಿಗಳ ಮೇಲೆ ಸ್ಪಷ್ಟವಾಗಿ ಬರೆಯಬೇಕು.

೬. ಒಬ್ಬರೆ ಲೇಖಕರು ತಮ್ಮ ಎರಡು-ಮೂರು ಕತೆಗಳನ್ನೂ ಮೇಲಾಟಕ್ಕಾಗಿ ಕಳುಹಬಹುದು; ಆದರೆ ಎಲ್ಲ ಬಹುಮಾನಗಳು ಒಬ್ಬರಿಗೇ ದೊರೆಯಲಾರವು.

೭. ಕತೆಯನ್ನು ಕಳುಹಬೇಕಾದ ಕೊನೆಯ ದಿನವೆಂದರೆ ಸಪ್ಟಂಬರ್ ೨೦ನೆಯ ತಾರೀಖು. ಅಕ್ಟೋಬರ್ ಸಂಚಿಕೆಯಲ್ಲಿ ಮೇಲಾಟದ ನಿರ್ಣಯವನ್ನೂ ಬಹುಮಾನ ಪಡೆದ ಕತೆಗಳನ್ನೂ ಪ್ರಕಟಿಸಲಾಗುವುದು.

೮. ಮಿಕ್ಕ ಕತೆಗಳಲ್ಲಿ ಪ್ರಕಟನಾರ್ಹವೆಂದು ಕಂಡುಬಂದ ಕತೆಗಳನ್ನು, ಲೇಖಕರ ಒಪ್ಪಿಗೆ ಪಡೆದು ಜಯಂತಿಯಲ್ಲಿ ಪ್ರಕಟಿಸಲಾಗುವುದು.

೯. ಬಹುಮಾನಕ್ಕೆ ತಕ್ಕ ಕತೆಗಳು ಬಾರದೆ ಇದ್ದಲ್ಲಿ, ಬಹುಮಾನ ಕೊಡದೆ ಇರುವುದಕ್ಕೂ ಬಂದ ಕತೆಗಳಲ್ಲಿ ಒಳ್ಳೆಯದೆಂದು ಎನಿಸಿದುದಕ್ಕೆ ತಕ್ಕ ಮನ್ನಣೆ ಸಲ್ಲಿಸುವುದಕ್ಕೂ ಜಯಂತಿಯ ಸಂಪಾದಕ ಮಂಡಲಿ ತನ್ನ ಕಡೆಗೆ ಅಧಿಕಾರವನ್ನು ಇರಿಸಿಕೊಂಡಿದೆ.

೧೦. ಮೇಲಾಟಕ್ಕಾಗಿ ಕತೆಗಳನ್ನು ಕಳುಹುವವರು ಪ್ರವೇಶಧನವನ್ನೇನೂ ಕೊಡಬೇಕಾಗಿಲ್ಲ. ಕತೆಗಳು ಮರಳಿ ಬೇಕಾದರೆ ಅದಕ್ಕೆ ಅವಶ್ಯವಿದ್ದ ಅಂಚೆಯ ಚೀಟಿ ಕಳುಹಬೇಕು.

ಸಂಪಾದಕರು : ' ಜಯಂತಿ ' ಧಾರವಾಡ

* ಜಯಂತಿಯ ಹಿತಚಿಂತಕರಿಬ್ಬರು ೧ ನೆಯ ೩ ನೆಯ ಬಹುಮಾನದ ವೆಚ್ಚದ ಹೊಣೆ ಹೊತ್ತುದರಿಂದ, ಬಹುಮಾನದ ಬೆಲೆಯನ್ನು ಹೆಚ್ಚಿಸಿರುವುದಲ್ಲದೆ, ಸಂಖ್ಯೆಯನ್ನೂ ಹೆಚ್ಚಿಸಲಾಗಿದೆ; ಅವಧಿಯನ್ನೂ ಬೆಳೆಯಿಸಲಾಗಿದೆ.

Printed by Mr. V. Y. Jathar at the Karnatak Printing Works, Dharwar, and Published for the Proprietc
Jayanti Publications, by M. V. Mellegatti at the Jayanti Office, Dharwar.

ಜಯಂತಿ

ಸ್ಪರ್ಧೆಯ ಪರಿಣಾಮ
ಂದಿನ ಸಂಚಿಕೆಯಲ್ಲಿ.

ಅಕ್ಟೋಬರ್ ೧೯೪೭

ಜಿ. ಭಟ್ಟ
ಸೋಳಕರ ಶ್ರೀಧರರಾಯ
ಕೆ. ಕುಲಕರ್ಣಿ
ಂದ್ರೆ ಲಕ್ಷ್ಮಣರಾಯರು
ತ. ಪಪ್ಪು

ಬೆಲೆ ನಾಲ್ಕಾಣೆ

ಪ್ರತಿತಿಂಗಳ ಮೊದಲನೆಯ ತಾರೀಖಿಗೆ ಪ್ರಕಟವಾಗುವುದು.

ವಾ. ವರ್ಗಣಿ ಅಂಚೆವೆಚ್ಚ ಸೇರಿ ೩—೦—೦ …… ವ್ಹಿ. ಪಿ. ಯಿಂದ ೩-೫-೦ …… ಬಿಡಿಸಂಚಿಕೆಗೆ ೪ ಆಣೆ.

ಸಂಪಾದಕರು

ಚಿಟಗೇರಿ ಕೃಷ್ಣಶರ್ಮರು

೫ನೆಯ ವರ್ಷ	ಅಕ್ಟೋಬರ್ ೧೯೪೨	೫ನೆಯ ಸಂಚಿಕೆ

ಮುಖ್ಯವಿಷಯಗಳ ಪರಿವಿಡಿ

	ಕೂಗುತಲಿದೆ ಕಪಳಿಯು! (ಕವನ)	' ಆನಂದಕಂದ '	೨೦೩
	ಸಂಪಾದಕೀಯ	ಸಂಪಾದಕರು	೨೦೪
	ಮಂಗನ ಮಲ್ಲಿನಾಥತನ	' ಮಲ್ಲಿನಾಥ '	೨೦೫
	ಪ್ಯಾರಿಸ್ ಪಟ್ಟಣದಲ್ಲಿ (ಆತ್ಮಚರಿತ್ರೆಯ ಒಂದು ಅಧ್ಯಾಯ)....	ಶ್ರೀ. ಎಂ. ಪಿ. ಟಿ. ಆಚಾರ್ಯ, ಮುಂಬಯಿ	೨೦೬
	ಸಾದರ ಸ್ವೀಕಾರ	....	೨೧೦
೧೦	ಬೆಳ್ಳಿ (ಸಣ್ಣಕತೆ)	ಶ್ರೀ. ವ್ಹಿ. ಜಿ. ಭಟ್ಟ, ಪುಣೆ	೨೧೧
	ಕುರೂಪದರ್ಶನ (ಸೌಂದರ್ಯಶಾಸ್ತ್ರ)	ಶ್ರೀ. ಖಾನೋಳಕರ ಶ್ರೀಧರರಾಯರು, ಯರವಾಡಾ	೨೧೪
	ಶುನಕ ಮತ್ತು ಜಂಬುಕ (ಕವನ)	ಶ್ರೀ. ಡಿ. ಆರ್. ರಾಮಯ್ಯ, ಬಿ. ಎ. ಬೆಂಗಳೂರು	೨೧೬
	ಅದು ಯಾರ ಸೊತ್ತು ? (ಕವನ)	,,	೨೧೭
೯	ಕಣ್ಮರೆಯಾದ ಕಾಲ್ಮರಿ (ಹರಟೆ)	ಶ್ರೀ. ಎನ್. ಕೆ. ಕುಲಕರ್ಣಿ, ಎಂ. ಎ., ಬಿ. ಟಿ.	೨೧೯
	ಮಾರ್ಷಲ್ ಎಂಬ 'ಮಾರ್ಷಲ್' (ವ್ಯಕ್ತಿಪರಿಚಯ)	ಶ್ರೀ. ಬಸವರಾಜ ಕಟ್ಟೀಮನಿ	೨೨೨
೧೧	ಸರಸೀ ಕೂಡ ಸಿನೇಮಾ (ಒಂದು ಚಿತ್ರಕಥೆ)	ಶ್ರೀ. ಬೇಂದ್ರೆ ಲಕ್ಷ್ಮಣರಾಯರು, ಧಾರವಾಡ	೨೨೫
	ಪೂರ್ವಪ್ರಾಥಮಿಕ ಶಿಕ್ಷಣ (ವಿಚಾರ ಪ್ರಬಂಧ)	ಶ್ರೀ. ಎಸ್. ಎಲ್. ಸುಬ್ರಹ್ಮಣ್ಯಂ, ಮೈಸೂರು	೨೩೧
	ಹಿಂದುಸ್ತಾನವನ್ನು ಸ್ವಾತಂತ್ರ್ಯಕ್ಕಾಗಿ ಸಿದ್ಧಪಡಿಸಿರಿ !	ಶ್ರೀ. ವಾಳ್ವೇಕರ್ ಗುರುರಾಯರು, ಬಿ.ಎ., ಎಲ್ಎಲ್.ಬಿ.	೨೩೪
	ಗುಣಗಾನ (ಕವನ)	ಶ್ರೀ. ಜಿ. ವರದರಾಜರಾವ್, ಬಿ. ಎ.	೨೩೬
೧೨	ವಿಚಿತ್ರ ಮುಖ (ಸಣ್ಣಕತೆ)	ಶ್ರೀ. ಸು. ತ. ಪಪ್ಪು, ಬಿ. ಎ. ಪುಣೆ	೨೩೯
	ಭಾರತೀಯ ಸಂಸ್ಕೃತಿಯು ಆಧ್ಯಾತ್ಮಿಕವಲ್ಲವೆ? (ಉತ್ತರ)....	ಶ್ರೀ. ಗ. ರಾ. ಹೆಗಡೆ, ಬಿ. ಎ. ಠಾಣಾ	೨೪೨
	ಮನೆಯಲ್ಲಿಯೆ ಹೊಲಿಗೆ ಕಲಿಯಿರಿ ! (ನಿಕ್ಕರ್)	ಶ್ರೀ. ಹಳವೇಟೆ ಚಿಂತಾಮಣಿರಾಯರು, ಟಿ.ಸಿ.ಡಿ.	೨೪೫
	ನಗೀಗೆ ನೇವಿದ್ಯ	' ನಕಲೀ ನಾರಾಯಣಾಚಾರ್ರು '	೨೪೬
	ಪುಸ್ತಕ ವಿಮರ್ಶೆ	ಶ್ರೀ. ಬಿ. ಪಿ. ಎಸ್. ರಾವ್ ಮತ್ತು 'ವಸಂತ'	೨೪೭
	ನಾಲ್ಕು ನಿಟ್ಟಿನ ನೋಟ	' ನಿರೀಕ್ಷಕರು '	೨೪೮

ಅಕ್ಟೋಬರ್ ಸಂಚಿಕೆಗೆ ಚಂದಾ ಅವಧಿ ಮುಗಿಯುವ ಚಂದಾದಾರರೆಲ್ಲರೂ ತಂತಮ್ಮ ಚಂದಾಹಣವನ್ನು ಕೂಡಲೆ ಮನಿಯಾರ್ಡರ್ ಮೂಲಕ ಕಳುಹಬೇಕು. ಮುಂದೆ ಚಂದಾದಾರರಾಗಲು ಮನಸ್ಸಿಲ್ಲದವರು, ದಯೆಯಿಟ್ಟು ಕೂಡಲೆ ಕಾಗದ ಬರೆದು ತಿಳಿಸಬೇಕು. ಸಂ. ಜ.

ಜಯಂತಿ

ಸಂಪುಟ ೫ | ೧ನೆಯ ಅಕ್ಟೋಬರ್ ೧೯೪೨ | ಸಂಚಿಕೆ ೫

ಕೂಗುತಲಿದೆ ಕಹಳೆಯು!

★

‘ ಆನಂದಕಂದ ’

೧

ಕೂಗುತಲಿದೆ ಕಹಳೆಯು—
ನವಯುಗ ವೈತಾಳಿಯು !
‘ ಬಾಳಿದು ಕಾಳೆಗದ ಕಣ ’
ಹೇಳುತಿರುವುದಿಂತಾ ಸ್ವನ !
ಕೂಗುತಲಿದೆ ಕಹಳೆಯು !
ನವಯುಗ ವೈತಾಳಿಯು !

೨

“ ಈ ಸ್ಮಶಾನ ಶಾಂತಿಯು—
ಶಾಂತಿಯೆ ಇದು ? ಭ್ರಾಂತಿಯು !
ನಿಮ್ಮೆಲ್ಲರ ಮಾನವತನ....
ಬೇಯುತಲಿದೆ ನೋಡಿರದನ ! ”
ಕೂಗುತಲಿದೆ ಕಹಳೆಯು—
ನವಯುಗವೈತಾಳಿಯು !

೩

“ ಬಿಡಿರಿ ಬಿಡಿರಿ ಹಳೆಯಾಯುಧ,
ಕೊಡಲಿ ಕತ್ತಿ ಬಿಲ್ಲು ಗದ !
ಹೊಸತು ಕಾಲ, ಹೊಸ ಕಾಳಗ !
ಹೊಸ ಕೈದುವ ಹುಡುಕಿರೀಗ ! ”
ಕೂಗುತಲಿದೆ ಕಹಳೆಯು,
ನವಯುಗ ವೈತಾಳಿಯು !

೪

“ ಬೇಡ ಕದನವೆಂದೊರೆವಾ
ಕೇಡುಗಾರನೆಲ್ಲಿರುವ..?
ಹೇಡಿ ಏನ ಬಲ್ಲನವ ?
ನಾಡಿಗೆ ಕಾಳೆಗವೆ ಜೀವ ! ”
ಕೂಗುತಲಿದೆ ಕಹಳೆಯು—
ನವಯುಗ ವೈತಾಳಿಯು !

೫

“ ಬದುಕಿದುದಕೆ ಕುರುಹಾವುದು ?
ಕದನವೆ ಸರಿ, ಬೇರಾವುದು ?
ಬೇಡ ಕದನವೆಂಬ ರೀತಿ—
ಹೇದಿಯುದಿದು ಹೆಣದ ನೀತಿ ! ”
ಕೂಗುತಲಿದೆ ಕಹಳೆಯು,
ನವಯುಗ ವೈತಾಳಿಯು !

೬

“ ಬಲಿದಿರುವುವೆ ಜಾಲಗಳು ?
ಬಳಸಿರುವುವೆ ಬೇಲಿಗಳು ?
ಹರಿದೊಗೆಯಿರಿ ಕೊಳೆತ ಜಾಲ,
ಮುರಿದೇಳಿರಿ ಹುಳಿತ ಬೇಲಿ ! ”
ಕೂಗುತಲಿದೆ ಕಹಳೆಯು
ನವಯುಗ ವೈತಾಳಿಯು !

೭

“ ಗೆಳೆಯರಂತೆ ನಟಿಸುತೆ ಹಗೆ-
ಬಳಗ ನಿಮ್ಮ ಬೀಡಿನೊಳಗೆ,
ತಿಂದು ತೇಗಿ ಬಾಳುತಿದೆ,
ಕೊಂದೆಲ್ಲರನಾಳುತಿದೆ ! ”
ಕೂಗುತಲಿದೆ ಕಹಳೆಯು,
ನವಯುಗ ವೈತಾಳಿಯು !

೮

“ ಅಕ್ಕ—ತಾಯಿ—ತಂಗಿಯರು
ಅಕ್ಕರೆಯಾ ಅಂಗನೆಯರು
ನಿಮ್ಮ ಬಲುಹು ಬೀರತನ—
ನೋಡಿ ನಲಿವರೆಂಬರು ದಿನ ! ”
ಕೂಗುತಲಿದೆ ಕಹಳೆಯು—
ನವಯುಗ ವೈತಾಳಿಯು !

೯

“ ಕೇಳಿ ಕೇಳಿ, ಕಹಳೆಯ !
ಕೆಲಸೊಳೆ ಇದೆ ಪಾಳೆಯ !
ಕಾಳೆಗಕೇಳ್ದವ ಬಾಳುವ
ಏಳದಿದ್ದರವ ಬೀಳುವ ”
ಕೂಗುತಲಿದೆ ಕಹಳೆಯು—
ನವಯುಗ ವೈತಾಳಿಯು !



ವಿಧಾಯಕ—ವಿಧ್ವಂಸಕ ಕ್ಷಾತ್ರಬಲ

ಕಳೆದ ಸಂಚಿಕೆಯ ಸಂಪಾದಕೀಯದಲ್ಲಿ, ನಮ್ಮ ನಾಡಿನಲ್ಲಿ ಹಾಗೂ ಹೊರನಾಡಿನಲ್ಲಿ ನಡೆಯಿಸಿರುವ ಪ್ರಳಯದ ಕೈಚಳಕದ ಬೇರೆ ಬೇರೆ ಎರಡು ವಾಸ್ತವಚಿತ್ರಗಳನ್ನು ತೋರಿಸಲಾಗಿದ್ದಿತು. ಅಲ್ಲಿ ಕೇವಲ ಚಿತ್ರದರ್ಶನಪದ್ಧತಿಯಲ್ಲದೆ ಪರಿಣಾಮ-ಪ್ರಯೋಜನಗಳ ಬಗ್ಗೆ ನಮ್ಮ ಅಭಿಪ್ರಾಯವನ್ನೇನೂ ಬರೆದಿರಲಿಲ್ಲ. ಹೊರನಾಡಿನ ಪ್ರಳಯದ ಪರಿಣಾಮ-ಪ್ರಯೋಜನಗಳ ಬಗೆಗೆ ನಮಗೆ ಏನು ಬರೆದರೂ ಯಾರ ತಡೆಯೂ ಇಲ್ಲ, ಯಾವ ಹೆದರಿಕೆಯೂ ಇಲ್ಲ. ನಮ್ಮ ನಾಡಿನ ಪ್ರಳಯದ ಬಗೆಗೆ ನಿಜವಾದ ಅಭಿಪ್ರಾಯ ಪ್ರಕಟಿಸುವುದೆಂದರೆ ರಾಜದ್ರೋಹದ ತಡೆ, ದೇಶದ್ರೋಹದ ಹೆದರಿಕೆ. ಯಾವ ಅಭಿಪ್ರಾಯ ಪಡಬೇಕಾದರೂ ನಾವು ಗಣೆಯ ಮೇಲಿನ ದೊಂಬನಂತೆ ತೂಕದಿಂದ ಇರಬೇಕಾಗುವುದು. ನಡುವೆ ತೂಕ ತಪ್ಪಿದರೆ ಸದ್ಯದ ಬಲಿಷ್ಠ ಸರಕಾರದ ಬಲುಮೆಗೊಳಗಾಗಬೇಕಾಗುವುದು ಒಂದು, ಇಲ್ಲವೆ ದೇಶದ್ರೋಹದ ಪಾತಕಕ್ಕೆ ತಲೆಕೊಡಬೇಕಾಗುವುದು ಒಂದು. ಯಾವುದೊಂದನ್ನೂ ಮಾತನಾಡದೆ ಮಿಸುಕದೆ ಕುಳಿತಿರಬೇಕೆಂದರೆ ಕಣ್ಣು-ಕಿವಿ-ಬುದ್ಧಿ-ಭಾವನೆಗಳಿರುವ ಮನುಷ್ಯನಿಗದು ಸಾಧ್ಯವೆ ಇಲ್ಲ.

ಮಿಕ್ಕ ದೇಶದಲ್ಲಿ ಪ್ರಳಯಭೈರವ ಬಲಿಷ್ಠ—ಬಲಿಷ್ಠರಲ್ಲಿ ಜಗಳ ಹಚ್ಚಿರುವ; ರಾಜಕೀಯ ಸ್ವಾತಂತ್ರ್ಯವಿರುವ ವೀರ—ವೀರರಲ್ಲಿ ಕಾಳಗ ತೊಡಗಿಸಿರುವ. ಇಂತಹ ಕಾಳಗದ ಪರಿಣಾಮವೆಂದರೆ ಬಲುಗೈಯ ಬಂಟರಿಗೆ ಗೆಲವು ಸಿಕ್ಕುವುದು. 'ಸತ್ಯಕ್ಕೆ ಜಯ, ಧರ್ಮಕ್ಕೆ ಜಯ' ಎಂದು ಅಲ್ಲಿ ಹೇಳುತ್ತಿದ್ದರೆ ಅದೆಲ್ಲವೂ ಸುಳ್ಳು! ಇಂತಹ ಯುದ್ಧದಲ್ಲಿ ಸತ್ಯವೂ ಇರದು, ಧರ್ಮವೂ ಇರದು! ಮಹತ್ವಾಕಾಂಕ್ಷೆಗಳೆರಡರ ನಡುವೆ ಹತ್ತಿದ ಕದನವದು. ಸೈನ್ಯ-ಸಲಕರಣೆ-ಸಮರತಂತ್ರಗಳು ಯಾವ ಪಕ್ಷದಲ್ಲಿ ಹೆಚ್ಚಿಗಿರುವುವೋ ಆ ಪಕ್ಷಕ್ಕೆ ಗೆಲವು ಕಟ್ಟಿಟ್ಟ ಮಾತು. ಈ ಗೆಲವಿನ ಪ್ರಯೋಜನ ಇನ್ನಾವುದಕ್ಕೂ ಇಲ್ಲ; ಗೆದ್ದ ರಾಷ್ಟ್ರದ ಜನರ ಅಹಂಕಾರ—ದರ್ಪಗಳನ್ನು ಇನ್ನಿಷ್ಟು ಹೆಚ್ಚಿಸಿ, ಮಿಕ್ಕವರನ್ನು ಪಾರತಂತ್ರ್ಯ ಪಂಕದಲ್ಲಿ ನೂಕಲಿಕ್ಕೆ ಮಾತ್ರ ಆಗುವುದು. ಕಳೆದ ಮಹಾಯುದ್ಧ ಲೋಕಕ್ಕೆ ಕಲಿಸಿದ ಪಾಠವೇ ಇದು. ಅಂದು ದೊರೆತ ಗೆಲವು ಸತ್ಯಕ್ಕೆ ಧರ್ಮಕ್ಕೆ ಆಗಿದ್ದಲ್ಲಿ, ಇಪ್ಪತ್ತೈದು ವರ್ಷಗಳಲ್ಲಿಯೆ ಈ ಇನ್ನೊಂದು ಮಹಾಯುದ್ಧ ಮೊಗದೋರುತ್ತಲಿ ಇರಲಿಲ್ಲ. ಅಂದು ಬಲವು ಗೆದ್ದಿತು, ದುರ್ಬಲತೆ ಸೋತಿತು. ಎಂತಲೇ ಗೆದ್ದ ಬಲವು ತನ್ನ ಅಹಂಕಾರ—ದರ್ಪಗಳನ್ನು ಪ್ರಕಟಿಸುವಂತಹ 'ವರ್ಸಾಯ ಒಪ್ಪಂದ' ಮಾಡಿಕೊಂಡಿತು. ಸತ್ಯ—ಧರ್ಮಗಳು ಗೆದ್ದುದಾಗಿದ್ದರೆ ಆ ಬಗೆಯ—ಹೊಸಯುದ್ಧವನ್ನು ಬಸಿರಿನೊಳಗಿಟ್ಟ—ಒಪ್ಪಂದಕ್ಕೆ ಕಾರಣವೇ ಇರಲಿಲ್ಲ.

ಭಾರತದಲ್ಲಿ ನಡೆದುದು ಬಲ—ಬಲಗಳಲ್ಲಿಯ ಕಾಳಗವಲ್ಲ; ಸಮ-ವೀರರಲ್ಲಿ ನಡೆದ ಧರ್ಮಯುದ್ಧವಲ್ಲ. ಅಧಿಕಾರಲಾಲಸೆಗೂ ಸ್ವಾತಂತ್ರ್ಯನಿಷ್ಠೆಗೂ ಜಗಳ ನಡೆದಿದೆ. ಹಿಂಸಾತ್ಮಕವಾದ ಬುದ್ಧಿಗೂ ಅಹಿಂಸಾ-ತ್ಮಕವಾದ ಭಾವನೆಗೂ ಜಗಳ ನಡೆದಿದೆ. ಒತ್ತಾಯದ ದಬ್ಬಾಳಿಕೆಗೂ ಅಸಹನೀಯವಾದ ಪರಾಧೀನತೆಗೂ ಜಗಳ ನಡೆದಿದೆ. ಕೃತ್ರಿಮವಾದ ಮಾನವಶಾಸನಗಳಿಗೂ ಅಕೃತ್ರಿಮವಾದ ನಿಸರ್ಗ ಶಾಸನಗಳಿಗೂ ಜಗಳ ನಡೆದಿದೆ. ಭಗವದ್ಗೀತೆ ಹೇಳುವಂತಹ ಆಸುರೀಶಕ್ತಿ—ದೈವೀ-ಶಕ್ತಿಗಳಲ್ಲಿ ಕಾಳಗ ನಡೆದಿದೆ. ಸಮಾಜ ಧರ್ಮವು ವಿವೇಚಿಸುವಂತಹ ಅನೀತಿ—ನೀತಿಗಳಲ್ಲಿ ಕದನ ತಗುಲಿಕೊಂಡಿದೆ. ಇದರ ಪರಿಣಾಮ ಪ್ರಯೋಜನಗಳನ್ನೂ ಸಹಜವಾಗಿ ಊಹಿಸಲು ಬರುವಂತಿದೆ. ಇಲ್ಲಿ ಒಂದು ಪಕ್ಷ ಭೌತಿಕಬಲವನ್ನವಲಂಬಿಸಿಕೊಂಡು ಸೈನ್ಯ—ಮದ್ದು-ಗುಂಡು—ವಾಹನಗಳನ್ನು ಬೆಳೆಯಿಸುತ್ತಿದೆ ಆಧ್ಯಾತ್ಮಿಕ ಶಕ್ತಿಯನ್ನ-ವಲಂಬಿಸಿ ಹೊರಟ ಇನ್ನೊಂದು ಪಕ್ಷ, ಸಂಯಮ—ತ್ಯಾಗ—ಸ್ವಜನ-ಪ್ರೀತಿಗಳನ್ನು ಬೆಳೆಯಿಸಿಕೊಳ್ಳಬೇಕಾಗಿದೆ. ಭೌತಿಕಬಲ ಚ್ಯುತಿ-ಯುಳ್ಳದ್ದು, ಆತ್ಮಿಕಬಲ ಅಚ್ಯುತವಾದುದು. ಈ ಬಲ ಭಾರತೀಯ-ರಲ್ಲಿ ಬೆಳೆಯತೊಡಗಿದರೆ, ಅಧಿಕಾರಿ ಪಕ್ಷದ ಸೈನ್ಯಸಾಮರ್ಥ್ಯ ಹೀನ-ವೆನಿಸುವುದು, ಅವರ ಮದ್ದು—ಗುಂಡು ಮಣ್ಣಿನ ಬೆಲೆ ಪಡೆಯುವುವು. ಅವರ ಟ್ಯಾಂಕು-ವಿಮಾನಗಳು ತಿರುಳಿಲ್ಲದುವಾಗುವುವು. ಏಕೆಂದರೆ ಭಾರತೀಯ ಜನತೆ ಸಮರಸನ್ನದ್ಧವಾದುದು ಸತ್ಯಸ್ಥಾಪನೆಗಾಗಿ, ಧರ್ಮಸ್ಥಾಪನೆಗಾಗಿ, ಎಂದರೆ ಸಮಾಜದ ಶಾಂತಿ—ಪುಷ್ಟಿ—ತುಷ್ಟಿಗಳಿ-ಗಾಗಿ. ಇವರ ಈ ನೈಸರ್ಗಿಕ ಧರ್ಮಸಮರಕ್ಕೆ ಗೆಲವು ಸಿಕ್ಕುವುದು ಸ್ವಾಭಾವಿಕ. ಆದರೆ ಭಾರತೀಯರಲ್ಲಿ ಸರಿಯಾದ ಸಂಘಟನೆ' ಸಂಯಮ, ತ್ಯಾಗಗಳಿಲ್ಲದಿದ್ದರೆ ಅಧಿಕಾರಿಪಕ್ಷದ ಭೌತಿಕಬಲಕ್ಕೆ ಗೆಲವು ದೊರೆಯುವುದು ಖಂಡಿತ. ಈ ಗೆಲವಿನ ಪರಿಣಾಮದಿಂದ ಪರಾಧೀನ ಭಾರತೀಯರಿಗೆ ಕೆದರಿ ಕೇರುಹಾಕಿಕೊಂಡಂತಹ ವ್ಯಥೆ-ಯಾಗುವುದೂ ಖಂಡಿತ. ಅದಕ್ಕಾಗಿಯೆ ಭಾರತೀಯರಲ್ಲಿಂದು ಆಧ್ಯಾ-ತ್ಮಿಕತೆಯ ತಳಹದಿಯನ್ನಿಟ್ಟುಕೊಂಡ ಕ್ಷಾತ್ರಬಲ ಪ್ರಕಟಗೊಳ್ಳ-ಬೇಕಾಗಿದೆ, ಅದು ಸ್ವಾತಂತ್ರ್ಯಕ್ಕಾಗಿ ಉಪಯೋಗವಾಗಬೇಕಾಗಿದೆ.

ಕ್ಷಾತ್ರಬಲದಲ್ಲಿ ಎರಡು ಬಗೆಗಳಿರುವುವು. ಒಂದು ವಿಧಾಯಕ ಬಲ, ಇನ್ನೊಂದು ವಿಧ್ವಂಸಬಲ. ಕಾಲ—ಕಾಲಕ್ಕೆ ನಮ್ಮಲ್ಲಿ ಪ್ರಕಟ-ವಾದ ಅಹಿಂಸಾ 'ತತ್ತ್ವಪ್ರಧಾನವಾದ ಮತ—ಪಂಥಗಳ ಮೂಲಕ, ಭಾರತೀಯರಲ್ಲಿಯ ವಿಧ್ವಂಸಕ ಕ್ಷಾತ್ರಬಲವು, ಪರಂಪರೆಯಿಂದ ನಿಃಶಕ್ತವಾಗುತ್ತ ಬಂದಿತ್ತು; ಬ್ರಿಟಿಷರ ಆಡಳಿತದಲ್ಲಿಯ ಆಯುಧ ನಿರೋಧದ ಕಾನೂನಿನಿಂದಂತೂ ಅದು ಸೋತು ಮಲಗಿ ನಿದ್ದೆ-ಮಾಡತೊಡಗಿತ್ತು. ವಿಧಾಯಕ ಕ್ಷಾತ್ರಬಲ ನಾಡನ್ನು ಕಟ್ಟಿ ಪ್ರಜೆ-ಗಳನ್ನು 'ಸುಖಸಂಕಥಾ ವಿನೋದದೊಳಿರಿಸಲು' ಬೇಕಾಗುವುದು.

(೨೧೦ ನೆಯ ಪುಟ ನೋಡಿರಿ.)

೧. ಬ್ರಿಟಿಶ ಭಾಸ್ಕರಾಚಾರ್ಯ !

ಚರ್ಚಿಲ್‌ರ ಭಾಷಣದಿಂದ ಎಲ್ಲ ಮುಂದಾಳು-ಗಳೂ ತಳಮಳಗೊಳ್ಳುವ ತಪ್ಪನ್ನು ಮಾಡಿದ್ದಾ-ರೆಂದು ಮಂಗರಾಯನಿಗೆ ತೋರುತ್ತದೆ, ಆಶ್ಚರ್ಯ-ವಿಲ್ಲ. ಕಳೆದ ೬-೮ ವರ್ಷಗಳಿಂದ ಮಂಗರಾಯನ ಶಿಷ್ಯತ್ವವನ್ನು ವಹಿಸಿದ ಕನ್ನಡಿಗರು—ಅರ್ಥಾತ್, ಅಕನ್ನಡೇತರರು— ಈ ತಪ್ಪನ್ನು ಮಾಡಲಿಕ್ಕಿಲ್ಲ-ವೆಂದು ಮಂಗರಾಯನ ಹಲ್ಲು ಕಿರಿವಸೆ ಇದೆ. ತಮ್ಮಿಂದ ಪಾಠ ಕಲಿಯಬೇಕೆಂಬ ಹೆಮ್ಮೆ ಬ್ರಿಟಿಶರಿಗಿದೆ. ಮಂಗರಾಯನೊಬ್ಬನೆ ಆ ಪಾಠ ಕಲಿತಂತಿದೆ. ಉದಾಹರಣೆಗಾಗಿ ನೋಡಿರಿ:— ಇಂಗ್ಲಂಡದಲ್ಲಿ ೪ ಕೋಟಿ ಜನರಿದ್ದಾರಲ್ಲ ! ಅವರಲ್ಲಿ ೨ ಕೋಟಿ ಸುಮಾರು ೧೮ ವಯಸ್ಸಿನ ಒಳಗಿನವರು. ಇನ್ನೊಂದು ಕೋಟಿ ಹುಚ್ಚರು, ಬಡವರು, ಮನೆ-ಮಾರಿಲ್ಲದವರು, ಮತಾಧಿ-ಕಾರವಿಲ್ಲದ ಲಾರ್ಡ್ ಜಾತಿಯವರು. ಉಳಿದ ಎರಡು ಕೋಟಿಗಳಲ್ಲಿ ಕೆಲವರು ಸತ್ತವರು, ಕೆಲವರು ಮುದುಕರು, ಕೆಲವರು ದಡ್ಡರು, ಅಂತೂ ಹೆಚ್ಚೆಂದರೆ ೪ ಕೋಟಿ ಜನರಲ್ಲಿ ಹೆಚ್ಚೆಂದರೆ ಒಂದು ಕೋಟಿ ಜನರು ಚೇಂಬರ-ಲೇನರ ಸರಕಾರಕ್ಕೆ ಬಹುಮತವನ್ನು ಕೊಟ್ಟ-ವರು. ಹೀಗೆ ೪ ಕೋಟಿ ಜನಸಂಖ್ಯೆಯಲ್ಲಿ ಎಲ್ಲರ ವ್ಯವಸ್ಥೆಯಾಯಿತಷ್ಟೆ ! ಅರ್ಥಾತ್ ೪ ಕೋಟಿ-ಯಲ್ಲಿ ೪ ಕೋಟಿ ಕಳೆದರೆ ಉಳಿದುದೆಷ್ಟು ? ಅಷ್ಟೆಲ್ಲ ಜನರೂ ಏಕಮತದಿಂದ ಚರ್ಚಿಲ್‌ರ ಮುಖ್ಯ ಮಂತ್ರಿತ್ವವನ್ನು ಒಪ್ಪಿಕೊಂಡಿದ್ದಾರೆ. ಇಂತಹ ಅನುಭವವ ಚರ್ಚಿಲ್‌ರಿಗೆ ಕಾಂಗ್ರೆಸ್ ಅನುಯಾಯಿಗಳ ಸಂಖ್ಯೆ ತಡೆದೀತೇ, ಒಪ್ಪೀತೆ ? ೪ ಕೋಟಿಯಲ್ಲಿ ೪ ಕೋಟಿ ಕಳೆದರೆ ಉಳಿಯು-ವುದು ಅಸಂಖ್ಯ ಇಲ್ಲವೆ ಸರ್ವಾನುಮತ ಎಂಬ ಗಣಿತದ ಚರ್ಚಿಲ್‌ರ ಮುಂದೆ, ಭಾಸ್ಕರಾಚಾ-ರ್ಯನ ಬುದ್ಧಿಮತ್ತೆ ಲೀಲಾಮಾತ್ರವೆನಿಸುವು-ದಿಲ್ಲವೆ ? ಕೇವಲ ಗಣಿತಶಕ್ತಿ ಇಷ್ಟೆ ಅಲ್ಲ, ಜೀವ-ದಾನಶಕ್ತಿಯೂ ಚರ್ಚಿಲ್‌ರಿಗಿದೆ. ಒಬ್ಬೊಬ್ಬ ಮುಸಲ್ಮಾನನಿಗೆ ಎರಡೆರಡು ಜೀವ (ಒಂದು ಸಂಸ್ಥಾನದಲ್ಲಿ, ಇನ್ನೊಂದು ಹೊರಗೆ) ಗಳನ್ನು ಕೊಟ್ಟ ಚರ್ಚಿಲ್‌ರು ಪ್ರಜಾಪ್ರಭುತ್ವದ ಅಧಿ-ದೇವ ಎನ್ನಲು ಅಡ್ಡಿ ಏನು ? ಪ್ರಜಾಪ್ರಭುತ್ವದ ತಳಹದಿಯಾದ ಮ್ಯುನಿಸಿಪಾಲಿಟಿ ವ್ಹೋಟರರ ಲಿಸ್ಟಿನಲ್ಲಿ ಸತ್ತವರಿಗೆ ಜೀವ ಕೊಡುವುದರ ರಹಸ್ಯ ಇದೀಗ ತಿಳಿಯಿತು ಮಂಗರಾಯನಿಗೆ !

* * *

೨. ಅಯ್ಯಯ್ಯೊ ! ಅಯ್ಯರ್!!

' ವೈರಿಗಳು (ಎಂದರೆ ಜಪಾನ-ಜರ್ಮನಿಗಳು) ಕೂಡ ಕನ್ನಡದ ಸುದ್ದಿಗಳನ್ನು ರೇಡಿಯೊದಲ್ಲಿ ತಪ್ಪದೆ ಹೇಳುತ್ತಾರೆ, ಆದರೆ ಬ್ರಿಟಿಶರು ಮಾತ್ರ ಹೇಳುವುದಿಲ್ಲ. ಇದು ಅನ್ಯಾಯವಲ್ಲವೆ ? ಕನ್ನಡದ ಮಹತ್ತ್ವ ಶತ್ರುವಿಗೂ ತಿಳಿದಾಗ, ನಮ್ಮ ಬ್ರಿಟಿಶ ಸರಕಾರಕ್ಕೆ ತಿಳಿಯಬಾರದೆ ? ' ಎಂದು ಅಯ್ಯರ್ ಎಂಬ ಮಹಾಶಯರು ಮುಂಬಯಿ ಕ್ರಾನಿಕಲಿನಲ್ಲಿ ಕಳಕಳಿಯಿಂದ ಪತ್ರ ಬರೆದುಕೊಂಡಿದ್ದಾರೆ ! ಅ ಕ ಟ ಕ ಟ ! ' ಸರ್ವನಾಶೇ ಸಮುತ್ಪನ್ನೇ ಅಯ್ಯರೋ ಮಾತ್ರ ಪಂಡಿತಃ ' ಎಂದು ಹೆಸರಾದ ಅಯ್ಯರರ ಕುಲವು ಈ ಸ್ಥಿತಿಗಿಳಿಯಬೇಕೆ ? ಇದುವರೆಗೆ ಹಿಂದುಸ್ಥಾನದಲ್ಲಿ ನಡೆದ ಕನ್ನಡದ ಇತಿಹಾಸವನ್ನೇ ಪಾಪ ! , ಈ ಅಯ್ಯರರು ಮರೆತಂತೆ ಕಾಣುವುದು. ' ಶತ್ರುಗಳ ಕೂಡ ಕನ್ನಡಕ್ಕೆ ಮಹತ್ತ್ವ ಕೊಟ್ಟಿದ್ದಾರೆ ' ಅಂತೆ ! ಎಂದರೇನು ? ಕನ್ನಡಕ್ಕೆ ಶತ್ರುಗಳೇ ಮಹತ್ತ್ವ ಕೊಡುವರಲ್ಲದೆ ಮಿತ್ರರು ಕೊಡಬೇಕಾಗಿದೆ ? ಕನ್ನಡವು ಶತ್ರುಗಳ ಭಾಷೆಯೆ ಅಲ್ಲವೆ ? ಬ್ರಿಟಿಶ್ ಸತ್ತೆಯ ಏಕನಿಷ್ಠ ಪ್ರಜೆಯಾದ ಮಂಗರಾಯ-ನದಂತೂ ಅದೇ ಅಭಿಪ್ರಾಯ. ಕನ್ನಡವು ಶತ್ರು-ಗಳ ಭಾಷೆಯೆಂಬುದಕ್ಕಾಗಿಯೆ ಬ್ರಿಟಿಶ್ ರಾಜ್ಯದಲ್ಲಿ ಅದಕ್ಕೆ ಪರೋಪರಿ ಪರಂಪರಾಗತ ಆಸಕ್ತಿಯ ಅರ್ಧಚಂದ್ರ ಸನ್ಮಾನ ದೊರೆತಿಲ್ಲವೆ ? ಕನ್ನಡವು ಗುಜರಾತಿಯಲ್ಲ, ಕನ್ನಡವು ಮರಾಠಿಯಲ್ಲ, ಅತ ಏವ ಕನ್ನಡವು ಮುಂಬಯಿ ಪ್ರಾಂತದ ಭಾಷೆ-ಯಲ್ಲ, ತಸ್ಮಾತ್ ಹಿಂದುಸ್ಥಾನದ ಭಾಷೆಯಲ್ಲ. ಕನ್ನಡವು ಹಿಂದಿಯಲ್ಲ, ಅದು ಕಾರಣ ರಾಷ್ಟ್ರದ ಭಾಷೆಯಲ್ಲ. ಕನ್ನಡವು ಉರ್ದು ಅಲ್ಲ, ತದ್ದ್ವಾರಾ ಮುಸ್ಲಿಂ ಲೀಗದ ಭಾಷೆಯಲ್ಲ. ಇಂತು ಸರ್ವ-ತೋಪರಿ ಸರ್ವತೋಮುಖೇನ ಕನ್ನಡವು ಹಿಂದುಸ್ಥಾನದಲ್ಲಿ ಯಾವ ಭಾಷೆಯೂ ಅಲ್ಲದ್ದ-ರಿಂದ ಅದು ಶತ್ರುಭಾಷೆ ಎಂದು ಸಿದ್ಧವಾಗಿ, ಅಯ್ಯರ್ ಮಹಾಶಯರ ವಿರುದ್ಧವಾಗಿ ಮಂಗ-ರಾಯನ ತೀರ್ಪು ಇದೆ. ಅಪೀಲಂ ನಾಸ್ತಿ, ಸಾಕೀ ಕುಸ್ತಿ.

ಅಯ್ಯಯ್ಯೊ ಎಂಬರೆ ಅಯ್ಯರ್ ಬ್ರಾಂಬರೆ !
ಕಯ್ಯ ನೋಡಿರೆ ಮಂ-ಗಯ್ಯನ ನಂಬರೆ !!

* * *

೪. ಬದನೆಕಾಯಿ ಭೂತ

ವಾಚಕರೆ, ತಡೆಯಿರಿ ನಿಮ್ಮ ನಾಲಗೆಯನ್ನು. ಇದೇನೊ ಮಂಗರಾಯನು ಮುದುಕರಂತೆ ಗಾದೆ ಮಾತುಗಳನ್ನು ಉರುಳಿಸುತ್ತಿದ್ದಾನೆಂದು ಮೂಗ-ನ್ನೇರಿಸಬೇಡಿರಿ. ಇಂದು ಯುದ್ಧದ ಕಾಲ. ಯಾವ ಮಾತೂ ಗಾದೆಯು ಮಾತಲ್ಲ— ಎಂದರೆ, ಮುತ್ತನ್ನ ಗಾದೆಯ ಕಾಲ ಇದಲ್ಲ. ಆದ್ದರಿಂದ 'ಬದನೆಕಾಯಿ ಭೂತ' ಎಂಬುದು ನಿಜವಾದ ಮಾತು— ಅಲ್ಲವಾದರೆ, ಅನೇತು ಹಿಮಾಚಲ ಸೇದಾನೇಪದಿಂದ ಗುಡುಗುತ್ತಿರುವ ನ್ಯಾಶನಲ್ ವಾರ್ ಫ್ರಂಟ್ (ರಾಷ್ಟ್ರೀಯ ಕದನದ ಮೋಹಿ —ಅಥವಾ ಯುದ್ಧಮುಖ) ದ ದನಿಯನ್ನು ಕೇಳಿರಿ :—

A Brinjal a day keeps the Jap away. ದಿನಕ್ಕೊಂದು ಬದನೆಕಾಯಿ ಎಂದರೆ ಓಡಾಡುವನು ಜಪಾನ್ ಸಿಪಾಯಿ !

ಈಗಲಾದರೂ ತಿಳಿಯಿತೆ— ಬದನೆಕಾಯಿ ಯಾಕೆ ಭೂತ ಎಂಬುದು. ತಿಂದ ಬದನೆಕಾಯಿ ಹೊಟ್ಟೆಯಲ್ಲಿ ಭೂತದಂತೆ ಬಾಧಿಸುವುದೇನೊ ನಿಜ— ಆದರೆ ಅದು Grow more food ಅಲ್ಲ — Eat more food. ಆದ್ದರಿಂದ ಈಟ್ ಮೋರ್ ಮಾಡದೆ ಗ್ರೋ ಮೋರ್ ಮಾಡಿ ನೋಡಿರಿ— ಎಂದರೆ ಭೂತಕಾಲದಲ್ಲಿದ್ದ ಬದನೆ

ಕಾಯಿ, ವರ್ತಮಾನಕಾಲದಲ್ಲಿದ್ದ ಭಾರತೀಯನನ್ನು ಭವಿಷ್ಯತ್‌ಕಾಲದ ಜಪಾನ್ ಸಿಪಾಯಿಯಿಂದ ರಕ್ಷಿಸುವುದು. ಬದನೆಕಾಯಿಗೂ ಕಾಲಕ್ಕೂ ಇಷ್ಟೊಂದು ಸಂಬಂಧವಿರುವುದರಿಂದ ಕೈ ನಡೆಯುವುದಿಲ್ಲ, ಅರ್ಥಾತ್ ಕೈಗೆ ನಡುವುದು— ಎಂದರೆ— ಅಲ್ಲ— ಅಂತ— ಒಟ್ಟು— ಅಂದ್ರೆ— ಒಂದು ಮಾತಿನಲ್ಲಿ ಹೇಳುವುದಾದರೆ— ಇದೇನು ಬದನೆಕಾಯಿ ಪುರಾಣ ಎನ್ನಬೇಡಿ—ಯಾಕೆಂದರೆ ಬದನೆಕಾಯಿ ಪುರಾಣಕಾಲದಲ್ಲಿ ಗೊತ್ತಿರಲಿಲ್ಲ, ಟ್ಯಾಂಕು-ಮಶೀನುಗನ್ನುಗಳಂತೆ ಆಧುನಿಕ ಕಾಲದಲ್ಲಿಯೆ ಶೋಧಿಸಲ್ಪಟ್ಟ ಮಹಾಭಯಂಕರ ವಾಯುಸ್ತ್ರಸಮಾನಶಸ್ತ್ರ—ಕಂಡರೆ ಕಡುವೈಷ್ಣವರಷ್ಟೇ ಅಲ್ಲ, ಕಲಿವೈರಿಗಳೂ ದೂರ.

ಬದನೆಗೆ ಸಾಯಿ | ಶತ್ರುಸಿಪಾಯಿ |
ಕೃಷ್ಣಾತೀರದಿ | ನಿನ್ನ ಸಮಾಧಿ ||

* * *

೪. ಅರ್ಧಮರ್ಧ ಅಣೆ

'ಮುಂದಾಳುಗಳನ್ನು ಬಂಧಿಸಿದ್ದು ಮೊದಲು ನನಗೆ ಸರಿತೋರದಿದ್ದರೂ ನಾನು ದಿಲ್ಲಿಗೆ ಬರುವಾಗ ನೋಡಿದ ಹಾವಳಿಯಿಂದ ಸರಕಾರದ ನೀತಿ ಸರಿಯಾದುದು ಎಂದು ಖಾತ್ರಿಯಾಯಿತು' ಎಂದು ಪೂಜ್ಯಪಂತೋಜಿ (= Honourable ಆನರೇಬಲ್) ಅಣೆ ಮಹಾಶಯರು ಕೇಂದ್ರ ಸಭೆಯಲ್ಲಿ ಹೇಳಿದ್ದನ್ನು ಕೇಳಿ ಮಂಗರಾಯನಿಗೆ 'ಅಣೆ ಮಾರಾಜಕೀ ಜೈ, ಹದಿನಾರಕ್ಕೆ ಒಂದ್ರುಪೈ' ಎಂದು ಕೂಗುತ್ತ ಕುಣಿದಾಡುವಷ್ಟು ಸಂತಸವಾಗಿದೆ. ಯಾಕೆ ? **ಯಾಕೆ !** ಎನ್ನುವಿರಾ ? ಈಗ ವೈಸರಾಯರ ಸಚಿವರಾದ ಅಣೆಯವರಿಗೂ ಮಂಗರಾಯನಿಗೂ ಏಕಮತಾಭಿಪ್ರಾಯವಾಯಿತು— ಅಲ್ಲಲ್ಲ, ಮಂಗರಾಯನ ಅಭಿಪ್ರಾಯವನ್ನೆ ಅಣೆಯವರು ಕೊನೆಗೆ ಒಪ್ಪಿದರು ! ಸಾಕ್ಷಾತ್ ಮಾಧವಜಿ ಅಣೆಯವರಿಗೆ ದಿಲ್ಲಿಗೆ ಹೋಗುವಾಗ ಎಷ್ಟು ತೊಂದರೆಯಾಯಿತು ! ಹುಃ ! ಆದರೆ ಅಷ್ಟೊಂದು ತೊಂದರೆಯನ್ನು ಪ್ರತಿಯೊಂದು ಪ್ರವಾಸದಲ್ಲಿ ಮಂಗರಾಯನು ಅನುಭವಿಸಿದ್ದರೂ ಹಲ್ಲುಕಿರಿದಿರಲಿಲ್ಲ. ಆದರೆ ಈಗ ತಿಳಿಯಿತು. ಅಂತಹ ತೊಂದರೆಯಾದರೆ ಮುಂದಾಳುಗಳನ್ನು ಬಂಧಿಸುವುದೆ ಉಪಾಯ. ಮುಂದಾಳುಗಳೆ, ಎಚ್ಚರ ! ಇನ್ನೊಮ್ಮೆ ಮಂಗರಾಯನು ಪ್ರವಾಸ ಮಾಡುವಾಗ ಅವನಿಗೆ ಅಣೆಯವರಂತೆ 'ದಿಲ್ಲಿ ತೋ ಬಹುತ್ ದೂರ್' ಎಂಬ ಅನುಭವವನ್ನು ತಂದುಕೊಟ್ಟರೆ—ಅಂ—? ಏನೆಂದಿರಿ? ಎಲ್ಲ ಮುಂದಾಳುಗಳೂ ಬಂಧನದಲ್ಲಿದ್ದಾರೆಂದರೆ— ? ಮಂಗರಾಯನು ಯಾವ ಮುಂದಾಳುಗಳಿಗೆ ಎಚ್ಚರ ಕೊಡುತ್ತಾನೆಯೆ ?— ಅರ್ಥಾತ್ ರೀಲ್ಸೆ ಮುಂದಾಳುಗಳ್—ಏನು?—ಹಹ!— ಹಾಜಳರ ಕ್ಷಮೆ—ಇರಲಿ— ಸಂಪಾದಕರು ಮಂಗರಾಯನ ಲೆಕ್ಕಣಿಕೆಯನ್ನೇ ಕಸಿದುಕೊಳ್ಳುತ್ತಲಿದ್ದಾರೆ ಹೆಚ್ಚಿಗೆ ಬರೆಯುವುದಕ್ಕೆ ಅವಕಾಶವಿಲ್ಲ. ಬರೆದದ್ದಕ್ಕೆ ಸಹಿ ಹಾಕಲು ಕೂಡ ಅವಕಾಶವಿಲ್ಲ. ಬೊಲೊ ಎಮ್.ಎಸ್.(ಎಮ್.)ಅಣೆಕೀ—!!!

* * *

೫. ಮಂಗರಾಯನ ಮಾಣಿಕ್ಯಗಳು

ಮುಂಬಯಿ.

ಮೊಂಡೂರ ಸ್ಟೇಶನದ ಮೇಲ್ ಟ್ರೇನು ತಡವಾಗಿ ಬಂದಾಗ, ನಿದ್ದೆಯಿಂದ ಎಚ್ಚತ್ತ ಪೋಸ್ಟ್‌ಮನ್ನನು ಮೇಲ್ ಗಾಡಿಯಲ್ಲಿ ಟಪ್ಪಾಲು ಚೀಲದ ಬದಲು ಕೈಯಲ್ಲಿಯ ಬೀಡಿಯನ್ನೆ ಚೆಲ್ಲಿದ್ದಕ್ಕೆ ಮೋಜಿನ ಗೊಂದಲವಾಯಿತು— ಎಂದು ನ್ಯೂಯಾರ್ಕದ Noisy News ಪತ್ರಿಕೆಯು ನ್ಯೂ ದಿಲ್ಲಿ ಸುದ್ದಿಗಾರನ ಸಂದೇಶವನ್ನು ಚೀನದ ಚುಂಕಿಂಗ್ ರೇಡಿಯೋದಲ್ಲಿ ಹೇಳಲಾಯಿತೆಂದು, ಸ್ಟಾಕಹೋಮ ನಗರದ ಪತ್ರಿಕೆಯು ಲಿಸ್‌ಬನ್ ನಗರದ ಸುದ್ದಿಗಾರನು ಬರೆದದ್ದು ನಿಜವಲ್ಲವೆಂದು ದಿಲ್ಲಿಯ ಅಧಿಕಾರಿವರ್ಗ ಮಂಡಳದಲ್ಲಿ ಸಾರಿಸಾರಿ

(೨೫೦ ನೆಯ ಪುಟ ನೋಡಿರಿ.)

'ಪಾರಿಸ್' ಪಟ್ಟಣದಲ್ಲಿ*

ಶ್ರೀ. ಎಂ. ಪಿ. ಟಿ. ಆಚಾರ್ಯ,
ಮುಂಬಯಿ

ಸಿರಿಯ ಅರಮನೆಯಾಗಿದ್ದ ಪಾರಿಸ್ ನಗರಿಯು ದರಿದ್ರನಾದ ಭಾರತೀಯನೊಬ್ಬನನ್ನು ಸ್ವಾಗತಿಸುವ ಬಗೆ ಹೇಗೆ? ಪಾರಿಸ್ ನಗರದಲ್ಲಿದ್ದ ಭಾರತೀಯರೇ ಭಾರತೀಯನನ್ನು ಕೇಳದಿರುವಾಗ, ಪರಕೀಯರು ಕೇಳುವ ಬಗೆ ಹೇಗೆ?

★

ನಾನು ಪ್ರೊ. ವಿಲ್‌ಸನ್‌ರ ಮನೆಗೆ ಮತ್ತೊಂದು ಸಲ ಹೋದೆ; ಗಂಟೆಯ ಹಗ್ಗವನ್ನು ಜಗ್ಗಿದೆ. ಅಂದು ಅವರು ಮನೆಯಲ್ಲಿದ್ದರು, ನನ್ನನ್ನು ಬರಮಾಡಿಕೊಂಡರು. ಅವರ ಗೆಳೆಯನ ಕಡೆಯಿಂದ ನಾನು ತಂದ ಪತ್ರವನ್ನು ಕೊಟ್ಟೆ. ನನ್ನ ಹರುಕು ವೇಷದಿಂದ ನಾನು ಸಹಾಯಕ್ಕಾಗಿ ಬಂದಿದ್ದೇನೆಂದು ಅವರು ತಿಳಿದರು. ಆದರೆ ನನಗೆ ಸಹಾಯಮಾಡುವುದು ಎಲ್ಲಿಯ ತನಕ? ಪಡಿಯಚ್ಚು ಮಾಡುವುದನ್ನು ಕಲಿಯಬೇಕೆಂದಿರುವೆನೆಂದು ಹೇಳಿದೆ. ಪಡಿಯಚ್ಚು ಪ್ರವೀಣನ ಕಡೆಗೆ ನನ್ನನ್ನು ಕಳುಹಿದರು. ಆ ಪ್ರವೀಣನು ನನ್ನನ್ನು ಉಮೇದುವಾರನೆಂದು ತೆಗೆದುಕೊಳ್ಳಲು ಒಪ್ಪಿದನು. ಅಲ್ಲಿ ಇದ್ದು ಜೀವನ ಸಾಗಿಸಲು ನನ್ನ ಹತ್ತಿರ ಹಣವೇನೂ ಇರಲಿಲ್ಲ. "ಇಲ್ಲಿ ಜೀವನ ಹೇಗೆ ಸಾಗಿಸುತ್ತೀಯೆ?" ಎಂದು ಕೇಳಿದರು ಪ್ರೊಫೆಸರು. 'ಅದೇ ನನ್ನ ಚಿಂತೆ' ಎಂದೆ ನಾನು. 'ನಿನ್ನ ಬಾಳುವೆಗೆ ಕೈನೀಡಲು ನನಗೆ ಸಾಧ್ಯವಿಲ್ಲ' ಎಂದು ಅವರು ಉತ್ತರವಿತ್ತರು. ನಮ್ಮಿಬ್ಬರ ಸಂಭಾಷಣೆಯೆಲ್ಲ ಇಂಗ್ಲಿಷಿನಲ್ಲಿಯೆ ಸಾಗಿತು. ಅವರಿಗೆ ತಮಿಳು ಓದು-ಬರೆಯಲು ಮಾತ್ರ ಬರುತ್ತಿತ್ತು. ಮಾತನಾಡಿ ತಿಳಿಯಲು ಬರುತ್ತಿರಲಿಲ್ಲ. "ಈ ಪ್ರೊಫೆಸರರ ಸಹಾಯದ ಆಶೆ ತಪ್ಪಿತು, 'ಮುಂದೇನು?" ಎಂಬ ವಿಚಾರ ಬಂತು. ಭಾರತೀಯನೊಬ್ಬನ ವಿದ್ಯಾರ್ಜನೆಗಾಗಿ ಅವನು ಸಹಾಯಮಾಡಬಹುದೆಂದು ತಿಳಿದಿದ್ದೆ. ಅವನೊಬ್ಬ ಫ್ರೆಂಚನು; ನನ್ನ ಜೀವಿತಕ್ಕೂ ಹಣ ಕೇಳುವುದು ಅಸಹ್ಯವೆನಿಸಿತು. ಕೇಳುವುದಾದರೂ ಹೇಗೆ?. ಮೇಲಾಗಿ ಭಾರತದಲ್ಲಿದ್ದಾಗ, ಯಾರೊಬ್ಬರಿಗೂ ನಾನು ಪರಿಚಯಪತ್ರವನ್ನು ಕೂಡ ಕೇಳಿದವನಲ್ಲ. ಹೀಗಿದ್ದು ಪರಕೀಯನೆದುರು ತಲೆಬಾಗುವುದು ಹೇಗಾನ ಬೇಕು? ಆ ಪ್ರಯತ್ನವನ್ನು ಬಿಟ್ಟುಕೊಟ್ಟೆ.

ಒಂದು ಮುಂಜಾವು; ಮುಂದೇನುಮಾಡಬೇಕೆಂಬ ವಿಚಾರದಲ್ಲಿ ತನ್ಮಯನಾಗಿ ಅತ್ತಿತ್ತ ಅಡ್ಡಾಡುವಾಗ, ಒಂದು ಟ್ರಾಮು ಕಣ್ಣಿಗೆ ಬಿತ್ತು. ಅದಕ್ಕೆ ತಗುಲಿಸಿದ '**ಪಾಸೀ**' ಎಂಬ ಫಲಕವು ನನ್ನ ಮನ ಸೆಳೆಯಿತು. ಆ ಹೆಸರು ನನ್ನನ್ನು ಅಷ್ಟೇಕೆ ಸೆಳೆದಿರಬಹುದು? ಅದರ ಪರಿಚಯವು ಎಲ್ಲಿಯದು? ಒಮ್ಮೆ ನೆನಪಾಯಿತು: ಮದ್ರಾಸಿನ ತಮಿಳು ಪತ್ರಿಕೆಗೆ ಲೇಖನಗಳನ್ನು ಕಳುಹುತ್ತಿದ್ದ ಒಬ್ಬ ಗೃಹಸ್ಥನ ನೆನಪಾಯಿತು. ಆ ವಿಳಾಸವು ಆ ಗೃಹಸ್ಥನ ಹೆಸರನ್ನು ಜ್ಞಾಪಕಕ್ಕೆ ತಂದಿತು: 'ಎಸ್. ಕೆ........ ಆದುದು. ಅದೇ ಅವನ ಹೆಸರು. ನನ್ನ ನೆನಪಿನ ಶಕ್ತಿಯ ಪರೀಕ್ಷೆಮಾಡಬೇಕೆಂದು ನಿಶ್ಚಯಿಸಿದೆ. ಭಾರತೀಯರನ್ನು ಕಾಣಬೇಕೆಂದಿದ್ದ ನನ್ನ ಆಶೆಯ ಕೊನೆಯ ಮೆಟ್ಟಿಲಲ್ಲಿದ್ದೆ ನಾನು ಆಗ. ಅವನ ಲೇಖನಗಳ ಮೇಲಿಂದ ಅವನೊಬ್ಬ ಸ್ವತಂತ್ರವಾದಿ ಸ್ವದೇಶಾಭಿಮಾನಿ ಭಾರತೀಯನೆಂದು ನಾನು ತಿಳಿದಿದ್ದೆ. ಟ್ರಾಮು-ದಾರಿಗುಂಟ ಸಾಗಿದೆ. '**ಪಾಸೀ**' ಎಂಬ ಫಲಕದ ಕಡೆಗೆ ದೃಷ್ಟಿಯಿಟ್ಟು ಸಾಗಿದೆ—ಸಾಗಿದೆ— ಕೊನೆಗೆ ಆ ದಾರಿ ನಿಂತಿತು. ಉತ್ತರ ಧ್ರುವದ ಕಡೆಗೆ ನಡೆದಷ್ಟು ದಣಿವು ಆದಂತಾಯಿತು.

ಆ ತುದಿಗೆ ಬಂದೊಡನೆಯೆ ಅಲ್ಲಿ 'ಸಿರಿವಂತರ ವಸತಿ' ಎಂದು ತೋರುವ ಚೆನ್ನಾದ ಮನೆಗಳು ಕಂಡುವು. ಆ ಕಾಲದಲ್ಲಿ ಪಾರಿಸ್ ನಗರದ ಆ ಭಾಗದಲ್ಲಿ ಕೋಟೆಯ ಅವಶೇಷಗಳು ಇನ್ನೂ ಇದ್ದುವು. 'ಇಂತಹ' ದೊಡ್ಡ ಮನೆಗಳಲ್ಲಿ ವಾಸವಾಗಿದ್ದ ಆ ಸದ್ಗೃಹಸ್ಥನನ್ನು ಹುಡುಕಿ ತೆಗೆಯುವುದು ಹೇಗೆ?—ಎಂಬುದು ಸಮಸ್ಯೆಯಾಯಿತು.

ಯಾರನ್ನಾದರೂ ಕೇಳಬೇಕೆಂದು ನಿಶ್ಚಯಮಾಡಿ 'ಭಾರತೀಯರಾದವರೂ ಇಲ್ಲಿ ಇರುವರೆ?' ಎಂದು ಕೇಳಿದೆ. ಮೊದಲು ಸಿಕ್ಕವನು ಒಬ್ಬ ಫ್ರೆಂಚ್ ಮನುಷ್ಯ—ವಯಸ್ಸಾದವನು. ಅವನಿಗೆ ಇಂಗ್ಲಿಷಿನಲ್ಲಿ ಫ್ರೆಂಚ್ ಭಾಷೆಯ ದನಿಯಲ್ಲಿ ಕೇಳಿದೆ; ನನಗೆ ಬೇಕಾದುದು ಅವನಿಗೆ ತಿಳಿದಂತಾಯಿತು. 'ಓ' ಎಂದು ಉಚ್ಚರಿಸಿ, ಅವನು ಆ ಕೋಟೆಯ ಕಡೆಗೆ ಕೈಮಾಡಿದನು. ನಾನು ಆಚೆಗೆ ಹೊರಟೆ.

ನಾನು ಆ ಮನೆಯಲ್ಲಿ ಹೊಕ್ಕೆನು. 'ಎಸ್. ಕೆ.' ಎಂದು ಕೇಳಿದ್ದಕ್ಕೆ ಬಾಗಿಲು ಕಾಯುವವನು ಗೋಣುಹಾಕಿದನು. ಹೆಚ್ಚೇನೂ ಹೇಳಲಿಲ್ಲ. ನಾನು ಅಟ್ಟವನ್ನು ಏರಿದೆ. ಅಲ್ಲಿ ಭಾರತೀಯನ ಹೆಸರಿನ ಹಲಗೆ ಇದ್ದ ಬಾಗಿಲೊಂದು ಸಿಕ್ಕಿತು. ಬಾಗಿಲನ್ನು ತಟ್ಟಿದೆ. ಗಂಟೆಯನ್ನು ಬಾರಿಸಿದೆ. ಆ ಅವಧಿಯಲ್ಲಿ

* ಕಳೆದ ಸಂಚಿಕೆಯಲ್ಲಿ ಪ್ರಕಟವಾದ 'ನಾನು ಭಾರತವನ್ನು ಬಿಟ್ಟದ್ದೇಕೆ?' ಎಂಬುದರ ಮುಂದಿನ ಭಾಗ. —ಸಂ. ಜ.

ವಿಚಾರಿಸುತ್ತಿದ್ದೆ : ‘ ಪರದೇಶದಲ್ಲಿ ಭಾರತೀಯನೊಬ್ಬನ ಮನೆಗೆ ಬಂದವನು ನಾನು ! ಅವನು ನನ್ನನ್ನು ಅತ್ಯಾದರದಿಂದ ಸ್ವಾಗತಿಸಬಹುದು— ತಬ್ಬಿಕೊಳ್ಳಬಹುದು ! ’ ಎಂದು. ಅಷ್ಟರಲ್ಲಿಯೆ ಬಾಗಿಲು ಸರಿಯಿತು. ಭಾರತೀಯ ಮಹಿಳೆಯೊಬ್ಬಳು ಬಾಗಿಲನ್ನು ತೆರೆದವಳು. ನನ್ನ ಈ ವಿಚಿತ್ರ—ಹರುಕು—ವೇಷವನ್ನು ಕಂಡು, ಒತ್ತಾಯದ ಉಪವಾಸದಿಂದ ಒಳಸೇರಿದ ಕಣ್ಣುಳ್ಳ ನನ್ನನ್ನು ಕಂಡು—ಅಚ್ಚರಿಗೊಂಡಳು. ನನ್ನ ಬಗೆಗೆ ಆಕೆಗೆ ಸಂಶಯವೂ ಬಂದಿರಬಹುದು. ಆ ಸಂಶಯದ ದನಿಯಲ್ಲಿಯೆ ಕೇಳಿದಳು : ‘ ನಿಮಗೆ ಏನು ಬೇಕು ? ’ ಎಂದು. ‘ ಶ್ರೀ. ಎಸ್. ಕೆ. ಅವರನ್ನು ಕಾಣಬೇಕು ’ ಎಂದೆನು. ಅವಳಿಗೆ ಸಾಕಷ್ಟು ಇಂಗ್ಲಿಷ್ ಬರುತ್ತಿರುವಂತೆ ಕಂಡಿತು. ನನ್ನ ಮಾತನ್ನು ತಿಳಿದುಕೊಂಡಳು. ‘ ನೀವು ಯಾರು ? ’ ಎಂದಳು. ನಾನು ಮೊನ್ನೆ ಮೊನ್ನೆಯೆ ಮದ್ರಾಸಿನಿಂದ ಬಂದವನೆಂದೂ ಶ್ರೀ. ಎಸ್. ಕೆ. ಯವರೊಂದಿಗೆ ಪತ್ರವ್ಯವಹಾರ ಮಾಡಿದುದಾಗಿಯೂ ತಿಳಿಸಿದೆ. ಅದರಿಂದ ಅವಳು ಸುಮ್ಮಗಾದಳು. ಶ್ರೀ. ಎಸ್. ಕೆ. ಅವರು ಮನೆಯಲ್ಲಿಲ್ಲವೆಂದೂ, ನಾನು ನನ್ನ ಹೆಸರು ವಿಳಾಸವನ್ನು ಕೊಟ್ಟು ಹೋಗಬೇಕೆಂದೂ ಆಕೆ ಹೇಳಿದಳು. ಎಸ್. ಕೆ. ಅವರನ್ನು ಕಾಣದೆ ನಿರಾಶನಾಗಿ, ಕಾಗದದ ತುಣುಕಿನಲ್ಲಿ ಅದಿಷ್ಟನ್ನು ಗೀಚಿ ಕೊಟ್ಟೆ. ನನಗಾದರೊ ವಿಲಂಬವು ತಡೆಯುವಂತಿರಲಿಲ್ಲ. ಊಟದ ಮನೆಯ ಯಜಮಾನನಿಗೆ ದುಡ್ಡೆಲ್ಲಿಂದ ಕೊಡಬೇಕೆಂಬುದೆ ಚಿಂತೆ. ಬೆಟ್ಟಯಾದ ಭಾರತೀಯರಿಂದ ನನಗೊಂದು ಕೊಂಚ ಆದರದ ದನಿ—ಒಲವಿನ ಸಂಜ್ಞೆ ಕೂಡ ಬರಲಿಲ್ಲ ಎಂದು ಕೆಡಕೆನಿಸಿತು. ಆ ಹೆಣ್ಣುಮಗಳು ‘ ಒಳಗೆ ಬಾ ’ ಎಂದು ಕೂಡ ನನ್ನನ್ನು ಕರೆಯಲಿಲ್ಲ. ನನ್ನ ಈ ಸ್ಥಿತಿಯನ್ನು ನೋಡಿ ಶ್ರೀ. ಎಸ್. ಕೆ. ಅವರಾದರೂ ಕೈನೀಡುವರೊ ? ಬಾಗಿಲು ತೆರದಾಗ ಇಣಿಕಿದಾಗ, ಆ ಮನೆಯ ಬಗೆಯು ಇಂಗ್ಲಿಶ್ ಗೃಹಸ್ಥನ ಮನೆಯ ಬಗೆಯನ್ನು ಸೂಚಿಸಿತು. ‘ ಅಂತಹನಿಗೆ ನಾನು— ಭಾರತೀಯನಾಗಿದ್ದರೂ ಬಡತನದ ಮೂಲಕ— ಸರಿಯಾದ ಜೊತೆಯಾಗಲಿಕ್ಕಿಲ್ಲ ’ ಎಂದೆನಿಸಿತು. ಆದರೇನು ? ಒಂದು ದಿನ ತಡೆದು ಅವನನ್ನು ಕಾಣಬೇಕೆಂದು ನಿರ್ಧಾರಮಾಡಿದೆ.

ಮರುದಿನ ಮುಂಜಾವು ಎಸ್. ಕೆ. ಯವರ ಮನೆಯಾಳು ಚಿಟ್ಟೋಲೆಯೊಂದನ್ನು— ಕಟ್ಟೋಲೆ ಕೂಡ ಅಲ್ಲ— ಕೊಟ್ಟನು. ಸಾಮಾನ್ಯವಾಗಿ ಸಭ್ಯಗೃಹಸ್ಥರು ಕಟ್ಟೋಲೆಯನ್ನು ಬರೆವುದು ರೂಢಿ—ಆ ಓಲೆಯನ್ನು ಓದಿ ನಿರಾಶನಾದೆ. ಅವನು ನನ್ನನ್ನು ತನ್ನ ಮನೆಗೆ ಕರೆಯದೆ— ದೂರವಿದ್ದರೂ ನಾನು ಕಾಲ್ನಡಿಗೆಯಿಂದಲೆ ಹೋಗುತ್ತಿದ್ದೆ—ಸುಮಾರು ೧೦ ಗಂಟೆಯ ಸಮಯಕ್ಕೆ **‘ಥಾಮಸ್ ಕುಕ್’** ಅವರ ಕಚೇರಿಯಲ್ಲಿ ಕಾಣಬಹುದು—ಎಂದು ತಿಳಿಸಿದ್ದನು. ಸ್ವದೇಶದವನನ್ನು ಕಾಣುವ ಬಗೆಯೆ ಇದು ? ಇದು ಫ್ರೆಂಚ್ ಪದ್ಧತಿಯಾಗಿರಲಿಕ್ಕಿಲ್ಲ ! ನಿಜವಾಗಿಯೂ ಭಾರತೀಯ ಪದ್ಧತಿಯಂತೂ ಅಲ್ಲವೇ ಅಲ್ಲ. ‘ ಸಭ್ಯಗೃಹಸ್ಥರು ಹೀಗೆ ಮಾಡಬಹುದೇ ? ’ ಎನಿಸಿತು. ಆದರೂ ಆ ಸ್ಥಿತಿಯಲ್ಲಿದ್ದ ನಾನು ಕರೆದಲ್ಲಿ ಹೋಗಲೇಬೇಕಾಗಿತ್ತಲ್ಲವೆ ?

ಕೂಡಲೆ ನನ್ನ ಬೆಳಗಿನ ತಿಂಡಿಯನ್ನು ಮುಗಿಸಿಕೊಂಡು, **ಥಾಮಸ್ ಕುಕ್** ಅವರ ಕಾರ್ಯಾಲಯದ ಕಡೆಗೆ ಸಾಗಿದೆ. ಒಂಟಿಯಾಗಿ ಗಂಟೆಗಳ ಕಾಲ ಪಟ್ಟಣದಲ್ಲಿ ಅಲೆದಾಡುವಾಗ, ನಾನು ಅವರ ಕಾರ್ಯಾಲಯವನ್ನು ನೋಡಿದ್ದೆ. ದೈವಯೋಗದಿಂದ ಗೊತ್ತುಪಡಿಸಿದ ವೇಳೆಯಲ್ಲಿ ನಾನಲ್ಲಿಗೆ ತಲ್ಪಿದೆ. ಆದರೂ ಆ ಕಾರ್ಯಾಲಯದಲ್ಲಿ, ಎಲ್ಲರಿಗಿಂತಲೂ ಕಪ್ಪಾದ ದಪ್ಪನ್ನ ಮನುಷ್ಯನು ಅತ್ತಿತ್ತ ಹುಡುಕುವ ಚಿಕ್ಕ ಕಣ್ಣುಗಳಿಂದ ಅಡ್ಡಾಡುತ್ತಿದ್ದನು. ಅವನು ನನ್ನನ್ನೇ ನೋಡುತ್ತಿರಬಹುದೆಂದು ಎನ್ನಿಸಿತು. ನನ್ನ ಬಣ್ಣವಾದರೂ ಅವನಿಗೆ ಬೇಗನೆ ಗುರುತನ್ನು ಕೊಟ್ಟಿತು. ‘ನೀವೆಯೊ ಅವರು ? ’ ಎಂದು ಕೇಳಿದ. ನಾನು ಫ್ರಾನ್ಸಿಗೆ ಬಂದ ಕಾರಣವೇನೆಂಬುದನ್ನು ಕೆಲಹೊತ್ತು ಕೇಳಿ, ‘ ಬರುವ ಮುಂಚೆ ತಿಳಿಸಬಾರದೆ ? ’ ಎಂದೂ ಕೇಳಿದ. ನನ್ನ ಕತೆಯನ್ನೆಲ್ಲ ಹೇಳಲು ಅದು ಯೋಗ್ಯ ಸ್ಥಳವಾಗಿರಲಿಲ್ಲ. ಭಾರತದಲ್ಲಿದ್ದಾಗ ನಾನೇ ಅವನೊಡನೆ ಪತ್ರವ್ಯವಹಾರ ಮಾಡುತ್ತಿದ್ದುದನ್ನು ತಿಳಿದು, ತನ್ನ ಮನೆಗೆ ಅಂದು ಮಧ್ಯಾಹ್ನ ಬರಬೇಕೆಂದು ಔತಣವಿತ್ತ. (ಪತ್ರವ್ಯವಹಾರವೆಂದರೇನು ? ಅವನು ಕಳುಹುತ್ತಿದ್ದ ಲೇಖನಗಳು ತಲ್ಪಿದುವೆಂದು ನಾನು ವೃತ್ತಪತ್ರಿಕೆಯ ಕಚೇರಿಯ ಪರವಾಗಿ ಬರೆಯುತ್ತಿದ್ದೆ ಅಷ್ಟೆ.) ‘ ಏನೇ ಆಗಲಿ ಗೆದ್ದೆ ’ ಎಂದು ಭಾವಿಸಿದೆ. ‘ ನಿಮ್ಮ ಮನೆಗೆ ಬರಬೇಕಾದರೆ ನಾನು ಚಳಿಯಲ್ಲಿ ನಡೆದೇ ಬರಬೇಕಾಗುವುದು ’ ಎಂದು ಸೂಚಿಸಿದೆ. ಕೂಡಲೆ ಅವನು ನನ್ನ ಕೈಯಲ್ಲಿ ಒಂದೆರಡು ಪುಡಿಗಾಸನ್ನಿಟ್ಟು ‘ ಇದು ಟ್ರಾಮುವೆಚ್ಚಕ್ಕೆ ! ’ ಎಂದನು. ನಾಚಿಕೆಯು ಆವರಿಸಿ ಬಂದಿತು. ಇದೇನು ! ದಕ್ಷಿಣೆಯಂತೆ ತೆಗೆದುಕೊಂಡೆನಲ್ಲ ! ಭಾರತದಲ್ಲಿ ಇದ್ದಾಗ ಹೀಗೆ ತೆಗೆದುಕೊಂಡಿದ್ದರೂ ಸಹನೆಯಾಗುತ್ತಿರಲಿಲ್ಲ, ಇದಂತೂ ಪರದೇಶ ! ಆದರೇನು ! ಆಗಿನ ನನ್ನ ಸ್ಥಿತಿಯಾದರೂ ಎಂತಹದು ? ಮೈಯನ್ನು ಮುಚ್ಚಲು ಸಾಕಷ್ಟು ಅರಿವೆ ಇಲ್ಲ. ಚಳಿಯಿಂದ ಮೈನಡುಗುತ್ತಿದೆ. ಏನಾದರೂ, ಇಬ್ಬರೂ ಕುಳಿತು ಮಾತನಾಡುವತನಕ ಎಲ್ಲ ಅವಮಾನ ಸಹಿಸಲೇಬೇಕೆಂದು ನಿರ್ಧಾರ ಮಾಡಿದೆ. ಸಾಯಂಕಾಲ ನಾನು ಅವನ ಮನೆಗೆ ಹೋದೆ. ನಡುಮನೆಯ ವರೆಗೆ ನೇರವಾಗಿ ಕರೆದೊಯ್ದರು. ಯುರೋಪದ ಜನರು ‘ ನೆಮ್ಮದಿ ’ಯಾಗಿರುವಂತೆ ಭಾರತೀಯನೊಬ್ಬನು ಇರುವುದನ್ನು ನಾನಂದು ಮೊದಲುಬಾರಿ ಕಂಡೆ. ಅಲ್ಲದೆ ಮನೆಯಾಳು ಒಬ್ಬ ಬಿಳಿಯ ಹೆಂಗುಸು. ಆ ಸದ್ಗೃಹಸ್ಥನು ಪಂಡಿತನಂತೆ ವೇಷ ಧರಿಸಿದ್ದನು. ಅದೆಲ್ಲ ತತ್ತ್ವಜ್ಞಾನದ ಆವರಣವೊ ಜೀನತನವನ್ನು ಜಾರಿಸುವ ಸೋಗೊ—ತಿಳಿಯದಂತೆ ಇತ್ತು.

ಅಷ್ಟು ದಿನಗಳ ಹಸಿವೆಯ ಬಳಲಿಕೆಯ ನಂತರ, ಭಾರತದ ಸೊಗಸಿನ ರೀತಿಯಲ್ಲಿ ಸಿದ್ಧವಾದ ‘ ಖೀರು ’ ಬಡಿಸಿದರು. ಭಾರತಕ್ಕಿಂತಲೂ ಪಾರಿಸಿನಲ್ಲಿ ಅದನ್ನು ತಿನ್ನುವುದೆಂದರೆ ಸೌಭಾಗ್ಯವೆ ಸರಿ. ಭಾರತೀಯ ಚಟ-ವೇಷದಲ್ಲಿದ್ದರೂ, ನನ್ನ ಬಗೆಗೆ ಅವನಿಗೆ ಸಮಾ-

ಧಾನವಾಗದಂತೆ ತೋರಿತು. ಅಲ್ಲಿಯ ಸ್ಥಳೀಯ ಭಾರತೀಯ-ರೊಡನೆ ಬೆರೆತುಹೋಗುವುದಕ್ಕೆ ಉಂಟಾಗುವ ತೊಂದರೆಗಳನ್ನೆಲ್ಲ ನನ್ನೆದುರು ತೋಡಿಕೊಂಡನು. ಅಲ್ಲದೆ ಮಾತೃಭೂಮಿಗಾಗಿ ತಾನು ಮಾಡಿದ ತ್ಯಾಗ-ಸಾಹಸಗಳನ್ನು ಹೇಳಿಕೊಂಡನು. ಅಯ್ಯೋ ದೇವರೆ, ತ್ಯಾಗ ಮಾಡಿದ್ದರೂ ಅವನಿಗೆ ಇಷ್ಟೆಲ್ಲ ಇರುವಾಗ ನನ್ನ ಗತಿಯೇನು? ದೇಶತ್ಯಾಗ ಮಾಡಿದವನು ನಾನು! ಪಾರಿಸ್‌ನಲ್ಲಿ ಏನೂ ಹತ್ತಿರವಿಲ್ಲದಷ್ಟು ತ್ಯಾಗ; ಆದರೆ ಅದರ ಎಣಿಕೆ! ಬಾರದು ಏನೆಂದರೂ ನಾನೊಬ್ಬ ಕೀಳುಮಾದರಿಯ ಸ್ವದೇಶಾಭಿಮಾನಿ! ತ್ಯಾಗವೆಂದರೆ, ಇದ್ದುದರಲ್ಲಿಯ ಕೆಲಭಾಗವನ್ನು ಕೊಡುವುದು—ಎಲ್ಲವನ್ನೂ ಅಲ್ಲ! ತನ್ನ ತ್ಯಾಗದ ಮಟ್ಟವನ್ನು ತೋರಲು ಅನೇಕ ಜನರ ಪ್ರಶಸ್ತಿಪತ್ರಗಳನ್ನು ತೋರಿಸುತ್ತಿದ್ದನಾತ. ಏನೂ ತಿಳಿಯದೆ ನಾನು ಅವನಾಡಿದುದಕ್ಕೆಲ್ಲ ತಲೆದೂಗುತ್ತಿದ್ದೆ.

ಗೋಳಿಗೀಡಾದ ಭಾರತೀಯ ಸ್ವದೇಶಾಭಿಮಾನಿ-ದೇಶತ್ಯಾಗಿಗಳ ಸಲುವಾಗಿ ಲಕ್ಷಾಂತರ ಹಣ ವೆಚ್ಚಮಾಡಿದ್ದೇನೆಂದು ಅವನು—ನಾನು ಭಾರತದಲ್ಲಿದ್ದಾಗ—ಬರೆದಿದ್ದನು. ನನ್ನ ಸಲುವಾಗಿ ಅವನನ್ನು ಪರೀಕ್ಷಿಸಬೇಕೆಂದೆನಿಸಿತು. ಮೊದಲು ನನ್ನ ಪರಿಸ್ಥಿತಿ-ಯನ್ನು ವಿವರಿಸಿದೆನು. ಆ ಮೇಲೆ ನೇರವಾಗಿ-ಹಿಂಜರಿಯದೆ-ಕೇಳಿದೆ: 'ನನ್ನ ದೇಶದ ಪರವಾಗಿ ನಾನು ಇಲ್ಲಿ ಅಭ್ಯಾಸಮಾಡಲು-ಕೆಲಸ ಮಾಡಲು ನೀವು ಸಹಾಯ ಮಾಡಬಹುದೆ?' ಎಂದು. 'ಅಯ್ಯೊ! ಅದಕ್ಕಾಗಿ ಕಾದಿಟ್ಟ ಹಣವೆಲ್ಲ ಈಗ ವೆಚ್ಚವಾಗಿದೆಯಲ್ಲ!' ಎಂದು ಬಂತು ತಡವಿಲ್ಲದೆ ಉತ್ತರ. ನನ್ನ ನೇರವಾದ ಪ್ರಶ್ನೆಗೆ ಸರಿಯಾದ ಉತ್ತರ—ಮುಂದೆ ನಾನು ಬಾಯ್ದೆರೆಯಲಿಲ್ಲ.

ಮತ್ತೊಬ್ಬ ಭಾರತೀಯನ ಬಾಗಿಲಿಗೆ ನನ್ನನ್ನು ತಳ್ಳಲಾಯಿತು. ಅವನೂ ಆದರ ತೋರಲಿಲ್ಲ. ಆದರೂ ಮರುದಿನ ಅವನು ತನ್ನ ಮನೆಯ ಜನರೊಂದಿಗೆ ವಿಮಾನವಿಹಾರಕ್ಕಾಗಿ ಮಾತ್ರ ಕರೆ-ದೊಯ್ದನು. ಆ ಕಾಲದಲ್ಲಿ ೫೦೦ ಯಾರ್ಡುಗಳಷ್ಟು ಹಾರುವುದು ಕೂಡ ಕಠಿನವೆಂದೆನಿಸಿತ್ತು. ಅಷ್ಟು ಸ್ವಲ್ಪ ಎತ್ತರದಲ್ಲಿಯೂ ಅನೇಕ ಅಪಘಾತಗಳು ಆಗುತ್ತಿದ್ದುವು. ಆ ಕಾಲವನ್ನು ನೆನೆದರೆ, 'ವಿಮಾನವು ಯುದ್ಧೋಪಕರಣವಾಗಿ ಪರಿಣಮಿಸಿದುದು ತೀರ ಅತ್ಯಲ್ಪ ಕಾಲದಲ್ಲಿ' ಎನ್ನಬಹುದು. ವಿಹಾರದ ಅವಧಿಯಲ್ಲಿ, ನಾನು ನಾನಕಾಶವಾಗಿ ನಾನಾರೆಂಬುದನ್ನು ಅರಿಕೆಮಾಡಿಕೊಡತೊಡಗಿದ್ದೆ. ಕೊನೆಗೆ ಅವನು 'ನೀನು ಲಂಡನ್ನಿನಲ್ಲಿರುವ ನಿಮ್ಮ ದೇಶಬಾಂಧವ-ರಿಗೇಕೆ ಬರೆವುದಿಲ್ಲ?! ಅಲ್ಲಿ ಶ್ರೀ. ವಿ. ಎಸ್. ಅಯ್ಯರ್ ಎಂದು ಇದ್ದಾರೆ!' ಎಂದನು. 'ಓ! ಅವರೆ? ಅವರ ಪರಿಚಯ ಪತ್ರ-ಮುಖದಿಂದ ಇದೆ ನನಗೆ' ಎಂದೆ ನಾನು. ಅವನು ಅವರ ವಿಳಾಸವನ್ನು ಕೊಟ್ಟ: 'ಭಾರತಮಂದಿರ, ಕ್ರಾಮ್‌ವೆಲ್ ಕುಂಜ, ಹಾಯ್‌ಗೇಟು, ಲಂಡನ್' ಶ್ರೀ. ಅಯ್ಯರರು ನಮ್ಮ ತಮಿಳು ಪತ್ರಿಕೆಗೆ ಲಂಡನ್ ಸುದ್ದಿಗಾರರಾಗಿದ್ದರು. ಆದರೂ ಭಾರತವನ್ನು ಬಿಡುವಾಗ ಅವರ ವಿಳಾಸ ತರಬೇಕೆಂದು ನನಗೆ ನೆನಪು ಕೂಡ ಆಗಿರಲಿಲ್ಲ. ಅವರಾದರೊ ಸುದ್ದಿಗಾರಿಕೆಯನ್ನು ಗೌರವಾರ್ಥವಾಗಿ ಮಾಡುತ್ತಿದ್ದವರು—ನನ್ನ ಸಲುವಾಗಿ ಅವರಿಗೆ ಆತ್ಮೀಯತೆ ಎನ್ನಿಸ-ಬಹುದೊ ಇಲ್ಲವೋ ತಿಳಿಯಲಿಲ್ಲ. ನಾನೊ, ಕಾಸಿಲ್ಲದ ಕುವರ; ಆದರೆ 'ಮುಣುಗುವವನಿಗೆ ಮುಟ್ಟಿಗೆ ಹುಲ್ಲು ಕೂಡ ಹೊನ್ನು'! ಕೂಡಲೆ, ನನ್ನ ವಿಚಿತ್ರ ಪರಿಸ್ಥಿತಿಯನ್ನು ವಿವರಿಸಿ, ಅಯ್ಯರ್ ಅವರಿಗೆ ಪತ್ರ ಬರೆದೆ: 'ನನ್ನ ಸಲುವಾಗಿ ಏನಾದರೂ ಮಾಡಲು ಆಗುವುದೆ?' ಎಂದೂ ಕೇಳಿದೆ. ಮುಂದೆರಡು ದಿನಗಳಲ್ಲಿಯೆ ಆತುರದ ಪತ್ರ ಬಂತು: ನೀನು ಆ ವಿಳಾಸ ಕೊಟ್ಟವನ ಕಡೆಗೆಯೆ ಹೋಗಬೇ-ಕೆಂದೂ, ನಿನ್ನನ್ನು ಲಂಡನ್‌ಗೆ ಕಳಿಸುವ ಏರ್ಪಾಡನ್ನು ಮಾಡಲು ಹೇಳಬೇಕೆಂದೂ, ನೀನು ಲಂಡನ್‌ಗೆ ಬೇಗನೆ ಬರಬೇಕೆಂದೂ ನಿನ್ನನ್ನು ಕಾಣಲು ಆನಂದ—ಅತ್ಯಾನಂದವಾಗುವುದೆಂದೂ ಬರೆ-ದಿದ್ದರು. ನಾನು ಇಂಗ್ಲಂಡ್‌ಗೆ ಹೋಗಬೇಕೆಂದು ಮನಸ್ಸು ಕೂಡ ಮಾಡಿರಲಿಲ್ಲ. ಆದರೆ 'ಪಾರಿಸ್‌ನಲ್ಲಿದ್ದು ಅಲ್ಲಿಯ ಜನರಿಗೆ ಭಾರ-ವಾಗುವುದಕ್ಕಿಂತ ಇಂಗ್ಲಂಡೇನು ಕೇಡು?' ಎಂದು ವಿಚಾರಿಸಿ, ವಿಳಾಸ ಕೊಟ್ಟವನೆಡೆಗೆ ಹೋದೆ.

ಅಯ್ಯರ್ ಅವರಿಂದ ತನಗೊಂದು ಪತ್ರ ಬಂದಿದೆಯೆಂದೂ, ಆದರೂ ಲಂಡನ್ ಮುಟ್ಟಲು ಬೇಕಾಗುವಷ್ಟು ಹಣ—ಅಯ್ಯರರು ತಿರುಗಿ ಮುಟ್ಟಿಸುತ್ತೇವೆಂದು ಬರೆದಿದ್ದರೂ—ಕೊಡಲು ಮನಸ್ಸು ಒಪ್ಪದೆಂದೂ ತಿಳಿಸಿದರು. ಬೇಡವಾದ ಮಾತು; ಬಯಲಲ್ಲಿಯೂ ಗುಡ್ಡ ಕಾಣುವುದು.

ಕೊನೆಗೆ, ನಾನು ಸಿದ್ಧನಾಗಬೇಕೆಂದು ತಿಳಿಸಿದರು—ಒಂಟಿಗಾಲ ಮೇಲೆ ನಿಂತ ನಾನು ಸಿದ್ಧನಿದ್ದಿಲ್ಲವೆ? ಊಟದ ಮನೆಯ 'ಸಲ್'ನ್ನು ಅವನು ಕೊಟ್ಟ. ನಾನು ನನ್ನ 'ಗಂಟು' ಹೊತ್ತುಕೊಂಡು ಹೊರಟೆ-ಅವನ ಮನೆಗೆ. ಅಲ್ಲಿಂದ ಅವನು ನನ್ನನ್ನು ಗಾಡಿಗೆ ಕರೆದೊಯ್ಯುವವ, ನಾನು ಗಾಡಿಯಲ್ಲಿ ಕುಳಿತುದನ್ನು ಕಾಣುವವ. ಇದೇನು ನನಗೊಂದು ಗೌರವವೆಂದಲ್ಲ; ತಾನು ಕೊಟ್ಟ ಹಣದ ಉಪಯೋಗ ಸರಿಯಾಗಿ ಆಗುವುದೊ ಇಲ್ಲವೊ ನೋಡಬೇಕೆಂದು. ಇಲ್ಲದಿದ್ದರೆ ಕೊಟ್ಟ-ಹಣವನ್ನು ಅಲ್ಲಿಯೆ ವೆಚ್ಚಮಾಡಿ ಮತ್ತೆ ಬಾಗಿಲಿಗೆ ಬಂದೇನೆಂದು ಹೆದರಿಕೆ. ಅಂತೂ ಗಾಡಿಗೆ ಹಾಕಿದ ನನ್ನನ್ನು. ಟಿಕೀಟನ್ನು ತಂದ—ದೂರದ ಮಾರ್ಗವಾಗಿಯೆ ಇತ್ತು—ಬೊಲೋನ್—ಫೋಕ್‌ಸ್ಟನ್! ಅದರಿಂದ ಕೆಲ ಕಾಸು ಉಳಿಸಿಕೊಂಡ. ಅದು ಚಳಿಗಾಲದ ರಾತ್ರಿ. ನಡುಗುತ್ತ ನಾನು ಹಡಗಿನ ಮೇಲೆ ಕುಳಿತೆ. ಮೂರನೆಯ ತರಗತಿಯ ಪ್ರವಾಸಿಕ ನಾನು, ಬೆಚ್ಚಗಿನ ಹೊದಿಕೆ ನನಗೆಲ್ಲಿ? ನನಗೊಂದು ಹಚ್ಚಡವು ಕೂಡ ಇರಲಿಲ್ಲ. ಅಲ್ಲದೆ ನೀನು ಚಳಿಯಲ್ಲಿ ಹೇಗೆ ಮಾಡುವೆಯೆಂದು ಕೂಡ ಯಾರೂ ಕೇಳಲಿಲ್ಲ. ಕೇಳಿದರೆ 'ಅದನ್ನೂ ಕೊಡಿರಿ' ಎಂದು ನಾನು ಕೇಳಿದರೆ!

ಹೀಗಾಗಿ ನಡುಗುವುದರಲ್ಲಿಯೆ ನೆಮ್ಮದಿಪಟ್ಟುಕೊಂಡು ಹಲ್ಲನ್ನು ಬಾರಿಸುವುದರಲ್ಲಿಯೆ ಸಮಾಧಾನ ಹೊಂದಿ 'ಕ್ಷಣ ವೊಂದು ಯುಗವಾಗಿ' ಸಾಗುತ್ತಿರಲು, ಹಳೆಯ ಇಂಗ್ಲಂಡಿನ ಪ್ರವಾಸ-ವನ್ನು ನೆನೆದು, ಮುಂದೆ ಲಂಡನ್ ಮುಟ್ಟಿದ ಮೇಲೆ ನೆಮ್ಮದಿ-ಯಾಗಿರಬಹುದೆಂದು ಕನಸು ಕಾಣುತ್ತಿದ್ದೆ. —ಶ್ರೀ. ಅಯ್ಯರವರು ನಿಲ್ದಾಣಕ್ಕೆ ಬಂದಿದ್ದರು, ನನ್ನನ್ನು ಕರೆದೊಯ್ದರು.

ಸಾದರ ಸ್ವೀಕಾರ

೩೩. ಹಾರ್ಮೋನಿಯಂ ಮತ್ತು ಸಂಗೀತ ಸ್ವಯಂಬೋಧೆ— ಲೇಖಕರು ಶ್ರೀಮಾನ್ ಬಿ. ವೆಂಕಟಕೃಷ್ಣಪ್ಪ ಬಿ. ಎ. ಪ್ರಕಾಶಕರು:- ಮೆ. ಎಚ್. ಎನ್. ರಾವ್ ಬ್ರದರ್ಸ್, ಚಿಕ್ಕಪೇಟೆ, ಬೆಂಗಳೂರು ಸಿಟಿ. ಕ್ರೌ. ಅ. ೧೨೮ ಪುಟಗಳು. ಬೆಲೆ ೦-೧೨-೦.

೩೪. ಬನ್ನಿಮಹಳ್ಳಿ ಶ್ರೀ ವಿಟ್ಠಲ ಸೇವಾ ಸಂಘದ ವರದಿ— ಕಾರ್ಯದರ್ಶಿಗಳು- ಶ್ರೀಮಾನ್ ದ. ವಾ. ಸಿಂದಗಿ. ಕ್ರೌ. ಅ. ೧೮ ಪುಟಗಳು.

ಬಿದ್ದುಹೋಗಿರುವ ದೇವಸ್ಥಾನವನ್ನು ಸಂಘಶಕ್ತಿಯಿಂದ ಜೀರ್ಣೋದ್ಧಾರಗೊಳಿಸಿ, ಹೊಸಜೀವನಕ್ಕೆ ತಕ್ಕಂತೆ ದೇವಸ್ಥಾನದ ಪ್ರಯೋಜನವನ್ನು ಪಡೆದುಕೊಳ್ಳುತ್ತಿರುವ ಮಾದರಿಯ ಹಳ್ಳಿಯ ಸಂಸ್ಥೆಯಿದು. ಈ ಸೇವಾಸಂಘಕ್ಕೆ ಸೇರಿ ಒಂದು ವ್ಯಾಯಾಮ ಶಾಲೆಯೂ ವಾಚನಾಲಯವೂ ಇವೆ. ಕರ್ನಾಟಕ ಸಂಘವೊಂದನ್ನೂ ಈ ಸಂಸ್ಥೆ ಏರ್ಪಡಿಸುವುದರಲ್ಲಿದೆ. ವರ್ಷ ವರ್ಷವೂ 'ನಾಡಹಬ್ಬ'ವನ್ನು ಈ ಸಂಸ್ಥೆಯೇ ಅಲ್ಲಿ ಯಶಸ್ವಿಯಾಗಿ ನಡೆಯಿಸುವುದು. ಮೇಲು-ಕೀಳೆಂದು ಗಣಿಸದೆ ಸಂಘದ ಸದಸ್ಯರು, ಮದುವೆ-ಮುಂಜಿಗಳಲ್ಲಿ ನೀರುಹೊತ್ತು ಕೂಡ ಸಂಸ್ಥೆಗಾಗಿ ಹಣ ಶೇಖರಿಸುತ್ತಿರುವುದು ಅಭಿನಂದನೀಯ ಸಂಗತಿ. ಇಂತಹ ಸುಸಂಘಟಿತ ಕಾರ್ಯ ನಾಡಿನ ಬೇರೆ ಹಳ್ಳಿಗಳಲ್ಲಿಯೂ ನಡೆಯತೊಡಗಿದರೆ, ನಾವೆಲ್ಲ ಒಳ್ಳೆಯ ದಿನಗಳನ್ನು ಕಾಣಲಿಕ್ಕೆ ವಿಲಂಬವೇನೂ ಆಗಲಾರದು. ಸಂಸ್ಥೆ ಚಿರಾಯುವಾಗಿ ಬಾಳಲಿ!

೩೫. ಕಾರಡಗಿ ಮಹಾಲ ದೇಶಪಾಂಡೆಯವರ ಸಂಕ್ಷಿಪ್ತ ಇತಿಹಾಸ— (ಸಚಿತ್ರ). ಲೇಖಕರು- ಶ್ರೀಮಾನ್ ಗೋವಿಂದರಾವ್ ದೇಶಪಾಂಡೆ ಸವಣೂರು, ಪೆನ್ಶನರ್ ಎಸ್. ಡಿ. ಎ. ಇನ್‌ಸ್ಪೆಕ್ಟರ್, ಪ್ರಕಾಶಕರು- ಶ್ರೀಯುತ ಗೋ. ವೆ. ದೇಶಪಾಂಡೆ 'ಗೋವಿಂದ ನಿವಾಸ' ಸ್ಟೇಷನ್ ರೋಡ್ ಧಾರವಾಡ. ಕ್ರೌ. ಅ. ೧೫೦ ಪುಟಗಳು. ಬೆಲೆ ೧-೦-೦.

೩೬. ಶಿರಹಟ್ಟಿ ಲೋಕಮಾನ್ಯ ಧರ್ಮಾರ್ಥ ವಾಚನಾಲಯದ ವರದಿ— (ತಾ. ೧-೮-೪೨) ಡೆ. ಅ. ೧೬ ಪುಟ. ಕಾರ್ಯದರ್ಶಿಗಳು—ಶ್ರೀ. ಗಳಾದ ನಾ. ಅ. ದೇಶಪಾಂಡೆ, ವಿ. ಧೋಂ. ಮಂಗಸೂಳಿ.

ಕಳೆದ ವರ್ಷದ (೧೯೪೧) ಆಗಸ್ಟ್ ತಿಂಗಳಲ್ಲಿ ಹೀರಕಮಹೋತ್ಸವವನ್ನು ಮಾಡಿಸಿಕೊಂಡ ಬಹುದಿನದ ಸಂಸ್ಥೆಯಿದು. ೨೦೦೦ ರೂಪಾಯಿ ಬೆಲೆಬಾಳುವ ಸ್ವಂತದ ಕಟ್ಟಡವಿದೆಯಲ್ಲದೆ ೬೮೦೦ ರೂ. ಗಳ ಕಾದಿಟ್ಟ ನಿಧಿಯಿದೆ. ಗ್ರಂಥಸಂಗ್ರಹವು ೩೫೯೧-೧೦-೦ ಗಳದಿದೆ ಇನ್ನಿತರ ಆಸ್ತಿ ೭೦೨-೮-೦ ಗಳದಿದೆ. ಶಿರಹಟ್ಟಿ ಚಿಕ್ಕ ಊರಾದರೂ ಈ ಸಂಸ್ಥೆಯ ಮೂಲಕ ಕನ್ನಡ ನಾಡಿನಲ್ಲಿ ಹೆಸರನ್ನು ಪಡೆದಿದೆ.

(೨೦೪ನೇ ಪುಟದಿಂದ ಮುಂದುವರಿದುದು)

ವಿಧ್ವಂಸಕ ಕ್ಷಾತ್ರಬಲ ದುಷ್ಟನಿಗ್ರಹಕ್ಕೂ ವೈರಿ ನಿಗ್ರಹಕ್ಕೂ ಬೇಕಾಗುವುದು. ಭಾರತೀಯರಲ್ಲಿ ವಿಧಾಯಕ ಕ್ಷಾತ್ರಬಲ ಸಾಕಷ್ಟಿದೆ. ಸ್ವತಂತ್ರರಾಗಿ ಇದ್ದರೆ ಆ ಬಲವನ್ನವರು ಭಾರತದ ಸುಖ-ಶಾಸನಕ್ಕಾಗಿ ಉಪಯೋಗಿಸಬಹುದಾಗಿದ್ದಿತು; ಆದರೆ ಬಲಿಷ್ಠವಾದ ಪಾರತಂತ್ರ್ಯ ಆ ವಿಧಾಯಕ ಕ್ಷಾತ್ರಬಲವನ್ನು ಕ್ರಿಯಾಹೀನವಾಗಿಸಿಬಿಟ್ಟಿದೆ. ಇನ್ನು ವೈರಿಯ ಬಡಿಗೆಯ ಏಟಿನ ನಿವಾರಣಕ್ಕಾಗಿ ತಾನೂ ಬಡಿಗೆಯನ್ನು ಅನೇಕ ಸಲ ಹಿಡಿಯಲೇ ಬೇಕಾಗುವುದು. ಇಲ್ಲವಾದರೆ ವಿಧ್ವಂಸಕ ಕ್ಷಾತ್ರಬಲವು ವಿಧಾಯಕ ಕ್ಷಾತ್ರಬಲವನ್ನು ಹಾಳುಮಾಡಿಬಿಡುವುದು. ಆದುದರಿಂದ— ಏರಿಹೋಗುವುದಕ್ಕೆ ಅಲ್ಲವಾದರೂ ಸಂರಕ್ಷಣೆಗಾಗಿ— ವಿಧ್ವಂಸಕ ಕ್ಷಾತ್ರಬಲ ಬೇಕೇ ಬೇಕಾಗುವುದು. ಆದರೆ ಭಾರತೀಯರಲ್ಲಿ ಇದುವರೆಗೆ ಆ ಬಲ ಗಾಢನಿದ್ರೆಯಲ್ಲಿದ್ದಿತು. ಇಂದು ಮಹತ್ವಾಕಾಂಕ್ಷಿಗಳಾದ ಸರ್ವಾಧಿಕಾರಿ ರಾಷ್ಟ್ರಗಳೂ ಸಾಮ್ರಾಜ್ಯವಾದಿರಾಷ್ಟ್ರಗಳೂ ತಮ್ಮ ಆಸುರೀಲಾಲಸೆಯ ಕಾವನ್ನು ಲೋಕವೆಲ್ಲೆಲ್ಲ ಹರಿಬಿಟ್ಟುದರಿಂದ, ಆ ಕಾವು ಭಾರತೀಯರಲ್ಲಿಯ ಮಲಗಿದ್ದ ವಿಧ್ವಂಸಕ ಕ್ಷಾತ್ರಬಲವನ್ನು ಬಡಿದೆಬ್ಬಿಸತೊಡಗಿದೆ. ವಿಧ್ವಂಸಕ ಕ್ಷಾತ್ರಬಲವನ್ನು ಭಾರತದಿಂದ ಬೇರುವರಸಿ ಕಿತ್ತು ಹಾಕಬೇಕೆಂದಿದ್ದ ಬ್ರಿಟಿಷರು ಕೂಡ ಇಂದು ಒತ್ತಾಯದಿಂದ ಭಾರತೀಯರ ವಿಧ್ವಂಸಕ ಕ್ಷಾತ್ರವೃತ್ತಿಯನ್ನು ಅಪೇಕ್ಷಿಸುತ್ತಿದ್ದಾರೆ. ಭಾರತೀಯ ವೀರರ ಪಡೆಯಿಂದು ಬೇಕಾಗಿದೆ, ಭಾರತೀಯ ವೈಮಾನಿಕರು ಬೇಕಾಗಿದ್ದಾರೆ, ಭಾರತೀಯ ನೌಕೆಗಳು ಬೇಕಾಗಿವೆ. ಒಟ್ಟು ಮಲಗಿದ್ದ ವಿಧ್ವಂಸಕ ಕ್ಷಾತ್ರಬಲವನ್ನು ಬಡಿದೆಬ್ಬಿಸುವ ಕಾರ್ಯವಿಂದು ಅಖಂಡವಾಗಿ ನಡೆದಿದೆ. ಆದರೆ ನಮ್ಮಲ್ಲಿಯ ವಿಧಾಯಕ ಕ್ಷಾತ್ರಬಲವೇ ಆಗಲಿ, ವಿಧ್ವಂಸಕ ಕ್ಷಾತ್ರಬಲವೇ ಆಗಲಿ, ಇಂದು ಭಾರತೀಯರ ಪಾರತಂತ್ರ್ಯಪಾಶವನ್ನು ಬಿಚ್ಚಿ ಒಗೆಯಲಿಕ್ಕೆ ಉಪಯೋಗವಾಗಬೇಕು. ಭಾರತೀಯರ ಸ್ವಾತಂತ್ರ್ಯ ಸಂರಕ್ಷಣೆಗೆ ಉಪಯೋಗವಾಗಬೇಕು. ನಿರಂತರವಾಗಿ ನಡೆದುಕೊಂಡು ಬಂದಿದ್ದ ನಮ್ಮ ವಿಧಾಯಕ ಕ್ಷಾತ್ರಬಲವೂ, ಇದೀಗ ಎಚ್ಚರಿಯುತ್ತಿರುವ ವಿಧ್ವಂಸಕ ಕ್ಷಾತ್ರಬಲವೂ ಹೊಂದಿ ಹುರಿಗೊಳ್ಳಬೇಕು. ಭಾರತದ ಆದರ್ಶವಾದ ವಿಶ್ವಪ್ರೇಮವನ್ನು ಸಾಧಿಸಲು, ಸತ್ಯಧರ್ಮವನ್ನು ಸ್ಥಾಪಿಸಲು ಭಾರತೀಯರನ್ನು ಬಿಡುಗಡೆಗೊಳಿಸಬೇಕು. ಹಾಗೆ ಮಾಡದ ಯಾವ ಬಲದಿಂದಲೂ ನಮಗೀಗ ಪ್ರಯೋಜನವಿಲ್ಲ.

ಉತ್ತಿಷ್ಠತ! ಜಾಗ್ರತ! ಪ್ರಾಪ್ಯವರಾನ್ನಿಬೋಧತ!

—ಸಂಪಾದಕರು

ಬೆಳ್ಳಿ

(ಸಣ್ಣ ಕತೆ)

ಕಳ್ಳನನ್ನು ಕೊಲ್ಲಲೆಂದು ಹೋದ ತಿಮ್ಮನ ಕತ್ತಿ ಬಾವಿಗೆ ಬಿದ್ದುಬಿಟ್ಟಿತು. ಕಳ್ಳನ ಕೊರಳಿಗೆ ತಿಮ್ಮನ ಕತ್ತಿಯ ಏಟು ಬೀಳಲಿಲ್ಲ; ಬೆಳ್ಳಿಯ ಕೈಯ ಹೂಮಾಲೆ ಬಿದ್ದಿತು. ಮಾನವನ ಮನದ ಪರಿ ವಿಚಿತ್ರ!

✶

ಶ್ರೀ. ವಿ. ಜಿ. ಭಟ್ಟ, ಪುಣೆ

"ಬೇಡ. ಬೇಡ. ಅವ್ವಾ, ಅವ್ವಾ, ಬೇಡ!" ಎಂದು ಬೆಳ್ಳಿಯ ಕೂಗು; ಆದರೆ ತಿಮ್ಮಗೆಲ್ಲಿ ಕೇಳಿಸಬೇಕು? ಎಬ್ಬಿಸುವವರಾದರೂ ಯಾರು? "ಬೇಡ ಬೇಡ, ಅವ್ವಾ!" ಎಡೆಬಿಡದ ಕೂಗು ನಡೆದಿದ್ದಿತು.

ಮೂಲೆಹಳ್ಳಿಯಲ್ಲಿ ಸುಮಾರು ಮೂವತ್ತು ಗುಡಿಸಿಲುಗಳು. ಅವೆಲ್ಲವೂ ಒಂದೇ ಸಾಲಿನಲ್ಲಿದ್ದರೂ ಒಂದಕ್ಕೊಂದು ತಾಗಿಇಲ್ಲ; ಹೆಚ್ಚು ಕಡಿಮೆ ಕಾಲು ಫರ್ಲಾಂಗಿಗೆ ಒಂದು ಗುಡಿಸಿಲು. ಒಮ್ಮೆ ಖಾಲೀ ಚಿಮಣೀಡಬ್ಬಿ ಬಾರಿಸಿದರೆ, ಎಲ್ಲ ಜನರೂ ಒಂದೆಡೆ ಬರಬಹುದು. ಅದು ಜವಳು ಭೂಮಿ. ಗುಡಿಸಿಲುಗಳ ಹಿಂದೆ ಮಾತ್ರ ಬೆಟ್ಟ. ಮುಂದೆ ಕಿರುಬಯಲು. ಗುಡಿ-ಬಯಲುಗಳ ನಡುವೆ ಕೆಲವು ಬಾಳೆಯ ಗಿಡಗಳು. ಬಯಲು ಹೆಚ್ಚಾಗಿ ಹೊಡ್ಲು (ಹುದಲು); ತುಂಬಾ ಕಳೆ (ಹುಲ್ಲು ಕಸ); ಅಂತೆಯೇ ಮೂಲೆಹಳ್ಳಿಯವರು ಒಂದು ಮೈಲಾಚೆ ಹೊಲಮಾಡಿದ್ದರು. ನೀರು ವರ್ಷವೆಲ್ಲಾ ಜುಳುಗುಡುತ್ತಿರುವುದು. ಗಿಡಮರಗಳನ್ನು ಎಣಿಸಬಯಸುವವರು (ಕನ್ನಡಿ ತಲೆಯುಲ್ಲದವರು ಮಾತ್ರ) ತಮ್ಮ ತಲೆಯ ಪ್ರತಿಯೊಂದು ಕೂದಲಿಗೂ ಕಾಲು ಹಚ್ಚಿ ಅವುಗಳನ್ನೆಣಿಸಲು ಬಿಡಬಹುದು. ಹಕ್ಕಿಗಳು ಹೇಳತೀರದಷ್ಟು; ಹುಲಿಗಳೂ ಇವೆ. ನಾವು ಅಲ್ಲಿಗೆ ಬೇಸಗೆಯಲ್ಲಿ ಜೇನು ಅಳಿಯಲು ಹೋಗುತ್ತೇವೆ. ಧೈರ್ಯಮಾಡಿದರೆ ಕೊಡಗಟ್ಲೆ ಜೇನನ್ನು ತರಬಹುದು.

ಮೂಲೆಹಳ್ಳಿಯ ಗುಡಿಸಿಲುಗಳು ಮಾರೆತ್ತರದುವು. ನೆಲಕ್ಕೆ ಮೋರೆ ತಾಗುವಷ್ಟು ಬಾಗಬೇಕು—ಒಳಗೆ ಹೋಗುವಾಗ. ಒಳಗೆ ಒಂದೆರಡು ಕೋಣೆಗಳು; ಕೋಳಿಯಗೂಡು, ಗಂಜಿಯ ಕೋಣೆ, ಮಲಗುವಕೋಣೆ (ಕೆಲವುಗಳಲ್ಲಿ), ಎತ್ತಿನ ಮೂಲೆ. ಒಂದೊಂದು ಗುಡಿಸಿಲಲ್ಲಿ ಮೂರು, ಹೆಚ್ಚಾದರೆ ನಾಲ್ಕು ಮಂದಿ.

ಆ ಜನರನ್ನು ನೋಡಿ ಕೆಲವರು ನಗುವರು; ಕೆಲವರು ಅಳಲೂಬಹುದು. ಸೊಂಟಕ್ಕೆ ಹೆಬ್ಬೆಟ್ಟಿನಷ್ಟು ದಪ್ಪವಾದ ನಾಡುದಾರ; ಮೊಣಕಾಲಿನವರೆಗೆ ತೂಗಾಡುವ ಲಂಗೋಟಿ. ಇಷ್ಟುದ್ದ ಲಂಗೋಟಿಯೇಕೆಂದು 'ತರ್ಕೋಽಸ್ಮಾಖ' ಪಂಡಿತರು ಕೇಳಬಹುದು. ಮಿಂದಾದ ನಂತರ ಮೈಯೊರಸಿಕೊಳ್ಳಬೇಕಾದರೆ ಆ ತುದಿಯನ್ನು ಹಿಂಡಿ ಉದ್ದುಕೊಳ್ಳಬೇಕು. ಆ ಉಡುದಾರವಾಸುಕಿಗೊಂದು ಕೊಕ್ಕೆ, ಅದರಲ್ಲೊಂದು ಕತ್ತಿ—ಎಷ್ಟೋ (ಜನ, ದನಗಳನ್ನು ಬಿಟ್ಟುಳಿದ) ಪ್ರಾಣಿಗಳ ರಕ್ತ ಕುಡಿದ—ಗಿಡಮರಗಳನ್ನು ಕಡಿದ—ಅವರ ಬಲಗೈಯಾದ ಕತ್ತಿ. ಹಗಲ ಮೇಲೆ ಸಹಸ್ರಕಣ್ಣುಗಳಿಂದ ವಿಶ್ವವನ್ನು ನೋಡುವ—ಅವರ ಹಾಸಿಗೆ, ಹೊದಿಕೆ, ತಲೆಸಿಂಬೆ, ಶಾಲು—ಎಲ್ಲವೂ ಆದ ಕಂಬಳಿ. ಎಷ್ಟು ಮಣ್ಣುಗಳನ್ನು ತಿಂದು, ಎಷ್ಟು ವರುಷದ ಬೆವರು ಕುಡಿದು ಬಾಳಿದೆಯೆಂಬುದನ್ನು ಸಂಶೋಧಿಸಲು ನಾಲ್ಮೊಗನೇ ಬರಬೇಕು. ಒಂದು ಎಳೆಯು ಇನ್ನೊಂದಕ್ಕೆ 'ನಮಸ್ಕಾರ, ಹೋಗಿಬರುತ್ತೇನೆ' ಎನ್ನುವಂತಿರುವುದು. ಹೆಂಗಸರಿಗೆ ಒಂದು ಪಟ್ಟೆ; ಮಣಿಕಟ್ಟಿನಿಂದ ನಡುಗೈವರೆಗೆ ಅರ್ಧ ಇಂಚು ದಪ್ಪದ ಮಣ್ಣು-ಬಳೆಗಳು; ಕುತ್ತಿಗೆಯಲ್ಲಿ ನೂರು ಎಳೆಗಳಿಗೆ ಕಡಿಮೆಯುಳ್ಳ ದಪ್ಪ ಮಣಿಹಾರ; ಕಿವಿಗೆ ಬೆಂಡು. ಇವು ಅವರ ಡ್ರೆಸ್ಸು—ಸೂಟು. ಎರಡು ಕಂಬಳಿ, ಹತ್ತೆಂಟು ಕೋಳಿ, ಆಕಳು, ಕಾಲ್ಮೊರೆ ಉಳ್ಳವನೇ ಅವರಲ್ಲಿ ಕುಬೇರ. ರಾಗಿಯ ಅಂಬಲಿಯು ಅವರ ದೇವದತ್ತ ಅಮೃತ. ಮೀನು-ಅಕ್ಕಿ-ಕಾಯಿ-ಸಂಬಾರ ಇದ್ದ ದಿನ ಮೇಜವಾನಿಯೇ!

ಹೊತ್ತಾರೆ ಅಂಬಲಿಯನ್ನು ಕುಡಿದು, ಗಡಿಗೆ ತುಂಬಿಕೊಂಡು, ಸಕುಟುಂಬ ಸಪರಿವಾರವಾಗಿ ಹೊಲಕ್ಕೆ ನಡೆದರೆ, ಗುಡಿಸಿಲಿಗೆ ಬರುವುದು ಬೈಗಿನಲ್ಲಿ. ಗಂಡಸರು ಹೂಡುವುದು ಅಗೆಯುವುದು ಮುಂತಾದುವನ್ನೂ, ಹೆಂಗಸರು 'ನೆಟ್ಟಿ' ಕಳೆಕೀಳುವುದು ಮುಂತಾದುವುಗಳನ್ನೂ ಮಾಡುತ್ತಾರೆ. ಅವರ ಮೈಬೆವರ ರುಚಿಯನ್ನು ನೋಡಲೆಂದು ಸಪ್ತಾಶ್ವರಥಂ (ಗುಪ್ತಮೋ ಸಪ್ತಶರಧಿಯಂ ಪೀರ್ದ್ದಡಂ ಹೋರೆ, ಬೆವರಂ ಬಗೆವಂ ಗಡ!) ನಡುಬಾನಿಗೆ ಬರಲು, ಅವರು ಆಲದ ಮರದಡಿಗೆ ಸೇರಿ, ಅಂಬಲಿಕುಡಿದು ಸಂಚಿಯನ್ನು ಬಿಚ್ಚುವರು. ಕವಳದಿಂದ ಕೆಂಪಾದ ಹವಳದುಟಿಯ ನಲ್ಲೆಯರೊಡನೆ ನಗುತ್ತಾ, ಮೈಮೈತಾಗಿ ಹಾಯಾಗುವರು. ತರುಣದಂಪತಿಗಳು ಹಳ್ಳಿಯ ರಾಗತೆಗೆದು ಕೆಲೆದಾಡುವರು. ಅವರ ನಾಯಿಗಳು ಗಡಿಗೆಯ ಹತ್ತಿರವೇ ನಾಲಗೆ ಸೆಳೆದು ಕಾವಲು ಇರುವುವು. ತಾಸರ್ಧ ವಿಶ್ರಮಿಸಿ ಪುನಃ ತಮ್ಮ ತಪಕ್ಕೆ ತಯಾರಾಗುವರು. ಗುಡಿಸಿಲಿಗೆ ಬರಲು ಹೆಂಡತಿಯು ಬಚ್ಚಲೊಲೆಗೆ ಬೆಂಕಿಹಾಕುವಳು, ಗಂಡನು ನೀರು ತರುವನು. ಮೈಗೆ ಹೊನ್ನೆಯ ಎಣ್ಣೆ ಸವರಿಕೊಂಡು ಮೀಯುವರು. ತುಳಸಿಗೆ ಹಣತೆ ಹಚ್ಚಿ 'ವೈಸ್ರಾಗ್ನಿ ಅಂಬ್ಲೀ' ಕುಡಿದು ಮಲಗಿದರೆ, ಕೋಳಿಗಳೇ ಅವರನ್ನೆಬ್ಬಿಸಬೇಕು. ಹುಣ್ಣಿಮೆಯ ರಾತ್ರಿಗಳಲ್ಲಿ, ಗೌಡರ ಅಂಗಳದಲ್ಲಿ ಸೇರಿ 'ಮಡಿ (ಒಂದು ವಾದ್ಯ)' ಮೆಟ್ಟುವರು. 'ಶಿಂಗಿಜೋಳ' ಮುಂತಾದ ಅವರ ಸುಪ್ರಸಿದ್ಧ ನಾಟಕಗಳನ್ನು ಅಭಿನಯಿಸುವರು.

‘ ಗುಮಟೆ ಪಾಗು ’ ವಾರಕ್ಕೊಮ್ಮೆಯಾದರೂ ಆಗುವುದು. ಅವರ ಹತ್ತಿರ ಯಾವಾಗಲೂ ಒಂದು ಮುಡಿಕೆ ಜೇನು ಇರುತ್ತದೆ. “ ಮಾರ್‍ಸ್ನೋಮಿ ಪಚ್ಕೇಂತ್ ಇಟ್ಟೇನೆ ” ಎನ್ನುತ್ತಾರೆ—ನಾವು ಕೇಳಿದರೆ. “ ಇಲ್ಲ, ಜೇನೇ ಇಲ್ಲ ” ಎನ್ನುವುದಿಲ್ಲ. ಎಷ್ಟೋ ಕವಿಗಳು “ ಜೇನ್ಗಿಂತ ಸವಿಯುಂಟೆ? ” ಎಂದು ಬರೆದಿರಬಹುದು, ಆದರೆ ಅವರಲ್ಲಿ ‘ ನಿಜವಾಗಿ ಜೇನು ಸವಿದ’ ವರು ಎಷ್ಟು-ಮಂದಿಯೋ! ನಾನಂತೂ ಅವರ ಜೀವನವನ್ನು ಮಚ್ಚರಿಸಿ. “ ಗೆಳತಿ ಬಾ ನಲಿಯುವ, ಹಚ್ಚ ಹುಲ್ಲಲಿ ಹೊರಳಿ, ಜೊನ್ನವಾಲಲಿ ಮಿಂದು, ಸೃಷ್ಟಿಯಂದದಿ ನಿಂದು ಎಲುಬಿನಾಳದ ತನಕ ಮುದ್ದಿ-ಸುತ ಜೀವನದಿ ಕಾಡು (?) ಜನರಂತೊಮ್ಮೆ ! ” ಎಂದು ನನ್ನ-ಲ್ಲಿಯೇ ಎಂದುಕೊಂಡಿದ್ದೇನೆ. ನಮ್ಮವಳು ಕ್ರೀತಭಸ್ಮದ ಮುಸುಕನ್ನು ಮುರಿದಳು, ನಾನು ಇದನ್ನು ಅವಳಿಗೆ ಹೇಳಲು.

* * *

ತಿಮ್ಮನು ಆ ಲೋಕಕ್ಕೆ ಕುಬೇರ. ತಿಮ್ಮಿ ಅವನ ಹೆಂಡತಿ; ಬೆಳ್ಳಿ ಪ್ರೀತಿಯ ಮಗಳು. ಶ್ರೀಮಂತತನದ ಕುಟುಂಬವಾದು-ದರಿಂದ, ತಿಮ್ಮಿಯು ದುಡಿಯಲಿಕ್ಕೆ ಹೋಗುತ್ತಿರಲಿಲ್ಲ. ಮನೆಯ ಕೆಲಸವೇ ಅವಳ ಹೆಗ್ಗೆಲಸ. ಬೆಳ್ಳಿಯು (ಅವಳಿಗೆ ಹತ್ತರ ಮೇಲೆ ಆರು ಆಯಿತು) ಆಕಳ ಕರುವನ್ನು ಮೇಯಿಸಿಕೊಂಡು ಬರುವಳು.

ಬೆಳ್ಳಿಗೆ ತೊಟ್ಟಿಲು-ಮದುವೆಯಾಗಿತ್ತು ; ಆದರೆ, (“ ದೇವ್ರು ಹಣ್ಯಾಗೇನ್ಬರದದ್ಯೋ ಯಾರ್ಬಲ್ಲ ? ” ತಿಮ್ಮ-ತಿಮ್ಮಿಯರು ಹೀಗೆ ಎನ್ನುತ್ತಾರೆ) ಅವಳಿಗೆ ಆರು ವರುಷ ಆಗುವುದರೊಳಗೇ ಅವಳ ಬಾಲಪತಿಯು ಕಾಲವಶನಾಗಿದ್ದನು. ಪ್ರೀತಿಯವಳಾದ ಒಬ್ಬಳೇ ಒಬ್ಬಳು ಮಗಳನ್ನು ತಂದೆ-ತಾಯಿಗಳು ಮನೆಯಲ್ಲಿಯೇ ಇಟ್ಟು-ಕೊಂಡಿದ್ದರು.

ಕಲ್ಲನು ತೀರ ಬಡವ; ಅವನಿಗೆ ಅವನೇ ಗತಿ. ‘ ಕಾಳು ’ ನಾಯಿಯು ಅವನ ಗೆಳೆಯ, ಮೈಗಾವಲು. ಅವನಿಗೆ ೨೪ ವರುಷ. ಕಂಬಳಿ ಸಹ ಚೆನ್ನಾಗಿಲ್ಲ, ಕೋಳಿ ಇಲ್ಲವೇ ಇಲ್ಲ. ಹೀಗಿರು-ವಾಗ ಆತನಿಗೆ ಹೆಣ್ಣು ಯಾರು ಕೊಡಬೇಕು? ತನ್ನ ಅನ್ನ ತಾನೇ ಬೇಯಿಸಿಕೊಳ್ಳುತ್ತಿದ್ದ. ನಾವು ಕಣ್ಣಿಟ್ಟ ವಸ್ತುಗಳೆಲ್ಲಾ ನಮಗೆ ದೊರಕುವುವೇ ? ಕಲ್ಲನು ಬೆಳ್ಳಿಯ ಮೇಲೆ ತನ್ನ ಕಣ್ಣು—ಮನಗಳ-ನ್ನೆಲ್ಲ ಇಟ್ಟರೂ, ಹೃದಯವನ್ನು ಅರ್ಪಿಸಿದರೂ, ಅವನಿಗೆ ಅವಳ ಲಭ್ಯವೆಲ್ಲಿ ? ತಿಮ್ಮನಿಗೆ ಕಲ್ಲನೆಂದರೆ ತೀರಿತು, ಎಣ್ಣೆ—ಸೀಗೆ! ಒಮ್ಮೆ ಕಲ್ಲನಿಗೆ ತಿನ್ನಲು ಏನೂ ಸಿಕ್ಕದಿದ್ದಾಗ, ತಿಮ್ಮನ ಕೋಳಿ-ಯೊಂದನ್ನು ಕದ್ದು ಹಸಿವೆ ಹಿಂಗಿಸಿದನಂತೆ; ಅದಕ್ಕಾಗಿಯೆ ತಿಮ್ಮನು ಕಲ್ಲನನ್ನು ಜನ್ಮಜನ್ಮಾಂತರದ ವೈರಿಯೆಂದು ತಿಳಿದಿದ್ದ. “ ಕಲ್ಲನನ್ನು ಕೊಂದು (ಏನಾದರೊಂದು ಕಲಹಮಾಡಿ), ಅವನ ಮಾಂಸವನ್ನು ತನ್ನ ಕೋಳಿಗೆ ಹಾಕದಿದ್ದರೆ ನಾನು ತಿಮ್ಮನಲ್ಲ !’ ಎಂದುಅವನು ನಿಶ್ಚಯಿಸಿದ್ದ. ಕಲ್ಲನಿಗೆ ಪ್ರತಿನಿಮಿಷವೂ ಬೆಳ್ಳಿಯ ಚಿಂತೆ. ಆದರೆ ತಿಮ್ಮನಿಗೆ ಅಂಜಿ ಸುಮ್ಮನಿದ್ದ. ಪ್ರಿನ್ಸಿಪಾಲರು ಎಷ್ಟು ಬಿಗಿಯಿಂದಿಟ್ಟರೇನು ? ಕಾಲೇಜಿನ ವಿದ್ಯಾರ್ಥಿ-ವಿದ್ಯಾರ್ಥಿ-ನಿಯರು ಪ್ರೇಮಸಾಗರದಲ್ಲಿ ಕದ್ದು ಕದ್ದು ಈಜಾಡುವುದಿಲ್ಲವೇ ? (ಒಮ್ಮೊಮ್ಮೆ ಈ ಈಜಾಟದಲ್ಲಿ ಮೊಸಳೆಗೆ ತುತ್ತಾಗುವುದೂ ಇಲ್ಲವೇ ?)

ಅಂದು ತಿಮ್ಮನು ಹೊಲಕ್ಕೆ ಹೋಗಿದ್ದ. ತಿಮ್ಮಿ ನೀರು ಕಾಯಿಸಲು ಜಗ್ಗೆ (ಉರುವಲು) ತರಲು, ಹಿಂದಿನ ಬೆಟ್ಟಕ್ಕೆ ನಾಯಿ-ಯೊಡನೆ ಹೋಗಿದ್ದಳು. ಬೆಳ್ಳಿ ಕರುವನ್ನು ಮೇಯಿಸಲು ಬಯಲಿಗೆ ಇಳಿದೊಡನೆಯೆ ‘ ಫುರ್ ಫುರ್ ’ ಎಂದು ಪುಟಿಯುತ್ತಾ ಕರುವು ಹಗ್ಗತಪ್ಪಿಸಿಕೊಂಡು ಓಡಿಹೋಯಿತು; ಅತ್ತಿತ್ತ ನೆಗೆದಾಡಿ ಹೊಡ್ಲಲ್ಲಿ (ಕೆಸರಿನಲ್ಲಿ) ಹುಗಿದುಬಿತ್ತು. ಮೋರೆ—ಬೆನ್ನುಗಳು ಮಾತ್ರ ಕಾಣಿಸುತ್ತಿದ್ದುವು. ಅದನ್ನೆಬ್ಬಿಸಹೋಗಿ ಬೆಳ್ಳಿಯೂ ಸೊಂಟದ ವರೆಗೆ ಹುಗಿದುನಿಂತಳು.

“ ಬೇಽ ಬೇಽ! ಅವ್ವಾ-ಅವ್ವಾ ಬೇಽ ” ಎಂದು ಕೂಗತೊಡಗಿ-ದಳು. ಆದರೆ ತಿಮ್ಮಿಗೆಲ್ಲಿ ಕೇಳಿಸಬೇಕು ? ಎಬ್ಬಿಸುವವರಾದರೂ ಯಾರು ? “ ಬೇಽ, ಅವ್ವಾ, ಬೇಽ! ”.

ಕಲ್ಲನು (ಹರಯದ) ಜಾಡ್ಯದಿಂದ ಮನೆಯಲ್ಲಿಯೆ ಮಲಗಿದ್ದ. ಬೇಸತ್ತು ‘ ಬಯಲಿನ ಕಡೆಗೆ ತಿರುಗಾಡೋಣ, ಬೆಳ್ಳಿ ಸಿಕ್ಕರೆ ಸ್ವಲ್ಪ ಧೈರ್ಯಮಾಡಿ ಮಾತನಾಡಿಸೋಣ ’ ಎಂದು ವಿಚಾರಿಸಿ, ಬಾಳೆ-ಗಿಡಗಳ ಸಾಲಿನಲ್ಲಿ ಬಂದ. ದೂರದಿಂದ ಬೆಳ್ಳಿಯ ಗತಿಯನ್ನು ಕಂಡು “ಪಾಪ ಯಾರೋ ಹುಕ್ಕೊಂಡಿದ್ದಾರೆ!” ಎಂದು ಆ ಕಡೆಗೆ ನಡೆದ. ಹೊಡ್ಲಲ್ಲಿ ಸಿಕ್ಕಿಬಿದ್ದವಳು ಬೆಳ್ಳಿ. ಕುತೂಹಲದಿಂದ ಕೇಳಿದ :

“ ಇದೇನಾಯ್ತೋ ಬೆಳ್ಳಿ ? ”

“ ಕಡೀಗ್ಹೇಳ್ತೀನಿ ಮೊದ್ಲೆಬ್ಸೋ ! ” ಎಂದು ಕೈ ಮುಂದೆ ಮಾಡಿದಳು. ಕಲ್ಲನಿಗೆ ದೇವರು ಒಲಿದಂತಾಯಿತು. ನೀಡಿದ ಕೈಗೆ ತನ್ನ ಕೈಕೊಟ್ಟು ಬೆಳ್ಳಿಯನ್ನೆಬ್ಬಿಸಿದ. “ ನೀನ್ಹೋಗ್ಬಹ್ದು, ನಾ ಕರೂನೆಬ್ಸಿಕೋತೇನೆ ” ಎಂದಳು ಬೆಳ್ಳಿ. . . . ರಾಡಿಯ ದಟ್ಟಿ-ಯನ್ನು ಹಿಂಡುತ್ತ. “ ನಿನ್ನಿಂದ ಆಗೋದಿಲ್ಲ ; ಮತ್ತು ಗುದ್ದಿಬಿದ್ದೀ ” ಎಂದವನೇ ಕಲ್ಲ, ಬಾಳೆಮರಗಳ ಹತ್ತಿರ ಹೋಗಿ, ಬಳ್ಳಿತಂದು, ಕರುಎಬ್ಬಿಸಲನುವಾದ. ಬೆಳ್ಳಿ ಕಲ್ಲನನ್ನು ಕಣ್ತುಂಬ ನೋಡಿದುದು ಅಂದೆಯೆ ! ಅವನ ಶರೀರದಾರ್ಢ್ಯವು ಎಷ್ಟೊಂದು ಇದ್ದರೂ ಮುಖಮಾತ್ರ ಬಾಡಿತ್ತು. ಅವನನ್ನು ನೋಡುತ್ತಿರಲು ಬೆಳ್ಳಿ ನಡುಗಹತ್ತಿದಳು. ಹೊರಗೆ ನೀರಿನ ಮೂಲಕ ಚಳಿ, ಒಳಗೆ ಹರಯ ಹೃದಯವನ್ನು ತುಡಿಯುವ ಧಡಧಡಿಕೆ. ಕರುವನ್ನು ಎಬ್ಬಿಸಿ ಹಗ್ಗ ಕಟ್ಟಿದ, ಕಲ್ಲ. ಒಬ್ಬರನ್ನೊಬ್ಬರು ಮೂಕರಾಗಿ ದಿಟ್ಟಿಸತೊಡ-ಗಿದರು. ಕಲ್ಲನ ತುಟಿಯಿಂದ “ ಬೆ. . ಳ್ಳಿ. . ” ಎಂಬ ಶಬ್ದ ಕಂಪಿಸುತ್ತ ಬಂತು. “ ನಮ್ಮಪ್ಪ ಸಿಟ್ಟೇಗ್ಬತಾರ್‍ನೆ ” ಎನ್ನುವಾಗ ಬೆಳ್ಳಿಯ ಕಣ್ಣು ನೆಲಕ್ಕೆ ನೆಟ್ಟುವು. ಬೆಟ್ಟದಿಂದ ಒಂದು ಉಸಿರು— ಭೂದೇವಿಯ ಉಸಿರು— ಬಂತು. ಮರಗಳು ಒಂದನ್ನೊಂದು

ಮುದ್ದಿಟ್ಟುವು. ಹುಲ್ಲುಗಳು ತಲೆದೂಗಿದುವು. ಬಿಳಿಯವಾದ ತಿಳಿಮೋಡಗಳು ಕೆಳಗೇ ನೋಡುತ್ತಿದ್ದುವು. ಕರುವು ಕಿವಿಗಳನ್ನು ಅಲ್ಲಾಡಿಸುತ್ತಾ 'ಬೇ' ಎನ್ನುತ್ತಿತ್ತು; 'ಪಕ್ಕದ ಪಾತರಗಿತ್ತಿ' ಅಲ್ಲಿಯೇ ಹಾರಾಡುತ್ತಿತ್ತು. ನೇಸರು ಗುಲಾಬಿಯನ್ನು ಎಲ್ಲೆಡೆಗೆ ಎರಚಿದನು. ಹೊದ್ದಿನಲ್ಲಿ— ಮಗುವಿನ ಮುಖದಿಂದ ಬರುವಂತೆ— ಗುಳ್ಳೆಗಳು ಬರುತ್ತಿದ್ದುವು. ತಿಮ್ಮಿ ಬೆಳ್ಳಿಯನ್ನು ಕರೆಯಲು ಗುಡಿಸಿಲಿಂದ ಬರುತ್ತಿದ್ದಳು, ಅವರಿಬ್ಬರ ತುಟಿಗಳು ಕೂಡಿದ್ದುವು—ಕರುವು 'ಬೇ' ಎಂದಿತು.

"ಬೆಳ್ಳೀ, ಏ ಬೆಳ್ಳೀ, ಏ ಹಂಚ್ಮಾರ್ತಿ! ಏನ್ಮಾಡ್ದಿ ? .... ಥೂ ನೀಸಾಯ...." ಒಮ್ಮೆಲೆ ತಕ್ಕೆಗಳು ಸಡಿಲಾದುವು. ಇಬ್ಬರೂ ಹಿಂದೆ ನೋಡಿದರು. ತಿ....ಮ್ಮಿ ! ಕೆಂಡಕಾರುತ್ತಾ ಬರುತ್ತಿದ್ದಳು. ಇಬ್ಬರ ಎದೆಯಲ್ಲಿಯೂ ತಣ್ಣೀರನ್ನು ಹೊಯ್ದಂತಾಯಿತು. "ಕಲ್ಲಾ, ನಿನ್ಮನೇ ಪಾಳಾಗ! ನಮ್ಕೋಳಿ ತಿಂದಿ....! ನಮ್ಮಗ್ಗನ್ನ ಹಾಳ್ಮಾಡ್ದಿ ....! ಥೂ, ನಿನ್ಕುಲ ಹಾಳ್ಬೀಳ!" ಎಂದು ಬಾಯಿ ಹಾಯ್ದಂತೆ ಬಯ್ಯುತ್ತ, ಬೆಳ್ಳಿಯ ರಟ್ಟೆ ಹಿಡಿದು, ಕರುವಿನೊಡನೆ ದರದರ ಎಳೆದುಕೊಂಡು ನಡೆದಳು. ಕಲ್ಲ ಬಲಕ್ಕೆ ತಿರುಗಿದ. ಕಾಳುನಾಯಿ ಬಾಲ ಅಲ್ಲಾಡಿಸುತ್ತಿತ್ತು.

* * *

ಬೆಳ್ಳಿಯು ಜ್ವರದಿಂದ ಬೇಗನೆ ನಿದ್ದೆ ಹೋದಳು. ಗಂಡಹೆಂಡಿರಿಬ್ಬರೂ ಹಲ್ಲುಕಡಿಯುತ್ತ ಕುಳಿತರು. ದಣಿದ ತಿಮ್ಮನು ಮಾತನಾಡುತ್ತಿರುವಾಗಲೇ ಮಲಗಿದನು. ತಿಮ್ಮಿ ಮಾತ್ರ ಏನೇನನೋ ಗುಣುಗುಟ್ಟುತ್ತ ಕುಳಿತಿದ್ದಳು. ಸುಮಾರು ಎರಡು ತಾಸು ಕಳೆಯಲು ತಿಮ್ಮಿ ಗಂಡನನ್ನೆಬ್ಬಿಸಿದಳು. ಕತ್ತಿ ಸಿದ್ಧವಾಗಿತ್ತು! ತಿಮ್ಮನು ಕಂಬಳಿ ಹೊದೆದು, ಕತ್ತಿಯನ್ನು ಬತ್ತಾಗಿ ಹಿಡಿದು, ಆ ಕತ್ತಲಲ್ಲೇ ಕಲ್ಲನ ಗುಡಿಸಿಲಕಡೆಗೆ ನಡೆದನು. "ಒಂದೇ ಕಪ್ಪಿಗೆ ಆಗ್ಹೋಗ್ಲಿ....! ಕಾಳು ಕಚ್ಚೀತು. ಅದನ್ನ ಮೊದ್ಲು....!" ಮುಂತಾಗಿ ಹೆಂಡತಿಯು ಉಪದೇಶಿಸಿದ್ದಳು.

ಕಲ್ಲನ ಗುಡಿಸಿಲಿನ ಎಡಕ್ಕೆ ದಾರಿಗೆ ಹೊಂದಿ, ಕಟ್ಟೆಯಿಲ್ಲದ ಎರಡಾಳಿನ ಬೋಳು ಬಾವಿಯಿದ್ದುದನ್ನು ನಿಮಗೆ ತಿಳಿಸಲಿಲ್ಲ. ಈಗಂತೂ ಕತ್ತಲೆ, ಹೇಗೆ ತೋರಿಸಲಿ ? ಒಮ್ಮೆಲೆ ಶಬ್ದ !

'ಧುಘುಂ !' ಕೂಡಲೆ ನಾಯಿಯ ಬೊಗಳಾಟ. 'ಬವ್. ಬವ್. ಬವ್........!' ನೆಲದ ಮೇಲೆ ಹೊರಳಾಡುತ್ತಿದ್ದ ಕಲ್ಲ ಕತ್ತಿಯನ್ನು ಹಿಡಿದು ಹೊರಗೆ ಬಂದ. ಬಾವಿಯ ಕಡೆಗೆ ಕಾಳು ಬೊಗಳುತ್ತಿತ್ತು. ಅಲ್ಲಿಗೆ ಹೋಗಲು "ಅಯ್ಯೋ ಸತ್ನೋ. ಓ ಕಲ್ಲಾ, ಕಲ್ಲಾ....' ಎಂಬ ಆರ್ತಧ್ವನಿ ಕೇಳಿಬಂತು. ಕಲ್ಲ ಕೇಳಿದ: "ಯಾರದು ?" ಬಾವಿಯೊಳಗಿಂದ ನುಡಿ: "ನಾನೇ ತಿಮ್ಮ.... ಕಲ್ಲಾ...."

* * *

ತಿಮ್ಮಯ್ಯನ ಮೈಗೆ ಎಣ್ಣೆ ಹಚ್ಚಿ ತಿಕ್ಕಿದ ಕಲ್ಲ. ಕಾಳುವು ಬೊಗಳುವುದನ್ನು ಬಿಟ್ಟೀತೇ? ಕಲ್ಲ ಕೇಳಿದ: "ಇಷ್ಟೊತ್ನಲ್ಲಿ ಇಲ್ಯಾಕ್ಬಂದಿ ತಿಮ್ಮಯ್ಯ ?"

"ಏನಂಬೂದು ಕಲ್ಲಾ, ಬೆಳ್ಳೀಮ್ಯಾಗ ನಿನ್ಪ್ರೀತಿ ಆದೇಂತ್ ಕೇಳಿ ಬಾಳ ಆನಂದವಾಯ್ತು. ಅವ್ಳ, ನಿನ್ಗೇ ಕೊಡ್ಬೇಕು, ಮತ್ಮದ್ವೆ ಮಾಡ್ಬೇಕೂಂತ....ಯ್ಯ ಹಾಯ್ಯ ....ಯ್ಯ ದೇವ.."

"ಹೊತ್ತಾರೆ ಹೇಳ್ಲಾಕಾಗ್ತಿತ್ತಿಲ್ವ? ಚೂಡೀನೂ ತರ್ಲೇ ಇಲ್ಲ!"

"ಸಂತೋಸ ಬಾಳಾತು! ಈ ರಾತ್ರೀಲೇ ಅವ್ಳ ನಿನ್ಗೆ ಕೊಟ್ಬಿಡ್ಬೇಕೂಂತ ಬಂದೆ. ನನ್ಗಾಕೇ ಬೇಡಾಂದ್ಳು. ಆದ್ರೂ ಕೇಳ್ಲಿಲ್ಲ. ಕಲ್ಲಾ, ಏಳು, ಹೇಗಾದ್ರೂ ನಮ್ಮನೀಗ್ಹೋಗ್ವಾ! ತಿಮ್ಮಿ ದಾರೀ ಕಾಯ್ತಾಳ. ದೇವ್ರು, ನಿನ್ಗೊಳ್ಳೇದ್ಮಾಡ್ಲಿ!"

ಬೆಳ್ಳಿ ಮೂಡಿತ್ತು, ಬೆಳ್ಳಿಯು ಕಲ್ಲನನ್ನು ಕೂಡಿದಳು.

ಬಾವಿಯಲ್ಲಿ ಬಿದ್ದ ತಿಮ್ಮನ ಕತ್ತಿ ಕಡೆಗೂ ಸಿಗಲಿಲ್ಲ.

* * *

ಕಳೆದ ರಜೆಯಲ್ಲಿ ಜೇನು ತರಲೆಂದು ಅಲ್ಲಿಗೆ ಹೋಗಿದ್ದೆ, ಬೆಳ್ಳಿಕಲ್ಲರನ್ನು ನೋಡಿದೆ. 'ದೇವರು ನನ್ನನ್ನೇಕೆ ಕಲ್ಲನನ್ನಾಗಿ ಮಾಡಲಿಲ್ಲ ?" ಎಂದು ಚಿಂತಿಸಿದೆ.

ಡೋಂಗರೆ ಬಾಲಾಮೃತವು
ಮಕ್ಕಳಿಗೆ
ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ.

ಕುರೂಪ ದರ್ಶನ

(ವಿವೇಚನಾತ್ಮಕ ಪ್ರಬಂಧ)

★

ಶ್ರೀ. ಶ್ರೀಧರ ಖಾನೋಳಕರ, ಪುಣೆ

★

ಪುರಾಣದಲ್ಲಿ ಒಂದು ಕಥೆ ಇದೆ. ರಾಮಾವತಾರದಲ್ಲಿ ಹನುಮಂತನಿಗೆ ರಾಮನು ವಚನವನ್ನುಕೊಟ್ಟಿದ್ದನು: 'ಕೃಷ್ಣಾವತಾರದಲ್ಲಿಯೂ ನಿನಗೆ ನನ್ನ ದರ್ಶನವಾಗುವುದು' ಎಂದು. ಅದರಂತೆಯೆ ಚಿರಂಜೀವಿಯಾದ ಮಾರುತಿಯು ಬಂದು ಬೆಟ್ಟಿಯಾಗಿ, ತನಗೆ ರಾಮಾವತಾರದ ದರ್ಶನವಾಗಲೆಂದನು. ಬಹುರೂಪಿಯಾದ ಕೃಷ್ಣನಿಗೇನು ತಡ? ಒಂದೇ ನಿಮಿಷದಲ್ಲಿ ತಾನು ರಾಮನಾದನು, ಬಲರಾಮನು ಲಕ್ಷ್ಮಣನಾದನು. ಸತ್ಯಭಾಮೆ ಅಲ್ಲಿಯೆ ನಿಂತಿದ್ದಳು, ನಾನೇ ಸೀತೆಯಾಗುವೆನೆಂದಳು. 'ಆಗಲಿ' ಎಂದನಂತೆ ರಾಮ. ಸತ್ಯಭಾಮೆಯು ತರತರದ ವೇಷಭೂಷಣಗಳನ್ನು ಧರಿಸಿಕೊಂಡು ಬಂದಳಂತೆ. ಆಗೆಲ್ಲ ಹನುಮಂತ 'ಸೀತೆಯೆಲ್ಲಿ?' ಎಂದು ಕೇಳುತ್ತಿದ್ದನಂತೆ! ಇದನ್ನು ಕಂಡು ಕೃಷ್ಣನು ರುಕ್ಮಿಣೀದೇವಿಗೆ 'ಸೀತೆಯಾಗು' ಎಂದು ಹೇಳಿದನಂತೆ. ರುಕ್ಮಿಣೀದೇವಿಯು ಒಳಗೆ ಹೋಗಿ, ಸ್ವಲ್ಪ ಹೀಗಿದ್ದ ಸೆರಗನ್ನು ಹಾಗೆಮಾಡಿಕೊಂಡು ಬಂದಳಂತೆ. ಹನುಮಂತ ಸೀತಾಮಾತೆಯನ್ನು ಗುರುತಿಸಿ, ಆಕೆಯ ಪಾದಕಮಲಗಳಿಗೆ ಎರಗಿದನಂತೆ. ರಾಮಾವತಾರವೆಂದರೆಯೆ ಅನಂತ ಬ್ರಹ್ಮಾಂಡ ನಾಯಕನ ವಿವಿಧಕಳೆಗಳಿಂದ ಒಡಗೂಡಿದ ಕಲೆಯು. ಸೀತಾದೇವಿಯೆಂಬುದೇ ಸೌಂದರ್ಯ. ಹನುಮಂತನಂತಹ ಭಗವದ್ಭಕ್ತರೇ ರಸಿಕರು.

ಕಲೆಯೆಂದರೆ ಕಲೋಪಾಸಕನು ತನ್ನ ಬಗೆ, ಭಾವ, ಅನುಭವ, ಬುದ್ಧಿ ಮುಂತಾದ ತನ್ನಲ್ಲಿರುವ ಅನಂತ ಶಕ್ತಿಗಳನ್ನು ತಿಳಿಮಾಡಿ, ಸೌಂದರ್ಯದ ಪಡಿಯಚ್ಚಿನಲ್ಲಿ ಹೊಯ್ದ ಕಾಂತಮೂರ್ತಿ. ಅದು ವಾಸ್ತುವೇ ಆಗಲಿ, ಚಿತ್ರವೇ ಆಗಲಿ, ಮೂರ್ತಿಯೇ ಆಗಲಿ, ರಾಗವೇ ಆಗಲಿ, ಪದ್ಯವೇ ಆಗಲಿ, ನಾಟಕವೇ ಆಗಲಿ—ಅವನ ಅನಂತ ಶಕ್ತಿಗಳ ಎಳೆಗಳನ್ನು, ಒಂದು ತತ್ತ್ವದ (ಧ್ಯೇಯದ) ದಾರಿಹಿಡಿದು ವಿವಿಧಭಾವಗಳ ಜರಿಯ ಹೂಗಳನ್ನು ಕೂಡಿಸಿ ಹೆಣೆದ ವಸ್ತ್ರವಿದು. ಇದರಲ್ಲ ಅನಂತ ಸೂಚನೆಗಳಿಂದ ಅನಂತ ಭಾವಗಳನ್ನು ಕಲಾವಿದನು ತೋರಿಸುವನು–ಒಂದೊಂದು ಸ್ಥಾನದಲ್ಲಿ. ಈ ಸೌಂದರ್ಯಸ್ಥಾನಗಳು ಎಷ್ಟು ಮಟ್ಟಿಗೆ ಹೆಚ್ಚೋ ಅಷ್ಟೇ ಮಟ್ಟಿಗೆ ಕಲೆಯು ಸರ್ವೋತ್ತಮವೆನಿಸಿಕೊಳ್ಳುವುದು. ವಿವಿಧತೆಯುಲ್ಲಿ ಏಕತ್ವವು ಕಂಡುಬರುವುದು ಕಲಾಕೃತಿಯಲ್ಲಿ. ವಿವಿಧ ಸೂಚನೆಗಳ ಮಾರ್ಗವನ್ನು ಹಿಡಿದು, ಕಲೋಪಾಸಕನ ಆತ್ಮದೇವರ ಗರ್ಭಗುಡಿಯೊಳಗಿನ ಸತ್ಯಮೂರ್ತಿಯ ಪಾದಕಮಲಗಳ ಬಳಿಗೆ ಹೋಗಿ ಆನಂದವನ್ನು ಪಡೆಯುವುದೇ ರಸಿಕನ ಗುರಿಯಾಗಿರುವುದು.

ಪೂರ್ಣವಾದ ಕಲಾಕೃತಿಯನ್ನು ಎಷ್ಟು ದೃಷ್ಟಿಕೋನಗಳಿಂದ ನೋಡಿದರೂ ಅದು ತೃಪ್ತಿಯನ್ನೇ ಸೂರೆಮಾಡುವುದು. ಒಂದೊಂದು ಕಲಾಕೃತಿಯಲ್ಲಿ ಅನಂತ ಸೂಕ್ಷ್ಮವಾದ, ಸುಕುಮಾರವಾದ ಸೌಂದರ್ಯಸ್ಥಾನಗಳಿರುವುವು. ಅದರಲ್ಲಿ ಒಂದು ತಪ್ಪಿದರೆ ಸಾಕು, ಸಂಪೂರ್ಣವಾದ ರೂಪವು ಕುರೂಪವಾಗಿ, ಆನಂದದ ಬದಲು ಖೇದವನ್ನಾಗಲಿ ಉಪಹಾಸವನ್ನಾಗಲಿ ಹುಟ್ಟಿಸುವುದು. ಒಬ್ಬ ಚಿತ್ರಕಾರನು ಒಂದು ಸುಂದರ ತರುಣಿಯ ಚಿತ್ರವನ್ನು ಬರೆದಿರುವನೆಂದು ಕಲ್ಪಿಸುವ: ಗುಡಿಗೆ ಹೊರಟಿದ್ದಾಳೆ, ಸಂಜೆಯ ಹೊತ್ತು, ಕೈಯಲ್ಲಿ ಸುಂದರವಾದದ್ದೊಂದು ತಟ್ಟೆ, ತಟ್ಟೆಯಲ್ಲಿ ಹೂವು, ನೀರಾಜನ, ಅಕ್ಷತೆ; ಕೊರಳೊಳಗೆ ಒಂದೇ

★

ಕುರೂಪತೆ ಸುರೂಪತೆಗಳ ದ್ವಂದ್ವ, ಜೀವನದಲ್ಲಿ ಎಲ್ಲೆಲ್ಲಿಯೂ ಮೂಡಿನಿಂತಿರುವುದು. ಕಲಾವಿದ ಇವುಗಳ ತುಲನಾತ್ಮಕ ವಿಮರ್ಶೆಯಿಂದ, ಸುರೂಪತೆಯ ಸೌಂದರ್ಯದ ಕಡೆಗೆ ಮಾನವರ ಮನಸ್ಸನ್ನು ಎಳೆಯುವನು. ಕುರೂಪತೆಯ ಜೊತೆಯಿರದ ಸುರೂಪವು ರಾತ್ರಿಯಿಲ್ಲದ ಹಗಲಿನ ಬೇಸರದ ಜೀವನದಂತಾಗುವುದು!

★

ಒಂದು ಹಾರವು ಆಕೆಯ ಸೌಂದರ್ಯವನ್ನು ಅನುಭವಿಸುತ್ತಿರುವುದು; ಸ್ತನಗಳೋ ಕಮಲದ ಕಲಿಕೆಗಳು, ಅದರ ಮೇಲೆ ಬಿಗಿದ ಕುಪ್ಪಸದಿಂದ ಎದೆಗೆ ವಿಚಿತ್ರವಾದ ಒನಪು ಬಂದಿದೆ. ಪ್ರತೀಕ್ಷೆಯಿಂದ ಹೊರಟ ನೀಲನೇತ್ರಗಳಲ್ಲಿ ತುಂಬಿದೆ ಬೆಳ್ಳಿಯ ಕಾಂತಿ. ನೇರವಾದ ಬೈತಲು. ಹುಬ್ಬೋ ಕಾಮನ ಬಿಲ್ಲುಗಳು. ತುಟಿಗಳೋ— ?....ಈ ಚಿತ್ರದ ರೇಖೆಗಳಲ್ಲಿ ಬಣ್ಣಗಳಲ್ಲಿ ಮನಸ್ಸು ಒಂದಾಗಿ 'ಓಹೋ! ಎಷ್ಟು ಮಾಟದ ಮೂರ್ತಿಯಿದು!' ಎಂದು ಶೃಂಗಾರರಸವು ಮನದಲ್ಲಿ ತುಂಬುವುದಕ್ಕೆ ಮೊದಲು, ಕಣ್ಣು ಹಣೆಯ ಕಡೆಗೆ ಹೋಯಿತು. "ಹಣೆಯಲ್ಲಿ ಕುಂಕುಮವಿಲ್ಲವಲ್ಲ! ಅಯ್ಯೋ! ಇಂತಹ ಸುಂದರಿಯಾದ ತರುಣಿಯ ರಮಣನನ್ನು ಸೆಳೆದೊಯ್ದ ಪಾಪಿಯಾದ ಯಮನು ಎಷ್ಟು ಕ್ರೂರನೊ! ಆಹಾ! ಈಕೆಯನ್ನು ಕಂಡು ಶೃಂಗಾರವೆನಿಸಿತಲ್ಲ! ಥೂ ನನ್ನ ಬುದ್ಧಿಗೆ ಬೆಂಕಿ ಹಾಕಲಿ! ಅನಾಥಳಿವಳು, ನನ್ನ ಮಗಳ ಹಾಗೆ

ಊಕೆ!. . . . " ಎಂಬ ಕನಿಕರವು ಹುಟ್ಟಿ, ಶೃಂಗಾರವು ಎಲ್ಲಿಯೋ ಮಾಯವಾಗಿ ಹೋಗುವುದು. ಚಿತ್ರಕಾರನ ಆಶಯವಂತೂ— 'ನೋಡಿರಿ ಈ ರೂಪವನ್ನು, ಈ ಸೌಂದರ್ಯದ ಉಕ್ಕನ್ನು, ಈ ನವಯೌವ್ವನದ ಸೊಬಗನ್ನು! ನೋಡಿರಿ ಈ ಬರಿಯದಾದ ಹಣೆಯನ್ನು! ಇದು ದೈವಘಟನೆ! ಎಲ್ಲಕ್ಕೂ ಶ್ರೇಷ್ಠತಮವಾದದ್ದೆಂದರೆ ದೈವ! ದೈವದ ಮುಂದೆ ಸೌಂದರ್ಯವೂ ಮಣಿದಿಹುದು!' ಎಂಬುದಾಗಿರುವುದು. ಇದೇ ಚಿತ್ರದಲ್ಲಿ ಸಾವಿರಾರು ಮುಖಗಳಿಂದ ಅನಂತ ಭಾವಗಳನ್ನು ತೋರಿಸುವುದೊಂದು ಕುಂಕುಮದ ಸೂಕ್ಷ್ಮವಾದ ತಿಲಕ! ಕುಂಕುಮವಿದ್ದರೆ ಶೃಂಗಾರದ ಉಕ್ಕು, ಕುಂಕುಮವಿಲ್ಲದಿದ್ದರೆ ಕರುಣದ ಕೋಡಿ! ಇದಕ್ಕೇ ಎನ್ನುವುದು ಸೌಂದರ್ಯದ ಸೂಕ್ಷ್ಮಸ್ಥಾನವೆಂದು.

ಮೇಲಿನ ಉದಾಹರಣೆಯು ಸರ್ವಸಾಮಾನ್ಯರಿಗೂ ತಿಳಿಯುವಂತಹದು. ಇದಕ್ಕೂ ಸೂಕ್ಷ್ಮವಾದದ್ದೊಂದನ್ನು ಹೇಳುವೆನು. ನಾನು ಒಂದು ಸಲ ಸಂಗೀತ ಮನೋರಮೆಯಾದ ಹಿರಾಬಾಯಿಯವರ ಗಾಯನ ಕೇಳಲಿಕ್ಕೆ ಹೋಗಿದ್ದೆ. ಅದೇ ಕ್ಲಬ್ಬಿನ ಮೊದಲನೆಯ ದಿವಸ ಇತ್ತು. ಒಬ್ಬ ಹೆಸರಾದ ಸಂಗೀತಗಾರರು ಅಧ್ಯಕ್ಷರಾಗಿ ಬಂದಿದ್ದರು. ಗಾಯನವು ನಡೆಯಿತು. ಎಲ್ಲರಿಗೂ ಆನಂದವಾಯಿತೆಂದು ಬೇರೆ ಹೇಳಬೇಕಾಗಿಲ್ಲ. ಅಧ್ಯಕ್ಷರು, ಸೌ. ಹಿರಾಬಾಯಿಯವರು ಹಾಡಿದ ರೀತಿಯ ವರ್ಣನೆಯನ್ನು ಮಾಡಿ, ಅವರು ಅಲ್ಲಿಯೇ ತೋರಿಸಿದ ಕೌಶಲ್ಯವನ್ನೂ ಹೇಳಿದರು: "ಒಂದು ರಾಗವನ್ನಿವರು ಹಾಡುತ್ತಿದ್ದರು. ಕೋಮಲ ಗಾಂಧಾರ ಸ್ವರವು ಅದರಲ್ಲಿತ್ತು. ಅದು ಒದಿಗಿದ್ದ ಸಾರಂಗಿಯಲ್ಲಿ ಸ್ವಲ್ಪ ಹೆಚ್ಚು ಇತ್ತು. ಹಿರಾಬಾಯಿಯವರು, ಯಾವುದೋ ಒಂದು ಸಂಕೇತದಿಂದ— ಸಾರಂಗಿಯವನಿಗೆ—ಹಾಡುಹಾಡುತ್ತಲೇ ತಿಳಿಸಿದರು. ಅದನ್ನು ಅವನು ಸರಿಮಾಡಿಕೊಂಡ. ಅದರಿಂದ ರಾಗವು ಮುಂದೆ ಸುಂದರವಾಗಹತ್ತಿತು," ಎಂದು ಅವರು ಹೇಳಿದರು. ನಾವೆಲ್ಲ ಕೇಳುತ್ತಿದ್ದೆವು. ನಮಗೆ ಎಲ್ಲವೂ ಸುಂದರವೇ ಆಗಿತ್ತು. ಕೋಮಲ ಗಾಂಧಾರವೆಲ್ಲಿ ತಪ್ಪಿತು? ಅದರಿಂದಾಗುವ ಅನಾಹುತವಾವುದು? ನಮಗೇನು ಗೊತ್ತು? ಆದರೆ ಆ ರಾಗವನ್ನು ಸಂಪೂರ್ಣವಾಗಿ ಬಲ್ಲವರಿಗೆ ಅದು ಖೇದಕರವಾಗಲಾರದೆ ಬಿಟ್ಟೀತೇ? ಸಭೆಯಲ್ಲಿ ಒಬ್ಬಿಬ್ಬರೇ ಅಂಥವರು. ಅವರಿಗೂ ಖೇದಕರವಾಗಬಾರದೆಂದು ಹಿರಾಬಾಯಿಯವರು, ಆ ಕೋಮಲ ಗಾಂಧಾರವನ್ನು ತಿದ್ದಿ ಹೇಳಿದರು. ಆದ್ದರಿಂದ ಸಕಲರಿಗೂ— ಗಾಯನ ಪಂಡಿತರಿಗೂ— ಆನಂದವಾಯಿತು. ಇನ್ನೊಂದು, ವಾಙ್ಮಯದ ಉದಾಹರಣೆಯನ್ನು ಹೇಳಬೇಕು: **ಉತ್ತರ ರಾಮಚರಿತ್ರ**ವನ್ನು ಬರೆದು ಭವಭೂತಿಯು, ಕಾಲಿದಾಸನಿಗೆ ತೋರಿಸಹೋದನಂತೆ. ಆಗ ಕಾಲಿದಾಸನು ಒಬ್ಬ ರಾಣಿಯ ಕೂಡ (ಹೀಗೆ ಕಥೆ ಇದೆ. ಸುಳ್ಳೋ ನಿಜವೋ ನನಗೆ ಗೊತ್ತಿಲ್ಲ.) ಚದುರಂಗವನ್ನು ಆಡುತ್ತಾ ಕುಳಿತಿದ್ದನಂತೆ. 'ಓದಿರಿ' ಎಂದನಂತೆ **ಕಾಲಿದಾಸ**. ಭವಭೂತಿಯು ಓದಿದನಂತೆ. ಕಾಲಿದಾಸನು ಕೇಳಿ 'ಒಳ್ಳೆಯದಾಗಿದೆ, ಆದರೆ ಒಂದು ಸ್ಥಾನದಲ್ಲಿ ಒಂದು ಅನುಸ್ವಾರವು ಹೆಚ್ಚಾಗಿದೆ' ಎಂದು ಹೇಳಿದನಂತೆ. ಆ ಶ್ಲೋಕವಿದು: "ಕಿಮಪಿ ಕಿಮಪಿ ಮಂದಂ ಮಂದಮಾಸಕ್ತಿಯೋಗಾ- | ದವಿರಲಿತ ಕಪೋಲಂ ಜಲ್ಪತೋರಕ್ರಮೇಣ || ಅಶಿಥಿಲ ಪರಿರಂಭ ವ್ಯಾಪೃತೈಕೈಕ ದೋಷ್ಣೋ- | ರವಿದಿಗತಯಾಮಾ ರಾತ್ರಿರೇವಂ ವ್ಯರಂಸೀತ್". ಈ ಶ್ಲೋಕದಲ್ಲಿ ಸೀತೆಯ ಸಂಗಡ ನಕ್ಕು ಕಳೆಯುತ್ತಿರುವಾಗ, ಅರಣ್ಯದಲ್ಲಿ ರಾತ್ರಿಗಳು ಹೇಗೆ ಬೇಗಬೇಗನೆ ಹೋದುವೆಂಬುದನ್ನು ಹೇಳಿದ ಮಾತಿದೆ: 'ಪ್ರೇಮದ ಸವಿನುಡಿಗಳನ್ನಾಡುತ್ತ ರಾತ್ರಿಗಳನ್ನು ಕಳೆದೆವು (ರಾತ್ರಿರೇವಂ ವ್ಯರಂಸೀತ್)'. ಕಾಲಿದಾಸನು ಹೇಳಿದ್ದು: 'ರಾತ್ರಿರೇವಂ' ದಲ್ಲಿಯ ಅನುಸ್ವಾರವೊಂದು ಹೆಚ್ಚು ಬಿದ್ದಿದೆ. ಅದನ್ನು ತಿದ್ದಲು 'ರಾತ್ರಿರೇವ ವ್ಯರಂಸೀತ್' ಎಂದರೆ 'ರಾತ್ರಿಯೇ ನಿಂತುಹೋಯಿತು, ನಮ್ಮ ಹರಟೆಯು ನಿಲ್ಲಲಿಲ್ಲ!' ನಮ್ಮ ಹರಟೆಗೆ ಇಡೀ ರಾತ್ರಿಯೇ ಸಾಕಾಗಲಿಲ್ಲ—ಎಂಬ ಸುಂದರವಾದ ಸೂಚಕ ಅರ್ಥವು ಬಂದಿತು. ಇರಲಿ, ಪೂರ್ಣವಾದ ಕಲಾಕೃತಿಯನ್ನು ಸೂಕ್ಷ್ಮದೃಷ್ಟಿಯಿಂದ ಅಭ್ಯಾಸಮಾಡಿದರೆ, ಇಂತಹ ಸೂಕ್ಷ್ಮವಾದ ಸುಂದರವಾದ ಸೌಂದರ್ಯಸ್ಥಾನಗಳು ಕಂಡುಬರುವುವು; ಅದರಿಂದಲೇ ಆನಂದವು ಹೆಚ್ಚುವುದು.

ಇಂತಹ ಸುಂದರವಾದ ಸ್ಥಾನಗಳಲ್ಲಿ ತಪ್ಪಿದ್ದರೆ ಸುಂದರವಾದ ರೂಪವು ಕುರೂಪವಾಗುವುದು. ಅತ್ಯಂತ ಸುಂದರವಾದ ರೂಪವನ್ನು ಕೆಡಿಸುವುದಕ್ಕೆ ಒಂದು ಎಳೆಯನ್ನು ಹೆಚ್ಚು ತೆಗೆದರೂ ಸಾಕು, ಒಂದು ಎಳೆಯನ್ನು ಕಡಿಮೆಮಾಡಿದರೂ ಸಾಕು, ಅದು ಒಮ್ಮೆಲೇ ಕುರೂಪತೆಯನ್ನು ಹೊಂದುವುದು. **ಮೆಕಾಲೇ** ಸಾಹೇಬರು ಮಿಲ್ಟನ್ ಕವಿಯ ವಿಷಯವಾಗಿ ಹೀಗೆ ಬರೆದಿರುವರು: 'ಮಿಲ್ಟನ್ನನ ಕಾವ್ಯದ ಮಹಿಮೆಯೆಂದರೆ, ಒಂದೇ ಸಾಲಿನೊಳಗಿಂದ ಒಂದು ಶಬ್ದವನ್ನು ಬದಲಾಯಿಸಿದರೆ ಸಾಕು, ಅದರ ರೂಪವೇ ಸಂಗೀತವೇ ಅರ್ಥವೇ ಹಳಸಿಹೋಗುವುದು!' ಕಲೋಪಾಸಕನ ಉತ್ತಮವಾಗಿರುವುದು ಇದರಲ್ಲಿಯೇ. "Art begins when the we bit begins" ಎಂದು ಕಲಾಶಾಸ್ತ್ರದಲ್ಲಿಯೊಂದು ಸಿದ್ಧಾಂತವಿದೆ. ಕಲೆಯು ಪ್ರಾರಂಭವಾಗುವುದೆಲ್ಲಿ? ಅತಿಶಯವಾದ ಸೂಕ್ಷ್ಮತೆಯೊಳಗೆ! ಆಗಡಬಂಡೇಶ್ವರನ ರೂಪದಲ್ಲಿ ಒಂದು ಗೆರೆ ಹೆಚ್ಚು ಎಳೆದರೇನು, ಒಂದು ಗೆರೆ ಕಡಿಮೆ ಮಾಡಿದರೇನು? ಅವನ ರೂಪದಲ್ಲಿ ಇರುವ ಸೌಂದರ್ಯವು (ಇದ್ದ ಪಕ್ಷದಲ್ಲಿ) ಹೆಚ್ಚುಕಡಿಮೆಯಾಗಲಾರದು. ಅದೇ ಒಂದು ನಾರಾಯಣನ ಮೂರ್ತಿಯನ್ನು ತೆಗೆದುಕೊಂಡು, ಅದರಲ್ಲಿ ಸ್ವಲ್ಪವೇ ಉಪದ್ವ್ಯಾಪವನ್ನು ಮಾಡಿದರೆ ಸಾಕು; ನಾರಾಯಣನು ನರಸಿಂಹನಾಗಬಹುದು. ಕಲೆಯೆಂದರೆ ಕಲೋಪಾಸಕನ ಆತ್ಮದ ಬಿಂದುವೆಂದು ತಿಳಿಯಬೇಕು. ಅನುಭವಿಕ ವೈದ್ಯರ ಹೇಮಗರ್ಭ ಮಾತ್ರೆಯಂತೆ! ತೇಯುವುದರಲ್ಲಿ ತಪ್ಪಿದರೆ ವೈಕುಂಠವೇ ಕಾಣುವುದು, ಅನುಪಾನದಲ್ಲಿ ತಪ್ಪಿದರೆ ಕೈಲಾಸ ಕಾಣುವುದು! ಮಾತ್ರೆಯು ಉತ್ತಮವಾದದ್ದಿರಬೇಕು, ಅನುಪಾನವೂ ಯೋಗ್ಯ-

ವಾದದ್ದಿರಬೇಕು, ಹೇಳಿದಂತೆ ಪಥ್ಯಮಾಡಬೇಕು— ಆ ಮೇಲೆ ಆರೋಗ್ಯ! ಭಾಸನು ಕಾಳಿದಾಸನಿಗಿಂತ ಮೇಲೆಂದು ಪಂಡಿತರ ಮತವಿದೆ. ಕಾಳಿದಾಸನು ಜನ್ಮತಃ ಕವಿ, ಭಾಸನು ಜನ್ಮತಃ ನಾಟಕಕಾರ. "ಪ್ರತಿಮಾ" ನಾಟಕದಲ್ಲಿ ಒಂದು ಪ್ರಸಂಗವಿದೆ: ಸುಮಂತ್ರನು ಭರತನನ್ನು ಆತನ ಮಾವನ ಮನೆಯಿಂದ ಅಯೋಧ್ಯಾಪಟ್ಟಣಕ್ಕೆ ತಂದಿರುವನು, ಪಟ್ಟಾಭಿಷೇಕದ ಸಲುವಾಗಿ. ಸುಮಂತ್ರನೂ ಭರತನೂ ಅಂತಃಪುರದಲ್ಲಿ ಹೋಗುವರು. ದಶರಥ ಮಹಾರಾಜನು ಮರಣಹೊಂದಿದ್ದರಿಂದ ಅಂತಃಪುರವೆಲ್ಲ ಸ್ಮಶಾನದಂತಾಗಿತ್ತು. ಕೌಸಲ್ಯೆ-ಕೈಕೇಯಿ-ಸುಮಿತ್ರೆಯರು ಇರುವರು. ಭರತನು ಕೌಸಲ್ಯೆಗೆ ಅಭಿನಂದಿಸುವನು. ಕೌಸಲ್ಯೆಯು "ನಿನ್ನ ತಾಯಿಗೆ (ಕೈಕೇಯಿಗೆ) ನಮಸ್ಕರಿಸು!" ಎಂದು ಹೇಳುವಳು. ಭರತನು "ನೀನೇ ನನ್ನ ತಾಯಿ!" ಎನ್ನುವನು. ಕೌಸಲ್ಯೆಯು "ಈಕೆ ನಿನ್ನ ತಾಯಿ" ಎಂದು ಕೈಕೇಯಿಯನ್ನು ತೋರಿಸುವಳು. ಭರತನು "ಈಕೆಯೇ? 'ಆಸೀತ್' ಇದ್ದಳು; ಒಮ್ಮೆ ನನ್ನ ತಾಯಿ ಇದ್ದಳು ನಿಜ! ಆದರೆ ಈಗ...." ಎನ್ನುವನು. ಈ ಒಂದು 'ಆಸೀತ್' ಎಂಬ ಒಂದು ಶಬ್ದದಲ್ಲಿ ತುಂಬಿರುವ ವಿಷವು, ಶೇಷನ ಸಾವಿರ ಹೆಡೆಗಳಿಂದ ಹಿಂಡಿದರೂ ಬಾರದು. ಕೈಕೇಯಿಗಂತೂ ಸಿಡಿಲುಬಡಿದಂತಾಗಿರಬೇಕು. ಹೀಗಿರುವುದು ಕಲೆಯ ಸ್ವರೂಪ. ಒಂದೇ ಶಬ್ದದಿಂದ, ಒಂದೇ ವಾಕ್ಯದಿಂದ, ಒಂದೇ ಗೆರೆಯಿಂದ, ಒಂದೇ ಅಭಿನಯದಿಂದ ಕಲಾವಿದನು ಹಾಲಾಹಲದ ಸಮುದ್ರದ ತಳವನ್ನು ತೋರಿಸುವನು. ಔಚಿತ್ಯವು ಕಲೆಯ ಜೀವಾಳ. ಔಚಿತ್ಯ ಹೋದರೆ, ಸಂಗೀತದಲ್ಲಿ ತಾಳತಪ್ಪಿದಂತೆ; ಕಲೆಯ ಜೀವಾಳವೇ ಹೋದಂತಾಗುವುದು.

ಕಲೆಯಲ್ಲಿ ಎರಡು ಅಂಗಗಳಿರಬೇಕಾಗಿರುವುದವಶ್ಯ. ಒಂದು **ಕುರೂಪತೆ**, ಎರಡನೆಯದು **ಸುರೂಪತೆ**. ಚಿತ್ರವೆಂದರೇನು? ಚಿತ್ರಕಾರನು ಕಂಡ ರೂಪವನ್ನು ತಿರುಗಿ ತೋರಿಸುವುದು— ಒಂದು ಫಲಕದಮೇಲೆ. ಚಿತ್ರಕ್ಕೆ ಬೆಳಕೂ ಬೇಕು, ನೆರಳೂ ಬೇಕು. ಇಲ್ಲದಿದ್ದರೆ ಚಿತ್ರವೇ ಆಗಲಾರದು. ಸೌಂದರ್ಯವು ಎದ್ದು ಕಾಣಬೇಕಾದರೆ, ಅದರ ಜೊತೆಗೆ ಕುರೂಪತೆಯೂ ಇರಲೇ ಬೇಕು—ಇರಲೇ ಬೇಕೆಂಬ ನಿಯಮವಿಲ್ಲ—ಇದ್ದರೆ ಸೌಂದರ್ಯವು ಇನ್ನಷ್ಟು ಎದ್ದು ತೋರುವುದು....ಚಿನ್ನಕ್ಕೆ ಸುಗಂಧ ವಿದ್ದಂತೆ. ನಾಟಕದಲ್ಲಿಯಂತೂ ಎಲ್ಲ ವಿಷಯುಗಳನ್ನೂ ರಸಗಳನ್ನೂ ವಿರೋಧದಿಂದಲೇ (Contrast) ತೋರಿಸಬೇಕಾಗುವುದು. ಉತ್ತಮವಾದ ನಾಟಕವೆಂದರೆ ಗುಣ-ದೋಷಗಳ ಕಾಳಗ. ಕಾಳಗ, ವಿರೋಧ, ಪಂದ್ಯಾಟವಿಲ್ಲದಿದ್ದರೆ ನಾಟಕವಾಗಲಾರದು. ಸ್ತ್ರೀಪಾತ್ರವಿಲ್ಲದ ನಾಟಕವು ರಸವಿಹೀನವಾಗುವುದು. ಕ್ರಿಕೆಟಿನ ಆಟದಲ್ಲಿ ವಿರೋಧಿಗಳಿರುವುದರಿಂದಲೇ ಆಟಕ್ಕೆ ರಂಗು ಬರುವುದು. ಎಲ್ಲರೂ ಸದ್ಗುಣಿಗಳೇ ಇರುವ ನಾಟಕವೆಲ್ಲಿ? ಸದ್ಗುಣಗಳು ಎದ್ದು ಕಾಣಬೇಕಾದರೆ ಅದರಲ್ಲಿ ದುರ್ಜನರಿರುವುದಗತ್ಯ. ರಾಮನೂ ಬೇಕು, ರಾವಣನೂ ಬೇಕು! ಪಾಂಡವರೂ ಬೇಕು, ಕೌರವರೂ ಬೇಕು! ನಮ್ಮ ಆತ್ಮದಲ್ಲಿಯ ಧರ್ಮ-ದುರ್ಯೋಧನರ ಕಾಳಗವೇ ನಾಟಕ. ನವರಸಗಳಿಂದ ನಾಟಕವು ಒಪ್ಪುವುದು; ಒಂದೇ ರಸದಿಂದ ನಾಟಕವೆಂದೆಂದಿಗೂ ಆಗಲಾರದು. ಆದುದರಿಂದಲೇ ಕಲೋಪಾಸಕರು ಕುರೂಪತೆಯನ್ನು (Uglines) ಸುರೂಪತೆಯ ಜೊತೆಗೆ ಕುಳ್ಳಿರಿಸಿ, "ಈ ರೂಪವನ್ನು ನೋಡಿರಿ, ಈ ರೂಪವನ್ನು ನೋಡಿರಿ" ಎಂದು ವಿವೇಚಿಸುವರು. ಪಾಪಿಷ್ಠರಿಂದಲೇ ಜಗತ್ತು ತುಂಬಿರುವುದೆಂಬ ವೇದಾಂತವನ್ನು ಹೇಳಬೇಕಾದರೂ ಸ್ವಲ್ಪ ಸದ್ಗುಣವು ಬೇಕೇಬೇಕು. ಮದಾಂಧತೆಯಿಂದಲೂ, ಐಶ್ವರ್ಯಾತಿರೇಕದಿಂದಲೂ, ಸಾಮರ್ಥ್ಯಮದಿರೆಯನ್ನು (ಸಾದಾ ಮದಿರೆಯನ್ನೂ) ಕುಡಿದು ಮತ್ತರಾಗಿರುವ ರಾಕ್ಷಸರ ಸಂತೆಯಾದ ಲಂಕಾಪಟ್ಟಣದಲ್ಲಿ, ವಿಭೀಷಣನೊಬ್ಬನಾದರೂ ಇದ್ದರೆಯೇ ಅದಕ್ಕೆ ಮಹತ್ತ್ವ, ಇಲ್ಲದಿದ್ದರೆ ಬರಿ ಪಾಪಗಳನ್ನೇ ಚಿತ್ರಿಸುವ ನರಕವನ್ನು ನೋಡಲಿಕ್ಕೆ ಯಾರು ಹೋಗುವರು? ಕೆಸರಿನಿಂದ ತುಂಬಿದ ಕೆರೆಯೊಳಗಿನ ಕೆಸರನ್ನು ನೋಡಿ ಹೊರಳಾಡುವುದಕ್ಕೆ ಯಾರೂ ಜಲಾಶಯಕ್ಕೆ ಹೋಗುವುದಿಲ್ಲ (ಕೋಣಗಳು ಮಾತ್ರ ಹೋಗುವುವು ಸರಿ!). ಕೆಸರಿದ್ದರೂ ಇರಲಿ, ಒಂದಾದರೂ ಕಮಲದ ಹೂ ಇದ್ದರೆ, ನಮ್ಮ ದೃಷ್ಟಿ ನಿಲ್ಲುವುದು. ಅದರಂತೆಯೆ ಕಲಾಕೃತಿಯಲ್ಲಿ ಕುರೂಪತೆಯ ಸಂಗಡ ಸುರೂಪತೆಯೂ ಇದ್ದರೆ ಅದು ಕಲಾಕೃತಿಯಾಗುವುದು. ಸೌಂದರ್ಯವು ಕಲೆಯ ಜೀವನ. ಬರಿಯೆ ಪಕ್ವಾನ್ನಗಳಿದ್ದರೂ ಊಟವಾಗಬಹುದು, ಆದರೆ ಬರೀ ಖಾರದ ಪುಡಿಯಿಂದ ಊಟವಾಗುವುದಿಲ್ಲ. ಬರೀ ಸೌಂದರ್ಯವಿದ್ದರೂ ಕಲೆಯಾಗಬಹುದು; ಅದರ ಜೊತೆಗೆ ಕುರೂಪತೆ (ಅದರೊಳಗಲ್ಲ) ಇದ್ದರೆ ಸೌಂದರ್ಯಕ್ಕೆ ಹೆಚ್ಚು ತೇಜ—ಸೌಂದರ್ಯವತಿಯ ಕೊರಳೊಳಗೆ ಮುತ್ತಿನ ಕಟ್ಟಾಣಿಯಿದ್ದಂತೆ!

ಬರೀ ಸೌಂದರ್ಯಮೂರ್ತಿಯಿಂದಲೇ ಆನಂದವಾಗುವುದಿಲ್ಲವೇ? ಆಗುವುದು. ಬರೀ ಕುರೂಪತೆಯ ಮೂರ್ತಿಯಿಂದ ಆನಂದವಾಗುವುದೇ? ಆಗುವುದು! ಅದು ಹೇಗೆ? ನಿಸರ್ಗದೊಳಗೆ—ಸೃಷ್ಟಿಯಲ್ಲಿ ಅನಂತ ಸುಂದರ ರೂಪಗಳೂ ಇರುವುವು: ಕಮಲ, ಬಾಲಸೂರ್ಯ, ಹುಣ್ಣಿಮೆಯ ಚಂದ್ರ, ಕೋರೆ ಚಂದ್ರ, ನಕ್ಷತ್ರಗಳು, ನದಿ, ಸಮುದ್ರ, ಸಿಂಹ, ಅಶೋಕವೃಕ್ಷ ಇತ್ಯಾದಿ. ಅದರಂತೆಯೆ ಅನಂತ ಕುರೂಪಗಳೂ ಇರುವುವು: ಹಂದಿ, ಬಂಡೆಗಲ್ಲು, ಒಂಟೆ, ಕೆಸರಿನ ಕೊಳ, ಮಳೆಹುಳು, ಕಾಗೆ, ಜಾಲಿಯ ಬೂರಲ ಮರ, ಬರೀ ಮುಳ್ಳಿನ ಕಂಟಿ ಇತ್ಯಾದಿ. ಸುರೂಪಗಳ ಚಿತ್ರಗಳು ಆನಂದದಾಯಕಗಳೇ? ಕುರೂಪತೆಯ ವಸ್ತುಗಳು ಸೌಂದರ್ಯ ಭಾವನೆಯನ್ನು ಹುಟ್ಟಿಸಬಲ್ಲವೇ? ಇಲ್ಲ, ಅವುಗಳ ಚಿತ್ರಗಳು ಮಾತ್ರ ಸೌಂದರ್ಯವನ್ನು ಹುಟ್ಟಿಸಬಲ್ಲುವು! ಆನಂದವಾಗುವುದು ಏನನ್ನು ನೋಡಿ? ಆ ವಸ್ತುಗಳನ್ನಲ್ಲ; ಅವುಗಳ ಚಿತ್ರಗಳನ್ನು! ಅವುಗಳ ಚಿತ್ರಗಳನ್ನಲ್ಲ; ಚಿತ್ರಕಾರನ ಕೌಶಲ್ಯವನ್ನು! ಒಬ್ಬ ತರುಣಿಯನ್ನೂ, ತರುಣಿಯ ಚಿತ್ರವನ್ನೂ ಕಂಡರೆ ಶೃಂಗಾರ-

ಮಿಶ್ರಿತವಾದ ಆನಂದವಾಗುವುದು. ಅದೇ ಒಬ್ಬ ಮುದುಕಿಯನ್ನು ಕಂಡರೆ. . ? ಆನಂದವಿಲ್ಲ. ಮುದುಕಿಯ ಚಿತ್ರವನು ಕಂಡರೆ— ಕೌಶಲ್ಯದಿಂದ, ಕೂಡಿದ, ತದ್ರೂಪವಾದ, ಚಿತ್ರವಾಗಿದ್ದರೆ, ಅದರಿಂದ ಆನಂದವಾಗುವುದು. ಆ ಆನಂದ ಬೇರೆ, ಈ ಆನಂದ ಬೇರೆ. ಕಲೋಪಾಸಕನು ಆ ಮುದುಕಿಯ ಆತ್ಮದಲ್ಲಿ ಪ್ರವೇಶ-ಮಾಡಿ, ಆಕೆಯ ಅಂಗಾಂಗಂಗಳಲ್ಲಿ ಮೂಡಿರುವ ಸಂಸಾರ-ದುಃಖದ ಮಾರ್ಗಗಳೋ ಏನೋ ಎಂಬುವಂತಹ ಮಡಿಕೆ-ಗಳನ್ನು, ತೊಗಲಿನಲ್ಲಿ ಬಿದ್ದ ಹರಿಗಳನ್ನು, ಕಣ್ಣಿನೊಳಗೆ ಕಂದಿ-ರುವ ಕಾಂತಿಯನ್ನು, ಹಣೆಯ ಮೇಲೆ ಸಂಸಾರವಿಧಿಯೇ ಬರೆದ ಹಲವು ಚಿತ್ರಗಳನ್ನು—ಕಂಡು, ಕಲೋಪಾಸಕನ ಕೌಶಲ್ಯಕ್ಕೆ ಮನದೂಗುವಂತಹ ಆನಂದವಾಗುವುದು. ಕಲೆಯ ಮೊದಲನೆಯ ತತ್ತ್ವವೆಂದರೆ ಅನುಕರಣ, ಆ ಮೇಲೆ ಅದರಲ್ಲಿ ತನ್ನ ಗುಣವನ್ನು ಎರೆಯುವುದು. ಕಲೋಪಾಸಕನು ತದ್ರೂಪವಾಗಿ ಚಿತ್ರಿಸುವ ಕೌಶಲ್ಯವನ್ನು ಸಾಧ್ಯಮಾಡಲಿಕ್ಕೆ ಬಹಳ ದುಡಿಯಬೇಕಾಗುವುದು. ಸುಂದರರೂಪವನ್ನು ತೆಗೆಯುವುದಕ್ಕಿಂತ ಪೂರ್ತಿಯಾದ (idialized) ಕುರೂಪತೆಯನ್ನು ಚಿತ್ರಿಸುವುದು ಬಹಳ ಕಠಿಣ-ವಾಗಿರುವುದೆಂದು ರಸಿಕರ ಮತ. ನಾನು ಹೇಳುವುದಿಷ್ಟೆ: ಕಲೆ-ಯಲ್ಲಿ ಸೌಂದರ್ಯವು ಇರುವಂತೆ ಕುರೂಪತೆಗೂ ಒಂದು ಸ್ಥಾನವಿದೆ. ಅದರಲ್ಲಿ ಸೌಂದರ್ಯವಿಲ್ಲದಿದ್ದರೂ ಆನಂದವಿದೆ. ಅದು ಮನಸ್ಸನ್ನು ಅರಳಿಸದಿದ್ದರೂ, ಮನಸಿನಲ್ಲಿ ಆನಂದದ ತೆರೆಯನ್ನುಂಟು ಮಾಡಿಯೇ ಮಾಡುವುದು.

ಸುರೂಪಶಾಸ್ತ್ರ—ಸೌಂದರ್ಯಶಾಸ್ತ್ರವನ್ನು ಅಭ್ಯಾಸಮಾಡಿರು-ವಂತೆ ಕುರೂಪಶಾಸ್ತ್ರದ ಅಭ್ಯಾಸವನ್ನೂ ಮಾಡಿದವರುಂಟು. ಕಲೋಪಾಸಕರು ಮಾತ್ರ ಕುರೂಪತೆಗೆ ಎಷ್ಟು ಬೇಕಷ್ಟೇ ಮಹತ್ತ್ವ-ವನ್ನು ಕೊಟ್ಟಿರುವರು. ಹತ್ತು ರೂಪಾಯಿ ಕೊಟ್ಟು ಹಾವುಗಾರರ ಆಟವನ್ನು ನೋಡುವವರಾರು? ದೇವರು ಪ್ರತ್ಯಕ್ಷನಾಗುವ-ನೆಂದರೆ, ತನ್ನ ತಲೆಯ ಕಾಯಿಯನ್ನೂ ಒಡೆಯಬಹುದು; ತನ್ನ ದೇಹವನ್ನೂ ಕರ್ಪೂರದಂತೆ ಸುಡಬಹುದು. ಆದರೆ ಕುರೂಪತೆಯ ಬಗ್ಗೆ ಕೆಲವರು ತಮ್ಮ ರಕ್ತವನ್ನು ಅಟ್ಟಿಸಿಕೊಂಡಿರುವರಲ್ಲ! ಏನೋ ಮಹತ್ತ್ವವುಳ್ಳದ್ದಿರುವುದೆಂದೇ ಕುರೂಪತೆಗೂ ಈ ಸೌಂದರ್ಯಶಾಸ್ತ್ರದಲ್ಲಿ ಸ್ಥಾನ ಸಿಕ್ಕಿರುವುದು. ಇಲ್ಲದಿದ್ದರೆ ಎಲ್ಲಮ್ಮನ ಜಾತ್ರೆಯೊಳಗೆ ಮುಲ್ಲಾನದೇನು?

ಯಾವುದೊಂದು ವಸ್ತುವಿನಲ್ಲಿ—ದೇಹದಲ್ಲಿ ಹೆಚ್ಚಾಗಿದ್ದರೆ, ಆತ್ಮದಲ್ಲಿ ಕಡಿಮೆಯಾಗಿದ್ದರೆ—ಕುರೂಪತೆಯು ಉತ್ಪನ್ನವಾಗು-ವುದು. ಇಜ್ಜೋಡು ಎಂದರೆ ಕುರೂಪತೆ. ಕಣ್ಣಿನ ಇಜ್ಜೋಡೇ ಆಗಲಿ, ಗಂಡ-ಹೆಂಡತಿ-ಮಕ್ಕಳ ಇಜ್ಜೋಡೇ ಆಗಲಿ—ಅದು ಕುರೂಪತೆಯೆ. ಊನತೆಯೊಂದು ಕುರೂಪದ ಕುರುಹು. ಕಿವುಡ, ಕುಂಟ, ಹೆಳವ, ಮೂಕ, ತಲೆಯಿಲ್ಲದವ (ಹುಚ್ಚನೂ ಮೂರ್ಖನೂ), ಮೇಲುಬುದ್ಧಿಯಿಲ್ಲದವ, ಉಗ್ಗು ಇದ್ದವ,—

ಎಷ್ಟೆಂದು ಹೇಳಬೇಕು—ಅನಂತ ಕುರೂಪತೆಯು ವಿಶ್ವದಲ್ಲಿ ಕಂಡುಬರುವುದು. ಅತಿ ಇದ್ದರೆ, ಕಡಿಮೆಯಾಗಲಿ, ಹೆಚ್ಚಾಗಲಿ ಕುರೂಪತೆಯು ಉತ್ಪನ್ನವಾಗುವುದು. ಕಲೆಗೆ-ಸೌಂದರ್ಯಕ್ಕೆ ಎರಡೂ ತೆರದ ಕುರೂಪತೆಯು ಉಪಕಾರಿಯಾಗುವುದು. ಕುರೂಪತೆಯಿಂದ, ದೈಹಿಕ ವಿಕೃತಿಯಿಂದ ನಾಟಕಗಳಲ್ಲಿ ಹಾಸ್ಯ ವುಂಟಾಗುವುದು, ಭಯಾನಕರಸವುಂಟಾಗುವುದು, ರೌದ್ರ-ವುಂಟಾಗುವುದು. A Fat Man is Nature's Joke ಎಂದು ಇಮರ್ಸನ್ನನು ಹೇಳಿರುವನು. ಒತ್ತ, ಗುಡುಗ, ವಾತ-ವುಳ್ಳ ಮನುಷ್ಯನು ನೈಸರ್ಗಿಕವಾಗಿ ತಯಾರಾದ ವಿದೂಷಕ. ಇವನು ನಡೆದರೂ ಹಾಸ್ಯ, ಮಲಗಿದರೆ ಕುಂಭಕರ್ಣನ ನೆನಪು, ಸೀತರೆ ಭೂಕಂಪ ಉಂಟಾಗುವ ಹೆದರಿಕೆ, ಬಿದ್ದರೆ ಧರಣಿಯೇ ತಗ್ಗುವುದೆಂದು ಭೀತಿ. ಅವನದು ಅವನಿಗೇ ಹಾಸ್ಯವುಂಟಾಗು-ವುದು. ಹೊಟ್ಟೆಯನ್ನು ತುಂಬಿಸಬೇಕಾದರೆ ಕೈ ಮುಂದಕ್ಕೆ ಉದ್ದ-ವಾಗಿ ಮೊದಲು ಚಾಚಬೇಕಾಗುವುದು. ಆಗ ತಿನಿಸುವಿಟ್ಟ ಸ್ಥಾನವು ಸಿಗುವುದೋ ಇಲ್ಲವೋ ನೋಡಬೇಕು. ಅದ್ದರಿಂದ ಶೇಕ್ಸ್ಪಿಯರನ ಉದ್ದಾಮ ವಿದೂಷಕನಾದ ಫಾಲ್‌ಸ್ಟಾಫ್‌ನು ಫುಟ್‌ಬಾಲ್ ಚಂಡಿನಂತೆ ಚೌರಸವಾಗಿ, ಎಲ್ಲ ಕಡೆಯಿಂದ ದುಂಡಗಾಗಿರುವನು. ದೈಹಿಕ ಅಸೌಜನ್ಯದಿಂದ ಹಾಸ್ಯವುಂಟಾ-ದಂತೆ, ಆತ್ಮಿಕ ಕುರೂಪತೆಯಿಂದ ಖೇದವುಂಟಾಗುವುದು. ಆತ್ಮಿಕ ಕುರೂಪತೆಯ ಅತಿಸುಂದರವಾದ ಚಿತ್ರವೆಂದರೆ, ಶೇಕ್ಸ್ಪಿಯರನ ಆಥೆಲ್ಲೋ ನಾಟಕದೊಳಗಿನ ಅಯಾಗೋ ಪಾತ್ರ. ಇಂತಹ ನೀಚ-ನಾದ ದುರಾಚಾರಿಯನ್ನು ಹುಟ್ಟಿಸುವುದೆಂದರೆ ಯಾವನ ಮನಸ್ಸಿ-ನಲ್ಲಿಯೂ ನಾಸ್ತಿಕ್ಯವು ಬಾರದಿರದು. ಪ್ರತಿಯೊಂದು ನಾಟಕಕ್ಕೆ ರಂಗುಬರುವುದು ವಿರೋಧದಿಂದಲೆ. ಈ ವಿರೋಧದಲ್ಲಿ ನಡು-ನಡುವೆ ಪ್ರೇಕ್ಷಕರ ಮನಸ್ಸಿಗೆ ಬಿಡುವು ಸಿಕ್ಕಬೇಕೆಂದು ಹಾಸ್ಯ-ಬೇಕು. ಹೀಗೆ ಎರಡೂ ವಿಧವಾಗಿ ಕುರೂಪತೆಯು ಸೌಂದ-ರ್ಯಕ್ಕೆ-ಕಲಾಕೃತಿಗೆ-ಪೋಷಕವಾಗಿರುವುದು.

ಅತ್ಯಂತ ಅಸಹ್ಯವಾದ ಕುರೂಪತೆಯೆಂದರೆ **ಅಶ್ಲೀಲತೆ.** ಇದರ ವಿಷಯಕ್ಕೆ ಬರೆದರೆ ಸ್ವತಂತ್ರ ಗ್ರಂಥವನ್ನೇ ಬರೆಯಬೇಕಾಗು-ವುದು. ಬರೆಯುವುದೂ ಅಸಭ್ಯರೀತಿಯೆಂದು ತಿಳಿದು ವಾಚಕರಿಗೆ ವಿಚಾರ ಮಾಡಲು ಬಿಡುವೆನಿದನ್ನು.

ಕಲೋಪಾಸಕನು ವಿರೂಪತೆಯಿಂದ ಕುರೂಪತೆಗೆ ಹೋಗಿ, ಅದನ್ನೇ ತಿದ್ದಿ ಸುರೂಪವನ್ನಾಗಿ ಮಾಡುವನು. ಸೌಂದರ್ಯದ ಪರಮಾವಧಿಯೆಂದರೆ **ಉದಾತ್ತತೆ** (Subliem). ಉದಾತ್ತ ಭಾವವೆಂದರೆ ಆಧ್ಯಾತ್ಮದ ಕೃಷ್ಣಾವತಾರ. ಸಂಸ್ಕೃತ ಬಲ್ಲವರು ಈ ವಿಷಯದಲ್ಲಿ 'ಗೀತಗೋವಿಂದ' ಕಾವ್ಯವನ್ನು ಪಾರಾಯಣ ಮಾಡಬೇಕು. ಕುರೂಪತೆಯ ಅತ್ಯಂತಾಭಾವವೇ ಸುರೂಪ. ಸುರೂಪವನ್ನು ಕಂಡು ಹಿಡಿಯುವವನು ಉದಾತ್ತತೆಯನ್ನು

(೨೨೧ ನೆಯ ಪುಟ ನೋಡಿರಿ)

ಶುನಕ ಮತ್ತು ಜಂಬುಕ

★

ಶ್ರೀ. ಡಿ. ಆರ್. ರಾಮಯ್ಯ, ಬಿ. ಎ.

೧

ಎಂದಿತಾ ನರಿ: "ಶುನಕ, ನಿನಗುಂಟೆ ಸ್ವಾತಂತ್ರ್ಯ?
ಪರಪುಷ್ಟ, ಬಂಧನದ ಭಾಗ್ಯ ನಿನ್ನದು; ಭುಜಿಪು
ದುಚ್ಛಿಷ್ಟ— ಗೆಲುವಿಲ್ಲ; ಚೆಲುವಿದ್ದರೇನಂತೆ!
ಮೃಗರಾಜನೊಲುಮೆಯಿಲ್ಲದ ಬಾಳ್ಕೆ!—
ಹೊಂದಿಬದುಕುವ ಭಾಗ್ಯ ನಿನಗಿಲ್ಲ— ಗ್ರಾಮಕೇ-
ಸರಿ ನೀನು!— ಬೊಗಳುವುದೆ ನಿನ್ನ ಪ್ರಾರಬ್ಧ!"
ಶುನಕ ನುಡಿಯಿತು—: "ಜಂಬುಕನೆ, ಸಾಕು ಕಂಡಿಹೆನು,
ಇನಿದು ನಿನ್ನಯ ಜನ್ಮ! ಕದ್ದುತಿರುಗುವ ನಿನ್ನ
ಸ್ವಾತಂತ್ರ್ಯ ಬೇಡೆನಗೆ— ಎನ್ನ ಬಂಧನ ನಿನ್ನ
ಸ್ಪಂದನಕೆ ಮಿಗಿಲಾಯ್ತು! ನೀನುಂಬ ಷಡ್ರಸದ
ಪರಮಾನ್ನ ಕತ್ತಲೆಯ ಕಸವಾಯ್ತು!—
ಗೆಲುವಿಲ್ಲವೆನಗೆಂಬೆ— ಛಲವಿಹುದೆ ನಿನಗೆ?
ಹೊಂದಿಬಾಳುವೆಯೇಕೆ— ಕೇಡ ಬಯಸುವೆ ಕುಟಿಲ!
ಕುಂದು-ಕೋಟಲೆ ನಿತ್ಯಕರ್ಮವಾಗಿಹುದು—
ಜನಸೇವೆ ದೇಶಸೇವೆಯ ಸೊಬಗು ನಿನಗಿಲ್ಲ;
ಸ್ವಾಮಿಭಕ್ತಿಯನರಿಯೆ; ಬೊಗಳುವೆನು ನಾನುದಿಟ!
ನರಿಯು ಕೂಗಾಡಲೇಂ ಗಗನಕ್ಕೆ ಮುಟ್ಟುವುದೆ?—

೨

ಇಂತು ನುಡಿ-ಮರುನುಡಿಯ ಕೌತುಕದಿ ಮೈಮರೆತು
ನೆರೆ ನಿಮಿರಿ ನಿಂತಿಹರು ಕೆಲಜನರು ಭೂತಳದಿ;
ಪೆರತೇನು? ಸಂತಸದ ಶವರೂರು—ಶಾಂತಿ-ಸುಖ
ಗಳ ಗೂಡು—ಭೂಲೋಕ ಚಿಂತೆಯಲಿ ಕುದಿಯುತಿದೆ;
ಶುನಕ ಹಗಲಿನ ನಂಟ; ರಾತ್ರಿ ಜಂಬುಕ ನಂಟ!
ಇಂತಿಹುದು ಜಗದ ಪರಿ! ಬಿಂಕದಲಿ ಬೇನೆಯಲಿ
ಕುದಿಯುತ್ತ ಕುಸಿಯುತ್ತ ದಣಿಯುವುದೆ! ಮರುಳ-
ಮನದಿ ಚೊಕ್ಕಟವಿರಲಿ; ಶುನಕ-ಜಂಬುಕಗಳಿಗೆ
ತಿಳಿಯುವುದೆ— ಮನೆಯನ್ನು ಚೊಕ್ಕಟಗೊಳಿಸಲದುವೆ ಗುರಿ!
ಮಿಕ್ಕೆಲ್ಲ ಸೌಭಾಗ್ಯ ಕನಸಿನ ಸಿರಿ!

ಅದು ಯಾರ ಸೊತ್ತು?

★

ಶ್ರೀ. ಡಿ. ಆರ್. ರಾಮಯ್ಯ, ಬಿ. ಎ.

೧

ತಿರೆಯಾಣ್ಮ ಸಿರಿಯರಸ ಪೆಣ್ಣೊಡೆಯ ತಾನೆಂಬ
ಬಹುವಿಧದ ಬಾಳ್ಕೆಯಲಿ ಮನಸೋತು ಬಳಲಿ,
ತಿರೆ-ಸಿರಿಯ ಸ್ತ್ರೀಜನರ ಹಿರಿದಾಸೆಯಲಿ ತನ್ನ
ನಿಜಗುಣದ ಮಾಳ್ಕೆಗಳ ಕಡೆಗೊತ್ತಿ ಮಲೆತು—
ಅದು ತನ್ನ ಸೌಭಾಗ್ಯ; ಪೆರತೆಲ್ಲ ದೌರ್ಭಾಗ್ಯ!
ಇನಿತೆಲ್ಲ ತನಗಿರಲು ಬವರಾಯಗಳುಳುವುದೆ?—
ಎನುತೆನುತೆ ಬಾಯ್ಬಿಡುವ ಕ್ಷಣಿಕದಲಿ ನೊಂದು,
ಮನಮರುಗಿ ನಿಂದಿರಲು ಮಾಯೆಯದು ಕಂಡು!

೨

ಕವಿ, ಶಿಲ್ಪಿ, ಸುಜ್ಞಾನಿ, ವಿಜ್ಞಾನಿ, ಸಂಗೀತ-
ಜ್ಞಾನಿ, ಚಿತ್ರಕರಿನಿತು ಪಲವಗೆಯ ಸುಪ್ರಭೆಯ
ಗಳಿಸಿ ತನ್ನದು ಎಂಬರುಂಟೆ— ಪಡೆಯುವುದೆಂತು!
ಆವೆಡೆಯೊಳಿಹುದದುವೆ— ಅದು ಯಾರ ಸೊತ್ತು?
ತನ್ನ ಮಕ್ಕಳಿಗಿಲ್ಲ; ಮಡದಿಗದು ಸಿಗದಲ್ಲ!
ತಾ ಕಂಡ ಸೌಭಾಗ್ಯ ತನ್ನೊಬ್ಬನಲಿ ಬೆಳಗಿ
ತನ್ನಲ್ಲಿ ಲಯವಹುದು— ಅದು ಯಾರ ಸೊತ್ತು!
ಸರಸಿಯಲಿ ಬೆಳಗುತಿಹ ತಾವರೆಯ ಸೊಬಗಿರಲು
ಜಲದ ಸಿರಿ, ತಿರೆಯ ಸಿರಿ, ನಾರಿಯರ ಸಿರಿಯದಕೆ
ಸಮನೆನಿಸುವುದೆ ಹೇಳು—ಚಿಮ್ಮುತಿರೆ ಚೆಲುವು!
ಲತೆಗೆ ಪತ್ರಕೆ ಪಿರಿದು ಪುಷ್ಪಗಳ ಸೌರಭವು!
ತನುಮನಕೆ ಮಿಗಿಲಾಯ್ತು ಆತ್ಮಸಂಯಮವು!
ನಭಕೆಲ್ಲ ಬೆಳಕಾಯ್ತು ರವಿಯ ಭೂಷಣ ಕಿರಣ!
ಶುಭವಹುದು ನಿಜಗುಣವು ಸತ್ಯದಾಭರಣ!

೩

ತನ್ನದಲ್ಲದ ಸೊತ್ತು ಬೆಳಗುತಿದೆ ಜನದಲ್ಲಿ—
ದೇವದೇವನ ಚರಣಕಮಲದೆಡೆಯಲ್ಲಿ!
ಮನುಜ ನೀನದಕೊಂದು ಸಮಧರ್ಮ ಸದ್ಧರ್ಮ
ಸವಿ-ಶಾಂತಿಗೀಡೆನಿಸು ತೆರಳುವಾ ಮುನ್ನ!

ಕಣ್ಮರೆಯಾದ ಕಾಲ್ಮರಿ !

ಶ್ರೀ. ಎನ್. ಕೆ. ಕುಲಕರ್ಣಿ,
ಎಂ. ಎ., ಬಿ. ಟಿ.

(ಹರಟೆ)

ಕಾಲಲ್ಲಿಯ ಚಪ್ಪಲಿ ಹೋದುದಕ್ಕಾಗಿ ಇಷ್ಟೊಂದು ಗೋಳೇ ?—ಎಂದು ಯಾರೂ ಬೇಸರು ಪಟ್ಟುಕೊಳ್ಳಬೇಡಿ! ಕಳೆದು ಹೋದುದಕ್ಕಾಗಿ ಕಳವಳ ಪಡುವುದಿದು ನೈಸರ್ಗಿಕ ಧರ್ಮ.

★

ಬೇಕಾದಂತಹ ಬರಸಿಡಿಲನ್ನೂ ನಾನು ಸೈರಿಸಬಹುದಿತ್ತು ; ಆದರೆ ಈ ವಿರಹವ್ಯಥೆಯನ್ನು ತಾಳುವುದು ನನ್ನಿಂದ ಅಸಾಧ್ಯವೆನಿಸಿತು. ಮತ್ತೇನು ಕಳೆದುಕೊಂಡಿದ್ದರೂ ನನಗಿಷ್ಟು ಕೆಡುಕೆನಿಸುತ್ತಿರಲಿಲ್ಲ—ಆ ಸೊಗಸಾದ ಜೋಡನ್ನು ಕಳೆದುಕೊಳ್ಳಬೇಕಾದರೆ !....ಅಯ್ಯೋ, ನನಗಾದ ವ್ಯಥೆಯನ್ನು ಎಷ್ಟು ತೋಡಿಕೊಂಡರೂ ಅದು ತೀರುವಂತಿಲ್ಲ !

ಅವನ ಮನೆಹಾಳಾಗ ! ಯಾವನವನು, ಕಾಲನಂತೆ ಬಂದು ನನ್ನ ಕಾಲೊಳಗಿನ ಜೋಡಿನಿಂದ ನನ್ನನ್ನು ಅಗಲಿಸಿದವನು ! ಒಂದು ಹೋಗಿ ಒಂದಾದರೂ ಉಳಿದಿದ್ದರೆ ನನಗಷ್ಟು ವ್ಯಥೆ ಎನಿಸುತ್ತಿರಲಿಲ್ಲ, ಅಥವಾ ಒಂದನ್ನಾದರೂ ಉಳಿಸಿ ಕೊಳ್ಳವಷ್ಟು ಪಂಡಿತನು ನಾನಲ್ಲವೆಂದೇ ಹೇಳಬೇಕು ; ಏಕೆಂದರೆ—'ಸರ್ವನಾಶೇ ಸಮುತ್ಪನ್ನೆ ಅರ್ಧಂ ತ್ಯಜತಿ ಪಂಡಿತಃ' ; ಆದರೆ ಅರ್ಧವನ್ನು ತ್ಯಜಿಸುವ ಆ 'ದೀಡ ಪಂಡಿತ'ರು ನನ್ನಂತಹ ಚಪ್ಪಲಿಗಳನ್ನು ಕಳೆದುಕೊಂಡಿದ್ದರೆ ಹೇಳುತ್ತಿದ್ದೆ, ಅರ್ಧಮಾತ್ರವನ್ನೇ ಹೇಗೆ ತ್ಯಜಿಸುತ್ತಿದ್ದರು........ಎಂಬುದನ್ನು. ನಾನು ಅಂತಹ ಪಂಡಿತನೇ ಆಗಿದ್ದರೆ ಯಾವ ಅರ್ಧವನ್ನು ತ್ಯಜಿಸುತ್ತಿದ್ದೆನೆಂಬುದನ್ನು ಬಲ್ಲಿರಾ ? ಒಂದೇ ಚಪ್ಪಲಿಯನ್ನೇ ?. . . . ಒಂದು ಕಾಲು ಮತ್ತು ಒಂದು ಚಪ್ಪಲಿಯನ್ನೆ ?....ಅಲ್ಲಲ್ಲ, ಇದಾವುದೂ ಅಲ್ಲ. ಅರ್ಧತ್ಯಜಿಸುವ ಪಂಡಿತ ನಾನಾಗಿದ್ದರೆ, ಪ್ರಸಂಗಬಿದ್ದರೆ ಎರಡೂ ಕಾಲುಗಳನ್ನೂ ಕಳೆದುಕೊಳ್ಳುತ್ತಿದ್ದೆನಲ್ಲದೆ, ನನ್ನ ಇಂತಹ ದಿವ್ಯ ಚಪ್ಪಲಿಗಳನ್ನಲ್ಲ.

ಅಯ್ಯೋ, ದಿವ್ಯ ಚಪ್ಪಲಿಗಳೆ ! ಕಣ್ಮರೆಯಾದ ಈ ಕಾಲ್ಮರಿಗಳನ್ನು ಹೇಗೆ ಸಂಶೋಧಿಸಲಿ! ಯಾವ ಸಂಶೋಧಕರನ್ನು ಮೊರೆಹೋಗಲಿ ! ಯಾವ 'ಪಂಚಮದಲ'ಕ್ಕೆ ಸೆರಗೊಡ್ಡಲಿ ! ಯಾವ ದಲವೇನು ! ಸಹಸ್ರದಲೋದ್ಭವನಾದ ಆ ಬ್ರಹ್ಮನೇ ನನ್ನ ಹಣೆಯಲ್ಲಿ ಇಂತಹ ದುರ್ಘಟವಿಪತ್ತನ್ನು ಬರೆದಿರುವಾಗ, ಉಳಿದ ಗೊಂದಲಗಳೇನು ಮಾಡಬಲ್ಲುವು ? ಹರಪ್ಪ—ಮೊಹೆಂಜೊದಾರೊಗಳ ಸಂಶೋಧನದಿಂದ, ಮೂರು ನಾಲ್ಕು ಸಾವಿರ ವರುಷಗಳ ಹಿಂದಿನ ಸಂಸ್ಕೃತಿಯ ಜೀವ ಮರಳಿ ದೊರೆತಿರಬಹುದು. ಇದರಿಂದ ಮನುಷ್ಯಪ್ರಯತ್ನಕ್ಕೆ ಮೀರಿದುದು ಯಾವುದೂ ಇಲ್ಲ !—ಎಂಬ ಸಂಕಲ್ಪವನ್ನು ಮಾತ್ರ ನಾನು ಸ್ವೀಕರಿಸಲಾರೆ. ಏಕೆಂದರೆ ಮೊದಲನೆಯದಾಗಿ ಯಾವ ಸಂಸ್ಕೃತಿಸಂಶೋಧಕನಿಗೂ ಸಹಜವಾಗಿ—ಪ್ರಯಾಸವಾಗಿಯೂ ಕೂಡ—ಸಾಧ್ಯವಾಗುವಂತಹ ವಸ್ತು ಇದಲ್ಲ. ಎರಡನೆಯದೆಂದರೆ ಹುಡುಕಿದಾಗ ಅವು ಸಿಕ್ಕಬಹುದಾಗಿದ್ದರೆ ಅವು ಕಳೆಯುತ್ತಲೆ ಇರಲಿಲ್ಲವೆಂದು ನನ್ನ ಮತ. ನನ್ನ ಮತವೇನು ಸುಟ್ಟಿತು, ಇದು ಜಗತ್ತಿನ ನಿಯಮ.

ನನ್ನ ಚಪ್ಪಲಿಗಳನ್ನು ನೋಡಿದಾಕ್ಷಣವೇ, ಯಾರಿಗಾದರೂ ಅದರ ಮೇಲೆ ಲೋಭ ತಾನಾಗಿಯೆ ಹುಟ್ಟುವಂತಿದ್ದಿತು. ಸುವರ್ಣಕ್ಕಿಂತಲೂ ಸೌಂದರ್ಯವೇ ಚೋರರನ್ನು ಬೇಗನೆ ಬರಮಾಡುವುದಂತೆ. ಸುಳ್ಳಲ್ಲ, ನನ್ನ ಚಪ್ಪಲಿ ನೋಡುವುದಕ್ಕೆ ಮನೋಹರವಾಗಿದ್ದುವು. 'ಇದ್ದರೆ ಇರಬೇಕಿಂತಹ ಜೋಡು' ಎಂದು ಯಾರಾದರೂ ಬಾಯ್ಬಿಡುವಂತಿದ್ದಿತು. (ಈಗ ನಾನೇ ಬಾಯ್ಬಿಡುತ್ತಲಿದ್ದೇನೆ !) ನಾನು ಇಲ್ಲಿಯವರೆಗೂ ಎಷ್ಟೋಸಲ ಚಪ್ಪಲಿಗಳನ್ನು ಮಾಡಿಸಿದ್ದೇನೆ, ಆದರೆ ಇಷ್ಟು 'ಮಜಬೂತ' ಇಷ್ಟು ಸುಂದರ...., ಇಷ್ಟೇ ಅಲ್ಲ ಇಷ್ಟು ಅಗ್ಗ ಒಮ್ಮೆಯೂ ದೊರೆತಿರಲಿಲ್ಲ. ಅಂತೆಯೆ ಅವುಗಳ ಮೇಲೆ ನನ್ನದು ಅಚ್ಚುಮೆಚ್ಚು. ನನ್ನ ಮೇಲಾದರೂ ಅವುಗಳ ಅಚ್ಚುಮೆಚ್ಚು ಅಷ್ಟೇ ಉಜ್ವಲವಾಗಿದ್ದಿತೆನ್ನಬೇಕು. ಏಕೆಂದರೆ ಅವನ್ನು ನಾನು ಮೆಟ್ಟಿದಾಗ, ಒಳ್ಳೆ ಸಂಭ್ರಮದಿಂದ ಅವು ನನ್ನ ಪಾದಕ್ಕೆರಗಿ 'ಚಿರ್, ಚಿರ್' ಎಂದು ಹುರುಪಿನ ಉದ್ಗಾರತೆಗೆಯುತ್ತಿದ್ದುವು. ಆದರೆ ಈಗ ನಿಜವಾಗಿಯೂ ನನ್ನ ಚಪ್ಪಲಿಗಳಿಗೆ, ನನ್ನಿಂದ ಕಣ್ಮರೆಯಾದ ನನ್ನ ಕಾಲ್ಮರಿಗಳಿಗೆ, ನನ್ನ ಅಗಲಿಕೆಯಿಂದ ಎಂತಹ ಸಿಡಿಲು ಬಡಿದಿರಬೇಕು. ಪಾಪ! ಮುಗ್ಧ ಮೂಕಪ್ರಾಣಿಗಳು! ಯಾವ ಅತ್ಯಾಚಾರಿಯಿಂದ ಅವೀಗ ಪಾದಾಕ್ರಾಂತವಾಗಿವೆಯೊ, ಅವನನ್ನು ಎಷ್ಟೊಂದು ಶಪಿಸುತ್ತಿರಬೇಕು! ನನ್ನ ಪಾದರಕ್ಷೆಗಳಲ್ಲಿ ಅಡಿಯಿಟ್ಟವನು.. ಅವನಾವನೋ ಪುಣ್ಯಾತ್ಮ ! ನನ್ನ ಚಪ್ಪಲಿಯ ಚೆಲ್ವಿಕೆಯನ್ನು ನೋಡಿ ಅವನ್ನು ಅಪಹರಿಸಿದನೊ, ಇಲ್ಲವೆ ತನಗೆ ಪಾದರಕ್ಷೆಗಳಿಲ್ಲವೆಂದು ಅವನ್ನು ಅಪಹರಿಸಿದನೊ ! ಅವನಿಗೆ ಕಾಲ್ಮರಿಗಳಿಲ್ಲದಿದ್ದರೆ ನನ್ನ ಕಾಲ್ಮರಿಗಳ ಮೇಲೆ ಏಕೆ ಅವನ ಕಣ್ಣು

ಹೋಗಿರಬೇಕು? ಜಗತ್ತಿನಲ್ಲಿ ನನ್ನ ಕಾಲ್ಮರಿಗಳೇ ಅವನಿಗಿಷ್ಟೊಂದು ಹಾಳತಾಗಬೇಕೆ? ದೇವರೆ, ನನ್ನ ಕಾಲುಗಳನ್ನು—ಕಾಲನ್ನು ಬಿಡು, ಪಾದಗಳನ್ನು—ಹನುಮಂತನ ಪಾದಗಳಂತೆ ಏಕೆ ಮಾಡಲಿಲ್ಲ! ಇಲ್ಲವೆ ಸುಂದರ ಜಪಾನಿಯ ಜವ್ವನೆಯಂತೆ ನನಗೂ ಕಿತ್ತಡಿಗಳನ್ನೇಕೆ ದಯಪಾಲಿಸಲಿಲ್ಲ! ಏಕೆಂದರೆ ಪಾದರಕ್ಷಾತ್ರಾಣಕ್ಕೆ ಇವೆರಡರ ಹೊರತು ಬೇರೊಂದು ಗತಿಯೆ ಇಲ್ಲವೆಂದು ತೋರುತ್ತದೆ. ಇನ್ನೇನು, ಇದ್ದರೂ ಬೇರೊಂದು ಗತಿ ಇದ್ದಿರಬಹುದು; ಅ ದೇ ನೆಂ ದ ರೆ, ಆ ಗೀತಾಪರಮಾತ್ಮನು 'ಪರಿತ್ರಾಣಾಯ ಸಾಧೂನಾಂ' ಎಂಬುದರ ಬದಲು 'ಪಾದತ್ರಾಣಾಯ ಸಾಧೂನಾಂ'......ಕ್ಷಮಿಸಿರಿ, ಅಬ್ರಹ್ಮಣ್ಯಂ! ಲೇಖನಿ ಉದ್ದವಾಯಿತೆಂದು ಬಿರುಗಣ್ಣರಾಗಬೇಡಿರಿ. ಇದು ಆರ್ತಹೃದಯದ ಉಸಿರು.

ಹೋಗಲಿ, ಕಳೆದುಕೊಂಡ ಮೇಲೆ ದುಡುಕುವ ಹಾದಿಯನ್ನು ಬಿಟ್ಟು, ಉಳಿಸಿಕೊಳ್ಳಬಹುದಾಗಿದ್ದ ಭೂತಕಾಲದ ವಿಚಾರಗಳಿಂದ ತಲೆಯನ್ನೇಕೆ ಕೆಡಿಸಿಕೊಳ್ಳುವುದು? ಹೇಗೂ ನೆನೆದು ನಾನು ವಿಶ್ವಪ್ರಯತ್ನ ಮಾಡಿದೆ. ಬೀದಿಯ ಕುಂಟ ಭಿಕ್ಷುಕರನ್ನು ಮೊದಲ್ಗೊಂಡು ಎಲ್ಲ ದಾರಿಹೋಕರ ಕಾಲನ್ನೂ ಹಿಡಿದೆ, ನೋಡಿದೆ. ಕಂಡವರನ್ನೆಲ್ಲ, ಕಂಡದ್ದನ್ನೆಲ್ಲ ಕೇಳಿ ನೋಡಿದೆ—'ತಳಿರೇ ತಾವರೆಯೇ ಮಧಾಳಿ ಕುಲವೇ ಕರ್ನೈದಿಲೇ ಮತ್ತಕೋಕಿಳವೇ' ಎಲ್ಲಾ ಆಯಿತು. ಸೀತೆಯ ವಿರಹದಿಂದ ಬೆಂದ ಶ್ರೀರಾಮಚಂದ್ರನಿಗೆ ಇತ್ತ ನೆರವನ್ನೇ ನನಗೂ ಇತ್ತುವು ಆ ತಳಿರು-ತಾವರೆಗಳು.

'ಒಂದು ಚಪ್ಪಲಿಗಾಗಿ ಇದೇನು ತೊಳಲಾಟ!' ಎಂದು ಯಾರಿಗಾದರೂ ಬೇಸರದ ನಗೆಬರಬಹುದು. ಆದರೆ ಕಳಕೊಂಡ ವಸ್ತುವೆಂದ ಮೇಲೆ ಕಳವಳವಾಗಬೇಡವೆಂದರೆ ಹೇಗೆ? ತಿಂದದ್ದೇ, ಉಂಡದ್ದೇ? ವ್ಯರ್ಥವಾಗಿ ಕಳೆದುಕೊಳ್ಳಬೇಕೆ?—ಅದರಲ್ಲಿಯೂ ಇಂತಹ ಚಪ್ಪಲಿಗಳನ್ನು? ಇಲ್ಲಿಯ ವರೆಗೂ ಒಂದೊಂದು ಎರಡೆರಡು ತಿಂಗಳಲ್ಲಿ ಎರಡೆರಡು ಮೂರುಮೂರು ಚಪ್ಪಲಿಯ ಜೋಡನ್ನು ಮುಗಿಸಿದ್ದೆ. ಎಲ್ಲ ಮೋಚೆಗಾರರೂ ತಮ್ಮ ಧರ್ಮಕ್ಕೆ ವ್ಯತ್ಯಯ ಬಾರದಂತೆ, ಜೂರುಭರಿತ ಚಪ್ಪಲಿಗಳನ್ನೆ ದಯಪಾಲಿಸಿದ್ದರು. ಅಂತೂ ಕೊನೆಗೊಮ್ಮೆ ಕೀಸರಿಟ್ಟು, ಈ ಅದ್ವಿತೀಯ ಚಪ್ಪಲಿಗಳನ್ನು ಮಾಡಿಸಿದ್ದೆ. ಅವನ್ನು ಧರಿಸಿ ರಾಜಮಾರ್ಗದಲ್ಲಿ ಹೊರಟೆನೆಂದರೆ ನಾನು ಉನ್ನತನೆಂದು ನನಗೇ ಹೊಳೆಯುತ್ತಿತ್ತು. ಆದರೆ ಒಂದೆರಡು ತಿಂಗಳಲ್ಲಿ ಆ ಚಪ್ಪಲಿಗಳು ಕೊಂಚ ಅವನತಿಯನ್ನು ಹೊಂದಿದ್ದುದರಿಂದ, ಮತ್ತೆ ಅವಕ್ಕೆ ದಿಮ್ಮಡ ಕಟ್ಟಿಸಿ ಹೊಳಪು ಕೊಡಿಸಿದ್ದೆ. ಮತ್ತೆ ಮೊದಲಿನ ಉನ್ನತಿಯನ್ನು ಅವು ತಾಳಿದ್ದುವು. ಪುನಃ ಪೂರ್ವದ ಅವನತಿ ಬರಬಾರದೆಂದು, ನಾನು ಎಲ್ಲಿಯಾದರೂ ದೂರಹೋಗುವುದಿದ್ದರೆ ಹೋಗುವುದನ್ನು ಬಿಟ್ಟುಕೊಡುತ್ತಿದ್ದೆ. ತೀರ ಅವಶ್ಯವೆನಿಸಿದಾಗ ಒಂದು ಟಾಂಗೆಯನ್ನೋ ಬೇರೆ ವಾ ಹ ನ ವ ನ್ನೋ ಉಪಯೋಗಿಸುತ್ತಿದ್ದೆ. ಗುಡಿಗುಂಡಾರಕ್ಕೆ ಹೋಗುವುದನ್ನಂತೂ ಚಪ್ಪಲಿಯ ನಾಸ್ತಿಕತನಕ್ಕೆ ಅಂಜಿ ಮೊದಲೇ ಬಿಟ್ಟುಬಿಟ್ಟೆ. ಚಪ್ಪಲಿಗಳು ಸವೆದು ಹೋಗಬಾರದೆಂದು ನಾನು ಇಲ್ಲಿಯ ವರೆಗೂ ನಿತ್ಯವಾಗಿ ಅನುಸರಿಸುತ್ತಿದ್ದ ನನ್ನ ಪ್ರಭಾತಸಂಚಾರವನ್ನು ಸಹ ನಿಲ್ಲಿಸಿ ಬಿಟ್ಟೆ. ಹೆಚ್ಚೇನು, ಅವನ್ನು ಮೆಟ್ಟುವುದನ್ನೆ ಬಿಟ್ಟುಬಿಟ್ಟೆನೆಂದು ಸ್ವಲ್ಪದರಲ್ಲಿಯೇ ಹೇಳಿಬಿಡಬಹುದು!....ಛೆ, ಅದು ಹೇಗೆ ಹೇಳಬಹುದು? ಏಕೆಂದರೆ ಅವನ್ನು ನಾನು ಬಳಸಲಿಲ್ಲವಾಗಿದ್ದರೆ ಕಳೆದುಕೊಳ್ಳಬಹುದಿತ್ತೇ? ನನ್ನ ಪ್ರಾರಬ್ಧ ಕರ್ಮಕ್ಕೆ, ಮೊನ್ನೆಯೆ ನಾನು ಅವನ್ನು ಮೆಟ್ಟಿಕೊಂಡು ಪೇಟೆಗೆ ಹೋಗಬೇಕೆ? ಪೇಟೆಗೆ ಹೋದರೆ ಮಾರವಾಡಿಯ ಅಂಗಡಿಯಲ್ಲಿ ಒಳ್ಳೇ 'ಬೇಡ್‌ಶೀಟ್'ವ್ಯಾಪಾರ ಮಾಡುವ ದುರ್ಬುದ್ಧಿ ಬರಬೇಕೇ, ನನಗೆ? ಅದೂ ಹೋಗಲಿ, ಎಂದೂ ಬೆಟ್ಟಿಯಾಗದ ನನ್ನ ಮಿತ್ರ ಅಂದೇ ಏಕೆ ಬೆಟ್ಟಿಯಾಗಬೇಕು? ಬೆಟ್ಟಿಯಾದರೂ ಅವನ ಬೆಂಬಲಿಗನಾಗಿ ನಾನು ಅಂಗಡಿಯನ್ನೇಕೆ ಪ್ರವೇಶಿಸಬೇಕು? ಕಾಡುವ ಕಾಲವೆಂದರೆ ಹೀಗಿರುತ್ತದೆ. ಮುಖ್ಯ, ಹೊರಟ ವೇಳೆಯು ಅನಿಷ್ಟಕರವಾಗಿರಬೇಕಲ್ಲದೆ ಮತ್ತೇನು? (ಎಂತಹ ನಾಸ್ತಿಕನೂ ವೇಳೆ-ನಕ್ಷತ್ರಗಳ ಇಷ್ಟಕ್ಕಲ್ಲದಿದ್ದರೂ, ಅನಿಷ್ಟಕ್ಕಾದರೂ 'ಹೂಂ'ಗುಟ್ಟಬೇಕು.)

ಅಂಗಡಿಯಲ್ಲಿ ಪ್ರವೇಶಿಸುವ ಮೊದಲೇ ನನಗೆ ಭಾವೀನಷ್ಟಚಿಂತನೆ ಬರಲಿಲ್ಲವೆಂದು ತಿಳಿಯಬೇಡಿ! ಆದರೆ ಅಂಗಡಿಯಲ್ಲಿ ವಿಶೇಷ ಜನವಿದ್ದಿಲ್ಲ; ಮೇಲಾಗಿ 'ಇದು ಅಂಗಡಿ, ಗುಡಿ-ಗುಂಡಾರವಲ್ಲ; ಜಾಹೀರ್ ಸಭೆಯಲ್ಲ; ಕೀರ್ತನ-ಪುರಾಣವಲ್ಲ' ಎಂಬ ಧೈರ್ಯವಿದ್ದುದರಿಂದ, ಕೊಂಚ ವಿಶ್ವಾಸದಿಂದ ಜೋಡನ್ನು-ನನ್ನ ಜೀವದ ಜೋಡನ್ನು, ಹೊರಗಿಟ್ಟು ಒಳಗೆ ಹೋದೆ.

ಒಳಗೆ ಹೋದೆ, ಲಕ್ಷ್ಯವೆಲ್ಲವೂ ಹೊರಗೇ! ಅಂಗಡಿಕಾರ ಅನೇಕ ವಿಧದ ಬಣ್ಣಬಣ್ಣಗಳ ಬೆಡ್‌ಶೀಟನ್ನು ರಾಶಿರಾಶಿಯಾಗಿ ಒಗೆದ. ನನ್ನ ಮನಸ್ಸು ಕೊಂಚ ಶಿಥಿಲವಾಯಿತು. ಬೆಲೆಯು ಕೂಡ ಬಹಳವೆನಿಸಲಿಲ್ಲ. ಮನಸ್ಸು ಇನ್ನಿಷ್ಟು ಶಿಥಿಲವಾಯಿತು.... 'ಸುಂದರ ಕಿರ್ಲೋಸ್ಕರ ಮಂಚ, ಹಂಸ ತಲ್ಪದಂತಹ ಹಾಸುಗೆ, ಕಾಮನ ಬಿಲ್ಲಿನ ಬಣ್ಣವೆರಚಿದ ಮೇಘಮಾಲೆಯಂತಿರುವ ಈ ಬೆಡ್‌ಶೀಟು.......' ಯಾವುದೋ ಒಂದು ರೋಮಾಂಚಕಾರಕ ಕಲ್ಪನೆಯು ಮನದ ಬಾನ್‌ಬಯಲಲ್ಲಿ ಮಿಂಚಿ ಹೋಯಿತು. ಉತ್ತಮವಾದ ಒಂದು ಜೋಡು ಬೆಡ್‌ಶೀಟ್ ಆರಿಸುವುದರಲ್ಲಿ ಮಗ್ನನಾದೆ. ಈ ಜೋಡನ್ನು ಒಯ್ದು, ಮನೆಯಲ್ಲಿ ಮೆಚ್ಚುಗೆಯನ್ನು—ರಾಜ ಸಂಭಾವನೆಯನ್ನು—ಪಡೆಯಬೇಕೆಂಬ ಹುಮ್ಮಸದ ಆಶೆ ಹಿರಿದಾಯಿತು. ಒಟ್ಟು 'ಬಿಲ್ಲು' ನೂರು ರೂಪಾಯಿಯ ಮೇಲೆ ಸ್ವಲ್ಪ ಚಿಲ್ಲರೆಯಾಗುತ್ತಿತ್ತು. ಆದರೆ ಅಂಗಡಿಕಾರ ಮರೆತೋ, ಇಲ್ಲವೆ ಗಿರಾಕಿಗಳ ಮನವೊಲಿಸಬೇಕೆಂದೋ—ನಾಲ್ಕಾರಾಣೆ ಕಡಿಮೆ ಹಚ್ಚಿದ. ನಾನೇಕೆ ಕೇಳಲಿ ಅವನನ್ನು? ಬಿಲ್ಲುಕೊಟ್ಟು ಬಾಣಬಿಟ್ಟಂತೆ ಒಳ್ಳೇ ಹಿಗ್ಗಿನಿಂದ ಹೊರಗೆ ಅಡಿ ಇಟ್ಟೆ. ಇಡುವುದೊಂದೇ ತಡ, ಬಂತು ಬರಸಿಡಲು! ನನ್ನ ಕಾಲ್ಮರೆ ಕಣ್ಮರೆಯಾಗಿದ್ದುವು. ನನ್ನ ಜೋಡು ಮಾಯವಾಗಿತ್ತು.

ನನ್ನ ಪಂಚಪ್ರಾಣಗಳೇ ಕಳಚಿದಂತಾಯಿತು. ಮುಖವೆಲ್ಲ ಬಿಳಿಚಿಟ್ಟಿತು; ಸಂತಾಪವು ಹೊನಲು-ಹೊನಲಾಗಿ ಸೂಸಿತು. ಎದೆ ಕೀಲಿಕೊಟ್ಟ ಸರ್ವಿಸ್‌ಮೋಟಾರಿನಂತೆ, ಡಡಡಡಿಸತೊಡಗಿತು. ನನಗೆ ಯಾವ ಬುದ್ಧಿಯೂ ತೋಚಲಿಲ್ಲ. ಭ್ರಮೆಗೊಂಡು, ಬಗಲೊಳಗಿನ ಗಂಟನ್ನು ಅಪ್ಪಳಿಸಿ, ಹೊರಗೆ ಕಟ್ಟೆಯ ಮೇಲೆ ಕುಕ್ಕರಿಸಿ ಬಿಟ್ಟೆ. ನನ್ನ ಮಿತ್ರ 'ಅಯ್ಯೋ' ಎಂದ. ಕವಿದ ಮೋಡಕ್ಕೆ ಗಾಳಿ ತಗುಲಿದಂತಾಯ್ತು. 'ಗೊಳೋ' ಎಂದು ಧ್ವನಿ ತೆಗೆಯುವಷ್ಟರಲ್ಲಿಯೆ ಸುತ್ತಲಿನ ವಾತಾವರಣ ನೆನಪಾಗಿ, ಹೇಗೋ ಬಿಗಿಹಿಡಿದೆ; ಸುಮ್ಮನೆ ಹೊರಬಿದ್ದೆ.

ತಿಂದದ್ದಲ್ಲ, ಉಂಡದ್ದಲ್ಲ. ಕಳೆದುಕೊಂಡರೆ ಏನು ಬಂತು? ಬರುತ್ತವೇನು, ಹೋದದ್ದು ಹೋಗಿಯೇ ಹೋಯಿತು! ನನ್ನ ಜೀವಮಾನದಲ್ಲಿ ಎಷ್ಟೋ ಜೋಡನ್ನು ಮೆಟ್ಟಿ ಹರಿದಿದ್ದೇನೆ. ಒಂದಕ್ಕೂ ನನಗೆ ಕಳವಳವಾಗಿರಲಿಲ್ಲ. ಏಕೆ, ಯಾರಿಗಾದರೂ ಈ ಚಪ್ಪಲಿಯನ್ನು ದಾನಮಾಡಿದ್ದರೂ ನನಗಷ್ಟು ಖೇದವಾಗುತ್ತಿರಲಿಲ್ಲ. (ದಾನಮಾಡುವಂತಹ ಕರ್ಣತನ ನನ್ನಲ್ಲಿತ್ತೋ ಇಲ್ಲವೊ!)

.... ಜೀವನದಲ್ಲಿ ಎಂತೆಂತಹ ವಸ್ತುಗಳನ್ನೆ ಕಳೆದುಕೊಳ್ಳುತ್ತೇವೆ. ಜೀವರತ್ನಗಳನ್ನು ಕಳೆದುಕೊಳ್ಳುತ್ತೇವೆ. ರವೀಂದ್ರರಂತಹ ಕವಿರತ್ನ, ಜಗದೀಶರಂತಹ ವಿಜ್ಞಾನಮಣಿ, ಟಿಳಕರಂತಹ ದೇಶಭಕ್ತತಿಲಕ .... ಇದಲ್ಲದೆ ನಮಗೆ ನಚ್ಚಿಕೆಯವರಾದ ಅನೇಕ ಬಂಧು-ಮಿತ್ರರನ್ನೂ ಕಳೆದುಕೊಂಡಿಲ್ಲವೆ? ಏನು ಕೊಟ್ಟರೆ ಅವರನ್ನು ಮರಳಿ ಪಡೆಯಬಹುದು? ....ಆ ವ್ಯಕ್ತಿಗಳೆಲ್ಲಿ? ನನ್ನ ಚಪ್ಪಲಿಯ ಜೋಡೆಲ್ಲಿ?.... ಅಂಗಡಿಯವನಿಂದ ನಾಲ್ಕಾಣೆಯ ಲಾಭ ಪಡೆವುದು ಅನ್ಯಾಯವಲ್ಲವೆ? ಅವನು ಅಲಕ್ಷ್ಯದಿಂದ ತಪ್ಪು ಲೆಕ್ಕಮಾಡಿದ್ದರೆ, ನಾನು ಅವನಿಗೆ ಹೇಳಬೇಕಾಗಿತ್ತಲ್ಲವೆ, ಸುಶಿಕ್ಷಿತ ನಾಗರಿಕನೆಂದು? ಚಪ್ಪಲಿಯನ್ನು ದುಡುಗುಮಾಡುವಂತಹ ದುರ್ಬುದ್ಧಿಗಾಗಿ ಆ ಕಳ್ಳನನ್ನು ನಾನೇಕೆ ಶಪಿಸಬೇಕು?........ಜಗತ್ತಿನಲ್ಲಿ ಆದರ್ಶ ಸಜ್ಜನರು ಯಾರಿದ್ದಾರೆ? ಎಂದ ಮೇಲೆ ನಾನೇಕೆ ಇಷ್ಟು ಮಿಡುಕಾಡಬೇಕು?........ಹಾಗಾದರೆ ಈಗ ಚಪ್ಪಲಿಗಾಗಿ ಕಳೆದುಕೊಂಡ ಎರಡುರೂಪಾಯಿಯ ಹಾನಿಯನ್ನು ಹೇಗೆ ತುಂಬಿಕೊಳ್ಳಬೇಕು? ಅದೇನು ಮಹಾಪ್ರಶ್ನೆ! ಎರಡುದಿನ ಅನ್ನತ್ಯಾಗ ಮಾಡಿದರಾಯಿತು ಪ್ರಾಯಶ್ಚಿತ್ತವೆಂದು! ಪ್ರಾಯಶ್ಚಿತ್ತವೂ ಆಯಿತು, ಮಿತವ್ಯಯವೂ ಆಯಿತು .... ಇವೇ ವಿಚಾರಗಳ ತರಂಗಮಾಲೆಯ ಮೇಲೆ ತೇಲಾಡುತ್ತ ದಾರಿಹಿಡಿದು ಸಾಗಿದೆ. ಮನೆಗೆ ನಡೆದೆ........

ವಾಚಕರೆ, ಆದ ಅಸಮಾಧಾನವನ್ನು ತೋಡಿಕೊಳುವುದಕ್ಕಾಗಿಯೇ ಲೆಕ್ಕಣಿಕೆಯನ್ನೆತ್ತುವೆ. ನೀವು ಸಹಾನುಭೂತಿಯನ್ನು ತೋರಿಸಿದರೆ, ನಾನು ಪಟ್ಟ ನಷ್ಟವು ಸಾರ್ಥಕ. ಇಲ್ಲವಾದರೆ ನನ್ನನ್ನೇ ಸಂತೈಸಿಕೊಳ್ಳಲು ಮಾಡಿದ ಅನೇಕ ಯತ್ನಗಳಲ್ಲಿ ಇದೂ ಒಂದು—ಎಂದು ತಿಳಿದು ಸುಮ್ಮನಾಗಿಬಿಡುತ್ತೇನೆ.

ವಿಮಾನದಾಳಿ!

ಭವಿಷ್ಯ ಹೇಗಿದೆಯೊ ಬಲ್ಲವರಾರು?

ಭಾರತೀಯರಿಗೂ ಆ ವಿಷಮಸಂದರ್ಭ ಒದಗಬಹುದಾಗಿದೆ!

ಅದರಿಂದ ಸುರಕ್ಷಿತರಾಗುವುದಕ್ಕಾಗಿ

"ವಿಮಾನ ದಾಳಿ ಸಂರಕ್ಷಣೆ"

ಎಂಬ ಪುಸ್ತಕವನ್ನೋದಿರಿ!

ಬರೆದವರು **ಟಿ. ಆರ್. ಭಾಗವತ**, ಬಿ.ಎ.

ಕ್ರಾ. ೮. ೬೦ ಪುಟಗಳು. ಬೆಲೆ ೦-೬-೦

ಬೇಕಾದವರು ಜಯಂತಿ ಕಾರ್ಯಾಲಯಕ್ಕೆ

ಬರೆದು ತರಿಸಿಕೊಳ್ಳಬೇಕು!

(೨೧೭ನೆಯ ಪುಟದಿಂದ ಮುಂದುವರಿದುದು.)

ಮುಟ್ಟಬಹುದು. ಆದರೆ ಕುರೂಪತೆಯನ್ನೇ ಅಧಿದೈವತವೆಂದು ತಿಳಿದಂತಹ ಕುರೂಪಕಾರರು (caricatrists) ಎಂದೆಂದಿಗೂ ಉದಾತ್ತತೆಯನ್ನು ಮುಟ್ಟಲಾರರು. ಕುರೂಪಕಾರರದೊಂದು ಪಂಥವೇ ಸದ್ಯಕ್ಕೆ ಕಾಣುವುದು. ಕುರೂಪವಾಗಿರುವುದನ್ನು ಸುರೂಪವನ್ನಾಗಿ ಮಾಡುವುದರ ಸಲುವಾಗಿಯೆ ತಮ್ಮ ಜನ್ಮವೆಂದು ಇವರು ತಿಳಿದರೂ—ಒನ್ನೊಮ್ಮೆ ಅಣಕಿಸಲಿಕ್ಕೆ ಹತ್ತಿದ ಮಗುವು ತನ್ನ ತಾಯಿ-ತಂದೆಗಳಿಗೂ ಅರಕಿಸುವಂತೆ—ಕುರೂಪಕಾರರ ಗತಿಯಾಗಿರುವುದು. ಪ್ರಮಾಣ ತಪ್ಪಿದ್ದೆಲ್ಲ ಕುರೂಪತೆಯೆ. ಕುರೂಪಕಾರರ ಪ್ರಮಾಣವೂ ತಪ್ಪಿಹೋಗಿದೆ ಈ ಕಾಲದಲ್ಲಿ. ಕುರೂಪಿಸುವುದನ್ನು ಅಣಕಿಸಿದರೆ ಲಾಭವೇ ಆಗುವುದು. ಆದರೆ ಕುರೂಪಕಾರರ ಮಿತಿಯು ಇಲ್ಲಿಯೂ ಮೀರಿದೆ. ಜಗದ್ವಂದ್ಯರಾದವರನ್ನೂ ಕುರೂಪಿಸದೆ ಬಿಡದಂತಹ ಕಲಾವಂತ (?) ರಿದ್ದಾರೆ. ಸಜ್ಜನ ಕವಿಗಳ ಪದ್ಯಗಳನ್ನೂ ಕುರೂಪಿಸದೆ ಬಿಟ್ಟಿಲ್ಲ ಇವರು; ಎಂದ ಮೇಲೆ ವ್ಯವಹಾರದಲ್ಲಿ ಸಿಕ್ಕವರ ಮೇಲೆ, ಬೀದಿಗಾವಲಿಯ ನೀರಿನ ಪಿಚಕಾರಿ ಹೊಡೆಯದೆ ಏನು? ಕುರೂಪಿಸುವುದು ಮಾನವಧರ್ಮವಲ್ಲ. ಸುರೂಪತೆಯನ್ನು ಹುಟ್ಟಿಸಿ ಕುರೂಪತೆಯನ್ನು ಕಳೆಯುವುದೇ ಕಲೆಯ ಉದ್ದೇಶ. ಅದಕ್ಕಾಗಿಯೆ ಸಾಹಿತ್ಯದಲ್ಲಿ ಕುರೂಪತೆಗೂ ಸ್ಥಾನ ದೊರೆತಿದೆ.

ಮಾರ್ಷಲ್ ಎಂಬ 'ಮಾರ್ಷಲ್!'

ಸಂಯುಕ್ತ ರಾಜ್ಯಗಳ ಸೈನ್ಯಾಧಿಕಾರಿಯ ಜೀವನವಿಶೇಷ

ಶ್ರೀ. ಬಸವರಾಜ ಕಟ್ಟೀಮನಿ

★

ಇಂದಿನ ಬೀರರ ಬಳಗದಲ್ಲಿ ಜನರಲ್ ಜಾರ್ಜ್ ಸಿ. ಮಾರ್ಷಲ್ ಅವರಿಗೊಂದು ಮೇಲಿನ ಸ್ಥಾನವಿದೆ. ಅಮೇರಿಕೆಯ ಭಾಗ್ಯವಿಧಾತನಾದ ರೂಸ್‌ವೆಲ್ಟರಿಗೆ ಮಾರ್ಷಲ್ ಬಲಗೈ ಇದ್ದಂತೆ!

"ಒಪ್ಪಂದ ಗಿಪ್ಪಂದ ಯಾವುದೂ ಸಾಧ್ಯವಿಲ್ಲ. ರಾಕ್ಷಸರೊಂದಿಗೆ ಸಂಧಾನ ಸಾಧ್ಯವಾದೀತೇ? ಯಾರೂ ಆ ಮಾತನ್ನೆತ್ತಬೇಡಿ. ಪ್ರಜಾಪ್ರಭುತ್ವ ರಾಷ್ಟ್ರಗಳ ವಿಜಯಕ್ಕೆ ಒಂದೇ ದಾರಿ,— ಜರ್ಮನಿ ಹಾಗೂ ಜಪಾನುಗಳ ಸಮರಯಂತ್ರದ ಸಂಪೂರ್ಣ ನಾಶ!" *

ಇದೇನು? ಯಾರಮಾತು ಇದು? ಚರ್ಚಿಲ್ ವಾಣಿಯಂತೆ ಭಾಸವಾಗುತ್ತದೆಯಲ್ಲವೇ ನಿಮಗೆ? ಅದೇ ಆವೇಶ, ಅದೇ ಸ್ಪಿರಿಟ್, ಅದೇ ತಳಮಳ, ನಾಜಿಗಳ ಹಾಗೂ ಅವರ ಬಗಲುಗೂಸುಗಳ ಬಗೆಗೆ ಹೃದಯದಲ್ಲಿರುವ ಅತೀವ ಸಂತಾಪ! ಇಂದು ಜಗತ್ತನ್ನೇ ಹಿಂಸಾಬಲದಿಂದ ನಡುಗಿಸುತ್ತಿರುವ ಸರ್ವಾಧಿಕಾರಿಗಳು, ನಾಳೆ ಮಣ್ಣು ಮುಕ್ಕುತ್ತ ಮುಗ್ಗರಿಸಿ ಬೀಳುವುದನ್ನು ಕಣ್ಣಾರೆ ಕಾಣುವ ಹಂಬಲ! ಎಲ್ಲ ಚರ್ಚಿಲರ ಭಾವನೆ! ಅಲ್ಲ, ಅದಕ್ಕೂ ಮೂರುಪಾಲು ಹೆಚ್ಚು!

ಆದರೆ ಈ ಮಾತು ಚರ್ಚಿಲರದಲ್ಲ; ಅಮೇರಿಕೆಯ ಸೈನ್ಯದ ಮುಖ್ಯ ಸೇನಾಪತಿಯ ಮುಖದಿಂದ ಹೊರಟ ಗುಡುಗು ಇದು. ಈ ಗರ್ಜನೆ ಮಿತ್ರರಾಷ್ಟ್ರಗಳ ಹೃದಯವನ್ನು ಹುರಿದುಂಬಿಸಿತು. ವೈರಿಗಳ ಗುಂಡಿಗೆಯನ್ನು ನಡುಗಿಸಿತು. ಇದುವರೆಗೆ ಷೋಕು-ಷೋಕಿನಲ್ಲಿ ಮೈಮರೆತು ವಿಲಾಸಜೀವನಕ್ಕೆ ಮನಸೋತಿದ್ದ ಅಮೆರಿಕನ್ ಸೈನಿಕರಲ್ಲಿ ಅವರ ಕರ್ತವ್ಯದ ಅರಿವನ್ನುಂಟುಮಾಡಿಕೊಟ್ಟಿತು.

ಸಿಂಹದಂತಹ ಈ ಸೇನಾಪತಿ ಯಾರು, ಏನು? ಆತನ ಯೋಗ್ಯತೆ ಎಷ್ಟು?— ಎಂಬುದು ಅಮೆರಿಕನ್ ಸೈನಿಕರಿಗೂ, ನಾಗರಿಕರಿಗೂ ಮನೆಮಾತು. ಯುರೋಪಿನಲ್ಲೂ ಇವನ ಕೀರ್ತಿಪರಿಮಳ ಹರಡಿದೆ. ಜರ್ಮನಿಯ ಸೈನ್ಯಾಧಿಕಾರಿಗಳೆಲ್ಲ ಈತನ ಹೆಸರನ್ನೂ ಶಕ್ತಿಯನ್ನೂ ಕೇಳಿ ತಿಳಿದುಬಲ್ಲರು. ಅಮೆರಿಕೆ ಯುದ್ಧರಂಗಕ್ಕೆ ಪ್ರವೇಶ ಮಾಡಿದೊಡನೆಯೆ ಅಧ್ಯಕ್ಷ ರೂಸ್ವೆಲ್ಟರ ಹಿಂದಿನಿಂದಲೆ ಈತನ ಹೆಸರೂ ಅಂತರ ರಾಷ್ಟ್ರೀಯ ರಂಗಕ್ಕೆ ಕೇಳಬರತೊಡಗಿತು.

ಜನರಲ್ ಜಾರ್ಜ್. ಸಿ. ಮಾರ್ಷಲ್ ಎಂಬುದು ಈ ಕೀರ್ತಿಶಾಲಿ ಸೇನಾಪತಿಯ ಹೆಸರು. ಈತನದು ಅನ್ವರ್ಥಕ ನಾಮವಾಗಿರುವುದೂ ಒಂದು ಸ್ವಾರಸ್ಯ. ಇಂಗ್ಲಿಷಿನಲ್ಲಿ 'ಮಾರ್ಷಲ್' ಎಂದರೆ ಸೇನಾಧಿಪತಿ ಎಂದು ಅರ್ಥ. ಇವನು ಹುಟ್ಟಿದಾಗಲೆ ಮುಂದೆ ಈತ ಸೇನಾಪತಿಯಾಗುವನೆಂಬುದನ್ನು ತಂದೆ–ತಾಯಿಗಳು ಹೇಗೆ ಊಹಿಸಿದರೋ ತಿಳಿಯದು. ಅಂತೂ ಚಿಕ್ಕತನದಿಂದಲೂ ಇವನು 'ಮಾರ್ಷಲ್'! ಇವನ ಜೀವನವೇ ಸೈನಿಕವೃತ್ತಿ, ಸೈನಿಕವೃತ್ತಿಯೇ ಇವನ ಜೀವನ! ಈತನ ಬಟ್ಟೆ-ಬರೆ, ರೂಪು-ರಂಗು, ಮಾತು-ಕತೆ, ಹಾವ-ಭಾವ ಎಲ್ಲದರಲ್ಲೂ ಈ ಸೈನಿಕವೃತ್ತಿ ಒಡೆದುಕಾಣಿಸುತ್ತದೆ.

ಇಂದು ಈತನ ತಲೆಯ ಮೇಲೆ ಕರಿಯ ಕೂದಲು ಔಷಧಿಗೂ ಸಿಕ್ಕುವಂತಿಲ್ಲ. ನರಿಯ ತುಪ್ಪಳಿನಂತಾಗಿದ್ದರೂ ಆ ತಲೆಯ ಒಳಗಿನ ಮೆದುಳು ಮಾತ್ರ ಇನ್ನೂ ಅಸಾಧಾರಣ ಚಾಕಚಕ್ಯತೆಯನ್ನು ತೋರಿಸುತ್ತದೆ. ಆರಡಿಗಿಂತ ಹೆಚ್ಚು ಎತ್ತರವಾದ ಆಸಾಮಿ. ಅಷ್ಟೇನೂ ಭವ್ಯಾಕೃತಿಯಲ್ಲವಾದರೂ ಪ್ರಭಾವಶಾಲಿ ಯೆಂಬದು ನಿಜ. ತೆಳ್ಳಗೆ ಬಡಿಗೆಯಂತಿದ್ದರೂ ಪುಟಚೆಂಡಿನಂತೆ ಪುಟಿಯುವ ಶರೀರ. ಗೆರೆಗಳ ತೆರೆಗಳಿಂದ ಕೂಡಿರುವ ಮುಖವಾದರೂ ಕಣ್ಣುಗಳು ಮಾತ್ರ ತುಂಬ ತೀಕ್ಷ್ಣ. ಉದ್ದವಾದ ಮೇಲ್ತುಟಿಯು ಈತ ಐರಿಶ್ ರಕ್ತದವನಿರಬೇಕೆಂಬುದನ್ನು ಜ್ಞಾಪಕಕ್ಕೆ ತರುತ್ತದೆ. ಈತ ಸುರೂಪಿಯೆಂದು ಈತನ ಅತಿಪ್ರಿಯನೂ ಹೇಳಲಾರ. ಆದರೆ ಇಷ್ಟು ಮಾತ್ರ ನಿಜ: ಮಾರ್ಷಲ್

* "No compromise is possible, and victory of the democracies can only be complete with utter defeat of the war machines of Germany and Japan."

—29-5-42

ನಿಜಕ್ಕೂ ಮಾರ್ಷಲ್! ಆತನ ಒಳಗು-ಹೊರಗು ಎಲ್ಲೆಲ್ಲೂ ಸೇನಾಪತಿಯದೇ ರೂಪ! ನೋಡಿದ ತಕ್ಷಣವೆ, ಈ ಆಸಾಮಿ ಸೈನ್ಯಾಧಿಕಾರಿಯೆಂದೇ ಎಲ್ಲರೂ ಹೇಳಿಬಿಡುವರು! 'ಅಲ್ಲ' ಎಂದು ಹೇಳಿದರೂ ಯಾರಿಗೂ ನಂಬುಗೆಯಾಗುವಂತಿಲ್ಲ, ಹಾಗಿದೆ ಮಾರ್ಷಲ್‌ನ ಸೈನಿಕಸ್ವರೂಪ!

ಆಪಾದಮಸ್ತಕವಾಗಿ ಈ ರೀತಿ ಸೈನಿಕ ಸ್ವರೂಪ ಸಿಕ್ಕುವುದೇನು ಸಾಮಾನ್ಯವೆ? ಅದಕ್ಕೂ ತಪಸ್ಸು ಮಾಡಬೇಕಾಗುತ್ತದೆ. ಇದುವರೆಗಿನ ಅರುವತ್ತೆರಡು ವರ್ಷಗಳ ತನ್ನ ಜೀವನದಲ್ಲಿ ಮಾರ್ಷಲ್ ಮಾಡಿದುದು ಈ ತಪಸ್ಸನ್ನೆ! ಆ ತಪಸ್ಸಿನ ಫಲವಾಗಿಯೇ ಇಂದು ವರವಾಗಿ ದೊರೆತಿದೆ ಅವನ ಸ್ವರೂಪ!

ಸ್ವರೂಪಕ್ಕೆ ಅನುರೂಪವಾದ ಅಸಾಧಾರಣ ಕಾರ್ಯಗಳನ್ನು ಮಾಡಿದ್ದಾನೆ ಮಾರ್ಷಲ್. ೧೯೩೯ರಲ್ಲಿ ಈತ ಅಮೇರಿಕದ 'ಚೀಫ್-ಆಫ್-ಸ್ಟಾಫ್' ಪದದ ಹೊಣೆಗಾರಿಕೆ ವಹಿಸಿದಾಗ, ಸೈನ್ಯದಲ್ಲಿ ಕೇವಲ ೧,೭೪,೦೦೦ ಸೈನಿಕರೂ ೧೩,೦೦೦ ಆಫೀಸರುಗಳೂ ಇದ್ದರು. ಅಮೇರಿಕದ ಜನಬಲದ ಮಾನದಿಂದ ಈ ಸೈನಿಕಸಂಖ್ಯೆಯೆಂದರೆ, ಮಹಾನದಿಯದೊಂದು ಕಣ. ಈ ಮೂರು ವರ್ಷಗಳ ಅವಧಿಯಲ್ಲಿ ಮಾರ್ಷಲ್ ಆ ಕಣವನ್ನೇ ಮಹಾನದಿಯ ರೂಪದಲ್ಲಿ ಪರಿವರ್ತಿಸಿದ್ದಾನೆ. ಇಂದು ಹಿಟ್ಲರ್-ಟೋಜೋಗಳ ಕೆನ್ನೆಗೆ ಏಟು ಕೊಡುವ ಸಾಮರ್ಥ್ಯ ಬಂದಿದೆ ಅಮೆರಿಕನ್ ಸೈನ್ಯಕ್ಕೆ. ಮೊದಲು ಸೈನಿಕರಾಗಿದ್ದವರಷ್ಟು ಜನ ಸೈನ್ಯಾಧಿಕಾರಿಗಳು ಇಂದು ತರಬೇತುಹೊಂದಿ ಸಿದ್ಧರಾಗಿದ್ದಾರೆ. ಸೈನಿಕಬಲವೋ ಅಪಾರವಾಗಿದೆ. 'ಇಷ್ಟು ಸಾಲದು' ಎಂದು ಮಾರ್ಷಲ್‌ನ ವಾದ. ಈ ವರ್ಷಾಂತ್ಯದೊಳಗಾಗಿ ೮|| ಮಿಲಿಯನ್ ಸೈನಿಕರನ್ನು ಸಿದ್ಧಗೊಳಿಸಿಯೆ ತೀರುವುದಾಗಿ ಪಣತೊಟ್ಟಿರುವಂತಿದೆ—ಇಂದಿನ ಇವನ ಕಾರ್ಯನೀತಿ.

ಇಂದು ಅಮೇರಿಕದ ಭಾಗ್ಯವಿಧಾತನಾಗಿರುವವನು ಅಧ್ಯಕ್ಷ ರೂಸ್ವೆಲ್ಟ್. ಈ ಭಾಗ್ಯವಿಧಾತನಿಗೆ **ಕಾರ್ಡೆಲ್ ಹಲ್** ಎಡಗೈಯಾದರೆ **ಜನರಲ್ ಮಾರ್ಷಲ್** ಬಲಗೈ. ಕೈಗಳಿಲ್ಲದ ಮನುಷ್ಯ ಯಾವ ವ್ಯವಹಾರವನ್ನೂ ಸಮರ್ಪಕವಾಗಿ ನಡೆಯಿಸಲಾರ. ಇವರಿಬ್ಬರೂ ಅಸಾಧಾರಣ ವ್ಯಕ್ತಿಗಳಿಲ್ಲದೆ ಹೋದರೆ, ರೂಸ್ವೆಲ್ಟರೂ ರಾಜ್ಯಸೂತ್ರವನ್ನು ಸಮರ್ಪಕವಾಗಿ ನಡೆಯಿಸಲಾರರು. ಅಮೇರಿಕದ ಹೊಣೆಗಾರಿಕೆಯೆಲ್ಲ ಈ ತ್ರಿಮೂರ್ತಿಗಳದು! ಈ ಮಹಾ ಹೊಣೆಗಾರಿಕೆಯ ಅರಿವು ಮಾರ್ಷಲ್‌ನಿಗೆ ಚೆನ್ನಾಗಿಯೆ ಇದೆ. ಇತ್ತೀಚೆಗಿನ ಇವನ ಕಾರ್ಯವೇಗವನ್ನು ನಿರೀಕ್ಷಿಸಿದಾಗ, ತನ್ನ ಹೊಣೆಗಾರಿಕೆಯನ್ನೀತ ಎಷ್ಟು ಉತ್ಸಾಹದಿಂದ ನಿರ್ವಹಿಸುತ್ತಿರುವನೆಂಬುದು ಒಡೆದು ಕಾಣಿಸುತ್ತದೆ.

೧೯೪೩ರ ಪ್ರಾರಂಭದೊಳಗಾಗಿ ೮|| ಮಿಲಿಯ ಸೈನಿಕರನ್ನು ತಯಾರಿಸುವುದೇನು ಸಾಮಾನ್ಯ ಕಾರ್ಯವೆ? ಅವರಿಗೆಲ್ಲ ಸರಿಯಾದ ಶಿಕ್ಷಣ ಕೊಡಬೇಕು; ಆಧುನಿಕ ಮಿಂಚುಯುದ್ಧ-(Blitz)ದ ತಂತ್ರಗಳಲ್ಲಿ ಅವರು ಪಾರಂಗತರಾಗಬೇಕು. ಅಲ್ಲದೆ ಇನ್ನೂ ಅನೇಕ ತೊಂದರೆ ತಾಪತ್ರಯಗಳುಂಟು. ಇಂದಿನ ಮಹಾಯುದ್ಧವು ನಾಲ್ಕು ಖಂಡಗಳಲ್ಲೂ ಪಸರಿಸಿದ್ದು, ಆ ನಾಲ್ಕು ಖಂಡಗಳಿಗೂ ಅಮೇರಿಕೆ ತನ್ನ ಸೈನಿಕರನ್ನು ಕಳುಹಬೇಕಾಗಿ ಬಂದಿದೆ. ಆಯಾಯ ಖಂಡಗಳ, ಆಯಾಯ ದೇಶಗಳ ಸ್ಥಿತಿ, ವಾತಾವರಣ, ಅಲ್ಲಿ ಯುದ್ಧ ಮಾಡುವ ವೈರಿಗಳ ಸಮರಪದ್ಧತಿ ಇವೆಲ್ಲವುಗಳ ಬಗೆಗೂ ಸಮರ್ಪಕ ಜ್ಞಾನವಾಗಬೇಕು. ಇಷ್ಟೆಲ್ಲ ಆಗಬೇಕಾದರೆ ಎಷ್ಟೋ ಸಮಯ ಬೇಕು. ಸಮಯದ್ದೇ ಈಗ ಮುಖ್ಯ ತೊಂದರೆ. ಸಾಧ್ಯವಿದ್ದಷ್ಟು ಬೇಗನೆ ಆಗಬೇಕಾಗಿದೆ ಕಾರ್ಯ. ಯುರೋಪಿನಲ್ಲೂ, ಏಷ್ಯಾದಲ್ಲೂ ಕುಸಿದು ಬೀಳುತ್ತಿರುವ ಮಿತ್ರರಾಷ್ಟ್ರಗಳ ಬಲವನ್ನು ಎತ್ತಿ ಹಿಡಿದು, ವೈರಿಗಳಿಗೆ ಒಳ್ಳೆಯ ಏಟನ್ನು ಹಾಕಬೇಕಾಗಿದೆ. ಈ ಕಾರ್ಯ ಎಷ್ಟು ಕ್ಷಿಪ್ರವಾಗಿ ಆದಷ್ಟು ಅನುಕೂಲ; ತಡವಾಯಿತೋ ತುಂಬ ಹಾನಿ! ಮಾರ್ಷಲ್‌ಗೆ ಈ ವಿಚಾರ ಗೊತ್ತು! ಎಂತಲೆ ಈತನ ಕಾರ್ಯಯಂತ್ರ ಭರದಿಂದ ತಿರುಗುತ್ತಲಿದೆ! ವಾಯುವೇಗದಿಂದ ಚಲಿಸುತ್ತಲಿದೆ!

ಯುರೋಪು ಉರಿಯುತ್ತಿದ್ದರೂ 'ಅದರ ಗೊಡವೆ ನಮಗೇಕೆ?' ಎಂದು ಇದುವರೆಗೆ ಕಣ್ಣುಮುಚ್ಚಿ ಗೊರಕೆ ಹೊಡೆಯುತ್ತಿದ್ದ ಅಮೇರಿಕನ್ನರನ್ನು ಕಂಡರೆ, ಮಾರ್ಷಲ್ ಉರಿದೇಳುತ್ತಿದ್ದ. ಅಂತಹ ಜನರ ಭ್ರಮೆಯನ್ನು ದೂರಗೊಳಿಸುತ್ತ ಆತ ಹೇಳಿದುದನ್ನು ನೋಡಿ:

"We are very apt to misread the European situation because of our failure to appreciate the contrast of distances. Call the Hudson the Rhine, then Rochester becomes Paris and Buffalo represents London—so far as the flight of a bomber is concerned. Naturally a man in Buffalo would experience a strong reaction to the presence of thousands of hostile planes just across the Hudson. Here to give the average American has had no such reaction because the Atlantic Ocean lies between him and Europe."

'ಅಟ್ಲಾಂಟಿಕ್ ಸಾಗರ ನಮ್ಮ ಹಾಗೂ ಯುರೋಪಿನ ಮಧ್ಯೆ ಇದೆ. ನಮಗೇನು ಬಂದೀತು ಗಂಡಾಂತರ?' ಎಂದು ಭಾವಿಸುತ್ತಿದ್ದ ಅಮೇರಿಕನ್ನರಿಗೆ ಈ ಹೇಳಿಕೆ ಅಂಜನವಾಗಿ ಪರಿಣಮಿಸಿತು. ಅಮೇರಿಕೆಯನ್ನು ಸಮರಾಸಕ್ತ (War minded) ರಾಷ್ಟ್ರವನ್ನಾಗಿ ಮಾಡಲು ಮಾರ್ಷಲ್ ಸಾಣೆಯು ಅತ್ಯಂತ ಸಹಾಯ ಸಲ್ಲಿಸಿದೆ. ಈ ವಿಷಯದಲ್ಲಿ ಚರ್ಚಿಲ್ ಹಾಗೂ ಮಾರ್ಷಲ್‌ರದು ಒಂದೇ ಧಾಟಿಯೆಂದು ಹೇಳಬಹುದು. ಛೆಂಬರ್ಲೆಯಿನ್ ಸರ್ವಾಧಿಕಾರಿಗಳಿಗೆ ತಲೆಬಾಗಿಸುವ ಧೋರಣ ತಳೆದಿದ್ದಾಗ, ಇಂಗ್ಲೆಂಡಿಗೆ ಬರಲಿದ್ದ ಭಾವೀ ಗಂಡಾಂತರವನ್ನು

ಕುರಿತು, ಚರ್ಚಿಲ್ ಆಗ ತುಂಬ ಆಕ್ರೋಶಮಾಡುತ್ತಿದ್ದರು. ಅದೇ ಮೇರೆಗೆ ಯೂರೋಪಿನಲ್ಲಿ ಹಿಟ್ಲರ್ ಒಂದರ ಹಿಂದೆ ಒಂದು ದೇಶ ಗೆಲ್ಲುತ್ತ ಹೊರಟಾಗ, ಆತನಿಂದ ಅಮೇರಿಕೆಗೆ ಖಂಡಿತ ಗಂಡಾಂತರವಿದೆಯೆಂದು (It is a menace to the U. S. of America) ಮಾರ್ಷಲ್ ವಾಣಿ ಎಚ್ಚರಿಸುತ್ತಿತ್ತು.

ಈ ದೂರ ದರ್ಶಿತ್ವ ಈತನಲ್ಲಿ ಬರಲು ಈತನ ಸಮರಾನುಭವ, ಜಗತ್ತಿನ ಬೇರೆ ಬೇರೆ ಖಂಡಗಳಲ್ಲಿಯ ಇವನ ವಾಸ್ತವ್ಯ ಬಹುಮಟ್ಟಿಗೆ ಕಾರಣವಾಗಿವೆ.

ಇದುವರೆಗೆ ಜನರಲ್ ಮಾರ್ಷಲ್ ಅನೇಕ ದೇಶಗಳನ್ನು ಸುತ್ತಿದ್ದಾನೆ. ಅನೇಕ ದೇಶಗಳ ಜೀವನದ ಅನುಭವ ಪಡೆದಿದ್ದಾನೆ. ಹುಟ್ಟಿದುದು ಯೂನಿಯನ್ ಟೌನ್‌ನಲ್ಲಿ ೧೮೮೦ನೆಯ ಡಿಸೆಂಬರ ಕೊನೆಯ ದಿನ. ೧೮೯೭ ರಲ್ಲಿ ವರ್ಜಿನಿಯಾ ಮಿಲ್ಟ್ರಿ ಇನ್‌ಸ್ಟಿಟ್ಯೂಟಿಗೆ ಹೆಸರು ಹಚ್ಚಿ, ೧೯೦೧ ರಲ್ಲಿ ಬಹುಮಾನಿತ ಪದವೀಧರನಾಗಿ ಹೊರಬಿದ್ದನು. ನೂರನೆಯ ವರ್ಷವೆ 'ಸೆಕೆಂಡ್ ಲೆಫ್ಟಿನೆಂಟ್' ಪದವಿಗೇರಿ ಟೆಕ್ಸಾಸ್‌ನ ಬಿಗ್‌ಬೆಂಡ್ ಡಿಸ್ಟ್ರಿಕ್ಟ್‌ಗೆ ಹೋದ. ಅಲ್ಲಿ ನಕ್ಷೆಗಳನ್ನು ತಯಾರಿಸುವಂತಹ ಬೇಸರದ ಕಾರ್ಯ ಮಾಡಬೇಕಾಯಿತು. ಅವನ್ನು ಮುಗಿಸಿ ನಕ್ಷೆಗಳೊಂದಿಗೆ ಹಿಂತಿರುಗಿದನು. ಇಂದು ಅಮೇರಿಕನ್ ಸೈನ್ಯದಲ್ಲಿ ಆ ನಕ್ಷೆಗಳಿಗೆ ಮಹತ್ತ್ವದ ಸ್ಥಾನವಿದೆ.

ಫಿಲಿಪೈನ್ಸ್‌ನಲ್ಲಿ ಅನೇಕ ವರ್ಷ ಕೆಲಸ ಮಾಡಿದುದರಿಂದ ದೂರ ಪ್ರಾಚ್ಯದ ಸ್ಥಿತಿಗತಿಗಳೆಲ್ಲ ಈತನಿಗೆ ತಿಳಿಯಲು ಅನುಕೂಲವಾಯಿತು. ಫ್ರಾನ್ಸ್‌ಗೆ ಹೋದ ಅಮೇರಿಕನ್ ಸೈನ್ಯದೊಂದಿಗೆ ಇದ್ದುದರಿಂದ, ಫ್ರಾನ್ಸು ಹಾಗೂ ಯುರೋಪಿನ ಪ್ರತ್ಯಕ್ಷ ಪರಿಚಯವೂ ಇವನಿಗಾಯಿತು. ಅಲ್ಲಿಯ ಯುದ್ಧರಂಗಗಳ ಬಲಾಬಲಗಳೇನೆಂಬುದೂ ತಿಳಿದು ಬಂದಿತು. ಕಳೆದ ಮಹಾಯುದ್ಧ ಮುಗಿದ ಐದು ವರ್ಷಗಳ ತರುವಾಯ ಈತನನ್ನು ಚೀಣಕ್ಕೂ ಕಳುಹಲಾಗಿದ್ದಿತು. ಟಿಯೆನ್ಸಿನ್‌ನಲ್ಲಿ ಮೂರು ವರ್ಷಗಳ ಕಾಲ ಇದ್ದನು. ೧೯೩೬ರಲ್ಲಿ ಈತನನ್ನು 'ಬ್ರಿಗೇಡಿಯರ್ ಜನರಲ್' ಪದವಿಗೇರಿಸಿ ವಾಶಿಂಗ್ಟನ್ನಿಗೆ ಕಳುಹಲಾಯಿತು. ಜನರಲ್ ಮಾಲಿನ್ ಕ್ರೇಗ್‌ರ ಕೈಕೆಳಗೆ "ಡೆಪ್ಯುಟಿ ಚೀಫ್ ಆಫ್ ಸ್ಟಾಫ್" ಆಗಿ ಕೆಲಸ ಮಾಡತೊಡಗಿದ. ೧೯೩೯ ರಲ್ಲಿ ಕ್ರೇಗ್‌ರ ಸ್ಥಾನವೇ ಈತನಿಗೆ ದೊರೆಯಿತು. ಇಂದು ಅಮೇರಿಕದ ಎಲ್ಲ ಸೈನ್ಯಗಳ ಮೇಲಿನ ಅಧಿಕಾರಿ, ಮಾರ್ಷಲ್.

ಸೈನ್ಯಕ್ಕೆಲ್ಲ ಅಧಿಕಾರಿಯಾದ ಈತ ಬೆಳಗ್ಗೆ ಏಳುವುದು ಎಲ್ಲರಿಗಿಂತ ಮೊದಲೇ! ಕೊಂಚ ವ್ಯಾಯಾಮ, ಬೇಸಿಗೆಕಾಲವಿದ್ದರೆ ಕುದುರೆ ಸವಾರಿ, ಅನಂತರ ಬೆಳಗಿನ ಉಪಹಾರ. ಚಳಿಗಾಲದಲ್ಲಿ ಬೆಳಗ್ಗೆ ಕೆಲಸ, ಮಧ್ಯಾಹ್ನ ಕುದುರೆಸವಾರಿ. ಆಫೀಸಿನ ಗಡಿಯಾರ ಏಳುಬಾರಿಸುತ್ತಿರುವಾಗಲೇ ಬಾಗಿಲಲ್ಲಿ ಮಾರ್ಷಲ್ ಸಿದ್ಧ. ಕುರ್ಚಿಯಲ್ಲಿ ಕುಳಿತುಕೊಳ್ಳುತ್ತಲೆ ಅಂದಿನ ಅಂಚೆಯ ಸಮಾಚಾರ ತೆಗೆದುಕೊಳ್ಳುವುದು. ದಿನವೂ ಕನಿಷ್ಠ ಪಕ್ಷ ೪೦–೫೦ ಕಾಗದಗಳಾದರೂ ಇರುತ್ತವೆ. ಅವುಗಳನ್ನೆಲ್ಲ ಓದಬೇಕು. ಪರಾಮರ್ಶೆ ಮಾಡಬೇಕು. ಎಂಟೂ ವರೆಯಿಂದ ಒಂಬತ್ತೂವರೆಯ ವರೆಗಿನ ಕಾಲ ವರದಿವಾಚನ ವ್ಯಾಸಂಗದಲ್ಲಿ ಕಳೆಯುತ್ತದೆ. ಬೆಳಗಿನ ಸಮಯ ಸಂದರ್ಶನ, ಸಂಭಾಷಣೆ, ಚರ್ಚೆಗಳಲ್ಲೋ, ವೈಟ್ ಹೌಸಿನ ಸಂದರ್ಶನದಲ್ಲೋ ಉರುಳುತ್ತದೆ. ಮಧ್ಯಾಹ್ನದ ಊಟ ಆಫೀಸಿನಲ್ಲೇ ಮುಗಿಯಬೇಕು. ಮನೆಗೆ ಹೋಗಲು ಬಿಡುವು ಬೇಡವೆ? ಬೇರೆ ಕಡೆಗೆ ಎಲ್ಲಾದರೂ ಊಟಕ್ಕೆ ಆಮಂತ್ರಣ ಇದ್ದರೆ ಮಾತ್ರ ಅನಿವಾರ್ಯವಾಗಿ ಹೋಗಬೇಕಾಗುತ್ತದೆ ಅಷ್ಟೆ. ಒಂದು ತುಂಡು ಬ್ರೆಡ್ಡು, ಒಂದು ಲೋಟ ಹಾಲು–ಅಷ್ಟೇ ಈತನ ಊಟ!

ಮಧ್ಯಾಹ್ನ ಮತ್ತೆ ಸಂದರ್ಶನಗಳು, ಚರ್ಚೆಗಳು; ಇವಾವುವೂ ಇಲ್ಲದಿದ್ದರೆ ಕೊಂಚ ಬರೆಹ—ಪತ್ರವ್ಯವಹಾರ. ಭಾನುವಾರ ಮಾತ್ರ ಈತನಿಗೆ ಬಿಡುವು. ಅಂದು ಪೊಟೋಮ್ಯಾಕ್‌ನ ಕಡೆ ತನ್ನ ಪತ್ನಿಯೊಂದಿಗೆ ನೌಕಾವಿಹಾರಕ್ಕೆ ಹೋಗಿ ಕೊಂಚಕಾಲ ಹಾಯಾಗಿ ಕಾಲ ಕಳೆಯುತ್ತಾರೆ. ಮತ್ತೆ ಮಾರನೆಯ ದಿನದಿಂದ ಇದ್ದೇ ಇದೆ ಯಥಾಪ್ರಕಾರ.

ಮಾರ್ಷಲ್ ಎಲ್ಲ ವಿಷಯಗಳಲ್ಲಿ ಆಧುನಿಕ ವ್ಯಕ್ತಿಯಾದರೂ ಒಂದು ವಿಷಯದಲ್ಲಿ ಮಾತ್ರ ಅವನದು ಓಬೀರಾಯನ ಕಾಲದ ವಿಚಾರಸರಣಿ. 'ಯುದ್ಧದಲ್ಲಿ ಗೆಲವು ದೊರೆಯಬೇಕಾದರೆ ಕಾಲ್ದಳದಿಂದಲೇ ಸಾಧ್ಯ' ಎಂದು ಆತನ ಖಂಡಿತ ಅಭಿಪ್ರಾಯ. ಅದು ನಿಜವಿದ್ದರೂ ಇರಬಹುದು—ಇಲ್ಲದಿರಲೂಬಹುದು. ಆದರೆ ಅದು ಆತನ ದೃಢವಿಶ್ವಾಸ.

ಕಾಲ್ದಳದ ಮಹತ್ತ್ವ ಆತನ ಮನಸಿನಲ್ಲಿ ಬಿಂಬಿಸಿದೆಯಾದರೂ ಶಸ್ತ್ರಾಸ್ತ್ರಗಳು, ಯುದ್ಧೋಪಕರಣಗಳು, ಟ್ಯಾಂಕು ಹಾಗೂ ವಿಮಾನಗಳ ಬಗ್ಗೆ ಆತ ಉದಾಸೀನನಾಗಿರುವನೆಂದು ತಿಳಿಯಬೇಡಿ. ಅವುಗಳ ಮಹತ್ತ್ವವೇನೆಂದೂ ಅವನಿಗೆ ಚೆನ್ನಾಗಿ ಗೊತ್ತು. ಅಂತೆಯೆ ಈ ಯುದ್ಧೋಪಕರಣಗಳ ಸಿದ್ಧತೆ ಎಷ್ಟು ಬೇಗ ಆದಷ್ಟು ಅನುಕೂಲವೆಂದು ಆತ ಪದೇಪದೇ ಸಾರಿರುವುದು. "Material is required, adequate material and a sound plan for its further production in time of emergency." ಎಂದು ಮೊನ್ನೆ ತಾನೆ ಮಾರ್ಷಲ್ ತಮ್ಮ ಜನರಿಗೆ ಸಂದೇಶಕೊಟ್ಟಿರುವುದೂ ಇದೇ ಉದ್ದೇಶದಿಂದ.

'ನಾನು ನಾಲ್ಕೂವರೆ ಮಿಲಿಯನ್ ಏಳೆ—ಎಂಟುವರೆ ಮಿಲಿಯನ್ ಸೈನಿಕರನ್ನು ಸಿದ್ಧಗೊಳಿಸುತ್ತೇನೆ. ನೀವು ಅವರಿಗೆ ಯುದ್ಧೋಪಕರಣಗಳನ್ನು ಕೊಡಿ. ಹಿಟ್ಲರ್–ಮುಸೊಲಿನಿ–ಟೋಜೋಗಳ ಬೆನ್ನು ಮೂಳೆ ಮುರಿಯುತ್ತೇವೆ'! ಎಂದು ಗರ್ಜಿಸುತ್ತಿದ್ದಾನೆ ಮಾರ್ಷಲ್!

ಇಂದಿನ ಯುದ್ಧದ ಇತಿಹಾಸ ಬರೆಯುವಾಗ ಅದರಲ್ಲಿ ಜನರಲ್ ಮಾರ್ಷಲ್‌ಗೆ ಅಮರಸ್ಥಾನ ದೊರೆಯುವಲ್ಲಿ ಸಂದೇಹವಿಲ್ಲ.

ಸರಸೀ ಕೂಡ ★ ★ ಸಿನೆಮಾ

(ಒಂದು ಚಿತ್ರಕಥೆ)

ಶ್ರೀ. ಬೇಂದ್ರೆ ಲಕ್ಷ್ಮಣರಾಯರು, ಧಾರವಾಡ

★

. ೧ ನೆಯ ಸುರುಳಿ

"ಸರಸಿ, ಯಾಕೆ ಇಂದು ಸಪ್ಪಗಿದ್ದೀಯಾ? ಮೈಯಲ್ಲಿ ನೆಮ್ಮದಿಯಷ್ಟೆ?"

"ನನಗೇನಾಗಿದೆ? ನೆಟ್ಟಗೆ ಕಲ್ಲಿನ್ಹಾಗಿದ್ದೇನೆ!"

"ಇಲ್ಲ, ಹೇಳು ಏನಾದರೂ ಆಗಿರಬೇಕು, ಅವ್ವ ಸಿಟ್ಟು ಮಾಡಿದಳೊ?"

"ಛೇ ಇಲ್ಲ!"

"ಅಪ್ಪ ಏನಾದರೂ ಆಡಿದರೊ?"

"ಅದೂ ಇಲ್ಲ!"

"ಹಾಗಾದರೆ ಮುಖ ಯಾಕೋ ಇಳಿದಹಾಗಿದೆ. ಏನೋ ಒಂದು ಕಾರಣ ಇರಲೇಬೇಕು!"

"ಏನೋ ಜೀವಕ್ಕೆ ಬೇಜಾರು!"

"ನಮ್ಮ ಮದುವೆ ಆಗಿ ಆರು ವರ್ಷ ಆಯಿತು. ಇದುವರೆಗೆ ಉಂಟಾಗದ ಅಸಮಾಧಾನ ಇಂದೆಯೆ ತಲೆದೋರಲು ಕಾರಣ?"

"ಹಾಳು ನಮ್ಮ ಜೀವನ! ದಿನಬೆಳಗು ನಾನು ಅದೇ ಸಾರಣೆ-ಉಪಕರಣೆ, ಅದೆ ಕಸ-ಮುಸುರೆ, ಅದೇ ಅಡಿಗೆ-ಊಟ! ಮಾಡಿದ್ದೇ ಮಾಡುವುದು, ಹಾಡಿದ್ದೇ ಹಾಡುವುದು! ಗಾಣದೆತ್ತಿನ್ಹಾಗೆ ನಮ್ಮದೂ ಈ ಚಕ್ರದ ಹೊರಗೆ ಒಂದು ಹೆಜ್ಜೆ ಕೂಡ ಇಳುವ ಹಾಗಿಲ್ಲ! ನೀವು ಮಾತ್ರ ಸ್ವತಂತ್ರರು; ಮನಬಂದಂತೆ ಮೋಜು ಮಾಡಬಹುದು!"

"ನಾವೂ ನಿಮ್ಮ ಹಾಗೆಯೇ ದುಡಿದು ದುಡಿದು ಸಣ್ಣಾಗುತ್ತೇವೆ. ಮೋಜು ಮಾಡುವುದಕ್ಕೆ ಹೊತ್ತೆಲ್ಲಿದೆ? ಎಂದಾದರೂ— ನಮಗೆ ಬಿಡುವು ದೊರೆತ ಹಾಗೆ ನಿಮಗೂ ದೊರೆಯುವುದಿಲ್ಲವೇನು?"

"ಬರೇ ಬಿಡುವು ದೊರೆತರೆ ಬಂದಿತೇನು? ಮತ್ತೆ ಮನೆಯಲ್ಲಿಯೇ ಸಾಯಬೇಕು....ಹೂತಿಟ್ಟವರ್ಹಾಗೆ! ನಿಮ್ಮ ಹಾಗೆ ಬೇಕಾದದ್ದನ್ನೆಲ್ಲಾ ಮಾಡಲಿಕ್ಕೆ ನಮಗೆಲ್ಲಿ ಸ್ವಾತಂತ್ರ್ಯವಿದೆ? ಮೇಲಾಗಿ ಯಾವುದಕ್ಕೂ ದುಡ್ಡು ಬೇಕು— ಆ ದುಡ್ಡಿಗಾಗಿ ಮತ್ತೆ ನಿಮಗೇ ನಾವು ಬಾಯಿ ತೆರೆಯಬೇಕು!".

"ತೆರೆದರೆ ತಪ್ಪೇನು? ಕೇಳಿದಾಗ ನಾವು ಕೊಟ್ಟೇ ಕೊಡ್ತೇವೆ."

"ಬಹಳ ಕೊಡ್ತೀರಿ! ಗುಡಿಗೆ ಹೋದರೆ ಒಂದಾಣೆ. ಸಿನೇಮಾಕ್ಕೆ ಹೋದರೆ ಎರಡಾಣೆ. . ಈ ದರ ನಿರ್‌ಕಾಗಿ ಹೋಗಿದೆ!"

"ಹೌದು, ಅವಕ್ಕೆ ಅಷ್ಟೇ ಬೇಕಾಗುವುದು; ಅಷ್ಟೇ ಕೊಡ್ತೇವೆ!"

"ಅಲ್ಲ, ನೀವು ಹೊರಗೆ ಬೇಕಾದ ಶೋಕೀ ಮಾಡಬಹುದು! ನಾವು? ನಮಗೂ ಆಟ ಬೇಕು, ನೋಟ ಬೇಕು, ತಿನಿಸು ಬೇಕು, ತಿರುಗಾಟ ಬೇಕು! ಇಂಥವೇನೂ ನಾವು ಮಾಡಬಾರದೇನೊ!"

"ಬೇಲಾಷಕ್ ಮಾಡಬಹುದು! ಆದರೆ ಅದಕ್ಕೆ ನೀನೇ ಮೊದಲು ಸಿದ್ಧರಿಲ್ಲ."

"ಅದ್ಯಾಕೆ? ನೀವು ಜೊತೆಗಿದ್ದರೆ ನಾವು ಯಾವುದಕ್ಕೂ ತಯಾರು!"

"ಜೊತೆಗೆ ನಾವೇಕೆ ಬೇಕು?"

"ನೀವು ಬೇಕೇ ಬೇಕು. ನಿಮ್ಮನ್ನು ಬಿಟ್ಟು ಏನು ಮಾಡಲಿಕ್ಕೂ ನಮಗೆ ಮನಸ್ಸಾಗುವುದಿಲ್ಲ!"

★

ಸರಸಿ ಮುಕುಂದ ಸೇರಿ ಸಿನೇಮಾ ನೋಡಿ ಬಂದರೇನೋ ನಿಜ; ಆದರೆ ಒಂದು ಸಲ ನೋಡಿ ಬರಬೇಕಾದರೆ ಒಂದು ಸಿನೇಮಾಕ್ಕೆ ಒಪ್ಪುವಂತಹ ಕತೆಯನ್ನೇ ನಿರ್ಮಿಸಬೇಕಾಯಿತು.

★

"ಅದೆಲ್ಲಾ ಸುಳ್ಳು! ಮನಸ್ಸಾಗುವುದಿಲ್ಲವೆಂತಲ್ಲ, ಧೈರ್ಯವಾಗುವುದಿಲ್ಲ!"

"ಅದಿರಲಿ, ನನ್ನನ್ನು ಕೂಡಿಕೊಂಡು ಏನೂ ಮಾಡಬೇಕೆಂದೆನಿಸುವುದಿಲ್ಲ ನಿಮಗೆ?"

"ಅದೇಕೆ, ಸಂಸಾರವನ್ನೇ ಮಾಡುತಿದ್ದೇನಲ್ಲ!"

"ಇಂಥ ಮಾತಿಗೇನೂ ಕಡಿಮೆ ಇಲ್ಲ! ನನ್ನ ಬಾಯಿ ಕಟ್ಟಿದರೂ ಮನಸನ್ನ ಕಟ್ಟಲಾರಿರಿ!"

"ನಿನ್ನ ಮನಸ್ಸಿನಲ್ಲಿರುವುದಾದರೂ ಏನು? ಒಮ್ಮೆ ಹೇಳಿಬಿಡು! ನೀನು 'ಹೀಗಾಗಲಿ' ಅಂದರೆ ಹಾಗೆ ಮಾಡಿ ಬಿಡೋಣ!"

"ಉಳಿದದ್ದಿರಲಿ. ಒಂದು ಸಿನೇಮಾಕ್ಕೆ ಹೋಗುವ ಮಾತನ್ನೇ ಎಷ್ಟೋ ದಿವಸದಿಂದ ಅಂದುಕೊಳ್ತಾ ಇದ್ದೇನೆ!"

"ಅದೇನಷ್ಟು ಕಠಿಣವಾದ ಮಾತು? ಇದುವರೆಗೆ ಎಷ್ಟು ಫಿಲ್ಮುಗಳನ್ನು ನೋಡಿದ್ದೀಯೆ! ಹಾಗೇ ಇನ್ನೂ ನೋಡಬಹುದು!"

"ಆದರೆ ಯಾವಾಗಲೂ ಹೋದ ಹಾಗೆ ಅಲ್ಲ; ಈಗ ಹೋಗುವ ರೀತಿ ಬೇರೆ!"

‘ ಅಂದರೆ ’ ?

“ ನೀವೇ ಊಹಿಸಿರಿ, ಏನಿರಬೇಕು ? ”

“ ತಲೆಯಿಂದ ನಡೆದುಹೋಗುವುದಿರಬೇಕು ! ”

“ ಅವರಲ್ಲಿ ಸ್ವಲ್ಪ ತಲೆ ನಡೆಯಿಸಿದರೆ ತಲೆಯಿಂದ ನಡೆಯುವ ಕಾರಣವಿಲ್ಲ ! ”

“ ನಮ್ಮ ತಲೆ ಸರಕಾರಕ್ಕೆ ಒತ್ತೆ ಇದೆ– ನಮ್ಮ ಸ್ವಾಧೀನ ಇದ್ದರೆ ನಡೆಸಬೇಕಲ್ಲವೆ ? ”

“ ಅಷ್ಟರ ಮಟ್ಟಿಗೆ ನಮ್ಮ ಸ್ವಾಧೀನ ಬಿಟ್ಟಿದ್ದಾರೆ ಅವರು ! ”

“ ಹಾಗಾದರೆ ನನ್ನ ಹೆಗಲಮೇಲೆ ಕೂತು ಹೋಗುವುದಿರಬೇಕು. ! ”

“ ಸ್ವಲ್ಪ ತಪ್ಪಿದಿರಿ. ಹೆಗಲಮೇಲಲ್ಲ– ಹೆಗಲಿಗೆ ಹೆಗಲು ಹಚ್ಚಿ ಮಗ್ಗಲಿಗೆ ಕುಳಿತು ನೋಡಬೇಕೂ. . ಅಂತ ! ”

“ ಛಪ್ಪರೆ ಹುಡುಗಿ ! ನಿನ್ನಲ್ಲೂ ರಸಿಕತೆ ಹೆಚ್ಚಾಗಿದೆ ! ಆಗಲಿ, ನನಗಿದು ಒಪ್ಪಿಗೆ ! ಆದರೆ ನೀನು ಬರುವ ವಿಚಾರ ನೋಡು. ನಾವು ಸಿನೇಮಾಕ್ಕೆ ಕೂಡಿಹೋದರೂ, ಎಂದೂ ಕೂಡಿ ಕುಳಿತಿಲ್ಲ. ನೀನು ನನ್ನ ಜೊತೆಗೆ— ಗಂಡಸರ ಮಧ್ಯದಲ್ಲಿ— ಕುಳಿತುಕೊಳ್ಳಲು ಸಿದ್ಧಳಿದ್ದರೆ, ನನ್ನದೇನೂ ಅಭ್ಯಂತರವಿಲ್ಲ ! ”

“ ನಾನು ಮೊದಲೇ ಹೇಳಿದ್ದೇನೆ. ನೀವು ಜೊತೆಗಿದ್ದಮೇಲೆ ನಾನು ಎಲ್ಲಿ ಕೂಡಲಿಕ್ಕೂ ತಯಾರ್ ! ”

“ ಅಂತೂ ಪರವಾ ಇಲ್ಲ. ನಮಗೂ ಇಂಥ ಹೆಂಡಿರು ಇದ್ದರೆ ಸಂತೋಷ ! ”

“ ಆದರೆ ಇದರಲ್ಲಿ ಒಂದು ಕರಾರು ನನ್ನದು ! ”

“ ಅದೇನದು ಮತ್ತೆ ? ”

“ ಇದು ಮನೆಯಲ್ಲಿ ಗೊತ್ತಾಗಬಾರದು, ಹೊರಗೂ ಗೊತ್ತಾಗಬಾರದು ! ”

“ ಅಂದರೆ ನಾವು ಸಿನೇಮಾ ನೋಡುವಾಗ ಥಿಯೆಟರಿನಲ್ಲಿ ಯಾರೂ ಇರಕೂಡದು, ಸಿನೇಮಾಕ್ಕೆ ಹೋಗುವಾಗ ಬರುವಾಗ ಯಾರೂ ನಮ್ಮನ್ನು ನೋಡಕೂಡದು. ಮನೆಯಲ್ಲಂತೂ ಈ ಸುದ್ದಿ ತಿಳಿಯಲೇ ಬಾರದು. ಒಂದಕ್ಕಿಂತ ಒಂದು ಅಸಾಧ್ಯ ಮಾತುಗಳು ! ಈ ವಿಚಾರವನ್ನೇ ಬಿಟ್ಟುಕೊಡೋಣ. ಇವೆಲ್ಲ ಕನಸಿನ ರಾಜ್ಯದ ಮಾತು. ಆಗೋಹಾಗಿಲ್ಲ, ಹೋಗೋಹಾಗಿಲ್ಲ!”

“ ನನ್ನ ವಿಚಾರ ನಾನು ಹೇಳಿದೆ; ಅದಕ್ಕೆ ಹಂಚಿಕೆ ತೆಗೆಯುವವರು ನೀವು ! ನಿಮಗೆ ಅನಿಸುವುದಿಲ್ಲವೇನು— ನನ್ನ ಜೊತೆಗೆ ಕೂತು ಸಿನೇಮಾ ನೋಡಬೇಕೂ ಅಂತ ? ಎಷ್ಟೋ ಜನ ಈಗ ಹೋಗ್ತಾರೆ; ಕೂಡಿಯೆ ಕುಳಿತುಕೊಳ್ಳತಾರೆ ! ”

“ ರಾಜಾ-ರಾಣಿ ಹಾಗೆ ಇಬ್ಬರೇ ಇರಬೇಕು ; ಇಲ್ಲವಾದರೆ ಮನೆಯಲ್ಲಿ ನವನಾಗರಿಕತೆಯ ರೀತಿಯಾದರೂ ಇರಬೇಕು ! ನಮ್ಮಲ್ಲಿ ಎರಡೂ ಇಲ್ಲ ! ”

“ ಹೋಗಲಿ, ಕಳ್ಳತನದಿಂದ ಒಮ್ಮೆ ಹೋಗುವುದೂ ಅಸಾಧ್ಯವೇ ? ”

“ ಕಳ್ಳತನ ದಕ್ಕಿದರೆ ಪರವಾ ಇಲ್ಲ ; ಬಯಲಿಗೆ ಬಿದ್ದರೆ ಕಷ್ಟ ! ನನಗೆ ತೊಂದರೆ ಇಲ್ಲ ; ನಿನ್ನ ವಿಷಯ ನೋಡು !

“ ಹೋಗಲಿ ಬಿಡಿ, ನಿಮಗೇ ಮನಸ್ಸಿಲ್ಲ. ಸುಖವನ್ನು ಪಡೆದು ಬಂದಿರಬೇಕು. ನಮ್ಮ ಅದೃಷ್ಟಕ್ಕಿದೆ ಒಲೆ, ಊದುಗೊಳವೆ ! ”

“ ಒಮ್ಮೆಲೆ ಹೀಗೆ ನಿರಾಶಳಾಗಬೇಡ, ಅದಕ್ಕೂ ಕಾಲ ಬಂದೀತು ! ”

“ ಆ ಕಾಲ ಬರುವುದರೊಳಗಾಗಿ ನಮ್ಮ ಕಾಲ ಹೋಗಿಬಿಟ್ಟರೆ ? ”

“ ಸ್ವಲ್ಪ ಸಮಾಧಾನ ತಾಳು. ಏನಾದರೊಂದು ಯುಕ್ತಿ ತೆಗೀತೇನೆ ! ”

* * *

೨ನೆಯ ಸುರುಳಿ

“ ಏನು ! ಎಲ್ಲರಿಗೂ ನಾಳೆ ನಾಯಕರ ಮದುವೆಯ ಆಮಂತ್ರಣ ಬಂದಿದೆ. ಅಪ್ಪ–ಅವ್ವ ಅಂತೂ ಹೋಗಲೇಬೇಕು. ನಾನು ಆಫೀಸಿನ ನೆವಾಹೇಳಿ ಉಳಿದುಬಿಡ್ತೇನೆ. ನೀನೂ ಏನಾದರೂ ನೆವ ತೆಗೆದು ಹೋಗುವುದನ್ನು ತಪ್ಪಿಸು ! ಅಂದರೆ ನಾಳೆ ಸಾಯಂಕಾಲ ಸಿನೇಮಾದ ‘ಪ್ರೊಗ್ರ್ಯಾಮು’ ಸುಸೂತ್ರ ಸಾಧಿಸಬಹುದು ! ”

“ ನಿಮಗೆ ಆಫೀಸಿನ ನೆವ ಇದೆ. ನಡೆಯಬಹುದು. ನಾನೇನು ನೆವ ತೆಗೆಯಲಿ ?

“ ಕಸಾರಿಕೆ ಅಥವಾ ಮುಟ್ಟು ! ಎರಡರಲ್ಲಿ ಯಾವುದೂ ನಡೆಯಬಹುದು ! ”

“ ಥೂ, ಎರಡೂ ಸಾಧ್ಯವಿಲ್ಲ. ಅವೇನು ನೆನಸಿದಾಗ ಬರುವ ಮಾತೇ ? ”

“ ಹಾಗಾದರೆ ನೀನೇ ಯುಕ್ತಿಯನ್ನು ತೆಗೆ ! ”

“ ನನ್ನಿಂದಾಗದು– ಎಂದು ಮೊದಲೇ ಹೇಳಿದ್ದೇನೆ. ”

“ ಸ್ನೇಹಿತರ ಮನೆಯಲ್ಲಿ ಇಬ್ಬರಿಗೂ ಊಟದ ಆಮಂತ್ರಣ ಇದೆ ಎಂದು ಹೇಳಿದರೆ– ? ”

“ ಇದನ್ನು ಮೊದಲೇ ಹೇಳಬೇಕಾಗಿತ್ತು. ಈಗ ಹೇಳಿದರೆ ಮಾವನವರಿಗೆ ಸಂಶಯಬಂದೀತು ! ”

“ ಪರಸ್ಥಳದಿಂದ ಒಬ್ಬ ಸ್ನೇಹಿತನೇ ಬರ್ತ್ತಾನೆ ಎಂದು ಹೇಳೋಣ ! ”

“ ಅವರು ಬಾರದಿದ್ದರೆ– ”

“ ಬರುವುದೇ ಇಲ್ಲ. ಸುಳ್ಳೇ ಹೇಳುವುದು ! ”

“ ಹೌದು. ಬರಲಿಲ್ಲ ಎಂಬದು ಗೊತ್ತಾದರೆ ? ”

“ ಗಾಡಿತಪ್ಪಿದ್ದೀತು, ಬಂದಿರಲಿಕ್ಕಿಲ್ಲ ಎಂದು ಹೇಳಬೇಕು.”

“ ಆ ಮೇಲೆ ಮದುವೆ-ಮನೆಗೇಕೆ ಬರಬಾರದು— ಎಂದು ಅತ್ತೆಯವರು ಕೇಳಿದರೆ ? ”

“ ಅದೇನಿಲ್ಲ– ಮೊದಲಿಗೆ ನಾನು ಹೇಳಿದ ಉಪಾಯಗಳೇ ಯೋಗ್ಯ. ನೀನು ಸುಮ್ಮನೆ ಹೊಟ್ಟೆಶೂಲಿಯ ಸೋಗು ತೆಗೆ. ‘ ಭಯಂಕರ ಹೊಟ್ಟೆಶೂಲಿ, ಪ್ರಾಣಾಂತಿಕ ಹೊಟ್ಟೆಶೂಲಿ’ ಎಂದು ಬೊಬ್ಬೆಯಿಡು ! ಉಳಿದದ್ದನ್ನೆಲ್ಲಾ ನಾನು ನೋಡಿಕೊಳ್ಳುತ್ತೇನೆ!”

"ಸರಿ, ಒಪ್ಪಿಗೆ! ಇದನ್ನು ಯಾವಾಗ ಪ್ರಾರಂಭಮಾಡಿ ಯಾವಾಗ ಮುಗಿಸಬೇಕು?"

"ಹೊತ್ತುಂಟಲೆ ಪ್ರಾರಂಭ ಮಾಡಬೇಕು, ಅಪ್ಪ-ಅವ್ವ ಹೊಸ್ತಿಲುಬಿಟ್ಟು ಹೊರಬಿದ್ದ ಕೂಡಲೆ ನಿಲ್ಲಿಸಬೇಕು!"

"ಇದಕ್ಕೆ ಔಷಧ?"

"ಸಿನೇಮಾ ನೋಡುವುದು!"

"ಅನುಪಾನ?"

"ಅಲ್ಲಿ ಕೂಡಿ ಕುಡಿಯುವ ಚಹಾಪಾನ!"

"ಬೇಷ್, ಬೇಷ್! ಎಲ್ಲವೂ ಸರಿಹೋಯಿತು? ಸಿನೇಮಾಕ್ಕ ಹೋಗುವಾಗ ಪತ್ತಲ ಉಡಲ್ಯೊ, ಸೀರೆ ಉಡಲ್ಯೊ?"

"ಉಡೋದನ್ನೆಲ್ಲ ಉಟ್ಟುಬಿಡು, ನನ್ನನ್ನೇನೂ ಕೇಳಬೇಡ ಈ ವಿಷಯು! ಒಟ್ಟು, ನೀನು ನನ್ನ ಹತ್ತಿರ ಕೂತಾಗ ನಾನು ಚಂದಾಗಿ ಕಂಡಿರಬೇಕು!"

"ಮತ್ತೆ ನೀವು ನನ್ನ ಹತ್ತಿರ ಕೂತರೆ ನಾನೂ ಅಂದವಾಗಿ ಕಂಡಿರಬೇಕು!"

* * *

೩ನೆಯ ಸುರುಳಿ

"೧೧-೩೦ಕ್ಕೆ ಅಕ್ಕೀಕಾಳು, ಪುಣ್ಯಾಹವಾಚನ ವ್ಯಾಳ್ಯಕ್ಕ ಉಡುಗೊರೆ ಕೊಡಬೇಕು. ಎಲ್ಲರೂ ಲಗೂನೇ ಹೋಗೋಣ! ನೀನೂ ನಿನ್ನದೆಲ್ಲಾ ಜಾಗ್ರತೆ ಮುಗಿಸು! ಹೊರಡೋವ್ಯಾಳ್ಯಕ್ಕ ಸಲೂನಿಗೆ ಹೋಗಿ ಕೂಡಬ್ಯಾಡ!"

"ಸಲೂನು—ಬಲೂನು ಏನಿಲ್ಲ; ಆದರೆ ಈ ಹೊತ್ತು ಪ್ರಾಂತ-ಸಾಹೇಬರು 'ತಪಾಸಣೆ'ಗೆ ಬರ್ತಾರ; ನಾನು ಮದುವೆಗೆ ಬರುವ ಹಾಗಿಲ್ಲ!"

"ಈ ಸಾಹೇಬರಿಗೆ ಹೊತ್ತು ವ್ಯಾಳ್ಯಾ ಇಲ್ಲವೇ ಇಲ್ಲ! ಕೇಳಿ-ದಾಗೆಲ್ಲ 'ತಪಾಸಣೆ!' ಏನು ತಪಾಸಣೇನೋ—ಅವರ ಹಿಂದೇ-ಕೊಳು!"

"ನೀ ಬರದಿದ್ದರಷ್ಟೇ ಹೋಯಿತು. ಸರಸಿಗಾದರೂ ಹೇಳು! ಎದ್ದಾಳೋ, ಇನ್ನೂ ಮಲಗೇ ಇದ್ದಾಳೊ?"

"ಆಕೆಗೆ ಹೊಟ್ಟೆಶೂಲಿ—ಬೆಳತನಕ ಕಣ್ಣಿಗೆ ಕಣ್ಣು ಹತ್ತಲಿಲ್ಲ—ಬಹಳ ಒದ್ದಾಡಿದಳು!"

"ಈಗ?"

"ಹಾಗೇ ಇದೆ, ಎಳ್ಳಷ್ಟೂ ಕಡಿಮೆ ಇಲ್ಲ!"

"ಹೊರಡೋ ಹಾಗೆ ಇಲ್ಲವೇನು ಹಾಗಾದರೆ?"

"ಲಕ್ಷಣವೇನೋ ಹಾಗಿದೆ!"

"ಸರಿಹೋಯಿತು! ಸರಸಿಗೆ ಹೊಟ್ಟೆಶೂಲಿ, ನಿನಗೆ ಸಾಹೇಬರ ತಪಾಸಣೆ.. ನೀವಿಬ್ಬರೂ ಬಿದ್ರಿ.. ನಾವಿಬ್ಬರೇ ಮುದುಕರು ಹೋಗುತ್ತೇವೆ; ಸಮಾರಂಭದಲ್ಲಿ ನಾವೇ ಓಡಾಡತೇವೆ.... ಬಚ್ಚ-ಬಾಯಿ ಮಾಡಿಕೊಂಡು!"

"ಅಲ್ಲಪ್ಪಾ, ಪರಿಸ್ಥಿತಿಯೇ ಹಾಗೆ ಗಂಭೀರವಾಗಿದೆ!"

"ತಲೆ ಬೋಳಿಸಿತು. ಅದಿರಲಿ, ಸರಸಿಗೆ ಔಷಧ? ಅಜವಾನದ ಅರ್ಕಿದೆ ಮನೆಯಲ್ಲಿ; ಅದನ್ನು ಒಂದು ಹಳಕು ಕೊಡು. ನಿನ್ನೆ ಒಬ್ಬಾಕೆಯೆ ದೊಡ್ಡ ಕೊಡ ಹೊತ್ತು ನೀರು ತಂದ್ಲು; ಬಟ್ಟೆ ಸರಿದಿದೆ-ಯೇನೋ, ಪಾಪ ಹುಡುಗಿಗೆ?"

"ಬಟ್ಟೆ ಸರಿದಹಾಗೆ ಕಾಣುವುದಿಲ್ಲ; ಇನ್ನೇನಾದರೂ ಆಗಿರ-ಬೇಕು."

"ಮತ್ತೇನು ಆಗತದೆ? ನಿನ್ನ ತಾಯಿಗೆ ಹೇಳು—ಸ್ವಲ್ಪ ಬಟ್ಟೀ-ತಿಕ್ಕೊ ಅಂತ!"

"ಯಾಕದೆಲ್ಲಾ, ಸ್ವಲ್ಪ ಹೊತ್ತಿಗೆ ತಾನೇ ನಿಲ್ಲಬಹುದು!"

"ಅದು ಹ್ಯಾಗೆ ಗೊತ್ತು?"

"ಅಲ್ಲ, ಅಂದಾಜು!"

"ನಿನ್ನ ಅಂದಾಜು ನಿನಗೇ ಇರಲಿ, ಮೊದಲು ಆ ಔಷಧ ಕೊಡು!"

"ನೀವು ಮದುವೆ-ಮುಗಿಸಿಕೊಂಡು ಬರೋದು ಯಾವಾಗ?"

"ನಾಳೆ ಮುಂಜಾನೆ! ಇಂದು ನಾಯಕರು ನಮ್ಮನ್ನು ಬಿಡ-ಲಿಕ್ಕಿಲ್ಲ. ಒಂದು ವ್ಯಾಳ್ಯಾ ಬಂದರೂ ರಾತ್ರಿ ಬರಬಹುದು!"

ಸರ್ವಮಾನ್ಯ!
ಚಳಿಗಾಲದಲ್ಲಿ ಶಕ್ತಿಯ ಬಗ್ಗೆ
ಸರ್ವೋತ್ಕೃಷ್ಟವೆಂದು
ರಕ್ತವರ್ಧಕವನ್ನೇ
ಎಲ್ಲ ಜನರು ಉಪಯೋಗಿಸುತ್ತಿರುವರು.



ಅಷ್ಟವರ್ಗ
ಚ್ಯವನಪ್ರಾಶ
●
ಸುವರ್ಣ
ಮಾಲಿನೀ ವಸಂತ
●
ಮಕರಧ್ವಜಗುಟಿ
●
ಮುಂತಾದ
ಶಕ್ತಿವರ್ಧಕ
ಔಷಧಗಳನ್ನು
ತರಿಸಿರಿ.

ಕರ್ನಾಟಕ ಕೇಂದ್ರ ಮರಾಠಾಗಲ್ಲಿ, ಹುಬ್ಬಳ್ಳಿ.

ಲಲಿತ ಸಾಹಿತ್ಯ ಮಾಲೆ

ವರುಷಕ್ಕೆ ನೂರು ನೂರು ಪುಟದ ೬ ಪುಸ್ತಕಗಳು

ಚಂದಾ: ಅಂಚೆಸಹಿತ ೩-೦-೦

೧. ಚಿಗುರು (ಸೌ. ಗೌರಮ್ಮ) ಪ್ರಕಟವಾಗಿದೆ.

೨. ಅಕ್ಕಾಜಿ (ಅ. ಕಾದಂಬರಿ) ಪ್ರಕಟವಾಗಿದೆ.

ಇಂದೆಯೆ ಚಂದಾದಾರರಾಗಿರಿ !

ಲಲಿತ ಸಾಹಿತ್ಯಮಾಲೆ, ಧಾರವಾಡ

" ಯಾಕ ಸುಮ್ಮನೆ! ....ಕತ್ತಲು ದಿವಸ.... ನಾಳೇ ಬಂದು-ಬಿಡ್ರಿ ! ಆಕೆಗೆ ಗುಣ ಅನಿಸಿದರೆ ಸಾಯುಂಕಾಲ ನಾವೂ ಬರ್ತೇವೆ! "

* * *

೪ನೆಯ ಸುರುಳಿ

" ಹ್ಯಾಗಿದೆಯಮ್ಮಾ, ಹೊಟ್ಟೆಶೂಲಿ? "

" ಅಯ್ಯೊ....! ಹುಟ್ಟಿದ ಮೇಲೆ ಇಂಥ ಹೊಟ್ಟೆಸೂಲಿ ಬಂದಿರ-ಲಿಲ್ಲ–ಅಮ್ಮಾ! ಬಾಧೆ ಅಂದರೆ ವಿಚಿತ್ರ ಬಾಧೆ! "

" ಬಟ್ಟೆ ಸರಿದಿರಬೇಕು! "

" ಭಗವಂತನಿಗೇ ಗೊತ್ತು! "

" ಹೊಟ್ಟೆ ತಿಕ್ಕಲೇನು ? "

" ಶೂಲಿ ಹೆಚ್ಚಾಗಬಹುದು!

" ಅಜ್ವಾನದ ಅರ್ಕಕೊಡಲೇ ?

" ಶಾಪಾಗಬಹುದು! "

" ಹಾಗಾದರೆ ಏನು ಮಾಡಲಿ ? "

" ಏನೂ ಬೇಡ, ನೀವು ಹೋಗಿರಿ; ತುಸ ಹೊತ್ತಿಗೆ ತಾನೇ ಕಡಿಮೆ ಆಗಬಹುದು! "

" ಮದುವೆಯಲ್ಲಿ ಎಲ್ಲರ ಜೊತೆಗೆ ಉತ್ಸಾಹದಿಂದ ಓಡಾಡ-ತಿದ್ದೆ. ಸುಟ್ಟ ಹೊಟ್ಟೆನೋವು ಇಂದೇ ಬರಬೇಕೆ ? "

" ನವಾರಂಭ ನೋಡೋ ಭಾಗ್ಯ ಇಲ್ಲ.... ಕಡಿಮೆ ಅನಿಸಿದರೆ ಬರ್ತೇನೆ! "

" ಆಗಲಿ. ಅನ್ನಕ್ಕಿಟ್ಟು ಹೋಗ್ತೇನೆ—ಮೆತ್ತನ್ನ ಅನ್ನ ಉಂಡು ಮಲಗಿಬಿಡು! ಸಾಧ್ಯವಾದರೆ ಮುಕುಂದನಿಗೆ ಬಡಿಸು, ಇಲ್ಲ-ವಾದರೆ ಅವನೇ ಹಾಕಿಕೊಂಡು ಊಟ ಮಾಡಲಿ! "

" ಅವರು ಬಹಳ ಆಗ್ರಹ ಮಾಡಿದರೆ ಇಂದು ಇದ್ದು ನಾಳೆ ಬರ್ತೇವೆ. ನಾನೇನೋ ಇಂದೇ ಸಾಯುಂಕಾಲ ಬರಬೇಕೂ—ಅಂತೇನೆ. ನಿನ್ನ ಮೈಯಲ್ಲಿ ಪಾಸ, ನೆಟ್ಟಗಿಲ್ಲ. ಅಲ್ಲಿ ಹೋದರೂ ನನ್ನ ಜೀವಕ್ಕೆ ನಿನ್ನದೇ ಚಿಂತೆ! "

" ಛೆ, ಛೆ. ಹಾಗೆ, ಚಿಂತೆ ಹಚ್ಚಿಕೊಳ್ಳಲಿಕ್ಕೆ ನನಗೇನಾಗಿದೆ? ಜ್ವರ ಅಲ್ಲ, ಚಳಿ ಅಲ್ಲ. ಸುಮ್ಮನೆ ಹೊಟ್ಟೆಶೂಲಿ! "

" ರೋಗ ಯಾವುದೇ ಇದ್ದರೂ ಬಾಧೆ ಅಷ್ಟೇ? ಬರ್ತೇನೆ, ನೀ ಎದ್ದು ಕೆಲಸ-ಗಿಲಸ ಮಾಡಬೇಡ. ನಾಳೆ ಬಂದು ನಾ ಎಲ್ಲ ಮಾಡ್ತೇನೆ— "

* * *

೫ನೆಯ ಸುರುಳಿ

" ಸರಸಿ, ಅತ್ತೆ ಮಾವ ಹೋದರು. ನಿನ್ನ ಹೊಟ್ಟೆಶೂಲಿ ? "

" ಅದೂ ಅವರ ಜೊತೆಗೇ ಹೋಯಿತು! "

" ನಾನು ಆಫೀಸಿಗೆ ಹೋಗಲೇ ? "

" ಬೇಡ, ಹೊಟ್ಟೆಶೂಲಿ ನಿಜವಾಗಿಯೇ ಬಂದೀತು! "

" ಹಾಗಾದರೆ ಏನು ಮಾಡೋದು ? "

" ರಜೆಗೆ ಬರೆಯೋದು! "

" ಪ್ರಾಂತ ಸಾಹೇಬನ 'ತಪಾಸಣೆ' ? "

" ಮನೆಯಲ್ಲೇ ಆಗಲಿ! "

" ಒಳ್ಳೇದು, ಯಾವ ಶೋಕ್ಕೆ ಹೋಗುವುದು? "

" ಯಾವ ಶೋಕ್ಕೆ ಹೋದರೇನು ? ನಮ್ಮ ಶೋಕೇ ಆದ-ರಾಯಿತು."

" ಅಲ್ಲಿ ಕೂಡುವುದೆಲ್ಲಿ ? "

" ಬಾಕ್ಸ (Box)ನಲ್ಲಿ! "

" ಶಾಬ್ಬಾಸ್! ಅಂತೂ ಹೆಂಗಸರಿಗೆ ಸ್ವಾತಂತ್ರ್ಯ ಕೊಟ್ಟು ನೋಡಬೇಕು! — "

" ನಮ್ಮದೂ ನಿಮ್ಮ ಹಾಗೇ ಜೀವ! "

" ಅದೂ ನಿಜ, ಸರಿ, ರಜೆಗೆ ಬರೆದು ಬರ್ತೇನೆ. "

" ಆಗಲಿ! "

* * *

೬ನೆಯ ಸುರುಳಿ

" ಇವರು ಯಾರು ? "

" ನಮ್ಮೂರ ಶಾನುಭೋಗ! "

" ಇಂದೆಯೆ ಬಂದರು.. "

" ನನಗೆ ಮೂಲಾಗಿ! "

" ಏನಂತೆ ಕೆಲಸ ? "

" ಏನೊ, ನಮ್ಮ ಹೊಲದ ವಿಷಯ, ಅಪ್ಪನ್ನ ಕೇಳಬೇಕಂತೆ! "

" ಮನೆಯಲ್ಲಿ ಅವರು ಇಲ್ಲ—ಎಂದು ಹೇಳಬೇಕು! "

" ಹೇಳಿದೆ, ಅಪ್ಪ ಬರುವವರೆಗೆ ಇರುವರಂತೆ! "

" ನಮ್ಮ ಸಿನೇಮಾದ ಗತಿ ? "

" ತಪ್ಪಿಸಿ ಹೋಗಬೇಕು! "

" ಹ್ಯಾಗೆ ? "

" ನಾವೂ ಮದುವೆ-ಮನೆಗೆ ಹೋಗಬೇಕು ಅಂತ ಹೇಳಿ ಹೊರಬೀಳೋದು; ಮದುವೆಯ ಮನೆಗೆ ಹೋಗುವುದೇ ಥೀಯೆ-ಟರಿಗೆ ಹೋಗುವುದು!"

" ಶಾನಭೋಗನಿಂದ ಈ ಮಾತು ಮಾವನವರಿಗೆ ತಿಳಿದರೆ? ಅದು ಹಾಗಿರಲಿ, ಮನೆಯನ್ನು ಶಾನಭೋಗನ ಮೇಲೆ ಬಿಟ್ಟು ಹೋದರೆ ಗತಿಯೇನು?"

" ಛೆ! ಹಾಗೆ ಮಾಡಲಿಕ್ಕಾಗದು, ಅದಕ್ಕೆ ಹೀಗೆ ಮಾಡೋಣ! ಸಂಜೆ ಐದುಗಂಟೆಗೆ ಅವನನ್ನು ಹೊರಗೆ ಕಳಿಸುವುದು 'ಹತ್ತು ಗಂಟೆಗೆ ತಿರುಗಿ ಬಾ' ಎಂದು ಹೇಳುವುದು!"

" ಅಷ್ಟರಲ್ಲಿ?"

" ನಾವು ಸಿನೇಮಾ ನೋಡಿ ಬರುವುದು!"

" ಈ ಗುಟ್ಟು ರಟ್ಟಾದರೆ?"

" ನಮ್ಮ ಫಜೀತಿಗೆ ಪಾರವೇ ಇಲ್ಲ!"

" ಏನಾಗುವುದೋ ಆಗಲಿ!"

" ದೇವರಿದ್ದಾನೆ!"

* * *

೨ ನೆಯ ಸುರುಳಿ

" ಯಾವ ಸ್ಥಳದಲ್ಲಿ ಕೂಡೋಣ?"

" ನೀನು ಹೇಳಿದ ಸ್ಥಳದಲ್ಲಿ ಕೂಡೋಣ!"

" ನಮ್ಮ ಹಿಂದೆ ಮುಂದೆ ಜನ ಹೆಚ್ಚಿರಬಾರದು!"

" ಸ್ವಲ್ಪ ತಡೆ, ಹಾಗಾದರೆ ಒಳಗೆ ನೋಡಿಬರ್ತೇನೆ!"

(ಥಿಯೇಟರಿನಲ್ಲಿ ನೋಡಿ ಬಂದು)

" ಸರಸಿ, ಫಜೀತಿಗೆ ಬಂತು!"

" ಯಾಕೆ?"

" ಫಸ್ಟ್‌ಕ್ಲಾಸಿನಲ್ಲಿ ಪ್ರಾಂತಸಾಹೇಬರು, ಸೆಕಂಡ್‌ಕ್ಲಾಸಿ-ನಲ್ಲಿ ಶ್ಯಾನುಭೋಗ!"

" ಮುಂದೆ?"

" ಏನು ಮಾಡೋಣ ನೀನೇ ಹೇಳು!"

" ಪ್ರಾಂತಸಾಹೇಬರಿದ್ದರೆ ಕಚೇರಿಯಲ್ಲಿ. ಇಲ್ಲಿ ಕೇಳುವ-ವರ್‍ಯಾರು?"

" ಆ ಚರ್ಚೆ ಮನೆಯಲ್ಲಿ ಮಾಡೋಣ, ಇಲ್ಲಿ ಬೇಡ!"

" ಈ ಸುಟ್ಟ ಊರಲ್ಲಿ ಒಂದೇ ಸಿನೆಮಾ. ಇಲ್ಲಿಯ ಶ್ರೀಮಂತ-ರಿಗೆ ಇನ್ನೊಂದು ಥಿಯೇಟರು ಕಟ್ಟಿಸಲಿಕ್ಕೇನು ಧಾಡಿ?"

" ಈ ಮಾತಿನ ಅರೆದಾಟ ಬುಕಿಂಗ್ ಆಫೀಸಿನ ಎದುರಿಗೆ ಬೇಡ!"

" ಸರಸಿ, ನನ್ನ ಮಾತು ಕೇಳುತ್ತೀಯಾ?"

" ಏನು?"

" ನೀನು ಹೆಂಗುಸರ ಸ್ಥಳದಲ್ಲಿಯೇ ಕೂತುಬಿಡು! ಮತ್ತೊಂದಾ-ದರೂ ಕೂಡಿ ಕೂಡೋಣವಂತೆ!"

" ಆ ಮಾತಾಗದು!"

" ಆಗೋದೆಲ್ಲ ಆಗಲಿ! ನಡೆ, ಒಳಗೂ ಈಗ ಬೆಳಕನ್ನು ತೆಗೆದಿದ್ದಾರೆ!"

* * *

೩ ನೆಯ ಸುರುಳಿ

" ಆಗಲೆ ಪ್ರಾರಂಭವಾಗಿದೆಯಲ್ಲ ಫಿಲ್ಮು?"

" ಹೌದು, ನಮಗಾಗಿ ಅವರು ನಿಲ್ಲುವುದಿಲ್ಲ!"

" ಏನಿದು ಕಥೆ?" " ನಮ್ಮ ಮನೆ." " ಅಂದರೆ?"

" ಮೊದಲು ನೋಡು, ಆ ಮೇಲೆ ಹೇಳುತ್ತೇನೆ!"

" ಮುಂದೆ ಕೂತವರ ಟೊಪ್ಪಿಗೆ ಅಡ್ಡ ಬರುತ್ತಾ ಇದೆ!"

" ಅದಕ್ಕೇನು ಮಾಡುವುದು?"

" ಸ್ವಲ್ಪ ಅವರಿಗೆ ಹೇಳಿ, ಟೊಪ್ಪಿಗೆ ತೆಗೆಯಿರಿ—ಎಂದು."

" ನೀನೇ ಸರಿದು ಸಂದಿನೊಳಗಿಂದ ನೋಡು!"

" ಥೂ, ಏನಿದು ಹಾಳು ವಾಸನೆ?"

" ನನ್ನ ಮಗ್ಗುಲಿನವರು ಚಿರೂಟು ಸೇದುತ್ತಿದ್ದಾರೆ."

" ನನಗೆ ಈ ವಾಸನೆ ಸಹನವಾಗದು, ಅವರಿಗಾದರೂ ಹೇಳಿ!"

" ಹಾಗೆ ಹೇಳುವುದು ಅಸಭ್ಯತನ!"

" ಹುಶ್‌ಶ್‌ಶ್!"

" ಯಾರವರು?"

" ಹಿಂದೆ ಕುಳಿತವರು!"

" ಏನು, ಹೀಗೆ?"

" ನಾವು ಮಾತಾಡುತ್ತೇವೆಂದು ಅವರಿಗೆ ಬೇಸರು!"

(ತುಸಹೊತ್ತು ಸುಮ್ಮನಿದ್ದು ಪುನಃ)

" ಜಲಪಾತದಲ್ಲಿ ಬಿದ್ದು ಯಾಕೆ ಜೀವಕೊಟ್ಟಳು!"

" ಜೀವಕೊಡುವುದಕ್ಕೆ ಯಾವುದೇನು?"

" ಜೀವಕೊಟ್ಟರೂ ಉಳಿಸಿದರು!"

" ಅಂತೇ ಕೊಟ್ಟಳು!"

" ಆಕೆಗೆ ಮೊದಲು ಇದು ಗೊತ್ತೇನು?"

" ಗೊತ್ತಿರದೆಯೇನು? ಕಥೆಯಲ್ಲಿ ಬರೆದ ಹಾಗೆ ಮಾಡು-ತ್ತಾರೆ!"

೫೦ ವರ್ಷಗಳಿಂದ ಅನುಭವಪಟ್ಟ
ಕರ್ಕಿ ಮತ್ತು ಕಂಪನಿ
ಇವರ
ಜ್ವರಗಡ್ಡೆಯ ಗುಳಿಗೆ
ಬಾಟ್ಲಿಗೆ ೧ ರೂ.
ಎಂತಹ ಜ್ವರಗಡ್ಡೆಯನ್ನೂ ಕಳೆಯುವದು.
ವಿಳಾಸ:— ಗಣೇಶ ರಾಮಚಂದ್ರ ಕರ್ಕಿ ಮತ್ತು ಕಂಪನಿ,
ಗಿರಗಾಂವ, ಮುಂಬಯಿ.

"ಉಶ್‌ಶ್‌ಶ್."

"ಏನದು?"

"ಮಾತಾಡಬೇಡ. ಹಿಂದಿನವರಿಗೆ ಸೇರಿಕೆ ಆಗದು!"

(ತುಸಹೊತ್ತು ಸುಮ್ಮಗಿದ್ದು ಪುನಃ)

"ಇವರು ಅವಳ ಗಂಡನಿಗೇನು ಆಗಬೇಕು?"

"ಅವರಾಗಿ ಹೇಳಿದರೆ ಕೇಳಿಕೊ? ಇಲ್ಲವಾದರೆ ಸುಮ್ಮನೆ ಕೂತು ನೋಡಿಕೊ!"

"ಮಾತುಮಾತಿಗೂ ಇಂವ ಹೇಣ್ತಿಗೆ ಗುಂಡಿನ ಬೆದರಿಕೆ ಹಾಕುತ್ತಾನೆ!"

"ಅವನಲ್ಲಿರುವುದು ಅದೇ ಒಂದು!"

"ರಾಯರೆ, ನಿಮ್ಮ ಸತಿ-ಪತಿಯ ಸಲ್ಲಾಪವನ್ನು ಸ್ವಲ್ಪ ನಿಲ್ಲಿಸಿದರೆ ಉಪಕಾರವಾದೀತು!" ಹತ್ತಿರ ಕುಳಿತವನೆಂದ.

"ಸರಸಿ, ಎಷ್ಟು ಸಾರೆ ಹೇಳಿದರೂ ನಿನಗೆ ತಿಳಿಯುವುದಿಲ್ಲ— ಇನ್ನು ಮಾತಾಡಿದೆಯೆಂದರೆ ಮಾರಾಮಾರಿಗೆ ಬಂದೀತು ಪ್ರಸಂಗ. ಕೈಮುಗೀತೇನೆ ಸುಮ್ಮಗಿರು."

* * *

೯ನೆಯ ಸುರುಳಿ

"ಏನು ಮನೆಗೆ ಕೀಲಿ!"

"ಇವರಿಬ್ಬರೂ ಎಲ್ಲಿಗೆ ಹೋದರು?"

"ಯಾರಿಗೆ ಗೊತ್ತು? ಇನ್ನೇನು ಮಾಡುವುದು?"

"ಮನೆಬಿಟ್ಟು ಹೋಗಲಿಕ್ಕೆ ಸರಸಿಗೂ ತಿಳಿಯಬಾರದೆ?"

"ಮುಂಜಾನೆ ಹೊಟ್ಟೆಶೂಲಿ ಎಂದು ಹಾಸಿಗೆ ಹಿಡಿದಿದ್ದಳು."

"ಮುಕುಂದ ಅವಳನ್ನು ಡಾಕ್ಟರನ ಕಡೆಗೆ ಕರೆದುಕೊಂಡು ಹೋಗಿದ್ದಾನೇನೋ!"

"ಇದ್ದರೂ ಇರಬಹುದು, ಅವಳು ಹಾಗೆ ಮನೆಬಿಟ್ಟು ಹೋಗುವಾಕೆ ಅಲ್ಲ. ಹ್ಯಾಗಿದೆಯೊ, ಹುಡಿಗ್ಗೆ ಹೊಟ್ಟೆಶೂಲಿ? ನಾವು ಬಂದದ್ದು ನೆಟ್ಟಗಾಯಿತು!"

"ಈಗೇನು ಮಾಡೋಣ!"

"ಬರುವವರೆಗೆ ಬಾಗಿಲಲ್ಲಿ ಕೂಡೋಣ!"

* * *

೧೦ನೆಯ ಸುರುಳಿ

"ಟಾಂಗಾ ಬಂದಂತಾಯಿತು. ಅವರೇ ಬಂದಿರಬಹುದು!"

"ಮುಕುಂದಾ,"

"ಏನಪ್ಪಾ?" (ಹೆಂಡತಿಯ ಕಿವಿಯಲ್ಲಿ 'ಅಪ್ಪ-ಅಪ್ಪ' ಬಂದಿದ್ದಾರೆ.)

"ಡಾಕ್ಟರಕಡೆಗೆ ಹೋಗಿದ್ದೆಯೇನು, ಸರಸೀನ್ನ ಕರಕೊಂಡು?"

"ಹೌದಪ್ಪಾ (ಹೆಂಡತಿಗೆ ಕಿವಿಯಲ್ಲಿ)—"ಹೊಟ್ಟೆಶೂಲಿ ಮತ್ತೆ ಸುರುವಾಗಲಿ— !"

"ಏನಂದರು ಡಾಕ್ಟರರು?"

"ಏನೂ ಹೇಳಲಿಲ್ಲ. ಒಂದು ಇಂಜೆಕ್ಶನ್ ಹಾಕಿದರು.
(ಸರಸಿಯನ್ನು ಕೈಹಿಡಿದು ಕೆಳಗಿಳಿಸಿ ಕರೆತರುತ್ತಾನೆ.)

"ಈಗ ಹ್ಯಾಗಿದೆ?"

"ಕಡಿಮೆ ಆಗತಾ ಇದೆ. ಒಳ್ಳೇ ಇಂಜೆಕ್ಶನ್ ಕೊಟ್ಟರು. ಇನ್ನು ಇಂಥ ಹೊಟ್ಟೆಶೂಲಿ ಎಂದೂ ಬರಲಿಕ್ಕಿಲ್ಲ—ಎಂದು ಹೇಳಿದರು.

"ಎಷ್ಟು ಖರ್ಚಾಯಿತು?"

"ಎಲ್ಲ ಸೇರಿ ಎರಡು ರೂಪಾಯಿ ನಾಲ್ಕಾಣೆ!"

"ದುಡ್ಡು ಹೋದದ್ದಕ್ಕೆ ದುಃಖವಿಲ್ಲ. ಬೇನೆ ಕಡಿಮೆ ಆಯಿತು, ಸಾಕು!"

"ಅಪ್ಪಾ, ಶ್ಯಾನುಭೋಗರು ಬಂದಿದ್ದಾರೆ!"

"ಅವರೆಲ್ಲಿ ಹಾಗಾದರೆ?"

"ಊರಲ್ಲಿ ಒಬ್ಬ ಗುರುತಿನವರ ಮನೆಗೆ ಹೋಗಿದ್ದಾರೆ. ನಾಳೆ ಬರ್ತಾರಂತೆ!"

"ಏನು ಕೆಲಸವಂತೆ?"

"ನಮ್ಮ ಹೊಲದ ವಿಷಯ— ಎಂದು ಹೇಳಿದರು."

"ತಾರಾತಿಗಡಿ ಮುಂಡೇಮಗಾ!"

"ರಾತ್ರಿಕೂಳಿಗೆ ಇಲ್ಲೇ ಇರಬೇಕು ಎಂದು ಮಾಡಿದ್ದ. ನಾನೇ 'ಮದುವೆ ಮನೆಗೆ ಹೋಗಬೇಕು' ಎಂದು ಸುಳ್ಳು ಹೇಳಿ ಅವನನ್ನು ಹೊರಗೆಹಾಕಿದೆ. ಇವಳ ಮೈಯಲ್ಲಿಯೂ ನೆಟ್ಟಗಿರಲಿಲ್ಲ!"

"ಹೌದು, ಪಾಪ, ನೆಟ್ಟಗಿಲ್ಲದಾಗಲೂ ವಿಶ್ರಾಂತಿಬೇಡವೆ?"

"ಬಾಗಿಲ ತೆರೆ. ಚಳಿ ಬಹಳ ಆಗ್ತಾ ಇದೆ. ನಾವು ಇಲ್ಲಿ ಕೂತು ಮುಕ್ಕಾಲು ಗಂಟೆಯ ಮೇಲಾಯಿತು!"

* * *

೧೧ನೆಯ ಸುರುಳಿ

"ಅಲ್ಲ, ಡಾಕ್ಟರ ವಿಷಯ ನಿಮಗೆ ಹ್ಯಾಗೆ ತೋಚಿತು!"

"ಅಪ್ಪನಮಾತೇ ಉಪಾಯವಾಯಿತು!"

"ಬಾಗಿಲಿನಲ್ಲಿ ಅವರನ್ನು ನೋಡಿದಾಗ ನಾನಂತೂ ಹೌಹಾರಿಹೋಗಿದ್ದೆ. ಟಾಂಗಾದಿಂದ ಇಳಿಯುವ ತ್ರಾಣ ಉಳಿದಿರಲಿಲ್ಲ!"

"ನಿನ್ನ ಹೊಟ್ಟೆಶೂಲಿ ಸಾಮಾನ್ಯವೆ?"

"ದೇವರೇ ಪಾರುಮಾಡಿದ!"

"ಇಂಥ ಮಾತಿನಲ್ಲಿ ದೇವರು ಕೈಹಾಕುವುದಿಲ್ಲ. ಇದರ ಶ್ರೇಯಸ್ಸೆಲ್ಲ ...."

"ನಿಮ್ಮ ಬುದ್ಧಿಗೆ!"

"ಅಲ್ಲ ನಿನ್ನ ಹೊಟ್ಟೆಶೂಲಿಗೆ!"

"ಹತ್ತು ಸುಳ್ಳಾಡಿ, ಶೂಲಿಯ ಸೋಗು ಮಾಡಿ, ಸಿನೆಮಾ ನೋಡಿದೆವಾದರೂ ಸುಖ ಎನಿಸಲಿಲ್ಲ!"

"ಸುಖ ಸ್ವಾತಂತ್ರ್ಯದಲ್ಲಿದೆ; ನಿರ್ಭಯತೆಯಲ್ಲಿದೆ!"

"ಆವೆರಡೂ ನಮಗಿರಲಿಲ್ಲ!"

"ಹುಸಿಯಾಟ ಹೇಸಿ!"

ಪೂರ್ವ ಪ್ರಾಥಮಿಕ ಶಿಕ್ಷಣ!

ಶ್ರೀ. ಎಸ್. ಎಲ್. ಸುಬ್ರಹ್ಮಣ್ಯ, ಕೊಡಗನೂರು

★

ಮಕ್ಕಳ ದೇಹವಿಕಾಸದ ಕಡೆಗೆ ಲಕ್ಷ್ಯಕೊಡುತ್ತಿರುವಂತೆ ತಾಯಿ-ತಂದೆಗಳು ಅವರ ಮನೋವಿಕಾಸದ ಕಡೆಗೂ ಲಕ್ಷ್ಯ ಪೂರಯಿಸುತ್ತಿರಬೇಕು. ಶಾಲೆಗೆ ಹೋದಮೇಲೆ, ಒಮ್ಮೆಲೆ ಎಲ್ಲವೂ ಹೊಸದೆನಿಸಿ, ಮಕ್ಕಳು ಕಂಗೆಟ್ಟು ಹೋಗದಂತೆ ನೋಡಿಕೊಳ್ಳುವುದೆ ಪೂರ್ವಪ್ರಾಥಮಿಕ ಶಿಕ್ಷಣದ ಪ್ರಯೋಜನ.

★

'ಪೂರ್ವ ಪ್ರಾಥಮಿಕ ಶಿಕ್ಷಣ' ಎಂದರೆ, ಬಾಲಕರಿಗೆ ಅವರು ಶಾಲೆಯನ್ನು ಸೇರುವ ಮೊದಲು, ಕೊಡುವ ಶಿಕ್ಷಣವೆಂದು ಅಭಿಪ್ರಾಯ. ಇದನ್ನು ವಿಚಾರಿಸುವುದಾದರೆ, ಇದರಲ್ಲಿ ಬಾಲಕರ ಮಾನಸಿಕ ಸ್ವಾಸ್ಥ್ಯವೇ ಮುಖ್ಯವಾದುದೆಂದು ತಿಳಿದು ಬರುವುದು. ಬಾಲಕರು ಉತ್ತಮಜೀವನವನ್ನು ನಡೆಯಿಸಲು ಬೇಕಾದ ಅನು-ಕೂಲತೆಗಳನ್ನು ಕಲ್ಪಿಸಿಕೊಡಬೇಕೆಂದು ನಾವು ಒಪ್ಪುವುದಾದರೆ— ಅರ್ಥಾತ್ ಅವರಿಗೆ ಹೊಟ್ಟೆತುಂಬ ಆಹಾರ, ನಿರ್ಮಲವಾದ ಗಾಳಿ-ನೀರುಗಳನ್ನು ಒದಗಿಸಿ, ರೋಗ ಬಂದಾಗ ಉಚಿತೋಪಚಾರ ಚಿಕಿತ್ಸೆ ಮಾಡಬೇಕೆಂದು ಒಪ್ಪುವೆವಾದರೆ— ನಾವು ಆ ಬಾಲಕರಿಗೆ ಅವರ ಮಾನಸಿಕ ವಿಕಾಸಕ್ಕೂ ಕೂಡ, ಉತ್ತಮವಾದ ಅನುಕೂಲತೆಗಳನ್ನುಂಟುಮಾಡಿಕೊಡಬೇಕೆನ್ನುವ ತತ್ತ್ವವನ್ನು ಒಪ್ಪಲೇಬೇಕಾಗುವುದು. ಸದ್ಯದ ಕಾಲದಲ್ಲಿ, ಪೂರ್ವಪ್ರಾಥಮಿಕ ವಯಸ್ಸಿನ ಬಾಲಕರು ಮಾನಸಿಕ ಭೋಜನದ ಅಭಾವದಿಂದ ನರಳುತ್ತಿರುವರು. ಅವರಿಗೆ ಬುದ್ಧಿಯ ಕೆಲಸವಾಗಲಿ, ಕೈಕಾಲುಗಳನ್ನು ಅಲ್ಲಾಡಿಸುವ ಅವಕಾಶವಾಗಲಿ ಇರುವುದಿಲ್ಲ; ಅಲ್ಲದೆ ಅವರ ಶಾರೀರಿಕ ಕ್ರಿಯೆಗಳಿಗೆ ಸಹ ಯಾವ ಮಾರ್ಗಪ್ರದರ್ಶನವೂ ಇಲ್ಲ. ನಿತ್ಯಜೀವನದ ಕೆಲಸ ಕಾರ್ಯಗಳನ್ನು ಯಾವ ರೀತಿ ಮಾಡಬೇಕೆಂಬುದನ್ನು ಸಹ ಅವರಿಗೆ ತೋರಿಸಿ ಕೊಡುವವರು ಯಾರೂ ಇಲ್ಲ.

ಎಲ್ಲ ಬಾಲಕರ ಪ್ರಾರಂಭದ ಏಳು ವರ್ಷಗಳು ಇದೇ ರೀತಿ ಕಳೆದು ಹೋಗುವುವು. ಜ್ಞಾನವೆಂಬ ಹಸಿವಿನಿಂದ ಪೀಡಿತರಾದ ಇವರ ಈ ಕರುಣಾಜನಕ ಸ್ಥಿತಿಯು ಇನ್ನೆಷ್ಟು ದಿನ ಹೀಗೆಯೆ ಇರ-ಬೇಕು ? ಹೊಟ್ಟೆಯ ಹಸಿವನ್ನು ಶಾಂತಗೊಳಿಸಲು ಮನುಷ್ಯನು— ಎಲ್ಲಿಂದಲೇ ಆಗಲಿ—ಅನ್ನವನ್ನು ಹೊಂದಲು ಹವಣಿಸದೆ ಸುಮ್ಮನಿರುವುದಿಲ್ಲ. ಇದೇ ನಿಯಮಕ್ಕನುಸಾರವಾಗಿ ಬಾಲಕರು ಸಹ—ಎಲ್ಲಿಂದಲೇ ಆಗಲಿ—ತಮ್ಮ ಬೌದ್ಧಿಕ ಆಹಾರವನ್ನು ದೊರೆ-ಕಿಸಿಕೊಂಡೇ ತೀರುವರು—ಯಾವುದಾದರೂ ಒಂದು ಪ್ರಕಾರದ ಮಾನಸಿಕ ಕೆಲಸವನ್ನು ಹುಡುಕಿಕೊಂಡೇ ತೀರುವರು. ಹಿರಿಯರು ಬಾಲಕರ ಈ ಆಚರಣೆಯನ್ನು ತಡೆದು, ಇದೆಲ್ಲ ವ್ಯರ್ಥವೆಂದು ಭಾವಿಸಿ, ಅದನ್ನು ಉಪೇಕ್ಷೆಯ ದೃಷ್ಟಿಯಿಂದ ನೋಡುವುದಲ್ಲದೆ ಅವರನ್ನು ದಂಡಿಸುವರು. ತಾಯಿಯು ಬಾಲಕನಿಗೆ ತಿನ್ನಲು ಏನನ್ನೂ ಕೊಡದೆ ಇದ್ದು, ಬಾಲಕನು ಮಾತ್ರ ತನ್ನ ಹಸಿವನ್ನು ಹಿಂಗಿಸಿಕೊಳ್ಳಲು ಏನಾದರೊಂದು ಸಾಮಗ್ರಿಯನ್ನು ಎಲ್ಲಿಂದ ಲಾದರೂ ಹುಡುಕಿ ತಂದಲ್ಲಿ, ತಾಯಿ ಆತನ ಮೇಲೆ ಸಿಟ್ಟುಗೊಂಡು ಆತನ ಕೈಯಲ್ಲಿರುವ ವಸ್ತುವನ್ನು ಕಸಿದುಕೊಂಡು, ಅವನನ್ನು ಅವಮಾನಮಾಡಿ, ಹೆದರಿಸಿ ಗದರಿಸಿ ದಂಡಿಸುವುದು ಎಂತಹ ವಿಚಿತ್ರವೂ ಖೇದಜನಕವೂ ಆದ ವಿಷಯ !

ಮೊದಲು ೧½ ವರ್ಷದವರೆಗೆ ಹಲ್ಲು ಬರುವುದು, ನಡೆಯುವುದಕ್ಕೆ ಯತ್ನಿಸುವುದು, ಮಾತನಾಡುವುದು ಮುಂತಾದ ವಿಕಾಸದ ವಿಷಯಗಳು ಪ್ರಕಟವಾಗುತ್ತಲೆ, ಬಾಲಕನು ಶಿಕ್ಷಣ ಪ್ರಾಪ್ತಿಯ ಕೆಲಸವನ್ನು ಪ್ರಾರಂಭಿಸುವನು. ಆಗ ಮಗುವು ಈ ಮೂರು ವಿಷಯಗಳನ್ನು ಕಲಿಯಲಿಚ್ಛಿಸುವುದು:—

೧) ಸ್ವಚ್ಛತೆ ಮತ್ತು ವ್ಯವಸ್ಥೆಯ ಅಭ್ಯಾಸ.

೨) ಕೈಕಾಲುಗಳನ್ನು ಚೆನ್ನಾಗಿ ಅಲ್ಲಾಡಿಸುವ ಕೆಲಸ.

೩) ಬೌದ್ಧಿಕ ವ್ಯಾಪಾರಕ್ಕೆ ವಿಶ್ರಾಂತಿಕೊಡುವ ಆಟ ಮೊದಲಾದುವು.

ಇವುಗಳಲ್ಲದೆ, ದೊಡ್ಡವರ ಎಲ್ಲ ಸಾಮಾಜಿಕ ವ್ಯವಹಾರದ ಜ್ಞಾನವನ್ನು ಹೊಂದುವುದು, ಭಾಷೆಯನ್ನು ತಿಳಿಯುವುದು, ಉತ್ತಮವಾದ ರೀತಿ-ನಡತೆಗಳನ್ನು ಅಭ್ಯಾಸಮಾಡುವುದು, ನೈತಿಕ

ಗೀತಾಗಾಂಭೀರ್ಯ

ಶ್ರೀಕೃಷ್ಣನ ಸಮಾಜಧರ್ಮ

ಬರೆದವರು : 'ಶ್ರೀರಂಗ'

"ಸಾವಿರಾರು ವರ್ಷಗಳ ಹಿಂದೆ ಪ್ರಸ್ಥಾನತ್ರಯಿಗಳ ಮೇಲೆ ಇಪ್ಪತ್ತೊಂದು ಭಾಷ್ಯಗಳಿದ್ದುವೆಂದು ತಿಳಿದು ಬರುತ್ತದೆ. ಅವುಗಳಲ್ಲಿ ಈ ಗ್ರಂಥಕಾರರ ವಿಚಾರ-ಗಳಂತಹ ವಿಚಾರಗಳು ಕಂಡುಬರುತ್ತವೆ..........

"....ಪರಂಪರೆ, ಸಂಪ್ರದಾಯ, ಧರ್ಮ, ಪರಮಾತ್ಮ, ಭಕ್ತಿ, ಪ್ರಕೃತಿ, ಪುರುಷ, ಸೃಷ್ಟಿ ಕ್ರಮ ಮೊದಲಾದುವುಗಳಿಂದ 'ಶ್ರೀರಂಗ'ರು ಅಲಿಪ್ತರಾಗಿದ್ದು, ಗೀತೆ-ಯಂತಹ ಗ್ರಂಥದ ಬಗ್ಗೆ ಬರೆದದ್ದು ಒಂದು ರೀತಿಯಿಂದ ಅಪೂರ್ವವೆಂದೇ ಹೇಳ-ಬಹುದು." —ಕರ್ಮವೀರ ಹುಬ್ಬಳ್ಳಿ

ಬೆಲೆ ಸಾದಾಪ್ರತಿ ೨-೦-೦; ಉತ್ತಮಪ್ರತಿ ೨-೮-೦

ಬೇಕಾದವರು ಗ್ರಂಥಕರ್ತರಿಗಾಗಲಿ, ಜಯಂತಿ ಕಾರ್ಯಾಲಯಕ್ಕೆ ಆಗಲಿ ಬರೆದು ತರಿಸಿಕೊಳ್ಳಬೇಕು.

ಭಾವನೆಗಳ ವಿಕಾಸವನ್ನು ವ್ಯಕ್ತಗೊಳಿಸುವುದು ಮುಂತಾದ ಅನೇಕ ವಿಷಯಗಳನ್ನು ಬಾಲಕರು ಕಲಿಯಬೇಕಾಗಿದೆ. ಬಾಲಕರು ಎಷ್ಟೋ ವಿಷಯಗಳನ್ನು ಈ ವಯಸ್ಸಿನಲ್ಲಿಯೆ ಕಲಿಯುವರು. ಇದೇ ಕಾಲದಲ್ಲಿಯೆ ಬಾಲಕರ ನಡೆನುಡಿಗಳನ್ನು ಬೇಕಾದ ಮಾರ್ಗದಲ್ಲಿ ತಿರುಗಿಸಬಹುದು. ಈ ವಯಸ್ಸಿನಲ್ಲಿ ಬಾಲಕರ ವಿಚಾರಶಕ್ತಿ ಮತ್ತು ತರ್ಕಶಕ್ತಿಗಳು ಬಹಳ ಶಕ್ತಿಯುತವಾಗಿರುತ್ತವೆ.

ಈ ವಯಸ್ಸಿನಲ್ಲಿ ಬಾಲಪ್ರಪಂಚದಲ್ಲಿ ಅನೇಕ ಹೊಸ ಹೊಸ ವಿಷಯಗಳು ತಿಳಿಯಲಿರುವುವು; ಆದುದರಿಂದಲೇ ಬಾಲಕರ ಜಿಜ್ಞಾಸೆಯು ಬಹಳ ತೀವ್ರವಾಗಿರುತ್ತದೆ. ಧಾರ್ಮಿಕ ಮತ್ತು ನೈತಿಕ ಜೀವನದಂತಹ ಸೂಕ್ಷ್ಮವಿಚಾರಗಳಿಂದ ಮೊದಲುಗೊಂಡು ಮಣ್ಣು-ಕಲ್ಲು ಮುಂತಾದ ಸ್ಥೂಲಪದಾರ್ಥಗಳ ವರೆಗಿನ ಎಲ್ಲ ಸಂಗತಿಗಳ ಪೂರ್ಣ ಪರಿಚಯವನ್ನೂ ಪಡೆಯಲು, ಅವುಗಳ ಮನಸ್ಸು ಆತುರಗೊಳ್ಳುತ್ತಿರುತ್ತದೆ. ಯಾರಾದರೂ ಜಪಾನ್, ಇಲ್ಲವೆ ಅಮೇರಿಕಾ ಮುಂತಾದ ದೇಶಗಳಿಗೆ ಹೋದಾಗ,—ಅಲ್ಲಿಯ ಯಾರಾದರೂ ಆತನ ಬಳಿಗೆ ಬಂದು, "ಆ ದೇಶಗಳ ಪೂರ್ಣ ಪರಿಚಯವನ್ನು ನಿಮಗೆ ೭ ವರ್ಷಗಳನಂತರ ಮಾಡಿಸಲಾಗುವುದು. ಅದುವರೆಗೆ ನಿಮಗೆ ಏನನ್ನೂ ತಿಳಿಸಲಾಗುವುದಿಲ್ಲ" ಎಂದು ಹೇಳಿದರೆ ಆ ಮನುಷ್ಯನ ಸ್ಥಿತಿ ಏನಾಗುವುದು? ಈ ಮನುಷ್ಯನು ಆ ದೇಶದ ವಿಷಯವನ್ನು ತನ್ನ ಸ್ವಂತ ಪ್ರಯತ್ನದಿಂದಲೇ ಅಲ್ಪಸ್ವಲ್ಪವಾಗಿ ತಿಳಿಯುವನೇ ಹೊರತು, ಅದಕ್ಕಿಂತ ಹೆಚ್ಚಿಗೆ ತಿಳಿಯಲಾರನು. ನಮ್ಮ ದೇಶದಲ್ಲಿ ಹುಟ್ಟುವ ಬಾಲಕರ ಸ್ಥಿತಿಯು ಕೂಡ ಪರದೇಶಕ್ಕೆ ಹೋಗಿರುವ ಈ ವ್ಯಕ್ತಿಯಂತೆಯೆ ಕರುಣಾಜನಕವಾದುದಾಗಿದೆ. ಬಾಲಕರಂತೂ ಬಹಳ ಚಿಕ್ಕವರು, ಪರಾಧೀನರು; ಎಲ್ಲಕ್ಕೂ ದೊಡ್ಡವರನ್ನೇ ಆಶ್ರಯಿಸಿ ಜೀವಿಸತಕ್ಕವರು. ಆದುದರಿಂದಲೆ ಇದೆಲ್ಲವನ್ನೂ ಅವರು ಮೂಕಭಾವನೆಯಿಂದಲೇ ಸಹಿಸುವಂತಹ ಸ್ಥಿತಿಯಲ್ಲಿ ಬಿಟ್ಟುಬಿಡುತ್ತೇವೆ! ಇದು ಎಂತಹ ಕರುಣಾಜನಕವಾದ ಸ್ಥಿತಿ!

ಈಗ ಎಲ್ಲೆಲ್ಲಿಯೂ ನಮ್ಮ ರಾಷ್ಟ್ರೀಯ ಮುಖಂಡರು, ಕೇವಲ ಗ್ರಾಮದ ರೈತರ— ಕಾಡು ಜನರ ಮತ್ತು ಹಿಂದುಳಿದವರ ವಿಷಯವನ್ನೆ ಪ್ರಸ್ತಾಪಿಸುತ್ತಿದ್ದಾರೆ. ಪುಸ್ತಕ ಶಿಕ್ಷಣವನ್ನು ಕೊಡುವುದಕ್ಕೆ ಬದಲಾಗಿ, ಉದ್ಯೋಗ ಧಂಧೆಗಳಿಗೆ ಮಹತ್ತ್ವವನ್ನು ಕೊಡುವುದರ ಕಡೆಗೇ ಅವರ ವಿಚಾರಧಾರೆಯು ಪ್ರವಹಿಸುತ್ತಿದೆ. ಈ ರೀತಿ ಮಾಡುವುದರ ಔಚಿತ್ಯ ಮತ್ತು ಉಪಯೋಗಗಳನ್ನು ಯಾರೂ ತಿರಸ್ಕರಿಸುವಂತಿಲ್ಲ; ಆದರೆ ಈ ಎಲ್ಲ ಪ್ರಶ್ನೆಯಲ್ಲಿಯೂ ಮುಖ್ಯವಾದುದೆಂದರೆ, ನಿರ್ಧನರಾದ ಮಧ್ಯಮವರ್ಗದವರ ವಿಚಾರ. ಇಂದು ಯಾವುದಾದರೂ ವರ್ಗವು ಕಠಿಣ ಪರಿಸ್ಥಿತಿಯಲ್ಲಿರುವುದಾದರೆ ಅದು ನಿರ್ಧನವಾದ ಮಧ್ಯಮ ವರ್ಗವೇ ಆಗಿದೆ. ಹಳ್ಳಿಯವರು, ಕಾಡು ಜನರು, ಕೂಲಿಯವರು, ದಲಿತಜಾತಿಯವರು ಮತ್ತು ಹಿಂದುಳಿದವರು ಇವರೆಲ್ಲರಿಗೂ ಏನಾದರೊಂದು ಕೆಲಸವು ದೊರೆತೇ ದೊರೆಯುತ್ತದೆ. ಮನೆಯವರೆಲ್ಲ ಕೂಲಿಮಾಡಿ ಅರ್ಧ ಹೊಟ್ಟೆಯನ್ನಾದರೂ ತುಂಬಿಸಿಕೊಳ್ಳುವರು. ಆದರೆ ಮಧ್ಯಮ ವರ್ಗದವರಿಗೆ ಇದಾವುದೂ ದೊರೆಯುವುದಿಲ್ಲ. ಅವರು ಗಿರಣಿಗಳಿಗೆ ಕಾರ್ಖಾನೆಗಳಿಗೆ ಹೋಗುವುದಿಲ್ಲ, ಅಥವಾ ತಲೆಯ ಮೇಲೆ ಮಣ್ಣನ್ನು ಹೊರುವುದೂ ಇವರಿಂದ ಆಗುವುದಿಲ್ಲ. ಗುಮಾಸ್ತೆಕೆಲಸ, ಉಪಾಧ್ಯಾಯ ವೃತ್ತಿ, ಸೈನ್ಯದ ಕೆಲಸ, ಅಂಚೆ ಇಲಾಖೆಯ ಕೆಲಸ- ಇವನ್ನೇ ಈ ವರ್ಗದವರು ಮಾಡುವುದು. ಆದರೂ ಇವೆಲ್ಲ ಕೆಲಸಗಳಲ್ಲಿ ಈ ವರ್ಗದವರಲ್ಲಿಯ ಕೇವಲ ಗಂಡುಸರಿಗೆ ಮಾತ್ರ ಸ್ಥಾನವಿದೆ.

ಈ ಕಾರಣದಿಂದ ಮಧ್ಯಮವರ್ಗದ ಬಾಲಕರು, ಯಾವ ಸೌಲಭ್ಯವೂ ದೊರೆಯದೆ ಒಂದು ರೀತಿಯ ಅವಿಕಾಸಿತ ಸ್ಥಿತಿಯಲ್ಲಿಯೆ ಉಳಿದುಬಿಡುವರು. ಅವರಿಗೆ ಹೊಟ್ಟೆತುಂಬ ಆಹಾರವಂತೂ ದೊರೆಯುವುದೇ ಇಲ್ಲ. ನಿರ್ಮಲವಾದ ಗಾಳಿ, ನೀರು ಮತ್ತು ಆರೋಗ್ಯಕರವಾದ ವಾಸಸ್ಥಾನಗಳೂ ಅವರಿಗೆ ಲಭ್ಯವಾಗುವುದೇ ಇಲ್ಲ. ಹಳ್ಳಿಯ ಬಾಲಕರಿಗೆ ವಿಶಾಲವಾದ ಆಕಾಶ, ಬಿಸಿಲು, ಆಟವಾಡಲು ಬೇಕಾದಷ್ಟು ಬಯಲು ದೊರೆತೇ ದೊರೆಯುವುವು. ಆದರೆ ನಗರದ ನಿರ್ಧನಿಕ ವರ್ಗದವರ ಬಾಲಕರು, ಇವುಗಳಿಂದ ಕೂಡ ವಂಚಿತರಾಗಿರುವರು.

ಈ ಸಮಸ್ಯೆಯನ್ನು ಮತ್ತೊಂದು ದೃಷ್ಟಿಯಿಂದ ವಿಚಾರಮಾಡಿ

ದರೆ, ಈ ವರ್ಗದ ಬಾಲಕರು ಬುದ್ಧಿಶಾಲಿಗಳೂ ಚತುರರೂ ಮತ್ತು ಸುಸಂಸ್ಕಾರಿಗಳೂ ಆಗಿರುವರೆಂಬುದು ತಿಳಿದುಬರುತ್ತದೆ. ಇವರಿಗೆ ಉಚಿತವಾದ ಅನುಕೂಲವು ದೊರೆತಲ್ಲಿ, ಇವರೊಳಗೆ ದೇಶವು ಹೆಮ್ಮೆಪಡಬಹುದಾದಂತಹ ರತ್ನಗಳು ದೇಶಸೇವಕರಾಗಬಹುದು, ಮಾನ್ಯ ವ್ಯಕ್ತಿಗಳಾಗಬಹುದು.

ಎರಡನೆಯದಾಗಿ 'ಶಿಕ್ಷಣದ ಆರಂಭವು ಎಲ್ಲಿಂದ ಆಗಬೇಕು?' ಎಂಬ ಪ್ರಶ್ನೆಯುಂಟಾಗುತ್ತದೆ. ಮೊದಲು ಪ್ರೌಢ ಶಿಕ್ಷಣ (Adult Education) ವನ್ನು ಪ್ರಾರಂಭಿಸಬೇಕೇ? ಅಥವಾ ಯುವಕರಿಗೆ ಮೊದಲು ಶಿಕ್ಷಣ ಕೊಡಬೇಕೇ? ಅಥವಾ ಎಲ್ಲಕ್ಕಿಂತ ಮೊದಲು ಬಾಲಶಿಕ್ಷಣವನ್ನು ಪ್ರಾರಂಭಿಸಬೇಕೇ? ದೇಶಹಿತದ ದೃಷ್ಟಿಯಿಂದ ವಿಚಾರಿಸುವ ಶಿಕ್ಷಣಶಾಸ್ತ್ರಜ್ಞರು ಎಲ್ಲಕ್ಕಿಂತ ಮೊದಲು ಬಾಲಕರಿಗೇ ಶಿಕ್ಷಣವನ್ನು ಕೊಡಬೇಕೆಂದೇ ಹೇಳುವರು. ಮಾವಿನ ಗಿಡಕ್ಕೆ ಕಸಿ ಮಾಡಲು ಒಳ್ಳೆಯ ಕಾಲವಾವುದೆಂದು ತೋಟಗಾರನನ್ನು ಕೇಳಿದರೆ, ಅವನು ಮೊದಲ ೭ ವರ್ಷವೆಂದೇ ಹೇಳುವನು. ನಮ್ಮಲ್ಲಿಯ ಶಿಕ್ಷಣಶಾಸ್ತ್ರವೇತ್ತರು ಸಹ ಬಾಲಕರಿಗೆ ಮೊದಲಿನ ೭ ವರ್ಷವೇ ಉತ್ತಮ ಕಾಲವೆಂದು ಹೇಳಿದರೂ, ಅವರ ಮುಂದೆ ಆರ್ಥಿಕ ಕಠಿನತೆಯ ಸಮಸ್ಯೆಯು ಬಂದು ನಿಲ್ಲುವುದು. ೫ ವರ್ಷಗಳ ವರೆಗೆ ಬಾಲಕರ ಶಾರೀರಕ ಪೋಷಣೆಯನ್ನು ಚೆನ್ನಾಗಿ ಮಾಡಬೇಕೆಂದೂ ಬಡವರ ಮಕ್ಕಳಿಗೆ ಹಾಲನ್ನು ಒದಗಿಸಬೇಕೆಂದೂ ಅಲ್ಲಲ್ಲಿಯೂ ಬಾಲಸಂರಕ್ಷಣ ಕೇಂದ್ರಗಳನ್ನು (Children's welfare centres) ಸ್ಥಾಪಿಸಬೇಕೆಂದೂ ಮುಂತಾದ ಅನೇಕ ಸಿದ್ಧಾಂತಗಳನ್ನು ಎಲ್ಲರೂ ಒಪ್ಪುವರು.

ಈಗ ದೇಶದ ಮತ್ತು ತಾಯಿ-ತಂದೆಗಳ ಬಹಳ ಹಣವು "ಉಚ್ಚ" ಎನಿಸಿಕೊಳ್ಳಲ್ಪಟ್ಟಿರುವ ಶಿಕ್ಷಣಕ್ಕಾಗಿ ಹಾಳಾಗುತ್ತಿದೆ. ಈಗಿನ ಉಚ್ಚ ಶಿಕ್ಷಣದಲ್ಲಿರುವ ಕಾಲೇಜಿನ ಬಹುಮಂದಿ ಅಧ್ಯಾಪಕರು, ವಿದ್ಯಾರ್ಥಿಗಳ ವ್ಯಾಖ್ಯಾನವನ್ನು ಕೇಳುವ ಸ್ವಭಾವ, ೧೨ ತಿಂಗಳಲ್ಲಿ ನೋಟ್ಸ್ ಓದಿ ಪರೀಕ್ಷೆಯಲ್ಲಿ ಉತ್ತೀರ್ಣರಾಗುವುದು, "ಕಾಲೇಜ್ ಜೀವನ (Life)" ದ ಹೆಸರಿನಲ್ಲಿ ನಡೆಯುವ ಆಮೋದ ಪ್ರಮೋದಗಳು, ಜವಾಬ್ದಾರಿ ರಹಿತವಾದ ಜೀವನ ಇವೆಲ್ಲವನ್ನೂ ಒಂದೇ ಏಟಿಗೆ ನಿಲ್ಲಿಸಿಬಿಟ್ಟರೆ, ದೇಶದ ಬಹಳ ಹಣವು ರಕ್ಷಿಸಲ್ಪಡುವುದು. ಅಧಿಕಾಂಶದ ಕಾಲೇಜುಗಳು ಮುಚ್ಚಲ್ಪಟ್ಟಲ್ಲಿ, ಮನೆಯಲ್ಲಿಯೇ ಶಿಕ್ಷಣದ ಪ್ರಚಾರವು ಅಲ್ಪಸ್ವಲ್ಪ ಆಗಿಯೆ ಆಗುವುದು. ಆದರೆ 'ಕಾಲೇಜಿನ ಸಂಸ್ಕಾರ, ಸಾಹಿತ್ಯ, ಕಲೆಗಳ ವಿಕಾಸ ಇವುಗಳು ಮನೆಯಲ್ಲಿ ಸಾಧ್ಯವೇ?' ಎಂಬ ಪ್ರಶ್ನೆಯು ಸಹಜವಾಗಿ ಹುಟ್ಟುವುದು. ಆದರೆ ಸೂಕ್ಷ್ಮವಾಗಿ ಪರಿಶೀಲಿಸುವುದಾದರೆ, ಆಧುನಿಕ ಕಾಲೇಜಿನ ಜೀವನದಲ್ಲಿ ಇವುಗಳ ಪೈಕಿ ಯಾವುದೂ ದೊರೆಯುವುದಿಲ್ಲವೆನ್ನುವುದು ತಿಳಿದು ಬರುತ್ತದೆ.

ಮತ್ತೊಂದು ಮಾರ್ಗವೇನೆಂದರೆ: ವಿದೇಶಗಳಿಂದ ಪ್ರತಿವರ್ಷವೂ ನಮ್ಮಲ್ಲಿಗೆ ಬರುತ್ತಿರುವ ಕೋಟ್ಯವಧಿ ರೂಪಾಯಿಗಳ ಆಟದ ವಸ್ತುಗಳನ್ನು ನಿಲ್ಲಿಸುವುದು. ೨-೩ ದಿನಗಳಲ್ಲಿ ಮುರಿದು ಹೋಗುವ, ಶಿಕ್ಷಣಕ್ಕೆ ಏನೇನೂ ಉಪಯೋಗವಿಲ್ಲದ ಆಟದ ಸಾಮಾನುಗಳಿಗೆ ತಾಯಿ-ತಂದೆಗಳು ಪ್ರತಿವರ್ಷವೂ ಮಾಡುತ್ತಿರುವ ವೆಚ್ಚವನ್ನು ಉಳಿಸಿದರೆ, ಪ್ರಾರಂಭ ಶಿಕ್ಷಣಕ್ಕೆ ಅದೆಷ್ಟು ಲಾಭವಾಗುತ್ತಿತ್ತೊ! ಅಲ್ಲದೆ ನಮ್ಮ ದೇಶದ ಆಟದ ವಸ್ತುಗಳನ್ನು ಉಪಯೋಗಿಸಿದರೆ, ನಮ್ಮ ಎಷ್ಟೋ ಮಂದಿ ಸಹೋದರರಿಗೆ ಹೊಟ್ಟೆತುಂಬುವುದಲ್ಲದೆ, ದೇಶದ ಹಣವು ದೇಶದಲ್ಲಿಯೆ ಉಳಿಯುವುದು.

ಔತಣೋಪಚಾರಗಳಲ್ಲಿ—ಸತ್ಕಾರ ಸಮಾರಂಭಗಳಲ್ಲಿ—ಆಗುವ ದುಂದುವೆಚ್ಚವನ್ನು ನಿಲ್ಲಿಸುವುದು ಮೂರನೆಯ ಮಾರ್ಗ. ಬಾಲಕನು ಹುಟ್ಟಿದಾಗಿನಿಂದ ವಿವಾಹದ ವರೆಗೆ ಅನೇಕ ಸಂಸ್ಕಾರಗಳಿಗೆಂದು ಬಹಳ ಹಣವನ್ನು ಹಾಳುಮಾಡುವರು. ಇದರಲ್ಲೂ ಮಧ್ಯಮಶ್ರೇಣಿಯವರಿಗೇ ಹೆಚ್ಚು ತೊಂದರೆ. ಆದುದರಿಂದ ಇಂತಹ ಅಪವ್ಯಯಗಳಾಗದಂತೆ ಕಾನೂನಾಗಬೇಕಾಗಿದೆ. ಜನ್ಮದಿಂದ ೧೦ ವರ್ಷದ ವರೆಗೆ ಸಂಸ್ಕಾರಗಳಿಗಾಗಿ ವೆಚ್ಚವಾಗುವ ಹಣವನ್ನು ಬೇರೆ ಇಟ್ಟು ಅಥವಾ 'ಬಾಲಶಿಕ್ಷಣದ ಕರ' ಎಂದು ಸರ್ಕಾರದಲ್ಲಿ ಶೇಖರಿಸಿದರೆ ಎಷ್ಟು ಲಾಭವಾದೀತು? ಈ ಸುಂಕವನ್ನು ಜನರ ಸಾಂಪತ್ತಿಕ ಸ್ಥಿತಿಗನುಗುಣವಾಗಿ ವಿಧಿಸಬೇಕು. ಜೀವವಿಮೆಯಂತೆ ಈ ಮೊಬಲಗು ಬಾಲಕರ ಶಿಕ್ಷಣವಿಮೆಯ ಕೆಲಸಕ್ಕೆ ಬರುವುದು.

ಇದು ಯಾವ ಯೋಜನೆಯೂ ಅಲ್ಲ, ಮನಸ್ಸಿಗೆ ತೋರಿದ ಕೆಲವು ವಿಷಯಗಳಿವು. ಯಾವ ಮಾರ್ಗದಲ್ಲೇ ಆಗಲಿ, ದುಂದು ವೆಚ್ಚವನ್ನು ನಿಲ್ಲಿಸಿ, ಬಾಲಕರ ಪ್ರಾಥಮಿಕ ಶಿಕ್ಷಣದ ಆರ್ಥಿಕ ಆತಂಕಗಳನ್ನು ದೂರಮಾಡಬೇಕೆಂಬುದೇ ನನ್ನ ಬರೆವಣಿಗೆಯ ಉದ್ದೇಶ. ಈ ಭಾಗದಲ್ಲಿ ಆರ್ಥಿಕ ತೊಂದರೆಯ ನೆಪವನ್ನು ಮುಂದಿಟ್ಟು ಏನೂ ಮಾಡದಿರುವುದು ಕರ್ತವ್ಯವಿಮುಖತೆಯಾಗುವುದು. ಸಾರ್ವಜನಿಕ ಸಂಸ್ಥೆಗಳೂ, ತಾಯಿ-ತಂದೆಗಳೂ ಈ ಅವಶ್ಯಕ ಪ್ರಶ್ನೆಯ ಕಡೆಗೆ ತಮ್ಮ ಗಮನವನ್ನು ಕೊಡುವರೆಂದು ನಂಬಿದ್ದೇನೆ.

"ಕಾಡುಕೋಣ" ದ ಗುರುತಿನ
++ ++ ++ ++ ಕಾಗದವು
ಕನ್ನಡ ನಾಡಿನದು!
ಬರೆಯಲಿಕ್ಕೂ ಮುದ್ರಣಕ್ಕೂ ತಕ್ಕುದಾದುದು.
ಅಧಿಕೃತ ಪ್ರಸಾರಕರು : ಜಿ. ಕೆ. ಕೇಳಕರ
ಸ್ವದೇಶಿ ಪೇಪರ್ ಮಾರ್ಟ್, ಧಾರವಾಡ.

ಹಿಂದೂಸ್ತಾನವನ್ನು ಸ್ವಾತಂತ್ರ್ಯಕ್ಕಾಗಿ ಸಿದ್ಧಪಡಿಸಿರಿ!

(ಒಂದು ಪುಸ್ತಕದ ಪರಿಚಯ)

ಶ್ರೀ. ನಾರ್ಳೀಕರ ಗುರುರಾಯರು, ಬಿ.ಎ.,ಎಲ್‌ಎಲ್.ಬಿ.

★

ಕೆಂದೊಗಲಿನ ಇಂಗ್ಲಿಷ್ ಸಾಹೇಬರೊಬ್ಬರು ಭಾರತದಲ್ಲಿಯ ರಾಜಕೀಯ ಪರಿಸ್ಥಿತಿಯನ್ನು ಪ್ರತ್ಯಕ್ಷವಾಗಿ ಕಂಡು, ಅನುಭವಿಸಿ ಬರೆದ ಪುಸ್ತಕವಿದು. ನಮ್ಮ ಕರಿದೊಗಲಿನ ಸಾಹೇಬರ ವರ್ಗವು ಇದರಲ್ಲಿಯ ವಿಷಯಗಳನ್ನು ಖಂಡಿತ ಮನನಮಾಡಿಕೊಳ್ಳಬೇಕು!

"ಹಿಂದುಸ್ತಾನವನ್ನು ಸ್ವಾತಂತ್ರ್ಯಕ್ಕಾಗಿ ಸಿದ್ಧಪಡಿಸಿರಿ (Enlist India for Freedom)" ಎಂಬ ಚಿಕ್ಕ ಪುಸ್ತಕವು 'ವ್ಹಿಕ್ಟರಿಬುಕ್' ಎಂಬ ಮಾಲೆಯಲ್ಲಿಯ ಹನೆಯ ಪ್ರಕಟನೆ. ಇದನ್ನು ಮಿಸ್ಟರ್ ಎಡ್ವರ್ಡ ಥಾಮ್ಸನ್‌ರು ಬರೆದಿದ್ದಾರೆ. ಇದು ೧೯೪೨ ರಲ್ಲಿ ಇಂಗ್ಲಂಡಿನಲ್ಲಿ ಪ್ರಸಿದ್ಧಿಸಲ್ಪಟ್ಟಿತು. ಇದು ೧೨೦ ಪುಟಗಳುಳ್ಳದ್ದು ಬೆಲೆ ೨ ಶಿಲಿಂಗು ೬ ಪೇನ್ಸು; ಈ ಪುಸ್ತಕವು ಮೂರೇ ತಿಂಗಳಲ್ಲಿ ಮೂರು ಆವೃತ್ತಿಗಳನ್ನು ಕಂಡು-ಕೊಂಡಿದೆ. ಗ್ರಂಥಕರ್ತರು ಕ್ರಿಸ್ತವಾಸಿಗಳಾದ ಸಿ. ಎಫ್. ಆಂಡ್ರ್ಯೂಜರ ಪರಮ ಸ್ನೇಹಿತರು, ಭಾರತದ ಪರಿಚಯ ಸಾಕಷ್ಟು ಉಳ್ಳವರು.

ಈ ಪುಸ್ತಕದಲ್ಲಿ ಏನಿದೆಯೆಂಬುದರ ವಿಷಯವಾಗಿ ಮಿಸ್ಟರ್ ಥಾಮ್ಸನ್‌ರೇ ೬ನೆಯ ಪುಟದಲ್ಲಿ ೧. ರಾಷ್ಟ್ರೀಯ ಸಭೆ (ಕಾಂಗ್ರೆಸ್) ಎಂದರೇನು? ೨. ಅದರ ಮಂತ್ರಿ-ಮಂಡಳಗಳು ಯಾವುವು? ಅವುಗಳಿಂದ ಆದ ಕಾರ್ಯವೇನು? ೩. ಅವುಗಳು ತಮ್ಮ ಅಧಿಕಾರವನ್ನು ಬಿಟ್ಟುಕೊಟ್ಟುದೇಕೆ? ೪. ಮುಸ್ಲಿಂ ಲೀಗ್ ಎಂದರೇನು? ೫. ಹಿಂದುಸ್ತಾನದ ಸದ್ಯದ ಪರಿಸ್ಥಿತಿ ಹೇಗಿದೆ? ೬. ಈ ಮಹಾಯುದ್ಧದಲ್ಲಿ ಸಾಧನ-ಸಂಪತ್ತಿಯನ್ನೂ ಮನುಷ್ಯಬಲವನ್ನೂ, ಭಾರತೀಯರನ್ನು ಕೇಳದೆ ಉಪಯೋಗಿಸಿದುದು ಜಾಣತನದ್ದೇ? ಅಥವಾ ಹಾಗೆ ಮಾಡಲೇ ಬೇಕಿತ್ತೇ?.. ಇತ್ಯಾದಿ ಇವೆಲ್ಲ ಪ್ರಶ್ನೆಗಳಿಗೆ ಮಿ. ಥಾಮ್ಸನ್-ರು ಈ ಪುಸ್ತಕದಲ್ಲಿ ಉತ್ತರಕೊಡಲು ಪ್ರಯತ್ನಿಸಿದ್ದಾರೆ.

ಈ ಪುಸ್ತಕದಲ್ಲಿ ಒಟ್ಟಾರೆ ಮೂರು ಭಾಗಗಳಿವೆ. ಮೊದಲನೆಯ ಭಾಗದಲ್ಲಿ ಆರು ಪ್ರಕರಣಗಳಿವೆ. ಅವು ಈಗಿನ ಬಿಕ್ಕಟ್ಟಿನ (Deadlock) ಕಾರಣಗಳನ್ನೊಳಗೊಂಡಿವೆ. ಎರಡನೆಯ ಭಾಗವು ಆರು ಪ್ರಕರಣಗಳುಳ್ಳದ್ದು. ಇವುಗಳಲ್ಲಿ ಹಿಂದುಸ್ತಾನದ ಸ್ವರಾಜ್ಯದ ಪ್ರಶ್ನೆಯ ವಿಚಾರವಿದೆ. ಇದರಲ್ಲಿ ಮುಸಲ್ಮಾನರ ಪ್ರಶ್ನೆ, ಸಂಸ್ಥಾನಿಕರ ಪ್ರಶ್ನೆ ಮೊದಲಾದುವುಗಳ ಹಾಗೂ "ಹಿಂದುಸ್ಥಾನವು ಸ್ವರಾಜ್ಯಕ್ಕೆ ಅರ್ಹವಿದೆಯೇ?" ಎಂಬ ಮುಖ್ಯ ಪ್ರಶ್ನೆಯ ಬಗ್ಗೆ ಥಾಮ್ಸನ್‌ರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಮೂರನೆಯ ಭಾಗವು ಐದು ಪ್ರಕರಣಗಳನ್ನೊಳಗೊಂಡಿದ್ದು ಈ ತೊಡಕನ್ನು ಬಿಡಿಸುವ ವಿಚಾರವನ್ನು ಈ ಭಾಗದಲ್ಲಿ ಮಾಡಲಾಗಿದೆ. ಕಾಂಗ್ರೆಸ್ ಬಲವೇನಿದೆ? ಹಿಂದುಸ್ತಾನಕ್ಕೆ ಬೇಕಾದುದೇನು? ಕಳೆದುಕೊಂಡ ಸಂಧಿಯ (Chance) ನ್ನು ನಮಗೆ ಮರಳಿ ದೊರಕಿಸಲಿಕ್ಕಾಗುವುದೋ? ಈಗ ಏನು ಮಾಡಬೇಕು?— ಎಂಬ ವಿಷಯದ ವಿವರಣೆ ಇದರಲ್ಲಿದೆ.

ಈ ಎಲ್ಲ ವಿಷಯಗಳೂ ಮಹತ್ತ್ವದುವಿವೆಯೆಂದು ಬೇರೆ ಹೇಳಬೇಕಾಗಿಲ್ಲ. ಆದರೆ ಆರನೆಯ ಪುಟದ ಮೇಲೆ– ೧೮೦೫ ರಿಂದ ೧೯೪೦ ರ ವರೆಗಿನ ಕಾಲದಲ್ಲಿಯ– ಬೇರೆ ಬೇರೆ ಬ್ರಿಟಿಶರ ಬರೆಹ ಹಾಗೂ ಭಾಷಣಗಳೊಳಗಿನ ಅವತರಣಿಕೆಗಳನ್ನುಕೊಟ್ಟು, ಭಾರತದ ಬಗ್ಗೆ ಬ್ರಿಟನಿನಲ್ಲಿದ್ದ ಅನಾಸ್ಥೆ ಎಷ್ಟೆಂಬುದನ್ನು ಗ್ರಂಥಕರ್ತರು ತೋರಿಸಿದ್ದಾರೆ. ಅವರು ತೋರಿಸಿದ ಸದ್ಯದ ಬಿಕ್ಕಟ್ಟಿನ ಕಾರಣ ಮೀಮಾಂಸೆಯ ಬಗ್ಗೆ, ಇದನ್ನು ಬಗೆಹರಿಸಲು ಅವರು ಸೂಚಿಸಿದ ಉಪಾಯಗಳ ಬಗ್ಗೆ ಮತ್ತು ಅವರ ಮತಗಳ ಬಗ್ಗೆ ಭಿನ್ನಾಭಿಪ್ರಾಯವಿರುವುದು ಸಹಜವಿದೆ. ಈ ಚಿಕ್ಕ ಪುಸ್ತಕದಲ್ಲಿಯ ಕೆಲವು ಅವತರಣಿಕೆಗಳನ್ನು ಕೆಳಗೆ ಕೊಡಲಾಗಿದೆ. ವಾಚಕರು ತಮಗೆ ಸರಿಕಂಡ ಅಭಿಪ್ರಾಯವನ್ನು ಸ್ವೀಕರಿಸಬಹುದು :

(ಪುಟ ೧೨ ರಲ್ಲಿ) "ನಾನು ಕಳೆದ ಅಕ್ಟೋಬರ್ ತಿಂಗಳಲ್ಲಿ ಭಾರತಕ್ಕೆ ಬಂದಿದ್ದೆ. ಆಗ ವಾತಾವರಣವು ಪ್ರಕ್ಷುಬ್ಧವಾಗಿತ್ತು. ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಪ್ರಕಟನೆಗೆ ವಾಯಿಸ್-ರಾಯರೂ ಉತ್ತರ ಕೊಟ್ಟಿದ್ದರು; ಕಾಂಗ್ರೆಸ್ ಮಂತ್ರಿ-ಮಂಡಲಗಳು ಅಧಿಕಾರ ತ್ಯಜಿಸಿದ್ದುವು. ಕಾಂಗ್ರೆಸ್ ಮಂತ್ರಿ-ಮಂಡಲಗಳು ಅಧಿಕಾರವನ್ನು ಬಿಟ್ಟುಕೊಡಬೇಕೆಂದು ನಿರ್ಧರಿಸಿದ

ಮರುದಿವಸ ಕಾಂಗ್ರೆಸ್ ವ. ಕಮಿಟಿಯು ಸಭಿಕರನ್ನು ಕಾಣ-ಬೇಕೆಂದು ನನಗೆ ಔತಣ ಬಂದಿತು," ಅದಕ್ಕನುಸರಿಸಿ ಮಿ|| ಥಾಮ್ಸ್ಪಸನ್‌ರು ವರ್ಕಿಂಗ್ ಕಮಿಟಿಯ ಸದಸ್ಯರನ್ನು ಕಂಡರು.

ಆರ್ಚ್‌ಬಿಶಪ್‌ರ ಇಂಗ್ಲೀಷ್

ಥಾಮ್ಸ್ಪಸನ್‌ರು ಆರ್ಚ್‌ಬಿಶಪ್ ಆಫ್ ಕ್ಯಾಂಟರ್‌ಬರಿಯವರ ಭಾಷಣದಲ್ಲಿಯ ಒಂದು ಅವತರಣಿಕೆಯನ್ನು ಕೊಟ್ಟು ಕಟುಟೀಕೆ ಮಾಡಿದ್ದಾರೆ. ಆರ್ಚ್‌ಬಿಶಪ್ಪರು ಒಮ್ಮೆ ಈ ರೀತಿ ನುಡಿದಿದ್ದರು;

"On the whole Congress" during its term of office, "had not been unduly unfair to minorities" ಇದಕ್ಕೆ ಥಾಮ್ಸ್ಪಸನ್‌ರು ಬರೆದುದು ಹೀಗೆ; ಪಾಪ! ಇಂಗ್ಲಂಡ್ ಚರ್ಚಿನ ಮುಖ್ಯಸ್ಥರು ಸ್ಕಾಟ್ಲಂಡಿನವರಾದುದರಿಂದ, ಅವರಿಗೆ ಇಂಗ್ಲೀಷ ಶಬ್ದಗಳ ಮರ್ಮ ಚೆನ್ನಾಗಿ ಗೊತ್ತಿರುವ ಸಂಭವವಿಲ್ಲ ("that the head of the church of England is Scot and therefore could not be expected to understand the meaning of the English words") ಬ್ರಿಟಿಷರಿಗೇ ತಮ್ಮ ಭಾಷೆಯ ಶಬ್ದಗಳ ಅರ್ಥದ ತಿರುಳು ತಿಳಿಯದೆ ಹೋದ ಮೇಲೆ, ಪಾಪ ಭಾರತೀಯರೇನು ಮಾಡಬೇಕು ?

ಜಲಿಯನ್‌ವಾಲಾ ಬಾಗ

(ಪುಟ ೧೮ ರಲ್ಲಿ) "೧೯೧೯ ರ ಎಪ್ರಿಲ್ ತಿಂಗಳಲ್ಲಿ ಜಲಿಯನ್‌ವಾಲಾ ಬಾಗದ ಕೊಲೆಯಾಗದಿದ್ದರೆ, ದ್ವಿದಲ ಪದ್ಧತಿಯನ್ನಂಗೀಕರಿಸಿದ ಸುಧಾರಣೆಗಳು ಸಹ ಕಾರ್ಯರೂಪದಲ್ಲಿ ಬರುತ್ತಿದ್ದುವು. ಜನರಲ್ ಡಾಯರ್‌ರು ಸುಮಾರು ಎರಡು ಸಾವಿರ ಜನರಿಗೆ ಗುಂಡು ಹಾಕಿದರು. ಅವರಲ್ಲಿ ೩೭೯ ಜನರು ಪ್ರಾಣಕ್ಕೆರವಾದರು. ಮತ್ತು ಸುಮಾರು ೧೨೦೦ ಜನರಿಗೆ ಗಾಯವಾಯಿತು. ಇವು ಸರಕಾರದವರ ಅಂಕಿ ಸಂಖ್ಯೆಗಳು. (ಪುಟ ೧೯ ರಲ್ಲಿ) "ಬ್ರಿಟಿಷ್ ಹಾಗೂ ಹಿಂದೀ ಸರಕಾರಗಳೂ—ದಂಡಿನ ಎಲ್ಲಕ್ಕೂ ಮೇಲಾಧಿಕಾರಿಗಳು ಕೂಡ—ಜನರಲ್ ಡಾಯರನ ಈ ಕೃತ್ಯವನ್ನು ನಿಷೇಧಿಸಿದರು. ಆದರೆ ದುರ್ದೈವ, ಭರತಖಂಡದಲ್ಲಿಯ ಹಾಗೂ ಬ್ರಿಟನ್‌ನಲ್ಲಿಯ ಆತನ ಪ್ರಶಂಸಕರು, ಅವನಿಗೆ ಒಂದು ಕತ್ತಿಯನ್ನೂ ಇಪ್ಪತ್ತಾರು ಸಾವಿರ ಪೌಂಡು ಹಣವನ್ನೂ ಕಾಣಿಕೆಯಾಗಿ ಕೊಟ್ಟರು. ಅಲ್ಲದೆ ಲಾರ್ಡ್ ಸಭಾಸದರು ಅವನನ್ನು ನಿರ್ದೋಷಿಯನ್ನಾಗಿ ಮಾಡಿದರು. ಇದರಿಂದ ಸುಧಾರಣೆಯ ಪ್ರಾರಂಭವು ಹಳಸಿತು."

೧೯೩೫ ರ ಗವ್ಹರ್ನ್‌ಮೆಂಟ್ ಆಫ್ ಇಂಡಿಯಾ ಆಕ್ಟ್

(ಪುಟ ೨೦ ರಲ್ಲಿ) ೧೯೩೫ ರ ಆಕ್ಟಿನ ಬಗ್ಗೆ ಇವರು ಬರೆದುದು ಹೀಗೆ :

"The whole scheme is riddled from top to bottom with "safeguards," some of them in the Voceroy's hands, some in those of those of the Secretary of State in London and the Central Legislative Chambers are so composed that whatever else may be heard, there, it will not be the voice of the people."

(ಸುಧಾರಣೆಯ ಯೋಜನೆಯನ್ನು ಅಡಿಯಿಂದ ಮುಡಿಯವರೆಗೂ ಸಂರಕ್ಷಕ ಬಂಧನಗಳಿಂದ ಬಿಗಿಯಲಾಗಿದೆ. ಈ ಬಂಧನಗಳ ಕೆಲವು ಸೂತ್ರಗಳು ವೈಸ್‌ರಾಯರ ಕೈಯಲ್ಲಿದ್ದುವುಗಳು; ಮತ್ತೆ ಕೆಲವು ಸೆಕ್ರೆಟರಿ ಆಫ್ ಸ್ಟೇಟ್‌ನ ಸ್ವಾಧೀನಲ್ಲಿದ್ದುವುಗಳು— ಮಧ್ಯವರ್ತಿ ಕಾನೂನು ಮಂಡಳಗಳ ರಚನೆಯೇ ಈ ರೀತಿಯಾಗಿದೆ. ಆದುದರಿಂದ ಅದು ಜನಾಭಿಪ್ರಾಯವಲ್ಲ). ತಮ್ಮ ಈ ಅಭಿಪ್ರಾಯದ ಸಮರ್ಥನೆಗಾಗಿ ಮಿ|| ಥಾಮ್ಸ್ಪಸನ್‌ರು, ಪ್ರೊಫೆಸರ್ **ಬೆರಿಡೇಲ್ ಕೀಥರ 'ಕಾನ್‌ಸ್ಟಿಟ್ಯೂಶನಲ್ ಹಿಸ್ಟರಿ ಆಫ್ ಇಂಡಿಯಾ'** ಎಂಬ ಪುಸ್ತಕದಲ್ಲಿಯ ಒಂದು ಮಾತನ್ನು ಅಲ್ಲಿ ಕಾಣಿಸಿದ್ದಾರೆ. (ಪುಟ ೪೭೪) "ಭರತಖಂಡದಲ್ಲಿಯ ಮಧ್ಯವರ್ತಿ ಸರಕಾರಕ್ಕೆ ಹೊಣೆಗಾರಿಕೆ (ಜವಾಬುದಾರಿ ಅಧಿಕಾರ) ಕೊಡುವುದನ್ನು ಬದಿಗೊತ್ತುವುದಕ್ಕಾಗಿ ಈ ಸಂಯುಕ್ತ ರಾಜ್ಯಘಟನೆಯ ನಿರ್ಮಾಣವಾಯಿತೆಂಬ ಭಾರತೀಯರ ಅಭಿಪ್ರಾಯವು ಅನ್ಯಾಯದ್ದೆಂದು ಅಲ್ಲಗಳೆಯಲಿಕ್ಕಾಗದು. ಸಂರಕ್ಷಣೆ ಹಾಗೂ ಪರರಾಷ್ಟ್ರಗಳ ರಾಜಕಾರಣಗಳನ್ನು ಸಂಯುಕ್ತ ರಾಜ್ಯಘಟನೆಯಿಂದ ಬೇರ್ಪಡಿಸುವ ಅವಶ್ಯಕತೆಯಿದ್ದರೂ, ಅವುಗಳನ್ನು ಬಿಂಗಡಿಸುವುದರಿಂದ ಭಾರತೀಯರಿಗಿದ್ದ ಅಧಿಕಾರದಲ್ಲಿ ಅರ್ಥವಿಲ್ಲ, ಎಂದರೆ ಅಧಿಕಾರವೇ ಉಳಿಯುವುದಿಲ್ಲ."

ಒಮ್ಮತವಾದರೂ ಸ್ವರಾಜ್ಯವಿಲ್ಲ

(ಪುಟ ೩೧ ರಲ್ಲಿ) ದುಂಡುಮೇಜು ಪರಿಷತ್ತಿನ ಕೊನೆಗೆ (೧೯೩೩) ಜಾಯಿಂಟ್ ಸಿಲೆಕ್ಟ್ ಕಮಿಟಿಗೆ ಒಂದು ಜಾಯಿಂಟ್ ಮೆಮೊರ್‍ಯಾಂಡಮ್ ಸಾದರಪಡಿಸಲಾಯಿತು. ಈ ಪತ್ರಕ್ಕೆ ಎಲ್ಲ ಹಿಂದೀ ಪಕ್ಷ-ಸಂಗಡಗಳೂ ರುಜುಮಾಡಿದ್ದುವು. ಉದಾರಮತವಾದಿಗಳು—ಮುಸಲ್ಮಾನರು—ಹರಿಜನರ ಪ್ರತಿನಿಧಿಗಳು—ಯುರೋಪಿಯನ್ ವರ್ತಕಸಂಘದ ಮುಂದಾಳುಗಳು—ಆಂಗ್ಲೊ ಇಂಡಿಯನ್‌ರ ಮುಂದಾಳುಗಳು— ಹೀಗೆ ಎಲ್ಲರೂ ಒಪ್ಪಿಗೆ ಕೊಟ್ಟಿದ್ದರು. ಆದರೆ ಆ ಪತ್ರಿಕೆಯನ್ನು ಬಿಸುಟಿ ಒಗೆಯಲಾಯಿತು. (Crushed aside).

ಕಾಂಗ್ರೆಸ್ಸಿನ ಪ್ರಚಂಡ ವಿಜಯಂ

(ಪುಟ ೩೪ ರಲ್ಲಿ) ೧೯೩೭ ರ ಆಯ್ಕೆಗಳಲ್ಲಿ ಮುಸ್ಲಿಂ ಲೀಗದ ಹುರಿಯಾಳುಗಳಲ್ಲಿ ೧೦೮, ಬೇರೆ ಮುಸಲ್ಮಾನರ ಹುರಿಯಾಳುಗಳಲ್ಲಿ ೩೭೭, ಹಾಗೂ ಕಾಂಗ್ರೆಸ್ಸಿನ ಹುರಿಯಾಳುಗಳಲ್ಲಿ ೭೧೫ ಜನರು ಆರಿಸಿಬಂದರು. ಕಾನೂನು ಮಂಡಳಗಳ ಮೆಂಬರರ ಒಟ್ಟು ಸಂಖ್ಯೆ ೧೫೮೫. ಎಲ್ಲ ಪಕ್ಷಗಳ ಹುರಿಯಾಳುಗಳಿಗಾಗಿ

ತೆರೆದಿಟ್ಟ ಸ್ಥಳಗಳೆಂದರೆ ಕೇವಲ ೬೫೭ ಮಾತ್ರ ಇದ್ದುವೆಂಬುವನ್ನು ಲಕ್ಷ್ಯದಲ್ಲಿಡಲೇಬೇಕು. ಕಾಂಗ್ರೆಸ್ಸಿನ ಯಶಸ್ಸಿನ ಬಗ್ಗೆ ಮಿ|| ಥಾಮ್ಸನ್‌ರು ಹೀಗೆ ಬರೆದಿದ್ದಾರೆ: (ಪುಟ ೨೬) " ಬೇರೆ ಜಾತಿ-ಮತ-ಪಂಥಗಳಿಗೆ ಹಾಗೂ ಅಲ್ಪಸಂಖ್ಯಾಕರಿಗೆ ಸ್ಥಳಗಳನ್ನು ಕಾದಿಡಲಾಗಿದ್ದರೂ ಕೂಡ ಮತಗಣನೆಗಳಲ್ಲಿ ಕಾಂಗ್ರೆಸ್ಸಿಗೆ ದೊರೆತಷ್ಟು ಯಶಸ್ಸು, ಬ್ರಿಟನ್‌ನಲ್ಲಿಯ ಯಾವುದೇ ರಾಜಕೀಯ ಪಕ್ಷಕ್ಕೂ ಖಂಡಿತವಾಗಿ ಎಂದಿಗೂ ದೊರೆತಿದ್ದಿಲ್ಲ. "

ಮುಸೊಲಿನಿಗೆ ಜವಾಹರರ ಸ್ನೇಹದ ಆಶೆ

(ಪುಟ ೪೦) **ಹೇರ್ ಹಿಟ್ಲರ್** ಹಾಗೂ **ಮುಸೊಲಿನಿ**ಯವರು **ಪಂಡಿತ ಜವಾಹರರನ್ನು** ತಮ್ಮ ಸ್ನೇಹಿತರನ್ನಾಗಿ ಮಾಡಿಕೊಳ್ಳುವುದಕ್ಕೆ ಮಾಡಿದ ವಿಫಲಪ್ರಯತ್ನದ ಇತಿಹಾಸವನ್ನು ಹೇಳುವ ಯೋಗವು ಒಂದು ದಿನ ಬಂದೇ ಬರುವುದು. ಆ ಇತಿಹಾಸವನ್ನು ಇಲ್ಲಿ ಹೇಳುವ ತೊಂದರೆಯಲ್ಲಿ ನಾನು ಬೀಳುವುದಿಲ್ಲ. ಐದು ವರುಷ ಕಾಲ ಸೆರೆಮನೆಯಲ್ಲಿದ್ದು, ಆ ಮೇಲೆ ಎಂದರೆ ೧೯೩೬ರಲ್ಲಿ, ಮರಣಶಯ್ಯೆಯ ಮೇಲಿದ್ದ ತಮ್ಮ ಧರ್ಮಪತ್ನಿಯನ್ನು ಕಾಣುವುದಕ್ಕಾಗಿ ಪಂಡಿತರಿಗೆ ಸರಕಾರದಿಂದ ಅವಕಾಶ ದೊರೆಯಿತು. ೧೯೩೬ರಲ್ಲಿ ಪಂಡಿತರ ಪತ್ನಿಯವರು ಕಾಲವಶರಾದ ನಂತರ, ವಿಮಾನದಿಂದ ಒಂದು ಸ್ಥಾನಕ್ಕೆ ಬಂದರು. ಅಬಿಸೀನಿಯಾದ ಸ್ವಾತಂತ್ರ್ಯವನ್ನು ಹೀರಿದ ಮುಸೋಲಿನಿಯ ಸ್ನೇಹ ಬೇಡವೆಂದು ಸೌಜನ್ಯದಿಂದ ಹೇಳಿದ ಪಂಡಿತರ ಮನವೊಲಿಸಬೇಕೆಂದು ಮತ್ತೆ ಕಾದುಕೊಂಡು ಕುಳಿತಿದ್ದ ಇಟಲಿಯ ಸರ್ವಾಧಿಕಾರಿ ಮುಸೊಲಿನಿಯು, ಅವಕ್ಕಾಗಿ ಜವಾಹಿರಲಾಲರ ಹಾದಿ ಕಾಯುತ್ತ—ಅವರು ಇಳಿಯುವ ಹೋಟೆಲಿನಲ್ಲಿಯೇ ಇರಬೇಕೆಂದು ಹೇಳಿ—ಒರ್ವ ದೊಡ್ಡ ಅಧಿಕಾರಿಯನ್ನು ಕಳಿಸಿದ್ದನು. " ಆರು ಗಂಟೆಗೆ ತಮ್ಮನ್ನು ಕಾಣಬೇಕೆಂದು ಮುಸೊಲಿನಿಯವರು ಬಹಳ ಆಶೆಪಡುತ್ತಾರೆ. " ಎಂದು ಅಧಿಕಾರಿಯು ಜವಾಹರಲಾಲರಿಗೆ ತಿಳುಹಿಸಿದನು. ಅದಕ್ಕೆ ಜವಾಹರಲಾಲರು, ಮುಸೊಲಿನಿಯ ಆಭಾರಮನ್ನಿಸಿ, ಅವರನ್ನು ಕಾಣುವ ಇಚ್ಛೆ ತಮಗಿಲ್ಲೆಂದು ತಿಳುಹಿದರು. ಅಧಿಕಾರಿಯು ಬಹಳೇ ಪ್ರಯತ್ನ ಮಾಡಿದನು. " ಮುಸೊಲಿನಿಯ ಸಂಗಡ ನಾಲ್ಕು ನಿಮಿಷ ಮಾತನಾಡುವುದಕ್ಕಾಗಿ, ಅವರ ದರ್ಶನಕ್ಕಾಗಿ ಒಳ್ಳೆಯ ಪ್ರಮುಖ ಯುರೋಪಿಯನ್‌ರು ಹಾಗೂ ಅಮೇರಿಕನ್‌ರು ಹಾತೊರೆಯುತ್ತಾರೆ. ಮುಸೊಲಿನಿಯವರು ತಮ್ಮನ್ನು ಕಾಣುವುದಕ್ಕಾಗಿ ತಮ್ಮ ಮಂತ್ರಿಮಂಡಲದ ಸಭೆಯನ್ನೂ ಕೂಡ ಮುಂದು ವರಿಸಿದ್ದಾರೆ. ನಾನು ನಿಮ್ಮನ್ನು ಕರೆದುಕೊಂಡೇ ಹೋಗುತ್ತೇನೆ " ಎಂದು ಆ ಅಧಿಕಾರಿ ಒತ್ತಾಯಪಡಿಸಿದನು. ಆದರೆ ಜವಾಹರಲಾಲರು ಒಡಂಬಡಲಿಲ್ಲ. ಮರುದಿವಸ ಮುಂಜಾನೆ ಸ್ವದೇಶಕ್ಕೆ—ಶ್ರೀಕೃಷ್ಣ ಜನ್ಮಸ್ಥಾನದ ಯಾತ್ರೆಗೆ ಹೋಗಲು ಸರಕಾರದ ಕರೆ ಬರುತ್ತಿರುವುದನ್ನು ಲೆಕ್ಕಿಸದೆ—ಬಂದರು, " How many English men—how many Amaricans—would have stood out against what was offered as an outstanding distinction ? " ಈ ಬಹುಮಾನವು ಬೇಡವೆಂದು ಹೇಳುವ ಯುರೋಪಿಯನ್‌ರೆಷ್ಟು ಜನರಿದ್ದಾರೆ? ಅಮೇರಿಕನ್‌ರೆಷ್ಟು ಜನರಿದ್ದಾರೆ ?

ಬ್ರಿಟಿಶರಲ್ಲಿ ವಂಶಭೇದ

ಜಾತಿ, ಧರ್ಮ, ಮತ, ಸಂಥ, ಪಕ್ಷ ಮುಂತಾದುವುಗಳು ಭಾರತದ ಸ್ವಾತಂತ್ರ್ಯಕ್ಕೆ ಅಡ್ಡಬರುತ್ತವೆಯೆಂದು ಬ್ರಿಟಿಶರು ಹೇಳುತ್ತಾರೆ. ಆದರೆ ಅದೇ ಬ್ರಿಟಿಶರಲ್ಲಿಯೇ ಈ ಭಾವನೆ ಹೇಗಿದೆ ನೋಡಿ : (ಪುಟ ೪೪) ಓರ್ವ ಸ್ಕಾಟಿಶ್ ಅಧಿಕಾರಿಯು ಬೇರೆ ಸ್ಕಾಚರನ್ನು ಲೋಹಚುಂಬಕದಂತೆ ಹೇಗೆ ಅಧಿಕಾರ ಪದಗಳಿಗೆ ಆಕರ್ಷಿಸಿಕೊಳ್ಳುತ್ತಾನೆಂಬುದರ ದೃಷ್ಟಾಂತವನ್ನು ಕೊಟ್ಟು,ವಂಶದ (Race) ಅಭಿಮಾನ ಯುರೋಪಿಯನ್‌ರಲ್ಲಿ ಹೇಗಿದೆಯೆಂಬುದನ್ನು ಥಾಮ್ಸನ್‌ರು ತೋರಿಸಿದ್ದಾರೆ. ಕಳೆದ ನವ್ಹೆಂಬರ್‌ನಲ್ಲಿ ಸೆಕ್ರೆಟರಿ ಆಫ್ ಸ್ಟೇಟರು, ಕಾಯಮ್ ಇದ್ದ ಕೆಳಗಿನ ಸೆಕ್ರೆಟರಿಗಳು, ವ್ಹಾಯಿಸ್‌ರಾಯರು,ಸೇನಾನಾಯಕರು(ಕಮಾಂಡರ ಇನ್ ಚೀಫ್) ಸ್ಕಾಟರಿದ್ದರು. ವ್ಹಾಯಿಸ್‌ರಾಯರ ಕೌನ್ಸಿಲಿನಲ್ಲಿ ಒಬ್ಬನು ಸಹ ಇಂಗ್ಲೀಷಮನ್ ಅಥವಾ ವೆಲ್ಶಮನ್‌ನಿದ್ದಿಲ್ಲ. —ಹನ್ನೊಂದು ಜನ ಗವ್ಹರ್ನರರಲ್ಲಿ ಏಳು ಜನ ಗವ್ಹರ್ನರರು ಸ್ಕಾಟರು, ಒಬ್ಬನು ಆಲ್‌ಸ್ಟರಿನ ಸ್ಕಾಟನಿದ್ದನು. ಮಧ್ಯವರ್ತಿ ಕಾನೂನು ಮಂಡಲದಲ್ಲಿ ಯುರೋಪಿಯನ್‌ರ ಮುಂದಾಳು ಸ್ಕಾಟನಿದ್ದನು. ದಿಲ್ಲಿಯಲ್ಲಿಯ ಯುರೋಪಿಯನ್‌ರ ಮುಂದಾಳು ಸ್ಕಾಟನಿದ್ದನು. ದಿಲ್ಲಿಯಲ್ಲಿಯ ಲಂಡನ್ ಟಾಯಿಮ್ಸ್ ಪತ್ರಿಕೆಯ ಸುದ್ದಿಗಾರನೂ ಸ್ಕಾಟನಿದ್ದನು. (ಬರ್ಮಾದ ಗವ್ಹರ್ನರನೂ ಸ್ಕಾಟನಿರುವುದು ಸಹಜ) ಈ ಪರಂಪರೆಯು ೧೮ನೆಯ ಶತಮಾನದ ಕೊನೆಯಿಂದಲೂ ಬಂದಿದೆ : " The stock joke in the exilarating contraversial literature of that age was that unless your name was Campbell or begun with mac you had no hope of success in India (ನೀನು ಸ್ಕಾಟಲಂಡದವನೆಂದು ತೋರಿಸುವಂತಹ ಹೆಸರು ನಿನ್ನದಾಗಿರದಿದ್ದರೆ– 'ಮ್ಯಾಕ್' ಮೊದಲಾದುವುಗಳಿಂದ ಪ್ರಾರಂಭವಾಗುವುದು-ಭರತಖಂಡದಲ್ಲಿ ನಿನಗೆ ಯಶದ ಆಸೆಯು ಇರುತ್ತಿರಲಿಲ್ಲ !) "

ಮುಸಲ್ಮಾನರ ಮೇಲಿನ ಬ್ರಿಟಿಶರ ರೋಷ

(ಪುಟ ೫೨ ರಲ್ಲಿ) ೧೮೫೭ ರ ಬಂಡಾಯದಲ್ಲಿ, ಬ್ರಿಟಿಷರು ಮುಸಲ್ಮಾನರ ಮೇಲಿನ ರೋಷದಿಂದ ಉರಿಯುತ್ತಿದ್ದರು; **ಲಾರ್ಡ್ ರಾಬರ್ಟ್ಸ್‌ನು** ಈ ರೀತಿ ಬರೆದಿದ್ದಾನೆ : " ದೇವರ ದಯೆಯಿಂದ, ಇಂಗ್ಲೀಷರು ಮುಂದೆ ಸಹ ಭರತಖಂಡದ ಒಡೆಯರಾಗಿಯೇ ಉಳಿಯುವರೆಂಬುದನ್ನು ನಾವು ಈ ನೀಚ ಮುಸಲ್ಮಾನರಿಗೆ (Rascally Musalmans) ಖಂಡಿತ ತೋರಿಸುವೆವು.

‘ ಮುಸಲ್ಮಾನರ ಮುಸ್ಲೀಮ್ ಲೀಗು ’

(ಪುಟ ೫೪) ಕಾಂಗ್ರೆಸ್ಸಿಗೆ ಮೆಂಬರರಾಗಲು ನಾಲ್ಕಾಣೆ ಕೊಟ್ಟರೆ ಮುಸ್ಲಿಮ್‌ಲೀಗಕ್ಕೆ ಎರಡೇ ಆಣೆ ಕೊಡಬೇಕಾಗುವುದು. ಲೀಗಕ್ಕೂ ಅನೇಕ ಜನ ಮೆಂಬರರಿದ್ದಾರೆ. ಆದರೆ ಎಷ್ಟು ಜನ ಮೆಂಬರರಿದ್ದಾರೆಂಬುದು ಅರಿಯದ ಮಾತಾಗಿದೆ. ಮುಸ್ಲಿಮ್ ಲೀಗದ ಮೆಂಬರರ ಸಂಖ್ಯೆಗಿಂತ ಕಾಂಗ್ರೆಸ್ಸಿಗೆ ಮೆಂಬರರಾಗಿದ್ದ ಮುಸಲ್ಮಾನರ ಸಂಖ್ಯೆ ಹೆಚ್ಚಿದೆಯೆಂದು ಕಾಂಗ್ರೆಸ್ಸಿನ ಅಭಿಪ್ರಾಯ. ಲಕ್ಷಾವಧಿ ಜನ ಮುಸಲ್ಮಾನರು ಕಾಂಗ್ರೆಸ್ಸಿನ ಮೆಂಬರರಾಗಿದ್ದಾರೆ. ೧೯೩೭ ರ ಆಯ್ಕೆಯಾದ ಬಳಿಕ ಒಂದು ಪ್ರಾಂತದಲ್ಲಿ ಕೂಡ ಮುಸ್ಲಿಮ್ ಲೀಗಕ್ಕೆ ಅಧಿಕಾರಪದ ಸ್ವೀಕರಿಸುವಷ್ಟು ಬಲವಿರಲಿಲ್ಲ. ಮುಸಲ್ಮಾನರೇ ಹೆಚ್ಚಿದ್ದ ನಾಲ್ಕೂ ಪ್ರಾಂತಗಳನ್ನೂ ದೃಷ್ಟಾಂತಕ್ಕೆ ತಕ್ಕೊಳ್ಳಿರಿ. ವಾಯವ್ಯ ಪ್ರಾಂತದಲ್ಲಿಯಂತೂ ಸಂಪೂರ್ಣವಾಗಿ ಕಾಂಗ್ರೆಸ್ ಸರಕಾರವಾಯಿತು. ಅಲ್ಲಿ ನೂರಕ್ಕೆ ೭॥ ಯಂತೆ ಹಿಂದುಗಳಿದ್ದಾರೆ. ಸಿಂಧದಲ್ಲಿ ಕಾಂಗ್ರೆಸ್ ಸಭಿಕರ ಸಹಾನುಭೂತಿಯನ್ನು ದೊರಕಿಸಿದ ಮುಸಲ್ಮಾನರ ಸ್ವತಂತ್ರ ಸರಕಾರವಿದೆ. ಪಂಜಾಬದಲ್ಲಿ ಮಿಶ್ರ ಮಂತ್ರಿಮಂಡಲವಿದೆ. ಮಂತ್ರಿಮಂಡಲದಲ್ಲಿ ಶೀಖ ಹಾಗೂ ಹಿಂದೂ ಮಂತ್ರಿಗಳಿದ್ದಾರೆ. ಪಂಜಾಬದಲ್ಲಿ ಕಾಂಗ್ರೆಸ್ಸಿಗೆ ಬೆಂಬಲವಿಲ್ಲ, ಆದರೆ ಅಲ್ಲಿಯ ಆಯ್ಕೆಯಲ್ಲಿ ಲೀಗಕ್ಕೆ ಒಂದೇ ಒಂದು ಸ್ಥಳ ದೊರೆಕಿತು. ಸಿಂಧ ಹಾಗೂ ವಾಯವ್ಯಪ್ರಾಂತದಲ್ಲಿ ಲೀಗಕ್ಕೆ ಅಷ್ಟೊಂದು ಯಶಸ್ಸು ಸಿಕ್ಕಲಿಲ್ಲ. ಬಂಗಾಳದಲ್ಲಿ ಯಾವ ಪಕ್ಷಕ್ಕೂ ಕಾಂಗ್ರೆಸ್ಸಿನಷ್ಟು ಯಶಸ್ಸು ದೊರೆಯಲಿಲ್ಲ. ಕಾಂಗ್ರೆಸ್ಸಿನ ಹುರಿಯಾಳುಗಳಲ್ಲಿ ೫೦ ಜನ ಆರಿಸಿ ಬಂದರೆ, ಲೀಗ್‌ದವರು ೪೦ ಜನ ಆರಿಸಿ ಬಂದರು. ಈಗಿನ ಬಂಗಾಲದ ಪ್ರಧಾನ ಮಂತ್ರಿಗಳು ಕಾಂಗ್ರೆಸ್ಸಿಗರಿದ್ದಾರೆ. ಅಲ್ಲದೆ ಕಾಂಗ್ರೆಸ್ ಮಂತ್ರಿಮಂಡಳದಲ್ಲಿ ಮಂತ್ರಿಯಾಗಲೂ ಸಿದ್ಧರಿದ್ದರು. ಕಾಂಗ್ರೆಸ್ಸು ಮಿಶ್ರ ಮಂತ್ರಿಮಂಡಳಕ್ಕೆ ಒಪ್ಪಲಿಲ್ಲವಾದುದರಿಂದ ಅವರು ಲೀಗಕ್ಕೆ ಸೇರಿಕೊಂಡರು. ೨೫ ಜನ ಯುರೋಪಿಯನ್ನರ ಬೆಂಬಲವಿದ್ದುದರಿಂದ ಅವರು ಅಧಿಕಾರಾರೂಢರಾಗಿದ್ದಾರೆ. ಅವರ ಮಂತ್ರಿಮಂಡಲವನ್ನು ಎದುರಿಸುವ ಒಂದು ಪ್ರಬಲವಾದ ಮುಸಲ್ಮಾನರ ಪಕ್ಷವೊಂದಿದೆ ಅಲ್ಲಿ.

ಮುಸಲ್ಮಾನರಲ್ಲಿ ೧೦೦ ಕ್ಕೆ ೨೦ರಷ್ಟಿದ್ದ ಸೀಯಾ ಜನರ ಒಲವು ಕಾಂಗ್ರೆಸ್ಸಿನ ಕಡೆಗಿದೆ. ಅದರಂತೆಯೆ ಮೂರು ಬಲಿಷ್ಠ ಸಂಘಟನೆಗಳು ಅಂದರೆ **ಮೋಮಿನ್**(Momins), **ಅಹ್ರಾರ್**(Ahrars), ಹಾಗೂ **ಜಾಮಾಯತ್ ಉಲ್ ಉಲೇಮಾ** (ಧರ್ಮಗುರುಗಳ ಸಂಸ್ಥೆ) ಇವು ಕಾಂಗ್ರೆಸ್ ಧೋರಣದವಾಗಿವೆ. ಈಗಿನ ಕಾಂಗ್ರೆಸ್ ಅಧ್ಯಕ್ಷರು ಅರಬೀ ಪರ್ಶಿಯನ್ ಭಾಷೆಗಳಲ್ಲಿ ಹೆಸರಾದ ಪಂಡಿತರೂ ವಾಕ್ಪಟುಗಳೂ ಇದ್ದಾರೆ.

ಪಾಕಿಸ್ತಾನ್

(ಪುಟ ೫೮ ರಲ್ಲಿ) ಪಾಕಿಸ್ತಾನವೆಂದರೆ ಧರ್ಮಪ್ರವರ್ತಕರ ಪವಿತ್ರ ಜನರ ದೇಶ. ಪಂಜಾಬದಲ್ಲಿಯ ‘ ಪ ’ ಹಾಗೂ ಅಫಗಾಣಿಸ್ಥಾನದಲ್ಲಿಯ ‘ ಅ ’ ಕಾಶ್ಮೀರದಲ್ಲಿಯ ‘ ಕ ’ ಗಳು ಕೂಡಿ ‘ ಪಾಕಿಸ್ತಾನ್ ’ ವಾಗಿದೆಯಂತೆ. ಪಾಕಿಸ್ತಾನದ ಕಲ್ಪಕರಾರೆಂಬ ವಿಷಯವಾಗಿ ಇನ್ನೂ ವಾದವಿದೆ. ಕವಿವರ್ಯ **ಸರ್ ಮಹಮ್ಮದ್ ಇಕ್‌ಬಲ್ಲ**ರು ಅದರ ಜನಕರೆಂದು ಕೆಲವರ ತಿಳಿವಳಿಕೆ. ‘ಅಬ್ಜರ್ವರ್ (Observer)’ ಪತ್ರಿಕೆಯಲ್ಲಿ ಈ ವಿಚಾರದ ವಿಧಾನವನ್ನು ನಾನು ಮಾಡಿದೆ. ನನ್ನ ಸ್ನೇಹಿತರಾದ ಇಕ್‌ಬಲ್ಲರು ನನ್ನ ತಪ್ಪು ತಿಳಿವಳಿಕೆಯನ್ನು ದೂರಮಾಡಿದರು. ಪಾಕಿಸ್ತಾನದ ಯೋಜನೆಯು ಹಿಂದೂ ಹಾಗೂ ಮುಸಲ್ಮಾನ್ ಸಮಾಜಕ್ಕೆ ವಿಘಾತಕವಿದೆಯಲ್ಲದೆ, ಬ್ರಿಟಿಷ್ ಸರಕಾರಕ್ಕೂ ವಿಘಾತಕವಿದೆಯೆಂದು ಕವಿವರ್ಯರು ಅಭಿಪ್ರಾಯಪಟ್ಟರು. “ ಆದರೆ ನಾನು ಲೀಗ್‌ದ ಅಧ್ಯಕ್ಷನಿರುವುದರಿಂದ, ಅದನ್ನು ಸಮರ್ಥಿಸುವುದು ನನ್ನ ಕರ್ತವ್ಯವು ” ಎಂದು ಹೇಳಿದರು. ಪಾಕಿಸ್ತಾನವನ್ನು ಪುರಸ್ಕರಿಸುವ ಬಹುಜನ ಸಮಾಜವು ಪಂಜಾಬದಲ್ಲಿದೆ. ಪಾಕಿಸ್ತಾನದ ಗಡಿಗಳು ಭದ್ರವಾಗಿಲ್ಲ. ಗಡಿನಾಡಿನಲ್ಲಿ ಗುಡ್ಡಗಳಲ್ಲಿ ಸಮಸೆಲವಿರುವುದರಿಂದ ಸುತ್ತಲಿನ ಪ್ರಾಂತಗಳಿಂದ, ದಾಳಿಯಾಗುವ ಸಂಭವ ಹೆಚ್ಚು. ಈಗ ಬೆಳ್ಳಿಯಮಹ್‌ದ ಹಣೆಬರಹ ನೋಡಿ ಏನಾಗಿದೆ ! ಪಾಕಿಸ್ತಾನದಿಂದ— ಹಿಂದುಸ್ತಾನದ ಹೊರಗಿನ ಮುಸಲ್ಮಾನರ ಕೂಡ ಭಾರತೀಯ ಮುಸಲ್ಮಾನರು ಕೂಡಿಕೊಂಡು,— ಮಧ್ಯ-ಏಶಿಯದಿಂದ ಹಿಂದುಸ್ತಾನಕ್ಕೆ ಹಿಂದಿನ ಕಾಲದಲ್ಲಿ ದಾಳಿಗಳಾದಂತೆ ಈಗಲೂ ಆಗಬಹುದೆಂಬುದು ಹಿಂದೂ ಜನರ ಭಾವನೆ.

(ಪುಟ ೫೯) “ ಕೆಲವು ಅಧಿಕಾರಸ್ಥರ ಗುಂಪುಗಳು ಪಾಕಿಸ್ತಾನವನ್ನು ಎತ್ತಿ ಹಿಡಿಯುವುದನ್ನು ನೋಡಿ ನಾನು ಬೆರಗಾದೆನು. ಬ್ರಿಟಿಷ್ ಪಕ್ಷದಲ್ಲಿ ಒಂದು ಪಕ್ಷದ ಒಲವು ಪಾಕಿಸ್ತಾನದ ಕಡೆಗಿದ್ದುದನ್ನು ನೋಡಿ ನಾನು ಬಹಳ ಆಶ್ಚರ್ಯಗೊಂಡೆನು. ಒಳದೇಶದಲ್ಲಿ ನಿರಂತರ ಯುದ್ಧ ನಡೆಯುವಂತೆ ಮಾಡುವುದಕ್ಕೆ ಪಾಕಿಸ್ತಾನಕ್ಕಿಂತ ಹೆಚ್ಚಿನ ನಿಶ್ಚಿತವಾದ ಮಾರ್ಗ ಇನ್ನೊಂದಿಲ್ಲ (There is no surer way of plunging India into eternal civil war).

(ಪುಟ ೫೯ ರಲ್ಲಿ) ವಸಹಾತು ಸ್ವರಾಜ್ಯವನ್ನು ಇಷ್ಟು ಕಾಲದಲ್ಲಿ ಕೊಡುತ್ತೇವೆಂದೂ ಈಗಿನಿಂದ ನಾವು ಆ ಮಾತಿನ ಪೂರ್ತಿಗಾಗಿ ಆ ರೀತಿಯ ಮಾರ್ಗ ಕೈಕೊಳ್ಳುತ್ತೇವೆಂದೂ ಹೇಳಲು, ಬ್ರಿಟಿಷ್ ಸರಕಾರವನ್ನು ತಡೆದು ನಿಲ್ಲಿಸಿದ ಸಂದರ್ಭಗಳು ಎರಡು : (೧) ೭ ಕೋಟಿ ಮುಸಲ್ಮಾನರು ಲೀಗ್ ಛತ್ರದ ಅಡಿಯಲ್ಲಿ ಅಗಲದಂತೆ ಒಂದುಗೂಡಿದ್ದಾರೆ. (೨) ಅಂಕಾರಾದಿಂದಿರದ್ದಿರೂ ಅಲೆಪ್ಪೊದಿಂದ ಆಸಾಮದ ವರೆಗೆ ಮುಸಲ್ಮಾನರೆಲ್ಲರ ಒಂದು ಅಚ್ಚಳಿಯದ ಸಮುದಾಯ (Solid block) ಇದೆ. ಈ ಎರಡೂ ಭಾವನೆಗಳು ಕೇವಲ ಕಾಲ್ಪನಿಕ ಸ್ವರೂಪದವಾಗಿವೆ. ಇರಾಣ ತುರ್ಕಸ್ತಾನಗಳಂತೆ ಅಫಗಾಣಿಸ್ತಾನವೂ ಕೂಡ ಐಹಿಕತ್ವ (Secularism)ದ ಮಾರ್ಗವನ್ನು ಅವಲಂಬಿಸುತ್ತದೆ. ಕಾಬೂಲದಲ್ಲಿ ಮುಸ್ಲಿಮ್ ಲೀಗದ ಮೇಲೆ ಮಮತೆಯುಳ್ಳವರಿಲ್ಲ. ಅಫಗಾಣಿಸ್ತಾನದಲ್ಲಿ ಏನು

ನಡೆಯುತ್ತಿದೆಯೆಂಬುದನ್ನು ನೋಡಬೇಕಿದ್ದರೂ, ಅದರ ವಿಷಯವಾಗಿ ಸದ್ಯಕ್ಕೆ ವಿಚಾರಮಾಡುವ ಆವಶ್ಯಕತೆಯಿಲ್ಲ. ಬಲುಚಿಸ್ತಾನವು ರಾಜಕೀಯ ದೃಷ್ಟಿಯಿಂದ ಹಿಂದುಳಿದುದಾಗಿದೆ; ಅದು ಒಂದು ಪ್ರಾಂತ ಕೂಡ ಆಗಿಲ್ಲ. ಅದರ ಸಹಾನುಭೂತಿಯೂ ಕಾಂಗ್ರೆಸ್ಸಿನ ಕಡೆಗಿದೆ. ವಾಯುವ್ಯ ಪ್ರಾಂತದಲ್ಲಿಯಂತೂ ಕಾಂಗ್ರೆಸ್ ಮಂತ್ರಿಮಂಡಲವಾಗಿದ್ದುದನ್ನು ನಾವು ಕಂಡಿದ್ದೇವೆ. ಗಡಿನಾಡಿನ ಆಡವಿ ದಾಟಿನ ಮೇಲೆ ಹತ್ತುವ ಆಫ್ರೀದಿಸ್‌ರಲ್ಲಿ ಕಾಂಗ್ರೆಸ್ಸಿನ ಆಂದೋಲನವಿದೆ. (ಆದರೆ ಅದು ಅಹಿಂಸಾತ್ಮಕವಾದುದಲ್ಲವೆಂದು ಹೇಳಲು ವಿಷಾದವಾಗುತ್ತಿದೆ.) ಇಲ್ಲಿ ಇಪ್ಪತ್ತು ಸಾವಿರ ಜನರು ಕಾಂಗ್ರೆಸ್ ಮೆಂಬರರಾಗಿದ್ದಾರೆ. ಅಲ್ಲದೆ ವಝಿರಿಸ್ತಾನ್ ಹಾಗೂ ಮಾಲ್ಕಂಡ್ ಏಜನ್ಸಿಗಳಲ್ಲಿ ಬಲವಾದ ಕಾಂಗ್ರೆಸ್ ಚಳವಳವಿದೆ.

(ಪುಟ ೬೦ರಲ್ಲಿ) ಕಾಂಗ್ರೆಸ್ ಧುರೀಣರು ಜಾತೀಯ ಸಮಸ್ಯೆಯನ್ನು ಜಾಣತನದಿಂದ ಬಿಡಿಸಲಿಲ್ಲ. ೧೯೩೭ ರಲ್ಲಿ ಕಾಂಗ್ರೆಸ್ಸು ಕೇವಲ ೫೮ ಮುಸಲ್ಮಾನರನ್ನು ಆರಿಸಿತಂದರು. ಇದರ ವಿಷಯವಾಗಿ ಡಾಕ್ಟರ್ ಆಪಮ್ಮದರು ಹೀಗೆ ಹೇಳಿದ್ದಾರೆ: (A highly deplorable vacillation and lack of self confidence....the field was left entirely open to communal and reactionary individuals and organisations, "ಹೆಚ್ಚು ಮುಸಲ್ಮಾನರನ್ನು ಕಾಂಗ್ರೆಸ್ಸು ಆಯ್ಕೆಗಾಗಿ ನಿಲ್ಲಿಸದಿದ್ದುದು, ಕಾಂಗ್ರೆಸ್ಸಿನ ಅನಿಶ್ಚಿತ ಹಾಗೂ ಶೋಚನೀಯ ಧೋರಣದ ನಿದರ್ಶನವಾಗಿದೆ. ಈ ಕ್ಷೇತ್ರವು ಜಾತೀಯ ಹಾಗೂ ಪ್ರತಿಗಾಮಿ ವ್ಯಕ್ತಿ ಹಾಗೂ ಸಂಸ್ಥೆಗಳಿಗೆ ತೆರೆದಿಟ್ಟಂತಾಯಿತು. ಲೀಗದ ಬಲ ಬೆಳೆಯಲು ಕಾಂಗ್ರೆಸ್ಸೂ ಒಂದು ಕಾರಣವಾಯಿತು. ಆದುದರಿಂದಲೇ ಬ್ರಿಟಿಷ್ ಸರಕಾರವು ಎಲ್ಲ ಮುಸಲ್ಮಾನರ ಪ್ರತಿನಿಧಿಯೆಂದು ಲೀಗದ ಕಡೆಗೆ ಬೊಟ್ಟುಮಾಡಿ ತೋರಿಸಹತ್ತಿತು!"

(ಪುಟ ೬೩ರಲ್ಲಿ) ಆಲೆಪ್ಪೋದಿಂದ ಆಸಾಮದ ವರೆಗೆ ಹರಡಿಕೊಂಡ ಅಚ್ಚುಕಟ್ಟಾದ ಚೊಕ್ಕ ಮುಸಲ್ಮಾನರ ಸಮಾಜವಿರುವುದಿಲ್ಲ. ಪಾಕಿಸ್ತಾನವು ಅಸ್ತಿತ್ವದಲ್ಲಿ ಬರುವ ಸಂಭವವಿರುವುದಿಲ್ಲ; ಬಂದರೂ ಮಧ್ಯ ಹಾಗೂ ಪಶ್ಚಿಮ ಏಶಿಯದಲ್ಲಿ ಹಬ್ಬಿಕೊಂಡ ಮುಸ್ಲೀಮ್ ಲೀಗಕ್ಕೆ ಹೊಂದಿಕೊಂಡಿರಲಾರದು. ಅದರ ಅಸ್ತಿತ್ವ ಉಳಿಯುವುದು ಬಿಕ್ಕಟ್ಟಿನದಾಗಿದೆಯೆಂಬುದು ಅದಕ್ಕೆ ಕಂಡುಬಾರದೆ ಇರದು. ಬೇರೆ ಬೇರೆ ಆಯ್ಕೆಗಳು (separate electorates) ಇರಕೂಡದು. ಅವುಗಳನ್ನು ಹೋಗಲಾಡಿಸಲು ಬ್ರಿಟಿಶ್ ಸರಕಾರವು ನೆರವಾಗಬೇಕು. ಏಳು ಕೋಟಿ ಮುಸಲ್ಮಾನರು ಕಾಂಗ್ರೆಸ್ಸಿನ ವಿರುದ್ಧ ಹಾಗೂ ವಸಹಾತು ಸ್ವರಾಜ್ಯದ ವಿರುದ್ಧ ಇದ್ದಾರೆಂಬ ತಿಳಿವಳಿಕೆಯು ಕೇವಲ ಒಂದು ಬಿಸಿಲ್ಗುದುರೆ! (Many leading members of the league are open to reason and in private admit this) ಲೀಗದ ಅನೇಕ ಪ್ರತಿಷ್ಠಿತ ಮೆಂಬರರು ವಿಚಾರವಂತರಿದ್ದು, ಈ ಮಾತನ್ನೆಲ್ಲ ಖಾಸಗಿ ರೀತಿ ಒಪ್ಪುತ್ತಾರೆ.

ಗುಣಗಾನ

ಶ್ರೀ. ಜಿ. ವರದರಾಜರಾವ್ ಬಿ. ಎ.

ನೀರೆ! ನೀನು ಹಾರಿ ಹಾರಿ
  ಚಿಮ್ಮಿ ಚಿಮ್ಮಿ ಬರುತಿರೆ—
ಅಂತರಂಗದಾಸೆ ವಿಹಾರಿ
  ಹೊಮ್ಮಿ ಹೊಮ್ಮಿ ಬರುತಿರೆ—
    ಬಂದೆನಿದೋ, ಕೈಯ ಕೊಡಿಸು,
      ನಗುತ ನಗುತ ನನ್ನ ಚುಂಬಿಸು! ೧

ತಳಿರ ಹಿಂದೆ ತವಕದಿಂದ
  ಕೂಗಿ ಕೊನೆವ ಸುಮದೊಲು—
ಮಳೆಯ ಹಾಯ್ದು ದೂರದಿಂದ
  ಬೀಸಿ ಬರುವ ಎಲರೊಲು—
    ನಲ್ಲೆ, ಮೆಲ್ಲ ಮೆಲ್ಲ ಸಾರಲು
      ಮುಗಿಲಿನಂತೆ ಬಂದೆ ಕೂಡಲು. ೨

ಹೃದಯಗಳನು ಸೇರಿಸುತ್ತ
  ಶಶಿ ಮರೀಚಿ ರುಚಿಯಲಿ—
ಒಲುಮೆ ವೀಣೆ ಬಾರಿಸುತ್ತ
  ಗಗನ ಭವನದಡಿಯಲಿ—
    ನಾಕ ಲೋಕ ನಾಚುವಂದದಿ
      ಮೆರೆವ ಬಾ, ಮಂದಹಾಸದಿ! ೩

ಮುಗಿಲ ಪಡೆಯ ಮಡಿಲ ನೆಳಲ
  ತಳದಿ ನಲಿವ ಕವಿಯೊಲು
ನೀರೆ! ನಿನ್ನ ಹರುಷಗಡಲ
  ನಡುವೆ ನಾನು ನಲಿಯಲು,
    ನಮ್ಮ ಬಾಳು ಗೋಳನುಳಿಯುತ
      ಮೆರೆವುದಿಂದು ನಗುತ ಸಂತತ! ೪

ಏನೆ ಇರಲಿ, ಏನೆ ಬರಲಿ
  ನಮ್ಮ ನಲ್ಮೆ ರಾಜಿಸೆ
ಕೋಟಿ ಕಲ್ಪ ಜಾರುತಿರಲಿ
  ಪ್ರೇಮ ಧಾಮ ಶೋಭಿಸೆ
    ಅಳಲು ಬರದು ತಣಿಯೆ ತನುಮನ.
      ನಮ್ಮ ಒಲುಮೆ ತಾ ಚಿರಂತನ! ೫

ನೀರೆ! ನೀನು ಹಾರಿ ಹಾರಿ
  ಚಿಮ್ಮಿ ಚಿಮ್ಮಿ ಬರುತಿರೆ—
ಅಂತರಂಗದಾಸೆ ವಿಹಾರಿ
  ಹೊಮ್ಮಿ ಹೊಮ್ಮಿ ಬರುತಿರೆ—
    ಬಂದೆನಿದೋ, ಕೈಯ ಕೊಡಿಸು
      ನಗುತ ನಗುತ ನನ್ನ ಚುಂಬಿಸು! ೬

*ವಿಚಿತ್ರ ಮುಖ

ಶ್ರೀ. ಸು. ಶ. ಪಪ್ಪು, ಪುಣೆ

★

ನನ್ನ ಮನೆ ಹಳೆಯ ಕಾಲದ ದೊಡ್ಡ ಮನೆ. ಆ ಮನೆಯ ಗೋಡೆಗಳು ನಾಲ್ಕು ಅಡಿ ದಪ್ಪ; ತೊಲೆಗಳು ಎರಡು ಅಡಿ ದಪ್ಪ; ಹೆಬ್ಬಾಗಿಲು ಅರ್ಧ ಅಡಿ ದಪ್ಪ. ನನ್ನ ಮನೆಯಲ್ಲಿ ಪ್ರಾಚೀನ ವಸ್ತುಗಳಿಂದ ತುಂಬಿದ್ದ ಒಂದು ಕತ್ತಲೆಯ ಕೋಣೆಯಿದೆ. ಆ ಕೋಣೆಯಲ್ಲಿ ಒಂದು ಕಬ್ಬಿಣದ ದೊಡ್ಡ ಪೆಟ್ಟಿಗೆಯಿದೆ. ಒಮ್ಮೆ ಆ ಪೆಟ್ಟಿಗೆಯಲ್ಲಿಯ ವಸ್ತುಗಳನ್ನು ಶೋಧಿಸುವಾಗ, ನನಗೆ ಅದರಲ್ಲಿ ಒಂದು ದೊಡ್ಡ ಕನ್ನಡಿ ಸಿಕ್ಕಿತು. ಅದನ್ನು ಸ್ವಚ್ಛ-ವಾಗಿ ತಿಕ್ಕಿ, ಥಳಥಳ ಹೊಳೆಯುವಂತೆ ಮಾಡಿ, ನನ್ನ ಮಲಗುವ ಕೋಣೆಯಲ್ಲಿಯ ಒಂದು ಗೂಟಕ್ಕೆ ತೂಗುಹಾಕಿ, ನನ್ನ ಮುಖ-ವನ್ನು ನೋಡಿಕೊಳ್ಳಬೇಕೆಂದು ನಾನು ಅದರ ಮುಂದೆ ನಿಂತೆ. ಆ ಕನ್ನಡಿಯಲ್ಲಿಯ ಅದ್ಭುತ ದೃಶ್ಯವನ್ನು ನೋಡಿ, ನಾನು ಬೆಚ್ಚಿ ಚಿಟ್ಟನೆ ಚೀರಿ, ಒಂದೇ ಏಟಿಗೆ ಆರು ಅಡಿ ಹಿಂದೆ ಹಾರಿ ಬಿದ್ದೆ. ಆ ವಿಚಿತ್ರ ಕನ್ನಡಿಯಲ್ಲಿ ನನ್ನ ಮೋರೆ ಕಾಣುವುದಲ್ಲದೆ, ನನಗೆ ಬಗೆ-ಬಗೆಯ ವಿಲಕ್ಷಣ ಆಕಾರಗಳೂ ರೂಪುಗಳೂ ಕಂಡುವು! ಸೊಂಡೆಯಿಲ್ಲದ ಆನೆ, ಮುಖವಿಲ್ಲದ ಕರಡಿ, ಕಿವಿಯಿಲ್ಲದ ಹುಲಿಯ ಮುಖ, ಹತ್ತು ತಲೆಗಳ ರಾವಣ, ಗಂಭೀರವಾದ ಮೀಸೆಯ ಯಮರಾಜ, ಮೂಗಿಲ್ಲದ ಶೂರ್ಪನಖಿ, ಪರಶು-ರಾಮನ ಕೊಡಲಿ—ಇಂತಹ ಅನೇಕ ಅದ್ಭುತ ಆಕಾರಗಳು!! ಮುಂದೆ ಮೂರು ದಿನ ನಾನು ಆ ಕನ್ನಡಿಯನ್ನು ನೋಡುವ ಗೊಡವೆಗೆ ಹೋಗಲಿಲ್ಲ. ಬಳಿಕ ಮತ್ತೊಮ್ಮೆ ಧೈರ್ಯಮಾಡಿ ಆ ಕನ್ನಡಿಯ ಮುಂದೆ ನಿಂತೆನು. ಆಗ ಹಿಂದೆ ಕಂಡ ಆ ವಿಲಕ್ಷಣ ರೂಪುಗಳೆಲ್ಲ ಅದೃಶ್ಯವಾಗಿ, ಒಂದೇ ಒಂದು— ಯಾವುದೋ ಮುಖದ ಆಕಾರದಂತೆ—ಅಸ್ಪಷ್ಟವಾಗಿ—ಕಾಣಿಸಿದಂತಾಯಿತು. ಅದನ್ನು ಸೂಕ್ಷ್ಮವಾಗಿ ಪರೀಕ್ಷಿಸಿ, ಅದು ಒಂದು ಪುರುಷ-ವ್ಯಕ್ತಿಯ ಮುಖವೆಂದು ನಿರ್ಧರಿಸಿದೆ. ಅದನ್ನು ಕಂಡು ನಾನು ಅಷ್ಟೇನು ಬೆದರಲಿಲ್ಲ. ಮತ್ತೇನನಾದರೂ ವಿಚಿತ್ರ ದೃಶ್ಯ ಕಾಣ-ಬಹುದೆಂದು, ಪ್ರತಿದಿನ ನಾನು ಆ ಕನ್ನಡಿಯಲ್ಲಿ ನೋಡತೊಡಗಿ-ದೆನು. ಆ ಮುಖದ ಹೊರತು ಅದರಲ್ಲಿ ನನಗೆ ವಿಶೇಷ ವಿಚಿತ್ರ ವೇನೂ ಕಾಣಲಿಲ್ಲ. ಆ ಮುಖ ಮಾತ್ರ ದಿನೇ ದಿನೇ ಸ್ಪಷ್ಟವಾಗಿ ಕಾಣಹತ್ತಿತು, ಇಷ್ಟೇ ಅಲ್ಲ; ಆ ಮುಖದ ಮೇಲಿನ ಕಣ್ಣು, ಮೂಗು, ಕಿವಿ, ಬಾಯಿ, ತುಟಿ ಇವೆಲ್ಲಾ ತಿದ್ದಿ ತೀಡಿದಂತೆ ಸ್ಪಷ್ಟವಾಗಿ ಎದ್ದು ಕಾಣಹತ್ತಿದುವು. ಆ ಮೋರೆಗೆ ಮೀಸೆಗಳು ಮೂಡಿದುವು; ಕಣ್ಣುಗಳ ಮೇಲೆ ಹುಬ್ಬುಗಳು ಕಾಣಹತ್ತಿದುವು ಹಣೆಯ ಮೇಲೆ ಒಂದು ತಿಲಕಹಚ್ಚಿದಂತೆ ತೋರಹತ್ತಿತು. ತಲೆಯ ಮೇಲೆ ಒಂದು ಮುಂಡಾಸ ಬಂದು ಕುಳಿತಿತು; ನಗೆ-ಮುಖದ ಮೂಲಕ ಬಾಯೊಳಗಿನ ಹಲ್ಲುಗಳು ಕೂಡ ಕಾಣ-ತೊಡಗಿದುವು.

(೨)

ಆ ಮುಖದಲ್ಲಿ ನನ್ನ ಸ್ನೇಹವೂ ಮಮತೆಯೂ ದಿನೇ ದಿನೇ ಬಹಳವಾಗಿ ಬೆಳೆಯುತ್ತ ಬಂದುವು. ಅಂತಹ ಮುಖದ ಮನುಷ್ಯನನ್ನು ಶೋಧಿಸಿ ತೆಗೆಯಬೇಕೆಂಬ ಹುಚ್ಚು ವಿಚಾರವು ನನ್ನ ತಲೆಯಲ್ಲಿ ಸೇರಿತು. ನನ್ನ ಎಲ್ಲ ಮನೋಭಾವಗಳೂ ಚಿತ್ತಪ್ರವೃತ್ತಿಗಳೂ ಆ ಕನ್ನಡಿಯಲ್ಲಿಯ ಮುಖದ ಮನುಷ್ಯನನ್ನು ಹುಡುಕಿ ತೆಗೆಯುವುದರಲ್ಲಿಯೆ ಆಸಕ್ತವಾದುವು. ನನ್ನ ದೇಹದ ಎಲ್ಲ ಚಟುವಟಿಕೆಗಳು ಈ ಕೆಲಸದಲ್ಲೊಂದೇ ಕೇಂದ್ರೀಕೃತ-ವಾದುವು. ಅಂತೂ ಈ ಕೆಲಸವನ್ನು ಕೊನೆಗಾಣಿಸಿ ಬಿಡಬೇಕೆಂದು ದೃಢವಾಗಿ ನಿಶ್ಚಯಿಸಿಕೊಂಡೆನು. ಈ ವಿಷಯದಲ್ಲಿ ನನಗೆ ಹುಚ್ಚು ಹಿಡಿದಿತ್ತೆಂಬುದರಲ್ಲಿ ಸಂದೇಹವಿರಲಿಲ್ಲ!

★

ಆಂತರಿಕವಾದ ಮನಸ್ಸಿಗೂ ಹೊರಗಣ ಜಗತ್ತಿಗೂ ಒಂದುಬಗೆಯ— ಅವಿದಿತ ವಾದ— ನಿಕಟ ಸಂಬಂಧವಿರಬೇಕು! ಇಲ್ಲದೆ ಹೋದರೆ ಇಂತಹ ಘಟನೆಗೆ ಕಾರಣವೇನು?

★

ಆ ಕನ್ನಡಿಯಲ್ಲಿ ಕಾಣುವ ಮುಖದ ಮನುಷ್ಯನ ಶೋಧ-ನಾರ್ಥವಾಗಿ ನಾನು, ಒಂದು ಸುಮುಹೂರ್ತದಲ್ಲಿ ಮನೆಯಿಂದ ಹೊರಹೊರಟೆನು. ಕಿವಿಯಲ್ಲಿ ಗಾಳಿಸೇರಿದ ಹಸುವಿನ ಶಿಶುವಿ-ನಂತೆ ನಾನು ದಿಕ್ಕುಗೆಟ್ಟು ಅತ್ತಿತ್ತ ಓಡಾಡಲಾರಂಭಿಸಿದೆ. ಸಿನೇಮಾ ಥಿಯೇಟರ್, ರೇಲ್ವೆ ನಿಲ್ದಾಣ, ಬಸ್ ನಿಲ್ದಾಣ, ಸಂತೆ, ಸಾರ್ವ-ಜನಿಕ ಉದ್ಯಾನ, ಭಾಷಣಮಂದಿರ, ಮೆರೆವಣಿಗೆ ಮುಂತಾದ ಜನಸಂದಣಿ ಹೆಚ್ಚಾಗಿರುವ ಸ್ಥಳಗಳಲ್ಲೆಲ್ಲಾ ನುಗ್ಗಿ, ಆ ಮೋರೆಯ ಮನುಷ್ಯನನ್ನು ಶೋಧಿಸಲಾರಂಭಿಸಿದೆನು. ಆ ಮನುಷ್ಯನನ್ನು ಶೋಧಿಸುವ ಹುಚ್ಚಿನಲ್ಲಿ ನನಗೆ ನಿದ್ರೆ, ಊಟ, ಒಂದರ ಕಡೆಗೂ ಲಕ್ಷ್ಯವಿರಲಿಲ್ಲ. ನನ್ನ ಎಲ್ಲ ಪ್ರಯತ್ನಗಳೂ ನಿಷ್ಫಲವಾದಂತೆ ಕಾಣಹತ್ತಿತು. ನನ್ನ ಶ್ರಮವೆಲ್ಲ ವ್ಯರ್ಥವಾದಂತಾಯಿತು. ಆ ಕನ್ನಡಿಯಲ್ಲಿಯ ಮೋರೆಯ ಮನುಷ್ಯನನ್ನು ಕಾಣುವ ವಿಚಾರದ ಹೊರತು ನನಗೆ ಮತ್ತಾವ ಯೋಚನೆಯೂ ಇರಲಿಲ್ಲ. ಏನಾದರೂ ಕಳೆದುಕೊಂಡವನಂತೆ ನನ್ನ ಮನಸ್ಸಿನಲ್ಲಿ ಸದಾ ಹುರುಹುರು

---

*ಎರಡು ಇಂಗ್ಲಿಷ್ ಕತೆಗಳಲ್ಲಿಯ ಕಲ್ಪನೆಗಳಿಂದ ಸೂಚಿತವಾದದ್ದು. ಲೇ.

‘ ಆನಂದಕಂದ’ರ ಗ್ರಂಥಗಳು

ಸುದರ್ಶನ	(ಸಾ. ಕಾದಂಬರಿ)	೦-೧೪-೦
ರಾಜಯೋಗಿ	(ಐ. ಕಾದಂಬರಿ)	೧-೦-೦

ಇವಲ್ಲದೆ ಅವರ ಯಾವ ಪುಸ್ತಕ ಬೇಕಾದರೂ

‘ ಜಯಂತಿ’ ಕಾರ್ಯಾಲಯಕ್ಕೆ

ಬರೆದು ತರಿಸಿಕೊಳ್ಳಬೇಕು!

ಎನಿಸುತ್ತಿತ್ತು. ಸವಿಯಾದ ಊಟವನ್ನುಂಡರೂ ನನ್ನ ದೇಹಕ್ಕೆ ಸುಖವಿರಲಿಲ್ಲ. ಹಗಲೆಲ್ಲ ಪಿರಿ ಪಿರಿ ತಿರುಗಿ ತಿರುಗಿ ದಣಿಯುತ್ತಿದ್ದೆನು. ರಾತ್ರಿಯಲ್ಲೆಲ್ಲ ನನಗೆ ನಿದ್ರೆ ಇರಲಿಲ್ಲ. ಅದೇ ಯೋಚನೆ ಮಾಡುತ್ತ ಹಾಸಿಗೆಯ ಮೇಲೆ ಹೊರಳಾಡುತ್ತಿದ್ದೆನು. ನನ್ನ ಮನಶ್ಶಾಂತಿಯೂ, ಆರೋಗ್ಯವೂ ಕೆಟ್ಟುವು. ನನ್ನ ಜೀವನದ ವಿಷಯಕ್ಕೇ ನಾನು ಉದಾಸೀನನಾದೆನು. ಆದರೂ ಪ್ರಯತ್ನವನ್ನು ಬಿಡಲಿಲ್ಲ. ದೊಡ್ಡ ದೊಡ್ಡ ಬೀದಿಗಳಲ್ಲಿ, ಜನರ ಮುಖ ನೋಡುತ್ತ ಅತ್ತಿಂದಿತ್ತ ಇತ್ತಿಂದತ್ತ ತಿರುಗಾಡಲಾರಂಭಿಸಿದೆನು. ಒಮ್ಮೊಮ್ಮೆ “ ಟ್ರಾಫಿಕ್ ಕಂಟ್ರೋಲ್ (Traffic-Control) ” ಮಾಡುವ ಪೋಲಿಸಿನ ಹತ್ತಿರ ನಿಂತು, ಪ್ರತಿಯೊಂದು ಬಸ್, ಟ್ಯಾಕ್ಸಿ, ಟಾಂಗಾದಲ್ಲಿದ್ದ ಜನರ ಮುಖಗಳನ್ನೂ ನಾನು ಬಗ್ಗಿ ಬಗ್ಗಿ ಮಿಕಿಮಿಕಿ ನೋಡತೊಡಗಿದೆನು. ಇದನ್ನೆಲ್ಲ ನೋಡಿ ಆ ಪೋಲೀಸನು, “ ಏನು ರಾಯರs, ನಿಮ್ಮ ತಲಿ ಕೆಟ್ಟದೇನ್ರೀs? ಹೀಂಗ್ಯಾಕ ಮಂದೀ ಮಾರೀ ನೋಡಿಕೋತs ನಿಂತೀರಿs ? ” ಎಂದನು. “ ಹಾಗಲ್ಲ, ಪರಸ್ಥಳದ ನನ್ನ ಸ್ನೇಹಿತನೊಬ್ಬನು ದಾರಿ ತಪ್ಪಿ ಎಲ್ಲಿಯೋ ಹೋಗಿದ್ದರಿಂದ, ಈ ಬಗೆಯಾಗಿ ಪ್ರತಿಯೊಬ್ಬರನ್ನೂ ಪರೀಕ್ಷಿಸಿ ನೋಡುತ್ತೇನೆ ” ಎಂದು ನಾನು ಉತ್ತರವನ್ನಿತ್ತೆನು. ನಾನು ಕೇವಲ ಪುರುಷರ ಮುಖಗಳನ್ನಷ್ಟೇ ದಿಟ್ಟಿಸಿ ನೋಡುತ್ತಿದ್ದೆನು. ಸ್ತ್ರೀಯರನ್ನು ಕಂಡಕೂಡಲೆ ನನ್ನ ಮುಖವನ್ನು ವಿನಯದಿಂದ ತಗ್ಗಿಸುತ್ತಿದ್ದೆನು. ಏಕೆಂದರೆ ನನ್ನ ಕನ್ನಡಿಯಲ್ಲಿಯ ಮೋರೆ ಪುರುಷನದಲ್ಲವೇ ?

(೩)

ಈ ತರದ ನಿರಾಶೆಯಲ್ಲಿ ಒಂದು ತಿಂಗಳು ಕಳೆದು ಹೋಯಿತು. ಎಂತಹ ಪ್ರಸಂಗ ಬಂದರೂ ಅದನ್ನು ಚೆನ್ನಾಗಿ ಎದುರಿಸಬೇಕೆಂದು ನನ್ನ ಕೋಟಿನ ಜೇಬಿನಲ್ಲಿ ನಾನು ಯಾವಾಗಲೂ ಆರುನೂರು ರೂಪಾಯಿಗಳ ‘ ಕರನ್ಸೀ ನೋಟುಗಳನ್ನು ’ ಕಾದಿಟ್ಟಿದ್ದೆನು. ಒಂದು ದಿನ ಮುಂಜಾನೆ ನಮ್ಮೂರ ದಂಡಿನಲ್ಲಿ (Camp) ನಾನು ತಿರುಗಾಡುತ್ತಿರುವಾಗ, ನನಗೆ ಬೇಕಾದ ಮೋರೆಯ ಮನುಷ್ಯನು “ ಮಣಿಲಾಲ್ ಪೀತಾಂಬರದಾಸ ” ಅವರ ಅಂಗಡಿಯಲ್ಲಿ, ತನ್ನ ಹೆಂಡಿರು-ಮಕ್ಕಳೊಡನೆ ನಿಂತಿದ್ದನ್ನು ನಾನು ಕಂಡೆನು. ಏನು ವಿಚಿತ್ರ! ಅವೇ ಕಣ್ಣು ; ಅವೇ ಹುಬ್ಬು ; ಅದೇ ಮೂಗು ! ಆ ಚೂಪಾದ ಗದ್ದ, ಆ ನಗೆಮುಖ, ಆ ತಿಲಕ, ಆ ಮುಂಡಾಸ—ಎಲ್ಲ ಅವೇ !!! ಆ ಕನ್ನಡಿಯಲ್ಲಿಯ ಮೋರೆಯೇ !! ಈ ನಿಕಟಸಾದೃಶ್ಯವನ್ನು ನೋಡಿ ನಾನು ಆಶ್ಚರ್ಯಚಕಿತನಾದೆನು ; ಎವೆಯಿಕ್ಕದೆ ಆ ಮನುಷ್ಯನನ್ನು ನೋಡುತ್ತ ನಿಂತೆನು ! ನನ್ನ ಪ್ರಯತ್ನಕ್ಕೆ ಜಯದೊರೆಯಿತು. ನನ್ನ ಮನಸ್ಸಿನಲ್ಲಿಯ ಅಶಾಂತಿಯು ಶಾಂತವಾಗಿ, ನಾನು ಆನಂದಪರವಶನಾದೆನು. ನನ್ನ ಬೇಟೆಯು ಕೊನೆಗೆ ನನ್ನ ಕೈಸೇರಿತೆಂದು, ನನ್ನಲ್ಲಿ ಒಂದು ತರದ ಸಂಭ್ರಮವುಂಟಾಯಿತು. ನಾನು ಈ ರೀತಿಯಾಗಿ ಸಂತೋಷಪಡುವಷ್ಟರಲ್ಲಿ ಆ ಗೃಹಸ್ಥನು ಒಂದು ಟ್ಯಾಕ್ಸಿಯಲ್ಲಿ ಕುಳಿತು ಹೊರಟನು. “ ಅಯ್ಯೋ, ಇದೇನು ? ಕೈಗೆ ಬಂದ ತುತ್ತು ಬಾಯಿಗೆ ಬರಬಾರದೆ ? ಅಹಹಾ! ನನ್ನ ದುರದೃಷ್ಟ !! ” ಎಂದುಕೊಂಡು ನಾನು ಖಿನ್ನನಾದೆನು. ಆದರೂ ನಾನು ಹಿಂಜರಿಯಲಿಲ್ಲ. ನಾನೂ ಒಬ್ಬ ಬಾಡಿಗೆಯ ಟ್ಯಾಕ್ಸಿಯವನನ್ನು ಕರೆದು, “ ಹೂಂ, ಹೊಡೆ, ಗಾಡಿಯನ್ನು ಜೋರಿನಿಂದ ಓಡಿಸು ! ” ಎಂದೆನು. ಆ ಟ್ಯಾಕ್ಸಿಯವನು “ ಎಲ್ಲಿಗೆ ರಾಯರೇs, ಬಾಡ್ಗೀ ಗೊತ್ತುಮಾಡ್ರೀ, ಅಪ್ಪಾ ! ” ಎಂದನು. “ ಎಲೇ ಪೆದ್ದಾ, ಕುಂಭಾ, ಎಬಡ ನನ್ನ ಮಗನೇ, ಹೆಚ್ಚು ಮಾತಾಡಬೇಡ ! ಆ ಮುಂದೋಡುವ ಟ್ಯಾಕ್ಸಿಯನ್ನು ಬೆನ್ನಟ್ಟು! ನಿನಗೆ ರೊಕ್ಕದ ಚಿಂತೆಯಾಕೆ ? ನಾನು ನೀನು ಬೇಡಿದಷ್ಟು ಹಣಕೊಡುವೆನು ! ಹೂಂ ಹೊಡಿ ! ” ಎಂದು ನಾನು ಗದರಿಸಿದೆನು. ಜೂಜಿನ ಕುದುರೆಗಳಂತೆ ಅವೆರಡೂ ಟ್ಯಾಕ್ಸಿಗಳು ಭರಭರಾಟದಿಂದ ಓಡಲಾರಂಭಿಸಿದುವು. ರೇಲ್ವೆ ನಿಲ್ದಾಣಕ್ಕೆ ಆ ಟ್ಯಾಕ್ಸಿ ತಲ್ಪಿದೊಡನೆ, ಆ ಗೃಹಸ್ಥನು ಟ್ಯಾಕ್ಸಿಯಿಂದಿಳಿದು ಗುಂತಕಲ್ ಪ್ಯಾಸೆಂಜರಿನಲ್ಲಿ ಕುಳಿತನು. ನಾನಾದರೂ ಅದೇ ರೈಲಿನ ಟಿಕೀಟು ಕೊಂಡುಕೊಂಡು, ಆ ಮನುಷ್ಯನ ಮಗ್ಗಲಿನ ಡಬ್ಬಿಯಲ್ಲಿ ಸೇರಿದೆನು. ಆ ಗೃಹಸ್ಥನು ಗದುಗಿನ ಸ್ಟೇಶನಿನಲ್ಲಿ ಗುಂತಕಲ್ ಪ್ಯಾಸೆಂಜರಿನಿಂದಿಳಿದು ಸೊಲ್ಲಾಪುರ ಮೇಲಿನಲ್ಲಿ ಸೇರಿದನು. ನಾನೂ ಸೊಲ್ಲಾಪುರ ಮೇಲಿನಲ್ಲಿ ಹೊಕ್ಕೆನು ! ಮಧ್ಯಮಧ್ಯೆ, ಸ್ಟೇಶನಿನಲ್ಲಿ ರೈಲು ನಿಂತಾಗ, ನಾನು ಕೆಳಗಿಳಿದು ಆವನ ಮೋರೆಯನ್ನು ಸೂಕ್ಷ್ಮವಾಗಿ ಪರೀಕ್ಷಿಸುತ್ತಿದ್ದೆನು. ಹುಟಗಿ ಸ್ಟೇಶನಿನಲ್ಲಿ ಅವನು, ಬೊಂಬಾಯಿ ಕಡೆಗೆ ಹೋಗುವ ಮದ್ರಾಸ್ ಎಕ್ಸಪ್ರೆಸ್ಸಿನಲ್ಲಿ ಸೇರಿದನು. ನಾನಾದರೂ ಹಾಗೆಯೆ ಮಾಡಿಬಿಟ್ಟೆನು. ರೈಲು ಪೂನಾ ಸ್ಟೇಶನಿಗೆ ಬರಲು ಆವನು ಬಾಂಬೇ ಮೇಲಿನಲ್ಲಿ ಸೇರಿದನು. ನಾನೂ ಆವನ ಹಿಂದೆಯೆ ಹೊರಟೆನು ! ಬೋರೀಬಂದರ ಸ್ಟೇಶನಿಗೆ ನಮ್ಮ ರೈಲು ತಲ್ಪಲು, ಅವನು ರೈಲಿನಿಂದಿಳಿದು, ಒಂದು ಟ್ಯಾಕ್ಸಿಯಲ್ಲಿ ಕುಳಿತು “ ತಾಜಮಹಾಲ್ ಹೋಟಲ್ಲಿಗೆ ಸಾಗು ! ” ಎಂದು ಟ್ಯಾಕ್ಸಿಯವನಿಗೆ ಆಜ್ಞಾಪಿಸಿದನು. ನಾನು ಮತ್ತೊಂದು ಟ್ಯಾಕ್ಸಿಯಲ್ಲಿ ಕುಳಿತು ಅವನನ್ನು ಬೆನ್ನಟ್ಟಿದೆನು ! ನನ್ನ ಹುಚ್ಚು

ತಲೆಗೇರಿ ಬಿಟ್ಟಿತ್ತು! ನಾನು ತಾಜಮಹಾಲ್ ಹೋಟೆಲ್ಲಿಗೆ ಹೋಗಿ, ಪ್ರತಿದಿನಕ್ಕೆ ಹದಿನೈದು ರೂಪಾಯಿಯಂತೆ ಗೊತ್ತುಮಾಡಿ, ಅವನ ಪಕ್ಕದ ಕೋಣೆಯಲ್ಲಿಯೇ ನಿಂತೆನು. ಅವನು ಯಾವ ಮಹಾಪುರುಷನಿರಬಹುದೆಂಬುದನ್ನರಿತುಕೊಂಡು, ಅವನೊಡನೆ ಒಂದೆರಡು ಮಾತನಾಡುವುದಷ್ಟೇ ನನ್ನ ಆಶೆ- ಆಕಾಂಕ್ಷೆ-ಯಾಗಿತ್ತು. ತನ್ನ ಕೋಣೆಯ ಮುಂದಿನ 'ಬಾಲ್ಕನಿ' ಯ ಮೇಲೆ ಅವನು ಬಂದು, ಸಮುದ್ರದ ವಿಶಾಲತೆಯನ್ನೂ, ಗಾಂಭೀರ್ಯವನ್ನೂ, ಸೌಂದರ್ಯವನ್ನೂ ನೋಡುತ್ತ ನಿಂತನು. ಅವನೊಡನೆ ನಾನು ಮಾತನಾಡಬೇಕೆಂಬುವಷ್ಟರಲ್ಲಿ ಅವನ ಪತ್ನಿ, ಪುತ್ರ-ಪುತ್ರಿಯರು ಬಂದು ಅವನ ಸುತ್ತಲೂ ನಿಂತು-ಬಿಟ್ಟರು!! ಬಳಿಕ ಅರ್ಧಘಂಟೆಯೊಳಗಾಗಿ ಅವನು ತನ್ನ ಚಿಕ್ಕ ಮಗಳೊಡನೆ ಮತ್ತೊಮ್ಮೆ ಬಾಲ್ಕನಿಯ ಮೇಲೆ ಬಂದು ನಿಂತನು. ನನ್ನ ಮೈ ಜುಮುರಿತು; ಮೋರೆಯ ಮೇಲೆ ಹುಚ್ಚು ಕಳೆ ಸುರಿ-ಯುತ್ತಿತ್ತು; ಅವನು ಏನೆನ್ನುವನೋ ಎಂದು ನನ್ನ ಎದೆ 'ಡವ-ಡವ' ಎನ್ನುತ್ತಿತ್ತು. ಆದರೂ ಕೊಂಚ ಧೈರ್ಯಮಾಡಿ ಅವನ ಹತ್ತಿರ ಹೋಗಿ "ಶೇಟಜೀ ಸಾಹೇಬರೇ, ತಾವು ದಯೆಯಿಟ್ಟು ನನಗೆ ತಮ್ಮ ವ್ಹಿಜಿಟಿಂಗ್ ಕಾರ್ಡನ್ನು (Visiting Card) ಕೊಡುವಿರೇನು?" ಎಂದು ಬಿನ್ನವಿಸಿದೆನು. ಅವನು ಕಿರುನಗು ನಗುತ್ತ, ನಾನು ಕೇವಲ ಹುಚ್ಚನಿರಬೇಕೆಂದೇ ಯೋಚಿಸಿ, ಒಂದು ಕಾರ್ಡನ್ನು ನನ್ನ ಕೈಯಲ್ಲಿಟ್ಟು, ತನ್ನ ಕೋಣೆಯೊಳಗೆ ಹೋದನು. ಆ ಕಾರ್ಡಿನ ಮೇಲಿನ ಹೆಸರನ್ನೂ ವಿಳಾಸವನ್ನೂ ನಾನು ಓದಿ ನೋಡಿದೆನು. ನಾನು ಇಷ್ಟು ಪ್ರಯಾಸಪಟ್ಟು ಬೆನ್ನಟ್ಟಿದ ಮನು-ಷ್ಯನು ಸಾಮಾನ್ಯ ಪುರುಷನಿರಲಿಲ್ಲ; ಅವನು "ಪುರುಷೋತ್ತಮ-ದಾಸ ಘನಶ್ಯಾಮ ಗಗಲಭಾಯ, ಕೆ. ಸಿ. ಎಸ್. ಆಯ್. ಕಲಕತ್ತಾ" ಎಂಬವನು! ಇವನು ಕೋಟ್ಯಾಧೀಶನು!!! ಇವನು ಹಿಂದುಸ್ತಾನದಲ್ಲಿಯ ಅನೇಕ ಗಿರಣಿ, ಕಾರಖಾನೆ, ಬ್ಯಾಂಕು-ಗಳ ಡಾಯರೆಕ್ಟರನಾಗಿದ್ದವನು!

(೪)

ಆ ಕೋಟ್ಯಧೀಶನ ಕಾರ್ಡನ್ನು ತೆಗೆದುಕೊಂಡು ನಾನು ನಮ್ಮೂರಿಗೆ ಹಿಂದಿರುಗಿದೆನು. ನಾನು ನಮ್ಮೂರಿಗೆ ಬಂದು ಒಂದು ವಾರ ಆಗಿರಬಹುದು. ಒಂದು ದಿನ ಆ ಕನ್ನಡಿಯಲ್ಲಿಯ ಮೋರೆ-ಯನ್ನು ನಾನು ನೋಡಿದೆನು. ಅದು ಸ್ವಲ್ಪ ಮಸುಕಾಗಿತ್ತು; ಕಣ್ಣು ಮುಚ್ಚಿದಂತಾಗಿದ್ದವು. ಗದ್ದದ ಹತ್ತಿರ ಒಂದು ತೂತು ಬಿದ್ದಂತಾಗಿತ್ತು; ಬಾಯಿ ಸೊಟ್ಟಾಗಿತ್ತು!! ಈ ಆಕಸ್ಮಿಕ ಬದ-ಲಾವಣೆಯ ಕಾರಣವನ್ನು ನಾನರಿಯಲಿಲ್ಲ. ಇಷ್ಟರಲ್ಲಿಯೆ ನನ್ನ ಜವಾನನು ಆ ದಿನದ ಮುಂಜಾವಿನ ವೃತ್ತಪತ್ರವನ್ನು ತಂದು ನನ್ನ ಮುಂದಿಟ್ಟನು. ಮೊದಲನೆಯ ಪುಟದ ಮೇಲೆಯೆ, ವಿಲಕ್ಷಣ ದಪ್ಪಕ್ಷರಗಳಿಂದ ಬರೆದ ತಲೆಬರೆಹ: "ಪುರುಷೋತ್ತಮದಾಸ ಘನಶ್ಯಾಮ ಗಗಲಭಾಯ. ಇವರಿಗೆ ಮೋಟರ ಅಪ-ಘಾತ!—" ಸರ್ವ ವೃತ್ತಾಂತವನ್ನೂ ನಾನು ಶಾಂತಚಿತ್ತದಿಂದ ಓದಿ ನೋಡಿದೆನು. ಮೋಟರ್ ಅಪಘಾತದಲ್ಲಿ ಪುರುಷೋತ್ತಮ-ದಾಸ ಶೇಟರು ವಿಶೇಷ ಗಾಯಕ್ಕೆ ಗುರಿಯಾಗಿದ್ದರು! ಅವರನ್ನು ಜಿ. ಟಿ. ಎಮ್. ಆಸ್ಪತ್ರೆಯಲ್ಲಿ ಔಷಧೋಪಚಾರಕ್ಕಾಗಿ ಇಟ್ಟಿ-ದ್ದರು! ಅವರ ಮೇಲೆ ಶಸ್ತ್ರಕ್ರಿಯೆ ಮಾಡಲಾಗಬಹುದೆಂದೂ ಅದೇ ವೃತ್ತಪತ್ರದಲ್ಲಿ ಬರೆದಿದ್ದಿತು. ಪ್ರತಿದಿನ ನಾನು ಆ ಕನ್ನಡಿಯಲ್ಲಿಯ ಮೋರೆಯನ್ನು ನೋಡುತ್ತಲೇ ಇದ್ದೆ. ಅವರಿಗೆ ಅಪಘಾತವಾದ ಮೂರನೆಯ ದಿನ, ನಾನು ನಿತ್ಯದಂತೆ ಕನ್ನಡಿಯಲ್ಲಿ ನೋಡಿದೆನು; ಆ ಮೋರೆಯು ಮಾಯವಾಗಿ ಬಿಟ್ಟಿತ್ತು!!! ನಾನು ವಿಸ್ಮಿತ-ನಾದೆನು. ಆ ದಿನದ ವೃತ್ತಪತ್ರವನ್ನೋದಿ ನೋಡಿದೆನು. ಮೊದಲ-ನೆಯ ಪುಟದ ಮೇಲೆಯೆ "**ಪುರುಷೋತ್ತಮದಾಸ ಶೇಟರ ಮರಣ**" ಎಂದು ದಪ್ಪಕ್ಷರದಲ್ಲಿ ಛಾಪಿಸಿದ್ದರು. ಪಾಪ! ಶಸ್ತ್ರ-ಕ್ರಿಯೆಯು ಯಶಸ್ವಿಯಾಗದೆ ಪುರುಷೋತ್ತಮದಾಸರು 'ಆಪ-ರೇಶನ್ ಟೇಬಲ್ (Operation Table)' ಮೇಲೆಯೆ ಮೃತ-ರಾದರಂತೆ!!! ಈ ವಾರ್ತೆಯನ್ನೋದಿ ನನ್ನ ಮನಸ್ಸಿಗುಂಟಾದ ಖೇದವನ್ನು ಸಹಿಸಲಾರದೆ, ನಾನು ಕಂಬನಿಗರೆಯುತ್ತ ಕುಳಿತೆನು. ಪುರುಷೋತ್ತಮದಾಸರ ಮೋರೆಯ ಚಿತ್ರವು ಅಚ್ಚಳಿಯದೆ ನನ್ನ ಕಣ್ಣಮುಂದೆ ನಿಂತಂತೆ ಭಾಸವಾಯಿತು!

ನನ್ನ ಕನ್ನಡಿಯಲ್ಲಿಯ ಮೋರೆಗೂ ಪುರುಷೋತ್ತಮದಾಸ ಶೇಟರಿಗೂ ಇದ್ದ ನಿಕಟಸಂಬಂಧದ ಕಾರಣವನ್ನು ನಾನಂತೂ ತಿಳಿಯಲಾರೆ. ಅವರಿಗೆ ಮೋಟಾರ್ ಅಪಘಾತದಿಂದ ಗಾಯ-ವಾಗಲು, ನನ್ನ ಕನ್ನಡಿಯಲ್ಲಿ ಮೋರೆಯು ನಿಸ್ತೇಜವಾಗಿ ಗಾಯ-ವಾದಂತೆ ಯಾಕೆ ಕಾಣಬೇಕು? ಆ ಶೇಟಸಾಹೇಬರು ಮೃತ-ರಾದೊಡನೆ, ನನ್ನ ಕನ್ನಡಿಯಲ್ಲಿಯ ಮೋರೆಯು ಒಮ್ಮಿಂದೊಮ್ಮೆ ಅದೃಶ್ಯವಾದಂತೆ ಯಾಕೆ ಕಾಣಬೇಕು? ವಿಜ್ಞಾನಶಾಸ್ತ್ರಜ್ಞರೇ ಈ ವಿಚಿತ್ರ ಚಮತ್ಕಾರದ ಗೂಢವನ್ನು ಕಂಡುಹಿಡಿಯಬಲ್ಲರು!

ಶರಣಸಂದೇಶ

(ವಾರಪತ್ರಿಕೆ)

ಸಂಪಾದಕರು : ಶ್ರೀ. ಹರ್ಡೇಕರ್ ಮಂಜಪ್ಪನವರು

ಹಿಂದೂ ಸಂಘಟನೆಯ ಗುರಿಯನ್ನಿಟ್ಟುಕೊಂಡು ಯಶಸ್ವಿಯಾಗಿ ಕಾರ್ಯಮಾಡುತ್ತಿರುವ ಕನ್ನಡ ವೃತ್ತಪತ್ರಿಕೆಯೆಂದರೆ ಇದೊಂದೆ. ದೇಶ-ವಿದೇಶದ ವರ್ತಮಾನಗಳನ್ನೂ ವಿಚಾರಪೂರ್ಣ ಲೇಖನಗಳನ್ನೂ ಇದರಲ್ಲಿ ಓದಬಹುದು.

ವಾರ್ಷಿಕವರ್ಗಣಿ ಅಂಚೆವೆಚ್ಚ ಸೇರಿ ೩-೦-೦ ಗಳು.

'ಶರಣಸಂದೇಶ'

ಪೋಸ್ಟ್ : ಆಲಮಟ್ಟಿ, ಜಿಲ್ಲಾ : ವಿಜಾಪೂರ.

ಭಾರತೀಯ ಸಂಸ್ಕೃತಿಯು ಆಧ್ಯಾತ್ಮಿಕವಲ್ಲವೆ?

(ವಿಚಾರ ಚರ್ಚೆ)

ಶ್ರೀ. ಗ. ರಾ. ಹೆಗಡೆ, ಹೊನ್ನಗದ್ದೆ

★

‘ ಭಾರತೀಯ ಸಂಸ್ಕೃತಿ ’ ಎಂದರೆ ‘ ಯಾರ ಸಂಸ್ಕೃತಿ ? ’ ಎಂದು ಕೇಳುವ ಕಾರಣವಿಲ್ಲ. ಭಾರತೀಯ ಸಂಸ್ಕೃತಿ ಆಧ್ಯಾತ್ಮಿಕವೆಂಬುದರಲ್ಲಿ ಸಂಶಯವಿಲ್ಲ. ಆಧ್ಯಾತ್ಮಿಕ ಸಂಸ್ಕೃತಿ ಶ್ರೇಷ್ಠವೋ ಅಲ್ಲವೋ ಎಂಬುದು ಪ್ರಸ್ತುತ ವಿಷಯವಲ್ಲ!

★

ಮೇ ತಿಂಗಳ ‘ಜಯಂತಿ’ಯಲ್ಲಿ ಶ್ರೀ. ಗೌರೀಶ ಕಾಯ್ಕಿಣಿಯವರು ‘ ಭಾರತೀಯ ಸಂಸ್ಕೃತಿಯು ಆಧ್ಯಾತ್ಮಿಕವೇಕಲ್ಲ?’ ಎಂಬುದನ್ನು ಒಂದು ದೃಷ್ಟಿಯಿಂದ ನೋಡಿ, ತಿಳಿಸಿದ್ದಾರೆ. ಅವರ ಆ ಲೇಖನವನ್ನು ಕೂಲಂಕಷವಾಗಿ ಪರಿಶೀಲಿಸಿದರೆ, ಅವರ ಅಲ್ಲಿಯ ದೃಷ್ಟಿಯು ಸಂಕುಚಿತವಾಗಿರುತ್ತದೆಂದು ಹೊಳೆಯದಿರಲಾರದು. ‘ ಸಂಕುಚಿತ ’ ಈ ಶಬ್ದವನ್ನು ನಾನು ಕೇವಲ ‘ ವಿಶಾಲವಲ್ಲದ ’ಎಂಬರ್ಥದಲ್ಲಿ ಉಪಯೋಗಿಸುತ್ತಿಲ್ಲ. ಸತ್ಯವು ಅನೇಕ ರೂಪಿಯಾಗಿರುತ್ತದೆ. ಆ ಅನೇಕ ರೂಪಗಳಲ್ಲಿ ಒಬ್ಬನೇ ಎಲ್ಲವುಗಳನ್ನೂ ಕಂಡು ತಿಳಿದುಕೊಳ್ಳುವುದು ದುಸ್ಸಾಧ್ಯ. ಶ್ರೀ. ಕಾಯ್ಕಿಣಿಯವರಿಗಾದರೂ ಅದು ಸಾಧ್ಯವಾಗಿಲ್ಲವೆಂದು ನನ್ನ ಮತ. ಈ ಅರ್ಥದಿಂದೇಲೆ ‘ ಸಂಕುಚಿತ ’ ಶಬ್ದವನ್ನು ಉಪಯೋಗಿಸಿದ್ದೇನೆ. ಶ್ರೀಯುತರು ಭಾರತೀಯ ಜನಜೀವನದೊಳಗಿನ ಕೊಳಕುಗಳನ್ನು ಅತಿ ಪರಿಶ್ರಮದಿಂದ ಆರಿಸಿ, ಎತ್ತಿ ತೋರಿಸಿದ್ದಾರೆ. ಹೀಗೆ ಮಾಡಬೇಕಾದಾಗ, ಪಾಶ್ಚಾತ್ಯರಲ್ಲಿಯೂ ನಾವು ಹೇಳಿಕೊಳ್ಳುವ ಆಧ್ಯಾತ್ಮಿಕತೆಯು ಬೇಕಷ್ಟಿದೆ ಎಂದು ಸಿದ್ಧ ಮಾಡಲು ಯತ್ನಿಸಿದ್ದಾರೆ. ಇದರಿಂದಾಗಿ ತಮ್ಮದೇ ಆದ ಒಂದು ಗುರಿಯನ್ನು ಮುಟ್ಟಿದ್ದಾರೆ. ಅವರ “ ಭಾರತೀಯ ಸಂಸ್ಕೃತಿಯು ಆಧ್ಯಾತ್ಮಿಕವೆ ? ” ಎಂಬ ಪ್ರಶ್ನೆಗೆ ಅವರ ಉತ್ತರದಿಂದ ಭಿನ್ನವಾದ ಉತ್ತರವನ್ನು ಕೊಡಲು ಸಹಜ ಸಾಧ್ಯವಿದೆ ಎಂದು ತೋರಿಸುವುದೇ ನನ್ನ ಈ ಲೇಖನದ ಉದ್ದೇಶ.

ಶ್ರೀಯುತರು ಎರಡು ಪ್ರಶ್ನೆಗಳನ್ನು ಕೇಳಿದ್ದಾರೆ. ಮೊದಲನೆಯದೆಂದರೆ “ ಭಾರತೀಯ ಸಂಸ್ಕೃತಿಯೆಂದರೆ ಯಾರ ಸಂಸ್ಕೃತಿ ? ಯಾರದೂ ಅಲ್ಲ ! ” ಎಂದು ತಮ್ಮ ಅಭಿಪ್ರಾಯವನ್ನು ತೋರಿಸಿದ್ದಾರೆ. ಈ ಪ್ರಶ್ನೆಯಲ್ಲಿಯೇ ಉತ್ತರವು ಅಡಕವಾಗಿರುವಾಗ, ಅದರ ಉತ್ತರವನ್ನು ಬೇರೆ ಕಡೆಯಲ್ಲಿ ನಿರೀಕ್ಷಿಸುವುದು ಸಮಂಜಸವಾಗಲಾರದು. ‘ಭಾರತೀಯ ಸಂಸ್ಕೃತಿಯೆಂದರೆ ಭಾರತೀಯರದು ! ’ ಎಂದು ಸಹಜವಾಗಿ ಯಾರಾದರೂ ಹೇಳಬಹುದು. ಅದು ಕೇವಲ ಆರ್ಯರದೂ ಅಲ್ಲ, ದ್ರಾವಿಡರದೂ ಅಲ್ಲ, (ಅಚ್ಚ ಆರ್ಯರೂ, ಶುದ್ಧ ದ್ರಾವಿಡರೂ ಈಗೆಷ್ಟು ಮಂದಿ ಇದ್ದಾರೆ ?) ಹಿಂದುಗಳದೂ ಅಲ್ಲ, ಮುಸಲ್ಮಾನರದೂ ಅಲ್ಲ ; ಆದರೆ ಎಲ್ಲ ಧರ್ಮದವರಿಗೂ, ಜಾತಿ-ಪಂಥಗಳವರಿಗೂ, ವಿವಿಧ ವರ್ಣದವರಿಗೂ ಸಾಮಾನ್ಯವಾಗಿದೆ. ದಕ್ಷಿಣದ ಹಿಂದುಗಳು ಸಂಕಟ ಬಂದಾಗ ‘ ವೆಂಕಟರಮಣಾ ’ ಎಂದರೆ, ಉತ್ತರದವರು ‘ ಅರೇ ಭಗವಾನ್ ’ ಎಂದರೆ, ಎಲ್ಲ ಕಡೆಯ ಮುಸಲ್ಮಾನರೂ ‘ ಯಾ ಅಲ್ಲಾ ’ ಎಂದರೆ— ಅವರವರ ಭಾಷಾಭೇದಗಳಿಂದ ಸಂಸ್ಕೃತಿಭೇದವನ್ನು ಕಲ್ಪಿಸಲಾಗುವುದಿಲ್ಲ. ಸಂಸ್ಕೃತಿಯು ಭಾವನಾತೀತವಾಗಿರದೆ ಭಾಷಾತೀತವೂ ಸ್ಥಾನಾತೀತವೂ ಆಗಿದೆ. ಆಸೇತುಹಿಮಾಚಲದವರೆಗೂ ಎಲ್ಲಿ ಹೋದರೂ ಯಾವ್ವೊಬ್ಬನಿಗೂ ತಾನು ಭಾರತದಲ್ಲಿಯೆ ಇದ್ದೇನೆಂದು—ಕೇವಲ ಭೌಗೋಲಿಕವಾಗಿ ಅಲ್ಲ—ಎನಿಸುವುದು. ಈ ಮಾತನ್ನು ಭಾರತೀಯರಲ್ಲದ ಆಂಗ್ಲ, ಅಮೇರಿಕೆಯ ಪ್ರವಾಸಿಕರನೇಕರು ಒಪ್ಪಿಕೊಂಡಿದ್ದಾರೆ.

ಅಖಂಡ ಭಾರತದಲ್ಲೂ ಕಾಣಬರುವ ಈ ‘ಭಾರತೀಯತೆ’ಯ ಗುಟ್ಟೇನು ?—ಈ ಪ್ರಶ್ನೆಗೆ ಸಾಹಜಿಕವಾದ, ಸಮಂಜಸವಾದ ಉತ್ತರವೆಂದರೆ, “ ಭಾರತೀಯ ಸಂಸ್ಕೃತಿ ! ” ‘ಸಂಸ್ಕೃತಿ’ಎಂಬ ಶಬ್ದದ ವ್ಯಾಖ್ಯೆಯನ್ನು ಕಟ್ಟುನಿಟ್ಟಾಗಿ ಮಾಡುವವನು ಗಟ್ಟಿಗನೇ ಸರಿ. ಆದರೆ ಒಂದು ಮಾತನ್ನು ಹೇಳಬಹುದು: ‘ಸಂಸ್ಕೃತಿ’ಯಲ್ಲಿ ಅಡಕವಾಗಿರುವ ಅನೇಕ ವಿಷಯಗಳಲ್ಲಿ ಅತಿ ಪ್ರಾಧಾನ್ಯವಾದುವುಗಳೆಂದರೆ— ಜನತೆಯು ಜೀವನವನ್ನು ನೋಡುವ ದೃಷ್ಟಿ, ನೀತಿ-ನಡಾವಳಿಗಳು, ರೀತಿ-ರೂಢಿಗಳು. ಧರ್ಮ ಹಾಗೂ ಸಂಸ್ಕೃತಿ ಇವೆರಡೂ ಭಿನ್ನವಾದುವುಗಳು. ಧರ್ಮದ ನೆರಳು

ಸಂಸ್ಕೃತಿಯು ಮೇಲೆ ತೋರಿಕೊಳ್ಳಬಹುದು. ಆದರೆ ಧರ್ಮವೇ ಸಂಸ್ಕೃತಿಯನ್ನು ಸಂಪೂರ್ಣವಾಗಿ ಆವರಿಸಲಾಗದು; ಹಾಗಾದಲ್ಲಿ ಅದಕ್ಕೆ ಸಂಸ್ಕೃತಿಯೆಂದು ಹೇಳಲಾಗುವುದಿಲ್ಲ.

ಈ ಮಾತನ್ನು ಒಪ್ಪಿಕೊಂಡರೆ 'ಹಿಂದುಸ್ತಾನದಲ್ಲಿರುವ ವಿವಿಧ ಧರ್ಮಗಳ ಅಸ್ತಿತ್ವದಿಂದ ಸಂಸ್ಕೃತಿಯು ಸಹ ವಿವಿಧರೂಪಿಯಾಗಿದೆ' ಎಂದು ಹೇಳುವುದು ಸಮಂಜಸವಲ್ಲವೆಂದು ಒಪ್ಪಿಕೊಳ್ಳಬೇಕಾಗುತ್ತದೆ. ನಾವು ಅನೇಕ ಸಾರಿ, ವರ್ತಮಾನಪತ್ರಗಳಲ್ಲಿ, ಹಿಂದೂ-ಮುಸಲ್ಮಾನರ ದಂಗೆಯಾದುದನ್ನು ಓದುತ್ತೇವೆ. ಇದರಿಂದಾಗಿ 'ಹಿಂದೂ-ಮುಸಲ್ಮಾನರು ಒಟ್ಟಾಗಿ ಒಂದೆಡೆಯಲ್ಲಿ ಇರಲು ಅಸಾಧ್ಯ' ಎಂದು ನಾವು ನಿರ್ಣಯಿಸಲಾಗುವುದಿಲ್ಲ. ಏಕೆಂದರೆ ವರ್ತಮಾನಪತ್ರಗಳು ಸಾಮಾನ್ಯವಾಗಿ ಅಸಾಮಾನ್ಯವಾದ ಆಗು-ಹೋಗುಗಳನ್ನೆಲ್ಲ ತಿಳಿಸುತ್ತಿರುತ್ತವೆ. ಅಸಾಮಾನ್ಯವಾದುವುಗಳೇ ಸಾಮಾನ್ಯವಾದುವೆಂದು ತಿಳಿದರೆ ವಸ್ತುಸ್ಥಿತಿಯು ವಿಪರ್ಯಾಸವಾಗುವುದು. ಇಂತಹ ಸಂಗತಿಗಳಲ್ಲಿ ತನ್ನ 'ಪರಿಮಾಣದೃಷ್ಟಿ (sense of proportion)' ಯನ್ನು ಕಾಯ್ದುಕೊಳ್ಳುವುದು ಬಲ್ಲಿದರಿಗೆ ಸಹ ಕಷ್ಟಸಾಧ್ಯವಾದುದೆಂಬುದು ನಿಜ; ಆದರೆ ಅದನ್ನು ಕಾಯ್ದುಕೊಳ್ಳುವುದು ಅತ್ಯಂತ ಆವಶ್ಯಕವಾಗಿದೆ. ಆದುದರಿಂದ ನಾವು ಒಂದು ಮಾತನ್ನು ನೆನಪಿನಲ್ಲಿಟ್ಟುಕೊಂಡಿರಬೇಕು. ಹತ್ತಿಪ್ಪತ್ತು, ನೂರಿನ್ನೂರು, ಸಾವಿರೆರಡು ಸಾವಿರ ಹಿಂದೂ-ಮುಸಲ್ಮಾನರು—ಕೆಲವು ಸ್ವ-ಪ್ರತಿಷ್ಠೆಗಾಗಿ ಹೆಣಗುತ್ತಿರುವ ಕುಹಕ ಕುಹೋದ್ಯೋಗಾರರಿಂದ ಕೆಣಕಿಸಲ್ಪಟ್ಟು—ಹೊಡೆದಾಡಿದರೆ, ಕೋಟ್ಯಂತರ ಹಿಂದುಗಳು, ಕೋಟಿಗಟ್ಟಲೆ ಮುಸಲ್ಮಾನರು, ಹಳ್ಳಿಗಳಲ್ಲಿ ನೆಮ್ಮದಿಯಾಗಿ ಒಂದುಗೂಡಿಕೊಂಡು ಜೀವನವನ್ನು ಸಾಗಿಸಿಕೊಂಡು ಹೋಗುತ್ತಿದ್ದಾರೆ; ಇದು ಸುಳ್ಳೆ? ಮೇಲಾಗಿ, ಧರ್ಮಭೇದದಿಂದ ಸಂಸ್ಕೃತಿಭೇದವನ್ನು ಕಲ್ಪಿಸಿಕೊಳ್ಳಲಾಗುವುದಿಲ್ಲವೆಂದು ಶ್ರೀ. ಕಾಯಕಿಣಿಯವರೇ ಒಪ್ಪಿಕೊಂಡಂತಿದೆ. ಏಕೆಂದರೆ "ಯುಕ್ತ-ಪ್ರಾಂತದ ಹಿಂದುವಿಗೆ ದಕ್ಷಿಣದ ಸಜಾತೀಯನಿಗಿಂತ ದಿಲ್ಲಿಯ ಮುಸಲ್ಮಾನನು ಹೆಚ್ಚು ಕೂಡಿ ಹೋಗುವನು," ಎಂದು ಅವರೇ ಒಪ್ಪಿಕೊಳ್ಳುತ್ತಾರೆ. ('ಇದರಲ್ಲಿ ಅಧ್ಯಾತ್ಮವೆಲ್ಲಿದೆ?' ಎಂದು ಕೇಳುವುದು ಅಪ್ರಸ್ತುತವಾಗುವುದು. ಅಧ್ಯಾತ್ಮಕ್ಕೆ ಏನೇನೂ ಸಂಬಂಧವಿಲ್ಲದ ವಿಷಯದಲ್ಲಿ 'ಅಧ್ಯಾತ್ಮವೆಲ್ಲಿದೆ?' ಎಂದು ಕೇಳಿದರೆ 'ಹುಲಿಯು ಮರಿಯು ನಾಯಿಯೇಕಲ್ಲ?' ಎಂದು ಕೇಳಿದಂತಾಗುವುದು. 'ಅ'ನು 'ಬ' ನೊಂದಿಗೆ ಕೂಡಿಕೊಂಡು ನಡೆಯುತ್ತಿದ್ದಾನೆಂದ ಕೂಡಲೆ 'ಅ' 'ಬ' ಇವರಲ್ಲಿ ಆಧ್ಯಾತ್ಮಿಕತೆಯಿದೆಯೋ ಇಲ್ಲವೋ ಎಂದು ಅಷ್ಟರಿಂದಲೇ ನಿರ್ಣಯಿಸಲಾಗಲಾರದು.)

ಧರ್ಮಭೇದದಿಂದ ಸಂಸ್ಕೃತಿಭೇದವನ್ನು ಕಲ್ಪಿಸಲಾಗನಂತೆ ಭಾಷಾಭೇದದಿಂದಲೂ ಕಲ್ಪಿಸಲಾಗುವುದಿಲ್ಲ. ಭಾಷೆಯು ಭಾವನೆಗಳನ್ನೂ ವಿಚಾರಗಳನ್ನೂ ಪ್ರಕಟೀಕರಿಸುವ ಕೇವಲ ಉಪಾಧಿಯಾಗಿದೆ. ಉತ್ತರದ ಹಿಂದುಗಳಿಗೆ ಹರಿದ್ವಾರವು ಪುಣ್ಯ-ಕ್ಷೇತ್ರವಾದಂತೆ ದಕ್ಷಿಣದವರಿಗೂ ಆಗಿದೆ. ಇವರೆಲ್ಲರ ಆಚಾರ-ವಿಚಾರಗಳು ('ಸಂಸ್ಕೃತಿ' ನಿರ್ಣಯದಲ್ಲಿ ಇವೇ ಮುಖ್ಯವಾದುವು) ಕೆಲವು ಭೌಗೋಲಿಕ ವೈಶಿಷ್ಟ್ಯಗಳನ್ನು ಬಿಟ್ಟರೆ, ಸಾಮಾನ್ಯವಾಗಿ ಒಂದೇಬಗೆಯವಾಗಿವೆ.

ಇವೆಲ್ಲದರ ತಾತ್ಪರ್ಯವೆಂದರೆ: ಭಾರತೀಯ ಸಂಸ್ಕೃತಿಯು ವಿವಿಧಭಾಗಗಳಲ್ಲಿ ಬೇರೆ ಬೇರೆ ವೈಶಿಷ್ಟ್ಯಗಳನ್ನಳವಡಿಸಿಕೊಂಡಿದ್ದರೂ—ಅಖಂಡವಾಗಿದೆ. ಒಂದಾಗಿದೆ. ಭಾರತದಲ್ಲಿ ಬಂಡವಾಳಗಾರರೆಂದೆನ್ನಿಸಿಕೊಳ್ಳಲು ಅರ್ಹರಾದವರು ಎಷ್ಟಿರಬಹುದು? ದೊಡ್ಡ ಜಮೀನ್ದಾರರೆಷ್ಟು ಮಂದಿ? ಕಾರಖಾನೆಗಳೊಡೆಯರೆಷ್ಟು? ಇವರೆಲ್ಲರನ್ನು ಕೂಡಿಸಿದರೂ, ಇವರ ಸಂಸ್ಕೃತಿಯು ಉಳಿದವರಿಗಿಂತ ತೀರ ಭಿನ್ನವಾಗಿದೆಯೆಂದರೂ, ಇವರು ಅಪವಾದಮಾತ್ರರಾಗುವಷ್ಟು ಅಲ್ಪಸಂಖ್ಯಾಕರಾಗಿದ್ದಾರೆ. ಇನ್ನು ಬುದ್ಧಿಜೀವಿಗಳ, ಆದರ್ಶವಾದಿಗಳ, ಕ್ರಾಂತಿಕಾರರ ವಿಷಯ. ಅವರೂ ಅಲ್ಪಸಂಖ್ಯಾಕರೇ ಆಗಿದ್ದರೂ, ಅವರಿಂದ ಭಾರತೀಯ ಸಂಸ್ಕೃತಿಯು ತನ್ನ ಹೆಜ್ಜೆಳವನ್ನು, ತನ್ನ ಜೀವಿತಜಾಗೃತಿಯನ್ನು ತೋರಿಸಿಕೊಳ್ಳುತ್ತದೆ. ಇಂತಹ ಕವಲುದಾರಿಗಳಿಗೆಡೆಗೊಟ್ಟು ಸಹ ತಾನು ತನ್ನ ಅಖಂಡತ್ವವನ್ನು ಕಾಯ್ದುಕೊಂಡಿದ್ದೇನೆಂದು ಅದು ಹೆಮ್ಮೆಯಿಂದ, ಹುಮ್ಮಸ್ಸಿನಿಂದ ಹೇಳಬಹುದಾಗಿದೆ.

ಇನ್ನುಳಿದ ಪ್ರಶ್ನೆಯೆಂದರೆ 'ಸಂಸ್ಕೃತಿಯು ಆಧ್ಯಾತ್ಮಿಕವಾಗಿರಬಲ್ಲುದೆ? ಅಹುದಾದರೆ ಭಾರತೀಯ ಸಂಸ್ಕೃತಿಯು ಆಧ್ಯಾತ್ಮಿಕವೆ?' ಎಂಬುದು. ಅಧ್ಯಾತ್ಮವು ಒಂದು ವಿದ್ಯೆಯೆಂಬುದು ನಿಜ. ಆದರೆ ವಿದ್ಯೆಯು ಸಂಸ್ಕೃತಿಯ ಲಕ್ಷಣಗಳಲ್ಲೊಂದಾಗಲಾರದೆಂದು ಯಾರೂ ಹೇಳಲಾರರು. ಕೇವಲ ಅಕ್ಷರವಿದ್ಯೆಯು ಹಾಗಾಗಲಾರದೆಂದು ಒಪ್ಪಿಕೊಳ್ಳಬಹುದು; ಆದರೆ ಜ್ಞಾನಾರ್ಜನೆಯೇ ಗುರಿಯಾದ ವಿದ್ಯೆಗಳಲ್ಲಿ— ಅದು ಅಧ್ಯಾತ್ಮವಾಗಿರಲಿ, ಗಣಿತವಾಗಿರಲಿ, ವೈದ್ಯಕವಾಗಿರಲಿ, ವಿಜ್ಞಾನವಾಗಿರಲಿ—

ಶಿಕ್ಷಕ ಮಿತ್ರ

ಸಂಪಾದಕರು: ಜೋಶಿ ಅರವಿಂದರಾಯರು ಬಿ.ಎ., ಬಿ.ಟಿ.

ಶಿಕ್ಷಣದ ಬಗೆಗೆ ಉಪಯುಕ್ತ ಲೇಖನಗಳುಳ್ಳ, ಪ್ರಾಥಮಿಕ ಶಿಕ್ಷಕರ ಸುಖ-ದುಃಖದ ವಿಷಯವಾಗಿ ವಿಚಾರಿಸುವ ಅತ್ಯುತ್ತಮ ಮಾಸಪತ್ರಿಕೆ.

ವಾರ್ಷಿಕ ಚಂದಾ: ೨-೮-೦

'ಶಿಕ್ಷಕ ಮಿತ್ರ' ಕಾರ್ಯಾಲಯ,

ಫುಲಬಾಗಗಲ್ಲಿ, ಬೆಳಗಾಂವಿ.

ಕನ್ನಡ ನಾಡಿನ ವೈಶ್ಯರಿಗೊಂದು ಹೆಮ್ಮೆಯ ವಿಷಯ!
ವೈಶ್ಯರ ಏಳ್ಗೆಗಾಗಿ ಹಗಲಿರುಳು ಹೋರಾಡುವ ಒಂದೇ ಒಂದು
ಪತ್ರಿಕೆಯೆಂದರೆ
ಮೈಸೂರು ವೈಶ್ಯ ಪತ್ರಿಕೆ
(ಕನ್ನಡ-ತೆಲುಗು ಮಾಸಪತ್ರಿಕೆ)
ಇದೇ ಆಗಸ್ಟ್ ತಿಂಗಳಿಗೆ ಎರಡನೆಯ ವರುಷ ಪ್ರಾರಂಭವಾಗಿದೆ.
ಎಲ್ಲರೂ ಪ್ರಯೋಜನ ಪಡೆಯಬಹುದಾದ ಅನೇಕ ವಿಷಯಗಳಿವೆ.
ವಾ. ಚಂ. ೨-೪-೦, ಬಿಡಿ ಪ್ರತಿ ೦-೪-೦.
ಮೈಸೂರು ವೈಶ್ಯಪತ್ರಿಕೆ
ವಾಸವಾಂಬಾ ಬಿಲ್ಡಿಂಗ್, ಮೈಸೂರು.

ಯಾವುದೇ ಆದರೂ ಜನಜೀವನದ ಅಂತರಂಗವನ್ನು ಹೊಕ್ಕು ಅದರ ಬಹಿರಂಗದಲ್ಲಿ ಪ್ರತಿಬಿಂಬಿತವಾಗುವಷ್ಟು ಪ್ರಾಧಾನ್ಯತೆಯನ್ನು ಪಡೆದರೆ, ಅದೇ (ಆ ವಿದ್ಯೆಯೇ) ಅಂತಹ ಜನಾಂಗದ ಸಂಸ್ಕೃತಿಯ ಲಕ್ಷಣವಾಗುವುದು. ಅಂತಹ ಸಂಸ್ಕೃತಿಯನ್ನು ನಿರ್ದೇಶಿಸಲು ಆ ವಿದ್ಯೆಯನ್ನು ವಿಶೇಷಣವನ್ನಾಗಿ ಉಪಯೋಗಿಸಲು ಏನೂ ಅಡ್ಡಿಯಿರಲಾರದು. ನಾಗಪೂಜೆಯೇ ಜೀವನದ ಅಂಗಾಂಗಗಳಲ್ಲಿಯೂ ಮನೆಮಾಡಿಕೊಂಡಿದ್ದ ಅಸಾಮದ ಆದಿವಾಸಿಗಳ ಸಂಸ್ಕೃತಿಯನ್ನು 'ನಾಗ ಸಂಸ್ಕೃತಿ'ಯೆಂದು ಕರೆಯುತ್ತಿದ್ದುದು ತಪ್ಪೆ? ಗೊಲ್ಲ ಜನರ ಸಂಸ್ಕೃತಿ 'ಗೊಲ್ಲ ಸಂಸ್ಕೃತಿ' ಎನ್ನಲು ಯಾರ ಅಡ್ಡಿಯಿದೆ? ದೊಡ್ಡ ದೊಡ್ಡ ಆಸ್ಪತ್ರೆಗಳಲ್ಲಿ ಯಾವಾಗಲೂ ದುಡಿಯುತ್ತಿರುವ, ಎಳೆವಯಸ್ಸಿನಿಂದ ಇಳಿವಯಸ್ಸಿನವರೆಗೆ ರೋಗಿಗಳ ಆರೈಕೆಯಲ್ಲಿಯೆ ಜೀವನವನ್ನು ಸವೆಯಿಸುವ ದಾದಿಗಳ— ರೋಗನಿವಾರಣೋಪಾಯವನ್ನೇ ನಿರಂತರವೂ ಧ್ಯಾನಿಸುತ್ತಿರುವ ಡಾಕ್ಟರರ— ಸಂಸ್ಕೃತಿಯನ್ನು 'ವೈದ್ಯಕ ಸಂಸ್ಕೃತಿ' ಎಂದೇಕೆ ಕರೆಯಬಾರದು? ಇದರಂತೆಯೇ 'ಗಣಿತ ಸಂಸ್ಕೃತಿ'ಯೂ, 'ಯಾಂತ್ರಿಕ ಸಂಸ್ಕೃತಿ'ಯೂ ಇರಲು ಸಾಧ್ಯವಿದೆ. **ಚಾರ್ಲಿ ಚಾಪ್ಲಿನ್‌ನ** 'ಮಾಡರ್ನ್ ಟಾಯಿಮ್ಸ್' (Modern Times) ಎಂಬ ಚಲಚ್ಚಿತ್ರವನ್ನು ನೋಡಿದವರಿಗೆ 'ಯಾಂತ್ರಿಕ ಸಂಸ್ಕೃತಿ'ಯ ಕಲ್ಪನೆಯು ಸಹಜವಾಗಿ ಒದಬಹುದು. ತಾತ್ಪರ್ಯವೆಂದರೆ: ಸಂಸ್ಕೃತಿಯು ಆಧ್ಯಾತ್ಮಿಕವಿರಲು ಸಾಧ್ಯವಿದೆ, 'ಆಧ್ಯಾತ್ಮಿಕ ಸಂಸ್ಕೃತಿ' ಎಂದಕೂಡಲೆ ಅದನ್ನು 'ವದತೋವ್ಯಾಘಾತ'ವಾಗುವ ಮಾತೆಂದು ತೆಗೆದು ಹಾಕಲಾಗಲಾರದು.

ಸಂಸ್ಕೃತಿಯು ಆಧ್ಯಾತ್ಮಿಕವಾಗಿರಲು ಸಾಧ್ಯವಿದೆ ಎಂದಮೇಲೆ 'ಭಾರತೀಯ ಸಂಸ್ಕೃತಿಯು ಆಧ್ಯಾತ್ಮಿಕವೇ?' ಎಂಬುದೊಂದೇ ಉಳಿಯಿತು. 'ಜಗತ್ತಿನಲ್ಲಿ ಯಾವುದೇ ಒಂದು ಜನಾಂಗದ ಸಂಸ್ಕೃತಿಯಾದರೂ ಆಧ್ಯಾತ್ಮಿಕವಿದ್ದಲ್ಲಿ ಆ ಸಂಸ್ಕೃತಿ ಭಾರತೀಯದು!' ಎಂದು ಯಾರಾದರೂ ಒಪ್ಪಿಕೊಳ್ಳಬೇಕಾದ ಮಾತು. ಭಾರತವು ಆಧ್ಯಾತ್ಮದ ತವರುಮನೆ. ಪಾಶ್ಚಾತ್ಯ ಸಂಸ್ಕೃತಿಯ ಮೂಲಕೇಂದ್ರವಾದ ಗ್ರೀಸದ ಸಾಕ್ರೆಟಿಸ್, ಪ್ಲೇಟೊ ಮೊದಲಾದ ಮೇಧಾವಿಗಳ ಆತ್ಮವಿವೇಚನೆಗಿಂತಲೂ ಉಪನಿಷತ್ತುಗಳಲ್ಲಿ ಕಂಡುಬರುವ ಆಧ್ಯಾತ್ಮವು ಉನ್ನತತರವಾದದ್ದೆಂಬುದನ್ನು ಯಾರೂ ಅಲ್ಲಗಳೆಯಲಾರರು. ನಚಿಕೇತನ ಕಥೆಯೇ ಇದಕ್ಕೆ ಸಾಕ್ಷಿಯಾಗಲು ಸಾಕು. ಸಾವಿರಾರು ವರ್ಷಗಳ ಹಿಂದಿನ ಸ್ಥಿತಿಯು ಇಂದಿಲ್ಲವೆಂದು ಕೆಲವರು ಮಾತನ್ನೆತ್ತಿದರೆ, ಇಂದಿನ ಭಾರತವು ಅಂದಿನ ಭಾರತಕ್ಕಿಂತ ಏನೂ ಪ್ರಗತಿ ಹೊಂದಿಲ್ಲವೆಂದು ಹಳಹಳಿಸುವವರೇನೂ ಕೊರತೆಯಿಲ್ಲ. "ಮಹಮ್ಮದೀಯರ ಮೂರ್ತಿಭಂಜಕ ಆವೇಶ ಆಕ್ರಮಣಗಳಲ್ಲಿಯೂ ಬದುಕಿ ಉಳಿದ ಈ ಪಾರಲೌಕಿಕತೆಯು, ಇಂದು ಪಾಶ್ಚಾತ್ಯ ಸಂಸ್ಕೃತಿಯ ಸ್ಪರ್ಶದಿಂದ ಹೇಗೆ ಕ್ಷಯಹೊಂದಬೇಕೇಕೆ?" ಎಂದು ಕೇಳುವವರು, ಕಣ್ಣುಮುಚ್ಚಿಕೊಂಡು ಕಲ್ಪನಾಸಾಮ್ರಾಜ್ಯದೊಳಗಿದ್ದಾರೆಯೇ ಎಂಬ ಸಂದೇಹ ಬರುತ್ತದೆ. ಏಕೆಂದರೆ ಪಾಶ್ಚಾತ್ಯ-ಭಾರತೀಯ ಸಂಸ್ಕೃತಿಗಳ ಸಂಘರ್ಷಣೆಯಿಂದಾಗಿ ಭಾರತೀಯ ಸಂಸ್ಕೃತಿಯು ನಾಮಶೇಷವಾಗಿದೆಯೆಂಬುದು ವಸ್ತುಸ್ಥಿತಿಯಲ್ಲ. ಹೆಚ್ಚೆಂದರೆ 'ನಮ್ಮ ಸಂಸ್ಕೃತಿಯು ಇಂದು ಅವಸ್ಥಾಂತರದಲ್ಲಿದೆ' ಎಂದು ಹೇಳಬಹುದು. ಆದರೆ ಅದು ಪಾರಗಾಣಲು ಅಸಾಧ್ಯವಾದ ಅವಸ್ಥಾಂತರವೆಂದು ನಾನು ಒಪ್ಪುವುದಿಲ್ಲ. ಪಾಶ್ಚಾತ್ಯ ಸಂಸ್ಕೃತಿಯ ಸಂಪರ್ಕದಿಂದ ಕೆಲಕಾಲ ಹಿಮ್ಮೆಟ್ಟಿದ್ದನ್ನು ನಿರಂತರ ನಾಶಕ್ಕೀಡಾಯಿತೆಂದು ಬಗೆಯುವುದು ಯಾವ ನ್ಯಾಯವೊ!

ಇದೆಲ್ಲದರಿಂದ ಆಧ್ಯಾತ್ಮಿಕ ಸಂಸ್ಕೃತಿಯೇ ಶ್ರೇಷ್ಠವಾದುದೆಂದು ತಿಳಿಯಲಾಗದು. 'ಅದು ಶ್ರೇಷ್ಠವೋ ಅಲ್ಲವೋ?' ಎಂಬುದು ಪ್ರಸ್ತುತ ವಿಷಯವಲ್ಲ. ಆದರೆ ಒಂದು ಮಾತನು ಹೇಳಬಹುದು. ನಮ್ಮ ಆಧ್ಯಾತ್ಮಿಕ ಸಂಸ್ಕೃತಿಯೇ ನಮ್ಮ ದಾರಿದ್ರ್ಯ-ದುರವಸ್ಥೆಗಳ ಪರಿಣಾಮವಾಗಿರದೆ, ನಮ್ಮ ದಾರಿದ್ರ್ಯ-ದುರವಸ್ಥೆಗಳೇ ಆಧ್ಯಾತ್ಮಿಕ ಸಂಸ್ಕೃತಿಯ ಪರಿಣಾಮವಾಗಿವೆ ಎನ್ನಲು ಬೇಕಷ್ಟು ಆಧಾರಗಳಿವೆ. ನಾವು ಪರಲೋಕದ ಮೇಲೆ ಕಣ್ಣಿಟ್ಟದ್ದರಿಂದಲೇ ಇಹಲೋಕವು ಕಾಣದಂತಾಗಿದೆ. ನಮ್ಮ ಕೈಲಾಗದ್ದರಿಂದ ನಾವು ದೈವವನ್ನು ನಂಬಿ ಕೂತಿದ್ದೇವೆಂಬುದು ನಿಜವಲ್ಲ. ನಾವು ದೈವವನ್ನು ನಂಬಿದ್ದರಿಂದಲೇ ದೈವವು ನಮ್ಮ ಕೈಬಿಟ್ಟಿತು. 'ಕರ್ಮಣ್ಯೇವಾಧಿಕಾರಸ್ತೇ ಮಾ ಫಲೇಷು ಕದಾಚನ' ಎಂಬುದನ್ನು ಕುರುಡುನಂಬಿಗೆಯಿಂದ ನಂಬಿ, ಅದರ ವಿಪರೀತಾರ್ಥವನ್ನಷ್ಟೇ ಬಳಕೆಯಲ್ಲಿ ತಂದು, 'ಮಾಡಿದರೂ ಅಷ್ಟೇ, ಮಾಡದಿದ್ದರೂ ಅಷ್ಟೇ!' ಎನ್ನುವ ಉದಾಸೀನವೃತ್ತಿಯನ್ನು ಕೈಕೊಂಡೆವು. ಇದೇ ಭಾರತದ ಇಂದಿನ ಐಹಿಕ ಅವನತಿಗೆ ಮುಖ್ಯ ಕಾರಣವು. ಪರಲೋಕಕ್ಕಾಗಿ ತನು-ಮನ-ಧನಗಳನ್ನು ತ್ಯಜಿಸುವುದಕ್ಕಿಂತಲೂ, ತನು-ಮನ-ಧನಗಳಿಗಾಗಿ ಪರಲೋಕದ ಆಲೋಚನೆಯನ್ನೇ ಬಿಟ್ಟುಬಿಟ್ಟರೆಯೆ ನಮ್ಮ ಆರ್ಥಿಕ ಉನ್ನತಿಯಾಗಲು ಸಾಧ್ಯವಿದೆ.

ಆದರೆ ಅರ್ಥಾರ್ಜನೆಯು ಹೆಚ್ಚೊ, ಪರಮಾರ್ಥಾರ್ಜನೆಯೊ?

ಮನೆಯಲ್ಲಿಯೆ ಹೊಲಿಗೆ ಕಲಿಯಿರಿ

ಶ್ರೀ. ಹಳಪೇಟೆ ಚಿಂತಾಮಣಿರಾಯರು, ಟಿ. ಸಿ. ಡಿ.

ನಿಕ್ಕರು (Half Pant)

★

ಅಳತೆ ಹಾಗೂ ವಿವರ:

೩೭ ಇಂಚು ಆಸನ; ೩೪ ಇಂಚು ನಡು; ೧೯ ಇಂಚು ಉದ್ದ; ೧೦ ಇಂಚು ಒಳ ಉದ್ದ; ೩೪ ಇಂಚು ಸಡಿಲು.

೧½ ಇಂಚಿನ ನಡುಪಟ್ಟಿ (Self Belt). ೨ ಕಿಸೆಗಳು ಎರಡೂ ಬದಿಗೆ. ಸೈನಿಕನ ನಿಕ್ಕರಿನಂತೆ ತಳಕ್ಕೆ ಸಡಿಲು ಹೆಚ್ಚು.

ಚಿತ್ರಿಸುವುದು :

(ಮುಂಭಾಗ)



ಬ, ಅ, ಕ, ಕಾಟಕೋನ.

ಅ, ಕ=೧೦" ಒಳ ಉದ್ದ.

ಅ, ಬ=೧೧೩/೮" ಎಂದರೆ ಆಸನದ ¼+೨೩/೮ ಇಂಚು.

ಬ, ಡ=೨೩/೮" ಎಂದರೆ ಆಸನದ ೧/೧೬+೫/೮ ಇಂಚು.

ಡ, ವನ್ನು ಸರಳವಾಗಿ ಮೇಲೆ ಬೆಳೆಯಿಸಿರಿ!

ಡ, ಇ=೭½" ಎಂದರೆ ಪೂರ್ಣ ಉದ್ದದಲ್ಲಿ ಬೆಲ್ಟಿನ ೧½" ನ್ನು ತೆಗೆದು, ಉಳಿದುದರಲ್ಲಿ ಒಳ ಉದ್ದ ಕಳೆದು +⅜" ಹೆಚ್ಚಾಗಿ. ಅಥವಾ ಆಸನದ ¼+⅜"-೧½" ಬೆಲ್ಟು.

ಇ, ಬ, ಬಾಗನ್ನು ಚಿತ್ರದಂತೆ ಕೂಡಿಸಿರಿ.

ಡ, ಎದುರಿಗೆ ಬಾಗಿನ ರೇಷೆಯು ಮೇಲೆ ½ ಇಂಚಿನ ಕಚ್ಚು.

ಇ, ಫ=೮" ಎಂದರೆ ಸೊಂಟದ ¼+⅜" ಅಲ್ಲದೆ ಮುಂದಿನ ಮಡಿಕೆಗಳಿಗಾಗಿ ೧⅜" ಹೆಚ್ಚಾಗಿ.

ಫ, ಕ. ಸರಳವಾಗಿ ಕೂಡಿಸಿರಿ.

ಕ, ರ=೧೧" ಎಂದರೆ ಸಡಿಲಿನ ⅜-೧" ಕತ್ತರಿಸುವಾಗ ಕ, ರ, ಗಳ ಕೆಳಕ್ಕೆ ೨⅜" ಅರಿವೆ ಹೆಚ್ಚಾಗಿ ಇಟ್ಟು ಕತ್ತರಿಸಬೇಕು.

ಜೊಕ್ಕಣ (ಕಿಸೆ)

ಫ, ದ=೧⅞ ಇಂಚು.

ದ, ನ=೫" ಎಂದರೆ ಆಸನದ ⅛+⅜ ಇಂಚು.

ದ, ನ, ಇದು ಜೊಕ್ಕಣದ ಬಾಯಿ.

ಫ, ಜ=೫" ಎಂದರೆ ಫ, ಇ, ಗಳ ಅರ್ಧ+⅜"

ಟ, ವನ್ನು ಅ, ಡ, ರೇಷೆಯ ಕೆಳಕ್ಕೆ೨⅜"

ಅ, ಟ=೬ ಇಂಚು.

ನ, ಗ=೨ ಇಂಚು.

ಗ, ಟ, ಕೂಡಿಸಿರಿ।

ಫ, ಗ, ಟ, ಜ, ಈ ಆಕಾರದ ನಾಲ್ಕು ತುಂಡುಗಳು ೨ ಜೊಕ್ಕಣಗಳಿಗಾಗಿಬೇಕು.

ಗುಂಡಿ ಪಟ್ಟಿಗಳು :

ಇ, ಥ=೨"

ಕಚ್ಚಿನಿಂದ ಕೆಳಕ್ಕೆ ಎ, ೧⅞ ಇಂಚು.

ಥ, ಎ, ಚಿತ್ರದಂತೆ ಬಾಗು ಕೂಡಿಸಿರಿ.

ಇ, ಥ, ಎ, ಆಕಾರದ ನಾಲ್ಕುಪಟ್ಟಿಗಳು.



ಹಿಂಭಾಗ :

ಮುಂಭಾಗವನ್ನಿಟ್ಟುಕೊಂಡೇ ಹಿಂಭಾಗವನ್ನು ಚಿತ್ರಿಸಬೇಕು.

ಫ, ಚ=⅜ ಇಂಚು.

ಕ, ಯ=೧ ಇಂಚು.

ಚ, ಯ ಸರಳ ಕೂಡಿಸಿರಿ.

ಇ, ಲ=೧½ ಇಂಚು.

ಚ, ಲ, ಸರಳ ಕೂಡಿಸಿರಿ.

ಬ, ವ=೨ ಇಂಚು.

ರ, ಸ=೧⅞ ಇಂಚು.

ಲ, ವ, ಚಿತ್ರದಂತೆ ಬಾಗುಕೂಡಿಸಿರಿ.

ವ, ಸ, ಸರಳ ಕೂಡಿಸಿರಿ.

ಕತ್ತರಿಸುವಾಗ, ಇವಕ್ಕೂ ಕೂಡ ಯ, ಸ, ಗಳ ಕೆಳಕ್ಕೆ ೨⅜ ಇಂಚು ಬಟ್ಟೆ ಹೆಚ್ಚಿಗೆ ಇಡಲು ಮರೆಯಬಾರದು.

ಬೇಕಾಗುವ ಬಟ್ಟೆ :

ಹಿಂಭಾಗ, ೨.

ಮುಂಭಾಗ, ೨.

ಗುಂಡೀಪಟ್ಟಿಗಳು, ೪.

ನಡುಪಟ್ಟಿ, ೪⅞ ಇಂಚು ಅಗಲ ೩೧ ಇಂಚು ಉದ್ದ ಉಳ್ಳ ಒಂದು ತುಂಡು.

ಇವುಗಳಿಗಾಗಿ ೩೭" ಅಗಲು ಉಳ್ಳ ೧⅜ ವಾರು ಬಟ್ಟೆ ಬೇಕು.

ಕಿಸೆಗಳಿಗಾಗಿ ೬ ಗೆರೆ ಬಟ್ಟೆ ಬೇರೆ ಬೇಕು.

(ಮುಂದಿನ ಸಲ ನೆಹರೂ ಜಾಕೀಟು.)

ನಗೀಗೆ ನೇವಿದ್ಯಾ

ದೊಡ್ಡ ಮನಸ್ಯಾ ಯಾಂವ?

ಪಂಚಾಯತದಾರ:— ಏನಪಾ, ದೊಡ್ಡವರು ಯಾರಾದರೂ ನಿನಗ 'ಹಿಂಗಲ್ಲಾ ಹಿಂಗ' ಅಂತ ಹೇಳಿದರ ಅವರ ಮಾತನ್ನ ನಂಬತೀಯೋ ಇಲ್ಲೋ ನೀನು ?

ವಾದಿ:— ಎಲಾ ಇವನ ಮಂಜಾಳ ಹೋಗಲಿ! ನಂಬದs ಏನಪಾ! ಮದಲ ಆ ದೊಡ್ಡ ಮನಸ್ಯಾ ಅಂಬಾಂವಾ ಯಾಂವ ಅದಾನು....ಅವನ್ನ ಕರಕೊಂಡು ಬಾ ಇಲ್ಲೆ! ಆ ಮ್ಯಾಲ ನನ್ನ ನಂಬಿಕೀ ಗಿಂಬಿಕೀ!

* * *

ಊಟಕ್ಕಾಗಿ ಕಾಯುವುದು

ಊಟದ ಗಿರಾಕಿ:— ಏನ್ರೀ ಇದು? ಉಪವಾಸ ಸಾಯೋವರೆಗೂ ಹಿಂಗs ದಾರೀ ಕಾಯುತಾ ಕೂತಿರಬೇಕೇನು ನಾನು ?

ಹೋಟಲಿನವ:—ಛೇಛೇ! ಅಷ್ಟೊತ್ತು ದಾರೀ ಕಾಯೂ ಕಾರಣೇನೂ ಇಲ್ಲ! ಹನ್ನೊಂದು ಗಂಟೆ ರಾತ್ರಿಗೆ ನಾವು ಹೋಟಲಿನ ಬಾಗಿಲಾನೇ ಬಂದಮಾಡಿಬಿಡತೀವಿ!

* * *

ಶಿಕ್ಷೆ-ಕ್ಷಮೆ

ಶಿಕ್ಷಕ:— ಮತ್ತೆ ಮತ್ತೆ ಈ ತುಂಟತನವೆ? ಈ ಕ್ಲಾಸಿನೊಳಗಿನ ಹಾಳೀ ಹರಿದವರು ಯಾರು ?

ಹುಡುಗರಾರೂ ಮುಚ್ಚಿದ ತುಟಿ ಬಿಚ್ಚಲಿಲ್ಲ.

ಶಿಕ್ಷಕ:—ತಪ್ಪು ಮಾಡಿದವರನ್ನು ಹಿಡಕೊಡದೆ ಹೋದರೆ ಎಲ್ಲರಿಗೂ ಏಟು ಬೀಳುತ್ತವೆ ನೋಡಿ!

ಆದರೂ ಹುಡುಗರಾರೂ ಮಾತನಾಡಲಿಲ್ಲ. ಮಾಸ್ತರು ಸಿಟ್ಟಾಗಿ ಪ್ರತಿಯೊಬ್ಬನನ್ನೂ ಹೊಡೆಯುತ್ತಾ ಬಂದರು. ಕೊನೆಗೆ ಒಬ್ಬ ಹುಡುಗ ಮಾತ್ರ ಉಳಿದಿದ್ದ. ಮಾಸ್ತರು ಮತ್ತೆ ಕೇಳಿದರು:

"ಎಲೋ ನೀನಾದರೂ ಹೇಳುತ್ತೀಯೋ ಇಲ್ಲೊ? ಹಾಳೀ ಹರಿದವರು ಯಾರು? ನಿಜಾ ಹೇಳಿದರೆ ನೋಡು, ನಿನ್ನನ್ನು ಕ್ಷಮಿಸಿ ಬಿಡುತ್ತೇನೆ; ಹೊಡೆಯೋದಿಲ್ಲ!"

ಹುಡುಗ ತಲೆಬಾಗಿಸಿ ಮೆಲ್ಲಗೆ ಹೇಳಿದ:

"ನಾನೇ ಸಾರ್, ಆ ಹಾಳೀ ಹರಿದವನು!"

* * *

ಡಾಕ್ಟರ ಚಿಕಿತ್ಸೆ

ರಾಯರು:—(ಅವಸರದಿಂದ ಬಂದು) ಡಾಕ್ಟರೇ! ನಮ್ಮ ಮಗೂ ಒಂದು ಬಾಟ್ಲಿ ಶಾಯಿ ಎಲ್ಲಾ ಕುಡಿದು ಬಿಟ್ಟಾನ್ರೀ!

ಡಾಕ್ಟರು:— ಹಾಂಗಾದರೇನು, ನನ್ನ ಫೌಂಟನ್‌ಪೆನ್ನು ಎರವಲು ಕೇಳಲಿಕ್ಕೆ ಬಂದಿದ್ದೀರೇನು ?

* * *

'ಎಕ್ಸರೇ' ಫೋಟೊ!

ಡಾಕ್ಟರು:— ನಿಮಗೆ 'ಎಕ್ಸ್‌ರೇ' ಫೋಟೋ ತೆಗಿಸಬೇಕಾಗತದ. ಅಂದರೆ ನಿಮ್ಮೊಳಗಿನ ರಹಸ್ಯವೆಲ್ಲಾ ಚೆನ್ನಾಗಿ ಗೊತ್ತಾಗತದ!

ರೋಗಿ:—ಎಕ್ಸ್‌ರೇ ಫೋಟೋ ಗೀಟೋ ಯಾತಕ್ಕರೀ! ಸುಮ್ಮನೆ ಒಣಾ ಖರ್ಚು! ನನ್ನ ಹೆಂಡತಿ ಇದ್ದಾಳ; ಎಕ್ಸರೇಗಿಂತಾ ಚೆನ್ನಾಗಿ ನನ್ನ ರಹಸ್ಯಾನ ಬಯಲಿಗೆ ಇಡತಾಳ!

* * *

ಗುಂಡಾಭಟ್ಟರ ಕೈಯು ಸವಿ!

"ಏನು ಗುಂಡಾಭಟ್ಟರೇ, ಯಾಕೋ ಮುಖಾ ಸಪ್ಪಗಾದ್ಹಾಂಗ ಕಾಣಿಸತsದ? ನಿಮಗೇನ್ರೀ ಅಂಥಾ ಚಿಂತಿ?"

"ಏನ್ ಹೇಳ್ಲಿ ರಾಯರೆ! ನಿನ್ನೆ ರಾತ್ರಿ ಬೀದಿಯೊಳಗ ಬರುತಿರುವಾಗ, ದೀಪ ಇಲ್ಲದೆ ಸೈಕಲ್ಲು ಹತ್ತಿ ಬರೋ ಹುಡುಗನೊಬ್ಬ ನನಗೆ 'ಢಾಢ್' ಅಂತ ಹಾಯಿಸಿ ಬಿಟ್ಟ!"

"ತೋರಿಸಿದಿರೋ ಇಲ್ಲೋ ಗುಂಡಾಭಟ್ಟರ ಕೈಯು ಸವಿಯನ್ನ ಆತನಿಗೆ?"

"ಎಲ್ಲಾ ತೋರಿಸಿದೆ ಬಿಡ್ರೆಪಾ; ಚೆನ್ನಾಗಿ ಆಸ್ಪತ್ರಿಗೆ ಹಾಕೋಹಾಂಗ ಹುಡುಗನ್ನ ಹೊಡೆದು, ಸೈಕಲ್ಲು ಮುರಿಯೋಹಾಂಗ ಒಗೆದು ಬಿಟ್ಟೆ ಗಟಾರದೊಳಗ!"

"ಆಯಿತು, ಮುಯ್ಯಿ ತೀರಿಸಿದ್ದೀರಿ; ಮತ್ತ ಯಾಕ್ರೆಪಾ ಈ ಅಳುಮೋರಿ? ನಿಮಗೇನಾದರೂ ಪೆಟ್ಟು-ಗಿಟ್ಟು ಹತ್ತಿತೇನು?"

"ನನಗೆಲ್ಲೀ ಪೆಟ್ಟರೀ? ಆ ಮ್ಯಾಲ ಎಲ್ಲಾ ನಾ ವಿಚಾರಮಾಡೂದರೊಳಗs ಗೊತ್ತಾತು: ಆ ನೈಮುರಿ ಹೊಡಿಸಿಕೊಂಡ ಹುಡುಗ ನಮ್ಮ ಸೋದರಳಿಯ ಸುಬ್ಬ. ಗಟಾರದೊಳಗ ಬಿದ್ದು ಮುರಿದ ಸೈಕಲ್ಲು ನನ್ನದೇ ಸ್ವಂತದ್ದು!"

ಸೋಲ್ ಎಜಂಟರು.
ವಾಗ್ವಿಲಾಸ ಬುಕ್‌ಡಿಪೊ, ಹುಬ್ಬಳ್ಳಿ

ಪುಸ್ತಕ ವಿಮರ್ಶೆ

ವಿಶ್ವಸಮರ

'ಸಂಜಯ' ಅವರು ಬರೆದುದು. ಹುಬ್ಬಳ್ಳಿಯ ರಾಷ್ಟ್ರೀಯ ವಾಙ್ಮಯ ಪ್ರಕಾಶನ ಟ್ರಸ್ಟಿನ ಪ್ರಕಟನೆ.

'ಸಂಯುಕ್ತ ಕರ್ನಾಟಕ' ದಿನ-ಪತ್ರಿಕೆಯಲ್ಲಿಯೂ **'ಕರ್ಮವೀರ'** ವಾರ-ಪತ್ರಿಕೆಯಲ್ಲಿಯೂ ಯುದ್ಧದ ಸುದ್ದಿಗಳನ್ನು ವಿವರ ವಿವರವಾಗಿ ಬರೆದು ತಿಳಿಸುತ್ತಿರುವ 'ಸಂಜಯ'ನು, ಅಖಿಲ ಕರ್ನಾಟಕಕ್ಕೆ ಸಾಕಷ್ಟು ಪರಿಚಿತನಾಗಿದ್ದಾನೆ. ಆತನೇ ಬರೆದ ಸದ್ಯದ ಮಹಾಯುದ್ಧದ ರುದ್ರ-ಚರಿತ್ರೆಯಿದು. ೧೯೩೮ ನೆಯ ಮಾರ್ಚ್ ತಿಂಗಳಲ್ಲಿ ಹಿಟ್ಲರನು ಆಸ್ಟ್ರಿಯಾವನ್ನು ವಶ-ಪಡಿಸಿಕೊಂಡುದರಿಂದ ಮೊದಲುಮಾಡಿ, ಜಪಾನರ ಸಿಂಗಾಪುರ ಆಕ್ರಮಣ, ಸೆಬಾಸ್ಟಪೋಲ್ ಮೇಲಿನ ಜರ್ಮನರ ದಾಳಿಯ ವರೆಗಿನ—ಕ್ರಿ. ಶ. ೧೯೪೨ ನೆಯ ಜೂಲೈ ವರೆಗಿನ—ಯುದ್ಧದ ಸಂಗತಿಗಳೆಲ್ಲ ಅನುಕ್ರಮವಾಗಿ ಇದರಲ್ಲಿ ಗ್ರಥಿತವಾಗಿವೆ. ಮೊದಲಿನ ಕೆಲವು ಪ್ರಕರಣಗಳಲ್ಲಿ ಯುದ್ಧದ ಕಾರಣಗಳು, ರಾಷ್ಟ್ರಗಳ ಪರಿಚಯ ಮತ್ತು ಬಲಾಬಲ, ಯುದ್ಧದ ಹೊಸರೀತಿಗಳು, ಅಂತರರಾಷ್ಟ್ರೀಯ ರಾಜನೀತಿ ಮತ್ತು ಯುದ್ಧನೀತಿ, ಸದ್ಯದ ಯುದ್ಧನೀತಿ ಇವುಗಳ ಬಗೆಗೆ ಉಪಯುಕ್ತವಾದ ವಿವೇಚನೆಯಿದೆ. ಸಾಮಾನ್ಯ ವಾಚಕರೂ ಈ ಪ್ರಕರಣಗಳಿಂದ ಪಾಶ್ಚಾತ್ಯ ರಾಜಕಾರಣ-ಯುದ್ಧಕಾರಣಗಳ ಪ್ರಾಥಮಿಕ ಪಾಠಗಳನ್ನು ಪಡೆಯಬಹುದು. ಕೊನೆಯಲ್ಲಿ ನಾಲ್ಕು ಪರಿಶಿಷ್ಟ ಪ್ರಕರಣಗಳಿದ್ದು ಅವು-ಗಳಲ್ಲಿ ೧. ಕಾಂಗ್ರೆಸ್ ಯುದ್ಧನೀತಿ, ೨. ಗಾಂಧಿಯುದ್ಧನೀತಿ, ೩. ಫ್ರಾನ್ಸ್ ಜರ್ಮನಿ ಒಪ್ಪಂದದ ಕರಾರುಗಳು, ೪. ಫ್ರಾನ್ಸ್ ಇಟಲಿ ಒಪ್ಪಂದ ಕರಾರುಗಳು ಇವೆಲ್ಲ ವಿಷಯಗಳು ಅಡಕವಾಗಿವೆ. ತೀರ ಕೊನೆಗೆ ೧೯೩೯ ನೆಯ ಸಪ್ಟೆಂಬರ್‌ನಿಂದ ೧೯೪೨ ನೆಯ ಜೂಲೈ ವರೆಗಿನ ಯುದ್ಧದ ದಿನಚರಿ ಇದೆ. ಅಲ್ಲಲ್ಲಿ ಯುದ್ಧಕ್ಷೇತ್ರದ ನಕ್ಷೆಗಳೂ ವ್ಯಂಗ್ಯಚಿತ್ರಗಳೂ ಇವೆ.

ಈ ಬಗೆಯ ಸಾಂದರ್ಭಿಕ ಗ್ರಂಥಗಳು ನಮ್ಮಲ್ಲಿ ಅಪರೂಪ. ಸದ್ಯದ ಮಹಾ-ಯುದ್ಧದ ಸಂಗತಿಯನ್ನೊಳಗೊಂಡ ಗ್ರಂಥಗಳು ಪಾಶ್ಚಾತ್ಯ ಭಾಷೆಗಳಲ್ಲಿ ಸಾವಿರ ಸಾವಿರ ಸಂಖ್ಯೆಯಲ್ಲಿ ಹೊರಟಿರಬಹುದು. ಹಿಂದುಸ್ತಾನದ ಮಿಕ್ಕ ಭಾಷೆಗಳಲ್ಲಿಯೂ ಹಲವು ಹೊತ್ತಗೆಗಳು ಹುಟ್ಟಿರಬಹುದು. ಆದರೆ ಕನ್ನಡದಲ್ಲಿ ಮಾತ್ರ ಒಂದೋ ಎರಡೋ ಇಷ್ಟೇ!

ಇಂತಹ ಗ್ರಂಥಲೇಖನಕ್ಕೆ ಸಾಕಷ್ಟು ನಿರೀಕ್ಷಣೆ ಬೇಕು, ವಿಷಯಗ್ರಾಹಕ ಶಕ್ತಿ ಬೇಕು, ವಿಷಯಮಂಡನ ಶಕ್ತಿ ಬೇಕು, ಜಗತ್ತಿನ ಎಲ್ಲ ರಾಷ್ಟ್ರಗಳ ಕೂಲಂಕಷವಾದ ಇತಿಹಾಸ-ಭೂಗೋಲಗಳ ಪರಿಚಯವು ಬೇಕು, ವರ್ತಮಾನ ಪರಿಸ್ಥಿತಿಯ ಅರಿವು ಚೆನ್ನಾಗಿರಬೇಕು, ಭೂತಕಾಲದ ಪರಿ-ಣಾಮವನ್ನು ಊಹಿಸಿ ಕಂಡುಹಿಡಿಯು-ವಂತಹ ಮುತ್ಸದ್ದಿತನಬೇಕು. 'ಸಂಜಯ'ನಲ್ಲಿ ಇವೆಲ್ಲ 'ಬೇಕು'ಗಳ ಬೀಜಗಳೂ ಇರುವುದನ್ನು ವಾಚಕರು ಕಾಣಬಹುದು, ಸಾಕಷ್ಟು ಅವಕಾಶವಿದ್ದರೆ ಈ ಬೀಜಗಳ ಬೆಳವಣಿಗೆಯನ್ನು ತೋರಿಸುವಂತಹ ಸತ್ತ್ವವೂ 'ಸಂಜಯ'ನಲ್ಲಿ ಇರಬಹು-ದೆಂದು ಭಾವಿಸುವಂತಿದೆ.

ಯುದ್ಧದ ಸುದ್ದಿ ಕೇಳಲಿಕ್ಕೆ ತುಂಬ ರಮಣೀಯವಾದುದು. ಸತ್ಯಕಥೆಯಾದುದ-ರಿಂದ ಕಾದಂಬರಿಗಳಿಗಿಂತಲೂ ಮನಸ್ಸನ್ನು ಹೆಚ್ಚಾಗಿ ಆಕರ್ಷಿಸಬಹುದಲ್ಲದೆ ಒಂದು ಬಗೆಯ ಶಿಕ್ಷಣವಾಗಿಯೂ ಪರಿಣಮಿಸು-ವುದು. ಭಾರತದಲ್ಲಿ ನಿದ್ದೆಹೋಗಿರುವ ಕ್ಷಾತ್ರಜೀವನವನ್ನು ಹೊಡೆದು ಹೊಡೆದು ಎಬ್ಬಿಸಲಿಕ್ಕೆ ಈ ಬಗೆಯ ಜೀವಯುಕ್ತ ಯುದ್ಧದ ವರ್ಣನೆ—ಚರಿತ್ರೆಗಳು ಅವಶ್ಯವಾಗಿ ಬೇಕು. ಒದಗಿಸಿಕೊಟ್ಟ ಮೊದಲಿಗ-ರಲ್ಲಿ 'ಸಂಜಯ'ರೊಬ್ಬರಾದುದರಿಂದ, ಕನ್ನಡಿಗರ ಅಭಿನಂದನೆಗೆ ಅವರು ಪಾತ್ರ-ರಾಗಿದ್ದಾರೆ. ಪ್ರಕಟವಾದ ಒಂದೆರಡು ತಿಂಗಳಲ್ಲಿಯೆ ಈ ಪುಸ್ತಕದ ಮೊದಲನೆಯ ಮುದ್ರಣದ ಪ್ರತಿಗಳೆಲ್ಲ ತೀರಿದುದು, ಆಧು-ನಿಕ ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ಒಂದು ಸವಾಡವಾಗಿ ಕಂಡರೆ ಅದೇನು ಆಶ್ಚರ್ಯವಲ್ಲ. ಇದನ್ನು ಸಕಾಲದಲ್ಲಿ ಪ್ರಕಟಿಸಿದ ಪ್ರಸಾರಕ ಮಂಡಲಿಯು ಕನ್ನಡ ವಾಚಕ-ರನ್ನು ಋಣಿಗಳನ್ನಾಗಿ ಮಾಡಿಕೊಂಡಿದೆ.

—ಬಿ. ಪಿ. ಎಸ್. ರಾವ್

ವಿಮಾನ ದಾಳಿಯ ಸಂರಕ್ಷಣೆ

ಶ್ರೀ. ಕೆ. ಆರ್. ಭಾಗವತರು ಬರೆದುದು.

ಭಾರತದ ಭವಿಷ್ಯವನ್ನು ಬಲ್ಲವರಾರು? ವೈರಿರಾಷ್ಟ್ರದವರು ನಮ್ಮ ಬಾಗಿಲಿನಲ್ಲಿ ಈಗಾಗಲೇ ಇಣಿಕಿನೋಡುತ್ತಿದ್ದಾರೆ. ಈ ಯುದ್ಧದ ಕಾವು ಬಡಿಯುವುದು ಕೆಲವೇ ವಾರಗಳ ಮಾತೂ ಎಂದು ಜನರು ಆಡು-ತ್ತಿದ್ದಾರೆ. ಇಂತಹ ಕಾಲದಲ್ಲಿ ತಕ್ಕ ಸಂರಕ್ಷಣೆ ಮಾಡಿಕೊಳ್ಳುವುದು ನಮ್ಮಗಳ ಕರ್ತವ್ಯ-ವಾಗಿದೆ. ಹಾಗೆ ಸಂರಕ್ಷಣೆಯನ್ನು ಮಾಡಿ-ಕೊಳ್ಳುವ ರೀತಿಯನ್ನು ಈ ಪುಸ್ತಕದಲ್ಲಿ ಲೇಖಕರು ಚೆನ್ನಾಗಿ ವಿವರಿಸಿದ್ದಾರೆ. ಮೊದಲು ಬಾಂಬುಗಳ ಜಾತಿಗಳನ್ನು ಹೇಳಿ ಬಾಂಬು ಬಿದ್ದುವೆಂದರೆ ಅವು ಹೇಗೆ ಸ್ಫೋಟ-ಹತ್ತುತ್ತವೆಯೆಂಬುದನ್ನು ಸರಿಯಾಗಿ ವಿವರಿಸಿದ್ದಾರೆ. ಅವುಗಳಿಂದ ಸಂರಕ್ಷಣಾ ಮಾಡಿಕೊಳ್ಳುವ ರೀತಿ ಮತ್ತು ಸಂರಕ್ಷಣ ಮಂಡಲಗಳ (ಎ. ಆರ್. ಪಿ.) ಆವಶ್ಯ-ಕತೆಗಳನ್ನು ಚೆನ್ನಾಗಿ ತೋರಿಸಿಕೊಟ್ಟ-ದ್ದಾರೆ. ಇದು ಎ. ಆರ್. ಪಿ. ಕಮಿಟಿಯ ವಾರ್ಡನ್ಸ್‌ಗಾಗಿ ಒಂದು ಉಪಯುಕ್ತ ಪುಸ್ತಕವಾಗಿದೆಯಲ್ಲದೆ—ಉದಾಹರಣೆ ಸಹಿತವಾಗಿ ವಿವರಿಸಿದ್ದುದರಿಂದ—ಅವರಿಗೆ ಸರಳವಾಗುವುದರಲ್ಲಿ ಸಂಶಯವಿಲ್ಲ. ಅಲ್ಲಲ್ಲಿ ಕೆಲವು ಚಿತ್ರಗಳನ್ನು ಕೊಟ್ಟಿದ್ದರೆ ಹೆಚ್ಚು ಅನುಕೂಲವಾಗುತ್ತಿತ್ತು. ಎಲ್ಲರೂ ಇದರ ಲಾಭ ಪಡೆಯಲಿ.

—ವಸಂತ.



ದೂರದೃಷ್ಟಿ ವಿ. ದೂರುವ ದೃಷ್ಟಿ

ಆಗಸ್ಟ್ ತಿಂಗಳಿಂದ ಪ್ರಾರಂಭವಾದ ಅಶಾಂತಿಪರ್ವದ ವಾತಾವರಣವು ಇನ್ನೂ ಹೆಚ್ಚು-ಕೊರತೆ ಇಲ್ಲದೆ ಕುದಿಯುತ್ತಲಿದೆ. 'ಈ ಸಲ ಕಾಂಗ್ರೆಸಿನ 'ಚಳವಳಿ'ಯಿಲ್ಲ, ಯಾಕೆಂದರೆ ಕಾಂಗ್ರೆಸಿಗೆ ಅದನ್ನು ಪ್ರಾರಂಭಿಸುವ ಅವಕಾಶ ಕೂಡ ಇದ್ದಿರಲಿಲ್ಲ'ಎಂದು ಬೇರೆ ಬೇರೆ ಪಕ್ಷದ ಭಾರತೀಯ ಮುಂದಾಳುಗಳು ಹೇಳುತ್ತಿದ್ದರೂ 'ಇದು ಚಳವಳವಲ್ಲ, ಆದರೆ ಬಂಡಾಯ, ಮತ್ತು ಇದರ ಹೊಣೆ ಪೂರ್ತಿಯಾಗಿ ಕಾಂಗ್ರೆಸಿನ ಮೇಲೆಯೆ' ಎಂದು ಭಾರತಮಂತ್ರಿ ಅಮೆರಿಯವರೂ ಹಿಂದುಸ್ಥಾನ ಸರಕಾರದವರೂ ಸಾರುತ್ತಿದ್ದಾರೆ! ಈ ಪರಿಸ್ಥಿತಿಯನ್ನು ವಿಚಾರಿಸುವ ಮುಂಚೆ ಒಂದು ಮಾತನ್ನು ಹೇಳಬೇಕಾಗಿದೆ. ಕೇವಲ ಇನ್ನೊಬ್ಬರ ಮೇಲೆ ಹೊಣೆಯನ್ನಾಗಲಿ ಆರೋಪವನ್ನಾಗಲಿ ಹೊರಿಸಿ ತೃಪ್ತಿಹೊಂದುವುದೇ ತನ್ನ ಕರ್ತವ್ಯ ಎಂದು ತಿಳಿಯುವ ಸರಕಾರವು, ಇಂದಿನ ಪರಿಸ್ಥಿತಿಯಲ್ಲಿ ಹೊಣೆಗಾರಿಕೆಯ ಸರಕಾರ ಎಂದು ಎಂದಿಗೂ ಎನಿಸಲಾಗದು. ಇಷ್ಟೇ ಅಲ್ಲ; ಭಾರತ-ಸರಕಾರದಂತೆ ಬ್ರಿಟಿಶ್ ಮುಖ್ಯ ಮಂತ್ರಿಯವರೂ ಕೇವಲ ಕಾಂಗ್ರೆಸಿನ ಮೇಲೆ ವಿಷಕಾರುವುದೇ ತಮ್ಮ ಮುತ್ಸದ್ದಿತನ ಎಂದು ತಿಳಿದರೆ 'ಬ್ರಿಟಿಶರ ಉದ್ದೇಶವಾದರೂ ಪ್ರಾಮಾಣಿಕವಾಗಿಲ್ಲ, ಕಾಂಗ್ರೆಸಿನ ವಾದವಾದರೂ ಅಯುಕ್ತವಾದುದಲ್ಲ' ಎಂದು ಹೇಳಬಹುದಲ್ಲವೆ? ಈ ಎರಡು ತಿಂಗಳಿಂದ ಬ್ರಿಟಿಶರು ಭಾರತಕ್ಕಾಗಿ ತಳೆದ ಧೋರಣೆಯಿಂದ ಇವರಿಗೆ ಯುದ್ಧದ ವಿಷಯವಾಗಿ ಕೂಡ ದೂರದೃಷ್ಟಿ ಇಲ್ಲ ಎಂಬುದು ಸ್ಪಷ್ಟವಾಗುವುದು.

ಜಿನಾಸಾಹೇಬರ 'ಲಾಗ'-ಸಂಸ್ಥೆ

ಮೇಲಿನ ಮಾತನ್ನು ಪುಷ್ಟಿಗೊಳಿಸಲು ಇದುವರೆಗೆ ನಡೆದ ಘಟನೆಗಳೆ ಸಾಕಷ್ಟಾಗಿ ಆಧಾರವಾಗಿವೆ. ಕಾಂಗ್ರೆಸ್‌ಮುಂದಾಳುಗಳ ಬಂಧನದ ನಿಮಿತ್ತವಾಗಿ ಎದ್ದ ಸಾರ್ವಜನಿಕವಾದ ಗಲಭೆಯನ್ನು ಕೆಲಹೊತ್ತು ಒದಿಗಿಟ್ಟು ಮಿಕ್ಕ ಸಂಗತಿಗಳನ್ನು ನೋಡೋಣ: ಮೊದಲು ಮುಸ್ಲಿಂಲೀಗ್— ಅಥವಾ ಜಿನಾ-ಸಾಹೇಬರ ಲಾಗ-ಸಂಸ್ಥೆ. ಈ ಸಂಸ್ಥೆಯ ವರ್ಕಿಂಗ್ ಕಮಿಟಿಯು ಸೇರಿ ತನ್ನ ಧೋರಣವನ್ನು ಸ್ಪಷ್ಟಗೊಳಿಸಿತು. ಅದೆಂತಹ ಧೋರಣ! ಜಗತ್ತಿನಲ್ಲಿ ಯುದ್ಧ ನಡೆದಿದೆ ಎಂಬುದರ ಅರಿವೇ ಇವರಿಗಿದ್ದಂತಿಲ್ಲ. ಒಟ್ಟು—ಸ್ವರ್ಗದಲ್ಲಿ ದೇವತೆಗಳು ಪಾತಾಲದಲ್ಲಿ ದಾನವರು ಇದ್ದಂತೆ ಭೂಲೋಕದಲ್ಲಿ ಮುಸಲ್ಮಾನರಿದ್ದಾರೆ— ಎಂಬುದೇ ಜಿನಾಸಾಹೇಬರ ಜ್ಞಾನಭಾಂಡಾರ! ಇನ್ನು ಹಿಂದುಸ್ಥಾನದಲ್ಲಿ ಚಳವಳ ನಡೆದಿದೆಯೆ? ಸರಿ, ಹಾಗಿದ್ದರೆ ಮುಸಲ್ಮಾನರಿಗೆ ತೊಂದರೆ ಕೊಡಬೇಡಿರಿ, ಎಚ್ಚರ! —ಎಂದು ಜಿನಾಸಾಹೇಬರ ಮಂತ್ರ! ಇಂತಹ ಮಾತುಗಳಿಗೆ 'ರಾಜಕೀಯ ಧೋರಣ' ಎಂಬ ಹೆಸರನ್ನು ಕೊಡುವಷ್ಟಾದರೂ ಮಹತ್ತ್ವವಿದೆಯೆ? ದಿನದಿನಕ್ಕೆ 'ಭಾರತದಲ್ಲಿ ಮುಸಲ್ಮಾನರಿದ್ದಾರೆ' ಎಂಬ ಮಾತನ್ನು ಚರ್ಚಿಲ್‌ರೊಬ್ಬರೆ ಒಪ್ಪುವಂತಹ ಪರಿಸ್ಥಿತಿ ಬರುತ್ತಲಿದೆ. ಸ್ವತಃ ಮುಸಲ್ಮಾನರೆ ತಾವು ಭಾರತದಲ್ಲಿಲ್ಲ ಎಂದು ಹೇಳುವಾಗ, ಅವರ ಮಾತಿಗೆ ನಾವು ಹೆಚ್ಚಿನ ಮಹತ್ತ್ವವನ್ನು ಕೊಡುವುದೇಕೆ? ಈ ಆವೇಶದಲ್ಲಿ ಒಂದು ಸಂಗತಿಯನ್ನು ನಾವು ಮರೆಯತಕ್ಕದ್ದಲ್ಲ. ದೇಶದ ತುಂಬ ಬೇರೂರಿ ನಿಂತ ಮುಸಲ್ಮಾನ ಜನತೆಗೂ 'ಮುಸ್ಲಿಂಲೀಗ್' ಎಂಬ ಸರ್ಕಸಿನ ಆಟಗಾರರಿಗೂ ಸಂಬಂಧವಿಲ್ಲ. ಈ ಸರ್ಕಸನ್ನು ಸ್ಥಳಾಂತರಿಸಿದರೆ ಮುಸಲ್ಮಾನ್ ಜನತೆಯ ಭ್ರಮ ನಿರಸನವಾಗುವುದರಲ್ಲಿ ಸಂದೇಹವಿಲ್ಲ. ಮುಸ್ಲಿಂ ಲೀಗಕ್ಕೆ ಜಿನಾಸಾಹೇಬರು ಧುರೀಣರಾಗಿರುವವರೆಗೆ ಅದು ಕೇವಲ 'ಲಾಗ' ಸಂಸ್ಥೆ. ಅದರಿಂದ ದೇಶದ ಹಿತವಾಗುವಂತಿಲ್ಲ. ಅದಕಾಗಿ ಧುರೀಣತ್ವ ಬದಲಾಯಿಸುವವರೆಗೆ ಅದನ್ನು ಮರೆಯಲೇ ಬೇಕು. ಅದರ ಉಪಯುಕ್ತತೆ ಬ್ರಿಟಿಶರಿಗೆ ಇದೆ ಎಂಬುದೇ ಆ ಸಂಸ್ಥೆಯ ಅನವಶ್ಯವನ್ನು ತೋರಿಸುತ್ತಿದೆ.

ಶಾಮಪ್ರಸಾದರ ಸಾನೋಪಾಯ

ಒಟ್ಟು ಪರಿಸ್ಥಿತಿಯ ಅರಿವಿದ್ದರೆ, ದೇಶಕ್ಕಾಗಿ ಹಿತಬುದ್ಧಿ ಇದ್ದರೆ ಎಂತಹ ಧೋರಣವನ್ನು ತಾಳುವುದಗತ್ಯವಿದೆ—ಎಂಬ ಮಾತನ್ನು ಹಿಂದುಮಹಾಸಭೆಯ ಅಧ್ಯಕ್ಷರಾದ ಡಾ. ಶಾಮಪ್ರಸಾದ ಮುಕರ್ಜಿಯವರು ತೋರಿಸಿಕೊಟ್ಟಿದ್ದಾರೆ. ಹಿಂದುಮಹಾಸಭೆ ಜಾತೀಯ ಸಂಸ್ಥೆ, ಮುಸ್ಲಿಂಲೀಗಕ್ಕೆ ಇದಿರಾದ ಸಂಸ್ಥೆ; ಹೀಗಿದ್ದರೂ ಪಾಕಿಸ್ತಾನವನ್ನು ಅಲ್ಲಗಳೆಯದೆ, ಇಂದು

ರಾಷ್ಟ್ರೀಯ ಸರಕಾರದ ಸ್ಥಾಪನೆಗೆ ಲೀಗದವರು ಸಹಕಾರಿಗಳಾದರೆ ಹಿಂ. ಮ. ಸಭೆಯು ಪಾಕಿಸ್ತಾನದ ವಿಚಾರವನ್ನು ಯುದ್ಧದ ತರುವಾಯದಲ್ಲಿ ಮಾಡಲು ಸಿದ್ಧವಿರುವುದೆಂದು ಸಾರಿದರು. ಇಷ್ಟಕ್ಕೆಯೆ ಸಮಾಧಾನಹೊಂದದೆ ಡಾ. ಮುಕರ್ಜಿಯವರು ಮಿಕ್ಕ ಪಕ್ಷಗಳ (ಇದರಲ್ಲಿ ಅನೇಕ ಮುಸಲ್ಮಾನ್ ಪಕ್ಷಗಳಿವೆ) ಮುಂದಾಳುಗಳೊಡನೆ ಒಂದು ಒಮ್ಮತದ ಹೇಳಿಕೆಯನ್ನು ಹೊರಡಿಸಿದರು. ಆಶ್ಚರ್ಯದ ಮಾತೆಂದರೆ ಶಾಸನ-ಭಂಗದ ವಿಷಯವನ್ನು ಬಿಟ್ಟರೆ ಈ ಹೇಳಿಕೆಗೂ ಕಾಂಗ್ರೆಸ್ ಎ. ಆಯ್. ಸಿ. ಸಿ. ಯ ನಿರ್ಣಯಕ್ಕೂ ವ್ಯತ್ಯಾಸವೇ ಇಲ್ಲ! ದೇಶಕ್ಕೆ ಸ್ವಾತಂತ್ರ್ಯ, ಸದ್ಯಕ್ಕೆ ರಾಷ್ಟ್ರೀಯ ಸರಕಾರ, ಯುದ್ಧಾನಂತರ ಜಾತಿಗಳಿಗಾಗಲಿ ಪ್ರಾಂತಗಳಿಗಾಗಲಿ ಸ್ವಯಂ-ನಿರ್ಣಯದ ತತ್ತ್ವ— ಈ ಮೂರು ಮುಖ್ಯ ಸಂಗತಿಗಳು ಹಿಂದುಸ್ತಾನದ ಎಲ್ಲ ಪಕ್ಷಗಳ ಒಮ್ಮತದ ಬೇಡಿಕೆಯಾಗಿವೆ. 'ನಿಮ್ಮ ಒಮ್ಮತದ ಬೇಡಿಕೆಯನ್ನು ನಾವು ನಿರಾಕರಿಸುವುದಿಲ್ಲ' ಎಂದ ಬ್ರಿಟಿಶ್ ಮುತ್ಸದ್ದಿ ಧುರೀಣರು, ಡಾ. ಮುಕರ್ಜಿಯವರು ಕೂಡಿಸಿದ ಬೇಡಿಕೆಗೆ ಏನೆಂದಿದ್ದಾರೆ?

ಚರ್ಚಿಲ್‍ರ ಚಾಡಿಗಾರಿಕೆ

ಬ್ರಿಟಿಶರ ಅಭಿಪ್ರಾಯವು ಅವರ ಮುಖ್ಯಮಂತ್ರಿಗಳಾದ ಚರ್ಚಿಲ್‍ರ ಭಾಷಣದಲ್ಲಿ ಇರಬೇಕಾಗಿದೆಯಲ್ಲವೆ? ಮಧ್ಯ-ಪೂರ್ವ– ಸಿರಿಯಾ– ಇರಾಕ– ಇರಾಣ– ಮಾಸ್ಕೊ ಮೊದಲಾದುವುಗಳಿಗೆ ಸಂಚಾರ ಬೆಳೆಯಿಸಿ ಯುದ್ಧತತ್ತ್ವದ ಪ್ರಚಾರಮಾಡಿ, ಸ್ಟಾಲಿನರೊಡನೆ ಮಾತನಾಡಿ, ಮರಳಿದ ಚರ್ಚಿಲ್‍ರು ಹಿಂದುಸ್ತಾನದ ವಿಷಯಕ್ಕೆ ಹೇಳಿದ್ದೇನು? ಅವರ ಭಾಷಣದಲ್ಲಿ ಎರಡೇ ಎರಡು ಸಂಗತಿಗಳು ಎದ್ದುಕಾಣುವುವು: ಒಂದು, ಹೆದರಿಕೆ; ಇನ್ನೊಂದು, ಹೊಟ್ಟೆಯುರಿ! ಹಿಂದುಸ್ತಾನದಲ್ಲಿ ದಿನದಿನಕ್ಕೆ ಬೆಳೆಯುತ್ತಲಿದ್ದ ಐಕ್ಯಕ್ಕಾಗಿ ಹೊಟ್ಟೆಯುರಿ; ಕಾಂಗ್ರೆಸು ಜೇಲಿನಲ್ಲಿ ಕೊಳೆಯುತ್ತಿದ್ದರೂ ಈ ಐಕ್ಯ ಬೆಳೆಯುತ್ತಿದೆಯಲ ಎಂದು ಹೆದರಿಕೆ. ಅದಕಾಗಿ ತಮ್ಮ ತಾಳಗೆಟ್ಟ ತಲೆಗೆ ತೃಪ್ತಿಯಾಗುವಷ್ಟು ಕಾಂಗ್ರೆಸನ್ನು ಬೈದಿದ್ದಾರೆ, ಬೊಟ್ಟುಮುರಿದಿದ್ದಾರೆ, ಆರೋಪ ಹೊರಿಸಿದ್ದಾರೆ! ಕಾಂಗ್ರೆಸು ಹಿಂದುಸ್ತಾನದ ಜನತೆಯ ಪ್ರತಿನಿಧಿಯಲ್ಲವಂತೆ! ಹಾಗಾದರೆ ಕನಸು-ಮನಸುಗಳಲ್ಲೂ ಕಾಂಗ್ರೆಸಿನ ಭೂತವನ್ನೇ ಕಾಣುವುದೇಕೆ? ಕಾಂಗ್ರೆಸನ್ನು ಬಂಧಿಸುವ ಆತುರವೇಕೆ? ದಿನಕ್ಕೆ ನೂರಾರು ಜನರು ಜೇಲುಗಳಿಗೆ ಹೋಗುವುದೇಕೆ? ನೂರಾರು ಆರ್ಡಿನನ್ಸ್‍ಗಳನ್ನು ಹೊರಡಿಸುವುದೇಕೆ? ಎರಡು ತಿಂಗಳುಗಳ ತರುವಾಯದಲ್ಲೂ ಭಾರತ-ಮಂತ್ರಿಗಳ ಹೇಳುವಂತೆ ಇನ್ನೂ 'ಬಂಡಾಯ' ನಡೆದೇ ಇದೆ ಹೇಗೆ? ಇವೆಲ್ಲ ಜನತೆಗೆ ಕಾಂಗ್ರೆಸು ಬೇಡವಾದ ಲಕ್ಷಣಗಳೆ? ಬುದ್ಧಿಯನ್ನು ಬೇಕಾದಂತೆ ಲಾಗಹೊಡೆಯಿಸಬಲ್ಲ ಕ್ರಿಪ್ಸರ ತರ್ಕಶಾಸ್ತ್ರದಿಂದಾದರೂ ಈ ಪರಿಸ್ಥಿತಿಯಲ್ಲಿ ಈ ಮಾತು ಸಿದ್ಧವಾಗಬಹುದೆ?

ಅಸಹ್ಯ ಅವಮಾನ

ಆಧಾರವಿಲ್ಲದೆ ಮಾತನಾಡುವುದು ಸಾಮಾನ್ಯನಲ್ಲಿ ಕೇವಲ ಬುದ್ಧಿಗೇಡಿತನ ಎನಿಸಿದರೆ, ಹೊಣೆಗಾರಿಕೆಯ ಮನುಷ್ಯನಲ್ಲಿ ಕಿಡಿಗೇಡಿತನ ಇಲ್ಲವೆ ಕಂಟಕತನ ಎನಿಸಬಹುದು. ಒಂದು ದೊಡ್ಡ ಸಾಮ್ರಾಜ್ಯದ ಮುಖ್ಯಮಂತ್ರಿ ಎನಿಸಿಕೊಂಡು 'ಕಾಂಗ್ರೆಸಿಗೆ ಜಪಾನರ ಸಹಾಯವಿದೆ' ಎಂದು—ಆಧಾರವನ್ನು ಕೊಡದೆ—ಹೇಳುವ ಚರ್ಚಿಲ್‍ರು—ನಮ್ಮಲ್ಲಿ ಅನೇಕರು ಹೇಳಿದಂತೆ— ಅಂತಹ ಹೊಣೆಗಾರಿಕೆಯ ಅಧಿಕಾರಕ್ಕೆ ಅನರ್ಹರೆಂದೆನಬಹುದಲ್ಲವೆ? ಪರಕೀಯರಿಂದ ಸಹಾಯ ಪಡೆಯುವುದು ದೇಶಕ್ಕೆ ವಿಘಾತುಕ, ದೇಶಕ್ಕೆ ದ್ರೋಹ ಎಂಬ ತತ್ತ್ವವನ್ನು ಒಪ್ಪಿಕೊಂಡುದರಿಂದ ಇಂದು ಕಾಂಗ್ರೆಸು ಬ್ರಿಟಿಶರ ಸಹಾಯವನ್ನು ಕೂಡ ಕೋರುವುದಿಲ್ಲ. ಇಷ್ಟೊಂದು ತತ್ತ್ವಬದ್ಧವಾದ ಕಾಂಗ್ರೆಸಿನ ಮೇಲೆ ಇಂತಹ ಘೋರ ಆರೋಪವನ್ನು ಹೊರಿಸುವುದೆಂದರೆ— ಬೇರೆ ಬೇರೆ ಪಕ್ಷದವರು ಹೇಳುವಂತೆ— ಇದಿಯ ದೇಶಕ್ಕೆ ಅಪಮಾನ, ಕಾಂಗ್ರೆಸ್‍ನ ಮುಂದಾಳುಗಳು ಜೇಲಿನಲ್ಲಿದ್ದಾರೆ, ಇಡಿಯ ದೇಶವೇ ದಾಸ್ಯದಲ್ಲಿದೆ, ಆದಕಾಗಿ ನನಗೆ ಉತ್ತರ ಕೊಡುವವರು ಯಾರು?— ಎಂದು ಚರ್ಚಿಲ್‍ರು ತಿಳಿಯಬಹುದಾದ್ದರಿಂದ ಈ ಅಪಮಾನವು ಅಸಹ್ಯವೆನಿಸುವುದು.

ಒಡಕಿನ ಬುದ್ಧಿಯೆ? ಒರಟು ಬುದ್ಧಿಯೆ?

ಇದಲ್ಲದೆ ಚರ್ಚಿಲ್‍ರು ಇನ್ನೊಂದು ತರದ ಬುದ್ಧಿಮತ್ತೆಯನ್ನು ಪ್ರದರ್ಶಿಸಿದ್ದಾರೆ. ಕಾಂಗ್ರೆಸು ದೇಶದ ಪ್ರತಿನಿಧಿಯಲ್ಲ ಎಂದಿಷ್ಟಕ್ಕೇ ಅವರು ತಡೆದಿಲ್ಲ. ಈ ಬಡಭಾರತಕ್ಕೆ ಬ್ರಿಟಿಶರ ಹೊರತಾಗಿ ಯಾರೂ ಪ್ರತಿನಿಧಿಗಳೆ ಅಲ್ಲ ಎಂಬುದನ್ನು ಅವರು ಸೂಚಿಸಲು ಯತ್ನಿಸಿದ್ದಾರೆ ಮುಸಲ್ಮಾನರು, ಅಸ್ಪೃಶ್ಯರು, ಇತರರು, ಸಂಸ್ಥಾನಗಳು ಎಂದು ಹಿಂದುಸ್ತಾನದ ಶಾಶ್ವತ ವಿಭಜನರೇಷೆಗಳನ್ನು ಚಿತ್ರಿಸಿದ್ದಾರೆ. ಯಾಕೆಂದರೆ, ಇವೆಲ್ಲ ಜಾತಿಗಳು (ಸಂಸ್ಥಾನವೂ ಜಾತಿಯಂತೆಯೆ) ಚಿರಸ್ಥಾಯಿಯಲ್ಲವೆ? ಆದುದರಿಂದ ಹಿಂದುಸ್ತಾನದ ಏಕಮೇವಾದ್ವಿತೀಯ ಪ್ರತಿನಿಧಿತ್ವ ಯಾರಿಗೂ ಬರುವಂತಿಲ್ಲ! ಯೋಗ್ಯ! ಹಿಂದುಸ್ತಾನದ ಎದುರು ತೋರಿಸಿದ ಚಾತುರ್ಯವನ್ನು ಶತ್ರುವಿನೆದುರು ಚರ್ಚಿಲ್‍ರು ತೋರಿಸಿದರೆ ಪ್ರಜಾಪ್ರಭುತ್ವ ರಾಷ್ಟ್ರಗಳಿಗೆ ಜಯವಾಗುವುದು ಖಂಡಿತ ಎಂದು ಸಮಾಧಾನವನ್ನು ತಾಳೋಣವೆ? ಅಥವಾ– ಇಷ್ಟೊಂದು ಅಜ್ಞಾನವು ಸಾಮ್ರಾಜ್ಯದ ಮುಖ್ಯಮಂತ್ರಿಯಲ್ಲಿ ಅಕ್ಷಮ್ಯ ಎಂದು ಹಟ ತೊಡೋಣವೆ? ಅಜ್ಞಾನವಲ್ಲದೆ ಮತ್ತೇನು? ಮುಸಲ್ಮಾನರಲ್ಲಿ ಅನೇಕ ಪಕ್ಷಗಳು ಲೀಗಕ್ಕೆ ವಿರುದ್ಧವಾಗಿವೆ, ಎಷ್ಟೋ ಪಕ್ಷಗಳು ಕಾಂಗ್ರೆಸಿಗೆ ಸೇರಿವೆ, ಲೀಗವು ಕೂಡ ಯುದ್ಧಕಾರ್ಯದಲ್ಲಿ ಸಹಕಾರವನ್ನು ಕೊಟ್ಟಿಲ್ಲ, ಇನ್ನು ಸಂಸ್ಥಾನಗಳಲ್ಲಿಯ ಮುಸಲ್ಮಾನರ ಮಾತಂತೂ ಬೇರೆಯೆ. ಹೀಗಿರುವಾಗ ೯ ಕೋಟಿ ಮುಸಲ್ಮಾನರು ತಮ್ಮ ಕಡೆಗಿದ್ದಂತೆಯೆ

ಈ ಪ್ರಧಾನಾಮಾತ್ಯರು ಹೆಮ್ಮೆಪಡುವರಲ್ಲ! ಚರ್ಚಿಲ್‌ರು ಕೊಟ್ಟ ಅಂಕೆಗಳನ್ನು ನೋಡಿದರೆ ಕಾಂಗ್ರೆಸು ಹಿಂದುಸ್ತಾನದಲ್ಲಿ ತೀರ ಚಿಕ್ಕದು, ಉಪೇಕ್ಷಣೀಯವಾದುದು ಎಂದೆನಿಸುವುದು. ಆದರೂ ಕಾಂಗ್ರೆಸಿಗಾಗಿಯೆ ಅಮೆರಿ—ಚರ್ಚಿಲ್ ಪ್ರಭೃತಿಗಳಿಗೆ ನಿದ್ದೆ ಇಲ್ಲದಂತಾಗಿದೆ—ಎಂಬುದು ಇವರ ಸಿಡುಕಿನಿಂದ ಸ್ಪಷ್ಟವಾಗುವುದು.

ಹೊಣೆ ಇಲ್ಲದ ಹಟ

ದೇಶಕ್ಕೆ ಯಾರೂ ಪ್ರತಿನಿಧಿಯಲ್ಲ ಎಂಬ ಮಾತನ್ನು ಈಗಾಗಲೆ ಚರ್ಚಿಲ್‌ರೂ ಸರಕಾರದವರೂ ಆಚರಣೆಯಲ್ಲೂ ತಂದಿದ್ದಾರೆ. ಡಾ. ಮುಕರ್ಜಿಯವರ ನೇತೃತ್ವದಲ್ಲಿ ತಯಾರಾದ ಯೋಜನೆಗೆ ಕಾಂಗ್ರೆಸಿನ ಮುಂದಾಳುಗಳ ಸಂಮತಿಯನ್ನು ಪಡೆಯಬೇಕೆಂದಾಗ, ಸರಕಾರದವರು ಅದಕ್ಕೆ ಅಪ್ಪಣೆಯನ್ನೆ ಕೊಡಲಿಲ್ಲ! ಡಾ. ಮುಕರ್ಜಿಯವರು ಬಂಗಾಲ ಪ್ರಾಂತದ ಮಂತ್ರಿಗಳೆಂಬುದನ್ನು ಲಕ್ಷ್ಯಕ್ಕೆ ತಂದರೆ, ಸರಕಾರದ ಧೋರಣೆಯ ಅರ್ಥವು ಇನ್ನಿಷ್ಟು ಸ್ಪಷ್ಟವಾಗುವುದು. ಕಾಂಗ್ರೆಸಿನವರು ಬಂಡುಗಾರರು (ಬಂಡನ್ನು ಹೂಡಿದ್ದಕ್ಕಲ್ಲ, ಹೂಡಬೇಕೆಂದು ವಿಚಾರಮಾಡಿದ್ದಕ್ಕೆ!), ಆದ್ದರಿಂದ ಅವರ ಸಂಮತಿ ಸರಕಾರಕ್ಕೆ ಇಷ್ಟವಿಲ್ಲ. ಇತ್ತ ಯೋಜನೆಯನ್ನು ತಯಾರಿಸಿದವರು ಪ್ರತಿನಿಧಿಗಳಲ್ಲ, ಇತ್ತ ಸರಕಾರದ ಯೋಜನೆಯೂ ಇನ್ನೊಂದಿಲ್ಲ. ಯಾಕೆ? ಯಾರೂ ಪ್ರಜೆಗಳ ಪ್ರತಿನಿಧಿಗಳೆ ಅಲ್ಲ! ತರ್ಕವೇನೋ ಸಮರ್ಪಕವಾದಂತಿದೆ. ಆದರೆ ಇಂದು ಸರಕಾರಕ್ಕೆ ಚರ್ಚಾಮಂಡಳ (debating society) ದಲ್ಲಿ ಭಾಗವಹಿಸಿ ಗೆದ್ದೆವೆಂಬ ಅಭಿಮಾನ ಬೇಕಿದೆಯೆ? ಇಲ್ಲವೆ ಮಾನವನ ಜೀವಿತ ಭವಿತವ್ಯವನ್ನವಲಂಬಿಸಿದ ತತ್ತ್ವಕ್ಕಾಗಿ ಹೂಡಿದ ಯುದ್ಧದಲ್ಲಿ ಗೆಲ್ಲಬೇಕಿದೆಯೆ? ಎರಡನೆಯದು ಬೇಕಿದ್ದರೆ ಸರಕಾರವು ಇನ್ನೊಂದು ನಿಷ್ಕ್ರಿಯ ಹಟವನ್ನು ಕೊಳ್ಳುತ್ತಿರಲಿಲ್ಲ.

ಪರಪ್ರಭುತ್ವದ ಪ್ರತಿನಿಧಿಗಳು

ಕೇಂದ್ರ ಶಾಸನ ಸಭೆಯಲ್ಲಿ ಸದ್ಯದ ರಾಜಕೀಯ ವಾತಾವರಣದ ಮೇಲೆ ನಡೆದ ಚರ್ಚೆಯಿಂದ ಸರಕಾರವೂ ಹೇಗೆ ನಿಷ್ಕ್ರಿಯವಾಗಿದೆ ಮತ್ತು ಹಟವನ್ನು ತಾಳಿದೆ ಎಂಬುದು ಸ್ಪಷ್ಟವಾಗಿದೆ. ಬ್ರಿಟಿಶರಾದ ಹೋಮ್ ಮೆಂಬರರು (ಸರ್ ರೆಜಿನಲ್ಡ್ ಮ್ಯಾಕ್ಸ್‌ವೆಲ್‌ರು) ಮಾತನಾಡಿದ್ದನ್ನು ಬಿಟ್ಟುಬಿಡೋಣ (ಯಾಕೆಂದರೆ, ಅಮೆರಿ-ಚರ್ಚಿಲ್‌ರ ಪಾಠಗುರುಗಳವರು). ಆದರೆ ಬ್ರಿಟಿಶರ ಕಲ್ಪನಾತ್ಮಕವಾದ ಹಿಂದುಸ್ತಾನದ ಪ್ರತಿನಿಧಿಗಳಾದ ಶ್ರೀ. ಅಣೆ (ಹಿಂದು), ಸರ್ ಸುಲ್ತಾನ್ ಅಹಮ್ಮದ (ಮುಸಲ್ಮಾನ್), ಡಾ. ಅಂಬೇಡಕರ (ಚರ್ಚಿಲ್‌ರು ಹೇಳುವಂತೆ ಮೈಲು ದೂರದಿಂದ ಮೈಲಿಗೆ ತರುವ ಅಸ್ಪೃಶ್ಯರು)— ಈ ಪ್ರಭೃತಿಗಳು ಹೇಳಿದ್ದೇನು? ಇವರೆಲ್ಲರೂ ಮೇಧಾವಿಗಳೆಂದು ಅಮೆರಿಸಾಹೇಬರ ಸರ್ಟಿಫಿಕೇಟು! ಇವರ ಮೇಧಾವಿತ್ವದಿಂದ ಚರ್ಚೆಗೆ ಯಾವ ಲಾಭವಾಗಿದೆ? ರಾಜಕೀಯ ಪರಿಸ್ಥಿತಿಗೆ ಯಾವ ಗತಿ ದೊರಕಿದೆ? 'ದಬ್ಬಾಳಿಕೆ ಯೋಗ್ಯವಿದೆ. ಕಾಂಗ್ರೆಸಿನೊಡನೆ ಸಂಧಾನ ಶಕ್ಯವಿಲ್ಲ' ಎಂಬುದೇ ಇವರೆಲ್ಲರ ಪಲ್ಲವಿ. ಸರಿ. ಆದರೆ ದೇಶದ ಗತಿ ಏನು? ಯುದ್ಧಕಾರ್ಯಕ್ಕೆ ಸಹಾಯ ದೊರಕುವುದು ಹೇಗೆ? ಇಂತಹ ಪರಿಸ್ಥಿತಿಯಲ್ಲಿ ಸೈನ್ಯವನ್ನು ಸ್ವದೇಶದ ಸಾಮಾನ್ಯರ ದಂಡನೆಗೆ ಉಪಯೋಗಿಸುವುದು ಜನತೆಯ ಸಹಕಾರ ದೃಷ್ಟಿಯಿಂದ ಲಾಭದಾಯಕವೆ? ಶಾಸನ ಸಭೆಯ ಸದಸ್ಯರೆಲ್ಲ (ಪಕ್ಷಭೇದಗಳನ್ನು ಮೀರಿ) 'ದಬ್ಬಾಳಿಕೆ ಅಯುಕ್ತ, ಸಂಧಾನವು ಶಕ್ಯ, ರಾಷ್ಟ್ರೀಯ ಸರಕಾರದ ಸ್ಥಾಪನೆ ಅನಿವಾರ್ಯ, ಸ್ವಾತಂತ್ರ್ಯವು ಸದ್ಯದಲ್ಲಿಯೆ ಅವಶ್ಯ' ಎಂದು ಒಂದೇ ದನಿಯಿಂದ ಸಾರುವಾಗ, ಅಣೆ ಪ್ರಭೃತಿಗಳು ಪರಪ್ರಭುತ್ವದ ಪ್ರತಿನಿಧಿಗಳಿದ್ದಂತೆ ಎಂದೆನಿಸಬಹುದಲ್ಲವೆ? ಇಷ್ಟೇಕೆ? 'ದೇಶದ ದೃಷ್ಟಿಯಿಂದ, ಯುದ್ಧದ ತತ್ತ್ವದ ದೃಷ್ಟಿಯಿಂದ, ಯುದ್ಧಕಾರ್ಯದ ಪ್ರಗತಿಯ ದೃಷ್ಟಿಯಿಂದ ದೇಶೀಯರಿಗೆ ಸ್ವಾತಂತ್ರ್ಯವನ್ನು ಕೊಟ್ಟು, ರಾಷ್ಟ್ರೀಯ ಸರಕಾರವನ್ನು ಸ್ಥಾಪಿಸುವುದೆ ಬುದ್ಧಿಮತ್ತೆ' ಎಂದು ಯುರೋಪಿಯನರ ಪಕ್ಷದಿಂದ ಕಲಕತ್ತೆಯ ಸರ್ ಆರ್ಥರ್ ಮೂರರಂತಹರು ಅಭಿಪ್ರಾಯಪಡುವಾಗ, ಅಣೆ ಮುಂತಾದವರನ್ನು ಕಂಡು 'ಅಥೋಽಥೋ ಗಂಗೇಯಂ' ಎಂಬ ಗಾದೆಯ ಮಾತು ನೆನಪಿಗೆ ಬಂದರೆ ಆಶ್ಚರ್ಯವೇನು? ಪರಿಸ್ಥಿತಿಯಿಂದ ಬುದ್ಧಿ ಗಲಿಯುವುದಕ್ಕಿಂತ ಬುದ್ಧಿಯಿಂದ ಪರಿಸ್ಥಿತಿಯನ್ನು ಹತೋಟಿಯಲ್ಲಿಡುವುದು ಮೇಲು. ಇದು ಅನುಭವ.

(೨೦೩ ನೆಯ ಪುಟದಿಂದ ಮುಂದೆಸಾಗಿದುದು)

ಹೇಳಲ್ಪಟ್ಟಿದೆ ಎಂದು ಮುಖ್ಯಾಸದ ಹಿಂದೂ-ಪತ್ರಿಕೆಯ ಕಲಕತ್ತೆಯ ಸುದ್ದಿಗಾರನು ಬರೆಯುವನೆಂದು ನಮ್ಮ ಸೇವಾಪರದ ಸ್ವಂತ ಸುದ್ದಿಗಾರನು ತಿಳಿಸುತ್ತಾನೆ.'

(೨) 'ಮುಸ್ಲಿಂ ಲೀಗವು ಪಾಕಿಸ್ತಾನವನ್ನು ಮುಸಲ್ಮಾನರಿಗಾಗಿಯೆ ಮಾತ್ರ ಬೇಡುತ್ತಿದ್ದುದರಿಂದ ನಾವು ನಮ್ಮ ಬೇರೆ ದಾರಿಯನ್ನೆ ಹಿಡಿಯತಕ್ಕದ್ದು. ನಮಗೂ ಮುಸ್ಲಿಂ ಲೀಗದಷ್ಟೆ ಪ್ರತಿನಿಧಿತ್ವ ಬೇಕು! ಡಾ. ಅಂಬೇಡಕರ.

ಮುಸ್ಲಿಂ ಲೀಗಕ್ಕೆ ೧೦೦ ಕ್ಕೆ ೫೦ ರಷ್ಟು ಬೇಕೇಬೇಕೆಂದು ಜಿನಾ ಸಾಹೇಬರು ಹೇಳಿದ್ದರಿಂದ ಡಾ. ಅಂಬೇಡಕರರಿಗೂ ೧೦೦ ಕ್ಕೆ ೫೦ ರಷ್ಟೆ ಬೇಕಾಗುವುದು. ಆದ್ದರಿಂದ ೧೦೦ರಲ್ಲಿ ೫೦+೫೦ ಹೋಗಿ ಮಿಕ್ಕದ್ದು ಬಹುಮತದವರಿಗೆಂದು ಸಿದ್ಧವಾಯಿತು. ಡಾ. ಅಂಬೇಡಕರರ ಈ ಗಣಿತ ಪಾಂಡಿತ್ಯಕ್ಕೆ ಮರುಳಾಗಿಯೆ ಚರ್ಚಿಲ್‌ರು ಅವರನ್ನು ವೈಸರಾಯರ ಕೌನ್ಸಿಲದ ಮೆಂಬರನ್ನಾಗಿ ಮಾಡಿಕೊಂಡಿರಬಹುದಲ್ಲವೆ?



ಶಿಲಾಪ್ರವಂಗ

SHILAPRAVANG

★

ಯಾವುದೇ ವಿಧವಾದ
ಉಷ್ಣತೆಯಿಂದ ಬಳಲಿರುವ
ನಿಮ್ಮ ಹೃದಯ, ಮಿದುಳು,
ರಕ್ತ, ವೀರ್ಯಗಳಿಗೆ
ಆಯಾಸವನ್ನು ಹೋಗ-
ಲಾಡಿಸಿ, ತಂಪು ಕೊಟ್ಟು,
ಶರೀರದಲ್ಲಿ ನವಚೈತನ್ಯವನ್ನು
ಹುಟ್ಟಿಸುವುದಕ್ಕೆ ಶ್ರೇಷ್ಠವಾದ
ಔಷಧವು.

★

ಶ್ರೀಧೂತಪಾಪೇಶ್ವರ
ಪನವೇಲ, ಲಿಮಿಟೆಡ್.

ಪನವೇಲ ಕುಲಾಬಾ

★

SHRI DHOOTAPAPESHWAR
PANVEL Ltd., PANVEL.

ದಿ ಯುನಾಯಿಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪನಿ, ಲಿಮಿಟೆಡ್

ಹೆಡ್ ಆಫೀಸ್ ಧಾರವಾಡ.

★ ವಿಮೆ ಮಾಡುವ ಅನುಕೂಲವುಳ್ಳ ಕರ್ನಾಟಕಸ್ಥರು, ಈ ಭರದಿಂದ ಬೆಳೆಯುತ್ತಿರುವ ಕನ್ನಡ ಕಂಪನಿಯ ಪಾಲಿಸಿಯನ್ನೇ ಪಡೆಯಬೇಕು !

★ ಮೊದಲನೆಯ ಮೌಲ್ಯಮಾಪನದಲ್ಲಿ (Valuation) ಲಾಭವನ್ನು ಹಂಚುವುದಲ್ಲದೆ, ಹೊಸ ವಿಮಾಕಾಯಿದೆಯ ನಿರ್ಬಂಧಗಳಿಗೆ ತಕ್ಕಂತೆ ನಡೆದು, ಎಲ್ಲ ಪಾಲಿಸಿದಾರರ ಪ್ರೋತ್ಸಾಹಕ್ಕೂ ಪಾತ್ರವಾಗಿದೆ.

★ ಮರಣಹೊಂದಿದ ಪಾಲಿಸಿದಾರರ ವಾರಸದಾರರಿಗೆ ವಿಲಂಬವಿಲ್ಲದೆ ಹಕ್ಕಿನ ಹಣ (Claim) ವನ್ನು ಸಲ್ಲಿಸಿರುವುದರಿಂದ, ಎಲ್ಲರ ನಂಬಿಗೆಗೂ ತಕ್ಕುದಾಗಿದೆ.

★ ಕರ್ನಾಟಕದ ಏಳ್ಗೆಗಾಗಿ ಹಂಬಲಿಸುವವರೂ ಕನ್ನಡನಾಡಿನ ಹಿತಚಿಂತಕರೂ, ಇದೇ ಕಂಪನಿಯ ಪಾಲಿಸಿಗಳನ್ನೂ ಪಾಲುಗಳನ್ನೂ ಕೊಂಡುಕೊಳ್ಳಲೇ ಬೇಕು.

ಏಜಂಟರಿಗೆ ಧಾರಾಳವಾದ ಕಮಿಶನ್ ಕೊಡಲಾಗುವುದು.

ವಿಶೇಷವಿವರಕ್ಕೆ ಬರೆಯಬೇಕು :— ಎಮ್. ಗೋವರ್ಧನರಾವ್, ಮ್ಯಾನೇಜರ್

The United Karnatak Insurance Co. Ltd., DHARWA

ತಲೆಗೂದಲು ಚೆನ್ನಾಗಿದ್ದರೆ ಚೆಲುವಿಗೊಂದು ಬೆಲೆ !

ಹಾಗೆ ಚೆನ್ನಾಗಿರುವುದೆಂದರೇನು ?

ತಲೆಗೂದಲು ಕಪ್ಪಗೆ ಇರಬೇಕು, ದಟ್ಟವಾಗಿ, ನೀಳವಾಗಿ ಇರಬೇಕು !

ಹಾಗಾಗಬೇಕಾದರೆ ‘ ಮುಕುಲ ’ ಉಪಯೋಗಿಸಿರಿ !

ತರುಣ-ತರುಣಿಯರು ಬರಿಯೆ ಕಣ್ಣು-ಮೂಗು-ಬಣ್ಣಗಳಿಂದ ಚೆನ್ನಾಗಿದ್ದರೆ ಏನಾಯಿತು? ತಲೆಗೆ ಕೂದಲು ಚೆನ್ನಾಗಿರದಿದ್ದರೆ ಎಷ್ಟು ಚೆಲುವಿಕೆಯಿದ್ದರೂ ಅದು ವ್ಯರ್ಥವೆನಿಸುವುದು.
ಅದಕ್ಕಾಗಿಯೆ

ಆಯುರ್ವೇದ ತಜ್ಞರಿಂದ ಶುದ್ಧ ಕೊಬ್ಬರಿಯೆಣ್ಣೆಯಲ್ಲಿ ತಯಾರಿಸಲಾದ ‘ ಮುಕುಲ ’ ಎಂಬ ಕೇಶವರ್ಧಕ ತೈಲವನ್ನು ಯಾವಾಗಲೂ ಬಳಸುತ್ತಿದ್ದರೆ, ನಿಮ್ಮ ಚೆಲುವಿಕೆ ಪೂರ್ಣತೆ ಪಡೆಯುವುದೆಂಬುದನ್ನು ಮರೆಯಬೇಡಿರಿ.

ಆಯುರ್ವೇದಾಶ್ರಮ ಫಾರ್ಮಸಿ ಲಿ., ಅಹಮ್ಮದನಗರ

ಕರ್ನಾಟಕ ಶಾಖೆ : ಸ್ಟೇಶನ್‌ರೋಡು, ಹುಬ್ಬಳ್ಳಿ.

Printed by Mr. V. Y. Jathar at the Karnatak Printing Works, Dharwar, and Published for the Proprietors, Jayanti Publications, by M. V. Mellegatti at the Jayanti Office, Dharwar.

జయంతి



సెప్టెంబరు ౧౯౬౨

వెల నాల్గణా

ಪ್ರತಿತಿಂಗಳ ಮೊದಲನೆಯ ತಾರೀಖಿಗೆ ಪ್ರಕಟವಾಗುವುದು.

ವಾ. ವರ್ಗಣಿ ಅಂಚೆವೆಚ್ಚ ಸೇರಿ ೩—೦—೦ .... ವ್ಹಿ. ಪಿ. ಯಿಂದ ೩—೫—೦ .... ಬಿಡಿಸಂಚಿಕೆಗೆ ೪ ಆಣೆ

ಸಂಪಾದಕರು

ಬೆಟಗೇರಿ ಕೃಷ್ಣಶರ್ಮರು

೫ನೆಯ ವರ್ಷ	ನವ್ಹಂಬರ್ ೧೯೪೨	೭ನೆಯ ಸಂಚಿಕೆ

ಮುಖ್ಯವಿಷಯಗಳ ಪರಿವಿಡಿ

ಮುನ್ನುಗ್ಗು ! (ಕವಿತೆ)	ಶ್ರೀಮತಿ ಎಲ್. ವಿ. ಕಾವೇರಮ್ಮ, ಭದ್ರಾವತಿ	[illegible]
ಸಂಪಾದಕೀಯ	ಸಂಪಾದಕರು	[illegible]
ಮಂಗನ ಮಲ್ಲಿನಾಥತನ	' ಮಲ್ಲಿನಾಥ '	[illegible]
ಸಣ್ಣಕತೆಗಳ ಮೇಲಾಟದ ಪರಿಣಾಮ	....	[illegible]
ಹಿಂದುಸ್ಥಾನವನ್ನು ಸ್ವಾತಂತ್ರ್ಯಕ್ಕೆ ಸಿದ್ಧಗೊಳಿಸಿರಿ (ಗ್ರ. ಪ.)	ಶ್ರೀ. ವಾಳ್ವೇಕರ್ ಗುರುರಾಯರು, ಬಿ.ಎ., ಎಲ್‌ಎಲ್.ಬಿ.	[illegible]
ಬದಲಾವಣೆ (ಒಂದು ದೃಶ್ಯಕಥೆ)	ಶ್ರೀ. ' ಶ್ಯಾಮೂ ' ಬಳ್ಳಾರಿ	[illegible]
ಭಾರತದ ಜಾತೀಯ ಸಮಸ್ಯೆ (ವಿ. ಪ್ರ. ಪ್ರ.)	ಶ್ರೀ. ' ಸ್ವಾತಂತ್ರ್ಯಪ್ರೇಮಿ ' ಮುಂಬಯಿ	[illegible]
ದೇವರು (ಕವನ)	ಶ್ರೀ. ವಿ. ಜಿ. ಭಟ್ಟ, ಪುಣೆ	[illegible]
ಸಾನುವಿನ ನೆತ್ತಿಯಲಿ (ಕವನ)	ಶ್ರೀ. ಟಿ. ಎನ್. ಶ್ರೀನಿವಾಸಮೂರ್ತಿ, ಮೈಸೂರು	[illegible]
ನೆರೆಗಳ್ಳನ ಭೇಟಿ (ಸಣ್ಣಕತೆ)	ಶ್ರೀ. ವಿಶ್ವನಾಥ ಹೆಗಡೆ, ಮುಂಬಯಿ	[illegible]
ಕಲಾಭಿರುಚಿ (ಸೌಂದರ್ಯವಿಜ್ಞಾನ)	ಶ್ರೀ. ಖಾನೋಳಕರ ಶ್ರೀಧರರಾಯರು, ಯರಗಾಡಾ	[illegible]
ಆಳುಬುರುಕು ಕಾಲುದೀಪ (ವ್ಯಂಗ್ಯಪ್ರಬಂಧ)	ಶ್ರೀ. ಶಿವರಾಮ ಕಾರಂತರು, ಪುತ್ತೂರು	[illegible]
ನಮ್ಮ ಊಟ (ಸುಖ-ಸ್ವಾಸ್ಥ್ಯವಿಚಾರ)	ಶ್ರೀ. ಬಿದರಕುಂದಿ ವೆಂಕಟರಾಯರು, ನಂದಗಡ	[illegible]
ನವರಾತ್ರಿಯ ಬೊಂಬೆ (ಸಣ್ಣಕತೆ)	ಶ್ರೀಮತಿ ಎಸ್. ಆರ್. ಜಯಲಕ್ಷ್ಮಿ, ಚಿಕ್ಕಮಗಳೂರು	[illegible]
ನಗೀಗೆ ನೇವಿದ್ಯ	' ನಕಲೀ ನಾರಾಯಣಾಚಾರ್ರು '	[illegible]
ಪುಸ್ತಕ ವಿಮರ್ಶೆ	' ವ. ಬಾ. ಕು. '	[illegible]
ಸಾದರ ಸ್ವೀಕಾರ	....	[illegible]
ನಾಲ್ಕೂ ನಿಟ್ಟಿನ ನೋಟ	' ನಿರೀಕ್ಷಕರು '	[illegible]

ಕಥಾಸಂಚಿಕೆ

ಜಯಂತಿಯ ಡಿಸೆಂಬರ್ ಸಂಚಿಕೆಯು ಕಥಾಸಂಚಿಕೆಯಾಗಿ ಪ್ರಕಟವಾಗುವುದು. ಕಾಗದದ ಅನುಕೂಲತೆಯಾದರೆ ಹೆಚ್ಚು ಪುಟಗಳನ್ನು ಕೊಡಬೇಕೆಂಬ ಅಪೇಕ್ಷೆಯೂ ಇದೆ. ಮೇಲಾಟದಲ್ಲಿ ಬಹುಮಾನಪಡೆದ ಕತೆಗಳೆಲ್ಲ ಪ್ರಕಟವಾಗುವುವಲ್ಲದೆ ಬೇರೆ ಒಳ್ಳೆಯ ಕತೆಗಳೂ ಬರುವುವು. ಹೆಚ್ಚು ಪ್ರತಿಗಳು ಬೇಕಾದ ಏಜಂಟರು ಮೊದಲೇ ಬರೆದು ತಿಳುಹಬೇಕು.

ಜಯಂತಿ

ಸಂಪುಟ ೫ | ೧ನೆಯ ನವೆಂಬರ್ ೧೯೪೨ | ಸಂಚಿಕೆ ೬

ಮುನ್ನುಗ್ಗು !

★

ಶ್ರೀಮತಿ ಎಲ್. ಬಿ. ಶಾನೇರಮ್ಮ, ಭದ್ರಾವತಿ

೧

ಮುನ್ನುಗ್ಗು ಮುನ್ನುಗ್ಗು ಬಾಳ ಹೆದ್ದಾರಿಯಲಿ,
ಕೀಳ್ತನವ ಕಲ್-ಮುಳ್ಳ ಕಿತ್ತೊಗೆಯುತ—
ಹಿರಿತನಕೆ ಬಂದಿರುವ ಮಂದಿಗಳ ಕಿಡಿನೋಟ-
ವಿಷದೃಷ್ಟಿಗಳಿಗೆಲ್ಲ ಮೊಗದಿರುಹುತ !

೨

ಮೊದಲಡಿಯುಲುಕ್ಕಕ್ಕೆ ಹರಿಯುತಿಹ ಹುಮ್ಮಸವು
ಹನಿಹಿಂಗಬಹುದೊಡನೆ—ಮರುಹೆಜ್ಜೆಗೆ,
ನೀ ನೆನೆದ ಹೆಬ್ಬಯಕೆ—ಹೊಂಗನಸು—ನನಸೆಲ್ಲ
ಮಣ್ಗೂಡುತಿರಬಹುದು ಗಳಿ-ಗಳಿಗೆಗೆ !

೩

ಆದೊಡೆಯು ಬೆದರಿ ನೀ ಬದಲುಗೊಳದಿರು, ಸಟೆಯ
ಬಲೆಗೆ ನಿನ್ನಾತ್ಮವನು ಬಲಿಗೊಡದಿರು !
ಕಾಳ್ಗಿಚ್ಚು ಎದ್ದಿರಲಿ, ಕಲ್ಮಳೆಯು ಕವಿದಿರಲಿ,
ಉಕ್ಕಿನೊಲು ಮಾಡು ನೀ ತನು-ಮನವನು !

೪

ದುಃಖದುಡಿಗೆಯನು ಧರಿಸಿರುವಂದು ನೀ ಕಂಡ
ಮುಸುಕೆಳೆದ ಸಿರಿಜಗದ ಮರ್ಮಗಳನು—
ಬಚ್ಚಿಡದೆ ಬದಿಗೆಳೆದು, ಸುಖದುಣಿಸ ಕಂಡಾಗ
ಬಡಜನದ ಸೇವೆಯಲಿ ಸವಿಸೂಡಲನು !

೫

ಬಾಗದಿರು ಸಿರಿತನಕೆ, ಕರಗದಿರು ಸಟೆನುಡಿಗೆ,
ಬೀಳದಿರು ರಂಗೆರೆವ ಕವಡುವಲೆಗೆ !
ನೀಡದಿರು ದಾನವನು ಚೈತನ್ಯವಿದ್ದವಗೆ
ಈಡಾಡು ಬಾಳನ್ನು ದೀನಕುಲಕೆ !

೬

ಮುನ್ನುಗ್ಗು ಮುನ್ನುಗ್ಗು ಬಾಳಹೆದ್ದಾರಿಯಲಿ,
ಕೀಳ್ತನದ ಕಲ್-ಮುಳ್ಳ ಕಿತ್ತೊಗೆಯುತ—
ಮುನ್ನುಗ್ಗು ಮುನ್ನುಗ್ಗು ಆಡಗಿರುವ ಹಿರಿಬೆಳಕ
ನಾಡಿನಲಿ ಹಬ್ಬಿಸುವೆನೆಂದೆನ್ನುತ !

ಜಾಗೃತ ಕ್ಷಾತ್ರವೃತ್ತಿ

'ಹಿಂದುಸ್ಥಾನದಲ್ಲಿ ನಿಜವಾದ ಕ್ಷಾತ್ರವೃತ್ತಿ ಇದೆಯೆ?' ಎಂದು ಯಾರೂ ಕೇಳಬಹುದಾದಂತಹ ಸ್ಥಿತಿ ಇದುವರೆಗೆ ನಮ್ಮದಾಗಿದ್ದಿತು. 'ದ್ವಿತ್ರಿಂಶತ್ ಕೋಟಿ ಭುಜೈರ್ಧೃತ ಖರಕರವಾಲೆ!' ಎಂದು ಅಭಿಮಾನದಿಂದ ಭಾರತೀಯ ಬಲುಹನ್ನು ನಾವೆಲ್ಲ ಹೊಗಳಿ ಹಾಡುತ್ತಿದ್ದರೂ, ಆ 'ಖರಕರವಾಲ' ಯಾರ ಕಣ್ಣಿಗೂ ಕಾಣುತ್ತಿರಲಿಲ್ಲ. ಇತಿಹಾಸಕಾಲದ ಕಡೆಗೆ ಸೂಕ್ಷ್ಮದೃಷ್ಟಿಯಿಂದ ನೋಡಿದರೆ, ಆ 'ಖರಕರವಾಲ'ಗಳು ಕಾಣುವಂತಾದರೂ, ಅವು ಸ್ವಜನಕಲಹದಲ್ಲಿ ಹರಿತವಾಗಿಯೂ ವೈರಿನಿಗ್ರಹದಲ್ಲಿ ಕಿಲುಬುಗಟ್ಟಿದುವಾಗಿಯೂ ಇದ್ದುದನ್ನು ಕಾಣುವೆವು. ಆ ಕಾಲದಿಂದ ವರ್ತಮಾನ ಕಾಲಕ್ಕೆ ಬರುತ್ತಿರುವಾಗ, ಆ ಕರವಾಲಗಳೆಲ್ಲ ಕಣ್ಮರೆಯಾಗಿ ಹೋದುದು ಇಂದಿನ— ಅನುಭವದ— ಪ್ರತ್ಯಕ್ಷ ಸಂಗತಿಯಾಗಿದೆ. ಇಲ್ಲವಾದರೆ ಆನೆಯನ್ನು ಆಡು ನುಂಗಬಹುದಾಗಿದ್ದಿತೆ? ಹುಲಿಯನ್ನು ಇಲಿ ಬಲೆಯಲ್ಲಿ ಹಿಡಿಯಬಹುದಾಗಿದ್ದಿತೆ?

ಅಫಘಾನ್‌ರಂತಹ ಗುಡ್ಡಗಾಡಿನ ಜನ ಗುಂಪುಗಟ್ಟಿ ಸುಲಿಗೆಗೆ ಬಂದರು; ಭಾರತದ ಸುಸಂಸ್ಕೃತ (?) ಜನಾಂಗವನ್ನು ಜಯಿಸಿ ಆಳಿದರು. ತಮ್ಮ ದೇಶದಲ್ಲಿ ದನಗಳಂತೆ ಮಾರಿಸಿಕೊಂಡ ಗುಲಾಮ್ ಜನರು ಬಂದರು; ಭಾರತೀಯ ಜನತೆಯನ್ನೇ ಗುಲಾಮರನ್ನಾಗಿ ಮಾಡಿದರು. ಮೊಗಲರಂತಹ ಚಪ್ಪಟೆ ಮೂಗಿನ ಗಿಡ್ಡರು ಬಂದರು; ಧನ್ಯರಾದ ಭಾರತವೀರರ ಬಲವನ್ನು ಜಯಿಸಿ ಅವರನ್ನು ಆಳತೊಡಗಿದರು. ಪೋರ್ತುಗೀಜ್, ಫ್ರೆಂಚ್ ಬಣಜಿಗರು ಬಂದರು; ಅವರ ಫಿರಂಗಿಗಳಿಗೆ ಭಾರತೀಯರ ಬಿಲ್ಲು-ಬಾಣ-ಕತ್ತಿಗಳು ತಲೆಬಾಗಿಸಿದುವು. ಬ್ರಿಟಿಷರಂತಹ ಆಂಗ್ಲೇಯುಗಲ ರಾಷ್ಟ್ರದ ಅಂಗಡಿಕಾರರು ಕೆಲವರು ಬಂದರು; ಭಾರತೀಯ ಕ್ಷಾತ್ರವೃತ್ತಿಯನ್ನೆಲ್ಲ, ಕಾಸಿಗೆ ಪಂಥೇರಿನಂತೆ ತಮ್ಮ ತಕ್ಕಡಿಯಲ್ಲಿಟ್ಟು ತೂಗಿ ಮಾರಲು ತೆಗೆದುಕೊಂಡರು. ಈ ಮಾರುಗೊಂಡ ಭಾರತೀಯ ಕ್ಷಾತ್ರಬಲವನ್ನೇ ಉಪಯೋಗಿಸಿಕೊಂಡು, ಆಸೇತು ಹಿಮಾಚಲ ಭಾರತರಾಷ್ಟ್ರವನ್ನು ಅವರು ಅಧೀನಪಡಿಸಿಕೊಂಡು ಆಳಲು ತೊಡಗಿದರು. ನಮ್ಮ ಶೀಖರ ಶೂರವೃತ್ತಿ ಸಾರರಹಿತವಾಯಿತು. ಗುಡ್ಡಗಾಡು ಗುರ್ಜರಜನರ ಗಂಡುತನ ಬೆಂಡುಗೊಂಡಿತು. ಉತ್ತರದ ರಾಜಪುತ್ರರ ರಾಜಸವೃತ್ತಿ ಮಾಜಿಹೋಯಿತು. ಕಗ್ಗೊಲೆಯ ಕಾಳೆಗದ ಕರ್ಣಾಟಬಲದ ಕಡುಪು ಕಳೆಗೆಟ್ಟುಹೋಯಿತು. 'ಗನಿಮಿಕಾವಾ' ದ ಮರಾಟವೀರರ ನ್ಯಾಯಬಲುಹು ಮಾರುಹೋಯಿತು. ದಕ್ಷಿಣದ ಆಂಧ್ರ-ದ್ರಾವಿಡರ ವೀರವೃತ್ತಿ ಅಂಧವಾಯಿತು. ಈ ಮಾಯೆಯ ಮುಸುಕಿಗೆ ಕಾಲವು ಕಾರಣವಾಯಿತೋ, ಭಾರತೀಯರ ಮನೋವೃತ್ತಿ ಕಾರಣವಾಯಿತೋ ಎಂಬುದನ್ನು ನಮಗಿಂದು ಹೇಳಲಿಕ್ಕೇ ಬಾರದಂತಾಗಿದೆ. ಐದಾರು ಸಾವಿರ ವೈಲುಗಳಾಚೆಯಿಂದ ಬಂದ ಮುಷ್ಟಿತುಂಬ ವೈಶ್ಯವೃತ್ತಿಯ ಜನರ ಕೈಯಲ್ಲಿ, ಸಾವಿರಾರು ವರ್ಷಗಳಿಂದಲೂ ಜಾಗೃತವಾಗಿ ಕಾರ್ಯಮಾಡಿದ ಭಾರತೀಯ ಕ್ಷಾತ್ರವೃತ್ತಿ ಸಿಕ್ಕು ವಿಲಿವಿಲಿ ಒದ್ದಾಡುವುದಕ್ಕೆ ಕಾರಣವೇನೆಂಬುದನ್ನು ನಾವೀಗ ಹೇಗೆ ಕಲ್ಪಿಸಬೇಕು? ಈ ಅವಿದಿತವಾದ ಆಶ್ಚರ್ಯವನ್ನು ಕಂಡು ನಮ್ಮಲ್ಲಿಯ ಬಹುಜನರು 'ದೈವವೇ ಕಾರಣ!' ಎಂದು ಹೇಳಲು ಮುಂದುವರಿಯಬಹುದು. ಆದರೆ ನಾವೇನೂ ಈ ನಿರಾಶಾಜನ್ಯವಾದ ದೈವದ ಕಾರಣವನ್ನು ಒಪ್ಪಲಾರೆವು. ಕರ್ತೃವಾದ ಪುರುಷ ಸರಿಯಾದ ಯೋಗಯುಕ್ತಚಿತ್ತನಾಗಿ ತನ್ನ ಸ್ವಕರ್ಮವನ್ನು ಮಾಡದಿದ್ದರೆ— ಸ್ವಧರ್ಮವನ್ನು ಪಾಲಿಸದಿದ್ದರೆ, ಕಾರ್ಯಸಾಧನೆಗೆ ಕೊನೆಯ ಕಾರಣವಾದ ದೈವವು ಏನು ಹಾನಿ ಮಾಡಬಲ್ಲದು? ಪುರುಷ ನಿಷ್ಕ್ರಿಯನಾದರೆ ದೈವವೂ ನಿಷ್ಕ್ರಿಯವಾಗುವುದು; ಪುರುಷ ಕಾರ್ಯಜಾಗೃತನಾದರೆ ದೈವವೂ ಅವನಿಗೆ ಸಾಹಾಯ್ಯವನ್ನು ಮಾಡುವುದು. ಭಾರತೀಯ ಪಾರತಂತ್ರ್ಯಕ್ಕೆ ಕಾರಣ ಪೌರುಷದ ಅಭಾವವೇ ಹೊರತು ದೈವದ ಕಡೆಗಣ್ಣಲ್ಲವೆಂಬುದನ್ನು ಯಾವ ಬುದ್ಧಿಶಾಲಿಯೂ ಪ್ರಮಾಣಪೂರ್ವಕವಾಗಿ ಸಿದ್ಧಮಾಡಿ ಕೊಡಬಲ್ಲನು.

ಭಾರತದಲ್ಲಿಂದು ಚೈತನ್ಯ ಮತ್ತೆ ಚೇತರಿಸಿಕೊಳ್ಳುವುದರಲ್ಲಿದೆ. ಪೌರುಷದ ಆವಶ್ಯಕತೆಯ ಅರಿವು ಭಾರತೀಯರಿಗೀಗ ಉಂಟಾಗತೊಡಗಿದೆ. ಕಿಲುಬುಗಟ್ಟಿದ ಕ್ಷಾತ್ರವೃತ್ತಿ ಪರಿಸ್ಥಿತಿಯ ಸಾಣೆಗೆ ಸಿಕ್ಕಿ-ಸಿಕ್ಕಿ ಹದನುಗೊಳ್ಳುತ್ತಲಿದೆ. ಅವರ ದುಃಖ-ಹಸಿವೆ-ಬಡತನಗಳು ಭಾರತೀಯರನ್ನು ಸುಮ್ಮನೆ ಬಿದ್ದುಕೊಂಡಿರಲಿಕ್ಕೆ ಬಿಡಲೊಲ್ಲವಾಗಿವೆ. 'ಬದುಕಬೇಕು' ಎನ್ನುವ ಮಾನವ ಸಹಜಬುದ್ಧಿ, ಅವರನ್ನು ಕರ್ತವ್ಯ ಜಾಗೃತರನ್ನಾಗಿಮಾಡಿದೆ. ಆಸೇತು ಹಿಮಾಚಲದ ಭಾರತೀಯರ ಸುಖ-ದುಃಖಗಳಲ್ಲಿ ಸಮಾನಭಾವ ಕಾಣುತ್ತಲಿದ್ದುದರಿಂದ, ಸಂಘಟನೆ ಸಹಜವಾಗಿ ಆಗುವಂತಿದೆ. ಕರ್ತವ್ಯಹೀನತೆಯ ದುಷ್ಪರಿಣಾಮದ ಇತಿಹಾಸವು, ಭಾರತೀಯರನ್ನು ಒಂದು ಕ್ರಮದ (ಶಿಸ್ತಿನ) ದಾರಿಯಲ್ಲಿ ಮುಂದುವರಿಸಲು ಕೈಗಂಬಗಳನ್ನು ನಿಲ್ಲಿಸಿಬಿಟ್ಟಿದೆ. ಭಾರತದ ಸುಖಶಾಂತಿಗಾಗಿ ವೈಯಕ್ತಿಕ ಸುಖ-ಶಾಂತಿಗಳನ್ನು ಹೋಳಿಮಾಡಿದ ತ್ಯಾಗವೀರರು ಇಂದು ನಾಯಕರಾಗಿ ನಾಡನ್ನು ನಡೆಯಿಸುತ್ತಲಿದ್ದಾರೆ. ಎಲ್ಲೆಲ್ಲಿಯೂ 'ಆಳುಬಾಳಿ'ಗೆ ಜನ ಬೇಸತ್ತು ಹೋಗಿದೆ. ತಾವೆ ತಮ್ಮನ್ನು ಆಳಿಕೊಳಬೇಕೆಂಬ ಸಾಮಾಜಿಕ ಸಮಂಜಸಬುದ್ಧಿ ತಲೆದೋರಿದೆ. ಆದಕ್ಕಾಗಿ ತ್ರಿಕರಣಪೂರ್ವಕವಾಗಿ ಕಾರ್ಯ ಮಾಡುವವರೂ ಸಿದ್ಧರಾಗಿ ನಿಂತಿದ್ದಾರೆ. ಎಲ್ಲ ಕಡೆಗೂ ಮಲಗಿದ್ದ ಕ್ಷಾತ್ರವೃತ್ತಿ ಎಚ್ಚತ್ತು ನಿಂತಿದೆ; ಭಾರತದ ಸ್ವಾತಂತ್ರ್ಯಕ್ಕಾಗಿ ಕುತೂಹಲದಿಂದ ಕಾಯುತ್ತಲಿದೆ. ಸದ್ಯದ ಪ್ರಪಂಚದ ಪರಿಸ್ಥಿತಿ ಭಾರತೀಯರ ಅನಾರೋಗ್ಯಕ್ಕೆ ಪಥ್ಯಕಾರಿ— ಹಿತಕಾರಿ!

—ಸಂಪಾದಕರು.



ಹಿಂದೆ ನೋಡುಂತಾ ! ಮುಂದೆ ನಡೆಯಿರಿ !!

ಕಾಂಗ್ರೆಸ್ ಮತ್ತು ಸರಕಾರಗಳ ನಡುವೆ ಸಂಧಾನವಾಗಬೇಕೆಂದು ಹಿರಿಕ್ಕವರಂತೆ ಮಂಗರಾಯನೂ ಅಭಿಪ್ರಾಯಪಡುತ್ತಾನೆ. ಆದರೆ ಈ ವಿಷಯ ನಿಜವಾಗಿದ್ದ ತೊಡಕು, ಹಿಂದುಸ್ತಾನದಲ್ಲಿ ಮಂಗರಾಯನಿಗೊಬ್ಬನಿಗೆಯೆ ತಿಳಿದಿದೆ ಎಂದು ಅಭಿಮಾನದಿಂದ ಹೇಳಬೇಕಾಗಿದೆ; ಮತ್ತು ಇಂಗ್ಲಂಡಿನಲ್ಲಿ ಭಾರತದ ಸಣ್ಣ ಸೆಕ್ರೆಟರಿ ಆಫ್ ಸ್ಟೇಟ್‌ರಾದ ಡ್ಯೂಕ್ ಆಫ್ ಡೆವನ್‌ಶಾಯರಿಗೊಬ್ಬರಿಗೆ ತಿಳಿದಿದೆ ಎಂದೂ ಮಂಗರಾಯನು ಒಪ್ಪುತ್ತಾನೆ. ಆ ತೊಡಕೆಂದರೆ ಹೀಗೆ:— ಪರಸ್ಪರ ಸಂಧಾನವಾಗುವುದು ಹೇಗೆ? ಬ್ರಿಟಿಶ್ ಸರಕಾರವೆ ಮುಂದೆ ಬರಬೇಕೆಂದು ಇಡಿಯ ಜಗತ್ತಿನ ಅಭಿಪ್ರಾಯ. ಹಿಂದುಸ್ತಾನವೆ ಮುಂದೆ ಬರಬೇಕೆಂದು ಬ್ರಿಟಿಶರ ಮತ್ತು ಮಂಗರಾಯನ ಅಭಿಪ್ರಾಯ. ಹಿಂದುಸ್ತಾನವು ಹಿಂದುಳಿದ ರಾಷ್ಟ್ರ—ಅದಕಾಗಿ ಅದೇ ಮುಂದೆ ನಡೆದು ಬರಬೇಕು, ಏಕೆಂದರೆ ಪ್ರಗತಿ ಎಂಬುದು ಮಂಗರಾಯನಿಗೆ ಗೊತ್ತು. ಆದರೆ ಬ್ರಿಟಿಶರೆ ಮುಂದೆ ಬರಬೇಕು ಎನ್ನುವವರಿಗೆ ಪರಿಸ್ಥಿತಿಯ ಜ್ಞಾನವಿಲ್ಲ ಎಂದು ಮಂಗರಾಯನು ವಿಷಾದಪೂರ್ವಕ, ಆದರೆಯುಕ್ತ ಮುಂತಾದ ರೀತಿಯಲ್ಲಿ ಹೇಳಬೇಕಾಗಿದೆ. ಮುಂದೆ ಬರಬೇಕಾದರೆ ಅಂತಹ ರೂಢಿ ಬೇಕ— ಅಲ್ಲಲ್ಲ— ಎಂದರೆ ಅವಕಾಶ ಬೇಕಲ್ಲವೆ? ಜಗತ್ತನ್ನು ವ್ಯಾಪಿಸಿ ನಿಂತಂಥ ಮಹಾಕಾಯ ಬ್ರಿಟನ್ನವು ನಡೆಯುವುದಕ್ಕಿಂತ, ಬಡಕಲಾದ ಭಾರತವು ನಡೆದು ಬಂದರೆ ಶೀಘ್ರವಾಗಲಿಕ್ಕಿಲ್ಲವೆ? ಹಾಂ— ತಡೆಯಿರಿ. ಗೊತ್ತಿದೆ ನಿಮ್ಮ ಜಾಣತನ ಮಂಗರಾಯನಿಗೆ. ಏಕಕಾಲಕ್ಕೆ ಇಬ್ಬರೂ ಮುಂದೆ ನಡೆದು ಮಧ್ಯದಲ್ಲಿ ಭೆಟ್ಟಿಯಾಗಬಾರದೇಕೆ— ಎಂಬ ಜಾಣತನ ಬಲ್ಲ ಮಂಗನುಹಾರಾಯ. ಹಾಗಾದರೆ ಇಷ್ಟಿಷ್ಟು ತೊಡಕಾಗಬಹುದು. ಯಾಕೆನ್ನುವಿರಾ? ಇಬ್ಬರ ಮುಖ ಒಂದೇ ದಿಕ್ಕಿಗೆ ಇದೆ ಎಂಬ ಭರವಸೆ ಎಲ್ಲಿ? ನೋಡಿದಿರಾ? ಅದೆಂತಹ ಮೋಜಿನ ತೊಡಕು! ಯಾರು ನಡೆಯದಿದ್ದರೂ ಕಾಲ ಮಾತ್ರ ನಡೆವೇ ನಡೆಯುವುದೆಂಬುದೊಂದು ಅನಿವಾರ್ಯ ಸಮಾಧಾನ. 'ಕಾಲ' ಎಂದರೆ— ಸಂಸ್ಕೃತ-ಅಲ್ಲ. ಆಂಗ್ರೆ-ಅಸಂಸ್ಕೃತರ ಸಂಬಂಧವಿಲ್ಲ ಎಂದು. ಅಂತೂ—ತಿಳಿಯಿತಲ್ಲ ತಮಗೆ?

* * *

ಕ್ವಿ್ ಫಾರ್ ಕುತ್ತು ಆಫ್ ಇಂಡಿಯಾ !

ಹಿಂದುಸ್ತಾನದ ವತಿಯಿಂದ ಸ್ವಾತಂತ್ರ್ಯದ ಬೇಡಿಕೆಯನ್ನು ಸಾಧಿಸಲು ಬಂಗಾಲದ ಮುಖ್ಯ ಮಂತ್ರಿಗಳಾದ ಫಜಲುಲ್ ಹಕ್ಕರು ಅಮೇರಿಕೆಗೆ ಹೋಗಲಿರುವರಂತೆ. ಹಿಂದು ಮಹಾಸಭೆಯವರೂ ಒಂದು ಶಿಷ್ಟಮಂಡಳವನ್ನು ಅಮೇರಿಕೆಗೆಯೆ ಕಳುಹಿಸುವರಂತೆ. ಮಂಗರಾಯನ ದೃಷ್ಟಿಯಿಂದ ಇದೊಂದು ಮೋಜಿನ ಸಂಗತಿಯೆ ಸರಿ. ಇತ್ತ ಅದೇ ಸ್ವಾತಂತ್ರ್ಯಕ್ಕಾಗಿ ಜಾಮದಲಿಯಾರ ಸರ್ಕಸು ಇಂಗ್ಲೆಂಡಿಗೆ ಹೋಗಿದೆ! ಇದಲ್ಲದೆ ತುಮುಲವಾದ ಮೋಜು ಮತ್ತೊಂದಿದೆ. ಹಿಂದು ಮಹಾಸಭೆಯವರು ಅಮೇರಿಕೆಗೆ ಹೋಗಿ ಕೇವಲ ಹಿಂದುಗಳ ಬೇಡಿಕೆಗೆಯೆ ಪ್ರಾಶಸ್ತ್ಯವನ್ನು ಕೊಡಬಹುದೆಂಬ ಹೆದರಿಕೆಯಿಂದ, ಮುಸ್ಲಿಂ ಲೀಗವೂ ಅಮೇರಿಕೆಗೆ ಶಿಷ್ಟಮಂಡಳವನ್ನು ಕಳುಹಿಸುವುದು. ಮುಸ್ಲಿಂ ಲೀಗವು ಕೇವಲ ಮುಸಲ್ಮಾನ್ ಜಮೀನುದಾರರ ಪಕ್ಷವನ್ನೇ ವಹಿಸೀತೆಂಬ ಭೀತಿಯಿಂದ ಜಮಿಯತ್-ಉಲ್-ಉಲೇಮಾದವರು ಬೇರೊಂದು ಶಿಷ್ಟಮಂಡಳವನ್ನು ಕಳುಹಿಸದೆ ಬಿಡರು. ಅದನ್ನು ತಡೆಯದೆ ಶೀಖರು, ಅವರನ್ನು ತಡೆಯದೆ ಅಹ್‌ರಾರರು, ಇವರನ್ನು ತಡೆಯದೆ ಹರಿಜನರು, ಇವರನ್ನು— ಕೊನೆಗೆ ಯಾವುದನ್ನೂ ತಡೆಯದೆ ಫಜಲುಲ್ ಹಕ್ಕರು! ವಾಚಕರೆ, ಈ ಭಾಗ್ಯವು ಹಿಂದುಸ್ತಾನಕ್ಕೆ ಬೇಗನೆ ಬಂದೀತೆ? ಅದಷ್ಟು ಬೇಗ ಬರಲೆಂಬ ಮಂಗರಾಯನ ಹಾರಯಿಕೆಗೆ ಪುಷ್ಟಿಯನ್ನು ಕೊಡುವಿರಾ? ಈ ಎಲ್ಲರನ್ನೂ ಬರಮಾಡಿಕೊಳ್ಳುವ ಸುಬುದ್ಧಿಯನ್ನು ದೇವರು ಅಮೇರಿಕೆಗೆ ಕೊಡಲಿ. ಯಾಕೆಂದರೆ— ಇವರು ಹಿಂದುಸ್ತಾನದಿಂದ ಹೊರಬಿದ್ದಾಕ್ಷಣ ಹಿಂದುಸ್ತಾನವು ಸ್ವತಂತ್ರವೆನಿಸುವುದರಲ್ಲಿ ಸಂದೇಹವಿಲ್ಲ. ಇಂತಹ ಪ್ರಸಂಗವನ್ನು ತರಲು ಮಂಗರಾಯನು ಮಂತ್ರವನ್ನು ಕಲ್ಪಿಸಿದ್ದಾನೆ, ಅದನ್ನು ಜಪಿಸಿರಿ-

ಕ್ವಿ್ ಫಾರ್ ಕ್ವಾರಲ್ ಸಮ್

ಜಾ ಫಾರ್ ಜಾತಿ ಬಡಕಿರ್ಝಂ

* * *

ಬಿರುದು–ಭೂತ

ಅಲ್ಲಾ ಬಕ್ಷರು ತಮ್ಮ 'ಖಾನ್ ಬಹಾದ್ದೂರ್' ಬಿರುದನ್ನು ಬಿಟ್ಟುಕೊಟ್ಟದಕ್ಕಾಗಿ ಮಂತ್ರಿಪದದಿಂದ ಅವರನ್ನು ತಳ್ಳಲಾಯಿತು–ಎಂಬ ವಿಚಾರದಿಂದ ಅನೇಕ ಬಿರುದು–ಬಹಾದ್ದರರು ಬೆದರಿ, ಬೆಸಗಾಗಿ, ಬೆಂಡಾಗಿ ಮಂಗರಾಯನನ್ನು ಮೊರೆಹೊಕ್ಕಿದ್ದಾರೆ. ಬಿರುದು ಎಂಬುದು ಭಸ್ಮಾಸುರನ ಕೈಯಂತೆ ಹೀಗೆ ಪ್ರಭಾವಶಾಲಿಯಾಗಿದ್ದರೆ, ನಮ್ಮ ಗತಿ ಏನು—ಎಂದು, ಪಾಪ!- ಈ ಬಿದಿರು ಮಂಟಪ— ಅಲ್ಲಲ್ಲ— ಈ ಬಿರುದುಮಂಡಳ ನಡುಗುತ್ತಲಿದೆ. ಆದರೆ ಸತ್ಕಾರ್ಯಕ್ಕೆ ಬಕ್ಷೀಸು ಎಂಬ ನಿಯಮವಿದ್ದರೆ ಅಸತ್ಕಾರ್ಯಕ್ಕೆ 'ಅಲ್ಲಾ ಬಕ್ಷೀಸು' ಎಂದೂ ನಿಯಮವಿರಬಾರದೇಕೆ? ಬಿರುದು ಎಂಬುದು ತನ್ನದಲ್ಲ, ಹುಟ್ಟುಗುಣವಲ್ಲ; ತನ್ನದಲ್ಲದ್ದನ್ನು ಬಿಟ್ಟುಕೊಡುವ ಅಧಿಕಾರ ತನಗಿದೆ ಎಂಬ ಅಸದ್ಭಾವವು ಪ್ರಜಾಪ್ರಭುತ್ವ ತತ್ತ್ವಕ್ಕೆ ವಿರುದ್ಧವಾದುದಲ್ಲವೆ? ಅನ್ಯರಿಂದ ಬಂದುದನ್ನು ಅವರ ಅನುಮತಿಯಿಲ್ಲದೆ ನಿರಾಕರಿಸಬಹುದೆ? ಸಿಂಧದ ತೊಡಕು ಕೇವಲ ಘಟನಾತ್ಮಕ ತೊಡಕಲ್ಲ, ತತ್ತ್ವಗಳ ತೊಡಕೂ ಆಗಿದೆ ಎಂದು ಮಂಗರಾಯನ ಅಭಿಪ್ರಾಯ. ನೋಡಿರಿ ಉದಾಹರಣೆಗಾಗಿ—ಯಾರಿಗೂ ಇಷ್ಟವಿಲ್ಲದಾಗ ಅಲ್ಲಾಬಕ್ಷರು ಮುಖ್ಯಮಂತ್ರಿಯಾಗಿ ಘಟನೆಯನ್ನು ಉಳಿಸಿದರು; ಅದಕಾಗಿ 'ಬಹಾದ್ದೂರ್' ರೆನಿಸಿದರು. ಮುಂದೆ ನಾನು 'ಬಹಾದ್ದೂರ್' ಅಲ್ಲ ಎಂದರು; ಸರಿ, ಹಾಗಾದರೆ ಮುಖ್ಯಮಂತ್ರಿಯೂ

ಅಲ್ಲ ಎಂದು ಸರಕಾರದವರು ಸಮಸ್ಯಾಸ್ಫೂರ್ತಿಯನ್ನು ನೀಡಿದರು. ಇದರಲ್ಲೇನು ತಪ್ಪು? ವರದಕ್ಷಿಣೆಯ ಹಣವನ್ನು ಪಡೆದುಕೊಂಡು ಮಾವನ ಮಗಳನ್ನು ಬಿಡಬಹುದೆ? ಮಗಳು ಬೇಡವಾದರೆ ದಕ್ಷಿಣೆಗೂ ಸೊನ್ನೆ. ಅಲ್ಲಾಬಕ್ಷರು ಮಂತ್ರಿಪದವನ್ನು ಬಿಡಲು ಸಿದ್ಧರಿಲ್ಲವೆಂಬುದು ಅಪ್ರಸ್ತುತ—ಯಾಕೆಂದರೆ ಬಿರುದನ್ನು ಬಿಟ್ಟುಕೊಟ್ಟಿದು ಜಗಜ್ಜಾಹೀರವಾಗಿರುವಾಗ, ಘಟನೆಯಲ್ಲಿ ಮಂತ್ರಿಪದಕ್ಕಿಂತ ಬಿರುದಿಗೆ ಮಹತ್ತ್ವವಿದ್ದಾಗ— ಅಲ್ಲ. ಅಂದ್ರೆ— ಬಿರುದು ಬ್ರಿಟಿಶ್ ಸಾಮ್ರಾಜ್ಯಗೌರವದ ದ್ಯೋತಕ, ಮಂತ್ರಿಪದ ಭಾರತ ಸ್ವಾರ್ಥಲಾಘವದ ದ್ಯೋತ—ಅಲ್ಲ— ಅಂದ್ರೆ-ಕ್ಷಮೆ ಇರಲಿ—ಇದನ್ನು ಯಾರೂ ಓದಿಲ್ಲವೆಂದು ತಿಳಿದರೆ ತೊಡಕು ಬಿಟ್ಟಂತಾಗಲಿಕ್ಕಿಲ್ಲವೆ?

* * *

ಉಜ್ವಲ ಅರ್ಥಾತ್—ಉದ್ದ ಜ್ವಾಲೆ

‘ಪತ್ರಿಕಾಸ್ವಾತಂತ್ರ್ಯದ ಮೇಲೆ ಸರಕಾರವು ಗದೆಯನ್ನೆತ್ತಿದರೆ, ಪತ್ರಿಕೆಗಳು ಸರಕಾರದ ಸುದ್ದಿಗಳನ್ನೇ ತಡೆದು ಹಿಡಿದು ತಮ್ಮ ಶಕ್ತಿಯನ್ನು ತೋರಿಸಬಲ್ಲವು’ ಎಂದು ಸಂಪಾದಕರ ಸಮ್ಮೇಳನದ ಸ್ವಾಗತಾಧ್ಯಕ್ಷರಾಗಿ ಹಾರ್ನಿಮನ್ ಸಾಹೇಬರು ಹೇಳಿದ್ದನ್ನು ಕೇಳಿ ‘ಮೌಢ್ಯ ಯಾರನ್ನು ಬಿಟ್ಟಿದೆ?’ ಎಂದು ಮಂಗರಾಯನು ಮೈಜಾಡಿಸಿ ಸರಿಗೂದಲುಗಳನ್ನು ಮುರಿಸಬೇಕಾಯಿತು. ಹಾರ್ನಿಮನ್ ಸಾಹೇಬರೆ, ಹಿಂದುಸ್ಥಾನವಿನ್ನೂ ಸ್ವಗೂಡಿಲ್ಲವೆ ನಿಮಗೆ? ಇಲ್ಲವಾದರೆ ಇಂತಹ ಅಸಂಭಾವ್ಯ— ಅಥವಾ ಹೆಚ್ಚಿನ ಮಾತೇಕೆ? ನಿಮ್ಮದನ್ನೆ ನಿಮಗೆ ಮಂಗರಾಯನು ಒರೆಗೆ ಹಚ್ಚಿ ಕೇಳಬಯಸುತ್ತಾನೆ. ಸರಕಾರದ ಸುದ್ದಿಗಳನ್ನು ತಡೆಯುವುದು? ಅದೂ ಹಿಂದುಸ್ತಾನದಲ್ಲಿ? ಆ ಮಾತಿನ ಅರ್ಥವೇನು, ಸಾಹೇಬರೆ? ಹಿಂದುಸ್ತಾನದಲ್ಲಿದ್ದುದು ಸರಕಾರವೊಂದು, ಒಂದೇ ಒಂದು, ಅದ್ವಿತೀಯವಾದ ಸರಕಾರ! ಅದನ್ನು ಬಿಟ್ಟರೆ ಉಳಿಯಿತೇನು? ಒಂದರಲ್ಲಿ ಒಂದನ್ನು ಕಳೆದರೆ ಉಳಿಯುವುದೇನು? ಅಥವಾ ತಾವೂ ಬ್ರಿಟಿಶರೆಂಬ ಹೆಮ್ಮೆಯಿಂದ ಹಾರ್ನಿಮನ್ನರು ಚರ್ಚಿಲ್‌ಗಣಿತವನ್ನು ಚುರುಕಿಸುತ್ತಿದ್ದಾರೆಯೆ? ಅಥವಾ ಸರಕಾರೀ ಪ್ರಕಟನೆ ಜಾಹೀರಾತುಗಳು ಸಾಕಷ್ಟಿಲ್ಲವೆಂಬುದಕ್ಕೆ ದೇಶೀಯ ಪತ್ರಿಕೆಗಳ ಪರವಾಗಿ ಪ್ರತಿಭಟನೆಯೆ? ಅಥವಾ ಎಂತಹ ಪ್ರಬಲಶಾಲಿಯಾದ ಸರಕಾರವಿದ್ದರೂ ಕೊನೆಗೆ ನಿರಂಕುಶಪ್ರಭುವಾಗಿಯೆ ಉಳಿಯುವ ಸ್ವಾತಂತ್ರ್ಯ ನಮ್ಮ ಪತ್ರಿಕೆಗಳಿಗೆ ತಪ್ಪಿಲ್ಲ ಎಂಬ ಮಾತಿನ ಚಮತ್ಕೃತಿಯೆ? ಕೆಲವು ಪತ್ರಿಕೆಗಳ ಅಚ್ಚನ್ನೂ ಅಗ್ರಲೇಖಗಳನ್ನೂ ನೋಡಿದರೆ, ಸರಕಾರವು ಇವುಗಳ ಮೇಲೆ ಗದೆಯನ್ನೆತ್ತಿದರೆಯೆ ಉಭಯತೋಪರಿ ಕುಶಲ ಎಂದು ಮಂಗರಾಯನಿಗೆ ತೋಚಿದೆ. ನಿನ್ನೆಯ ಸುದ್ದಿಯನ್ನು ನಾಳೆಯ ತಾರೀಕಿನ ಕೆಳಗೆ ಕೊಟ್ಟು, ಮರೆತ ಸುದ್ದಿಯ ಮೇಲೆ ಮಹಾ ಅಗ್ರಲೇಖವನ್ನು ಬರೆದು, ತಿದ್ದುಪಡೆಯ ನಿಮಿತ್ತದಿಂದ ತಾವು ಪಾರಾಗಿ, ಬುದ್ಧಿಗೂ ಕಿಸೆಗೂ ಬೂದಿ ಹಾಕುವ ‘ಉಜ್ವಲ’ ಪತ್ರಿಕೆಗಳಿಂದ ನಮ್ಮನ್ನುಳಿಸುವರಾರು—ಎಂದು ವಾಚಕವೃಂದವು ಮೊರೆಯಿಡುವಾಗ, ಮಂಗರಾಯನಾದರೂ ಹೇಳಬೇಕೇನು? ಜೇಲಿನಲ್ಲೂ ಪತ್ರಿಕೆಗಳನ್ನು ಕೊಡುತ್ತಾರೆಂದ ಮೇಲೆ ಹೋಗುವುದಾದರೂ ಎಲ್ಲಿಗೆ?

* * *

‘ಜಯಂತಿ’ ಸಣ್ಣಕತೆಗಳ ಮೇಲಾಟದ ತೀರ್ಮಾನ

ಒಟ್ಟು ಬಂದ ಕತೆಗಳು ೧೧೩

ನಿರ್ಣಾಯಕರು :

ಪ್ರೊ. ಆರ್. ವಿ. ಜಾಗಿರದಾರ, ಎಂ. ಎ., ಶ್ರೀ. ಎನ್. ಕೆ. ಕುಲಕರ್ಣಿ, ಎಂ. ಎ. ಬಿ. ಟಿ., ಸಂಪಾದಕ ಮಂಡಲಿ.

ಬಹುಮಾನ ಪಡೆದ ಕತೆಗಳು

೧ನೆಯ ಬಹುಮಾನ ‘ಪ್ರೊಸ್ಸುಪಾಪಾತಿ’ ಲೇ. ಶ್ರೀ. ‘ಭಾರತೀಪ್ರಿಯ’ ಕೊಡಗು

೨ನೆಯ ಬಹುಮಾನ ‘ಮಿಾರೆಯ ಮದ್ದು’ ,, ಶ್ರೀ. ಬೇಂದ್ರೆ ಲಕ್ಷ್ಮಣರಾಯರು, ಧಾರವಾಡ

೩ನೆಯ ಬಹುಮಾನ ‘ಪಟ್ಟೆಸಾಲಾ ತಿಮ್ಮ’ ,, ಶ್ರೀ. ಶ್ರೀಧರ ಬೈಲೂರು, ಶಿರಸಿ

ಆಮೇಲೆ ಹೆಚ್ಚಿನ ಗುಣಗಳನ್ನು ಪಡೆದವರ ಪರಿವಿಡಿ

೧. ಕುಮಾರಿ ದೇವಾಂಗನಾ ಶಾಸ್ತ್ರಿ, ಗೋಕರ್ಣ ೨. ಶ್ರೀ. ನಿರ್ಜಿ ಅಣ್ಣಾರಾಯರು, ಉಗಾರ

೩. ಶ್ರೀ. ಸಿ. ಬಿ. ಬೆಲ್ಲದ, ಇಟಗಿ ೪. ಶ್ರೀ. ಬಲವಂತ ಉಗಾರ ೫. ಕುಮಾರಿ ತಾರಾ ಹೆಗಡೆ, ಶಿರಸಿ

೬. ಶ್ರೀ. ‘ಚಿದಾನಂದ’ ಬೈಲಹೊಂಗಲ ೭. ಶ್ರೀ. ಡಿ. ಸೀತಾರಾಮರಾವ್, ಬಿ. ಎ., ಮೈಸೂರು

೮. ಶ್ರೀ. ಕು. ಶಿವರಾಯರು, ಮಂಗಳೂರು ೯. ಶ್ರೀ. ವಿ. ಜಿ. ಶಾನಭಾಗ, ಕುಮಟಾ

೧೦. ಶ್ರೀ. ಕೆ. ಪುರುಷೋತ್ತಮ, ಬೆಂಗಳೂರು.

ಬಹುಮಾನ ಪಡೆದ ಕತೆಗಾರರಿಗೆ ಅಭಿನಂದನೆಗಳು. ವಿಶದ ವರದಿಯನ್ನು ಮುಂದಿನ ಕಥಾಸಂಚಿಕೆಯಲ್ಲಿ ನೋಡಿರಿ!

ಹಿಂದುಸ್ಥಾನವನ್ನು ಸ್ವಾತಂತ್ರ್ಯಕ್ಕಾಗಿ ಸಿದ್ಧಪಡಿಸಿರಿ !

(ಒಂದು ಪುಸ್ತಕದ ಪರಿಚಯ)

ಶ್ರೀ. ವಾಳ್ವೇಕರ ಗುರುರಾಯರು, ಬಿ. ಎ., ಎಲ್‌ಎಲ್. ಬಿ.

(ಕಳೆದ ಸಂಚಿಕೆಯಿಂದ ಮುಂದುವರಿದುದು)

ಸಂಸ್ಥಾನಿಕರು

ಭಾರತದಲ್ಲಿ ಒಟ್ಟು ೫೬೬ ಸಂಸ್ಥಾನಗಳಿವೆ (ಬಟ್ಲರ್ ವರದಿಯಲ್ಲಿ ೫೬೨ ಸಂಸ್ಥಾನಗಳನ್ನು ಮಾತ್ರ ಮಾನ್ಯಮಾಡಿದ್ದಾರೆ). ಈ ಸಂಸ್ಥಾನಗಳಲ್ಲಿ ಅತಿ ಸಣ್ಣವೂ ಇವೆ, ಅತಿ ದೊಡ್ಡವೂ ಇವೆ. ಬಲೂಚಿಸ್ತಾನದಲ್ಲಿರುವ ಕಲಾತದ ಖಾನನ ಸಂಸ್ಥಾನದ ವಿಸ್ತಾರವು ೫೪೦೦೦ ಚೌರಸು ಮೈಲು—ಎಂದರೆ ಇಂಗ್ಲಂಡ್ ದೇಶಕ್ಕಿಂತಲೂ ದೊಡ್ಡದಾಗಿ ಇದೆ. ಆದರೆ ಅದರ ಜನಸಂಖ್ಯೆ ಮೂರು ಲಕ್ಷ ಮಾತ್ರ; ಅದು ಎರಡನೆಯ ವರ್ಗದ ಸಂಸ್ಥಾನ. ಹೈದ್ರಾಬಾದು ಮೊದಲನೆಯ ವರ್ಗದ ಸಂಸ್ಥಾನ ; ಇದು ಇಟಲಿಯಷ್ಟು ವಿಸ್ತಾರವಾಗಿದೆ. ಕೇವಲ ಕೆಲವು ಎಕರೆಯಷ್ಟು ವಿಸ್ತಾರವುಳ್ಳ ಸಂಸ್ಥಾನಗಳೂ ಕಾಠೆವಾಡದಲ್ಲಿ ಸಿಕ್ಕುತ್ತವೆ.

ಸಂಸ್ಥಾನಗಳ ವಿಸ್ತಾರವು ಇಡಿಯ ಭರತಖಂಡದ ಅರ್ಧದಷ್ಟು ಎಂದರೆ ೭,೧೨೦೦೦ ಚೌರಸ ಮೈಲು, ಜನಸಂಖ್ಯೆ ಸುಮಾರು ೯ ಕೋಟಿ ಇವೆ. ೧೯೨೧ ರಲ್ಲಿ ಸಂಸ್ಥಾನಿಕರ ಸಂಘ (Chamber of Princess) ವೊಂದು ನಿರ್ಮಾಣವಾಯಿತು. ಅದರ ಸಭೆಗಳು ರಾಜಧಾನಿ ದಿಲ್ಲಿಯಲ್ಲಿಯೇ ನೆರೆಯುತ್ತವೆ. ಆಯ್. ಸಿ. ಎಸ್. ರಂತೆ ಸಂಸ್ಥಾನಿಕರಮೂ ಒಂದು ಪೂಜಾರಿ(August)ಗಳ ಟ್ರೇಡ್ ಯೂನಿಯನ್ ಆಗಿದೆ. ಈ ಸಂಘವು ಸಂಸ್ಥಾನಿಕರ ಹಕ್ಕನ್ನು ರಕ್ಷಿಸಿಕೊಳ್ಳುವುದಕ್ಕಾಗಿ ಹೆಸರಾದ ಬ್ರಿಟಿಷ ಬ್ಯಾರಿಸ್ಟರ್‌ರಿಗೆ ಲಕ್ಷಾವಧಿ ರೂಪಾಯಿಗಳನ್ನು ಫೀಯೆಂದು ತೆರುತ್ತದೆ ಮೊದಲನೆಯ ದುಂಡು-ಮೇಜಿನ ಪರಿಷತ್ತಿನಲ್ಲಿ ಬಿಕಾನೇರ ಮಹಾರಾಜರು, "ಒರ್ವ ಹಿಂದೀ ಸಂಸ್ಥಾನಿಕನ ರಾಜ್ಯವಿಸ್ತಾರವು ಒಂದು ಬಾವಿಯಷ್ಟಿದ್ದಿತು (One Indian prince ruled nothing but well) " ಎಂದು ಹೇಳಿದರಂತೆ. ದೂರೆಂದರೆ ಒಂದು ಸಂಸ್ಥಾನದ ಜನಸಂಖ್ಯೆ ಬರಿ ೨೭ ಮಾತ್ರ ಇವೆ. ಇನ್ನೊಂದರ ಜನಸಂಖ್ಯೆ ಕೇವಲ ೮೭ ಇವೆ. ಒಂದೇ ಸಾವಿರ ಜನಸಂಖ್ಯೆಯುಳ್ಳ ಸಂಸ್ಥಾನಗಳು ೧೫೩ ಇವೆ. ಒಂದು ಸಂಸ್ಥಾನದ ಉತ್ಪನ್ನವು ಕೇವಲ ೮೦ ರೂಪಾಯಿಯಾಗಿದೆ. ಹದಿನಾರು ಸಂಸ್ಥಾನಗಳ ಆಯವು ಒಂದು ಸಾವಿರ ರೂಪಾಯಿಗಳ ಮುಟಲನ್ನು ಮಾತ್ರ ಮುಟ್ಟಿದೆ. ಹತ್ತು ಸಾವಿರಕ್ಕಿಂತ ಕಡಿಮೆ ಉತ್ಪನ್ನದ ಸಂಸ್ಥಾನಗಳು ೧೪೩ ಇವೆ. ಆದರೆ ಕೆಲವು ಸಂಸ್ಥಾನಗಳ ಉತ್ಪನ್ನವು ಬಹಳೇ ಹೆಚ್ಚಿದೆ. ಹೈದ್ರಾಬಾದದ ನೈಝಾಮನು ಪ್ರಪಂಚದಲ್ಲಿಯೇ ಎಲ್ಲರಿಗಿಂತಲೂ ಧನಾಢ್ಯನೆಂಬುದು ಎಲ್ಲರೂ ಕೇಳಿ ಅರಿತ ಸಂಗತಿ (ಪುಟ ೬೨).

ಸಂಸ್ಥಾನಗಳು ಸಾಮಾನ್ಯ ಜನರಿಗೂ ತಮಗೂ ಅನೇಕ ಸಲ ಬೇಸರದಾಗುತ್ತವೆ. (Nuisance) (ಪುಟ ೬೬).

ಬ್ರಿಟಿಷ ರಾಜ್ಯಸ್ಥಾಪನೆಯ ಕಾಲಕ್ಕೆ ಕಲಾತ್ (Kalat) ಸಂಸ್ಥಾನ ಬಿಟ್ಟು ಬೇರೆ ಎರಡೇ ಸಂಸ್ಥಾನಗಳು ಸ್ವತಂತ್ರವಿದ್ದುವು. ಬೇರೆ ಸಂಸ್ಥಾನಿಕರು ತಾವು ಮೂಲ ಸಮ್ರಾಟನ ಅಧಿಕಾರಸ್ಥ (Officers) ರೆಂದು ತಾವೇ ಒಪ್ಪಿದರು ಅಥವಾ ಹೆಮ್ಮೆಯಿಂದ ಹೇಳಿಕೊಂಡರು. ಅಧಿಕಾರಿಗಳಲ್ಲದಿದ್ದರೂ ಆ ಸಮ್ರಾಟನಿಗೆ ಕಪ್ಪ-ಕಾಣಿಕೆಗಳನ್ನು ಸಲ್ಲಿಸುತ್ತಿದ್ದರು. ನೈಝಾಮನು ಸಹ ತಾನು ಮೊಗಲ ಚಕ್ರವರ್ತಿಯ ಪಟಿಸ್ರೋತ್ರಮನೆಂಬ ಹಕ್ಕನ್ನು ಸಾಧಿಸುತ್ತಿದ್ದನು. ಹಿಂದುಸ್ತಾನದಲ್ಲಿ ಒಬ್ಬನೇ ಅರಸನಿದ್ದನು, ಅವನೇ ದಿಲ್ಲಿಯ ಅರಸನು. ಅವನು ಚಕ್ರವರ್ತಿಯ ವಂಶಜನಾಗಿದ್ದರೂ ಬಡತನದಿಂದ ಬಳಲುವವನೂ ಅಸಹಾಯನೂ ಆಗಿದ್ದನು. ಕೊಚೀನ್, ತ್ರಾವಣಕೋರ ಮತ್ತು ಮೈಸೂರುಗಳನ್ನು ಬಿಟ್ಟರೆ ಉಳಿದೆಲ್ಲ ಸಂಸ್ಥಾನಿಕರು ದಿಲ್ಲಿಯ ಚಕ್ರವರ್ತಿಯ ಮಾಂಡಲಿಕರಾಗಿದ್ದರು. (ಪುಟ ೬೭). " ಬ್ರಿಟಿಷರು ಕೂಡ ದಿಲ್ಲಿಯ ಸಮ್ರಾಟನಿಗೆ ತಲೆತಗ್ಗಿಸುತ್ತಿದ್ದರು" ಮೆಟಕಾಫ್ ನಂತರರಿಗೆ ಇದು ಸರಿಹೋಗದಿದ್ದರೂ ಹಾಗೆ ಮಾಡಲೇಬೇಕಾಗಿಬಂದಿತ್ತು (ಪುಟ ೬೮). ಎ. ಥಾಮ್ಸನ್‌ರು ಸಂಸ್ಥಾನಿಕರೆಂದರೆ ಸ್ವಾತಂತ್ರ್ಯದ ವಿರೋಧಿ (Block Independence) ಗಳೆಂದು ಕರೆದಿದ್ದಾರೆ (ಪುಟ ೬೯).

ಬ್ರಿಟಿಷ್ ಸರಕಾರದ ಕೂಡ ಇದ್ದ ಸಂಬಂಧ

ಹಿಂದುಸ್ತಾನದ ರಾಜಕೀಯ ಕಟ್ಟಡದ ಮಡಿಗೆಯು ೧೭೫೮ ರಿಂದ ೧೯೧೮ ರ ವರೆಗಿನ ೬೦ ವರುಷ ಕಾಲಾವಧಿಯಲ್ಲಿ ಸಿದ್ಧವಾಯಿತು. ಈ ೧೬೦ ವರುಷಗಳಲ್ಲಿ ಭಾರತದ ರಾಜಕೀಯ ಪ್ರಪಂಚದಲ್ಲಿ ಅನೇಕ ಆಗಾಧವಾದ ಸ್ಥಿತ್ಯಂತರಗಳಾಗಿದ್ದರೂ ಈ ಮಡಿಗೆಯಲ್ಲಿ ಮಾತ್ರ ಏನೇನೂ ಬದಲಾವಣೆಯಾಗಿಲ್ಲ. ೧೮೫೭ ರಲ್ಲಿ ಬಂಡಾಯವಾದ ಮೇಲೆ, ಸಂಸ್ಥಾನಿಕರ ಸಂಬಂಧದ ವಿಷಯವಾಗಿ ಸಂಸ್ಥಾನಿಕರ ಹಾಗೂ ಬ್ರಿಟಿಷರ ನಡುವೆ ಒಪ್ಪಂದ (Treaties) ಗಳಾದುವು. ಈ ತೆರನಾದ ಒಪ್ಪಂದವನ್ನು ಮಾಡಿಕೊಳ್ಳುವ ಎರಡೂ ಪಕ್ಷಗಳು ಸರಿಸಮಾನ ದರ್ಜೆಯುಳ್ಳವಾಗಿದ್ದುವೋ ಇಲ್ಲವೋ ಎಂಬುದು

ಕಾನೂನುಸಂಡಿತರ ವಿಷಯ ; ಆದರೆ ಬ್ರಿಟಿಷ್ ಸರಕಾರವು ಈ ಒಪ್ಪಂದಗಳನ್ನು ಎಷ್ಟೋ ಸಲ ಉಲ್ಲಂಘಿಸಿ ನಡೆದಿದೆ (ಪುಟ ೭೦). ಅಂತೂ ಸಂಸ್ಥಾನಿಕನ ಅಧಿಕಾರದ ಮರ್ಯಾದೆಯು ಬಹಳವಾಗಿ ಅಲ್ಲಿರುವ ಬ್ರಿಟಿಷ್ ರೆಸಿಡೆಂಟನ ಶೀಲದ ಮೇಲೆ ಅವಲಂಬಿಸಿದೆ.

ಅಲ್ಪಸಂಖ್ಯಾಕರು

(ಪುಟ ೭೪) ಸಂಪೂರ್ಣ ಅಸ್ಪೃಶ್ಯರು ಹಾಗೂ ತತ್ಸಮರು ಸೇರಿ ನಾಲ್ಕು ಕೋಟಿಗೆ ಬರಬಹುದು. ಮೂಲ ನಿವಾಸಿಗಳನ್ನೂ ಗುಡ್ಡಗಾಡು ಜನರನ್ನೂ ಕೂಡಿಸಿ ಈ ಸಂಖ್ಯೆಯನ್ನು ಇನ್ನಷ್ಟು ಬೆಳೆಸಿ ದೊಡ್ಡದನ್ನಾಗಿ ಮಾಡಿ ಹೇಳಬಹುದು. ಆದರೆ ಮೂಲ ನಿವಾಸಿಗಳೂ, ಅಡವಿಯಲ್ಲಿರುವವರೂ ಅಸ್ಪೃಶ್ಯರಲ್ಲ. ಅವರ ವಾಸಸ್ಥಾನವು ದೂರವಿರುವುದರಿಂದ ಮಾತ್ರ ಅವರು 'ಅಸ್ಪೃಶ್ಯ'ರಾಗಿದ್ದಾರೆ. ಅಸ್ಪೃಶ್ಯತೆಯ ಪ್ರಮಾಣದಲ್ಲಿಯೂ ಹೆಚ್ಚುಕಡಿಮೆಯಿದೆ. ಬಂಗಾಳದಲ್ಲಿ ೧೬ ಬಗೆಯ ಅಸ್ಪೃಶ್ಯರಿದ್ದಾರೆ; ಆದರೆ ಬ್ರಾಹ್ಮಣರು ಕೂಡ ಅವರಿಂದ ತಂಬಾಕು, ನೀರು ಮೊದಲಾದುವನ್ನು ತೆಗೆದುಕೊಳ್ಳುತ್ತಾರೆ. ದಕ್ಷಿಣದಲ್ಲಿಯೇ ಅದರ ತೀವ್ರಸ್ವರೂಪವು ಕಂಡು ಬರುವುದು.

ಡಾ. ಅಂಬೇಡಕರರ ವಿಷಯವಾಗಿ ಮಿ. ಥಾಮ್ಸನ್‌ರು ಎರಡು ಪುಟಗಳನ್ನು ಬರೆದಿದ್ದಾರೆ. ೧೮೧೮ ರ ಕೋರೇಗಾಂವದ ಕಾಳಗವನ್ನು, ಕರ್ನಲ್ ಟಾಡ್‌ರು ಜಗತ್ತಿನ ಇತಿಹಾಸದಲ್ಲಿ ಹೆಸರಾದ ಕಾಳಗಗಳಲ್ಲಿ ಒಂದಾಗಿದೆಯೆಂದು ವರ್ಣಿಸಿದ್ದಾರೆ. ಇದರಲ್ಲಿ ವೀರರಾಗಿ ಯುದ್ಧಮಾಡಿ ಧಾರಾತೀರ್ಥದಲ್ಲಿ ಮಡಿದವರಲ್ಲಿ ಅರ್ಧ ಜನರು ಹೊಲೆಯರಿದ್ದರೆಂದು ನಾನು ಕೇಳಿದ್ದೇನೆ—ಅಂಬೇಡಕರರ ತಂದೆ-ಅಜ್ಜಂದಿರು ಸೈನಿಕರಿದ್ದರು. ಕೀಳು ಜಾತಿಯವರನ್ನು ಭರತಿಮಾಡಿಕೊಳ್ಳಲಾಗದೆಂದು ಬ್ರಿ. ಸರಕಾರವು ೧೮೯೨ ರಲ್ಲಿ ನಿರ್ಣಯಿಸಿತು. ಅಂಬೇಡಕರರ ಗುಣಗಳನ್ನು ಉಲ್ಲೇಖಿಸುತ್ತ ಮಿ. ಥಾಮ್ಸನ್‌ರು, 'ಬೆರಗುಗೊಳಿಸುವ ಹನ್ನೆರಡು ಜನರಲ್ಲಿ ಇವನೊಬ್ಬ' ಎಂದು ಹೇಳಿದ್ದಾರೆ. 'ಸ್ವತಂತ್ರ ಭಾರತದಲ್ಲಿ ಅಸ್ಪೃಶ್ಯರ ಪಾಡೇನಾದೀತು?' ಎಂಬ ಪ್ರಶ್ನೆಗೆ ಡಾ. ಅಂಬೇಡಕರರು ೧೯೪೨ ರ ಆಗಸ್ಟ ತಿಂಗಳಲ್ಲಿ ನೆರೆದ ಅಸ್ಪೃಶ್ಯರ ಅಧಿವೇಶನದಲ್ಲಿ ಈ ರೀತಿ ಉತ್ತರ ಕೊಟ್ಟಿದ್ದಾರೆ :

"........ಹಿಂದುಸ್ಥಾನದ ರಾಜಕೀಯ ಪ್ರಗತಿಯನ್ನು ಕುಗ್ಗಿಸುವುದಕ್ಕಾಗಿ ಬ್ರಿಟಿಷರು ನಮ್ಮ ಶೋಚನೀಯ ಪರಿಸ್ಥಿತಿಯನ್ನು ಪ್ರಕಟಿಸುತ್ತಾರೆ (Advertise): ನಿಮ್ಮ ಅಸ್ಪೃಶ್ಯತೆಯ ಮೂಲಕ ಬ್ರಿಟಿಷರು ಬರುವ ಮೊದಲು ನೀವು ತೀರ ಹೀನ ಸ್ಥಿತಿಯಲ್ಲಿದ್ದಿರಿ—ನಿಮ್ಮ ಅಸ್ಪೃಶ್ಯತೆಯನ್ನು ನಷ್ಟಗೊಳಿಸಲು ಬ್ರಿಟಿಷರು ಪ್ರಯತ್ನಿಸಿದ್ದಾರೇನು! ನಿಮಗೆ ಮೊದಲು ನೀರು ಕೂಡ ತೆಗೆದುಕೊಳ್ಳಗೊಡುತ್ತಿದ್ದಿಲ್ಲ. ಗುಡಿಗಳಲ್ಲಿ ಹೋಗಗೊಡುತ್ತಿದ್ದಿಲ್ಲ, ಪೋಲೀಸರಾಗಗೊಡುತ್ತಿದ್ದಿಲ್ಲ; ಸರಿ, ಇರಬಹುದು, ಆದರೆ ಬ್ರಿಟಿಷರು ನಿಮಗೆ ಇವೆಲ್ಲವುಗಳನ್ನು ಮಾಡಗೊಡುತ್ತಾರೋ? ಇಷ್ಟು ವರುಷಗಳ ವರೆಗೆ ಆಳುವ ಸರಕಾರವು ಅಲ್ಪವಾದರೂ ಒಳ್ಳೆಯದನ್ನು ಮಾಡಬಹುದಾಗಿದ್ದಿತು. ಆದರೆ ನಿಮ್ಮ ಸ್ಥಿತಿಯಲ್ಲಿ ಹೇಳಿಕೊಳ್ಳುವಂತಹ ಸುಧಾರಣೆಯೇನೂ ಆಗಿಲ್ಲ. ಇದ್ದ ಸ್ಥಿತಿಯಲ್ಲಿಯೇ ನಿಮ್ಮನ್ನಿರಿಸಿದ್ದಾರೆ. ಸ್ವತಂತ್ರ ರಾಜ್ಯದಲ್ಲಿಯೇ ನಿಮಗೆ ರಾಜಕೀಯ ಹಕ್ಕು ದೊರೆಯುವ ಸಂಭವವಿದೆ. ಅಂತಹ ಹಕ್ಕುಗಳು ದೊರೆತ ಹೊರತು ನಿಮ್ಮ ಜನರ ಏಳ್ಗೆಯಾಗದು."

ಶೀಖ್, ಪಾರಸಿ, ಹಿಂದೀ ಕ್ರಿಶ್ಚನ್, ಆಂಗ್ಲೊ-ಇಂಡಿಯನ್ ಮೊದಲಾದವರೆಲ್ಲರೂ ಸ್ವರಾಜ್ಯವನ್ನು ಗಳಿಸುವುದಕ್ಕೆ ಅನುಕೂಲರಿದ್ದಾರೆಂದು ಹೇಳಿ, ಥಾಮ್ಸನ್‌ರು ಪಾರ್ಸಿಗಳ ವಿಷಯವಾಗಿ ಈ ರೀತಿ ಬರೆದಿದ್ದಾರೆ : ಪಾರಸಿಗಳು ಮದ್ಯಪಾನ ನಿರೋಧದಿಂದ ಕಾಂಗ್ರೆಸ್ಸಿನ ಮೇಲೆ ಕೋಪಿಸಿಕೊಂಡಿದ್ದರು. ಆದರೆ ಅವರ ಕೋಪವು ಕ್ಷಣಿಕವಾದುದು. ಇನ್ನು ಆಂಗ್ಲೋ-ಇಂಡಿಯನ್‌ರ ವಿಷಯ : ಬ್ರಿಟಿಷರ ಆಡಳಿತದ ಪ್ರಾರಂಭಕ್ಕಿದ್ದ ಬಹುತರ ಎಲ್ಲ ಬ್ರಿಟಿಷ್ ಅಧಿಕಾರಿಗಳ ಹೆಂಡಿರು ಅಥವಾ ಅಂಗವಸ್ತ್ರಗಳೆಲ್ಲ ಹಿಂದೀಯರೇ ಆಗಿದ್ದರು. ಹಿಂದಿನಿಂದ ಬಾಯಿಬಲ್ ಸೊಸಾಯಿಟಿಯ ಸಂಸ್ಥಾಪಕನೆಂದೂ ಪೂಜ್ಯನೆಂದೂ ಹೆಸರಾದ ಟೆಯಿನ್‌ಮುವುಥ್ ಶೋರ್ (Teignmouth Shore) ನೂ ಕೂಡ ಒಬ್ಬ ಹಿಂದೀ ಹೆಂಗುಸಿನ ಸಹವಾಸದಲ್ಲಿಯೇ ಇದ್ದನು. ದಿಲ್ಲಿಯಲ್ಲಿ ಬ್ರಿಟಿಷ್ ರೆಸಿಡೆಂಟರಾಗಿದ್ದ ಸರ್ ಚಾರ್ಲ್ಸ್ ಮೆಟ್‌ಕಾಫ್‌ರು ಶೋರರ ಅನುಕರಣವನ್ನೇ ಮಾಡಿದರು. ಒಮ್ಮೆ ಇತಿಹಾಸ ತಜ್ಞನೆಂದು ನನಗೆ, ಬ್ಯಾಪ್ಟಿಸ್ಟ್ ಜನರ ೧೩೦ ವರುಷಗಳ ರಜಿಸ್ಟರ್‌ಗಳನ್ನು ಶೋಧಿಸುವ ಪ್ರಸಂಗ ಬಂದಿತು. ಅದರಲ್ಲಿ—ಈಗಿನ ನೀತಿಯ ಕಲ್ಪನೆಯಂತೆ-ಬಹುತರ ಎಲ್ಲ ಜನರೂ ವ್ಯಭಿಚಾರ ಜನ್ಯ (Illegitimate) ರಾಗಿದ್ದರು.

* * *

೨ ನೆಯ ಭಾಗದ ನಾಲ್ಕನೆಯ ಪ್ರಕರಣದಲ್ಲಿ ಪಂಜಾಬ ಬಂಗಾಳ ಹಾಗೂ ಮರಾಟರ ವಿಚಾರವಾಗಿ ಹೇಳಿದೆ. ಕಾಂಗ್ರೆಸ್ ಬಲವಿಲ್ಲದ ಪ್ರಾಂತವೆಂದರೆ ಒಂದು ಪಂಜಾಬ. ಆದರೂ ಈ ಪ್ರಾಂತದಲ್ಲಿ ಯುದ್ಧ ವಿರೋಧ ಹಾಗೂ ಸೈನ್ಯಭರತಿಗೆ ಅಡ್ಡಿ ಮಾಡುವ ಚಳವಳವಿದೆ. ಈ ಚಳವಳಿಗಾಗಿ ಸುಮಾರು ೧೫೦ ಜನರಿಗೆ—ಬಹುತರ ಮುಸಲ್ಮಾನರಿಗೆ—ಶಿಕ್ಷೆ ವಿಧಿಸಲಾಗಿದೆ. ಪಂಜಾಬದಲ್ಲಿ ಕಾಂಗ್ರೆಸ್ಸು ಬಲಹೀನವಿದೆಯೆಂದ ಮಾತ್ರಕ್ಕೆ ಮುಸ್ಲಿಂಲೀಗು ಬಲವುಳ್ಳದ್ದಾಗಿದೆಯೆಂದು ತಿಳಿಯಬಾರದು. ಹಿಂದೆ ಲೀಗಕ್ಕೆ ಪ್ರಾಂತೀಯ ಶಾಸನ ಸಭೆಯಲ್ಲಿ ಒಂದೇ ಒಂದು ಸ್ಥಳ ದೊರೆತಿತ್ತು.

(ಪುಟ ೮೨) ಕಾಂಗ್ರೆಸಿನ ಆಡಳಿತವೆಂದರೆ ಹಿಂದೂ ಜನರ ಆಡಳಿತವೆಂಬ ಒಂದು ಕೂಗು ಇಂಗ್ಲಂಡಿನಲ್ಲಿ ಕೇಳಬರುತ್ತಿದೆ. ಆದರೆ ಬಂಗಾಳದಲ್ಲಿ ಮುಸಲ್ಮಾನರ ಆಳಿಕೆಯೇ ಇದೆಯಲ್ಲದೆ ಉಳಿದೆಡೆಯಲ್ಲಿ ಅವರ ಜನಸಂಖ್ಯೆಯ ಪ್ರಮಾಣದ ಮೇಲೆ ಹೆಚ್ಚು ಸ್ಥಳಗಳು ದೊರೆತಿವೆ. ಬಂಗಾಳದಲ್ಲಿ ಹಿಂದೂ ಜನರು ೧೦೦ ಕ್ಕೆ ೪೫ ರಷ್ಟಿದ್ದಾರೆ. ಮಿ. ರ್‍ಯಾಮ್ಸೆ ಮ್ಯಾಕ್ಡೊನಾಲ್ಡ್‌ರ ಅವಾರ್ಡಿನ

ಪ್ರಕಾರ, ಕಾನೂನುಮಂಡಲದ ೨೫೦ ಸ್ಥಳಗಳಲ್ಲಿ ಹಿಂದೂ ಜನರಿಗೆ ೮೦ ಸ್ಥಳಗಳು, ಅಸ್ಪೃಶ್ಯರಿಗೆ೧೦ ಸ್ಥಳಗಳು, ಮುಸಲ್ಮಾನರಿಗೆ ೧೨೫ ಸ್ಥಳಗಳು ದೊರೆತುವು ; ೧೯೩೨ ರಲ್ಲಿಯ ' ಪುಣೆ ಪ್ಯಾಕ್ಟ' ಪ್ರಕಾರ ಹಿಂದುಗಳಿಗೆ ದೊರೆತ ೮೦ ಸ್ಥಳಗಳಲ್ಲಿ ೩೦ ಸ್ಥಳಗಳು ಅಸ್ಪೃಶ್ಯರಿಗೆ ಕೊಡಲ್ಪಟ್ಟುವು (ಪುಟ ೮೩) " ಕಾಯಿದೆ ಮಂಡಲದಲ್ಲಿಯ ೨೫ ಯುರೋಪಿಯನ್ ಗುಂಪಿನ ಕೈಯಲ್ಲಿಯೆ ಸಂಪೂರ್ಣ ನಿಯಂತ್ರಣವಿದೆ. ಭಾರತದಲ್ಲಿ ಇದಕ್ಕೂ ಹಸಗೆಟ್ಟ ವಿಷಯ ಇನ್ನಾವುದೂ ಇಲ್ಲ. ಹಿಂದೂ ಜನರ ಅರ್ಧದಷ್ಟು ಪ್ರತಿನಿಧಿಗಳು ಯುರೋಪಿಯನ್‌ರಿದ್ದಾರೆ."

ಮದ್ಯಪಾನ ನಿರೋಧ

(ಪುಟ ೮೬) ಮಿ. ಥಾಮ್ಸ್ಪಸನ್‌ರು ಸಂಪೂರ್ಣ ಪಾನನಿರೋಧವಾದಾಗ ಮುಂಬಯಿಯಲ್ಲಿಯ ಯಾಟ್ (Yacht) ಕ್ಲಬ್ಬಿಗೆ ಊಟಕ್ಕಾಗಿ ಹೋಗಿದ್ದರು. ಅವರಿಗೆ ಅಲ್ಲಿ ಮದ್ಯ ಸಿಕ್ಕಲಿಲ್ಲ. ಗ್ಲಾಸಗೋದಿಂದ ಬಂದ ಒಬ್ಬ ಯುರೋಪಿಯನ್‌ನೂ ಲೆಮೋನೇಟ್‌ನಿಂದಲೆ ಸಂತೃಪ್ತನಾದನು. ಕಾಂಗ್ರೆಸ್ಸು ಪಾನಸ್ವಾತಂತ್ರ್ಯವನ್ನು ಕಸಿದುಕೊಂಡುದರಿಂದ ಕುಡುಕರ ಹೆಂಡಂದಿರಿಗೆ ಮೈತುಂಬ ಬಟ್ಟೆಗಳು ಸಿಕ್ಕಹತ್ತಿದುವು.

ಟೆನನ್ಸಿ ಕಾಯಿದೆ

ಅನೇಕ ವರುಷಗಳ ಕೆಳಗೆ, ಸಂಯುಕ್ತ ಪ್ರಾಂತದ ಗವ್ಹರ್ನರರು ಥಾಮ್ಸ್ಪಸನ್‌ರಿಗೆ ಹೀಗೆ ಹೇಳಿದರಂತೆ: "ಭೂಮಿಯ ಪದ್ಧತಿಯಲ್ಲಿ ಒಂದು ಕ್ರಾಂತಿ (Revolation) ಯಾಗಬೇಕಾಗಿದೆ. ಈ ಕ್ರಾಂತಿಯನ್ನು ನಾವು—ಬ್ರಿಟಿಷ್ ಆಡಳಿತಗಾರರು—ಎಂದೂ ಮಾಡಲಾರೆವು. ನಾನು ಕಾಂಗ್ರೆಸ್ ಸರಕಾರದ ಹಾದಿಯನ್ನು ಕಾಯುತ್ತಿದ್ದೇನೆ. " ಹಳ್ಳಿಯಲ್ಲಿಯ ಜನರ ಸ್ಥಿತಿಯನ್ನು ಸುಧಾರಿಸುವ ಹಲವು ಕೆಲಸಗಳನ್ನು ಕಾಂಗ್ರೆಸ್ ಸರಕಾರವು ಮಾಡಿರುವುದು. ಟೆನನ್ಸಿ ಅ್ಯಕ್ಟ್, ಡೆಟ್ ರಿಡಕ್ಶನ್ ಅ್ಯಕ್ಟ್ ಮೊದಲಾದುವುಗಳನ್ನು ಕಾಂಗ್ರೆಸ್ ಸರಕಾರದವರು ಪಾಸು ಮಾಡಿದರು. ರೈತನ ಮನಸ್ಸಿನಲ್ಲಿ ಆಶೆಯು ಅಂಕುರಿಸಿದೆ. ನಾನು (ಗ್ರಂಥಕರ್ತರು) ಪಂಡಿತ ಜವಾಹರಲಾಲರ ಕೂಡ ಟೆನನ್ಸಿ ಬಿಲ್ಲಿನ ಕಾಲಕ್ಕೆ ಹಳ್ಳಿಗಳಲ್ಲಿಯ ಕೆಲವು ಸಭೆಗಳಿಗೆ ಹೋಗಿದ್ದೆ. ಹಳ್ಳಿಗಳಲ್ಲಿ ಹೊಸ ಹುರುಪು ಬಂದಿದೆಯೆನ್ನಲಿಕ್ಕೆ ಸಂದೇಹವಿಲ್ಲ. (ಪುಟ ೮೭) ಹಿಂದುಸ್ತಾನದಲ್ಲಿ ಬಹುಕಾಲದಿಂದ ಬಂದ ಈ ದುಷ್ಟರೂಢಿ (Agelong evils) ಯು ಮೇಲೆ ಒಂದೇ ಸಲ ಏರಿಹೋಗಿ ಬಿಟ್ಟುಬಿಡಲಿಕ್ಕಾಗುವುದಿಲ್ಲ. ಈ ವಿಷಯವನ್ನು ಚೆನ್ನಾಗಿ ಬಲ್ಲ ಬ್ರಿಟಿಷ್ ಅಧಿಕಾರಿಗಳು ಕಾಂಗ್ರೆಸ್ಸು ಮತ್ತೆ ಅಧಿಕಾರ ಸ್ವೀಕರಿಸಲೆಂದು ಬಯಸುತ್ತಾರೆ.

ಭರತಖಂಡದ ಬಡತನ

(ಪುಟ ೮೯) ಒರ್ವ ಅಮೇರಿಕನ್ ವರ್ತಕಪ್ರವಾಸಿಯು ಕೆಲವು ವರುಷಗಳ ಹಿಂದೆ ಥಾಮ್ಸ್ಪಸನ್‌ರನ್ನು ಲಾಹೋರದಲ್ಲಿ ಕಂಡನು—ಆಗ ಭಾರತದ ಬಡತನವನ್ನು ನೋಡಿ ಮರುಕ, ಬೆರಗುಗಳಿಂದ ಅವನು ತೆಗೆದ ಉದ್ಗಾರಗಳು ಈ ರೀತಿಯಾಗಿವೆ: " ಓ ದೇವರೆ! ಎಷ್ಟೋ ವರುಷಗಳಿಂದ ನೀನು ಈ ದೇಶವನ್ನು ಆಳುತ್ತಿದ್ದೀಯೆಂದು ಹೇಳುತ್ತಿದ್ದಿಯೆ ; ಈ ದೇಶಕ್ಕೆ— ಹಿಂದೂಸ್ತಾನಕ್ಕೆ—ಹೆಚ್ಚು ಹಿತ ಮಾಡುತ್ತೇನೆಂಬುದಿದೆಯೇನು ? ನಾನು ಅಮೇರಿಕೆಯಲ್ಲಿ ಇದ್ದಾಗ ನನಗೆ ಇದರ ಅರಿವು ಇರಲಿಲ್ಲ, ಎಳ್ಳಷ್ಟು ಸಹ ಇರಲಿಲ್ಲ.—" ಕೆಲವು ವರುಷಗಳಾದ ಮೇಲೆ ಒರ್ವ ಪ್ರಸಿದ್ಧ ಪರರಾಷ್ಟ್ರ ರಾಜಕಾರಣಪಟುವು ನನಗೆ ಹೈದ್ರಾಬಾದ್ ಸಂಸ್ಥಾನದ ಅಜಂತಾದಲ್ಲಿ ಭೆಟ್ಟಿಯಾದನು. ತನಗೆ ಹಾಗೂ ತನ್ನ ಪರಿವಾರದವರಿಗೆ, ರಾಜರಿಗೆ ಸಲ್ಲಬಹುದಾದ ಆದರ-ಸತ್ಕಾರ ಸಂದುವೆಂದು ಹೇಳಿದನು. ಅಲ್ಲಿದೆ ನನ್ನನ್ನೂ ಅಜಂತಾ ಗುಹೆಗಳಿಗೆ ಕರೆದುಕೊಂಡು ಹೋದನು. ಅಲ್ಲಿ ಕಡೆದ ಕೆತ್ತಿದ ಚಿತ್ರಗಳನ್ನು ನೋಡಿ ಅವನು ನನ್ನನ್ನು ಕುರಿತು ಹೀಗೆ ಹೇಳಿದ: " ಈ ಚಿತ್ರಗಳು ಸುಖಸಮೃದ್ಧಿ ಜೀವನದ ಒಂದು ಕಲ್ಪನೆಯನ್ನು ತಂದೊಡ್ಡುತ್ತವೆ. ಆದರೆ ಈ ದೇಶವು ಈ ತುದಿಯಿಂದ ಆ ತುದಿಯವರೆಗೂ ದುಃಖದಿಂದ ದುರ್ದಶೆಯಿಂದ ಕುದಿಯುತ್ತಿದೆಯೆಂಬ ಪರಿಣಾಮವು ನನ್ನ ಮನಸ್ಸಿನ ಮೇಲೆ ನಿಚ್ಚಳವಾಗಿ ಆಗಿದೆ. ಇದು ಸರಿಯಾಗಿದೆಯೊ ? ". ಚಿಕ್ಕಂದಿನಲ್ಲಿ ತಮ್ಮ ಮನಸ್ಸಿನ ಮೇಲಾದ ಭಾರತದ ನೈಸರ್ಗಿಕ ಸೌಂದರ್ಯದ ಪರಿಣಾಮವನ್ನು ಬಣ್ಣಿಸುತ್ತ, ಮಿ. ಥಾಮ್ಸ್ಪಸನ್‌ರು ಹೀಗೆ ಹೇಳಿದ್ದಾರೆ: " ನಾನು ಚಿಕ್ಕವನಿದ್ದಾಗ ನನಗಿಲ್ಲಿ ಸೌಂದರ್ಯ ಹಾಗೂ ಅದ್ಭುತ ದೃಶ್ಯಗಳು ಹೇಗೆ ಕಂಡುವೆಂಬುದು ನನಗೆ ತಿಳಿಯದಾಗಿದೆ ; ಯಾಕೆಂದರೆ ನನಗೆ ಇಂದು ಬರಿ ಬಡತನ ಹಾಗೂ ದುಃಖ ಮಾತ್ರ ಕಾಣುತ್ತಿವೆಯೆಂದು ತೋರಹತ್ತಿದೆ. ಭಾರತವು ದಿನದಿನಕ್ಕೂ ದರಿದ್ರವಾಗಹತ್ತಿದೆ. ಇದನ್ನು ನಾನು ಸಿದ್ಧಮಾಡಬಲ್ಲೆನು. ಈ ಸಮಸ್ಯೆಯೂ ನಮ್ಮ ಕೈಮೀರಿದೆ ; ಈ ವಿಷಯವನ್ನು ನಾವು ಭಾರತೀಯರಿಗೆ ಒಪ್ಪಿಸಲೇಬೇಕಾಗಿದೆ. " (ಪುಟ ೯೦–೯೧) ಭಾರತದಲ್ಲಿ ದುಃಖದ ದುರ್ದಶೆಯು ಎಲ್ಲೆಯುಮೀರಿದೆ. ಆದುದರಿಂದ ನಮ್ಮ ಕೂಡ ಒಪ್ಪಂದಮಾಡಿಕೊಳ್ಳಬೇಕೆಂದು ಹಂಬಲಿಸುವ ಹಿಂದೀ ಮುಂದಾಳುಗಳಿಗೆ ಜನರಲ್ಲಿಯ ಅಸಂತೋಷವನ್ನು ತಡೆಯುವುದು ಕಠಿನವಾಗಹತ್ತಿದೆ. (ಪುಟ ೯೧) "ಭಾರತದ ದಾರಿದ್ರ್ಯವನ್ನು ದೂರಮಾಡಲು ಕೂಡಲೆ ದೊಡ್ಡ ಪ್ರಮಾಣದ ಮೇಲೆ ಪ್ರಯತ್ನ ನಡೆಯಬೇಕು; ಇಲ್ಲವಾದರೆ ಜಗಬಹುದಾದ ಕ್ರಾಂತಿಯನ್ನು ಯಾರಿಂದಲೂ ತಡೆಯಲಿಕ್ಕಾಗುವುದಿಲ್ಲ: (Nothing can prevent a revolution..).

ಭಾರತವು ಸ್ವರಾಜ್ಯಕ್ಕೆ ಪಾತ್ರವಿದೆಯೆ?

ನೈಸರ್ಗಿಕ ಹಕ್ಕುಗಳಿಗಾಗಿ ಪಾತ್ರತೆ ಬೇಕೆಂಬುದರ ಅರ್ಥವೇ ನನಗೆ ಹೊಳೆಯದಾಗಿದೆ. ಭಾರತದ ನೆರೆಯಲ್ಲಿಯ ಸಿಯಾಮ್, ತಿಬೇಟ, ನೇಪಾಳ, ಇರಾಣ ಇವೆಲ್ಲವುಗಳೂ ಸ್ವಾತಂತ್ರ್ಯವನ್ನು ಅನುಭವಿಸುತ್ತಲಿವೆ— ಎಂದಮೇಲೆ ಆವು ಸ್ವಾತಂತ್ರ್ಯಕ್ಕೆ ಹೆಚ್ಚು

ಪಾತ್ರವಿಸಿಯೆಂದು ನಾನು ತಿಳಿಯಬೇಕೋ? ಕಳೆದ ಕೆಲವು ವರುಷಗಳಿಂದ 'ಬ್ರಿಟಿಷರೂ ಸ್ವರಾಜ್ಯಕ್ಕೆ ಪಾತ್ರರಿರುವರೋ?'— ಎಂಬ ಆಶ್ಚರ್ಯಕಾರಕ ಯೋಚನೆ ನನ್ನ ತಲೆ ತಿನ್ನುತ್ತಲಿದೆ. ಉತ್ತರ ಆಕ್ಸ್‌ಫೋರ್ಡ್‌ನ ಒಂದು ಸಂಗತಿಯನ್ನು ಕೊಟ್ಟು ಥಾಮ್ಸನ್‌ರು ಹೀಗೆ ಅನುಮಾನ ಪಟ್ಟಿದ್ದಾರೆ: "ಆ ಒಂದು ಬಾಯ್-ಇಲೆಕ್ಷನ್ನಿನ ನಂತರ ಆಕ್ಸ್‌ಫೋರ್ಡ್ ಸ್ವರಾಜ್ಯ (Self Government)ಕ್ಕೆ ಪಾತ್ರವಿದೆಯೆಂದು ನನಗೆ ಮನವರಿಕೆಯಾಗಲೊಲ್ಲದಾಗಿದೆ. ನಮ್ಮ ದೇಶದ ಆಡಳಿತದಲ್ಲಿ ನಡೆದ ಅವ್ಯವಸ್ಥೆಯನ್ನು ನೋಡಿದರೆ, ಬೇರೆ ರಾಷ್ಟ್ರಗಳಿಗೆ 'ನೀವು ಸ್ವರಾಜ್ಯಕ್ಕೆ ಪಾತ್ರರಿಲ್ಲ' ಎಂದೆನ್ನುವುದು ಧೈರ್ಯದ ಮಾತೇ ಸರಿ.

(ಪುಟ ೯೨) ಹಿಂದುಸ್ತಾನಕ್ಕೆ ಸ್ವರಾಜ್ಯ ಸಿಕ್ಕರೆ ಅಧಿಕಾರಿಗಳ ಸ್ವಾರ್ಥಸಾಧಿಸುವುದು, ಆಪ್ತೇಷ್ಟರಿಗೆ ಪಕ್ಷಪಾತಮಾಡುವುದು ಮತ್ತು ಸಂಕ್ಷಿಪ್ತ ಪ್ರಪಂಚಗಳು ಪ್ರಾರಂಭವಾಗುವ ಸಂಭವವಿರಬಹುದು. ಇವುಗಳೆಲ್ಲ ಬೇರೆ ದೇಶಗಳಲ್ಲಿಯೂ ನಡೆಯುವುವೆಂದೂ ನಾನು ಕೇಳಿದ್ದೇನೆ. ಕೆಲವು ಸಲ ಇಂಗ್ಲಂಡಿನಲ್ಲಿ ಮೂರನೆಯ ತರಗತಿಯ ಮನುಷ್ಯನಿಗೂ ದೊಡ್ಡ ಅಧಿಕಾರಸ್ಥಾನ ಸಿಕ್ಕುವುದು. ಅಮೇರಿಕೆಯ ಸಂಸ್ಥಾನಗಳಲ್ಲಿಯೂ ಇದೇ ಸ್ಥಿತಿಯಿದೆ.

ಬ್ರಿಟಿಷ್ ಮತ್ತು ಭಾರತದ ಸಹಕಾರ

(ಪುಟ ೯೩) ದೊಡ್ಡ ಪ್ರಮಾಣದ ಮೇಲೆ ನಡೆಯುವ ಬಂಡವಾಳಗಾರ ಸರ್ವಾಧಿಕಾರೀ ಸ್ವರೂಪವನ್ನು ಮರೆಯಬಾರದೆಂದು ಹೇಳಿ, ಒಂದು ದೊಡ್ಡ ಉದ್ಯಮದ ಮ್ಯಾನೇಜಿಂಗ್ ಡಾಯರೆಕ್ಟರ್‌ರು ತಮಗೆ ಹೇಳಿದುದನ್ನು ಇಲ್ಲಿ ಹೀಗೆ ನಿವೇದಿಸಿದ್ದಾರೆ:—"ಆಮೇಲೆ ನಾನು ನಮ್ಮ ಛಾಪಖಾನೆಯನ್ನು ತೆಗೆದು ಭಾರತದ ಉದ್ಯೋಗ ಮಂದಿರಕ್ಕೆ ಸಿಕ್ಕುವ ಹಣವನ್ನು ಸಿಕ್ಕದಂತೆ ಮಾಡಿದೆ. ಆಮೇಲೆ ಕಾಗದದ ಕಾರಖಾನೆಯನ್ನು ಸ್ಥಾಪಿಸಿ, ಅದಕ್ಕಾಗಿ ಆಗುವ ವೆಚ್ಚವನ್ನು ಕಡಿಮೆ ಮಾಡಿದೆ". (ಪುಟ ೯೩) ಹಿಂದೀ ಜನರ ಫರ್ಮುಗಳು ಹಾಳಾದ ರೀತಿಯನ್ನು ಲೇಖಕರು ಈ ರೀತಿ ಹೇಳಿದ್ದಾರೆ: "ಹಳೆಯ ಕಾಲದಲ್ಲಿ ಫರ್ಮುಗಳು ಭರತಖಂಡಕ್ಕೆ ಬಂದು ವ್ಯಾಪಾರ ಪ್ರಾರಂಭಿಸಿದರೆ, ಹಿಂದೀ ಚಿಕ್ಕ ಅಂಗಡಿಗಳಿಗೆ ಅಲ್ಪಸ್ವಲ್ಪ ಹಣ—ಏಜನ್ಸಿಯಿಂದ—ಸಿಕ್ಕುತ್ತಿದ್ದುದರಿಂದ, ಈ ಅಂಗಡಿಗಳು ಬ್ರಿಟಿಷ್ ಫರ್ಮುಗಳನ್ನು ಆದರದಿಂದ ಬರಮಾಡಿಕೊಳ್ಳುತ್ತಿದ್ದುವು. ಆದರೆ ಈಗ ಬ್ರಿಟಿಷ್ ಫರ್ಮುಗಳು ಸಾಮ್ರಾಜ್ಯದ ದೊಡ್ಡ ಕೋಟೆಯಲ್ಲಿ ಸಣ್ಣ ಕೋಟೆಯನ್ನು ನಿರ್ಮಾಣ ಮಾಡಿ, ಹಿಂದೀ ಜನರಿಗೆ ಅದರ ಹೆಬ್ಬಾಗಿಲನ್ನೂ ದಿಡ್ಡೀ ಬಾಗಿಲನ್ನೂ ಮುಚ್ಚಿಬಿಟ್ಟಿವೆ. ಈ ಕೋಟೆಯಿಂದ ಹೊರಹೊರಟ ಸಣ್ಣ ವ್ಯಾಪಾರವು ಸಹ—ಬ್ರಿಟಿಷರು ಬರುವ ಮೊದಲು ಈ ವ್ಯಾಪಾರ ಮಾಡುತ್ತಿದ್ದ ಹಿಂದೀ ಫರ್ಮುಗಳಿಗೆ ದೊರೆಯದಾಗಿ, ಅವು ಮೂಲೆಗುಂಪಾದುವು.

ಬಿಕ್ಕಟ್ಟನ್ನು ಹೇಗೆ ಬಗೆಹರಿಸಬೇಕು?

(ಪುಟ ೯೬) ಮಹಾತ್ಮಾಗಾಂಧಿ ಹಾಗೂ ಪಂಡಿತ ಜವಾಹರಲಾಲರು ಅಮೇರಿಕೆಗೆ ಎಂದೂ ಹೋಗಿಲ್ಲವಾದರೂ ಅಲ್ಲಿಯ ಜನರಲ್ಲಿ ಅವರಿಬ್ಬರ ಬಗ್ಗೆ ಬಹಳ ಆದರವಿದೆ. ದೇವಪುರುಷನೆಂದು ತಿಳಿಯುವಷ್ಟು ಗಾಂಧೀಜಿಯವರಲ್ಲಿ ಭಕ್ತಿಯಿದೆ. (In the united states Gandhiji and Nehru, who have neither of them ever been there are men, tremendously admired, by many partly on the side of idolatory.) (ಪುಟ ೯೬) "ನಮ್ಮ ಯೋಗ್ಯತೆಗಿಂತ ಹೆಚ್ಚು ಒಳ್ಳೆಯತನದಿಂದ ಕಾಂಗ್ರೆಸ್ ಮುಂದಾಳುಗಳು ನಮ್ಮ ಸಂಗಡ ನಡೆದುಕೊಂಡಿದ್ದಾರೆ— ಭಾರತೀಯರು ದೊಡ್ಡ ಮನಸ್ಸಿನಿಂದ ನಮ್ಮ ಕೂಡ ನಡೆದುಕೊಂಡಿದ್ದಾರೆ.

ದೇಶಭಕ್ತಿಗಿಂತ ನೀತಿಯೇ ಹೆಚ್ಚು ಬೆಲೆ ಬಾಳುವುದೆಂದು ಮಾನ್ಯಮಾಡುವವರು ಕಾಂಗ್ರೆಸ್ಸಿನ ಮುಂದಾಳುಗಳಾಗಿದ್ದುದು, ನಮ್ಮ ಸುದೈವವೇ ಸರಿ (ಪುಟ ೯೭)! ಈಗಿನ ಕಾಲದ ಯುದ್ಧದಲ್ಲಿ ಸ್ವಾತಂತ್ರ್ಯವಿದ್ದ ಜನರೇ ಉಪಯುಕ್ತರಾಗಿದ್ದಾರೆ.

ಭಾರತಕ್ಕೇನು ಬೇಕಾಗಿದೆ?

(ಪುಟ ೧೧೧) ವಸಹಾತು ಸ್ವರಾಜ್ಯದ ಸ್ವರೂಪವನ್ನು ಈ ಪುಟದಲ್ಲಿ ಹೇಳಲಾಗಿದೆ: ಬಾಯಿಗೆ ನಿಲುಕದಂತೆ ಕತ್ತೆಯ ಮೂಗಿನೆದುರು ಅಲ್ಲಾಡಿಸಿ ಸಿರಾಶೆಗೊಳಿಸುವ ಗಜ್ಜರಿಯಂತೆ, ಈ ವಸಹಾತು ಸ್ವರಾಜ್ಯವು ಕಾಣಹತ್ತಿದೆ. (ಪುಟ ೧೧೧) "೧೯೧೪-೧೮ ರ ಯುದ್ಧವು ಮುಗಿದ ಮೇಲೆ, ಹಿಂದುಸ್ತಾನಕ್ಕೆ ೧೯೧೯ ರಲ್ಲಿ ದೊರೆತ ರಾಜ್ಯಘಟನೆಯಿಂದ ಹಿಂದುಸ್ತಾನಕ್ಕೆ ಮೋಸಮಾಡಿದಂತಾಗಿದೆ. ಅದನ್ನು ಕೆಟ್ಟ ರೀತಿಯಿಂದ ನಡೆಯಿಸಿಕೊಳ್ಳಲಾಗಿದೆ- ಎಂಬ ಭಾವನೆಯು ಭರತಖಂಡದ ಎಲ್ಲೆಡೆಯಲ್ಲಿಯೂ ಬೇರೂರಿಬಿಟ್ಟಿದೆ. ಅಲ್ಲದೆ ಈ ಭಾವನೆಯು ಆಳವಾದುದಾಗಿದೆ. ಕಳೆದ ಅಕ್ಟೋಬರ್‌ನಲ್ಲಿ ಒರ್ವ ವರ್ತಕನು ನನಗೆ ಹೇಳಿದುದು ಹೀಗೆ: "ಪ್ರತಿಯೊಬ್ಬ ಭಾರತೀಯನ ಮನದಲ್ಲಿ ಈ ತೆರನಾದ ಭಾವನೆ ಮೂಡಿದೆ; 'ನಾವು ನಿಮ್ಮನ್ನು (ಬ್ರಿಟಿಷರನ್ನು) ನಂಬಿದೆವು. ನೀವು ನಡುನೀರಲ್ಲಿ ಕೈಬಿಟ್ಟಿರಿ' ಈಗ ಹೊಸ ಸಾಲ ತೆಗೆಯುವವರು ಹಿಂದಿನ ಸಾಲ ತೀರಿಸಿರಿ!"

(ಪುಟ ೧೧೫) ದುಂಡು ಮೇಜಿನ ಪರಿಷತ್ತಿನಲ್ಲಿ ಬಿಕಾನೇರದ ಮಹಾರಾಜರು, ಸಂಸ್ಥಾನಿಕರು ಸ್ವತಂತ್ರಭಾರತದೊಂದಿಗೆ ಮಾತ್ರ ಸಂಯುಕ್ತ ರಾಜ್ಯಘಟನೆಯಲ್ಲಿ ಕೂಡುವರೆಂದು ಹೇಳಿದರು. ಆದರೆ ಸಂಸ್ಥಾನಿಕರು (ಸಹಜವಾಗಿ) ಹಿಂದುಗಡೆ ಮನಸ್ಸನ್ನು ಬದಲಿಸಿರಬಹುದು ಮತ್ತು ಈಗ ಸ್ವತಂತ್ರ ಹಿಂದುಸ್ಥಾನದ ವಿರುದ್ಧ ಆಗಿರಲೂಬಹುದು.

ಈ ಗ್ರಂಥದ ಕೊನೆಯ ಪುಟದ ಮೇಲೆ, ಈಗಿನ ಕಾಲಕ್ಕೆ ಸರಿಯಾದ ಮಾತನ್ನೇ ಹೇಳಿದ್ದಾರೆ: (ಪುಟ ೧೨೦) (If Indians are good enough to die with us they are good enough to be trusted) ನಿಮ್ಮೊಂದಿಗೆ ಸಾಯಲು ಸಿದ್ಧರಿದ್ದ ಭಾರತೀಯರು ನಿಮ್ಮ ನಂಬುಗೆಗೂ ಅರ್ಹರಿದ್ದಾರೆ.

ಬದಲಾವಣೆ ★

ಶ್ರೀ. "ಶ್ಯಾಮೂ" ಬಳ್ಳಾರಿ

★

(ಒಂದು ದೃಶ್ಯಕಥೆ)

ಪಾತ್ರಗಳು :

ಅರ್ಚಕ (ಒಂದು ದೇವಾಲಯದ ಅರ್ಚಕ). ಪ್ರತಿಮಾ (ಅರ್ಚಕನ ತಂಗಿ). ಕೈದಿ (ಜೈಲಿನಿಂದ ಓಡಿಬಂದ ಒಬ್ಬ ಕಳ್ಳ). ಅಲ್ಲದೆ ಪೋಲಿಸ್ ಇನ್‌ಸ್ಪೆಕ್ಟರರು, ಪೋಲಿಸ್ ಜವಾನರು.

★

(ಅರ್ಚಕರ ಮನೆಯಲ್ಲೊಂದು ಕೋಣೆ. ಅರ್ಚಕರ ಸೋದರಿಯಾದ ಪ್ರತಿಮಾ ಹೊರಗೆ ನಿಂತಿರುವಳು, ಅರ್ಚಕರು ಹೊರಗಿನಿಂದ ಪ್ರವೇಶಿಸುವರು. ರಾತ್ರಿ ಹತ್ತು ಗಂಟೆಯ ಸಮಯ. ಹೊರಗೆ ಆಕಾಶವು ಕಗ್ಗತ್ತಲು! ಚಿಟುಕು ಹನಿಯು ಬೀಳುತ್ತಿದೆ! ಭೋರೆಂದು ಗಾಳಿ ಬೀಸುತ್ತಲಿದೆ.)

ಪ್ರತಿಮಾ:— ಅಣ್ಣಾ, ಇದೇನು? ಹೀಗೆ ಬಡವರ ಗುಡಿಸಿಲುಗಳ ಸುತ್ತಲೂ ತಿರುಗುತ್ತ, ನಿತ್ಯವೂ ರಾತ್ರಿಯ ಹತ್ತು ಗಂಟೆಗಳಿಗೆ ಮನೆಗೆ ಬಂದರೆ ಹೇಗೆ? ಊಟದ ಚಿಂತೆಯಾದರೂ ಬೇಡವೇ ?

ಅರ್ಚಕ:— ತಂಗೀ ! ಆ ಊಟವನ್ನು ಸಹ ಕಾಣದೆ ಅವರು ಅಲೆಯುತ್ತಿರಲಾಗಿ, ನನಗೆ ಸಿದ್ಧವಾಗಿದ್ದ ಊಟಕ್ಕೆ ಹೊತ್ತಾದರೆ ಏಕೆ? ಆ ಗಂಗನಿಗೆ ಕಾಯಿಲೆಯೆಂದು ಕೇಳಿ ನೋಡಲು ಹೋಗಿದ್ದೆ.

ಪ್ರತಿಮಾ:— ಅವನ ಔಷಧ-ಪಥ್ಯಗಳಿಗಾಗಿ ಮತ್ತೂ ಹಣವನ್ನು ವೆಚ್ಚ ಮಾಡಿದೆಯೇನು ?

ಅರ್ಚಕ:— ಪ್ರತಿಮಾ, ದೇವರು ಕೊಟ್ಟಿದ್ದನ್ನು ಆತನ ಸೃಷ್ಟಿಯ ಸಲುವಾಗಿ ವಿನಿಯೋಗ ಮಾಡಬಾರದೇ? ನಾವೇನು ಹಿಂದೆಯೇ ಕಟ್ಟಿಕೊಂಡು ಹೋಗುವೆವೇನು? ಈ ಮರುಳನ್ನು ಬಿಡು ; ಜನ್ಮ ಸಾರ್ಥಕವಾಗುವಂತೆ ಬದುಕೋಣ!

ಪ್ರತಿಮಾ:— ಒಳ್ಳೆಯ ಹುಚ್ಚೇ ಹಿಡಿದಿದೆ ನಿನಗೆ! ಹೀಗೆಯೇ ಇನ್ನೂ ಕೆಲವು ದಿನ ಕಳೆದರೆ, ಮನೆಯಲ್ಲಿ ಒಂದು ಕಾಸೂ ಉಳಿಯುವುದಿಲ್ಲ !

ಅರ್ಚಕ:— ತಂಗೀ, ನಮ್ಮ ಕಾಸು ನಮಗಿಂತಲೂ ಆ ಜನಕ್ಕೆ ಹೆಚ್ಚು ಅವಶ್ಯವಿದೆ. ಅದು ಇಲ್ಲದಲ್ಲಿ ನಾವೇನೂ ಸಾಯುವುದಿಲ್ಲ. ಆದರೆ, ಆ ಸ್ವಲ್ಪ ಹಣದಿಂದ ಅವರ ಹೋಗುವ ಪ್ರಾಣಗಳು ಉಳಿಯಬಹುದು. ನೀನು ತಪ್ಪು ತಿಳಿಯುತ್ತಿರುವೆ. ನನ್ನ ಮೇಲಿನ ಮಮತೆಯೇ ನಿನ್ನಿಂದ ಹೀಗೆ ನುಡಿಸುತ್ತಿರುವುದು. ಈ ಮಮತೆಯನ್ನೇ ವಿಶ್ವಪ್ರೇಮವನ್ನಾಗಿ ಮಾಡಿ, ಎಲ್ಲರನ್ನೂ ನಿನ್ನ ಸೋದರರಂತೆ ತಿಳಿ,....ಆಗ ಸರಿ ಹೋಗುವುದು! ಸರಿ, ಈಗ ನಡೆ! ಹೋಗು, ಊಟಕ್ಕಾಗಿ ಎಲೆ ಹಾಕು !

ಪ್ರತಿಮಾ:— ನಿನ್ನ ಕರ್ಮ; ವಿಚಿತ್ರದ ಮನುಷ್ಯ ಹುಟ್ಟಿದ್ದೀಯೆ ನೀನೊಬ್ಬ !

(ಒಳಗೆ ಹೋಗುವಳು.)

ಅರ್ಚಕ:— ದೇವಾ! ಪರಮಾತ್ಮಾ! ಎಂದು ನೀನು ಈ ನನ್ನ ಸೋದರಿಗೆ ವಿಶ್ವಸೋದರ ಭಾವವನ್ನು ಉಂಟುಮಾಡುತ್ತೀಯೆ ?

(ಗೋಡೆಗೆ ಹಾಕಿದ ದೇವರ ಚಿತ್ರವನ್ನು ನೋಡುತ್ತಿರುವನು. ತಪ್ಪಿಸಿಕೊಂಡು ಬಂದ ಕೈದಿಯೊಬ್ಬ ಬಂದು, ಹಿಂದಿನಿಂದ ಹಿಡಿದುಕೊಳ್ಳುವನು.)

ಕೈದಿ:— ಎಚ್ಚರಿಕೆ. ಕೂಗಬೇಡ! ಕೂಗಿದರೆ ಕೊಂದು ಬಿಡುತ್ತೇನೆ ನೋಡು !

—(ಸೊಂಟದಿಂದ ಚೂರಿಯನ್ನು ತೆಗೆದು ಕೈಯಲ್ಲಿ ಹಿಡಿಯುವನು.)

ಅರ್ಚಕ:— ನಿನಗೇನು ಹುಚ್ಚು ಹಿಡಿದಿದೆಯೇನು ?

ಕೈದಿ:— ಹೌದು, ಹಸಿವೆಯ ಹುಚ್ಚು ! ಮೂರು ದಿನಗಳಿಂದಲೂ ಊಟವಿಲ್ಲ! ಒಂದೇ ಸಮನೆ ಉಪವಾಸ! ನನಗೀಗ ಊಟ ಬೇಕಾಗಿದೆ! ಬೇಗ ಅನ್ನ ಹಾಕು, ಇಲ್ಲವಾದರೆ....!

ಅರ್ಚಕ:— (ನಿಧಾನವಾಗಿ) ಅವಸರವೇಕೆ? ಅಯ್ಯೋ, ಪಾಪ! ಉಪವಾಸದ ಆತುರ! ಅಣ್ಣಾ, ಈ ಮನೆಗೆ ಅನ್ನಕ್ಕಾಗಿ ಬಂದವರಾರೂ ನಿರಾಶೆಯಿಂದ ಹಿಂದಿರುಗಿಲ್ಲ ; ನಾನಿನ್ನೂ ಊಟ ಮಾಡಿಲ್ಲ, ಇಬ್ಬರೂ ಒಟ್ಟಾಗಿಯೆ ಊಟ ಮಾಡೋಣ ! ನೀನೀಗ ಅನಿರೀಕ್ಷಿತ ಅತಿಥಿ....ಅನ್ನವನ್ನು ತರುತ್ತೇನೆ....ಊಟಕ್ಕೆ ಏಳು ಬಾ !....

ಕೈದಿ:— ನೀನಿಲ್ಲಿಂದ ಚಲಿಸಬಾರದು. ಅನ್ನಕ್ಕೆಂದು ಒಳಗೆ ಹೋಗಿ ಗೊಂದಲ ಹಾಕುವೆಯೇನೋ! ಮನೆಯಲ್ಲಿಯ ಹೆಂಗುಸರಿಂದ ಇಲ್ಲಿಗೇ ಅನ್ನವನ್ನು ತರಿಸು !

ಅರ್ಚಕ:— ಅಪ್ಪಾ, ಹೆದರಬೇಡ ! ಮನೆಯಲ್ಲಿ ನಾನು, ನನ್ನ ತಂಗಿ ಹೊರತು ಮತ್ತಾರೂ ಇಲ್ಲ. ಸುತ್ತುಮುತ್ತಲೂ ಮನೆ ಕೂಡ ಯಾವುದೂ ಇಲ್ಲ.

ಕೈದಿ:— ನಿನ್ನನ್ನು ನಂಬುವುದು ಹೇಗೆ? ಹೋಗಿ ಆ ಯಮದೂತರನ್ನು ಮತ್ತೆ ಕರೆತಂದರೆ !....

ಅರ್ಚಕ :— ಯಮದೂತರು ಭೂಲೋಕದಲ್ಲಿದ್ದಾರೆಯೆ ?

ಕೈದಿ :— ಅಹುದು ! ಆ ಇಹಲೋಕದ ನರಕದಲ್ಲಿದ್ದಾರೆ....! ಅಬ್ಬಾ....ಅಹುದು!.. ಅದೇ ನರಕ !

ಅರ್ಚಕ :— ನೀನು ಹೆದರಿದಂತಿದ್ದೀಯೆ ! ಮೊದಲು ನಿನ್ನ ಹಸಿವನ್ನು ತೀರಿಸಿ ಅನಂತರ ಮಾತನಾಡುವ. ಪ್ರತಿಮಾ,.... ಪ್ರತಿಮಾ !

(ಒಳಗಿನಿಂದಲೇ ಪ್ರತಿಮೆ ಹೇಳುವಳು.)

ಪ್ರತಿಮಾ :— ಎಲೆ ಹಾಕಿದ್ದೇನೆ, ಏಳಣ್ಣಾ !

ಅರ್ಚಕ :— ಯಾವನೋ ಒಬ್ಬ ತಿರುಕನು ಅನ್ನ ಕಾಣದೆ ಹಸಿದು ಬಂದಿದ್ದಾನೆ; ಅನ್ನವನ್ನು ಸ್ವಲ್ಪ ತೆಗೆದುಕೊಂಡು ಬಂದು ಬಿಡು !

ಪ್ರತಿಮಾ :— (ಒಳಗಿನಿಂದಲೆ) ಅಯ್ಯೋ ! ಈ ಅರ್ಧರಾತ್ರಿಯ ಸಮಯದಲ್ಲೂ ಈ ತಿರುಕರ ಗೋಳೇ ! ತಿರುಕನಿಗೆ ಹಾಕುವ ತನಕ ಇವನು ಒಳಗೆ ಬಾರನು ! (ಎಂದು ಹೊರಗೆ ಬಂದು, ಕೈದಿಯ ಕೈಯಲ್ಲಿಯ ಚೂರಿಯನ್ನು ನೋಡಿ, ಅಂಜಿ ನಿಲ್ಲುವಳು.)

ಅರ್ಚಕ :— ತಂಗೀ, ಹೆದರಬೇಡ! ಈತನಿಗೆ ನಮ್ಮ ಸಲುವಾಗಿ ನಂಬಿಕೆ ಇಲ್ಲ; ಇಷ್ಟೆ ! (ಎಂದು ನಗುವನು.)

ಪ್ರತಿಮಾ :— ಅಣ್ಣಾ, ನನಗೆ ಭಯವಾಗುತ್ತದೆ ! ಕಾಡುಮೃಗದಂತೆ ಇದ್ದಾನೆ.... ಇವನಾರು ? ಹೀಗೆಯೇಕೆ ಬಂದಿದ್ದಾನೆ?

ಕೈದಿ :— ಬೇಗ ! ಇಲ್ಲವಾದರೆ ನೋಡಿ, ಇಬ್ಬರನ್ನೂ ಕೊಂದು, ನಾನೇ ಉಂಡುಹೋಗುತ್ತೇನೆ ! ಈ ಪೆಟ್ಟಿಗೆಯ ಕೈ.... ಅದೂ ಬೇಕು !

ಅರ್ಚಕ :— ತಂಗೀ, ಕೊಟ್ಟುಬಿಡು ! ಬೇಗನೆ ಹೋಗಿ ಅನ್ನವನ್ನು ತಾ ! ಹಸಿವೆಯ ಆತುರದಿಂದ ಈತನಿಗೆ ಮತಿಯು ಕೆಟ್ಟಿದೆ !

ಕೈದಿ :— ಹಸಿವೆಯಿಂದಲ್ಲ, ನರಕವಾಸದಿಂದ !....

(ಪ್ರತಿಮೆಯು ಎಲೆಯನ್ನು ಹಾಕಿ ಬಡಿಸುವಳು. ಕೈದಿಯು ಎಡಗೈಯಲ್ಲಿ ಚೂರಿಯನ್ನು ಹಿಡಿದು, ಉಣ್ಣುತ್ತ ಕೂಡುವನು.)

ಕೈದಿ :— (ಉಣ್ಣುತ್ತಾ) ಹಾ ! ಇಂತಹ ಭೋಜನ ಜೈಲಿನಲ್ಲಿ ಎಂದೂ ಸಿಕ್ಕುತ್ತಿದ್ದಿಲ್ಲ !

ಅರ್ಚಕ :— (ಆಶ್ಚರ್ಯದಿಂದ) ಜೈಲಿನಲ್ಲೇ?

ಕೈದಿ :— (ತುತ್ತನ್ನು ನುಂಗುತ್ತಾ) ಹುಂ, ಜೈಲಿನಲ್ಲಿ ! ಮತ್ತೆ ಏನೆಂದು ತಿಳಿದೆ ? (ಬಾಗಿಲಕಡೆಗೆ ನೋಡಿ) ತೆರೆದಿದೆ ಏತಕ್ಕೆ ? (ಎಂಜಲಿನ ಕೈಯಿಂದಲೇ ಎದ್ದು, ಬಾಗಿಲನ್ನು ಹಾಕಿ ಭದ್ರಮಾಡಿ) ಮತ್ತೇನು ? ತಿಳಿಯಿತೇ ?

ಅರ್ಚಕ :— ಸರಿ ! ನಿಮ್ಮಂತಹವರಾದರೂ ಅನ್ನಾತುರರು ಬರುವರೆಂದೇ ಬಾಗಿಲನ್ನು ತೆರೆದಿಡುವುದು !

ಕೈದಿ :— ಹೀಗೇನು ! ಸರಿ ! ಈಗ ಅದು ಮುಚ್ಚಲ್ಪಟ್ಟಿದೆಯಲ್ಲ ?

ಅರ್ಚಕ :— ಈ ಹತ್ತು ವರ್ಷಗಳಲ್ಲಿ ಇದೇ ಮೊದಲನೆಯ ಸಲ !

ಕೈದಿ :— (ನಗುತ್ತ ಊಟವನ್ನು ಮುಗಿಸಿ ತೇಗುವನು.)

ಪ್ರತಿಮಾ :— ಎಲೆಯನ್ನೆತ್ತಿ ಸಗಣಿ ಹಚ್ಚು ! ನಿಮ್ಮ ತಾತ ಬರುತ್ತಾನೆಯೇ ? ಕೂಳುತಿಂದು ಎಂಜಲುಬಿಟ್ಟರೆ ಹೇಗೆ? ಉಂಡದ್ದೂ ಜ್ಞಾನಬೇಡವೇ !

(ಕೈದಿಯು ತಲೆಬಾಗಿ, ಎಲೆಯನ್ನೆತ್ತಿ, ಸಾರಣೆಮಾಡುತ್ತ)

ಕೈದಿ :— ನಿಮಗೆ ಕಳ್ಳರೆಂದರೆ ಭಯವೆನಿಸದೆ ?

ಅರ್ಚಕ :— ಇಲ್ಲ, ಕಳ್ಳರೆಂದರೆ ನನಗೆ ಕರುಣೆ; ಸಹಾನುಭೂತಿ ಇದೆ !

ಕೈದಿ :— ಕರುಣೆ ? ಸಹಾನುಭೂತಿ ? ಹ್ಹ ! ಹ್ಹ ! ಹ್ಹ ! (ಎಂದು ನಗುತ್ತಾ) ಕಳ್ಳರಲ್ಲಿ ಸಹಾನುಭೂತಿಯೇ ! ನೀನಾರು ?

ಅರ್ಚಕ :— ಆ ದೇವಾಲಯದ ಅರ್ಚಕ !

ಕೈದಿ :— ಅರ್ಚಕ .... ಪೂಜಾರಿ .... ! ನೀನು ಪೂಜಾರಿ; ನಾನು ಕಳ್ಳ !

ಅರ್ಚಕ :— ಇನ್ನು ಮೇಲೆ ನೀನು ಹಾಗಿರಲಾರೆಯೆಂದು ನನ್ನ ನಂಬಿಕೆ. ಪ್ರತಿಮಾ, ಈತನಿಗೆ ತಾಂಬೂಲವನ್ನು ತಂದು ಕೊಡು !

(ಕೈದಿಯು ಆಲೋಚಿಸುತ್ತ ತಾಂಬೂಲವನ್ನು ಹಾಕಿಕೊಳ್ಳುವನು.)

ಕೈದಿ :— ದಯೆಯಂತೆ, ದಯೆ ! ಕಳ್ಳರಲ್ಲಿ ....

ಅರ್ಚಕ :— ಪ್ರತಿಮಾ, ನೀನು ಒಳಗೆ ಹೋಗು ; ಇವನ ಸಂಗಡ ಸ್ವಲ್ಪ ಮಾತನಾಡಬೇಕಾಗಿದೆ !

ಪ್ರತಿಮಾ :— ಅಣ್ಣಾ ! ಇವನ ಹತ್ತಿರ ನಿನ್ನನ್ನು ಒಂಟಿಯಾಗಿ........

ಅರ್ಚಕ :— ಏನೂ ಭಯವಿಲ್ಲಮ್ಮಾ ! ನೀನು ಹೋಗಿ ಉಂಡು ಮಲಗು !

(ಪ್ರತಿಮೆಯು ಗೊಣಗುತ್ತ ಹೋಗುವಳು.)

ಕೈದಿ :— (ಜೋರಿನಿಂದ) ನಾನಾರು ಗೊತ್ತೇನು ?

ಅರ್ಚಕ :— ಗೊತ್ತು ! ಹಲವು ಮಂದಿಗೆ ಕಷ್ಟವನ್ನು ಕಲ್ಪಿಸಿದ ವ್ಯಕ್ತಿ ಇರಬಹುದು !

ಕೈದಿ :— ಕಷ್ಟ– ಹ–ಹ್ಹ–ಹ್ಹ !––ಇದು ಬಹಳ ಹಳೆಯ ಕಥೆ–ಆಗ ನಾನು ಮಾನವನಿದ್ದೆ; ಈಗ ೩೬೪೯ ನಂಬರು ಮಾತ್ರವೇ ! ಅಸಹ್ಯವಾದ ಆರು ವರ್ಷಗಳ ನರಕವಾಸವು ನನ್ನ ಆತ್ಮವನ್ನು ಕಳೆದುಬಿಟ್ಟಿತು !

ಅರ್ಚಕ :— ನರಕವು ಹೇಗಿರುವುದೋ ಕೊಂಚ ಹೇಳು, ಕೇಳೋಣ

ಕೈದಿ :— ಏತಕ್ಕೆ ? (ಸಂಶಯದಿಂದ) ನೀನು ಪೋಲೀಸರಿಗೆ ಪತ್ತೆ ಹೇಳುವೆಯೇನು ?

ಅರ್ಚಕ :— ಅಯ್ಯೋ, ಇಲ್ಲ! ನರಕವಾಸಕ್ಕೆ ಹೋಗುವವರಲ್ಲಿ ಅರ್ಧ ಜನರು ಹೊಟ್ಟೆಗೆ ಮಾರ್ಗ ಕಾಣದೆ, ಕಳವಿಗೆ ಕೊಲೆಗೆ ಕೈ ಹಾಕಿ ತುರಂಗಕ್ಕೆ ಸೇರುವರೆಂದು ನನ್ನ ನಂಬಿಕೆ. ಅವರಿಗೆ ಜೀವನಮಾರ್ಗಕ್ಕೆ ಹಾದಿಯನ್ನು ತೋರಿದ್ದಲ್ಲಿ ಅವರು ಹಾಗೆ ಆಗಲಾರರೆಂದು ನನ್ನ ವಿಶ್ವಾಸ! ಆ ವಿಷಯವನ್ನು ಹೇಳಲು ನಿನಗೆ ಕಷ್ಟವಾದಲ್ಲಿ ಬಿಟ್ಟುಬಿಡು! ಆದರೆ, ಆ ನರಕಪ್ರವೇಶವನ್ನು ಮಾಡುವುದಕ್ಕೆ ಮುಂಚೆ ನಿನ್ನ ಸ್ಥಿತಿಯು ಹೇಗಿತ್ತೆಂಬುದನ್ನು ಹೇಳಬಲ್ಲೆಯೇನು? ಅದಕ್ಕೆ ಅಭ್ಯಂತರವಿರಲಾರದೆಂದು ತಿಳಿಯುತ್ತೇನೆ!

ಕೈದಿ :— ಅದನ್ನು ನಾನೀಗ ಬಹಳ ಮಟ್ಟಿಗೆ ಮರತೇ ಬಿಟ್ಟಿರುವೆನು.....ಹುಂ, ಕೇಳಿಲ್ಲಿ! ಆಗ ನನಗೊಂದು ಚಿಕ್ಕ ಗುಡಿಸಿಲು ಇತ್ತು; ಸುತ್ತಲೂ ಹೂವಿನ ಗಿಡಗಳು, ತರಕಾರಿಯ ಬಳ್ಳಿಗಳು ಇದ್ದು ಎಷ್ಟೋ ಮನೋಹರವಾಗಿತ್ತು! ಆದರಲ್ಲೊಂದು ಮೂಲೆ, ಅದು ಬಹುಶಃ ನನ್ನ ಹೆಂಡತಿ ರೋಗದಿಂದ ಮಂಚದ ಮೇಲೆ ಬಿದ್ದ ಸ್ಥಳವೆಂದು ಸ್ಮೃತಿಯಿದೆ. (ಆಲೋಚಿಸಿ) ಅಹುದು! ಅವಳು ರೋಗಿ, ನಾನು ಬಡವ! ವೈದ್ಯನಿಗಾಗಿ ಹಣ ಬೇಕಿತ್ತು. ಕೂಲಿ-ನಾಲಿಯಿಂದ ಜೀವಿಸುವ ನನಗೆ, ಆಗ ಕೂಲಿಯು ಸಿಕ್ಕದೆ ಹೋಯಿತು. ಒಂದು ದಿನ. . . ಔಷಧ ಹಾಗಿರಲಿ—ಕೊನೆಗೆ ಗಂಜಿಗೆ ಕೂಡ ಗತಿಯಿಲ್ಲದೆ ಹೋಯಿತು ಅವಳಿಗೆ! ಅಂಗಡಿಗೆ ಹೋಗಿ ಸಾಲವನ್ನು ಕೇಳಿದೆ; ಕೊಡಲಿಲ್ಲ. ಆಗ ಅಂಗಡಿಯವನಿಗೆ ತಿಳಿಯದಂತೆ ಅವನ ಮೇಜಿನ ಮೇಲಿದ್ದ ಒಂದು ರೂಪಾಯಿಯನ್ನು ಹೊತ್ತು, ಆದರಿಂದಲೇ ಅವನಲ್ಲಿ ಬೇಕಾದುವುಗಳನ್ನು ಕೊಂಡೆ. ಆ ಮೊದಲನೆಯ ಕಳವು ಅವಳ ಉಪಚಾರದ ಸಲುವಾಗಿ! (ಕೈದಿ ಕಣ್ಣೀರನ್ನು ಹಾಕುವನು; ಅರ್ಚಕನು ಅವನ ಬೆನ್ನ ಮೇಲೆ ಕೈಯಿಟ್ಟು ಕಂಬನಿಯನ್ನೊರಸುವನು. ಚೂರಿಯು ಸಹಜವಾಗಿ ಕೆಳಗೆ ಬೀಳುವುದು.)

ಅರ್ಚಕ :— (ಅದನ್ನು ಮೇಲಕ್ಕೆತ್ತಿ) ಅಣ್ಣಾ, ತೆಗೆದುಕೊ....

ಕೈದಿ :— (ಅದನ್ನು ಮೂಲೆಗೆ ಎಸೆಯುವನು) ಅಂಗಡಿಯವನು ನನ್ನನ್ನು ಪೋಲೀಸರಿಗೆ ಒಪ್ಪಿಸಿದನು. ಅವರಿಗೆ ಇದ್ದ ಕಾರಣವನ್ನು ಹೇಳಿದೆ; ಕೇಳಲಿಲ್ಲ. ಬೇನೆಯಿಂದ ಸಾಯುತ್ತಿರುವ ನನ್ನ ಹೆಂಡತಿಯನ್ನು ನೋಡಲು ಸಹ ಬಿಡಲಿಲ್ಲ! ನನ್ನನ್ನು ಆರು ತಿಂಗಳು ತುರಂಗವಾಸಕ್ಕೆ ಸೇರಿಸಿದರು.. (ಕಂಬನಿ ಅವಿರಳವಾಗಿ ಸುರಿಯುವುದು.)

ಅರ್ಚಕ :— ಹೃದಯವಿದಾರಕ ಸಂಗತಿ! ಪಾಪ, ಅಲ್ಲಿ ನಿಮ್ಮ ಹೆಂಡತಿಯ ಗತಿ ಏನಾಯಿತು?

ಕೈದಿ :— ನಾನು ಜೈಲಿಗೆ ಸೇರಿದ ಎಂಟುದಿನಕ್ಕೆ ಗಂಜಿಗೆ ಗತಿಯಿಲ್ಲದೆ ಸತ್ತಳಂತೆ; (ಆವೇಶದಿಂದ) ಕೇಳುವ ದಿಕ್ಕು ಇಲ್ಲದೆ ಹೋದುದರಿಂದ ಹುಳುಬಿದ್ದು ಸತ್ತಳಂತೆ!....

ಅರ್ಚಕ :— ಅಯ್ಯೋ!

ಕೈದಿ :— ಬಂಧವಿಮೋಚನೆಯಾದನಂತರ ಬಂದು ನೋಡುವಾಗ, ಮನೆಯು ಹಾಳಾಗಿತ್ತು. ಹೊಟ್ಟೆ ಹೊರೆಯಲು ಬೇರೆ ಮಾರ್ಗವಿಲ್ಲ. ಕಳ್ಳನೆಂದು ನನ್ನನ್ನು ಯಾರೂ ಕೂಲಿಗೆ ಕರೆಯಲಿಲ್ಲ. ಹಂಬಲಿಸಿ ಸಾಕಾಗಿ, ಹೊಟ್ಟೆಗಾಗಿ ಕಳವಿಗೆ ಇಳಿದೆ. ಮತ್ತೂ ಸಿಕ್ಕಿಬಿದ್ದೆ! ಮೂರುವರ್ಷ ಸೆರೆಮನೆಗೆ ಕಳಿಸಿದ್ದಾಯಿತು. ನನಗೆ ಜೀವನಯಾತ್ರೆಗೆ ಕೂಲಿ ಎಲ್ಲಿಯಾದರೂ ಸಿಕ್ಕಿದ್ದಲ್ಲಿ ಹೀಗಾಗುತ್ತಿರಲಿಲ್ಲ. ಅನಂತರ ಒಂದು ದಿನ ತಪ್ಪಿಸಿಕೊಂಡು, ಅಡ್ಡಬಂದ ಕಾವಲುಗಾರನನ್ನು ಹೊಡೆದು ಓಡಿದೆ. ಮತ್ತೆ ಹಿಡಿದು ಹತ್ತುವರ್ಷ ಸಜೆ ವಿಧಿಸಿದರು. ಆ ನರಕದಲ್ಲಿ ನನ್ನನ್ನು ಕಾಡುಮೃಗದಂತೆ ಕಾಣುತ್ತಾ ಬಂದರು.. ಕೈಕಾಲುಗಳಿಗೆ ಸಂಕೋಲೆಗಳು; ನಾಯಿಯನ್ನು ಹೊಡೆದಂತೆ ಚಬುಕಿನ ಏಟುಗಳು! ಬೆಂದೂ ಬೇಯದ ಅನ್ನ, ಹುಳುಗಳುಬಿದ್ದ ಗಂಜಿ, ಇವೇ ಆಹಾರ! ತತ್ಫಲವಾಗಿ ನಾನೂ ನನ್ನ ಆತ್ಮವೂ ಬೇರೆಯಾಗಿ ಹೋದೆವು. ಹೀಗೆ ವರ್ಷಗಳು ಕಳೆದು ಹೋದುವು. ಒಂದು ದಿನ ಕಾಡುಮೃಗವನ್ನು ಕಟ್ಟಿ ಹಾಕಲಿಲ್ಲ; ಹೇಗೋ ಮೃಗವು ತಪ್ಪಿಸಿಕೊಂಡು ಹೊರಬಿತ್ತು! ಇದು ಸ್ವಾತಂತ್ರ್ಯವಂತೆ.. ಹಾಳು ಸ್ವಾತಂತ್ರ್ಯ! ಮೂರು ದಿನಗಳಿಂದಲೂ ಕೂಳಿಲ್ಲದ ಸ್ವಾತಂತ್ರ್ಯ!

ಸರ್ವಮಾನ್ಯ!

ಚಳಿಗಾಲದಲ್ಲಿ ಶಕ್ತಿಯ ಬಗ್ಗೆ

ಸರ್ವೋತ್ಕೃಷ್ಟವೆಂದು

ರಕ್ತವರ್ಧಕವನ್ನೇ

ಎಲ್ಲ ಜನರು ಉಪಯೋಗಿಸುತ್ತಿರುವರು.



ಅಷ್ಟವರ್ಗ
ಚ್ಯವನಪ್ರಾಶ

●

ಸುವರ್ಣ
ಮಾಲಿನೀ ವಸಂತ

●

ಮಕರಧ್ವಜಗುಟಿ

●

ಮುಂತಾದ
ಶಕ್ತಿವರ್ಧಕ
ಔಷಧಗಳನ್ನು
ತರಿಸಿರಿ!

ಕರ್ನಾಟಕ ಕೇಂದ್ರ ಮರಾಠಾಗಲ್ಲಿ, ಹುಬ್ಬಳ್ಳಿ.

ಈ ಸಲ ಸಿಕ್ಕರೆ ಮತ್ತೂ ಹತ್ತು ವರ್ಷಗಳು!....... ಕೂಳಿಲ್ಲದೆ ಸಾಯುವ ಈ ಸ್ವಾತಂತ್ರ್ಯಕ್ಕಿಂತಲೂ ಆ ನರಕವೇ ಲೇಸಾಗಿದೆ!

ಅರ್ಚಕ :— ಏನು? ಕೂಳು ಇಲ್ಲವೆ?

ಕೈದಿ :— ಅಹುದು! ನರಕದಲ್ಲಿರುವ ಪರ್ಯಂತವೂ ಎರಡು ಹೊತ್ತು ಸರಿಯಾಗಿ ಗಂಜಿಹಾಕುತ್ತಾರೆ; ಹೊರಗೆ ಬಂದರೆ, ದಿಕ್ಕಿಲ್ಲದೆ ಬಾಯಿ-ಬಾಯಿಬಿಟ್ಟು ಮತ್ತೆ ಹೊಟ್ಟೆಗಾಗಿ ಕಳವು ಮಾಡಿದರೆ ಮತ್ತೂ ನರಕವನ್ನು ಸೇರಿಸುತ್ತಾರೆ! ಇಷ್ಟೇ ಅಲ್ಲ, ಈಗ ಮೃಗದಂತೆ ನನ್ನನ್ನು ಬೇಟೆಯಾಡುತ್ತಾರೆ. ಜೀವನಮಾರ್ಗ ಕಾಣದು. ಈಗ ನನಗೆ ಊರಿಲ್ಲ, ಹೆಸರಿಲ್ಲ! ಕೂಲಿಯಿಂದ ಜೀವಿಸಲು ಮೈಯಲ್ಲಿ ಶಕ್ತಿಕೂಡ ಇಲ್ಲ! ಭಿಕ್ಷುಕನಾಗಿ ಬದುಕಬೇಕೆಂದರೆ ಹೊರಗೆ ತಿರುಗಾಡಲು ಧೈರ್ಯಸಾಲದು! ಇದೇ ನರಕ ಚರಿತ್ರೆ! ಇಲ್ಲಿಯ ಉಪವಾಸದ ಸ್ವಾತಂತ್ರ್ಯಕ್ಕಿಂತಲೂ ಆ ನರಕವೇ ಉತ್ತಮವೆನಿಸುತ್ತಲಿದೆ! ಎಷ್ಟು ದಿನ ಈ ಹಾಳು ಬದುಕು?....ನನ್ನ ಕಥೆ ಚೆನ್ನಾಗಿಲ್ಲವೇ?

ಅರ್ಚಕ :—ಅಣ್ಣಾ, ದೇವರು ನಿನಗೆ ಇನ್ನು ಮುಂದೆ ಒಳ್ಳೇಯದನ್ನು ಮಾಡುವನು! ಉತ್ತಮ ಮಾರ್ಗವನ್ನು ಹಿಡಿ!

ಕೈದಿ :— ದೇವರು....! ಹಹಹ! (ನಕ್ಕು) ದೇವರು ಇದ್ದಾನೆಯೇ? ಹೊಟ್ಟೆಗೆ ಗತಿಯಿಲ್ಲದೆ ಸಾಯುವ ಬಡವರಿಗೆ ದೇವರು ಇದ್ದಾನೆಯೇ? ಎಲೆಕ್ಟ್ರಿಕ್ ದೀಪಗಳ ಮಹಡಿಯ ಮನೆಗಳಲ್ಲಿ ಇರುವ ಧನಿಕರಿಗೆ ದೇವರು! ಅವರ ನೈವೇದ್ಯಗಳನ್ನು ತಿಂದು ಬಡವರನ್ನು ಮರೆತು ಬಿಟ್ಟಿದ್ದಾನೆ! ಈ ದೇಶದಲ್ಲಿ ಎಷ್ಟೋ ಕೋಟಿ ಜನರಿಗೆ ಎರಡು ಹೊತ್ತೂ ಅನ್ನವಿಲ್ಲ; ಸ್ವತಂತ್ರ ಜೀವನ ವಿಲ್ಲ! ಅವರಿಗೆ ದೇವರೆಲ್ಲಿದ್ದಾನೆ?

ಅರ್ಚಕ :— ಹಾಗೆನ್ನಬೇಡ, ಇವೆಲ್ಲವೂ ದೇವರ ಪರೀಕ್ಷೆ! ನಿನಗೆ ಈ ಕಗ್ಗತ್ತಲಲ್ಲಿ ಹಾದಿಯನ್ನೂ ಬೆಳಕನ್ನೂ ಆತನೇ ಕೊಡತಕ್ಕವನು! ಇಲ್ಲಿಯೆ ಮಲಗಿಕೊಳ್ಳು, ಹೊತ್ತಾಗಿದೆ! ಪಾಪ, ನಿನಗೆ ವಿಶ್ರಾಂತಿಯೂ ಇಲ್ಲ!

ಕೈದಿ :— ವಿಶ್ರಾಂತಿ....ನಿದ್ದೆ . . ನನಗೆ? ನನಗೆ ನಿದ್ದೆಯೇ?

ಅರ್ಚಕ :— ಏಕೆ? ಅದೋ....ಅಲ್ಲಿ ಕೋಣೆಯಲ್ಲಿ ಮಲಗು! ಹಚ್ಚಡವನ್ನು ಕೊಡುತ್ತೇನೆ!

ಕೈದಿ :— ಯಾರಾದರೂ ಬಂದಲ್ಲಿ?

ಅರ್ಚಕ :— ಇಲ್ಲಿ ಯಾರೂ ಬರುವುದಿಲ್ಲ! ಬಂದರೂ ಚಿಂತೆಯಿಲ್ಲ, ನನ್ನ ಸ್ನೇಹಿತನೆಂದು ಹೇಳುತ್ತೇನೆ!

ಕೈದಿ :— ಪೂಜಾರಿ....ಸ್ನೇಹಿತ—ಚೆನ್ನಾಗಿದೆ!

ಅರ್ಚಕ :— ನಿರ್ಭಯನಾಗಿರು; ನಾನಿದ್ದೇನೆ! (ಹೋಗುವನು)

(ಕೈದಿ ಮಲಗುತ್ತಾನೆ. ಹಾಗೆಯೇ ನೋಡುತ್ತಿರುವಲ್ಲಿಗೆ, ಅಲ್ಲಿಯೆ ಇದ್ದ ಬೀಗದ ಕೈಗೊಂಚಲು ಕಾಣುತ್ತದೆ. ಥಟ್ಟನೆ ಎದ್ದು ಪೆಟ್ಟಿಗೆಯನ್ನು ತೆರೆದು ನೋಡುತ್ತಾನೆ: ಅಲ್ಲಿ ಬೆಳ್ಳಿಯ ತಂಬಿಗೆಯೊಂದು ಕಾಣುತ್ತದೆ, ಇನ್ನೂ ಏನೇನೋ ಇವೆ.)

ಕೈದಿ :—(ತಂಬಿಗೆಯನ್ನು ಕೈಯಲ್ಲಿ ತೆಗೆದುಕೊಂಡು) ಭಾರವಾಗಿದೆ! ಬೆಳ್ಳಿಯದು....!

(ಹೊರಗೆ ಹೆಜ್ಜೆಯ ಶಬ್ದವಾಗುತ್ತದೆ. ಅರ್ಚಕ ಒಳಗೆ ಬರುತ್ತಾನೆ. ಕೈಯಿಂದ ಅಪ್ರಯತ್ನವಾಗಿ ತಂಬಿಗೆಯು ಜಾರಿ ಕೆಳಗೆ ಬೀಳುತ್ತದೆ. ಅರ್ಚಕ ಒಳಗೆ ಬರುತ್ತಾನೆ.)

ಅರ್ಚಕ :— (ವಿಷಯವನ್ನು ಗ್ರಹಿಸಿ) ಈ ತಂಬಿಗೆಯನ್ನು ನೀವು ಮೆಚ್ಚಿದಂತಿದೆ. ಇದನ್ನು ನಮ್ಮ ತಾಯಿಯ ಸ್ಮೃತಿ ಚಿಹ್ನವಾಗಿ ಇರಿಸಿದ್ದೇನೆ!....ಇನ್ನೂ ನಿಮಗೆ ನಿದ್ದೆ ಬಂದಿಲ್ಲವೇ?

ಕೈದಿ :— ನಿದ್ದೆ! ಅಬ್ಬಬ್ಬಾ, ನಾನು ನಿದ್ದೆ ಮಾಡಬೇಕೆಂದು ನಿನಗೇಕೆ ಇಷ್ಟೊಂದು ಅಪೇಕ್ಷೆ? ಹೊರಗೆ ಹೋಗಿ ಪತ್ತೆ ಕೊಡುವುದಕ್ಕೇನು? ಇಲ್ಲವಾದಲ್ಲಿ ನನ್ನ ಮೇಲೆ ನಿನಗೇಕೆ ಇಷ್ಟು ಸಹಾನುಭೂತಿ?

ಅರ್ಚಕ :— ಜಗತ್ತಿನಲ್ಲಿ ಜನಿಸಿದ ನಿರ್ಭಾಗ್ಯರಲ್ಲಿ ನೀನೂ ಒಬ್ಬ! ಆದುದರಿಂದಲೇ ಸಹಾನುಭೂತಿ! ದುಃಖಮಯ ಜೀವನಗಳಲ್ಲಿ ಸಹಕರಿಸುವುದೇ ನನ್ನ ಜೀವಿತಾಶಯವು! ದಯವಿಟ್ಟು ಮಲಗು! ಚಿಂತೆಯಿಲ್ಲ, ನಿನಗೆ ಈ ತಂಬಿಗೆಯು ಅಷ್ಟು ಪ್ರಯೋಜನಕಾರಿಯೇ ಆದಲ್ಲಿ, ಅದನ್ನು ನಿನಗೆ ಕೊಡಲು ಅಭ್ಯಂತರವಿಲ್ಲ!

ಕೈದಿ :— ನೀನು ನನ್ನ ಹೃದಯವನ್ನು ಬದಲಾಯಿಸಬೇಕೆಂದು ನೋಡುತ್ತಿರುವೆಯೇನು? ನನಗೆ ಪುಣ್ಯ-ಪಾಪಗಳಿಂದ ಕೆಲಸವಿಲ್ಲ! ಜಗತ್ತೆಂದರೆ ನನಗೆ ತುಂಬಾ ಅಸಹ್ಯವಾಗಿದೆ!

ಅರ್ಚಕ :—ಆದರೆ ಜಗತ್ತು ನಿನ್ನಲ್ಲಿ ಅಸಹ್ಯವನ್ನು ಹೊಂದಿಲ್ಲವಲ್ಲ!

ಕೈದಿ :— ನೋಡು, ನೀನು ನನ್ನ ಸಲುವಾಗಿ ತೋರುವ ಪ್ರೀತಿ, ದಯೆ, ವಿನಯ ಇವೆಲ್ಲವೂ ವ್ಯರ್ಥ; ನಿರುಪಯೋಗ! ಕೇವಲ ನನ್ನಂತಹ ಪಿಶಾಚಿಯ ಸಲುವಾಗಿ ನೀನು ನಿನ್ನ ಅಮೂಲ್ಯ ವಸ್ತುಗಳನ್ನು ವೆಚ್ಚಿಸುತ್ತಿರುವೆ! ದುರ್ವ್ಯಯವಲ್ಲವೇ ಇದು?

ಅರ್ಚಕ :— ಕ್ಷಮಿಸು, ನೀನೂ ನನ್ನಂತೆಯೇ ಭಗವಂತನ ಸೃಷ್ಟಿ! ಆ ದೇವರ ಪ್ರೀತಿಗಾಗಿ—ಕರ್ತವ್ಯಕ್ಕಾಗಿ—ಸೋದರ ಮಾನವ ಸೇವೆಗಾಗಿ— ಹೀಗೆ ಮಾಡಬೇಕಾಗಿದೆ!

ಕೈದಿ :— ನಿನ್ನ ಧರ್ಮಪ್ರಸಂಗಗಳು ನನಗೆ ಬೇಡ! ಹೋಗಿ ಮಲಗಿಕೊಳ್ಳು, ನನ್ನ ದಾರಿ ನನ್ನದು!

ಅರ್ಚಕ — ದೇವರ ಪ್ರೇರಣೆಯಂತೆ ನೀನು ಮಾಡು! ಆತ ಲೀಲಾಮಯನು! ನಾನು ಹೋಗುತ್ತೇನೆ....

ಕೈದಿ :— (ಅವಸರದಿಂದೆದ್ದು) ಇಲ್ಲಿಗೆ ಯಾರೂ ಬರುವುದಿಲ್ಲವಲ್ಲ?

ಅರ್ಚಕ :— ಇಲ್ಲ, ಭಯವೇತಕ್ಕೆ? ಇಲ್ಲಿ ದೇವರ ಸನ್ನಿಧಿಯಿದೆ, ಭಯವಿಲ್ಲ! ನೀನು ಬಾಗಿಲನ್ನು ಹಾಕಿಕೊಂಡು ನಿರಪಾಯವಾಗಿ ಮಲಗು!

ಕೈದಿ :— ಸರಿ! (ಪೂಜಾರಿ ಹೋಗುವನು. ಕೈದಿ ಬಾಗಿಲನ್ನು ಹಾಕಿಕೊಂಡು,) ಯಾರಾದರೂ ಬಂದರೆ ಪೆಟ್ಟಿಯು ಮುಳುಗುತ್ತದೆ! ತಂಬಿಗೆಯನ್ನು ಮತ್ತೊಂದು ಸಲ ನೋಡಬೇಕು..... (ಹಿಡಿದು ನೋಡುತ್ತಾ) ಐವತ್ತು ರೂಪಾಯಿ ಬೆಲೆಯಾಗುತ್ತದೆ. ಇದು ತಾಯಿಯ ಜ್ಞಾಪಕಚಿಹ್ನವಂತೆ.... ಆದರೆ ನನ್ನನ್ನು ಜೈಲಿಗೆ ಕಳುಹಿಸುವ ಕಾಲದಲ್ಲಿ, ಈ ಹಾಳು ಜಗತ್ತು ನನ್ನ ತಾಯಿಯ ಸಲುವಾಗಿ ಆಲೋಚಿಸಿತೇ? ಬೇನೆಯಿಂದಿದ್ದ ಆ ಹೆಂಡತಿಯನ್ನು ವಿಚಾರಿಸಿತೇ? ಈ ಅರ್ಚಕನೂ ಈ ಜಗತ್ತಿಗೆ ಸೇರಿದವನೇ! (ಆಲೋಚಿಸಿ) ಇವನನ್ನು ಕುರಿತು ವಿಪರೀತ ಭಾವಿಸಿದರೆ ಲಾಭವಿಲ್ಲ! ಒಳ್ಳೆಯವನಂತೇ ಕಾಣುತ್ತಾನೆ; ನನ್ನಲ್ಲೂ ಕೊಂಚ ಬದಲಾವಣೆಯಾಗಿದೆ; ಇಲ್ಲವಾದಲ್ಲಿ ಇವನ ಒಳ್ಳೆಯತನ ನನಗೆ ಹೇಗೆ ಬೋಧವಾಗುತ್ತದೆ? ಈಗ ಆ ಒಳಿತಿನಿಂದ ಉಪಯೋಗವಿಲ್ಲ! ನನಗೆ ಬೇಕಾದದ್ದೆಲ್ಲ ಈ ತಂಬಿಗೆಯೊಂದೇ! (ಪೆಟ್ಟಿಗೆಯಲ್ಲಿ ನೋಡಿ) ನಗದು ಮೂರು ರೂಪಾಯಿ ಮಾತ್ರ ಇದೆ....ಇದು ಸಾಲದು! ಎರಡು ಮೂರು ದಿನ ಮಾತ್ರ ಕಾಲಕಳೆಯಬಹುದು! ಇದನ್ನೆಲ್ಲ ಬೇಗನೆ ತೆಗೆದುಕೊಂಡು ಹೋಗಬೇಕು! ಬೆಳಗಾಗುವವರೆಗೂ ಇಲ್ಲಿಯೆ ಇದ್ದರೆ, ಮತ್ತೂ ಇವನ ಉಪದೇಶಗಳನ್ನು ಕೇಳಬೇಕಾಗುತ್ತದೆ! ಆಗ ನನ್ನ ಮನಸ್ಸು ಹೇಗೆ ಬದಲಾಯಿಸುವುದೋ ನನಗೇ ತಿಳಿಯದು! (ಮತ್ತೂ ಚಿಂತಿಸಿ) ಏನೊ, ಇವನನ್ನಾದರೂ ನಂಬಬೇಕು ಹೇಗೆ? ಹೋಗಿ ಪೋಲೀಸರಿಗೆ ಹೇಳುವನೋ ಏನೋ!

(ಎದ್ದು ತಂಬಿಗೆಯನ್ನು ಕೊಂಕುಳಲ್ಲಿ ಇಟ್ಟುಕೊಂಡು, ಮೆಲ್ಲಗೆ ಹೆಜ್ಜೆಯನ್ನಿಡುತ್ತಾ ಬಾಗಿಲನ್ನು ತೆರೆದು ಹೊರಟುಹೋಗುವನು. ಬಾಗಿಲನ್ನು ತೆರೆವಾಗ ಶಬ್ದವಾಗುತ್ತದೆ.)

ಪ್ರತಿಮಾ :— (ಒಳಗೆ ಎದ್ದು) ಯಾರದು? (ಕೋಣೆಯೊಳಕ್ಕೆ ಬಂದು) ಇಲ್ಲಿ ಯಾರೂ ಇಲ್ಲ. (ಪೆಟ್ಟಿಗೆಯ ಬಾಗಿಲು ತೆರೆದುದನ್ನು ಕಂಡು) ಅಯ್ಯೋ, ಸರ್ವ ನಾಶ! ಅಣ್ಣಾ! ಅಣ್ಣಾ! ನಿನ್ನ ನಿದ್ದೆ ಹಾಳಾಗ! ಏಳಪ್ಪಾ!

ಅರ್ಚಕ :— (ಬಂದು) ಏನಮ್ಮಾ, ಈ ಅಪರಾತ್ರಿಯಲ್ಲಿ ಈ ಗೊಂದಲ?

ಪ್ರತಿಮಾ :— ಗೊಂದಲವೇ, ಸಾವೇ? ಆ ಕಳ್ಳಸೂಳೆಯ ಮಗ ತಂಬಿಗೆಯನ್ನು ತೆಗೆದುಕೊಂಡು ಫರಾರಿಯಾಗಿದ್ದಾನೆ.... ಅಯ್ಯೋ!

ಅರ್ಚಕ :— ಬೂದಿಯಲ್ಲಿ ಹಾಕಿದ ಪನ್ನೀರು! (ನಿಟ್ಟುಸಿರನ್ನು ಬಿಟ್ಟು) ಸುಮ್ಮನಿರು, ಅವನು ಅಂತಹವನಲ್ಲ! ಏನೋ ಪೊರಪಾಟಾಗಿರುತ್ತದೆ!

ಪ್ರತಿಮಾ :— ಅಯ್ಯೋ, ನಿನ್ನ ಮನೆ ಹಾಳಾಗಾ! ಇನ್ನೂ ಪೊರಪಾಟೇನು! ಹೋಗು ಪೋಲೀಸರಿಗೆ ತಿಳಿಸು!

ಅರ್ಚಕ :— ಇದರಲ್ಲಿ, ಅವನ ತಪ್ಪೇನು? ನಾನೇ ಅವನಿಗೆ ಅದನ್ನು ತೋರಿಸಿದೆ, ಕೀಲಕೈಯನ್ನು ಕೊಟ್ಟಿದ್ದೆ, ಆಶೆಯನ್ನು ತೋರಿಸಿದೆ.

ಪ್ರತಿಮಾ :— ಆಶೆಯಿಲ್ಲ, ಗೀಶೆಯಿಲ್ಲ! ಹೋಗು, ಬೇಗ ಹೋಗು! ಅವನು ಕಳ್ಳನೆಂದು ಗೊತ್ತು; ಅವನ ಕೈಯಲ್ಲಿ ಬೀಗದ ಕೈ ಕೊಟ್ಟು ಸುಮ್ಮನಿರುವುದೇ? ಬೇಗ ಹೊರಡು! ಅಯ್ಯೋ, ನಿನ್ನ ದಯೆ ಹಾಳಾಗಾ! ನಾನೇ ಹೋಗುತ್ತೇನೇಳು!

(ಹೊರಡಲುಪಕ್ರಮಿಸುವಳು, ಅರ್ಚಕನು ಅವಳನ್ನು ತಡೆಯುವನು.)

ಅರ್ಚಕ :— ಹುಚ್ಚೀ! ಮತ್ತೂ ಅವನನ್ನು ನರಕಕ್ಕೆ ಕಳುಹಿಸುವೆಯೇನು? ಛೀ! ಅದು ಪ್ರಯೋಜನವಿಲ್ಲ; ಅವನಿಗೆ ಕೊಡಬೇಕಾದ ಶಿಕ್ಷೆ ಬೇರೆಯಿದೆ! ಅದು ಬಹಳ ಕಠಿನವಾದ ಶಿಕ್ಷೆ; ಪಶ್ಚಾತ್ತಾಪ ಪ್ರಯೋಗ! ಮನುಷ್ಯನಿಗೆ ಶಿಕ್ಷೆಯಿಂದ ಕೆಟ್ಟ ಬುದ್ಧಿಯು ಹೋಗುವುದಿಲ್ಲ. ಅಯ್ಯೋ! ದೇವರೇ! ಅವನಿಗೆ ಒಳ್ಳೆಯ ಬುದ್ಧಿಯನ್ನು ಕೊಡಲಾರೆಯಾ?

ಪ್ರತಿಮಾ :— ನಿನ್ನ ಬುದ್ಧಿ ಬೆಳಗಿದಂತೆಯೆ ಇದೆ! ತಂಬಿಗೆ ಹೋಗುವುದಲ್ಲದೆ, ಮೇಲೆ ರಿಪೋರ್ಟುಮಾಡದೆ ಕಥೆಗಳನ್ನು ಹೇಳುತ್ತಿರುವೆ....ಹಾಳುವೇದಾಂತ!



ಡೋಂಗರೆ ಬಾಲಾಮೃತವು
ಮಕ್ಕಳಿಗೆ
ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ.

ಅರ್ಚಕ:— ಪ್ರತಿಮೆ, ನಿಲ್ಲು ! ಆ ತಂಬಿಗೆಯು ಮೊದಲು ನನ್ನ ತಾಯಿಗೆ ಸೇರಿದ್ದು, ಅನಂತರ ನನ್ನದು ; ಈಗ ಅವನದು ! ಕಾಲವೈಪರೀತ್ಯದಿಂದ ಅಧಿಕಾರಗಳು ಬದಲಾಯಿಸುವುವು. ಅದರ ಅಗತ್ಯ ನನಗಿಂತಲೂ ಅವನಿಗೇ ಹೆಚ್ಚಾಗಿರಬಹುದು. ನಮ್ಮ ಪೆಟ್ಟಿಗೆಯಲ್ಲಿ ನಗದು ರೊಕ್ಕವೇ ಇದ್ದಲ್ಲಿ, ಅವನು ಅದನ್ನೇಕೆ ತೆಗೆದುಕೊಳ್ಳುತ್ತಿದ್ದ ?

ಪ್ರತಿಮಾ:— ಅತ್ತಂತೇ ಇದೆ ನಿನ್ನ ವೇದಾಂತ.... ಶುಷ್ಕ....

(ಬಾಗಿಲನ್ನು ತೆರೆದು ಪೋಲೀಸು ಇನ್ಸ್‌ಪೆಕ್ಟರ್‌ರೂ ಜವಾನರೂ ಬರುವರು, ಅವರ ಮಧ್ಯೆ ಕೈದಿಯು ಇರುವನು. ಇನ್ಸ್‌ಪೆಕ್ಟರ್ ಕೈಯಲ್ಲಿ ತಂಬಿಗೆ ಇದೆ, ಕೈದಿಯು ಉಪೇಕ್ಷೆಯಿಂದಿರುತ್ತಾನೆ.)

ಇನ್ಸ್‌ಪೆಕ್ಟರ್:— ಅರ್ಚಕರೇ, ಇವನು ಅಪರಾತ್ರಿಯಲ್ಲಿ, ಬೀದಿಯಲ್ಲಿ ಕಳ್ಳನಂತೆ ನಡೆಯುತ್ತಿದ್ದುದರಿಂದ, ಅನುಮಾನ ಪಿನಿಸಿ ಹಿಡಿದೆ. ತನ್ನ ಊರನ್ನೂ ಹೆಸರನ್ನೂ ಸರಿಯಾಗಿ ಹೇಳಲಿಲ್ಲ. ಕೊಂಕುಳಲ್ಲಿ ತಂಬಿಗೆಯು ಅಡಗಿತ್ತು. ಇದರ ಮೇಲೆ ನಿಮ್ಮ ವಿಶ್ವಾಸವಿದೆ. ಎಂತಲೆ ಇಲ್ಲಿಗೆ ಸೆಳೆದುಕೊಂಡು ಬಂದೆ ! ಒಳ್ಳೆಯ ಕೇಸು! ಇವನಿಗೆ ಶಿಕ್ಷೆಯಾಗಿಯೆ ತೀರುತ್ತದೆ!

ಅರ್ಚಕ:—ಅಯ್ಯೋ ! (ಸ್ವಗತ) ತಂಬಿಗೆಗೆ ಬುದ್ಧಿಯಿಲ್ಲದೆ ವಿಳಾಸವನ್ನು ಏತಕ್ಕೆ ಹಾಕಿಸಿದೆ? ಸ್ವಾಮಿ, ಇದೆಲ್ಲ ವಿಚಿತ್ರ ಸಂಗತಿಯಾಗಿದೆ! ಈತನು ನನ್ನ ಸ್ನೇಹಿತ!

ಇನ್ಸ್‌ಪೆಕ್ಟರ್:— ಸ್ನೇಹಿತನೇ! ನಿಮಗೆ ಸ್ನೇಹಿತನೇ ?

ಅರ್ಚಕ:–ಅಹುದು, ದೇವರಸಾಕ್ಷಿಯಾಗಿಯೂ ಇದು ಸತ್ಯ! ಇಲ್ಲೇ ಉಂಡು ಈ ಹೊತ್ತೆಲ್ಲಾ ಇದ್ದನು ; ತಂಬಿಗೆಯನ್ನು ನಾನೇ ಕೊಟ್ಟೆನು! ಇವನ ತಂದೆಯ ಬಳಿ ನಾನು—ಪೂರ್ವದಲ್ಲಿ— ಮಾಡಿದ ಸಾಲಕ್ಕಾಗಿ ಪರಿವೆಯಿಲ್ಲದೆ ಇದ್ದುದರಿಂದ, ಈ ತಂಬಿಗೆಯನ್ನೂ ಮೂರು ರೂಪಾಯಿಗಳನ್ನೂ ಕೊಟ್ಟೆ. ಬೇಕಾದರೆ ನೋಡಿ, ಮೂರು ರೂಪಾಯಿಗಳೂ ಈತನ ಬಳಿ ಇವೆ!

ಇನ್ಸ್‌ಪೆಕ್ಟರ್:—(ಕೈದಿಯನ್ನು ಪರೀಕ್ಷಿಸಿ) ಅಹುದು, ಮೂರು ರೂಪಾಯಿಗಳೂ ಇವೆ! (ಅನುಮಾನದಿಂದ) ಕೈಗೆ ಸಿಕ್ಕ ಕೇಸು ಹೋಗುತ್ತಿದೆ; ನೀವು ಹೇಳುವುದು ಆಶ್ಚರ್ಯಕರವಾಗಿದೆ !

ಅರ್ಚಕ:—ನಾನೆಂದೂ ಸುಳ್ಳು ಆಡಿಲ್ಲ; ಆಡುವುದೂ ಇಲ್ಲ!

ಇನ್ಸ್‌ಪೆಕ್ಟರ್:— ಕ್ಷಮಿಸಿ, ಉದ್ಯೋಗಧರ್ಮದ ಮೂಲಕ ಕೇಳಿದೆ!

ಅರ್ಚಕ:— ಚಿಂತೆಯಿಲ್ಲ, ಇವನ ತಂದೆ ನಮ್ಮ ಹಿರಿಯರಲ್ಲಿ ನೌಕರಿಗೆಂದು ಇದ್ದ. ಅವನು ಬಡ್ಡಿಯಿಂದ ಕೊಡಲು ತನ್ನ ಸಂಬಳವನ್ನು ನನ್ನ ತಂದೆಯಲ್ಲೇ ಇಟ್ಟಿದ್ದ. ಅದೀಗ ಈತನಿಗೆ ಬೇಕಾಯಿತು. ನನ್ನಲ್ಲಿ ಹಣವಿಲ್ಲ, ಅದಕ್ಕೆ ಈ ಬೆಳ್ಳಿಯ ತಂಬಿಗೆಯನ್ನು ನಾನೇ ಕೊಟ್ಟೆ! ನಿಮಗೆ ನನ್ನ ಮಾತಿನಲ್ಲಿ ನಂಬಿಕೆಯಿಲ್ಲವೇನು ?

ಇನ್ಸ್‌ಪೆಕ್ಟರ್:— ಕ್ಷಮಿಸಿ, ನಿಮ್ಮನ್ನು ಅರಿಯದವರಾರು ? ಬರುತ್ತೇನೆ, ನಮಸ್ಕಾರ !

(ನಮಸ್ಕರಿಸಿ, ಸೇವಕರೊಂದಿಗೆ ಹೊರಟುಹೋಗುವನು.)

ಕೈದಿ:— (ಕನಸಿನಿಂದೆಚ್ಚೆತ್ತವನಂತೆ) ತಂಬಿಗೆಯನ್ನು ನನಗೆ ನೀವೇ ಕೊಟ್ಟಿರೆಂದು ಆ ಯಮದೂತರಿಗೆ ಹೇಳಿದಿರೋ ?

ಪ್ರತಿಮಾ:—ನೀಚಾ, ಕಳ್ಳಾ ! ತಿಂದ ಮನೆಯ ತೊಲೆಗಳನ್ನು ಎಣಿಸುವಾ ಗುಣ ನಿನ್ನದು! ಇಲ್ಲವಾದಲ್ಲಿ, ನಮ್ಮ ಮನೆಯ ಅನ್ನವನ್ನು ತಿಂದು, ಆತಿಥ್ಯವನ್ನು ಹೊಂದಿ, ನಮಗೇ ದ್ರೋಹವನ್ನು ಮಾಡುತ್ತಿದ್ದೆಯಾ ? ಅಣ್ಣನಿಗೆ ಸಿಟ್ಟು ಬರುತ್ತದೆ ಎಂದು ಸುಮ್ಮನಿದ್ದೆ; ಇಲ್ಲವಾದಲ್ಲಿ ಎಲ್ಲವನ್ನೂ ಅವರಿಗೆ ಹೇಳಿಬಿಡುತ್ತಿದ್ದೆ!

ಅರ್ಚಕ:— ತಂಗೀ, ಕೋಪಿಸಬೇಡ! ಬೆಳಗಾಗುತ್ತದೆ, ಹೋಗಿ ಮಲಗು ತಾಯಿ! ಇವನ ಶಿಕ್ಷೆಯು ಪ್ರಾರಂಭವಾಗಿದೆ; ಇದೇ ನಿಜವಾದ ಶಿಕ್ಷೆ !

ಪ್ರತಿಮಾ:— ನಾನು ಹೋಗಲಾರೆ ! ಈ ಕಳ್ಳನ ಬಳಿಯಲ್ಲಿ ನಿನ್ನನ್ನು ಬಿಟ್ಟು ಹೋಗಲಾರೆ ! ಇವನು ನೀಚ, ಯಾವುದಕ್ಕೂ ಹೇಸುವುದಿಲ್ಲ !

ಅರ್ಚಕ:— ಹೋಗಮ್ಮಾ! ಇದು ನನ್ನ ಆಜ್ಞೆ, ನನಗೇನೂ ಚಿಂತೆಯಿಲ್ಲ !

ಪ್ರತಿಮಾ:— ಹೋಗುತ್ತೇನೆ; ಆಗಲಿ! ಈ ತಂಬಿಗೆಯು ನನ್ನಲ್ಲಿಯೆ ಇರಬೇಕು !

ಅರ್ಚಕ:— (ತೀವ್ರವಾಗಿ) ಆಗದು, ಆ ತಂಬಿಗೆ ನನ್ನದು! ಅದು ಇಲ್ಲಿಯೆ ಇರಬೇಕು !

ಪ್ರತಿಮಾ:— (ನಿರ್ಲಕ್ಷ್ಯದಿಂದ) ಆಗದು, ಇದನ್ನು ಒಳಗೆ ಒಯ್ಯುತ್ತೇನೆ !

ಅರ್ಚಕ:— ತಂಗೀ, ನಿನಗೆ ಹಿರಿಯರಲ್ಲಿ ಗೌರವವು ಕಡಿಮೆಯಾಗುತ್ತಿದೆ! ಈ ಇಹಲೋಕದ ಉಚ್ಛೇಷ್ಟಗಳ ಆಶೆಯನ್ನು ದೇವರ ಕಡೆಗೆ ಬದಲಾಯಿಸು ! ಈ ಆತ್ಯಾಶೆಗಾಗಿ ದೇವರಲ್ಲಿ ಕ್ಷಮೆ ಬೇಡು! ಶಿಕ್ಷೆಯ ಪಶ್ಚಾತ್ತಾಪಕ್ಕಾಗಿ ಎಂಟು ನಮಸ್ಕಾರಗಳನ್ನು ಹಾಕಿ ಕ್ಷಮೆ ಬೇಡು ; ಅನಂತರ ಮಲಗು ! (ಮೃದುವಾಗಿ) ನೀನು ನನ್ನ ಸೋದರಿಯೆಂಬುದನ್ನು ಮರೆತೆಯೇನು ?

(ಪ್ರತಿಮೆಯು ಚಿಂತೆಯಿಂದ ತಲೆಬಾಗಿ, ತಂಬಿಗೆಯನ್ನು ಕೆಳಕ್ಕಿಟ್ಟು ಹೊರಟು ಹೋಗುತ್ತಾಳೆ. ಹೋಗುತ್ತಿರುವಾಗಲೆ ಮೆಲ್ಲನೆ, ಇವನಿಗೆ ಕೇಳುವಂತೆ)

ಪ್ರತಿಮಾ:— ತನಗಾಗಿ ಮಾಡಿಟ್ಟ ಅನ್ನವನ್ನು ಈ ನೀಚನಿಗೆ ಹಾಕಿ, ತಾನು ಉಪವಾಸವಿದ್ದು, ಮೇಲೆ ತಾನು ಮಲಗುವ ಹಾಸಿಗೆಯನ್ನು ಇವನಿಗೆ ಕೊಟ್ಟು, ಈಗ ತಂಬಿಗೆಯನ್ನು ಕದ್ದನೆಂದು ತಿಳಿದ ಮೇಲೂ, ಇತನಿಗೆ ಒಳ್ಳೆಯದನ್ನು ಹಾರಯಿಸುತ್ತಾನೆ! ಕೃತಘ್ನರಲ್ಲಿ ಕನಿಕರವೇ! (ಎನ್ನುತ್ತ ಪ್ರತಿಮಾ ಹೋಗುತ್ತಾಳೆ, ಕೈದಿಯು ಎಲ್ಲವನ್ನೂ ಕೇಳುತ್ತಾನೆ. ನಾಚಿಕೆಯಿಂದ)

ಕೈದಿ :— ನಾನು ಬದುಕಿರುವುದೇ ನನಗೆ ಆಶ್ಚರ್ಯವಾಗಿದೆ!

ಅರ್ಚಕ :— ಇನ್ನಾದರೂ ಮಲಗಿ ನಿದ್ದೆ ಮಾಡು! ಹೊರಗೆ ಹೋದಲ್ಲಿ ಸುಖವಿಲ್ಲ!

ಕೈದಿ :— ನಮ್ಮ ತಂದೆಗೆ ಬಾಕಿಯೆಂದಿರಲ್ಲ!

ಅರ್ಚಕ :— ಹುಚ್ಚಾ, ನನ್ನ ತಂದೆ ನಿನ್ನ ತಂದೆ ಎಲ್ಲವೂ ದೇವರೇ ಇದ್ದಾನೆ! ಆತನೇ ಜಗತ್ತಿನ—ನಿನ್ನ—ಸಲುವಾಗಿಯೆ ಈ ತಂಬಿಗೆಯನ್ನು ಕಾದಿಡಲು ನನಗೆ ಕೊಟ್ಟಿದ್ದ. ಇಲ್ಲಿಯವರೆಗೂ ನಿನ್ನ ಬರುವಿಕೆಗಾಗಿ ಕಾದಿದ್ದು, ನಿನ್ನ ಸ್ವತ್ತನ್ನು— ದೇವರು ನಿನಗಾಗಿ ನನ್ನಲ್ಲಿಟ್ಟಿದ್ದುದನ್ನು— ನಿನಗೊಪ್ಪಿಸಿದೆ! ಇದರಲ್ಲಿ ಅಸತ್ಯವೇನೂ ಇಲ್ಲ, ಈ ತಂಬಿಗೆಯಿಲ್ಲದಲ್ಲಿ ನಾನು ಸಾಯುವುದಿಲ್ಲ!

ಕೈದಿ :— (ತಲೆವಾಗಿ, ನಮಸ್ಕರಿಸಿ) ಸ್ವಾಮೀ! ನೀನು ದೇವತಾ ಮೂರ್ತಿ! ನಾನು ಮಾಡಿದ ನೀಚಕೆಲಸಕ್ಕೆ ಹೊಟ್ಟೆ ಉರಿಯುತ್ತಿದೆ, ಕ್ಷಮಿಸು!

ಅರ್ಚಕ :— ಸೋದರಾ! ಇದೇ ನಿನಗೆ ನಿಜವಾದ ಶಿಕ್ಷೆಯ ಆರಂಭ! ನಿನಗೆ ಆ ನರಕದಲ್ಲಿ ಆದುದು ಯಾತನೆ; ಶಿಕ್ಷೆಯಲ್ಲ! ಇಲ್ಲಿ ನನ್ನ ಹಿಂದೆ ಬಾ! (ಎಂದು ಅವನ ಕೈಯನ್ನು ಹಿಡಿದು, ಮೇಲಕ್ಕೆತ್ತಿ, ಕರೆದುಕೊಂಡು ಹೊರಟು ದೇವಾಲಯವನ್ನು ಸೇರಿ, ಬಾಗಿಲನ್ನು ತೆರೆದು, ದೀಪವನ್ನು ದೊಡ್ಡದಾಗಿ ಮಾಡಿ) ಇಲ್ಲಿ ನೋಡು, ಈತನೇ ನಿನಗೆ ಶಿಕ್ಷಾಗುರು! ನೀನೀಗ ಮಾಡಿದ ಪಾಪಾಚರಣಕ್ಕೆ ತಕ್ಕ ಶಿಕ್ಷೆಯನ್ನು ನಾನು ಕೊಡುವೆನು! ಶಿಕ್ಷೆಯನ್ನು ಅವರು ಕೊಡಲಾರರು! ಅವರು ಕೊಡುವ ಯಾತನೆಯು ನಿನ್ನ ದೇಹಕ್ಕೆ; ನಾನು ಶಿಕ್ಷಿಸುವುದು ನಿನ್ನ ಆತ್ಮವನ್ನು! ನಿನ್ನನ್ನು ಈ ಕೈದಿನಲ್ಲಿಡುತ್ತೇನೆ, ಬೆಳಗಿನವರೆಗೂ ನೀನು ಈತನ ಪಾದಗಳಲ್ಲಿ ಅಳುತ್ತಾ ಬಿದ್ದಿರು! ನಿನ್ನ ಅಪರಾಧಗಳನ್ನು ಕೇಳಿ ಶಿಕ್ಷಿಸಲು, ರಕ್ಷಿಸಲು, ಕ್ಷಮಿಸಲು ಶಕ್ತನು ಈತನೊಬ್ಬನೆ! ಈ ಜಗತ್ತಿನ ಸಮ್ಮುಖದಲ್ಲಿ ನಿನ್ನ ಕ್ಷಮೆಯನ್ನು ಬೇಡು, ಮತ್ತು ಇಂದಿನಿಂದ ನಿನಗೆ ನಮ್ಮ ಶಿಕ್ಷೆಯೊಂದನ್ನು ನಾನು ವಿಧಿಸುತ್ತೇನೆ! ಈ ನಿನ್ನ ತಂದೆಯ ಸಲುವಾಗಿರುವ ಹೂವಿನ ತೋಟದಲ್ಲಿ, ಈತನ ಪೂಜೆಗಾಗಿ ಬೆಳೆಯತಕ್ಕ ಹೂವಿನ ಗಿಡಗಳಿಗೆ ನೀರನ್ನು ಹಾಕುತ್ತ, ಅವುಗಳನ್ನು ಕಾಯ್ದು, ನಿತ್ಯವೂ ಕೊಯ್ದು ಈ ತಂದೆಯ ಪೂಜೆಯ ವೇಳೆಗೆ ತಂದು ಕೊಡತಕ್ಕ ಕೆಲಸ ನಿನ್ನದು! ಈತನಿಗೆ ಕಾಣದಂತೆ ನೀನೆಲ್ಲಿಯೂ ಓಡಿಹೋಗಲಾರೆ! ಇದೋ, ಆಲಯದ ಬೀಗದ ಕೈಗಳು! ರಾತ್ರಿಯಲ್ಲಿ ಕಾವಲುಗಾಯಬೇಕು! ದೇವರ ಅಲಂಕಾರ ವಸ್ತುಗಳಿವೆ ಈ ಪೆಟ್ಟಿಗೆಯಲ್ಲಿ, ತೆರೆದು ನೋಡು! (ಅಲಂಕಾರಗಳನ್ನು ತೆರೆದು ತೋರಿಸಿ) ಇವುಗಳಲ್ಲಿ ಯಾವುವಾದರೂ ನಿನಗೆ ಬೇಕಾದಲ್ಲಿ ತೆಗೆದುಕೊಳ್ಳಬಹುದು! ಇವು ನಿನ್ನಂತಹ ಭಕ್ತರು ಈತನಿಗೆ ಕೊಟ್ಟುವು! ಇದೋ, ನಿನ್ನ ಬೆಳ್ಳಿಯ ತಂಬಿಗೆ! ಇದರಲ್ಲಿ ನಿತ್ಯವೂ ನೀರನ್ನು ತಂದು ಈತನ ಪಾದಗಳನ್ನು ತೊಳೆ! ನಿನ್ನ ಪಾಪಗಳನ್ನು ತೊಳೆದುಕೊ!

ಕೈದಿ :— ಸ್ವಾಮೀ! (ಕಂಬನಿ ಸುರಿಸುವನು).

ಅರ್ಚಕ :— ಸ್ವಾಮಿಯು ನಾನಲ್ಲ, ನಿನ್ನ ಸ್ವಾಮಿಯು ಅದೋ ಅಲ್ಲಿದ್ದಾನೆ! ನಾನು ಆತನ ಅರ್ಚಕನು ಮಾತ್ರ! ನೀನು ಆತನಲ್ಲಿ ಲೀನನಾಗು! ಆ ನರಕವಾಸದ ಯಾತನೆಗಿಂತಲೂ ನಿನ್ನ ಪಶ್ಚಾತ್ತಾಪವೇ ನಿನಗೆ ಘೋರತರವಾದ ಶಿಕ್ಷೆಯಾಗುವುದು! ತಿರುಗು; ಆ ದಯಾಮಯನನ್ನು ನೋಡು! ನಿನ್ನಲ್ಲಿದ್ದ ಆ ಮಾನವತ್ವವನ್ನು ಬಿಟ್ಟು, ದೇವತ್ವವನ್ನು ಹೊಂದು!

ಕೈದಿ :— (ಅಳುತ್ತ) ನನ್ನ ಪಾಪಗಳಿಗೆ ನಿಷ್ಕೃತಿಯಿಲ್ಲ!

ಅರ್ಚಕ :— ಆ ವಿಷಯ ನಿನ್ನ ಸ್ವಾಮಿಯನ್ನು ಕೇಳು!

ಕೈದಿ :— (ಅಳುತ್ತಾ ದೇವರಿಗೆ ಅಡ್ಡ ಬೀಳುವನು.)

ಅರ್ಚಕ :— ಶಿಕ್ಷೆಯು ಇದೀಗ ಪ್ರಾರಂಭವಾಯಿತು!

(ಎನ್ನುತ್ತ ತಲೆಬಾಗಿ, ಕಣ್ಣಗಳಲ್ಲಿ ಕಾಣಬರುವ ಕಂಬನಿಯನ್ನೊರಸುತ್ತ, ಮೆಲ್ಲಗೆ ನಿಷ್ಕ್ರಮಿಸುವನು. ಕೈದಿ ಹೋಗುವ ಅರ್ಚಕನನ್ನು ನೋಡುತ್ತ, ತಿರುಗಿ ದೇವರ ಕಡೆಗೆ ನೋಡುವನು. ಕಂಬನಿಯು ಸುರಿಯುತ್ತಲೇ ಇರುವುದು.)

ಗೀತಾಗಾಂಭೀರ್ಯ

ಶ್ರೀಕೃಷ್ಣನ ಸಮಾಜಧರ್ಮ

ಬರೆದವರು : ‘ಶ್ರೀರಂಗ’

—This is the first book of its kind in Kannada, containing as it does a detailed, *rational* analysis of the main problem of the Gita. The author deserves to be warmly congratulated on the freshness and the originality with which he, has viewed the conflict of Arjuna and explained the solution offered by Krishna.—

—*P. E. N.* ದಲ್ಲಿ ಪ್ರೊ. ಗೋಕಾಕ ಮತ್ತು ಮುಗಳಿ ಅವರ ವಿಮರ್ಶೆ.

ಬೆಲೆ ಸಾದಾಪ್ರತಿ ೩–೦–೦; ಉತ್ತಮಪ್ರತಿ ೩–೮–೦

ಬೇಕಾದವರು ಗ್ರಂಥಕರ್ತರಿಗಾಗಲಿ, ಜಯಂತಿ ಕಾರ್ಯಾಲಯಕ್ಕೆ ಆಗಲಿ ಬರೆದು ತರಿಸಿಕೊಳ್ಳಬೇಕು.

ಭಾರತದ ಜಾತೀಯ ಸಮಸ್ಯೆ

(ಪೂರ್ವಾರ್ಧ)

‘ ಸ್ವಾತಂತ್ರ್ಯಪ್ರೇಮಿ ’ ಮುಂಬಯಿ

★

ಅಲ್ಪಸಂಖ್ಯಾಕರು ಎಲ್ಲ ರಾಷ್ಟ್ರಗಳಲ್ಲಿಯೂ ಇರುವರು; ಆದರೆ ಭಾರತದಂತೆ ಮಿಕ್ಕೆಲ್ಲಿಯೂ ಅವರು ಬಿಡಿಸಲಾರದ ಒಗಟಾಗಿ ಕುಳಿತಿಲ್ಲ. ಭಾರತದಲ್ಲಿರುವುದು ಅಲ್ಪಸಂಖ್ಯಾಕರ ಸಮಸ್ಯೆಯಲ್ಲ, ಜಾತಿ-ಜಾತಿಗಳ ಸಂಬಂಧದ ಸಮಸ್ಯೆ- ಕೇವಲ ಜಾತೀಯ ಸಮಸ್ಯೆ!

★

ಜುಲೈ ತಿಂಗಳ ಜಯಂತಿಯಲ್ಲಿ ಶ್ರೀ. ಸಂತರಾಮರು “ಭಾರತದ ಜಾತಿ-ಜಾತಿಗಳ ತೊಡಕು ” ಎಂಬ ಲೇಖನವನ್ನು ಬರೆದಿರುವರು. ಲೇಖಕರು ಬಹಳೇ ಸಾಹಸಪಟ್ಟು, ಜಾತಿ-ಜಾತಿಗಳ ವೈಮನಸ್ಯದ ಮೂಲಕಾರಣವನ್ನು ಕಂಡುಹಿಡಿಯಲು ಯತ್ನಿಸಿರುವರು. ಮತ್ತು ಅನೇಕರು ಕಂಡುಹಿಡಿದ ಈ ಸಮಸ್ಯೆಯ ನಿವಾರಣೋಪಾಯಗಳು ತೃಪ್ತಿದಾಯಕವಲ್ಲವೆಂದೂ, ಅವು ವಾಸ್ತವವಾಗಿ ಸಮಸ್ಯೆಯನ್ನು ಬಗೆಹರಿಸುವುದಿಲ್ಲವೆಂದೂ ಅಭಿಪ್ರಾಯ ಪಟ್ಟಿರುವರು. ಆದರೆ ಶ್ರೀ. ಸಂತರಾಮರು ನಿವಾರಣೋಪಾಯವನ್ನು ಮಾತ್ರ ಚೆನ್ನಾಗಿ ವ್ಯಕ್ತಪಡಿಸಲಿಲ್ಲ, ಮತ್ತು ಈ ಕಲಹದ ಮೂಲಕಾರಣಗಳನ್ನು ಕಂಡುಹಿಡಿಯಲು ಮಾಡಿದ ಅವರ ಪ್ರಯತ್ನಗಳೂ, ಅವರ ನಿವಾರಣೋಪಾಯಗಳೂ ಅಷ್ಟೊಂದು ಪೂರ್ಣವಾಗಿಲ್ಲವೆಂಬ ನನ್ನ ಅಭಿಪ್ರಾಯವೇ ನನ್ನನ್ನು ಈ ಲೇಖನವನ್ನು ಬರೆಯಲು ಪ್ರೇರಿಪಿಸಿತು.

‘ಹಿಂದು-ಮುಸಲ್ಮಾನರ ಹಿತಗಳು ಒಂದಾಗದೆ ಇದ್ದಲ್ಲಿ, ಅವರಲ್ಲಿ ಐಕ್ಯಮತ್ಯವು ಹೇಗೆ ತಾನೆ ಉಂಟಾದೀತು? ’ ಎಂದು ಶ್ರೀ. ಸಂತರಾಮರು ಉದ್ಗಾರವನ್ನು ತೆಗೆದಿದ್ದಾರೆ. ಆದರೆ ಇದು ಎಷ್ಟರ ಮಟ್ಟಿಗೆ ಸತ್ಯವೆಂದು ನೋಡಬೇಕು. ಇದಕ್ಕಾಗಿ ಹಿಂದು ಮುಸಲ್ಮಾನ್ ಎಂಬ ಜಾತಿಗಳನ್ನು ತೆಗೆದುಕೊಂಡು ಪ್ರಯೋಜನವಿಲ್ಲ. ಒಬ್ಬ ಹಿಂದು ರೈತನನ್ನೂ ಅವನಂತೆಯೆ ಕೆಲಸ ಮಾಡುವ ಇನ್ನೊಬ್ಬ ಮುಸಲ್ಮಾನ್ ರೈತನನ್ನೂ ತೆಗೆದುಕೊಂಡು ನೋಡುವ. ಅವರ ಹಿತಗಳು ಒಂದಾಗಿಲ್ಲವೆ? ಬರಿಯ ಕೃತಕ ಜಾತಿಗಳು-ಜಾತಿಭೇದಗಳು— ಭಾರತದ ಜನರ ಹಿತವನ್ನು ನಿರ್ಧರಿಸಬಹುದೆ? ನಿರ್ಧರಿಸಲು ಸಾಧ್ಯವೆ? ಎಂದಿಗೂ ಇಲ್ಲ! ಜಾತಿಧರ್ಮಗಳು ಅಜಾಗೃತಿಕ ಜನರ ಭಾವನೆಗಳಿಗೆ (Sentiments) ಒಪ್ಪಿಗೆಯಾಗಬಹುದು. ಒಬ್ಬ ಮೌಲವಿ ಅಥವಾ ಪಂಡಿತನು, ಮೂಢಜನರ—ತಮ್ಮ ಹಿತವನ್ನರಿಯದ ಜನಸಾಮಾನ್ಯರ—ಭಾವನೆಗಳಿಗೆ ಅರಿಕೆ ಮಾಡಬಹುದು; ಆದರಿಂದ ತನಗೆ ಬೇಕಾದ ಕೆಲಸಗಳನ್ನು ಮಾಡಿಸಿಕೊಳ್ಳಬಹುದು. ಆದರೆ ಜನಸಾಮಾನ್ಯರ ದೈನಿಕ ಜೀವನವು ಜಾತಿಧರ್ಮಗಳನ್ನು ಎಂದಿಗೂ ಹೊಂದಿಕೊಂಡಿಲ್ಲ. ಆರ್ಥಿಕ ಸ್ಥಿತಿಯನ್ನು ಹೊಂದಿಕೊಂಡಿದೆ. ಅಂತೆಯೆ ಪ್ರತಿಯೊಬ್ಬ ಮನುಷ್ಯನ— ಆ ವ್ಯಕ್ತಿಯು ಹಿಂದುವೇ ಆಗಲಿ, ಮುಸಲ್ಮಾನನೇ ಆಗಲಿ, ಕ್ರಿಶ್ಚನ್‌ನೇ ಆಗಲಿ ಅಥವಾ ಇನ್ನಿತರ ಯಾವ ಜಾತಿ-ಧರ್ಮದವನೇ ಆಗಲಿ— ಹಿತಸಂಬಂಧಗಳು ಅವನವನ ವೈಯಕ್ತಿಕ ಆರ್ಥಿಕ ಜೀವನವನ್ನು ಹೊಂದಿಕೊಂಡಿವೆ. ಅವನ ದೈನಿಕ ಜೀವನದಲ್ಲಿ ಹಿಂದು ಅಥವಾ ಮುಸಲ್ಮಾನ್ ಎಂಬ ಭೇದವನ್ನೇ ಅವನು ನೋಡುವುದಿಲ್ಲ. ಒಂದು ಗದ್ದೆಯಲ್ಲಿ, ಒಂದು ಕಾರ್ಖಾನೆಯಲ್ಲಿ, ಒಂದೇ ಉದ್ಯಮ (Trade) ದಲ್ಲಿ ಕೆಲಸಮಾಡುವ ಬೇರೆ ಬೇರೆ ಜಾತಿಯವರ ಹಿತಗಳು ಎಂದಿಗೂ ಬೇರೆ ಬೇರೆಯಾಗಿಲ್ಲ. ಅಲ್ಲಿ ಜಾತಿ-ಧರ್ಮಗಳ ಪ್ರಶ್ನೆಯೇ ಬರುವುದಿಲ್ಲ. ಒಂದು ಕೃತಕ ಜಾತಿಯ ನೆಂಟಸ್ತಿಕೆಯು (Affinity) ಎಂದಿನ ವರೆಗೆ ಇಂತಹ ಜನ ಸಾಮಾನ್ಯರನ್ನು ಬಿಗಿಹಿಡಿಯಬಹುದು? ಜಾಗೃತಿಯನ್ನು ಹೊಂದಿದ ವ್ಯಕ್ತಿಗೆ ಈ ಜಾತೀಯ ಉಪರಿನಿರ್ಮಿತಿ (Superstructure) ಯು ಅನಾವಶ್ಯಕವಾದುದು. ಅದಕ್ಕೂ ಅವನ ದೈನಿಕ ಜೀವನಕ್ಕೂ ಏನೊಂದೂ ಸಂಬಂಧವಿಲ್ಲ. ಆದುದರಿಂದ ಹಿಂದು ಮುಸಲ್ಮಾನ್ ವೈರತ್ವವನ್ನು ನಿರ್ಮೂಲಮಾಡಬೇಕಾದರೆ, ಆ ದ್ವೇಷಗಳ ಕಾರಣಗಳನ್ನೂ, ಜೊತೆಗೆಯೇ ಕಾರಣಗಳ ಉಗಮವನ್ನೂ ನಿರ್ಮೂಲಮಾಡಬೇಕು. ಅದಕ್ಕಾಗಿ ಭಾರತದ ಜಾತೀಯ ಸಮಸ್ಯೆಯ ಮೂಲವನ್ನು ನೋಡುವ! ಮೂಲವನ್ನು ನೋಡುವುದಕ್ಕಾಗಿ, ಶ್ರೀ. ಸಂತರಾಮರ ಲೇಖನದ ಮೇರೆಯನ್ನು ಮಿಕ್ಕಿ ಕೂಲಂಕಷವಾಗಿ ವಿಚಾರಮಾಡುವುದು ಅಗತ್ಯ.

ಭಾರತದಲ್ಲಿ ಈ ಜಾತಿ-ಜಾತಿಗಳ ತೊಡಕಿನ ಸಮಸ್ಯೆಯು ಬರಿಯ ಒಂದು ಅಲ್ಪ ಸಂಖ್ಯಾಕರ ಸಮಸ್ಯೆಯಲ್ಲ; ಇದು ಜಾತಿ-ಜಾತಿಗಳ ಸಂಬಂಧದ ಸಮಸ್ಯೆ— ಜಾತೀಯ ಸಮಸ್ಯೆ! ಅಲ್ಪಸಂಖ್ಯಾಕರು ಜಗತ್ತಿನ ಎಲ್ಲ ರಾಷ್ಟ್ರಗಳಲ್ಲೂ ಇರುವರು. ಆದರೆ ಇನ್ನಿತರ ಯಾವುದೇ ರಾಷ್ಟ್ರದಲ್ಲಾದರೂ, ಅಲ್ಪ ಸಂಖ್ಯಾಕರ ಸಮಸ್ಯೆಯು ಭಾರತದಲ್ಲಿಯಷ್ಟು ಬಗೆಹರಿಯಲು ಕಠಿಣವಾಗಿಲ್ಲ. ಇಲ್ಲಿಯೂ ಬೇರೆ ಅಲ್ಪಸಂಖ್ಯಾಕರಿದ್ದಾರೆ; ಆದರೆ ಅವರದೆಲ್ಲಾ ಅಷ್ಟು ದೊಡ್ಡ ಸಮಸ್ಯೆಯೇ ಇಲ್ಲ. ಆದುದರಿಂದ ನಿಜವಾದ ಸಮಸ್ಯೆಯು ಜಾತೀಯ ಸಂಬಂಧದ—ಮುಖ್ಯತಃ ಹಿಂದೂ ಮತ್ತು ಮುಸಲ್ಮಾನರೊಳಗಿನ ಸಂಬಂಧದ ಸಮಸ್ಯೆಯೇ ಆಗಿದೆ. ಇತ್ತೀಚೆಗೆ ದಕ್ಷಿಣ ಹಿಂದುಸ್ತಾನದಲ್ಲಿ ಕೂಡಾ ಇದೇ ತರದ ಒಂದು ಹೊಸ ಸಮಸ್ಯೆಯು ಉತ್ಪನ್ನವಾಗಿದೆ. ಅದು ಬ್ರಾಹ್ಮಣ ಮತ್ತು ಬ್ರಾಹ್ಮಣೇತರರ ಸಂಬಂಧದ ವಿಷಯವಾದ ಸಮಸ್ಯೆ. ಇದು ನಿಜವಾಗಿಯೂ ಅಲ್ಪಸಂಖ್ಯಾಕರ ಸಮಸ್ಯೆಯಲ್ಲ. ಏಕೆಂದರೆ ಚಳವಳಿಯನ್ನು ಹೂಡಿದ ಬ್ರಾಹ್ಮಣೇತರರು ಅಲ್ಪಸಂಖ್ಯಾಕರಲ್ಲ—ಬಹುಸಂಖ್ಯಾಕರು! ಅವರು ತಮಗೆ ಸಾಮಾಜಿಕ ಮತ್ತು ರಾಜಕೀಯ ಜಗತ್ತಿನಲ್ಲಿ, ಯಾವ ಭೇದವೂ ಇಲ್ಲದೆ, ಬ್ರಾಹ್ಮಣರಷ್ಟೇ ಹಕ್ಕು ಸಿಕ್ಕಬೇಕೆಂದು ಕಾದಾಡುತ್ತಿರುವರು. ಆದುದರಿಂದ ನಾವು ಇದನ್ನು ಅಲ್ಪಸಂಖ್ಯಾಕರ ಸಮಸ್ಯೆಯೆಂದು ನೋಡದೆ, ನಿಜವಾಗಿಯೂ ಹಿಂದೂದೇಶದ ದೊಡ್ಡ ದೊಡ್ಡ ಜಾತಿಗಳ ಸಂಬಂಧದ ಸಮಸ್ಯೆಯೆಂದು ನೋಡಿದರೇನೇ ನಿಜತ್ವವನ್ನು ನೋಡಿದಂತಾದೀತು!

ಪ್ರತಿಯೊಬ್ಬ ಮನುಷ್ಯನಿಗೂ, ದೇಶದ ಇನ್ನಿತರರ— ಜನಸಾಮಾನ್ಯರ— ಏಳ್ಗೆಗೆ ವಿರುದ್ಧವಾಗದ ಇರುವವರೆಗೆ, ತನ್ನ ಏಳ್ಗೆಯನ್ನು ಬಯಸುವುದಕ್ಕಾಗಿ, ತನ್ನ ಹಿತಾಕಾಂಕ್ಷೆಗಳಿಗಾಗಿ ಬೇಕಾದಷ್ಟು ಮುಂದುವರಿಯಲು ಎಡೆಬೇಕು, ಸ್ವಾತಂತ್ರ್ಯಬೇಕು. ಅಂತೆಯೇ ಬೇರೆ ಬೇರೆ ಜಾತಿಗಳ, ಬೇರೆ ಬೇರೆ ಸಂಗಡಗಳ ಅಭಿವೃದ್ಧಿ ಹೊಂದುವ ಅಭಿಲಾಷೆಯು– ಮುಂಬೊತ್ತಿ ಬರುವ ಆಕಾಂಕ್ಷೆಯು, ದೇಶದ ಎಲ್ಲಾ ಜಾತಿ-ಸಂಗಡಗಳಿಗೂ ಒಂದೆಯಾಗಿರುವ ದೇಶೋನ್ನತಿಯೇ ಮೊದಲಾದ ಹಿತಾಕಾಂಕ್ಷೆಗಳಿಗೆ – ಹಿತಸಂಬಂಧಗಳಿಗೆ – ವಿರುದ್ಧವಾಗದಂತಿದ್ದರೆ, ಅದು ಸಾಕಷ್ಟು ಮುಂದುವರಿಯಲು ಏನೂ ತೊಡಕಾಗದಂತಿರುವುದೇ ನಿಜವಾದ ಸ್ವತಂತ್ರದೇಶದ ಮೂಲಸೂತ್ರವಾಗಿರಬೇಕು. ಇದೇ ನಮ್ಮ ಸ್ವಾತಂತ್ರ್ಯ. ಇದಿಲ್ಲದಿದ್ದರೆ ಅದು ಸ್ವಾತಂತ್ರ್ಯವಲ್ಲ— ಗೋ ಮು ಖ ವ್ಯಾ ಘ್ರ ದಂ ತಿ ರು ವ ಪಾರತಂತ್ರ್ಯ!

ಹಿಂದುಸ್ತಾನವು ಒಂದು ರಾಷ್ಟ್ರವೆಂದು ಎಲ್ಲರೂ ಒಪ್ಪಿಸುತ್ತಾರೆ. ಆದರೆ ನಿಜವಾಗಿಯೂ, ವೈಜ್ಞಾನಿಕ ಮತ್ತು ಐತಿಹಾಸಿಕ ದೃಷ್ಟಿಯಿಂದ ನೋಡಿದರೆ, ಇದೊಂದು ಟೊಳ್ಳು ಭಾವನೆ ಎಂಬುದು ಸ್ಪಷ್ಟ ಕಂಡು ಬರುವುದು. 'ಭಾರತವು ಒಂದು ರಾಷ್ಟ್ರವಲ್ಲ– ಒಂದು ದೇಶವು' ಎಂಬುದನ್ನು ಕಾಣಬಹುದು. ಭಾರತವು ರಾಜಕೀಯ ಮತ್ತು ಭೌಗೋಲಿಕ ರಂಗದಲ್ಲಿ ಒಂದು ರಾಷ್ಟ್ರವೆಂದು ಹೇಳಲ್ಪಡುವುದೇನೋ ನಿಜ; ಆದರೆ ಇದು ಕೂಡಾ, ದೇಶದೊಳಗಿನ ಎಲ್ಲಾ ಜನರ ಒಟ್ಟುಗೂಡಬೇಕೆಂಬ ಅಭಿಲಾಷೆಯ ಮೂಲಕ ಅಲ್ಲ; ದೇಶದ ಹೊರಗಿನ ಒಂದು ಶಕ್ತಿಯ ಮೂಲಕ.... ಅರ್ಥಾತ್ ಬ್ರಿಟಿಷ್ ಸರಕಾರದ ಮೂಲಕ! ಆದುದರಿಂದ ಇಂದಿನ ರಾಷ್ಟ್ರೀಯ ಐಕ್ಯವು ನಿಜವಾದುದಲ್ಲ, ಪರಿಸ್ಥಿತಿಯ ಮೂಲಕ ಉಂಟಾದುದು. ಸರಕಾರವು ತನ್ನ ಅನುಕೂಲಕ್ಕಾಗಿ ಬಲಾತ್ಕಾರದಿಂದ ಇಡಿ ದೇಶವನ್ನೇ ಒಟ್ಟುಗೂಡಿಸಿದೆ. ನಾಳೆ ಈ ಹೊರಗಿನ ಬಲಾತ್ಕಾರವು ಶಕ್ತಿಗುಂದಿದಲ್ಲಿ, ಎಂದರೆ ಬ್ರಿಟಿಷ್ ಸರಕಾರವು ಮಾಯವಾದಲ್ಲಿ, ಹಿಂದುಸ್ತಾನದ ರಾಜ್ಯವು ಇದೇ ರೀತಿಯಲ್ಲಿರುವುದೆಂದು ಹೇಳಬರುವುದಿಲ್ಲ. ರಾಷ್ಟ್ರೀಯವಾದವು ಅನೇಕವೇಳೆ ಚರಿತ್ರೆಯನ್ನು ತನಗೆ ಬೇಕಾದಂತೆ ಬರೆಯಿಸುತ್ತದೆ. ಹಲವು ರಾಷ್ಟ್ರೀಯ ವಾದಗಳು, ಭೂತಕಾಲದ ಆಧಾರ ಹಿಡಿದುಕೊಂಡು ತಮಗೆ ಬೇಕಾದಂತೆ ಚರಿತ್ರೆಯನ್ನು ಬರೆಯಿಸಿಕೊಳ್ಳುತ್ತವೆ. ಪೂರ್ವದಲ್ಲಿ ಚಿಕ್ಕ ದೊಡ್ಡ ಅನೇಕ ಸಾಮ್ರಾಜ್ಯಗಳು ಭಾರತದಲ್ಲಿದ್ದುವು. ಆದರೆ ಆಗ, ಯಾವುದೇ ಕಾಲದಲ್ಲಿಯೂ ಹಿಂದೂದೇಶದ– ಸಂಪೂರ್ಣವಲ್ಲದಿದ್ದರೂ - ಹೆಚ್ಚಿನ ಭಾಗಗಳು, ಒಂದೇ ಸಾಮ್ರಾಜ್ಯದಲ್ಲಿ ಒಂದೇ ರಾಷ್ಟ್ರದಲ್ಲಿ ಒಟ್ಟುಗೂಡಿಕೊಂಡು, ಏನೂ ವೈಷಮ್ಯವಿಲ್ಲದೆ ಇದ್ದುವೆಂದು ಹೇಳಲು ಸಾಧ್ಯವಿಲ್ಲ. ಪ್ರಾಚೀನ ಸಾಮ್ರಾಜ್ಯಗಳು, ಹಿಂದುಸ್ತಾನದ ಗಡಿದಾಟಿಯೂ ಹೋಗಿದ್ದುವು; ಅದಕ್ಕೆ ವಿರುದ್ಧವಾಗಿ ಹಿಂದೂದೇಶದ ಹಲವು ಭಾಗಗಳು ಸಾಮ್ರಾಜ್ಯದ ಗಡಿಯೊಳಗೆ ಇರಲೇ ಇಲ್ಲ. ಹೀಗಿರಲು ಈಗಿನ ನಮ್ಮ ಹಿಂದೀ ರಾಷ್ಟ್ರೀಯವಾದದ ಆಕಾಂಕ್ಷೆಗಳನ್ನು ನೋಡಿದರೆ ಬಹಳ ಸೋಜಿಗವೆನಿಸದೆ ಇರದು. ನಮ್ಮ ಹಿಂದೀ ರಾಷ್ಟ್ರೀಯವಾದವು 'ಭಾರತವು ರಾಜಕೀಯ ರಂಗದಲ್ಲಿ ಮಾತ್ರವೇ ಅಲ್ಲದೆ, ಸಂಸ್ಕೃತಿಯಲ್ಲಿ ಕೂಡ ಒಂದೆಯಾಗಿದೆ' ಎಂದು ಸಾರುತ್ತದೆ; ಎಲ್ಲಾ ಜಾತಿಗಳನ್ನು ಅವರವರ ಪಾಂತಿಕ, ಸಾಂಸ್ಕೃತಿಕ, ಭಾಷೆಯ, ಮತ್ತು ಇನ್ನಿತರ ವ್ಯತ್ಯಾಸಗಳನ್ನು ತೊರೆದು ಒಟ್ಟುಗೂಡಿಸಬೇಕೆಂದು ಆಶಿಸುತ್ತದೆ. ಬೇರೆ ಬೇರೆ ಭಾಷೆಗಳು–ಧರ್ಮಗಳು–ವಂಶಗಳು ತಮ್ಮ ತಮ್ಮ ವಿಶೇಷಗುಣ (special features) ಗಳನ್ನು ಬಿಡಬೇಕೆಂದು ಕೋರುತ್ತಿದೆ. ಈ ರೀತಿಯಾಗಿ ಸಂಸ್ಕೃತಿಯಲ್ಲಿಯೂ, ಭಾಷೆಯಲ್ಲಿಯೂ, ಜಾತಿ-ಧರ್ಮಗಳಲ್ಲಿಯೂ, ಭೇದವಿರುವಾಗ, ಅದನ್ನು ಇಲ್ಲವೆಂಬುದು ಮೂಢತನ; ಎಲ್ಲರನ್ನೂ ಒಟ್ಟುಗೂಡಿಸಬೇಕೆಂಬುದು ಹುಚ್ಚುತನ! 'ಭೇದಗಳಿವೆ, ಹೆಚ್ಚು ಕಡಿಮೆ ಇವೆ, ವ್ಯತ್ಯಾಸಗಳಿವೆ' ಎನ್ನುವವರಿಗೆ, "ಜಾತೀಯ ಸಂಗಡದವರು" "ಭಾರತವನ್ನು ಖಂಡಖಂಡವಾಗಿ ತುಂಡುಮಾಡುವವರು— ಒಡೆದು ಹಂಚುವವರು" ಎಂದೆಲ್ಲಾ

೩೦ ವರ್ಷಗಳಿಂದ ಅನುಭವಪಟ್ಟ
ಕರ್ಕಿ ಮತ್ತು ಕಂಪನಿ
ಇವರ
ಜ್ವರದ ಗುಳಿಗೆ
ಬಾಟ್ಲಿಗೆ ೧ ರೂ.
ಎಲ್ಲ ಪ್ರಕಾರದ ಜ್ವರಗಳಮೇಲೆ ದಿವ್ಯ ಔಷಧ!
ವಿಳಾಸ:— ಗಣೇಶ ರಾಮಚಂದ್ರ, ಕರ್ಕಿ ಮತ್ತು ಕಂಪನಿ,
ಗಿರಗಾಂವ, ಮುಂಬಯಿ.

ಜೂಷ್ಟಿಟ್ಟರೆ, ಅದಕ್ಕೆ ಏನೂ ಅರ್ಥವಿಲ್ಲ. ಹೀಗೆ ಬೊಬ್ಬಿಡುವುದನ್ನು ಬಿಟ್ಟು, ನಿಜವಾಗಿಯೂ ಎಲ್ಲರಿಗೂ ತೃಪ್ತಿಕರವಾಗುವ ಒಂದು ಯೋಜನೆಯನ್ನು ಕಂಡು ಹಿಡಿದವರು ಬಹಳೇ ಕಡಿಮೆ ಎನ್ನಬಹುದು. ಹೀಗೆ, ವಸ್ತುಸ್ಥಿತಿಯನ್ನು ಇದ್ದಕ್ಕಿದ್ದಂತೆ ನೋಡಿ ಈ ಸಮಸ್ಯೆಯನ್ನು ಬಗೆಹರಿಸಲು ಯತ್ನಿಸುವವರು ಬಹಳೇ ಸ್ವಲ್ಪ ಜನವಿರುವುದರಿಂದ, ಭಾರತದ ರಾಜಕೀಯ ಜಗತ್ತಿನಲ್ಲಿ ಈ ತರದ ಕಾರ್ಮೋಡಗಳು ಮುಸುಕಿದುದನ್ನು ನಾವು ಕಾಣಬಹುದು.

ಹಿಂದುಸ್ಥಾನದಲ್ಲಿ ಮುಖ್ಯವಾಗಿ ಎರಡು ತರದ ಜಾತೀಯ ಸಮಸ್ಯೆಗಳಿವೆ ಎನ್ನಬಹುದು. ಒಂದು ಹಿಂದೂ-ಮುಸಲ್ಮಾನರದು, ಇನ್ನೊಂದು,— ವಿಶೇಷತಃ ದಕ್ಷಿಣಹಿಂದುಸ್ಥಾನದಲ್ಲಿ— ಬ್ರಾಹ್ಮಣ-ಬ್ರಾಹ್ಮಣೇತರರದು. ಬ್ರಾಹ್ಮಣ-ಬ್ರಾಹ್ಮಣೇತರರೊಳಗಿನ ಜಗಳವು ಹಿಂದುಸ್ಥಾನದಲ್ಲೊಂದು ವಿಶೇಷವಲ್ಲ. 'ಬ್ರಾಹ್ಮಣ,' 'ಬ್ರಾಹ್ಮಣೇತರ' ಎಂಬ ಶಬ್ದಗಳೂ ಈ ಚಳವಳಿಯ ಕೆಲವು ರೂಪಗಳೂ ಬೇರೆ ದೇಶದಲ್ಲಿದ್ದಿಲ್ಲವಾದರೂ, ಈ ವೈಷಮ್ಯದ ನಿಜವಾದ ಸಾರವು, ಯುರೋಪಖಂಡದಲ್ಲಿ ೧೪-೧೫ ನೆಯ ಶತಮಾನಗಳಲ್ಲಿಯೇ—ಅತಕ್ಕೆ ಇದಕ್ಕಿಂತಲೂ ಪೂರ್ವದಲ್ಲಿಯೇ—ಇದ್ದಿತು. ಅಂದಿನ ರಾಷ್ಟ್ರೀಯ ಸಂಸ್ಥಾನ ಮತ್ತು "ಪವಿತ್ರ" ರೋಮನ್ ಸಾಮ್ರಾಜ್ಯಗಳೊಳಗಿನ ಜಗಳವೂ, ಆಧುನಿಕ ವೈಜ್ಞಾನಿಕರು ಮತ್ತು ಕೆಥೊಲಿಕ್ ಪುರೋಹಿತರುಗಳೊಳಗಿನ ಕಲಹವೂ ಇದಕ್ಕೆ ದೃಷ್ಟಾಂತಗಳು; ಆದರೆ ಭಾರತವು ಮಾತ್ರ ೧೪-೧೫ನೆಯ ಶತಮಾನದ ಯುರೋಪಿನಷ್ಟೇ ಹಿಂದಿದೆಯೆಂದು ಇನ್ನು ಬೇರೆ ಹೇಳಬೇಕೆ? ಆದುದರಿಂದ ಇಂದಿನ ಈ ಜಾತೀಯ ಕಲಹವನ್ನು ಅಂದಿನ ಹಿನ್ನೆಲೆಯಲ್ಲಿ ನೋಡಿದರೆ, ಅದು ಚೆನ್ನಾಗಿ ನಿಜಸ್ವರೂಪದಿಂದಲೇ ಕಾಣಿಸಿಕೊಳ್ಳುವುದು. ಇಂದು ಪ್ರಾಚೀನಕಾಲದ ವರ್ಣಾಶ್ರಮ ಧರ್ಮದ ಪದ್ಧತಿಯು ಸಾರವಿಲ್ಲದೆ ಇದ್ದರೂ, ಅದರ ಟೊಳ್ಳು ಸಮಾಜರಚನೆಯು ಮಾತ್ರ ಇನ್ನೂ ಅಸ್ತಿತ್ವದಲ್ಲಿದೆ. ಬ್ರಾಹ್ಮಣರು, ವರ್ಣಾಶ್ರಮಧರ್ಮದ ಪ್ರಕಾರ ಯಾವ ಕೆಲಸವನ್ನು ಮಾಡಬೇಕಾಗಿತ್ತೋ ಅದನ್ನೇ ಕೆಲಸವನ್ನು ಅವರು ಇಂದು ಮಾಡದೆ, ಎಲ್ಲಾತರದ ಕೆಲಸಗಳನ್ನೂ (ಬ್ರಾಹ್ಮಣೇತರರ ಕೆಲಸಗಳನ್ನು ಕೂಡಾ) ಮಾಡುತ್ತಿದ್ದಾರೆ. ಅಂತೆಯೆ ಬ್ರಾಹ್ಮಣೇತರರೂ. ಹೀಗಿದ್ದು, ಸಮಾಜವು ಮಾತ್ರ ಬ್ರಾಹ್ಮಣನಿಗೆ ಉಚ್ಚಸ್ಥಾನವನ್ನೂ ಬ್ರಾಹ್ಮಣೇತರರಿಗೆ ತುಚ್ಛಸ್ಥಾನವನ್ನೂ ಕೊಡಲು ಕಾರಣವೇನು? ಈ ತರದ ಪದ್ಧತಿಯನ್ನು ಬ್ರಾಹ್ಮಣೇತರನು ಹೇಗೆ ಸಹಿಸಿಯಾನು? ಯಾಕೆ ಸಹಿಸಬೇಕು? ಹಿಂದುಸ್ಥಾನದಲ್ಲಿ, ಸಮಾಜವು ಎಷ್ಟು ವೇಗದಿಂದ ಬದಲಾವಣೆಹೊಂದುತ್ತಾ ಹೋಗಬೇಕಾಗಿತ್ತೋ ಅಷ್ಟು ವೇಗದಿಂದ ಬದಲಾವಣೆಗಳಾಗದೆ ಇದ್ದರೂ, ಸಾಂಪ್ರದಾಯಿಕ ಸಮಾಜರಚನೆಯು ಮಾತ್ರ ಬದಲಾವಣೆ ಹೊಂದದೆ ಇರಲಿಲ್ಲ. ಆದರೂ ಹಿಂದೂ ಸಂಸ್ಕೃತಿಯ ಹೆಸರಿನಿಂದಲೊ, ಹಿಂದೂಸಮಾಜದ ಐಕ್ಯತೆಯ ನೆಪದಿಂದಲೊ, ಹಿಂದುಸ್ಥಾನದ "ಆಧ್ಯಾತ್ಮಿಕ ಸಂಪ್ರದಾಯಿಕತನ"ವನ್ನು ಉಳಿಸಬೇಕೆಂಬ ಉದ್ದೇಶ್ಯದಿಂದಲೊ—ಇತ್ತೀಚೆಗೆ—ಈ ಅಪ್ರಯೋಜಕವಾದ ಟೊಳ್ಳು ಸಮಾಜರಚನೆಯನ್ನು ಉಳಿಸಬೇಕೆಂದು ಬಹಳೇ ಪ್ರಯತ್ನಗಳು ನಡೆಯುತ್ತಿವೆ. ಆದರೆ, ಇದು ನಿರರ್ಥಕವೆಂದು ಅವರೇಕೆ ಅರಿಯರು?

ಪ್ರತಿಯೊಬ್ಬ ಮನುಷ್ಯನು ಸುಖದಿಂದ ಜೀವಿಸಬೇಕಾದರೆ, ಮತ್ತು ಸಮಾಜದ ಎಲ್ಲಾ ಜನರೂ ಪಾರಂಪರ್ಯದಿಂದ ಬಂದ ಕೃತಕ ಕಟ್ಟು-ಕಟ್ಟಳೆಗಳ ಶೃಂಖಲೆ ಇಲ್ಲದೆ, ಒಂದೆಯಾದ ಸಮಾಜದ— ಮನುಷ್ಯಸಮಾಜದ— ವಿಶ್ವಕುಟುಂಬದ— ಸದಸ್ಯರಂತೆ, ಯಾವುದೇತರದ ಭೇದಭಾವಗಳಿಲ್ಲದೆ ಮನುಷ್ಯರಂತೆ ಜೀವಿಸಬೇಕಾದರೆ, ಈ ಶೂನ್ಯ ನಿರರ್ಥಕ ಸಮಾಜರಚನೆಯನ್ನು ಮುರಿಯಲಿಕ್ಕೇ ಬೇಕು. ಅದು ಸ್ವಾತಂತ್ರ್ಯ ಸಂಗ್ರಾಮದ ಮೊದಲನೆಯ ಮೆಟ್ಟಲು. ಹೀಗೆ ಮಾಡಿದರೆಯೆ ಜಾತೀಯಕಲಹವು, ಮುಖ್ಯತಃ ಬ್ರಾಹ್ಮಣ-ಬ್ರಾಹ್ಮಣೇತರರೊಳಗಿನ ಕಲಹವು ಇಲ್ಲದಂತಾದೀತು!

ಇನ್ನು, ಹಿಂದು-ಮುಸಲ್ಮಾನರೊಳಗಿನ ಕಲಹವನ್ನಿಷ್ಟು ಐತಿಹಾಸಿಕ ದೃಷ್ಟಿಯಿಂದ ನೋಡುವ. ಹಿಂದು-ಮುಸಲ್ಮಾನರೊಳಗಿನ ಜಗಳವು ಒಂದು ಸಮಸ್ಯೆಯೇ ಅಲ್ಲವೆಂದೂ, ಅವರೊಳಗೆ ಕಲಹವೇ ಇದ್ದಿಲ್ಲವೆಂದೂ, ಬ್ರಿಟಿಷರ "ಹಂಚಿ ಆಳು (Divide and rule)" ಎಂಬ ರಾಜನೀತಿಯಿಂದ ಇದು ಉಂಟಾಯಿತೆಂದೂ ಹೆಚ್ಚಾಗಿ ಹೇಳಲ್ಪಡುತ್ತದೆ. ಇದೊಂದು ವಿಚಿತ್ರಭಾವನೆಯೇ ಹೊರತು ಇದರಲ್ಲೇನೂ ಹುರುಳಿಲ್ಲ. ಹಿಂದುಸ್ಥಾನದಲ್ಲಿ ಸ್ಥಾಪಿಸಲ್ಪಟ್ಟ ಪರಕೀಯ ರಾಜ್ಯಾಧಿಕಾರಗಳು ಎಲ್ಲಾತರದಲ್ಲಿಯೂ ತಮ್ಮ ಸ್ಥಾನವನ್ನು ಭದ್ರಪಡಿಸಿಕೊಳ್ಳುವುದು ಸ್ವಾಭಾವಿಕವೆ! ಇದಕ್ಕಾಗಿ, ಇದ್ದ ಬೇರೆ ಬೇರೆ ಜಾತಿಗಳೊಳಗಿನ ಮತಭೇದಗಳನ್ನು ಹೆಚ್ಚಿಸಿ, ಅವರನ್ನೆಲ್ಲಾ ಬೇರೆಬೇರೆಯಾಗಿರಿಸುವುದೂ ಅವರೊಳಗೆ ಜಗಳವಾಗುವಂತೆ ಮಾಡುವುದೂ ಒಂದು ವಿಚಿತ್ರ ಸಂಗತಿಯಲ್ಲ. ಆದರೆ ಈ ಮತಭೇದಗಳನ್ನೆಲ್ಲಾ ಅವರೇ ಉಂಟುಮಾಡಿದರೆಂಬುದರಲ್ಲಿ ಅರ್ಥವಿಲ್ಲ. ಇದ್ದ ಮತಭೇದಗಳನ್ನು ಹೆಚ್ಚಿಸಿದರೇ ಹೊರತು, ಅವನ್ನು

ಉಂಟುಮಾಡಿಲ್ಲ. ಮತಭೇದ ವೈಷಮ್ಯಗಳಿಲ್ಲದಲ್ಲಿ ಅವನ್ನು ಉಂಟುಮಾಡಿದರೆ, ಅದರಿಂದ ಬೇರೆ ಬೇರೆ ಪಕ್ಷಗಳನ್ನು ಕೊನೆಯವರೆಗೂ ಜಗಳವಾಡುವಂತೆ ಮಾಡಲು ಸಾಧ್ಯವಿಲ್ಲ.

ಹಿಂದೂ-ಮುಸ್ಲಿಮ್ ವೈಷಮ್ಯಕ್ಕೆ ಐತಿಹಾಸಿಕ ಕಾರಣಗಳಿವೆ. ಮುಸಲ್ಮಾನರು ಹಿಂದುಸ್ಥಾನಕ್ಕೆ ಕೊಳ್ಳೆ ಹೊಡೆಯುವುದಕ್ಕಾಗಿಯೂ ಹಿಂದುಸ್ಥಾನವನ್ನು ಜಯಿಸುವುದಕ್ಕಾಗಿಯೂ ಬಂದು, ನೂರಾರು ವರ್ಷ ರಾಜ್ಯವಾಳಿದರು. ಆಗ, ಹಲವು ಬಾರಿ, ಹಿಂದುಗಳೊಡನೆ ಅತಿ ಹೇಯ ಮತ್ತು ಕ್ರೂರ ರೀತಿಯಿಂದ ವರ್ತಿಸುತ್ತಲೂ ಇದ್ದರು. ಇದರಿಂದ ಹಿಂದುಗಳಿಗೆ ಅವರ ಬಗೆಗೆ ವೈಷಮ್ಯವು ಬೆಳೆಯಿತು. ಇದು ಸ್ವಾಭಾವಿಕವಾದುದೆ ; ಆದರೆ, ನಮ್ಮ ಕೆಲವು ರಾಷ್ಟ್ರೀಯವಾದಿ ಇತಿಹಾಸಕಾರರು ಮಾತ್ರ ಇದನ್ನು ಅಲ್ಲಗಳೆಯುವರು. 'ಹಿಂದುಸ್ಥಾನದಲ್ಲಿ ಮುಸಲ್ಮಾನರು ನೂರಾರು ವರ್ಷಗಳಿದ್ದು, ಹಿಂದುಸ್ಥಾನದವರೊಡನೆ ಬೆರೆತು, ಯಾವ ಭೇದಭಾವಗಳೂ ವೈಷಮ್ಯಗಳೂ ಇಲ್ಲದೆ, ಹಿಂದೂ ರಾಷ್ಟ್ರದಲ್ಲಿಯೇ, ಇನ್ನಿತರ ಯಾವುದೇ ಜಾತಿಯವರಂತೆ—ಜನರಂತೆ—ಇರುವರು' ಎಂದು ಸಾರುವರು. ಆದರೆ ಇದು ನಿಜವಾದ ಸ್ಥಿತಿಯಲ್ಲ. ಅವರೆಂದಂತಿದ್ದರೆ ಇಂದಿನ ಕೋಮುವಾರು ದಂಗೆಗಳು ಏಕಾಗಬೇಕು ? ಮುಸಲ್ಮಾನರು ಹಿಂದುಸ್ಥಾನವನ್ನು ಜಯಿಸಲಿಕ್ಕಾಗಿ ಬಂದಿದ್ದರು, ಮತ್ತು ಆನಂತರವೂ ಅದೇ ವಿಜಯಿಯ ಮಾನಸಿಕತೆಯಿಂದಲೆ ವಾಸಿಸುತ್ತಿದರು. ಇದರಿಂದ ವೈಷಮ್ಯವು ಬೆಳೆಯಿತು. ಆನಂತರ ಬ್ರಿಟಿಷರ ರಾಜ್ಯಭಾರದ ಆರಂಭದಲ್ಲಿ, ಹೆಚ್ಚು ಜನ ಹಿಂದುಗಳು, ತಾವು ಮುಸಲ್ಮಾನ್ ರಾಜ್ಯದಿಂದ ಸುಸೂತ್ರ ಪಾರಾದರೆ ಸಾಕೆಂದು ಬ್ರಿಟಿಷರಿಗೆ ಸ್ವಾಗತವಿತ್ತರು. ಅವರಿಗೆ ಬೇಕು-ಬೇಕಾದ ಸಹಾಯವನ್ನು ಮಾಡಿದರು. ಅವರ ಆಧಿಪತ್ಯದಲ್ಲಿ ದೊಡ್ಡ ದೊಡ್ಡ ಹುದ್ದೆಗಳನ್ನು ಕೈಕೊಂಡರು. ಆಗ ಮುಸಲ್ಮಾನರು, ಹಿಂದುಗಳಿಗೆ ಸಂಪೂರ್ಣ ಹಕ್ಕು ಸಿಕ್ಕಿದರೆ ತಮ್ಮ ಮೇಲೆ ಸೇಡು ತೀರಿಸಿಕೊಳ್ಳಬಹುದೆಂದು ಭಾವಿಸಿದರೆ ಅದು ತಪ್ಪಾಗದು. ನೂರಾರು ವರ್ಷಗಳ ಅನುಭವವು, ಹಿಂದುಗಳಿಗಾಗಲಿ ಮುಸಲ್ಮಾನರಿಗಾಗಲಿ ಜ್ಞಾಪಕದಲ್ಲಿರಲಾರದೆ ? ಇದರಿಂದ ಹಿಂದುಗಳು ಮುಸಲ್ಮಾನರನ್ನೂ, (ಹೆಚ್ಚಾಗಿ) ಮುಸಲ್ಮಾನರು ಹಿಂದುಗಳನ್ನೂ ಸಂಶಯಾತ್ಮಕ ದೃಷ್ಟಿಯಿಂದ ನೋಡುವರು. ಇದೇ ಈ ಹಿಂದು-ಮುಸಲ್ಮಾನ್ ಕಲಹದ ಚಾರಿತ್ರ್ಯಕ ಹಿನ್ನೆಲೆ.

ಹಿಂದುಸ್ಥಾನವು ಒಂದೇ ರಾಷ್ಟ್ರವೆಂದು ತಿಳಿದುಕೊಂಡರೆ, ಹಿಂದು–ಮುಸಲ್ಮಾನರ ಜಗಳವು ಅಲ್ಪಸಂಖ್ಯಾಕರ ಸಮಸ್ಯೆ ಎಂದಂತಾಯಿತು. ಹಾಗಿದ್ದರೂ, ಅಲ್ಪಸಂಖ್ಯಾಕರಿಗೆ ಯಾವುದೊಂದೂ ಭೇದಬುದ್ಧಿಯನ್ನು ತೋರಿಸದೆ, ಅವರಲ್ಲಿ ಸಂಶಯಕ್ಕೆ ಎಡೆಗೊಡದೆ ವರ್ತಿಸುವುದು ಬಹುಸಂಖ್ಯಾಕರ ಕರ್ತವ್ಯ. ನಿಜವಾದ ಪ್ರಜಾಸತ್ತಾತ್ಮಕ ರಾಜ್ಯಪದ್ಧತಿಯೆಂದರೆ ಬಹುಸಂಖ್ಯಾಕರಿಂದ ಆಳಲ್ಪಡುವ ರಾಜ್ಯವೆಂದು ಮಾತ್ರವಲ್ಲ; ಅದಕ್ಕಿಂತಲೂ ಮುಖ್ಯವಾದುದು ಅಲ್ಪಸಂಖ್ಯಾಕರ ಸ್ವಾತಂತ್ರ್ಯ, ಹಕ್ಕು, ಹಿತಸಂಬಂಧ ಮುಂತಾದುವನ್ನು ಕಾಯ್ದಿಡುವುದು. ಇದಿಲ್ಲದೆ ಇದ್ದರೆ, ಪ್ರಜಾಸತ್ತಾತ್ಮಕವು ಬರಿಯ ಟೊಳ್ಳು ಮಾತು!

ಆದರೆ ಅಂತಹ ಬೌದ್ಧಿಕ (Rational) ವಾತಾವರಣವು ಹಿಂದುಸ್ಥಾನದಲ್ಲಿ ಕಂಡುಬರುವುದಿಲ್ಲ. ಅಂತಹ ವಾತಾವರಣವನ್ನು ಉಂಟುಮಾಡುವುದರಿಂದಲೆ ಈ ಜಾತೀಯ ಪ್ರಶ್ನೆಯು ಬಗೆಹರಿಯುವುದೆಂದರೆ ಅದೊಂದು ಬರಿಯ ಕಪೋಲಕಲ್ಪಿತ ಉತ್ತರವು. ಏಕೆಂದರೆ ಒಂದೇ ಸಲನೆ ಅಂತಹ ವಾತಾವರಣವನ್ನು ಉಂಟುಮಾಡುವುದೂ, ಶ್ರೀ. ಸಂತರಾಮರೆಂದಂತೆ ಜನರ ಹೃದಯ ಪಲ್ಲಟನೆ ಮಾಡುವುದೂ ಒಂದೆ. ಎಲ್ಲಾ ಹಿಂದುಗಳ ಹೃದಯ ಮಾರ್ಪಾಟನೆಯಾಗಿ, ಎಲ್ಲಾ ಮುಸಲ್ಮಾನರನ್ನೂ ಅವರು ತಮ್ಮ ಭ್ರಾತೃಗಳಂತೆ ನೋಡಬೇಕೆಂದರೆ, ಅದು ಪ್ರಳಯದ ತನಕ ಆಗುವಂತಿಲ್ಲ. ಈ ರೀತಿಯ ಉತ್ತರವು ಈಗಿನ ಪರಿಸ್ಥಿತಿಯಲ್ಲಿ ಬರಿಯ ಒಂದು ಧ್ಯೇಯವಾಗಿ ಮಾತ್ರ ಉಳಿಯುವುದು. ಆದುದರಿಂದ ಈಗ ನಾವು, ನಮ್ಮ ಎದುರಿಗೆ ಇರುವ ಪ್ರಶ್ನೆಯ ಉತ್ತರವನ್ನು, ಅಭ್ಯಸಿಸುವ ರೀತಿಯಲ್ಲಿ ಅಥವಾ ಕಾರ್ಯರಂಗದಲ್ಲಿ ನೋಡುವುದು ಅಗತ್ಯ.

* * *

ಈ ಜಾತೀಯ ಸಮಸ್ಯೆಯನ್ನು ಎರಡು ರೀತಿಗಳಿಂದ ಬಗೆಹರಿಸಬಹುದು. ಒಂದು ಸಾಮ್ಯವಾದದ ಮಾರ್ಗ, ಇನ್ನೊಂದು ರಾಷ್ಟ್ರವಾದ ಮಾರ್ಗ. ಬರಿಯ ರಾಷ್ಟ್ರವಾದದ ಮಾರ್ಗದಿಂದ ಈ ಸಮಸ್ಯೆಯನ್ನು ಬಗೆಹರಿಸುವುದು ತುಂಬ ಕಷ್ಟಸಾಧ್ಯ. ರಾಷ್ಟ್ರವಾದವನ್ನು ಹೆಚ್ಚೆಚ್ಚು ಎತ್ತಿ ಹಿಡಿದಂತೆಲ್ಲಾ ಈ ಸಮಸ್ಯೆಯ ನಿವಾರಣೋಪಾಯಗಳು ಹೆಚ್ಚೆಚ್ಚು ಕಷ್ಟಸಾಧ್ಯವಾಗುತ್ತಾ ಬರುತ್ತವೆ. ಆದುದರಿಂದ ಈ ಜಾತೀಯ ಪ್ರಶ್ನೆಯ ಕೊನೆಯ ಉತ್ತರವನ್ನು ಸಾಮ್ಯವಾದಿ ಮಾರ್ಗದಿಂದಲೇ ಪಡೆಯಲು ಸಾಧ್ಯ. ಆದರೂ ಈ ಲೇಖನದಲ್ಲಿ ನಾನು ರಾಷ್ಟ್ರ-

ವಿಮಾನದಾಳಿ !

ಭವಿಷ್ಯ ಹೇಗಿದೆಯೊ ಬಲ್ಲವರಾರು ?

ಭಾರತೀಯರಿಗೂ ಆ ವಿಷಮಸಂದರ್ಭ ಒದಗಬಹುದಾಗಿದೆ !

ಅದರಿಂದ ಸುರಕ್ಷಿತರಾಗುವುದಕ್ಕಾಗಿ

"ವಿಮಾನ ದಾಳಿ ಸಂರಕ್ಷಣೆ"

ಎಂಬ ಪುಸ್ತಕವನ್ನೋದಿರಿ !

ಬರೆದವರು ಟಿ. ಆರ್. ಭಾಗವತ, ಬಿ.ಎ.

ಕ್ರಾ. ೧೬. ೮೦ ಪುಟಗಳು. ಬೆಲೆ ೦-೬-೦

ಬೇಕಾದವರು ಜಯಂತಿ ಕಾರ್ಯಾಲಯಕ್ಕೆ

ಬರೆದು ತರಿಸಿಕೊಳ್ಳಬೇಕು !

ವಾದದ ಮಾರ್ಗವನ್ನಷ್ಟೇ ತೋರಿಸಲು ಯತ್ನಿಸುವೆನು.

ಮನುಷ್ಯ ಮನುಷ್ಯರೊಳಗಿನ ಸಂಬಂಧವು ಈ ಮೊದಲೇ ತೋರಿಸಿದಂತೆ ಮುಖ್ಯವಾಗಿ ಅವನವನ ಪ್ರಾಕೃತಿಕ (Physical) ಮತ್ತು ಆರ್ಥಿಕ (economic) ಜೀವನದ ಸ್ಥಿತಿ-ಗತಿಗಳನ್ನು ಅನುಸರಿಸಿಕೊಂಡಿದೆ. ಇದನ್ನು ಚೆನ್ನಾಗಿ ಅರಿತುಕೊಂಡರೆ, ಜಾತೀಯ ಪಂಗಡಗಳು ಎಷ್ಟು ಕೃತಕವಾಗಿವೆ ಎಂಬುದು ತಿಳಿಯಬಹುದು. ಇದರಿಂದ, ಮನುಷ್ಯಸಮಾಜದ ಜೀವನಪದ್ಧತಿ ಮತ್ತು ಸ್ಥಿತಿ-ಗತಿಗಳನ್ನು ಬದಲಾವಣೆ ಮಾಡಿದಂತೆಲ್ಲಾ ಮನುಷ್ಯ ಸಂಬಂಧವಲ್ಲೂ ಬದಲಾವಣೆಗಳಾಗುತ್ತವೆ—ಎಂದು ತಿಳಿಯಬಹುದು. ವರ್ಣಾಶ್ರಮ ಧರ್ಮಗಳನ್ನು ಉದಾಹರಣೆಗಾಗಿ ತೆಗೆದುಕೊಳ್ಳುವ: ಮೊದಲು ವರ್ಣಾಶ್ರಮ ಧರ್ಮಗಳಿಗೆ ಆರ್ಥಿಕ ತಳಹದಿಯಿತ್ತು. ಎಂದಿನ ವರೆಗೆ ಒಂದು ಸಮಾಜ ಪದ್ಧತಿಯು ಮತ್ತು ಅದರ ಆರ್ಥಿಕರಚನೆಯು ಉಳಿಯಬೇಕಿತ್ತೋ ಅಂದಿನ ವರೆಗೆ, ಈ ವರ್ಣಾಶ್ರಮಧರ್ಮ ಪದ್ಧತಿಯೂ ಉಳಿಯಬೇಕಾಗಿ ಬಂತು. ಎಂದರೆ, ಸಮಾಜದ ಪದ್ಧತಿಯ ಸೂತ್ರಕಾರರು, ಆ ಪದ್ಧತಿಯನ್ನು ಉಳಿಸುವುದಕ್ಕಾಗಿ, ಈ ಜಾತೀಯ ಪದ್ಧತಿಯನ್ನೂ ಉಳಿಸಿದರು. ಆದರೆ ಅಂತಹ ಹಳೆಯ ಸಮಾಜಪದ್ಧತಿ ಮತ್ತು ರಾಜ್ಯಪದ್ಧತಿಯು ಬದಲಾದ ಕೂಡಲೆ, ಜಾತೀಯ ಪದ್ಧತಿಗಳೂ ಬದಲಾಗುತ್ತವೆ. ಹಳೆಯ ಸರಂಜಾಮೀ (feudal) ರಾಜ್ಯಪದ್ಧತಿಯಲ್ಲಿದ್ದ ಜಾತೀಯ ಸಂಬಂಧಗಳು, ಮುಂದುವರಿದ ಹೊಸ ಧಂಡವಾಳಶಾಹಿ (capitalist) ರಾಜ್ಯಪದ್ಧತಿಯಲ್ಲಿ ಹಾಗೆಯೇ ಉಳಿಯದೆ ಬದಲಾವಣೆ ಹೊಂದುತ್ತವೆ. ಹಳೆಯ ಸಂಪ್ರದಾಯಗಳು ಉಳಿದಿರುವಾಗಲೇ ಸಂಪೂರ್ಣ ಹೊಸ ಸಂಬಂಧಗಳ ತಳಹದಿಯು ಹಾಕಲ್ಪಡುತ್ತದೆ. ಇದೇ ಭಾರತದಲ್ಲಿಯ ಇಂದಿನ ಸ್ಥಿತಿ. ಧಂಡವಾಳಶಾಹಿ ಆರ್ಥಿಕ ಪದ್ಧತಿ ಆಧುನಿಕ ವ್ಯಾಪಾರ-ವ್ಯವಹಾರಗಳ ಅವತರಣಿಕೆ, ಆಧುನಿಕ ರಾಜಕೀಯ ಪಂಗಡಗಳ ಸ್ಥಾಪನೆ ಮುಂತಾದುವುಗಳು, ಹಳೆಯ ಹಿಂದೂ ಸಮಾಜಪದ್ಧತಿಯನ್ನು ಎಷ್ಟೋ ವಿಧಗಳಲ್ಲಿ ನಾಶ ಮಾಡಿದುವು. ಇದರಿಂದ ಈಗ ನಾವು, ಒಬ್ಬ ಬ್ರಾಹ್ಮಣನು ಹೈಕೋರ್ಟಿನ ನ್ಯಾಯಾಧೀಶನಾಗಿಯೂ ಅದೇ ಕುಟುಂಬದ ಇನ್ನೊಬ್ಬನು ಅಡಿಗೆಯವನಾಗಿಯೂ ಇರುವುದನ್ನು ಕಾಣಬಹುದು. ಇದೇ ರೀತಿ ಒಬ್ಬ ಬ್ರಾಹ್ಮಣೇತರನ ಕುಟುಂಬದಲ್ಲಿಯೂ ನಾವು ಕಾಣಬಹುದು. ವಸ್ತುಸ್ಥಿತಿಯು ಈ ತೆರನಾಗಿ ಬದಲಾವಣೆ ಹೊಂದುತ್ತಿರುವಾಗ, ಹಳೆಯ ಸಾಂಪ್ರದಾಯಿಕ ವ್ಯತ್ಯಾಸಗಳು ಮಾತ್ರ ಹಲವು ಜನರ ತಲೆಯಲ್ಲಿ ಅಲೆದಾಡುತ್ತಿರುವುದರಿಂದ ತರತರದ ವೈಷಮ್ಯ ಮತ್ತು ಕಲಹಗಳು ಉಂಟಾಗುತ್ತವೆ. ಹಳೆಯ ಸಮಾಜ ಪದ್ಧತಿಯ ಸಂಸ್ಥೆಗಳು ಅವ್ಯವಸ್ಥೆಗೀಡಾಗುವುದನ್ನು ಹೋಗಲಾಡಿಸಿ, ಹೊಸದಾದ-ಹೊಸ ತರದ-ಹಿತಸಂಬಂಧಗಳುಳ್ಳ ಸಂಸ್ಥೆಗಳನ್ನು ಉಂಟುಮಾಡಬಹುದು. ಆದರೆ ಅದಕ್ಕಾಗಿ, ಯಾರಿಗೆ ಹಳೆಯ ಸಾಂಪ್ರದಾಯಿಕ ರಾಜ್ಯ ಮತ್ತು ಸಮಾಜ ಪದ್ಧತಿಯನ್ನು ಉಳಿಸುವ ಆಶೆಯಿಲ್ಲವೋ, ಮತ್ತು ಯಾರು ಸಮತೆ, ಸಹೋದರತೆ ಮತ್ತು ಸ್ವಾತಂತ್ರ್ಯಗಳನ್ನು ತಳಹದಿಯಾಗಿಟ್ಟುಕೊಂಡು ಹೊಸ ತರದ ಮನುಷ್ಯ ಸಂಬಂಧಕ್ಕಾಗಿ ಹೆಣಗಾಡುತ್ತಾರೋ ಅಂಥವರ ಕೈಗೆ ರಾಜಕೀಯ ಸತ್ತೆಯು ಬರುವುದು ಅಗತ್ಯ— ಈ ತರದ ಅಭಿಪ್ರಾಯವನ್ನು ಇತ್ತೀಚಿಗೆ ಬಹಳ ಮಂದಿ ವ್ಯಕ್ತಪಡಿಸುತ್ತಿದ್ದಾರೆ. ಆದರೆ ಇಂತಹ ಅಭಿಪ್ರಾಯವು ಮತ್ತು ದೃಷ್ಟಿಕೋನವು ಸಮತಾವಾದಿ ರಾಷ್ಟ್ರದಲ್ಲಿ ಮಾತ್ರವೇ ಸಂಪೂರ್ಣವಾಗಿ ಅಭ್ಯಸಿಸಲು ಸಾಧ್ಯ. ಆದುದರಿಂದಲೇ ನಾವು ಇಂದಿನಿಂದಲೇ ಅಂತಹ ಹೊಸ ತರದ ಮನುಷ್ಯ ಸಂಬಂಧವಿರುವ ರಾಷ್ಟ್ರದ ತಳಹದಿಯನ್ನು ಹಾಕುತ್ತಿರಬೇಕು. ಅದಕ್ಕಾಗಿ ಸಾಧ್ಯವಿದ್ದಷ್ಟು ದುಡಿಯಬೇಕು. ಮನುಷ್ಯಪ್ರಯತ್ನವಿಲ್ಲದೆ ಬದಲಾವಣೆಗಳಾಗಲು ಸಾಧ್ಯವೆ ಇಲ್ಲ.

ಒಬ್ಬ ಮುಸಲ್ಮಾನ್ ಜಮೀನುದಾರನು ತನ್ನ ಮುಸಲ್ಮಾನ್ ಬೇಸಾಯಗಾರನಿಂದ ಕಡಿಮೆ ಗೇಣಿ (ಹೇಣಿ) ಯನ್ನು ತೆಗೆದುಕೊಂಡು, ಹಿಂದೂ ಬೇಸಾಯಗಾರನಿಂದ ಹೆಚ್ಚು ತೆಗೆದುಕೊಳ್ಳುವನೆ? ಅಥವಾ ಒಬ್ಬ ಹಿಂದೂಧನಿಯು ತನ್ನ ಹಿಂದು ನೌಕರನಿಗೆ ಸುಲಭ ಸೌಕರ್ಯಗಳನ್ನು ಒದಗಿಸಿಕೊಟ್ಟು ಮುಸಲ್ಮಾನ್ ನೌಕರನಿಗೆ ಕಷ್ಟ ಕೊಡುವನೆ? ಪಂಡಿತರೋ ಮೌಲಾನರೋ, ತಮಗೆ ಬೇಕಾದಾಗ ನಿರಕ್ಷರ ಕುಕ್ಷಿಗಳಾದ ಜನರನ್ನು ಉದ್ರೇಕಗೊಳಿಸಬಹುದು. ಎಂದಿಗೆ ರಾಜಕೀಯ ದೃಷ್ಟಿಯನ್ನು ಈ ಭಾವನಾತ್ಮಕ (Emotional) ಮತ್ತು ಧಾರ್ಮಿಕ ವಾತಾವರಣದಿಂದ ಹೊರಗೆ ತೆಗೆಯಲು ಬರುವುದೋ, ಮತ್ತು ಹಿಂದೂ ಬೇಸಾಯಗಾರನಿಗೆ ತನ್ನ ದೈನಿಕ ಆರ್ಥಿಕಸ್ಥಿತಿಯನ್ನು ತೋರಿಸಲು ಸಾಧ್ಯವೋ ಎಂದರೆ ಎಂದು ಅವನು ಜಾಗೃತಿಯನ್ನು ಹೊಂದುವನೋ, ಅಂದು ಅವನು ತನ್ನ ನಿತ್ಯ ಜೀವನದಲ್ಲಿ ತನ್ನೊಡನೆಯೆ ತನ್ನಂತೆ ಕೆಲಸಮಾಡುವ ಒಬ್ಬ ಮುಸಲ್ಮಾನ್ ಬೇಸಾಯಗಾರನಿಗೂ ತನಗೂ ಏನೂ ವೈಷಮ್ಯವಿಲ್ಲವೆಂದೂ, ಮತ್ತು ತನಗೆ ಹಿಂದು ಜಮೀನುದಾರನಿಗಿಂತ ಮುಸಲ್ಮಾನ್ ಬೇಸಾಯಗಾರನೇ ತೀರ ಹತ್ತಿರದವನೆಂದೂ ಕಾಣಬಹುದು. ಅವರು ಒಮ್ಮೆ ಇದನ್ನು ತಿಳಿದುಕೊಂಡರೆ, ಅವರಿರ್ವರ ಒಂದೇಯಾದ ಹಾಳು ಭವಿಷ್ಯವೂ, ದುಸ್ಥಿತಿಯೂ ಅವರಿರ್ವರನ್ನೂ ಒಂದೇ ಕೆಲಸಕ್ಕೆ ಎಳೆಯುವುದು. ಯಾವತರದ ಜಾತೀಯ ವೈಷಮ್ಯದ ಹಾಡುಗಳೂ ಅವರ ಕಿವಿಗೆ ಬೀಳಲಾರವು. ಎಂದಿನವರೆಗೆ ದೇಶದ ಎಲ್ಲ ಜನರೂ ಜಾಗೃತಿಯನ್ನು ಹೊಂದುವುದಿಲ್ಲವೋ ಅಂದಿನವರೆಗೆ, ಅವರಲ್ಲಿ ರಾಜಕೀಯ ಜಾಗೃತಿಯನ್ನುಂಟುಮಾಡುವುದು ದೇಶದ ನಾಯಕರದು; ಜಾತಿ-ಜಾತಿಗಳ ಕಲಹವನ್ನು ಹೋಗಲಾಡಿಸಬೇಕೆಂದು ದಿನರಾತ್ರಿ ಹೆಣಗಾಡುವ ಶ್ರೀ. ಸಂತರಾಮರಂತಹರದು; ಅರ್ಥಾತ್ ಸಂಪೂರ್ಣಜಾಗೃತಿ ಹೊಂದಿದ ಭಾರತೀಯರದು! ಯಾಕೆಂದರೆ ರಾಜಕೀಯ ಅಜಾಗೃತಿಯೂ ಜಾತೀಯ ಕಲಹದ ಒಂದು ಬಲವಾದ ಕಾರಣ.

ದೇವರು

★

ಶ್ರೀ. ವಿ. ಜಿ. ಭಟ್ಟ, ಪುಣೆ

ರಸಬಾಳೆಹಣ್ಣು ಮೇಣ್ ಸುಲಿದ ತೆಂಗಿನಕಾಯಿ-
ಗಳನು ತರಳನ ಕೈಯಲ್ಲಿಟ್ಟು ನುಡಿದಳು ತಾಯಿ:
“ ಮಗುವೆ ಗುಡಿಗೊಯ್ದಿದನು ಮುಕ್ಕಣ್ಣಸುತ ಬೆನಕ
ನಡಿಗಿಟ್ಟು ನೈವೇದ್ಯ ಮಾಡಿ ಬಾ ; ಬೈಗನಕ-
ವಿಹುದೆನಗೆ ಮನೆಗೆಲಸ ಮೈತುಂಬ ; ಬರಲಾರೆ! ”
(ಎನುತವನ ಬೀಳ್ಕೈಸಿ) “ ಬಾಳ, ಇದು ಕಡೆಯ ಸಲ,
ನಾಳೆ ಹೇಳುವುದಿಲ್ಲ, ” ಎನಲು ಮಗುಕುಣುಗುಡುತ
ಗುಡಿಯ ದಾರಿಯ ಹಿಡಿದ.

ಮುಂದ ಹೆಜ್ಜೆಯನಿಡುತ
ಸಾಗುತಿರೆ, ಮನದಲ್ಲಿ “ ಪ್ರತಿದಿನವು ಮನೆಯಿಂದ
ಇಲ್ಲಿಗೈತಂದೇನು ಫಲವು ? ಹರಸುತನಿಂದ
ತಿನ್ನಲಾಗುವುದಿಲ್ಲ ನಮ್ಮಂತೆ! ಕೇಳುವೆನು
ಇಂದವನ ಹಟತೊಟ್ಟು! ” ಇಂತು ಚಿಂತಿಸುತವನು
ಗುಡಿಸೇರಿ, ಗಂಟೆಬಾರಿಸಿ ಮೂರ್ತಿಯೆದುರಿಟ್ಟು
“ ನಾನಿತ್ತ ಫಲಗಳನು ತಿನಲೊಲ್ಲೆ ? ನೀ ಸಿಟ್ಟು-
ಗೊಂಡಿಹೆಯ ಜಗದೊಡೆಯ ? ಕ್ಷಮಿಸೆಮ್ಮ ತಪ್ಪುಗಳ!
ನೀನಿದನು ತಿನ್ನದೊಡೆ ಉಣ್ಣಲೊಲ್ಲೆ ! ” ಎಂದು ಗಳ-
ಗಳ ಕಂಬನಿಯ ಕರೆದು ಮುಕ್ಕಣ್ಣ ಸುತನಡಿಗೆ
ತಲೆಯನಿಟ್ಟಳುತಿರಲು, ದಯೆಗೊಂಡವನ ಮುಡಿಗೆ
ಹೂವ ಚೆಲ್ಲಿದ ಬೆನಕ—ಮುಕುಟದಿಂದ.

ಆಶ್ಚರ್ಯ !
ನುಡಿಯುತಿದೆ ಕಲ್ಮೂರ್ತಿ ! ಬದಲಿಸಿತು ಮುಖಚರ್ಯೆ-
ಅಳುಮೊಗವು ಅರಳರಳೆ “ ಅಳದಿರೈಯಾ ಬಾಲ,
ನೀನಿತ್ತ ಫಲತಿಂದು ಕುಡಿವೆ ಭಕುತಿಯ ಹಾಲ!
ಆದರಿದೊ ಯುಗ ಬೇರೆ—ಬಂದಿಹುದು ಕಲಿಕಾಲ—
ಚಿಕ್ಕಮಕ್ಕಳ ಕೊಲ್ಲುತಿಹುದು ಹಸಿವೆಯ ಶೂಲ!
ಅವರಿಗನ್ನವ ನೀಡಲೆನಗೆ ಮುಟ್ಟುವುದಿಂದು ! ”
ಮಾತು ಅಲ್ಲಿಗೆ ಮುಗಿಯೆ, ಸಂತೋಷದಲಿ ಮಿಂದು
(ಫಲಗಳಲ್ಲಿದ್ದಿಲ್ಲ) ತರಳ ಬರಿಗೈಯಿಂದ
ಚಿಗಿದು ಮನೆಮುಟ್ಟಿ, ತಾಯಿಗೆ ಕೈಮುಗಿದು, ನಡೆದ
ಸಂಗತಿಯ ಸಾರಿದನು (ಜ್ಞಾನಿ ಸತ್ವವ ಕಡೆದ).

ಸಾನುವಿನ ನೆತ್ತಿಯಲಿ

★

ಶ್ರೀ. ಟಿ. ಎನ್. ಶ್ರೀನಿವಾಸಮೂರ್ತಿ, ಮೈಸೂರು.

[ಕಳೆದ ಡಿಸೆಂಬರಿನಲ್ಲಿ (ತಾ. ೨೮–೧೨–೧೯೪೧) ಗೆಳೆಯರೊಡನೆ ಮಹಾಬಲಾದ್ರಿಗೆ ಹೋಗಿದ್ದಾಗ, ಅಲ್ಲಿ ಸಂಜೆಯ ಸೊಬಗನ್ನು ಸವಿದು ಪ್ರೇರಣೆ ಪಡೆದುದು.]

೧

ಚಿತ್ರ ಚಿತ್ರದ ಮೊತ್ತ ಸೆರೆಹಿಡಿದಿಹುದು ಚಿತ್ತ,
ಓ ಮಿತ್ರ ! ಬಾ, ಇತ್ತ ನಿಲ್ಲು ನಿಲ್ಲು !
ವಿಶ್ವಕವಿ ಕವಿತೆ ತಾ ಭೂಮವಾಗಿಹುದೆಲ್ಲು ;
ಬಾನಿನಲಿ, ಕೆರೆಯಲ್ಲಿ, ಎಲರಿನಲ್ಲಿ !

೨

ಪಡುವಲಲಿ ಕಿರಣವಿಲ್ಲದ ಅಸ್ತ ಇನಬಿಂಬ
ಭ್ರಮಿಸುತಿದೆ ಸ್ಫೂರ್ತಿಯಾ ಚಕ್ರದಂತೆ :
ರಕ್ತಸಿಂಚಿತ ಧವಳ ಜೀಮೂತ ಪುಂಜವಿದೆ,
ಹಾವ-ಭಾವದ ನವ್ಯ ಕಬ್ಬದಂತೆ !

೩

ಹೊಲ, ಮನೆಯು, ಕಾರ್ಖಾನೆ, ಕೆರೆ, ಸೌಧ, ಕೆರುವಾಡು
ತಪ್ಪಲಲಿ ಶೋಭಿಸಿವೆ ಕೆತ್ತಿದಂತೆ !
ಜೇಡ ಜಾಲದ ತೆರದಿ ಮುಚ್ಚಂಜೆ ಮಂಜುಪೊರೆ
ಮುಸುಕಿಹುದು ಎಲ್ಲವನು ಕನಸಿನಂತೆ!

೪

ಸಾನುವಿನ ನೆತ್ತಿಯಲಿ ನಿಂತಿರುವ ವ್ಯಕ್ತಿಯನು
ಕರಗಿಸಿದೆ ಯಾವುದೋ ವಿಶ್ವಭಾವ !
ದನಿಯು ಮೈತುಂಬುತಿದೆ ; ಹೊರಹೊಮ್ಮಲೆಳಸುತಿದೆ :
ಬಾಯ್ಮುಚ್ಚಿ ತಡೆದಿಹುದು ಒಂದನುಭವ !

೫

ಮನವೆ, ಓ ಸೊಲ್ಲದಿರು : ವಿಶ್ವಕವಿ ಕವಿತೆಯದು
ಕೆಟ್ಟೀತು, ನಿನ್ನ ರಸವಾಣಿ ಬೆರೆಯೆ !
ಅನುಭವವೆ ಸಿದ್ಧಿ ನೋಡಲ್ಲಿ ಈ ಹೊತ್ತಿನಲಿ :
‘ ನಾನ್ ’ ಅಳಿದು ಬಾನಿನಲಿ ಕರಗಿ ಹರಿಯೆ !

ಸೆರೆಗಳ್ಳನ ಬೇಟೆ

ಸಣ್ಣಕಥೆ

ಶ್ರೀ. ವಿಶ್ವನಾಥ ಹೆಗಡೆ, ಮುಂಬಯಿ

★

ಅಂದು ಅನಂತಯ್ಯನಾಗಲಿ ತಿಮ್ಮನ ಹುಡುಗನಾಗಲಿ, ಆಗ ಸಂಜೆನಿಂದ ಮಾತನಾಡದೆ ಸೈರಿಸಿಕೊಂಡಿದ್ದಿದ್ದರೆ, ಈ ವೃತ್ತಾಂತವನ್ನು ಬರೆಯುವ ಪ್ರಸಂಗವೇ ಬರುತ್ತಿರಲಿಲ್ಲ. ಆದರೆ!

ನಮ್ಮೂರ ಶ್ರೀನಿವಾಸನ ಚಹಾದ ಅಂಗಡಿಗೆ ನಿತ್ಯವೂ ಇಪ್ಪತ್ತು-ಮೂವತ್ತು ಗಿರಾಕಿಗಳು ಬಂದು ಹೋಗುತ್ತಿದ್ದರೂ, ಅನೇಗ ಅವನ ಅಂಗಡಿಯ ಅಟ್ಟದ ಪರಿಚಯವಿರಲಿಲ್ಲ. ಅದು ಕಟ್ಟಿಗೆ, ಸಕ್ಕರೆ, ಚಹಾಸೊಪ್ಪು ಮೊದಲಾದ ಸಾಮಾನುಗಳನ್ನೂ ಪರುಕು-ಮುರುಕು ವಸ್ತುಗಳನ್ನೂ ಇಡುವ ಸ್ಥಳವೆಂದು ಗಿರಾಕಿಗಳ ಹಾಗೂ ಊರ ಜನರ ತಿಳುವಳಿಕೆಯಾಗಿತ್ತು. ಆ ಅಟ್ಟದ ಮೇಲೆ ಆಗಾಗ ರಹಸ್ಯಕೂಟಗಳಾಗುತ್ತಿದ್ದ ಸಮಾಚಾರವೂ ಅದಕ್ಕೆ ಸಂಬಂಧಿಸಿದ ಇತರ ಸಂಗತಿಗಳೂ ಅನಂತಯ್ಯ ಮತ್ತು ತಿಮ್ಮನ ಹುಡುಗರ ಜಗಳದಿಂದಾಗಿ ಹೊರಬಿದ್ದುವು.

ಗಿರಾಕಿಗಳ ಯಾತಾಯಾತವು ಕಡಿಮೆಯಾದ ಕೂಡಲೆ, ಎಂದರೆ ಹೆಚ್ಚಾಗಿ ಹೊತ್ತುಮುಳುಗಿದ ಮೇಲೆ—ಅನಂತಯ್ಯನೇ ಮೊದಲಾದ ನಾಲ್ಕಾರು ತರುಣರು, ಶ್ರೀನಿವಾಸನ ಅಂಗಡಿಯ ಅಟ್ಟದ ಮೇಲೆ ಸೇರಿ ದುಡ್ಡು ಹಚ್ಚಿ ಇಸ್ಪೀಟು ಆಡುವುದು, ಅಪರೂಪವಾದ ತಿಂಡಿಗಳನ್ನು ಶ್ರೀನಿವಾಸನ ಕೈಯಿಂದ ಮಾಡಿಸಿ ಸವಿಯುವುದು, ಒಮ್ಮೊಮ್ಮೆ ಭಂಗಿಯ ಪಾನಕ ಮಾಡಿಸಿ ಕುಡಿಯುವುದು, ಒಮ್ಮೊಮ್ಮೆ—ಅನಂತಯ್ಯನ ಮಾತಿನಲ್ಲಿ ಹೇಳಬೇಕಾದರೆ— ಕಫ ಸಡಿಲಿಸಲಿಕ್ಕೆಂದು ಮದ್ಯಪಾನ ಮಾಡುವುದು—ಮುಂತಾದ ಕೆಲಸಗಳನ್ನು ನಡೆಯಿಸುತ್ತಿದ್ದರು.

ನಮ್ಮ ಊರಲ್ಲಿ ಕಳ್ಳಿನ ಹೊರತು ಬೇರೆ ಮಾದಕ ಪೇಯಗಳು ಸಿಕ್ಕುವುದಿಲ್ಲ. ಅದನ್ನು ಕೆಲವು ಕೀಳುಜಾತಿಯವರು ಮಾತ್ರ ಕುಡಿಯುತ್ತಾರೆ. ಸರಾಯಿಯನ್ನು ಬೇರೆ ಊರಿನಿಂದ ಮಾರಾಟಕ್ಕೆ ತಂದು ಕುಡಿಯುವುದು ಈ ತರುಣರಿಗೆ ಸಾಧ್ಯವಿರಲಿಲ್ಲ. ಅದರ ಬೆಲೆ ಹೆಚ್ಚು; ತೊಂದರೆ ಮೇಲಾಗಿ ತಮ್ಮ ಗುಟ್ಟು ಎಲ್ಲಿ ರಟ್ಟಾಗುವುದೋ ಎಂಬ ಹೆದರಿಕೆ.... ಹೀಗಾಗಿ ಇವರಿಗೆ ತಿಮ್ಮನ ಹುಡುಗನೇ ಗತಿ, ಬೇರೆ ಉದ್ಯೋಗವಿಲ್ಲದ ತಿಮ್ಮನ ಹುಡುಗನಿಗೆ ಇವರೇ ಗತಿ. ತಿಮ್ಮನ ಹುಡುಗ ಇವರಿಗೆ ಬೇಕಾದಾಗ ಚಿಕ್ಕ ಪುಟ್ಟ ಕೆಲಸಗಳನ್ನು ಮಾಡಿಕೊಡುತ್ತಿದ್ದನಲ್ಲದೆ, ಆಗಾಗ ಸರಾಯಿಯನ್ನೂ ಒದಗಿಸುತ್ತಿದ್ದ. ಆ ಸರಾಯಿ 'ಬೇಕಾಯದೇಶೀರ್' ಎಂಬುದು ಇವರಿಗೆ ಗೊತ್ತಿದ್ದರೂ ಅದು ಎಲ್ಲಿಂದ, ಹೇಗೆ, ತಮ್ಮ ಪಿಂಗಾಣಿಗೆ ಬರುತ್ತಿತ್ತೆಂಬುದು ಮಾತ್ರ ಇವರಿಗೆ ಗೊತ್ತಿರಲಿಲ್ಲ. 'ಕಫ ಸಡಿಲಿಸಲಿಕ್ಕೆ' ಸರಾಯಿ. ಯಾವದಾಯಿತು; ಮಿಕ್ಕ ಗೊಡವೆ ಅವರಿಗೇಕೆ?

ಎಂದಿನಂತೆ ಆ ದಿನವೂ ಸಾಯಂಕಾಲ ಶ್ರೀನಿವಾಸನ ಅಂಗಡಿಯ ಅಟ್ಟದ ಮೇಲೆ "**ಮಾಯಾ ಬಾಜಾರ್**" ಸೇರಿತ್ತು. ಗಿರಾಕಿಗಳ ಸದ್ದು ಅಡಗಿತ್ತು. ಊರಿನ ಕಾರಭಾರವನ್ನೆಲ್ಲ ಮಾತಿನಿಂದ ಮುಗಿಸಿತ್ತು. ರಾತ್ರಿಯು ಕತ್ತಲೆಯ ಕೊಡೆಯನ್ನು ಹರವುತ್ತಿತ್ತು. 'ಮಾಯಾ ಬಾಜಾರ್'ನ ಮೆಂಬರುಗಳು 'ಕಫ ಸಡಿಲಿಸಿ'ಕೊಂಡ ಮೇಲೆ, ಗೋಡೆಗೆ ಆತು ನಿಂತ ತಿಮ್ಮನ ಹುಡುಗ ಮುಂದೆ ಬಂದು, ಅಂದಿನ ಕ್ರಯವನ್ನೂ ಅನಂತಯ್ಯನಿಂದ ಬರಬೇಕಾಗಿದ್ದ ಹಿಂದಿನ ಲೆಕ್ಕವನ್ನೂ ಕೂಡಿಸಿ ಬೇಡಿದ. ಅದಕ್ಕೆ ಅನಂತಯ್ಯ ಹೇಳಿದ: "ಕೊಡೋಣ; ಎಲ್ಲಿ ಹೋಗುತ್ತದೆ? ನಾಳೆ ಒಂದು ಅಕ್ಕಿ ಮುಡಿಯನ್ನು ನಾಗಪ್ಪ ಸೆಟ್ಟಿಗೆ ಮಾರುವುದಿದೆ. ನಿನ್ನ ಹಣ ನೀನು ನಾಳೆಯ ಸಂಜೆಗೆ

★

ಉಪಾಯದಿಂದ ಪೋಲೀಸರು ತಿಮ್ಮನ ಮಗನನ್ನು ಹಿಡಿದರು. ತಿಮ್ಮ ಪೇದ್ರುವಿನ ಹೆಸರನ್ನು ಹೇಳಿದ. ಪೇದ್ರುವನ್ನು ಹಿಡಿಯಲು ಹೊಂಚುಹಾಕಿದ ಪೋಲಿಸರು ತಿಮ್ಮನ ಮಗನಿಂದಲೇ ಒಳ್ಳೆಯ ಏಟನ್ನು ತಿಂದರು.

★

ತೆಗೆದುಕೊಂಡು ಹೋಗು! ಆದರೆ ಈಗೀಗ ನಿನ್ನ ಸರಾಯಿ ತುಟ್ಟಿಯಾಯಿತೇನು?"

"ಎಷ್ಟು ಸಂಜೆ....ಎಂತ ನಾನು ದಾರಿ ನೋಡಬೇಕು? ಮಜಾ ಹೊಡೆಯಬೇಕಾದರೆ ತಕ್ಕಂತೆ ದುಡ್ಡು ಖರ್ಚುಮಾಡಬೇಕು!"

ತಿಮ್ಮನ ಹುಡುಗನದೂ ಬಡಸಂಸಾರ. ಅವನು ಎಷ್ಟು ದಿವಸ ಕಾಯಬೇಕು?

ಸ್ನೇಹಿತರ ಮುಂದೆ ತನ್ನ ಅಪಮಾನವಾಯಿತು—ಎಂದು ಅನಂತಯ್ಯ ತಿಳಿದ. ಮಾತಿಗೆ ಮಾತು ಬೆಳೆಯಿತು. ಅನಂತಯ್ಯ ಹೇಳಿದ:

"ಕದ್ದು ಮಾರುವುದಲ್ಲದೆ ಜಾಸ್ತಿ ಹಣ ಬೇಡುವೆಯೇನೋ! ಹೆಚ್ಚಿಗೆ ಮಾತಾಡದಿರು! ತುರಂಗ ಕಾಣಿಸಿ ಬಿಟ್ಟೇನು! ತುರಂಗ!"

ತಿಮ್ಮನ ಹುಡುಗನಿಂದ ಸೈರಿಸುವ ಹಾಗಿರಲಿಲ್ಲ. ಅವನೆಂದ

“ತುರಂಗ ಕಾಣಿಸುತ್ತಾರಂತೆ! ಬಿಡಿ, ನಿಮ್ಮಂಥ ಮೂರು ಕಾಸಿನ ಪುಕ್ಕಟೆ ಫೌಜದಾರರನ್ನು ಎಷ್ಟೋ ನೋಡಿದ್ದೇನೆ. ನನ್ನ ಹಣ ತಿನ್ನುವುದಿದ್ದರೆ ತಿನ್ನಿ!”

ಮತ್ತೆ ಮಾತನಾಡದೆ ತಿಮ್ಮನ ಹುಡುಗ ಅಲ್ಲಿಂದ ಹೊರಟು ಹೋದ. ಆಗ ಅನಂತಯ್ಯನ ತಲೆಯೂ ಬಿಸಿಯಾಗಿತ್ತು. “ನೋಡೊ, ಆ ಸೂಳೇಮಗನಿಗೆ ಎಷ್ಟು ಸೊಕ್ಕು! ಅವನನ್ನು ಹಾದಿಗೆ ತಾರದಿದ್ದರೆ ನಾ ಅನಂತಯ್ಯನಲ್ಲ!” ಎಂದು ಅವನೂ ನಡೆದ.

ಮನೆಗೆ ಹೋದವನೇ ಅನಂತಯ್ಯ ಎಡಗೈಯಿಂದ ಒಂದು ತಕ್ರಾರರ್ಜಿಯನ್ನು ಬರೆದು ಅಂಚೆಗೆ ಹಾಕಿದ. ಅದರ ಒಕ್ಕಣೆ ಈ ರೀತಿ ಇದ್ದಿತು :

“ಈಚೆಗೆ ಈ ಊರಲ್ಲಿ ಕೆಲವರು ಗೇರುಹಣ್ಣಿನ ಸರಾಯಿಯನ್ನು ಕದ್ದು ಮಾರುವರೆಂದು ತಿಳಿಯುತ್ತದೆ. ಇದರಿಂದ ಪ್ರಜೆಗಳು ದುರಭ್ಯಾಸಕ್ಕೆ ಬಿದ್ದು ದುರ್ದೆಸೆಗೆ ಗುರಿಯಾಗುವರಲ್ಲದೆ, ಸರಕಾರಕ್ಕೆ ಲುಕ್ಸಾನು ಆಗುವ ಸಂಭವವಿದೆ. ಆದ್ದರಿಂದ ಯೋಗ್ಯವಾದ ಬಂದೋಬಸ್ತು ಆಗಬೇಕು!”

ಮಾರನೆಯ ದಿನದ ‘ಮಾಯಾ ಬಾಜಾರ’ಕ್ಕೆ ಹೆಚ್ಚಿನ ಕಳೆಯೇರಲಿಲ್ಲ. ‘ಇದೇ ಕೊನೆಯ ಸಭೆ’ ಎಂದೂ ಸಭಿಕರು ಸಂಶಯಗೊಂಡರು. ಅನಂತಯ್ಯ ತನಗೆ ಕಫವಾಗಿದೆಯೆಂದು ಗೊಣಗಿದ. “ಇನ್ನು ಕಫವಾದರೂ ಅಷ್ಟೆ; ಸನ್ನಿಯಾದರೂ ಅಷ್ಟೆ!” ಎಂದು ಇನ್ನೊಬ್ಬ ಮೂದಲಿಸಿದ. “ಆ ಬಡವನ ಹೊಟ್ಟೆಯ ಮೇಲೆ ಕಾಲಿಡಬಾರದಿತ್ತು,” ಎಂದು ಮತ್ತೊಬ್ಬನೆಂದ. ಅಂತೂ ಮಾಯಾಬಾಜಾರವು ಮುರಿಯಿತು.

ಇದಾದ ಮಾರನೆಯ ದಿನ ಬೆಳಗ್ಗೆ, ಸಾದಾ ಉಡುಪಿನ ಅಬಕಾರಿ ಪೋಲೀಸರಿಬ್ಬರು ಊರಲ್ಲೆಲ್ಲ ಸುತ್ತಾಡಿ, ಸೂಕ್ಷ್ಮವಾಗಿ ವಿಚಾರಣೆ ಮಾಡಿದರು. ಆದರೆ ಅವರಿಗೆ ಸ್ವಲ್ಪವಾದರೂ ಸುಳಿವು ಸಿಕ್ಕಲಿಲ್ಲ. ತಾಲ್ಲೂಕಿಗೆ ಮರಳಬೇಕೆಂದಿದ್ದ ಅವರು,- ಮಧ್ಯಾಹ್ನದ ಮೋಟಾರಿಗೆ ಇನ್ನೂ ಅವಕಾಶವಿದ್ದುದರಿಂದ – ಶ್ರೀನಿವಾಸನ ಅಂಗಡಿಯಲ್ಲಿ ಅಲ್ಪಾಹಾರ ಮಾಡಿ, ಮೋಟಾರಿನ ಬರುವನ್ನು ಕಾಯುತ್ತಿದ್ದರು. ಅದೇ ಹೊತ್ತಿಗೆ ಕಣೆಮನೆಯ ಕೃಷ್ಣಪ್ಪನೂ ಅಲ್ಲಿ ಇದ್ದ.

ಕಣೆಮನೆಯ ಕೃಷ್ಣಪ್ಪನಿಗೆ ಗಟ್ಟಿಯಾದ ಯಾವುದೊಂದು ಉದ್ಯೋಗವೂ ಇರಲಿಲ್ಲ. ಆದರೆ ಎಲ್ಲ ಕೆಲಸಗಳನ್ನೂ ಮಾಡಬಲ್ಲ. ಅವನು ಯಾರೊಬ್ಬರನ್ನೂ ಹಚ್ಚಿಕೊಳ್ಳದಿದ್ದರೂ ಎಲ್ಲರಿಗೂ ಅವನು ಬೇಕು. ಪ್ರತಿನಿತ್ಯ ಜಿಲ್ಲೆಯ ಸಮಾಚಾರವನ್ನೆಲ್ಲ ಚರ್ಚಿಸದಿದ್ದರೆ ಅವನಿಗೆ ನಿದ್ರೆ ಬರುತ್ತಿರಲಿಲ್ಲ. ಅವನಿಗೆ ಸ್ವಂತ ಮನೆ-ಮಾರು ಇಲ್ಲದಿದ್ದರೂ, ಎಲ್ಲಿಯಾದರೂ ಸ್ಥಳ ಸಿಕ್ಕುತ್ತದೆ. ಅವನಿಗೆ ತಿಳಿಯದ ವಿಷಯವಿಲ್ಲ. ಯಾರ ಎಮ್ಮೆ ಕರು ಹಾಕಿದರೂ ಅದು ಅವನಿಗೆ ಗೊತ್ತು. ಎಲ್ಲಿ ಜಗಳವಾದರೂ ಅದು ಅವನ ಕಿವಿಗೆ ಬೀಳಲೇ ಬೇಕು. ಯಾರ ಮನೆಯಲ್ಲಾದರೂ ಮದುವೆ ಮುಂಜಿಗಳಾಗುವುದಿದ್ದರೆ, ಅದು ಅವನಿಗೆ ಒಂದುವಾರ ಮುಂಚಿತವಾಗಿ ತಿಳಿಯುತ್ತಿತ್ತು. ಎಲ್ಲಿ ಜನನ-ಮರಣಗಳಾದರೂ ಅವನಿಗೆ ಗೊತ್ತಾಗದೆ ಇರುವುದಿಲ್ಲ. ಕೃಷ್ಣಪ್ಪನನ್ನು ನೋಡಿದರೆ, ಅವನ ಮಾತುಗಳನ್ನು ಕೇಳಿದರೆ, ಯಾರಿಗೂ ಅವನು ತಮ್ಮವನೆಂಬ ಭಾವನೆಯಾಗುತ್ತಿತ್ತು. ಅವನು ಇದುವರೆಗೆ ಒಂದು ಬಿಲ್ಲಿಯನ್ನು ಕೂಡ ಖರ್ಚುಮಾಡಿ ಚಹ ಕುಡಿದದ್ದನ್ನು ಕಂಡವರಿಲ್ಲ. ಆದರೂ ಅವನಿಗೆ ನಿತ್ಯವೂ ಮೂರು ನಾಲ್ಕು ಬಾರಿ ಚಹ-ತಿಂಡಿಗಳು ಆಗುತ್ತಿದ್ದುವು. ಅದಕ್ಕೆ ಹಲವು ಹಂಚಿಕೆಗಳನ್ನು ಮಾಡಿಕೊಂಡಿದ್ದು ಸಮಯವನ್ನರಿತು ಅವುಗಳ ಉಪಯೋಗವಾಗುತ್ತಿತ್ತು.

ಎಲ್ಲಿಯೂ ಚಹಾ ಸಿಕ್ಕದೆ ಇದ್ದ ದಿವಸ, ಶ್ರೀನಿವಾಸನ ಅಂಗಡಿಗೆ ಬಂದು ಪೀಠಿಕೆ ಮುಗಿದ ಮೇಲೆ, ಗಿರಾಕಿಗಳೊಡನೆ ಅವನ ಚಹವನ್ನು ಹೊಗಳುತ್ತಿದ್ದ: “ಶ್ರೀನಿವಾಸನ ಚಹಾದ ಮುಂದೆ ನಿನ್ನ ಇರಾಣಿ ಚಹಾ ಸುಡು! ಈ ಭುವದಲ್ಲಿ ಅವನ ಹಾಗೆ ಚಹಾ ಮಾಡುವವರನ್ನು ಕಾಣೆ,” ಎಂದಕೂಡಲೆ ಶ್ರೀನಿವಾಸ ಅರಳಿಬಿಡುತ್ತಿದ್ದ. ಆ ದಿವಸ ಕೃಷ್ಣಪ್ಪನಿಗೆ ಚಹಾ ಪುಕ್ಕಟೆ. ಅಥವಾ ಒಮ್ಮೊಮ್ಮೆ ತಾನಾಗಿಯೆ ಮುಂದೆ ಬಂದು, “ಏ, ಶ್ರೀನಿವಾಸ, ನೀನು ಸ್ವಲ್ಪ ಸುಧಾರಿಸಿಕೊ. ಪ್ರತಿನಿತ್ಯ ಈ ರೀತಿ ಕಷ್ಟಪಡುವುದನ್ನು ನೋಡಲಾರೆ! ಆ ದೋಸೆಗಳನ್ನೆಲ್ಲ ನಾನೇ ಸುಡುತ್ತೇನೆ; ಒಂದು ದಿನವಾದರೂ ನಿನಗೆ ವಿಶ್ರಾಂತಿಯಾಗಲಿ!” ಎನ್ನುವನು. ಕೆಲಸಮಾಡಿಸಿಕೊಂಡ ಮೇಲೆ ಕೃಷ್ಣಪ್ಪನಿಗೆ ಚಹಾ ತಿಂಡಿ ಕೊಡದಿದ್ದರೆ ಸರಿಯೆ?

ಅಥವಾ ಅವನ ಪರಿಚಯದವರು ಯಾರಾದರೂ ಚಹಾ ಕುಡಿಯಲಿಕ್ಕೆ ಅಲ್ಲಿ ಬಂದಿದ್ದರೆ, ಮೊದಲು “ಒಂದು ಬೀಡಿ ಒಗೆ” ಎನ್ನುತ್ತಿದ್ದ. ಅವರು ಉಪಚಾರಕ್ಕೆ “ಚಹಾ ಬೇಕೆ?” ಎಂದು ಕೇಳಿದಾಗ, ಕುಡಿದಿರದಿದ್ದರೂ “ಬೇಡ, ಬೇಡ, ಸರ್ವಥಾ ಬೇಡ, ಇದೇ ಈಗ ಕುಡಿದಿದ್ದೇನೆ!” ಎನ್ನುವ. ಅರ್ಧ ನಿಮಿಷ ನಿಂತು, “ಹೋಗಲಿ. ಪಙ್ಕ್ತಿಭೇದ ಮಾಡಬಾರದು, ಒಂದು ಲೋಟ ಹೇಳಿಬಿಡು.” ಎನ್ನುತ್ತಿದ್ದ.

ಇಲ್ಲವೆ—ಅಲ್ಲಿದ್ದ ಯಾವನೊಬ್ಬ ಗುರುತಿನವನನ್ನು ಕುರಿತು, “ರಾಮರಾಯನೆಂದರೆ ರಾಜಾ ಮನುಷ್ಯ! ಮಜಾ ಹೊಡೆದದ್ದೇ ಗೊತ್ತು! ನೂರು ರೂಪಾಯಿ ಸಂಪಾದನೆಯಾದರೂ ನೂರೂ ರೂಪಾಯಿ ನೀರು! ಶಾಬಾಸ್! ಇಷ್ಟೆಲ್ಲ ಮಾಡುವುದು ಯಾತಕ್ಕಾಗಿ? ‘ಹಣವಿದ್ದ ಕಾಲಕ್ಕೆ ಋಣವಿಲ್ಲ’ಎಂದ ಹಾಗೆ, ದಮಡಿಗೆ ದಮಡಿ ಕೂಡಿಸುವವರಿಗೆ ನಾನು ಸಾಸಿವೆಕಾಳಿನ ಮರ್ಯಾದೆ ಕೊಡುವುದಿಲ್ಲ! ರಾಜಾ ಮನುಷ್ಯ: ಹೌದೋ, ಅಲ್ಲವೋ?” ಎನ್ನುತ್ತಿದ್ದ. ಇಷ್ಟೆಲ್ಲ ಸ್ತುತಿಮಾಡಿಸಿಕೊಂಡ ಬಳಿಕ ಕೃಷ್ಣಪ್ಪನಿಗೆ ಚಹಾ ಕೊಡದೆ ಇರುವವರು ಯಾರು?

ಅಬಕಾರಿ ಪೋಲೀಸರು ಅಂಗಡಿಗೆ ಬಂದರೆಂದು ಹೇಳಿದೆನಲ್ಲವೆ? ಅದೇ ಹೊತ್ತಿಗೆ ಕಣೆಮನೆಯ ಕೃಷ್ಣಪ್ಪನೂ ಅಲ್ಲಿ ಇದ್ದ. ಈ ಹೊಸಬರನ್ನು ನೋಡಿ ಅವರಿಗೆ ‘ಯಾರು’ ‘ಏನು’ ‘ಎಂತು’

ಮುಂತಾದ ಪ್ರಶ್ನೆಗಳನ್ನು ಹಾಕಿದ. ಪೋಲಿಸರು ತಾವಾರೆಂಬು ದನ್ನು ತಿಳಿಸದೆ, ತಮ್ಮ ಇಂಗಿತವನ್ನು ಹೊರಗೆಡಹದೆ, ಕೆಲವು ಉತ್ತರಗಳನ್ನು ಕೊಟ್ಟರು. ಅದಕ್ಕೆ ಕೃಷ್ಣಪ್ಪ ಹೇಳಿದ:

"ಬಹಳ ಸಂತೋಷ! ಈಗ ನೀವು ಹೋಗಲೇ ಬೇಕೊ?"

ಎರಡನೆಯ ಪೋಲೀಸನಿಗೆ ಏನು ಹೊಳೆಯಿತೋ ಏನೋ! ನಾಟಿದರೆ ನಾಟಲಿ ಎಂದು ಒಂದು ಬಾಣ ಬಿಟ್ಟ.

"ಹೌದು, ನನ್ನ ಹೆಂಡತಿಗೆ ಕೈಯಿಟ್ಟರೆ ಸುಡುವ ಜ್ವರ. ಒಂದಿಷ್ಟು ಗೇರುಹಣ್ಣಿನ ಸರಾಯಿ ಬೇಕಿತ್ತು. ಇಡೀ ಊರೆಲ್ಲ ಹುಡುಕಿದ್ದಾಯಿತು, ಎಲ್ಲೆಲ್ಲಿಯೂ ಸಿಕ್ಕುವುದಿಲ್ಲ. ಏನು ಗತಿ! ಉಶ್!"

"ಪಾಪ! ಎಷ್ಟು ದಿವಸವಾಯಿತು?" ಕೃಷ್ಣಪ್ಪ ಕೇಳಿದ.

"ಮೂರು ದಿವಸವಾಯಿತು." ಎರಡನೆಯ ಪೋಲೀಸ ಉತ್ತರವಿತ್ತ.

ಗೇರುಹಣ್ಣಿನ ಸರಾಯಿಯ ಸುದ್ದಿ ಹೊರಟಕೂಡಲೆ, ಶ್ರೀನಿವಾಸನ ಎದೆ 'ಧಸ್' ಎಂದಿತು. "ಸಕ್ಕರೆ ತರುವುದಿದೆ, ಗಿರಾಕಿಗಳನ್ನು ನೋಡಿಕೊ; ನಾ ಈಗ ಬಂದೆ!" ಎಂದು ತನ್ನ ಕೈಕೆಳಗಿನವನಿಗೆ ಹೇಳಿ ನುಸುಳಿದನು. ಮುಂದೆ ಅವರಿಬ್ಬರಲ್ಲಿ ಮಾತು ನಡೆದುದು ಹೀಗೆ:

ಕೃಷ್ಣಪ್ಪ:— ಅಯ್ಯೋ! ಹಾಗಾದರೆ ತಿಮ್ಮನ ಹುಡುಗನನ್ನು ಕೇಳಬಹುದಲ್ಲ! ನಮ್ಮ ನೆರೆಮನೆಯ ಸೀತಮ್ಮ ಬಾಣಂತಿ ಯಾದಾಗ, ಗೇರುಹಣ್ಣಿನ ಸರಾಯಿಯನ್ನು ತಿಮ್ಮನ ಹುಡುಗನ ಕಡೆಯಿಂದ ತಂದುಕೊಟ್ಟರೆಂದು ಯಾರೋ ಹೇಳುತ್ತಿದ್ದರು. ಅವನನ್ನು ಕೇಳಿದರೆ ಬಹುಶಃ ಕೆಲಸವಾಗಬಹುದು. ಬೇಕಾದರೆ ನಾನು ಅವನ ಮನೆಯನ್ನು ತೋರಿಸುತ್ತೇನೆ.

೨ನೆಯ ಪೋಲಿಸ್:— ಒಂದಿಷ್ಟು ಸಿಕ್ಕಿದ್ದರೆ ಜೀವ ಉಳಿ- ದೀತು! ತೋರಿಸಿರಿ, ಎಲ್ಲಿದೆ ಅವನ ಮನೆ? ಈ ಬಿಸಿಲಲ್ಲಿ ಬೇರೆ ಊರಿಗೆ ಹೋಗುವುದಾದರೂ ತಪ್ಪೀತು!

ಕೃಷ್ಣಪ್ಪ:— ಬಹಳ ದೂರವಿಲ್ಲ. ನಡೆಯಿರಿ!

ಹೊರಗೆ ಹೋದ ಶ್ರೀನಿವಾಸನಿನ್ನೂ ಮರಳಿ ಬಂದಿರಲಿಲ್ಲ.

ಗದ್ದೆಗಳನ್ನೂ ಮರಳಿನ ದಿಣ್ಣೆಗಳನ್ನೂ ದಾಟಿ ಮೂವರೂ ಒಕ್ಕಲಿಗರ ಕೇರಿಗೆ ಬಂದರು. ಅಲ್ಲಿ ಹೆಚ್ಚಿನ ಗದ್ದಲವಿರಲಿಲ್ಲ. ಗಂಡಸರು ದುಡಿತಕ್ಕೆ ಹೋಗಿದ್ದರು; ಹೆಂಗುಸರು ಒಲೆಯ ಮುಂದೆ ಕುಳಿತು ಪಕ್ಕದ ಮನೆಯ ಹೆಂಗುಸರೊಡನೆ ಮಾತ- ನಾಡುತ್ತ ಗಂಜಿ ಬೇಯಿಸುತ್ತಿದ್ದರು. ಕೆಲವು ಸಣ್ಣ ಹುಡುಗರು ಕೋಲುಗಳನ್ನು ಕಾಲುಗಳ ಸಂದಿನಲ್ಲಿ ಸಿಕ್ಕಿಸಿಕೊಂಡು ಕುದುರೆ ಆಟ ಆಡುತ್ತಿದ್ದರು. ಕೆಲವರು ಮಾವಿನ ಮರದ ಮಿಡಿಗಳಿಗೆ ಕಲ್ಲೆಸೆಯುತ್ತಿದ್ದರು. ಕೂಲಿಗೆ ಹೋಗದ ಮುದುಕರು ಎಲೆ- ಅಡಕೆಯನ್ನು ಕುಟ್ಟಿ ಪುಡಿಮಾಡುತ್ತಿದ್ದರು.

ಇವರು ತಿಮ್ಮನ ಮನೆಗೆ ಬಂದಾಗ ಅಲ್ಲಿ ಯಾರೂ ಕಾಣಿಸ ಲಿಲ್ಲ. ಜಗುಲಿಯ ಮೇಲೆ ಒಂದು ಬೀಸುವ ಕಲ್ಲೂ ಎರಡು ಒಡಕು ಮಡಕೆಗಳೂ ಮೀನು ಹಿಡಿಯುವ ಗೂಳಿಯೂ ಸಿಬ್ಬಲೂ ಇದ್ದುವು. ಬಾಗಿಲು ತೆರೆದಿತ್ತು. ಅಂಗಳದಲ್ಲಿ ಕೋಳಿಗಳೆರಡು ಒಂದನ್ನೊಂದು ಅಟ್ಟಿಕೊಂಡು ಓಡಾಡುತ್ತಿದ್ದುವು. ಕೃಷ್ಣಪ್ಪ ಒಳಗೆ ಇಣಿಕಿ ನೋಡಿ, "ತಿಮ್ಮನ ಹುಡುಗ! ಏ, ತಿಮ್ಮನ ಹುಡುಗ!" ಎಂದು ಒದರಿದ.

"ತಿಮ್ಮನ ಹುಡುಗ ಇಲ್ಲವೇನೆ?" "ಇಲ್ರೋ, ಇಲ್ಲ— ಯಾಕೆ?" ಹೆಣ್ಣಿನ ಧ್ವನಿಯೊಂದು ಒಳಗಿನಿಂದಲೆ ಬಂದಿತು.

ಕೃ:— ಏನೂ ಇಲ್ಲ. ಒಂದು ಕೆಲಸವಾಗಬೇಕಿತ್ತು.

ತಿಮ್ಮನ ಹುಡುಗನ ಹೆಂಡತಿ ಹೊರಗೆ ಬಂದಳು.

ಕೃ:— ಪಾಪ! ಇವರ ಹೆಂಡತಿಗೆ ಬಹಳ ಸೀಕು! ಒಂದಿಷ್ಟು ಗೇರುಹಣ್ಣಿನ ಸರಾಯಿ ಬೇಕಿತ್ತು!

ತಿ. ಹು. ಹೆಂ:— ಅಯ್ಯೋ, ದ್ಯಾವ್ರೆ! ಇಲ್ಲಿ ಹ್ಯಾಂಗೆ ಗೇರುಹಣ್ಣಿನ ಸರಾಯಿ ಬರಬೇಕು?

ಕೃ:— ಮೊನ್ನೆ ಸೀತಮ್ಮ ಬಸನಾದಾಗ, ಇಲ್ಲಿಂದಲೇ ತೆಗೆದು ಕೊಂಡು ಹೋಗಿದ್ದರಂತೆ. ನೋಡು, ಸ್ವಲ್ಪ ನೋಡು! ಪರ- ಸ್ಥಳದಿಂದ ಬಂದಿದ್ದಾರೆ!

೨ನೆಯ ಪೋ.:— ಊರೆಲ್ಲ ಹುಡುಕಿದ್ದಾಯಿತು—ಅವಳ ಜೀವ ಹ್ಯಾಂಗಾದರೂ ಬದ್ಕ್ಲಿ! ಉಶ್!

ಅರಿಯದ ಹೆಣ್ಣಿನ ಕರುಳು ಕರಗಿತು. ಆದರೂ ಮೋರೆಯ ಮೇಲೆ ಅನುಮಾನವಿದ್ದಿತು.

ಕೃ:— ಬೇಕಾದರೆ ನಾನೇ ಅದರ ಕಿಮ್ಮತ್ತು ಕೊಟ್ಟು- ಬಿಡುತ್ತೇನೆ.

ತಿ. ಹು. ಹೆಂ.:— ದುಡ್ಡುಗಿಡ್ಡು ಬ್ಯಾಡ್ರಾ. ನೋಡ್ತೇನೆ ನಿಲ್ಲಿ! ಒಳಗೆ ಹೋಗಿ ಬಂದು ಸೀಸೆ ತಂದು ಹೇಳಿದಳು: "ಇದೇ ಇಷ್ಟು ಉಳದದೆ. ಸಾಲೂದು! ಜರ ಗುಣಾ ಆದ್ರೆ ಸಾಕು!"

ಕೃ:— ಶಾಬಾಸ್.

೨ನೆಯ ಪೋ.:— ತಿಮ್ಮನ ಹುಡುಗ ಎಷ್ಟು ಹೊತ್ತಿಗೆ ಬರುವ?

ತಿ. ಹು. ಹೆಂ.:— ಕಾನಳ್ಳಿಗೆ ಹೋಗವ್ನೆ, ಮಜ್ಜನಕೆ ಬರಬೈದು!

ಕೃ:— ಹೂಂ.

ಅಲ್ಲಿಂದ ಕೆಲವು ಅಂತರ ಬಂದ ಬಳಿಕ ಪೋಲಿಸರು ಕೃಷ್ಣಪ್ಪನಿಗೆ—

"ನಿಮ್ಮಿಂದ ಬಹಳ ಉಪಕಾರವಾಯಿತು. ನೀವಿಲ್ಲದೆ ಹೋದರೆ ಇದು ಸಾಧ್ಯವೇ ಆಗುತ್ತಿದ್ದಿಲ್ಲ," ಎಂದು ಹೇಳಿ, ತಾವು ಮಧ್ಯಾಹ್ನದ ಮೋಟಾರಿನಿಂದ ಮರಳುವೆವೆಂದು ಸೂಚಿಸಿದರು. ಹಾಗೂ ಪರ್ಯಾಯವಾಗಿ ತಿಮ್ಮನ ಹುಡುಗನ ಚಹರೆಪಟ್ಟಿಯನ್ನು ಮನಸ್ಸಿನಲ್ಲಿ ಮೂಡಿಸಿಕೊಂಡರು.

ಕೃ:— "ಛೆ! ಅದರಲ್ಲೇನು? ಒಬ್ಬರಿಗೊಬ್ಬರು ನೆರವಾಗು ವುದು ನ್ಯಾಯ! ಒಳ್ಳೇದು, ಬರುತ್ತೇನೆ. ಮಧ್ಯಾಹ್ನವಾಯಿತು!"

ಎಂದು ಕೃಷ್ಣಪ್ಪ ಹೊರಟ. ಅವನು ಕಣ್ಮರೆಯಾದಕೂಡಲೆ, ಪೋಲೀಸರು ಮುಂದಿನ ಹಂಚಿಕೆಯನ್ನು ಕುರಿತು ಯೋಚಿಸ-ತೊಡಗಿದರು.

೧ನೆಯ ಪೋ:— ಇದು ತಿಮ್ಮನ ಹುಡುಗನಿಗೆ ಗೊತ್ತಾದರೆ, ಅವನ ಹೆಣ್ಣು ಸಾರಾಯಿಕೊಟ್ಟನೆಂದು ಹೇಳಿದರೆ ಈ 'ಕೇಸು' ಹಿಡಿಯುವುದು ಸಾಧ್ಯವಿಲ್ಲ. ಆದ್ದರಿಂದ ಅವನು ಮನೆಗೆ ಹೋಗುವುದರೊಳಗೇ, ಅವನ ಬಾಯಿಂದ ಆದಷ್ಟು ಸಮಾಚಾರ-ವನ್ನು ಸಂಗ್ರಹಿಸಬೇಕು.

ಇನ್ನೊಬ್ಬನೂ ಒಪ್ಪಿದ. ಇಬ್ಬರೂ ಅಲ್ಲಿಯೆ ಸಮೀಪದಲ್ಲಿದ್ದು, ತಿಮ್ಮನ ಹುಡುಗನನ್ನು ದಾರಿಯಲ್ಲಿಯೆ ಸಂಧಿಸಿ, ಅವನಿಗೆ ಗೊತ್ತಿದ್ದ ವಿಷಯವನ್ನು ತಿಳಿದುಕೊಳ್ಳಬೇಕೆಂದು ತೀರ್ಮಾನಿಸಿ, ಅತ್ತಿತ್ತ ಸುಳಿದಾಡಿ, ಅರ್ಧ ಕೊಳಗ ಅವಲಕ್ಕಿ, ಅರ್ಧ ತೆಂಗಿನ-ಕಾಯಿ, ಒಂದು ದಮಡಿಯ ಉಪ್ಪು, ಹಸಿಮೆಣಸು ಕೊಂಡು, ತಿಮ್ಮನ ಹುಡುಗನ ದಾರಿಗೆ ದೂರವಲ್ಲದ ಒಂದು ಹಾಳುಬಿದ್ದ ಮನೆಯ ಗೋಡೆಯ ನೆರಳಿನಲ್ಲಿ ಕುಳಿತು, ಅವಲಕ್ಕಿಯನ್ನು ಅಗಿಯುತ್ತ, ಹರಟುತ್ತ ನಿರೀಕ್ಷಿಸಹತ್ತಿದರು.

ಆರುತಾಸಿಗೆ, ಬೆವರೊರಸಿಕೊಳ್ಳುತ್ತ, ಕಂಕುಳಲ್ಲಿ ಒಂದು ಸಣ್ಣ ಗಂಟನ್ನು ಇರುಕಿಸಿಕೊಂಡು, ಉತ್ತರದಿಂದ ತಿಮ್ಮನ ಹುಡುಗ ಬರುತ್ತಿದ್ದುದು ಇವರಿಗೆ ಕಂಡಿತು. ಅವಲಕ್ಕಿ-ಕಾಯಿಯನ್ನು ಪಂಚೆಯ ಅಂಚಿಗೆ ಬಿಗಿದು ಪೋಲೀಸರು ಅವನನ್ನು ಎದುರಿಸಿದರು.

೧ನೆಯ ಪೋ:— ತಿಮ್ಮನ ಹುಡುಗ ಅಂದ್ರೆ ನೀನೇ ಏನೊ?

ತಿ. ಹು:— ಹೌದು!

೧ನೆಯ ಪೋ:— ಮೊದಲೇ ಹೇಳಿಬಿಡು; ಖರೆ ಹೇಳ್ತೀಯೋ, ಸುಳ್ಳೊ?

೨ನೆಯ ಪೋ:— ನಮಗೆಲ್ಲ ಗೊತ್ತಿದೆ; ಎಲ್ಲಾ ನೀ ಹೇಳಿಬಿಡು, ನಿನಗೆ ಮಾಫೀಮಾಡಿಸೋಣ!

ತಿ. ಹು:— ನೀವು ಹೇಳೂದಾದರೂ ಏನು?

೧ನೆಯ ಪೋ:— ಆ ಗಂಟಿನಲ್ಲೇನೊ?

ತಿ. ಹು:— ಗೇರುಬೀಜ; ನಮ್ಮ ಒಡೆಯನ ಹಕ್ಕಲಿಗೆ ಹೋಗಿದ್ದೆ. ಅಲ್ಲಿಂದ—

೧ನೆಯ ಪೋ:— ಸುಳ್ಳು ಬೊಗಳಬೇಡ! ಈ ಬಾಟ್ಲಿಯಲ್ಲಿದ್ದ ಸರಾಯಿ ಎಲ್ಲಿಂದ ಬಂತು?

ತಿ. ಹು:— ಅದು— ನಮ್ಮ— ಅಂ— ಅದು—

೧ನೆಯ ಪೋ:— ಏನು? ನೀನು ಹಾಗೆಯೆ ಹಾದಿಗೆ ಬರುವವನಲ್ಲ. ಏಳು, ಆ ಹಾಳುಮನೆಯ ನೆರಳಿಗೆ ಹೋಗುವ; ಇಲ್ಲಿ ಬಹಳ ಬಿಸಿಲು!

ಇಬ್ಬರೂ ತಿಮ್ಮನ ಹುಡುಗನ ರಟ್ಟೆಹಿಡಿದು, ದರದರ ಎಳೆದು ಒಯ್ದರು.

ಅಲ್ಲಿ ಏನೇನು ನಡೆಯಿತೆಂಬುದು ಚೆನ್ನಾಗಿ ಗೊತ್ತಿಲ್ಲವಾದರೂ, ಮೈಮೇಲಿನ ಬಾಸುಂಡೆಗಳ ಮೇಲಿಂದಲೂ ಎರಡುಕಡೆ ರಕ್ತವು ಹಸಿರುಗಟ್ಟಿದ್ದರ ಮೇಲಿಂದಲೂ ತಿಮ್ಮನ ಹುಡುಗನಿಗೆ "ತೃತೀಯಾಂಶ"ದ ಚಿಕಿತ್ಸೆಯಾಗಿರಬೇಕೆಂದು ಕಂಡವರು ಹೇಳುತ್ತಿದ್ದರು. ಪೋಲೀಸರು ಗೇರುಹಣ್ಣಿನ ಸರಾಯಿಯ ಸಮಾಚಾರವನ್ನೆಷ್ಟೋ ತಿಮ್ಮನ ಹುಡುಗನ ಬಾಯಿಯಿಂದ ಕಕ್ಕಿಸಿದರು :

ನಮ್ಮೂರಿನಿಂದ ಉತ್ತರಕ್ಕೆ ಎರಡು ಹರದಾರಿಗಳ ಮೇಲೆ, ಗುಡ್ಡವೊಂದು ಅರಬೀಸಮುದ್ರದ ದಂಡೆಯವರೆಗೂ ಕಾಲುಚಾಚಿ ಎದ್ದುನಿಂತಿದೆ. ಅಲ್ಲಿಂದ ಗೋವಾ ಪ್ರಾಂತದ ಗಡಿಗೆ ಬಹಳ ದೂರವಿಲ್ಲ. ಆ ಗುಡ್ಡದಲ್ಲಿ ಮನೆಮಾರು ಇಲ್ಲವಂತೆ. ಗೇರು, ಮಾವು, ಗಾಳಿ, ಹೊನ್ನೆ ಮುಂತಾದ ಮರಗಳು ತಾವೇ ತಾವಾಗಿ ತುಂಬಿಕೊಂಡು, ಹಕ್ಕಿಪಕ್ಕಿಗಳಿಗೂ ನರಿ-ಕಾಗೆಗಳಿಗೂ ಕೆಲವು ದುಷ್ಟರಿಗೂ ಆಶ್ರಯ-ವನ್ನೀಯುತ್ತಿವೆ. ಅಲ್ಲಿ ಯಾವುದೊ ರಾಜನ ಕಾಲದ ಮುರುಕು ಮನೆಯೊಂದು ಇರುವುದಂತೆ. ಅದೇ ಮನೆಯಲ್ಲಿ ಗೇರುಹಣ್ಣಿನ ಸರಾಯಿ ಇಳಿಸುವ ಭಟ್ಟಿ ಇರಬಹುದೆಂದು ತಿಮ್ಮನ ಹುಡುಗನ ಎಣಿಕೆ. ಬೇಸಗೆಯಲ್ಲಿ ಗೇರುಹಣ್ಣಿನ ಸುಗ್ಗಿಯ ಸಮಯ; ಪೇದ್ರು-ವೆಂಬ ಘಾಂಡಿಗ ಆ ಮನೆಯಲ್ಲಿ ಆಗಾಗ ಸರಾಯಿ ತಯಾರಿಸುತ್ತಿ-ದ್ದನಲ್ಲದೆ, ಗೋವಾ ಪ್ರಾಂತದಲ್ಲಿ ಅಗ್ಗದಲ್ಲಿ ದೊರೆಯುವ ಬೇರೆ ಸರಾಯಿಗಳನ್ನೂ ಅತ್ತರುಗಳನ್ನೂ ಕೆಲವು ನಿಷಿದ್ಧವಾದ ಔಷಧ-ಗಳನ್ನೂ ಹೊಳೆಯ ಮಾರ್ಗವಾಗಿ ಈಚೆಗೆ ತಂದು, ಅಲ್ಲಲ್ಲಿ ಇರುವ ತನ್ನ ಮಧ್ಯಸ್ಥರಿಗೆ ಒದಗಿಸುತ್ತಿದ್ದನಂತೆ. ಮಧ್ಯಸ್ಥರು ಅವನ್ನು ತಮ್ಮ ಗಿರಾಕಿಗಳಿಗೆ ಮಾರುತ್ತಿದ್ದರು. ಇದೆಲ್ಲ ಪೋಲೀಸರಿಗೆ ಗೊತ್ತಾಯಿತು.

೧ನೆಯ ಪೋ:— ಈ ಪೇದ್ರು ಎಂಬವ ಯಾವಾಗ ಇತ್ತಲಾಗಿ ಬರುತ್ತಿರುತ್ತಾನೆ?

ತಿ. ಹು:— ನಾಲ್ಕೈದು ದಿನಗಳಿಗೊಮ್ಮೆ, ರಾತ್ರಿ ಹೊತ್ತು ಗುಡ್ಡದಿಂದ ಈಚೆಗೆ ದೋಣಿಯಲ್ಲಿ ಬಂದು, ಅಲ್ಲಲ್ಲಿ ಕಾಯುತ್ತಿರುವ ಜನಗಳಿಗೆ ಕೊಟ್ಟು ಬೆಳಗಾಗುವುದರೊಳಗೆ ಹೋಗಿಬಿಡುತ್ತಾನೆ.

೧ನೆಯ ಪೋ:— ಎಲ್ಲಿಗೆ ಹೋಗುತ್ತಾನೆ? ಅವನ ಮನೆ ಎಲ್ಲಿ?

ತಿ. ಹು:— ಅದು ನನಗೆ ಗೊತ್ತಿಲ್ಲ!

೧ನೆಯ ಪೋ:— ನಿನಗೆ ಎಲ್ಲಿ ಸಿಕ್ಕುತ್ತದೆ, ಸರಾಯಿ?

ತಿ. ಹು:— ಮುಕರಿಗಳ ಕೇರಿಯನ್ನು ದಾಟಿ, ಕಾಮನ ಕೋಡಿಯ ನಾಗಪ್ಪ ಸೆಟ್ಟಿಯ ಹತ್ತಲುಂಟಲ್ಲ, ಅಲ್ಲಿ—

೧ನೆಯ ಪೋ:— ಇಲ್ಲಿಂದ ಎಷ್ಟು ದೂರವಾದೀತು?

ತಿ. ಹು:— ಒಂದು ಹರದಾರಿಯಾಗಬಹುದು!

೧ನೆಯ ಪೋ:— ನಡೆ, ಆ ಸ್ಥಳವನ್ನು ತೋರಿಸು!

೨ನೆಯ ಪೋ:— ಸಾಕಪ್ಪಾ! ಇನ್ನೊಂದು ಹರದಾರಿ ನಡೆಯ-ಬೇಕೆ? ನನ್ನ ಕಾಲು ಸೋತುಹೋಯಿತು! ಆಗದ ಹೋಗದ

ಕೆಲಸದಲ್ಲಿ ಕೈ ಹಾಕಬೇಡವೆಂದರೆ ನೀನೆಲ್ಲಿ ಕೇಳುತ್ತೀಯೆ ? ಉಶ್ ! ಈ ಧಾಂಡಿಗರ ತಳ್ಳಿಗೆ ಹೋಗಕೂಡದು !

೧ ನೆಯ ಪೋ :— ನಿನ್ನ ಮಾತನ್ನು ಕೇಳಿಬಿಟ್ಟರೆ ಸರಿ! ಅರ್ಜಿ ಸಾಹೇಬರ ಕೈಗೆ ಸಿಕ್ಕಿರುವಾಗ, ಏನಾದರೂ ಪತ್ತೆ ಮಾಡದೆ ಹಾಗೆಯೇ ಈ ಸುಟ್ಟಮೋರೆ ತೆಗೆದುಕೊಂಡು ಅವರನ್ನು ಕಾಣುವುದು ಹೇಗೆ? ಇಷ್ಟು ಕಷ್ಟವಾಗಿದೆಯಂತೆ; ಅವರ ಕೂಡ ಇನ್ನೊಂದಿಷ್ಟು ! ಬೇಟೆ ಸಿಕ್ಕರೂ ಸಿಕ್ಕಬಹುದು.

ಮೂವರೂ ನಾಗಪ್ಪಸೆಟ್ಟಿಯ ಹಿತ್ತಲಕಡೆಗೆ ಹೊರಟರು. ಒಕ್ಕಲಿಗರ ಮನೆಗಳನ್ನು ದಾಟಿ ಒಂದೆಡೆ, ಯಾರದೋ ಒಂದು ತೆಂಗಿನ ಮರದ ಮೇಲೆ ತಿಮ್ಮನ ಹುಡುಗನನ್ನು ಹತ್ತಿಸಿ, ಮೂರು ಸೀಯಾಳಗಳನ್ನು ತೆಗೆಯಿಸಿ, ಕುಡಿದು ಕಾಮನ ಕೋಡಿಯ ಬಳಿಗೆ ಬಂದರು.

ತಿ. ಹು :— ಇಗೊಳ್ಳಿ. ಶೇದ್ರುವು ಹೀಗೆಯೆ ದೋಣಿಯನ್ನು ಸಾಗಿಸಿಕೊಂಡು ಹೋಗುತ್ತಾನೆ. ಸೆಟ್ಟಿಯ ಹಿತ್ತಲು, ಅದೆ.... ಅಲ್ಲಿ, ಕೂ ಹಾಕಿದರೆ ಕೇಳಿಸುವಷ್ಟು ದೂರ !

೧ ನೆಯ ಪೋ :— ಅದೇ ಮುಂದೆ ಕಾಣುವುದೇ ಆ ಗುಡ್ಡವೊ ?

ತಿ ಹು :— ಹೌದು !

ಹೀಗೆ ಮಾತು-ಕತೆ ನಡೆಯುತ್ತಿರುವಾಗಲೆಲ್ಲ ತಿಮ್ಮನ ಹುಡುಗನ ತಲೆಯಲ್ಲಿ ಒಂದೇ ಒಂದು ವಿಚಾರ. ಈ ಯಮದೂತರ ಕೈಯಿಂದ ಪಾರಾಗುವ ಹಂಚಿಕೆಯೇನು ?

೨ ನೆಯ ಪೋ :— ಏನು ಕಲ್ಲು-ಮುಳ್ಳು ! ಇಂಥಲ್ಲಿ ಹಾವುಗಳು ಇರುವುದು ಬಹಳ ! ಸಾಕಪ್ಪ, ನಿನ್ನ ಸಂಗತಿಗೆ ಬಂದು ಯಾವ ಯಾವ ಯಾತನೆಯನ್ನು ಅನುಭೋಗಿಸಬೇಕೊ ಏನೊ ! ಉಶ್ !

೧ ನೆಯ ಪೋ :— ಮುಳ್ಳು ! ಹಾಡೆಹಗಲಲ್ಲಿ ಹಾವಿನ ಹೆದರಿಕೆಯೆ ? ಬೇಕಾದರೆ ಕೈಯಲ್ಲಿ ಒಂದು ಕೋಲು ಹಿಡಕೊ !

ತಿ. ಹು :— ಅಬ್ಬಾ ! ಅದ್ಯಾರ ದೋಣಿ? ಅಲ್ಲೊಂದು ಹಾಯಿ ಕಾಣಿಸುತ್ತದೆಯಲ್ಲ! ಅದೇ, ಆ ದೂರದಲ್ಲಿ!

ಪೋ :— ಎಲ್ಲಿ ?

ತಿ. ಹು :— ಅದೋ ಅಲ್ಲಿ! ಬಂದೆ, ನೀವು ಮುಂದಾಗಿ! (' ಮೂತ್ರಶಂಕೆ ಮಾಡಿ ಬರುತ್ತೇನೆ ' ಎಂದು ಸೂಚಿಸಿದ.) ಪೋಲೀಸರು ಹಣೆಯ ಮೇಲೆ ಕೈ ಮರೆಮಾಡಿ, ತಿಮ್ಮನ ಹುಡುಗ ಕೈ ಮಾಡಿ ತೋರಿಸಿದ ದಿಕ್ಕಿನಲ್ಲಿ ನೋಡಹತ್ತಿದರು. ಐದಾರು ನಿಮಿಷ ನೋಡಿದರೂ ಎಲ್ಲಿಯೂ ಹಾಯಿಯೂ ಕಾಣಿಸಲಿಲ್ಲ; ದೋಣಿಯೂ ಕಾಣಿಸಲಿಲ್ಲ. ಹಿಂದೆ ತಿರುಗಿ ನೋಡಿದರು. ತಿಮ್ಮನ ಹುಡುಗ ಅಲ್ಲಿರಲಿಲ್ಲ. 'ಈಗ ಬಂದಾನು ಆಗ ಬಂದಾನು' ಎಂದು ಕಾಲುತಾಸು ನಿಂತರು. ಆದರೆ ತಿಮ್ಮನ ಹುಡುಗನ ಸುಳಿವೇ ಇಲ್ಲ; ಅವನು ಮರಗಳ ಹಾಗೂ ಗುಡಿಸಿಲುಗಳ ಮರೆಯಲ್ಲಿ ಜಾರಿ, ಫರಾರಿಯಾಗಿಬಿಟ್ಟಿದ್ದ.

೧ ನೆಯ ಪೋ :— ತಿಮ್ಮನ ಹುಡುಗ ಓಡಿಹೋಗಿಬಿಟ್ಟನೆಂದು ಕಾಣುತ್ತದೆ !

೨ ನೆಯ ಪೋ :— ನಾನು ಮೊದಲೇ ಹೇಳಲಿಲ್ಲವೆ—ಇದರಲ್ಲಿ ಬೀಳಬೇಡವೆಂದು ? ಇಸ್ವಾಸಘಾತ ಮಾಡಿದ !

೧ ನೆಯ ಪೋ :— ಏ ಗೊಡ್ಡು ! ನೀ ಯಾವ ಶಾಲೆಗೆ ಹೋಗಿದ್ದೆ ? ಹೇಳು, 'ವಿಸ್ವಾಸ 'ಅಂತ ಹೇಳಲಿಕ್ಕೂ ಬರುವುದಿಲ್ಲ !

೨ ನೆಯ ಪೋ :— ವಿಸ್ವಾಸ ಎಂದರೂ ಅಷ್ಟೆ, ಗಿಸ್ವಾಸ ಎಂದರೂ ಅಷ್ಟೆ ! ತಿಮ್ಮನ ಹುಡುಗ ತಪ್ಪಿಸಿಕೊಂಡನಲ್ಲ! ನಿನ್ನಿಂದ ಆಗದು, ಈ ಕೆಲಸ ಅಂದ್ರೆ—

೧ ನೆಯ ಪೋ :— ಸುಮ್ಮನಿರೊ, ಅಪಶಕುನ ಆಡಬೇಡ ! ಹೋಗಲಿ, ಎಲ್ಲಿಗೆ ಹೋಗುತ್ತಾನೆ? ಇದರ ಬುಡಮೇಲು ಮಾಡದಿದ್ದರೆ ನಾನೇಕೆ! ಏಳು, ಆ ಸೆಟ್ಟಿಯ ಹಿತ್ತಲು ಯಾವುದು, ನೋಡುವ !

ಎರಡನೆಯ ಪೋಲೀಸ ಕೈಯಲ್ಲಿ ಕೋಲುಹಿಡಿದಿರದಿದ್ದರೂ ಕಾಲ ಬಳಿ ನೋಡುತ್ತ ' ಹಾವು ಇಲ್ಲವಷ್ಟೆ ! ' ಎಂದು ಗಟ್ಟಿ ಮಾಡಿಕೊಂಡೇ ಹೆಜ್ಜೆ ಹಾಕಿದ. ಮುಕರಿಗಳ ಮಕ್ಕಳಿಂದ ತಿಳಿದುಕೊಳ್ಳುತ್ತ, ಇಬ್ಬರೂ ಸೆಟ್ಟಿಯ ಹಿತ್ತಲಕ್ಕೆ ಬಂದು, ಆ ಸ್ಥಳವನ್ನೆಲ್ಲ ನೋಡಿದರು. ಹಿತ್ತಲಿನ ಮೂಡಣ ದಿಕ್ಕಿಗೆ ಇದ್ದ ಹನುಮಂತನಾಯಕನಲ್ಲಿ ಹೋಗಿ, ರಾತ್ರಿಯ ಊಟದ ವ್ಯವಸ್ಥೆಯನ್ನು ಮಾಡಿಕೊಡುವಂತೆ ಬೇಡಿಕೊಳ್ಳುವುದೆಂದೂ, ಆ ರಾತ್ರಿ ಹಿತ್ತಲಲ್ಲೇ ಇದ್ದು ಹೊಳೆಯ ಕಡೆಗೆ ಕಣ್ಣಿಡಬೇಕೆಂದೂ ನಿಶ್ಚಯವಾಯಿತು.

ಹೊತ್ತು ಕಂದುತ್ತಲೆ ಹನುಮಂತನಾಯಕನ ಅಂಗಳದ ಒಂದು ಮೂಲೆಯಲ್ಲಿ ಮೂರು ಕಲ್ಲುಗಳನ್ನು ಹೂಡಿ, ತರಗೆಲೆ- ಮಡಲುಗಳನ್ನು ಸುಟ್ಟು ಅಡುಗೆಮಾಡಲಾರಂಭಿಸಿದರು. ಎರಡನೆಯ ಪೋಲೀಸ ನಾಯಕನ ಸೊಸೆಯೊಂದಿಗೆ ಚೇಷ್ಟೆಮಾಡುತ್ತ, ನಗುತ್ತ, ಅವಳ ಮಕ್ಕಳನ್ನು ಬೆನ್ನಿನ ಮೇಲೆ ಏರಿಸಿಕೊಂಡು ಕುದುರೆಯಾಗಿ ರಮಿಸಿದನು.

ಗಂಜಿ ಕುಡಿಯುವಾಗ ಮೊದಲನೆಯ ಪೋಲಿಸ, ನಡು-ನಡುವೆ ಬಿಟ್ಟು ಬಿಟ್ಟು ನೆಲವನ್ನು ದಿಟ್ಟಿಸುತ್ತಿದ್ದ. ಎರಡನೆಯವನಿಗೆ ಯೋಚನೆಯಾಯಿತು : " ಏನು ? ಯೋಚನೆಮಾಡುತ್ತೀಯಾ? ಮನೆಯ ನೆನಪಾಯಿತೆ ? " ಎಂದ.

" ಏ ! ನನಗೊಂದು ಹೊಸ ಉಪಾಯ ತೋರ್‍ತದೆ ! ಗುಪ್ತಪೋಲೀಸರ ಹಾಗೆ ಆಗಬೇಕು ! "ಎಂದು ಮೊದಲನೆಯವನು ಹೇಳಿ, ಗಂಜಿಯನ್ನು ಮುಗಿಸಿ ಅಂಗಿಯನ್ನು ಸಿಕ್ಕಿಸಿಕೊಂಡು ಗಡಬಿಡಿಯಿಂದ ಎದ್ದ:

" ನೀನು ಇಲ್ಲೇ ಇರು, ಒಂದು ದೊಡ್ಡ ಕೆಲಸಕ್ಕಾಗಿ ಹೋಗಬೇಕಾಗಿದೆ. ದೀಪ ಹಚ್ಚುವುದರೊಳಗೆ ಬಂದುಬಿಡುತ್ತೇನೆ " ಎಂದು ಹೊರಟೇ ಬಿಟ್ಟ. ಎರಡನೆಯವನಿಗೆ ಏನೂ ತಿಳಿಯದೆ

ಇದ್ದುದರಿಂದ, ಅವನು ಕಣ್ಮರೆಯಾಗುವ ವರೆಗೆ ಮಿಕಿಮಿಕಿ ನೋಡುತ್ತ ಕುಳಿತ. ಕೆಲವು ನಿಮಿಷಗಳಲ್ಲಿ ಮತ್ತೆ ಹನುಮಂತ-ನಾಯಕನ ಮೊಮ್ಮಕ್ಕಳೊಡನೆ ಆಟವಾಡತೊಡಗಿದ.

ಇತ್ತ ಮೊದಲನೆಯ ಪೋಲಿಸ ನೇರವಾಗಿ ಶ್ರೀನಿವಾಸನ ಅಂಗಡಿಗೆ ಬಂದು, " ಕೃಷ್ಣಪ್ಪ ಇದ್ದಾರೇನ್ರಿ ? " ಎಂದು ಕೇಳಿದ. ಶ್ರೀನಿವಾಸನಿಗೆ ಮತ್ತೆ ಗಾಬರಿಯಾಯಿತು. ಅವನೆಂದ: " ಇದೇ ಈಗ ಇಲ್ಲಿಂದ ಹೋದರು. ಆಚೆ ಅಂಗಡಿಯಲ್ಲಾಗಲಿ, ವಿಠ್ಠಲ ಕಮ್ತಿಯ ಅಂಗಡಿಯಲ್ಲಾಗಲಿ ಇರಬಹುದು ! "

ಕೃಷ್ಣಪ್ಪ ಇಷ್ಟರೊಳಗೇ ತಾನು ಗೇರು ಸರಾಯಿ ಕೊಡಿಸಿದ ಸಂಗತಿಯನ್ನು ಜಾಹೀರು ಮಾಡಿಬಿಟ್ಟಿದ್ದ. ಸಂಜೆಯಾಗುವುದರ ಲ್ಲಿಯೆ ಊರಲ್ಲೆಲ್ಲ, ಅನೇಕ ಗುಪ್ತಪೋಲಿಸರು ವಿಧವಿಧದ ವೇಷದಲ್ಲಿ ಸಂಚರಿಸುತ್ತಿದ್ದಾರೆಂತಲೂ, ಈಗಾಗಲೆ ೩-೪ ಜನರನ್ನು ಹಿಡಿದಿದ್ದಾರೆಂತಲೂ, ಅವರಿಗೆ ಗಲ್ಲು ತಪ್ಪಿದರೆ, ೧೦-೧೫ ವರ್ಷ ಕಾರವಾರದ ಜೈಲು ಖಂಡಿತವೆಂದೂ, ಊರಿಗೆ ಕಲಂಕತಂದರೆಂದೂ-ಹಲವು ರೀತಿಯಲ್ಲಿ, ಹಲವು ಜನರು ಗುಲ್ಲೆಬ್ಬಿಸಿದರು. ಮಾಯಾ-ಬಾಜಾರಾದ ಮೆಂಬರುಗಳಾರೂ ಪೇಟೆಗೆ ಕಾಲಿಡಲಿಲ್ಲ. ಶ್ರೀನಿವಾಸ ನ್ಯಯಲ್ಲಿ ಹುಷಾರಿಲ್ಲವೆಂದು ಹೇಳಿ, ಎರಡುಗಂಟೆ ಮೊದಲೇ ಅಂಗಡಿಗೆ ಬಾಗಿಲಿಕ್ಕಿ ಹೊರಟುಹೋದ. ಅನಂತಯ್ಯನೆಲ್ಲೊ— ಮುಂಡಾವರಕ್ಕೋ, ಕುಮುಟೆಗೊ— ಅದೇ ರಾತ್ರಿ ಹೋಗಿದ್ದನಂತೆ. ತಿಮ್ಮನ ಹುಡುಗ ಸಪತ್ನೀಕನಾಗಿ ತನ್ನ ಮಾವನಮನೆಗೆ ಪ್ರಯಾಣ ಬೆಳಸಿದ್ದನಂತೆ.

ಕೃಷ್ಣಪ್ಪ ವಿಠ್ಠಲ ಕಮ್ತಿಯ ಅಂಗಡಿಯಲ್ಲಿ ನಸ್ಯಹಾಕುತ್ತಿದ್ದಾಗ,. ಮೊದಲನೆಯ ಪೋಲಿಸ ಬಂದು ಹೇಳಿದ :

" ಸ್ವಲ್ಪ ಈಚೆ ಬನ್ನಿ ! "

" ಏನು ? ನೀವು ಊರಿಗೆ ಹೋಗಲಿಲ್ಲವೊ ? "

" ಇಲ್ಲ, ಇನ್ನೂ ಒಂದು ಕೆಲಸ ಉಳಿಯಿತು; ಅದಕ್ಕೇ ನಿಮ್ಮನ್ನು ಹುಡುಕಿಕೊಂಡು ಬಂದೆ ! "

ಪೋಲೀಸ ಕೃಷ್ಣಪ್ಪನಿಗೆ, ಮೆಲುದನಿಯಲ್ಲಿ, ತಾವು ಒಂದು ಸರಕಾರಿ ಕೆಲಸಕ್ಕೆ ಬಂದಿರುವೆವೆಂದೂ ಒಬ್ಬ ಕಳ್ಳನನ್ನು ಹಿಡಿಯ ಲಿಕ್ಕೆ ನೆರವಾಗಬೇಕೆಂದೂ, ಸರಕಾರದಿಂದ ಏನಾದರೂ ಮರ್ಯಾದೆ ಮಾಡಿಸೋಣವೆಂದೂ ಕೇಳಿಕೊಂಡನು. ತನಗೆ ಬರುತ್ತಿದ್ದ ಮಹತ್ತ್ವವನ್ನು ಕಂಡು ಕೃಷ್ಣಪ್ಪ ಹಿಗ್ಗಿದ. ಅವನೆಂದ :

" ಸರಕಾರಿ ಕೆಲಸವೆಂದ ಮೇಲೆ ಅಗತ್ಯವಾಗಿ ಸಹಾಯ ಮಾಡಲೇ ಬೇಕು. ಹೇಳಿ, ನನ್ನಿಂದ ಏನಾಗಬೇಕು ?

" ಇಲ್ಲಿ ದಶಾವತಾರದವರು ಬಹಳ ಜನರಿದ್ದಾರಲ್ಲವೆ? "

" ಓಹೊ ! ಆ ವಿಷಯದ ಮಟ್ಟಿಗೆ ಇಲ್ಲಿಯವರ ಕೈ ಹಿಡಿಯು ವವರಿಲ್ಲ ! "

" ಹಾಗಾದರೆ ಅವರಲ್ಲಿ ಹೆಣ್ಣುವೇಷ ಹಾಕುವವರಾರು ? "

" ಮಕ್ಕಿಗದ್ದೆಯ ನರಸಿಂಹ ಭಟ್ಟ ! ಅವನ ಹಾಗೆ ರುಕ್ಮಿಣಿ-ಯನ್ನಾಗಲಿ ದ್ರೌಪದಿಯನ್ನಾಗಲಿ ಮಾಡುವವರು ಈ ಪ್ರಾಂತ-ದಲ್ಲಿ ಯಾರೂ ಇಲ್ಲ! ಸ್ತ್ರೀವೇಷವೆಂದರೆ ಹೂಬೇಹೂಬು ಸ್ತ್ರೀ! "

" ಅಯ್ಯೊ ! ಹಾಗಿದ್ದರೆ ಒಂದು ಉಪಕಾರ ಮಾಡಿ! ಹೆಣ್ಣು ವೇಷ ಹಾಕಿಕೊಂಡು, ಒಂದು ಅರ್ಧಘಂಟೆ ಹೊಳೆಯ ಅಂಚಿಗೆ ಬಂದು ಎರಡು ಮಾತನಾಡಿದರೆ ನಮ್ಮ ಕೆಲಸ ಆದಂತೆ! ಒಂದು ಮಾತು ಕೇಳಿಬಿಡಿ, ಅವರನ್ನ ! "

" ಇಷ್ಟೇ ಅಲ್ಲವೆ! ನರಸಿಂಹ ಒಳ್ಳೆಯ ಹುಡುಗ! ನಾನು ಒಂದು ಮಾತು ಹೇಳಿದರೆ ಇಲ್ಲವೆನಲಿಕ್ಕಿಲ್ಲ! ಆದರೆ ವೀಳ್ಯ-ವಿಲ್ಲದೆ ಅವನು ಬರುವುದು ಹೇಗಿದೆಯೊ! ಕೇಳಿ ನೋಡುವ!"

" ನೋಡುವ, ಕಾಯಾದರೆ ಕಾಯಿ; ಹಣ್ಣಾದರೆ ಹಣ್ಣು ! "

ಅಲ್ಲಿಂದ ಇವರ ಸವಾರಿ ಮಕ್ಕಿಗದ್ದೆಯ ನರಸಿಂಹನ ಮನೆಗೆ ಹೋಯಿತು. ನರಸಿಂಹ ಕಾಲುದೀಪವೊಂದರ ಬಳಿ ಕುಳಿತು ತನ್ನ ಮೂರು ವರ್ಷದ ಮಗುವಿಗೆ " ಸಂಧ್ಯಾಜ್ಯೋತಿ ನಮೋ-ಸ್ತುತೇ " ಎಂದು ಮುಂತಾಗಿ ಹೇಳಿಕೊಡುತ್ತಿದ್ದ. ಬಾಗಿಲಲ್ಲಿ ಸದ್ದಾದುದನ್ನು ಕೇಳಿ, ತಿರುಗಿ ನೋಡಿ, " ಓಹೊ! ಕೃಷ್ಣಪ್ಪ ! ಏನು ? ಇಲ್ಲಿಯ ತನಕ ಒಂದು ಬಿಟ್ಟಿರಿ ! " ಎಂದ.

ಕೃ:— ಈ ಗೃಹಸ್ಥರಿಗೆ ನಿನ್ನಿಂದ ಒಂದು ಉಪಕಾರವಾಗ-ಬೇಕು. ನಿನ್ನ ಕಿವಿಯಲ್ಲಿ ಹೇಳುತ್ತೇನೆ, ಬಾ !

ಕೃಷ್ಣಪ್ಪ ತಾನು ಬಂದ ಉದ್ದೇಶವನ್ನು ತಿಳಿಸಿದನು.

ನ :— ಅದೆಲ್ಲ ಸರಿ, ಆದರೆ ನಾನು—ಹಾಗೆಲ್ಲ ಹೊರಗೆ ವೇಷ ಹಾಕಿದ್ದಿಲ್ಲ—ವೀಳ್ಯವಿಲ್ಲದೆ ಎಲ್ಲಿ ಬೇಕಾದರೂ ಕುಣಿಯುತ್ತಾನೆ, ಎಂದು ತಿಳಿದುಕೊಂಡು, ಜನರು ಬೇಕಾದಾಗ ಬಂದು ಪೀಡಿಸ-ಬಹುದು !

ಶರಣಸಂದೇಶ

(ವಾರಪತ್ರಿಕೆ)

ಸಂಪಾದಕರು : ಶ್ರೀ. ಹರ್ಡೇಕರ್ ಮಂಜಪ್ಪನವರು

ಹಿಂದೂ ಸಂಘಟನೆಯ ಗುರಿಯನ್ನಿಟ್ಟುಕೊಂಡು ಯಶಸ್ವಿಯಾಗಿ ಕಾರ್ಯಮಾಡುತ್ತಿರುವ ಕನ್ನಡ ವೃತ್ತಪತ್ರಿಕೆಯೆಂದರೆ ಇದೊಂದೆ. ದೇಶ-ವಿದೇಶದ ವರ್ತಮಾನಗಳನ್ನೂ ವಿಚಾರಪೂರ್ಣ ಲೇಖನಗಳನ್ನೂ ಇದರಲ್ಲಿ ಓದಬಹುದು.

ವಾರ್ಷಿಕವರ್ಗಣಿ ಅಂಚೆವೆಚ್ಚ ಸೇರಿ ೩-೦-೦ ಗಳು.

' ಶರಣಸಂದೇಶ '

ಪೋಸ್ಟ್ : ಆಲಮಟ್ಟಿ, ಜಿಲ್ಲಾ : ವಿಜಾಪುರ.

ಕನ್ನಡ ನಾಡಿನ ವೈಶ್ಯರಿಗೊಂದು ಹೆಮ್ಮೆಯ ವಿಷಯ!

ವೈಶ್ಯರ ಏಳ್ಗೆಗಾಗಿ ಹಗಲಿರುಳು ಹೋರಾಡುವ ಒಂದೇ ಒಂದು ಪತ್ರಿಕೆಯೆಂದರೆ

ಮೈಸೂರು ವೈಶ್ಯ ಪತ್ರಿಕೆ!

(ಕನ್ನಡ-ತೆಲುಗು ವಾರಪತ್ರಿಕೆ)

ಇದೇ ಆಗಸ್ಟ್ ತಿಂಗಳಿಗೆ ಎರಡನೆಯ ವರುಷ ಪ್ರಾರಂಭವಾಗಿದೆ.
ಎಲ್ಲರೂ ಪ್ರಯೋಜನ ಪಡೆಯಬಹುದಾದ ಅನೇಕ ವಿಷಯಗಳಿವೆ.

ವಾ. ಚಂ. ೨-೪-೦, ಬಿಡಿ ಪ್ರತಿ ೦-೪-೦.

ಮೈಸೂರು ವೈಶ್ಯಪತ್ರಿಕೆ

ವಾಣಿವಿಲಾಸ ಬಿಲ್ಡಿಂಗ್, ಮೈಸೂರು.

ಕೃ :— ಹೌದು, ನೀನೇನು ತಿಳಿಯದವನಲ್ಲ! ಹೇಳದವರಿಗೆ ಯಾರು ಹೇಳುತ್ತಾರೆ? ವೇಷ ಹಾಕಿದ್ದು ನಮಗೆ ಗೊತ್ತು; ನಿನಗೆ ಗೊತ್ತು! ಮತ್ತಾರಿಗೆ ತಿಳಿಯುತ್ತದೆ? ಅಲ್ಲವೇನ್ರೀ ಇವರೆ?

ಪ್ರೋ:—ಮತ್ತೆ? ಏನೋ ಒಂದು ಇಚಾರ ಮಾಡಿದ್ದೇನೆ. ಈ ಕೆಲಸ ಕೈಗೆ ಬಂದರೆ ನಿಮಗೆ ಮಾನ. ಸಾಹೇಬರಿಗೆ ಈ ಮೋರೆ ತೋರಿಸಬಹುದು. ಆಗದು ಬಸ್ಸಪ್ಪಾ!

ನ :— ಅಯ್ಯೋ ಕಷ್ಟವೆ! ಉಪಾಯವಿಲ್ಲ, ಆಗಲಿ!

ಕೃ :— ಶಾಬಾಸ್! ನಮ್ಮ ನರಸಿಂಹ ಅಂದರೆ ಅಪರಂಜಿ! ಹಾಗಾದರೆ ಜಾಗ್ರತೆ ಇವರ ಸಂಗಡ ನಡೆ! ಒಳ್ಳೇದು, ರಾತ್ರಿಯಾಯಿತು, ಬರುತ್ತೇನೆ!

ನರಸಿಂಹಭಟ್ಟ ಸಂಧ್ಯಾವಂದನೆ ಮಾಡಿ, ಊಟ ಮುಗಿಸಿ, ತನ್ನ ಕನ್ನಡಿ ಪೆಟ್ಟಿಗೆ ತೆಗೆದು ಅಲಂಕಾರಮಾಡಿಕೊಂಡು, ಬಣ್ಣ ಬಳಿದು, ಸೀರೆಯುಟ್ಟು ಸಜ್ಜಾದ. ಮತ್ತೆರಡು ನಿಮಿಷಗಳಲ್ಲಿ ನಾಡಿಯ ಬೆಳಕಿನಲ್ಲಿ ಪೋಲೀಸನೊಂದಿಗೆ ನಡೆದ.

ಇತ್ತ ಹನುಮಂತನಾಯಕನ ಮನೆಯವರು ಮಲಗಲಿಕ್ಕೆಂದು ಒಳಕ್ಕೆ ಸೇರಿಕೊಂಡದ್ದರಿಂದ, ಎರಡನೆಯ ಪೋಲೀಸನಿಗೆ ಚಿಮಣಿ ದೀಪವನ್ನು ನೋಡುತ್ತ ಬೀಡಿ ಸೇದುವುದೇ ಕೆಲಸವಾಯಿತು.

ಎರಡು ತಾಸು ರಾತ್ರಿಗೆ. ಮೊದಲನೆಯ ಪೋಲೀಸ ನರಸಿಂಹನನ್ನೊಡಗೂಡಿ ನಾಯಕನ ಅಂಗಳಕ್ಕೆ ಕಾಲಿಟ್ಟ. ಅವನ ಸಂಗಡ ಇದ್ದ ಹೆಣ್ಣನ್ನು ನೋಡಿ ಎರಡನೆಯ ಪೋಲೀಸನಿಗೆ ಆಶ್ಚರ್ಯವೂ ಅಸೂಯೆಯೂ ಒಮ್ಮೆಲೆ ಉಂಟಾದುವು. "ರುಕ್ಮಿಣಮ್ಮ, ನೀವು ಜಗುಲಿಯಮೇಲೆ ಕೂತಿರಿ. ಬಹುಶಃ ನಾವು ಮಧ್ಯರಾತ್ರಿಯ ತನಕ ಕಾಯಬೇಕಾಗುವುದು," ಎಂದು ಮೊದಲನೆಯವ ಹೇಳಿದ್ದು ಆವಕ್ಕೆ ಒಪ್ಪ ಹಾಕಿದುವು. ಎರಡನೆಯ ಪೋಲೀಸ ಅಲ್ಲಿಂದೆದ್ದು ಅಂಗಳದ ಅಂಚಿಗೆ ನಡೆದ. ಮೊದಲನೆಯವ ಕೇಳಿದ :

"ನೀನಿದ್ದರೆ ಅಡ್ಡಿಯಿಲ್ಲ; ಎಲ್ಲಿಗೆ ಹೋಗುತ್ತೀಯೆ?"

"ನನ್ನಿಂದ ನಿಮಗೇಕೆ ತೊಂದರೆ? (ಮೊದಲನೆಯವನ ಕಿವಿಯಲ್ಲಿ) ಯಾರು ಅವಳು? ಎಲ್ಲೆಲ್ಲಿಯ ಹೆಣ್ಣುಗಳನ್ನೆಲ್ಲ ತಂದು—. ಛೀ ನಿನ್ನ—ಹೂಂ. ನಾ ಹೀಗೇ ಸ್ವಲ್ಪ ಕಾಲಾಡಿಸಿಕೊಂಡು ಬರುತ್ತೇನೆ!"

"ಅವಳು ಮುರುಡೇಶ್ವರದ ರುಕ್ಮಿಣಿ. ಏನೋ! ಹೀಗೇ ಕರಕೊಂಡು ಬಂದೆ!"

ಎರಡನೆಯವನ ಪೇಚಾಟವನ್ನು ಕಂಡ ನರಸಿಂಹನಿಗೆ ನಗು ತಡೆಯುವುದಾಗಲಿಲ್ಲ. "ಹಹ್ಹಹ್ಹ! ಎಲ, ಎಲ, ಇವನ ಫಜೀತಿಯೆ! ಏ! ಹಾಗೆಲ್ಲ ತಿಳಿಯಬೇಡ! ನಾನೊ, ಮಕ್ಕಿಗದ್ದೆಯ ನರಸಿಂಹ" ಎಂದ. ವಾಸ್ತವತೆಯ ಅರಿವಾಗಿ, ಸಿಟ್ಟಿನಿಂದ ಎರಡನೆಯವ ಹೇಳಿದ : "ನೀನು ಶುದ್ಧ ಠಕ್ಕ! ನನಗೆ ಮೊದಲೇ ಯಾಕೆ ಹೇಳಲಿಲ್ಲ?" ಎಂದು, ಬಲು ನಾಚಿಕೆಯಾಗಿದ್ದರಿಂದ ಅವನು ಆ ರಾತ್ರಿಯೆಲ್ಲ ಅವರೊಡನೆ ಮಾತನಾಡಲಿಲ್ಲ.

ನಡುರಾತ್ರಿ. ತಾರೆಗಳು ಮಿನುಮಿನುಗಿ, ಕತ್ತಲೆಯನ್ನು ನಿವಾರಿಸಿ ಭೂಮಿಯನ್ನು ಬೆಳಗಬೇಕೆಂದು ತವಕಿಸುತ್ತಿದ್ದುವು. ಹೊಳೆಯು ಉಕ್ಕೇರುತ್ತಿತ್ತು. ಕಿರಿಯ ತೆರೆಗಳು ಹಿಂದುಮುಂದೆ ಸರಿದಾಡುತ್ತ, ಸಳಸಳ ಶಬ್ದದೊಂದಿಗೆ ದಡವನ್ನು ತೊಳೆಯುತ್ತಿದ್ದುವು. ಹೊನ್ನೆ ಮರಗಳ ಮೇಲೆ ಬಾವುಲಿಗಳು ಚೀತ್ಕಾರ ನಡೆಯಿಸಿದ್ದುವು. ಆಚೆ ದಂಡೆಯತ್ತಣಿಂದ ನಾಯಿಯೊಂದು ಒಂದೆರಡುಸಲ ಬೊಗುಳಿತು. ಸುತ್ತಲೂ ಉಪ್ಪುನೀರು—ವಿಷಾದಿಸ ನಾತ ಇಡುಗಿತ್ತು.

ಮೂವರೂ ಸಟ್ಟೆಯ ಹಿತ್ತಲಿಗೆ ಬಂದು ಮಡಲ ತಡಿಕೆಯ ಮೇಲೆ ಕುಳಿತರು. ಕೆಲವೇ ಸಮಯದಲ್ಲಿ ಎರಡನೆಯ ಪೋಲೀಸ ಅಲ್ಲಿಯೆ ಗೊರಕೆ ಹೊಡೆಯಹತ್ತಿದ. ಮೊದಲನೆಯ ಪೋಲೀಸನೂ ನರಸಿಂಹನೂ ಮೆಲ್ಲಗೆ ಮಾತನಾಡುತ್ತ ಪೇದ್ರುವಿನ ದಾರಿ ನೋಡತೊಡಗಿದರು.

೧ನೆಯ ಪೋ. :— ಎಲ್ಲಾ ಕೂಡಿ ಒಳ್ಳೆ ಹದಕ್ಕೆ ಬಂದಿತ್ತು, ಭಟ್ಟರೆ! ಪೇದ್ರು ಒಂದಿಷ್ಟು ಕಣ್ಣಿಗೆ ಕಾಣಿಸಿಕೊಂಡಿದ್ದರೆ ಅವನಿಗೆ ಉಪ್ಪುನೀರು ಕುಡಿಸಿ ಬಿಡುತ್ತಿದ್ದೆ!

ನರಸಿಂಹ :— ನಿಜ. ಈ ವೇಷಧರಿಸಿದ್ದು ಸಾರ್ಥಕವಾದರೂ ಆದೀತು. ಸುಮ್ಮಗೆ ನೊಣ ಹೊಡೆದು ಬೇಜಾರು ಬಂತು. ಆss! ತೂಕಡಿಕೆಯೂ ಬಂತು!

ಪೋ. :— ಭಟ್ಟರೆ! ನೀವು ಆಟವಾಡುತ್ತಿದ್ದರೆ ರಾತ್ರಿಯನ್ನು ಹಗಲು ಮಾಡುವುದಿಲ್ಲವೆ? ನಿದ್ರೆಗೆಟ್ಟು ಅಭ್ಯಾಸ ಇದೆ, ನಿಮಗೆ!

ನರಸಿಂಹ :— ಅದೆಲ್ಲ ಸರಿ, ಆಗ ಒಂದು ಕೆಲಸ ಮಾಡುತ್ತಿರುತ್ತೇವೆ. ತಾಳಮೃದಂಗದ ಗತ್ತಿನಲ್ಲಿ ಹೊತ್ತು ಸಂದದ್ದೇ ತಿಳಿಯುವುದಿಲ್ಲ. ಶ್ಶ್! ಅಲ್ಲೇನೋ ಹಾಯಿಯ ಹಾಗೆ ಕಾಣುವುದಿಲ್ಲವೆ?

ಪೋ. : — ಹೌದು, ದೋಣಿ ಬರುತ್ತದೆ!

ಕೆಲವು ನಿಮಿಷಗಳಲ್ಲಿ ದೋಣಿಯೊಂದು ಹೊಳೆಯ ಹೊಟ್ಟೆಯನ್ನು ಬಗೆಯುತ್ತ ಇವರ ಮುಂದೆಯೆ ಹಾಯ್ದು ಬರುತ್ತಿತ್ತು. ನರಸಿಂಹನು ಹೆಣ್ಣಿನ ಧ್ವನಿಯಲ್ಲಿ ಪ್ರಾರಂಭಮಾಡಿದ:

" ದೋಣಿ! ಏಯ್ ದೋಣಿ ! "

" ಏನು ? ಯಾರು ? "

" ನಾನು, ಕೆಳಗಿನ ಮನೆಯ ಬೀರಿ; ದೋಣಿ ಎಲ್ಲಿಗೆ ಹೋಗುತ್ತದೆ ? "

" ಗೇರುಸೊಪ್ಪೆಗೆ. "

" ಆಚೆ ದಂಡೆಗೆ ಸ್ವಲ್ಪ ದಾಟಿಸಿದ್ದರೆ— "

" ಈ ದೋಣಿಗೆ ಅಲ್ಲಿ ಬರುವುದಕ್ಕೆ ನೀರು ಸಾಲದು; ಗಾಳಿ ಬಿಟ್ಟಾಗ ಹೊತ್ತು ಹಾಳುಮಾಡಲಾರೆ ! "

ದೋಣಿಯು ಸರಿದು ಹೋಯಿತು; ಅದು ದೊಡ್ಡದಾಗಿತ್ತು. ಕಟ್ಟೆಗೆ ತರಲಿಕ್ಕೆ ಗೇರುಸೊಪ್ಪೆಗೆ ಹೊರಟ ದೋಣಿಯಿರಬೇಕೆಂದು ತಿಳಿದು ಇಬ್ಬರಿಗೂ ನಿರಾಶೆಯಾಯಿತು. ಬೀಡಿಗಳನ್ನು ಹೊತ್ತಿಸಿ ಮತ್ತೆ ಮಾತನಾಡಲಾರಂಭಿಸಿದರು.

ಮತ್ತೊಂದು ತಾಸು ಕಳೆಯಿತು. ಇನ್ನೂ ಒಂದು ತಾಸು ಜಾರಿತು. ಆದರೂ ಮತ್ತಾವ ದೋಣಿಯೂ ಹಾಯಲಿಲ್ಲ. ಮತ್ತೆ ಬೀಡಿ ಸೇದಿದರು. ಇಬ್ಬರಿಗೂ ತಡೆಯಲಾರದ ಬೇಸರು. ಬೆನ್ನು ಮುರಿಯುವುದು, ಕಾಲು ಚಾಚುವುದು, ಏಳುವುದು ಮತ್ತೆ ಒರಗುವುದು, ಹೀಗೆ ಮಾಡಿ, ಕೊನೆಗೆ ಪೋಲಿಸನೊಬ್ಬ ನುಡಿದ:

" ಭಟ್ಟರೆ, ನಿಮಗೆ ಬಹಳ ತ್ರಾಸು ಕೊಟ್ಟೆ. ಬಂದುದಕ್ಕೆ ಕೆಲಸವಾದರೂ ಆಗಿದ್ದರೆ ಅದೊಂದು ರೀತಿಯಾಗಿತ್ತು ! "

" ಅದಕ್ಕೆಲ್ಲ ಯೋಗಾಯೋಗ ಬರಬೇಕು ! "

" ಹೋಗಲಿ, ಹೇಗಿದ್ದರೂ, ನೀವು ವೇಷಹಾಕಿಕೊಂಡು ಬಂದವರಿದ್ದೀರಿ. ಹೀಗೆಯೆ ಕುಳಿತಿರಲಿಕ್ಕೆ ಸಾಧ್ಯವಿಲ್ಲ. ಒಂದು ಪ್ರಸಂಗವನ್ನಾದರೂ ಹೇಳಿ ! "

" ಓಹೊ ! ಚೊಕ್ಕಟವಾಯಿತು. ಇಲ್ಲಿ ಏನು ಮೃದಂಗವೆ ? ತಾಳವೇ? ಭಾ ಗ ವ ತ ರೆ ? ಹೋಗಲಿ ! ಕೇಳುವವರಾದರೂ ಬೇಡವೆ ? "

"ನಾನೇ ಒಂದು ಸಭೆಯೆಂದು ತಿಳಿದುಬಿಡಿ. ಹೂಂ, ಭಟ್ಟರೆ ! "

ನರಸಿಂಹ ಯಕ್ಷಗಾನದೊಳಗಿನ ಪದಗಳನ್ನು ಒಂದೊಂದಾಗಿ ಹೇಳತೊಡಗಿದ. 'ಇಂದ್ರಕೀಲದಾ ಪರ್ವತದೊಳಗೇ,' 'ತಮ್ಮಾ ಬಾ, ಬಾ, ಕೋಪಾವ್ಯಾಕೆ ? ' 'ಗಾಯತಿ ಸಮರತಿ,' ಮೊದಲಾದ ಪದಗಳು ಆದುವು.

ಕಡೆಯ ಪದ ಮುಗಿಯುವುದಕ್ಕೂ, ಕೋಳಿಯೊಂದು ಬೆಳಗು ಬಂದಿತೆಂಬ ಒಸಗೆಯನ್ನು ಸಾರುವುದಕ್ಕೂ ಕೂಡಿತು. ಆಗ ನರಸಿಂಹನೆಂದ:

" ಹವಾಲ್‌ದಾರರೆ, ಉಪಾಯವಿಲ್ಲ. ಬೆಳಗಾಗುವುದರೊಳಗಾಗಿ ಮನೆಯನ್ನು ಸೇರುತ್ತೇನೆ. ಯಾರಾದರೂ ಕಂಡರೆ ತೊಂದರೆಯಾದೀತು. "

" ಹಾಗಾದರೆ ಹಾಗೆ! ಉಪಾಯವಿಲ್ಲ, ಗುರುತು ಇರಲಿ ! "

ನರಸಿಂಹ ಹೋದಬಳಿಕ ಅವನು ಅಲ್ಲಿಯೇ ನಿದ್ದೆಹೋದ, ೨ನೆಯ ಪೋಲೀಸ ನಿದ್ರೆಯಲ್ಲಿ ಎರಡು ಮೂರು ಬಾರಿ ' ರುಕ್ಮಿಣಿ ' ' ರುಕ್ಮಿಣಿ ' ಎಂದು ಕನವರಿಸಿದ.

ತನಗೆ ನರಸಿಂಹನೂ ಮೊದಲನೆಯ ಪೋಲೀಸನೂ ' ಛೀ ' ಮಾಡಿದ್ದರ ಸಿಟ್ಟು ಇಳಿದಿರದಿದ್ದರೂ, ಎರಡನೆಯ ಪೋಲೀಸನಿಗೆ ಬಾಯಿ ತೆರೆಯದೆ ಗತ್ಯಂತರವಿರಲಿಲ್ಲ. ಕೆಲವು ಹೊತ್ತಿನಲ್ಲಿ ಹಿಂದಿನ ರಾತ್ರಿಯದನ್ನೆಲ್ಲ ಮರೆತು, ಮತ್ತೆ ಮಿತ್ರರಾಗಿ ಹನುಮಂತನಾಯಕನ ದೋಣಿಯನ್ನು ಪಡೆದು ಸಮುದ್ರತೀರಕ್ಕೆ ಹೋಗಿ, ಗೋವೆ ಹಣ್ಣುಗಳನ್ನು ತಿಂದು, ಬೀಜಗಳನ್ನು ಸುಟ್ಟು, ಹೊಂಗುಗಳಿಗೆ ಬೆಲ್ಲವನ್ನು ಬೆರಸಿ ಕವಳಿಸಿದರು. ಗಾಳಿಯ ಮರಗಳ ನೆರಳಿನಲ್ಲಿ ಮರಳಿನಲ್ಲಿ ಉರುಳಾಡಿ ಏಳುವಾಗ, ಎಷ್ಟು ಹೊತ್ತಾಯಿತೆಂಬುದು ಅವರಿಗೇ ತಿಳಿಯಲಿಲ್ಲ. ಮಧ್ಯಾಹ್ನದ ಮೇಲೆ ಒಂದು ಗದ್ದೆಯಲ್ಲಿ ನಡೆದಿದ್ದ ಕೋಳಿಗಳ ಅಂಕ (ಕಾಳಗ) ವನ್ನು ನೋಡುತ್ತಿದ್ದಂತೆ ಸಂಜೆಯಾಯಿತು. ನಾಯಕನ ಮನೆಗೆ ಮರಳಿ ಬಂದು ಗಂಜಿ ಬೇಯಿಸಿ ಕುಡಿದರು. ಅದೊಂದು ರಾತ್ರಿ ಹೊಂಚುಹಾಕಿ ನೋಡುವುದೆಂದೂ ಪ್ರಯತ್ನ ವ್ಯರ್ಥವಾದರೆ ಬೆಳಗ್ಗೆ ತಾಲ್ಲೂಕಿಗೆ ಹೋಗುವುದೆಂದೂ ನಿಶ್ಚಯ ಮಾಡಿ, ಸೆಟ್ಟಿಯ ಹತ್ತಲಿಗೆ ಹೋಗಿ ಅಣಿಯಾದರು.

೧ನೆಯ ಪೋ:— ಈ ಹೊತ್ತು ಪೇದ್ರು ಕೈಗೆ ಬೀಳುತ್ತಾನೆಂತ ನನಗೆ ತೋರುತ್ತದೆ. ಜಂಬೆಯ ದೊಣ್ಣೆ ಇನ್ನೊಂದು ಇದ್ದರೆ ಒಳ್ಳೇದಾಗುತ್ತಿತ್ತು! ನಿನಗೆ ಬೇರೆ ಕೋಲು ಸಿಕ್ಕುತ್ತದೆಯೋ ನೋಡು ! ಇಬ್ಬರ ಕೈಯಲ್ಲೂ ದೊಣ್ಣೆ ಬೇಕು !

೨ನೆಯ ಪೋ:— ನನಗಂತೂ ಈ ವನವಾಸ ಸಾಕಾಯಿತು !

೧ನೆಯ ಪೋ:—ಮಲಗಬೇಡ, ಕರೆದ ಕೂಡಲೆ ಬರಬೇಕು ! ಪೇದ್ರು ಅಂದರೆ ಸವಾಯಿ ಧಾಂಡಿಗ. ಇಬ್ಬರೂ ಸೇರಿಕೊಂಡಲ್ಲದೆ ಅವನನ್ನು ಹಿಡಿಯುವುದು ಹೇಗೊ !

೨ನೆಯ ಪೋ:— ಛೆ. ನಾನು ಎರಡು ದಿನವಾದರೂ ನಿದ್ದೆ ಇಲ್ಲದೆ ಇರಬಲ್ಲೆ ! ಆದರೆ ಒಂದು: ನೆಲದ ಮೇಲೆ ಏನು ಬೇಕಾದರೂ ಹೇಳು, ಮಾಡುತ್ತೇನೆ, ಹೊಳೆಯಲ್ಲಿ ಮಾತ್ರ ಉಂಹೂಂ ! ಹೊಳೆಯನ್ನೂ ಹೆಂಗುಸರನ್ನೂ ನಂಬಕೂಡದಂತೆ! ಈ ಹೊಳೆಯಲ್ಲಿ ಹೆಜ್ಜೆಗೊಂದು ಮೊಸಳೆಯಿರುವುದು ಖಂಡಿತ. ಜೋಕೆ ! ನಾ ಹೇಳಲಿಲ್ಲವೆಂದು ಆ ಮೇಲೆ ಬೈಯಬೇಡ ನನ್ನ ! ಆss ! ಹೀಗೆ ಒಂದಿಷ್ಟು ಅಡ್ಡಾಗುತ್ತೇನೆ !

ಕೆಲವು ನಿಮಿಷಗಳಲ್ಲಿ ಆತನಿಗೆ ಗಾಢನಿದ್ರೆಹತ್ತಿ ಪ್ರಪಂಚದ ಅರಿವು ಅಡಗಿತ್ತು.

ಒಂದುತಾಸು ರಾತ್ರಿ ಮೀರಿದೆ. ಪೋಲೀಸನಿಗೆ ಮುನ್ನಿನ ರಾತ್ರಿಯ ಜಾಗರಣೆಯ ಮೂಲಕ ಹೆಚ್ಚಿನ ನಿದ್ರೆಬರಹತ್ತಿದೆ. ಆಕಳಿಸುತ್ತ ಬಾಯಿಯಮುಂದೆ ಚಿಟಿಕೆಹೊಡೆಯುತ್ತ ನಿದ್ದೆಯನ್ನು ಓಡಿಸುವ ಪ್ರಯತ್ನದಲ್ಲಿದ್ದಾನೆ. ಅವನ ತಲೆಯದೆಸೆಗೆ ಮರಗಳ

ಮೇಲೆ ಎಲೆಗಳನ್ನು ಅಲುಗಾಡಿಸಿ ಬಾವಲಿಗಳು ಹಾರಾಡುತ್ತಿವೆ. ದೂರದ ಸಮುದ್ರದ ಮೊರೆತವು ಸುಳಿಗಾಳಿಯೊಡನೆ ತೇಲಿ-ಹೋಗುತ್ತಲಿದೆ. ಕೆಲವು ಮೀನುಗಳು ಹೊಳೆಯ ನೀರೊಳಗಿಂದ ಹೊರಕ್ಕೆ ನೆಗೆದು 'ಗುಳುಪ್' ಎಂದು ಮುಳುಗುತ್ತಿವೆ.

"ಕಟ್ ಕಟ್" ಎಂಬ ಸದ್ದು, ತೂಕಡಿಸುತ್ತಿದ್ದ ಪೋಲೀಸನನ್ನು ಎಚ್ಚರುಗೊಳಿಸಿತು. ದೋಣಿಯ ಬಾಣಿಗೆ (ಮೈಗೆ) ಜಲ್ಲು (ದೋಣಿ ಒತ್ತುವ ಕೋಲು) ತಾಕಿದ ಸದ್ದು! ಸದ್ದಾದ ದಿಕ್ಕಿಗೆ ದೃಷ್ಟಿಯನ್ನು ತಿರುಗಿಸಿ ನೋಡಿದ, ಪುನಃ ಅದೇ ಸದ್ದು! ಪೇದ್ರು ವಾಗಿರಬಹುದೆ? ಪೋಲೀಸ ಚೇತರಿಸಿಕೊಂಡು ಎದ್ದು ಧೋತರವನ್ನು ಸೀರೆಯಂತೆ ಉಟ್ಟು, ಸೆರಗೆಳೆದು ಹೊಳೆಯ ಅಂಚಿಗೆ ಬಂದ. 'ಸುಳು, ಸುಳು' ಎನ್ನುತ್ತ ಚಿಕ್ಕ ದೋಣಿಯೊಂದು ಬರತೊಡಗಿತು. ಪೋಲೀಸ ಹೆಣ್ಣಿನ ಧ್ವನಿಯಲ್ಲಿ ಕೇಳಿದ:

"ಯಾರು ಅದು? ತಿಮ್ಮನ ಹುಡುಗನೇನೋ?"

ದೋಣಿಯಿಂದ :— ಹೂಂ,— ಅಲ್ಲ ನೀ ಯಾರು?

ಪೋಲೀಸ್ :— ನಾನು ಕೆಳಗಿನ ಮನೆಯ ಬೀರಿ; ಆಚೆ ದಂಡೆಗೆ ಹಾಕು, ಉಪಕಾರವಾಗುವುದು!

ದೋಣಿಯಿಂದ :— ಬೀರಿ? ಯಾವ ಬೀರಿ? ಈ ಅಪರಾತ್ರಿಯಲ್ಲಿ ಅಲ್ಲೇನು ಮಾತ್ತೀ?

ಪೋಲೀಸ್ :— ನನ್ನ ಗುರುತು ಸಿಕ್ಕಲಿಲ್ಲವೇನೊ! ನೀ ಪೇದ್ರು ಅಲ್ಲವೇನೊ?

ಪೇದ್ರು :— ಹೌದು, ಆದರೆ—

ಪೋಲೀಸ್ :— ನಂಟರ ಮನೆಗೆ ಹೋಗಿದ್ದೆ, ಸಂಜೆಯಾ-ಯಿತು. ಹೊಳೆಗೆ ಭರತಬಂತು. ಹಾಯ್ದು ಹೋಗುವುದು ಹ್ಯಾಂಗೆ? ಒಂದು ದೋಣೀನೂ ಕಾಣೆ! ಮನೆಯಲ್ಲಿ ಸಣ್ಣ ಸಣ್ಣ ಮಕ್ಕಳು, ಹೋಗದಿದ್ರೆ ಉಪಾಯವಿಲ್ಲ!

ಪೇದ್ರು :— ನನ್ನ ಕೈಲಿ ಆಗೂದಿಲ್ಲ, ತಡವಾಗ್ತದೆ!

ಪೋಲೀಸ್ :— ದೋಣೇಲಿ ಏನು ತುಂಬಿದೆ?

ಪೇದ್ರು :— ಜೆಲ್ಲದ ಮಣಿಕೆ! ಅದೆಲ್ಲ ನಿನಗ್ಯಾಕೆ? ಹೂಂ, ನನಗೆ ಹೋಗಬೇಕು!

ಪೋಲೀಸ್ :— ಅಯ್ಯೊ? ಬೆಳತನಕ ಇಲ್ಲಿ ಹ್ಯಾಂಗಿರಲಿ? ದಾಟ್ಸಿಬಿಡು. ಒಂದು ಗಳಿಗೆಯಲ್ಲಿ ಆಗ್ತದೆ!

ಪೇದ್ರು :— ಥೂ! ನೀವು ಹೆಂಗುಸರೂ ಆದ್ರೆ ಯಾವಾಗಲೂ ಹೀಂಗೇ. ಬಾ, ದೋಣೀನ ದಂಡೆಗೆ ತರ್‍ತೀನೆ!

ದೋಣಿಯು ದಂಡೆಗೆ ಬರುತ್ತಲೆ ಪೋಲೀಸ "ಶಂಕರ,! ಏ ಶಂಕರ! ಏಳು, ದೋಣಿ ಬಂತು, ದಾಟುವ," ಎಂದು ಕೂಗಿದ.

ಪೇದ್ರು :— ಅವ ಯಾರು?

ಪೋಲೀಸ್ :— ನನ್ನ ಭಾವಯ್ಯೆದ್ನ!

ಧ್ವನಿಯಲ್ಲಿ ಆಗಾಗ ವ್ಯತ್ಯಾಸವಾಗುವುದನ್ನು ತಿಳಿದು ಪೇದ್ರುವಿಗೆ ಸಂಶಯವಾಯಿತು, ಜಲ್ಲನ್ನೆತ್ತಿ ಪೋಲೀಸನ ಭುಜದ ಮೇಲೆ ರಪ್ಪನೆ ಒಂದು ಪೆಟ್ಟು ಲಗಾಯಿಸಿದ. ಆ ಹೊಡೆತಕ್ಕೆ ಅವನ (ಪೋಲೀಸನ) ಕೈಯಲ್ಲಿದ್ದ ಜಂಬೆಯ ದೊಣ್ಣೆ ನೀರಲ್ಲಿ ಬಿದ್ದಿತು ದೋಣಿಯನ್ನು ಹಿಡಿದುಕೊಂಡು "ಶಂಕರ! ಶಂಕರ!" ಎಂದು ಒದರಿದ. ಆದ[illegible] ಶಂಕರ ಸ್ವಪ್ನಗಳನ್ನು ಕಾಣುತ್ತಿದ್ದ. ಪೇದ್ರುವು 'ಬಿಡು, ದೋಣೀನ' ಎಂದು ಜಲ್ಲನ್ನೊತ್ತಿದ! ಆದರೆ ಪೋಲಿಸ ಅದನ್ನು ಬಿಡದೆ ಒಂದು ಕೈಯಿಂದ ಪೇದ್ರುವಿನ ಕಾಲಿಗೆ ಬಲವಾದ ಏಟನ್ನು ಹೇರಿದ. ಪೇದ್ರುವಿನ ಹತ್ತಿರ ಜಲ್ಲಿದ್ದರೂ ದೋಣಿಯ ಮೇಲೆ ನಿಂತು ಜೋ[illegible] ಹೋಗದಂತೆ ಕಾದಾಡಬೇಕಾಗಿತ್ತು. ಪೋಲೀಸ ಅವನನ್ನು ಬರಿಗೈ-ಯಿಂದ ಎದುರಿಸಿ ಹಿಡಿಯಬೇಕಾಗಿತ್ತು. ಪೇದ್ರುವು ಮತ್ತೊಮ್ಮೆ ಜಲ್ಲನ್ನೆತ್ತಿ ಹೊಡೆಯಬೇಕೆನ್ನುವಷ್ಟರಲ್ಲಿ ಪೋಲೀಸ ದೋಣಿಯ ಅಂಚನ್ನು ಕೆಳಕ್ಕೆ ದಬ್ಬಿದ. ದೋಣಿ ಮಗುಚಿತು. "ಹೇ ಹೇ" ಎಂದು ಕೆಲೆಯುತ್ತ ಪೇದ್ರು ನೀರೊಳಗೆ ಬಿದ್ದ ಇಬ್ಬರಿಗೂ ದ್ವಂದ್ವಕ್ಕೆ ತೊಡಗಲಾಯಿತು...................

ಪೋಲೀಸ ಪೇದ್ರುವನ್ನು ಒಂದು ಬಾರಿ ನೀರಲ್ಲಿ ಬೀಳಿಸಿದ. ಪೇದ್ರುವು ಸಾವರಿಸಿಕೊಂಡು ಎದ್ದು, ಪೋಲೀಸನ ಕುತ್ತಿಗೆಯನ್ನು ಒತ್ತಿ, ಹಿಚುಕಿ, ನೀರೊಳಗೆ ಅದುಮಿದ. "ಶಂಕ—ಶಂ—"

ಪೋಲೀಸನಿಗೆ ಎರಡು ಗುಟುಕು ಉಪ್ಪು ನೀರು ಕುಡಿಯಬೇಕಾ-ಯಿತು.......ಮತ್ತೆ ಮೇಲಕ್ಕೆದ್ದು ಕೈಮಾಡಿದ. ಆದರೆ ಅವನಿಗೆ ವಿಪರೀತ ಆಯಾಸವಾಗಿತ್ತು. ಉಸುರಾಡಿಸಬೇಕೆಂದು ಒಂದು ನಿಮಿಷ ಸುಮ್ಮನಿದ್ದುದನ್ನು ನೋಡಿ, ಪೇದ್ರುವು ಮಗುಚಿದ್ದ ದೋಣಿಯನ್ನು ದಂಡೆಗೆ ತಂದು, ನೀರು ಸುರಿದು ಜಲ್ಲನ್ನು ಹುಡುಕಿ ದೋಣಿಯನ್ನೇರಿ ತೇಲಿಬಿಟ್ಟ.

ಈ ಗಲಾಟೆಯಿಂದ ಈಗ ಶಂಕರನಿಗೆ ಎಚ್ಚರಾಯಿತು. ದಂಡೆಗೆ ಬಂದು ನೋಡಲಾಗಿ ತನ್ನ ಮಿತ್ರ ತೀರ ಹಣ್ಣಾಗಿ ಉಬ್ಬಸಪಡುತ್ತಿ-ದ್ದುದು ತಿಳಿಯಿತು. ಅವನೆಂದ:

"ಅರೆ, ಅರೆ, ಏನಾಯಿತು?"

"ಈಗ ಯಾಕೆ ಬಂದೆ?— ಥೂ, ನಿನ್ನ ಮನೆ ಹಾಳಾಗ!"

"ಪೇದ್ರು ಬಂದಿದ್ದಾನೆಯೆ?"

"ಕೈಗೆ ಸಿಕ್ಕ ಬೇಟೆ ತಪ್ಪಿಸಿಕೊಂಡು ಹೋಯಿತು!"

"ನನ್ನನ್ನು ಯಾಕೆ ಕರೆಯಲಿಲ್ಲ?"

"ಥೂ, ನಿನ್ನ! ಒದರಿ, ಒದರಿ ಗಂಟಲು ಹರಿದು ಹೋಯಿತು!"

"ಏನಾದರೂ ಸಿಕ್ಕಿತೆ?"

"ಹೌದು-ಪೆಟ್ಟು!"

ನಡೆದ ಸಂಗತಿಯನ್ನೆಲ್ಲ ತಿಳಿದ ಶಂಕರ ದೋಣಿ ಮಗುಚಿದಲ್ಲಿ ಬಾಟಲಿಗಳು ಬಿದ್ದಿರಬೇಕೆಂದು ಬಗೆದು, ಅಂಗಿಯನ್ನು ತೆಗೆದಿಟ್ಟು ನೀರಿನಲ್ಲಿ ಎರಡು ಮೂರು ಸಲ ಮುಳುಗಿ ಹುಡುಕಾಡಿದ. ಅವನಿಗೆ ಸರಾಯಿಯಿಂದ ತುಂಬಿದ ನಾಲ್ಕು ಸೀಸೆಗಳು ಸಿಕ್ಕುವು. ಅವನ್ನು ದಂಡೆಗೆ ತಂದು ಎರಡನೆಯವನನ್ನು ಕುರಿತು ಹೇಳಿದ:

"ಹೋಗಲಿ, ಇಷ್ಟು ಪುರಾವೆ ಸಿಕ್ಕಿತ್ತು. ಬೆಳಗಾದರೆ ಇಷ್ಟ ಪುರಾವೆಯನ್ನು ಸಿದ್ಧಪಡಿಸಿ, ಸಾಹೇಬರಿಗೆ ಎಲ್ಲ ಹಕೀಕತ್ತು ಹೇಳುವ. ಅವರು ಮುಂದಿನ ಕೆಲಸವನ್ನು ಮಾಡಲಿ— ನನಗೆ ತಿಳಿದಿದ್ದರೆ [illegible] ಪೇದ್ರೂನ ನುಸಿಹೊಡೆದ ಹಾಗೆ ಮಾಡತಿದ್ದೆ, ಉಪಾಯವಿಲ್ಲ!"

ಕಲಾಭಿರುಚಿ

(ಸೌಂದರ್ಯವಿಜ್ಞಾನ)

ಶ್ರೀ. ಖಾನೋಳಕರ ಶ್ರೀಧರರಾಯರು, ಪುಣೆ

ಸೌಂದರ್ಯಶಾಸ್ತ್ರದಲ್ಲಿ ಕಲಾಭಿರುಚಿಯ ಬಗೆಗಿರುವ ವಿವೇಚನೆಯು ತುಂಬ ತೊಡಕಿನದಾಗಿದೆಯೆಂಬುದು ಸಹಜವಾದ ಮಾತೇ ಆಗಿದೆ. ಏಕೆಂದರೆ, ದೇವರು ಹುಟ್ಟಿಸಿದ ಸೃಷ್ಟಿಯಲ್ಲಿ ತಲೆಗೊಂದು ಬುದ್ಧಿ, ತಲೆಗೊಂದು ರುಚಿ; 'ಭಿನ್ನರುಚಿರ್ಹಿ ಲೋಕಃ'! ಕಲಾಕೃತಿಯೆಂದು ಯಾವ ಕೃತಿಯನ್ನು ಕರೆಯಬೇಕು? ಉತ್ತಮವಾದ ಕಾವ್ಯವಾವುದು? ಒಬ್ಬರು ಶೆಕ್ಸಪಿಯರ್‌ನಂಥವನನ್ನೂ ಕಾಡು ಮನುಷ್ಯನೆಂದು ಕರೆದಿದ್ದಾರೆ. 'ಸರ್ವಸ್ಥಳದಲ್ಲಿಯೂ ಸರ್ವಕಾಲದಲ್ಲಿಯೂ ಸರ್ವಜನರಿಗೆ ಆನಂದವನ್ನು ಉಂಟುಮಾಡುವುದೇ ಸರ್ವೋತ್ತಮವಾದ ಕಲಾಕೃತಿ' ಎಂದು ಹೇಳಿದ ಮೇಲೆ, ಕೆಲವರು **ಶಾಕುಂತಲ** ನಾಟಕವನ್ನು ಸರ್ಪದಂತೆ ಕಾಣುತ್ತಾರಲ್ಲ! ಆದುದು, ಕಲೆಯಲ್ಲಿ ಅಭಿರುಚಿಯಿದ್ದರೇ ಅವರಿಗೆ ಕಲಾಕೃತಿಯ ಪೂರ್ಣ ಜ್ಞಾನವಾಗುವುದು. ಹೀಗಾದರೆ ಕಲಾಕೃತಿಯ ವೈಯರ್ಥ್ಯವೇ ಸಿದ್ಧವಾದಂತಾಯಿತು ಅಭಿರುಚಿಯಿದ್ದವರಿಗೇ ಕಲೆಯು ಆನಂದವನ್ನು ಕೊಡುವುದೆಂದ ಮೇಲೆ ಉಳಿದವರದೇನು ಗತಿ? ಇದಕ್ಕೆ ಕಲಾಕೃತಿಯ ಸರ್ವಜನೀನತೆಗೆ ಬಾಧೆ ಬಂದಿತು. ಹೀಗೆ ಇದೆ ಈ ತೊಡಕು. ಆದುದರಿಂದ ಅಭಿರುಚಿಯ ಬಗ್ಗೆ ಕೆಲವು ಮಾತುಗಳನ್ನು ಹೇಳುವುದವಶ್ಯವಿದೆ.

ರುಚಿಯೆಂಬುದು ವಿಷಯೇಂದ್ರಿಯಗಳ ಸಂಯೋಗದಿಂದ ಉಂಟಾಗುವ ರಸ. "ರಸೋವೈ ಸಃ" ಎಂದರೆ ಪರಮಾತ್ಮನು ರಸರೂಪಿಯಾಗಿರುವನೆಂದ ಉಪನಿಷದ್ವಾಕ್ಯದ ಮರ್ಮವಾದರೂ ಇದೇ. ಪರಮಾತ್ಮನು ರಸರೂಪಿಯಾಗಿರುವಂತೆ ಜ್ಞಾನರೂಪಿಯೂ ಆಗಿರುವನು. ಆದೇ ಹುಟ್ಟಿದ ಮಗುವಿಗೆ ಯಾವ ಜ್ಞಾನವೂ ಇರುವುದಿಲ್ಲವಂತೆ; ಇದು ನಿಜ! ಆದರೆ ಅದಕ್ಕೆ ಯಾವ ರಸವೂ ತಿಳಿಯುವುದಿಲ್ಲವೆಂಬುದು ಸುಳ್ಳು. ಹುಟ್ಟಿದ ಮಗುವಿಗೆ ತಾಯಿಯ ಸ್ಪರ್ಶದಿಂದ ಸುಖವಾಗುತ್ತದೆ ಹುಟ್ಟಿದ ಮೂರನೆಯ ದಿವಸವೇ ಅದಕ್ಕೆ ಹಾಸ್ಯರಸವು ತಿಳಿಯುತ್ತದೆಯೆಂದು ಮಾನಸಶಾಸ್ತ್ರಜ್ಞರ ಮತ. ಎಂದರೆ ಮಾಸಿಕ ಪುಸ್ತಕದಲ್ಲಿಯ ಹಾಸ್ಯ ತಿಳಿಯುತ್ತದೆಯೆಂಬುದಲ್ಲ; ನಗೆಯು ಬರುತ್ತದೆ. ಅಳುವಂತೂ ಹುಟ್ಟಿದವರ ಮೊದಲನೆಯ ರಾಗ. ಅಂತಃಕರಣದಲ್ಲಿಯೇ ದೇವರು ಎಲ್ಲ ರಸಗಳ ಗೆರೆಗಳನ್ನು ಎಳೆದೇ ಹುಟ್ಟಿಸುತ್ತಾನೆಂಬುದನ್ನು—ಅಥವಾ ತಾಯಿಯ ಹೊಟ್ಟೆಯೊಳಗಿರುವಾಗಲೇ ಜ್ಞಾನ—ವಿಶೇಷತಃ ರಸಜ್ಞಾನ—ವಾಗುವುದೆಂಬುದನ್ನು ಅಭಿಮನ್ಯುವಿನ ಚರಿತ್ರೆಯಿಂದ ತಿಳಿಯುವಂತಿದೆ. ಯಾವುದೊಂದು ಪದಾರ್ಥಕ್ಕೆ ವಿಷಯವೆಂದು ಹೆಸರು. ಯಾವುದೊಂದು ಪದಾರ್ಥವನ್ನು ನೋಡಿ ಮಾನವನ ಮನಸ್ಸಿನಲ್ಲಿ ಜ್ಞಾನವು ಮೂಡುವಂತೆ, ಅವನ ಅಂತಃಕರಣದಲ್ಲಿ ಭಾವನೆಯೂ ರಸವೂ ಮೂಡುವುದು. ವಿಷಯ ಮತ್ತು ಇಂದ್ರಿಯಗಳ ಸಂಯೋಗವಾಗಬೇಕು. ಇಲ್ಲದಿದ್ದರೆ ಜ್ಞಾನವೂ ಇಲ್ಲ, ರಸವೂ ಇಲ್ಲ. ಕತ್ತಲೆಯಲ್ಲಿ ಎಷ್ಟೋ ಹಾವುಗಳು ಹರಿದುಹೋಗುತ್ತವೆ; ಅವು ನಯನಗೋಚರವಾದರೆ ನಮ್ಮಲ್ಲಿ ಇದು ಸರ್ಪವೆಂಬ ಜ್ಞಾನವೂ ಭಯಾನಕವೆಂಬ ರಸವೂ ಹುಟ್ಟುವುದು. ನಾವು ಮಲಗಿಕೊಂಡಿರುವಾಗ, ರಂಗಮಂದಿರದಲ್ಲಿ ಇದ್ದರಲ್ಲವೇ ಗಾಯನದ ರಸಾನಂದವು ನಮ್ಮ ಶ್ರವಣಮಾರ್ಗದಿಂದ ಹುಟ್ಟುವುದು? ನಾವು ಹಾದಿ ಹಿಡಿದು ಹೋಗುತ್ತಿರುವಾಗ, ಪ್ರತಿ ಮನೆಯಲ್ಲಿಯೂ ಪಾಕಕ್ರಿಯೆಯು ನಡೆದೇ ಇರುತ್ತದೆ. ನಮಗೇನು ಗೊತ್ತು, ಭಾಗೀರಥಿಬಾಯಿಯ ಕಲಸನ್ನವು ಎಂತಹದಾಗಿದೆಯೆಂಬುದು? ಅದು ತುಂಬ ಮನೋಹರವಾಗಿದ್ದರೂ, ನಮ್ಮ ಬಾಯಲ್ಲಿ ಒಂದಾದರೂ ತುತ್ತು ಬಿದ್ದರಲ್ಲವೇ ನಮಗೆ ಅದರ ರುಚಿ ತಿಳಿಯುವುದು? ಅಮೇರಿಕದಲ್ಲಿ ಸಾವಿರಾರು ಸುಗಂಧದ ಹೂವಿನಿಂದ ತುಂಬಿದ ಉದ್ಯಾನಗಳಿವೆ. ಅಮೇರಿಕದಿಂದ ಸುಗಂಧವು ಓಡಿ, ಸಪ್ತಸಮುದ್ರಗಳನ್ನು ದಾಟಿ, ನಮ್ಮ ಘ್ರಾಣೇಂದ್ರಿಯಕ್ಕೆ ಬಂದು ಒದಿದರೆ ಅದರ ಜ್ಞಾನವಾಗುವುದು.

★

ಕಲಾಭಿರುಚಿಯೆಂದರೆ ಒಟ್ಟಿಗೆ, ಹೆಚ್ಚಾಗಿ ಬುದ್ಧಿಯಿಂದ ಕಲಾಕೃತಿಯ ಕೌಶಲ್ಯವನ್ನು ಬಿಂಗಡವಾಗಿ ಕಂಡು ಹಿಡಿದು, ತನ್ನ ಜೀವಾಳದ ಪ್ರೇಮದಿಂದ ಅದರ ಹೃದಯವನ್ನು ಪರೀಕ್ಷಣೆ ಮಾಡುವುದು.

★

ಅದು ಅಮೇರಿಕೆಯಲ್ಲಿ, ನಾವು ಹಿಂದುಸ್ಥಾನದಲ್ಲಿ! ಹೂವು ಗುಲಾಬಿ ಹೂವೋ ಕೇದಿಗೆ ಹೂವೋ, ಏನಿದ್ದರೂ ಸರಿಯೆ ನಮಗೆ! ಹೀಗೆ ನಯನ-ಶ್ರವಣ-ಘ್ರಾಣ-ತ್ವಚೇಂದ್ರಿಯ-ರಸನಾ ಇವೆಲ್ಲವುಗಳ ಆಟವಿರುವುದು. ಮೊತ್ತಮೊದಲು ರಸನೇಂದ್ರಿಯ—ನಾಲಗೆ; ಯಾಕೆಂದರೆ ನಾಲಗೆಯಿಂದಲೇ ನಮ್ಮ ಜೀವನವು ಸಾಗುವುದು. ನಮ್ಮ ಜೀವಿತಕ್ಕೆ ಊಟವೇ ಪರಮಾಧಾರ! ಮೊದಲು ಅನ್ನ ದೇವರು, ಆಮೇಲೆ ಪ್ರಾಣದೇವರು! ಆದುದರಿಂದ ಯಾವ ರಸಕ್ಕೂ ರುಚಿಯೆಂಬ ಅರ್ಥ ಬಂತು. ಮೊದಲಿನ ರಸ ನಾಲಗೆಯಿಂದ ನಾಲಗೆಗೇ ರುಚಿಯೆಂಬ ರೂಢಿಯು ಬಿತ್ತು. ಮನೋಹರವಾದ ರೂಪ, ಇಂಪಾದ ಸ್ವರ, ಕಂಪಾದ ತುಪ್ಪ, ಮೆತ್ತನೆಯ ಹಾಸಿಗೆ, ರುಚಿಯಾದ ಪಕ್ವಾನ್ನ—ಎಲ್ಲದರಲ್ಲಿಯೂ ರುಚಿಯು ಇದ್ದರೂ, ಊಟಕ್ಕೇ ರುಚಿ ಎಂಬ ಶಬ್ದವು ಔಚಿತ್ಯದಿಂದ ಕೂಡಿದೆ. ಇನ್ನು ಪ್ರತಿಯೊಂದು ಪದಾರ್ಥವು ಅದೇ ರುಚಿಯನ್ನುಂಟುಮಾಡಲಾರದು; ಒಂದೇ ರಸವನ್ನುಂಟುಮಾಡಲಾರದು. ಚಿಕ್ಕಂದಿನ ಮಾತು ಬೇರೆ, ಚಿಕ್ಕವರ ಮಾತು ಬೇರೆ;

ದೊಡ್ಡವರ ಮಾತು ಬೇರೆ, ಮುದುಕರ ಮಾತು ಬೇರೆ; ಅಸಂಸ್ಕೃತರ ಮಾತು ಬೇರೆ, ಸಂಸ್ಕೃತಿಯುಳ್ಳವರ ಮಾತು ಬೇರೆ—ತಲೆಗೊಂದೊಂದು. ನೂಳೆಯಂತಹ ಸರ್ವಜನೀನವಾದ ಪದಾರ್ಥವನ್ನು ತೆಗೆದುಕೊಂಡರೂ–ವಿಟನಿಗೆ ಶೃಂಗಾರವುಂಟಾಗುವುದು, ಸಜ್ಜನನಿಗೆ ಹೇಸಿಗೆಯುಂಟಾಗುವುದು, ಸ್ತ್ರೀಯರಿಗೆ ಸರ್ಪರೂಪವಾಗುವುದು, ಶರಣನಿಗೆ ವಿಷರೂಪವಾಗುವುದು, ಚಿಕ್ಕವರಿಗೆ ಇದೇ ಮಾತ್ರರೂಪವಾಗುವುದು. ಸಕಲರಲ್ಲಿಯೂ ಪರಮಾತ್ಮನನ್ನು ನೋಡುವ ಸರ್ವಜ್ಞನಂತಹ ಶರಣನಿಗೆ—ಚಿಕ್ಕ ಮಕ್ಕಳ ಹಾಗೆಯೆ ಆದಿಮಾಯೆಯ ರೂಪ, ಒಬ್ಬಯಃಕಶ್ಚಿತ್ ಪಣ್ಯಾಂಗನೆಯಲ್ಲಿಯೂ ತೋರುವುದು. ಅವರವರ ದೇಶ-ಕಾಲ-ಪರಿಸ್ಥಿತಿ-ವಯಸ್ಸು-ಸಂಸ್ಕೃತಿಗಳಿಗೆ ಅನುರೂಪವಾದ ರಸಜ್ಞಾನವನ್ನು ಯಾವುದೊಂದು ಪದಾರ್ಥವು ಉಂಟುಮಾಡುವುದು.

ಸರಿ! ಕಲಾಕೃತಿಯೆಂಬ ಪದಾರ್ಥವು ಯಾವ ರಸವನ್ನುಂಟುಮಾಡುವುದು ಹಾಗಾದರೆ? ಕಲಾಕೃತಿಯು ಯಾವ ರಸವನ್ನೂ ಉಂಟುಮಾಡಿ ನಿಲ್ಲುವುದಿಲ್ಲ; ರಸಾತೀತವಾದ ಸೌಂದರ್ಯವನ್ನುಂಟುಮಾಡುವುದು. ಸುಸಂಸ್ಕೃತನಾದ, ಅಗಾಧ ಶಕ್ತಿಗಳಿಂದ ತುಂಬಿದ ದೇವಾಂಶಸಂಭೂತನೇ ಸರ್ವೋತ್ತಮನಾದ ಕಲೋಪಾಸಕನು. ಧಾತುಗಳೊಳಗೆ ಬಂಗಾರವಿದ್ದಂತೆ, ಅಮೌಲಿಕವಾದ ಹರಳುಗಳಲ್ಲಿ ರತ್ನವಿರುವಂತೆ! ಸರ್ವೋತ್ತಮನಾದ ಕಲೋಪಾಸಕನಲ್ಲಿ ಬುದ್ಧಿಶಕ್ತಿಯೂ ರೂಪಕಶಕ್ತಿಯೂ ಒಂದಾಗಿ ಹೊರಹೊಮ್ಮಿತೆಂದರೆ— ಗಂಗಾನದಿಯ ಬೆಳ್ಳನೆಯ ನೀರೂ, ಯಮುನಾನದಿಯ ಕಪ್ಪು ನೀರೂ ಗೇರುಸೊಪ್ಪೆಯ ತಡಸಲಿನಂತೆ ಹರಿದರೆ— ‘ಯಾವುದು ಬುದ್ಧಿಯ ಬೆಳಕು ಯಾವುದು ಅಂತಃಕರಣದ ಬೆಳಕು?’ ಎಂಬುದೇ ತೋಚದಾಗುವುದು. ಕಲಾಕೃತಿಯಲ್ಲಿಯ ಇನ್ನೊಂದು ವಿಶೇಷವೆಂದರೆ ಅದು ಇಂದ್ರಿಯಗಳ (ನಯನ ಮತ್ತು ಶ್ರವಣ— ಉಳಿದ ಜ್ಞಾನೇಂದ್ರಿಯಗಳಿಗೆ ಇಲ್ಲಿ ಅವಕಾಶವಿಲ್ಲ ಸೌಂದರ್ಯಶಾಸ್ತ್ರದಲ್ಲಿ.) ಮಾರ್ಗವಾಗಿ ಹೃದಯಕ್ಕೆ ಮುಟ್ಟುತ್ತದೆಂಬುದು— ಹೃದಯಂಗಮವಾಗುತ್ತದೆಯೆಂಬುದು. ಯಾರಿಗೆ? ಯಾರಿಗಾದರೂ–ಗಂಡುಸು, ಹೆಂಗುಸು ಹುಡುಗ—ನಯನಶ್ರವಣ, ಮಾತ್ರ ಇರಬೇಕು. ಶೇಕ್ಸ್‌ಪಿಯರ್‌ನ **ಆಥೆಲ್ಲೋ**ದಂತಹ ನಾಟಕವಾಗಲಿ, ಕಾಳಿದಾಸನ **ಶಾಕುಂತಲ**ದಂತಹ ನಾಟಕವಾಗಲಿ, ಚಿಕ್ಕ ಹುಡುಗರಿಗೆ ಹೃದಯಂಗಮವಾಗುವುದೇ? ಅಹುದು! ಆದರೇನೇ ಅದು ಸರ್ವೋತ್ತಮವಾದ ನಾಟಕ, ಇಲ್ಲದಿದ್ದರೆ ಇಲ್ಲ! ಇದು ಬಹಳ ದೂರವಾಯಿತು.... ಚಿಕ್ಕಹುಡುಗನಿಗೆ ನಾಟಕ ತಿಳಿಯುತ್ತದೆಂಬದು! ಟಾಲ್‌ಸ್ಟಾಯ್ ಮಹಾಸಾಧುವಂತೂ ‘ಹತ್ತು–ಹನ್ನೆರಡು ವರ್ಷದ ಹುಡುಗನಿಗೆ ಹದಿನೈದು ನಿಮಿಷಗಳಲ್ಲಿ ತಿಳಿಸಿ ಹೇಳಲು ಸಾಧ್ಯವಿರುವುದೇ ಜ್ಞಾನವೂ ಕಲೆಯೂ’ ಎಂದು ಹೇಳುವನು. ನಾವು ಇಷ್ಟು ದೂರ ಹೋಗುವುದಿಲ್ಲ. ಆದರೆ ಕಲಾಕೃತಿಯಿಂದುಂಟಾಗುವ ರಸ–ಸೌಂದರ್ಯ ಗ್ರಹಣವನ್ನು ಮಾಡಲಿಕ್ಕೆ ಒಂದು ತಪ (ಹನ್ನೆರಡು ವರುಷಗಳು) ಅಧ್ಯಯನ ಮಾಡಬೇಕಾಗುವುದೆಂ ಮಾತೂ ಸುಳ್ಳು. ಸುಂದರವಾದ ನಾಟಕದ ಲಕ್ಷಣವನ್ನು ಕಾಳಿ ದಾಸನು “**ನಾಟ್ಯಂ ಭಿನ್ನರುಚೇರ್ಜನಸ್ಯ ಬಹುಧಾಪ್ಯೇಕ ಸಮಾರಾಧನಂ**” ಎಂದು ಮಾಡಿರುವನು. ಪಂಡಿತರಿಂ ಪಾಮರರ ವರೆಗೆ ಎಲ್ಲರಿಗೂ ಸಂತೋಷ ಕೊಡುವುದು ಒಂದೇ ಅದು ನಾಟಕ! ಕಾವ್ಯದ ರಸವನ್ನಾಗಲಿ, ಬೇರೆ ಯಾವ ಕಲಾಕೃತಿಯ (ವಾಸ್ತು, ಶಿಲ್ಪ, ಸಂಗೀತ, ನೃತ್ಯ) ರಸಗ್ರಹಣ ಮಾಡುವುದಕ್ಕಾಗಲಿ ಅಭ್ಯಾಸವು ಬೇಕು. ಆದರೆ ಕಲಾಶಿರೋಮಣಿಯಾದ ನಾಟಕವನ್ನು ಹೃದಯಂಗಮವಾಗಿ ಮಾಡಿಕೊಳ್ಳುವುದಕ್ಕೆ ಅಭ್ಯಾಸ ಮುಳುವಾಗುವುದೆಂದು ದೊಡ್ಡ ರಸಿಕರ ಮತವಾಗಿರುವುದು. ಪ್ರತ್ಯಕ್ಷವಾಗಿ ನೋಡಿದರೂ ಅದೇ ಮಾತು ಕಂಡುಬರುವುದು.

ಏಳೆಂಟು ವರ್ಷದ ಹುಡುಗನು ರಂಗಮಂದಿರದ ಹೋದರೆ, ಅವನಿಗೇನೇನು ರಸಗ್ರಹಣವಾಗುವುದೆಂಬುದನ್ನು ನೋಡುವ. ಶಾಕುಂತಲವನ್ನೇ ನೋಡಿದನೆಂದು ತಿಳಿಯೋಣ! ಶಾಕುಂತಲದಲ್ಲಿ ಶಕುಂತಲೆಯು ನೀರನ್ನು ಹಾಕುವುದು, ರಾಜ ಬರುವುದು, ಅವರ ಸಂವಾದ, ಆನೆ, ದಂಡು, ಕಣ್ವ, ತಪಸ್ವಿಗಳು ರಾಜನ ನ್ಯಾಯಾಸನ, ರಾಜನು ಶಕುಂತಲೆಯನ್ನು ಹೊರ ಹಾಕುವುದು, ಭರತನು ಸಿಂಹದೊಡನೆ ಆಡುತ್ತಿರುವುದು, ಆ ರಾಜ ಬರುವುದು, ಮಗನೆಂದು ಅಪ್ಪಿಕೊಳ್ಳುವುದು, ಶಕುಂತಲೆಯನ್ನು ತಿರುಗಿ ಕೊಡುವುದು.... ಇಷ್ಟು ಪ್ರಸಂಗಗಳ ಗ್ರಹಣ ಆತನಿಗಾಗದೆ ಇರದು. ಚಿಕ್ಕ ಹುಡುಗರಿಗಂತೂ ನಾಟಕದ ರಸ ಗ್ರಹಣವು ದೊಡ್ಡವರಿಗಿಂತಲೂ ಹೆಚ್ಚೇ ಆಗುವುದೆಂದು ಹೇ ಬಹುದು. ಇದು ನಡೆದದ್ದು ನಾಟಕವೆಂಬುದರ ಅರಿವು ದೊಡ್ಡ ವರಿಗಿರುವಷ್ಟು ಚಿಕ್ಕವರಿಗಿರುವುದಿಲ್ಲ. ಇದೆಲ್ಲ ನಿಜವೇ ಆಗು ವುದು ಅವರಿಗೆ. ಸುಳ್ಳು ದುರ್ಯೋಧನನನ್ನು ಸುಳ್ಳು ಭೀಮ ಸೇನನು ಸುಳ್ಳುಸುಳ್ಳೇ ಹಿಡಿದು ಜಗ್ಗಿ ಕೆಡಹಿದರೆ, ಸ್ತ್ರೀಯರ ಕುಳಿತ ಸ್ಥಳದಲ್ಲಿಯೆ ಬಿಕ್ಕಿಬಿಕ್ಕಿ ಅಳುವ ಸ್ವರ ಕೇಳಬರುವುದು ಗಂಡುಸರಿಗೆ ಎರಡೇಟು ಜಡಿದರೂ ಅಳು ಬರುವುದಿಲ್ಲ! ಹೆಂಗುಸ ಮಿದುಳು ಬಲು ಮೆತ್ತಗೆ, ಗಂಡುಸರದು ಕೊರಡು. ಚಿಕ್ಕ ರಲ್ಲಿಯಂತೂ ಸಾಮ್ಯ-ವೈಷಮ್ಯಗಳನ್ನು ಕಂಡು ಒಂದಾ ಹೋಗುವ ರೂಪಕಶಕ್ತಿಯು ಬಲವಾಗಿರುವುದರಿಂದ, ಅವ ಮನಸ್ಸಿನ ಮೇಲೆಯೂ ಹೃದಯದ ಮೇಲೆಯೂ ವಿಲಕ್ಷಣವಾ ಪರಿಣಾಮವಾಗುವುದು. ಕಣ್ವನು ಶಕುಂತಲೆಯನ್ನು ಗಂಡ ಮನೆಗೆ (ಅತ್ತೆಯ ಮನೆ ಎನ್ನುತ್ತಿದ್ದೆ! ದುಷ್ಯಂತನ ತಾಯಿ ಜೀವದಿಂದಿದ್ದಳೋ? ನನಗೆ ಗೊತ್ತಿಲ್ಲ!) ಕಳಿಸುವ ಪ್ರಸಂ ಬಂದಾಗ ಹುಡುಗ “ಹೌದು ಬಿಡಃ, ರಿಂದಕ್ಕನ ಕಳಸೋ ಮು ಅಪ್ಪನೂ ಹೀಂಗಃ ಅಳತಿದ್ದ!” ಎಂದರೂ ಎಂದನೆ. ಒಟ್ಟಿ ಚಿಕ್ಕ ವಯಸ್ಸಿನ ಹುಡುಗರಲ್ಲಿರುವ ಸಾಮರಸ್ಯ ಭಾವವು ದೊಡ್ಡ ವರಲ್ಲಿರುವುದಿಲ್ಲ. ಹುಡುಗನು ಒಂದು ಗಳಿಗೆಯೊಳಗೆ ರಾಜ ನಾಗುವನು, ಶಕುಂತಲೆಯಾಗಿ ನೀರೆರೆಯುವನು, ತಪಸ್ವಿಯಾ

ತಪಸ್ಸು ಮಾಡುವನು, ಕಣ್ವನಾಗಿ ಅಳುವನು, ದುಷ್ಯಂತನಾಗಿ ನಲಿದಾಡುವನು. ಎಂದ ಮೇಲೆ ಟಾಲಸ್ಟಾಯ್‌ರೆನ್ನುವ ಮಾತಿನೊಳಗೆ ಪೂರ್ಣ ತಥ್ಯವಿಲ್ಲದಿದ್ದರೂ ಎಷ್ಟೋ ಪಾಲು ಸತ್ಯವಿದೆಯೆಂದೆನ್ನಲಿಕ್ಕೆ ಅಡ್ಡಿ ಇಲ್ಲ. ಸರ್ವೋತ್ಕೃಷ್ಟವಾದ ಕಲಾಕೃತಿಯು ದೊಡ್ಡವರಿಗಿಂತಲೂ ಒಂದು ಸರ್ವಸಾಮಾನ್ಯ ಪಿಳ್ಳೆಗೂ ಎಷ್ಟೋ ಮಟ್ಟಿಗೆ ಸತ್ಯವಾಗಿ ತಿಳಿಯುವುದೆಂದು ಅಮೇರಿಕನ್ ಸಾಧುವರ್ಯನಾದ ಇಮರ್ಸನ್ನನು ಎಂದದ್ದರಲ್ಲಿಯೂ ಸತ್ಯವಿದೆ! ಉತ್ಕೃಷ್ಟ ಕಲಾಕೃತಿಯು ಇಷ್ಟು ಸುಲಭವಾದದ್ದು!

ಕಲಾಭಿರುಚಿಯನ್ನು ತಿಳಿಯಬೇಕಾದರೆ ಕಲೆಯ ಇನ್ನೊಂದು ಅಂಗವನ್ನೂ ತಿಳಿಯುವುದವಶ್ಯ. ಅದೇನೆಂದರೆ: ಕಲೆಯು ಪದಾರ್ಥಗಳನ್ನು ಪೂರ್ಣಮಾಡಿಕೊಡುವುದು– ಆಧ್ಯಾತ್ಮಿಸಿಕೊಡುವುದು. ಒಬ್ಬ ಕಲೋಪಾಸಕನಿಗೆ ಯಾವುದೊಂದು ಆಧ್ಯಾತ್ಮಿಕವಾಗಲಿ ನೈತಿಕವಾಗಲಿ ತತ್ತ್ವವನ್ನು ಹೇಳುವುದಿದೆ– ನ್ಯಾಯ, ಸತ್ಯ, ಪ್ರೀತಿ, ಸೌಂದರ್ಯ, ಕರುಣೆ, ಸಾಕ್ಷಾತ್ಕಾರ. ಈ ತತ್ತ್ವಗಳ ಬಗೆಗೆ ಹೇಳುವುದೇನು? ವಿಚಾರ, ಅನುಭವ, ಭಾವ, ರಸ. ಅದನ್ನು ಹೇಳುವುದು ಹೇಗೆ? ಇಂದ್ರಿಯಗಳಿಗೆ ಗೋಚರವಾಗುವಂತೆ, ಜನಮನಕ್ಕೆ ಸುಖವಾಗುವಂತೆ, ಜನರಿಗೆ ಮನೋರಂಜನೆಯಾಗುವಂತೆ, ಜನರ ಮನಸ್ಸಿನ ಭಿತ್ತಿಯಲ್ಲಿ ರೂಪವು— ಚಿತ್ರವು— ಸುಲಭವಾಗಿ ಮೂಡುವಂತೆ, ಒಮ್ಮೆ ಮೂಡಿದರೆ ಯಾವಾಗಲೂ ಉಳಿಯುವಂತೆ. ವಿಚಾರವು ಸಿದ್ಧವಾಗಿದೆ: 'ನ್ಯಾಯವೇ ದೇವರು, ಪರಮಾತ್ಮ' ಎಂದು. ಅದನ್ನು ಯಾವ ರೂಪದಲ್ಲಿ ಹೇಳಬೇಕು? ಯಾವ ರೂಪ? ನಿಸರ್ಗದೇವತೆಯ ಭಾಂಡಾರದಲ್ಲಿ ರೂಪಗಳಿಗೇನು ಕಡಿಮೆ? ಯಾವ ರೂಪವೂ ಪೂರ್ಣವಾಗಿರುವುದಿಲ್ಲ, ಇಷ್ಟೆ! ಇಸೋಪನು ತೀರ ಸುಲಭವಾದ, ಪ್ರತಿದಿನವೂ ಪ್ರತಿಯೊಬ್ಬರಿಗೂ ಗೋಚರವಾಗುವ ಗುಬ್ಬಿ, ಕಾಗೆ, ಎತ್ತು, ಎಮ್ಮೆ, ಒಂಟೆ, ಕೋಣಗಳನ್ನು ಆರಿಸುವನು. ಇನ್ನೊಬ್ಬನು ಐತಿಹಾಸಿಕ ಜಹಾಂಗೀರನ ಕಥೆಯನ್ನು ಆರಿಸುವನು. ಮತ್ತೊಬ್ಬನು ಇನ್ನೊಂದು ಕಥೆಯನ್ನೇ ಕಟ್ಟುವನು. ಈ ಕಥೆಗಳಲ್ಲಿರುವ ಪಾತ್ರಗಳು ನಿಸರ್ಗದಲ್ಲಿ ಸಿಕ್ಕುವಂತಿಲ್ಲ. ಆ ಪಾತ್ರಗಳಲ್ಲಿರುವ ದೋಷಗಳನ್ನು ಹೋಗಲಾಡಿಸುವನು ಕಲೋಪಾಸಕ. ರಾಜನನ್ನು ಕಥೆಯಲ್ಲಿ ತಂದರೆ, ಅಂತಹ ರಾಜನು ಮತ್ತೆಲ್ಲಿಯೂ ಜಗತ್ತಿನಲ್ಲಿ ಕಾಣಲಶಕ್ಯ. ಏಕೆಂದರೆ ಕವಿಯ ಮನಸ್ಸಿನಲ್ಲಿ ಸೋಸಿ ಸಿದ್ಧವಾದ ಮೂರ್ತಿಯದು. ಕವಿಯ ಮನಸ್ಸಿನ ರಸಗಳನ್ನೆಲ್ಲ ಹೀರಿಕೊಂಡು ಬರುವುದು— ಒಂದು ಬಟ್ಟೆಯನ್ನು ಸರೋವರದೊಳಗದ್ದಿದರೆ ಅದರ ಸಂಗಡ ಅದರಲ್ಲಿಯ ನೀರೂ, ಕಮಲದ ಸುಗಂಧವೂ, ಸ್ವಲ್ಪ ಹಾವಸೆಯೂ, ಸ್ವಲ್ಪ ಉಸುಕೂ ಬರುವಂತೆ. ಕಲೋಪಾಸಕನು ಹೇಳುವುದು ರಾಜನ ಚರಿತ್ರೆಯಲ್ಲ ನಿಜವಾಗಿ; ರಾಜನ ಚರಿತ್ರೆಯ ಬಾಹ್ಯರೂಪದ ಕಂಡಿಯೊಳಗಿಂದ ನ್ಯಾಯದೇವತೆಯ ಆಧ್ಯಾತ್ಮಿಕ (idealized) ಸ್ವರೂಪವನ್ನು ತೋರಿಸುವುದು. ಆಧ್ಯಾತ್ಮಸ್ವರೂಪವೆಂಬುದು ತಿಳಿಯದಿದ್ದರೆ ಪೂರ್ಣಸ್ವರೂಪವೆಂದು ಎನ್ನಿರಿ, ನಿರ್ದೋಷವೆಂದರೂ ಒಂದೇ, ಗುಣವುಳ್ಳದ್ದು ಎಂದರೂ ಒಂದೇ. ಈ ಪೂರ್ಣರೂಪಿಯಾದ ಮೂರ್ತಿಯಲ್ಲಿ (Symbol), ತಾನು ಕಂಡ ಉಂಡ ಅನುಭವವನ್ನೂ, ವಿಚಾರಗಳನ್ನೂ, ಪರಿಸ್ಥಿತಿಯನ್ನೂ, ವಿವಿಧರಸಾನುಭವಗಳನ್ನೂ— ಒಂದೇ ಮಾತಿನಲ್ಲಿ ಹೇಳಬೇಕಾದರೆ ತನ್ನ ಆತ್ಮವನ್ನೇ ತುಂಬುವನು. ಕಲೋಪಾಸಕನ ಆತ್ಮದ ಬೆಳಕು ಆ ಮೂರ್ತಿಯ ಮುಖದ ಮೇಲೆ ಬೀಳುವುದು; ಆ ಮೂರ್ತಿಯು ಸಜೀವವಾಗುವುದು. ಆ ಮೂರ್ತಿಯೆಂದರೂ ಒಂದೇ, ಕಲೋಪಾಸಕನೆಂದರೂ ಒಂದೆ. ಚಿಕ್ಕ ಹುಡುಗಿಗೆ ಒಂದು ಗೊಂಬೆಯನ್ನು ಕೊಟ್ಟರೆ, ಆಕೆಯು ಅದರಲ್ಲಿ ತನ್ನ ಜೀವಾಳವನ್ನೇ ಕಲ್ಪಿಸುವಳು. ತನಗೆ ಹಸಿವೆಯಾದಕೂಡಲೆ ಅದಕ್ಕೂ ಹಸಿವೆಯಾಗಿರುವುದೆಂದು ತಿಳಿಯುವಳು. ತನಗೆ ಚಳಿಯಾದರೆ ಅದಕ್ಕೂ ಹೊಚ್ಚುವಳು. ತನಗೆ ನಿದ್ದೆ ಬಂದರೆ ಅದಕ್ಕೂ ನಿದ್ದೆ ಬಂದಿತೆಂದು ತಿಳಿದು ಅದರ ಸಂಗಡವೆ ನಿದ್ದೆ ಮಾಡುವಳು; ಅದೇ ಮೇರೆಗೆ ಕಲೋಪಾಸಕನೂ ಅವನ ಮೂರ್ತಿಗಳೂ ಏಕಜೀವವಾಗುವುವು.

ಇಷ್ಟು ಗಹನವೇ ಕಲಾಕೃತಿ? ಛೇ, ಇದು ಬರಿಯ ಬರೆಹದಲ್ಲಿ ಇಷ್ಟು ಗಡುಚಾಗಿ ಕಾಣುವುದು. ಹೃದಯದಿಂದ ಒಂದು ಹೃದಯಕ್ಕೆ ಕಿರಣದಂತಾಗುವುದು ಈ ಕಲಾಕೃತಿಯೆಂಬುದು. ನಮ್ಮ ಕಣ್ಣಿನ ಪ್ರಭಾವದಂತೆ! ಇಷ್ಟು ಸಣ್ಣ ಕಣ್ಣು, ವಿಶ್ವವಾದರೋ ಅನಂತವಾದದ್ದು, ಅನಂತ ವಸ್ತುಗಳಿಂದ ತುಂಬಿರುವಂತಹದು! ಇಂತಹ ವಿಶಾಲವಾದ, ಅಗಾಧವಾದ, ವಿವಿಧವಾದ ವಿಶ್ವದ ವ್ಯವಹಾರಗಳನ್ನು ಕಣ್ಣು ಪ್ರತಿನಿತ್ಯ ನೋಡಿ, ತನಗೆ ಬೇಕಾದದ್ದನ್ನು ಆರಿಸಿಕೊಂಡು, ಜೀವನದ ವ್ಯವಹಾರವನ್ನು ಸಾಗಿಸುವುದೇ?— ಎಂದು ಸಂಶಯ ಬರುವುದು. ಆದರೆ ವಸ್ತುಸ್ಥಿತಿಯನ್ನು ನೋಡಿದರೆ, ನಮ್ಮ ಜೀವನದ ಐಶ್ವರ್ಯವೆಲ್ಲ ಎರಡು ಕಣ್ಣುಗಳಿಂದಲೆ. ಅದರಂತೆಯೇ ಕಲಾದೃಷ್ಟಿಯಿಂದ, ರಸದೃಷ್ಟಿಯಿಂದ, ಸಹಾನುಭೂತಿಯಿಂದ, ಪ್ರೇಮದಿಂದ ನಾವು ಕಲಾಕೃತಿಯ ಕಡೆಗೆ ನೋಡಿದರೆ, ಅದೇ ತನ್ನ ವೈಭವವನ್ನೆಲ್ಲ ಬಿಚ್ಚಿ ತೋರಿಸುವುದು. ಸಹಾನುಭೂತಿಯೇ ಕಲಾಭಿರುಚಿಯ ಮೊದಲನೆಯ ಮೆಟ್ಟಲು.

ಸೌಂದರ್ಯಶಾಸ್ತ್ರದಲ್ಲಿ ಕಲಾಭಿರುಚಿಗೆ ಬೇರೆ ಅರ್ಥವಿರುತ್ತದೆ. ಯಾವುದೊಂದು ಕಲಾಕೃತಿಯನ್ನು ಸಂಪೂರ್ಣವಾಗಿ ಅರಿಯುವುದೇ ಅಭಿರುಚಿ (taste). ಪಂಡಿತರಿಂದ ಪಾಮರರವರೆಗೆ ಆಕಲನವಾಗುವುದು ಕಲಾಕೃತಿಯ ಸಂಪೂರ್ಣಜ್ಞಾನವಲ್ಲ. ಒಂದು ಸುಂದರವಾದ ಗುಲಾಬೀಹೂವಿನ ಸಂಪೂರ್ಣಜ್ಞಾನವು ನಮಗಾಗಲಾರದು. ನಮಗೆ ಅದು ಸುಂದರವಾಗಿದೆಯೊ ಇಲ್ಲವೊ ಇಷ್ಟೇ ತಿಳಿಯುವುದು. ಆದರಂತೆಯೇ ಕಲಾಕೃತಿಯಿಂದ ನಮಗೆ ಆನಂದವಾಗುವುದು ಅದರ ಸೌಂದರ್ಯದಿಂದ. ಆ ಗೂಢವಾದ ಸೌಂದರ್ಯವು ಕಲಾಕೃತಿಯಲ್ಲಿ ಬಚ್ಚಿದ ಮಟ್ಟಿಗೆ:

ಬೇಕಾದವರು ನೋಡಬಹುದು, ಅನುಭವಿಸಬಹುದು, ನಲಿದಾಡಬಹುದು. ಗುಲಾಬಿ ಹೂವಿನ ಸಂಪೂರ್ಣಜ್ಞಾನವು ಸಸ್ಯಶಾಸ್ತ್ರಜ್ಞನಿಗೆ ತಿಳಿಯುವಂತೆ ಕಲಾಕೃತಿಯ ಸಂಪೂರ್ಣ-ಜ್ಞಾನವು ಕಲೆಗಳ ಅಂಗಾಂಗಗಳ ಶಾಸ್ತ್ರಗಳಲ್ಲಿ ನುರಿತ ರಸಿಕನಿಗೇ ತಿಳಿಯುವುದು.

ಸಂಗೀತಶಾಸ್ತ್ರದ ಉದಾಹರಣೆಯನ್ನು ತೆಗೆದುಕೊಳ್ಳುವ: ಒಬ್ಬ ದೊಡ್ಡ ಸಂಗೀತಗಾರನು ಹಾಡುತ್ತಲಿದ್ದಾನೆ—ತಾಳ-ಸ್ವರ-ಗಳಿಂದ ಕೂಡಿದ ರಾಗಗಳನ್ನು ಹಾಡುತ್ತಲಿದ್ದಾನೆ- ತರತರದ ಗೀತಗಳನ್ನು ವಿವಿಧತಾಳಗಳಲ್ಲಿ ಹೇಳುತ್ತಲಿದ್ದಾನೆ. ನಮಗೆ ಆಗುವ ಜ್ಞಾನವೆಂದರೆ (?) ಇಷ್ಟೇ: ಒಟ್ಟಿಗೆ ಸಂಗೀತವು ಸುಂದರವಾದದ್ದಾಯಿತು. ಮರುದಿವಸ ಯಾರಾದರೂ ಕೇಳಿದರೆ, "ಓಹೋ ಬಹಳ ಆನಂದವಾಯಿತು; ಇನ್ನೊಮ್ಮೆ ಅವರ ಕಾರ್ಯಕ್ರಮವಾದರೆ ನೀವೂ ಬನ್ನಿ" ಎಂದು ಹೇಳುವೆವು. 'ಅವರಲ್ಲಿಯ ಒಂದು ಹಾಡನ್ನು ಹೇಳಿರಿ' ಎಂದೊ, 'ಸಂಗೀತ-ಶಿಖಾಮಣಿಗಳು ಯಾವ ಯಾವ ರಾಗಗಳನ್ನು ಹಾಡಿದರು, ಹೇಳಿರಿ!' ಎಂದೋ ಯಾರಾದರೂ ಕೇಳಿದರೆ, ಕಿವಿಯ ಮೇಲೆ ಕೈ ಇಟ್ಟುಕೊಳ್ಳುವೆವು. ಸುಂದರವಾಯಿತಷ್ಟೇ ನಿಜ; ಅಷ್ಟೇ ನಮ್ಮ ಪಾಲಿಗೆ! ಅದೇ ಸಂಗೀತದ ಗುರಿ! ಅದೇ ಒಬ್ಬ ಸಂಗೀತಜ್ಞರನ್ನು ಕೇಳಿದರೆ, ಅವರು ಸಂಗೀತಕಚೇರಿಯಲ್ಲಾದ ಎಲ್ಲ ರಾಗಗಳ ಹೆಸರುಗಳನ್ನೂ ತಾಳಗಳನ್ನೂ ಹೇಳುವರು. ಅವರಿಗೇ 'ಒಂದು ಆದರೊಳಗಿನ ಗೀತ ಹೇಳಿತೋರಿಸಿರಿ' ಎಂದರೆ ಬಾಯಿಗೆ ಬೀಗ. (ಇಂಥವರಿಗೆ ಪಂಡಿತರೆನ್ನುವರು; ಇವರು ವಿವೇಚನೆಮಾಡ-ಬಹುದು, ಸಂಗೀತದ ಇತಿಹಾಸವನ್ನೂ ಹೇಳಬಹುದು; ಆದರೆ ಪ್ರತ್ಯಕ್ಷ ತಮಗೆ ಬರುವುದು ಏನೂ ಇರುವುದಿಲ್ಲ). ಅದೇ ಒಬ್ಬ ಸಂಗೀತಗಾರನನ್ನು ಕೇಳಿದರೆ, ಯಾವ ರಾಗ ಯಾವ ತಾಳವೆಂಬು-ದನ್ನು ಹೇಳದೆಯೆ ರಂಗಮಂದಿರವು ನಲಿದಾಡುವಂತೆ—ಅಂದು-ತೋರಿಸುವನು. 'ಅದರ ಇತಿಹಾಸಕ್ಕೇನು ಬೆಂಕಿಹಚ್ಚುವುದು! ನಮ್ಮ ಗುರುಗಳು ಇಷ್ಟೇ ಕಲಿಸಿರುವರು ನಮಗೆ' ಎಂದು ಹೇಳುವನು. ನಾನು ಒಬ್ಬ ಸಂಗೀತಜ್ಞರ ವ್ಯಾಖ್ಯಾನಕ್ಕೆ ಹೋಗಿದ್ದೆ. ಐದುನಿಮಿಷ ಮಾತನಾಡುವುದಾಗಲಿಲ್ಲ ಅವರ ಕಡೆಯಿಂದ. ಅವರ ಸಂಗೀತಕ್ಕೆ ಹೋಗಿದ್ದೆ ಮೊನ್ನೆ; ಹತ್ತು ಗಂಟೆಯಿಂದ ಮೂರು ಗಂಟೆಯ ವರೆಗೆ ಸರ್ವೋತ್ಕೃಷ್ಟವಾಗಿ ಹಾಡಿದರೂ ಅವರಿಗೆ ಕಾಲಸಾಲಲಿಲ್ಲ. ಇವೆರಡೂ ಅಂಗಗಳಲ್ಲಿ ಎಂದರೆ ಪ್ರತ್ಯಕ್ಷ ಕಲೆ, ಮತ್ತು ಅದರ ಜ್ಞಾನ- ಇವೆರಡರ ಜೀವಾಳವನ್ನು ಬಲ್ಲವರೇ ರಸಿಕಶಿಖಾಮಣಿಗಳೆಂದು ಹೇಳ-ಬಹುದು. ಅದಕ್ಕೇ ಎನ್ನುವುದು ಕಲಾಭಿರುಚಿಯೆಂದು. ಸಂಗೀತ-ದಲ್ಲಿ ಏನಾದರೊಂದು ಹೇಳಬಹುದಾದರೆ ಅವರಿಗೆ ಅಧಿಕಾರ ವಿರುವುದು, ಇತರರಿಗೆ ಇಲ್ಲ. ಸಂಗೀತಕಲೆಯ ಜ್ಞಾನದಂತೆಯೆ ಉಳಿದ ಕಲೆಗಳ ಮಾತು.

"ಕವಿಃ ಕರೋತಿ ಕಾವ್ಯಾನಿ ಸ್ವಾದು ಜಾನಂತಿ ಪಂಡಿತಾಃ |
ಸುಂದರೀಣಾಂ ಹಿ ಸೌಂದರ್ಯಂ ಪತಿರ್ಜಾನಾತಿ ನೋ ಪಿತಾ ||"

ಎಂದು ಸುಭಾಷಿತದಲ್ಲಿ ಹೇಳಿದೆ. ಸುಂದರಿಯ ಸೌಂದರ್ಯದ ಜ್ಞಾನವು ಪತಿಗೇ ಆಗುವುದು; ಏಕೆಂದರೆ ಪತಿಯು ಆಕೆಯನ್ನು ಪ್ರೀತಿಸುವನಲ್ಲದೆ,ಆಕೆಯ ಜೀವಾಳದಲ್ಲಿಯೇ ಬೆರೆಯುವನೆಂದು ಅಗಾಧವಾದ ಪ್ರೇಮವೇ ಜ್ಞಾನಕ್ಕೂ ಆನಂದಕ್ಕೂ ಕಾರಣ ವಾಗಿದೆ. ಪಂಡಿತರು ಕಾವ್ಯದ ಅರ್ಥವನ್ನು ರಸವನ್ನು ವಿಂಗಡ ವಾಗಿ ಹೇಳಬಹುದು; ಆದರೆ ಕವಿಯು ಕಲಾಕೃತಿಯನ್ನು ಕಂಡು ಕವಿಗೆ ಆಗುವ ಆನಂದವು ಇನ್ನಾರಿಗೂ ಆಗದು. 'ಸ್ವಾದು ಜಾನಂತಿ ಪಂಡಿತಾಃ' ಎನ್ನುವುದರ ಬದಲು 'ಕವಯಃ' ಎಂದು ಇರಬೇಕಾಗಿತ್ತು—ಎಂದು ನನ್ನ ಮತ. ಈಗಿನ ಟೀಕಾಕಾರರಲ್ಲಿ ತಮಗೆ ಬರುವದಾದರೋ ಯಾವುದೂ ಇಲ್ಲ; 'ಈ ಕಲಾಕೃತಿಯು ಹೀಗಿರಬೇಕಾಗಿತ್ತು, ಹಾಗಿರಬೇಕಾಗಿತ್ತು' ಎಂದು ಟೀಕೆ ಮಾಡಿದರೆ ತೀರಿತು ತಮ್ಮ ಕೆಲಸವೆಂದು ಎನ್ನುವವರೇ ಬಹಳವಾದ್ದರಿಂದ, ವಿಮರ್ಶೆ ಎಂಬ ವಾಙ್ಮಯಕ್ಕೆ ಕುಂದು ಬಂದಿದೆ. ಕವಿಯ ಜೀವಾಳವನ್ನು ಕಂಡು ಹಿಡಿಯುವವನು ಕವಿಯೇ, ಪಂಡಿತನಲ್ಲ! ಕಾವ್ಯರಸಿಕನೆಂದರೆ ಪಂಡಿತ ಅಧಿಕ ಕವಿ. ಪಂಡಿತನಲ್ಲದಿದ್ದರೆ ಕವಿಯ ಕಾವ್ಯಕೌಶಲ್ಯವು ತಿಳಿಯದು; ಕವಿಯಲ್ಲದಿದ್ದರೆ ಕಾವ್ಯದ ಜೀವಾಳ ತಿಳಿಯದು.

ಕಲಾಭಿರುಚಿಯೆಂದರೆ, ಒಟ್ಟಿಗೆ, ಹೆಚ್ಚಾಗಿ ಬುದ್ಧಿಯಿಂದ ಕಲಾಕೃತಿಯ ಕೌಶಲ್ಯವನ್ನು ವಿಂಗಡವಾಗಿ ಕಂಡುಹಿಡಿದು, ತನ್ನ ಜೀವಾಳದ ಪ್ರೇಮದಿಂದ ಅದರ ಹೃದಯವನ್ನು ಪರೀಕ್ಷಣೆ ಮಾಡುವುದು. ಕಲೆಯೆಂದರೆ ತರ್ಕವಲ್ಲ, ವೇದಾಂತವಲ್ಲ, ಇತಿಹಾಸವಲ್ಲ; ಕಲೆಯೆಂದರೆ ಕಲೋಪಾಸಕನ ಜೀವಾಳದ ಮೂರ್ತಿ. ಆ ಮೂರ್ತಿಯಲ್ಲಿ ಕಲೋಪಾಸಕನು ಸೂಚನೆಗಳಿಂದ ತೋರಿಸುವ ತನ್ನ ಆತ್ಮದ, ಜ್ಞಾನದ, ಭಾವದ ಬಗೆಗಳ ಆದರ್ಶ ವನ್ನು ಕಂಡುಹಿಡಿಯುವುದೇ ರಸಿಕನ ಮುಖ್ಯ ಕರ್ತವ್ಯ. ಒಬ್ಬರು 'ಶಾಕುಂತಲ ನಾಟಕದಲ್ಲಿ, ಶಕುಂತಲೆಯು ದುಷ್ಯಂತನ ಮೇಲೆ ಕೋರ್ಟಿನೊಳಗೆ ಫೋಟಗೀ ದಾವೆ ತಂದಿದ್ದರೆ ನಾಟಕವು ಪೂರ್ಣ ವಾಗುತ್ತಿತ್ತು' ಎಂದು ಬರೆದಿರುವರು. ಅವರು ವಕೀಲರಿರಬೇಕು ಎಂದು ನನ್ನ ತರ್ಕವಿದೆ. ಶಾಕುಂತಲವೆಂದರೆ ಕಾಯಿದೇ ಕಲಿ-ಸುವ ಪುಸ್ತಕವಲ್ಲ. ಇನ್ನೊಬ್ಬರು: ದುಷ್ಯಂತನು ತಪೋವನ ದಲ್ಲಿ ಎಷ್ಟು ದಿವಸ ಇದ್ದನೆಂಬುದನ್ನು ಊಹಿಸಿ, ಅಷ್ಟು ವೇಳೆಯಲ್ಲಿ ಶಕುಂತಲೆಯು ಗರ್ಭವತಿಯಾಗಲಾರಳೆಂದು ಊಹೆ ಪಡುವರು. ಶಾಬಾಸ್! ಕಾಲಿದಾಸನು ಶರೀರರಚನಾಶಾಸ್ತ್ರದ ನಿಯಮಗಳ ಪುಸ್ತಕವನ್ನು ಬರೆದಿರುವನೇ? ಇದೇ ಮೇರೆಗೆ ಶಿಲ್ಪ, ಚಿತ್ರ ಮುಂತಾದ ಕಲಾಕೃತಿಗಳ ಗತಿಯೂ ಆಗಿದೆ. ಆದ್ದರಿಂದ ಹೇಳುವ ಮಾತೇನೆಂದರೆ: ಕಲಾಭಿರುಚಿಯಿದ್ದ ರಸಿಕನೆಂಬ ಹೆಸರಿಗೆ ಪಾತ್ರನಾಗಬೇಕಾದರೆ, ವಿಮರ್ಶಕನು ಪ್ರತ್ಯಕ್ಷ ಕಲೆ ಮತ್ತು ಅದರ ಅಂಗಾಂಗಗಳ ಜ್ಞಾನ (Technique) ಬಲ್ಲವನಾಗಿರಬೇಕು. ಇಷ್ಟೇ ಅಲ್ಲದೆ, ತಾನು ಬರೆಯುವ ವಿಷಯದ ಅಭ್ಯಾಸವನ್ನೂ ತಕ್ಕಮಟ್ಟಿಗೆ ಮಾಡಿರಬೇಕು. ಇಲ್ಲದಿದ್ದರೆ ಅವನಿಗೆ ಅಭಿರುಚಿ ಯಿಲ್ಲವೆಂದೇ ಹೇಳಬಹುದು.

ಅಳುಬುರುಕು ಕಾಲುದೀಪ

ಶ್ರೀ. ಶಿವರಾಮ ಕಾರಂತ

(ವ್ಯಂಗ್ಯ ಪ್ರಬಂಧ)

ಮಿಣುಕು ಬೆಳಕಿನ ಕಾಲುದೀಪದ ಕರುಣಾಕತೆಯಿದು! ಹೊಸ ಕಾಲದ ಹೊರ-ಮಿಂಚಿಗೆ ಮಾರುಹೋದ ನಮ್ಮ ಜನತೆ, ಹಳೆಯ ಕಾಲದ ಉಪಕಾರಿವೃದ್ಧರನ್ನು ಎಷ್ಟೊಂದು ಕೃತಘ್ನತೆಯಿಂದ ಕಾಣುತ್ತದೆ! ಅನ್ಯಾಯ, ಅನ್ಯಾಯ!

★

"ಊರಿಗೇನೆ ಉರಿಯಿತ್ತನು; ಮನೆಯ ಬೆಳಕನ್ನು ಮಾತ್ರ ಕಿತ್ತನು," ಈ ಮಾತು ಹಿಟ್ಲರ್ ಭೂಪತಿಗೇನೆ ಸಲ್ಲಬೇಕಾಗಿದೆ. ಅವನು ಬೆಳಗಿದ ಸಮರದ ಉರಿಯು ಸುಡದಂತಹ ಊರೇ ಇಲ್ಲ. ಅದರ ಪ್ರತ್ಯಕ್ಷ ಪರೋಕ್ಷ ಅನುಭವಗಳಿಂದ ಪಾರಾದ ನರಹುಳುವೇ ಇಲ್ಲ. ಅವನಿಂದಾಗಿ ಊರೂರೇ ಉರಿದು ಬೆಳಗಿತು.... ಆದರೆ ನನ್ನ ಮುಂದಿರುವ ಈ ಕಾಲುದೀಪವಿನ್ನೂ ಕುರುಡಾಗಿಯೇ ಉರಿಯುತ್ತಿದೆಯಲ್ಲ!

ಹೋಗಲಿ, ಸ್ಫೂರ್ತಿ ಬಂದಾಗ ಲೇಖನಿ ಹಿಡಿದು, ಹರಿಯಲಾರದ ಶಾಯಿಯನ್ನು ಪೆನ್ನಿಂದ ಕೊಡವಿ ಕೊಡವಿ, ಬರೆದುಬಿಡುವೆನೆಂದರೆ ಕಾಗದಕ್ಕೂ ಬರಗಾಲ. ಕಾವ್ಯ ಬರೆಯುತ್ತೇನೆಂದು ಸುಳ್ಳಾದರೂ ಸ್ವಜಿಸಿ 'ಕ್ವಾಯರು' ಕಾಗದ ತಂದು ಕುಳಿತರೆ, ದರಿದ್ರ ಸ್ಫೂರ್ತಿಯೆಂಬುದು ನಮ್ಮಂತಹರ ಪಾಲಿಗೆ ಕತ್ತಲಿಗೇನೇ ಒದಗಬೇಕೇ? ಪ್ರಾಯಶಃ ಹಗಲು ಸಂಸಾರದ ಬಾಧೆಗೂ ಕಾವ್ಯಕ್ಕೂ ತಾಕಲಾಟ ಬರಬಾರದೆಂದು ಅದು ರಾತ್ರಿಗೇನೆ ಒತ್ತಿಬರುತ್ತಿರಬೇಕು. ಗದರಿಸಿ ಮಕ್ಕಳನ್ನು ಹಾಸಿಗೆಯ ಮೇಲೆ ಹೊರಳಿಸಿ, ಅಡುಗೆ ಚೆನ್ನಾಗಿಲ್ಲವೆಂದು ಮಾನಿನಿಯನ್ನು ಮೂಲೆಗೊಳಿಸಿ—ಕುಳಿತರೆ.... ದೀಪಕ್ಕೇನು ಸಂಕಟ ಬಂದಿತು?

ನನ್ನೆದುರು ಉರಿಯುತ್ತಿದ್ದುದು ಹೊಸತಾದ ಪಾಲಿಶ್‌ನಿಂದ ಮಿರುಗುವ ಹಳತಾದ ಕಾಲುದೀಪ 'ಕಾಲುದೀಪ' 'ಕಾಲುಗುಪ್ಪ' ಎಂಬುವು ಹಳ್ಳಿಗರಿಟ್ಟ ಹೆಸರುಗಳು. ಆರ್ಯರು ಬಂದು ಅದನ್ನು ಗೀರ್ವಾಣಿಸಿ "ನೀಲಾಂಜನ" ಮಾಡಿದರು. ಏನು ಮಾಡಿದರೇನು?—ನೀಲಾಂಜನ ಪೆಟ್ರೊಮ್ಯಾಕ್ಸ್ ಆಗಲಾರದು, ಎಲೆಕ್ಟ್ರಿಕ್ ಗೋಲಕವಾಗಲಾರದು. ಆದರೆ ಗಾಡಿಗೆ ತಗಲಿಸುವ ಹರಿಕೇನ್ ದೀಪವೂ ಆಗಬಾರದೇ? ಅದನ್ನೇ ಈ ತನಕ ಉರಿಸುತ್ತಿದ್ದ ನಾನು— ಸೀಮೆಎಣ್ಣೆಗೆ ಸೀಸೆ ಹಿಡಿದು ಸಂಧ್ಯಾರಾಗದಲ್ಲಿ ತಾಸಿನತನಕ 'ಕ್ಯೂ' ಹಿಡಿಯಲಾರದೆ ಸೋತುದರಿಂದ, ಈ ಸೊಡರನ್ನು ಉರಿಸಬೇಕಾಯಿತು. ಯುದ್ಧ ಹೊರಡಿಸಿದ ಹಿಟ್ಲರನಲ್ಲದೆ ಇದಕ್ಕಾರು ಹೊಣೆ? ಅವನೇನು ಚಿಮಣಿ (ಸೀಮೆ) ಎಣ್ಣೆ ಕುಡಿಯುತ್ತಾನೆಯೇ? ಆದರೆ ಬಡ ಸಾಹಿತಿಯ ಗೋಳನ್ನು ಕೇಳುವವರಾರು? ಡಿಫೆನ್ಸ್ ಆಫ್ ಇಂಡಿಯಾ ಕಾಯಿದೆ ಮಾಡಿ, ಸಾಹಿತಿಜಾತಿಗಾದರೂ ನೇರವಾಗಿ ಮನೆಗೇನೆ ವಾರಕ್ಕೊಂದು ಡಬ್ಬಿ ಸೀಮೆ ಎಣ್ಣೆ ಸುರಿಯಬಾರದೇ? ನಾಳೆ ಯುದ್ಧದಲ್ಲಿ ಮಡಿದವರ ಚರಮಗೀತೆಯನ್ನೂ, ವಿಜಯಿಗಳ ಹೊಗಳ್ಗಾನವನ್ನೂ, ಓಡಿದರ ನಾಗಲೋಟವನ್ನೂ, ಹಿಂಜರಿದವರ ವ್ಯವಸ್ಥಿತ ಧೋರಣೆಯನ್ನೂ— ನಾವಲ್ಲದೆ ಬೇರೆ ಯಾರು ಬರೆಯಬೇಕು.?

ಆದರೆ ನನ್ನೆದುರು ಉರಿಯುತ್ತಿರುವ ಕುರುಡು ಕಾಲುದೀಪ ಕಟ್ಟಿಕೊಂಡು ನಾನೇನು ಗೋಳಿಡಲಿ! ಅದೇ ಸರಿಯಾದ ಮಾತು: ಮೊನ್ನೆ ರಾತ್ರಿ ನಾನು ಅದರ ಮುಂದೆ ಕುಳಿತು, ಅದರ ಬೆಳಕು ನನ್ನ ಕಾಗದದ ಮೇಲೆ ಬೀಳದೆ ಹೋದರೂ ಚಿಂತೆಯಿಲ್ಲ, ಅದಕ್ಕಾಗಲಿ ನನಗಾಗಲಿ ಕಾಣಲಿ - ನಾನಾದರೂ ಕತ್ತಲಲ್ಲಿ ಬೆಳಕನ್ನು ಮುಟ್ಟಿ ಕೈಸುಟ್ಟುಕೊಳ್ಳಬಾರದಲ್ಲ— ಎಂದರೆ, ಅದು ಮಿಣುಕು ಹುಳದಹಾಗೆ ಮಿನುಗಬೇಕೆ! ಅದರ ಬೆಳಕಿನಲ್ಲಿ 'ಚಿಯರ್'ಎಂಬ ಒಡವೆ ಇಲ್ಲವಾಗಿತ್ತು; ಆದರೆ ಚಿರಿಚಿರಿ ದನಿಬೇರೆ! ನೀರುಮಿಶ್ರಿತ ಎಣ್ಣೆಯೋ ಏನೊ, ಕೋಮಟಿಯ ಕೈವಾಡ! ಅದರಿಂದ ಕಣ್ಣೀರಿನ ತುಟುಕು ಬೀಳುವಂತಿತ್ತು. "ಅಯ್ಯೊ, ದೀಪವೇ!" ಎಂದೆ ನಾನು. "ಕಣ್ಣಿಗೆ ಈ ದೀಪ ತಂಪು" ಎಂದಳು ನಮ್ಮಾಕೆ! ಹಿಂದೆ ಯಾರೋ ಎಂದ ಮಾತಿನ ಪುನರುಕ್ತಿಯಾಯಿತು; 'ಕಾಪಿರೈಟು ಅಪಹರಣದ ದೋಷ ಕನ್ನಡನಾಡಿನಲ್ಲಿ ನಿತ್ಯನಡೆಯುವ ತಪ್ಪು' ಎಂದು ಸುಮ್ಮನಾದೆ. ಕಣ್ಣಿಗೆ ತಂಪಂತೆ! ದೀಪವೆಂಬುದು ತನ್ನ ಮುಸುಡು ಬೆಳಗುವುದಕ್ಕೊ? ನಮ್ಮ ಮುಖ ಬೆಳಗುವುದಕ್ಕೋ?

ನನ್ನ ಹೊಟ್ಟೆಯುರಿ ಏರಿತು. ಪುಟ್ಟ ಗಾಳಿ ಬಂದು ಬ್ಲಿಟ್ಸ್ ಮಾಡಿ ಅದರ ಉರಿ ನೊಂದಿತು! "ಹಾಳು ಶನಿದೀಪ. ಇದ್ದರೇನು ಸತ್ತರೇನು?"— ಎಂದೆ ನಾನು. ನನ್ನ ಸುತ್ತಲೂ ಕತ್ತಲು. ನೊಂದಿದ ಜ್ವಾಲೆಯ ಸ್ಥಾನದಲ್ಲಿ ನಂದದ ಕೆಂಡ ಕಾಣಿಸಿತು! ಚಿತೆಯೊಂದರ ಕೊನೆಯ ಕೆಂಡದಂತೆ! ಚಿತೆ- ಎಂಬುದೇ ಸಮನಾದ ಮಾತು! ಆ ಬತ್ತಿಯ ಕರಟಿ ಒಡೆದ ಕಮರುವಾಸನೆಯು ಕೊನೆಗಾಲದ್ದೇ ಹೊಗೆಯೆನಿಸಿತ್ತು! ನಾನಂತೂ ರೇಗಿ ಸಿಡಿಮಿಡಿ-

ಗೊಂಡು, ‘ ನಿನ್ನನ್ನು ಉರಿಸಿ ಕಾವ್ಯಬರೆಯಿಸಿಕೊಳ್ಳುವ ಬದಲು ಎರಡು ಸಿಗರೇಟುಹೊತ್ತಿಸಿ ಕವನ ಸುರಿಸಬಹುದು ’— ಎಂದೆ!

ನನ್ನ ಮಾತನ್ನು ಕೇಳಿಯೋ ಏನೋ, ಕಾಲುದೀಪ ಚಿಟಿಪಿಟಿ-ಚಿಟಿಪಿಟಿ ಎಂದು ಗೋಳುಗರೆಯಿತು. ಅದರ ಹೊಗೆಯು ನನ್ನ ನಾಸಾಪುಟದಿಂದ ನಾಭೀಕಮಲದ ತನಕ ಮುಟ್ಟಿತು. ‘ಎ. ಆರ್. ಪಿ ಯವರನ್ನು ಕರೆಯೋಣವೇ ?’ ಎಂದುಕೊಂಡೆ. ತಕ್ಷಣ ‘ ಮೂಗಿನ ಸೊಳ್ಳೆಯೊಳಗೆ ಸ್ಟಿರಪ್ ಪಂಪಿನಿಂದ ನೀರು ಚಿಮ್ಮಿಸಲೇ’— ಎಂದೆನಿಸಿತು. ಇದು ನನ್ನ ಮನಸ್ಸಿನ ಅನುಭವ ಮಾತ್ರ. ಆದರೆ ಆಗ ನನ್ನ ಕಣ್ಮುಂದೆ ಕಾಣಿಸಿದ ಚಿತ್ರ ಬೇರೆ—ಬೇರೆಯೇ ಬೇರೆ : ನನ್ನ ಕಾಲುದೀಪವೇ ಥಳಥಳಿಸಿ, ಬೆಳಗಿ, ಮಿಂಚಿನಂತೆ ಹೊಳೆಯಿತು. ಅದರ ಕಾಯವು ಬೆಳೆದು ಆಳುಗಾತ್ರವಾಯಿತು! ‘ಇಷ್ಟೆತ್ತರದ ಕಂಚಿನ ನೀಲಾಂಜನವನ್ನು ಹಿಂದೆ ನಾನು ಎಲ್ಲೋ ಯಾವ ಗುಡಿಯಲ್ಲೋ ಕಂಡಿದ್ದೇನೆ’—ಎನ್ನುವಷ್ಟಕ್ಕೆ ಅದು ಮತ್ತೂ ಬೆಳೆಯಿತು. ಅದರ ಮೈತುಂಬ ಸಾವಿರ ದೀಪಗಳನ್ನು ಉರಿಸಿ ನಿಂತುಕೊಂಡಂತೆ, ನಾಲ್ಕು ಆಳೆತ್ತರ ನಿಂತಂತೆ— ಕಂಡಿತು! ‘ಏನು ? ನೀನು ಕಾರ್ತಿಕಮಾಸದಲ್ಲಿ ಉಡುಪಿಯ ರಥಬೀದಿ ಚೌಕದಲ್ಲಿ ಮೆರೆದವನೇ?’ ಎಂದು ಕೇಳುವಷ್ಟಕ್ಕೆನೆ—ಅದು ಮತ್ತಷ್ಟು ಬೆಳೆದು, ಮಾನಸ್ತಂಭದಂತೆ ಮಹಾದಾಕಾರ ತಾಳಿತು. ಅದರ ಮೈ ಶಿಲೆಯಾಯಿತು; ಬೆಳಕು ತುತ್ತುದಿಯಲ್ಲಿ ಕಾಣಿಸಿತು. ಇನ್ನೊಂದು ಕ್ಷಣದಲ್ಲಿ—ಎಲ್ಲವೂ ಮಾಯವಾಯಿತು. ‘ಇದೇನು ಕನಸೇ?’ ಎಂದು ನನಗೆ ಸೋಜಿಗವಾಗಿ ‘ನನ್ನ ಕತ್ತಿನ ಮೇಲೆ ಇನ್ನೂ ನನ್ನ ತಲೆ (ಬೇರೆಯವರ ತಲೆ ನಿಂತಿರುವುದು ನಿತ್ಯನೋಟವಷ್ಟೆ) ನಿಂತಿದೆಯೇ ?’ ಎಂದು ಅರಸಿ ನೋಡಿದೆ! ಇತ್ತು, ಸದರೀ ನನ್ನ ಕತ್ತಿನಮೇಲೆಯೇ ಸದರೀ ನನ್ನ ತಲೆಯಿತ್ತು!

ಎದುರಿಗೆ ನನ್ನ ಪ್ರತಿಕಕ್ಷಿ ದೀಪ. ಇನ್ನೂ ಆ ಬತ್ತಿಯ ತುದಿಯಲ್ಲಿ ಕೆಂಡ. ಇನ್ನೂ ಎಣ್ಣೆಯ ಹೊತ್ತಲು ನಾತ. ಇದೆಲ್ಲ ಚಿತಾಸಹಸ್ರಗಳ ಸಮ್ಮೇಳನವೋ, ಬಾವಲಿಗಳ ತವರೂರೋ, ನೀರಡಿಕೆಯ ನರುಗಂಪೋ—ಎಂಬಂತೆ ಕಾಣಿಸಿತು. ಆ ಗಭೀರ ವಾತಾವರಣವನ್ನೇ ಭೇದಿಸಿಕೊಂಡು ವಾಣಿಯೊಂದು ನುಡಿಯಿತು: “ ನಿನಗೆ ಉಂಡಮನೆಯ ನೆನಪಿಲ್ಲ, ನಲಿಸಿದವರ ಗುರುತಿಲ್ಲ, ಹರಸಿದವರ ಲಕ್ಷ್ಯವಿಲ್ಲ....” ಎಂದು. ಆ ಹವೆಯಲ್ಲಿ—ನನ್ನ ಮತಿ ನನ್ನೊಳಗಿಲ್ಲ ಎಂಬ ಪರಿಸ್ಥಿತಿಯಲ್ಲಿ, ಈ ಪ್ರಶ್ನೆಗಳನ್ನು ಕೇಳುತ್ತಿರುವವರಾರೆಂದರೆ—ಅದೇ ಈ ಕಾಲುದೀಪದ ಕೊರಡು; ಅಥವಾ ಅದರ ಕೆಂಡದಂತಹ ಆತ್ಮವಿರಬೇಕೆಂದು ಊಹಿಸಿದೆ.

“ ಹೂಂ- ಇರಬಹುದು-” ಎಂದೆ, ಯಾಕೆಂದೆನೋ ಅದು ನನಗೇ ತಿಳಿಯದು.

“ ನಿನಗೆ ಉಪಕಾರವಿಲ್ಲ!”— ಎಂದು ಎರಡನೆಯ ಆರೋಪ ಸಿದ್ಧವಾಯಿತು.

“ ಹೂಂ- ಇರಬಹುದು !”— ಎಂದೆ.

“ ನನ್ನನ್ನು ಎಂದು ಹೊರಕ್ಕೆ ತೆಗೆದವರು ನೀವು ? ”

“ ಮೂರುದಿನವಾಯಿತು, ನಿನ್ನನ್ನು ತೆಗೆದು ಬೂದಿಯಿಂದ ಮಾಲೀಸುಮಾಡಿ, ಬ್ರಾಸೋವಿನಿಂದ ಪಾಲೀಸುಮಾಡಿ!”—ಎಂದೆ, ತುಸು ಧೈರ್ಯತಾಳಿ.

“ ಯಾಕೆ ತೆಗೆಯಬೇಕಿತ್ತು ? ”

“ ಹಿಟ್ಲರನನ್ನು ಕೇಳು, ಟೋಜೋನನ್ನು ಕೇಳು, ನನಗೆ ಸೀಮೆ ಎಣ್ಣೆ ಕೊಡಲು ಇಲ್ಲವೆಂದ ಅಂಗಡಿಕಾರನನ್ನು ಕೇಳು! ” ಎಂದೆ.

“ ಅಷ್ಟು ನೆನಪಿದೆ ! ”

“ ಇದೆ ! ”

“ ಹಿಂದೆ ನಿನ್ನ ಮನೆಯಾಕೆ ನನ್ನ ವಿಷಯ ಏನು ಯೋಚಿಸಿದ್ದಳು ? ”

“ ಯೋಚಿಸುವುದೇನು—ನಿನ್ನನ್ನು ಕರಗಿಸಿ ಕಾಫಿಯ ಪ್ಯಾಲಾ ಮಾಡಿಸಿರಿ— ಎಂದು. ”

“ ನೀನೇನು ಮಾಡಿಸುವವನಿದ್ದೆ ? ”

“ಪಿಂಗಾಣಿ, ಗಾಜಿನ ಕಪ್ಪು-ಬಸಿಗಳ ಕಾಲದಲ್ಲಿ, ಕಾಫಿಯನ್ನು ಕಂಚಿನಲ್ಲಿ ಕುಡಿಯಲು ಅದು ಎಮ್ಮೆ ಮಜ್ಜಿಗೆಯೇ ?” ಎಂದಿದ್ದೆ. ಅದಕ್ಕೇನೆ—ನಿನ್ನಿಂದ ‘ ಬ್ರಾಸ್ ಬುಕೆಂಗ್ ’ ಮಾಡಬಹುದು—ಎಂದಿದ್ದೆ. ಕಂಚುಗಾರನೊಬ್ಬ, ಮಗುವಿಗೆ ಕಂಚಿನ ಗೊಂಬೆ ಮಾಡಿಕೊಡುವೆನೆಂದಿದ್ದ. ನಮ್ಮ ಮೂವರ ಹಕ್ಕೂ ಬೇರೆ ಬೇರೆ ದಾರಿಯಲ್ಲಿ ಹರಿದುದರಿಂದ, ಆಗಲೇ ನಿನಗೆ ಮೋಕ್ಷವಾಗಲಿಲ್ಲ. ಆದುದರಿಂದ ನೀನೀಗ ನನ್ನನ್ನು ಅಪರಾಧಿಯನ್ನಾಗಿ ಮಾಡಿ ತನಿಕೆ ನಡೆಸುತ್ತೀದ್ದೀಯಾ!.... ಅಳುಬುರುಕನಾದ ನೀನು ? ”

“ ಯಾಕೆ ಕೋಪಿಸುತ್ತೀಯಾ ? ನಿನ್ನಂತರಂಗವನ್ನು ಇಣಿಕಿ ನೋಡು! ನಿನಗೆ ಒದಗಿ ಬಂದ ಉಪಕಾರದ ನೆನಪೂ ಇಲ್ಲದೆ ಹೀಗೆ ಬೈದರೆ ಏನು ಗತಿ ? ಡೆಡ್‌ರಿಲೀಫ್ ಬಿಲ್ಲನ್ನು ನನ್ನ ಋಣಕ್ಕೂ ನೀನು ತಗುಲಿಸಿಬಿಟ್ಟರೆ ಸಮನೇ ? ”

“ ನಿನ್ನ ಕಾಯಿದೆಗೆ ಮಣ್ಣು ಬಿದ್ದಿತು ! ಉರಿಯದ ನಿನ್ನನ್ನು ಕಟ್ಟಿಕೊಂಡು ಏನು ಸಂಸಾರ ಮಾಡಲಯ್ಯ, ಏನು ಕಾವ್ಯ ಬರೆಯಲಿ !

“ ಅಣ್ಣಾ— ಹಾಗೇಕೆ ಅನ್ನುತ್ತೀ ? ರನ್ನ, ಪಂಪ, ಜನ್ನ, ಚೆನ್ನ, ವ್ಯಾಸ, ಗೀಸ-- ಇವರೆಲ್ಲ ಮಹಾಕಾವ್ಯ ಬರೆಯಲಲ್ಲವೇ— ನನ್ನಂತಹ ನೀಲಾಂಜನದ ಬೆಳಕಿನಲ್ಲಿ ? ”

“ನಿನ್ನಂತಹದಾದ ನೀಲಾಂಜನದ ವಾಸನೆಗೆ ತಲೆಬೇನೆ ಬಂದು, ಪರಿಹರಿಸಲು ಅಮೃತಾಂಜನ ಬೇಕು! ನಿನ್ನ ಬೆಳಕಿಂದ ನನಗೆ ನಾಳೆ ಬರಲಿರುವ ಶಾರ್ಟ್-ಸೈಟಿಗೆ ಇಬ್ಬದಿ ಮೊಳ್ಪಾದ ದೃಷ್ಟಿಚಕ್ರ ಬೇಕು! ”

“ ಇಲ್ಲ— ನಿನಗೆ ನಾನು ಈ ಹಿಂದೆ ಮಾಡಿದ ಉಪಕೃತಿ ಯಾವುದೂ ನೆನಪಾಗುವಂತಿಲ್ಲ ! ನಾನು ನಿನ್ನ ಪ್ರಣಯಕ್ಕೆ ನೆರವಾದುದು ; ಉಪನಯನಕ್ಕೆ ನೆರವಾದುದು— ”

ಜಯಂತಿ

“ ಜನಿವಾರವೇ ಇಲ್ಲ ನನಗೆ; ಉಪನಯನ ದಂಡ!”

“ ಏನು ಮಡದಿಯೂ ಇಲ್ಲವೇ ? ನಿಮ್ಮೀರ್ವರ ಲಗ್ನಕ್ಕೆ ನಾನು ಸಾಕ್ಷಿಯಾಗಿ ನಿಮ್ಮ ಬಳಿಯಲ್ಲಿ ನಿಂತುದು ಸುಳ್ಳೆ? ಜತೆಗೆ ಯಜ್ಞೇಶ್ವರನೂ..... ”

ಈ ಮಾತನ್ನು ನಿರಾಕರಿಸಿದರೆ, ಮಡದಿಯ ಕೋಪ ಮೈಮೇಲೆ ಎಗರೀತೆಂದು ಸುಮ್ಮನಾದೆ.

“ ಮಗೂ, ನಿಮ್ಮ ಮುತ್ತಜ್ಜಿಗೆ ಮೀರಿದ ವಯಸ್ಸು ನನ್ನದು! ನಿಮ್ಮ ಮುತ್ತಜ್ಜನು ಇದ್ದರೆ ನಿನ್ನನ್ನು ಕರುಣೆಯಿಂದ ಮೈಸವರುತ್ತಲಿದ್ದ. ”

ಎಲ್ಲದಕ್ಕೂ ನನ್ನನ್ನೇ ಆರೋಪಿಯನ್ನಾಗಿ ಮಾಡಿದ ದೀಪದ ಮಾತಿನಲ್ಲೆನೋ ಮರುಕವಿತ್ತು, ನಯವಿತ್ತು, ಆದರೆ ಅದರ ಬಾಣವೆಲ್ಲಾ ನನಗೇನೆ!

“ ಮಗು, ನಿಮ್ಮ ಅಜ್ಜಿಯು ತೀರಿಕೊಂಡಾಗ—ನೆನಪಿದೆಯೇ! ಅವರ ದೇಹದ ದೀಪ ನೊಂದುವಾಗ ನಾನು ಉರಿದು ನಿಂತಿದ್ದೆ, ನನ್ನ ಉರಿಯಿಂದ ಎಣ್ಣೆ ಉರಿದು ತೊಟ್ಟಿಕ್ಕಿತ್ತು ! ”

ನನಗೆ ಆ ಚಿತ್ರದ ನೆನಪಾಯಿತು, ಆ ದಿನ ದೀಪದ ಬಾಯಿಂದಲೂ ಉರಿಯೆಣ್ಣೆ ಬಿದ್ದುದು. ಆ ದೀಪವನ್ನು ಹನ್ನೊಂದು ದಿನಗಳ ತನಕ, ನನ್ನಜ್ಜಿ ಮಡಿದ ತಾವಿನಲ್ಲಿ ಉರಿಸಿದುದು—ಅವಳು ಅಲ್ಲೇ ಇರುವಳು ಎಂಬ ನೆನಪು ನನಗಾದುದು, ಎಳೆಯನಾದ ನಾನು ‘ ಅಜ್ಜಿ, ಎಂದು ಬರುವೆ ? ’— ಎಂದುದು ಇವುಗಳೆಲ್ಲವುಗಳ ನೆನಪಾಯಿತು.

“ ಮಗು, ನನ್ನ ಕಣ್ಣೀರ ತೊಟ್ಟು ಅಂದು ನಾಲ್ಕು ಬಿದ್ದಿದ್ದರೆ, ನಿನ್ನ ಹಿರಿಯರು ನನ್ನ ಮುಂದೆ ಕೆಡಹಿದ ಕಣ್ಣೀರಿನ ಪ್ರಮಾಣ ಸ್ವಲ್ಪವಿರಲಿಲ್ಲ. ನಿನ್ನ ತೀರ ಹಿರಿಯನೊಬ್ಬ; ಆತನಿಗೆ ನಾನೆಂದರೇನೆ ದೇವರು. ನಾನಿಲ್ಲದೆ ಪಾರಾಯಣವಿಲ್ಲ, ನಾನಿಲ್ಲದೆ ದೇವರಿಲ್ಲ. ತುಪ್ಪ ಹಾಕಿ, ನನ್ನನ್ನು ನಂದದಂತೆ ಉರಿಸುವುದು ಅವನ ಶ್ರದ್ಧೆ. ನನ್ನ ಮುಂದೆ ಮನೆದೇವರ ಬಳಿ ಕುಳಿತು, ‘ ನನಗೆ ಸಾಯುಜ್ಯ ದೊರಕಿಸು, ನನ್ನನ್ನು ನಿನ್ನವನನ್ನಾಗಿ ಮಾಡು !’—ಎಂದು ಅಳದ ದಿನವಿಲ್ಲ. ಅವನಂತಹ ಭಕ್ತನಿಗೆ ಮುಕ್ತಿ ಸಲದುಂಟೆ!

“ ಹಾಗೆಂದರೆ ನೀನು ನಮ್ಮ ಕುಟುಂಬಕ್ಕೇನೆ ಇಷ್ಟದೇವತೆಯೇ ? ” ಎಂದೆ ನಾನು. ದೀಪ ಕಕ್ಕಾವಿಕ್ಕಿಯಾಯಿತು. ನಮ್ಮೆಯಿಂದ ತಾನು ಮಾತನಾಡಿದೆನೆಂದು ಅದಕ್ಕೆ ತೋರಿತೋ ಏನೋ! ಅನಂತರ ಅದು ತೀರ ಕುಗ್ಗಿ ನುಡಿಯಿತು: “ನಾನು ನಿನ್ನ ಆ ಭಕ್ತಹಿರಿಯನಿಗೆ ದಾನವಾಗಿ ಬಂದವನು! ”

“ ಯಾರಿಂದ ? ಹೇಗೆ ? ”

“ ಇಲ್ಲಿಗೆ ಬರುವ ಮುಂಚೆ ನಾನು ಸಿಲ್ಲೂರಿನ ಗುಡಿಯಲ್ಲಿ ನಂದಾದೀಪವಾಗಿದ್ದೆ. ನನ್ನನ್ನು ನಂದದಂತೆ ಉರಿಸಲು ವಿಜಯನಗರದ ಅರಸರು ಉಂಬಳಿಹಾಕಿದ್ದರು! ”.

“ ಆಗ ನೀನು ಹಗಲಿರುಳೂ ಉರಿಯುತ್ತಿದ್ದೆಯೇ ? ”

“ ನಂದಾದೀಪ ಎಂದರೆ ಹಾಗೇ ಅಲ್ಲವೇ ? ”

“ ಹಗಲಿಗೆ ಬೆಳಕು ಉರಿಸುವುದು, ರಾತ್ರಿ ಕೊಡೆ ಹಿಡಿಯುವುದು—ನಮ್ಮ ಹಿರಿಯರ ಸಂಪ್ರದಾಯ ! ”—ಎಂದೆ ನಾನು.

“ ಪರಿಹಾಸ್ಯವೇಕೆ ? ನಾನು— ಬೆಳಕಿಗಾಗಿ ಅಲ್ಲಿ ಇರಲಿಲ್ಲ, ದೈವತ್ವದ ತೇಜಸ್ಸಿನ ಸಂಕೇತವಾಗಿದ್ದೆ. ದೇವರ ಗುಡಿಯೆಂದ ಮೇಲೆ ಅಲ್ಲಿ ಸದಾ ಜ್ವಾಲೆ ಉರಿಯಬೇಡವೇ ? ”

“ ಉರಿದರೆ ಚೆನ್ನ ! ನಮ್ಮ ಊರಿನ ಮಹಾಲಿಂಗೇಶ್ವರನ ಕತ್ತಲು ತುಂಬಿದ ಗರ್ಭಗುಡಿಯಲ್ಲಿ ಮಿಣಿಮಿಣಿ ದೀವಿಗೆ ಉರಿದರೂ ನನಗೆ ಚೆನ್ನಾಗಿ ಕಾಣಿಸುತ್ತಿದ್ದ ದಿನ ಉಂಟು. ಅದಿರಲಿ— ಅಲ್ಲಿಯವನಾದ ನೀನು ನನ್ನ ಭಕ್ತಹಿರಿಯನ ಕೈಸೇರಿದೆಯೆಂತು?”

“ಯೋಗ್ಯ ಚ ರ ಂ ಡಿ ಯಾ ದ (Proper chaunel) ಪೂಜಾರಿಯ ಮಾರ್ಗವಾಗಿ. ದಾನಮಾಡಿದವನು ಅಲ್ಲಿಯವನೇ ಪೂಜಾರಿ! ಆತ ಉಂಬಳಿಯನ್ನೆನೋ ಅನುಭವಿಸಿದ. ದೇವರಿಗೆ ಬೆಳಕಿದ್ದರೇನು ಇಲ್ಲದಿದ್ದರೇನು— ಎಂದು ಎಣ್ಣೆ ಮಿಗಿಸಲು, ಕೇವಲ ಭಕ್ತರು ಬರುವ ವೇಳೆಗೆ ಮಾತ್ರ ನನ್ನನ್ನು ಉರಿಸುತ್ತಿದ್ದ!”

“ ಅವನು ಮಿತವ್ಯಯ ಪಂಡಿತನಿರಬೇಕು ! ”

“ಊರವರು ಅವನನ್ನು ಆಕ್ಷೇಪಿಸಿದರು. ಅವನನ್ನು ಅರ್ಚಕತನದಿಂದ ಕಿತ್ತೊಗೆದರು. ಈಗಿನ ರೇಶನಿಂಗ್ ಕಾಲವಲ್ಲ ಅದು ! ”

“ ಸರಿ, ಆದರಿಂದ ? ”

“ ಪೂಜಾರಿಯು ಸಿಟ್ಟಿಗೆದ್ದು, ನನ್ನನ್ನೇ ಕದ್ದುಬಿಟ್ಟನು; ಅಡಗಿಸಿ ಇಟ್ಟನು. ಕೊನೆಗೊಂದು ದಿನ ಕಾಯಿಲೆ ಮಲಗಿದನು. ಅವನ ಕೃತಿಯು ಅವನ ಕೊನೆಗಾಲವನ್ನು ಕಾಡಿತು. ಸಾಯುವ ಗಳಿಗೆಗೆ ಮಡದಿಯನ್ನು ಕರೆದು ‘ಯೋಗ್ಯರಿಗೆ ನನ್ನಿಂದ ದೀಪದಾನ ಮಾಡಿಸು— ’ ಎಂದು ಸತ್ತನು, ಆ ದಾನದಿಂದಾಗಿ ನಾನು ನಿಮ್ಮ ಕುಲದೀಪವಾದೆ! ”

“ ಹೋಗಲಿ— ಆ ಗುಡಿಯಲ್ಲಿ ನೀನಿದ್ದು ಎಷ್ಟು ಕಾಲ ಸಂದಿತು ? ”

“ ನೂರಾರು ವರ್ಷಗಳೇ ಸಂದುವು. ಯಾವಳೋ ಒಬ್ಬಾಕೆ ದೇವರಿಗೆ ಹರಕೆ ಹೊತ್ತು ಸಂತಾನ ಪಡೆದಳು. ಅವಳು ಬಲು ಕಾಲದ ಬಳಿಕ ದೊರೆತ ಸಂತಾನಸಿರಿಯ ನೆನಪಿಗಾಗಿ ನನ್ನನು ಕಂಚಿನಲ್ಲಿ— ಎರೆಯಿಸಿ, ದಾನವಿತ್ತಳು !

ನನ್ನ ಮಾತು ಅಲ್ಲಿಗೇ ನಿಂತಿತು. ಇಷ್ಟೊಂದು ಪುರಾಣಪ್ರಸಿದ್ಧವಾದ ನನ್ನ ಕಾಲುದೀಪವನ್ನು ಹಳಿದ ಬಗ್ಗೆ ನನಗೆ ವ್ಯಥೆಯಾಯಿತು. ಕೇವಲ ಪ್ರಾಮಾಣಿಕನಂತೆ “ I withdraw ” ಎಂದು ನನ್ನಾನನದಿಂದಲೇ ನನ್ನನ್ನು ಹಿಂದೆಸರಿಸಿ ಮಲಗಿಕೊಂಡೆ. ಆ ರಾತ್ರಿಯಲ್ಲಿ ನಿದ್ರೆಯಲ್ಲೂ ನನಗೆ ದೀಪ ಉರಿಯುತ್ತಿದ್ದಂತೆ ಕಾಣಿಸಿತು. ಹಗಲು ತಿರುಗಾಡುವಾಗಲೂ ದೀಪ ನಂದಾದೀಪವಾಗಿತ್ತು. ಈಗಲೂ ಹಾಗಿದೆ. ಈ ಲೇಖನ ಬರೆಯಲು ಆದೇ ನೆರವಾಗದೆ ಹೋದರೂ—ಅದರ ನೆನಪು

(೨೮೯ ನೆಯ ಪುಟ ನೋಡಿರಿ)

ನಮ್ಮ ಊಟ

★

ಶ್ರೀ. ಬಿದರಕುಂದಿ ವೆಂಕಟರಾವ

★

ನಮ್ಮ ಜೀವನದ ಎಲ್ಲ ವ್ಯವಹಾರಗಳಿಗೂ ಒಂದೊಂದು ಶಾಸ್ತ್ರ ಉಂಟು. ಆ ಆ ಶಾಸ್ತ್ರಗಳ ತಿಳಿವಳಿಕೆ ಇಲ್ಲದೆ ಜನರು ಜೀವನದ ವ್ಯವಹಾರವನ್ನು ಸಾಗಿಸುತ್ತ ನಡೆದರೆ, ತಳಹದಿ ಇಲ್ಲದೆ ಕಟ್ಟಡಗಳನ್ನು ಕಟ್ಟಿದಂತಾಗುವುದು.

ಶಾಸ್ತ್ರಗಳ ಜ್ಞಾನಕ್ಕೆ ಶಿಕ್ಷಣ, ಅಭ್ಯಾಸ, ಆಚರಣೆ ಇವು ಅವಶ್ಯವಾಗಿ ಬೇಕು. ಪ್ರತಿಯೊಂದು ಕುಟುಂಬದಲ್ಲಿಯ ಯಾವ ಜನರಿಗೆ ಯಾವ ಶಾಸ್ತ್ರದ ಶಿಕ್ಷಣ ಬೇಕು—ಎಂಬುದನ್ನು ಅರಿತುಕೊಳ್ಳಬೇಕು. ನಮ್ಮ ಊಟದ ವಿಷಯವಾಗಿ ಆಹಾರ ಶಾಸ್ತ್ರದ ಪರಿಚಯವು ನಮ್ಮ ಹೆಣ್ಣುಮಕ್ಕಳಿಗೆ ಅತ್ಯಾವಶ್ಯಕವಾದುದು. ಅಚ್ಚುಕೂಟದ ವ್ಯವಸ್ಥೆ ಇಲ್ಲದಿರುವಾಗ, ವೇದಶಾಸ್ತ್ರಗಳ ಅಧ್ಯಯನವನ್ನೆಲ್ಲ ಒಬ್ಬರಿಂದೊಬ್ಬರಿಗೆ ಹೇಳುವುದರ ಮೂಲಕ ಜೀವಂತ ಉಳಿಸಿದಂತೆ, ನಮ್ಮ ಆಹಾರ ಶಾಸ್ತ್ರವು ಕೂಡ ಅಕ್ಷರಜ್ಞಾನವಿಲ್ಲದ ಹೆಣ್ಣುಮಕ್ಕಳಿಗೆ ತಾಯಂದಿರಿಂದಲೆ ದೊರೆಯುತ್ತ, ಪರಂಪರೆಯನ್ನು ಇದುವರೆಗೆ ಉಳುಹಿಕೊಂಡು ಬಂದಿದೆ. ಇತ್ತೀಚೆಗೆ ಆಹಾರಶಾಸ್ತ್ರದ ಗ್ರಂಥಗಳು ಉಪಲಬ್ಧವಾಗುತ್ತಲಿದ್ದರೂ ನಮ್ಮ ಹೆಣ್ಣುಮಕ್ಕಳಲ್ಲಿ ಅವುಗಳನ್ನು ಓದುವವರು ಎಷ್ಟು ಮಂದಿ ?

ಆಹಾರಶಾಸ್ತ್ರಜ್ಞರು ಪ್ರತಿಯೊಂದು ಖಾದ್ಯಪದಾರ್ಥಗಳನ್ನೂ ಶಾಸ್ತ್ರೀಯ ದೃಷ್ಟಿಯಿಂದ ಪ್ರಥಕ್ಕರಣಮಾಡಿ, ಯಾವ ಪದಾರ್ಥಗಳು ಹೆಚ್ಚು ಪೋಷಕ ಮತ್ತು ಪೌಷ್ಟಿಕ ಎಂಬುದನ್ನು ಗೊತ್ತುಹಿಡಿದು, ಅವುಗಳ ಜ್ಞಾನವನ್ನುಮಾಡಿಕೊಟ್ಟಿರುವರು. ಪರಂಪರೆಯಿಂದ ನಡೆದುಬಂದ ಪಾಠಗಳು ಒಂದೇ ಧಾಟಿಯಲ್ಲಿದ್ದು, ಅಜ್ಞಾನಪ್ರಭಾವೀ ಜನರ ಅಸಂಸ್ಕಾರದಿಂದ ರೂಪಾಂತರಗೊಳ್ಳುತ್ತ, ಮೂಲಪಾಠಗಳಲ್ಲಿ ಬಹಳ ಹೆಚ್ಚುಕಡಿಮೆಯಾಗಿರುವುದರಲ್ಲಿ ಆಶ್ಚರ್ಯವೇನು ?

ಅಂತೆಯೆ "ಕಸ ತಿನ್ನುವುದಕ್ಕಿಂತ ತುಸು ತಿನ್ನುವುದು ಲೇಸು" ಎಂಬ ಗಾದೆಯು ಮಾತು ತೀರ ಸಾಮಾನ್ಯವಾಗಿ ರೂಢಿಯಲ್ಲಿ ಬಂದಿದೆ. 'ಕಸ' ಶಬ್ದವು ಖಾದ್ಯಪದಾರ್ಥಗಳಲ್ಲಿದ್ದ ಕಡ್ಡಿ, ಮಣ್ಣು, ಹರಳು, ಹೊಲಸು ಎಂಬರ್ಥದಲ್ಲಿದ್ದರೆ ಇದು ಅಗತ್ಯ. ಆದರೆ ಕಸ ಶಬ್ದವು ತೌಡು, ತುಂಬು, ದೇಟು, ಹಸಿತೊಪ್ಪಲುಗಳಲ್ಲಿ ಪರಿಣಮಿಸಿ, ಆಹಾರಶಾಸ್ತ್ರವನ್ನು ದುರಂತವನ್ನಾಗಿಸಿ ಬಿಟ್ಟಿದೆ. ಈಗಿನ ಶಾಸ್ತ್ರೀಯ ಯುಗದಲ್ಲಿ ಇಂತಹ ನಾಣ್ಣುಡಿಗಳು ದುರಂತದಲ್ಲಿ ಪರಿಣಮಿಸುವುದು ಸೋಜಿಗವಲ್ಲ. "ದೀಪದ ಕೆಳಗೆ ಕತ್ತಲೆ" ಇದನ್ನು ವಿದ್ಯುದ್ದೀಪಗಳು ಅಳಿಸಿಬಿಟ್ಟಿಲ್ಲವೆ?

ಇತ್ತೀಚೆಗಿನ ವಿಜ್ಞಾನಶಾಸ್ತ್ರಜ್ಞರು ಹಸಿಯ ಸೊಪ್ಪು, ಎಲೆ, ಕಾಯಿ, ಗೆಡ್ಡೆ, ತುಂಬು (ತುಂಬಿನ ಸುತ್ತಲಿನ ಭಾಗ), ತೌಡು, ದೇಟುಗಳಲ್ಲಿಯೇ, ಶರೀರ ಪೋಷಣೆಗೆ ಬೇಕಾಗುವ ಜೀವನಸತ್ತ್ವ, ಕ್ಷಾರ ಇವು ಬಹಳವಾಗಿ ಇರುವುವೆಂದೂ, ಅವನ್ನು ಕಸವೆಂದು ತೆಗೆಯದೆ ಅವಶ್ಯವಾಗಿ ತಿನ್ನಲೇ ಬೇಕೆಂದೂ ಕಂಡು ಹಿಡಿದಿರುವರು. ನಿತ್ಯದ ಯೋಗ್ಯ ಊಟದಲ್ಲಿ ಸಾಮಾನ್ಯವಾಗಿ ಪಿಷ್ಟದ್ರವ್ಯ (ಸ್ಟಾರ್ಚ್), ಪ್ರೋಟೀನ್, ನೆಣ, ಕ್ಷಾರ ಮತ್ತು ಜೀವನಸತ್ತ್ವ (ವಿಟ್ಯಾಮಿನ್ಸ್) ಇವು ಶರೀರಪೋಷಣೆಗೆ ಅಗತ್ಯವಾಗಿರುವುವು ಇವು ಯಾವುದರಲ್ಲಿ ಹೆಚ್ಚಾಗಿ ಸಿಕ್ಕುವುವೋ ಅಂತಹವನ್ನು ಸೇವಿಸಿದರೆ ಯೋಗ್ಯವಾದ ಊಟವೆನಿಸುವುದು.

(೧) ಸ್ಟಾರ್ಚ್ ಸಲುವಾಗಿ —ಅಕ್ಕಿಯ ಅನ್ನ, ರೊಟ್ಟಿ, ಬಟಾಟೆ ಇವುಗಳಲ್ಲಿ ಯಾವುದಾದರೊಂದನ್ನು ಉಪಯೋಗಿಸಬೇಕು.

★

'ಊಟ ಬಲ್ಲವನಿಗೆ ರೋಗವಿಲ್ಲ' ಎಂದು ಕನ್ನಡ ಗಾದೆಯಿದೆ. ಆದರೆ ಹಾಗೆ ಊಟ ಬಲ್ಲ ನಿರೋಗಿಗಳು ನಮ್ಮಲ್ಲಿ ಎಷ್ಟು ಜನ? ಊಟ ಮಾಡುವುದನ್ನು ಎಲ್ಲರೂ ಬಲ್ಲರಾದರೂ ಹೇಗೆ ಊಟ ಮಾಡಬೇಕೆಂಬುದನ್ನು ಯಾರೂ ಅರಿಯರು !

★

(೨) ಪ್ರೋಟೀನ್ ಸಲುವಾಗಿ — ಬೇಳೆಯನ್ನು ಬಳಸಬೇಕು.

(೩) ನೆಣದ ಸಲುವಾಗಿ —ಬೆಣ್ಣೆ, ತುಪ್ಪ, ಎಣ್ಣೆ ಇವುಗಳಲ್ಲಿ ಯಾವುದೇ ಒಂದನ್ನಾದರೂ ಸೇವಿಸಬೇಕು.

(೪) ಕ್ಷಾರ, ಜೀವನಸತ್ತ್ವದ ಸಲುವಾಗಿ —ಪಲ್ಲೆ, ಕಾಯಿ ಹಣ್ಣು ಇವುಗಳಲ್ಲಿ, ಯಾವುದೊಂದನ್ನಾದರೂ ಉಪಯೋಗಿಸಬೇಕು.

(೫) ಆಹಾರಕ್ಕೆ ಹೆಚ್ಚಾಗಿ ಪೌಷ್ಟಿಕತನ ಮತ್ತು ಪೂರ್ಣತೆಯನ್ನು ತರುವುದರ ಸಲುವಾಗಿ—ಹಾಲು, ಮಜ್ಜಿಗೆ, ಇದರಲ್ಲಿ ಒಂದಾದರೂ (ಹಾಲಿನಲ್ಲಿ ಕ್ಯಾಲ್ಸಿಯಮ್, ಪ್ರೋಟೀನ್ ಮತ್ತು ವೈಟ್ಯಮಿನ್ಸ್ ವಿಪುಲವಾಗಿರುವುವು,) ಊಟಕ್ಕೆ ಇರಲೇ ಬೇಕು.

ಏಕದಳ ಧಾನ್ಯದಲ್ಲಿ ೧೦೦ಕ್ಕೆ ೭೦ರಿಂದ ೭೮ರವರೆಗೆ ಸ್ಟಾರ್ಚ್ ಇರುತ್ತದೆ, ಮತ್ತು ೧೦೦ಕ್ಕೆ ೮ರಿಂದ ೧೪ರ ವರೆಗೆ ಪ್ರೋಟೀನ್ ಇರುತ್ತದೆ. ಧಾನ್ಯದ ತೌಡಿನಲ್ಲಿಯೇ ಕ್ಷಾರವಿರುತ್ತದೆ. ಅದರಿಂದ ಧಾನ್ಯವನ್ನು ಬೀಸುವ ಮೊದಲು ಸ್ವಚ್ಛಮಾಡಿ, ಬೀಸಿದ

ಹಿಟ್ಟನ್ನು ಜಾಳಿಸದೆ, ಹಾಗೆಯೇ ರೊಟ್ಟಿಯನ್ನು ಮಾಡಬೇಕು. ಮನೆಯೊಳಗಿನ ಕಲ್ಲಿನಲ್ಲಿಯೆ ಬೀಸಬೇಕು.

ಗಿರಣಿಯ ಘರ್ಷಣದಿಂದಾದ ಕಾವಿನ ಮೂಲಕ, ತೌಡಿನಲ್ಲಿದ್ದ ಕ್ಷಾರಪದಾರ್ಥವು ಸುಟ್ಟುಹೋಗುತ್ತದೆ. ಆದರಿಂದ ಬೀಸಲು ಗಿರಣಿಗೆ ಕೊಡಬಾರದೆಂಬುದನ್ನು ಮರೆಯಬಾರದು. ಇದರಂತೆಯೆ ಕುಟ್ಟಿದ ಅಕ್ಕಿಯನ್ನೇ, ಕೈಗಾಣ ಅಥವಾ ಎತ್ತಿನ ಗಾಣದ ಎಣ್ಣೆಯನ್ನೇ ಉಪಯೋಗಿಸಬೇಕೆಂಬುದೂ ನೆನಪಿನಲ್ಲಿರಲಿ. ಪಾಲೀಶ್ ಮಾಡಿದ ಅಕ್ಕಿಯಲ್ಲಿ ಸ್ಟಾರ್ಚ್ ಎಂದರೆ ಪಿಷ್ಟದ್ರವ್ಯದ ವ್ಯತಿರಿಕ್ತವಾಗಿ ಯಾವ ಪದಾರ್ಥವೂ ಇರುವುದಿಲ್ಲ. ಅಕ್ಕಿಗೆ ಅಂಟಿಕೊಂಡಿರುವ ವೈಟ್ಯಾಮಿನ್ 'B' ಗಿರಣಿಯ ಅಕ್ಕಿಗಳಲ್ಲಿ ಇರುವುದಿಲ್ಲ. ಇದರಿಂದ ಮಿಕ್ಕ ಬೇರೆ ಖಾದ್ಯಪದಾರ್ಥಗಳಲ್ಲಿ 'B' ಸತ್ತ್ವವು ವಿಪುಲವಾಗಿ ತಿನ್ನಲು ಸಿಕ್ಕದಿದ್ದರೆ, ಪ್ರಕೃತಿಯ ಮೇಲೆ ಕೆಟ್ಟ ಪರಿಣಾಮವನ್ನುಂಟುಮಾಡುತ್ತದೆ. ಬೆರಳುಗಳು ನೋಯುವುದು, ನರಗಳು ಹರಿಯುವುದು 'B' ಸತ್ತ್ವದ ಅಭಾವದಿಂದಲೇ ಆಗುತ್ತದೆ. ಇದರಿಂದ "ಬೆರಿ ಬೆರಿ" ಎಂಬ ರೋಗವೂ ಉಂಟಾಗುತ್ತದೆ.

ಜಾವಾದಲ್ಲಿ ಸೇರಿದ ಪೂರ್ವದೇಶೀಯ ಆರೋಗ್ಯಪರಿಷತ್ತಿನಲ್ಲಿ, ಗಿರಣಿಯ ಅಕ್ಕಿಯು ಅನಿಷ್ಟಪರಿಣಾಮವನ್ನುಂಟುಮಾಡುತ್ತದೆಂದು ಸಪ್ರಮಾಣವಾಗಿ ಸಿದ್ಧಮಾಡಿ ತೋರಿಸಿರುವರು. ರಾಷ್ಟ್ರಸಂಘದವರೂ ಗಿರಣಿಯ ಅಕ್ಕಿಯನ್ನು ನಿಷಿದ್ಧಮಾಡಬೇಕೆಂದು ನಿರ್ಣಯಿಸಿರುವರು. ಮಹಾತ್ಮಾ ಗಾಂಧಿಯವರು ೬–೭ ವರುಷಗಳಿಂದ ಪ್ರಾರಂಭಿಸಿದ ಗ್ರಾಮೋದ್ಯೋಗವು ಇದನ್ನೇ ಹೇಳುತ್ತದೆ. ಅಕ್ಕಿಯ ವಿಷಯವಾಗಿ ಡಾ ಲಕ್ಷ್ಮೀರತ್ನ ಅವರು "ರಾಯಿಸ್ ದಿ ಸ್ಪೆಶಲ್ ಫುಡ್" ಎಂಬ ಪುಸ್ತಕದಲ್ಲಿ ಬರೆದುದನ್ನು ಪ್ರತಿಯೊಬ್ಬ ಕೌಟುಂಬಿಕನೂ ಅವಶ್ಯವಾಗಿ ಓದಿ, ಅದರಂತೆ ನಡೆದರೆ ಹಿತಕರವಾಗುವುದು. ಅಕ್ಕಿಯನ್ನು ಹೆಚ್ಚಾಗಿ ತೊಳೆದರೆ ಫಾಸ್ಫರ್ಸ್ ನಾಶವಾಗುತ್ತದೆ.

ದ್ವಿದಳ ಧಾನ್ಯಗಳಲ್ಲಿ ೧೦೦ ಕ್ಕೆ ೬೦ ರಂತೆ ಸ್ಟಾರ್ಚ್, ೧೦೦ಕ್ಕೆ ೨೨ ಪ್ರೋಟಿನ್ ಇದ್ದು, ನೆಣದ ಅಂಶವೂ ಸ್ವಲ್ಪ ಇರುತ್ತದೆ. ಅಕ್ಕಿಯ ಅನ್ನದಲ್ಲಿ ಬೇಳೆಯ ಪದಾರ್ಥ ಕೂಡಿಸಿ ತಿನ್ನುವುದರಿಂದ ಅದಕ್ಕೊಂದು ರುಚಿ ಬರುವುದಲ್ಲದೆ ಪೌಷ್ಟಿಕತನವೂ ಹೆಚ್ಚಾಗುತ್ತದೆ. ತೌಡು ಸಾರಕವಿರುವುದರಿಂದ ಮಲಾವರೋಧವಾಗುವುದಿಲ್ಲ,

ಬೆಣ್ಣೆಯಲ್ಲಿ ೧೦೦ಕ್ಕೆ ೩೫·೫ ನೀರು, ೧೬·೦ ಪ್ರೋಟಿನ್, ೩೯·೮ ನೆಣ, ·೮ ಕ್ಷಾರ ಇರುವುದಲ್ಲದೆ 'A' ಜೀವಸತ್ತ್ವವೂ ವಿಪುಲವಾಗಿರುತ್ತದೆ.

ಎಣ್ಣೆಯಲ್ಲಿ ಯಾವ ಕಾಳಿನ ಎಣ್ಣೆ ಇರುವುದೋ ಆ ಕಾಳಿನ ಗುಣಧರ್ಮಕ್ಕನುಸರಿಸಿ ಅದರಲ್ಲಿ ಜೀವನಸತ್ತ್ವವಿರುತ್ತದೆ, ಮತ್ತು ನೆಣವು ಸಂಪೂರ್ಣವಾಗಿರುತ್ತದೆ.

ಹಾಲಿನಲ್ಲಿ ಎಮ್ಮೆ, ಆಕಳು, ಆಡು ಮತ್ತು ತಾಯಿ ಹೀಗೆ ಭಾಗ ಮಾಡಬಹುದು. ಅವುಗಳ ಗುಣಧರ್ಮ ಕೆಳಗಿನಂತೆ.

ಪ್ರಾಣಿಗಳ ಹೆಸರು	ನೀರು	ಪ್ರೋಟೀನ್	ನೆಣ	ಕಾರ್ಬೊ ಹಾಯಡ್ರೇಟ್	ಕ್ಷಾರ
ಆಕಳು	೮೭·೨	೩·೩	೪·೦	೪·೮	೦·೭
ಎಮ್ಮೆ	೮೩·೨	೬·೩	೪·೧	೪ ೬	೦·೮
ಆಡು	೮೬·೧	೩·೮	೩·೪	೩·೮	೦·೯
ತಾಯಿ	೮೭·೬	೧·೫	೩·೩	೬ ೫	೦·೩
ಮಜ್ಜಿಗೆ	೯೦ ೪	೩·೬	೦·೫	೪·೮	೦·೭

ಮನುಷ್ಯನ ಪ್ರಕೃತಿಯ ಆರೋಗ್ಯದಂತೆ ಎಮ್ಮೆ, ಆಕಳು, ಆಡಿನ ಹಾಲನ್ನು ಉಪಯೋಗಿಸಬೇಕು. ತಾಯಿಯ ಹಾಲು ಕೂಸುಗಳಿಗಾಗಿ ಮಾತ್ರ ಉಪಯೋಗವಿರುವುದು. ೨ ತಾಸಿನ ಅಂತರದಿಂದ ಕೂಸುಗಳಿಗೆ ಮೊಲೆಯುಣ್ಣಿಸಿದರೆ ಆರೋಗ್ಯವಿರುವುದು. ೪ ತಿಂಗಳಿಂದ ೧ ವರುಷದವರೆಗೆ ಸುಣ್ಣದ ನೀರಿನ ತಿಳಿನೀರನ್ನು ಅಥವಾ ಗ್ರಾಯಿಪ್‌ವಾಟರ್‌ನ್ನು ಒಂದಾವೃತ್ತಿ ಹಾಕಬೇಕು. ಕೂಸುಗಳ ವಯೋಮಾನದಂತೆ—ಅರ್ಧ ವರುಷದಿಂದ ೨ ವರುಷದ (ಹಲ್ಲಿನ ವರುಷ) ವರೆಗೆ—ದಿನಾಲು ಒಂದಾವೃತ್ತಿ ಟೊಮ್ಯಾಟೋರಸ ಅಥವಾ ಮೋಸಂಬಿಯ ರಸವನ್ನು ಹಾಕುವುದು ಹಿತಕರ. ಮಜ್ಜಿಗೆಯು ಎಲ್ಲಬಗೆಯ ಪ್ರಕೃತಿಯವರಿಗೂ ಪಥ್ಯಕರವಿರುವದು. ಮುಂದಿನ ಲೇಖನದಲ್ಲಿ ಪ್ರತಿಯೊಂದು ತಿಂಬುಂಬುವ ಪದಾರ್ಥಗಳ ಗುಣಧರ್ಮಗಳ ಬಗ್ಗೆ ವಿಶೇಷ ಸಂಗತಿಯನ್ನು ವಿವೇಚಿಸಬೇಕೆಂದಿರುವೆನು.*

* "ಜೀವನಸತ್ತ್ವ" ಇದರ ಬಗ್ಗೆ ಜಯಂತಿಯ ೧೯೪೧ ನೆಯ ಏಪ್ರಿಲ್ ಸಂಚಿಕೆಯಲ್ಲಿ ಬರೆದುದನ್ನು ನೋಡಬಹುದು. ಲೇ.

(೨೮೭ ನೆಯ ಪುಟದಿಂದ ಮುಂದುವರಿದುದು)

ನೆರವಾಯಿತು. 'ಅದನ್ನು ನಾನು ಹಿಟ್ಲರನ ಬಳಿಗೆ ಕಳುಹಿದರೆ—ಅವನ ಬೆಂಕಿಯ ಹಸಿವು ನಿಂತೀತಲ್ಲ' ಎನಿಸುತ್ತಿದೆ. ಆದರೆ ಅವನು ಲೋಹದ ಅಭಾವದಿಂದ ಅದನ್ನು ಕರಗಿಸಿ— ತೋಫಿಗೋ, ಕೀಲಿಗೋ, ಇನ್ನೇತಕ್ಕೊ ಎರಕ ಎರೆದರೆ?

ಇಲ್ಲ; ಹೋಗಲಿ— ಅದನ್ನು ನಾನೇ ಇರಿಸಿಕೊಳ್ಳುತ್ತೇನೆ—ನಮ್ಮ ಮನೆಯಲ್ಲಿ ಬ್ಲ್ಯಾಕ್‌ಔಟ್—ಇಲ್ಲ ಎಂಬ ಹಿಗ್ಗಾದರೂ ಈ ನೀಲಾಂಜನದಿಂದ ಆಗುತ್ತಿದೆಯಲ್ಲ! ಹಾಗೆ ಕೇಳಹೋದರೆ ಮುಂಬಯಿ, ಲಂಡನುಗಳ ರಸ್ತೆಗಳ ಬೆಳಕಿಗಿಂತ ನನ್ನ ಕಾಲುದೀಪದ ಬೆಳಕು ಕಡಮೆಯಲ್ಲ— ಎಂದು ಸಮಾಧಾನ ಮಾಡಿಕೊಳ್ಳುತ್ತಿದ್ದೇನೆ. ಯಾರಾದರೂ ಗೆಳೆಯರು ಪರಿಹಾಸ್ಯಕ್ಕಾಗಿ— 'ದೀಪ ಇರುವುದು ಚಂದಕ್ಕೊ, ಬೆಳಕಿಗೋ?'—ಎಂದು ಕೇಳಿದರೆ 'ಹೊಲೆಯನ ವಿಷಯ ಸರ್ವಜ್ಞ ನುಡಿದ ನುಡಿ ನೆನಪಿಗೆ ಬಂದು '— ಬೆಳಕು ಇರಬೇಕಾದುದು ಒಳಗೆ, ತನುವಿನಲ್ಲಿ; ಹೊರಗಲ್ಲ— ' ಎಂದು ವೇದಾಂತ ಮಾಡುವೆ!

ನವರಾತ್ರಿಯ ಬೊಂಬೆ

ಶ್ರೀ. ಕೆ. ವಿ. ಜಗನ್ನಾಥನ್ ಅವರು *

(ಒಂದು ಸಣ್ಣ ಕತೆ)

ವೇಲನ ಮಣ್ಣುಮುದ್ದೆಯಲ್ಲಿ ಬೊಂಬೆಯ ಸೌಂದರ್ಯವನ್ನು ಕಂಡ ಮುದುಕ, ಕುಪ್ಪಮ್ಮನ ಚೆಲುವಾದ ರಾಣಿಯ ಬೊಂಬೆಯನ್ನು ಮಣ್ಣುಮುದ್ದೆಯಂತೆ ಕಂಡರು. ಇದರ ರಹಸ್ಯವೇನು ?

★

ನವರಾತ್ರಿಯ ಸಮಯದಲ್ಲಿ ಸಂಪಾದಿಸುವುದೇ ಬಹುಕಾಲ ಸಾಲುವುದು. ಹಗಲಿರುಳೆನ್ನದೆ ದುಡಿದರೆ ಪ್ರಯೋಜನ ಉಂಟು. ಆಕೆಗೆ ತನ್ನ ಕೈಯೇ ಆಸ್ತಿ. ತನ್ನ ಕೈಯ ಕೌಶಲ್ಯದಿಂದ ಆಕೆ ಜೀವನಯಾತ್ರೆಯನ್ನು ನಡೆಯಿಸುತ್ತಿದ್ದಳು ಆಕೆಯ ಗಂಡನಿದ್ದ ಕಾಲದಲ್ಲಿ ಅವಳಿದ್ದ ಸ್ಥಿತಿಯೇ ಬೇರೆ; ಈಗಿರುವ ಸ್ಥಿತಿಯೇ ಬೇರೆ. ಆದರೆ ಎರಡು ಕಾಲಗಳಲ್ಲಿಯೂ ಆಕೆ ಮನಸ್ಸಿಟ್ಟು ದುಡಿಯುವುದರಲ್ಲಿ ಮಾತ್ರ ವಂಚನೆಮಾಡಿಲ್ಲ, ಮಾಡುವುದಿಲ್ಲ. ಮಣ್ಣಿನ ಬೊಂಬೆಗಳನ್ನು ಮಾಡಿ, ಬಣ್ಣ ಹಚ್ಚಿ ಮಾರಿ ಆಕೆ ಜೀವನ ನಡೆಯಿಸುತ್ತಿದ್ದಳು. ಅವಳಿಗೆ ಬದುಕಿನಲ್ಲಿ ನಂಬಿಕೆಯನ್ನೊದಿಸಿ ನಿಲ್ಲುವವನು ಆ ಮಗು ವೇಲನೊಬ್ಬನೆ. ವೇಲನು ಒಂದು ವರ್ಷದ ಮಗುವಾಗಿದ್ದಾಗ, ಅವನ ತಂದೆಯು ಮರಣಹೊಂದಿದನು. ಈಗ ಅವನಿಗೆ ತಂದೆಯ ವಿಷಯವಾಗಿ ಏನೊಂದೂ ಗೊತ್ತಿಲ್ಲ. ಈ ಇಡಿಯ ಪ್ರಪಂಚವೆಲ್ಲವೂ ತಾಯಿಯೊಳಗೇ ಅಡಗಿದೆಯೆಂದು ಅವನು ನಂಬಿದ್ದನು.

ಈ ನವರಾತ್ರಿಯಲ್ಲಿ ಅಲ್ಪ ಸ್ವಲ್ಪ ಹಣ ಮಿಗಿಸಿಕೊಂಡು, ತನ್ನ ಮಗನನ್ನು ಪಾಠಶಾಲೆಗೆ ಸೇರಿಸಿ, ಎರಡು ಸೊಟ್ಟ ಅಕ್ಷರಗಳನ್ನು ಕಲಿಸೋಣವೆಂದು ಕುಪ್ಪಮ್ಮ ಭಾವಿಸಿದ್ದಳು. ಅವನಿಗೆ ಐದು ವರ್ಷಗಳು ನಡೆಯುತ್ತಲಿದ್ದರೂ ಅವನ ಚಟುವಟಿಕೆಯೂ ಹುರುಪೂ ಅವಳ ಹೃದಯದಲ್ಲಿ ಒಂದು ದೊಡ್ಡ ಆಂದೋಲನವನ್ನು ಎಬ್ಬಿಸಿದ್ದುವು: ಬೊಂಬೆಮಾಡುವವರ ಮನೆಯಲ್ಲಿ ಹುಟ್ಟಿದರೇನೀಗ? ಅವನು ಓದಿ ಬಿರುದುಗಳನ್ನು ಹೊಂದಿ ಕಲೆಕ್ಟರಾಗಿ ಬರಬಾರದೇನು ? ಮಣ್ಣಿನ ಬೊಂಬೆಗಳನ್ನು ಮಾಡಿ ಶಾಲಿವಾಹನನು ದೊಡ್ಡ ಅರಸನಾಗಿ ಬಂದನೆಂಬ ಕತೆಯನ್ನು ಆಕೆ ಕೇಳಿದ್ದಳು. ಆದುದರಿಂದ ತನ್ನ ನಂಬಿಕೆಯು ಅಸಾಧ್ಯವಾದದ್ದೇನೂ ಅಲ್ಲ ಎಂದು ಅವಳು ನಿಶ್ಚಯಿಸಿದಳು. ತನ್ನ ಕಣ್ಣಿನ ಎವೆಯೊಳಗಿಟ್ಟು ಆಕೆ ವೇಲನನ್ನು ಸಾಕುತ್ತಲಿದ್ದಳು.

ವೇಲನಿಗೂ ಬೊಂಬೆಮಾಡಲು ಬರುತ್ತದೆ. ಅವನ ಆಶೆಯಲ್ಲಿ ಶ್ರದ್ಧೆಯಲ್ಲಿ, ದುಡಿತದಲ್ಲಿ ಕೊರತೆಯೇನೂ ಇರಲಾರದು; ಆದರೆ ಆತ ಮಾಡಿದ ಬೊಂಬೆಯು ಮಾತ್ರ ಯಾವುದೋ ಒಂದು ಮುದ್ದೆಯಂತಿರುವುದು. ಅದರ ಕೈಕಾಲು ಮುಖವೆಲ್ಲವೂ ಆ ಮಗುವಿನ ಕಲ್ಪನೆಯಲ್ಲಿ ಮಾತ್ರವೇ ನಿಂತುಬಿಡುವುದು. "ನಿನ್ನ ಬೊಂಬೆ ಚೆನ್ನಾಗಿಲ್ಲ!" ಎಂದು ಕುಪ್ಪಮ್ಮನು ಎಂದೂ ಹೇಳುತ್ತಿರಲಿಲ್ಲ. "ಬಹಳ ಚೆನ್ನಾಗಿದೆ, ಪ್ರಾಯಬಂದ ಮೇಲೆ ನೀನು ದೊಡ್ಡ ಸಾಮರ್ಥ್ಯಶಾಲಿಯಾಗುವೆ. ನಿನ್ನ ಬೊಂಬೆಗೆ ಬಹಳ ಗಿರಾಕಿ ಏರ್ಪಡುವುದು!" ಎಂದು ಹೇಳುವಳು. ಮರುಕ್ಷಣವೆ "ಛೀ, ಎಂತಹ ಹುಚ್ಚು ಕೆಲಸವನ್ನು ಮಾಡಿದೆನು! ಇಂತಹ ಕೇವಲವಾದ ಜೀವನವು ಈ ಮಗುವಿಗೂ ಬರಬೇಕೆ? ಇವನೇ ಓದು ಕಲಿತರೆ ದೊಡ್ಡ ಉದ್ಯೋಗವನ್ನು ಮಾಡಬಹುದಲ್ಲವೇ?" ಎಂದು ಭಾವಿಸುವಳು; ಆ ಭಾವನೆಯಲ್ಲಿಯಾದರೋ ಒಂದು ಕುತೂಹಲವೆರ್ಪಡುವುದು.

"ಅಮ್ಮಾ, ಅಮ್ಮಾ, ಇಗೋ ನೋಡು, ನನ್ನ ಗಣೇಶ!" ಎಂದು ತೋರಿಸುವನು ವೇಲ. ಅದು ಗಣೇಶನಾಗಿಯೂ ಇರದು, ಮಂಗನಾಗಿಯೂ ಇರದು; ಬರಿಯ ಮಣ್ಣಿನ ಮುದ್ದೆ! ಅದೂ ಕೂಡ ಡೊಂಕು-ಡೊಂಕಾದ ಮುದ್ದೆ!

"ಚೆನ್ನಾಗಿದೆ!" ಎಂದು ಅಮ್ಮನು ಹೇಳುವಳು. ಅಮ್ಮನಿಗಿಂತ ಹೆಚ್ಚು ದೊಡ್ಡವರಾರೂ ಅವನಿಗಿಲ್ಲ!

ವೇಲನು ಮಾಡಿದ ಬೊಂಬೆಗಳು—ಅವನಿಗೆ ಅವು ಬೊಂಬೆಗಳಲ್ಲವೇ?—ನಾಲ್ಕೈದು ಇದ್ದುವು. ಒಂದು ದಿವಸ ಅವನು ತನ್ನ ಅಮ್ಮನನ್ನು ಕುರಿತು ಮುದ್ದುಮುದ್ದಾಗಿ ಕೇಳತೊಡಗಿದನು:

"ಅಮ್ಮಾ, ಏಕಮ್ಮಾ, ನೀನು ಈ ಬೊಂಬೆಗಳನ್ನು ಮಾರಿಬಿಟ್ಟು ಬರಬಾರದೇ?"

ತಾಯಿಗೆ ಸ್ವಲ್ಪ ಆಶ್ಚರ್ಯವಾಯಿತು. ಮತ್ತೆ ಹೇಳಿದ ವೇಲ:

"ನಿನ್ನ ಬೊಂಬೆಯನ್ನು ಮಾರಿ ದುಡ್ಡು ತರುತ್ತೀಯಲ್ಲಾ; ಇದನ್ನೂ ಮಾರಿ ಬಾ!"

* ಈ ಸುಪ್ರಸಿದ್ಧ ತಮಿಳು ಕತೆಗಾರರ ಕತೆಯನ್ನು, ಶ್ರೀಮತಿ ಜಯಲಕ್ಷ್ಮಿ ಆರ್. ಶ್ರೀನಿವಾಸನ್ ಅವರು ಕನ್ನಡಿಸಿದ್ದಾರೆ.

"ಆಗಲಿ ಚಿನ್ನಾ!"

"ಎಲ್ಲಾ ಬೊಂಬೆಯನ್ನೂ ಮಾರಿ ಬಿಡುತ್ತೀಯಾ?"

"ಮಾರಿಬಿಡೋಣ ಕಂದಾ!"

ಹುಡುಗನಿಗುಂಟಾದ ಸಂತೋಷವನ್ನು ಆಗ ನೋಡಬೇಕು!

ವೇಲನು ಪ್ರತಿನಿತ್ಯವೂ ಸಂಜೆ, ತಾಯಿಯು ಅಂಗಡಿಯ ಬೀದಿಗೆ ಬೊಂಬೆಗಳನ್ನು ಮಾರಲು ತೆಗೆದುಕೊಂಡು ಹೋಗುವಾಗ, ತನ್ನ ಬೊಂಬೆಗಳನ್ನೂ ಮಾರಿ ಬರಬೇಕೆಂದು ಹಟ ಹಿಡಿಯುತ್ತಿದ್ದನು. ಅವನ್ನು ಅವಳು ಹೇಗೆ ಮಾರುವಳು? ಏನೇನೋ ನೆಪಗಳನ್ನು ಹೇಳುತ್ತಿದ್ದಳು. ಈ ರೀತಿಯಾಗಿ ನಿಧಾನಿಸುವುದು ವೇಲನಿಗೆ ಅಸಹನೀಯವಾಯಿತು. ಆಗ ಅವನಿಗೊಂದು ಆಲೋಚನೆ ಹೊಳೆಯಿತು: "ಏಕೆ ನಾನೇ ತೆಗೆದುಕೊಂಡು ಹೋಗಿ ಮಾರಬಾರದು?"

೨

ಸಂಧ್ಯಾಕಾಲ ಅಂಗಡಿಬೀದಿಯಲ್ಲಿ ಆ ಚಿಕ್ಕಮಗುವು ತನ್ನ ಕೈಯಲ್ಲಿ ಒಂದು ಒಣಗಿದ ಮಣ್ಣಿನ ಉಂಡೆಯನ್ನು ಇಟ್ಟುಕೊಂಡು ನಿಂತಿದ್ದಿತು. ಅದರ ಮೇಲೆ ಬಣ್ಣಗಳನ್ನು—ಒಂದೂ ಬಗೆಯ ಅಚ್ಚುಕಟ್ಟಿಲ್ಲದೆ—ಸುಮ್ಮನೆ ಬಳಿಯಲಾಗಿದ್ದಿತು. ನವರಾತ್ರಿಯ ಕಾಲ. ಎಷ್ಟೆಷ್ಟೋ ಜನರು ಬೊಂಬೆಗಳನ್ನು ಮಾರುತ್ತಲಿದ್ದರು; ವೇಲನೂ ಒಂದು ಮೂಲೆಯಲ್ಲಿ ನಿಂತಿದ್ದನು.

"ಬೊಂಬೆ ಬೇಕೇ ಬೊಂಬೆ! ಗಣೇಶನ ಬೊಂಬೆ!" ಎಂದು ಅವನು ತನ್ನ ಕಿರುದನಿಯಲ್ಲಿ ಕೂಗಿದನು. ಯಾರಾದರೂ ತಿಳಿದವರು ನೋಡಿಬಿಟ್ಟಾರೆಂಬ ಭಯವು ಒಳಗೊಳಗೇ ಕಳವಳಪಡಿಸುತ್ತಿತ್ತು. ಬೊಂಬೆಗಳನ್ನು ಕೊಳ್ಳುವುದಕ್ಕೆ ಅಲ್ಲಿಗೆ ಬಂದವರು ಅವನ ಕೈಯಲ್ಲಿದ್ದುದನ್ನು ನೋಡಿದರು; ಅವರಿಗೆ ಸುಮ್ಮನೆ ನಗು ಬಂದಿತು. ನಕ್ಕು ಮುಂದೆ ನಡೆದರು.

"ಇದೆಂತಹ ಬೊಂಬೆಯಪ್ಪಾ?" ಎಂದು ಕೆಲವರು ಕೇಳುವರು. ಆಗ ವೇಲನು ಏನಾದರೊಂದು ಉತ್ತರವನ್ನು ಕೊಡುವನು. ಅದನ್ನು ಕೇಳಿ ಅವರು ಮತ್ತಿಷ್ಟು ನಗುತ್ತಾ ಹೊರಟು ಹೋಗುವರು. ಅವರು ನಗುವುದರ ಇತ್ಯರ್ಥವು ವೇಲನಿಗೆ ತಿಳಿಯದು. "ನಮ್ಮಮ್ಮನೇ ಇದು ಒಳ್ಳೆಯ ಬೊಂಬೆಯೆಂದು ಹೇಳಿದಳಲ್ಲಾ! ಇದನ್ನು ಏಕೆ ಇವರು ಕೊಳ್ಳಲಿಲ್ಲ?" ಎಂದು ಅವನು ಚಿಂತಿಸಿದನು. ನಿಜವೇ ಹೌದು! ಅದು ಅವನಿಗೆ ಒಳ್ಳೆಯ ಬೊಂಬೆ! ಅವನ ತಾಯಿಗೂ ಅಂದವಾದ ಬೊಂಬೆಯೆ! ಬೇರೆ ಇತರರ ಕಣ್ಣಿಗೆ ಅದು ಆ ರೀತಿಯಾಗಿ ತೋರಲಿಲ್ಲವಲ್ಲಾ!

ಕಾಲುಗಳು ನೋವಾಗುವಷ್ಟು ನಿಂತದ್ದೇ ಲಾಭಕರ. ಗಂಟಲು ಹುಣ್ಣಾಗುವಂತೆ ಕೂಗಿಯೂ ಉಪಯೋಗವಿಲ್ಲ. ಆ ಚಿಕ್ಕ ಮಗುವಿನ ಆಶೆಯು ನೆರವೇರಲಿಲ್ಲ. ಬಂದವರೆಲ್ಲರೂ ಆ ಮಗುವಿನ ಕೈಯ್ಯಲ್ಲಿದ್ದ ಮಣ್ಣಿನ ಉಂಡೆಯನ್ನು ಮಾತ್ರವೇ ನೋಡಿದರು; ಅದರ ಮೇಲೆ ಚಿಮುಕಿಸಿರುವ ಬಣ್ಣದ ನೀರಿನ ಅವಲಕ್ಷಣವು ಮಾತ್ರವೇ ಅವರುಗಳ ಕಣ್ಣಿಗೆ ತೋರಿತು. ಆ ಪುಟ್ಟ ಮಗು ತನ್ನ ಮನಸ್ಸೆಲ್ಲವನ್ನೂ ಪ್ರಯೋಗಿಸಿ, ತನ್ನ ಆಶೆ-ಶ್ರದ್ಧೆಯೆಲ್ಲವನ್ನೂ ಒಂದುಗೂಡಿಸಿ ಅದನ್ನು ಮಾಡಿದ್ದನೆಂಬುದನ್ನು ಯಾರೂ ತಿಳಿಯಲಿಲ್ಲ. ಪಾಪ! ಅವರು ನಗುತ್ತಿರುವಾಗಲೆಲ್ಲಾ, ಆ ಮಗುವಿನ ಹೃದಯದಲ್ಲೊಂದು ಏಟು ಇರಿದಂತಾಗುವುದು.

*

ವೇಲನ ಆಶೆಯು ಸಫಲಹೊಂದದೆ, ನಿರಾಶೆಯೊಡನೆ ಮನೆಗೆ ಹಿಂತಿರುಗಲು ಹೊರಟನು. ಆಗ ಒಬ್ಬ ವಯೋಧಿಕರು ಅಲ್ಲಿಗೆ ಬಂದರು. ಅವರ ಕಣ್ಣುಗಳು ವೇಲನ ಕೈಯಲ್ಲಿದ್ದ ವಸ್ತುವಿನ ಹೊರಗಿನ ವಾತಾವರಣವನ್ನು ನೋಡಲಿಲ್ಲ; ಆ ವಸ್ತುವಿನ ಒಳಪ್ರದೇಶವನ್ನು ಹೊಕ್ಕು ನೋಡಿದುವು. "ಇದು ಏನು ಮಗು?" ಎಂದು ಅವರು ಕೇಳಿದರು.

"ಗಣೇಶನ ಬೊಂಬೆ; ನಾನು ಮಾಡಿದ್ದು," ಎಂದು ಗದ್ಗದ ಸ್ವರದಲ್ಲಿ ವೇಲ ನುಡಿದ. ಅಷ್ಟು ಹೊತ್ತಿನವರೆಗೂ ಈ ಪ್ರಪಂಚದ ಪರಿಹಾಸ್ಯದ ಅಲೆಗಳಿಂದ ಆಘಾತಿಸಲ್ಪಟ್ಟ ಅವನ ಉತ್ಸಾಹವು ಆಗ ಮಾತ್ರ ಸ್ವಲ್ಪ ವಿಕಾಸಗೊಂಡಿತು.

"ಹಾಗೇನು? ಏನು ಬೆಲೆ?"

ಈ ಪ್ರಶ್ನೆಯನ್ನು ಇದುವರೆಗೂ ಒಬ್ಬರೂ ಕೇಳಿರಲಿಲ್ಲ. ಮಗುವು ಏನೆಂದು ಹೇಳಬೇಕೆಂಬುದನ್ನು ತಿಳಿದಿರಲೂ ಇಲ್ಲ. "ಏನು ಬೆಲೆ?........ಏನು ಹೇಳಲಿ?" ಅವನಿಗೊಂದೂ ತೋರಲಿಲ್ಲ. ಮಗುವಿನ ಬಾಯಿಂದ ಉತ್ತರ ಬರಲು ತಡವಾಯಿತು. ಮುದುಕರು ಕಾದಿರಲಿಲ್ಲ. "ಸರಿ, ಇದನ್ನು ತೆಗೆದುಕೋ, ಬೊಂಬೆಯನ್ನು ನಾನು ಕೊಂಡುಕೊಳ್ಳುವೆನು!" ಎಂದು ನಾಲ್ಕಾಣೆಯ ನಾಣ್ಯವೊಂದನ್ನು ಮಗುವಿನ ಕೈಯ್ಯಲ್ಲಿಟ್ಟು, ಆ ಜೇಡಿಯ ಮಣ್ಣಿನ ಉಂಡೆಯನ್ನು ಅವರು ಕೊಂಡುಕೊಂಡರು.

ವೇಲನ ಮೊಗವು ಅರಳಿತು. ಅವನ ಜೀವಮಾನದಲ್ಲಿ ಅದು ಒಂದು ಭಾರಿ ಸಂತೋಷವಲ್ಲವೇ? ತನ್ನ ಬೊಂಬೆಯೂ ಬೆಲೆಗೆ ಹೋಯಿತು; ಅಷ್ಟೊಂದು ಹೊತ್ತು ಶ್ರಮ ವಹಿಸಿ ಕಾಯ್ದಿದ್ದುದರ ಫಲವು ಅವನಿಗೆ ಲಭಿಸಿಬಿಟ್ಟಿತು. ಒಂದೇ ಓಟ!

"ಅಮ್ಮಾ! ಅಮ್ಮಾ! ಮಾರಿಬಿಟ್ಟೆ. ಇಕೋ ದುಡ್ಡು!" ಎಂದು ಅಮ್ಮನ ಕೈಯ್ಯಲ್ಲಿ ದುಡ್ಡನ್ನು ಕೊಟ್ಟನು, ವೇಲ.

'ಮಗುವನ್ನು ಕಾಣಲಿಲ್ಲವಲ್ಲಾ' ಎಂದು ಚಿಂತಿಸುತ್ತಲಿದ್ದ ಅವಳಿಗೆ, ಅವನ ಆ ಆತುರದ ಮಾತುಗಳ ಅರ್ಥವಾಗಲಿಲ್ಲ. "ಅವನ್ನು ಯಾರು ಕೊಂಡುಕೊಳ್ಳುವರು?" ಎಂದು ಅವಳು ಭಾವಿಸಿದ್ದಳು. "ಅದರೆ, ಇವನಿಗೆ ದುಡ್ಡೆಲ್ಲಿಂದ ಸಿಕ್ಕಿತು?"— ಈ ಪ್ರಶ್ನೆಗೆ ಉತ್ತರ ಗೊತ್ತಾಗಲಿಲ್ಲ.

"ನನ್ನ ಮುದ್ದು ಕಂದಾ, ನಿನ್ನ ಬೊಂಬೆಯನ್ನು ಕೊಂಡುಕೊಂಡವರು ಯಾರಪ್ಪಾ!" ಎಂದು ಕೇಳಿದಳು.

ಶಿಕ್ಷಕ ಮಿತ್ರ

ಸಂಪಾದಕರು : ಜೋಶಿ ಅರವಿಂದರಾಯರು ಬಿ.ಎ., ಬಿ.ಟಿ.

ಶಿಕ್ಷಣದ ಬಗೆಗೆ ಉಪಯುಕ್ತ ಲೇಖನಗಳುಳ್ಳ, ಪ್ರಾಥಮಿಕ ಶಿಕ್ಷಕರ ಸುಖ-ದುಃಖದ ವಿಷಯವಾಗಿ ವಿಚಾರಿಸುವ ಅತ್ಯುತ್ತಮ ಮಾಸಪತ್ರಿಕೆ.

ವಾರ್ಷಿಕ ಚಂದಾ : ೨–೮–೦

'ಶಿಕ್ಷಕ ಮಿತ್ರ' ಕಾರ್ಯಾಲಯ,
ಫುಲಬಾಗಗಲ್ಲಿ, ಬೆಳಗಾಂವಿ.

"ಯಾರೋ ಒಬ್ಬ ತಾತ ಕೊಂಡುಕೊಂಡರು, ಅಮ್ಮಾ!" ಎಂದನು ಆತ; "ನಾಳೆಯೂ ಹೋಗಿ ಮಾರಿಬರುತ್ತೇನೆ," ಎಂದು ಹೇಳಿ ಕುಣಿದಾಡಿದನು.

ಮಾರನೆಯ ದಿನ ಸಂಜೆ ಅವನು ತಾನು ಮಾಡಿದ್ದ ರಾಜನ ಬೊಂಬೆಯನ್ನು ತೆಗೆದುಕೊಂಡು ಹೋದನು. ಮುಂಚಿನ ದಿವಸ ಬಂದ ಮುದುಕರು ಅಂದೆಯೂ ಆ ಬೊಂಬೆಯನ್ನು ಕೊಂಡುಕೊಂಡು ಹೋದರು. ಅಂದು ಕುಪ್ಪಮ್ಮನು ತನ್ನ ಮಗುವು ನಿಜವಾಗಿಯೂ ಬೊಂಬೆಯನ್ನು ಮಾರಿಕೊಂಡೇ ಬರುತ್ತಾನೆಂದು ಭಾವಿಸಿದಳು. "ಈ ಮಗು ಒಳ್ಳೆಯ ಕೈಗುಣ ಉಳ್ಳವನು. ತನ್ನ ಮಣ್ಣಿನ ಉಂಡೆಗೆ ನಾಲ್ಕಾಣೆಯನ್ನು ಸಂಪಾದಿಸುವ ಇವನು, ನನ್ನ ಅಂದವಾದ ಬೊಂಬೆಗಳಿಗೆ ಒಳ್ಳೆಯ ಗಿರಾಕಿಯನ್ನು ತರುವನು," ಎಂದು ಆಕೆಯ ಮನಸ್ಸಿನಲ್ಲಿ ಒಂದು ಆಶೆಮೂಡಿತು. ವಿದ್ಯೆಕಲಿಸುವ ಯೋಚನೆಯನ್ನೂ ಉದ್ಯೋಗ ನೋಡುವ ಯೋಜನೆಯನ್ನೂ ಅವಳು ಮರೆತು ಬಿಟ್ಟಳು. ತನ್ನ ಬೊಂಬೆಗಳನ್ನು ಅವನು ಸಾಯಂಕಾಲ ಮಾರುತ್ತಾನೆಂದೂ ಕೊಳ್ಳುವವರು ಅವನಿಗಾಗಿ ತುಂಬಾ ಹಣ ಕೊಡುತ್ತಾರೆಂದೂ, ಆದರಿಂದ ತಾನು ಹಣವಂತಳಾಗುವೆನೆಂದೂ ಮನೋರಾಜ್ಯವನ್ನು ಸೃಷ್ಟಿಮಾಡಿಕೊಂಡಳು.

"ಕಂದಾ, ನಾಳೆಯ ದಿನ ನಾನು ಒಂದು ಬೊಂಬೆಯನ್ನು ಕೊಡುವೆನು. ಅದನ್ನು ತೆಗೆದುಕೊಂಡು ಹೋಗಿ ಮಾರಿ ಬಾ, ಆ ಮುದುಕರಿಗೇ ಕೊಡು, ತುಂಬಾ ದುಡ್ಡು ಸಿಕ್ಕುವುದು!" ಎಂದಳು ಕುಪ್ಪಮ್ಮ. ಮಗು ಸಮ್ಮತಿಸಿದನು.

೩.

ಸಂಧ್ಯಾಕಾಲ. ತನ್ನ ಮಗುವಿಗೆ ಚೆನ್ನಾಗಿ ಅಂಗಿಯನ್ನುಡಿಸಿ ಕೈಯಲ್ಲಿ ಸುಂದರವಾದೊಂದು ರಾಣಿಯ ಬೊಂಬೆಯನ್ನು ಕೊಟ್ಟು ಅಂಗಡಿಯಬೀದಿಗೆ ಕಳುಹಿದಳು ಕುಪ್ಪಮ್ಮ. ಅವನು ಹೊರಟುಹೋದ ನಂತರ ಅವಳ ಹೃದಯವು ಢಣಢಣನೆ ಹೊಡೆದುಕೊಳ್ಳುತ್ತಿತ್ತು. "ಅರ್ಧರೂಪಾಯಿಗೆ ಮೋಸವಿಲ್ಲ" ಎಂದು ಅವಳು ನಿಶ್ಚಯವಾಗಿಯೂ ನಂಬಿದಳು. ತನ್ನ ಮಗುವು ಆ ಬೊಂಬೆಯನ್ನು ಒಬ್ಬ ಮುದುಕರಿಗೆ ಮಾರುತ್ತಿರುವಂತೆಯೂ, ಅವರು ಒಂದು ರೂಪಾಯಿಯನ್ನು ಕೊಡುತ್ತಿರುವಂತೆಯೂ, 'ನಾಳೆಯ ದಿನ ತುಂಬಾ ಬೊಂಬೆಗಳನ್ನು ತೆಗೆದುಕೊಂಡುಬಾ' ಎಂದು ಅವರು ಹೇಳುವಂತೆಯೂ ಅವಳು ಸ್ವಪ್ನವನ್ನು ಕಂಡಳು. ತನ್ನ ಮಗುವು ಮಾರಿಬಿಟ್ಟು ಬರುವವರೆಗೂ ಕಾಯ್ದುಕೊಂಡಿರುವ ಸಹನಶಕ್ತಿಯು ಅವಳಲ್ಲಿರಲಿಲ್ಲ. ಆ ದೃಶ್ಯಗಳನ್ನು ಪ್ರತ್ಯಕ್ಷವಾಗಿ ನೋಡಬೇಕೆಂಬ ಆತುರವು ಅವಳ ಹೃದಯದಲ್ಲಿ ಹೊಡೆದುಕೊಂಡಿತು. ಅವಳೂ ಅಂಗಡಿಯ ಬೀದಿಗೆ ಹೊರಟಳು. ತನ್ನ ಮಗನಿಗೆ ಕಾಣಿಸದಂತೆ ಒಂದು ಮರೆಯಾದ ಸ್ಥಳದಲ್ಲಿ ನಿಂತುಕೊಂಡು, ಅವನನ್ನು ಗಮನಿಸುತ್ತಲಿದ್ದಳು.

ವೇಲನ ಬೊಂಬೆಗಳನ್ನು ಎಷ್ಟೋ ಜನರು ನೋಡಿದರು. ಕೆಲವರು ಕೇಳಿದರು. ಅಮ್ಮನು ಹೇಳಿದಂತೆ ಅವನು ಆ ಮುದುಕರನ್ನು ಇದಿರುನೋಡುತ್ತಲಿದ್ದನು. ಆದುದರಿಂದ ಬೇರೆಯವರೊಬ್ಬರಿಗೂ ಅವನು ಕೊಡಲಿಲ್ಲ. ಅಂದು ಮುದುಕರು ನಿಧಾನವಾಗಿಯೇ ಬಂದರು. ವೇಲನ ಕೈಯಲ್ಲಿ ಸುಂದರವಾದೊಂದು ರಾಣಿಯ ಬೊಂಬೆಯಿರುವುದನ್ನು ನೋಡಿದರು.

"ತಾತಾ, ಈ ಬೊಂಬೆಯನ್ನು ಕೊಂಡುಕೊಳ್ಳಿ," ಎಂದನು ವೇಲ.

ಅವರು ಅದನ್ನು ಚೆನ್ನಾಗಿ ಗಮನಿಸಿ ನೋಡಿದರು.

"ಮಗೂ, ಇದು ನೀನು ಮಾಡಿದಂತೆ ತೋರುವುದಿಲ್ಲವಲ್ಲಾ! ಯಾರು ಮಾಡಿದರು?"

"ನಮ್ಮಮ್ಮನು ಮಾಡಿದ್ದು"

"ಇದನ್ನು ನೀನು ಏತಕ್ಕೆ ತಂದೆ?"

"ನಮ್ಮಮ್ಮನು ತೆಗೆದುಕೊಂಡು ಹೋಗ ಹೇಳಿದಳು."

"ಹಾಗೆಯೇ! ಇದು ನಿನ್ನ ಬೊಂಬೆಯಂತೆ ಸುಂದರವಾಗಿಲ್ಲ. ನನಗೆ ಇದು ಬೇಡ. ನಿಮ್ಮಮ್ಮನ ಹತ್ತಿರದಲ್ಲಿ ಕೊಟ್ಟುಬಿಡು," ಎಂದು ಹೇಳಿ ಮುಂದಕ್ಕೆ ನಡೆದರು.

ಹುಡುಗನಿಗೆ ಸ್ವಲ್ಪವೂ ವ್ಯಸನವಿಲ್ಲ. ಒಂದೇ ಉಸಿರಿನಲ್ಲಿ ಮನೆಗೆ ಬಂದನು. ಅವನ ತಾಯಿಯು ಮುಂಚಿತವಾಗಿಯೆ ಬಂದು ಬಿಟ್ಟಳು. ಅವಳ ಮುಖವಂತೂ ಕುಗ್ಗಿಹೋಗಿತ್ತು. "ಅಮ್ಮಾ, ನಿನ್ನ ಬೊಂಬೆಯು ಚೆನ್ನಾಗಿಲ್ಲವಂತೆ, ಇದು ಬೇಡವಂತೆ, ತಾತನೇ ಹೇಳಿದರು!" ಎಂದು ಹೇಳುತ್ತಾ ಬೊಂಬೆಯನ್ನು ಕೆಳಗಿಟ್ಟನು. ಅವನ ಮುಖದಲ್ಲಿ ಗರ್ವದ ಚಿಹ್ನೆಯು ತೋರಿತು.

"ಚೆನ್ನಾಗಿ ಇಲ್ಲವೇನು?" ಎಂದು ಅವಳು ಕೇಳಿದಳು. ಆ ತಾತನು, ಏತಕ್ಕೆ ಹಾಗೆ ಹೇಳಿದರೆಂದು ಅವಳಿಗೆ ತೋರಲೇ ಇಲ್ಲ; ಎಂದಿಗೂ ತಿಳಿಯಲಾರದು.

ನಗೀಗೆ ನೈವಿದ್ಯ

ನಡುವೆ ಕೂತವಳು

" ಏನೋ ಶ್ಯಾಮೂ, ನಿನ್ನ ಹೆಂಡತಿ ಯಾರು ? ಆ ಮಂಡವಾಗಿನ— ತೋಳಿದ ಕೆಂಪಿನ ಬಣ್ಣದ— ಹುಡಿಗೀ ಎಡಕ್ಕ ಕೂತವಳೋ ಬಲಕ್ಕ ಕೂತವಳೋ ? "

" ಎರಡೂ ಅಲ್ಲ, ನಡುವೆ ಕೂತವಳು ! "

* * *

ನಿಜದ ಪರಿಣಾಮ

ನ್ಯಾಯಾಧೀಶ:— ನಿಜಾ ಹೇಳತೀನಂತ ದೇವರ ಆಣೀ ಮಾಡೀದಿ, ತಿಳೀತೇನು ? ಈಗ ನೀನು ನಿಜಾ ಹೇಳದಿದ್ದರ ಪರಿಣಾಮ ಏನಾಗತದ ಗೊತ್ತದs ಏನು ?

ಅಪರಾಧಿ:— ಗೊತ್ತದsರಿ ! ಸತ್ತ್ಮ್ಯಾಲ ದೇವರು ನರಕಕ್ಕ ನೂಕತಾನಂತ ರಾವ್‌ಸಾಹೇಬ್ !

ನ್ಯಾಯಾಧೀಶ :— ಭಲೆ ! ಹಾಂಗಾದರ ಹೇಳು.. ನೀನು ನಿಜಾ ಹೇಳಿದರ ಏನು ಪರಿಣಾಮ ಆಗತದ ?

ಅಪರಾಧಿ :— ಈಗಿಂದೀಗ ನೀವು ಜೇಲಿಗೆ ಕಳಿಸತೀರಿ ರಾವ್‌ಸಾಹೇಬ್ !

* * *

ಸಂಬದ ಭವಿಷ್ಯ

" ಒಬ್ಬ ಭವಿಷ್ಯವಾದಿ ನನಗ ಹೇಳಿದ : ' ಎರಡನೆಯವರು ನಿಮ್ಮ ಹತ್ತರಿಟ್ಟ ಇಡುಗಂಟು ಮುಳುಗಿಸಿಕೊಂಡದ್ದಕ್ಕಾಗಿ, ನಿಮಗ ಶಿಕ್ಷಾ ಅನುಭವಿಸಬೇಕಾಗತದ ' ಅಂತ ! "

" ಆತನ ಮ್ಯಾಲ ರವೆಯಷ್ಟೂ ವಿಶ್ವಾಸ ವಿಡುವ ಕಾರಣವಿಲ್ಲ. ನಿನ್ನಂಥವನ ಹತ್ತರ ಇಡುಗಂಟು ಇಡುವ ಧೈರ್ಯದ ಮಗಾ ಇದ್ದಾನಾದಾರೂ ಯಾಂವ ? "

ತಿಂಗಳ ದರ

" ಎಲೋ ಮಾಣೀ ! ತಿಂಗಳಿಗೆ ಊಟದ ದರಾ ಏನದs ನಿಮ್ಮ ಖಾನಾವಳಿಯೊಳಗ ? "

" ಸ್ವಲ್ಪ ತಡೀರಿ ; ನಮ್ಮ ಮಾಲಕರನ್ನ ಕೇಳಿ ತಿಳಿಸತೀನಿ ! "

" ಮಾಲಕರನ್ನ್ಯಾಕೋ ಕೇಳೂದು ? ನಿನಗ ಗೊತ್ತು ಇಲ್ಲೇನು ? "

" ನನಗ ಹ್ಯಾಂಗರೀ ತಿಂಗಳದರಾ ಗೊತ್ತು ಇರಬೇಕು ! ಇಲ್ಲಿ ಯಾರೂ ಒಂದು ಊಟಕ್ಕಿಂತಾ ಹೆಚ್ಚು ಉಂಡದ್ದನ್ನೇ ನೋಡಿಲ್ಲ ನಾ, ಇಂದಿನವರೆಗೂ ! "

* * *

ಓದುವ ನಾದದ ಹೆಂಡತಿ

" ಅಲ್ಲೋ ಶ್ಯಾಮೂ, ನಿಮ್ಮ ನೆರೆಮನೀ ಹುಡುಗಿ ನಿನಗ ನಿತ್ಯಾ ಪ್ರೇಮಪತ್ರಾ ಬರೀತಿರತಾಳ ಅಂತ ಹೇಳತೀ ? ಇನ್ನೂವರೆಗೂ ನಿನ್ನ ಹೆಂಡತೀ ಕಣ್ಣಿಗೆ ಒಂದೂ ಹ್ಯಾಂಗ ಬಿದ್ದಿಲ್ಲಪಾ ಆ ಪ್ರೇಮಪತ್ರ ? "

" ನಿನಗ ಗೊತ್ತಿಲ್ಲ ಒಂದು ಮಜಾ ! ನಾನು ಆ ಪ್ರೇಮಪತ್ರಗಳನೆಲ್ಲಾ ಎಲ್ಲಿ ಇಡತಿರತೀನಿ ಗೊತ್ತೋ ? "

" ಎಲ್ಲಿ ? "

" ನನ್ನ ಹೆಂಡತೀ ಪುಸ್ತಕದ ಕಪಾಟನೊಳಗs ಇಡತಿರತೀನಿ ! "

* * *

ಹರಟೆಯ ಪರಿಣಾಮ

" ತರುಣ–ತರುಣಿಯರು ತಮ್ಮತಮ್ಮೊಳಗ ಬೇಕು ಬೇಕಾದಂತೆ ತಲೆಹರಟೆ ಹೊಡೆಯುತ್ತಿದ್ದರೆ, ಪರಿಣಾಮವೇನಾಗುವುದು ಗೊತ್ತೆ ? "

" ಚೆನ್ನಾಗಿ ಗೊತ್ತು ! ಮದುವೆಯಾಗದಿದ್ದವರಲ್ಲಿ ಪ್ರೇಮವಿವಾಹ ! ಮದುವೆಯಾದವರಲ್ಲಿ ಘಟಸ್ಫೋಟ, ಎಂದರೆ ಲಗ್ನದ ಬೇಡಿಯ ಬಿಡುಗಡೆ ! "

* * *

ನಾಟಕದ ಬಗ್ಗೆ ಅಭಿಪ್ರಾಯ

" ನಿನ್ನೆ ನೀನು ಪ್ರೊ. ರಂಗನಾಥ ಅವರ ಪಕ್ಕದ ಖುರ್ಚಿಯ ಮೇಲೆಯೇ ಕುಳಿತಿದ್ದಿ. ನನ್ನ ನಾಟಕದ ಬಗ್ಗೆ ಅವರು ಏನೆಂದು ಅಭಿಪ್ರಾಯಪಟ್ಟರು ? "

" ತಮ್ಮ ದುಡ್ಡು ವ್ಯರ್ಥ ಹಾಳಾಗಲಿಲ್ಲ– ಎಂದು ಆಗಾಗ ಸಮಾಧಾನದ ಉದ್ಗಾರ ತೆಗೆಯುತ್ತಿದ್ದರು ! "

" ಇನ್ನೇನಾದರೂ ಹೇಳುತ್ತಿದ್ದರೆ ? "

" ಕಾಂಪ್ಲಿಮೆಂಟರೀ ಪಾಸು ತಮಗೆ ಕಳುಹಿದ್ದಕ್ಕಾಗಿ ನಿನಗೆ ಕೃತಜ್ಞತೆಗಳನ್ನು ಅವಶ್ಯವಾಗಿ ಅರ್ಪಿಸಬೇಕು— ಎಂದು ಕೂಡ ಹೇಳಿದರು.

* * *

' ನಾಲಾಯಖ್ ' ತಾಯಂದಿರು!

ಇತ್ತೀಚೆಗಿನ ಹುಡಿಗಿಯರೆಂದರೆ ತಾಯಂದಿರಾಗಲಿಕ್ಕೆ ತೀರಾ ನಾಲಾಯಖ್ ಇದ್ದಾರ ನೋಡ್ರಿ ! "

" ಆದರೆ ತಾಯಂದಿರಾಗಬೇಕಂತಲೇ ಅವರದೇನೂ ಹಟಾ ಇದ್ದಾಂಗ ಕಾಣೂದಿಲ್ಲ! "

* *

ಹೆಂಡತಿಯೆ ಹಡಗು !

" ಗಂಡಸರ ಜೀವನವೆಂದರೆ ಒಂದು ವಿಶಾಲವಾದ ಕಡಲು. ಮತ್ತು ಪ್ರೀತಿಯ ಹೆಂಡತಿಯೆಂದರೆ ಕಡಲನ್ನು ದಾಟಿಸುವ ಒಂದು ಹಡಗು ! "

" ಇಷ್ಟೆಲ್ಲಾ ಗೊತ್ತಿದ್ದ ಮ್ಯಾಲ ನೀನು ಮದಿವೀ ಯಾಕಪಾ ಮಾಡಿಕೋಬಾರದು ? "

" ಸದ್ಯದ ಕಾಲ ಹಡಗುಗಳಿಗೆ ಗಂಡಾಂತರದ್ದಾಗಿದೆಯೆಂಬ ವಿಷಯ ನಿನಗೆ ಗೊತ್ತಿಲ್ಲೇನು ? ನಿತ್ಯವೂ ನೂರಾರು ಹಡಗು ಮುಳುಗುವುದನ್ನು ಪತ್ರಿಕೆಗಳಲ್ಲಿ ಓದುತ್ತಿಲ್ಲವೇ ನಾವು ? "

* * *

ಪುಸ್ತಕ ವಿಮರ್ಶೆ

'ಬೆಳಕಿನ ಕತ್ತಲೆ'

ಕತೆಗಳ ಸೂಡು. ಶ್ರೀ. ಮಲ್ಲಾರಿ ಬರೆದುದು. ೧೦೭ ಪುಟಗಳು. ಹನ್ನೆರಡಾಣೆ ಬೆಲೆ. ನೂರಾಟಿ ಗಾರರು ಮನೋಹರ ಗ್ರಂಥಭಾಂಡಾರ, ಧಾರವಾಡ.

ಶ್ರೀ. ಮಲ್ಲಾರಿಯವರು ಇಷ್ಟು ದಿನ ಮಾಡಿದ ಸಾಹಿತ್ಯಕೃಷಿಯ ಒಂದು ಬೆಳಸು ಈ ಪುಸ್ತಕ. ಈ ಬೆಳೆಯನ್ನು ಅವರು ಆಯ್ದು, ಕೇದು ತಮ್ಮ ಎರಡೂ ಕೈಯ ಹಿಡಿತದಿಂದ ಸೂಡು ಕಟ್ಟಿ ನೀಡಿದ್ದಾರೆ. ಕನ್ನಡದಲ್ಲಿ ಕತೆಗಳ ಸುಗ್ಗಿ ನಡೆದಿದೆ. ಅದರಲ್ಲಿ ಇವರದೊಂದು ಸೂಡು ಸೇರಿಕೊಂಡು ಫಲ ಹುಲುಸಾಗಿದೆ; ಕಳೆಗೊಂಡಿದೆ.

ಇಲ್ಲಿರುವ ಹತ್ತು ಕತೆಗಳಲ್ಲಿ ದುಃಖಾಂತ ಕತೆಗಳೇ ಹೆಚ್ಚು. ಮೊದಲಿನ 'ಬೆಳಕಿನ ಕತ್ತಲೆ'ಯ ಹೆಸರನ್ನೇ ಸಂಗ್ರಹಕ್ಕೆ ಕೊಡಲಾಗಿದೆ. ಮೊದಲಿನ ಈ ಕತೆ, ಕೊನೆಯ 'ಲೈಮ್ ವಾಟರ್' ಇವೆರಡರ ಸನ್ನಿವೇಶ ಕರುಳುಕೊರೆಯುವಂತಹವು. ಎರಡರಲ್ಲಿಯೂ ಮಕ್ಕಳ ಸಾವು ಕಥಾವಸ್ತು. ಒಂದು ಆಕಸ್ಮಿಕ ದುರಂತ; ಇನ್ನೊಂದು ಸ್ವಂತದ ಅನುಭವ. ಓದುಗನಿಗೂ ತನ್ನ ಮಗುವನ್ನು ಕಳೆದುಕೊಂಡ ಸಂಕಟವಾಗುತ್ತದೆ. ಅಷ್ಟು ಹೃದಯಸ್ಪರ್ಶಿಯಾಗಿದೆ 'ಲೈಮ್ ವಾಟರ್'. 'ಸುರಸುಂದರಿ' ಬಹಳ ಗಂಭೀರವಾಗಿ ನಡೆಯುವ ಕತೆ— ಒಂದು ರೂಪಕದಂತಿದೆ. ಕತೆಗೆ ತಕ್ಕ ಐತಿಹಾಸಿಕ ಘಟನೆಯನ್ನು ಬಳಸಿಕೊಂಡಿದ್ದಾರೆ. ಅಧಿಕಾರ ಲಾಲಸೆಗೆ ತಂದೆಯ ಹರಕೆ ನಿಮಿತ್ತವಾಗಿದೆ. ಎರಡು ಬಲಿಬೀಳುತ್ತವೆ. ಇದೊಂದು ಅದ್ಭುತ ರಮ್ಯಕತೆ. 'ದೇವರ ಸನ್ನಿಧಾನಕ್ಕೆ' ಇದೂ ಒಂದು ದುಃಖಾಂತ ಕತೆಯೇ. ಮತಪರಿವರ್ತನೆಯಿಂದ ಒಂದು ಬಂಗಾರದಂತಹ ಸಂಸಾರ ಒಡೆದುಹೋಗುತ್ತದೆ. 'ನಾಡಿನ ಹೊರಗೆ' ಈ ಕತೆಯ ಹಿನ್ನೆಲೆ ಐತಿಹಾಸಿಕ; ಕತೆ ಪೂರಾ ಸಾಮಾಜಿಕ. ದೇಶಪ್ರೇಮದ ಗೀತೆ ಸರಸವಾಗಿದೆ. ಆ ಸಾತ್ತ್ವಿಕರಾಜ ವಿಕ್ರಮನೆನ್ನುವಾಗ ಅನುಕಂಪವಾಗುತ್ತದೆ. 'ವ. ವಿ.' ಒಂದು ಬಳ್ಳಿಯ ಎರಡು ಕಾಯಿಗಳು. ಇದು ಒಂದು ಕನಸಿನ ಕತೆ. 'ಒಡ್ಡರ ಹುಡುಗಿ'ಯನ್ನು ಧರ್ಮಸಂಕಟವಾಗದಂತೆ ಪರಿಗ್ರಹಿಸಿದ ಪತಿ, ತನ್ನ ಮೆಚ್ಚಿನ 'ಮಾತಾಡುವ ದೇವರಿ'ಗೂ ಎರಡು ಸೌತೆಕಾಯಿ ತಂದುಕೊಡುವ ಹಾಲುಂಡೆಯ ಸಕ್ಕರೆಪ್ಪ ಸ್ಮೃತಿಪಟಲದ ಮೇಲೆ ಕೆಲಕಾಲ ನಿಲ್ಲುವ ಪಾತ್ರಗಳು. 'ಅ' 'ಬ' 'ಕ' ಮಹಾಶಯರ ಗೊಂದಲ ಅವರ ಇಲೆಕ್ಷನ್ನಿನಷ್ಟೇ ಗೊಂದಲಮಯ. ಇದೊಂದು ಹಣ್ಣಾಗದ ಇಲ್ಲವೆ ಒತ್ತಿ ಹಣ್ಣು ಮಾಡಿದ ಕಸುಗಾಯಿ.

ಈ ಕತೆಗಳ ಹಿನ್ನೆಲೆಗೆ ಬಡತನವೊಂದು ದೈವವೊಂದು ಸದಾ ನಿಂತಿವೆ. ದೈವ ತನ್ನ ಜಾಲ ಬೀಸಿ ತನ್ನ ಲೀಲೆಯನ್ನು ನಡೆಸಿಯೇ ನಡೆಸಿದೆ. ಅದರಂತೆ ಘಟನೆಗಳು ವಾಸ್ತವಿಕಕ್ಕಿಂತ ದೈವೀಘಟನೆಗಳೆ. ಜೀವನದಲ್ಲಿ ದೈವವೂ ವಾಸ್ತವವಾಗಿ ಬಿಟ್ಟಂತೆ ಹಿಡಿಸಿದ ಕತೆಗಳಿವು.

ಶ್ರೀ. ಮಲ್ಲಾರಿಯವರ ಕನ್ನಡ ಓದಬೇಕು. ನಮ್ಮ ಮನೆಮಾತಿನ ಆರಿಸಿದ ಆಣಿಮುತ್ತುಗಳು ಸಿಗುತ್ತವೆ. ಕಾವ್ಯದಲ್ಲಿಯ ದೇಸಿನುಡಿಗಳ ಬೆಡಗು, ಸಕ್ಕದದ ಸೊಗಸು ಹೂಬಿಡಿಸಿದಂತೆ ಎಲ್ಲಾ ಕಡೆಯಲ್ಲೂ ಹರಡಿವೆ. ಒಂದೊಂದು ಕಡೆ ಊಹೆ ಊದಿನ ಹೊಗೆಯಂತೆ ಸುಂದರವಾಗಿ ತೇಲುತ್ತದೆ.

"..ನೆಲಕ್ಕೆ ಸಿಡಿದುಬಿದ್ದ ಮಿಂಚೊಂದು ಮೊಳೆಯಿತೇನೋ, ಅದು ಕೊನರಿ ಕುಡಿಯಿಟ್ಟು.......ಹಬ್ಬಿತೇನೋ, ಆ ಮಿಂಚು ಬಳ್ಳಿಗೆ ಕಂಬಕಂಬದಲ್ಲಿ ಹೂವಾದುವೇನೋ, ಅದರ ಕೆಂಗಿಡಿಗಳು ಬೀದಿಯ ಇಕ್ಕೆಲದ ಹಿರಿಮನೆ ಸಿರಿಮನೆಗಳ ಕುಂಬಿಗಳನ್ನಡರಿದುವೇನೊ, ಗೋಡೆ ತೊಲೆಗಳನ್ನು ಕೊರೆದುಕೊಂಡು, ಕೋಣೆ ಕೋಣೆ ಗೂ ಹರಿದುಮನೆತುಂಬ ಹೂಗಳಾದುವೇನೋ! ಎತ್ತೆತ್ತಲೂ ಆ ಇರುಳ ಬಿಳಿಸ್ಯೆದಿಲೆಗಳು ಆ ಆ ಮಿಂಚಿನ ಅರಳುಗಳು ಬೆಳಕನ್ನು ಸೂರೆಗೈದುವೇನೋ— ಎಂಬಂತೆ" ವಿದ್ಯುದ್ದೀಪಗಳ ಕಲ್ಪನಾವಿಲಾಸವೂ— "ಆವಿನ ಅಡಿಮುಡಿಯನ್ನು ನೆಲಕ್ಕೆ ಕೂಡಿಸಿ, ಅದಕ್ಕೆ ರಂಗಿತ್ತ ಹೊಂಬೆಳಗನ್ನು ಓಡಿಸಿ, ಬೀದಿಗೆ ಕತ್ತಲನ್ನು ಮೆತ್ತುತ್ತ ಮೂಡಲಿನಿಂದ ಪಡುವಲಿಗೆ ನಿಶಾದೇವಿ ಸಾಗಿಹೋದುದು" "ಕೂರ್ಮೆಯ ಗಾಳಿಪಟ ಮೆದುಳಿನ ಸಿಂಬೆಯೊಳಗಿಂದ ಬಗೆದಾರವನ್ನು ಉಚ್ಚಿಕೊಳ್ಳುತ್ತ ದೂರದೂರ ಮೇಲೆ ಮೇಲೆ ಹಾರುತ್ತಿರಲು ಆ ನುಲಿ ಪಕ್ಕನೆ ಚಟ್ಟನೆ ಕಟಕರಿಸಿದಂತಾಯಿತು." —ಎಂಬುದು, ಇಂತಹ ಊಹೆಗಳ ಸೊಬಗನ್ನು ಎಲ್ಲ ಕತೆಗಳಲ್ಲಿಯೂ ಕಾಣಬಹುದು.

ಇನ್ನೂ ಕೆಲವು ಮಾತುಗಳು ಮನಸಿನಲ್ಲಿ ಮೂಡಿನಿಲ್ಲುತ್ತವೆ.

'ಮಕ್ಕಳೆಂದರೆ ಮುಂದಿನ ದುಃಖದ ಕಿಡಿ,' 'ಅವರ ಗುಡಿಸಲಿನ ಮುಂದಿನಿಂದ ಹಲವು ದನಗಳು ಹಾಯ್ದು ಹೋದುವು, ಚಿನ್ನವ್ವನ 'ಕರು' ಬರಲಿಲ್ಲ.' 'ಯಾವ ಡಬ್ಬಿಯಲ್ಲಿ ಕೈಯಿಟ್ಟರೂ ಗಾಳಿಯೊಂದೆ' ಇತ್ಯಾದಿ.

ಇಂತಹ ಒಂದು ಸಂಗ್ರಹ ನಮ್ಮ ಕಥಾ ಸಾಹಿತ್ಯದಲ್ಲಿ ಸೇರಿದುದು ಒಂದು ವಿಶೇಷ. ಬಹುಕಾಲದಿಂದ ನಮ್ಮ ನುಡಿಗಾಗಿ ದುಡಿಯುತ್ತ ಬಂದ ಮಲ್ಲಾರಿಯವರ ಕೃತಿಗಳನ್ನು ನಮ್ಮ ಜನ ಆದರದಿಂದ ಓದಿ ಮೆಚ್ಚುವರೆಂದು ಆಶಿಸುತ್ತೇವೆ.

—ದ. ಬಾ. ಕು.

ಸಾದರ ಸ್ವೀಕಾರ

೩೫. ಕಾರಡಗಿ ವಂಹಾಲ ದೇಶಪಾಂಡೆ ಯವರ ಸಂಕ್ಷಿಪ್ತ ಇತಿಹಾಸ (ಸಚಿತ್ರ). ಲೇಖಕರು— ಶ್ರೀಮಾನ್ ಗೋವಿಂದ ರಾವ್ ದೇಶಪಾಂಡೆ ಸವಣೂರು, ಪೆನ್ಶನರ್ ಎಸ್. ಡಿ. ಎ. ಇನ್‌ಸ್ಪೆಕ್ಟರ್. ಪ್ರಕಾಶಕರು. ಶ್ರೀ ಗೋ.ವೆಂ. ದೇಶಪಾಂಡೆ ‹ ಗೋವಿಂದನಿವಾಸ ' ಸ್ಟೇಷನ್‌ರೋಡ್, ಧಾರವಾಡ. ಕ್ರಾ. ಅ. ೧೫೦ ಪುಟಗಳು. ಬೆಲೆ ೧-೦-೦.

೩೬. ಶಿರಹಟ್ಟಿ ಲೋಕಮಾನ್ಯ ಸಾರ್ವಜನಿಕ ವಾಚನಾಲಯದ ವರದಿ- (ತಾ. ೧-೮-೪೩). ಡೆ. ಅ. ೧೬ ಪುಟ. ಕಾರ್ಯದರ್ಶಿಗಳು ಶ್ರೀ. ಗಳಾದ ನಾ ಅ. ದೇಶಪಾಂಡೆ, ಎ. ಧೊಂ. ಮುಂಗಸೂಳಿ. ಕಳೆದ ವರ್ಷದ (೧೯೪೧) ಆಗಸ್ಟ್ ತಿಂಗಳಲ್ಲಿ ಬೆಳ್ಳಿಯ ಮಹೋತ್ಸವವನ್ನು ಮಾಡಿಸಿಕೊಂಡ ಬಹುದಿನದ ಸಂಸ್ಥೆಯಿದು. ೩೦೦೦ ರೂಪಾಯಿ ಬೆಲೆಬಾಳುವ ಸ್ವಂತದ ಕಟ್ಟಡವಿದೆಯಲ್ಲದೆ ೬೮೦೦ ರೂ. ಗಳ ಕಾದಿಟ್ಟ ನಿಧಿಯಿದೆ. ಗ್ರಂಥಸಂಗ್ರಹವು ೪೫೪೧-೧೦-೦ ಗಳದಿದೆ. ಇನ್ನಿತರ ಆಸ್ತಿ ೩೦೨-೮-೦ ಗಳದಿದೆ. ಶಿರಹಟ್ಟಿ ಚಿಕ್ಕ ಊರಾದರೂ ಈ ಸಂಸ್ಥೆಯ ಮೂಲಕ ಕನ್ನಡ ನಾಡಿನಲ್ಲಿ ಹೆಸರನ್ನು ಪಡೆದಿದೆ.

೩೭. ನಿಂಬಾಳ ಗ್ಯಾಝೆಟ್ (ಅರ್ಧ-ವರ್ಷ ಪತ್ರಿಕೆ). ಸಂಪಾದಕರು— ಶ್ರೀ. ಬಿ. ಜಿ. ನಾಡಗೌಡ ಅವರು. ಪ್ರಕಾಶನ ಸ್ಥಳ; ನಿಂಬಾಳ ಗ್ಯಾಝೆಟ್ ಆಫೀಸ್, ನಿಂಬಾಳ; ಜಿಲ್ಲಾ ವಿಜಾಪುರ. ಡೆ. ೩ ದ ೮ ಪುಟಗಳು. ವಾ. ಚಂದಾ. ೦-೬-೦. ಬಿಡಿ ಸಂಚಿಕೆಗೆ ೦-೩-೦.

ಈ ಪುಟ್ಟ ಪತ್ರಿಕೆಯಲ್ಲಿ ‘ ಆರೋಗ್ಯ ವಿಭಾಗ ’ ‘ ಈ ಬಾರಿಯ ಕಥೆ ’ ‘ ಮಹಿಳಾ ವಿಭಾಗ ’ ಇವುಗಳನ್ನೆ ಸೇರಿದಂತಾಗಿ ಲೇಖನ-ಕಥೆಗಳು ಇವೆ. ‘ ಆರು ತಿಂಗಳ ಭವಿಷ್ಯ ’ವೂ ಇದೆ. ‘ ನಗೆಮಲ್ಲಿಗೆ ’ ಎಂದು ಹಾಸ್ಯದ ತುಣುಕುಗಳೂ ಇವೆ. ಇದೊಂದು ಹಳ್ಳಿಯ ಸಮಾಚಾರ ಪತ್ರಿಕೆಯಾಗಿ ಹೊರಟರೆ ಉಪಯುಕ್ತವೆನಿಸೀತು. ಎಂದರೆ ನಿಂಬಾಳದ ಭೂಗೋಲ, ಇತಿಹಾಸ, ಐತಿಹಾಸಿಕ ವೈಶಿಷ್ಟ್ಯ, ಅಲ್ಲಿಯ ಜಾತಿ-ಜನಾಂಗಗಳು, ರೀತಿ-ನಡತೆಗಳು, ಸಂಸ್ಕೃತಿ ವೈಶಿಷ್ಟ್ಯಗಳು, ಸ್ಥಳೀಯ ದಂತ ಕಥೆಗಳು, ಜಾನಪದ ಸಾಹಿತ್ಯ, ಗಾದೆಮಾತುಗಳು, ಜನರ ವರ್ತಮಾನ ಸುಖ-ದುಃಖಗಳು, ಕಷ್ಟ-ನಷ್ಟಗಳು, ಬೇಕು-ಬೇಡಗಳು ಇವೆಲ್ಲ ಈ ಪತ್ರಿಕೆಯಲ್ಲಿ ಬರತೊಡಗಿದರೆ, ಆದರ್ಶಪತ್ರಿಕೆಯೆನಿಸಬಹುದಿದು; ಇಲ್ಲವಾದರೆ ಶಾಲೆಯ ಮಕ್ಕಳು ಪ್ರಕಟಿಸುವ ಕೈಬರಹದ ಪತ್ರಿಕೆಗಿಂತ ಹೆಚ್ಚಿನ ಕಾರ್ಯವನ್ನೇನೂ ಇದು ಮಾಡಿದಂತಾಗದು. ಆರು ತಿಂಗಳಿಗೊಂದು ಸಲ ಹೊರಡುವ ಪತ್ರಿಕೆಯಾದ್ದರಿಂದ ಅಚ್ಚುಕಟ್ಟುತನ-ಅಂದಚೆಯ ಕಡೆಗೆ ಇನ್ನಿಷ್ಟು ಲಕ್ಷ್ಯಕೊಟ್ಟರೆ ಬರುವಂತಿದೆ.





ಅಮೆರಿಯವರ ಅಬ್ಬರ

ಆಕ್ಟೋಬರ್ ೮ನೆಯ ತಾರೀಖಿಗೆ ಬ್ರಿಟಿಶ್ ಪಾರ್ಲಮೆಂಟಿನಲ್ಲಿ ಭಾರತ ಮಂತ್ರಿಯಾದ ಅಮೆರಿಯವರು ಹಿಂದುಸ್ತಾನದ ಬಗ್ಗೆ ಚರ್ಚೆಯನ್ನಾರಂಭಿಸಿದರು. ಇಂಡಿಯಾ ಕೌನ್ಸಿಲ್ ಮತ್ತು ಭಾರತ ಮಂತ್ರಿ— ಇವೆರಡೂ ಸಂಸ್ಥೆಗಳನ್ನು ರದ್ದುಗೊಳಿಸ-ಬೇಕೆಂದು ಹಿಂದುಸ್ತಾನದ ಎಲ್ಲ ಪ್ರಮುಖರೂ ಪಕ್ಷಗಳೂ ಏಕಮತದಿಂದ ಸಾರುತ್ತಿವೆಯಷ್ಟೆ. ಆ ಅಭಿಪ್ರಾಯಕ್ಕೆ ಇನ್ನೂ ಪುಷ್ಟಿ ಬೇಕಾಗಿದ್ದರೆ ಅಮೆರಿಯವರ ಭಾಷಣದಿಂದ ಅದು ಪೂರ್ತಿಯಾಗಿ ದೊರೆಯುವುದು. ಭಾರತಮಂತ್ರಿಯ ಮಾತಿಗೆ ಹೊಣೆಗಾರಿಕೆಯೂ ಮಹತ್ತ್ವವೂ ಇವೆ ಎಂಬುದನ್ನೇ ಅಮೆರಿ-ಯವರು ಮರೆತಂತೆ ಕಾಣುವುದು. ಇಲ್ಲವಾದರೆ ಇಷ್ಟೊಂದು ಅಪಹಾಸ್ಯ, ಅಸಂಬದ್ಧ, ಅಪ್ರಯೋಜಕ ಮಾತುಗಳನ್ನವರು ಆಡುತ್ತಿರಲಿಲ್ಲ. ‘ ವಿಶಾಲವಾದ ಹಿಂದುಸ್ತಾನದ ಜನರ ಕಲ್ಯಾಣ ಮತ್ತು ಅಭಿವೃದ್ಧಿ ’ಗಳಿಗೆ ಬ್ರಿಟಿಶರು ಕಾರಣರು, ಕಾಂಗ್ರೆಸು ಅಲ್ಲ—ಎಂಬುದು ಇತಿಹಾಸದ ದೃಷ್ಟಿಯಿಂದ ಅಪ-ಹಾಸ್ಯವಲ್ಲದೆ ಮತ್ತೇನು? ಲಾಭ, ಸವಲತ್ತು, ಅಧಿಕಾರ, ವ್ಯಾಪಾರ, ಭೇದೋಪಾಯ ಮೊದಲಾದ ರೀತಿಯಲ್ಲಿ ಇಂಗ್ಲಂಡವು ಹಿಂದುಸ್ತಾನದಿಂದ ತನ್ನ ಕಲ್ಯಾಣವನ್ನು ಪಡೆದುಕೊಂಡಿದೆ, ಆದೇ ಮೊದಲಗುಂ. ಯಾವ ಗೆದ್ದ ರಾಷ್ಟ್ರವೂ ಹಾಗೆಯೆ ಮಾಡು-ತ್ತಲಿದೆ ಎಂಬ ಮಾತು ಇತಿಹಾಸದಲ್ಲಿ ಸ್ಪಷ್ಟವಾಗಿ ಬರೆದಿರು-ವಾಗ, ಅಮೆರಿಯವರ ಅಪಪ್ರಚಾರವು ಯಾರನ್ನು ಮೋಸಗೊಳಿ-ಸುವುದು? ಇಷ್ಟಾದರೂ ‘ ಬ್ರಿಟಿಶರಿಗಾಗಿ ದ್ವೇಷ ಬೇಡ ’ ಎಂಬ ಉದಾತ್ತ ತತ್ತ್ವವನ್ನು ಮಹಾತ್ಮರೇ ಕಳೆದ ೨೦ ವರ್ಷಗಳಿಂದ ಸಾರುತ್ತಲಿದ್ದುದರಿಂದ ದೇಶಕ್ಕೆ ಹೆಚ್ಚಿನ ದುರ್ದೈವದ ಪ್ರಸಂಗ ಬಂದಿರಲಿಲ್ಲ. ಆದರೆ ಅಧಿಕಾರಸ್ಥಾನದಿಂದ ಬ್ರಿಟಿಶರು ತಾಳು-ತ್ತಿರುವ ಧೋರಣೆಯಿಂದ ಪರಸ್ಪರ ವೈಮನಸ್ಯ ಅನಿವಾರ್ಯ-ವಾಗಬಹುದೆ— ಎಂಬ ಹೆದರಿಕೆಯಾಗುವುದು. ಈಗಲಾದರೂ ಸದಿಚ್ಛೆ—ವಿಶಾಲಬುದ್ಧಿಗಳಿಗೆ ಅವಕಾಶ ದೊರೆತರೆ, ಅಂತಹ ಪ್ರಸಂಗ ಬಾರದೆ ಮಿತ್ರರಾಷ್ಟ್ರಗಳ ಶಕ್ತಿ ಬೆಳೆಯಬಹುದಾಗಿದೆ.

ಅನಾವಶ್ಯಕ ಮತ್ತು ಅಸಂಬದ್ಧ

‘ ಅಕ್ರಮ ಕಾರ್ಯಗಳನ್ನು ಬಿಟ್ಟು ನಮ್ಮೊಡನೆ ಮತ್ತು ಮಿಕ್ಕ ಭಾರತೀಯ ಪಕ್ಷಗಳೊಡನೆ ಒಪ್ಪಂದಮಾಡಿಕೊಳ್ಳುವುದಾಗಿ ವಚನ ಕೊಡುವವರೆಗೆ,ಸರಕಾರವು ಖಂಡಿತ ಕಾಂಗ್ರೆಸ್ ಮುಖಂಡ ರೊಡನೆ ಮಾತುಕತೆ ನಡೆಸುವುದಿಲ್ಲ ’ ಎಂಬ ಅಮೆರಿಯವರ ಗರ್ಜನೆಯು ಅಸಂಬದ್ಧವಾಗಿದೆ. ಮೊದಲು, ಅಕ್ರಮಕಾರ್ಯ ಗಳನ್ನು ಕಾಂಗ್ರೆಸು ಕೈಕೊಂಡಿಲ್ಲ, ಕೈಕೊಳ್ಳಲು ಬಯಸಿಯೂ ಇಲ್ಲ. ಸಂಧಾನ ಅಶಕ್ಯವಾದರೆ, ಹಾಗೆ ಮಾಡಬೇಕೆಂದು ಕಾಂಗ್ರೆಸಿನ ಎಣಿಕೆಯಾಗಿತ್ತು. ಇದಲ್ಲದೆ ದೇಶದ ಸ್ವಾತಂತ್ರ್ಯದ ಬಗ್ಗೆ ಮತ್ತು ಸದ್ಯಕ್ಕೆ ರಾಷ್ಟ್ರೀಯ ಸರಕಾರ ಬೇಕೆಂಬುದರ ಬಗ್ಗೆ ಮಿಕ್ಕ ಪಕ್ಷಗಳೆಲ್ಲವೂ ಕಾಂಗ್ರೆಸು ಹೇಳಿದ್ದನ್ನೆ ಹೇಳುತ್ತಲಿವೆ. ತಪ್ಪಿಲ್ಲದಲ್ಲಿ ಹೊಣೆಹೊರಲು ಕಾಂಗ್ರೆಸು ಒಂದು ವೇಳೆ ತಯಾರಿದ್ದರೂ ಅದನ್ನು ತಿಳಿದುಕೊಳ್ಳಲು ಮಿಕ್ಕವರಿಗೆ ಅಪ್ಪಣೆ ಇಲ್ಲ! ಕಾಂಗ್ರೆಸಿನ ಕೂಡ ಸಂಧಾನವೆ ಶಕ್ಯವಿಲ್ಲವೆಂದು ಮೊದಲು ಅರ್ಭಟಿಸಿ, ಈಗ ಸಂಧಾನವು ಅನಿವಾರ್ಯವೆಂದು ಕಂಡು ಕನಲಿ ಈ ರೀತಿ ಅಸಂಬದ್ಧ ಮಾತನಾಡಿರಬಹುದೆ? ‘ಕಾಂಗ್ರೆಸು ಯಾರ ಪ್ರತಿನಿಧಿಯೂ ಅಲ್ಲ’ಎಂದು ಚರ್ಚಿಲ್‌ರು ಅಧಿಕಾರವಾಣಿಯಿಂದ ಹೇಳಿರುವಾಗ ‘ ಕಾಂಗ್ರೆಸ್ಸು ಹಿಂದೂಸಂಸ್ಥೆ—ಹಿಂದುಗಳ ಮೇಲಷ್ಟೇ ಅದಕ್ಕೆ ಅಧಿಕಾರವಿದೆ’ ಎಂದು ಭಾರತಮಂತ್ರಿಗಳು ಹೇಳುವರಲ್ಲ! ಯಾಕೆ? ಹಿಂದುಮಹಾಸಭೆಯ ಸ್ಥಾನವನ್ನು ಹಾರಿಸಬೇಕಾಗಿದೆಯೆ? ಇಲ್ಲವೆ ಪಾಕಿಸ್ತಾನಕ್ಕೆ ಪುಟವನ್ನು ಕೊಡಬೇಕಾಗಿದೆಯೆ? ಅಥವಾ ಸಂತಾಪಾತಿರೇಕದಲ್ಲಿ ಸ್ಮರಣ-ಶಕ್ತಿ ಸಡಿಲಾಗಿದೆಯೆ?

ಅಪ್ರಯೋಜಕ ಅಭಿವಚನ

‘ ನಾವು ಈ ಮೊದಲೇ ಜಾಹೀರ್‌ಮಾಡಿರುವ ಘೋಷಣೆಯ ಪ್ರಕಾರ, ಸರಕಾರದೊಡನೆ ಸಹಕರಿಸಲು ಮುಂದೆ ಬರುವವರಿಗೆ ಯಾವಾಗಲೂ ಸ್ವಾಗತವಿದೆ’ ಎಂಬ ಭಾರತಮಂತ್ರಿಯವರ ಮಾತು ಮತ್ತಾರಿಂದಾದರೂ ಬಂದಿದ್ದರೆ ನಗೆಯನ್ನುಂಟು ಮಾಡಬಹುದಾಗಿತ್ತು. ಸರಕಾರದ ಇಂದಿನವರೆಗಿನ ಘೋಷಣೆ-

ಗಳನ್ನು ಸ್ವೀಕರಿಸಲು ಒಂದು ಪಕ್ಷವಾಗಲಿ ಒಬ್ಬ ಪ್ರಮುಖನಾಗಲಿ ಸಿದ್ಧನಿಲ್ಲದಿರುವಾಗ, ಸ್ವಾಗತಕ್ಕಾಗಿ ಬಾಗಿಲಲ್ಲಿ ನಿಂತ ಅಮೆರಿಯವರೆ ಸ್ವತಃ ಬರಿಯದಾದ ಸ್ಥಾನದಲ್ಲಿ ಸ್ವಾಗತವನ್ನು ಅನುಭವಿಸಲಿಕ್ಕಿಲ್ಲ! ಇಂದಿನ ರಾಜಕೀಯ ಪರಿಸ್ಥಿತಿಯನ್ನು ಸುಧಾರಿಸಲು ಅಮೆರಿಯವರ ಭಾಷಣವು ತೀರ ಅಪ್ರಯೋಜಕವಾದುದು ವಿಷಾದಾಸ್ಪದವಾಗಿದೆ. ಸಂರಕ್ಷಣೆ, ಗೃಹಖಾತೆ, ಹಣಕಾಸಿನ ಖಾತೆ ಇವುಗಳನ್ನೂ ಪೂರ್ತಿಯಾಗಿ ಹಿಂದೀಯರಿಗೆ ಒಪ್ಪಿಸಿ ಸಂಧಾನಮಾಡಲು ಬ್ರಿಟಿಶ್ ಸರಕಾರವು ಮುಂದಾಗಬೇಕೆಂದು ಲಂಡನಿನ ಟೈಮ್ಸ್ ಪತ್ರಿಕೆ ಕೂಡ ಅಭಿಪ್ರಾಯಪಡುತ್ತಿರುವಾಗ, ಹೊಣೆಯುಳ್ಳ ಅಧಿಕಾರಿಗಳು ಹೀಗೆ ಮಾತನಾಡುವುದು ಮುತ್ಸದ್ದಿತನದ ಅಭಾವವನ್ನು ಸೂಚಿಸುವುದು. ಹಿಂದುಸ್ಥಾನದಲ್ಲಿ ಅರಾಜಕತೆಯಾದರೆ ಅದು ಹಿಂದೀಯರಿಗೆಯೆ ಮೊದಲು ಬೇಡವಾಗಿದೆ. ಶತ್ರುವಿನ ದಾಳಿಯಾದರೆ ಅದರ ಕಷ್ಟ-ನಷ್ಟಗಳನ್ನು, ಈ ದೇಶದಲ್ಲಿ ಬದುಕಿ ಬಾಳುವವರೆ ಸಹಿಸಬೇಕಾಗುವುದು. ಇದನ್ನರಿತ ಹಿಂದೀಯರು ಕೇವಲ ಪುಂಡಾಟಿಕೆಗೆ ಎಂದಿಗೂ ಪ್ರೋತ್ಸಾಹವನ್ನು ಕೊಡುವಂತಿಲ್ಲ. ಆದರೇನು? ಸಂಧಾನವು ಅಶಕ್ಯವಾಗಿದೆ; ಸಭೆ-ಮೆರೆವಣಿಗೆಗಳು ಅನ್ಯಾಯವಾಗಿವೆ; ಚರ್ಚೆ-ಚಾಡಿಯವರ ದುರುಪಯೋಗದ ಅನ್ನವಾಗಿದೆ; ಅಂತೂ, ಶಿಸ್ತಿನ ಎಲ್ಲ ಚಟುವಟಿಕೆಗಳೂ ಅಕ್ರಮವೆಂದು ಸರಕಾರವು ಸಾರಿದಾಗ, ನಾಯಕರು ಕಾರಾಗೃಹದಲ್ಲಿರುವಾಗ, ಸರಿಯಾದ ಉಪಾಯವಿಲ್ಲದೆ ಕೆಟ್ಟ ರಕ್ತವು ಕುರುವಿನಂತೆದ್ದಂತೆ ಪುಂಡಾಟಿಕೆ ತಲೆ ಎತ್ತಿದೆ. ಈಗ ಈ ಪರಿಸ್ಥಿತಿಗೆ ಉಪಾಯವನ್ನು ಹುಡುಕದೆ ಇದರ ಜವಾಬ್ದಾರಿಯನ್ನು ಅನ್ಯರಮೇಲೆ ಹೊರಿಸಬಯಸುವ ಮುತ್ಸದ್ದಿತನ ಅಪ್ರಯೋಜಕವಲ್ಲದೆ ಮತ್ತೇನು?

ಅಬ್ಬರಕ್ಕೆ ಅರ್ಥವಿದೆಯೆ?

ಇಷ್ಟಾದರೂ ಅಮೆರಿಯವರ ಅಬ್ಬರಕ್ಕೆ ಅರ್ಥವಿದೆ ಎಂದು ನಮ್ಮ ಊಹೆ. ಇಷ್ಟೊಂದು ಕನಲಿದ್ದಕ್ಕೆ ಕಾರಣವಿರಬಹುದಲ್ಲವೆ? ಸದ್ಯಕ್ಕೆ ಎಲ್ಲ ಪಕ್ಷಗಳೂ ಒಂದಾಗುತ್ತಿದ್ದುದರಿಂದ ಸಂಧಾನವು-ಕಾಂಗ್ರೆಸಿನೊಡನೆ ಕೂಡ—ಅನಿವಾರ್ಯವಾಗುತ್ತಲಿದೆ ಎಂಬ ವಿಚಾರದಿಂದ 'ಸಾಮ್ರಾಜ್ಯವಾದದ ವ್ಯಸನಿ (die-hard)' ಎಂದು ಹೆಸರಾದ ಅಮೆರಿಯವರಿಗೆ ಕೋಪ ಬಂದಿರಬಾರದೇಕೆ? ಇಲ್ಲವಾದರೆ ಕಾಂಗ್ರೆಸನ್ನು ಮನಬಂದಂತೆ ದೂರಿ, ಇವರೊಡನೆ ಎಂದಿಗೂ ಸಂಧಾನವಿಲ್ಲವೆಂದು ಕೃಷ್ಣಾಜಿನವನ್ನು ಅಪ್ಪಳಿಸಿ ಈಗ 'ಹೀಗಾದರೆ ಮಾತುಕತೆ ನಡೆಸುವೆವು' ಎಂದು ಅಮೇರಿಯವರು ಹೇಳುತ್ತಿರಲಿಲ್ಲ. ನಮ್ಮ ಈ **ನೋಟ** ವಾಚಕರ ಕೈಸೇರುವುದರ ಒಳಗಾಗಿ, ಇಂತಹ ಸಂಧಾನದ ಚಿಹ್ನಗಳು ಬಹಿರಂಗವಾಗಿಯೆ ಕಂಡುಬಂದರೆ ನನಗೆ ಎಂದಿಗೂ ಆಶ್ಚರ್ಯವಾಗಲಿಕ್ಕಿಲ್ಲ. ದೇಶಕ್ಕೆ ದಾಳಿಯ ಭೀತಿಯು ಸಮೀಪಿಸಿದಾಗ, ದೇಶಕ್ಕಾಗಿಯೆ ದುಡಿಯುತ್ತಲಿದ್ದ ಕಾಂಗ್ರೆಸಿಗೆ ದೇಶದಲ್ಲಿ ಅರಾಜಕತೆ ಬೇಕಾಗಿದೆ—ಎಂದು ಹೇಳುತ್ತ ಹೋದರೆ ಯಾರಿಗೆ ವಿಶ್ವಾಸ ಹುಟ್ಟುವುದು?

(೧೦-೧೦-೪೨)

ಸದಿಚ್ಛೆಯ ಸಂಕೋಲೆ

ಕ್ರಿಪ್ಸ್-ಸಂಧಾನದ ಕಾಲಕ್ಕೆ ಬ್ರಿಟಿಶರು ಒಂದು ಮಾತನ್ನು-ಬಹಳೇ ಹಟದಿಂದ ಹೇಳುತ್ತಿದ್ದರು. ಅದೆಂದರೆ, ಯುದ್ಧದ ತರುವಾಯ ಹಿಂದುಸ್ಥಾನಕ್ಕೆ ಸ್ವಾತಂತ್ರ್ಯವನ್ನು ಕೊಡಬೇಕೆಂಬ ತಮ್ಮ (ಎಂದರೆ, ಬ್ರಿಟಿಶರ) ಸದಿಚ್ಛೆ. ಈ ಸದಿಚ್ಛೆಯಲ್ಲಿ ಭಾರತೀಯರು ವಿಶ್ವಾಸವನ್ನಿಡಬೇಕು ಎಂಬ ಮಾತಿಗಾಗಿಯೂ ಬ್ರಿಟಿಶರ ಹಟವಿದ್ದಿತು. ಆದರೆ ಕಳೆದ ೫೦ ವರ್ಷಗಳಿಂದ ಒಂದೇ ಸಮನೆ ಕೊಟ್ಟ ಮಾತನ್ನು ಕಿಡಿಸುತ್ತ ಬಂದ ಬ್ರಿಟಿಶರು, ಇನ್ನು ಮುಂದಾದರೂ ವಿಶ್ವಾಸಹುಟ್ಟುವಂತೆ ಆಚರಿಸುತ್ತಲಿದ್ದರೆ ಅದೊಂದು ಜಾಣತನವೆನಿಸಬಹುದಾಗಿದ್ದಿತು. ಆದರೆ ಸಿಂಧದಲ್ಲಿ ಅಲ್ಲಾಬಕ್ಷ(ಮುಖ್ಯಮಂತ್ರಿ)ರನ್ನು ನಡೆಸಿಯಿಕೊಂಡ ರೀತಿಯನ್ನು ನೋಡಿದರೆ, ಬ್ರಿಟಿಶರ ಸದಿಚ್ಛೆಯೆ ಭಾರತೀಯರಿಗೆ ಸಂಕೋಲೆಯಾಗಿದೆ ಎನ್ನಬಹುದು. ಸಿಂಧದ ಮುಖ್ಯಮಂತ್ರಿಗಳಾದ ಅಲ್ಲಾಬಕ್ಷರಿಗೆ ಸಿಂಧ ಶಾಸನಸಭೆಯ ಬೆಂಬಲವಿದ್ದಿತು; ಅದಕ್ಕಾಗಿ ಅವರು ರಾಜೀನಾಮೆಯನ್ನು ಕೊಡಲು ನಿರಾಕರಿಸಿ ತಮ್ಮ ಹಕ್ಕನ್ನು ಸಾಧಿಸಿದರು; ಆದರೆ ಗವರ್ನರರು ತಮ್ಮ ವಿಶೇಷಾಧಿಕಾರದಿಂದ ಅಲ್ಲಾಬಕ್ಷರನ್ನು ಅಧಿಕಾರದಿಂದ ತಳ್ಳಿದರು. ಯಾಕೆ? ಮುಖ್ಯಮಂತ್ರಿಗಳಲ್ಲಿ ಗವರ್ನರರ ವಿಶ್ವಾಸವಿಲ್ಲವಂತೆ! ಶಾಸನಸಭೆಗಿಂತ ಗವರ್ನರರೇ ಜನತೆಯ ಪ್ರತಿನಿಧಿಗಳೆನಿಸಿದರೆ? ಇದೆಂತಹ ಪ್ರಜಾಸತ್ತೆಯ ವಿಡಂಬನೆ! ವೈಸ್‌ರಾಯರು ಅಲ್ಲಾಬಕ್ಷರಿಗೆ ಬರೆದ ಪತ್ರವನ್ನು ನೋಡಿದರೆ, ಈ ಸಂದರ್ಭದಲ್ಲಿ ಗವರ್ನರರಿಗಿಂತ- ವೈಸ್‌ರಾಯರದೇ ಮೂಲ ಕೈವಾಡ ಎನಿಸುವಂತಿದೆ. ಇದೆಂತಹ ಪ್ರಾಂತಿಕ ಸ್ವಾಯತ್ತತೆ! ಬ್ರಿಟಿಶರ ಸದಿಚ್ಛೆಯ ಸ್ವರೂಪ ಹೀಗಿದ್ದರೆ 'ಸದಿಚ್ಛೆ ಸರಿದಷ್ಟು ಸಂತೋಷ' ಎನಬೇಕಾಗುವುದು.

ವಿಶ್ವಾಸವು ಯಾವಾಗಲೂ ಪರಸ್ಪರ

ಪ್ರಜಾಸಿಯುಕ್ತರಾದಂತಹ, ಶಾಸನಸಭೆಯ ಬೆಂಬಲವು ಇದ್ದಂತಹ ಮುಖ್ಯಮಂತ್ರಿಯನ್ನು ಅಧಿಕಾರದಿಂದ ತಳ್ಳಲು ಕಾರಣ ಯಾವುದು? ಅವರ ಅವಿಧೇಯ ಮತ್ತು ಅನುಚಿತ ವರ್ತನೆ! ಎಂತಹ ದುಃಸ್ಥಿತಿ! ಅಧಿಕಾರಕ್ಕೆ ಶಾಸನರೀತ್ಯಾ ಅರ್ಹನಾದವನಿಗೆ ಶಾಲಾಶಿಕ್ಷಕನಂತೆ ಪ್ರಮಾಣಪತ್ರ (character certificate) ವನ್ನು ಕೊಡುವುದೆ? ಸದ್ಯದ ಘಟನೆಯ ವಿಡಂಬನೆಯನ್ನು ಇದಕ್ಕಿಂತಲೂ ಹೆಚ್ಚು ಸರಸವಾಗಿ ಫಲಕಾರಿಯಾಗಿ ತೋರಿಸಬಹುದೆ? ಅಲ್ಲಾಬಕ್ಷರು ವೈಸ್‌ರಾಯರಿಂದ ದೊರೆತ 'ಖಾನ್ ಬಹಾದ್ದೂರ್' ಬಿರುದನ್ನು ಬಿಟ್ಟುಕೊಟ್ಟರು; ಇದು ಅವಿಧೇಯತೆ! ಸರಕಾರದ ದಬ್ಬಾಳಿಕೆಯ ಧೋರಣೆಯನ್ನು ಖಂಡಿಸಿದರು; ಇದು ಅನುಚಿತವಂತೆ! ಒಂದು ಪ್ರಾಂತದ

ಲೋಕನಿಯುಕ್ತ ಮುಖ್ಯಮಂತ್ರಿಯಾದವನಿಗೆ ನಡತೆ ಗೊತ್ತಿಲ್ಲ; ರಾಜಕಾರಣ ತಿಳಿಯುವುದಿಲ್ಲ ಎಂಬುದು ಅಪಹಾಸ್ಯವೆನಿಸಲಿಕ್ಕಿಲ್ಲವೆ? ಸಿಂಧದಲ್ಲಿ ಈ ಘಟನೆಯಾಗುವ ಒಂದೆರಡು ದಿವಸ ಮುಂಚಿತ 'ಪ್ರಾಂತಗಳಲ್ಲಿ ಸಾಕಷ್ಟು ಸ್ವಾತಂತ್ರ್ಯವಿದೆ, ಸ್ವಾಯತ್ತತೆ ಇದೆ' ಎಂದು ಅಮೆರಿಸಾಹೇಬರು ಹೇಳಿಕೊಂಡಿದ್ದರು. ಅದೆಂತಹ ಮಾದರಿ ಎಂಬುದನ್ನು ಹಿಂದುಸ್ತಾನ್ ಸರಕಾರದವರು ದೃಷ್ಟಾಂತದಿಂದ ತೋರಿಸಿದರು! ಇಂತಹ ಪರಿಸ್ಥಿತಿ 'ಬ್ರಿಟಿಶರಲ್ಲಿ ವಿಶ್ವಾಸವಿಲ್ಲ' ಎಂಬ ಕಾಂಗ್ರೆಸಿನ ಮಾತನ್ನೆ ಪುಷ್ಟಿಗೊಳಿಸುವುದಿಲ್ಲವೆ? ಲೋಕನಿಯುಕ್ತ ಮುಂದಾಳುಗಳಲ್ಲಿ ಕೂಡ ಬ್ರಿಟಿಶರು ವಿಶ್ವಾಸವನ್ನಿಡಲು ಸಿದ್ಧರಿಲ್ಲದಾಗ, ಬ್ರಿಟಿಶರ ಮಾತಿಗಾಗಿ ಭಾರತೀಯರಿಗೆ ವಿಶ್ವಾಸ ಹುಟ್ಟುವುದು ಹೇಗೆ? ವಿಶ್ವಾಸವೆಂದರೆ ವಿಚಾರಗಳ ಪ್ರತಿಧ್ವನಿ; ಪರಸ್ಪರವೆನಿಸದಿದ್ದರೆ ಅದು ಹುಟ್ಟುವಂತಿಲ್ಲ. (೧೬-೧೦-೪೦)

ಮಧ್ಯಸ್ಥಿಕೆಗೂ ಮೀರಿದೆ

ಅಮೆರಿ-ಚರ್ಚಿಲ್ ಪ್ರವೃತ್ತಿಗಳು ತಮ್ಮ ಗತಕಾಲೀನ ವಿಚಾರಗಳನ್ನು ಸಾರಿದಷ್ಟು—ಪರಸ್ಪರ ಅವಿಶ್ವಾಸ ಹೆಚ್ಚುವುದರಲ್ಲಿ ಸಂದೇಹವಿಲ್ಲ. ಸದ್ಯಕ್ಕೆ ಅಮೇರಿಕೆಯ ಪತ್ರಿಕೆಗಳಲ್ಲಿ ನಡೆದ ಒಂದು ಚರ್ಚೆ ಇದೇ ಮಾತನ್ನು ಸ್ಪಷ್ಟೀಕರಿಸುತ್ತಿದೆ. ಬ್ರಿಟನ್ನಿನ ಯುದ್ಧೋದ್ದೇಶವೇನಿದೆ? ಸ್ವಾತಂತ್ರ್ಯಸಂರಕ್ಷಣೆಯೆ, ಸಾಮ್ರಾಜ್ಯ ಸಂರಕ್ಷಣೆಯೆ? ಸ್ವಾತಂತ್ರ್ಯ, ಸಾಮ್ರಾಜ್ಯ ಎರಡನ್ನೂ ಏಕಕಾಲಕ್ಕೆ ಸಂರಕ್ಷಿಸಬೇಕೆಂಬ ಅಮೆರಿ-ಚರ್ಚಿಲ್‌ರು, ಕಳೆದ ೩೦ ವರ್ಷ ಸುಸಂಸ್ಕೃತ ಜಗತ್ತು ಮುಂದುವರಿದಿದೆ ಎಂಬುದನ್ನೆ ಮರೆತಿದ್ದಾರೆ. ಅಧ್ಯಕ್ಷ ರೂಜವೆಲ್ಟರ ಪ್ರತಿನಿಧಿಯಾಗಿ ಸಂಚರಿಸಿದ ವೆಂಡೆಲ್ ವಿಲ್ಕಿಯವರು, ಪರ್ಯಾಯದಿಂದ ಈ ಧೋರಣವನ್ನು ಖಂಡಿಸಿದ್ದಾರೆ. 'ಯುದ್ಧದ ತರುವಾಯ ಸ್ವಾತಂತ್ರ್ಯ—ಎಂಬುದನ್ನು ಬಿಟ್ಟು, ಈಗಲೆ ಸ್ವಾತಂತ್ರ್ಯವನ್ನು ಒಪ್ಪಿಸಬೇಕು' ಎಂದು ವಿಲ್ಕಿಯವರು ಸ್ಪಷ್ಟವಾಗಿ ತಮ್ಮ ಅಭಿಪ್ರಾಯವನ್ನು ಹೇಳಿದ್ದಾರೆ. 'ಈ ಹೇಳಿಕೆಯಲ್ಲಿ ಹಿಂದುಸ್ತಾನದ ಹೆಸರಿಲ್ಲ—ನಿಜ; ಆದರೆ ಈ ಮಾತು ಹಿಂದುಸ್ತಾನಕ್ಕೂ ಅನ್ವಯಿಸುವುದು' ಎಂದು ಅಮೇರಿಕೆಯ ಪತ್ರಿಕೆಗಳ ಅಭಿಪ್ರಾಯವಿದ್ದಿತು. ಇದೇ ಸಂದರ್ಭದಲ್ಲಿಯೆ ಕೆಲವು ಪತ್ರಿಕೆಗಳು 'ಬ್ರಿಟಿಶರು ಸಾಮ್ರಾಜ್ಯವನ್ನು ಉಳಿಸಿಕೊಳ್ಳಬೇಕೆಂದಿದ್ದಾರೆ' ಎಂದು ಟೀಕಿಸತೊಡಗಿವೆ. ಹಿಂದುಸ್ತಾನದಲ್ಲಿ ತಮ್ಮ ಧೋರಣವನ್ನು ಬ್ರಿಟಿಶರು ಬದಲಾಯಿಸಿಕೊಳ್ಳಬೇಕು, ಕಾಂಗ್ರೆಸಿನೊಡನೆ ಒಪ್ಪಂದವನ್ನು ಮಾಡಿಕೊಳ್ಳಬೇಕು, ಈ ದಾರಿ ಅನಿವಾರ್ಯ—ಎಂದು ಚೀನದಲ್ಲೂ ಅಮೇರಿಕೆಯಲ್ಲೂ ಅನೇಕ ಮುಂದಾಳುಗಳೂ ಪತ್ರಿಕೆಗಳೂ ಹೇಳತೊಡಗಿವೆ. ಸಂಯುಕ್ತ-ರಾಷ್ಟ್ರಗಳು ಬ್ರಿಟಿಶರನ್ನು ಒತ್ತಾಯಪಡಿಸಬೇಕು ಎಂದೂ ಕೆಲವರ ಅಭಿಪ್ರಾಯ. ಆದರೆ ಇಂತಹ ಒಂದೂ ಅಭಿಪ್ರಾಯದಿಂದ ಭಾರತೀಯರಿಗೆ ಸಮಾಧಾನವಾಗುವಂತಿಲ್ಲ. ಯಾಕೆಂದರೆ ಕ್ರಮೇಣ ಪರಿಸ್ಥಿತಿ ಮಧ್ಯಸ್ಥಿಕೆಗೂ ಮೀರಿ ನಿಂತಿದೆ. ದೇಶದ ಎಲ್ಲ ಪಕ್ಷಗಳೂ ಏಕಕಂಠದಿಂದ ಸ್ವಾತಂತ್ರ್ಯಬೇಕು ಎಂದಿರುವುವು. ಅದನ್ನೂ ಅಲಕ್ಷ್ಯಮಾಡಿದ ಬ್ರಿಟಿಶ್ ಮುತ್ಸದ್ದಿಗಳಿಗಾಗಿ ಆದರ-ವಿಶ್ವಾಸಗಳು ಹುಟ್ಟುವುದು ಸಂದೇಹ ಎಂದು ಹಿಂದೂ ಮಹಾಸಭೆಯ ಅಧ್ಯಕ್ಷರು ಹೇಳಿದ್ದು ನಿಜವಾಗುವಂತಿದೆ. ಇದಲ್ಲದೆ ಇನ್ನೊಬ್ಬರ ಒತ್ತಾಯದಿಂದ ಸಾಧಿಸಿದ ಸಂಧಾನದಲ್ಲಿ ಪರಸ್ಪರ ಸಂಶಯವೃತ್ತಿಯೆ ಉಳಿಯಬಹುದಾಗಿದೆ. (೩೦-೧೦-೪೨)

ತೊಂದರೆ ತಪ್ಪಿಸಿಕೊಳ್ಳಿರಿ!

ಆದರೆ ಕೇವಲ ಬ್ರಿಟಿಶರ ಸದ್ಬುದ್ಧಿಯ ಮೇಲೆಯೆ ಭಾರವನ್ನು ಚೆಲ್ಲಿ ಸುಮ್ಮನಿರುವಂತಹ ಪರಿಸ್ಥಿತಿ ಸದ್ಯಕ್ಕಿಲ್ಲ. ಯಾಕೆಂದರೆ, ಒಂದೆಡೆ ದಾಳಿಯ ಹೆದರಿಕೆ ಸಮೀಪಿಸುತ್ತಲಿದೆ; ಇನ್ನೊಂದೆಡೆ, ದೇಶದಲ್ಲಿಯೆ ಅವ್ಯವಸ್ಥೆ ಬೆಳೆಯುತ್ತಲಿದೆ. ಇವೆರಡೂ ದೇಶಕ್ಕೆ ದೊಡ್ಡ ಗಂಡಾಂತರ. ದೇಶದ ಮುಂದಾಳುಗಳು (ಜೇಲಿನಲ್ಲಿದ್ದ ಕಾಂಗ್ರೆಸಿಗರನ್ನು ಬಿಟ್ಟು) ಹಟದಿಂದ, ಧೈರ್ಯದಿಂದ, ತಡವಿಲ್ಲದೆ ಮುಂದೆ ನುಗ್ಗಿ ಕಾರ್ಯಕ್ಕೆ ತೊಡಗದಿದ್ದರೆ ಪಶ್ಚಾತ್ತಾಪಕ್ಕೂ ವಿಹಾರಬಹುದು ಪರಿಸ್ಥಿತಿ. ಹೊರಗಿನ ದಾಳಿಯನ್ನು ಎದುರಿಸಲು ದೇಶದ ಸೈನ್ಯದ ಸಿದ್ಧತೆಯಲ್ಲದೆ, ಜನತೆಯ ಸಿದ್ಧತೆಯೂ ಅಗತ್ಯವಿದೆ. ಯಾವ ರಾಜಕಾರಣದಲ್ಲೂ ತೊಡಗದೆ ಈ ಪ್ರಚಾರವನ್ನು ಮುಂದಾಳುಗಳು ಮಾಡಬಹುದಲ್ಲವೆ? ಜಪಾನರಿಗೆ ಸ್ವಾಗತ ಯಾರ ಕನಸು-ಮನಸುಗಳಲ್ಲೂ ಇಲ್ಲ (ಕೆಲವು ಬ್ರಿಟಿಶರ ಭ್ರಾಂತಿಯಲ್ಲಿ ಮಾತ್ರ ಇದೆ). ಆದರೆ ಇಂದು ದೇಶದಲ್ಲಿ ನಡೆದ ಪುಂಡಾಟಿಕೆಯಿಂದ ದಾಳಿಗಾರನಿಗೆಯೆ ಪ್ರೋತ್ಸಾಹ ದೊರಕುವಂತಿದೆ ಎಂಬುದು ಲಕ್ಷ್ಯದಲ್ಲಿರಲಿ. ಸರಕಾರದ ದಬ್ಬಾಳಿಕೆಗಾಗಿ ಜನತೆ ನಿರುಪಾಯವಾಗಿದೆ, ನಿಜ ಆದರೂ ಸರಕಾರವನ್ನು ಪ್ರತಿಭಟಿಸುವ ಅಗತ್ಯವಿಲ್ಲದೆಯೆ ಆತ್ಮರಕ್ಷಣೆಯ, ದಾಳಿನಿವಾರಣೆಯ ಉಪಾಯಯೋಜನೆ ಆಗುವಂತಿದ್ದರೆ ಮಾಡಬಾರದೇಕೆ? ಹಿಂದು ಮಹಾಸಭೆಯಾಗಲಿ, ಮುಸ್ಲಿಂಲೀಗು ಆಗಲಿ, ಈ ಕಾರ್ಯದಲ್ಲಿ ಹೆಚ್ಚು ನೆರವಾಗುವ ಸಂಭವವಿಲ್ಲ. ಮುಸ್ಲಿಂಲೀಗಂತೂ ಯಾವ ರೀತಿಯಿಂದಲೂ ಸಹಾಯಕವಾಗದು ಎಂಬ ನಮ್ಮ ಸ್ಪಷ್ಟ ಅಭಿಪ್ರಾಯವನ್ನು ಮುಂಚೆಯೆ ಕಾಣಿಸಿದ್ದೇವೆ. ಹಿಂದುಮಹಾಸಭೆಯೂ ಕೊನೆಗೆ ನಿರಾಶೆಯನ್ನೇ ಉಂಟುಮಾಡಬಹುದಾಗಿದೆ. ದೇಶದ ಜನತೆಯು ತನಗೆ ಎಷ್ಟು ಬೆಂಬಲವಿದೆ ಎಂಬುದನ್ನು ಒರೆಗೆಹಚ್ಚುವ ಧೈರ್ಯ ಮಹಾಸಭೆಗೆ ಇಲ್ಲದ್ದರಿಂದ, ಗೊತ್ತುವಳಿಗಳಲ್ಲಿಯೆ ಅದರ ಅರ್ಭಟೆ ಕೊನೆಗಾಣಬಹುದಾಗಿದೆ. ಆದುದರಿಂದ ಕೇವಲ ತಂತಮ್ಮ ಸಂರಕ್ಷಣೆಗಾಗಿ ಜನರು ಸ್ಥಾನಿಕವಾಗಿ ಸಂಘಟಿತರಾಗಬೇಕು. ಯಾವ ದೇಶಾಭಿಮಾನಿಗೂ ಈ ಮಾತಿನಲ್ಲಿ ಅಲಕ್ಷ್ಯವಾಗಬೇಕಾಗಿಲ್ಲ. ಸರಕಾರದವರು ಕೊನೆಗೆ ಜನತೆಯ ಇಂತಹ ಪ್ರಯತ್ನಗಳಿಗಾದರೂ ಸಂಶಯದಿಂದ ಅಡ್ಡಬರಲಿಕ್ಕಿಲ್ಲ ಎಂದು ನಮ್ಮ ಭರವಸೆ.

ಜೀವನವೇ ನಾಟಕ! ನಾಟಕವೇ ಜೀವನ!!

ಎಂಬ ತತ್ತ್ವವನ್ನು ಪ್ರತಿಪಾದಿಸುವ ಚಿತ್ತಾಕರ್ಷಕ ಚಿತ್ರ!

ಜೀವನ ನಾಟಕ

ಗುಬ್ಬಿ ಫಿಲ್ಮ್ಸನವರ ಮತ್ತೊಂದು ಕನ್ನಡ ಕಲಾಕೃತಿ!



ಡಾಯರೆಕ್ಟರ್

ವಹಾಬ

(New Theatres)

ಕಥಾಲೇಖಕ

ಶ್ರೀ. ಅ. ಸ. ಕೃಷ್ಣರಾವ

★

ನವ್ಹೆಂಬರ್ ತಿಂಗಳ ಮೊದಲನೆಯ ವಾರದಲ್ಲಿ ಹುಬ್ಬಳ್ಳಿ ಹಾಗು ಇತರ ಪ್ರಮುಖ ಪಟ್ಟಣಗಳಲ್ಲಿ ಪ್ರದರ್ಶಿಸಲ್ಪಡುವುದು.

★

ತಾರಾಗಣ

ನಾಟಕರತ್ನ ಗುಬ್ಬಿ ವೀರಣ್ಣ,
ಶಾಂತಾ ಹುಬಳೀಕರ,
ಜಯಮ್ಮಾ ಮತ್ತು
ಕೆಂಪರಾಜ ಮೊದಲಾದವರು

ಭಕ್ತಿಮಾಲಾ

ಭಕ್ತಿರಸಪೂರ್ಣವಾದ ಪೌರಾಣಿಕ ಚಿತ್ರ!

'ಬಾಲಾಜಿ'ಯಲ್ಲಿ ತಮ್ಮ ಅತ್ಯುತ್ಕೃಷ್ಟ ಅಭಿನಯದಿಂದ ಹೆಸರು ಪಡೆದ ಪ್ರಸಿದ್ಧ ನಟಿ ಭಾನುಮತಿ ಹಾಗು ಇತರ ಪ್ರಸಿದ್ಧ ನಟ-ನಟಿಯರ ಹೃದಯಂಗಮವಾದ ಕೆಲಸವನ್ನು ಈ ಚಿತ್ರಪಟದಲ್ಲಿ ನೋಡಲು ತಪ್ಪಬೇಡಿರಿ.

ಬುಕಿಂಗಕ್ಕಾಗಿ ಬರೆಯಿರಿ:—

ರೀಗಲ್ ಫಿಲ್ಮ್ ಸರ್ಕಿಟ್, ಧಾರವಾಡ

ಸೋಲ್ ಡಿಸ್ಟ್ರಿಬ್ಯೂಟರ್ಸ್:—

ಮುಂಬಯಿ ಪ್ರಾಂತ (ಸಂಸ್ಥಾನಗಳು ಸಹಿತ) ಹಾಗೂ ಗೋವಾ ಪ್ರಾಂತ

ದಿ ಯುನಾಯಿಟೆಡ್ ಕರ್ನಾಟಕ ಇನ್ಶೂರನ್ಸ್ ಕಂಪನಿ, ಲಿಮಿಟೆಡ್

ಹೆಡ್ ಆಫೀಸ್ ಧಾರವಾಡ.

☆ [illegible]
ಕನ್ನಡ ಕಂಪನಿಯು [illegible] !

☆ [illegible] (Valuation) [illegible]

☆ [illegible] (Claim) [illegible]

☆ [illegible]

[illegible]

[illegible] :— [illegible], ಮ್ಯಾನೇಜರ್

The United Karnatak Insurance Co. Ltd., DHARWA



[illegible]



by Mr. V. Y. Jathar at the Karnatak Printing Works, Dharwar, and Published for the Propriet
Jayanti Publications, by M. V. Mellegatti at the Jayanti Office, Dharwar.

ಪ್ರತಿತಿಂಗಳ ಮೊದಲನೆಯ ತಾರೀಖಿಗೆ ಪ್ರಕಟವಾಗುವುದು.

ವಾ. ವರ್ಗಣಿ ಅಂಚೆವೆಚ್ಚ ಸೇರಿ ೩—೮—೦ ...... ವ್ಹಿ. ಪಿ. ಯಿಂದ ೩—೧೨—೦ ...... ಬಿಡಿಸಂಚಿಕೆಗೆ ೫ ಆ.

ಸಂಪಾದಕರು

ಬೆಟಗೇರಿ ಕೃಷ್ಣಶರ್ಮರು

೫ನೆಯ ವರ್ಷ	ಡಿಸೆಂಬರ್ ೧೯೪೨	೭ನೆಯ ಸಂಚಿಕೆ

ಮುಖ್ಯ ವಿಷಯಗಳ ಪರಿವಿಡಿ

ಕಥಾವತಾರ (ಕಿರುಗತೆ) .... 'ಸಾಮಾಜಿಕ' ೨೯೯
ಸಂಪಾದಕೀಯ .... ಸಂಪಾದಕರು ೩೦೦
ಮಂಗನ ಮಲ್ಲಿನಾಥತನ .... 'ಮಲ್ಲಿನಾಥ' ೩೦೧
೧೬ ಕಣ್ಮರೆಯಾದ ಕರ್ನಾಟಕದ ವಿಭೂತಿ (ಜೀವನಕಥೆ) .... ಡಾ. ಗೋಪಾಲಕೃಷ್ಣರಾವ್ ಎಲ್. ಎ., ಎಂ. ಎಸ್. ೩೦೩
೧೭ ದೇಶಕ್ಕಾಗಿ (ವರ್ತಮಾನ ಯುದ್ಧಚಿತ್ರ) .... ಶ್ರೀ. 'ಸಾವುಕಾರ' ಕೊಲ್ಹಾಪೂರ ೩೦೭
೧೮ ಪೊಸ್ಟ್ಮಾಸ್ತರ (ಮನೋವಿಶ್ಲೇಷಣಾತ್ಮಕ ಕಥೆ) .... ಶ್ರೀ. 'ಭಾರತೀಸುತ' ಕೊಡಗು ೩೧೩
೧೯ ಬೀಗರಿಯ ಮದ್ದು (ಒಂದು ಸಂಸಾರಚಿತ್ರ) .... ಶ್ರೀ. ಬೇಂದ್ರೆ ಲಕ್ಷ್ಮಣರಾಯರು, ಧಾರವಾಡ ೩೨೪
೨೦ ಪಟ್ಟೀಪಾಲ ತಿಮ್ಮ (ಒಂದು ಬಡತನದ ಬಾಳು .... ಶ್ರೀ. 'ವಿನೀತ' ಶಿರಸಿ ೩೩೦
೨೧ ದಾರಿಗೋಲು (ವಿಷಮದಾಂಪತ್ಯದ ವಿಷ) .... ಕುಮಾರಿ ದೇವಾಂಗನಾಶಾಸ್ತ್ರಿ, ಗೋಕರ್ಣ ೩೩೫
ನೋಲಾಟದ ವರದಿ .... ಸಂಪಾದಕ ಮಂಡಲಿಯಿಂದ ೩೪೧
೨೨ ದ್ರೋಹ (ಒಂದು ಮನೋವಿಶ್ಲೇಷಣೆ) .... ಶ್ರೀ. 'ಇಂದುತನಯ' ಉಗಾರ ೩೪೬
ನಾಲ್ಕಾಣೆ ನಿಟ್ಟಿನ ನೋಟ .... 'ನಿರೀಕ್ಷಕರು' ೩೫೩

ಚಂದಾದಾರರೂ ಏಜಂಟರೂ ಓದಲೇ ಬೇಕು!

ಜಯಂತಿಯ ಚಂದಾದರ

ಕಾಗದ, ಮುದ್ರಣ-ಸಲಕರಣೆಗಳ ಏರಿದ ಬೆಲೆಯ ಮೂಲಕ, ಅನಿವಾರ್ಯವಾಗಿ ಜಯಂತಿಯ ಬೆಲೆಯನ್ನೂ ಏರಿಸಬೇಕಾಯಿತು. ಇನ್ನುಮೇಲೆ ಜಯಂತಿಗೆ ವಾರ್ಷಿಕ ಚಂದಾ—೩—೮—೦ ; ಬಿಡಿಸಂಚಿಕೆಗೆ ೦—೫—೦. ಎಲ್ಲ ಚಂದಾದಾರರೂ ದಯೆಯಿಟ್ಟು ಇನ್ನುಮೇಲೆ ೩ ರೂ. ೮ ಆಣೆಗಳನ್ನು ಕಳುಹುತ್ತಿರಬೇಕು. ಏಜಂಟರು ಈ ಏರಿದ ಬೆಲೆಯನ್ನು ಲಕ್ಷ್ಯದಲ್ಲಿಟ್ಟುಕೊಂಡು, ತಮಗೆ ನಿಶ್ಚಯವಾಗಿ ಎಷ್ಟು ಪ್ರತಿಗಳು ಬೇಕಾಗಬಹುದೆಂಬುದನ್ನು ಮೊದಲೇ ಬರೆದು ತಿಳಿಸಬೇಕು. ಯಾವ ಕಾರಣದಿಂದಲೂ ಯಾರಿಂದಲೂ ಪ್ರತಿಗಳನ್ನು ಮರಳಿ ತೆಗೆದುಕೊಳ್ಳಲಿಕ್ಕಾಗುವುದಿಲ್ಲ.

ವ್ಯವಸ್ಥಾಪಕ 'ಜಯಂತಿ' ಧಾರವಾಡ

≡ ಕಿಚ್ಚು ≡

(ಬೆಲೆ: ೦—೮—೦ ಆಣೆ)

ಲೇಖಕರು :

ಬಿ. ಅಶ್ವತ್ಥನಾರಾಯಣರಾವ್, ಬಿ. ಎ.

ಇವರ ಸಣ್ಣ ಕತೆಗಳ ಸಂಗ್ರಹ

ಮಾರಾಟದ ಹಕ್ಕುಳ್ಳವರು :

ಶಾರದಾಮಂದಿರ,

ಸುಲ್ತಾನ ಬಝಾರ್, ಹೈದರಾಬಾದ (ದಕ್ಷಿಣ)

ನಮ್ಮ ರಾಣೆಬೆನ್ನೂರಿನ ಏಜಂಟರು :

ಶ್ರೀ. ಕೆ. ವ್ಹಿ. ಹನಗೋಡಿಮಠ

ನ್ಯೂಜ್ ಏಜಂಟ್

ಜಯಂತಿ

ಸಂಪುಟ ೫ | ೧ನೆಯ ಡಿಸೆಂಬರ್ ೧೯೪೨ | ಸಂಚಿಕೆ ೭

ಕಥಾವತಾರ

ಮುಕ್ತಜ್ಞನಿಗೆ ಮುಂಗಾಣದ ಯೋಚನೆ: 'ಮಕ್ಕಳೆಲ್ಲ ಸುಮ್ಮಗೆ ಕೂಗಾಡುತ್ತವೆ; ಅತ್ತು ಕರೆದು ಕಾಡಿ ಕರಕರೆ ಮಾಡುತ್ತವೆ. ಮಾಡಬೇಕೇನಿದಕೆ?....' ಎಂದು, ಹಂಚಿಕೆ ಹುಡುಕಲು ಮೊಗಸಾಲೆಯನ್ನಿಳಿದು ಹೊರಹೊರಟ.

ಓದಿಸುವಣ್ಣನಿಗೆ ಹಾದಿಯೆ ತಿಳಿಯಲೊಲ್ಲದು: 'ನಾನು ಹೇಳಿದುದೆಲ್ಲ ಈ ಹಸುಳರ ಮನದಲ್ಲಿ ಮೂಡಬೇಕಾದರೆ ಹಂಚಿಕೆಯೇನು?' ಎಂದು. ಹುಡುಕುವ ಹಿರಿಯಾಶೆಯಿಂದ ಶಾಲೆಯನು ಬಿಟ್ಟು ಹೊರವಂಟ.

ಧರ್ಮದರ್ಶಿ ಉಮ್ಮಳಿಸತೊಡಗಿದ್ದ: 'ಈ ದಿನದಂತಹ ಜನತೆಗೆ ಧರ್ಮದ ನೆಲೆಯನ್ನು ತಿಳುಹುವ ಬಗೆ ಹೇಗೆ?....' ಎಂದು. ಕಂಡುಕೊಳಬೇಕೆಂಬ ಮಹದಾಶೆಯಿಂದ ಮಠವನ್ನು ಬಿಟ್ಟು ಮುಂದೆ ನಡೆದ.

ಜನಜಂಗುಳಿಯ ಹಿರಿಯಾಳಿಗೆ ಘನಯೋಚನೆ: 'ಹಲವು ಬಗೆಗಳಲಿ ಹರಿವ ಇವರ ಮನಸನ್ನು, ಗುರಿಯತ್ತ ತಿರುಗಿಸುವುದಕ್ಕೆ ಉಪಾಯವೇನು?....' ಎಂದು. ಬಗೆಹರಿಯದವನಾಗಿ ಗದ್ದುಗೆಯನ್ನಿಳಿದು ಹೊರಟು ನಡೆದ.

ಕಬ್ಬಿಗನು ತುಬ್ಬುಹಚ್ಚಲು ತೊಡಗಿದ್ದ: 'ನಾನು ಕಂಡ ಸೌಂದರ್ಯ ಸಾಕ್ಷಾತ್ಕಾರವನೂ, ಪಡೆದ ರಸಾನುಭೂತಿಯನೂ ಒಡಮೂಡಿಸುವುದು ಹೇಗೆ?....' ಎಂದು. ತಿಳಿದುಕೊಳುವ ತವಕದಿಂದ ನೆಲೆಯನ್ನಿಳಿದು ನಡೆದ.

ಚಳಿಗಾಲದೊಂದು ಸಂಜೆಯಲಿ, ಎಲ್ಲರೂ ಸೇರಿದರೊಂದು ಕಾಡಿನಲಿ. ಪರಿಚಯದ ನುಡಿಗಳಾದುವು ಒಬ್ಬರೊಬ್ಬರಲಿ. ನೆಲೆಯುಳಿದು ಅಲೆಯುತಿಹುದೇಕೆಂಬುದನು ತಿಳುಹಿದರು ಬಿಚ್ಚುಬಗೆಯಲಿ!

ಚಳಿಯು ಕೊರೆತ ಒಳಮೂಳೆಗಳನೂ ನಡುಗಿಸಿತು. ಸವುದೆಗಳನು ತಂದಾಯಿತು; ಬೆಂಕಿಕೊಂಡವನು ಮಾಡಿ, ಮೈಯನು ಕಾಸತೊಡಗಿದರು ಎಲ್ಲರೂ ಕುಳಿತು, ಗುರಿಯು ಕಾಣದ ಚಿಂತೆಯೆಲ್ಲರನೂ ಕವಿದಿತ್ತು. ದುಗುಡ ಅವರ ಮನಸು ಬಾಯಿಗಳನು ಬಿಗಿದುಬಿಟ್ಟಿತ್ತು.

ಇದ್ದಕ್ಕಿದ್ದ ಹಾಗೆಯೆ ಉಲಿಯತೊಡಗಿತೊಂದು ನೇಪುರದ ಮೆಲುದನಿ. ಎಲ್ಲರ ಕಿವಿಗಳನ್ನೂ ನಿಮಿರಿಸಿತು ಅಚ್ಚರಿ. ದನಿಬರುವ ದೆಸೆಯನೆ ದಿಟ್ಟಿಸಿದರೆಲ್ಲರೂ. ಕಾಡಕತ್ತಲೆಯೊಳಗಿಂದೊಂದು ರೂಪು ಕುಣಿಕುಣಿಯುತ್ತ ಬರುತಲಿತ್ತು.

ಕೊಂಡದುರಿಯ ಬೆಳಕಿನ ಮಂಡಲದೊಳಗೆ ಬಂದಿತಾ ರೂಪು. ಬೆಕ್ಕಸ ಬೆರಗಾಗಿ ನೋಡಿತದನಾ ಗುಂಪು. ಬಂದು ನಿಂದವಳೊಬ್ಬ ಸುಂದರ ತರುಣಿ. ಮನವ ಸೆಳೆಯುವ ಚೆಲುವಿನ ಕಣಿ. ನಲವನ್ನು ಸೂಸುವ ಬೊಗಸೆಗಣ್ಣಿನ ಜಕ್ಕಿಣಿ. ಯಾರು, ದೇವಕನ್ಯೆಯೊ, ದಿಕ್ಕನ್ಯೆಯೊ?

ಬಂದು ಬಳಿಯಲಿ ನಿಂದಾ ಹೆಣ್ಣು ಹೇಳಿದಳು: 'ಲೋಕ ಕಲ್ಯಾಣದ ಏಕೈಕ ಕಾಮನೆಯಿಂದ ಬೀಡುಗಳನುಳಿದು ಹೊರಟ ಹಿರಿಯರೆ, ನೀವು ಕೇಳಿ ಭೋ! ನಿಮ್ಮ ಹಂಬಲನು ಬೆಂಬತ್ತಿ ಬಂದಿಹೆನು. ಬೇಡಿಕೊಳಿರಿ- ಬೇಕಾದುದನು!'

ಕೇಳಿದರೆಲ್ಲರೂ ಕುತೂಹಲಗೊಂಡು: 'ನೀನಾರು ತಾಯಿ!' ಎಂದು. ಹೇಳಿದಳಾಕೆ ಇಂತೆಂದು:

'ಇರುವೆ ನಾ ಕಥಾದೇವಿ! ವಿಧಾತನೆನ್ನ ತಂದೆಯು; ವಾಗ್ದೇವತೆ ಹಡೆದಾಕೆ. ಅವರನುಜ್ಞೆಯೊಳೆ ನಾನಿಲ್ಲಿ ಬಂದಿಹೆನು. ಬಿಡಿರಿನ್ನು ಚಿಂತೆಯನು. ನಾನೀಗ ನಿಮ್ಮ ನಿಮ್ಮ ಮನಗಳನ್ನೇ ಮನೆಮಾಡಿಕೊಂಡು, ಮಾನವ ಲೋಕದಲ್ಲಿಯೆ ವಸತಿಮಾಡುವೆನು. ನಿಮ್ಮೆಲ್ಲರ ತೊಡಕುಗಳನೂ ಬಿಡಿಸುವೆನು!'

ಮಿರ್ರೆಂದು ಮಿಂಚು ಮಿರುಗಿತೊಮ್ಮೆ. ಹೆಣ್ಣುರೂಪು ಕಣ್ಣಿಗೆ ಕಾಣದಂತೆ ಮಾಯವಾಗಿತ್ತು. ಹಂಚಿಕೆ ಹುಡುಕಲು ಹೊರಟವರಿಗೆಲ್ಲ ಅಲ್ಲಿಯೆ ಅದರ ತಿಳಿವು ಹೊಳೆಯಿತು. ಎಲ್ಲರೂ ಮರಳಿದರು ತಂತಮ್ಮ ಮನೆ-ಮಠಕೆ.

ಹಲವು ಯುಗಗಳಿಗೆ ಹಿಂದೆಯೆ ನಡೆದ ಸಂಗತಿಯಿದು!

—ಸಾಮಾಜಿಕ

ಕಥಾಸಂಚಿಕೆ

ದೀಪಾವಳಿಗೆ ವಿಶೇಷ ಸಂಚಿಕೆಯನ್ನು ಹೊರಡಿಸಲಿಕ್ಕಾಗಲಿಲ್ಲ ನಮಗೆ. ಇದಕ್ಕಾಗಿ ವಾಚಕರು—ಪರಿಸ್ಥಿತಿಯನ್ನರಿತವರಾದುದರಿಂದ—ಆಕ್ಷೇಪಿಸಲಿಲ್ಲವಾದರೂ ನಮಗೇ ಎನಿಸಿತು : ದೀಪಾವಳಿಯ ವಿಶೇಷ ಸಂಚಿಕೆಯನ್ನೇ 'ಕಥಾಸಂಚಿಕೆ' ಎಂಬ ಹೆಸರಿನಿಂದ ಕೊಟ್ಟರಾಯಿತು ಎಂದು. ಹೆಚ್ಚಾಗಿ ಪುಟಗಳನ್ನು ಕೊಡಬೇಕೆಂಬ ಅಪೇಕ್ಷೆ ಇದ್ದಿತು; ಆದರೆ ಕಾಗದದ ಕೊರತೆ ನಮ್ಮ ಅಪೇಕ್ಷೆಯನ್ನು ನೆರವೇರಿಸದೆ ಹೋಯಿತು. ಮುಂದಿನ ಆರು ತಿಂಗಳ ಕಾಗದವನ್ನು ಸಕಾಲಕ್ಕೆ ತರಿಸಿಕೊಡುವುದಾಗಿ ಹೊಣೆಹೊತ್ತ ಶ್ರೀಮಾನ್ ಜಿ. ಕೆ. ಕೇಳಕರರೂ ಸಿರುಪಾಯರಾಗಿದ್ದಾರೆ. ನಮ್ಮ ಬೇಡಿಕೆಯನ್ನು ಕಾರಖಾನೆಗೆ ಕಳುಹಿ ಮೂರು–ನಾಲ್ಕು ತಿಂಗಳಾಗಿದ್ದರೂ, ಇನ್ನೂ ಮಾಲಿನ ಪೂರಯಿಕೆಯು ಅವರಿಗೆ ಆಗದಾಗಿದೆಯಂತೆ. ಮುಂಬೈ-ಪುಣೆಗಳತ್ತ ಕೇಳಿನೋಡಿದರೆ, ಈ ಸಂಚಿಕೆಗೆ ಎಂಟಾಣೆ ಬೆಲೆಯಿಟ್ಟರೂ ಗಿಟ್ಟಲಾಗದಷ್ಟು ಕಾಗದಕ್ಕೆ ಏರಿಕೆಯ ಬೆಲೆಯಿದೆ. ಇಂತಹ ಕಾಲದಲ್ಲಿ ಸಕಾಲಕ್ಕೆ, ಸಂಚಿಕೆ ಹೊರಡುವಂತೆ ಇದಿಷ್ಟು ಕಾಗದಗಳನ್ನಾದರೂ ಒದಗಿಸಿಕೊಟ್ಟರಲ್ಲಾ—ಎಂದು, ಶ್ರೀ. ಜಿ. ಕೆ. ಕೇಳಕರ್ ಅವರನ್ನು ಅಭಿನಂದಿಸಬೇಕಾಗಿದೆ.

ಕಥಾಸಂಚಿಕೆಯನ್ನು ಸಾಕಷ್ಟು ಆಕರ್ಷಕವಾಗಿ ಮಾಡಬೇಕೆಂಬ ಮನಸ್ಸು ತುಂಬ ಇದ್ದಿತು. ಆದಕ್ಕಾಗಿಯೆ ಇಮ್ಮಡಿ ಹಣ ವೆಚ್ಚಮಾಡಿ ಕವರಿಗಾಗಿ ಹೊಳಪಿನ ಹಾಳೆಗಳನ್ನು ತೆಗೆದುಕೊಂಡಾಯಿತು. ಹೈದರಾಬಾದಿನ ಪ್ರಸಿದ್ಧ ಛಾಯಾಚಿತ್ರಕಾರರಾದ ಶ್ರೀಮಾನ್ ಅಳವಂಡಿಯವರು ಕಳುಹಿದ ಚಿತ್ರದ ಪಡಿಯಚ್ಚನ್ನು ಮಾಡಿಸಿ ಆಯಿತು. ಮೇಲಾಟದಲ್ಲಿ ಒಳ್ಳೆಯವೆಂದು ಮೇಲ್ಮೆ ಪಡೆದ ರಸವತ್ತಾದ ಕತೆಗಳೂ ಸಾಕಷ್ಟು ಇದ್ದುವು. ಆದರೆ ಕಾಗದದ ಕೊರತೆ ಸಂಚಿಕೆಯ ಗಾತ್ರವನ್ನು ಕಡಿಮೆಯಾಗಿ ಮಾಡಿತು. ಆದುದರಿಂದಲೇ ಹಲವು ಒಳ್ಳೆಯ ಕತೆಗಳು ಇದರಲ್ಲಿ ಅಚ್ಚಾಗಲಿಕ್ಕೆ ಅವಕಾಶವಿಲ್ಲದಾಯಿತು. ಆದರೂ ಈಗಿರುವ ಸಂಚಿಕೆಯೂ ತನ್ನ ಬೆಲೆಗಿಂತ ಹೆಚ್ಚಿನ ಯೋಗ್ಯತೆಯದಾಗಿರುವುದೆಂಬುದನ್ನು ಓದಿನೋಡಿದವರೆಲ್ಲರೂ ಮನಗಾಣಬಹುದು. ಇದರಲ್ಲಿ ತಂತಮ್ಮ ಕತೆಗಳನ್ನು ಮುದ್ರಿಸಲು ಒಪ್ಪಿಗೆಯನ್ನಿತ್ತ ಕತೆಗಾರರಿಗೂ, ದಿವಂಗತ ತಾರಾನಾಥರಾಯರ ಜೀವನವನ್ನು ಪರಿಚಯ ಮಾಡಿಕೊಟ್ಟ ಡಾ. ಗೋಪಾಲಕೃಷ್ಣರಾಯರಿಗೂ, ಮೇಲ್ಹೊದಿಕೆಯ ಚಿತ್ರಕಾರರಾದ ಶ್ರೀಮಾನ್ ಅಳವಂಡಿಯವರಿಗೂ ನಮ್ಮ ಕೃತಜ್ಞತೆಯ ವಂದನೆಗಳು.

ಜಯಂತಿಯ ಚಂದಾ

ದೇಶದಲ್ಲಿಯ ಎಲ್ಲ ಭಾಷೆಗಳ ಹಲವು ಪತ್ರಿಕೆಗಳು ತಂತಮ್ಮ ಚಂದಾಹಣವನ್ನು ಹೆಚ್ಚಿಸಿ ಬಹಳ ದಿನಗಳಾದುವು. ಜಯಂತಿ, [illegible]ನವರೆಗೆ ತನ್ನ ಮೂರೇ ರೂಪಾಯಿ ಚಂದಾಹಣವನ್ನೇ ಗಟ್ಟಿಯಾಗಿ ಹಿಡಿದುಕೊಂಡಿತ್ತು. ಅದಕ್ಕಾಗಿ ಸಾಕಷ್ಟು ನಷ್ಟವನ್ನು ಸಹಿಸುವ ಪ್ರಸಂಗವನ್ನೂ ತಂದುಕೊಂಡಿತು. ಆದರೆ ದಿನದಿನಕ್ಕೂ ನಷ್ಟದ ಪ್ರಮಾಣ ಬೆಳೆಯುತ್ತಲೆ ನಡೆದಿದೆಯಲ್ಲದೆ ಕಡಿಮೆಯಾಗುತ್ತಿಲ್ಲ. ಆದುದರಿಂದಲೆ, ಅನಿವಾರ್ಯವಾಗಿ ಚಂದಾದರವನ್ನೂ ಬಿಡಿಸಂಚಿಕೆಯ ಬೆಲೆಯನ್ನೂ ಏರಿಸಬೇಕಾಗಿ ಬಂದಿತು. ಇನ್ನುಮೇಲೆ ಎಲ್ಲ ಚಂದಾದಾರರೂ ವರ್ಷಕ್ಕೆ ೩–೮–೦ ಗಳನ್ನು ಕೊಡಬೇಕಾಗುವುದು. ವಿ. ಪಿ. ಯಿಂದ ತರಿಸಿದರೆ ಪೋಸ್ಟೇಜ್ ಸೇರಿ ೩–೧೧–೦ ಆಗುವುದು. ಬಿಡಿಸಂಚಿಕೆಯ ಬೆಲೆ ೦–೫–೦ ಆಗುವುದು. ಹೊಸತಾಗಿ ಚಂದಾ ಹಣವನ್ನು ಕಳುಹುವವರೆಲ್ಲರೂ ೩ ರೂ. ೮ ಆಣೆಗಳನ್ನು ಮನಿಯಾರ್ಡರಿನಿಂದ ಕಳುಹುತ್ತ ಹೋಗಬೇಕು. ಒಳ್ಳೆಯ ಕಾಲ ಬಂದಾಗ ಮತ್ತೆ ಮೊದಲಿನ ದರಕ್ಕೇ ಕೊಡಬೇಕೆಂದು ಹಾರಯಿಕೆಯಿದೆ. ಕನ್ನಡಿಗರೆಲ್ಲರೂ ಪ್ರೀತಿಯಿಂದ ಜಯಂತಿಯನ್ನು ಎಂದಿನಂತೆಯೆ ಬರಮಾಡಿಕೊಳ್ಳಬೇಕೆಂದು ಪ್ರಾರ್ಥನೆ.

ಹೊಸ ಕನ್ನಡ ವಾಕ್‌ಚಿತ್ರಪಟ

"ಜೀವನ ನಾಟಕ"

ಈ ಸಾಮಾಜಿಕ ವಾಕ್‌ಚಲಚ್ಚಿತ್ರಪಟವು, ಸದ್ಯ ಕನ್ನಡ ನಾಡಿನ ಅನೇಕ ಪಟ್ಟಣಗಳಲ್ಲಿ ಪ್ರದರ್ಶಿತವಾಗುತ್ತಲಿದೆ. ಕನ್ನಡ ಚಲಚ್ಚಿತ್ರದ ಇತಿಹಾಸ ಒಂದೆರಡು ವರ್ಷಕ್ಕಿಂತ ಹಿಂದೆ ಹೋಗದಾದರೂ—ಹೊರಟ ಚಿತ್ರಗಳು ಎರಡು ಕೈಬೆರಳುಗಳ ಎಣಿಕೆಯನ್ನು ದಾಟಲ್ಲವಾದರೂ—ಪ್ರಸ್ತುತ ಚಿತ್ರವು ಕನ್ನಡನಾಡಿಗೆ ಉಜ್ವಲ ಭವಿಷ್ಯವನ್ನು ಸೂಚಿಸುವಂತಹದಾಗಿದೆ. ಪರದೇಶ-ಪರಪ್ರಾಂತಗಳ ಒಳ್ಳೊಳ್ಳೆಯ ಚಿತ್ರಗಳೊಡನೆ ಹೋಲಿಸಿ, ಇದರೊಳಗಿನ ಕೊರತೆಗಳನ್ನು ತೋರಿಸುವ ವಿಮರ್ಶಕರೂ ಇರಬಹುದು; ಆದರೆ ಪರದೇಶ-ಪರಪ್ರಾಂತಗಳಲ್ಲಿಯ ಒಳ್ಳೆಯವೆಂದು ಜಾಹೀರಾತು ಮಾಡಿಸಿಕೊಳ್ಳುತ್ತಿರುವ ಬಹುಸಂಖ್ಯಾಕ ಚಿತ್ರಗಳ ಜೊತೆಯಲ್ಲಿ ನಿಲ್ಲುವುದಕ್ಕೆ ಯಾವ ವಿಷಯದಲ್ಲಿಯೂ ಈ ಚಿತ್ರ ಹಿಂಜರಿಯಬೇಕಾಗಿಲ್ಲ. ಛಾಯಾಚಿತ್ರ ಲೇಖನ, ಧ್ವನಿಲೇಖನ ಉತ್ತಮವಾಗಿದೆ. ಕರ್ಣಮಧುರವಾದ ಸಂಗೀತವಿದೆ. ಮನೋಹಾರಿಯಾದ ಕಥಾವಸ್ತುವಿದೆ. ಒಬ್ಬಿಬ್ಬರನ್ನು ಬಿಟ್ಟರೆ ನಟರಿಗೆ ಪಾತ್ರೋಚಿತ ರೂಪವಿದೆ; ಅಭಿನಯ ಕೌಶಲ್ಯವಿದೆ; ಒಳ್ಳೆಯ ನಟರೆನಿಸಿಕೊಳಬೇಕೆಂಬ ಅಭಿಲಾಷೆಯೆಲ್ಲರಿಗೂ ಇದ್ದ ಮೂಲಕ, ಎಲ್ಲರಲ್ಲಿಯೂ ಪ್ರಾಮಾಣಿಕತೆಯಿದೆ. ಮುಖ್ಯ ಸ್ತ್ರೀ ಪಾತ್ರಗಳನ್ನು ನಿರ್ವಹಿಸುವವರಲ್ಲಿ ಇರಬೇಕಾದ ಮುಖ್ಯಗುಣವೆಂದರೆ ಸೌಂದರ್ಯ. ಈಗಾಗಲೆ ಬಹುಜನರಿಗೆ ಮೆಚ್ಚಿನ ತಾರಕೆಯಾದ ಶಾಂತಾ ಹುಬಳೀಕರರ ವಿಷಯವನ್ನು ಹೇಳಲೇಬೇಕಾಗಿಲ್ಲ. ಇನ್ನೊಬ್ಬ ಅಚ್ಚಗನ್ನಡ ತಾರಕೆಯಾದ ಶ್ರೀಮತಿ ಜಯಮ್ಮ ಸೌಂದರ್ಯ-ಸೌಕುಮಾರ್ಯದಲ್ಲಿಯೂ ಕಲಕಂಠದಲ್ಲಿಯೂ ವಂಗತಾರಕೆ ಕಾನನಬಾಲೆಯ ಹೆಗಲಿಗೆ ಹೆಗಲುಹಚ್ಚಿ ನಿಲ್ಲಬಲ್ಲಳು; ಆದರೆ ಅಭಿನಯಸಂಸ್ಕಾರ-ಸಂಭಾಷಣ ಸಂಸ್ಕಾರಗಳು ಇನ್ನೂ ಹೆಚ್ಚಾಗಿ ಬೆಳವಣಿಗೆ ಹೊಂದಬೇಕು. ಶ್ರೀ. ಗುಬ್ಬಿ ವೀರಣ್ಣನವರ ಈ ಪ್ರಯೋಗ-ಪ್ರಯತ್ನಗಳು ನಿಜವಾಗಿಯೂ ಪ್ರಶಂಸನೀಯವಾಗಿವೆ. ಅವರ ಯಶೋಹಸ್ತ ಕನ್ನಡ ಚಲಚ್ಚಿತ್ರ ಪ್ರಪಂಚಕ್ಕೆ ಕಳೆಯನ್ನು ತರಲಿ!

—ಸಂಪಾದಕರು.



೧. ಮಂಗನ ಮಹಾವಿಭೂತಿತನ

'ಮಹಾತ್ಮಾ ಗಾಂಧಿಯವರು ಜಗತ್ತಿನಲ್ಲಿ ಉದಾತ್ತತತ್ತ್ವಜೀವಿಗಳಾದ ಮಹಾವಿಭೂತಿಗಳು' ಎಂದು ಫೀಲ್ಡ್ ಮಾರ್ಶಲ್ ಜನರಲ್ ಸ್ಮಟ್ಸರು, ಲಂಡನಿನಲ್ಲಿ ಪತ್ರಿಕಾ ಪ್ರತಿನಿಧಿಗಳಿಗೆ ಕೊಟ್ಟ ಸಂದರ್ಶನದಲ್ಲಿ ಹೇಳಿದರಷ್ಟೆ! ಲಂಡನಿನ ಟೈಮ್ಸ್ ಮತ್ತು ಡೇಲಿ ಟೆಲಿಗ್ರಾಫ್ ಎಂಬ ಪತ್ರಿಕೆಗಳು ಇದಿಷ್ಟನ್ನು ಬಿಟ್ಟು ಉಳಿದ ಸಂದರ್ಶನವನ್ನು ಪ್ರಕಟಿಸಿದುವಂತೆ. ಇದಕ್ಕಾಗಿ ಕನಲಿದ ವಾಚಕನೊಬ್ಬನು 'ಮಂಗರಾಯಾ, ಬ್ರಿಟಿಶರು ಕುಟಿಲರೆಂದು ಇನ್ನಾದರೂ ನಿನಗೆ ಖಾತ್ರಿಯಾಗಬಾರದೆ?' ಎಂದು ಅಬ್ಬರಿಸಿದ್ದಾನೆ. ಅದಕ್ಕೆ ಮಂಗರಾಯನ ಉತ್ತರವೇನು? ಮತ್ತೊಂದು ಟೊಂಗೆಗೆ ಜಿಗಿಯುವುದು, ಮೈ ತುರಿಸುತ್ತ ಕೂಡ್ರುವುದು. ವಾಚಕ ಮಂಗಮಹಾಶಯಾ, ಮಂಗರಾಯನ ಮೇಲೂ ಕೋಪಿಸಬೇಡ. ಯಾಕೆಂದರೆ, ಈ ಸಂಗತಿಯಿಂದ ಮಂಗರಾಯನಿಗೆ ಬ್ರಿಟಿಶರ ಪ್ರಾಮಾಣಿಕ ಬುದ್ಧಿಗಾಗಿ ಆದರ ಹೆಚ್ಚಾಗಿದೆ. ಮಹಾತ್ಮರಂತಹ ಮಹಾವಿಭೂತಿಗಳ ಹೆಸರನ್ನೆತ್ತುವ ಯೋಗ್ಯತೆ ಕೂಡ ತಮ್ಮಲ್ಲಿಲ್ಲವೆಂದು ಈ ಪತ್ರಿಕೆಗಳು ಒಪ್ಪಿದಂತಾಗಲಿಲ್ಲವೆ? ಇದಲ್ಲದೆ, 'ಸ್ಮಟ್ಸರ ಅಭಿಪ್ರಾಯವು ಜಗತ್ತಿಗೇ ಮಾನ್ಯವಾಗಿದೆ; ಹೀಗಿರುವಾಗ ತುಟ್ಟಿಯ ಕಾಗದದ ಈ ಕಾಲದಲ್ಲಿ ಅದನ್ನು ಅಚ್ಚುಹಾಕುವ ಅವಶ್ಯಕತೆ ಇಲ್ಲ' ಎಂದು ಬ್ರಿಟಿಶರ ಬಣಜಿಗಬುದ್ಧಿಗೆ ಹೊಳೆದಿರಬಾರದೇಕೆ? ಇನ್ನೂ ಒಂದು ಮಾತು: ಆಯುಷ್ಯದ ಹೆಚ್ಚು ಭಾಗವನ್ನು ಮಹಾತ್ಮರು ಬ್ರಿಟಿಶರ ಜೇಲುಗಳಲ್ಲಿ ಕಳೆದಿದ್ದಾರೆ; ಅದಕ್ಕಾಗಿಯೆ ಅವರು ಉದಾತ್ತ ತತ್ತ್ವಜೀವಿಗಳಾದರು; ಆದ್ದರಿಂದ, ಯಾರಾರಿಗೆ ಮಹಾವಿಭೂತಿಯಾಗಬೇಕಾಗಿದೆಯೋ ಅವರು ಬ್ರಿಟಿಶರ ಜೇಲುಗಳಲ್ಲಿ—ಅಲ್ಲ, ಅಂತೂ ನೋಡಿದಿರಿಲ್ಲೊ, ಎಂತಹ ಅನನುಕೂಲ ಪರಿಸ್ಥಿತಿ ಉಂಟಾಗುವುದು? ಇದನ್ನರಿಯದೆ, ಪಾಪ!—ಜನರಲ್ ಸ್ಮಟ್ಸರು ತಮ್ಮ ಅಭಿಪ್ರಾಯವನ್ನು ಕೊಟ್ಟಿದ್ದಾರೆ. ಈ ಮಾತು ಅವರ ಲಕ್ಷ್ಯಕ್ಕೆ ಬರಬಾರದೆಂಬ ಸದುದ್ದೇಶದಿಂದಲೆ— ಅಥವಾ, ಹೆಚ್ಚೇನು? 'ಜನರಲ್ ಸ್ಮಟ್ಸರು ಮಹಾವಿಭೂತಿಗಳಲ್ಲ' ಎಂದು ಈ ಪತ್ರಿಕೆಗಳು ಸ್ಪಷ್ಟವಾಗಿ ಹೇಳಬೇಕಾಗುತ್ತಿತ್ತು. ಇನ್ನೂ ಸ್ಪಷ್ಟವಾಗಿ ಹೇಳಿದರೆ ವಾಚಕರಾಯನೂ ಮಂಗರಾಯನೂ ಕೂಡಿಯೆ ಮಹಾವಿಭೂತಿಗಳಾಗುವ ಪ್ರಸಂಗ ಬಂದೀತು, ಕೊಂಬೆಯು ಜೇಲದು ನಿಂದೀತು!

* * *

೨. ದೇಖಿ-ದೇಖೋ ಗಾಂಧೀ-ದೇಖೋ!

ಗಾಂಧೀಜಿಯವರನ್ನು ಕಾಣಲು ರಾಜಾಜಿಯವರಿಗೆ ಅಪ್ಪಣೆ ದೊರೆಯಲಿಲ್ಲವೆಂದು ಮಂಗರಾಯನಿಗೂ ಆನಂದವಾಗಿದೆ. ಆಚಾರ್ಯರಿಗೆ ತಕ್ಕ ಪ್ರಾಯಶ್ಚಿತ್ತ ದೊರೆಯಿತು. ಕಾಂಗ್ರೆಸನ್ನು ಬಿಟ್ಟಿದ್ದಕ್ಕೆ ಸರಕಾರವೇ ರಾಜಾಜಿಯವರಿಗೆ ಶಿಕ್ಷೆಯನ್ನು ವಿಧಿಸಿದೆ ಎಂದು ಮಂಗರಾಯನ ಅಭಿಪ್ರಾಯ. ಗಾಂಧಿಯವರೊಡನೆ ವಿಚಾರವಿಚ್ಛೇದವನ್ನು ಮಾಡಿಕೊಂಡ ಮದ್ರಾಸೀ 'ಮಹಾತ್ಮ'ನಿಗೆ ಈಗೇಕೆ ಇಂತಹ ಬುದ್ಧಿ ಬಂದಿತೊ— ಅಲ್ಲಲ್ಲ, ತಪ್ಪಿತು— ಹೀಗೇಕೆ ಇಂದು ಬುದ್ಧಿ ಹೋಯಿತೊ? 'ಮಹಾತ್ಮರನ್ನು ಕಾಣಲು ಸರಕಾರದ ಕರುಣೆಯು ಮಾತ್ರ ಬೇಕು, ಅಪ್ಪಣೆ ಅವಶ್ಯವಿಲ್ಲ' ಎಂಬುದು ಬುದ್ಧಿಚಕ್ರವರ್ತಿಯಾದ ರಾಜಾಜಿಗೆ ಹೊಳೆಯದೆ ಹೋಯಿತೆ? ಇಷ್ಟೇಕೆ? ಮಹಾತ್ಮರನ್ನು ಭೆಟ್ಟಿಮಾಡಿಸುವುದು ಸರಕಾರಕ್ಕೆ ಅನಿವಾರ್ಯವೆನಿಸಲು ಒಂದು ಸುಲಭೋಪಾಯವಿದೆ ಎಂಬುದು ಇಂದು ಸಾವಿರಾರು ಜನರಿಗೆ ಗೊತ್ತಿದೆಯಲ್ಲವೆ? ಹೀಗಿರುವಾಗ 'ನಾನು ಮಹಾತ್ಮರನ್ನು ಕಂಡುಬರಲೆ?' ಎಂದು ಮುಗ್ಧನಂತೆ ಕೇಳಬಹುದೆ? 'ಮಹಾತ್ಮರನ್ನು ಕಾಣಬಯಸುವೆ' ಎಂದಿಷ್ಟು ಹೇಳಿದ್ದರೆ ರಾಜಾಜಿಯವರಿಗೆ ತಟ್ಟನೆ ಎಲ್ಲ ಅನುಕೂಲತೆಗಳು, ಸವಲತ್ತುಗಳು ದೊರೆಯಬಹುದಾಗಿತ್ತು. ಆದರೆ 'ಮಹಾತ್ಮರನ್ನು ಕಂಡು' ತಿರುಗಿ ಬರಲು ರಾಜಾಜಿಯವರು ಕೇಳಿದರು. ಆಗ ಸರಕಾರಕ್ಕೆ ಏನೆನಿಸಬಹುದು? ಈ ಚತುರನು ಇನ್ನೂ ಮಹಾತ್ಮರ ಸಹವಾಸವನ್ನು ಬಯಸಲೊಲ್ಲನು, ಅರ್ಥಾತ್ ಇವನಿಗೆ ಇನ್ನೂ ಬುದ್ಧಿ ಬಂದಿಲ್ಲ, ಆದ್ದರಿಂದ ಇವನನ್ನು ಅಲ್ಲಿ ಕಳುಹಿಸುವುದು ಯೋಗ್ಯವಲ್ಲ— ಎಂದು ಸರಕಾರವು ತಿಳಿದರೆ ತಪ್ಪೇನು? ತಪ್ಪು ಸರಕಾರದ್ದಲ್ಲ, ತಪ್ಪು ರಾಜಾಜಿಯವರದು. ರಾಜಾಜಿಯವರೇ ಇಂತಹ ತಪ್ಪು ಮಾಡಿದಮೇಲೆ, ಇನ್ನು ಚಿಕ್ಕಪುಟ್ಟ ಚಿಲ್ಲರೆ ರಾಜಕಾರಣಿಗಳು ತಪ್ಪಿದ್ದರೆ ಆಶ್ಚರ್ಯವೇನು? ಇದೋ— ಇಂತಹರಿಗಾಗಿ ಮಂಗರಾಯನು ಮಂತ್ರವನ್ನು ಸಿದ್ಧಗೊಳಿಸಿದ್ದಾನೆ. ಯಾರಾರಿಗೆ ಮಹಾತ್ಮರನ್ನು ಕಾಣಬೇಕಾಗಿದೆಯೊ ಅವರು— ಏನೆಂದಿರಿ? ಮತ್ತೊಮ್ಮೆ ಬರುವಿರಾ? ಅಗತ್ಯವಾಗಿ, ಬೇಕಾದಷ್ಟು ದಿನ ಕಳೆದರೂ ಮಂತ್ರದ ಶಕ್ತಿ ಸರಿಯದು!

ಕೊಂಡು ನೋಡಿರಿ ಮಂಗನ ಮಂತ್ರ
ಕಂಡು ನೋಡಿರಿ ತಪ್ಪದ ತಂತ್ರ
ನಿಮಗೂ ಜೇಲಿಗೂ ಇಲ್ಲ ಅಂತರ ||

* * *



ಸೋಲ್ ಎಜಂಟರು.
ವಾಗ್ವಿಲಾಸ ಬುಕ್‌ಡಿಪೊ, ಹುಬ್ಬಳ್ಳಿ

ಚಿಲ್ಲರೆ-ಪುರಾಣ

ಈಗ ಹೋದಹೋದಲ್ಲೆಲ್ಲ ಚಿಲ್ಲರೆ ದೊರೆಯದಂತಾಗಿ ಎಲ್ಲರಿಗೂ ಅತಿಶಯ ತೊಂದರೆಯಾಗಿದೆ, ವ್ಯವಹಾರವೆ ಕಟ್ಟಾಗಿದೆ— ಇದಕ್ಕೆ ಮಂಗರಾಯನ ರಾಮಬಾಣವೇನಾದರೂ ಇದೆಯೆ ಎಂದು ಅನೇಕ ಪೃಚ್ಛೆಗಳು ಬಂದಿವೆ. ಮಂಗರಾಯನಾದರೂ ಹೇಳುವುದೇನು? ಅಥವಾ ನಿಜವಿದ್ದುದನ್ನು ಹೇಳಿಯೆ ಬಿಡಬೇಕೆ? ಯಾವ ಸಂಸಾರಿಗನೂ ಇಂದಿನ ಕಾಲದಲ್ಲಿ ಚಿಲ್ಲರೆ ವ್ಯವಹಾರವನ್ನು ಮಾಡಬಾರದೆಂದು ಪರಮಾತ್ಮನ ಸಂಕೇತವಿರಬಹುದೆ? ಅಥವಾ ಇಂದಿನ ದೇಶದ ಪರಿಸ್ಥಿತಿಯನ್ನು ನೋಡಿಯಾದರೂ, ಭಾರತೀಯನು ಚಿಲ್ಲರೆ ವಿಚಾರವನ್ನು ಬಿಟ್ಟುಬಿಡಬೇಕೆಂದು ಆ ಜಗನ್ನಿಯಾಮಕನು ಆರ್ಡಿನನ್ಸನ್ನು ಹೊರಡಿಸಿರಬಹುದೆ? ಇಲ್ಲವೆ ಹಿಂದುಸ್ತಾನದಲ್ಲಿದ್ದ ಎಲ್ಲ ಆಣೆ-ಪೈಗಳು ವೈಸ್‌ರಾಯರ ಕೌನ್ಸಿಲಿನಿಂದ ಮ್ಯುನಿಸಿಪಾಲಿಟಿಗಳ ಮೆಂಬರರ ವರೆಗೆ ತುಂಬಿಕೊಂಡುವದರಿಂದ, ಮಿಕ್ಕ ವ್ಯವಹಾರಕ್ಕೆ ಚಿಲ್ಲರೆ ಸಾಲದಂತಾಗಿರಬಹುದೆ? ಏನೆ ಇದ್ದರೂ, ಇಂದಿನ ಸ್ಥಿತಿಗಾಗಿ ಸಂತೋಷಪಡತಕ್ಕದ್ದೆಂದು ಮಂಗರಾಯನ ಮ್ಯತುರಿಸಿಕೆಯ ಸಲಹೆ. 'ತಾಮ್ರದ ದುಡ್ಡು ತಾಯಿ-ಮಕ್ಕಳನ್ನು ಕೆಡಿಸಿತು' ಎಂಬ ಗಾದೆಯ ಮಾತನ್ನು ಕೇಳಿಲ್ಲವೆ? ಇನ್ನು ತಾಮ್ರದ ದುಡ್ಡೇ ಇಲ್ಲದಂತಾಗಲು, ಭಾರತ ಮಾತೆಗೂ ಅವಳ ಮಕ್ಕಳಿಗೂ ಪರಸ್ಪರ ಕೆಡುವ ಕಾರಣವೆ ಇಲ್ಲದಂತಾಯಿತಲ್ಲ! ಹಹಹ! ಇದಕ್ಕೆನಬೇಕು ರಾಮಬಾಣ, ಅರ್ಥಾತ್ ಮಂಗರಾಯನ ಜಾಣ! ರುಪಾಯಿಗೆ ಹದಿನಾರಾಣೆ ಬೇಕೆನ್ನುವವರಲ್ಲಿ ಯಾವ ಜಾಣತನ? ಯಾಕೆಂದರೆ, ಇಂದು ಆಣೆಗೆ ಬೆಲೆಯೇ ಇಲ್ಲ, ಹಾಗೆ ಕೇಳಿದರೆ ಆಣೆ ಎಂದಿಗೂ ಸ್ಥಿರವಾಗಿಲ್ಲ. (೧) ಲೋಕಮಾನ್ಯರ ರಿಸ್ಪಾನ್ಸಿವ್ ಕೋಆಪರೇಶನ್ ಪಾರ್ಟಿ, (೨) ಮಹಾತ್ಮರ ಅಸಹಕಾರ ಪಾರ್ಟಿ, ೩) ದಾಸರ ಸ್ವರಾಜ್ಯ ಪಾರ್ಟಿ, (೪) ಹಿಂದುಮಹಾಸಭೆ, (೫) ಡೆಮಾಕ್ರ್ಯಾಟಿಕ್ ಸ್ವರಾಜ್ಯ ಪಾರ್ಟಿ, (೬) ಕಾಂಗ್ರೆಸ್ ನ್ಯಾಶನಾಲಿಸ್ಟ್ ಪಾರ್ಟಿ, ಕೊನೆಗೆ (೭) ಈಗ ವೈಸ್‌ರಾಯರ ಕೌನ್ಸಿಲ್ ಪಾರ್ಟಿ— ಹೀಗೆ ಒಂದರ ತರುವಾಯ ಒಂದು ರೂಪವನ್ನು ಧರಿಸಿದ ಆಣೆಗೆ ಬೆಲೆ ಉಳಿಯುವುದಾದರೂ ಹೇಗೆ? ಅದಕ್ಕಾಗಿ, ವಾಚಕರೆ, ಚಿಲ್ಲರೆಯ ಯಾಚಕರೆ, ಇನ್ನು ಮುಂದೆ—

ಚಿಲ್ಲರೆ ಕೊಟ್ಟರೆ ಒಲ್ಲೆನ್ನಿ
ಆಣೆಗೆ ಬೆಲೆ ಎಂಬುದು ಸೊನ್ನಿ।
ಆಣೆಯನ್ನಂತೂ ಮುಟ್ಟಬೇಡಿ
ಅಂಬೇಡಕರಗೇ ಅದು ಜೋಡಿ॥

* * *

೪. ನೀತಿ ಮರೆತ ಕತೆ

ಒಂದಾನೊಂದು ಊರಲ್ಲಿ ಒಬ್ಬ ತಂದೆ ಇದ್ದನು. ಇಂದಿನ ಮಾನಸಶಾಸ್ತ್ರಕ್ಕನುಗುಣವಾಗಿ ಮಕ್ಕಳನ್ನು ಬೆಳೆಯಿಸಬೇಕೆಂಬ ಅಭಿಪ್ರಾಯ ಅವನದು. ಸುದೈವದಿಂದ ಅವನಿಗೆ ಗಂಡು ಹೆಣ್ಣು ಕೂಡಿ ೧೫ ಜನ ಮಕ್ಕಳಿದ್ದರು. ಒಂದು ದಿನ ಗಂಡುಮಗುವೊಂದು ಒಂದು ಆಟದ ಬಂದೂಕನ್ನು ಬೇಡಿತು. ಆಗ ತಂದೆ 'ನಿನಗೆ ಅದನ್ನು ಕೊಟ್ಟರೆ ನಿನ್ನ ಅಣ್ಣ-ತಮ್ಮಂದಿರು ಜಗಳಾಡುವರು. ಮತ್ತೇನನ್ನಾದರೂ ಬೇಡು' ಎಂದನು. ಕೆಲಹೊತ್ತಿನ ಮೇಲೆ ಎಲ್ಲ ಗಂಡು ಮಕ್ಕಳು ಕೂಡಿಯೆ ಬಂದು 'ಒಂದು ಬಂದೂಕನ್ನು ತಂದುಕೊಟ್ಟರೆ ನಮ್ಮೊಳಗೆ ನಾವು ಜಗಳಾಡುವುದಿಲ್ಲ, ಎಲ್ಲರೂ ಕೂಡಿಯೆ ಆಡುವೆವು' ಎಂದರು. ಆಗ ತಂದೆ 'ನೀವೆಲ್ಲರೂ ಕೂಡಿ ಆಡುವುದನ್ನು ನೋಡಿ ನಿಮ್ಮ ಅಕ್ಕ-ತಂಗಿಯರು ಜಗಳ ಹೂಡುವುದು ಖಂಡಿತ, ಅದಕಾಗಿ ಬೇಡ' ಎಂದನು. ಆಗ ಗಂಡು-ಹೆಣ್ಣು ಎಲ್ಲರೂ ಕೂಡಿಯೆ 'ಒಂದೇ ಬಂದೂಕು ಸಾಕು; ನಮಗೆಲ್ಲರಿಗೂ ಅದೊಂದು ಮೋಜು; ನಾವು ನಂ-ನಮ್ಮೊಳಗೆ ಜಗಳಾಡುವುದಿಲ್ಲ' ಎಂದರು. ಆಗ ತಂದೆ; 'ನೀವಿನ್ನೂ ಚಿಕ್ಕವರು, ನಿಮಗೆ ಪರಸ್ಪರ ಸ್ವಭಾವ ತಿಳಿಯುವುದಿಲ್ಲ; ನೀವು ಜಗಳಾಡುವುದು ನಿಮ್ಮ

(೩೦೬ನೆಯ ಪುಟ ನೋಡಿರಿ)

ದಮ್ಮು ಗುಣಪಡಲೇ ಬೇಕು

ಅಸಾಧ್ಯ ಎಂದು ಡಾಕ್ಟರರು ಅನ್ನುವದಿಲ್ಲ!



★

ದಮ್ಮು ಒಮ್ಮೆಲೇ ಗುಣವಾಗಬೇಕೆಂಬ ಆಶೆಯಿಂದ ಕೆಲವು ಉಷ್ಣವಾದ ಔಷಧಗಳನ್ನು ತಕ್ಕೊಳ್ಳುತ್ತಾರೆ. ಅದರಿಂದ ತತ್ಕಾಲಕ್ಕೆ ಗುಣ ಕಂಡುಬಂದರೂ ಮುಂದೆ ಅದರ ಪರಿಣಾಮ ಬಹಳ ಕೆಡುಕು ಆಗುತ್ತದೆ. "ಪುರೋಹಿತ ಶ್ವಾಸಹಾರಿ" ಯು ಮಾತ್ರ ದಮ್ಮಿಗೆ ಉತ್ಕೃಷ್ಟ ಉಪಾಯವಾಗಿದೆ. ಅದು ದಮ್ಮನ್ನು ಕ್ಷಣಿಕವಾಗಿ ನೊಂದಿಸದೆ, ಬೇರು ಸಹಿತ ಕಿತ್ತೊಗೆದು ಗುಣಮಾಡುತ್ತದೆ. ಅದು ತೆಗೆದುಕೊಳ್ಳಹತ್ತಿದ ಕೂಡಲೆ ಕೆಮ್ಮು ನಿಲ್ಲುವುದು. ಶೌಚದ ತೊಂದರೆ ಉಳಿಯುವುದಿಲ್ಲ. ಪಚನಕ್ರಿಯೆಯು ನೆಟ್ಟಗಾಗುವುದು. ನಾವಕಾಶವಾಗಿ ತುಂಬಿ ಬಂದು, ಪುಪ್ಪುಸ ಗಟ್ಟಿಮುಟ್ಟಾಗಿ, ದಮ್ಮು ಹೆಸರುಳಿಯದೆ ನೆಟ್ಟಗಾಗುವುದು.

ರೂ. ೨-೮-೦. ರೂ. ೪-೨-೦. ರೂ. ೭-೦-೦ ಗಳಿಗೆ

ಸಣ್ಣ ದೊಡ್ಡ ಬಾಟ್ಲಿಗಳು ಎಲ್ಲ ಕಡೆಗಳಲ್ಲಿ ಸಿಗುತ್ತವೆ.

ಪತ್ತಾ :— ಡಾ. ಪುರೋಹಿತ ಫಾರ್ಮಸಿ, ಕೊಲ್ಹಾಪುರ

ಬೊಂಬೈ ಏಜಂಟ್ :— ಮೆಸರ್ಸ್ ವನಮಾಲಿ ಭೀಕಾ ಮತ್ತು ಕಂ. ಪ್ರಿನ್ಸೆಸ್ ಸ್ಟ್ರೀಟ, ಬೊಂಬೈ.

ಪುರೋಹಿತ ಶ್ವಾಸಹಾರಿ

ಕಣ್ಮರೆಯಾದ ಕರ್ನಾಟಕದ ವಿಭೂತಿ

ದಿವಂಗತ ಪಂಡಿತ ತಾರಾನಾಥರಾಯರು

(ಜೀವನಕಥೆ)

ಡಾ. ಗೋಪಾಲಕೃಷ್ಣರಾಯರು, ಎಲ್. ಎ. ಎಮ್. ಎಸ್.

★

ಕನ್ನಡದ ಘನತೆ, ಕರ್ನಾಟಕದ ವೈಶಿಷ್ಟ್ಯ ಎಂಬ ಮಾತುಗಳನ್ನು ನಾವೀಗ ಕೇಸರಿಡುವಂತೆ ಎಲ್ಲೆಲ್ಲೂ ಕೇಳುತ್ತಿದ್ದೇವೆ. ನಮ್ಮಲ್ಲಿ ಹೆಚ್ಚು ಮಂದಿಗೆ 'ಇಗೋ ಕನ್ನಡದ ಘನತೆ ಇಲ್ಲಿದೆ; ಕರ್ನಾಟಕದ ವೈಶಿಷ್ಟ್ಯವಿಲ್ಲಿದೆ' ಎಂದು ಸ್ಪಷ್ಟವಾಗಿ ಮನವರಿಕೆಯಾಗುವಂತೆ ಹೇಳಬರದಿದ್ದರೂ, ನಮ್ಮ ನಾಡು-ನುಡಿಗಳಿಗೆ ಒಂದು ಹೆಚ್ಚುಗಾರಿಕೆ, ವೈಶಿಷ್ಟ್ಯ— ಇದೆಯೆಂದು ನಾವೆಲ್ಲರೂ ದೃಢವಾಗಿ ನಂಬಿದ್ದೇವೆ. ಮತ್ತೆ ವ್ಯಕ್ತಿವಿಕಾಸಕ್ಕೆ ಹಾಗೆಯೆ ರಾಷ್ಟ್ರವಿಕಾಸಕ್ಕೆ ತನ್ನ ಘನತೆಯ ಬಗ್ಗೆ ಆತ್ಮ-ವಿಶ್ವಾಸವು ಅನಿವಾರ್ಯ. 'ನಾನೊಂದು ಕೀಳುಹುಳು' ಎಂಬ ಅವರತ್ವ ಭಾವ (ಇನ್‌ಫೀರಿಯೋರಿಟೀ ಕಾಂಪ್ಲೆಕ್ಸ್) ದಲ್ಲಿ ನರಳುತ್ತಿರುವ ಜನತೆಯು ಒಂದು ರಾಷ್ಟ್ರವೆನಿಸಬೇಕಾದರೆ, ಅದಕ್ಕೆ ಆತ್ಮಘನತೆಯ ಸಾಕ್ಷಾತ್ಕಾರವನ್ನು ಮಾಡಿಸಿ, ಹೆಮ್ಮೆಯಿಂದ ತಲೆಯೆತ್ತಿ ನಡೆಯುವ ಕಸುವನ್ನು ಊದಬೇಕು. ಜನತೆಯು ಅವರತ್ವ ಭಾವವನ್ನು ಕಳೆದು ಅಮರತ್ವ ಭಾವವನ್ನು ಸ್ಥಾಪಿಸಬಲ್ಲ ಮಹಾ ಸ್ತ್ರೀ-ಪುರುಷರಿಗೇ ಆ ರಾಷ್ಟ್ರದ 'ವಿಭೂತಿ'ಗಳೆನ್ನುವರು.

ಪಂಡಿತ ತಾರಾನಾಥರು

ನಾವು ಚಿಕ್ಕವರಾಗಿದ್ದಾಗ ನಮಗೆ ಸಿಕ್ಕಿದ ಶಿಕ್ಷಣವೆಂದರೆ 'ಆರಂಭ ಶೂರಾಃ ಖಲು ದಾಕ್ಷಿಣಾತ್ಯಾಃ' ಎಂಬುದು. ನಮ್ಮ ರಂಗಭೂಮಿಗಳಲ್ಲಿ ಮರಾಟಿ ನಾಟಕಗಳ ವೈಭವ. ಹಾಡಬಲ್ಲವರೆಂದರೆ '**ಬಾಲಗಂಧರ್ವ**'ರೊಬ್ಬರೇ ಎಂದು ನಮ್ಮ ನಿಶ್ಚಿತಾಭಿಪ್ರಾಯ. ನಮ್ಮ ಪೂಜೆಗೆ ಯೋಗ್ಯನಾದ ವೀರನೆಂದರೆ ಶಿವಾಜಿಯೊಬ್ಬನೆ. ಕನ್ನಡ ನುಡಿಯೋ, ಗಡಿಗೆಯಲ್ಲಿ ಹರಳು ಹಾಕಿ ಅಲ್ಲಾಡಿಸಿದಷ್ಟು ಒರಟು. ಕನ್ನಡಿಗರೋ ಹೊಸ ವಿಜ್ಞಾನ-ಬೆಡಗುಗಳನ್ನರಿಯದ ಅನಾಗರಿಕರು! ಇಂತಹ ಆತ್ಮಶೂನ್ಯ ಪರಿಸ್ಥಿತಿಯಲ್ಲಿ 'ಕರ್ನಾಟಕವೂ ಹಿಂದೊಮ್ಮೆ ಮಹಾರಾಷ್ಟ್ರವಾಗಿತ್ತು. ಮಹಾರಾಷ್ಟ್ರೀಯರಿಗಿಂತಲೂ ಮಹಾನ್ ರಾಷ್ಟ್ರವೊಂದನ್ನು ನಾವು ಕಟ್ಟಿದ್ದೆವು. ಭಾರತೀಯ ಕಲಾ, ಸಂಸ್ಕೃತಿ, ಸಮಾಜಗಳು ಮಾನವ ರಾಕ್ಷಸರ ಕಾಲ್ತುಳಿತಕ್ಕೆ ಸಿಕ್ಕಿ ನರಳುತ್ತಿರುವಾಗ, ಅವಕ್ಕೆ ಆಸರೆಗೊಟ್ಟು ಕಾಪಾಡಿ ಕಳೆಗೊಟ್ಟುದು ನಮ್ಮರಾಷ್ಟ್ರವೇ' ಎಂದು ಹೇಳುವ ಎದೆಯನ್ನು ಯಾರಾದರೂ ತೋರಿಸಿದರೆ, ಅವರನ್ನು ನಾವೇ ಹುಚ್ಚರೆಂದು ಹೀಗಳೆಯುತ್ತಿದ್ದೆವು.

ಏಕೆಂದರೆ 'ಗಿಡದ ಗುಣವನ್ನು ಮೊಳಕೆಯಲ್ಲಿ ನೋಡು' ಎಂಬಂತೆ 'ಮರದ ಗುಣವು ಫಲದಲ್ಲಿಯೂ ತೋರಬೇಕು' ಎಂಬುದೂ ಸತ್ಯವಲ್ಲವೇ? ಇಲ್ಲದಿದ್ದರೆ ಭಿಕ್ಷುಕನ ಮುತ್ತಜ್ಜನು ಭೂಪಾಲನಾಗಿದ್ದನೆಂಬ ಮಾತಿನಷ್ಟೇ ಅದು ನಿರಾಶೆಯ ನುಡಿಯಾಗುವುದು. 'ಹಿಂದಿನ ಪುರಾಣ ಹಾಗಿರಲಿ; ಇಂದಿನ ನಿಮ್ಮ ಬೊಗಳೆ ನೋಡಿಕೊಳ್ಳಿರಿ. ನಿಮ್ಮಲ್ಲಿ ಕವಿಗಳು, ಮುಂದಾಳುಗಳು, ಕಲಾವಿದರು, ಪತ್ರಿಕೆಗಳು ಮತ್ತು ಮಹಾವಿದ್ಯಾಲಯಗಳು ಹೆಸರಿಗಾದರೂ ಇವೆಯೇ? ಮಹಾರಾಷ್ಟ್ರಕ್ಕೆ ಗೋಖಲೆ ಸಾವರಕರ, ತಿಲಕರಿದ್ದಾರೆ, ಗುಜರಾತಕ್ಕೆ ಮಹಾತ್ಮರಿದ್ದಾರೆ, ಪಂಜಾಬಕ್ಕೆ ಲಜಪತರಾಯರಿದ್ದಾರೆ. ಹೀಗೆಯೆ ಹುಡುಕುತ್ತ ಹೋಗಿರಿ, ಒಂದೊಂದು ಪ್ರಾಂತಕ್ಕೆ ಬಿಪಿನಚಂದ್ರ, ಅರವಿಂದ, ರವೀಂದ್ರ, ದಾಸರಂತಹ ಒಬ್ಬಿಬ್ಬರಾದರೂ ವಿಭೂತಿಗಳು ನಿಮಗೆ ಸಿಕ್ಕುವರು. ಆದರೆ ಕರ್ನಾಟಕದಲ್ಲಿ ಯಾರಿದ್ದಾರೆ? ಭಾರತದಲ್ಲೆಲ್ಲ ಹೆಸರುವಾಸಿಯಾದ ಒಬ್ಬ ಕನ್ನಡಿಗನ ಹೆಸರನ್ನು ಹೇಳಿರಿ ನೋಡೋಣ' ಎಂದು ನಮ್ಮ ನೆರೆನಾಡಿನ ಗೆಳೆಯರು ಮೂದಲಿಸುವಾಗ, ನಮ್ಮ ಎದೆಯಲ್ಲಿ ಯಮಯಾತನೆಯ ಕೊರಗು ಕೊರೆಯುತ್ತಿತ್ತು. ಪರಪುಟ್ಟರಂತೆ ಬೆಳೆದ ನಮಗೆ ನೆರೆಮನೆಯ ಸೊಗಸು-ಶ್ರೇಷ್ಠತೆಗಳೆ ಮನಮೆಚ್ಚಿದ್ದುವು. ವೆಂಕಟಪ್ಪನವರಂತಹ ಕಲಾವಿದರು ಎಲ್ಲಿಯೋ ಮುದುಗಿ ಕುಳಿತಿದ್ದರು. ವಿಶ್ವೇಶ್ವರಯ್ಯನವರಂತಹ ಜಗತ್ಪ್ರಸಿದ್ಧ ಪುರುಷರ ಸುದ್ದಿಯೆ ನಮ್ಮ ಕಿವಿಗೆ ಮುಟ್ಟಿರಲಿಲ್ಲ. ವೀಣೆ ಶೇಷಣ್ಣ, ಬಿಡಾರದ ಕೃಷ್ಣಪ್ಪನವರು ನಮ್ಮ ಕಣ್ಣೆದುರು ಮಿಂಚಿದುದು ಬೆಳಗಾಂವಿಯ

ಕಾಂಗ್ರೆಸ್ಸಿನ ಸಮಯಕ್ಕೆ ಅಷ್ಟೆ! ಅದಕ್ಕೂ ಮುಂಚೆ, ನಾವು ಬಹಳ ವಿಚಾರಮಾಡಿ ತಲೆ ಕೆರೆದುಕೊಂಡು ತಕ್ಕಮಟ್ಟಿಗೆ ಉಚ್ಚರಿಸಬಹುದಾಗಿದ್ದ ಒಂದು ಹೆಸರೆಂದರೆ **ದೇಶಪಾಂಡೆ ಗಂಗಾಧರರಾಯರದು**—ಎಂದು ಹೇಳಿದರೆ ವಾಚಕರು ಬಿದ್ದು ಬಿದ್ದು ನಗಬಹುದು (ಕರ್ನಾಟಕಕ್ಕೂ ಈ ಶ್ರೀಯುತರಿಗೂ ಇರುವ ಸಂಬಂಧವನ್ನು ವಿವರಿಸುವ ಆಗತ್ಯವೇ ಇಲ್ಲವಷ್ಟೆ ?). ನಿಮ್ಮ ಅಪ್ಪನ ಹೆಸರು ಹೇಳೆಂದ ಕೂಡಲೆ ಹೇಳಲುಬಾರದವರಿಗೆ, ಅಪ್ಪನ ಅಸ್ತಿತ್ವದ ಬಗೆಗೇ ಸಂದೇಹವುಂಟಾಗುವಂತೆ ನಮ್ಮ ಸ್ಥಿತಿಯಾಗಿತ್ತು. ಎಂತಹ ಶೂನ್ಯತೆಯದು! ಎಂತಹ ಆತ್ಮಹೀನ ವಾತಾವರಣ!

ಇಗೋ!, ಇಂತಹ ಸ್ವತ್ವನಾಶಕಾರಿಯಾದ ನಿರಾಶಾಮಯ ಪರಿಸ್ಥಿತಿಯಲ್ಲಿ ನಾವು ಕುದಿಯುತ್ತಿರುವಾಗಲೆ, ನಮ್ಮವರಾದ—ಅಚ್ಚ ಕನ್ನಡಿಗರಾದ—ಪಂಡಿತ ತಾರಾನಾಥರಾಯರು ಒಮ್ಮೆಲೆ ಧಾರವಾಡದಲ್ಲಿ ಪ್ರಕಟವಾದರು. ನಿಜವಾಗಿಯೂ, ಅವರ ವ್ಯಾಖ್ಯಾನವನ್ನು ಅಂದು ಕೇಳಿದ ನಮಗೆ ತುಸುಹೊತ್ತು ಆನಂದದ ಸಿಡಿಲು ಬಡಿದಂತಾಯಿತು! ತಂಗುಳು ತಿನ್ನುವ ಬಡವನಿಗೆ ಲಕ್ಷ ರೂಪಾಯಿಯ ಲಾಟರಿ ಸಿಕ್ಕಂತಾಯಿತು. ಬಾಯಾರಿ ಸಾಯುತ್ತಿರುವವನಿಗೆ ಅಮೃತಝರಿಯೊಂದು ದೊರಕಿದಂತಾಯಿತು.

ಉಂಗುರುಗೂದಲುಗಳಿಂದ ಅಲಂಕೃತವಾದ ಆ ದೊಡ್ಡ ತಲೆ; ಉದ್ದವಾದ ಮೂಗು, ವಿಶಾಲವಾದ ಹಣೆ ಉಳ್ಳ ಗೌರ ವರ್ಣದ ಸುಂದರ ತೇಜಸ್ವಿಯಾದ ಮೊಗ; ಎಂತಹ ಹೆಮ್ಮೆಯವರನ್ನೂ ಸ್ತಂಭೀಕರಿಸಿ ಹೃದಯದಾಳದವರೆಗೆ ತೂರಿಹೋಗುವ ತೀಕ್ಷ್ಣ ದೃಷ್ಟಿ—ಇವನ್ನು ನೋಡಿ 'ಈ ಮಹಾಪುರುಷರು ನಿಜವಾಗಿಯೂ ಕನ್ನಡಿಗರಾಗಿರಬಹುದೇ? ಇಂತಹ ಓಜಸ್ವಿ ವ್ಯಕ್ತಿಗಳನ್ನು ಪಡೆಯುವಷ್ಟು ಕನ್ನಡನಾಡು ಭಾಗ್ಯಶಾಲಿಯೆ?' ಎಂದು ನಾವು ಕೆಲಕಾಲ ಸಂಶಯದಿಂದ ಬಳಲಿದೆವು. ಆದರೆ ಕನ್ನಡಮ್ಮನು ನಿಶ್ಚಯವಾಗಿ ಬಹುರತ್ನೆಯಾಗಿದ್ದಾಳೆ. ಅವಳಲ್ಲಿರುವ ಅಸಂಖ್ಯ ರತ್ನಗಳಲ್ಲಿ ಇದೊಂದು ಅಪೂರ್ವರತ್ನವೆಂಬುದು ಆ ಮಹಾಪುರುಷರ ಅಂದಿನ ಅಸ್ಖಲಿತ ವಾಕ್ಪ್ರವಾಹದಿಂದ ನಮಗೆ ಮನವರಿಕೆಯಾಯಿತು.

ಕರ್ನಾಟಕಕ್ಕೆ ಆಗಬೇಕಾಗಿದ್ದುದು ಸ್ವತ್ವದ ಹಿರಿಮೆ. ಆ ಕನ್ನಡ ನಾಡು-ನುಡಿಗಳ ಹಿರಿಮೆಯ ನಂಬಿಕೆಯನ್ನು ಸಾವಿರಾರು ವ್ಯಾಖ್ಯಾನ-ಪುಸ್ತಕ-ಪತ್ರಿಕೆಗಳಿಂದಲೂ ಸ್ಥಾಪಿಸುವುದು ಆಗ—ಜನತೆಯು ಅಪರತ್ವದ ಕೆಸರಿನಲ್ಲಿ ಹೊರಳಾಡುತ್ತಿದ್ದಾಗ—ಸಾಧ್ಯವಾಗಿತ್ತೋ ಇಲ್ಲವೋ ಎಂಬುದನ್ನು ಹೇಳಲಾಗದು. ಆದರೆ ಆ ಮಹಾಕಾರ್ಯವನ್ನು ಪಂಡಿತ ತಾರಾನಾಥರಾಯರು ತಮ್ಮ ತೇಜಸ್ವಿಯಾದ ವಿಭೂತಿತ್ವದ ಪ್ರಥಮದರ್ಶನ ಮಾತ್ರದಿಂದಲೆ ಮಾಡಿದರೆಂದರೆ, ಖಂಡಿತವಾಗಿ ಅತಿಶಯೋಕ್ತಿಯೆನಿಸಲಾರದು. ಹೊಟ್ಟೆ ಮೊದಲನೆಯದಾಗಿ ನಮ್ಮನ್ನು ಅನಾಥನಾಡಿಗರೆಂದು ಕೀಳುಗಳೆಯುತ್ತಿದ್ದ ನೆರೆನಾಡಿಗರಿಗೆ ಕಣ್ಣಿಗೊಂದು ಏಟು ಕೊಟ್ಟಂತಾದುದು ಅವರ ವ್ಯಾಖ್ಯಾನ ಪ್ರಭಾವದಿಂದ. ನಾವು ಆ ಮೊದಲು ವಿವಿಧ ಭಾಷೆಯ ವ್ಯಾಖ್ಯಾನ-ಕೀರ್ತನಗಳನ್ನು ಕೇಳಿ 'ಕನ್ನಡವು ಒರಟು ಭಾಷೆ! ಆದರಲ್ಲಿ ಮಿಕ್ಕ ಭಾಷೆಗಳ ಸವಿ ಹಾಗೂ ಭಾವಗಾಂಭೀರ್ಯವು ಬರುವುದು ಅಶಕ್ಯ! ವಕ್ತೃತ್ವದಲ್ಲಿ ಓಘವು ತುಂಬಬೇಕಾದರೆ ಕನ್ನಡವು ಮರಾಟಿಯ ಮುತ್ತುಗಳಿಂದ ಹೆಣೆಯಲ್ಪಡಬೇಕು!' ಎಂದು ನಾವು ದೃಢವಾಗಿ ನಂಬಿದ್ದೆವು. ಈ ಹುಸಿನಂಬಿಗೆಯನ್ನು ಬೇರುದೆಸೆಯಿಂದ ಕಿತ್ತು ಕುಪ್ಪಳಿಸಿದುದು ಪಂಡಿತ ತಾರಾನಾಥರಾಯರ ಪರಿಶುದ್ಧ ಕನ್ನಡ ಉಪನ್ಯಾಸದ ವಜ್ರಾಘಾತ! 'ವಜ್ರಾಘಾತ' ಶಬ್ದವು ಕಠೋರವೆಂಬುದು ನಿಜ. ಆದರೆ ದಂಡಾಪತಾನಕದಿಂದ ಮೈ-ಕೈಯೆಲ್ಲ ಮರಗಟ್ಟಿ ಮೂರ್ಛೆಹೋದಂತಿದ್ದ ಕನ್ನಡಿಗರ ಜಡಜೀವವನ್ನು ಬಡಿದು ಅಲುಗಾಡಿಸಿ ಚೇತರಿಸುವ ಅದ್ಭುತವಾದ ಬಿಗುಪು, ಕಸುವುಗಳುಳ್ಳ ಆ ಮಹಾಪುರುಷರ ವಕ್ತೃತ್ವವು ತಾತ್ಪೂರ್ತಿಕವಾಗಿ ವಜ್ರಾಘಾತದಂತೆಯೆ ಭಾಸವಾಯ್ತು. ಆದರೆ ಅವರ ಭಾಷಣದಲ್ಲಿ ಬಿಗುಪು ಬಲವಾಗಿದ್ದರೂ ಬಿರುಸಾಗಿರಲಿಲ್ಲ; ಕಸುವು ಸಾಕಷ್ಟು ಇದ್ದರೂ ಕ್ರೂರವಾಗಿರಲಿಲ್ಲ.

'ಆಹಹ! ಕನ್ನಡದಲ್ಲಿ ಇಷ್ಟು ಮನೋಹರವಾಗಿ, ಪರಿಣಾಮಕಾರಿಯಾಗಿ, ಗಂಭೀರವಾಗಿ, ಸವಿಯಾಗಿ— ವಿಷಯಗಳನ್ನು ಬಗೆಯಲ್ಲಿ ಅಚ್ಚೊತ್ತಿದ್ದಂತೆ— ಗಂಟೆಗಟ್ಲೆ ಮಾತಾಡುವುದು ಸಾಧ್ಯವಿದೆಯಲ್ಲವೇ? ನಿಜವಾಗಿ ಇಂತಹ ಕನ್ನಡದ ನುಡಿಯುಳ್ಳ ನಾವೇ ಧನ್ಯರು' ಎಂಬ ಕನ್ನಡದ ಹಿರಿಮೆಯ ಬೀಜಾರೋಪಣವು ತಾರಾನಾಥರ ಒಂದೇ ಉಪನ್ಯಾಸದಿಂದ ಆಗಿಬಿಟ್ಟಿತು. ತೊಡಕಿನ ವಿಚಾರಗಳನ್ನು ಸುಲಲಿತವಾಗಿ ತಿಳಿಸುವ ಶೈಲಿ. ಪ್ರಾಸಾಲಂಕಾರಗಳಿಂದ ಕೂಡಿದ ಅಚ್ಚ ಕನ್ನಡ ಪ್ರಯೋಗಗಳು. ಮೊದಲು ವಿಚಾರಗಳ ಹುಯಿಲೆಬ್ಬಿಸಿ, ಶ್ರೋತೃಗಳು ಪ್ರಕ್ಷುಬ್ಧರಾಗಿ ಕೇಳುತ್ತಿರುವಾಗ, ಒಮ್ಮೆಲೆ ಮಧುರಗಾನದ ಮಿಂಚೊಂದನ್ನು ಬೀರಿ ಸ್ತಬ್ಧರನ್ನಾಗಿಸುವ ಸವಿಯಾದ ಕಂಠ. ವಿಷಯಸಮರ್ಥನೆಗಾಗಿ ಹದಿನೆಂಟು ಭಾಷೆಗಳ ಅವಿಚ್ಛಿನ್ನ ಉಲ್ಲೇಖಧಾರೆ. ವಿಷಯದ ಒಂದು ಬೇರನ್ನು ಹಿಡಿದು ಏರುತ್ತ ಏರುತ್ತ ಅದರ ಅಸಂಖ್ಯ ಶಾಖೋಪಶಾಖೆಗಳನ್ನೆಲ್ಲ ಚಿತ್ರಿಸಿ, ಮುಖ್ಯವಾದುವುಗಳನ್ನು ಬಿಂಬಿಸಿ, ಕೊನೆಗೆ ಅವೆಲ್ಲವನ್ನೂ ಬೇರಿನಲ್ಲಿ ಬೆರಸಿ ಕಳಸವಿಡುವ ಅದ್ಭುತ ಬುದ್ಧಿಯ ನೇಕಾರಿಕೆ. ಪ್ರತಿಯೊಂದು ವ್ಯಾಖ್ಯಾನದಲ್ಲೂ ಗಾನ, ಯೋಗ, ವೈದ್ಯ, ವೇದಾಂತ, ವಿಜ್ಞಾನ, ಕಾವ್ಯ, ಕಲಾ, ಸಾಹಿತ್ಯಗಳು ಮನದಣಿ ಕುಣಿದಾಡಿ ಮೈಮರೆತು ಹೋಗುತ್ತಿದ್ದುವು. ಒಂದೇ ಮಾತಿನಲ್ಲಿ ಹೇಳುವುದಾದರೆ ವಿಷಯಗಾಂಭೀರ್ಯ, ಭಾಷಾಸೌಂದರ್ಯಗಳಿಂದ ಪಂಡಿತರ ಪ್ರತಿಯೊಂದು ವ್ಯಾಖ್ಯಾನವೂ ಸರ್ವಾಂಗಪರಿಪೂರ್ಣವಾಗಿರುತ್ತಿತ್ತು.

ಅವರ ತೀರ ಮೊದಲಿನ ವ್ಯಾಖ್ಯಾನ ಕೇಳುವುದರಿಂದಲೆ ಅವರೊಬ್ಬ ಬಂಡುಗಾರರೆಂದು ಸ್ಪಷ್ಟವಾಗುವಂತಿತ್ತು. ಅವರ

ಕ್ಕಿಡಿಯು ಬಾಳೇ ಹಲವು ಬಂಡಾಯಗಳಿಂದ ತುಂಬಿತ್ತು. ಅವರ ಬಾಳಿನ ಗುರಿಯೆ ಬಂಡಾಯವಾಗಿತ್ತೆಂದರೂ ತಪ್ಪಾಗಲಿಕ್ಕಿಲ್ಲ. 'ಕಟ್ಟುವುದು ನನ್ನ ಕೆಲಸವಲ್ಲ; ಕೆಡಕಾದುದನ್ನೆಲ್ಲ ಕೆಡಹುವುದೆ ನನ್ನ ಗುರಿ; ಕಟ್ಟುವವರು ನಾಳೆ ಬಂದು ಸೊಗಸಾಗಿ ಕಟ್ಟಲಿ; ಬುನಾದಿಗೆ ಹತ್ತಿದ ಹೆಗ್ಗಣಗಳನ್ನು ಮೊದಲು ನಿರ್ಮೂಲಗೊಳಿಸುವಾ, ಮುಂದೆಬರುವವರು ಚಂದವಾದ ಕಟ್ಟಡವನ್ನು ಏರಿಸಲಿ' ಎಂದು ಸುಮಾರು ಹದಿನಾಲ್ಕು ವರ್ಷದ ಹಿಂದೆಯೆ ಅವರು ನನಗೊಂದು ಪತ್ರದಲ್ಲಿ ಬರೆದಿದ್ದರು. ಅವಿವೇಕವು ಕಂಡು ಬಂದಲ್ಲೆಲ್ಲ ಅದರ ವಿರುದ್ಧ ಬಂಡಾಯಕ್ಕೆ ಅವರು ಯಾವಾಗಲೂ ಸಿದ್ಧರಾಗಿದ್ದರು.

೧೮೯೧ ನೆಯ ಜೂನ್ ೫ನೆಯ ತಾರೀಕಿನ ದಿನ, ತಾರಾನಾಥರು ಮಂಗಳೂರಿನಲ್ಲಿ ಹುಟ್ಟಿದರು. ಬಾಲ್ಯದಲ್ಲಿಯೇ ಅವರಿಗೆ ತಾಯಿಯಿಂದ ಧರ್ಮಬೋಧೆಯೂ, ತಂದೆಯಿಂದ ಸಂಗೀತ-ದೀಕ್ಷೆಯೂ ಆಯಿತು. ಪ್ರಾಥಮಿಕ ವಿದ್ಯಾಭ್ಯಾಸದಲ್ಲಿ ಅವರು ಬೇಕಾದಷ್ಟು ಚುರುಕಾಗಿದ್ದರೂ, ಶಿಕ್ಷಕರ ಅವಿವೇಕಪೂರ್ಣ ಅಪ್ಪಣೆಗಳ ವಿರುದ್ಧ ಬಂಡಾಯವೆಬ್ಬಿಸುತ್ತಿದ್ದರು. ಮೇಲಿಂದ ಮೇಲೆ ವರ್ಗದಲ್ಲಿ ಬೆಂಚಿನ ಮೇಲೆ ನಿಲ್ಲುವ ಶಿಕ್ಷೆಯು ಅವರಿಗಾಗುತ್ತಿತ್ತು. ಅದಕ್ಕಾಗಿ ಶಾಲೆ ತಪ್ಪಿಸುವ ಚಟವು—ರವೀಂದ್ರರಂತೆ—ಅವರಿಗೆ ಬಹಳವಾಗಿತ್ತು. 'I was more a truant than a student' ಎಂದು ಇಲ್ಲಿಯ ಕರ್ನಾಟಕ ಕಾಲೇಜಿನ ವ್ಯಾಖ್ಯಾನದಲ್ಲಿ ಈ ಮಾತನ್ನು ಒಪ್ಪಿದ್ದರು. ಅವರ ಪ್ರೌಢ ಶಿಕ್ಷಣವು ಇಂಟರ್‌ವರೆಗೆ ಹೈದರಾಬಾದಿನಲ್ಲಿ, ಅವರ ಭಾವಂದಿರಾದ ಶ್ರೀ. ಎಂ. ಬಿ. ಸುಬ್ರಾವ್ ಬಿ. ಎ. (ಡಿ. ಆಯ್. ಇ.) ಅವರೊಡನೆ ಇರುವಾಗ ಆಯಿತು. ಆಗಲೂ ಪ್ರೊಫೆಸರರ ಒಂದು ಅವಿವೇಕದ ಆಜ್ಞೆಯ ವಿರುದ್ಧವಾಗಿ ಬಂಡಾಯವೆಂದೇ ಅವರು ಕಾಲೇಜಿಗೆ ಶರಣುಹೊಡೆದರು. ಮುಂದೆ ಕೆಲವು ದಿನಗಳಲ್ಲಿಯೆ ಮೆಡಿಕಲ್ ಕಾಲೇಜಿಗೆ ಸೇರಿದರು. ಆದರೆ ಅವರ ಅದ್ಭುತ ಪ್ರತಿಭೆಗೆ ಬೆಚ್ಚಿಬೆರಗಾದ ಕಾಲೇಜಿನ ಪ್ರಾಧ್ಯಾಪಕರು, ಅವರನ್ನು ವಿದ್ಯಾರ್ಥಿದಶೆಯಿಂದ ಅದೇ ಕಾಲೇಜಿನಲ್ಲಿಯೆ ಗೌರವಾಧ್ಯಾಪಕ ಪಟ್ಟಕ್ಕೇರಿಸಿದರು. ಆದರೆ ರಾಜಕೀಯ, ಸಾಮಾಜಿಕ ಅನಾಚಾರಗಳ ವಿರುದ್ಧವಾಗಿ ಅವರು ಮೇಲಿಂದ ಮೇಲೆ ಬಂಡನ್ನು ಎಬ್ಬಿಸುತ್ತಿದ್ದುದರಿಂದ, ಅಧಿಕಾರಿಗಳ ಕಾಟಕ್ಕೆ ಗುರಿಯಾಗಬೇಕಾಗಿ, ರಾಯಚೂರನ್ನು ತಮ್ಮ ಚಟುವಟಿಕೆಗಳ ಕೇಂದ್ರವನ್ನಾಗಿ ಮಾಡಿಕೊಂಡರು. ಅಲ್ಲಿ **ಹಮ್‌ದರ್ದ್** (ಪ್ರೇಮ) ಎಂಬ ಹೆಸರಿನ ಶಾಲೆಯನ್ನು ಸ್ಥಾಪಿಸಿ, ಅಲ್ಲಿ ಕನ್ನಡವನ್ನು ಮುಖ್ಯ ವಿಷಯವನ್ನಾಗಿಟ್ಟುಕೊಂಡವರಿಗೆ ಮಾತ್ರ ಪ್ರವೇಶವೀಯುವ ಏರ್ಪಾಡನ್ನು ಮಾಡಿದರು. ಅದಕ್ಕೂ ಪೂರ್ವದಲ್ಲಿ **ಉತ್ತಮದಾಸ, ಪರಮಹಂಸ, ಯೋಗೀಶ್ವರಾನಂದ,** ಶ್ರೀಮಂಗಯ್ಯ ಮುಂತಾದ ಸಾಧುವರ್ಯರ ಸಹವಾಸ ಮಾಡಿ, ಆಯುರ್ವೇದ, ವೇದಾಂತ, ಯೋಗಗಳ ದೀಕ್ಷೆಯನ್ನು ಪಡೆದರು. ರಾಯಚೂರಿನಲ್ಲಿರುವಾಗಲೆ ಅವರು, ಹೆಚ್ಚು ಸ್ಪಷ್ಟವಾಗಿ ನಿಜಾಮರ ಅನ್ಯಾಯದ ಆಡಳಿತದ ವಿರುದ್ಧವಾಗಿ ಭಾಷಣ, ಲೇಖನಗಳ ಮೂಲಕ ಬಂಡೆಬ್ಬಿಸಿದುದರಿಂದ, ನಿಜಾಮರ ವಕ್ರದೃಷ್ಟಿಗೆ ಗುರಿಯಾಗಿ, ನಿಜಾಮ ಸಂಸ್ಥಾನದಿಂದ ಗಡಿಪಾರು ಮಾಡಲ್ಪಟ್ಟರು. ಅಲ್ಲಿಂದ ನಡುರಾತ್ರಿಯಲ್ಲಿಯೆ ತೊಟ್ಟ ಅಂಗಿ, ಉಟ್ಟ ಪಂಚೆಯಲ್ಲಿಯೆ ಅವರು ತುಂಗಭದ್ರೆಯನ್ನು ದಾಟಿ, ಈಚೆಯ ದಡದಲ್ಲಿ (ಬ್ರಿಟಿಶ್) ಒಂದು ಪಾಳುಗುಡಿಯ ಕಟ್ಟೆಯ ಮೇಲೆ ನೆಲಸಿದರು. ಅಲ್ಲಿ ಸುತ್ತುಮುತ್ತು ಹಳ್ಳಿಗಳಲ್ಲಿ ವಾಂತಿಭೇದಿಯ ಉಪದ್ರವವು ಭಯಂಕರವಾಗಿತ್ತು. ಎಲ್ಲ ರೋಗಿಗಳಿಗೂ ಪಂಡಿತ ತಾರಾನಾಥರಾಯರು ಧರ್ಮಾರ್ಥವಾಗಿ ಔಷಧೋಪಚಾರಮಾಡಿ, ಏಕಾಂಗಿಗಳಾಗಿ ದುಡಿದು ಗುಣಪಡಿಸಿದ್ದರಿಂದ, ಅವರ ಹೆಸರು ಅಲ್ಲೆಲ್ಲ ಹಬ್ಬಿಕೊಂಡಿತು. ಅವರು ಬರಿ ವೈದ್ಯರಾಗಿರದೆ ಅಪಾರಜ್ಞಾನದ ಖನಿಗಳಾದ ಸಾಧುಗಳೂ ಆಗಿರುವರೆಂಬುದು ಬಹುಬೇಗ ಜನತೆಗೆ ತಿಳಿದುಬಂದು, ದೈಹಿಕ ರೋಗಿಗಳೂ, ಭವರೋಗಿಗಳೂ ಆ ಹಾಳುಕೊಂಪೆಗೆ ಓಡಿಬರತೊಡಗಿದರು. ಹೊಲಗಳು ದಾನವಾಗಿ ಬಂದುವು. ಬಡರೋಗಿಗಳು ಗುಡಿಸಿಲು ಕಟ್ಟಿಕೊಟ್ಟರು. ಸಿರಿವಂತ ರೋಗಿಗಳು ಔಷಧಗಳನ್ನು ತರಿಸಿಕೊಟ್ಟರಲ್ಲದೆ ಆಸ್ಪತ್ರೆಯನ್ನು ಕಟ್ಟಿಸಿಕೊಟ್ಟರು.

ಹೀಗೆ ಪಂಡಿತರ ತಪಃಪ್ರಭಾವದಿಂದ, ಹಾಳು ಕೊಂಪೆಯಾಗಿದ್ದ ತುಂಗಭದ್ರೆಯ ಬಯಲುಗಾಡಿನಲ್ಲಿಯೆ '**ಪ್ರೇಮಾಯತನ**' ಆಶ್ರಮವು ಚಿಗುರಿ ಬಲಿತು, ಜ್ಞಾನ, ಆರೋಗ್ಯ, ಶಾಂತಿಗಳಿಗಾಗಿ ಹಂಬಲಿಸುವವರ ಎದೆಯನ್ನು ತಣಿಸಹತ್ತಿತು. ಅದೇ ಸಮಯಕ್ಕೆ ಅಲ್ಲಿಗೆ ಹೋಗಿದ್ದ, **ಶ್ರೀ. ಕಡಪಾ ರಾಘವೇಂದ್ರರಾಯರು**, ಆ ಕನ್ನಡದ ಜೀವಜ್ಯೋತಿಯನ್ನು ನೋಡಿ ದಂಗುಬಡಿದರು. ಅಂತಹ ಅಪ್ರತಿಮ ತಪೋಜ್ಞಾನದ ಕುಸುಮದ ಕಂಪು ಅಡವಿಪಾಲಾಗುತ್ತಿದ್ದದನ್ನು ಸಹಿಸದೆ ಅವರು, ತಾರಾನಾಥರಾಯರ ಪಾದಕ್ಕೆ ಬಿದ್ದು ಅಂಗಲಾಚಿ, ಧಾರವಾಡಕ್ಕೆ ಕರೆತಂದರು, ಆ ಗುಹೆಯಲ್ಲಿದ್ದ ಕರ್ನಾಟಕದ ಭಾಗ್ಯದೀಪವು ಮಹಿಯಲ್ಲೆಲ್ಲ ಬೆಳಗುವಂತಾದುದು ಅಂದಿನಿಂದಲೆ.

ಅವರ ಮೊದಲ ವ್ಯಾಖ್ಯಾನವೆ ಅವರ ಬಂಡುಗಾರ ವೃತ್ತಿಯನ್ನು ವ್ಯಕ್ತಪಡಿಸಿತೆಂದು ಹೇಳಿದೆನಷ್ಟೆ! ಮೇಲೆ ಬರೆದ ಅವರ ಸಂಕ್ಷಿಪ್ತ ಚರಿತ್ರೆಯೂ ಅದೇ ಮಾತನ್ನು ಪುಷ್ಟೀಕರಿಸುತ್ತದೆ. ಅವರು ಸಹಜವಾಗಿ, ಹರಟೆಯಲ್ಲಿ, ತಮ್ಮ ನೂರಾರು ಹೋರಾಟಗಳನ್ನು ಮನಮುಟ್ಟುವಂತೆ ಉದಾಹರಿಸುತ್ತಿದ್ದರು. ಮತ್ತೆ ಧಾರವಾಡದಲ್ಲಿ ಮೊದಲಾಗಿ ಕನ್ನಡ ನಾಡಿನಲ್ಲೆಲ್ಲ ಹೆಣೆದುಕೊಂಡು ಬೆಳೆದ ಅವರ ವ್ಯಾಖ್ಯಾನಮಾಲೆಯಲ್ಲೂ, ಅನ್ಯಾಯ—ಅವಿವೇಕಗಳ ವಿರುದ್ಧ ಬಂಡಾಯದ ಬಂಡೇ (ಪರಾಗ) ತುಂಬಿತ್ತು. ಧರ್ಮ–ಕರ್ಮಗಳ ಅನಾಚಾರ, ಸ್ವಾಮಿ–ಗುರುಗಳ ದುರಾಚಾರ, ದೇವರು ದೆವ್ವಗಳ ಅತ್ಯಾಚಾರಗಳನು ಹುಟ್ಟಾ-

ಘೋಷವಾಗಿ ಬಯಲಿಗೆಳೆದರು. ಬರಿ ಕಾಲದ ಅಪವ್ಯಯಕ್ಕೆ ಕಾರಣವಾದ ಕಾಲ್ಪನಿಕ ಕಥೆ-ಕಾದಂಬರಿಗಳಿಗೆ ವಿನಾಸಲಾದ ಕನ್ನಡ ಸಾಹಿತ್ಯದಲ್ಲಿ ವಿಮರ್ಶೆ, ಮೂಢರೂಢಿಗಳ ಖಂಡನೆಗಳ ನವಯುಗವನ್ನು ಆರಂಭಿಸಿದರು. ಅದಕ್ಕಾಗಿ 'ಪ್ರೇಮ' ಎಂಬ ಮಾಸಪತ್ರಿಕೆಯನ್ನು ಹೊರಡಿಸಿ, ಒಂಬತ್ತು ವರ್ಷಗಳ ವರೆಗೆ ನಡೆಯಿಸಿದರು. ಪತ್ರಿಕೆಯಲ್ಲಿ ಕಾಮವಿಜ್ಞಾನದ ಲೇಖನಗಳನ್ನು ಬರೆಯಲು ಆರಂಭಿಸಿದವರಲ್ಲಿ ಅವರೇ ಮೊದಲ ಕನ್ನಡಿಗರು. ಶಿಷ್ಯವೃಂದವನ್ನು ಗೆಳೆಯರಂತೆ ನಡೆಯಿಸಿಕೊಂಡು, ಅವರಲ್ಲಿ ಸರ್ವಾಂಗಸುಂದರ ಜ್ಞಾನದ ಹಂಬಲವನ್ನು ಹುಟ್ಟಿಸಿ, ಅವರು ಕೂಡ ತಮ್ಮ ಬಂಡಾಯವನ್ನು ಮುಂದುವರಿಸುವಂತೆ ಹುರಿದುಂಬಿಸಿದರು.

ಅವರ ವಕ್ತೃತ್ವ, ವಿಷಯವಿವೇಚನೆ, ಹಾಗೂ ಔಷಧೋಪಚಾರಗಳ ವೈಭವದ ವಾಹಿನಿಯು ಪರಪ್ರಾಂತಗಳಿಗೂ ಪರದೇಶಗಳಿಗೂ ಹಬ್ಬಿ, ದೂರದೂರದಿಂದ ಜ್ಞಾನ ಮತ್ತು ಸ್ವಾಸ್ಥ್ಯದ ವಿದ್ವತ್‌ಭಿಕ್ಷುಗಳನ್ನು ಬರಮಾಡಿತು. ಅವರ ವಿಷಯಕ್ಕೆ ಆದರಭಾವವುಳ್ಳವರಲ್ಲಿ ಮಹಾತ್ಮಾಗಾಂಧಿ, ಕಮಲಾದೇವಿ, ಸರೋಜಿನಿದೇವಿ, ಟಿ. ರಾಘವಾಚಾರ್ಯ, ಪ್ರೊ. ರಾಧಾಕೃಷ್ಣನ್ ಮುಂತಾದ ಅಸಂಖ್ಯ ದೇಶೀಯ ಮಹನೀಯರಿರುವರಲ್ಲದೆ, ಪ್ರೊ. ಮದಾಮ ಕೆವಿ, ಪಾಶ್ಚಾತ್ಯ ವೈದ್ಯಕೀಯಲ್ಲಿ ಬಂಗಾರದ ಇಂಜೆಕ್ಷನ್ನಿನ ಸಂಶೋಧಕರಾದ ಫ್ರಾನ್ಸದ ಮೊಲಾರ್ಡ್, ಪೋಲಂಡಿನ ಅಲೆಕ್ಝಾಂಡರ್ ವಿನಾರ್ಡ್, ನೆದರಲಂಡಿನ ಸ್ಟರ್ಜ್ ಡಿರೆಕ್ಟರಾದ ಪ್ರೊ. ಪ್ರೀಡ್, ಗಾಂಧೀಜಿಯವರ ಮಿತ್ರರಾದ ಮಾರಿಸ್ ಫ್ರೀಡ್‌ಮನ್, ಫಾದರ್ ಎಲ್ವಿನ್ ಮುಂತಾದ ವಿದೇಶೀಯ ಮಹನೀಯರೂ ಭೇಟಿಯಾಗಿದ್ದಾರೆ. ಪಾಶ್ಚಾತ್ಯ ಘನವೈದ್ಯರಿಂದ ಗುಣಪಡಿಸಲಾಗದ ಬೇನೆಗಳಿಂದ ನರಳುತ್ತಿದ್ದ ವಿದೇಶೀಯ ರೋಗಿಗಳು, ತುಂಗಭದ್ರೆಯ ದಂಡೆಗೆ ಬಂದು ಗುಣಪಡೆದು ಹೋಗಿದ್ದಾರೆ. ೧೯೩೩ರಲ್ಲಿ ಅಮೇರಿಕೆಯಲ್ಲಿ ನಡೆದ ಪಾರ್ಲಿಮೆಂಟ ಆಫ್ ರಿಲಿಜನ್ಸ್‌ಗೆ ಭಾರತೀಯ ಪ್ರತಿನಿಧಿಯೆಂದು ಪಂಡಿತರಿಗೆ ಕರೆಬಂದಿರಬೇಕಾದರೆ, ಅವರ ಕೀರ್ತಿಯು ಅಲ್ಲಿ ಎಷ್ಟರಮಟ್ಟಿಗೆ ಹಬ್ಬಿತ್ತೆಂಬುದನ್ನು ಊಹಿಸಬಹುದು. ಟಿ. ರಾಘವಾಚಾರ್ಯರು ಪಾಶ್ಚಾತ್ಯ ನಾಟ್ಯಶಾಸ್ತ್ರಾಭ್ಯಾಸಕ್ಕೆ—ಯುರೋಪ ಪ್ರವಾಸಕ್ಕೆ—ಹೋದಾಗ ಪಂಡಿತಜಿಯವರ ಅಲ್ಲಿಯ ಮಿತ್ರರಿಗೆ ಪರಿಚಯಪತ್ರವನ್ನು ಒಯ್ದಿದ್ದರು. ಪಂಡಿತಜಿಯವರ ಪತ್ರವನ್ನು ನೋಡಿದ ಅಲ್ಲಿಯ ಘನವಿದ್ವಾಂಸರು 'ತಾರಾನಾಥರ ಶಿಷ್ಯರಾದ ತಮಗೆ ನಾವು ಕಲಿಸತಕ್ಕಂತಹದೇನೂ ಇಲ್ಲ' ಎಂದು ಪ್ರಶಂಸಿದರಂತೆ. ಇತ್ತೀಚೆಗೆ ಪಂಡಿತರಿಗೆ ಹೃದಯವಿಕಾರವು ಪ್ರಾರಂಭವಾದುದರಿಂದ, ಬೆಂಗಳೂರಿನಲ್ಲಿಯೆ ವಿಶ್ರಾಂತಿಗಾಗಿ ಉಳಿಯಬೇಕಾಯಿತು. ಆದರೂ ಅಲ್ಲಿಗೂ ವಿದೇಶೀಯ ಸ್ವದೇಶೀಯ ಮಹನೀಯರು ಬರುತ್ತಿದ್ದರು.

ಪಂಡಿತ ತಾರಾನಾಥರಾಯರ ಬಗ್ಗೆ ಹೀಗೆಯೆ ರಾಶಿ-ರಾಶಿಯಾಗಿ ಬರೆಯುತ್ತ ಹೋದರೂ ಮುಗಿಯುವುದಿಲ್ಲವೆಂಬುದು ವಾಚಕರಿಗೂ ಗೊತ್ತಿದೆ; ನನಗೂ ಗೊತ್ತಿದೆ. ಅವರು ಅಂತಹ ಮಹಾನುಭಾವರೂ ಅಸಂಖ್ಯ, ಗುಣ, ವಿದ್ಯಾ, ಕಲಾ ಖಣಿಗಳೂ ಆಗಿದ್ದರು. ಅಂತಹ ಕನ್ನಡ ವಿಭೂತಿಗಳು ಕಳೆದ ಅಕ್ಟೋಬರ್ ೩೧ನೆಯ ತಾರೀಖಿಗೆ ತೀರಿಕೊಂಡುದರಿಂದ, ಕರ್ನಾಟಕಕ್ಕೆ— ಭಾರತಕ್ಕೆ— ಉಂಟಾದ ಹಾನಿಯನ್ನು ಯಾವ ಲೆಕ್ಕಣಿಕೆಯು ವರ್ಣಿಸಬಲ್ಲದು! ಕಾಯವಳಿದರೂ ಕೀರ್ತಿಯುಳಿಯುವಂತೆ ದೃಶ್ಯಕಾರ್ಯಗಳನ್ನು ಮಹಾಪುರುಷರು ಮಾಡಿಟ್ಟು ಸಾಯುವರು. ಹಾಗೆ ಅವರ ಹೆಸರು ಹೇಳುವ **ಪ್ರೇಮ ವಿದ್ಯಾಪೀಠ, ಪ್ರೇಮಾಯತನ, ಪ್ರೇಮಸಾಹಿತ್ಯ ಸಂಘ, ಪ್ರೇಮ ಫಾರ್ಮಸಿ** ಮುಂತಾದ ಅಪೂರ್ಣಾವಸ್ಥೆಯಲ್ಲಿದ್ದ ಸಂಸ್ಥೆಗಳೂ, **ಧರ್ಮಸಂಭವ, ಸುಲಭ ಚಿಕಿತ್ಸೆ,** ರಸೌಷಧಗಳು, **ಮೋಹನಾಸ್ತ್ರ** ಮುಂತಾದ ಪುಸ್ತಕಗಳೂ ದೃಶ್ಯಕಾರ್ಯಗಳೆನ್ನಬಹುದು. ಆದರೆ ಅವರ ಹೆಸರನ್ನು ಅನಂತವಾಗಿ ಮೊಳಗಿಸುವಂತೆ ಅವರು ಮಾಡಿದ ಅದೃಶ್ಯ ಕಾರ್ಯವೆಂದರೆ, ಅವರ ವಿದ್ಯಾರ್ಥಿವೃಂದದ ಹೃದಯದಲ್ಲಿ ಅಳಿಸದಂತೆ ಮೂಡಿಸಿದ ಕ್ರಾಂತಿಪ್ರವೃತ್ತಿಯೆಂದು ಹೇಳಬಹುದು. ಅನ್ಯಾಯ, ಅವಿವೇಕದ ವಿರುದ್ಧ ಕ್ರಾಂತಿಯೆಬ್ಬಿಸುವ ಆ ಪ್ರವೃತ್ತಿಬೀಜವನ್ನು ಬೆಳೆಸಿ, ಸಮಾಜವನ್ನು ಶುದ್ಧೀಕರಿಸಿ, ಸನಾತನ ಶಾಂತಿಯ ನವಯುಗವನ್ನು ಸ್ಥಾಪಿಸಲು ನಾವು ಹೆಣಗಿದರೆ ಮಾತ್ರ ಆ ಮಹಾಪುರುಷರಿಗೆ ಶ್ರದ್ಧಾಂಜಲಿಯನ್ನು ಅನ್ವರ್ಥಕವಾಗಿ ಒಪ್ಪಿಸಿದಂತಾಗುವುದು.

ದಿವಂಗತ ತಾರಾನಾಥರಾಯರ ವ್ಯಕ್ತಿತ್ವವನ್ನು ಪೂರ್ಣ ಪರಿಚಯಮಾಡಿಕೊಡಬಲ್ಲ 'ಜಯಂತಿ' ಯ ವಿಶೇಷ ಸಂಚಿಕೆಯೊಂದು, ೨–೩ ತಿಂಗಳಿಲ್ಲಿಯೇ ಹೊರಡಲಿದೆ. ಈಗಾಗಲೆ ಅದರ ಏರ್ಪಾಡು ನಡೆದಿದೆ.

(೩೦ನೆಯ ಪುಟದಿಂದ ಸಾಗಿದ್ದು)

ಹುಡುಗ ವಯಸ್ಸಿಗೆ ಸಹಜ' ಎಂದನು. ಆಗ **ಆ ಮಕ್ಕಳು** ವಿಚಾರ ಮಾಡಿ 'ನಾವು ಒಂದು **ಬೇಳೆ** ನಂ-ನಮ್ಮೊಳಗೆ ಸಹಜವಾಗಿಯೆ ಜಗಳಾಡಿದರೂ ನಿಮಗೆ ತೊಂದರೆ ಕೊಡುವುದಿಲ್ಲ' ಎಂದು ವಚನವನ್ನು **ಕೊಟ್ಟರು.** ಮಕ್ಕಳ ಹಟಕ್ಕಾಗಿ **ತಂದೆಗೆ** ತುಸು ಅಸಹನೆಯಾಯಿತು; 'ಜಗಳಾಟದಲ್ಲಿ ಒಬ್ಬರು ಇನ್ನೊಬ್ಬರನ್ನು ಬಂದೂಕಿನಿಂದ **ಹೊಡೆದರೆ ಯಾರು ಹೊಣೆ? ಹೋಗಿರಿ!'** ಎಂದು ದರ್ಪದಿಂದಲೆ ಹೇಳಿದನು. ಹುಡುಗರಿಗೆ ಬಹಳ ಅಸಮಾಧಾನವಾಯಿತು. ಅಷ್ಟರಲ್ಲಿ ಒಬ್ಬನಿಗೆ **ಹೊಳೆಯಿತು.** 'ಹೊಡೆದರೇನು? ಅದು ಆಟದ ಬಂದೂಕಲ್ಲವೆ? ಯಾರಿಗೂ ಗಾಯವಾಗುವುದಿಲ್ಲ' ಎಂದು ಅವನು ಮಿಕ್ಕವರಿಗೆ ಸೂಚಿಸಿದನು. ಎಲ್ಲರೂ ಮತ್ತೆ ತಂದೆಯ ಕಡೆಗೆ ಬಂದರು. ಆಗ **ತಂದೆ** ಅವರ **ಲಕ್ಷಣವನ್ನು ನೋಡಿ** 'ಆಫೀಸಿಗೆ **ಹೊರಡುವ** ಅವಸರದಲ್ಲಿರುವೆ, ನಡೆಯಿರಿ ಇಲ್ಲಿಂದ!' ಎಂದು ಗದ್ದರಿಸಿದನು. ಇಲ್ಲಿಗೆ ಕತೆ ಮುಗಿಯಿತು.

ನೀತಿಪಾಠ:—ಡಿಫೆನ್ಸ ಆಫ್ ಇಂಡಿಯಾ ಆಕ್ಟ್.

ಹ ಹ ಹ!

ದೇಶಕ್ಕಾಗಿ

(ವರ್ತಮಾನ ಯುದ್ಧ ಚಿತ್ರ)*

ಶ್ರೀ. 'ಸಾವುಕಾರ' ಕೊಲ್ಹಾಪುರ

★

'ದೆದಿಲೊವ್ಹೊ' ಯುಕ್ರೇನ್‌ನಲ್ಲಿಯ ಒಂದು ಸಣ್ಣ ಹಳ್ಳಿ. ಅಲ್ಲಿ ಒಕ್ಕಲತನ ಮಾಡುವವರೇ ಬಹಳ ಜನರು. ಜೆಕೊವನ ಹೊಲದಲ್ಲಿಯ ಗೋಧಿಯ ಪೈರು ಕಸುವಿನಿಂದ ಬೆಳೆದಿತ್ತು, ಅವನು ಅದಕ್ಕಾಗಿ ಹೊಲದಲ್ಲಿ ಹಗಲುರಾತ್ರಿ ದುಡಿದಿದ್ದ. ಅವನ ಹೆಂಡತಿ ಇವಾನೊವನಾ, ಅವನಿಗೆ ಹೊಲದ ಕೆಲಸದಲ್ಲಿ ಸಹಾಯ ಮಾಡುತ್ತಿದ್ದಳು. ಬಹಳ ದಿವಸಗಳಿಂದಲೂ ಜೆಕೊವ ಅಲ್ಲಿಯೇ ಒಂದು ಗುಡಿಸಿಲನ್ನು ಕಟ್ಟಿಕೊಂಡು ಇದ್ದ. ಹೊಲವೆಂದರೆ ಆತನಿಗೆ ಜೀವ. ಅವನು ತಕ್ಕಮಟ್ಟಿಗೆ ಕಲಿತವ; ಊರವರಿಗೆ ಅವನಲ್ಲಿ ಪ್ರೀತಿ-ವಿಶ್ವಾಸ-ಆದರಗಳು ಹೆಚ್ಚು. ಅವನ ತಂದೆ ಕಳೆದ ಯುದ್ಧದಲ್ಲಿ ಭಾಗವಹಿಸಿ, ಅದರಲ್ಲಿಯೇ ಅವನು ಅಂತ್ಯವನ್ನು ಕಂಡಿದ್ದ.

ಜೆಕೊವ ಗುಡಿಸಿಲಿನ ಮುಂದೆ, ದಿನಾಲು—ಸಂಜೆಯ ಊಟ ತೀರಿಸಿಕೊಂಡು—ಕಾಸಿಕೊಳ್ಳುವ ಸಲುವಾಗಿ ಉರಿಮಾಡುತ್ತಿದ್ದ. ನೆರೆಹೊರೆಯವರು ಅಲ್ಲಿ ನೆರೆಯುತ್ತಿದ್ದರು. ಆಗ ತಾಸೆರಡು ತಾಸು ಹರಟೆ ನಡೆಯುವುದು. ಪೀಟರನು ಈ ಹೊತ್ತು ಸ್ವಲ್ಪ ತಡವಾಗಿಯೇ ಬಂದ. ಅಪರಿಚಿತನೊಬ್ಬ ಅವನ ಜೊತೆಯಲ್ಲಿದ್ದ. ರಾಮರ್ಝುಂಟ್‌ಸೇವನು ಪೀಟರನ ದೂರದ ಆಪ್ತ. ಕೆಲಹೊತ್ತು ಮಾತನಾಡದೆ ಇಬ್ಬರೂ ಸುಮ್ಮನೆ ಕುಳಿತರು. ಅದೇಕೋ ಈ ಹೊತ್ತು ಪೀಟರನ ಮುಖ ಬಾಡಿದಂತೆ ಕಾಣುತ್ತಿತ್ತು. ಬಂದವನ ಮುಖದಲ್ಲಿ ಅಂಜಿಕೆಯು ಒಡಮೂಡಿತ್ತು. ಸೂಕ್ಷ್ಮದೃಷ್ಟಿಯವನಾದ ಜೆಕೊವನಿಗೆ ಇದು ಹೊಳೆಯದೆ ಇರಲಿಲ್ಲ.

'ಏನು ಪೀಟರ, ಇಂದು ಯಾರೋ ಹೊಸಬರು ನಿನ್ನ ಮನೆಗೆ ಬಂದಂತೆ ಕಾಣುತ್ತದೆ?' ಜೆಕೊವ ನಗೆಮೊಗದಿಂದ ಕೇಳಿದ.

'ನಮ್ಮ ಆಪ್ತರು; ಬಹಳ ದೂರದಿಂದ ಬಂದಿದ್ದಾರೆ!' ಎಂದು ಪೀಟರ್ ನಿಟ್ಟುಸಿರನ್ನು ಬಿಡುತ್ತ ನುಡಿದ.

'ಎಲ್ಲಿಂದ ಬಂದಿರುವರು?'

'ಪ್ರೊಹಿದಾಯೆವಕಾದಿಂದ'

'ಏನು, ಪ್ರೊಹಿದಾಯೆವಕಾದಿಂದ? ಅಲ್ಲಿಯೇ ಇಂದು ನಮ್ಮವರು ಶತ್ರುಗಳನ್ನು ಎದುರಿಸುತ್ತಿರುವರಲ್ಲ!' ಎಂದ....ಜೆಕೊವ ಉತ್ಸುಕತೆಯಿಂದ.

'ನಿಜ, ಆದರೆ ಪರಿಸ್ಥಿತಿಯೇನೂ ಅನುಕೂಲವಿಲ್ಲ. ಶತ್ರುಗಳ ಒತ್ತಡವು ಬಲವಾಗಿದೆ. ನಮ್ಮವರು ಅಡಿಗಡಿಗೂ ಹಿಂದೆಗೆಯುತ್ತಿರುವರು!'

ಬೆಂಕಿಯಸುತ್ತಲೂ ನೆರೆದು ಕುಳಿತಿರುವವರ ಮುಖದಮೇಲೆ ಖಿನ್ನತೆ ಮುಸುಕುಹಾಕಿತು. ಎಲ್ಲರ ಬಾಯಿಗೆ ಒಮ್ಮೆಲೆ ಬೀಗ ಬಿದ್ದಂತಾಯಿತು. ಬೆಂಕಿಯು ನಿಧಾನವಾಗಿ ಉರಿಯುತ್ತಿತ್ತು.

'ನೀವು ಹೇಗೆ ಬಂದಿರಿ?' ಎಂದು ಉರಿಯಲ್ಲಿ ಕಟ್ಟಿಗೆಗಳನ್ನು ಒಗೆಯುತ್ತ, ಹೊಸಬನನ್ನು ಕುರಿತು ಜೆಕೊವ ಕೇಳಿದ.

'ದೇವರ ಕೃಪೆಯಿಂದ!' ಎಂದ ರಾಮರ್ಝುಂಟ್‌ಸೇವ್—ನಿರಾಶೆಯ ನಿಟ್ಟುಸಿರನ್ನು ಬಿಡುತ್ತ.

'ಅಲ್ಲಿ ಏನು ವಿಶೇಷ?' ಜೆಕೊವ ಕೇಳಿದ.

'ವಿಶೇಷವೆಂದೇನು ಕೇಳುವಿರಿ! ಎಂತಹ ಭಯಂಕರ ಅತ್ಯಾಚಾರಗಳವು! ನಮ್ಮೂರಿನಿಂದ ಶತ್ರುಗಳು ಮೂವತ್ತು ಮೈಲು ದೂರವಿದ್ದರು; ಆಗಲೆ ಊರು ಬಿಡಲು ನಮಗೆ ಆಜ್ಞೆಯಾಯಿತು. ಒಮ್ಮಿಂದೊಮ್ಮೆ ಊರುಬಿಟ್ಟು ಹೋಗುವುದಾದರೂ ಎಲ್ಲಿಗೆ? ಎಲ್ಲರಿಗೂ ಊರುಬಿಡುವುದೊಂದೇ ವಿಚಾರ. ಹೆಂಡತಿ ಜ್ವರದಿಂದ ಮಲಗಿದ್ದರಿಂದ, ಊರನ್ನು ಬಿಡುವುದು ನನಗೆ ಸಾಧ್ಯವಿರಲಿಲ್ಲ. ಒಂದುದಿನ ರಾತ್ರಿ ಹತ್ತುಗಂಟೆಗೆ ಭಯಂಕರ ಗೊಂದಲವೆದ್ದಿತು. ವಿಮಾನಗಳ 'ಘರ್..ಘರ್..' ಎಂಬ ಸಪ್ಪಳು ಎದೆಯನ್ನು ನಡುಗಿಸಿತು. ತುಸು ಹೊತ್ತಿನಲ್ಲಿ ಎಲ್ಲವೂ ಶಾಂತವಾಯಿತು. ಮುಂಬರುವ ಸಂಕಟದ ಸೂಚನೆಯಾಗಿತ್ತು ಆ ಸ್ಮಶಾನ ಶಾಂತತೆ. 'ಧಡ್..ಧಡ್..' ಎಂಬ ಕರ್ಕಶಧ್ವನಿಯು ಶಾಂತತೆಯನ್ನು ಭಂಗಮಾಡಿತು. ನಾನು ಮನೆಯ ಬಾಗಿಲುಗಳನ್ನು ಒಮ್ಮೆಲೆ ಗಟ್ಟಿಯಾಗಿ ಇಕ್ಕಿದೆನು. ಜ್ವರದಿಂದ ನರಳುತ್ತಿದ್ದ ಹೆಂಡತಿಯ ಬಳಿಗೆ ಬಂದು, ದೀವಿಗೆಯನ್ನು ಸ್ವಲ್ಪ ಸಣ್ಣಗೆಮಾಡಿ ಕುಳಿತಿದ್ದೆನು. ಅವಳು ಹೊರಗಿನ ಗೊಂದಲವನ್ನು ಕೇಳಿ 'ಇದೇನು?' ಎಂದಳು ನರಳುತ್ತ. ನಾನು ಅವಳ ಬಾಯಮೇಲೆ ಕೈಯಿಟ್ಟೆನು. ಒಮ್ಮೆಲೆ ಯಾರೋ ಬಾಗಿಲನ್ನು ಒದ್ದಂತಾಯಿತು. ನಡುಗಿದೆ. ಬಾಗಿಲನ್ನು ಮುರಿದು ನಾಲ್ಕೈದು ಜನ ಸೈನಿಕರು— ಎರಡೂ ಕೈಗಳಲ್ಲಿ ಬಂದೂಕುಗಳನ್ನು ಸಜ್ಜಾಗಿ ಹಿಡಿದು— ಒಳನುಗ್ಗಿದರು. ಏನು ಮಾಡಬೇಕೆಂಬುದು ತಿಳಿಯದೆ ನಾನು ಒಮ್ಮೆಲೆ ಎದ್ದು ನಿಂತೆ. ಅವರಲ್ಲಿ ಒಬ್ಬನು ಮುಂದೆ ಬಂದು, ಬ್ಯಾಟರಿ ಲಾಯಿಟನ್ನು ನನ್ನ ಮುಖದಮೇಲೆ ಕೆಡಹಿದ. ಮತ್ತೊಬ್ಬ ಮನೆಯಲ್ಲಿಯ ಸಾಮಾನುಗಳನ್ನು ಬೇಕಾದತ್ತ ಒಗೆಯತೊಡಗಿದ. 'ಹೊರಬೀಳು ಇಲ್ಲಿಂದ!' ಎಂದ, ಅವರಲ್ಲೊಬ್ಬ ಗೊಗ್ಗರ ದನಿಯಿಂದ. ನಾನು ಮಾತನಾಡಲಿಲ್ಲ. ಹೆಂಡತಿಯು ನನ್ನ ತೋಳನ್ನು ಗಟ್ಟಿಯಾಗಿ

---

* ಮೇಲಾಟದ ಎಲ್ಲ ಕತೆಗಳಲ್ಲಿಯೂ ಒಳ್ಳೆಯದೆಂದು ನಿರ್ಣಯವನ್ನು ಪಡೆದುದು. ಸಂ. ಜ.

ಹಿಡಿದಿದ್ದಳು. ನನ್ನ ಮೇಲೆ, ಒದಿಕೆ-ಗುದ್ದುಗಳ ಪ್ರಹಾರ ಬಲವಾಗಿ ಆಗತೊಡಗಿದುವು. ನಾನು ಅದಕ್ಕೆ ಅಡ್ಡಿ ಮಾಡದೆ, ಹೆಂಡತಿಯನ್ನು ಒಯ್ಯಲು ಬಂದ ಸೈನಿಕನನ್ನು ಹಿಂದೂಡಲು ಕೈಯೆತ್ತುತ್ತಿದ್ದೆ. ತಲೆಯಮೇಲೆ ಬಲವಾದುದೊಂದು ಪೆಟ್ಟುಬಿದ್ದು ನನಗೆ ಜವಳಿ ಬಂದಿತು. ಮುಂದೇನಾಯಿತೆಂಬುದು ನನಗೆ ತಿಳಿಯಲಿಲ್ಲ. ಎಷ್ಟೋ ಹೊತ್ತಿನ ಮೇಲೆ ನಾನು ಕಣ್ಣುಗಳನ್ನು ತೆರೆದೆ. ಅಲ್ಲಿ ಯಾರೂ ಇದ್ದಂತೆ ತೋರಲಿಲ್ಲ. ಗಡಬಡಿಯಿಂದ ಎದ್ದು ಹೆಂಡತಿಯನ್ನು ನೋಡಿದೆ. ಅವಳು ಮೂಲೆಯಲ್ಲಿ ಬಿದ್ದಿದ್ದಳು. ಅವಳ ವಿಕಾರವಾದ ರೂಪವನ್ನು ನೋಡಿ, ಮತ್ತೆ ಕಣ್ಣಿಗೆ ಕತ್ತಲೆ ಬಂದಿತು....' ಎಂದು ಹೇಳುತ್ತಿರುವಾಗ ರಾಮುರ್ಝುಂಟ್‌ಸೇವನ ಕಂಠ ಬಿಗಿದುಬಂದಿತು. ಕಣ್ಣೀರು ಒಂದೇಸವನೆ ಸುರಿಯುತ್ತಿದ್ದುವು. ಮಾತುಗಳು ಹೊರಡದಾದುವು. ತುಟಿಗಳು ನಡುಗಹತ್ತಿದುವು. ಸ್ವಲ್ಪಹೊತ್ತು ತಡೆದು 'ಹೆಂಡತಿಯ ಎದೆಯಲ್ಲಿ ಸಂಗೀನಿಯಿಂದ.. ಗಾ..ಯವಾಗಿ, ಅವಳು...' ಎಂದು ಅಸ್ಪಷ್ಟವಾಗಿ ನುಡಿಯುತ್ತ, ಎರಡೂ ಕೈಗಳಿಂದ ಮೋರೆ ಮುಚ್ಚಿಕೊಂಡ.

ಚೆಕೊವನ ಮುಖ ಕೆಂಪಗಾಯಿತು. ಮೈಮೇಲೆ ಮುಳ್ಳು ಎದ್ದುವು. ಕಣ್ಣುಗಳು ಕಿಡಿಯನ್ನು ಕಾರಹತ್ತಿದುವು. ಆದರೂ ಎರಡೂ ಕೈಗಳನ್ನು ತನ್ನ ಮೊಣಕಾಲ ಸುತ್ತಲೂ ಕಟ್ಟಿ, ರಾಮುಝುಂಟ್‌ಸೇವನ ಕಡೆಗೆ ಒಂದೇಸವನೆ ದಿಟ್ಟಿಸಿ ನೋಡುತ್ತ ಕುಳಿತ. ರಾಮುರ್ಝುಂಟ್‌ಸೇವ್ ಕಣ್ಣುಗಳನ್ನು ಒರಸಿಕೊಂಡ. ಅವನಿಗೆ ಮುಂದೆ ಇನ್ನೂ ಏನನ್ನೋ ಹೇಳಬೇಕಾಗಿದೆಯೆಂಬುದು ಆತನ ಮುಖಚರ್ಯೆಯ ಮೇಲಿಂದ ಕಾಣುತ್ತಿತ್ತು. ಎಲ್ಲರೂ ಕುತೂಹಲದಿಂದ ಅವನನ್ನು ನೋಡುತ್ತಿದ್ದರು. ಆಗ ಅವನು, 'ಬೆಳಗುಮುಂಜಾವಿನಲ್ಲಿ ಹಿತ್ತಲಲ್ಲಿಯೇ ಹೆಂಡತಿಯ ದಫನವಿಧಿಯನ್ನು— ಯಾರಿಗೂ ಗೊತ್ತಾಗದಂತೆ— ತೀರಿಸಿದೆನು. ಇಲ್ಲಿಯವರೆಗೆ ಬರಬೇಕಾದರೆ, ಮೃತ್ಯುವಿನ ದವಡೆಯಿಂದ ಪಾರಾದಂತೆಯೇ ಆಗಿದೆ. ಹಾದಿಗುಂಟ ಭಯಂಕರ ದೃಶ್ಯಗಳು ನನ್ನ ಕಣ್ಣಿಗೆ ಕಟ್ಟಿದುವು....' ಎಂದು ಮಾತನ್ನು ಮುಗಿಸಿದ. ಎಲ್ಲರೂ ಮಂಕುಕವಿದಂತೆ ಕುಳಿತರು.

ಚೆಕೊವನ ಹೆಂಡತಿ— ಇವಾನೊವನಾ— ಇನ್ನೂ ಮಲಗಿದ್ದಿಲ್ಲ. ಬಾಗಿಲಿಗೆ ಆತು ಕುಳಿತುಕೊಂಡು, ರಾಮುರ್ಝುಂಟ್‌ಸೇವನು ಹೇಳಿದ್ದೆಲ್ಲವನ್ನೂ ಕೇಳಿದ್ದಳು. ರಾತ್ರಿಯ ಭೀಕರತೆಯು 'ಕಿರ್‌ಽಽ....' ಎನ್ನುತ್ತಿತ್ತು. ಗಾಬರಿಯಾಗಿ, ತೊಡೆಯಮೇಲೆ ಮಲಗಿದ್ದ ಲಿಯೋನಿಡ್‌ನನ್ನು ಎರಡೂ ತೋಳುಗಳಲ್ಲಿ ಬಿಗಿದಳು; ನಡುಗುವ ಕೈಗಳನ್ನು ಮಗುವಿನ ಮುಖದಮೇಲೆ ಆಡಿಸಿದಳು. ಆ ರಾತ್ರಿಯ ಕಗ್ಗತ್ತಲೆಯು ಇಂದು ಆಕೆಗೆ ಅದೇಕೋ ಅಸಹ್ಯವೆನಿಸಿತು. ಬಂದವರೆಲ್ಲ ಯಾವಾಗ ಹೋದರೆಂಬುದು ಚೆಕೊವನಿಗೆ ತಿಳಿಯಲೇ ಇಲ್ಲ. ಬೆಂಕಿಯು ಆರಿಹೋಗಿತ್ತು, ನಡುರಾತ್ರಿ ಸರಿಯಿತು, ರಾತ್ರಿಯ ಚಳಿಗಾಳಿಗೆ ಅವನು ಎಚ್ಚತ್ತು ಒಳಗೆ ಹೋದ. ಇವಾನೊವಾ ದೀಪ ಆರಿಸದೆ, ಕುಳಿತಲ್ಲಿಯೇ ಮಲಗಿದ್ದುದರ ಅರಿವುಕೂಡ ಚೆಕೊವನಿಗಾಗಲಿಲ್ಲ. ದೀಪ ಆರಿಸಿ ಮಲಗಿದ. ಎಷ್ಟೋ ಹೊತ್ತಿನವರೆಗೆ ನಿದ್ದೆ ಹತ್ತದೆ, ಹಾಸಿಗೆಯಲ್ಲಿಯೇ—ಆ ಮಗ್ಗುಲಿಂದ ಈ ಮಗ್ಗುಲಿಗೆ— ಹೊರಳಾಡುತ್ತಿದ್ದ.

ಮುಂಜಾವಿನಲ್ಲಿ ಚೆಕೊವನಿಗೆ ದಿನದಂತೆ ಕೆಲಸದಲ್ಲಿ ಉತ್ಸಾಹ ವಿರಲಿಲ್ಲ. ರಾತ್ರಿ ರಾಮುರ್ಝುಂಟ್‌ಸೇವನು ಹೇಳಿದ ಸಂಗತಿಗಳೇ ಮತ್ತೆ ಮತ್ತೆ ಅವನ ಮನಸ್ಸಿನಲ್ಲಿ ಬಂದು, ಅಶಾಂತತೆಯ ಹಾವಳಿಯನ್ನೇ ಎಬ್ಬಿಸುತ್ತಿದ್ದುವು. ಇವಾನೊವನಾ ಕೂಡ ಸೂತ್ರದ ಗೊಂಬೆಯಂತೆ ಮನೆಗೆಲಸವನ್ನು ಮಾಡುತ್ತಿದ್ದಳು. ಮುಂಜಾವಿನ ಊಟದಲ್ಲಿ ಚೆಕೊವನಿಗೆ ಇಂದು ಚಿತ್ತವೇ ಇರಲಿಲ್ಲ.

'ಏನಾಯಿತು ನಿಮಗೆ ? ಇಂದು ಮುಂಜಾವಿನಿಂದ ಹೇಗೆ-ಹೇಗೋ ಮಾಡಹತ್ತಿರುವಿರಿ; ಊಟದ ಮೇಲೆ ಸಹ ಲಕ್ಷ್ಯವಿಲ್ಲ !' ಎಂದಳು ಇವಾನೊವನಾ—ಚೆಕೊವನ ಕಡೆಗೆ ನೋಡುತ್ತ. ಮುಖವೆತ್ತಿ ಚೆಕೊವ ಹೆಂಡತಿಯ ಕಡೆಗೆ ನೋಡಿದ; ಏನನ್ನೂ ಮಾತನಾಡಲಿಲ್ಲ.

'ಮಾತನ್ನು ಕೂಡ ಆಡುವುದಿಲ್ಲವೇನು ?'

'ನೀನು ತೀರಾಹುಚ್ಚಿ ನೋಡು! ನಿನ್ನೆ ರಾತ್ರಿ ರಾಮುರ್ಝುಂಟ್‌ಸೇವನು ಹೇಳಿದ ಸಂಗತಿಯನ್ನು ಕೇಳಿದೆಯಾ ?'

'ಹೂಂ....!'

'ಅದು ಹೇಗೆ ?'

'ನಿನ್ನೆ ರಾಮುರ್ಝುಂಟ್‌ಸೇವನು ತನ್ನ ಸುದ್ದಿಯನ್ನು ಹೇಳುವಾಗ ನಾನು ಎಚ್ಚರಿದ್ದೆ.'

'ಇನ್ನು ಇಲ್ಲಿಗಾದರೂ ಶತ್ರುಗಳು ಬೇಗನೆ ಬರಬಹುದು ! ನಮ್ಮ ಗತಿ ಏನು ? ವಿಚಾರವನ್ನೇನಾದರೂ ಮಾಡಿರುವೆಯಾ ?'

'ಇದರಲ್ಲಿ ನನ್ನದೇನು ವಿಚಾರ ? ನೀವು ಹೇಳಿದ ಹಾಗೆ !'

'ಹಾಗಾದರೆ ನನ್ನದೊಂದು ಮಾತನ್ನು ಕೇಳುತ್ತೀಯಾ ?'

'ಅದೇನು.... ಅಂತಹದು ?'

'ಈಹೊತ್ತೇ ನೀನು ನಿನ್ನ ಸೋದರಮಾವನ ಮನೆಗೆ ಹೊರಟುಬಿಡು !'

'ನೀವೂ ಬರುತ್ತೀರಾ ?'

'ಇಲ್ಲ....ನಾನು ಇಲ್ಲಿಯೆ ಇರಬೇಕಾಗಿದೆ' ಎಂದ ಚೆಕೊವ, ನಿಶ್ಚಯದ ಸ್ವರದಿಂದ.

'ನಿಮಗಿಂತ ನನ್ನ ಜೀವ ಹೆಚ್ಚಿನದೆ? ನಿಮ್ಮ ಕೂಡ ನಾನೂ........!'

'ನಿನ್ನೆಯ ಸಂಗತಿಯನ್ನಂತೂ ನೀನು ಕೇಳಿರುತ್ತೀಯೆ. ಶತ್ರುಗಳ ಅತ್ಯಾಚಾರಗಳು ಕಿವಿಯಿಂದ ಕೇಳಬಾರದಷ್ಟು ಭೀಕರವಾಗಿವೆ. ಮೇಲಾಗಿ ಅವರು ಇಲ್ಲಿ ಬರುತ್ತಿರುವುದು ಬರಿ ದೇಶವನ್ನು ಗೆದ್ದುಕೊಳ್ಳಲಿಕ್ಕಲ್ಲ ! ನಿನ್ನಂತಹ ರಶಿಯನ್ ಅಬಲೆ-

ಯರನ್ನು ಗೆದ್ದುಕೊಳ್ಳಲಿಕ್ಕೆ! ಲಿವೊನಿಡ್‌ನಂತಹ ನಿರಪರಾಧಿ ಎಳಮಕ್ಕಳನ್ನು ಬೇಟೆಯಾಡಲಿಕ್ಕೆ! ನಮ್ಮ ದೇಶವನ್ನು ನಿರಂತರ ವಾಗಿ ತಮ್ಮ ದಾಸ್ಯದಲ್ಲಿ ಎಳೆಯಲಿಕ್ಕೆ! ನೋಡು ನೀನೊಬ್ಬ ಜರ್ಮನ್ ಅಧಿಕಾರಿಯ ಕಣ್ಣಿಗೆ ಬಿದ್ದರೆ, ಆತನ 'ಕ್ಯೊನಿಗ್ಗಿನ್ (Königin=ರಾಣಿ) ಆಗಿ, ಮೆರೆಯಬಹುದು'. ಕೊನೆಯ ಮಾತನ್ನು ಚೆಕೊವನು ಬೇಕೆಂತಲೇ ಆಕೆಯನ್ನು ಕೆಣಕುವ ಸಲುವಾಗಿ ಆಡಿದ್ದ.

'ನೀವು ಗಂಡಸರು ಕೈಲಾಗದ ಹೇಡಿಗಳಂತೆ ಅವರಿಗೆ ಶರಣು ಹೋದರೆ, ನಾನೇಕೆ ನಿಮ್ಮ ಹಾದಿಯಲ್ಲಿ ಅಡ್ಡ ಬರಲಿ? ಸಂತೋಷ-ದಿಂದ ಅವರ ರಾಣಿಯಾಗಲು ತಲೆಬಾಗಿ ಒಪ್ಪುವೆನು!' ಎಂದು ಕೆರಳಿ ನುಡಿದಳು.

* * *

ಪೊಮುನ್‌ಝುವ್ 'ಪ್ರವದಾ' ಪತ್ರಿಕೆಯನ್ನು ತರಿಸುತ್ತಿದ್ದ. ವದಿಲೊವೊದಲ್ಲಿ ಅವನು ಒಂದು ಸಣ್ಣ ಅಂಗಡಿಯನ್ನಿಟ್ಟಿದ್ದ. ಅವನಿಗೂ ಚೆಕೊವನಿಗೂ ಬಹಳ ದಿವಸಗಳಿಂದ ಗೆಳೆತನ. ಪೊಮುನ್‌ಝುವ್ ಚೆಕೊವನ ಕಡೆಗೆ ದಿನಾಲು ಸಂಜೆಗೆ ಬರುತ್ತಿದ್ದ. ಅವನಿಂದ ಚೆಕೊವನಿಗೂ ಉಳಿದವರಿಗೂ ಯುದ್ಧದ ಸುದ್ದಿ ತಿಳಿ-ಯುತ್ತಿತ್ತು. ಒಂದೊಂದು ದಿನ, ರಶಿಯನ್ನರು ಶಿಸ್ತಿನಿಂದ ಹಿಂದೆ ಸರಿಯುತ್ತಿರುವುದನ್ನು ಕೇಳಿ ಚೆಕೊವ ವಿಷಾದಪಡುತ್ತಿದ್ದ; ರೊಚ್ಚಿಗೆದ್ದು ಹೇಡಿಗಳೆಂದು ತನ್ನವರನ್ನೇ ಹೀಯಾಳಿಸುತ್ತಿದ್ದ; ಮರುಗುತ್ತಿದ್ದ. ತಾನೂ ಶತ್ರುಗಳಿಗೆ ಕೈ ತೋರಿಸಲು ಸೈನ್ಯದಲ್ಲಿ ಸೇರುವೆನೆಂದು ಅನೇಕಬಾರಿ ಎಲ್ಲರ ಮುಂದೆ ಆಡಿ ತೋರಿಸಿದ್ದ. ಪೈರು ಕೊಯ್ದ ಮೇಲೆ, ಹೆಂಡತಿಯನ್ನು ಅವಳ ಸೋದರಮಾವನ ಮನೆಗೆ ಕಳುಹಿ, ಆಮೇಲೆ ಸೈನ್ಯದಲ್ಲಿ ಸೇರಬೇಕೆಂದು ಚೆಕೊವ ಯೋಚಿಸಿದ್ದ. ಬರುಬರುತ್ತ ರಾತ್ರಿಯಲ್ಲಿ, ವಿಮಾನಗಳ ಹಾರಾಟ ಹೆಚ್ಚುತ್ತ ನಡೆದ ಹಾಗೆಲ್ಲ, ಚೆಕೊವನು ತನ್ನ ಸಂಜೆಯ ಕಾರ್ಯ-ಕ್ರಮವನ್ನು ಬಿಡಬೇಕಾಯಿತು.

ದೆದಿಲೊವೊದಿಂದ ನೂರಾರು ಮೈಲಿನ ಮೇಲಿದ್ದ ಪಟ್ಟಣಗಳು ಶತ್ರುಗಳ ಬಾಂಬುಗಳಿಗೆ ಆಹುತಿಯಾಗತೊಡಗಿದುವು. ಸುತ್ತಲೂ ಗಿಡಗಳಿದ್ದುದರಿಂದ, ದೆದಿಲೊವೊ ಮೇಲಿನಿಂದ ಕಾಣುವ ಹಾಗಿ-ದ್ದಿಲ್ಲ. ಅದೊಂದು ಆ ಹಳ್ಳಿಗರಿಗೆ ನೈಸರ್ಗಿಕವಾದ ಕಾಣಿಕೆಯೆ ಆಗಿತ್ತು. ಊರಿನಿಂದ ಕೆಲವಂತರದ ಮೇಲಿಂದ ಹಾಯ್ದು ಹೋಗುವ ಹೆದ್ದಾರಿ, ಚೆಕೊವನ ಹೊಲದೊಳಗಿಂದ ಚೆನ್ನಾಗಿ ಕಾಣುತ್ತಿತ್ತು. ಇತ್ತೀಚೆಗೆ ಲೈನಿನಗುಂಟ ಮಿಲಿಟರಿ ಮೋಟರು ಗಳ ಓಡಾಟ ಮಿತಿಮೀರಿತ್ತು. ಒಮ್ಮೊಮ್ಮೆ ಸೈನಿಕರಿಂದ ತುಂಬಿದ ಮೋಟರುಗಳು ಕಣ್ಣುಹರಿಯುವವರೆಗೆ ಸಾಲಾಗಿ ಹೋಗುವು-ದನ್ನು ಚೆಕೊವ ನೋಡುತ್ತಿದ್ದ. ಅಲ್ಲದೆ ಯುದ್ಧೋಪಕರಣ-ಗಳಿಂದ ತುಂಬಿಹೋಗುತ್ತಿದ್ದ ಮೋಟರುಗಳಿಗೆ ಲೆಕ್ಕವೆ ಇದ್ದಿಲ್ಲ. ದೊಡ್ಡ ದೊಡ್ಡ ತೋಪುಗಳನ್ನು ಬಂಡಿಗಳ ಮೇಲೆ ಹೇರಿಕೊಂಡು, ನೂರಾರು ಕುದುರೆಗಳು ಎಳೆದು ಒಯ್ಯುತ್ತಿದ್ದುವು. ಆಜಸ್ರ-ತೋಪುಗಳನ್ನು ನೋಡಿ, ಸಾಮಾನ್ಯ ಮನುಷ್ಯನೂ ಅಂಜಬಹು-ದಾಗಿತ್ತು; ಆದರೆ ಅವನ್ನು ನೋಡಿ ಚೆಕೊವನು ಆನಂದಪಡು-ತಿದ್ದ. ತನ್ನ ಪಿತೃಭೂಮಿಯನ್ನು ಆಕ್ರಮಿಸುವವರನ್ನು ನುಂಗಿ ನೀರುಕುಡಿಯುವ ರಕ್ಕಸಿಯರಂತೆ ಅವು 'ಆಽಽ' ಎಂದು ಬಾಯಿ ತೆರೆದಿವೆ—ಎಂದು ಆತನಿಗೆ ಎನಿಸುತ್ತಿತ್ತು. ನವ-ಚೈತನ್ಯವು ಆತನಲ್ಲಿ ತುಂಬಿತು. ಯುದ್ಧದಲ್ಲಿ ಸೇರಬೇಕೆಂಬ ಲವಲವಿಕೆಯು ಇಮ್ಮಡಿಯಾಯಿತು. ಕೆಲವು ವರುಷದ ಹಿಂದೆ ಅವನು ಯುದ್ಧದ ಶಿಕ್ಷಣವನ್ನೂ ಪಡೆದಿದ್ದ. ಅಂತೆಯೇ ಇಂದು ಅವನಲ್ಲಿ ರಣೋತ್ಸಾಹವು ತುಂಬುತ್ತಿತ್ತು.

ಒಂದುದಿನ, ಚೆಕೊವ ಪೊಮುನಝುವನ ಅಂಗಡಿಗೆ ಹೋದಾಗ, ಆ ದಿವಸದ 'ಪ್ರವದಾ' ಪತ್ರಿಕೆಯನ್ನು ಓದಿದ. ಶತ್ರುಗಳು ಮೂವತ್ತು ನಾಲ್ವತ್ತು ಮೈಲುಗಳ ಮೇಲೆಯೆ ಇರುವರೆಂಬುದು ತಿಳಿಯಿತು. ಆದರೆ ಅಂತರದ ಮೇಲೆ ನಂಬಿಕೆಯನ್ನಿಟ್ಟು ಸುಮ್ಮನೆ ಕೂಡ್ರುವುದಕ್ಕೆ ಹಿಂದಿನ ಕಾಲದ ಯುದ್ಧಗಳಲ್ಲ ಇವು. ಊರನ್ನು ಬರಿದುಮಾಡಲು ಸರಕಾರದ ಆಜ್ಞೆಯಾಯಿತು. ಇದರಿಂದ ಪರಿಸ್ಥಿತಿಯು ಮತ್ತೂ ಭೀಕರವಾಯಿತು. ಊರಲ್ಲಿ ಎಲ್ಲೆಡೆಯಲ್ಲಿಯೂ ನಿರಾಶೆ ತುಂಬಿ ಸೂಸಿತು. ಅನುಕೂಲ ವಿದ್ದವರು ಊರನ್ನು ಬಿಟ್ಟರು. ಮಿಕ್ಕವರು ಹೊಲಗಳಲ್ಲಿ ಗುಡಿಸಿಲುಗಳನ್ನು ಕಟ್ಟಿದರು. ಮೊದಲೇ ಹೊಲದಲ್ಲಿ ಗೂಡು ಕಟ್ಟಿಕೊಂಡು ಇದ್ದ ಚೆಕೊವನಿಗೆ ಊರುಬಿಡುವುದಕ್ಕೆ ತ್ರಾಸ ವಾಗಲಿಲ್ಲ. ಎಲ್ಲರ ಮನೆಗೆ ಬೀಗಬಿದ್ದುವು. ಊರು ಹಾಳು ಸುರಿಯುತ್ತಿತ್ತು. ಓಣಿಯಲ್ಲಿ ಬೆಕ್ಕಿನ ಪಿಳ್ಳೆಗಳು ಕೂಡ ಕಾಣದಾದುವು.

ಮೊದಮೊದಲು, ಮೂವತ್ತು ನಾಲ್ವತ್ತು ವೈರಿಗಳ ವಿಮಾನ ಗಳು ಒಂದೊಂದು ಬಾರಿಗೆ ಬರುತ್ತಿದ್ದರೆ, ಇತ್ತೀಚೆಗೆ ಮುನ್ನೂರು ನಾಲ್ಕುನೂರು ವಿಮಾನಗಳ ಗುಂಪುಗಳು ಬರತೊಡಗಿದುವು. ಲಿವೊನಿಡ್ ಅವುಗಳನ್ನು ನೋಡಲು ಹಾತೊರೆಯುವವ; ಆದರೆ ಮಗನಿಗೆ ಏನಾದರೂ ಆದೀತೆಂದು ಇವಾನೊವನಾ ಅವನನ್ನು ಒಳಗೆ ಎಳೆದು ಕೂಡಿಸುವಳು. ಹದಗೆಡುತ್ತ ನಡೆದಿದ್ದ ಸುತ್ತಣ ವಾತಾವರಣವು ಅವಳ ಮನಸ್ಸಿನಲ್ಲಿ ಅಸ್ವಸ್ಥತೆಯನ್ನುಂಟು-ಮಾಡಿತು. 'ಶತ್ರುವಿಗೆ ಉಪಯೋಗಬೀಳುವ ಪ್ರತಿಯೊಂದು ವಸ್ತುವನ್ನೂ ಸುಟ್ಟುಬಿಡಬೇಕು, ಇಲ್ಲವೆ ಅವರ ಕೈಗೆ ಸಿಕ್ಕದಂತೆ ಮಾಡಬೇಕು! ಪೈರುಗಳನ್ನು ನಾಶಮಾಡಬೇಕು!' ಎಂದು ಸರಕಾರದ ಆಜ್ಞೆ ಹೊರಟು ಕೆಲದಿನಗಳಾಗಿದ್ದುವು. ಕುಸು ದಿವಸ ಗಳಲ್ಲಿಯೆ ಕೈಗೆ ಹತ್ತಬಹುದಾಗಿದ್ದ ಪೈರನ್ನು, ಮೊದಲೇ—ತನ್ನ ಕೈಯಿಂದಲೇ—ಕೊಯ್ಯಬೇಕಾಗುವುದೆಂದು, ಚೆಕೊವನಿಗೆ ಹೇಳ-ಲಾರದಷ್ಟು ದುಃಖವಾಯಿತು. ಹಸಿವೆ-ನೀರಡಿಕೆಗಳ ಪರಿವೆ ಯಿಲ್ಲದೆ ಆತ ಹೊಲದಲ್ಲಿ ದುಡಿದಿದ್ದ. ಕೈಗೆ ಬಂದ ತುತ್ತು ಬಾಯಿಗೆ ಬರುವಹಾಗಿದ್ದಿಲ್ಲ. ವಿಚಾರಮಾಡಿ ಹಳಹಳಿಸುತ್ತ ಕೈಕಟ್ಟಿಕೊಂಡು ಕೂಡ್ರುವ ವೇಳೆ ಇದ್ದಿಲ್ಲ. ತಾಸುತಾಸಿಗೆ

ಯುದ್ಧದ ಭೀಕರತೆಯು ಹೆಚ್ಚುತ್ತ ನಡೆದಿತ್ತು. ಶತ್ರುಗಳು ಯಾವಾಗ ದೆದಿಲೊವ್ರೊ ಮುಟ್ಟುವರೆಂಬುದರ ನಿಯಮವಿದ್ದಿಲ್ಲ.

ರಾತ್ರಿಯಲ್ಲಿ ಜೆಕೊವನಿಗೆ ನಿದ್ದೆಯೆ ಇಲ್ಲ. ಮೊದಲೇ ತನ್ನ ಕುಡುಗೋಲನ್ನು ಮಸೆದು ಸಜ್ಜಾಗಿರಿಸಿದ್ದ. ತನಗಾದ ಎಲ್ಲ ಕಷ್ಟ-ನಷ್ಟಗಳನ್ನೂ ನೆನೆದು, ಒಮ್ಮೊಮ್ಮೆ 'ಪೈರು ಕೊಯ್ಯುವುದನ್ನು ಬಿಟ್ಟರೆ!' ಎಂದು ವಿಚಾರಮಾಡುತ್ತಿದ್ದ. ಆದರೆ ಮರುಕ್ಷಣದಲ್ಲಿಯೇ ತಾನು ತನ್ನ ಪಿತೃದೇಶಕ್ಕೆ ಕೇಡುಬಯಸುತ್ತಿರುವೆನೆಂದು ಆತನಿಗೆ ಎನಿಸುತ್ತಿತ್ತು. ಪೈರನ್ನು ಕೊಯ್ಯದಿದ್ದರೆ, ಪೈರುನಿಂತ ತನ್ನ ಹೊಲವು ಶತ್ರುವಿಗೆ ಬಡಿಸಿಟ್ಟ ಎಡೆಯಂತೆಯೇ! ಬಹಳ ಹೊತ್ತಿನವರೆಗೆ ಅವನಲ್ಲಿ ವಿಚಾರಗಳ ತಾಕಲಾಟ ನಡೆದಿತ್ತು. ಕೊನೆಗೆ ಪೈರು ಕೊಯ್ಯುವುದನ್ನು ನಿಶ್ಚಯಮಾಡಿಕೊಂಡು ಮಲಗಲು ಪ್ರಯತ್ನ ಮಾಡಿದ. ಆದರೆ ಆತನ ಮನಸ್ಸಿನಲ್ಲಿ ಎಷ್ಟೋ ವಿಚಾರಗಳ ಗೊಂದಲ ಮೇಲಿಂದ ಮೇಲೆ ಏಳಹತ್ತಿತು: 'ಇವಾನೊವನಾಳ ಹಣೆಬರೆಹ ರಾಮರ್ಝುಂಟ್ಸೇವನ ಹೆಂಡತಿಯಂತೆ ಆಗಬಹುದೋ?' ಎಂದು ಅಂಜುವ. ಹಾಗಾಗುವ ಸಂಭವವಾದರೂ ಹೆಚ್ಚಾಗಿತ್ತು. ಇವಾನೊವನಾ ಇಪ್ಪತ್ತೈದು ವರುಷದ ಪ್ರಾಯದ ಹೆಂಗುಸು. ನಿಲುವಿಕೆ ಸಾಧಾರಣ ಎತ್ತರ. ನೀಟಾದ ಮೂಗು. ಮೈಬಣ್ಣ ಮೋಹಕವಾಗಿತ್ತು. ಆವಳೊಬ್ಬ ಚೆಲುವೆಯಾದ ರಶಿಯನ್ ಮಹಿಳೆ. ಅವಳನ್ನು ಈಗ ಕಳುಹುವುದಾದರೂ ಎಲ್ಲಿ? ತನ್ನ ಪುಟ್ಟ ಲೆವೊನಿಡ್‌ನ ಗತಿಯೇನು?.... .... ಇತ್ಯಾದಿ ವಿಚಾರದಲ್ಲಿ ಅವನ ಕಣ್ಣುಗಳು ಮುಚ್ಚಲೊಲ್ಲವು. ಜೆಕೊವನು ಒಮ್ಮೆ ಬಾಗಿಲೊಳಗಿಂದ ಹೊರಗೆ ಇಣಿಕಿ ನೋಡಿದ. ಮಂದವಾಗಿ ಗಾಳಿಬೀಸುತ್ತಿತ್ತು. ಕಾರ್ಮೋಡಗಳು ತೇಲಿಬರುತ್ತಿದ್ದುವು. ನೂರಾರು ವಿಮಾನಗಳ 'ಘರ್‌ಘರ್' ಸಪ್ಪಳು ಸಮೀಪಕ್ಕೆ ಬರತೊಡಗಿತು. ವಿಮಾನಗಳು ಊರಮೇಲಿಂದ ಹಾಯ್ದುಹೋದುವು. ಎಲ್ಲವೂ ಮೊದಲಿನಂತೆ ಶಾಂತವಾಯಿತು. 'ಧಡ್....ಧಡ್' ಎಂಬ ಸಪ್ಪಳವು ದೂರದಿಂದ ಕೇಳಬರಹತ್ತಿತು. ಸಪ್ಪಳದೊಡನೆದ್ದ ಜ್ವಾಲೆಗಳು ಸೂರ್ಯಾಸ್ತದಂತೆ ಪಶ್ಚಿಮದಿಕ್ಕನ್ನು ರಕ್ತ ರಂಜಿತವಾಗಿ ಮಾಡಿದ್ದುವು. ಇದೆಲ್ಲದರ ಮೇಲಿಂದ, ಬೆಳಗಾಗುವುದರೊಳಗಾಗಿಯೇ ಶತ್ರುಗಳು ಇಲ್ಲಿಗೆ ಬರಬಹುದೆಂದು ಅಂಜಿಕೆಯುಂಟಾಯಿತು. ಜೆಕೊವ ಕುಡುಗೋಲನ್ನು ಕೈಯಲ್ಲಿ ಹಿಡಿದ. ಕೂಡಲೇ ಪೈರನ್ನು ಕೊಯ್ಯಬೇಕೆಂದು ಮಾಡಿದ. ಅಷ್ಟರಲ್ಲಿಯೆ—

'ಜೆಕೊವ!' ಎಂದು ಯಾರೋ ಕರೆದರು. ದನಿಯು ಗುರುತು ಅವನಿಗೆ ಚೆನ್ನಾಗಿ ಹತ್ತಿತು; ಪೀಟರ್ ಕೆಲವರೊಂದಿಗೆ ಅಲ್ಲಿಗೆ ಬಂದ.

'ಏನು ಪೀಟರ್, ಇಷ್ಟು ರಾತ್ರಿಯಲ್ಲಿ ಬಂದೆ? ಶತ್ರುಗಳ ಸುಳಿವು ಕಾಣಬರುತ್ತಿದೆಯೋ ಎಲ್ಲಿಯಾದರೂ?'

'ಸುಳಿವೇನೋ ಕಾಣುವದಿಲ್ಲ. ಆದರೆ..' ಜ್ವಾಲೆಗಳಿದ್ದ ದಿಟ್ಟಿನ ಕಡೆಗೆ ಮುಖ ಮಾಡಿ 'ಪೈರನ್ನು ಏನು ಮಾಡಬೇಕೆಂದಿರುವೆ?' ಎಂದು ಕೇಳಿದ.

'ಮಾಡುವುದೇನು! ಕೊಯ್ಯುವುದು, ಸುಟ್ಟಬಿಡುವುದು!'

'ಯಾವಾಗ?'

'ನೋಡು ಪೀಟರ್, ಈಗಿಂದೀಗಲೇ ಕಾರ್ಯಕ್ಕೆ ತೊಡಗಬೇಕು. ಎಲ್ಲ ಪೈರನ್ನು ಕೊಯ್ಯುವುದಾಗದಿದ್ದರೂ, ಕೊಯ್ದಷ್ಟಕ್ಕೆ ಬೆಂಕಿ ಹಚ್ಚಿ ಉಳಿದದ್ದರಲ್ಲಿ ಬೆಂಕಿಯನ್ನು ಹರಡಿ, ಎಲ್ಲವೂ ಸುಡುವಂತೆ ಮಾಡಬೇಕು. ತಿನ್ನಲಿ ಮಕ್ಕಳು ಬೂದಿಯನ್ನು!' ಆವೇಶದಿಂದ ನುಡಿದ ಜೆಕೊವ.

ಎಲ್ಲರೂ ಒಪ್ಪಿ ಹೊರಟುಹೋದರು. ಜೆಕೊವ ಒಳಗೆ ಹೋಗಿ ನೋಡಿದ. ದೀವಿಗೆ ಮಿಣಿಮಿಣಿ ಮಿನುಗುತ್ತಿತ್ತು. ಲೆವೊನಿಡ್ ತನ್ನ ತಾಯಿಯ ಮಗ್ಗುಲಲ್ಲಿ ಮಲಗಿದ್ದ. ಇವಾನೊವನಾಳಿಗೂ ನಿದ್ದೆ ಹತ್ತಿತ್ತು. ದೀಪದಮಂದಪ್ರಕಾಶವು ಅವಳ ಮುಖದ ಮೇಲೆ ಬಿದ್ದಿತ್ತು. ದೀಪವನ್ನು ಸ್ವಲ್ಪ ದೊಡ್ಡದಾಗಿ ಮಾಡಿ, ಅವಳ ಮುಖದ ಕಡೆಗೆ ದಿಟ್ಟಿಸಿ ನೋಡುತ್ತ ಕೆಲ ವೇಳೆ ಸ್ತಬ್ಧನಾಗಿ ನಿಂತು 'ಇವಾ..ನೊ..ವನಾ!' ಎಂದು ಮೆಲುದನಿಯಲ್ಲಿ ಕರೆದ. ಅವಳಿಗೆ ಎಚ್ಚರವಾಗಲಿಲ್ಲ. ಮುಂದೆ ಸರಿದು ಕೈ ಚಾಚಿ ಎಬ್ಬಿಸಬೇಕೆಂದ. ಒಮ್ಮೆಲೆ ಗಾಳಿ ಬೀಸಿ ದೀಪ ಆರಿತು. ಕಡ್ಡಿಯನ್ನು ಕೊರೆದು ಮತ್ತೆ ದೀಪ ಹಚ್ಚಿದ. ಆದೇಕೋ, ಮನಸ್ಸಿನಲ್ಲಿ ಅವನಿಗೆ ಹೇಗೆ ಹೇಗೋ ಎನಿಸಿತು. ಹೆದ್ದಾರಿಗುಂಟ ಗದ್ದಲವು ಹೆಚ್ಚಾಗುತ್ತ ನಡೆದ ಸಪ್ಪಳು ಕೇಳಬರತೊಡಗಿತು. ಸಂಕಟವು ಸಮೀಪಿಸಿತೆಂದು ಜೆಕೊವ ತಿಳಿದುಕೊಂಡ. ಗಟ್ಟಿ ಮನಸ್ಸು ಮಾಡಿ ಹೊರಗೆ ಬಂದ.

ಭರದಿಂದ ಪೈರನ್ನು ಕೊಯ್ಯಹತ್ತಿದ. ಕತ್ತಲೆಯಲ್ಲಿ ಕಾಣದೆ ಕುಡುಗೋಲು ತಾಕಿ, ಎಡಗೈಯಿಂದ ರಕ್ತ ಸುರಿಯಹತ್ತಿತು. ಈಗ ಆದರ ಪರಿವೆ ಆತನಿಗಿರುವುದೇ? ಸಮೀಪದಲ್ಲಿಯೇ ಏನೋ ಸುಳಿದಾಟದ ಭಾಸವಾಯಿತು. ಕಿವಿಗೊಟ್ಟು ಕೇಳಿದ. ಎಂಟು ಹತ್ತು ಜನರು ತಾನಿರುವ ಕಡೆಗೆ ಬರುತ್ತಿರುವರೆಂದು ಆತನಿಗೆ ಎನಿಸಿತು. ನೆರೆಹೊರೆಯವರು ಯಾರಾದರೂ ಇರಬಹುದೆಂದು ಒಬ್ಬಿಬ್ಬರ ಹೆಸರನ್ನು ತೆಗೆದುಕೊಂಡು ಕರೆದ, ಉತ್ತರ ಬರಲಿಲ್ಲ. ಪೈರನ್ನು ಸುಮಾರು ಅರ್ಧದಷ್ಟು ಕೊಯ್ದು ಆಗಿರಬಹುದು; ಅಷ್ಟರಲ್ಲಿ ಪೀಟರನ ಹೊಲದ ಬದಿಯಿಂದ ಉರಿ ಎದ್ದಿತು. 'ಏನೋ ಮೋಸ!' ಎಂದು ತಟ್ಟನೆ ಕಡ್ಡಿ ಕೊರೆದು, ಕೊಯ್ದ ಪೈರಿನ ರಾಶಿಗೆ ಬೆಂಕಿಯಿಟ್ಟ. ದೊಡ್ಡ ದೊಡ್ಡ ಜ್ವಾಲೆಗಳೆದ್ದುವು. ಬರುತ್ತಿರುವವರು ಒಮ್ಮೆಲೆ ಜೆಕೊವನನ್ನು ಸುತ್ತುಗಟ್ಟಿದರು. ಜ್ವಾಲೆಗಳ ಪ್ರಕಾಶದಲ್ಲಿ, ಅವರು ಯಾರೆಂಬುದನ್ನು ಬೇರೆಯಾಗಿ ಹೇಳಬೇಕಾದ ಕಾರಣವಿದ್ದಿಲ್ಲ.

'ಪೈರಿಗೆ ಬೆಂಕಿ ಇಡಲು ನಿನಗೆ ಯಾರು ಹೇಳಿದರು?' ಎಂದು ಗದ್ದರಿಸಿದ ಅವರಲ್ಲೊಬ್ಬನ, ಜೆಕೊವನ ಎಧೆಯ ಮೇಲೆ ಗುದ್ದಿ.

ಜಯಂತಿ

ಕೈಯಲ್ಲಿಯ ಕುಡುಗೋಲನ್ನು ಅವರ ಮೇಲೆ ಎಸೆದು, ಚೆಕೊವ ಗುಡಿಸಿಲಿನ ಕಡೆಗೆ ಧಾವಿಸಿದ. 'ಇವಾನೊವನಾ!' ಎಂದು ಆರ್ತಸ್ವರದಿಂದ ಕೂಗಿದ. ಗದ್ದಲವನ್ನು ಕೇಳಿ ಇವಾನೊವನಾ ಮೊದಲೇ ಎಚ್ಚರಾಗಿದ್ದಳು. ಗಂಡನು ಸೈರುಕೊಯ್ಯುವುದಕ್ಕೆ ಸಹಾಯಮಾಡಲು ಕರೆದಿರಬಹುದೆಂದು ಆಕೆ ತನ್ನ ಕುಡುಗೋಲನ್ನು ತೆಗೆದುಕೊಂಡು ಹೊರಕ್ಕೆ ಬಂದಳು. ಪೈರಿನ ರಾಶಿಗೆ ಬೆಂಕಿಹತ್ತಿದ್ದನ್ನು ನೋಡಿ ಆಕೆಯ ಎದೆಯೊಡೆದು ನೀರಾಯಿತು. ಮಾತನಾಡಲು ನಾಲಗೆ ಏಳದಾಯಿತು. 'ಚೆಕೊಽಽಽ....' ಎಂಬ ಅಸ್ಪಷ್ಟಧ್ವನಿಯು ಆಕೆಯ ಬಾಯಿಂದ ಹೊರಟಿತು. ಒಮ್ಮೆಲೆ ಯಾರೋ ಆಕೆಯ ಬಾಯನ್ನು ಗಟ್ಟಿಯಾಗಿ ಮುಚ್ಚಿದರು. ಈಗಾಗಲೇ ನೂರಾರು ಜನ ಶತ್ರುಗಳು- ಎಲ್ಲೆಡೆಯಲ್ಲಿಯೂ ಹರಡಿದ್ದರು. ಇವಾನೊವನಾಳ ಶಬ್ದಗಳು ಚೆಕೊವನ ಎದೆಯಲ್ಲಿ ತೀಕ್ಷ್ಣವಾಗಿ ನೆಟ್ಟಿದ್ದುವು. ಮರುಕ್ಷಣದಲ್ಲಿಯೆ ಚೆಕೊವನ ಗುಡಿಸಿಲಿಗೆ ಬೆಂಕಿಹತ್ತಿ 'ಧಗ್....ಧಗ್' ಎಂದು ಉರಿಯ ತೊಡಗಿತು. ಚೆಕೊವ ಅದನ್ನು ನೋಡಿ ಕುಸಿದುಬಿದ್ದ. ಮೇಲೆ ಬೂಟಿನ ಪ್ರಹಾರಗಳು. ಬಲವಾದ ಪೆಟ್ಟಿನಿಂದ ಮೂಗೊಡೆಯಿತು. ರಕ್ತದಿಂದ ಮೈಮೇಲಿನ ಅರಿವೆಗಳು ತೊಯ್ದುವು. 'ಇವಾನೊವನಾಳ ಗತಿ ಏನಾಯಿತು? ಪುಟ್ಟ ಲೆವೊನಿಡ್ ಗುಡಿಸಿಲಿನಲ್ಲಿ ಸಿಕ್ಕಿರಬಹುದೇ?' ಎಂಬ ವಿಚಾರಗಳಲ್ಲಿ ಅವನ ಹೆಜ್ಜೆ ಕಿತ್ತಲೊಲ್ಲವು. ಏಳುತ್ತ ಬೀಳುತ್ತ ಗುಡಿಸಿಲಿಗೆ ಹೋದ. ಗುಡಿಸಿಲು ಅರ್ಧಮರ್ಧ ಸುಟ್ಟಿತ್ತು. ಅಲ್ಲಿ ಇವಾನೊವನಾ ಕಾಣಲಿಲ್ಲ, ಲೆವೊನಿಡ್‌ನೂ ಇದ್ದಿಲ್ಲ. ಚೆಕೊವನಿಗೆ ತನ್ನ ಹೆಂಡತಿ ಮಗ ಗುಡಿಸಿಲಲ್ಲಿ ಸಿಕ್ಕರೋ, ಶತ್ರುಗಳು ಅವರನ್ನು ಸೆರೆಹಿಡಿದು ಒಯ್ದರೋ ಎಂಬುದು ತಿಳಿಯದಾಯಿತು. ಅತ್ತಿತ್ತ ನೋಡಿದ, ಶತ್ರುಗಳು ಮುಂದೆಸಾಗಿದ್ದರು. ಅವರಿಂದ ಹೆಂಡತಿ-ಮಕ್ಕಳನ್ನು ಬಿಡಿಸಿಕೊಳ್ಳುವುದು ಚೆಕೊವನಿಗೆ ಸಾಧ್ಯವಾದೀತೆ? 'ಪ್ರಿಯ ಇವಾನೊವನಾಽಽಽ...., ಪುಟ್ಟ ಲೆವೊನಿಡ್!' ಎಂದು ದುಃಖಿಸುತ್ತ ನೆಲದಮೇಲೆ ಬಿದ್ದ.

ನಸುಕಾಯಿತು, ಸುತ್ತಲೂ ಮಂಜು ಉದುರುತ್ತಿತ್ತು, ಚೆಕೊವ ಉದಯಿಸುತ್ತಿದ್ದ ಸೂರ್ಯನನ್ನು ನೋಡುತ್ತ ಕುಳಿತ. ಸೂರ್ಯನು ಮೇಲಕ್ಕೇರಿದಹಾಗೆ ಮಂಜು ತಿಳಿಯಾಗಹತ್ತಿತು. ಹೊಲದ ತುಂಬ ಬೂದಿ ಹರಡಿತ್ತು. ಗುಡಿಸಿಲು ಪೂರಾ ಸುಟ್ಟು ಹೋಗಿತ್ತು. ಚೆಕೊವ ಹೊರಳಿ ಊರಕಡೆಗೆ ನೋಡಿದ; ಮೈಮೇಲೆ ಮುಳ್ಳೇಳುವಂತಹ ದೃಶ್ಯ: ಕೆಲವು ಮನೆಗಳು ಇನ್ನೂ ಉರಿಯುತ್ತಿದ್ದುವು, ಕೆಲವನ್ನು ಬೇಕೆಂತಲೇ ಕೆಡವಿದ್ದರು. ಊರನ್ನು ಗುರುತಿಸುವುದೂ ಕಠಿನವಾಗಿತ್ತು. ಊರಲ್ಲಿ ಎಲ್ಲಕ್ಕೂ ಎತ್ತರವಿದ್ದ ಚರ್ಚು ಇನ್ನೂ ಹೊಗೆಕಾರುತ್ತಿತ್ತು. ಕೆಲವು ತಾಸುಗಳಲ್ಲಿಯೆ ಶತ್ರುಗಳು ದೇದಿಲೊವೊವನ್ನು ಈಪರಿಯಾಗಿ ಹಾಳುಮಾಡಿದ್ದರು. ರಶಿಯಾದೇಶ, ಅಲ್ಲಿಯ ಕೂಲಿಕಾರರು ಮತ್ತು ಜನರು ಸಾಧಿಸಿದ ಧ್ಯೇಯಗಳು ಮತ್ತು ಸಮಾಜಜೀವನದ ಸುಧಾರಣೆಗಾಗಿ ಅವರು ಮಾಡಿದ ಪ್ರಯತ್ನ—ಇವುಗಳ ವಿಷಯವಾಗಿ ಶತ್ರುಗಳಿಗೆನಿಸುತ್ತಿದ್ದ ಭಯಂಕರ ದ್ವೇಷವು, ಆ ವಿಧ್ವಂಸಗಳಲ್ಲಿ ಒಡಮೂಡಿದ್ದಿತು. ಮಾನವಸಂಸ್ಕೃತಿಯ ಅಧೋಗತಿಯ ಚಿಹ್ನೆಗಳಿವು! ಸುಧಾರಣೆಯ ಕೊನೆಯ ಮೆಟ್ಟಿಲನ್ನು ಹತ್ತಿದ್ದೇವೆಂದು ಹೆಮ್ಮೆಪಡುವ ರಾಷ್ಟ್ರದ ಕೃತಿಗಳಿವು! ನೋಡುನೋಡುತ್ತ ಚೆಕೊವನ ಬಿಸಿನೆತ್ತರು ತಲೆಗೇರಿತು. ಮೈಮೇಲೆ ರೋಮಾಂಚಗಳೆದ್ದುವು. ಕಣ್ಣುಗಳು ಕಿಡಿಯನ್ನು ಕಾರಹತ್ತಿದುವು. ಸೇಡು-ಉದ್ವೇಗ-ಜುಗುಪ್ಸೆಗಳು ಒಮ್ಮೆಲೆ ಆತನ ಮನಸ್ಸಿನಲ್ಲಿ ಕೋಲಾಹಲವನ್ನು ಎಬ್ಬಿಸಿದುವು.

* * *

ಚೆಕೊವ ತುಸು ದಿವಸಗಳಲ್ಲಿಯೆ ಸೈನ್ಯದಲ್ಲಿ ಸೇರಿದ. ಎಷ್ಟೋ ದಿವಸದ ಆತನ ಬಯಕೆ ಈಡೇರಿತು. ಒಮ್ಮನಸ್ಸಿನಿಂದ ದೇಶಕ್ಕಾಗಿ ಹೋರಾಡುವುದನ್ನು ನಿಶ್ಚಯಿಸಿದ. ಸೈನ್ಯದಲ್ಲಿ ಕೆಲಸ ಮಾಡುವುದೆಂದರೆ ಚೆಕೊವನಿಗೆ ಮರುವು. ಆತನ ದರ್ಪದ ಮುಖ ಮೇಲಧಿಕಾರಿಗಳ ಮನಸಿನಲ್ಲಿ ಕೂಡಲೆ ಆದರವನ್ನು ಹುಟ್ಟಿಸುತ್ತಿತ್ತು. ಧೈರ್ಯ-ಸಾಹಸಗಳು ಆತನಲ್ಲಿ ತುಂಬಿ ತುಳುಕುತ್ತಿದ್ದುವು. ಒಮ್ಮೆ ಆತನ ಮೇಲಧಿಕಾರಿಯು ಅವನ ಸಾಹಸವನ್ನು ಕಂಡು, ಅವನನ್ನು ನಾಯಕನನ್ನಾಗಿ ಮಾಡಿದ. ಶತ್ರುಗಳನ್ನು ತಡೆಯಲು ಚೆಕೊವನ ಜನರು ಎಲ್ಲರಿಗಿಂತ ಮುಂದೆ. ಗುರಿ ಹೊಡೆಯುವುದರಲ್ಲಿರುವ ಆತನ ಕೈಚಳಕವನ್ನು ನೋಡಿ, ಸೇನಾಪತಿಯು ಮೆಚ್ಚಿದ. ತುಸು ದಿವಸಗಳಲ್ಲಿಯೇ ಚೆಕೊವ ಒಂದು ಚಿಕ್ಕ ದಂಡಿಗೆ ಸೇನಾಪತಿಯಾದ.

* * *

ಗೋಲುಬೊವಕಾದ ಬಳಿಯನ್ನು ಶತ್ರುಗಳು ತಲ್ಪಿದ್ದರು. ಅವರನ್ನು ತಡೆಯದೆ ಹಾಗೆಯೇ ಅವರನ್ನು ಮುಂದೆ ಬರಗೊಡುವುದರಿಂದ, ಕಾನೇವ್ ಪಟ್ಟಣಕ್ಕೆ ಗಂಡಾಂತರವುಂಟಾಗುತ್ತಿತ್ತು. ಹೇರಳವಾದ ಯುದ್ಧಸಾಮಗ್ರಿಯು ಆ ಪಟ್ಟಣದಲ್ಲಿ ತಯಾರಾಗುತ್ತಿತ್ತು. ಅದರ ರಕ್ಷಣೆಗಾಗಿ ರಶಿಯನ್ ಸೇನಾಧಿಪತಿಯು ತನ್ನ ದಂಡಿನ ಬಹುಭಾಗವನ್ನು ತೊಡಗಿಸಿದ್ದ. ಯಂತ್ರಸಾಮಗ್ರಿಯನ್ನು ಬೇರೆಕಡೆಗೆ ಸಾಗಿಸುವ ಕಾರ್ಯವು ಹಗಲು ರಾತ್ರಿ ಒಂದೇಸವನೆ ನಡೆದಿತ್ತು. ಗೊಲುಬೊವಕಾವನ್ನು ಕೈವಶ ಮಾಡಿಕೊಂಡರೆ 'ಹಾಽ..ಹಾಽ' ಎನ್ನುವುದರೊಳಗಾಗಿಯೇ ಕಾನೇವವನ್ನು ಕೈವಶಮಾಡಿಕೊಳ್ಳುವೆನೆಂಬ ಹಂಚಿಕೆಯಲ್ಲಿ ಜರ್ಮನ್ ಸೇನಾಧಿಪತಿ ಇರಬಹುದು. ಗೊಲುಬೊವಕಾ ರಕ್ಷಣದ ಹೊರೆಯು ಚೆಕೊವನ ಮೇಲೆಯೇ ಬಿತ್ತು. ಬೇಕಾದುದನ್ನೂ ಮಾಡಿ ಎರಡು ದಿವಸಗಳವರೆಗೆ ಶತ್ರುಗಳನ್ನು ತಡೆಯಬೇಕೆಂದು, ಚೆಕೊವನಿಗೆ ಸೇನಾಧಿಪತಿಯ ಆಜ್ಞೆಯಾಯಿತು.

ಗೋಲುಬೊವಕಾ ಗೆಲ್ಲಲು, ಜರ್ಮನರು ಹಗಲು ರಾತ್ರಿ ಎನ್ನದೆ ಪ್ರಯತ್ನಮಾಡತೊಡಗಿದರು. ರಶಿಯನ್ ತೋಫುಗಳು ಒಂದು

ಹೆಜ್ಜೆಯಷ್ಟೂ ಮುಂದಕ್ಕೆ ಬರಗೊಡಲೊಲ್ಲವು. ಗುಂಡುಗಳು ಶತ್ರುಗಳ ಆಯಕಟ್ಟಿನ ಸ್ಥಳದಲ್ಲಿ ಬೀಳುತ್ತಿದ್ದುವು. ಜರ್ಮನ್ ಸೈನ್ಯದಲ್ಲಿ ತುಂಬಾ ಹಾಹಾಕಾರವೆದ್ದಿತು. ಕೆಚ್ಚೆದೆಯ ಶತ್ರು ಸೇನಾಪತಿಯು ಒಂದು ಹೆಜ್ಜೆಯನ್ನಾದರೂ ಹಿಂದೆಗೆಯಬಾರದೆಂದು ಮಾಡಿದ ಪ್ರಯತ್ನವು ಮಣ್ಣುಗೂಡುವಂತೆ ತೋರಿತು. ಟ್ಯಾಂಕು-ವಿಧ್ವಂಸಕ, ಮತ್ತು ವಿಮಾನವಿಧ್ವಂಸಕ ತೋಪುಗಳಿಂದ ಶತ್ರುಗಳ ಹಾನಿಯು ಮಿತಿಮೀರಿತು. ಅದರ ಮೇಲೆಯೆ ಶತ್ರುವಿನ ಭರವಸೆ ಹೆಚ್ಚು. ಏನು ಮಾಡಬೇಕೆಂಬುದು ಜರ್ಮನನಿಗೆ ಹೊಳೆಯದಾಯಿತು. ಯುದ್ಧಸಾಮಗ್ರಿಯ ನಾಶ ಮತ್ತು ಜನರ ಸಂಹಾರವು ಶತ್ರುಸೇನಾಧಿಪತಿಯ ಎದೆಯನ್ನು ಅಳುಕಿಸಿತು. ತೋಪು ಹೊಡೆಯುವವರ ಪಳಗಿದ ಕೈಯನ್ನು ಕಂಡು ಬೆರಳು ಕಚ್ಚಿದರು. ಇಷ್ಟೆಲ್ಲ ಹಾವಳಿಯನ್ನು ಎಬ್ಬಿಸಿದವನು ಜೆಕೊವನೇ ಆಗಿದ್ದ. ಎರಡು ದಿವಸ ಹಾದಿನೋಡಿ ಶತ್ರುಗಳು ಹಿಂದೆಗೆಯುವುದರಲ್ಲಿದ್ದರು. ಆದರೆ ಕುಟಿಲನೀತಿಜ್ಞನಾದ ಶತ್ರುಸೇನಾಧಿಪತಿಗೆ ಕುಯುಕ್ತಿ ಹೊಳೆಯಿತು.

ಇಳಿಹೊತ್ತಾಗಿತ್ತು. ಮಧ್ಯಾಹ್ನದಿಂದಲೂ ಶತ್ರುಸೈನ್ಯದಲ್ಲಿ ಏನೊಂದೂ ಗದ್ದಲವಿರಲಿಲ್ಲ. ಅವರು ಹಿಂದೆಗೆಯುವುದರಲ್ಲಿ ಇದ್ದಾರೆಂದು ತೋರುತ್ತಿತ್ತು. ತೋಪುಗಳು ನಿಃಶಬ್ದವಾಗಿದ್ದುವು. ಎರಡು ದಿವಸ ನಿದ್ದೆಯಿಲ್ಲದೆ ಜೆಕೊವನು ಶತ್ರುಗಳನ್ನು ಹಿಮ್ಮೆಟ್ಟಿಸಲು ಪ್ರಯತ್ನ ಮಾಡುತ್ತಿದ್ದ. ಅವನ ಮುಖ ನಿಸ್ತೇಜವಾಗಿತ್ತು. ಶತ್ರುಗಳನ್ನು ಹಿಮ್ಮೆಟ್ಟಿಸಲು ಎಳ್ಳಷ್ಟಾದರೂ ದುರ್ಲಕ್ಷ್ಯಮಾಡಿರಲಿಲ್ಲ. ‘ಪಿತೃದೇಶವನ್ನು ರಕ್ಷಿಸಿರಿ! ಶತ್ರುಗಳನ್ನು— ಜೀವವಿರುವ ವರೆಗೆ— ಮುಂದೆ ಬರಗೊಡಬೇಡಿರಿ! ಇಲ್ಲಿ ಅವರು ಬರುತ್ತಿರುವುದು ನಮ್ಮ ಸ್ವಾತಂತ್ರ್ಯಹರಣಕ್ಕಾಗಿ! ನಮ್ಮನ್ನು ನಿರಂತರ ತಮ್ಮ ದಾಸ್ಯದಲ್ಲಿ ಎಳೆಯಲಿಕ್ಕಾಗಿ! ಧೈರ್ಯಗುಂದದೆ ಶತ್ರುವನ್ನು ಎದುರಿಸಿರಿ! ಅಂತಿಮ ವಿಜಯವು ನಿಮ್ಮದೇ!’ ಎಂದು ಜೆಕೊವ ಪ್ರತಿಯೊಬ್ಬ ಸೈನಿಕನನ್ನೂ ಹುರಿದುಂಬಿಸುತ್ತಿದ್ದ.

ಟೆಲಿಸ್ಕೋಪ್‌ನಿಂದ ಶತ್ರುಗಳ ಸುಳಿವಿನ ಮೇಲೆ ಜೆಕೊವನು ಚೆನ್ನಾಗಿ ಕಣ್ಣಿಟ್ಟಿದ್ದ. ಒಮ್ಮೆಲೆ ಶತ್ರುಗಳ ತೋಪುಗಳು ಗರ್ಜಿಸತೊಡಗಿದುವು. ಜೆಕೊವ ಚೇತರಿಸಿ ಟೆಲಿಸ್ಕೋಪ್‌ನಿಂದ ನೋಡಹತ್ತಿದ. ಟೆಲಿಸ್ಕೋಪ್‌ನಲ್ಲಿ ಕಾಣಿಸಿದ ದೃಶ್ಯಕ್ಕೆ ಬೆರಗಾದ. ಸಾವಿರಾರು ರಶಿಯನ್ ಸೆರೆಯಾಳುಗಳನ್ನು ಅಲ್ಲಲ್ಲಿ ಗುಂಪುಗುಂಪಾಗಿ ನಿಲ್ಲಿಸಿದ್ದರು. ಚಿಕ್ಕಮಕ್ಕಳು ಅಂಜಿ ತಮ್ಮ ತಮ್ಮ ತಾಯಿದಿರನ್ನು ಅಪ್ಪಿದ್ದುವು. ಎಲ್ಲರ ಮೈಮೇಲಿನ ಅರಿವೆಗಳು ಹರಿದಿದ್ದುವು. ಅವರ ಹಿಂದೆ, ಚೆದರಿದ್ದ ತಮ್ಮ ಸೇನೆಯನ್ನು ಸಜ್ಜುಗೊಳಿಸಿ ಮುನ್ನುಗ್ಗುವ ವಿಚಾರದಲ್ಲಿ ಶತ್ರುಗಳು ಇದ್ದರು. ಜೆಕೊವನಿಗೆ ಕಾದ ಕಬ್ಬಿಣದ ಸಲಾಕೆಯಿಂದ ಬರೆಕೊಟ್ಟಂತೆಯಿತು. ಕೈವಸ್ತ್ರದಿಂದ ಕಾಜನ್ನು ಒರಸಿ ಮತ್ತೆ ನೋಡಹತ್ತಿದ. ಕೈನಡುಗಿ ಟೆಲಿಸ್ಕೋಪು ಕೆಳಕ್ಕೆ ಬಿತ್ತು. ಅಲ್ಲಿ ಇವಾನೊವನಾಳಂತೆ ಯಾರೋ ಕಾಣಿಸಿರಬಹುದು ಅವನಿಗೆ. ಸೂಕ್ಷ್ಮದೃಷ್ಟಿಯಿಂದ ಮತ್ತೆ ನೋಡಹತ್ತಿದ; ಅವಳು ಇವಾನೊವನಾಳೇ ಆಗಿದ್ದಳು. ಈಗಾಗಲೆ ಅವಳು ಶತ್ರುಗಳ ನೀಚಕೃತ್ಯಕ್ಕೆ ಆಹುತಿ ಬಿದ್ದಿದ್ದಳು. ಆಕೆ ತೀರ ಬಡಕಲಾಗಿದ್ದಳು. ಸೌಂದರ್ಯವು ಅಂದಗೆಟ್ಟಿತ್ತು. ಮೈಮೇಲಿನ ವಸ್ತ್ರವು ಸ್ತ್ರೀತ್ವದ ರಕ್ಷಣೆಯನ್ನು ಕೂಡ ಮಾಡುತ್ತಿರಲಿಲ್ಲ. ಲೆವೊನಿಡ್ ಅವಳ ಬಳಿಯಲ್ಲಿ ಇದ್ದಿಲ್ಲ. ಗಾಳಿಗೆ ಕೂದಲುಗಳು ಹುಲ್ಲಿನಂತೆ ಹಾರಾಡುತ್ತಿದ್ದುವು. ‘ದೇಶಕ್ಕಾಗಿ ತನಗೆ ಜೀವದ ಪರಿವೆ ಇಲ್ಲ!’ ಎಂಬಂತೆ ಆಕೆಯು ನಿಶ್ಚಲಳಾಗಿ ನಿಂತಿದ್ದಳು. ಜೆಕೊವನಿಗೆ ಆನಂದವಾಯಿತು; ಆದರೆ ಕೂಡಲೆ ಅದು ಮಾಯವಾಯಿತು. ಬಿಸಿನೆತ್ತರು ಆತನ ತಲೆಗೇರಿತು. ದುಃಖವು ಕಣ್ಣೊಳಗಿಂದ ಹರಿದುಹೋಗುತ್ತಿತ್ತು. ಇವಾನೊವನಾಳೊಡನೆ ತಾನು ಸುಖವಾಗಿ ಜೀವಿಸುತ್ತಿದ್ದುದು ನೆನಪಾಯಿತು. ನೆನಪು ಮಿಂಚಿನಂತೆ ಕಾರ್ಮೋಡಗಳಲ್ಲಿ ಅಡಗಿತು. ‘ಇವಾನೊವನಾ, ನಿನಗೆ ಇಂತಹ ಸ್ಥಿತಿಯು ಬರುವುದೆಂದು ಯಾರು ತಿಳಿದಿದ್ದರು? ನಾನು ಸೇನಾಪತಿಯಾದದ್ದು ನಿನಗೆ ಹೇಗೆ ತಿಳಿಯುವುದು? ಬಾಂಧವರೇ, ದೇಶಕ್ಕಾಗಿ ನಿಮ್ಮೆಲ್ಲರನ್ನೂ ಈಗ ಗುಂ....ಡು.... ನಿರಪರಾಧಿಗಳಾದ ನೀವು ಏನು ಮಾಡಿದ್ದೀರಿ? ದೇಶಕ್ಕಾಗಿ, ನಿಮ್ಮೆಲ್ಲರ ಪರಿವೆ ನನಗೇನು? ಇವಾನೊ....ನೀನೆಷ್ಟರವಳು! ನೀಚ ಶತ್ರುಗಳೇ, ನನ್ನ ಬಾಂಧವರನ್ನು ಮುಂದೆ ಮಾಡಿ ಕಪಟದಿಂದ ಜಯಹೊಂದಲು ಬಯಸುವಿರಾ? ನಿಜವಾಗಿಯೂ ನೀಚರೇ, ನೀವು ಮೋಸ ಹೋದಿರಿ! ತನ್ನ ಸಾವಿರಾರು ಬಾಂಧವರನ್ನು ಆಹುತಿಗೊಟ್ಟು ನಿಮ್ಮನ್ನು ಮಣ್ಣುಪಾಲು ಮಾಡಲು ಜೆಕೊವ ಇಲ್ಲಿ ನಿಂತಿರುವುದು ನಿಮಗೆ ಹೇಗೆ ಗೊತ್ತಾಗಬೇಕು?’ ಎಂಬ ವಿಚಾರಗಳು ಕ್ಷಣಾರ್ಧದಲ್ಲಿ ಆತನ ತಲೆಯಲ್ಲಿ ಮಿಂಚಿ ಹೋದುವು.

ಸೆರೆಯಾಳುಗಳನ್ನು ಮುಂದೆ ಮಾಡಿ, ಶತ್ರುಗಳು ಮುನ್ನುಗ್ಗಹತ್ತಿದರು. ಎರಡೂ ಕಡೆಯ ಸಾವಿರಾರು ವಿಮಾನಗಳು ಆಕಾಶದಲ್ಲಿ ಕೋಲಾಹಲವನ್ನು ಎಬ್ಬಿಸಿದುವು. ಜಯಾಪಜಯಗಳು ಜೆಕೊವನನ್ನು ಅವಲಂಬಿಸಿದುವು. ಸೂರ್ಯನು ಇನ್ನೂ ಮುಳುಗುತ್ತಿದ್ದ. ಸೈನಿಕರು ಜೆಕೊವನನ್ನು ಆಜ್ಞೆಗಾಗಿ ಗಾಬರಿಯಿಂದ ನೋಡಹತ್ತಿದರು. ಅವನು ಈಗ ಪೂರ್ಣ ಸ್ಮೃತಿಯ ಮೇಲೆ ಇರಲಿಲ್ಲ. ಕೈಸನ್ನೆಯಿಂದಲೇ ಆಜ್ಞೆ ಇತ್ತ. ತೋಪುಗಳು ಒಮ್ಮೆಲೆ ಗರ್ಜಿಸಹತ್ತಿ, ಹೊಗೆಯು ರಾಶಿರಾಶಿಯಾಗಿ ಮೋಡಗಳನ್ನು ಮುದ್ದಿಡುತ್ತಿತ್ತು.

ಇವಾನೊವನಾಳೊಂದಿಗೆ ಎದುರಿನ ನಿರಪರಾಧಿ ಸ್ವಜನರು ಆ ಧೂಮರಾಶಿಯಲ್ಲಿ ಮಾಯವಾದರು.

ಪೊನ್ನು ಪಾಪಾತಿ

(ಒಂದು ಮನೋವಿಶ್ಲೇಷಣಾತ್ಮಕ ಕತೆ)*

ಶ್ರೀ 'ಭಾರತೀಸುತ' ಕೊಡಗು

★

ಅವಳು ತನ್ನ ಕೈಹಿಡಿದವನನ್ನು ಒಂದು ದಿನವಾದರೂ ಪ್ರೀತಿಸಿರಲಿಲ್ಲ. ಪ್ರೀತಿಯೇನೆಂಬುದನ್ನು ಅವಳು ತಿಳಿಯಳು. ಗಂಡನೆಂದರೆ ತನ್ನನ್ನು ಪೀಡಿಸಲು, ವೇದನೆಯ ಮುಳ್ಳುಗಳಿಂದ ಎದೆಯನ್ನು ಚುಚ್ಚಲು ಇರುವ ಒಂದು ವ್ಯಕ್ತಿಯೆಂಬುದು ಅವಳ ಅಂದಿನ ಭಾವನೆಯು. ಕೈಹಿಡಿದಾತನು ಒಂದು ದಿನವಾದರೂ ಅವಳೊಡನೆ ಪ್ರೀತಿಯ ಮಾತುಗಳನ್ನಾಡಿರಲಿಲ್ಲ; ಅವಳನ್ನು ಆದರಿಸಿ, ಅವಳ ಜೀವಕ್ಕೆ ಚೆಲುವು-ನಲಿವುಗಳನ್ನುಣಿಸಿರಲಿಲ್ಲ. ತನ್ನ ಎದೆಯೊಳಗಿನ ವಾಸನೆಯನ್ನು ತೃಪ್ತಿಗೊಳಿಸಲಿರುವ ಒಂದು ಉಪಕರಣವೆಂದು ಆತನು ಅವಳನ್ನು ಬಗೆದಿದ್ದ; ಅದರಂತೆಯೆ ವರ್ತಿಸುತಿದ್ದ. ಆಕೆಯ ಬಯಕೆ-ಒಲವುಗಳೆತ್ತ ಹರಿಯುತ್ತಿವೆ ಯೆಂಬ ಆಲೋಚನೆ ಅವನ ಚಿತ್ತದಲ್ಲಿ ಸುಳಿಯುತಿರಲಿಲ್ಲ. ಅವಳಿಗೆ ಇಷ್ಟವಿಲ್ಲದಿದ್ದರೂ ಅವನ ಆಶೆ-ಆಕಾಂಕ್ಷೆಗಳನ್ನು ಅವಳು ನೆರವೇರಿಸಬೇಕು. ಅದಕ್ಕಾಗಿಯೆ ಆಕೆಯ ಬದುಕು ಮುಡಿಪಾಗಿರುವುದು.

ನಾಯರ ಜಾತಿಯ ರೂಢಿಯಂತೆ, ಅವಳು ತನ್ನ ಮಾವನ ಮನೆಯಲ್ಲಿ ವಾಸಿಸುತಿದ್ದಳು. ಅವಳೇನೂ ಅವನಿಗೆ ಹತ್ತಿರದ ಸೊಸೆಯಲ್ಲ, ದೂರದ ಸಂಬಂಧಿಕಳು. ಆ ಕುಟುಂಬಕ್ಕೆ ಸೇರಿದವಳೆಂದಲ್ಲದೆ ಅದಕ್ಕಿಂತ ಹೆಚ್ಚಿನ ಸ್ನೇಹವು ಮಾವನಿಗೆ ಅವಳ ಮೇಲಿರಲಿಲ್ಲ. ಆಕೆ ತನ್ನ ಕುಟುಂಬಕ್ಕೆ ಸೇರಿದವಳೆಂಬ ಕಾರಣದಿಂದ, ಅವನು ಪಾರುಕುಟ್ಟಿಗೆ (ಇದು ಅವಳ ಹೆಸರು) ಅನ್ನ-ಬಟ್ಟೆಗಳನ್ನು ಕೊಟ್ಟು ಸಾಕುತಿದ್ದ. ಪಾರುಕುಟ್ಟಿ ಅತ್ತೆಯ ಆಣತಿಯಂತೆ ಮನೆಗೆಲಸಗಳನ್ನು ಮಾಡಬೇಕಾಗಿದ್ದಿತು. ಅತ್ತೆಯ ಹೇಳಿಕೆಯನ್ನು ಮೀರುವಂತಿಲ್ಲ. ತಪ್ಪಿ ನಡೆದರೆ ಬೈಗಳ ಸುರಿಮಳೆ; ಕೆಲವು ವೇಳೆ ಹೊಡೆತಗಳ ಉಡುಗೊರೆಗಳೂ ದೊರೆಯುತ್ತಿದ್ದುವು.

ರಾತ್ರಿಯ ಹೊತ್ತು ಪಾರುಕುಟ್ಟಿಯ ಕೈಹಿಡಿದಾತನು ಮನೆಗೆ ಬರುತಿದ್ದ. ದಿನದ ಕೆಲಸಗಳಿಂದ ಅವಳು ದಣಿದು ಬೆಂಡಾಗಿರುತ್ತಿದ್ದಳು. ಆದರೂ ಅವಳು ತನ್ನ ಒಡೆಯನ ಶುಶ್ರೂಷೆಯನ್ನು ಮಾಡಬೇಕು; ಅವನಿಗೆ ಸುಖ-ಸಂತೋಷಗಳನ್ನು ನೀಡಬೇಕು. ಇಲ್ಲದಿದ್ದರೆ ಅವಳಿಗೆ ಅವನಿಂದ ಒದೆಗಳು ಸಿಕ್ಕುತ್ತಿದ್ದುವು. ಅವನೊಬ್ಬ ಸೆರೆಗುಡುಕ; ಯಾವಾಗಲೂ ಸೆರೆಯನ್ನು ಕುಡಿದೇ ಮನೆಗೆ ಬರುತ್ತಿದ್ದ. ಮೈಮೇಲೆ ಪ್ರಜ್ಞೆಯಿರುತಿರಲಿಲ್ಲ. ಮನೆಯ ತಲುಪಿದೊಡನೆಯೆ ಮಡದಿಯನ್ನು ಬೈಯಲು ಆರಂಭಿಸುತಿದ್ದ. ಕೆಲವು ವೇಳೆ ಏಟುಗಳು ಬೀಳುತ್ತಿದ್ದುವು. ಇವುಗಳನ್ನು ತಾಳಿಕೊಂಡು ಪಾರು ಅವನಿಗೆ ಉಪಚಾರಗಳನ್ನು ಮಾಡುತಿದ್ದಳು; ಅವನ ಇಚ್ಛೆಗಳನ್ನು ಪೂರಯಿಸುತಿದ್ದಳು. 'ತನ್ನ ಹಣೆಬರೆಹವಿದು; ತಪ್ಪಿಸಲು ಯಾರಿಂದಲೂ ಆಗದು; ದೈವವಿತ್ತುದನ್ನು ಮೌನದಿಂದ ತೆಗೆದುಕೊಳ್ಳಬೇಕು!' ಎಂಬ ವಿಚಾರ ಅವಳ ಮನಸ್ಸಿಗೆ ಹುಸಿ ನೆಮ್ಮದಿಯನ್ನು ಈಯುತ್ತಿದ್ದಿತು.

ಒಂದು ದಿನ ಮಾವನಿಗೂ ಕೈ ಹಿಡಿದವನಿಗೂ ಯಾವುದೋ ಒಂದು ಸಂಗತಿಯ ಬಗ್ಗೆ ಜಗಳವಾಯಿತು. ಕಲಹಕ್ಕೆ ಕಾರಣವೇನೆಂಬುದನ್ನು ಪಾರು ಅರಿಯಳು. ಅವರಿಬ್ಬರೂ ಅದನ್ನು ಅವಳಿಗೆ ಹೇಳಲಿಲ್ಲ, ಹೇಳುವಂತಿರಲೂ ಇಲ್ಲ. ಗಂಡನು ಹೆಂಡತಿಯನ್ನು ತೊರೆದು ಬೇರೆಕಡೆಗೆ ಹೋಗುವನೆಂಬುದಾಗಿ ಗದರಿಸಿದ. 'ನೀನು ಪಾರುಗೆ ಅನ್ನ-ಬಟ್ಟೆಗಳನ್ನು ಕೊಡುತಲಿಲ್ಲ! ನಾನು ಕೊಡುತಿದ್ದೇನೆ; ಅವಳನ್ನು ಬಿಟ್ಟು ತೊಲಗಲು ನನ್ನದೇನೂ ಅಡ್ಡಿಯಿಲ್ಲ!' ಎಂದು ಮಾವನು ರೇಗಿ ನುಡಿದ. ಈ ಕಲಹವು ಕೈ ಹಿಡಿದಾತನನ್ನು ಅವಳಿಂದ ಅಗಲಿಸಿತು. ಕೆಲವು ತಿಂಗಳ ಅನಂತರ, ಆತ ಪೆನಾಂಗಿಗೆ ಹೋದನೆಂಬುದು ಪಾರುವಿಗೆ ಗೊತ್ತಾಯಿತು.

ಗಂಡನು ತನ್ನನ್ನು ತೊರೆದನೆಂದು ಪಾರು ಬೇಸರುಪಡಲಿಲ್ಲ. ಅವರಿರ್ವರಲ್ಲಿ ಒಲವಿನ ಹೊನಲು ಹರಿಯುತಿದ್ದರಲ್ಲವೇ ಪತಿಯ ವಿಯೋಗಕ್ಕೋಸುಗ ಮರುಗುವುದು? ಆ ತನಕ ರಾತ್ರಿ ವೇಳೆ ಕೂಡ ಪಾರುವಿಗೆ ಬಿಡುವು ದೊರೆಯುತ್ತಿರಲಿಲ್ಲ. ಹಗಲು ಅತ್ತೆಯ ಕಾಟವಾದರೆ, ರಾತ್ರಿ ಗಂಡನ ಪೀಡನೆ. 'ಈಗ ರಾತ್ರಿ ಕಾಲವಲ್ಲಾದರೂ ಹುಸಿ ನೆಮ್ಮದಿಯನ್ನು ಪಡೆಯಬಹುದಲ್ಲ!' ಎಂದು ಅವಳು ವಿಚಾರಿಸಿದಳು. ಹಗಲೆಲ್ಲ ಕತ್ತೆಯಂತೆ ದುಡಿಯುತ್ತಿದ್ದಳು; ರಾತ್ರಿ ಅತ್ತೆ ಬಡಿಸಿದ ಕೂಳನ್ನುಂಡು ತನ್ನ ಕೋಣೆಗೆ ಹೋಗುತ್ತಿದ್ದಳು. ಚಾಪೆಯೊಂದನ್ನು ಹಾಸಿ ಮಲಗುತ್ತಿದ್ದಳು. ಹರಕು ಕಂಬಳಿಯೊಂದನ್ನು ಹೊದೆದುಕೊಳ್ಳುತ್ತಿ-

* ಮೇಲಾಟದಲ್ಲಿ ಮೊದಲನೆಯ ಬಹುಮಾನ ಪಡೆದ ಕತೆಯಿದು.

ಸಂ. ಜ.

ದ್ದಳು. ದಿನದ ಕೆಲಸದಿಂದ ಬೆಂಡಾದ ಪಾರುವನ್ನು ನಿದ್ದೆಹೆಣ್ಣು ತನ್ನ ತೊಡೆಗಳ ಮೇಲಿರಿಸಿಕೊಂಡು ಸಂತಯಿಸುತ್ತಿದ್ದಳು. ಬೆಳಗಾದರೆ ಪುನಃ ಕೆಲಸಗಳಿಗೆ ಆರಂಭ.

* * *

ಆ ದಿನವು ಪಾರುಕುಟ್ಟಿಯ ಸ್ಮೃತಿಪಥದಲ್ಲಿ ಪ್ರವೇಶಿಸಿತು. ಅವಳಿಗೆ ಫಣೆಯ ಹುಡುಗ ಕೊಳುಂಬನ ಗೆಳೆತನವನ್ನು ಸಂಪಾದಿಸಿಕೊಟ್ಟ ದಿನವದು. ಅದು ಎಂದಿಗೂ ಅವಳ ಚಿತ್ತದಿಂದ ಅಳಿಸಿ ಹೋಗದು. ಅಂದು ಬೆಳಗಿನಲ್ಲಿ, ಬಾವಿಯಿಂದ ನೀರನ್ನು ತರಲು ಹೋಗಿದ್ದಳು. ಅವಳು ತೆಗೆದುಕೊಂಡು ಹೋದುದು ಒಂದು ದೊಡ್ಡ ಬಿಂದಿಗೆಯನ್ನು. ನೀರನ್ನು ಮೇಲಕ್ಕೆಳೆದು ಹಗ್ಗದಿಂದ ಕೊಡವನ್ನು ತೆಗೆವಾಗ, ಬಿಂದಿಗೆಯು ಕೈತಪ್ಪಿ ಆಳವಾದ ಬಾವಿಯೊಳಕ್ಕೆ ಉರುಳಿತು. ಅವಳು ಮನೆಗೆ ಹೋಗಿ ಅತ್ತೆಯ ಸಂಗಡ ನಡೆದುದನ್ನು ಉಸುರಿದಳು. ಬಿಂದಿಗೆ ಬಾವಿಯೊಳಗಾಯಿತೆಂಬುದನ್ನರಿತು ಅತ್ತೆ ಸಿಟ್ಟಿಗೆದ್ದಳು. ಬೈಗಳ ಜೊನಲು ಎಡೆಬಿಡದೆ ಹರಿಯಿತು. ಕೊನೆಗೆ ಪಾರುವಿನ ಕೆನ್ನೆಯ ಮೇಲೆ ಒಂದು ಏಟನ್ನು ಜಡಿದು 'ಹೋಗು ಮುಂಡೆ, ಬಾವಿಯೊಳಗೆ ಇಳಿದು ಕೊಡವನ್ನು ತಾ; ಇಲ್ಲದಿದ್ದರೆ ನಿನ್ನನ್ನು ಮನೆಯೊಳಗೆ ಸೇರಿಸುವಂತಿಲ್ಲ!' ಎಂದು ಅತ್ತೆ ಗದರಿಸಿದಳು.

ಏನು ಮಾಡಬೇಕೆಂಬುದು ಪಾರುವಿಗೆ ತಿಳಿಯದಾಯಿತು. ಅವಳು ಬಾವಿಯ ಸನಿಹಕ್ಕೆ ಹೋದಳು. ಬಾವಿಯ ಪಕ್ಕದಲ್ಲಿ ಕಣ್ಣೀರುಸುರಿಸುತ್ತ, ತನ್ನ ಅದೃಷ್ಟವನ್ನು ಹಳಿಯುತ್ತ ಕುಳಿತುಕೊಂಡುದಾಯಿತು. ಆಗ ಬಾವಿಯ ಬಳಿಯಲ್ಲಿ, ಹೊರಗಿನ ಕೆಲಸದ ಆಳು ಕೊಳುಂಬ ಪಾತ್ರೆಗಳನ್ನು ತೊಳೆಯುತ್ತಿದ್ದ. ಅವನು ಪಾರು ಅಳುತ್ತಲಿರುವುದನ್ನು ನೋಡಿದ. 'ಪಾಪಾತಿಪುಳ್ಳಿ, ಅಳುತ್ತಿರುವುದೇಕೆ?' ಎಂದು ಕೇಳಿದ.

'ನೋಡು, ಕೊಡವು ಬಾವಿಯೊಳಗೆ ಬಿದ್ದಿದೆ; ಅದನ್ನು ತೆಗೆದುಕೊಂಡು ಬಾರದೆ ಇದ್ದರೆ, ಮನೆಯೊಳಗೆ ಸೇರಿಸೆನೆಂದು ಅತ್ತೆ ಬೈದು ಕಳುಹಿದರು. ನಾನೇನು ಮಾಡಲಿ? ಬಾವಿಯೊಳಗೆ ಇಳಿದು ಬಿಂದಿಗೆಯನ್ನು ತೆಗೆಯುವುದು ನನ್ನಿಂದಾಗುವುದಿಲ್ಲ!'

ಕೊಳುಂಬನು ಪಾಪಾತಿಪುಳ್ಳಿಯ ಮೋರೆಯನ್ನು ನೋಡಿದ. ಆತ ಬಾವಿಯೊಳಗೆ ಇಳಿದು ಕೊಡವನ್ನು ತೆಗೆದುಕೊಡುವನೆಂದು ಅವಳು ನೆನೆದಿರಲಿಲ್ಲ. ಅವನ ಮೋರೆಯ ಮೇಲೆ ಮುದುಕದ ಗೆರೆಯೊಂದು ಸುಳಿದುದನ್ನು ಅವಳು ನೋಡಿದಳು. ತುಸ ಕಳೆದ ಮೇಲೆ ಅವನು ನುಡಿದ: 'ಪಾಪಾತಿಪುಳ್ಳಿ, ಅಳಬೇಡಿ! ನಾನು ಬಾವಿಯೊಳಗೆ ಇಳಿದು ಬಿಂದಿಗೆಯನ್ನು ತೆಗೆದುಕೊಡುತ್ತೇನೆ!'

ಕೊಳುಂಬನ ಮಾತುಗಳನ್ನು ಕೇಳಿ ಪಾರುಗೆ ಜೀವಬಂದಂತಾಯಿತು. ಅವಳು ಕಣ್ಣುಗಳನ್ನು ಒರಸಿಕೊಳುತ್ತಾ ಹೇಳಿದಳು: 'ಒಮ್ಮೆ ತೆಗೆದುಕೊಡು ಕೊಳುಂಬಾ! ನಿನ್ನ ಉಪಕಾರವನ್ನು ನಾನೆಂದಿಗೂ ಮರೆಯಲಾರೆ!'

ಕೊಳುಂಬನು ಪಾತ್ರೆ ತೊಳೆವುದನ್ನು ನಿಲ್ಲಿಸಿದ. ಬಾವಿಯ ಹತ್ತಿರಕ್ಕೆ ಬಂದು, ಹಗ್ಗವನ್ನು ಹಿಡಿದುಕೊಂಡು ಬಾವಿಯೊಳಕ್ಕೆ ಇಳಿದ. ಬಿಂದಿಗೆಯನ್ನು ಹೊರತೆಗೆದುದಾಯಿತು. ಬಿಂದಿಗೆಯನ್ನು ಹಗ್ಗಕ್ಕೆ ಸಿಕ್ಕಿಸಿ ಬಾವಿಯಿಂದ ಮೇಲಕ್ಕೆ ಹತ್ತಿದ. ಬಿಂದಿಗೆಯನ್ನು ಪಾರುವಿನ ಕೈಗಳಿಗಿತ್ತು ಕೊಳುಂಬ ಹೇಳಿದ: 'ಪಾಪಾತಿ ಪುಳ್ಳಿ, ಇನ್ನು ಅಳಬೇಡಿ! ಬಾವಿಯೊಳಗಿಂದ ಕೊಡವನ್ನು ತೆಗೆದು ತಂದಿದ್ದೇನೆ!'

ಪಾರುವಿನ ಕಣ್ಣುಗಳಿಂದ ಕೃತಜ್ಞತೆಯ ಕಿರಣವೊಂದು ಹೊರಸೂಸಿತು. ಅವಳು ಕೊಡವನ್ನು ತೆಗೆದುಕೊಳ್ಳುತ್ತಾ ಹೇಳಿದಳು: 'ಕೊಳುಂಬ, ನೀನಿತ್ತ ನೆರವನ್ನು ನಾನು ಮರೆಯೆನು. ನನ್ನ ಕಷ್ಟಗಳನ್ನು ನೋಡಿ ನನಗೆ ಸಹಾಯಮಾಡಿದವನೆಂದರೆ ನೀನೊಬ್ಬನು ಮಾತ್ರ!'

ಪಾರು ಬಾವಿಯಿಂದ ನೀರು ಸೇದಿಕೊಂಡು ಮನೆಗೆ ಹೋದಳು. ತನ್ನ ದುಃಖವನ್ನು ನೋಡಿ ಒಬ್ಬ ಫಣೆಯ ಹುಡುಗನು ನೆರವನ್ನಿತ್ತನಲ್ಲ— ಎಂಬುದು ಆಕೆಯ ಸಂತಸಕ್ಕೆ ಕಾರಣವಾಯಿತು. ಅತ್ತೆಯ ಸಿಟ್ಟಿನಿಂದ ಪಾರಾದೆನಲ್ಲ— ಎಂದು ಅವಳ ಜೀವವು ಸಮಾಧಾನವನ್ನು ತಳೆಯಿತು.

ಅಂದು ಸಂಜೆಗೆ ಕೊಳುಂಬನು ದನಗಳನ್ನು ಹಟ್ಟಿಗೆ ಸೇರಿಸಿ ಮನೆಗೆ ಬರುವಾಗ, ಪಾರುಕುಟ್ಟಿ ಅತ್ತೆಗೆ ಕಾಣದಂತೆ ಎರಡು ರೊಟ್ಟಿಗಳನ್ನು ತೆಗೆದು ಬೇರೆ ಇರಿಸಿದ್ದಳು. ಮಾವನ ಎಲೆಯ ಪೆಟ್ಟಿಗೆಯಿಂದ ಎರಡು ವೀಳ್ಯದೆಲೆ, ನಾಲ್ಕುಚೂರು ಅಡಿಕೆ, ಒಂದು ಚೂರು ಹೊಗೆಸೊಪ್ಪು ಜೋಪಾನಮಾಡಿದ್ದಳು. ಕೊಳುಂಬನು ಹಟ್ಟಿಗೆ ದನಗಳನ್ನು ಸೇರಿಸಿ ಮನೆಗೆ ಬಂದ. ಇತರರಿಗೆ ಕಾಣದಂತೆ ಪಾರು ಅವನನ್ನು ಕರೆದಳು. 'ಏಕೆ?' ಎಂದವನು ಮೆಲ್ಲಗೆ ಕೇಳಿದ. 'ಏಕೆಂಬುದು ತಿಳಿಯುವುದು, ಇತ್ತ ಬಾ!' ಎಂದು ಪಾರು ಮಾರುನುಡಿದಳು. ಅವನು ಅವಳಿದ್ದೆಡೆಗೆ ಬಂದ. ತಾನು ಅಡಗಿಸಿತಂದ ರೊಟ್ಟಿಗಳನ್ನು ಕೊಳುಂಬನಿಗೆ ಕೊಟ್ಟುದಾಯಿತು. 'ಇವನ್ನು ತೆಗೆದುಕೊ, ಯಾರಿಗೂ ತೋರಿಸಬೇಡ!' ಎಂದು ಪಾರು ಉಸುರಿದಳು. 'ಇಲ್ಲ, ಯಾರಿಗೂ ಕಾಣಿಸೆನು' ಎಂದು ನುಡಿದು ಅವನು ರೊಟ್ಟಿಗಳನ್ನು ತನ್ನ ಪಚ್ಚಡದ ತುದಿಯಲ್ಲಿ ಕಟ್ಟಿಕೊಂಡುದಾಯಿತು. ಅನಂತರ ಪಾರು ಅವನಿಗೆ ವೀಳ್ಯದೆಲೆ-ಹೊಗೆಸೊಪ್ಪುಗಳನ್ನಿತ್ತಳು. ಅವುಗಳನ್ನೂ ಅವನು ತನ್ನ ಪಾಕಿನೊಳಗೆ ಸೇರಿಸಿದ. 'ಇವುಗಳನ್ನು ಕೊಟ್ಟುದು ಬಹಳ ಒಳ್ಳೆಯದಾಯಿತು. ಇವು ನನ್ನಲ್ಲಿರಲಿಲ್ಲ!' ಎಂಬ ಮಾತುಗಳು ಆತನ ಬಾಯಿಂದ ಮೆಲ್ಲಗೆ ಹೊರಟುವು. ಪಾರುವಿನ ಕಣ್ಣುಗಳು ಕೊಳುಂಬನ ಮೋರೆಯ ಮೇಲೆ ನೆಲಸಿದ್ದುವು. ಅವನ ತುಟಿಗಳ ಮೇಲೆ ಅರ್ಧ ಅರಳಿದ ನಗೆಯಲರೊಂದನ್ನು ಅವಳು ನೋಡಿದಳು.

ರೊಟ್ಟಿ ವೀಳ್ಯದೆಲೆಗಳನ್ನು ಪಡೆದುಕೊಂಡು ಕೊಳುಂಬನು ತನ್ನ ಗುಡಿಸಿಲಿಗೆ ತೆರಳಿದ. ಪಾರು ಮನೆಗೆಲಸದಲ್ಲಿ ನಿರತಳಾದಳು.

ಜಯಂತಿ

ರಾತ್ರಿ ಮನೆಗೆಲಸಗಳನ್ನು ಮುಗಿಸಿಯಾದ ಮೇಲೆ, ಪಾರು-ಕುಟ್ಟಿ ತನ್ನ ಕೋಣೆಯಲ್ಲಿ ಚಾಪೆಯನ್ನು ಹಾಸಿ, ಹರಕು ಕಂಬಳಿ-ಯೊಂದನ್ನು ಹೊದೆದು ಪವಡಿಸಿದಳು. ನಿತ್ಯದಂತೆ ಮಲಗಿ-ದೊಡನೆಯೆ ಅವಳಿಗೆ ಆ ರಾತ್ರಿ ನಿದ್ದೆ ಬರಲಿಲ್ಲ. ಅವಳ ಚಿತ್ತವು ಆ ದಿನದ ಘಟನೆಗಳನ್ನು ನೆನೆದು ಮೆಲುಕುಹಾಕತೊಡಗಿತು. ಆ ದಿನ ಜರುಗಿದ ಸಂಗತಿಗಳು ಅವಳ ಚಿತ್ತದಲ್ಲಿ ಪ್ರವೇಶಿಸಿ-ದುವು; ಅಲ್ಲಿ ತೇಲಿದುವು. ಕೊಳುಂಬನ ಚಿತ್ರವು ಅವಳ ಮನಸ್ಸಿನಲ್ಲಿ ಪ್ರತಿಬಿಂಬಿಸಿತು. ಅವನ ಎಣ್ಣೆಗೆಂಪಿನ ಮೋರೆ-ಯನ್ನು ಅವಳು ನೋಡಿದಳು. ಇತರ ಫಣಿಯರಲ್ಲಿ ತೋರದ ಒಂದು ವೈಶಿಷ್ಟ್ಯವು ಅವನ ಮೋರೆಯಲ್ಲಿ ಅವಳಿಗೆ ನೋಡಲು ದೊರೆಯಿತು. ಅವನ ಕಣ್ಣುಗಳಿಂದ ಸ್ಫುರಿಸುತ್ತಿದ್ದ ಕರುಣೆಯ ಬೆಳಕನು ಪಾರುವು ಕಂಡುದಾಯಿತು. ಅವನ ತುಟಿಗಳ ಮೇಲೆ ಮಿನುಗಿದ ಎಳನಗೆಯು ಅವಳ ದೃಷ್ಟಿಯನ್ನು ಸೆಳೆಯಿತು. ಅವನಾಡಿದ ಮಾತುಗಳು ಅವಳಿಗೆ ನೆನಪಾದುವು. ಬೇರೆ ಫಣಿಯರ ಮಾತುಗಳಂತೆ ಅವು ಒರಟಾಗಿರಲಿಲ್ಲ; ಮೃದುವಾಗಿದ್ದುವು. ಆ ನುಡಿಗಳಲ್ಲಿ ಆದರವು ತುಂಬಿದ್ದಿತು. ತನಗೆ ನೆರವನ್ನೀಯಲು ಅವನಲ್ಲದೆ ಬೇರಿನ್ನಾರೂ ಮುಂದೆ ಬರಲಿಲ್ಲ; ತನ್ನ ನೋವನ್ನು ಕಂಡು ಅವನಲ್ಲದೆ ಬೇರಿನ್ನಾರೂ ಮರುಕವನ್ನು ಸೂಚಿಸಲಿಲ್ಲ. ಕೊಳುಂಬನನ್ನು ನೆನೆಯುವಾಗ ಅವಳೆದೆಯಲ್ಲಿ ಆಪ್ತತೆ-ಆದರಗಳು ಮೂಡಿದುವು. ತನ್ನ ಅತ್ತೆ-ಮಾವ ಇವರಿಗಿಂತ ಕೊಳುಂಬನು ಅವಳಿಗೆ ಹೆಚ್ಚು ಹತ್ತಿರದವನಾಗಿ ತೋರಿದನು.

ಅಂದು ನಡೆದ ಆ ಪುಟ್ಟ ಘಟನೆಯು ಸಾಧಾರಣವಾದುದಾಗಿ-ದ್ದರೂ, ಅವಳ ಮನಸ್ಸಿನ ಮೇಲೆ ಅಪಾರ ಪರಿಣಾಮವನ್ನುಂಟು-ಮಾಡಿತು. ಅವಳುಂಡ ದುಃಖದ ಕಡೆಗೆ ಈ ತನಕ ಯಾರೂ ಕಣ್ಣುಗಳನ್ನು ಓಡಿಸಿರಲಿಲ್ಲ. ಅವಳ ಅತ್ತೆ-ಮಾವಂದಿರು 'ಅವಳಿಗೂ ನೋವಿದೆ; ಅವಳ ಜೀವವನ್ನು ಶೋಕ-ಸಂತಾಪಗಳಿಗೆ ಈಡು ಮಾಡಬಾರದು' ಎಂದು ನೆನಸಿರಲಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಅವಳಿಗೊಂದು ಪುಟ್ಟ ನೆರವನ್ನಿತ್ತ ಕೊಳುಂಬನು ಹೆಚ್ಚು ಆಪ್ತ-ನಾಗಿ ತೋರಿದುದರಲ್ಲಿ ಸೋಜಿಗವೆನಿಸದು. ಪಾರುವಿನ ಚಿತ್ತದಲ್ಲಿ ಕೊಳುಂಬನ ಆಕೃತಿಯು ಆಳವಾಗಿ ಬೇರೂರಿತು.

ಬೆಳಕು ಹರಿಯಿತು, ಬೆಳಗಾದೊಡನೆಯೆ ಪಾರುವಿನ ಪ್ರತಿ-ನಿತ್ಯದ ಕೆಲಸಗಳು ಆರಂಭವಾದುವು. ಮನೆಯನ್ನು ಗುಡಿಸಿ, ಸಾರಿಸಿ, ಒಲೆಯನ್ನು ಹೊತ್ತಿಸಿದುದಾಯಿತು. ಬೆಳಗಿನ ಕಾಫಿ-ತಿಂಡಿಗಳನ್ನು ಮಾಡಿದಳು; ಆಮೇಲೆ ಹಸುಗಳನ್ನು ಕರೆಯಲೆಂದು ಪಾತ್ರೆಯನ್ನು ತೆಗೆದುಕೊಂಡು ಹಟ್ಟಿಗೆ ಹೋದಳು. ಪಾರು ಹಾಲು ಕರೆಯುವಾಗ, ಕರುಗಳನ್ನು ಹಿಡಿದುಕೊಳ್ಳುವ ಕೆಲಸ ಕೊಳುಂಬ-ನದು; ಆದುದರಿಂದ ಅವನೂ ಹಟ್ಟಿಗೆ ಬಂದಿದ್ದ. ಸಾಧಾರಣ-ವಾಗಿ ಹಾಲು ಕರೆಯುವಾಗ ಅವಳು ಅವನೊಡನೆ ಹೆಚ್ಚಿಗೆ ಮಾತನಾಡುತಿರಲಿಲ್ಲ. ಆದರೆ ಕಳೆದ ದಿನದ ಘಟನೆಯು ಈಗ ಅವಳನ್ನು ಕೊಳುಂಬನ ಸನಿಹಕ್ಕೆ ಕರೆದು ತಂದಿದ್ದಿತು. ಆದುದ-ರಿಂದ ಅವಳಿಗೆ ಅವನೊಡನೆ ಮಾತನಾಡಬೇಕೆಂದೆನಿಸಿತು. ಪಾರು ಹಾಲು ಕರೆಯುತ್ತಾ ಅವನನ್ನು ಪ್ರಶ್ನಿಸಿದಳು: 'ನಿನ್ನ ತಾಯಿಯು ಏನು ಮಾಡುತ್ತಿದ್ದಾಳೆ, ಕೊಳುಂಬ? ಅವಳೀಗ ಕೆಲಸಕ್ಕೆ ಬರುವುದೇ ಇಲ್ಲ!'

'ತಾಯಿಗೆ ವಯಸ್ಸಾಗಿದೆ. ಎದ್ದು ತಿರುಗಾಡಲು ಅವಳ ಕಾಲು-ಗಳಲ್ಲಿ ತ್ರಾಣವಿಲ್ಲ. ನಾನು ದುಡಿದು ತಂದ **ಬಲ್ಲಿಯನ್ನು** ಕುಟ್ಟಿ ಅಕ್ಕಿ ಮಾಡಿ, ಒಂದಿಷ್ಟು ಗಂಜಿಯನ್ನು ಬೇಯಿಸುವುದೇ ಅವಳಿಗೆ ಕಷ್ಟವೆನಿಸಿದೆ.' ಕರುವನ್ನು ಹಿಡಿದಿದ್ದ ಕೊಳುಂಬನು ಉತ್ತರಿಸಿದ. 'ಅವಳೆಂತು ಪಾಪನ **ತೋಡಿಗೆ** ಬಂದು ದುಡಿಯುವಳು?'

'ತಾಯಿಗೆ ವಯಸ್ಸಾಗಿದೆ; ದುಡಿಯಲಾಗುವುದಿಲ್ಲ ಎನ್ನುತ್ತೀ!' ಪಾರು ಕೇಳಿದಳು: 'ನೀನೇಕೆ ಒಬ್ಬ **ಫಣಿಚ್ಚಿಯ** ಕೈ ಹಿಡಿಯ-ಬಾರದು? ನೀನೊಬ್ಬಾಕೆಯನ್ನು ಕರೆದು ತರುವುದಾದರೆ ಮುದುಕಿಯ ದುಡಿತವು ತಪ್ಪುವುದು!'

'ಪೊನ್ನು ಪಾಪಾತಿ,' ಕೊಳುಂಬನು ಮಾತನಾಡಿದ: 'ಒಬ್ಬ **ಉರಾಟಿಯನ್ನು** ಕರೆದುಕೊಂಡು ಬರುವುದೆಂದರೆ ಸುಮ್ಮನೆ ಆಗು-ವುದೇ? ಅವಳ ತಾಯಿ-ತಂದೆಗಳಿಗೆ ಹಣ ಕೊಡಬೇಕು; ಅವಳಿ-ಗೊಂದು ಹೊಸ **ಕಾರಿಕನ್ನು** ತೆಗೆದು ಕೊಡಬೇಕಾಗುವುದು. ನಾಲ್ಕು ಜನ ನೆಂಟರಿಗೆ ಔತಣವನ್ನೀಯಬೇಕು. ಹಣವೆಲ್ಲಿಂದ? ನಾಲ್ಕೆಂಟು ರೂಪಾಯಿಗಳು ಬೇಕಾಗುವುವು. ಪಾಪನನ್ನು ಕೇಳಿದರೆ ಗದರಿಸುತಾನೆ!'

ಹಾಲುಕರೆದಾಯಿತು. ಹಾಲಿನಿಂದ ತುಂಬಿದ ಪಾತ್ರೆಯನ್ನು ಕೈಯಲ್ಲಿ ಹಿಡಿದುಕೊಂಡು ಪಾರು ಮನೆಗೆ ಹಿಂದಿರುಗಿದಳು. ಕೊಳುಂಬನು ಹಟ್ಟಿಯಲ್ಲಿಯ ಸಗಣಿಯನ್ನು ತೆಗೆದು ಚೊಕ್ಕಟ ಮಾಡತೊಡಗಿದ.

ಆ ದಿನ ಸಂಜೆಗೆ ಕೊಳುಂಬನು ದನಗಳನ್ನು ಹಟ್ಟಿಯೊಳಗೆ ಕೂಡಿಸಿ ಪಾಪನ ವಸತಿಗೆ ಬಂದ; ಅಡಿಗೆಕೋಣೆಯ ಬಳಿಗೆ ಬಂದು ಪೊನ್ನುಪಾಪಾತಿಯನ್ನು ಕರೆದ. ಪಾರು ಕುಟ್ಟಿ ರಾತ್ರಿಯ ಅಡಿಗೆ ಮಾಡತೊಡಗಿದ್ದಳು. ಅನ್ನಕ್ಕೆ ಒಲೆಯಮೇಲೆ ನೀರನ್ನು ಇಡಗಿದ್ದಳು. 'ಏಕೆ ಕೊಳುಂಬ?' ಎಂದು ಅವಳು ಪ್ರಶ್ನಿಸಿದಳು.

'ಇತ್ತ ಬನ್ನಿ, ಏಕೆಂಬುದು ತಿಳಿವುದು!' ಎಂದ ಕೊಳುಂಬ. ಪಾರುವು ನೀರಿನ ಪಾತ್ರೆಯನ್ನು ಒಲೆಯ ಮೇಲಿರಿಸಿ ಹೊರಗೆ ಹೋದಳು. ಅಂಗಳದಲ್ಲಿ ನಿಂತಿದ್ದ ಕೊಳುಂಬ ಅವಳನ್ನು ನೋಡಿ, ತನ್ನ ಹಚ್ಚಡದ ತುದಿಯಲ್ಲಿದ್ದ ಗಂಟನ್ನು ಬಿಚ್ಚಿದ. ಆ ಗಂಟಿನಲ್ಲಿ ನಾಲ್ಕಾರು ಸೀಬೆಹಣ್ಣುಗಳಿರುವುದನ್ನು ನೋಡಿದಳು ಪಾರು. ಅವನು ಹಣ್ಣುಗಳನ್ನು ತೆಗೆದು ಪಾರುವಿನ ಕಡೆಗೆ ನೀಡಿದ. 'ಇವು-ಗಳನ್ನು ತೆಗೆದುಕೊಳ್ಳಿ, ನಿಮಗೋಸುಗ ತಂದಿದ್ದೇನೆ!'

'ನನಗೇಕೆ ಕೊಳುಂಬ?' ಪಾರು ಕೇಳಿದಳು: 'ಹಣ್ಣುಗಳನ್ನು ತಿನ್ನಲು ನಾನೇನು ಪುಟ್ಟಮಗುವೇ?'

‘ ಹಣ್ಣುಗಳನ್ನು ತಿನ್ನಲು ಮಕ್ಕಳೇ ಆಗಬೇಕೇ? ’ ಕೊಳುಂಬನ ತುಟಿಗಳ ಮೇಲೆ ನಗೆಯ ಮಿಂಚೊಂದು ಹೊಳೆಯಿತು. ‘ನಿಮಗಾಗಿ ತಂದಿದ್ದೇನೆ. ಕೈಹಿಡಿದ ಊರಾಟಿಯಿದ್ದಿದ್ದರೆ ಅವಳಿಗಾದರೂ ತೆಗೆದುಕೊಂಡು ಹೋಗಿ ಕೊಡಬಹುದಿತ್ತು!’

‘ ನನಗೆಂದು ಹೀಗೆ ಇನ್ನುಮುಂದೆ ಹಣ್ಣುಗಳನ್ನು ತರಬೇಡ ಕೊಳುಂಬ!’ ಪಾರು ಹೇಳಿದಳು. ‘ ಅತ್ತೆ ಕಂಡರೆ ಹಣ್ಣುಗಳನ್ನು ಏಕೆ ಈಸಿಕೊಂಡೆ ಎಂದು ಬಯ್ತಾರು ! ’

ಕೊಳುಂಬನು ನೀಡಿದ ಹಣ್ಣುಗಳನ್ನು ಪಡೆದುದಾಯಿತು. ಅನಂತರ ಅವನು ಕೇಳಿದ: ‘ ಹಣ್ಣುಗಳನ್ನು ಪಡೆದುಕೊಂಡರೆ ಹಿರಿಯ ಪಾಪಾತಿ ಏಕೆ ಬಯ್ಯುವರು? ’

ಪಾರು ಯಾವನಿಗೆ ಕಾಣದಂತೆ, ಅವನ ಪೆಟ್ಟಿಗೆಯಿಂದ ಎರಡು ವೀಳ್ಯದೆಲೆ ಒಂದು ಚೂರು ಹೊಗೆಸೊಪ್ಪುಗಳನ್ನು ತೆಗೆದುಕೊಂಡು ಬಂದಳು. ಅವುಗಳನ್ನು ಕೊಳುಂಬನಿಗೆ ಇತ್ತುದಾಯಿತು. ‘ಪೊನ್ನುಪಾಪಾತಿ, ನಾಳೆ ಕಾಣೋಣ!’ ಎಂದು ನುಡಿದು ಕೊಳುಂಬನು ತನ್ನ ಗುಡಿಸಿಲಿಗೆ ತೆರಳಿದ.

* * *

ದಿನಗಳು ಹಲವು ಉರುಳಿದುವು. ದಿನಗಳು ಕಳೆದಂತೆ ಪಾರು-ಕುಟ್ಟಿ, ಕೊಳುಂಬ ಇವರ ನಡುವೆ ಸಲುಗೆಯು ಬೆಳೆಯಿತು. ಅವರ ನಡುವೆ ಮೊಳೆತಿದ್ದ ಆಪ್ತತೆಯು ಬೆಳೆದು ಗಾಢವಾಯಿತು. ಕೊಳುಂಬನು ದನಗಳನ್ನು ಮೇಯಿಸಿ ಹಟ್ಟಿಗೆ ಅಟ್ಟಿಕೊಂಡು ಬರುತ್ತಿದ್ದಾಗ ಕಾಡಿನಿಂದ ಹಣ್ಣು–ಹಂಪಲುಗಳನ್ನು ತರುತ್ತಿದ್ದ; ಅಂಥವನ್ನು ಪಾರುಕುಟ್ಟಿಗೆ ನೀಡುತ್ತಿದ್ದ. ಪಾರು ಅತ್ತೆಗೆ ಕಾಣದಂತೆ ರೊಟ್ಟಿ-ದೋಸೆಗಳನ್ನು ತೆಗೆದಿರಿಸುತಿದ್ದಳು; ಸಂಜೆಗೆ ಕೊಳುಂಬನು ಬಂದಾಗ ಕೊಡುತಿದ್ದಳು. ಹಾಲು ಕರೆಯಲು ಹಟ್ಟಿಗೆ ಹೋದಾಗ ಅವನೊಡನೆ ಬಾಯಿತುಂಬ ಮಾತನಾಡುತಿದ್ದಳು; ಅತ್ತೆ ತನಗೆ ಕೊಡುತಿದ್ದ ತೊಂದರೆಗಳನ್ನು ವಿವರಿಸುತಿದ್ದಳು. ಕರುವನ್ನು ಹಿಡಿದು ನಿಂತಿದ್ದ ಕೊಳುಂಬನು ಅವಳೆಡೆಗೆ ಕರುಣೆಯ ನೋಟವನ್ನು ಹೊರಳಿಸುತ್ತಾ, ಅವಳು ಹೇಳುತ್ತಿರುವುದನ್ನು ಆಲಿಸುತ್ತಿದ್ದ, ಅವಳ ದುಃಖದ ಬಗ್ಗೆ ಮರುಕವನ್ನು ಸೂಚಿಸುತ್ತಿದ್ದ; ಅವಳ ಮನಸ್ಸಿಗೆ ಸಮಾಧಾನವನ್ನು ಈಯಬಲ್ಲ ನಾಲ್ಕು ಮಾತುಗಳನ್ನು ಆಡುತ್ತಿದ್ದ. ಅವನ ಮುಖದಿಂದ ಹೊರಟ ಆ ನಾಲ್ಕು ಸ್ನೇಹದ ನುಡಿಗಳು, ಪಾರುವಿನ ಎದೆಯನ್ನು ಹಗುರುಗೊಳಿಸುತಿದ್ದುವು; ಇರುಳು ಕವಿದಿದ್ದ ಅವಳ ಚಿತ್ತದಲ್ಲಿ ತುಸ ಬೆಳಕನ್ನು ಹರಡು-ತ್ತಿದ್ದುವು.

ರಾತ್ರಿ ಪಾರು ತನ್ನ ಹರಕು ಚಾಪೆಯ ಮೇಲೆ ಹೊರಳುತ್ತಾ ಆಲೋಚಿಸುತ್ತಿದ್ದಳು. ಅವಳ ಆಲೋಚನೆಯು ಯಾವಾಗಲೂ ಆಪ್ತನೆನಿಸಿದ ಕೊಳುಂಬನ ಸುತ್ತಲೂ ಸುಳಿಯುತ್ತಿದ್ದಿತು. ಅವ-ನಲ್ಲದೆ ಇನ್ನಾವ ವ್ಯಕ್ತಿಯೂ ಅವಳ ಚಿತ್ತದಲ್ಲಿ ಪ್ರವೇಶಿಸುತ್ತಿದ್ದುದು ಅಪರೂಪ. ಅವನೆಷ್ಟು ಒಳ್ಳೆಯವನೆಂದು ಅವಳು ನೆನೆಯುತ್ತಿದ್ದಳು. ಹಣಿಯರ ಜಾತಿಯಲ್ಲಿ ಹುಟ್ಟಿದರೇನು? ಅವನಿಗಿಂತ ಹತ್ತಿರದ ಆಪ್ತರು ತನಗಿಲ್ಲವೆಂದು ತೀರ್ಮಾನಿಸುತ್ತಿದ್ದಳು. ಕೊಳುಂಬನ ಸ್ನೇಹ ಸಹಾನುಭೂತಿಗಳು ದೊರೆಯುವುದಾದರೆ, ಅತ್ತೆಯ ಕಾಟವು ಎಷ್ಟು ಕಠಿನವಾದುದಾಗಿದ್ದರೂ ಅದನ್ನು ತಾಳ-ಬಲ್ಲೆನೆಂದು ಆಕೆ ಧೈರ್ಯವನ್ನು ತಾಳುತ್ತಿದ್ದಳು. ಅವನ ನಗುಮೋರೆಯನ್ನು ಮರೆಯಲು ಅವಳಿಂದ ಆಗುತ್ತಿರಲಿಲ್ಲ.

ಪಾರುಕುಟ್ಟಿಗೆ ತಿಳಿಯದಂತೆಯೇ ಅವಳಲ್ಲಿರುವ ಒಂದು ಶಕ್ತಿಯು ಕೆಲಸವನ್ನು ಮಾಡುತ್ತಿದ್ದಿತು. ಅದು ಅವಳನ್ನು ಕೊಳುಂಬನಿದ್ದೆಡೆಗೆ ಒಯ್ಯುತಿದ್ದಿತು; ‘ ಕೊಳುಂಬನ ಸಹವಾಸದಲ್ಲಿ ತನ್ನ ಸುಖ-ಸಂತೋಷಗಳು ಅಡಗಿವೆ ’ ಎಂಬ ವಿಚಾರವನ್ನು ಅವಳ ಚಿತ್ತದಲ್ಲಿ ಬಿತ್ತುತಿದ್ದಿತು. ಆ ಶಕ್ತಿಯ ಪ್ರೇರಣೆಯನ್ನು ಮೀರಿ ನಡೆಯಲು ಅವಳಿಗೆ ಚೈತನ್ಯವಿರಲಿಲ್ಲ. ನೊಂದ ಜೀವ ಅವಳದು. ಸ್ನೇಹ–ಒಲವುಗಳ ರುಚಿಯನ್ನು ಅವಳು ನೋಡಿರಲಿಲ್ಲ. ಆದರೆ ಈಗ ಸ್ನೇಹದೇವತೆಯು ಅವಳೆದೆಯ ಮುಚ್ಚಿದ್ದ ಕದಗಳನ್ನು ತಟ್ಟುತಿದ್ದಳು. ‘ ಬಾಗಿಲನ್ನು ತೆರೆ ’ ಎಂದು ಅವಳ ಸಂಗಡ ನುಡಿಯುತಿದ್ದಳು. ಅವಳಲ್ಲಿ ಹುದುಗಿದ ನೈಸರ್ಗಿಕ ಚೇತನವು ಒಂದು ಹೊಸ ಹಾದಿಯನ್ನು ಹಿಡಿಯಲು ಅವಳನ್ನು ಪ್ರೇರಿಸುತಿದ್ದಿತು. ಆ ಪ್ರೇರಣೆಯನ್ನು ಮೆಚ್ಚಿ ನಿಲ್ಲಲು ಅವಳಿಂದ ಸಾಧ್ಯವಾಗಲಿಲ್ಲ.

* * *

ಅದೊಂದು ದಿನ, ಹಾಲು ಕರೆಯಲೆಂದು ತಂಬಿಗೆಯನ್ನು ತೆಗೆದುಕೊಂಡು ಪಾರು ಹಟ್ಟಿಗೆ ಹೋದಳು. ಅವಳ ಸಂಗಡ ಕೊಳುಂ-ಬನೂ ಇದ್ದ. ಕೊಳುಂಬನು ಕಂಚಲಿನಿಂದ ಕರುವನ್ನು ಬಿಟ್ಟ, ಅದು ಹೋಗಿ ತಾಯ ಮೊಲೆಯನ್ನು ಉಣ್ಣತೊಡಗಿತು. ಹಸುವು ಕರುವಿಗೆ ಹಾಲು ಸುರಿಸಿತೆಂಬುದು ಕೊಳುಂಬನಿಗೆ ಅರಿವಾಗಲು, ಕರುವನ್ನು ಹಿಡಿದು ಅವನು ದೂರ ಎಳೆದ. ಅದೇ ಸಂದರ್ಭದಲ್ಲಿ ಹಾಲು ಕರೆಯಲೆಂದು ಪಾರು ಹಸುವಿನ ಮೊಲೆಗೆ ಕೈಹಾಕಿದಳು. ಆಗ ಆಕೆಯ ಕೈ ಕರುವನ್ನೆಳೆಯುತಿದ್ದ ಕೊಳುಂಬನ ತೋಳಿಗೆ ತಗುಲಿತು. ಈ ಸ್ಪರ್ಶದಿಂದ ಅವಳ ಮೈ ನಡುಗಿತು; ಮೈಮೇಲಿನ ರೋಮಗಳೆಲ್ಲ ಎದ್ದು ನಿಂತಂತಾದುವು. ಅವಳ ಮನಸ್ಸಿನಲ್ಲಿ ಮಿಂಚಿನಂತೆ ಒಂದು ಅವಿದಿತಭಾವವು ಸುಳಿದು ಮಾಯವಾಯಿತು. ಅದೇನೆಂದು ತಿಳಿದುಕೊಳ್ಳಲು ಅವಳಿಂದ ಆಗಲಿಲ್ಲ; ಆದರೂ ಅದು ತನ್ನ ಎದೆಯಲ್ಲಿ ಒಂದು ನಲನಿನಲೆಯನ್ನು ಎಬ್ಬಿ-ಸಿದೆಯೆಂದು ಅರಿತುಕೊಂಡಳು.

ಪಾರುಕುಟ್ಟಿ ಎಂದಿನಂತೆ ಹಾಲು ಕರೆಯತೊಡಗಿದಳು. ಕೊಳುಂಬನು ಕರುವನ್ನು ಹಿಡಿದುಕೊಂಡು ಪಕ್ಕದಲ್ಲಿಯೇ ನಿಂತಿದ್ದ. ಅವಳು ಹಾಲು ಕರೆವಾಗ ಓರೆಗಣ್ಣಿನ ನೋಟವನ್ನು ಅವನೆಡೆಗೆ ಚೆಲ್ಲುತಿದ್ದಳು. ಅವನ ಮೋರೆಯ ಮೇಲೆ ಮೂಡಿದ ಒಂದು ನಗೆಯುಬರನ್ನು ನೋಡಿದುದಾಯಿತು. ಅವನ ಕಣ್ಣುಗಳಿಂದ

ಎಂದೂ ತೋರದ ಒಂದು ಬೆಳಕು ಸ್ಫುರಿಸುತಿರುವುದನ್ನು ನೋಡಿದಳು. ಎಂದಿನಂತೆ ಅವಳು ಕೊಳುಂಬನ ಸಂಗಡ ಮಾತನಾಡಲಿಲ್ಲ. ಏನು ಮಾತನಾಡಬೇಕೆಂಬುದು ಅವಳಿಗೆ ಹೊಳೆಯಲಿಲ್ಲ. ಆದುದರಿಂದ ಆಕೆ ಮೌನವನ್ನವಲಂಬಿಸಿದಳು. ಪಾರುಕುಟ್ಟಿ ತುಟಿ ಬಿಚ್ಚದಿರುವುದನ್ನು ನೋಡಿ ಕೊಳುಂಬನೇ ಮಾತನಾಡಲು ಪ್ರಾರಂಭಿಸಿದ. 'ಪೊನ್ನುಪಾಪಾತಿ, ಎಂದಿನಂತೆ ಮಾತನಾಡದೆ ನೀವು ಸುಮ್ಮನಿರುವುದೇಕೆ?'

'ಏನು ಮಾತನಾಡಬೇಕು ಕೊಳುಂಬ?' ಪಾರುಕುಟ್ಟಿ ಪ್ರಶ್ನಿಸಿದಳು.

'ಏನಾದರೂ ಮಾತಾಡಿ ಪಾಪಾತಿ!' ಕರುವನ್ನು ಹಿಡಿದಿದ್ದ ಹಗ್ಗವನ್ನು ತುಸ ಸಡಿಲುಬಿಡುತ್ತಾ ಕೊಳುಂಬನು ಹೇಳಿದ: 'ನೀವು ಸುಮ್ಮನಿದ್ದರೆ ನನಗೆ ಬೇಸರವಾಗುತ್ತದೆ. ನಿಮ್ಮ ಮಾತುಗಳನ್ನು ಕೇಳುವಾಗ ನನ್ನ ಬೇಸರಿಕೆಗಳೆಲ್ಲ ತೊಲಗುತ್ತವೆ. ನಿಮಗೆ ನನ್ನೊಡನೆ ಸಿಟ್ಟೇನು?'

'ಸಿಟ್ಟೇಕೆ ಕೊಳುಂಬ!' ಹಾಲು ಕರೆಯುವುದನ್ನು ನಿಲ್ಲಿಸಿ ಪಾರು ನುಡಿದಳು. ಅವಳ ತುಟಿಗಳ ಮೇಲೆ ನಗೆಯ ಮಲ್ಲಿಗೆಯೊಂದು ಮೂಡಿತು. 'ನಿನ್ನೊಡನೆ ಸಿಟ್ಟಾಗಲು ನೀನು ಮಾಡಿದ ತಪ್ಪೇನು? ಈ ಮನೆಯಲ್ಲಿ ನನಗೆ ಬೇಕಾದವನು ನೀನೊಬ್ಬನು ಮಾತ್ರ!'

'ನೀವು ಮಾತಾಡದಿರುವುದನ್ನು ನೋಡಿ ನಾನು ಹಾಗೆ ವಿಚಾರಿಸಿದೆ! ನಿಮ್ಮಂತಹ ಪಾಪಾತಿಯನ್ನು ನಾನೆಲ್ಲಿಯೂ ನೋಡಿಲ್ಲ. ಕೊಶವ ಜಾತಿಯಲ್ಲಿ ಹುಟ್ಟಿದವನಿಗೆ ಬೇರೆ ಯಾರು ನಿಮ್ಮಷ್ಟು ಆದರ-ಪ್ರೀತಿಗಳನ್ನು ತೋರಿಸಿಪ್ಪಾರೆ?'

ಆ ಹಸುವನ್ನು ಕರೆದುದಾಯಿತು. ಕೊಳುಂಬನು ತಾನು ಹಿಡಿದಿದ್ದ ಕರುವನ್ನು ಸಡಿಲು ಬಿಟ್ಟ. ಅದು ಹೋಗಿ ತಾಯ ಮೊಲೆಗಳಲ್ಲಿ ಮಿಕ್ಕಿದ ಹಾಲನ್ನು ಈಂಟತೊಡಗಿತು. ಕೊಳುಂಬನು ಕಂಚಲಿನಿಂದ ಬೇರೊಂದು ಕರುವನ್ನು ತಂದ. ಅದು ಹೋಗಿ ತಾಯ ಮೊಲೆಯನ್ನು ಕುಡಿಯತೊಡಗಿತು. ಹಸು ಹಾಲನ್ನು ಸುರಿಸಲು ಕೊಳುಂಬನು ಕರುವನ್ನು ಹಿಡಿದೆಳೆದ. ಅವನು ಕರುವನ್ನು ಹಿಡಿದೆಳೆದಾಗ, ಮುನ್ನಿನಂತೆ ಪಾರು ಕೆಚ್ಚಲಿಗೆ ಕೈಹಾಕಿದಳು. ಅವನ ಭುಜಕ್ಕೆ ಅವಳ ಕೈತಗುಲಿತು. ಈ ಸ್ಪರ್ಶನದಿಂದ ಮುನ್ನಿನಂತೆಯೆ ಅವಳ ಮೈಯು ಪುಳಕಗೊಂಡಿತು. ಆ ಅವ್ಯಕ್ತಭಾವವು ಅವಳ ಚಿತ್ತದಲ್ಲಿ ಸುಳಿದು ಮರೆಯಾಯಿತು. ಸಂತೋಷದ ಲಹರಿಯೊಂದು ತೇಲಿತು. ಆ ನಲಿವನ್ನು ಸವಿಯುತ್ತಾ ಅವಳು ಹಸುವನ್ನು ಕರೆಯತೊಡಗಿದಳು.

ಹಸುಗಳನ್ನು ಕರೆದುದಾಯಿತು. ಹಾಲುತುಂಬಿದ ಪಾತ್ರೆಯನ್ನು ಪಾರು ಕೈಯಲ್ಲಿ ಹಿಡಿದುಕೊಂಡಳು. ಹಟ್ಟಿಯಿಂದ ಮನೆಗೆ ಹೋಗಲೆಂದು ಎರಡು ಹಜ್ಜೆಗಳನ್ನು ಮುಂದೆ ಇರಿಸಿದುದಾಯಿತು. ಅವಳ ಕಣ್ಣುಗಳು ಕೊಳುಂಬನ ಕಡೆಗೆ ಚಲಿಸಿದುವು. ಇಬ್ಬರ ದೃಷ್ಟಿಗಳೂ ಒಂದೆಡೆಯಲ್ಲಿ ಕಲೆತುವು. ಕೊಳುಂಬನ ಅಂತರಂಗದಲ್ಲಿ ಎದ್ದೇಳುತಿದ್ದ ಭಾವತರಂಗಗಳು ಅವನ ಮೋರೆಯ ಮೇಲೆ ಪ್ರತಿಬಿಂಬಿಸಿದ್ದುವು. ಪಾರುಕುಟ್ಟಿ ಅವುಗಳನ್ನು ನೋಡಿ ತಿಳಿದುಕೊಂಡಳು. ಆದರಂತೆಯೆ ಅವಳೆದೆಯಲ್ಲಿ ಮೂಡಿದ ಭಾವಗಳು ಅವಳ ಮೊಗದಲ್ಲಿ ಪ್ರತಿಂಬಿಸಿರಬಹುದು; ಅವುಗಳನ್ನು ಕೊಳುಂಬನು ಅರಿತಿರಬಹುದು. ಮಾತನಾಡಲು ಅವಳಿಗೆ ಧೈರ್ಯಸಾಲದು. ನಾಚಿಕೆಯಿಂದ ಅವಳ ಕೆನ್ನೆಗಳು ಕೆಂಪೇರಿದುವು. ಅವಳ ಮೊಗವು ಕೆಂಪಾದುದನ್ನು ಕೊಳುಂಬನು ಕಾಣದಿರಲಿಲ್ಲ. ಅವಳು ತಲೆಯನ್ನು ತಗ್ಗಿಸಿದಳು; ಹಾಲಿನ ತಂಬಿಗೆಯೊಡನೆ ಮನೆಯ ಕಡೆಗೆ ಹಜ್ಜೆಹಾಕಿದಳು.

* * *

ದಿನಗಳು ಮೂರು ನಾಲ್ಕು ಸಾಗಿದುವು. ಈ ಅವಧಿಯಲ್ಲಿ ತನ್ನ ಜೀವವು ಕೊಳುಂಬನ ಬಗ್ಗೆ ಸ್ನೇಹ-ಆದರಗಳನ್ನು ತೋರಿಸುತಿರುವುದೇಕೆ—ಎಂಬುದನ್ನು ಪಾರು ಅರಿತಳು; ತನ್ನ ಹೃದಯವು ಕೊಳುಂಬನನ್ನು ಪ್ರೀತಿಸುತಿದೆಯೆಂಬುದನ್ನು ತಿಳಿದುಕೊಂಡುದಾಯಿತು. ಅವನ ನುಡಿಗಳನ್ನು ಕೇಳಲು ಆಸಕ್ತಿ, ಅವನನ್ನು ನೋಡಲು ಉತ್ಸುಕತೆ—ಇವೆಲ್ಲ ತನ್ನ ಜೀವವು ಕೊಳುಂಬನನ್ನು

ಸರ್ವಮಾನ್ಯ!

ಚಳಿಗಾಲದಲ್ಲಿ ಶಕ್ತಿಯ ಬಗ್ಗೆ

ಸರ್ವೋತ್ಕೃಷ್ಟವೆಂದು

ರಕ್ತವರ್ಧಕವನ್ನೇ

ಎಲ್ಲ ಜನರು ಉಪಯೋಗಿಸುತ್ತಿರುವರು.



ಅಷ್ಟವರ್ಗ
ಚ್ಯವನಪ್ರಾಶ
●
ಸುವರ್ಣ
ಮಾಲಿನೀ ವಸಂತ
●
ಮಕರಧ್ವಜಗುಟಿ
●
ಮುಂತಾದ
ಶಕ್ತಿವರ್ಧಕ
ಔಷಧಗಳನ್ನು
ತರಿಸಿರಿ!

ಕರ್ನಾಟಕ ಕೇಂದ್ರ, ಮರಾಠಾಗಲ್ಲಿ, ಹುಬ್ಬಳ್ಳಿ.

ಪ್ರೀತಿಸುತ್ತಿರುವುದರ ಪರಿಣಾಮವಾಗಿದೆಯೆಂಬುದು ಅವಳಿಗೆ ಅರಿವಾಗದೆ ಇರಲಿಲ್ಲ. ತಾನು ಕೊಳುಂಬನನ್ನು ಪ್ರೀತಿಸುತ್ತಿರುವೆನೆಂಬುದರ ಅರಿವು ಉಂಟಾಗಲು, ಅವಳಲ್ಲಿ ನಾಚಿಕೆ-ಅಂಜಿಕೆಗಳೆರಡೂ ಮೂಡಿದುವು. ತಾನು ಉತ್ತಮಕುಲದ ನಾಯರು ಜಾತಿಗೆ ಸೇರಿದವಳು, ಕೊಳುಂಬನು ಕೀಳು ಜಾತಿಯ ಘಣಿಯನು; ತಾನು ಅಂತಹನನ್ನು ಪ್ರೀತಿಸುವುದೆಂದರೇನು? ಅತ್ತೆಮಾವಂದಿರು ಅರಿತರೆ ಏನೆಂದಾರು? ತನ್ನನ್ನು ಮನೆಯಿಂದ ಹೊಡೆದು ಓಡಿಸಬಹುದು! ತನ್ನ ಮಾನ-ಮರ್ಯಾದೆಗಳು ಹೊರಟು ಹೋಗುವುವು! ಇದು ಸಲ್ಲದು! ತಾನು ಕೊಳುಂಬನನ್ನು ಪ್ರೀತಿಸಕೂಡದು! ಅವನ ಮೋರೆಯನ್ನು ನೋಡುವುದಿಲ್ಲ, ಅವನೊಡನೆ ಮಾತಾಡುವುದಿಲ್ಲ!.... ಪಾರುಕುಟ್ಟಿಯು ಈ ರೀತಿ ತೀರ್ಮಾನಿಸಿದಳು. ತನ್ನ ಎದೆಯಲ್ಲಿ ಮೊಳೆತಿರುವ ಒಲವಿನ ಬಳ್ಳಿಯನ್ನು ಕಿತ್ತು ದೂರ ಎಸೆದುಬಿಡಬೇಕೆಂದು ನಿಶ್ಚಯಿಸಿದಳು.

ಆದರೆ ಪಾಪ, ಪಾರುಕುಟ್ಟಿಯೇನು ಬಲ್ಲಳು ಒಲವಿನ ಆಳವನ್ನು! ಅದು ಅವಳ ಎದೆಯಲ್ಲಿ ಆಳವಾಗಿ ಬೇರೂರಿದ್ದಿತು. ಆಕೆ ಅದರ ಕುಡಿಗಳನ್ನು ಚಿಗುಟಿ ದೂರ ಎಸೆದಷ್ಟೂ ಅದು ಇನ್ನಷ್ಟು ತೀವ್ರವಾಗಿ ಬೆಳೆಯುತ್ತಿದ್ದಿತು; ಇನ್ನಷ್ಟು ದೂರ ಹಬ್ಬುತ್ತಲಿದ್ದಿತು. ಅವಳೆಷ್ಟು ದೃಢಮನಸ್ಸು ಮಾಡಿದರೂ ಕೊಳುಂಬನನ್ನು ಮರೆಯಲು ಅವಳಿಂದಾಗಲಿಲ್ಲ.

ಅಂದು, ಒಂದು ಹೊಸ ಮಡಕೆಯನ್ನು ಒಡೆದ ತಪ್ಪಿಗೆ ಅತ್ತೆಯು ಪಾರುಕುಟ್ಟಿಯನ್ನು ಬಾಯಿತುಂಬಾ ಬೈದಳು. ಪಾರುವಿನ ಕೆನ್ನೆಯಮೇಲೆ ಎರಡು ಏಟು ಹಾಕಲೂ ಅವಳು ಮರೆಯಲಿಲ್ಲ. ಈ ಸಂಗತಿಯು ಪಾರುಕುಟ್ಟಿಯ ಮನಸ್ಸಿಗೆ ತುಂಬ ನೋವನ್ನಿತ್ತಿತು. 'ತಾನೆಷ್ಟು ಕಷ್ಟಪಟ್ಟರೂ ಅತ್ತೆಯು ತನ್ನೊಡನೆ ಒಂದು ಆದರದ ನುಡಿಯನ್ನಾಡುವಂತಿಲ್ಲ. ಕೈತಪ್ಪಿ ಒಂದು ಮಡಕೆಯನ್ನೊಡೆದುದಕ್ಕೆ ಇಷ್ಟು ಕ್ರೂರವಾಗಿ ದಂಡಿಸಿದಳಲ್ಲ!' ಎಂದು ಪಾರು ಬೇಸರುಪಟ್ಟುಕೊಂಡಳು. ಆದರೆ ಅವಳ ಬೇಸರಿಕೆ-ನೋವುಗಳಿಗೆ ಆ ಮನೆಯಲ್ಲಿ ಕಿವಿಗೊಡುವವರಾರು? ಕೊಳುಂಬನೊಬ್ಬನಲ್ಲದೆ ಬೇರಿನ್ನಾರೂ ಅವಳ ದುಃಖವನ್ನು ಸ್ನೇಹ-ಸಹಾನುಭೂತಿಗಳೊಡನೆ ಕೇಳುವವರಲ್ಲ.

ಎಂದಿನಂತೆ ಪಾರುಕುಟ್ಟಿ, ಆ ದಿನವೂ ಹಾಲು ಕರೆಯಲೆಂದು ತಂಬಿಗೆಯನ್ನು ತೆಗೆದುಕೊಂಡು ಕೊಟ್ಟಿಗೆಗೆ ಹೋದಳು. ಕೊಳುಂಬನು ಅವಳಿಗಿಂತ ಮುಂದಾಗಿ ಹಟ್ಟಿಗೆ ಬಂದಿದ್ದ, ಅಲ್ಲಿ ಸಗಣಿಯನ್ನು ತೆಗೆದು ಚನ್ನುಮಾಡುತಿದ್ದ. ಪಾರು ಹಟ್ಟಿಗೆ ಬರಲು ಕೊಳುಂಬನ ಕಣ್ಣುಗಳು ಅವಳ ಮೋರೆಯೆಡೆಗೆ ಹೊರಳಿದುವು. ಅವಳ ಕಣ್ಣುಗಳಿಂದ ಕಂಬನಿಗಳು ಉದುರುತ್ತಲಿರುವುದನ್ನು ಅವನು ನೋಡಿದ; ಸಗಣಿ ತೆಗೆಯುವುದನ್ನು ನಿಲ್ಲಿಸಿ 'ಪೊನ್ನು ಪಾಪಾತಿಗೆ ಏನಾಯಿತು?' ಎಂದು ಮರುಕದಿಂದ ಪ್ರಶ್ನಿಸಿದ.

'ಏನೂ ಆಗಿಲ್ಲ!' ಉಕ್ಕಿಬರುತಿದ್ದ ಅಳುವನ್ನು ತಡೆದುಕೊಂಡು ಪಾರು ಮಾರ್ನುಡಿದಳು.

'ಮತ್ತೆ ನೀವು ಅಳುತಿರುವುದೇಕೆ? ನಿಮಗೇನೋ ಬಹಳ ನೋವುಂಟಾಗಿದೆ!'

'ನೋಡು, ಒಂದು ಮಣ್ಣಿನ ಮಡಕೆಯನ್ನೊಡೆದ ತಪ್ಪಿಗೆ ಅತ್ತೆ ನನ್ನನ್ನು ಬೈದು ಹೊಡೆದರು. ನಿತ್ಯವೂ ಅವರು ಈ ಪರಿಯಲ್ಲಿ ಪೀಡಿಸುವುದಾದರೆ, ಮನೆಯಲ್ಲಿ ದಿನಗಳನ್ನು ದೂಡುವುದೆಂತು? ಒಂದು ದಿನವೂ ನನ್ನ ಮನಸ್ಸಿಗೆ ನೆಮ್ಮದಿಯಿಲ್ಲ. ನನ್ನ ಮನಸ್ಸಿಗೆ ತುಸ ಸಂತೋಷವನ್ನು ನೀಡತಕ್ಕವನೆಂದರೆ ನೀನು!'

ಪಾರು ಕೈಯಲ್ಲಿ ಹಿಡಿದಿದ್ದ ತಂಬಿಗೆಯು ಕೆಳಕ್ಕೆ ಉರುಳಿತು. ಅವಳು ತನ್ನ ತೋಳುಗಳನ್ನು ಮುಂದಕ್ಕೆ ಚಾಚಿದಳು. ಕೊಳುಂಬನು ಅವಳ ಕೈಗಳೆರಡನ್ನು ಹಿಡಿದುಕೊಂಡ. ಇನ್ನೊಂದು ಕ್ಷಣದಲ್ಲಿ ಪಾರುವಿನ ತೋಳುಗಳೆರಡೂ ಅವನ ಕೊರಳನ್ನು ಸುತ್ತಿದುವು. ಅವಳ ತಲೆಯು ಕೊಳುಂಬನ ಎದೆಯನ್ನು ಆಶ್ರಯಿಸಿತು. ಅವಳು ಉಕ್ಕಿ ಬರುತಿದ್ದ ಅಳುವನ್ನು ತಡೆದುಕೊಂಡು ನುಡಿದಳು: 'ಕೊಳುಂಬ, ಈ ಮನೆಯಲ್ಲಿ ನನ್ನನ್ನು ಪ್ರೀತಿಸುವವರು ಯಾರೂ ಇಲ್ಲ. ಅತ್ತೆಯ ಹೊಡೆತಗಳು, ಮಾವನ ಬೈಗಳು—ಇವುಗಳನ್ನು ತಾಳಿಕೊಂಡು ದಿನಗಳನ್ನು ದೂಡುತಿರಬೇಕು. ನನ್ನ ನೊಂದ ಜೀವಕ್ಕೆ ತುಸ ಸಮಾಧಾನವನ್ನು ನೀಡಲು ನೀನೊಬ್ಬನಿರುವೆ. ಕೊಳುಂಬ, ನೀನು ತೋರಿಸುತಿರುವ ಪ್ರೀತಿಯು ನನ್ನ ಮನವನ್ನು ಸೆಳೆದಿದೆ. ನಾನು ನಿನ್ನನ್ನು ಪ್ರೀತಿಸುತಿದ್ದೇನೆ; ನಿನ್ನಿಂದಲ್ಲದೆ ನನ್ನ ಜೀವವು ತಣಿಯದು!'

'ಪೊನ್ನು ಪಾಪಾತಿ, ನಾನು ಘಣಿಯನು; ನೀವು ನಾಯಂದಿರ ಜಾತಿಗೆ ಸೇರಿದವರು! ನೀವು ನನ್ನನ್ನು ಸೇರುವುದಾದರೆ ಜನರು ಏನೆಂದಾರು?' ಪಾರುವಿನ ಕಿವಿಗಳಲ್ಲಿ ಕೊಳುಂಬನು ಉಸುರಿದ. 'ನಾವಿಬ್ಬರೂ ಒಂದುಗೂಡಿದುದನ್ನರಿತರೆ ಮಾವನು ಸುಮ್ಮನಿರುವನೇ?'

'ಕೊಳುಂಬ, ನಾನು ನಿನ್ನನ್ನು ಪ್ರೀತಿಸುತಿದ್ದೇನೆ; ಆ ದಿನ ಇದೇ ಹಟ್ಟಿಯಲ್ಲಿ ನಿನ್ನ ಹೆಗಲಿಗೆ ನನ್ನ ಕೈ ತಗುಲಿದಾಗ ನೀನೂ ನನ್ನನ್ನು ಪ್ರೀತಿಸುತಿರುವೆಯೆಂಬುದನ್ನರಿತೆ. ನಾವಿಬ್ಬರೂ ಪ್ರೀತಿಸುತಿದ್ದೇವೆ. ನಿನ್ನಿಂದ ನನ್ನ ಜೀವವು ತಣಿಯಬಲ್ಲದು. ಜನರು ಏನು ಬೇಕಾದರೂ ಹೇಳಲಿ, ಮಾವನು ನಮ್ಮನ್ನು ಮನೆಯಿಂದ ಹೊಡೆದೋಡಿಸಲಿ, ಈ ಊರನ್ನು ಬಿಟ್ಟು ದೂರ—ದೂರ ಹೋಗೋಣ! ನೀನು ದುಡಿಯುವೆ; ನಾನೂ ದುಡಿಯಬಲ್ಲೆ! ನಾವಿಬ್ಬರೂ ದುಡಿದು ತಂದುದನ್ನು ಬೇಯಿಸಿ ತಿಂದು ಸುಖ-ಸಂತೋಷಗಳಲ್ಲಿ ದಿನಗಳನ್ನು ಕಳೆಯೋಣ.'

ಕೊಳುಂಬನು ಮಾತನಾಡಲಿಲ್ಲ. ಅವನ ತೋಳುಗಳು ಪಾರುವಿನ ಮೈಯನ್ನು ಸುತ್ತಿದುವು. ಪಾರುವಿನ ತೋಳುಗಳು ಅವನ ಕೊರಳನ್ನು ಬಿಗಿದಿದ್ದುವು. ಪಾರುವಿನ ಕೆನ್ನೆಗೆ ಅವನ

ಕೆನ್ನೆಯು ತಗುಲಿತು. ಇನ್ನೊಂದು ಕ್ಷಣದಲ್ಲಿ ಅವರಿರ್ವರ ತುಟಿಗಳು ಒಂದೆಡೆಯಲ್ಲಿ ಕಲೆತುವು.

* * *

ಶೋಕ-ಸಂತಾಪಗಳು ಕವಿದಿದ್ದ ಪಾರುವಿನ ಬಗೆಬಾಂದಳದಲ್ಲಿ: ನಲಿವು-ಸಂತೃಪ್ತಿಗಳು ತೋರತೊಡಗಿದುವು. ಪಾರು ಒಲವಿನ ಸವಿಪಾಲನ್ನು ಉಂಟಿ, ತನ್ನ ಎದೆಯ ನೀರಡಿಕೆಯನ್ನು ತಣಿಸಿಕೊಳ್ಳತೊಡಗಿದಳು. ಅವಳೆದೆಯ ಆಶೆ–ಆಕಾಂಕ್ಷೆಗಳು ಕೊಳುಂಬನಿಂದ ನೆರವೇರುತಿದ್ದುವು; ಅವಳೆದೆಯನ್ನು ಕೊಳುಂಬನು ತಣಿಸುತಿದ್ದ; ನಲಿವನ್ನಿತ್ತು ಹಗುರುಗೊಳಿಸುತಿದ್ದ. ಒಲವಿನ ಹೂಬಿಸಿಲಿನಲ್ಲಿ ಅವಳ ಬಾಳುವೆಯಲರು ಕುಣಿಯ ತೊಡಗಿತು.

ಪಾರುಕುಟ್ಟಿಯು ಕೊಳುಂಬನನ್ನು ಪ್ರೀತಿಸುತಲಿರುವುದನ್ನು ಆಕೆಯ ಅತ್ತೆ-ಮಾವಂದಿರರಿಯರು. ತುರುಗಳ ಕೊಟ್ಟಿಗೆಯಲ್ಲಿ ಬೆಳೆದ ಒಲವು ಇನ್ನೂ ಅವರ ಕಿವಿಗಳಿಗೆ ತಲುಪಿರಲಿಲ್ಲ. ತಮ್ಮ ಪ್ರೀತಿಯ ಮನೆಯೊಡೆಯನ ಕಿವಿಗಳಿಗೆ ಬೀಳದಂತೆ ಅವರು ಎಚ್ಚರಿಕೆಯಿಂದ ಇದ್ದರು. ಅದನ್ನು ಮಾವನು ಅರಿತನಾದರೆ ತಮಗೆ ಸಂಕಟಗಳು ಬಂದೊದಗದೆ ಇರವು–ಎಂಬುದನ್ನು ಪಾರು ಬಲ್ಲಳು. ಆದುದರಿಂದ ತಮ್ಮ ಒಲವನ್ನು ಅತ್ತೆ-ಮಾವಂದಿರಿಂದ ಅಡಗಿಸಿಡಲು ಪಾರು ಮುಂಜಾಗ್ರತೆಯನ್ನು ತೆಗೆದುಕೊಂಡಿದ್ದಳು. ಆದರೆ ಪ್ರೀತಿಯೆಂಬುದು ಜನರ ಕಣ್ಣು-ಗಳಿಂದ ಅಡಗಿಸಲು ಸಾಧ್ಯವೆನಿಸುವ ಪದಾರ್ಥವಲ್ಲ. ಮೊದಲು ಕಿರಿದಾಗಿದ್ದು ಯಾರ ದೃಷ್ಟಿಯನ್ನು ಸೆಳೆಯದಿದ್ದರೂ, ಹೂಬಿಡುವ ವೇಳೆಬಂದಾಗ ತನ್ನ ಸುವಾಸನೆಯಿಂದ ಜನರ ಮನವನ್ನು ಸೆಳೆಯುವ ಮಲ್ಲಿಗೆಯಂತೆ, ಪ್ರೀತಿಯು ಕೊನೆಗೆ ಜನರ ಕಣ್ಣು-ಗಳಿಗೆ ಬೀಳುತ್ತದೆ; ಅವರ ದೃಷ್ಟಿಗಳನ್ನು ಸೆಳೆಯುತ್ತದೆ. ಜನರ ಕಣ್ಣು-ಕಿವಿಗಳಿಂದ ಒಲವನ್ನು ಮರೆಮಾಜುವುದು ಪ್ರಯಾಸದ ಕೆಲಸ.

ಆ ದಿವಸ ಹಾಲುಕರೆಯಲೆಂದು ಪಾರು ಕೊಳುಂಬನ ಸಂಗಡ ಹಟ್ಟಿಗೆ ಹೋಗಿದ್ದಳು. ಪಸುಗಳನ್ನು ಕರೆಯುವುದಾದಮೇಲೆ, ಅವರು ಎಂದಿನಂತೆ ಅಲ್ಲಿ ಒಲವಿನ ತನಿವಣ್ಣುಗಳನ್ನು ಸವಿಯ-ತೊಡಗಿದ್ದರು. ಈ ಸಂದರ್ಭದಲ್ಲಿ ಮನೆಯೊಡೆಯನು ಅಲ್ಲಿಗೆ ಬಂದು ತಮ್ಮನ್ನು ನೋಡಬಹುದೆಂಬ ಆಲೋಚನೆಯು ಅವರ ಚಿತ್ತಗಳಲ್ಲಿ ಸುಳಿದಿರಲಿಲ್ಲ. ಸಾಧಾರಣವಾಗಿ ಒಡೆಯನು ಹಟ್ಟಿಗೆ ಬರುತಿರಲಿಲ್ಲ; ಆದುದರಿಂದ ಪಾರು ಅಂಜಿಕೆಯಿಲ್ಲದೆ ಅಲ್ಲಿ ಕೊಳುಂಬನೊಡನೆ ಒಲವಿನ ಸಿಹಿಪಾಲನ್ನು ಉಂಟು-ತಿದ್ದಳು. ಆದರೆ ಆ ದಿನವು ಅವರಿಗೆ ಪ್ರತಿಕೂಲವಾದುದಾಗಿ-ದ್ದಿತು. ಅವರಿಗರಿಯದಂತೆ ಮಾವನು ದನಕರುಗಳನ್ನು ನೋಡ-ಲೆಂದು ಹಠಾತ್ತಾಗಿ ಹಟ್ಟಿಗೆ ಬಂದನು. ಆತನು ಬಂದಾಗ ಅವಳು ಪಸುಗಳನ್ನು ಕರೆದು ಪೂರಯಿಸಿದ್ದಳು. ಹಾಲುತುಂಬಿದ ತಂಬಿಗೆಯನ್ನು ನೆಲದ ಮೇಲಿರಿಸಿದ್ದಳು. ಅವಳ ತಲೆಯು ಕೊಳುಂಬನ ಎದೆಯನ್ನು ಆಶ್ರಯಿಸಿದ್ದಿತು. ತನ್ನ ಒಂದು ಕೈಯನ್ನು ಪಾರು ಕೊಳುಂಬನ ಹೆಗಲ ಮೇಲೆ ಇರಿಸಿದ್ದಳು. ಇನ್ನೊಂದು ತೋಳಿನಿಂದ ಕೊಳುಂಬನನ್ನು ತಬ್ಬಿಕೊಂಡಿದ್ದಳು. ಕೊಳುಂಬನ ಒಂದು ಕೈಯು ಪಾರುಕುಟ್ಟಿಯ ಬೆನ್ನಮೇಲೆ ಆಡುತಲಿದ್ದಿತು. ಅವರಿಬ್ಬರೂ ಹಟ್ಟಿಯ ಬಾಗಿಲಕಡೆಗೆ ಬೆನ್ನು-ಮಾಡಿದ್ದುದರಿಂದ, ಒಡೆಯನು ಬಂದುದನ್ನು ಅವರು ಕಾಣಲಿಲ್ಲ. ಕೊಟ್ಟಿಗೆಯೊಳಗೆ ನುಗ್ಗಿದೊಡನೆಯೆ ಮಾವನ ಕಣ್ಣಿಗೆ ಬಿದ್ದಿತು ಆ ನೋಟ. ತನ್ನ ಸೊಸೆಯು ಲಜ್ಜೆಯಿಲ್ಲದೆ ಒಬ್ಬ ಪಣಿಯನಿಗೆ ಒಲವನ್ನಿತ್ತುದನ್ನು ನೋಡಿ, ಮಾವನ ಎದೆಯಲ್ಲಿ ಕೋಪವು ಪ್ರವಹಿಸಿತು. ಸಿಟ್ಟಿನಿಂದ ಅವನ ಕಣ್ಣುಗಳು ಕೆಂಪಾದುವು. ಕೊಟ್ಟಿಗೆಯ ಹೊರಗೆ ಬಿದ್ದಿದ್ದ ಒಂದು ಬಿದಿರುದೊಣ್ಣೆಯನ್ನು ತೆಗೆದುಕೊಂಡುದಾಯಿತು. ಸದ್ದುಮಾಡದೆ ಅವನು ಅವರಿರುವಲ್ಲಿಗೆ ಹಜ್ಜೆಗಳನ್ನು ಇರಿಸಿದ. ಅವರೆಡ್ಡೆಡೆ ತಲುಪಿದುದಾಯಿತು. ಮಾವನು ಅವರಿದ್ದಲ್ಲಿಂದ ನಾಲ್ಕು ಹಜ್ಜೆ ದೂರವಿರುವಾಗ ಪಾರು ಅವನನ್ನು ನೋಡಿದಳು. ಅಂಜಿಕೆಯಿಂದ ಅವಳ ಮೋರೆಯು ಬಿಳುಪೇರಿತು; ಅವಳು ಕೊಳುಂಬನ ಮೈಮೇಲಿಂದ ಕೈಗಳನ್ನು ತೆಗೆದಳು. 'ನೋಡು, ಮಾವ ಬಂದಿದಾರೆ,' ಎಂದುಸುರಿ, ಕೊಳುಂಬನಿಂದ ದೂರ ಸರಿದುದಾಯಿತು. ಕೊಳುಂಬನೂ ಪಾಪನನ್ನು ನೋಡಿದ. ಹೆದರಿಕೆಯಿಂದ ಪಾರುವಿನ ದೇಹವು ನಡುಗತೊಡಗಿತು.

ಮಾವನು ಕೈಯಲ್ಲಿ ಹಿಡಿದಿದ್ದ ಬಿದಿರುದೊಣ್ಣೆಯನ್ನು ಮೇಲಕ್ಕೆತ್ತಿದ. ಇನ್ನೊಂದು ಕ್ಷಣದಲ್ಲಿ ರಫರಫನೆ ಏಟುಗಳು ಕೊಳುಂಬನ ಬೆನ್ನಮೇಲೆ ಬೀಳತೊಡಗಿದುವು. ನೋವನ್ನು ತಡೆಯಲಾರದೆ ಕೊಳುಂಬನು ಕಿರುಚಿಕೊಳ್ಳತೊಡಗಿದ. ಅವನ ಕಂಠದಿಂದ ಹೊರಡು ಬಂದ ಕ್ರಂದನನಾದವು ಕೊಟ್ಟಿಗೆಯಲ್ಲೆಲ್ಲಾ ಪಸರಿಸಿತು. 'ಪಾಪನೇ, ನನ್ನನ್ನು ಹೊಡೆಯಬೇಡಿ! ಇನ್ನು ಮುಂದೆ ಇಂತಹ ಕೆಲಸವನ್ನು ಮಾಡುವುದಿಲ್ಲ! ನಿಮ್ಮಾಣೆ, ನಾನು ಮಾಡುವುದಿಲ್ಲ!'

'ಕತ್ತೆಯಮಗನೇ!' ಬಿದಿರು ದೊಣ್ಣೆಯನ್ನು ಕೈಯಲ್ಲಿ ಹಿಡಿದು-ಕೊಂಡು ಪಾಪನು ಗರ್ಜಿಸಿದ. 'ನಿನಗೆ ಸೊಕ್ಕು ಬಂದು ಕಣ್ಣುಗಳು ಕಾಣದಾಗಿವೆ! ಪಾಪನ ಮನೆಯ ಹೆಂಗುಸರ ಮೇಲೆ ಕೈಮಾಡಲು ಹೊರಟಿರುವೆಯಲ್ಲಾ! ನೋಡು, ನಿನ್ನನ್ನು ಸಿಗಿದು ಹಾಕಿ ಬಿಡುತ್ತೇನೆ!"

ಪುನಃ ಏಟುಗಳ ಮಳೆಯು ಕೊಳುಂಬನ ಬೆನ್ನಮೇಲೆ ಬೀಳ-ತೊಡಗಿತು. ಕೋಣಗಳನ್ನು ಬಡಿಯುವಂತೆ ಕೊಳುಂಬನನ್ನು ಹೊಡೆವುದನ್ನು ಕಂಡು, ತಾಳಿಕೊಂಡಿರಲು ಪಾರುವಿಗೆ ಆಗಲಿಲ್ಲ. ಆಕೆ ಎರಡು ಹಜ್ಜೆಗಳನ್ನು ಮುಂದಿರಿಸಿ, ಮಾವನ ಸಂಗಡ ಈ ಪರಿಯಲ್ಲಿ ಉಸುರಿದಳು: 'ಮಾವಾ, ಕೊಳುಂಬನನ್ನು ಎತ್ತು-ಕೋಣಗಳನ್ನು ಬಡಿಯುವಂತೆ ಹೊಡೆಯಬೇಡ! ಅವನು ತಪ್ಪುಗಾರನಲ್ಲ; ಅವನಿಗೆ ಪ್ರೇರಣೆಯನ್ನು ಇತ್ತವಳು ನಾನು!'

ಈಗ ಮಾವನ ಸಿಟ್ಟು ಕೊಳುಂಬನಿಂದ ಪಾರುವಿನ ಕಡೆಗೆ ತಿರುಗಿತು. ಕೈಯಲ್ಲಿದ್ದ ಬಿದಿರುದೊಣ್ಣೆಯಿಂದ ಪಾರುವಿನ ಬೆನ್ನಮೇಲೆ ಎರಡು ಮೂರು ಏಟುಗಳು ಬಿದ್ದುವು. ಆ ಮೇಲೆ ಅವನು ಕೈಗಳಿಂದ ಪಾರುವಿನ ಕೆನ್ನೆಗಳ ಮೇಲೆ ಹೊಡೆಯತೊಡಗಿದ. ಪಾರುವಿಗೆ ನೋವನ್ನು ತಾಳಲಾಗಲಿಲ್ಲ. ಅವಳು ಕಿರುಚಿದಳು; ಚೀರಿದಳು. ನಿಂತುಕೊಳ್ಳಲಾರದೆ ನೆಲದ ಮೇಲೆ ಉರುಳಿದಳು. ಮಾವನ ಸಿಟ್ಟು ಆರಲಿಲ್ಲ. ಅವನು ಅವಳನ್ನು ಕಾಲುಗಳಿಂದ ಒದೆಯುತ್ತಾ ಒದರಿದ: 'ನಾಚಿಕೆಯಿಲ್ಲದ ಮುಂಡೆ! ನೋಡು, ನಿನ್ನನ್ನು ನಾನು ಕೊಂದುಹಾಕಿಬಿಡುತೇನೆ! ಒಳ್ಳೇ ನಾಯರ ಕುಲದಲ್ಲಿ ಹುಟ್ಟಿ, ಕೊನೆಗೆ ಫಣಿಯನ ಸಂಗಡ ಸರಸಕ್ಕೆ ಹೋಗಿದ್ದಾಳೆ! ನಿನ್ನಂತಹ ಸೊಸೆ ಇರುವುದಕ್ಕಿಂತಲೂ ಸಾಯುವುದು ಲೇಸು!'

ಮಾವನು ಮಾತುಗಳನ್ನು ಮುಗಿಸುವ ಮುನ್ನ ರಪ್ಪನೆ ಒಂದು ಏಟು ಮಾವನ ತಲೆಯ ಮೇಲೆ ಬಿದ್ದಿತು. ಅದನ್ನು ತಡೆದುಕೊಳ್ಳಲು ಅವನಿಂದಾಗಲಿಲ್ಲ. ಅವನು ನೆಲದ ಮೇಲೆ ಉರುಳಿದ. ಪಾರು ನೋಡಿದಳು. ಮಾವನು ನೆಲದ ಮೇಲೆ ಇರಿಸಿದ್ದ ದೊಣ್ಣೆಯನ್ನು ಹಿಡಿದುಕೊಂಡು ಕೊಳುಂಬನು ನಿಂತಿದ್ದ. ತನ್ನನ್ನು ಮಾವನು ಬಡಿಯುತ್ತಿರುವುದನ್ನು ನೋಡಲಾರದೆ, ಕೊಳುಂಬನು ದೊಣ್ಣೆಯನ್ನು ತೆಗೆದುಕೊಂಡು ಏಟು ಹಾಕಿದನೆಂದು ಅವಳಿಗೆ ಅರಿವಾಯಿತು. ಕೊಳುಂಬನು ಬಿದ್ದ ಪಾಪನಿಗೆ ಇನ್ನೊಂದು ಏಟನ್ನು ಹಾಕಲು ದೊಣ್ಣೆಯನ್ನು ಮೇಲಕ್ಕೆತ್ತಿದ. ಆಗ ಪಾರು ಅವನ ತೋಳನ್ನು ಹಿಡಿದು ತಡೆದಳು. 'ಎಲ್ಲಿಯಾದರೂ ಸತ್ತುಹೋದಾನು, ಬೇಡ ಕೊಳುಂಬ!' ಎಂದು ಅವನನ್ನು ದೂರಕ್ಕೆ ಎಳೆದಳು.

ನೆಲದಲ್ಲಿ ಬಿದ್ದಿದ್ದ ಮಾವನು ಚೇತರಿಸಿಕೊಂಡು ಎದ್ದು ನಿಂತ; ತನ್ನನ್ನು ಹೊಡೆದು ಬೀಳಿಸಿದ ಕೊಳುಂಬನ ಕಡೆಗೆ ಅವನ ಕಾಲುಗಳು ಸರಿದುವು. ಪಾಪನ ಸಂಗಡ ಕಾದಾಡಲೆಂದು ಕೊಳುಂಬನು ದೊಣ್ಣೆಯನ್ನು ಸರಿಪಡಿಸಿ ನಿಂತುಕೊಂಡುದಾಯಿತು; ಆಗ ಪಾರು ಅವನ ಸನಿಯಕ್ಕೆ ಹೋಗಿ ಉಸುರಿದಳು: 'ಬೇಡ ಕೊಳುಂಬ, ಹೊಡೆದಾಟಕ್ಕೆ ನಿಲ್ಲಬೇಡ, ನೀನು ಇಲ್ಲಿಂದ ಹೋಗು!'

'ಆದರೆ ಇವನು ನಿಮ್ಮನ್ನು ಹೊಡೆಯುವನು!'

'ನನ್ನನ್ನು ಬೇಕಾದರೆ ಹೊಡೆಯಲಿ; ಕೊಲ್ಲಲಿ! ನೀನು ಇಲ್ಲಿ ಜಗಳಮಾಡಬೇಡ! ಹೋಗು, ದೂರ ಹೋಗಿ ಜೀವವನ್ನು ಕಾಪಾಡಿಕೊ! ದೇವರ ದಯೆಯಿದ್ದರೆ ಮುಂದೆ ನಾವು ಒಂದುಗೂಡಬಹುದು!'

ಪಾರುವಿನ ನಿರ್ಬಂಧದಿಂದ ಕೊಳುಂಬನು ಅಲ್ಲಿಂದ ಹೋಗಬೇಕಾಯಿತು. ಹೋಗಲು ಅವನಿಗೆ ಇಷ್ಟವಿರಲಿಲ್ಲ. ಅವನು ಕೊಟ್ಟಿಗೆಯ ಬಾಗಿಲನ್ನು ದಾಟುವವರೆಗೆ, ನಾಲ್ಕೆಂಟುಸಲ ಹಿಂದಿರುಗಿ ನೋಡಿದ. 'ನನ್ನಬಗ್ಗೆ ನೀನು ಆಲೋಚಿಸಬೇಡ; ಮಾವನ ಕೈಗೆ ಸಿಕ್ಕಿದರೆ ಅವನು ನಿನ್ನನ್ನು ಸುಮ್ಮನೆ ಬಿಡನು; ಆದುದರಿಂದ ದೂರ ಹೋಗು!' ಎಂದು ಅವನಿಗೆ ಪಾರು ಉಸುರಿದಳು.

ಕೊಳುಂಬನು ಕಣ್ಮರೆಯಾಗುವವರೆಗ ಮಾವನು ಸುಮ್ಮನಿದ್ದ. ಆಮೇಲೆ ಅವನು ಪಾರುವಿದ್ದೆಡೆಗೆ ಬಂದ. ತನ್ನ ಮುಷ್ಟಿಯನ್ನು ಗಟ್ಟಿಹಿಡಿದು ಪಾರುವಿನ ಬೆನ್ನಮೇಲೆ ನಾಲ್ಕೆಂಟು ಗುದ್ದುಗಳನ್ನು ಹಾಕಿದುದಾಯಿತು. ನೋವನ್ನು ತಾಳಲಾರದೆ ಅವಳು ಅತ್ತಳು; ಚೀರಿದಳು. ಮಾವನು ಅವಳ ತೋಳನ್ನು ಹಿಡಿದೆಳೆಯುತ್ತಾ ಗರ್ಜಿಸಿದ: "ಮುಂಡೆ, ಫಣಿಯನಿಂದ ನೀನು ನನ್ನನ್ನು ಹೊಡೆಯಿಸಿದೆಯಲ್ಲವೆ? ನಿನಗೆ ತಕ್ಕ ಬುದ್ಧಿಯನ್ನು ಕಲಿಸದಿರೆನು!'

ಪಾರು ಮಾತನಾಡಲಿಲ್ಲ. ಅವಳ ಕಣ್ಣುಗಳಿಂದ ಒಂದೇ ಸಮನೆ ಕಂಬನಿಗಳು ಉದುರುತಿದ್ದುವು. ಕೆನ್ನೆಗಳ ಮೇಲೆ ಮಾವನ ಬೆರಳುಗಳ ಗುರುತು ಮೂಡಿದ್ದುವು. ಅವನು ಅವಳನ್ನು ಎಳೆದುಕೊಂಡು ಮನೆಗೆ ಹೋದ.

* * *

ಅಂದಿನಿಂದ ಕೊಳುಂಬನು ಪಾಪನ ತೊಡಿಯಲ್ಲಿ ಕೆಲಸ ಮಾಡಲು ಬರಲಿಲ್ಲ. ಅವನು ತನ್ನ ಗುಡಿಸಲಿಗೂ ಹೋಗಲಿಲ್ಲವೆಂಬುದು ಪಾಪನಿಗೆ ಗೊತ್ತಾಯಿತು. 'ಕೊಳುಂಬನು ಎಲ್ಲಿಗೆ ಹೋದನೆಂಬುದು ತಿಳಿಯದು.' ಕೊಳುಂಬನ ತಾಯಿ ಚಣ್ಣಮುರಾತಿ ಪಾಪನ ಮುಂದೆ ಹೇಳಿದಳು: 'ನಿನ್ನೆಯಿಂದ ಅವನನ್ನು ನಾನು ಕಾಣೆನು!'

ತನ್ನನ್ನು ಹೊಡೆದು ಅಪಮಾನಿಸಿದ ಕೊಳುಂಬನನ್ನು ದಂಡಿಸದೆ ಬಿಡುವುದು ಇನ್ನು ಬೇರೆ ಹೊಸ ಅಪಾಯಗಳಿಗೆ ದಾರಿಮಾಡಿಕೊಟ್ಟಂತಾಗುವುದೆಂದು ಪಾಪನು ವಿಚಾರಿಸಿದ. 'ಕೊಳುಂಬನನ್ನು ದೂರವಿರಿಸಬೇಕು; ಪಾರುಕುಟ್ಟಿಯ ಸನಿಯಕ್ಕೆ ಬಾರದಂತೆ ಮಾಡಬೇಕು' ಎಂದವನು ತೀರ್ಮಾನಿಸಿದ. ಕೊಳುಂಬ-ಪಾರುಕುಟ್ಟಿಯರ ಒಲವು ಬೆಳೆದು ಮರವಾಗಿದೆಯೆಂಬುದು ಅವನಿಗೆ ತಿಳಿಯಿತು. ಸುಲಭ ಉಪಾಯದಿಂದ ಈ ಒಲವನ್ನು ಮಣ್ಣುಗೂಡಿಸುವುದು ಪಾಪನಿಗೆ ಪ್ರಯಾಸವಾಗಿ ತೋರಿತು. 'ಕೊಳುಂಬನನ್ನು ಹಾಗೆಯೆ ಬಿಡುವುದಾದರೆ, ಅವನು ತನಗೆ ತಿಳಿಯದಂತೆ ಬಂದು ಯಾರಿಗೂ ಕಾಣದಂತೆ ಪಾರುವನ್ನು ದೂರದೂರಿಗೆ ಕರೆದೊಯ್ಯಬಹುದು; ಆದುದರಿಂದ ಅವನನ್ನು ಸುಮ್ಮನೆ ಇರಗೊಡಲಾಗದು!' ಎಂಬ ನಿರ್ಧಾರವು ಪಾಪನ ಚಿತ್ತದಲ್ಲಿ ಮೂಡಿತು.

ಯಾವ ಬಗೆಯಿಂದಲೂ ಕೊಳುಂಬನು ತನಗೆ ತೊಂದರೆ ಕೊಡದಂತೆ ದೂರವಿರಿಸಬೇಕೆಂದು ಪಾಪನು ಆಲೋಚಿಸಿದ. ಒಂದು ಉಪಾಯವು ಅವನ ಮನದಲ್ಲಿ ಸುಳಿಯಿತು. ಆಗ ಒಂದು ನಗೆಯ ಮಿಂಚು ಅವನ ತುಟಿಗಳ ಮೇಲೆ ಮಿನುಗಿತು. ಮರುದಿನ ಬೆಳಗ್ಗೆ ಅವನು ತನ್ನ ಕಾಫಿ-ತಿಂಡಿಗಳನ್ನು ಪೂರಯಿಸಿಕೊಂಡು, ಹತ್ತಿರದ ಪೋಲಿಸ್‌ಸ್ಟೇಶನ್ನಿಗೆ ಹೋದನು. ಅಲ್ಲಿಯ ಹೆಡ್‌ಕಾನ್ಸ್‌ಟೇಬಲನನ್ನು ಕಂಡು ಮಾತನಾಡಿ, ಅವನ ಕೈಗಳಲ್ಲಿ

ಐದುರೂಪಾಯಿಗಳದೊಂದು ನೋಟನ್ನು ಇರಿಸಿದುದಾಯಿತು. 'ನೋಡಿ, ಕೊಳುಂಬನೆಂಬ ಫಣಿಯ ಹುಡುಗನು ನನ್ನ ಗದ್ದೆಗಳಿಂದ ಪೈರನ್ನು ಕದ್ದು ಫರಾರಿಯಾಗಿದ್ದಾನೆ. ತಾವು ಬಂದು ಈ ವಿಷಯವನ್ನು ಪರಾಂಬರಿಸಿ, ಕಳ್ಳನನ್ನು ಹಿಡಿಯ-ಬೇಕಾಗಿ ನನ್ನ ಬೇಡಿಕೆ!' ಎಂದು ಆ ಪೋಲಿಸ್ ಅಧಿಕಾರಿಯ ಮುಂದೆ ಬಿನ್ನವಿಸಿಕೊಂಡುದಾಯಿತು.

ಹೆಡ್‌ಕಾನ್ಸ್ಟೇಬಲನ ಕೈಗಳು ಐದು ರೂಪಾಯಿಗಳ ಒಂದು ನೋಟಿನಿಂದ ಬೆಚ್ಚಗಾದುವು. ಅವನು ಪಾಪನ ಬೇಡಿಕೆಯನ್ನು ಸ್ವೀಕರಿಸಿದ. ಅಂದು ಸಂಜೆಗೆ ತಾನು ಒಬ್ಬ ಕಾನ್ಸ್ಟೇಬಲ-ನೊಡನೆ ಪಾಪನ ವಸತಿಗೆ ಬರುವುದಾಗಿ ಅವನ ಸಂಗಡ ಹೇಳಿದ. ಪಾಪನ ಮೋರೆಯು ಹರುಷದಿಂದ ಅಗಲವಾಯಿತು.

ಅಂದು ಸಂಜೆಗೇ ಹೆಡ್‌ಕಾನ್ಸ್ಟೇಬಲನು ತಾನು ಹೇಳಿದಂತೆ ಒಬ್ಬ ಪೋಲೀಸಿನವನ ಸಂಗಡ ಪಾಪನ ವಸತಿಗೆ ಬಂದ. ಅವರು ಬರುವ ಮುನ್ನ ಪಾಪನು ಪಕ್ಕದಲ್ಲಿ ವಾಸಿಸುತಿರುವ ಇಬ್ಬರು ಮುಳ್ಳವ ಕುರುಬರನ್ನು ಕರೆಯಿಸಿದ. ಕೊಳುಂಬನು ರಾತ್ರಿ ಪಾಪನ ಗದ್ದೆಗಳಿಂದ ಪೈರು ಕಳವುಮಾಡುತ್ತಿರುವಾಗ, ತಮ್ಮ ಪೈರು–ಗದ್ದೆಗಳನ್ನು ಕಾವಲುಮಾಡುತಿದ್ದ ಅವರು ನೋಡಿರು-ವುದಾಗಿ ಪೋಲೀಸರ ಮುಂದೆ ಸಾಕ್ಷಿಹೇಳಲು, ಮುಳ್ಳವ ಕುರುಬ-ರನ್ನು ಅವನು ಪ್ರೇರಿಸಿದ. ಅವನು ಅವರಿಬ್ಬರ ಕೈಗಳಲ್ಲಿಯೂ ಒಂದೊಂದು ರೂಪಾಯಿಯ ಎರಡು ನಾಣ್ಯಗಳನ್ನು ಇರಿಸಿದು-ದಾಯಿತು. ಅವನು ಅವರಿಗೆ ಈ ರೀತಿಯಲ್ಲಿ ಬೋಧಿಸಿದ: 'ನೋಡಿ, ರಾತ್ರಿ ಗದ್ದೆಗಳಿಂದ ಕೊಳುಂಬನು ಬೆಳೆದ ಪೈರನ್ನು ಹೊತ್ತುಕೊಂಡು ಹೋದುದನ್ನು ನೋಡಿದೆವೆಂದು ನೀವು ಹೇಳಬೇಕು. ಹಾಗೆ ನುಡಿಯುವುದರಿಂದ ನಿಮಗೆ ಯಾವ ತೊಂದರೆಯೂ ಉಂಟಾಗದು. ನಾನು ಹೇಳಿದಂತೆ ನುಡಿಯ-ದಿದ್ದರೆ ಮಾತ್ರ ಪೋಲೀಸರು ನಿಮಗೆ ತೊಂದರೆಕೊಡುವರು!'

ಅವರ ಕೈಗಳಲ್ಲಿ ಬಿದ್ದ ನಾಣ್ಯಗಳು ಮುಳ್ಳವ ಕುರುಬರ ಮನಸ್ಸುಗಳನ್ನು ಸೆಳೆದಿದ್ದುವು. ನಾಯರು ಹೇಳಿದಂತೆ ಪೋಲೀಸರ ಮುಂದೆ ನುಡಿಯದಿದ್ದರೆ ಯಾವ ಆಪತ್ತು ಬಂದು ತಮ್ಮ ಹೆಗಲಮೇಲೆ ಬೀಳುವುದೋ ಎಂಬ ಹೆದರಿಕೆ ಬೇರೆ. ಈ ಪೋಲೀಸರ ಸಹವಾಸವು ಕಷ್ಟಕರವಾದದ್ದು, ನಾಯರು ಎಂದಂತೆ ನುಡಿಯುವುದು ಲೇಸೆಂದು ಅವರು ತೀರ್ಮಾನಿಸಿದರು.

ಸಾಯಂಕಾಲವಾಗಲು ಹೆಡ್‌ಕಾನ್ಸ್ಟೇಬಲನು ಒಬ್ಬ ಪೋಲೀಸಿನವರನ್ನು ಕರೆದುಕೊಂಡು ನಾಯರ ವಸತಿಗೆ ಬಂದ. ಚಹಾ-ಫಲಾಹಾರಗಳನ್ನಿತ್ತು ಅವರನ್ನು ಸತ್ಕರಿಸಿದುದಾಯಿತು. ಅವರನ್ನು ಸುಪ್ರಸನ್ನರನ್ನಾಗಿ ಮಾಡಲು ಹತ್ತಿರದ ಸರಾಯಿ ಅಂಗಡಿಯಿಂದ ಒಂದು ಕುಪ್ಪಿ ಸರಾಯಿಯನ್ನು ತರಿಸಲು ಮನೆಯೊಡೆಯನು ಮರೆತಿರಲಿಲ್ಲ. ಅವರು ಮನೆಯೊಡೆಯನಿತ್ತ ಚಹಾ-ಫಲಾಹಾರಗಳಿಂದ ತಮ್ಮ ಹಸಿವು ನೀರಡಿಕೆಗಳನ್ನು ತಣಿಸಿಕೊಂಡರು; ಅವನು ಕಾಣಿಕೆಯಾಗಿತ್ತ ಒಂದು ಕುಪ್ಪಿ ಸರಾಯಿಯನ್ನು ಕುಡಿದು ಆನಂದಿಸಿದರು. ಆ ಮೇಲೆ ಕೇಸಿನ ವಿಚಾರಣೆಯನ್ನು ಅವರು ಆರಂಭಿಸಿದರು. ಮನೆಯೊಡೆಯನು ತಾನು ಕರೆಯಿಸಿದ ಮುಳ್ಳವ ಕುರುಬರನ್ನು ಹೆಡ್‌ಕಾನ್ಸ್ಟೇ-ಬಲನ ಮುಂದೆ ನಿಲ್ಲಿಸಿದ. ಅವರು ಅವನು ಹೇಳಿಕೊಟ್ಟುದನ್ನು ಚಾಚೂ ತಪ್ಪದಂತೆ ಉಸುರಿದರು. ಅವರ ಹೇಳಿಕೆಗಳನ್ನು ಕೇಳಿಯಾದ ಮೇಲೆ, ಹೆಡ್‌ಕಾನ್ಸ್ಟೇಬಲನು ಅವರನ್ನು ಪ್ರಶ್ನಿಸಿದ 'ರಾತ್ರಿ ಗದ್ದೆಗಳಿಂದ ಪೈರನ್ನು ಹೊತ್ತುಕೊಂಡು ಹೋದುದು ಕೊಳುಂಬನೆಂಬುದು ನಿಶ್ಚಯವೇ?'

'ಅದರಲ್ಲೇನು ಸಂದೇಹ!' ಒಬ್ಬ ಮುಳ್ಳವ ಕುರುಬನು ನುಡಿದ. 'ಆಗ ನಾನು ಗದ್ದೆಗೆ ಕಾಡುಹಂದಿ ಇಳಿದಿದೆಯೋ ಎಂಬು ದನ್ನು ನೋಡಲು ಏರಿಗಳ ಮೇಲೆ ತಿರುಗುತಿದ್ದೆ. ಆಗ ತಿಂಗಳ ಬೆಳಕು ಅಷ್ಟು ಸೊಗಸಾಗಿದ್ದಿತು. ನನ್ನಿಂದ ನಾಲ್ಕು ಮಾರು ಗಳಷ್ಟು ದೂರದಲ್ಲಿ, ಒಬ್ಬನು ತಲೆಯಮೇಲೆ ಪೈರಿನ ಹೊರೆಯನ್ನು ಇರಿಸಿಕೊಂಡು ಬರುತಿದ್ದುದನ್ನು ನೋಡಿದೆ. ರಾತ್ರಿ ಹೊತ್ತು ಪೈರಿನ ಹೊರೆಯನ್ನು ತಲೆಯ ಮೇಲೇರಿಸಿಕೊಂಡು ಹೋಗುತ ಲಿರುವುದನ್ನು ಕಂಡು ನನಗೆ ಸಂಶಯವಾಯಿತು. ನಾನು ಅವನ ಹತ್ತಿರ ಹೋದೆ. ಅವನು ಕೊಳುಂಬನೆಂಬುದು ಗೊತ್ತಾಯಿತು. ನನ್ನನ್ನು ಕಾಣಲು ಅವನು ಬೆಚ್ಚಿಬಿದ್ದ. ಮೆಲ್ಲಗೆ ನನ್ನ ಸಂಗಡ ಅವನು ಹೀಗೆ ಹೇಳಿದ: 'ನಾನು ಪಾಪನ ಗದ್ದೆಯಿಂದ ಪೈರನ್ನು ಕದ್ದು ತರುತಿದ್ದೇನೆ; ನೀವು ಯಾರಿಗೂ ಹೇಳಬೇಡಿ; ನಿಮಗೆ ಅರ್ಧಪೊದಿ ನೆಲ್ಲನ್ನು ಕೊಡುತ್ತೇನೆ!' ನಾನು ಅವನನ್ನು ಹೋಗಲು ಬಿಟ್ಟೆನು. ಅವನು ಪೈರನ್ನು ತೆಗೆದುಕೊಂಡು ಹೋದ. ಕಳ್ಳತನ ವನ್ನು ಬಚ್ಚಿಡಬಾರದೆಂದು ನೆನಸಿ, ಇಂದು ಬೆಳಗ್ಗೆ ಇಲ್ಲಿಗೆ ಬಂದು ಈ ಸಂಗತಿಯನ್ನು ನಾಯರ ಸಂಗಡ ಹೇಳಿದೆ.'

'ನಾನು ಸ್ವಲ್ಪದೂರದಲ್ಲಿ ಬಿಲ್ಲು-ಬಾಣಗಳನ್ನು ಹಿಡಿದುಕೊಂಡು ಕಾಡುಹಂದಿಯು ಬರುವುದೇ ಎಂದು ನಿರೀಕ್ಷಿಸುತಿದ್ದೆ' ಎರಡನೆಯ ಮುಳ್ಳವ ಕುರುಬನ ತುಟಿಗಳಿಂದ ಮಾತುಗಳು ಹೊರಟುವು. 'ಆಗ ಒಬ್ಬನು ತಲೆಯ ಮೇಲೆ ಹೊರೆಯನ್ನಿರಿಸಿಕೊಂಡು ಹೋಗುತ್ತಿರು ವುದು ಕಂಡಿತು. ದೂರದಿಂದಲೇ ಅವನೊಬ್ಬ ಫಣಿಯನೆಂದು ನಾನು ತಿಳಿದೆ. ಅವನಿಗರಿಯದಂತೆ, ಅವನಾರು ಎಂದು ತಿಳಿಯ ಬೇಕೆಂದು ನಾನು ಬೆಳೆದು ನಿಂತ ಪೈರಿನ ನಡುವೆ ಮರೆಯಾದೆ. ಆತನು ನನ್ನನ್ನು ಕಾಣಲಿಲ್ಲ. ನನ್ನಿಂದ ಹತ್ತು ಹೆಜ್ಜೆಗಳಷ್ಟು ದೂರದಲ್ಲಿದ್ದ ಏರಿಯ ಮೇಲೆ ಅವನು ನಡೆದುಹೋದ. ಅವನು ನಾಯರಿನ ಕೆಲಸಗಾರ ಕೊಳುಂಬನೆಂಬುದು ಗೊತ್ತಾಯಿತು. ಅವನ ತಲೆಯ ಮೇಲಿನ ಪೈರುಹೊರೆಯಿಂದ, ಅವನು ಪೈರನ್ನು ಕದ್ದು ತಂದಿರುವನೆಂದು ಊಹಿಸಿದೆ. ರಾತ್ರಿ ನಾನು ಕಂಡುದನ್ನು ಈ ದಿನ ಬೆಳಗ್ಗೆ ಇಲ್ಲಿಗೆ ಬಂದು ನಾಯರಿಗೆ ಉಸುರಿದೆ!'

'ನೀವು ಮಾಡಿದುದು ಬಹಳ ಚೆನ್ನಾಯಿತು.' ಹೆಡ್‌ಕಾನ್ಸ್-ಟೇಬಲನು ತಲೆಯಲ್ಲಾಡಿಸಿದ. 'ಇವೇ ಹೇಳಿಕೆಗಳನ್ನು ನೀವು

ಕೋರ್ಟಿನಲ್ಲೂ ಕೊಡುವಿರಲ್ಲವೇ? ಅಲ್ಲಿ ಬೇರೊಂದು ತೆರನಾಗಿ ಹೇಳಕೂಡದು!'

'ನಿಜವನ್ನು ಉಸುರಲು ಭಯವೇಕೆ? ಇಂದು ನಾಯರಿನ ಗದ್ದೆಗಳಿಂದ ಪೈರನ್ನು ಕದ್ದವನು, ನಾಳೆ ನಮ್ಮ ಗದ್ದೆಗಳಿಂದಲೂ ಕದಿಯುವನು!' ಮುಳ್ಳವ ಕುರುಬರು ಮಾರ್ನುಡಿದರು. 'ಕಳ್ಳನಿಗೆ ಯೋಗ್ಯ ದಂಡನೆಯಾಗಲೇಬೇಕು. ಈ ಹೇಳಿಕೆಗಳನ್ನು ಅಲ್ಲಿಯೂ ಕೊಡುವೆವು!'

'ನಮಗೆ ಈ ಎರಡು ಸಾಕ್ಷಿಗಳೇ ಸಾಕು. ಇವರಿಂದಲೇ ಕೊಳುಂಬನು ಅಪರಾಧಿಯೆಂಬುದು ಸಿದ್ಧವಾಗುವುದು!' ನಾಯರ ಕಡೆಗೆ ಮೋರೆಯನ್ನು ತಿರುಗಿಸಿ ಹೆಡ್‌ಕಾನ್ಸ್ಟೇಬಲ್ಲನು ನುಡಿದ. 'ಈಗ ಕೊಳುಂಬನು ಎಲ್ಲಿರುವನು?'

'ಅವನೆಲ್ಲಿರುವನೆಂಬುದು ತಿಳಿಯದು!' ನಾಯರು ಉತ್ತರಿಸಿದ. 'ಅವನಿಗೆ ಸುಳಿವು ಸಿಕ್ಕಿದಂತೆ ಕಾಣುತ್ತದೆ. ಇಂದು ಬೆಳಗ್ಗೆ ಅವನು ಕೆಲಸಕ್ಕೆ ಬರಲಿಲ್ಲ. ಗುಡಿಸಿಲಲ್ಲಿಯೂ ಇಲ್ಲ. ಗುಡಿಸಿಲನ್ನು ಬಿಟ್ಟು ಎಲ್ಲಿಗೋ ಓಡಿ ಹೋಗಿದ್ದಾನೆ!'

'ಎಲ್ಲಿಗೆ ಓಡಿ ಹೋದರೇನು!' ಹೆಡ್‌ಕಾನ್ಸ್ಟೇಬಲನು ಮಾತನಾಡಿದ. 'ಅವನನ್ನು ಹಿಡಿದು ತರುವುದೇನು ಪ್ರಯಾಸದ ಕೆಲಸವಲ್ಲ. ಅವನನ್ನು ಕೋರ್ಟಿನಲ್ಲಿ ಹಾಜರು ಪಡಿಸುವ ವಿಷಯದಲ್ಲಿ ನಿಮಗೆ ಬೇಜಾರು ಬೇಡ!'

ಹೆಡ್‌ಕಾನ್ಸ್ಟೇಬಲನು ಇಬ್ಬರು ಮುಳ್ಳವ ಕುರುಬರ ಸಾಕ್ಷಿಗಳನ್ನು ಬರೆದುಕೊಂಡ. ಆ ರಾತ್ರಿ ಪೋಲೀಸಿನವರು ನಾಯರ ವಸತಿಯಲ್ಲಿಯೇ ಉಳಿದರು. ಅವನು ವಿಶೇಷತರದ ಅಡಿಗೆಗಳನ್ನು ಮಾಡಿಸಿ ಅತಿಥಿಗಳನ್ನು ಸತ್ಕರಿಸಿದ. ಮರುದಿನ ಬೆಳಗ್ಗೆ ಅವರು ಹಿಂದಿರುಗುವಾಗ, ನಾಯರು ಹೆಡ್‌ಕಾನ್ಸ್ಟೇಬಲನ ಕೈಗಳಲ್ಲಿ ಹತ್ತು ರೂಪಾಯಿಗಳ ಒಂದು ನೋಟನ್ನು ಇರಿಸಲು ಮರೆಯಲಿಲ್ಲ.

* * *

ಮಾವನಿತ್ತ ಏಟುಗಳ ಪರಿಣಾಮವಾಗಿ ಪಾರುವಿಗೆ ಜ್ವರ ಬಂದಿತು. ಅವಳು ಯಾವ ಆಹಾರವನ್ನೂ ತೆಗೆದುಕೊಳ್ಳದೆ, ತನ್ನ ಹರಕು ಚಾಪೆಯ ಮೇಲೆ ಪವಡಿಸಿದ್ದಳು. ಆಕೆ ಉಪವಾಸ ಬಿದ್ದಿರುವುದನ್ನು ನೋಡಿ ಅತ್ತೆ-ಮಾವಂದಿರು ಮರುಕವನ್ನು ಸೂಚಿಸಲಿಲ್ಲ. 'ಆಹಾರವನ್ನು ತೆಗೆದುಕೊ' ಎಂದು ಒಂದು ಮಾತನಾಡಲಿಲ್ಲ. ಒಂದು ದಿನವನ್ನು ಆಕೆ ಉಪವಾಸದಲ್ಲಿ ಕಳೆದಳು. ಎರಡನೆಯ ದಿವಸವೂ ಪಾರು ಊಟಮಾಡಲಿಲ್ಲ; ಮಲಗಿದಲ್ಲಿಂದ ಏಳಲಿಲ್ಲ. ಅಂದು ಸಂಜೆಯಾಗಲು, ಪಾರುವೆಲ್ಲಿ ಉಪವಾಸ ಮಾಡಿ ತನ್ನ ಪ್ರಾಣವನ್ನು ಕಳೆದುಕೊಳ್ಳುವಳೋ ಎಂದು ಅತ್ತೆಗೆ ಅಂಜಿಕೆಯಾಯಿತು. ಅವಳು ಅಂದು ರಾತ್ರಿ ಪಾರುಕುಟ್ಟಿಯ ಕೋಣೆಗೆ ಬಂದಳು; ಪಾರುವನ್ನು ಮಲಗಿದಲ್ಲಿಂದ ಎಬ್ಬಿಸಿದಳು. ಅತ್ತೆ ಪಾರುವಿನ ಬೆನ್ನಮೇಲೆ ಕೈಯಾಡಿಸಿದಳು. ಅವಳ ನುಡಿಗಳು ಮುನ್ನಿನಂತೆ ಕಠೋರವಾಗಿರಲಿಲ್ಲ; ಸ್ನೇಹ-ಮಮತೆಗಳು ಆಕೆಯ ನುಡಿಗಳಲ್ಲಿ ತುಂಬಿದ್ದುವು. 'ಪಾರು, ನೀನು ಈ ಪುಟ್ಟ ಸಂಗತಿಗೋಸುಗ ಬೇಸರುಪಟ್ಟುಕೊಳ್ಳಬೇಡ. ನೀನು ಹುಡುಗಿ, ತಿಳಿಯದೆ ತಪ್ಪು ಮಾಡಿದೆ! ನಿನ್ನನ್ನು ಹೊಡೆದುದು ನಿನ್ನ ಮಾವನಲ್ಲದೆ ಬೇರಿನ್ನಾರೂ ಅಲ್ಲವಷ್ಟೆ? ಕುಲಕ್ಕೆ ತಗುಲಿದ ಕಲಂಕವು ಅವರನ್ನು ಸಿಟ್ಟಿಗೇರಿಸಿತು, ಅದುದರಿಂದ ಹೊಡೆದರು; ಅದಲ್ಲದೆ ನಿನ್ನ ಮೇಲಿನ ಹಗೆತನದಿಂದಲ್ಲ. ಈ ಸಂಗತಿಯನ್ನು ನಾವಲ್ಲದೆ ಬೇರಿನ್ನಾರೂ ಅರಿತಿಲ್ಲ. ನಾವು ಎಂದಿಗೂ ಗುಟ್ಟನ್ನು ಹೊರಬಿಡೆವು. ಈ ಸುದ್ದಿಯನ್ನು ಊರಜನರೆಲ್ಲಾ ಅರಿತು ನಿನ್ನ ಮೋರೆಗೆ ಕಲಂಕವು ಹತ್ತುವುದೆಂದು ಅಂಜಿಕೊಳ್ಳಬೇಡ! ಮಗೂ, ಪಾಪ, ನಿನ್ನೆಯಿಂದ ಉಪವಾಸವಿರುವೆಯಲ್ಲ! ಏಳಮ್ಮಾ, ಊಟಮಾಡು! ನೀನು ಉಪವಾಸವಿರುವುದನ್ನು ನೋಡಿ ನನಗೆ ಬಹಳ ಸಂಕಟವಾಗುತ್ತಿದೆ. ನನ್ನ ಕರುಳನ್ನು ಉರಿಸಬೇಡ!'

ಈ ರೀತಿ ಅತ್ತೆಯು ಪಾರುವನ್ನು ಬೇಡಿಕೊಂಡಳು. ಮೃದು ವಚನಗಳಿಂದ ಅವಳು ಪಾರುವಿನ ಎದೆಯುರಿಯನ್ನು ಆರಿಸಲು ಯತ್ನಿಸಿದಳು. ಕಣ್ಣೀರನ್ನು ಹಾಕಿದಳು. ಅತ್ತೆಯ ನಿರ್ಬಂಧವನ್ನು ತಡೆಯಲಾಗದೆ ಪಾರುವು ಎರಡು ತುತ್ತು ಊಟಮಾಡಲು ಒಪ್ಪಿದಳು. ಕೈಕಾಲು ಮೋರೆಗಳನ್ನು ತೊಳೆದು, ಎರಡು ತುತ್ತು ಕೂಳನ್ನುಂಡುದಾಯಿತು. ಊಟವನ್ನೇನೋ ಮಾಡಿದಳು; ಆದರೆ ಅವಳ ಮನಸ್ಸಿನಲ್ಲಿ ಎಳ್ಳಷ್ಟೂ ನೆಮ್ಮದಿಯಿರಲಿಲ್ಲ. ತನ್ನಿಂದಾಗಿ ನಲ್ಲ ಕೊಳುಂಬನಿಗೆ ಯಾವ ಆಪತ್ತು ಬಂದೊದಗುವುದೋ ಎಂದು ಅವಳ ಜೀವ ಕುದಿಯುತ್ತಲಿದ್ದಿತು.

ಮಾವನು ಕಳ್ಳತನದ ಆರೋಪವನ್ನು ಹೊರಿಸಿ ಪೋಲಿಸರ ಮುಂದೆ ಕೇಸು ಕೊಟ್ಟಿರುವನೆಂಬುದು ಪಾರುವಿಗೆ ತಿಳಿಯಿತು. ಈ ಸಂಗತಿಯು ಗೊತ್ತಾಗಲು, ಮಾವನ ಮುಂದಿನ ಹಂಚಿಕೆಯೇನೆಂಬುದನ್ನು ತಿಳಿದುಕೊಳ್ಳಲು ಅವಳಿಗೆ ಪ್ರಯಾಸವೆನಿಸಲಿಲ್ಲ. ಕಳ್ಳತನದ ಆರೋಪವನ್ನು ಹೊರಿಸಿ ಕೊಳುಂಬನನ್ನು ಜೇಲಿಗೆ ಕಳುಹುವುದು ಮಾವನ ಹಂಚಿಕೆಯಾಗಿದೆಯೆಂದು ಅವಳು ಅರಿತುಕೊಂಡಳು. ಈ ಸಂಗತಿಯು ಅವಳ ಎದೆಯಲ್ಲಿ ನೋವಿನ ಹೊಸ ಬೀಜಗಳನ್ನು ಬಿತ್ತಿತು. ನಿರಪರಾಧಿ ಕೊಳುಂಬನು ಕಳ್ಳತನದ ಆರೋಪದ ಮೂಲಕ ಜೇಲಿಗೆ ತೆರಳುವ ಚಿತ್ರವು ಅವಳ ಚಿತ್ತವನ್ನು ಕದಡಿಸಿತು.

ಆ ದಿನ ಮಧ್ಯಾಹ್ನ ಮಾವನು ಊಟಮಾಡಿ ಕೈ ತೊಳೆದು ಒಳಗೆ ಬರುತಿದ್ದಾಗ, ಪಾರು ಅವನ ಪಾದಗಳನ್ನು ಹಿಡಿದು ಬಿನ್ನವಿಸಿದಳು: 'ಮಾವ, ನನ್ನದೊಂದು ಬೇಡಿಕೆಯಿದೆ, ಅದನ್ನು ಅಲ್ಲಗಳೆಯಬೇಡ!'

'ಏನದು?' ಎಂಬ ಪ್ರಶ್ನೆ ಮಾವನ ಬಾಯಿಂದ ಹೊರಟಿತು. ಪಾರುವಿನ ಮೊಗದೆಡೆಗೆ ಅವನು ದೃಷ್ಟಿಯನ್ನು ಹೊರಳಿಸಿದ.

'ಮಾವ, ಕೊಳುಂಬನು ಪೈರುಗದ್ದೆಯಿಂದ ಒಂದು ತೆನೆ ನೆಲ್ಲನ್ನೂ ಕದಿಯಲಿಲ್ಲ' ಪಾರು ವಿನಂತಿಸಿದಳು. ಕಳ್ಳತನ

ಮಾಡಿದನೆಂಬ ಸುಳ್ಳು ಆರೋಪವನ್ನು ಹೊರಿಸಿ ಆವನನ್ನು ಜೇಲಿಗೆ ಕಳುಹಬೇಡ! ಅವನು ತಪ್ಪುಗಾರನಲ್ಲ; ತಪ್ಪು ಮಾಡಿದಾಕೆಯು ನಾನು! ಆಡ್ಡ ಹಾದಿಯನ್ನು ಹಿಡಿಯಲು ಆತನಿಗೆ ಪ್ರೇರಣೆಯಿತ್ತವಳು ನಾನು! ನನ್ನನ್ನು ನೀನು ಮನಬಂದಂತೆ ದಂಡಿಸು, ಅನ್ನಕೊಡದೆ ಮನೆಯಿಂದ ಹೊರದೂಡು, ನನ್ನನ್ನು ಏನುಬೇಕಾದರೂ ಮಾಡು; ಆದರೆ ನಿರಪರಾಧಿ ಕೊಳುಂಬನನ್ನು ಜೇಲಿಗೆ ಕಳುಹಬೇಡ; ಅವನ ಬಾಳುವೆಯನ್ನು ಮಣ್ಣುಗೂಡಿಸಬೇಡ!"

"ಛೀ, ಮುಂಡೇ! ನನಗೆ ಬುದ್ಧಿವಾದವನ್ನು ಉಸುರಲು ಹೊರಟೆಯಾ?" ಮಾವನು ತನ್ನ ಕಾಲುಗಳನ್ನೆತ್ತಿ ಪಾರುವಿಗೆ ಒಂದು ಒದೆಯನ್ನು ಇತ್ತನು. ಪಾರು ತನ್ನ ಮಾತುಗಳು ಮುಗಿವನಕ ಮಾವನ ಪಾದಗಳಿಂದ ಕೈಗಳನ್ನು ಮೇಲಕ್ಕೆತ್ತಿರಲಿಲ್ಲ. ಅವಳ ತಲೆಯು ಬಾಗಿತ್ತು. ಮಾವನು ಕೊಟ್ಟ ಒದೆಯು ಅವಳ ತಲೆಗೆ ತಗುಲಿತು. ಅದನ್ನು ತಡೆಯಲಾರದೆ ಪಾರು ನೆಲದ ಮೇಲೆ ಉರುಳಿದಳು. ಮಾವನ ಬಾಯಿಂದ ಸಿಟ್ಟಿನ ನುಡಿಗಳು ಹರಿದುವು "ನಮ್ಮ ಕುಟುಂಬಕ್ಕೇ ಕೆಟ್ಟ ಹೆಸರನ್ನು ತರಬೇಕೆಂದು ನೀನು ಹೊರಟಿರುವೆ! ಈಗ ಬುದ್ಧಿವಂತಳಂತೆ ನನ್ನನ್ನು ಉಪದೇಶಿಸಲು ಬಂದಿರುವೆ! ನೀನು ಮಾಡಿದ ಅಕೃತ್ಯವನ್ನು ನೆನೆವಾಗ ನಿನ್ನನ್ನು ಸಿಗಿಯುವುದು ಲೇಸೆಂದು ತೋರುತ್ತದೆ!"

ಬರಿ ಬಯ್ಯುವುದರಿಂದ ಮಾತ್ರ ಆ ಮಾವ ತೃಪ್ತಿಯನ್ನು ಹೊಂದಲಿಲ್ಲ. ಪುನಃ ತನ್ನ ಕಾಲನ್ನೆತ್ತಿ ಪಾರುವನ್ನು ಒದೆದುಬಿಟ್ಟನು... ದಾಯಿತು. ಈ ಸಾರಿಯ ಒದೆಯು ಪಾರುವಿನ ಹೊಟ್ಟೆಗೆ ತಗುಲಿತು. ಅವಳು 'ಅಯ್ಯೋ!'ಎಂದು ಕಿರುಚಿದಳು; ಇನ್ನೊಂದು ಕ್ಷಣದಲ್ಲಿಯೇ ಪ್ರಜ್ಞೆಯಿಲ್ಲದವಳಾದಳು.

* * *

ಪೋಲೀಸರು ಕೊಳುಂಬನನ್ನು ಹುಡುಕ ಹತ್ತಿದರು. ಅವನನ್ನು ಹಿಡಿಯುವುದು ಅವರಿಗೆ ಪ್ರಯಾಸದ ಕೆಲಸವೆನಿಸಲಿಲ್ಲ. ಅಲ್ಲಿಂದ ಐದು ಮೈಲು ದೂರದಲ್ಲಿದ್ದ ಅವನ ಅತ್ತೆಯ ಮನೆಯಲ್ಲಿ ಕೊಳುಂಬನು ಅವಿತಿದ್ದ. ಅವನು ಅಲ್ಲಿ ಅವಿತಿರುವನೆಂಬುದನ್ನು ಪೋಲೀಸರು ತಿಳಿದರು. ಒಂದು ಇರುಳು, ನಾಲ್ಕಾರು ಮಂದಿ ಅಲ್ಲಿಗೆ ಹೋದರು; ಗುಡಿಸಿಲೊಳಗಿದ್ದ ಕೊಳುಂಬನನ್ನು ಹಿಡಿದರು; ಅವನ ಕೈಗಳಿಗೆ ಸಂಕೋಲೆಗಳನ್ನು ತೊಡಿಸಿ ಸ್ಟೇಶನ್ನಿಗೆ ಕರೆದು ತಂದರು.

ಸ್ಟೇಶನ್ನಿನಲ್ಲಿ ಕೊಳುಂಬನಿಗೆ ಪರಿಪರಿಯ ಹಿಂಸೆಗಳನ್ನಿತ್ತರು; ಬೆತ್ತದಿಂದ ಅವನ ಮೈಮೇಲೆಲ್ಲಾ ಬಾಸುಂಡೆಗಳು ಏಳುವಂತೆ ಹೊಡೆದರು. ಈ ನೋವನ್ನು ತಾಳಲಾರದೆ, ತಾನು ನಿರಪರಾಧಿಯಾಗಿದ್ದರೂ ಮಾವನ ಗದ್ದೆಗಳಿಂದ ಪೈರನ್ನು ಕದ್ದುದು ಆಹುದೆಂದು ಅವನು ಒಪ್ಪಿಕೊಂಡ. ಪೋಲೀಸರು ಹೇಳಿಕೊಟ್ಟಂತೆ ಕೋರ್ಟಿನಲ್ಲಿ ನುಡಿಯುವುದಾಗಿ ಅವನಿಂದ ಅವರು ಆಣೆ ಮಾಡಿಸಿದರು.

ಪೋಲೀಸರು ಕೊಳುಂಬನನ್ನು ಕೋರ್ಟಿನಲ್ಲಿ ಹಾಜರು ಪಡಿಸಿದರು. ಅವನ ಪರವಾಗಿ ಸಾಕ್ಷಿ ಹೇಳಲು ಯಾರೂ ಇರಲಿಲ್ಲ; ವಾದಿಸಲು ವಕೀಲರೂ ಇಲ್ಲ. ಅವನ ಮೇಲೆ ಆರೋಪವನ್ನು ಹೊರಿಸಿ ವಾದಿಸಲು ಮಾತ್ರ ಸರಕಾರಿ ವಕೀಲರಿದ್ದರು. ಮುಳ್ಳವ ಕುರುಬರಿಬ್ಬರು ಮುಂದೆ ಬಂದು, ಅವನು ರಾತ್ರಿ ಗದ್ದೆಗಳಿಂದ ಪೈರು ಕದ್ದುದನ್ನು ನೋಡಿರುವುದಾಗಿ ಸಾಕ್ಷಿ ಹೇಳಿದರು. ಪೋಲೀಸರು ಅಂಜಿಕೆಗಳನ್ನು ತಂದೊಡ್ಡಿದುದರಿಂದ, ತಾನು ನಿರಪರಾಧಿಯಾಗಿದ್ದರೂ ಗದ್ದೆಗಳಿಂದ ಪೈರನ್ನು ಕದ್ದುದು ಆಹುದೆಂದು, ಕೋರ್ಟಿನಲ್ಲಿ ಕೊಳುಂಬನು ಒಪ್ಪಿಕೊಂಡ. ಮೇಜಿಸ್ಟ್ರೇಟರು ಕೊಳುಂಬನು ಅಪರಾಧಿಯುಹುದೆಂದು ತೀರ್ಮಾನಿಸಿದರು. ಅವರು ಒಂದು ವರ್ಷಕಾಲ ಸಶ್ರಮ ತುರಂಗವಾಸದ ದಂಡನೆಯನ್ನು ವಿಧಿಸಿದರು.

ಕೊಳುಂಬನು ತನ್ನ ಪೊನ್ನುಪಾಪಾತಿಯನ್ನು ಬಿಟ್ಟು ದೂರ ತೆರಳಿದ; ತನಗೆ ದೊರೆತ ದಂಡನೆಯನ್ನನುಭವಿಸಲೋಸುಗ ತುರಂಗದ ನಾಲ್ಕು ಗೋಡೆಗಳ ಮಧ್ಯದಲ್ಲಿ ಮರೆಯಾದ.

ಮೇಲಿನ ಕತೆಯಲ್ಲಿ ಬರುವ ಕೆಲವು ಫಣಿಯರ ಭಾಷೆಯ ಶಬ್ದಗಳು

ಪಾಪಾತಿಪುಳ್ಳೆ = ಪುಟ್ಟ ಒಡತಿ.

ಪಾಳು = ವೀಳ್ಯದೆಲೆ-ಹೊಗೆಸೊಪ್ಪುಗಳನ್ನು ಹಾಕುವ ಒಂದು ಪುಟ್ಟ ಚೀಲ.

ಬಳ್ಳಿ = ಧಾನ್ಯರೂಪದಲ್ಲಿ ಫಣಿಯರಿಗೆ ದೊರೆಯುವ ದಿನಗೂಲಿ.

ತೊಡಿ = ವಸತಿ (ನಾಯರ ಜಾತಿಯವರ ಮನೆ).

ಪೊನ್ನುಪಾಪಾತಿ = (ಹೊನ್ನೊಡತಿ) ಒಂದು ಆಕ್ಕರೆಯ ಸಂಬೋಧನೆ.

ಕಾರಿಕನ್ನು = ಫಣಿಯ ಹೆಣ್ಣುಗಳು ಉಡುವ ಬಿತ್ತಿ ಮೊಳದ ಅರಿವೆಯ ತುಂಡು.

ಉರಾಟಿ = ಮುದುಕಿ.

ಕೆಂಚಲು = ಹಟ್ಟಿಯಲ್ಲಿ ಕರುಗಳನ್ನು ಕಟ್ಟುವ ಒಂದು ಪ್ರತ್ಯೇಕ ಸ್ಥಳ.

ಕೊಳನಜಾತಿ = ಫಣಿಯ ಜಾತಿ.

ಪಾಪ = ಒಡೆಯ.

ಮುರಾತಿ = ಮುದುಕಿ.

ಪೊದಿ = ಧಾನ್ಯದ ಅಳತೆಯೊಂದು. ಒಂದು ಪೊದಿಗೆ ೪೦ ಸ್ಸೇರು ಸೇರುಗಳು.

ಮುಳ್ಳವ ಕುರುಬರು = ವೈನಾಡಿನ ಮೂಲ ನಿವಾಸಿಗಳಲ್ಲಿಯ ಒಂದು ವರ್ಗ; ಫಣಿಯರಿಗಿಂತ ತುಸ ನಾಗರಿಕರು.

ಮೋರೆಯ ಮುದ್ದು

★ ಶ್ರೀ. ಬೇಂದ್ರೆ ಲಕ್ಷ್ಮಣರಾಯರು,
ಧಾರವಾಡ

★

(ಒಂದು ಸಂಸಾರಚಿತ್ರ) *

ವಿರೂಪಾಕ್ಷನ ಪೂರ್ಣ ಹೆಸರು 'ವಿರೂಪಾಕ್ಷಭಟ್ಟ ಪರಮೇಶ್ವರಭಟ್ಟ ಅಗ್ನಿಹೋತ್ರಿ' ಎಂದು. ಹೆಸರಿನಲ್ಲಿ ಒತ್ತಕ್ಷರ ಹೆಚ್ಚು ಎಂದು, ಸಲುಗೆಯವರು ಅವನನ್ನು 'ವಿ. ಪಿ.' ಎಂತಲೆ ಕರೆಯುತ್ತಿದ್ದರು. 'ವಿ. ಪಿ.' ಮುನ್ಸೀಫ್ ಕೋರ್ಟಿನಲ್ಲಿ ಗುಮಾಸ್ತ. ಅವನಿಗೆ ೨೦ನೆಯ ವರ್ಷಕ್ಕೇ ಮದುವೆಯಾಗಿತ್ತು. ಮನೆಯಲ್ಲಿ ಅವನು, ಅವನ ಹೆಂಡತಿ, ನಾಲ್ಕು ಮಕ್ಕಳು, ಮುಪ್ಪಿನವರಾದ ತಂದೆ–ತಾಯಿ ಇಷ್ಟು ಜನ ಇದ್ದರು. ಗಂಗಾಬಾಯಿ ವಿ. ಪಿ. ಯ ಹೆಂಡತಿ. ಅವಳಿಗೆ ಗಂಡನೊಡನೆ ರಹಸ್ಯವೆಂದರೆ ಕೇವಲ ರಾತ್ರಿಯಲ್ಲಿಯೆ.

ಒಂದು ದಿನ ಗಂಗಾಬಾಯಿ, ನಿತ್ಯದ ಕೆಲಸಗಳಲ್ಲದೆ ಮೂರುಸೇರು ಮೆಣಸಿನಕಾಯಿ ಪುಡಿ ಕುಟ್ಟಿ, ಒಂದು ಪಡಿ ಮೆಂಥೆಯದ ಹಿಟ್ಟು ಬೀಸಿದ್ದಳು. ಬೆರಳುಗಳೆಲ್ಲ ಉರಿಬಿದ್ದಿದ್ದುವು, ಕೈಗಳು ನೋಯುತ್ತಿದ್ದುವು, ತುಂಬ ಆಯಾಸವಾಗಿತ್ತು. ಮೆಣಸಿನಕಾಯಿ ಹಸಿಮಾಡುವಾಗ ಅರ್ಧಾಣೆಯಗಲ ಸೀರೆ ಸುಟ್ಟುಕೊಂಡಿದ್ದಳು. ಅದನ್ನು ಆರಿಸುವುದಕ್ಕೆ ಹೋಗಿ ಅವಸರದಲ್ಲಿ ಒಳ್ಳೆಣ್ಣೆಯ ಬಾಟ್ಲಿಯನ್ನು ಉರುಳಿಸಿದಳು. ಆದುದರಿಂದ ಅತ್ತೆ ಅವಳನ್ನು ಬೈದಿದ್ದಳು. ಉದ್ದೇಶಪೂರ್ವಕ ಯಾವುದನ್ನೂ ಮಾಡಿರಲಿಲ್ಲ ಅವಳು. ಎಂತಲೆ ಮನಸ್ಸಿಗೆ ಬಹಳ ವ್ಯಥೆಯಾಗಿತ್ತು. ರಾತ್ರಿಯ ಊಟ, ಉಡುಸಾರಣೆ ಮುಗಿಸಿ, ಕೋಣೆಗೆ ಬರುವ ಹೊತ್ತಿಗೆ ಹನ್ನೊಂದು ಘಂಟೆಯಾಗಿತ್ತು. ವಿರೂಪಾಕ್ಷ ಹಣೆಗೆ ಅಮೃತಾಂಜನ ತಿಕ್ಕಿಕೊಳ್ಳುತ್ತ ಹಾಸಿಗೆಯ ಮೇಲೆ ಒರಗಿದ್ದ. ಅವನ ಪಕ್ಕದಲ್ಲಿಯೆ ಎರಡು ಸಣ್ಣ ಮಕ್ಕಳು ಮಲಗಿದ್ದುವು. ಗಂಗಾಬಾಯಿ ಬಾಗಿಲಿಕ್ಕಿ ಒಳಕ್ಕೆ ಬಂದಳು; ದೀಪ ಸಣ್ಣಗೆ ಮಾಡಿದಳು. ಎರಡೂ ಮಕ್ಕಳನ್ನೆತ್ತಿ ತನ್ನ ಹಾಸಿಗೆಯ ಮೇಲೆ ಮಲಗಿಸಿ, ಗಂಡನ ಹತ್ತಿರ ಬಂದು ಕುಳಿತಳು.

"ಏನು ತಲೆ ನೋಯುತ್ತದೇನು?"

"ಹೌದು, ಅರೆತಲೆಶೂಲಿ! ಆದುಗಂಟೆಯಿಂದ ಎಡಗಡೆಯ ಮೆಲುಕಿನಲ್ಲಿ ಚೇಳು ಕಡಿದ ಹಾಗೆ ಬಾಧೆ!"

ತನ್ನ ದುಃಖ ವೇದನೆ ಎಲ್ಲಿಯೊ ಹೋಯಿತು ಗಂಗಾಬಾಯಿಗೆ. 'ಗಂಡ ತಲೆಶೂಲಿಯಿಂದ ವ್ಯಥೆಪಡುತ್ತಿರುವನಲ್ಲಾ,' ಎಂದು ಕಳವಳವಾಯಿತು ಅವಳಿಗೆ. ತಾನೂ ಇಷ್ಟು ಅಮೃತಾಂಜನ ತೆಗೆದುಕೊಂಡು ತಿಕ್ಕಿದಳು, ಮೆಲುಕನ್ನು ಹತ್ತಿಕ್ಕಿದಳು.

"ಈಗ ಗುಣ ಕಡಿಮೆ ಆಯಿತೇ?"

"ಸ್ವಲ್ಪ ಆದ ಹಾಗೆ ಅನಿಸ್ತಾ ಇದೆ!"

"ಕಾಲೊತ್ತಲೇನು?"

"ಛೇ, ಬೇಡ! ನೋಯುವುದಿಲ್ಲ, ಸುಮ್ಮನೆ ಯಾಕೆ?"

ಆದರೂ ಗಂಗಾಬಾಯಿ ಕೇಳಲಿಲ್ಲ. ಕಾಲೊತ್ತಲು ತೊಡಗಿದಳು. ದೀಪ ತೀರ ಸಣ್ಣದಾಗಿತ್ತು; ಅವಳ ಮುಖ ಕಾಣುತ್ತಿರಲಿಲ್ಲ. ವಿರೂಪಾಕ್ಷನಿಗೆ ತನ್ನ ಕಾಲಮೇಲೆ ನೀರ ಹನಿ ಬಿದ್ದಹಾಗೆ ಎನಿಸಿತು. ಚಟ್ಟನೆ ಎದ್ದು ಕುಳಿತ. ಗಂಗಾಬಾಯಿ ಕೇಳಿದಳು:

"ಏನು ಎದ್ದಿರಿ?"

"ಕಾಲ ಮೇಲೆ ಹನಿ ಬಿದ್ದಹಾಗಾಯ್ತು; ಅಳುತ್ತಾ ಇದ್ದೀಯಾ?"

ಅವಳ ಗಲ್ಲದ ಮೇಲೆ ಕೈಯಾಡಿಸಿದ; ಬೆರಳುಗಳು ಕಣ್ಣೀರಿಂದ ಒದ್ದೆಯಾದುವು.

"ಇದೇನು ಗಂಗೂ, ಏನಾಯಿತು?"

"ಏನೂ ಇಲ್ಲ! ಏನೋ ತಾಯಿಯ ನೆನಪಾಯ್ತು, ಕಣ್ಣಲ್ಲಿ ನೀರುಬಂತು!"

"ನಿನ್ನ ತಾಯಿ ತೀರಿ ಹತ್ತುವರ್ಷಗಳಾದುವು. ಈಗಲೂ ಅವಳ ನೆನಪಾದರೆ ನಿನಗೆ ಕಣ್ಣೀರು ಬರುವುದೇ? ನನಗೆ ನಂಬಿಕೆ ಸಾಲದು, ಇನ್ನೇನಾದರೂ ಕಾರಣವಿರಬೇಕು!"

"ಛೆ, ಇಲ್ಲ! ಬೇರೆ ಏನಿದೆ? ಏನೂ ಇಲ್ಲ!"

"ಇಲ್ಲ, ಏನೋ ಇಂದು ಆಗಿರಬೇಕು! ಅತ್ತೆ-ಸೊಸೆಯರ ಜಗಳವಿರಬೇಕು, ಅಥವಾ ನೆರೆಮನೆಯವರು ದೂರಿಕೊಂಡಿರಬೇಕು!"

"ಅದಾವುದೂ ಇಲ್ಲ! ಹೋಗಲಿಬಿಡ್ರಿ, ನಿಮಗೆ ಮೊದಲೇ ತಲೆಶೂಲಿ; ನೀವು ತಣ್ಣಗೆ ಮಲಗಿಕೊಳ್ರಿ!"

"ಇನ್ನು ನಿದ್ದೆಬರುವುದು ಸಾಧ್ಯವೇ ಇಲ್ಲ! ಏನು ಹೇಳು ನೀನು ಹೇಳಲೇ ಬೇಕು!"

ಗಂಗಾಬಾಯಿ ಜರುಗಿದ ಸಂಗತಿಯನ್ನೆಲ್ಲ ಹೇಳಿದಳು

"ಅತ್ತೆಯವರು ಸಾಮಾನ್ಯವಾಗಿ ಎಂದೂ ಹೀಗೆ ಸಿಟ್ಟುಮಾಡುವುದಿಲ್ಲ. ಇಂದೇ ಯಾಕೋ ಅವರಿಗೆ ಹೆಚ್ಚಾಗಿ ಕೋಪ ಬಂತು. ನಾನೇನೂ ಬೇಕಾಗಿ ಹಾಗೆ ಮಾಡಿರಲಿಲ್ಲ. ಕೈತಪ್ಪಿ ಆಯಿತು. ಆದರೂ ಅನಿಸಿಕೊಳ್ಳುವುದು ತಪ್ಪಲಿಲ್ಲ. ಹೆಣ್ಣಿನ ಜನ್ಮ ಯಾತಕ್ಕೂ ಬೇಡ. ಎಷ್ಟು ಮುಂದಿಗೆ ಹೆದರಿ ನಡೆಯಬೇಕು? ಸಾಯುವವರೆಗೂ ಒಬ್ಬರ ಅಧೀನ ಅವರಿಗೆ ತಪ್ಪಿದ್ದಲ್ಲ! ನೀವು ಏನೇ ಅಂದರೂ ನನಗಷ್ಟು ಹತ್ತುವುದಿಲ್ಲ; ಮರುಕ್ಷಣದಲ್ಲಿಯೆ ಅದನ್ನು ಮರೆತುಬಿಡುತ್ತೇನೆ. ಆದರೆ ಬೇರೆಯವರು ಒಂದು ಸಣ್ಣ ಮಾತನಾಡಿದರೂ ನನಗೆ ಸಹನವಾಗದಷ್ಟು ನೋವಾಗುತ್ತದೆ!"

* ನೋಲಾಟದಲ್ಲಿ ೩ನೆಯ ಬಹುಮಾನವನ್ನು ಪಡೆದ ಕತೆಯಿದು.
ಸಂ. ಜ.

"ಆದರೆ ನನ್ನ ತಾಯಿ 'ಬೇರೆ ಯಾರೂ' ಅಲ್ಲ! ನನಗಾಗಿ ಅದನ್ನು ನೀನು ಸಹಿಸಬೇಕು!"

"ಸಹಿಸುತ್ತೇನೆ, ಆದರೂ ಒಮ್ಮೊಮ್ಮೆ ತಾಳ್ಮೆ ಉಳಿಯುವು-ದಿಲ್ಲ. ನಿಮ್ಮೆದುರು ಒಮ್ಮೆ ಅತ್ತುಬಿಟ್ಟರೆ, ಅಲ್ಲಿಗೆ ಅದು ಮುಗಿದ ಹಾಗೆ. ದುಃಖ ಹಗುರಾಗುವುದಕ್ಕೆ ಇದೊಂದೇ ಉಪಾಯ. ಅತ್ತೆಯವರ ವಿರುದ್ಧ ನಾನು ದೂರುಹೇಳುತ್ತೇನೆ ಎಂದು ತಿಳಿಯಬೇಡಿ. ಇಬ್ಬರೂ– ಅತ್ತೆಮಾವ– ನನ್ನ ಮೇಲೆ ಆದಷ್ಟೋ ಪ್ರೀತಿಮಾಡುತ್ತಾರೆ. ಮನೆಯಲ್ಲಿ ಯಾವುದಕ್ಕೂ ಕೊರತೆಯಿಲ್ಲ. ಬಂಗಾರದ ಹಾಗೆ ನಾಲ್ಕು ಮಕ್ಕಳಿವೆ. ಹಿಂದಿನ ಜನ್ಮದಲ್ಲಿ ಅದೇನು ಪುಣ್ಯಮಾಡಿದ್ದೆನೊ, ನಿಮ್ಮ ಕೈಹಿಡಿದಿದ್ದೇನೆ. ಎಲ್ಲ ಸೌಖ್ಯವಾಗಿಯೆ ಇದೆ. ಇಷ್ಟೆಲ್ಲ ಇದ್ದರೂ, ಯಾಕೋ ಒಂದು ಬಗೆಯ ಅತೃಪ್ತಿ! ಹನ್ನೆರಡು ವರ್ಷ ಕೂಡಿಯಿದ್ದರೂ ಇದ್ದಹಾಗೇ ಎನಿಸಲೊಲ್ಲದು ನನಗೆ! ನಾವು ಎಂದಾದರೂ ಇಬ್ಬರೇ ಸ್ವತಂತ್ರ-ವಾಗಿ ಇರಬಹುದೇ?"

"ನನಗೂ ಹೀಗೇ ಎನಿಸತಾ ಇದೆ. ನಿನ್ನ ಮುಂದೆ ನಾನಿದನ್ನು ಇದುವರೆಗ ಆಡಿತೋರಿಸಿರಲಿಲ್ಲ. ಇಂದು ನೀನೇ ಈ ಮಾತನ್ನು ತೆಗೆದೆ. ನನಗೂ ಯಾಕೋ ಈ ಮನೆ ಬೇಜಾರುಬಂದಿದೆ! ಈ ಊರೂ ಬೇಜಾರುಬಂದಿದೆ! ಯಾರೂ ಗುರುತಿಲ್ಲದ ಊರಿಗೆ ಹೋಗಿ, ನಾವಿಬ್ಬರೇ ಸ್ವೇಚ್ಛೆಯಾಗಿ ಇರಬೇಕು— ಎಂದು ಎನಿಸ್ತಾ ಇದೆ."

"ಆದರೆ ಅದು ಹ್ಯಾಗೆ ಸಾಧ್ಯ? ಹಾಗೆ ಬಿಟ್ಟುಹೋದರೆ, ಅತ್ತೆ-ಮಾವ ಬಹುವಾಗಿ ನೊಂದುಕೊಂಡಾರು!"

"ಛೆ, ಹಾಗೆ ಸಿಟ್ಟಾಗಿ ಹೋಗುವ ಹಾಗಿಲ್ಲ! ಒಂದು ಉಪಾಯದಿಂದ ಹೋಗಬೇಕು!"

"ಹಾಗೆ ಸಾಧ್ಯವಿದ್ದರೆ ನೋಡ್ರಿ, ನನಗೂ ಕೆಲವುದಿನ ಇಬ್ಬರೇ ಇರೋಣಾ—ಎಂದು ಆಶೆ!"

"ಹೋಗುವುದು ಎಂದರೆ ವರ್ಗಮಾಡಿಸಿಕೊಳ್ಳಬೇಕು. ಅದೂ ನಾವು ಕೇಳದೆಯೆ—ಮೇಲಿಂದಲೆ—ಹಾಗೆ ಹುಕುಮು ಬಂತು ಎಂದು ತಂದೆಯವರಿಗೆ ತೋರಿಸಬೇಕು!"

"ಆ ಉಪಾಯಗಳು ನಿಮಗೇ ಗೊತ್ತು. ಒಂದೆರಡು ವರ್ಷ ಗಳಾದರೂ ಬೇರೆ ಇದ್ದುಬರೋಣ. ಏನೆ ಆದರೂ ಮಾವನವರು ಈ ಊರು ಬಿಡುವವರಲ್ಲ!"

"ಅದು ನಿಜ. ನೋಡೋಣ, ಪ್ರಯತ್ನವನ್ನಂತೂ ಮಾಡೋಣ!"

೨

ಹೆಂಡತಿಯೊಡನೆ ಮಾತಾದ ಮರುದಿನವೆ, 'ಪಿ.ಪಿ.' ಶಿರಸ್ತಾರ-ರನ್ನು ಕಂಡು, ಟ್ರಾನ್ಸ್ಫರಿಗೆ ಬರೆದುಕೊಂಡ. ಎರಡು ತಿಂಗಳು ಆ ಕಾಗದ ಶಿರಸ್ತಾರರ ದಪ್ತರಿನಲ್ಲಿಯೇ ಇತ್ತು. ಒಂದು ದಿನ ಅವರು 'ಪಿ.ಪಿ.' ಯನ್ನು ಕರೆದು ಹೇಳಿದರು: "ಶಿರಸಿಗೆ ಹೋಗುವ ಹಾಗಿದ್ದರೆ ಹುಕುಮು ಮಾಡಿಸಬಹುದು!" ಎಂದು. ಪಿರೂಪಾಕ್ಷ ಒಪ್ಪಿದ. ಹದಿನೈದು ದಿನಗಳಲ್ಲಿ ಹುಕುಮು ಬಂದಿತು. ಆ ಹುಕುಮಿನ ಮೇರೆಗೆ 'ಪಿ. ಪಿ.' ತನ್ನ ಹೆಂಡತಿ, ಎರಡು ಮಕ್ಕಳು ಇವರೊಡನೆ ಶಿರಸಿಗೆ ಹೊರಟುಬಿಟ್ಟ.

ಪರಮೇಶ್ವರಭಟ್ಟರಿಗೆ ಬಲು ಕೆಡಕೆನಿಸಿತು—ಮುಪ್ಪಿನ ಕಾಲಕ್ಕೆ ಮಗ, ಸೊಸೆ ಅಗಲುತ್ತಾರೆ ಎಂದು. ಇಬ್ಬರು ಮೊಮ್ಮಕ್ಕಳನ್ನು ತಮ್ಮ ಹತ್ತಿರ ಇರಿಸಿಕೊಂಡರು; ನಿರ್ವಾಹವಿಲ್ಲದೆ ಮಗ, ಸೊಸೆ ಇಬ್ಬರನ್ನೂ ಕಳುಹಿದರು.

* * *

ಶಿರಸಿಯಲ್ಲಿ 'ಪಿ. ಪಿ.' ಒಂದು ಬಾಡಿಗೆಮನೆ ಹಿಡಿದ. ಪೂರಾ ಮನೆಯಲ್ಲ; ಮನೆಯ ಒಂದು ಭಾಗ. ಮಿಕ್ಕ ಮನೆಯಲ್ಲಿ ಮನೆಯವರು ಇರುತ್ತಿದ್ದರು.

'ಪಿ. ಪಿ.' ಕೆಲಸ ಮುಗಿಸಿ ಮನೆಗೆ ಬಂದನೆಂದರೆ ಎಲ್ಲಿಯೂ ಹೋಗುತ್ತಿರಲಿಲ್ಲ. ಹೆಂಡತಿ-ಮಕ್ಕಳಜೊತೆಗೆ ಹೊತ್ತುಕಳೆಯುವ. ಗಂಗಾಬಾಯಿಗೂ ಗಂಡನೊಡನೆ ಎಷ್ಟು ಮಾತನಾಡಿದರೂ ಸಾಲದು; ಎಷ್ಟು ನಗೆಯಾಡಿದರೂ ಸಾಲದು. ಮನೆಯಲ್ಲಿ ಕೆಲಸವೇ ಇಲ್ಲ—ಎನಿಸುವುದು. ಇಬ್ಬರೂ ಕೂಡಿ ಚಹ ಕುಡಿಯು-ವರು, ಕೂಡಿಯೆ ಊಟಕ್ಕೆ ಕೂಡುವರು, ಸಾಯಂಕಾಲ ತಿರು-ಗಾಡಲು ಹೋಗುವರು, ಸಿನೇಮಾಕ್ಕೆ ಹೋದರೆ ಕೂಡಿಯೆ ಹೋಗುವರು. ಗಂಗಾಬಾಯಿ ಅಡಿಗೆ ಮಾಡುವಾಗ 'ಪಿ. ಪಿ.' ಅಲ್ಲಿಯೇ ಕುಳಿತು ಬಿಡುವ, ಏನು ಹೈಸು ಹರಟೆ ಹೊಡೆಯುವ.

ಗಂಡ ಕೋರ್ಟಿಗೆ ಹೋದನೆಂದರೆ ಗಂಗಾಬಾಯಿಗೆ ಕೆಲಸವೇ ಇರುತ್ತಿರಲಿಲ್ಲ. ಒಬ್ಬಳೇ ಕೂಡುವಳು. ಬೇಸರು ಬರಬೇಕು. ಮನಸ್ಸಿನಲ್ಲಿ ಬಂತು—ನೆರೆಮನೆಯವರ ಗುರುತು ಮಾಡಿಕೊಳ್ಳ-ಬೇಕೆಂದು. ಹೋಗತೊಡಗಿದಳು. ಬರುಬರುತ್ತ ವಿಧವೆಯಾದ ಪಾರಾ, ಮಧ್ಯಾಹ್ನದ ಹೊತ್ತಿನಲ್ಲಿ ಗಂಗಾಬಾಯಿಯ ಮನೆ-ಯಲ್ಲಿಯೇ ಕೂಡಲು ತೊಡಗಿದಳು. ಅವಳ ಮನೆಯಲ್ಲಿ ಮುಪ್ಪಿ-ನವರಾದ ತಂದೆ-ತಾಯಿ, ಒಬ್ಬ ಅರೆಹುಚ್ಚನಂತಿರುವ ತಮ್ಮ. ಅವಳ ಒಬ್ಬ ಅಣ್ಣ ಮುಂಬಾಯಿಯಲ್ಲಿ ಇರುತ್ತಿದ್ದ. ಗಂಗಾ-ಬಾಯಿಯ ಎರಡೂ ಮಕ್ಕಳು ದಿನವೆಲ್ಲ ಅವಳ ಹತ್ತಿರವೇ ಇರುವುವು. ಅವಳೇ ತಾಯಿಯೇನೋ ಎನ್ನುವಷ್ಟು ಅವಳ ಅಭ್ಯಾಸವಾಯ್ತು—ಆ ಕೂಸುಗಳಿಗೆ.

ಪಾರಾಗೆ ಮಾತು ಹೆಚ್ಚು ಬೇಕಾಗಿಲ್ಲ. ಎನಿಸಿದ್ದನ್ನೆಲ್ಲ ಆಡಿ-ಬಿಡುವುದು ಗಂಗಾಬಾಯಿಯ ರೀತಿ, ಮುಂದಿಯದನ್ನೆಲ್ಲ ಕೇಳಿ ಮನಸ್ಸಿನಲ್ಲಿಡುವುದು ಪಾರಾನ ನೀತಿ. ಗಂಗಾಬಾಯಿಗೆ ಕಪಟ-ವೆಂಬುದು ಗೊತ್ತೇ ಇರಲಿಲ್ಲ. ಮುಂದಿ ಆಡುವುದೆಲ್ಲ ನಿಜ ಎಂದು ನಂಬಿಬಿಡುವಳು. ಅವಳಿಗೆ ಕಣ್ಣೀರನ್ನು ತರಿಸುವುದು ಬಲು ಸುಲಭ. ಇದರ ಇನ್ನೊಂದು ತುದಿ ಪಾರಾ. ಅವಳ ವಿಷಯ 'ಪಿ.ಪಿ.' ಗೆ ಹೆಂಡತಿಯಿಂದ ತಿಳಿದು ಬಂದಿತ್ತು. ಮೊದ-ಮೊದಲು 'ಪಿ.ಪಿ.' ಮನೆಗೆ ಬರುವುದರೊಳಗಾಗಿ ಅವಳು ಬಂದು ಕುಳಿತು ಹೋಗಿರುತಿದ್ದಳು. ಕೆಲವುದಿನಗಳ ಮೇಲೆ, ಅವನು

ಬಂದಿರುವಾಗಲೂ ಕೂಡುವಳು, ಗಂಗಾಬಾಯಿಯೊಡನೆ ಹರಟೆ ಹೊಡೆಯುವಳು. ಒಮ್ಮೆ ಎ. ಪಿ. ಅವಳನ್ನು ಓರೆಗಣ್ಣಿನಿಂದ ನೋಡಿದ್ದ. ಆಗ ಅವನ ದೃಷ್ಟಿಯನ್ನು ಆಕೆ ಎದುರಿಸಿದ್ದಳು. ಅದರಲ್ಲಿ ಆಶೆ ಇತ್ತು, ಔತಣವಿತ್ತು. ಎ. ಪಿ. ಇದನ್ನು ಗುರುತಿಸದೆ ಇರಲಿಲ್ಲ. ಅಂದಿನಿಂದ ಪರಸ್ಪರರನ್ನು ನೋಡುವುದರಲ್ಲಿ ಇಬ್ಬರಿಗೂ ಸುಖವೆನಿಸುತ್ತಿತ್ತು. ಅವನು ಮಗುವನ್ನೆತ್ತಿಕೊಂಡಿರುವಾಗ ಮೀರಾ ಬೇಕಾಗಿಯೆ ಅಲ್ಲಿಗೆ ಬರುವಳು. ಅವಳನ್ನು ನೋಡಿ ಮಗು ಅಳುವುದು; ಆ ಮೇಲೆ ಮಾತಿಗೆ ಮಗು ಒಂದು ನಿಮಿತ್ತವಾಗುವುದು. ಮುಂದೆ ಗಂಗಾಬಾಯಿ ಇರಲಿ ಬಿಡಲಿ, ಎ. ಪಿ. ಮತ್ತು ಮೀರಾ ಯಾವ ಸಂಕೋಚವೂ ಇಲ್ಲದೆ ಸಲುಗೆಯಿಂದ ಕುಳಿತು ಮಾತನಾಡುವರು; ನಕ್ಕು ಕೆಲೆಯುವರು.

ಒಂದು ದಿನ, ರಾತ್ರಿ ಹತ್ತುಗಂಟೆಯ ಹೊತ್ತು. ದಿಡ್ಡಿಯಬಾಗಿಲನ್ನು ಮುಚ್ಚಿ ಬಂದು ಮಲಗುವ ವಿಚಾರ ಎ. ಪಿ. ಯದು. ಹೊರಗೆ ಬಂದ. ದಿಡ್ಡಿಬಾಗಿಲ ಹತ್ತಿರವೇ ಉರುವಲು ಇಡುವ ಕೊಟ್ಟಿಗೆ. ದಿನಾಲು ಬಾಗಿಲು ಮುಚ್ಚಿ ಇರುವುದು ಇಂದು ತೆರೆದಿತ್ತು. ಹತ್ತಿರ ಹೋಗಿ ಹೀಗೆ ಹಣಿಯಿಕ್ಕಿ ನೋಡಿದ.

“ನಾನು, ಮೀರಾ!” ಮೆಲುದನಿ ಕೇಳಬಂತು.

“ಕತ್ತಲಲ್ಲಿ ಇಲ್ಲಿ ಯಾಕೆ?”

“ನಿಮಗಾಗಿ!”

ಇವನು ಒಳಗೆ ಹೋದ. ಹತ್ತಿರ ಬಂದಳು; ಅಪ್ಪಿಕೊಂಡು ಬಿಟ್ಟ. ಅದರಲ್ಲಿ ಕಾವಿತ್ತು, ಆವೇಶವಿತ್ತು, ತನ್ಮಯತೆಯಿತ್ತು, ಸಂಭ್ರಮವಿತ್ತು!

ಮನೆಯ ಬಾಗಿಲು ಕಿರ್ರೆಂದಿತು. ಅವಳ ತಮ್ಮ ಹೊರಗೆ ಬಂದ. ಮೀರಾ ಕೊಟ್ಟಿಗೆಯಿಂದ ಹೊರಗೆ ಬಂದಳು.

“ಏನು ಮಾಡುತ್ತೀಯೆ?” ತಮ್ಮ ಕೇಳಿದ.

“ಕೊಟ್ಟಿಗೆಗೆ ಬೀಗಹಾಕುತ್ತೇನೆ!”

ಅವನೂ ಅಲ್ಲಿಗೆ ಬಂದೇಬಿಟ್ಟ; ಮೀರಾ ಬಾಗಿಲನ್ನು ಎಳೆದುಕೊಂಡಳು.

“ನಾನು ಬೀಗಹಾಕುತ್ತೇನೆ, ತಾ!” ಎಂದ ತಮ್ಮ.

“ಬೇಡ ಬೇಡ, ನಾನೇ ಹಾಕುತ್ತೇನೆ, ನೀನು ಹೋಗು!” ಎಂದಳು ಮೀರಾ.

ತಮ್ಮ ಕೇಳಲಿಲ್ಲ. ಅವಳ ಕೈಯಲ್ಲಿಯ ಬೀಗವನ್ನು ಕಸಿದುಕೊಂಡು ಹಾಕಿಯೇ ಬಿಟ್ಟ. ಬೀಗದ ಕೈ ಕೊಡೆಂದು ಮೀರಾ ಕೇಳಿದಳು; ಅವನು ಕೊಡಲಿಲ್ಲ. ಅರೆಮುಷ್ಟೇ ಅದು. ಇಬ್ಬರೂ ಮನೆಯೊಳಕ್ಕೆ ಬಂದರು. ಕೈಗಳ ಸರವನ್ನು ಗೂಟಕ್ಕೆ ತೂಗುಹಾಕಿ ತಮ್ಮ ಹೋಗಿ ಮಲಗಿಕೊಂಡ. ಇದೊಂದು ಮಹದುಪಕಾರ ಎಂದೆನಿಸಿತು ಮೀರಾಗೆ. ತುಸಹೊತ್ತು ಸುಮ್ಮನೆ ಹಾಸಿಗೆಯ ಮೇಲೆ ಮಲಗಿದಹಾಗೆ ಮಾಡಿದಳು; ಆ ಮೇಲೆ ಮೆಲ್ಲಗೆ ಹೊರಗೆ ಬಂದು ಕೊಟ್ಟಿಗೆಯ ಬಾಗಿಲನ್ನು ತೆರೆದಳು. ಎ. ಪಿ. ಹೊರಗೆ ಬಂದ.

“ಒಳ್ಳೇ ಗಂಡಾಂತರಕ್ಕೇ ಬಂದಿತ್ತು, ದೇವರೇ ಮರ್ಯಾದೆ ಉಳಿಸಿದ. ಒಳಗೆ ಯಮಬಾಧೆ. ನೂರಾರು ಗುಂಗಾಡು; ಸಾವಿರಾರು ಜಿಕ್ಕಾಡು; ಹತ್ತಿಪ್ಪತ್ತು ಇಲಿಗಳ ತಂಡ! ನನ್ನ ಮೈ ನನ್ನ ಸ್ವಾಧೀನದಲ್ಲಿರಲಿಲ್ಲ.” ಎ. ಪಿ. ಎಂದ.

“ಪಾಪ, ನಿಮಗೆ ಬಲು ಕಷ್ಟಕೊಟ್ಟೆ!” ಮೀರಾ ನುಡಿದಳು.

ಈ ಮಾತು ನಡೆದಾಗ ಗಂಗಾಬಾಯಿ ‘ಗಂಡ ಹೊರಗೆ ಹೋದವರು ಬರಲಿಲ್ಲ’ ಎಂದು ಕಿಟಕಿಯಲ್ಲಿ ಇಣಿಕಿ ನೋಡಿದಳು. ಇಬ್ಬರೂ ಜೊತೆಗೂಡಿ ನಿಂತಿರುವುದು ಕಣ್ಣಿಗೆ ಬಿತ್ತು. ಮೈಯನವಿರು ನೆಟ್ಟಗಾದುವು. ಅಲ್ಲಿ ನಿಲ್ಲುವುದಾಗಲಿಲ್ಲ. ಒಳಗೆ ಬಂದು ಹಾಸಿಗೆಯ ಮೇಲೆ ಬಿದ್ದುಬಿಟ್ಟಳು.

ಹೆಚ್ಚು ಹೊತ್ತು ನಿಲ್ಲದೆ ಮೀರಾ—ಎ. ಪಿ. ಇಬ್ಬರೂ ತಮ್ಮ ತಮ್ಮ ಮನೆ ಸೇರಿದರು.

ಎ. ಪಿ. ತಿಳಿದುಕೊಂಡ— ಹೆಂಡತಿಗೆ ನಿದ್ದೆ ಹತ್ತಿದೆಯೆಂದು. ತಾನೂ ಸದ್ದುಮಾಡದೆ ಹಾಸಿಗೆಯ ಮೇಲೆ ಬಂದು ಒರಗಿದ. ಇಬ್ಬರಿಗೂ ನಿದ್ದೆ ಇಲ್ಲ. ಕಾಮನ ರಾಜ್ಯದೊಳಗಿನ ಈ ಕಣ್ಣುಮುಚ್ಚಾಲೆಯನ್ನೂ ಈ ಕೊಂಕು ಡೊಂಕುಗಳನ್ನೂ ಅರಿಯಳು ಗಂಗಾಬಾಯಿ. ಪಾಪ, ಗಂಗಾಬಾಯಿಯೆಂದರೆ ಅದೊಂದು ಮುಗ್ಧ ಜೀವ! ನಿಷ್ಪಾಪ ಹೃದಯ! ಅವಳ ಜೀವನತಟಾಕದ ತಿಳಿನೀರು ಕಲಕಿದುದು ಅಂದೆಯೆ! ಆ ಕಲಮಲದಲ್ಲಿ ಸಾವಿರಾರು ಅಪ್ರಬುದ್ಧ ವಿಚಾರಗಳೂ, ಅಸಂಬದ್ಧ ಕಲ್ಪನಾತ್ಮಕ ದೃಶ್ಯಗಳೂ ರಾಶಿ-ರಾಶಿಯಾಗಿ ಆಕೆಗೆ ಕಾಣತೊಡಗಿದುವು. ಕಂಬನಿಗಳು ಒಂದೆಸವನೆ ತೊಟಕುತೊಟಕಾಗಿ ಹೋಗುತ್ತಾ ಇದ್ದುವು. ಆ ಸ್ಥಿತಿಯಲ್ಲಿಯೆ ನಿದ್ದೆ ಬಂತು ಅವಳಿಗೆ! ಅದರಲ್ಲಿ ಭಯಾನಕ ಕನಸುಗಳು—ವಿಕ-ವಿಕಾರದ ರೂಪಗಳು! ಅದೊಂದು ಕಾಳರಾತ್ರಿ!

ಎ. ಪಿ. ಯದು ಹಾಗಲ್ಲ. ಬರುವುವೆಲ್ಲ ಸವಿಗನಸುಗಳು. ಎಲ್ಲವೂ ರಮ್ಯ! ಎಲ್ಲವೂ ಹೃದ್ಯ!

ಆ ರಾತ್ರಿಯ ಕಗ್ಗತ್ತಲೆಯಲ್ಲಿಯೇ ಆ ಮನೆಯಲ್ಲಿ ‘ಅವಿ (ಏಧಿ)’ ಸೇರಿಕೊಂಡಿತು!

(೩)

ಒಂದೆರಡು ತಿಂಗಳು ಕಳೆದುವು. ಈ ಅವಧಿಯಲ್ಲಿ ಒಂದು ದಿನವೂ ಎ. ಪಿ. ಹೆಂಡತಿಯೊಡನೆ ಸರಸವಾಡಿದುದಿಲ್ಲ, ಸ್ನೇಹ ತೋರಿದುದಿಲ್ಲ. ಮಾತುಮಾತಿಗೂ ತಿಕ್ಕಾಟ, ಬಿರುನುಡಿ. ಗಂಗಾಬಾಯಿ ಮಕ್ಕಳನ್ನು ಸುಮ್ಮಸುಮ್ಮಗೆ ಹೊಡೆಯುವಳು. ಒಮ್ಮೊಮ್ಮೆ ಅಳುತ್ತಾ ಕುಳಿತುಬಿಡುವಳು. ತನ್ನನ್ನು ತವರುಮನೆಗೆ ಕಳುಹಬೇಕೆಂಬ ಹಟ ದಿನವೂ ನಡೆದೇ ನಡೆಯುತ್ತಿತ್ತು.

ಮೀರಾ ಈಗ ಗಂಗಾಬಾಯಿಯಲ್ಲಿಗೆ ಬರುತ್ತಿರಲಿಲ್ಲ. ಒಂದು ದಿನ ತಾಯಿಯ ಕಣ್ಣುತಪ್ಪಿಸಿ ಮಕ್ಕಳು ಅವಳ ಹತ್ತಿರ ಬಂದಿದ್ದುವು. ಅದಕ್ಕಾಗಿ ಬಡಿತ ಬಿದ್ದಿತ್ತು ಅವರಿಗೆ! ಮೀರಾಗೆ ಕಾರಣ ತಿಳಿಯದೆ ಇರಲಿಲ್ಲ. ಆದರೂ ಎ. ಪಿ. ಯೊಡನೆ ಅವಳು ನಡೆಯಿಸಿರುವ ರಹಸ್ಯ ದಿನದಿನಕ್ಕೆ ಬೆಳೆಯುತ್ತಲೆ ಇತ್ತು.

ವಿ. ಪಿ. ಗೆ ಒಂದು ದೊಡ್ಡ ಯೋಚನೆ. ಒಂದು ದಿನ ವಿಶಾರಳನ್ನೇ ಕೇಳಿದ. ವಿಶಾರಾ ನುಡಿದಳು. “ನನಗೂ ಇದೇ ಯೋಚನೆ. ಹೀಗೇ ಎಷ್ಟು ದಿನ ನಾವು ಅಳುಕಿನಲ್ಲಿ ಕಳೆಯಬೇಕು? ಇದಕ್ಕೊಂದು ಉಪಾಯ ಕಾಣಲೇ ಬೇಕು!”

“ನೀನೇ ಆ ಉಪಾಯ ತೆಗೆ. ನನಗಂತೂ ಏನೂ ತೋಚದು. ನೀನು ಏನು ಮಾಡೆಂದರೂ ನಾನು ಸಿದ್ಧ!”

“ಕೆಲವು ದಿನ ನಿಮ್ಮಾಕೆಯನ್ನು ತವರುಮನೆಗೆ ಕಳಿಸಿಬಿಡಬೇಕು!”

“ಛೆ, ಛೆ, ಅದು ಸರಿಹೋಗದು! ಈ ವಿಷಯ ಯಾರಿಗೂ ತಿಳಿಯುವುದು ಬೇಡ. ಏನಾಗುವುದೆಲ್ಲ ಇಲ್ಲಿಯೆ ಆಗಲಿ!”

“ಇಲ್ಲಿ ಆಗುವುದೇನು? ದಿನಾಲು ರಸಕಸಿ, ತಿಕ್ಕಾಟ! ನಮಗೂ ಸುಖವಿಲ್ಲ, ಆಕೆಗೂ ಸುಖವಿಲ್ಲ!”

“ಹಾಗಾದರೆ ಮಾಡಬೇಕೇನು.... ನೀನೇ ಹೇಳು!”

“ಇಷ್ಟೇ: ಆಕೆ ನಮಗೆ ಅನುಕೂಲೆಯಾಗಿರಬೇಕು!”

“ಹೌದು, ನಾನೂ ಅದನ್ನೇ ಬಯಸುತ್ತೇನೆ. ಆದರೆ ಅದನ್ನು ಸಾಧಿಸುವುದು ಹೇಗೇ.... ಎಂತ!”

“ಇದಕ್ಕೊಂದು ಮದ್ದಿದೆ. ನನ್ನೊಬ್ಬ ಗೆಳತಿ ಇಲ್ಲಿದ್ದಾಳೆ. ಅವಳ ಗುರು ಇದರಲ್ಲಿ ಬಲ್ಲಿದ. ಅದನ್ನು ಮಾಡುವುದಾದರೆ ಆಕೆಯನ್ನು ಕೇಳುತ್ತೇನೆ.”

“ಅದರಿಂದ ಇವಳ ಜೀವಕ್ಕೇನೂ ಅಪಾಯವಿಲ್ಲವಲ್ಲ?”

“ಛೆ, ಛೆ! ಆ ಮದ್ದು ಇವಳ ಮನಸ್ಸನ್ನಷ್ಟೇ ತಿರುಗಿಸುವುದು. ದೇಹಕ್ಕೆ ಪೀಡೆ ಇಲ್ಲ; ಪ್ರಾಣಕ್ಕೆ ಗಂಡಾಂತರವಿಲ್ಲ!”

“ಅಷ್ಟು ನಿನಗೆ ವಿಶ್ವಾಸವಿದ್ದರೆ ಕೇಳಿ ನೋಡು. ಸರಿಕಂಡರೆ ಮಾಡೋಣವಂತೆ. ಆದರೆ ಇದನ್ನು ಬಲು ಗೌಪ್ಯವಾಗಿ ಮಾಡಬೇಕು. ನನಗೇಕೋ ಭಯವೆನಿಸುತ್ತಾ ಇದೆ. ನಿನ್ನದೇ ಧೈರ್ಯ ನೋಡು, ಅವಳ ಪ್ರಾಣಕ್ಕೆ ಕಷ್ಟವಾಗಬಾರದು!”

“ಅದು ನನ್ನನ್ನು ಕೂಡಿತು!”

ಎಂಟು ದಿನದಲ್ಲಿ ಮದ್ದು ಸಿದ್ಧವಾಗಿ, ಅದು ಗಂಗಾಬಾಯಿಯ ಹೊಟ್ಟೆಯಲ್ಲಿ ಹೋಯಿತು. ಮೇಲೆ ಒಂದು ಯಂತ್ರವೂ ಬಂದು ಮನೆಯ ಒಂದು ಜಂತೆಯ ಸಂದಿಯಲ್ಲಿ ಕುಳಿತಿತು!

ಈಗ ಗಂಗಾಬಾಯಿ ಕುಳಿತಲ್ಲಿ ಕುಳಿತುಬಿಡುತ್ತಾಳೆ. ಮಲಗಿಬಿಟ್ಟರೆ ಒಂದೊಂದು ದಿನ ಏಳುವುದೇ ಇಲ್ಲ. ಮಕ್ಕಳ ಮೇಲೆ ಮಮತೆ ಇಲ್ಲ. ಒಮ್ಮೊಮ್ಮೆ ‘ಇವು ಯಾರ ಮಕ್ಕಳು?’ ಎಂದು ಕೇಳುತ್ತಾಳೆ. ಬಟ್ಟೆ ಒಗೆಯಹತ್ತಿದರೆ ಸಂಜೆಯ ವರೆಗೆ ಅದನ್ನೇ ಮಾಡುತ್ತಾಳೆ. ಏನನಾದರೂ ಕೇಳಿದರೆ ‘ನನಗೆ ತಿಳಿಯದು’ ಎಂದು ಹೇಳುತ್ತಾಳೆ. ಮಲಗಿದಾಗ ಒಮ್ಮೊಮ್ಮೆ ದಿಗ್ಗನೆ ಎದ್ದು, ಕೊಟ್ಟಿಗೆಯ ಎದುರಿಗೆ ಹೋಗಿ ನಿಂತುಬಿಡುತ್ತಾಳೆ. ಇದರಂತೆಯೆ ಎಲ್ಲ. ಒಮ್ಮೆ ಸೀರೆಹರಿದು ಒಲೆಯೊತ್ತಿಸಿದಳು. ಒಮ್ಮೆ ಮಾಡಿದ ಅಡಿಗೆಯನ್ನೆಲ್ಲ ತಿಪ್ಪೆಗೆ ಚೆಲ್ಲಿದಳು. ಒಮ್ಮೆ ವಿಶಾರಾನ ಕೂದಲನ್ನು ಹಿಡಿದೇ ಜಗ್ಗಿದಳು!

“ಮದ್ದು ಹೆಚ್ಚಾಗಿರಬಹುದೇ, ಅಥವಾ ಯಂತ್ರವೇ ಬೇರೆಯಾಗಿದ್ದೀತೆ? ಇವಳ ಬೇನೆ ದಿನದಿನಕ್ಕೆ ಹುಚ್ಚಿನ ಸ್ಥಿತಿಗೆ ಹೋಗುತ್ತಾ ಇದೆ. ಹೀಗೆ ಆಗಬೇಕೆಂದು ನಾನು ಎಂದುಕೊಂಡಿರಲಿಲ್ಲ! ಇದಕ್ಕೇನಾದರೂ ಪ್ರತ್ಯುಪಾಯ ಇದ್ದರೆ ನೋಡು. ನಿನ್ನ ಆ ಗೆಳತಿಯನ್ನು ಕೇಳು!” ವಿ. ಪಿ. ಹೇಳಿದ.

“ಇದೇನಾಯಿತಲ್ಲಾ!— ಎಂದು ನನಗೂ ವ್ಯಸನವಾಗಿದೆ. ‘ಇಳಿವು’ ಇದ್ದರೆ ಅವಶ್ಯ ಮಾಡಿನೋಣವಂತೆ; ಕೇಳುತ್ತೇನೆ!”

ಹೀಗೆ ಹೇಳಿದ ವಿಶಾರಾ ಎರಡು ದಿನದ ಮೇಲೆ ವಿ.ಪಿ. ಗೆ ತಿಳಿಸಿದಳು: “ಇಳಿವು ಇಲ್ಲ, ಆದರೆ ಇದೇ ಸ್ಥಿತಿಯು ಉಳಿಯಲಾರದು, ಕಡಿಮೆ ಆದೀತು.” ವಿಶಾರಾ ಈ ವಿಷಯ ಕೇಳಿರಲೇ ಇಲ್ಲ. ಹೇಳಿದುದೆಲ್ಲವೂ ಹುಸಿನುಡಿ!

ಒಂದು ದಿನ, ಅಕಸ್ಮಾತ್ತಾಗಿ ಪರಮೇಶ್ವರಭಟ್ಟರು ಬಸ್ಸಿನಿಂದ ಶಿರಸಿಗೆ ಬಂದುಬಿಟ್ಟರು. ಇತ್ತೀಚೆಗೆ ವಿ. ಪಿ. ಯಿಂದ ಅವರಿಗೆ ಪತ್ರವೇ ಹೋಗಿರಲಿಲ್ಲ. ಮಗನನ್ನೊಮ್ಮೆ ಕಾಣಬೇಕೆಂಬ ಆಶೆ, ಆತುರ. ಸೊಸೆಯ ದೇಹಸ್ಥಿತಿ ಚೆನ್ನಾಗಿಲ್ಲದಿರುವುದನ್ನು ಕಂಡು ಅವರಿಗೆ ತುಂಬ ವ್ಯಥೆಯಾಯಿತು. ವಿ. ಪಿ. ಹೇಳಿದ: “ಹೆಂಡತಿ ಒಮ್ಮೆ, ಮಾರಿಕಾಂಬೆಯ ಗುಡಿಯಿಂದ ರಾತ್ರಿ ಬರುವಾಗ ಅಂಜಿದಳು. ಅಂದಿನಿಂದ ಹೀಗಾಗಿದೆ,” ಎಂದು.

ಮರುದಿನ ಪರಮೇಶ್ವರಭಟ್ಟರು ಸೊಸೆಯನ್ನೂ ಎರಡು ಮೊಮ್ಮಕ್ಕಳನ್ನೂ ಕರೆದುಕೊಂಡು ಹೊರಟೇಬಿಟ್ಟರು.

ಮುಂದೆ ಎಂಟು ದಿನಗಳಲ್ಲಿಯೆ ವಿರೂಪಾಕ್ಷ ಮತ್ತು ವಿಶಾರಾ ಪುಣೆಗೆ ಪ್ರಯಾಣಬೆಳೆಯಿಸಿದರು. ಪುಣೆಗೆ ಬಂದಮೇಲೆ ವಿ. ಪಿ. ತಂದೆಗೆ ಪತ್ರಬರೆದ:— ಒಂದು ಮಹತ್ತ್ವದ ರಿಕಾರ್ಡು ಕೋರ್ಟಿಗೆ ಬೇಕಾಗಿತ್ತು. ಅದಕ್ಕಾಗಿ ತನ್ನನ್ನು ಕೋರ್ಟಿನಿಂದ ಪುಣೆಗೆ ಕಳಿಸಲಾಗಿದೆ. ಸುಮಾರು ಒಂದು ತಿಂಗಳವರೆಗಾದರೂ ತನಗೆ ಅಲ್ಲಿ ಇರಬೇಕಾಗಬಹುದು— ಎಂದು. ನಿಜವಾಗಿ ನೋಡಿದರೆ ಅವನು ರಜೆಯಮೇಲೆ ಬಂದಿದ್ದ. ಕಾರಣ ಹೆಂಡತಿಯ ಜಡ್ಡು! ಪರಮೇಶ್ವರಭಟ್ಟರು ನಂಬಿದರು. ದಿನದಿನಕ್ಕೆ ಗಂಗಾಬಾಯಿಯ ದೇಹಸ್ಥಿತಿ, ಮನಃಸ್ಥಿತಿ ಕೆಡುತ್ತ ಹೋಯಿತು. ಪರಮೇಶ್ವರಭಟ್ಟರು ತಮಗೆ ತಿಳಿದ ಎಲ್ಲ ಉಪಾಯಗಳನ್ನೂ ಮಾಡಿ ನೋಡಿದರು; ಯಾವುದೂ ಪ್ರಯೋಜನಕ್ಕೆ ಬರಲಿಲ್ಲ.

(೪)

ಪುಣೆಗೆ ಹೋದಮೇಲೆ, ವಿ.ಪಿ. ಮತ್ತು ವಿಶಾರಾ ‘ಬಾದಶಾಹಿ ಬೋರ್ಡಿಂಗ್’ನಲ್ಲಿ ಇಳಿದರು. ದಿನಾಲು ಒಂದು ಸಿನೆಮಾ, ರೆಸ್ಟೋರಂಟು; ಸಾಯಂಕಾಲ ಟ್ಯಾಕ್ಸಿಯಲ್ಲಿ ಡ್ರೈವು; ಹೀಗೆ ಕಾಲವು ಖುಶಾಲಿಯಲ್ಲಿ ಹೋಗತೊಡಗಿತು. ವಿರೂಪಾಕ್ಷನಿಗೆ ಪುಣೆ ಹೊಸದು. ಮರಾಟಿ ಅವನಿಗೆ ಚೆನ್ನಾಗಿ ಬಾರದು. ಇಂಗ್ಲೀಷೂ ಅಷ್ಟಕ್ಕಷ್ಟೇ. ವಿಶಾರಾ ಮಾತ್ರ ಪುಣೆಯಲ್ಲಿ

ಓಡಾಡಿದ್ದಾಳೆ. ಮರಾಟಿ ಬಲ್ಲವಳು. ಪಟ್ಟಣಿಗರ ರೀತಿ-ನಡತೆ ಆವಳಿಗೆ ಹೊಸವಲ್ಲ. ವಿರೂಪಾಕ್ಷ ಸಾಮಾನ್ಯನಾದೊಬ್ಬ ಗುಮಾಸ್ತ. ಆವನ ಪೋಷಾಕು, ರೀತಿ, ಮಾತು ಅಲ್ಲಿಗೆ ಕಡಿಮೆಯಾಗಿ ತೋರತೊಡಗಿದುವು. ಮೀರಾಗೆ ಕೆಲವು ಸಾರೆ ಇವನ ಪೆದ್ದತನಕ್ಕೆ ನಗೆ ಬರುವುದು, ಒಮ್ಮೊಮ್ಮೆ ಹೇಸಿಕೆಯೆನಿಸುವುದು, ಒಮ್ಮೊಮ್ಮೆ ಸಿಟ್ಟೂ ಬರುವುದು. ಆದರೂ ಅದನ್ನೆಲ್ಲ ಮರೆತು ಚಕ್ಕಂದದಲ್ಲಿ ಕಾಲಕಳೆಯುವಳು. ಹೀಗೆ ಎರಡು ವಾರಗಳು ಸಂದುವು. ಒಂದು ದಿನ ಅವರಿಗೆ ಮಗ್ಗುಲಿನ ರೂಮಿನಲ್ಲಿರುವ ಒಬ್ಬ ಗೃಹಸ್ಥನ ಪರಿಚಯವಾಯಿತು. ಅದಕ್ಕೂ ಒಂದು ಕಾರಣವೊದಗಿತು. ವಿ. ಪಿ. ಸ್ನಾನದ ಕೋಣೆಯಲ್ಲಿ ತನ್ನ ಸೋಪಿನ ಪೆಟ್ಟಿಗೆಯನ್ನು ಬಿಟ್ಟುಬಂದಿದ್ದ; ಆ ಗೃಹಸ್ಥ ಅದನ್ನು ತಂದು ವಿ. ಪಿ. ಗೆ ಕೊಟ್ಟ. ಅದನ್ನು ವಿ. ಪಿ. ಸುಮ್ಮಗೆ ಸ್ವೀಕರಿಸಿ ಟೇಬಲ್ ಮೇಲೆ ಇಟ್ಟ. ಇದು ಮೀರಾಗೆ ಸಹನವಾಗಲಿಲ್ಲ. ಆಕೆ ಆ ಗೃಹಸ್ಥನಿಗೆ ಕೃತಜ್ಞತೆ ಸಲ್ಲಿಸಿ, ಅವನಿಗೆ ಕೂಡುವುದಕ್ಕೆ ಹೇಳಿ, ಸಮಾಚಾರ ಕೇಳಿದಳು. ಇದೇ ಕಾರಣವಾಗಿ ಮುಂದೆ ಹೆಚ್ಚೆಚ್ಚಾಗಿ ಆತನು ಬರುವುದೂ ಹೋಗುವುದೂ ನಡೆಯಿತು. ಎಲ್ಲರೂ ಕೂಡಿ ಚಹಕುಡಿಯುವರು, ಹರಟೆಹೊಡೆಯುವರು, ನಗೆಯಾಡುವರು. ಒಂದು ದಿನ ಮೂವರೂ ಸೇರಿ ಸಿನೆಮಾಕ್ಕೆ ಹೋದರು ಥಿಯೇಟರಿನಲ್ಲಿ ಮೀರಾ ಇಬ್ಬರ ನಡುವೆ ಕುಳಿತಳು. ವಿ. ಪಿ. ಗೆ ಅದು ಎಷ್ಟೂ ಸೇರಲಿಲ್ಲ. ಸಿನೆಮಾ ನಡೆದಾಗ ಹಲವು ಸಲ ವಿರೂಪಾಕ್ಷ ಮೀರೆಯನ್ನು ಕಾಯ್ದ ಕಣ್ಣಿನಿಂದ ನೋಡಿದ. ಮೀರಾ ಅದನ್ನು ಲಕ್ಷ್ಯಿಸಲಿಲ್ಲ. ಚಿತ್ರದಲ್ಲಿ ವಿ. ಪಿ. ಯ ಮನಸ್ಸೇ ಇರಲಿಲ್ಲ.

ಮೀರಾ ಮತ್ತು ಆ ಗೃಹಸ್ಥ ನಡು-ನಡುವೆ ಮಾತನಾಡುತ್ತಿದ್ದರು; ನಗುತ್ತಿದ್ದರು.

ಹೋಟೆಲಿಗೆ ಬಂದಮೇಲೆ ಮೀರಾ 'ಊಟ ಮಾಡೋಣ' ಎಂದು ವಿ. ಪಿ. ಯನ್ನು ಕರೆದಳು. 'ನನಗೆ ಹಸಿವೆ ಇಲ್ಲ' ಎಂದು ಹೇಳಿ ವಿ. ಪಿ. ಕಾಟಿನ ಮೇಲೆ ಬಿದ್ದುಕೊಂಡ. ಮೀರಾಗೆ ತುಂಬ ಸಿಟ್ಟು ಬಂದಿತು. ತನ್ನ ಮೇಲೆ ವಿರೂಪಾಕ್ಷನಿಗೆ ಸಂಶಯ, ತಾನು ಥಿಯೇಟರಿನಲ್ಲಿ ಆ ಗೃಹಸ್ಥನ ಜೊತೆಗೆ ಕುಳಿತದ್ದು ಇವನಿಗೆ ಸೇರಿಕೆಯಿಲ್ಲ—ಎಂಬ ಮಾತು ಅವಳ ಲಕ್ಷ್ಯಕ್ಕೆ ಬಾರದೆ ಇರಲಿಲ್ಲ. ಬಾಗಿಲನ್ನು ಮುಚ್ಚಿದಳು, ಬಂದು ಕುರ್ಚಿಯ ಮೇಲೆ ಕುಳಿತಳು. ವಿರೂಪಾಕ್ಷ ಬೀಡಿಸೇದುತ್ತ ಅಂದಿನ ಪತ್ರಿಕೆಯನ್ನು ಮೋರೆಯ ಮುಂದೆ ಹಿಡಿದಿದ್ದ. ಓದುವಂತೆ ಕಾಣಲಿಲ್ಲ. ಓದುತ್ತಿದ್ದರೂ ಅದರಲ್ಲಿ ಅವನ ಮನಸ್ಸಿರಲಿಲ್ಲ.

" ಏನಿದು ಹೀಗೆ ?.... ಊಟವೇಕೆ ಬೇಡ ? "

" ನನಗೆ ಹಸಿವು ಇಲ್ಲ ! "

" ಇದೆಲ್ಲ ಸೋಗು ! "

" ಮತ್ತೆ ನಿನ್ನದೂ ಅಷ್ಟೇ ! "

" ಎಂದರೆ ? "

" ನಿನ್ನನ್ನೇ ಕೇಳಿಕೊ ! "

" ನನ್ನನ್ನೇನು ಕೇಳಿಕೊಳ್ಳುವುದು ? ಈ ಸಿಟ್ಟು ಯಾಕೆ ಎಂಬುದು ನನಗೆ ಗೊತ್ತಿದೆ ! "

" ಸರಿ ಹಾಗಾದರೆ ! ಮತ್ತೆ ಕೇಳುವುದೇಕೆ ? "

" ಹೀಗೆ ಸಿಟ್ಟಾಗುವುದು ತಪ್ಪು—ಎಂದು ನಾನೆನ್ನುವುದು! "

" ಹಾಗೆ ನೀನೆನ್ನಬಹುದು ! "

" ಅಲ್ಲ, ಅವರು ಜೊತೆಗೆ ಕುಳಿತರೆ ಏನಾಯಿತು ? ಇವೆಲ್ಲ ಪಟ್ಟಣಿಗರ ರೀತಿ. ಇಲ್ಲಿಗೆ ಬಂದಮೇಲೆ ಎಲ್ಲರೂ ಹೇಗೋ ಹಾಗೆಯೆ ನಾವಾದರೂ ಇರಬೇಕು. ನಿಮಗೆ ಇಂತಹದನ್ನೆಲ್ಲ ಮಾಡಿಯಂತೂ ಮೊದಲೇ ಗೊತ್ತಿಲ್ಲ; ನೋಡಿಯೂ ಗೊತ್ತಿಲ್ಲ ! ಹಳ್ಳಿಯಲ್ಲಿ ಹುಟ್ಟಿ ಬೆಳೆದವರ ಹಣೆಬರೆಹ ಇಷ್ಟೇ. ಇದರಲ್ಲಿ ನನಗೇನೂ ವ್ಯತ್ಯಾಸ ತೋರುವುದಿಲ್ಲ. ನಾನು ಹತ್ತಿರ ಕುಳಿತದ್ದಕ್ಕೆ ನೀವು ಸಿಟ್ಟಿಗೆದ್ದಿರೆಂದು ಆ ಗೃಹಸ್ಥನಿಗೆ ತಿಳಿದರೆ ನಿಮ್ಮನ್ನು ಗೇಲಿ ಮಾಡಿ ಬಿಡಬಹುದು. ಸಾಕು ಈ ಸಿಟ್ಟು ! ಊಟಮಾಡೋಣ, ನನಗೆ ಹಸಿವೆಯಾಗಿದೆ ! "

" ನಿನಗೆ ಹಸಿವೆಯಾಗಿದ್ದರೆ ನೀನು ಮಾಡಿಕೊ ; ನಾನು ಮಾಡುವುದಿಲ್ಲ ಊಟ !.... ಸರಿ ! ನಿನ್ನ ನೆಲೆ ನನಗೆ ಮೊದಲು ಗೊತ್ತಾಗಲಿಲ್ಲ ! "

ಮೀರಾಗೆ ತುಂಬ ಸಿಟ್ಟು ಬಂದಿತು—" ಸರಿ, ಈಗಲಾದರೂ ಗೊತ್ತಾಯಿತಲ್ಲ ! "

" ಓಹೊ, ಪೂರಾ ಗೊತ್ತಾಯಿತು ! "

" ನನ್ನ ನೆಲೆ ನಿಮಗೆ ಗೊತ್ತಾಗಿದ್ದರೆ, ನಿಮ್ಮ ಬೆಲೆಯೂ ನನಗೆ ಗೊತ್ತಾಯಿತು ! "

ಮೀರಾ ಸಿಡಿಮಿನಿಂದ ಎದ್ದು, ದೀಪತೆಗೆದು ತನ್ನ ಕಾಟಿನ ಮೇಲೆ ಬಿದ್ದುಕೊಂಡಳು. ರಾತ್ರಿ ಇಬ್ಬರಿಗೂ ನಿದ್ದೆಯಿಲ್ಲ. ಪರಸ್ಪರರ ವಿಷಯದಲ್ಲಿ ಇಬ್ಬರಿಗೂ ಸಿಟ್ಟು, ತಿರಸ್ಕಾರ, ಅಸಹನೆ, ಅನುತಾಪ. ಮರುದಿನವೆಲ್ಲ ಮಾತಿಲ್ಲದೆ ಹೋಯಿತು. ಸಾಯಂಕಾಲ ಆ ಗೃಹಸ್ಥ ಬಂದ. ವಿ. ಪಿ. ಪೋಸ್ಟಿಗೆ ಹೋಗುವ ನೆಪದಿಂದ ೪ ಗಂಟೆಗೆ ಹೊರಗೆ ಹೋದವ, ೬ ಗಂಟೆಯಾದರೂ ತಿರುಗಿ ಬಂದಿರಲಿಲ್ಲ. ಮೀರಾ ಚಿಂತೆಯಲ್ಲಿ ಕುಳಿತಿದ್ದಳು. ಆ ಗೃಹಸ್ಥ ಒಳಗೆ ಬಂದಮೇಲೆ, ಮೋರೆಯ ಮೇಲೆ ಹುಸಿನಗು ತಂದು ಕೇಳಿದಳು :

"ಮತ್ತೇನು ? ತಿರುಗಾಡಿ ಬಂದಿರಾ ಅಥವಾ ಈಗ ಹೋಗುತ್ತಾ ಇದ್ದೀರಾ ? "

" ಕೆಲಸ ಮುಗಿಸಿಕೊಂಡು ಇದೇ ಈಗ ತಾನೆ ಬಂದೆ. ಏನು ನಮ್ಮ ವಿ. ಪಿ. ಅವರೆಲ್ಲಿ ? "

" ಪೋಸ್ಟಿನಲ್ಲಿ ! " ಮೀರಾ ನಕ್ಕಳು. ಆ ಗೃಹಸ್ಥನೂ ನಕ್ಕ.

" ಅಲ್ಲ, ಎಲ್ಲಿ ಹೋಗಿದ್ದಾರೆ ? "

"ನಿಜವಾಗಿ ಪೋಸ್ಟಿಗೇ ಹೋಗಿದ್ದಾರೆ. ನಾಲ್ಕು ಗಂಟೆಗೆ ಹೋದವರು ಇನ್ನೂ ಬಂದಿಲ್ಲ!"

"ಬಂದಾರು, ಎಷ್ಟು ಹೊತ್ತು ಹೋಗುತ್ತಾರೆ? ಇನ್ನೊಂದು ವಿಶೇಷ ಇಂದು!"

"ಮತ್ತೇನು?"

"ಒಂದು ಕಡೆಗೆ ಇಂಗ್ಲಿಷ್ ಡಾನ್ಸಿನ ಕಾರ್ಯಕ್ರಮ ಇದೆ. ನೀವು ಬರುವ ಹಾಗಿದ್ದರೆ ಹೊಗೋಣ. ನರ್ತಕಿಯರು ಪರದೇಶದಿಂದ ಬಂದಿದ್ದಾರೆ. ಬಹಳ ನೋಡುವ ಹಾಗಿದೆ. ನೀವು ನಿಮ್ಮ ಡ್ರೆಸ್ಸಿನಲ್ಲಿ ಬರಬಹುದು; ಆದರೆ ನಾವು ಸೂಟಿನಲ್ಲಿಯೇ ಹೋಗಬೇಕಾಗುವುದು. ವಿ. ಪಿ. ಯವರಿಗೆ ಸೂಟಿದೆಯೇನು?"

ಅಷ್ಟರಲ್ಲಿ ವಿ. ಪಿ. ಒಳಗೆ ಬಂದ. ಅವನನ್ನು ನೋಡಿ ಆ ಗೃಹಸ್ಥ—"Good evening ಮಿಸ್ಟರ್ ವಿ. ಪಿ.! ಈವೊತ್ತು ರಾತ್ರಿ ಒಂದು ಕಡೆ ಇಂಗ್ಲೀಷ್ ಡಾನ್ಸಿದೆ. ನಿಮಗೆ ಸೂಟಿದೆಯಲ್ಲಾ?"

"ನಮಗೆ ಸೂಟೂ ಇಲ್ಲ, ನಾವು ಅಂಥದಕ್ಕೆ ಸೂಟೂ ಆಗುವುದಿಲ್ಲ! ಅಂಥಲ್ಲಿ ಹೋಗುವುದಕ್ಕೆ ತಾವೇ ಯೋಗ್ಯ!...." ಎಂದೆನ್ನುವಾಗ, ಒಮ್ಮೆ ವಿಶಾಲಾನ ಕಡೆಗೆ ಬಿರುಗಣ್ಣಿಂದ ನೋಡಿದ. ವಿಶಾಲಾನೂ ಅವನನ್ನು ನೋಡಿದಳು. ಆ ಗೃಹಸ್ಥನ ಹುರುಪು ಅರ್ಧಕ್ಕಿಳಿಯಿತು. ಆದರೂ ನಿರಾಶನಾಗದೆ ಕೇಳಿದ:

"ಮತ್ತೇನು ವಿಶಾಲಾದೇವಿ, ಏನು ಮಾಡೋಣ?"

"ನೀವು ಹೋಗಬಹುದು!"

"ನಾನೊಬ್ಬನೇ ಹೋಗುವುದಕ್ಕೆ ಇಷ್ಟವಿಲ್ಲ. ಕೂಡಿ ಹೋಗಬೇಕೆಂದರೆ ವಿ. ಪಿ. ಯವರಿಗೆ ಸೂಟಿಲ್ಲ. ಮಿಸ್ಟರ್ ವಿ. ಪಿ., ನನ್ನ ಸೂಟು ಬಂದರೆ ಹಾಕಿ ನೋಡಿ!"

"ನಾನೆಂದೂ ಸೂಟು ಹಾಕಿಲ್ಲ. ಇವ್ವಾಗಿ ನನಗೆ ಅಲ್ಲಿಗೆ ಬರುವ ಮನಸ್ಸಿಲ್ಲ! ನೀವಿಬ್ಬರೂ ಹೋಗಬಹುದು. ನಿಮ್ಮಿಬ್ಬರ ನಡುವೆ ನಾನೇಕೆ ಮೂರನೆಯವ!" ವಿ. ಪಿ. ಗೆ ಮಾತಿನಲ್ಲಿ ತೂಕ-ತಾರತಮ್ಯ ಉಳಿಯಲಿಲ್ಲ. ಆದರೆ ಅವನ ಮಾತಿನಿಂದ ವಿಶಾಲಾ ತಪ್ತಳಾದಳು. ಆ ಗೃಹಸ್ಥ ತೆಪ್ಪಗಾದ. ಅವನಿಗೆ ಮುಂದೆಯೇನು ಮಾತನಾಡಬೇಕೆಂಬುದೇ ತೋಚದಾಯಿತು. ವಿಶಾಲಾ ತನ್ನ ಸಿಟ್ಟನ್ನೆಲ್ಲ ಒತ್ತಿ ಹಿಡಿದು, ಮೋರೆಯ ಮೇಲೆ ಕಿರುನಗೆ ತಂದು ನುಡಿದಳು:

"ಅವರ ಮಾತು ಹೀಗೇ! ನೀವು ವಿಪರೀತವನ್ನೇನೂ ಭಾವಿಸಬಾರದು. ನನಗೂ ಒಂದೆರಡು ಅವಶ್ಯ ಪತ್ರಗಳನ್ನು ಬರೆಯಬೇಕಾಗಿದೆ; ಮತ್ತೊಂದಾದರೂ ಆದರೆ ಹೋಗೋಣವಂತೆ!"

ಆ ಗೃಹಸ್ಥ ಸೂಕ್ಷ್ಮ ತಿಳಿದು ಎದ್ದು ಹೋದ. ವಿಶಾಲಾ ಬಾಗಿಲನ್ನು ಮುಚ್ಚಿದಳು. ವಿ. ಪಿ. ಯ ಎದುರು ಬಂದು ನಿಂತಳು:

"ನಿಮಗೇನು ತಲೆ ಕೆಟ್ಟಿದೆಯೋ ಏನು? ಆ ಗೃಹಸ್ಥನ ಎದುರು ಸಿಕ್ಕಾಪಟ್ಟೇ ಮಾತನಾಡುತ್ತೀರಿ. ನಾನೆಂದರೆ ಬಸವಿ ಎಂದು ತಿಳಿದಿದ್ದೀರಾ? ಪ್ರೇಮಕ್ಕಾಗಿ ನಾನು ನಿಮಗೆ ಅನುಕೂಲಳಾದೆ; ನಿಮ್ಮ ಮನಸ್ಸಿನಲ್ಲಿ ಇಷ್ಟೊಂದು ಕೊಳಚೆ ಇರಬಹುದೆಂದು ನಾನು ಎಣಿಸಿರಲಿಲ್ಲ. ನಿಮ್ಮ ಹೃದಯದ ಹೊಲಸು ಈಗ ಹೊರಬಿತ್ತು. ಈಗ ಅಡಿ ಫಲವೇನು? ನನ್ನ ಅದೃಷ್ಟವೇ ಹಾಗಿದೆ!" ಎಂದೆನ್ನುವಾಗ ದುಃಖ ಉಮ್ಮಳಿಸಿ ಬಂದು ಅಶ್ರುಗಳು ಟಪಟಪನೆ ಉದುರಲಾರಂಭಿಸಿದುವು. ಹಾಗೆಯೆ ಹೋಗಿ ಕಾಟಿನ ಮೇಲೆ ಬಿದ್ದುಕೊಂಡಳು. ಯಾರೂ ಮಾತನಾಡಲಿಲ್ಲ. ಮರುದಿನ ಬೆಳಗ್ಗೆ ಎದ್ದ ಮೇಲೆ, ತನ್ನ ಅರಿವೆ-ಅಂಚಡಿಗಳನ್ನೆಲ್ಲ ಟ್ರಂಕಿನಲ್ಲಿ ತುಂಬಿದಳು. ಹಾಸಿಗೆ ಕಟ್ಟಿದಳು. ಹೋಟೆಲ್ಲಿನ ಬಿಲ್ಲು ಕೊಟ್ಟಳು. ವಿ. ಪಿ. ಇದನ್ನೆಲ್ಲ ವಿಷಣ್ಣಮನಸ್ಕನಾಗಿ ನೋಡುತ್ತಿದ್ದ. ಅವನೆದುರಿರುವ ಮೇಜಿನ ಮೇಲೆ ೨೫ ರೂಪಾಯಿ ಇಟ್ಟು ವಿಶಾಲಾ ಹೇಳಿದಳು:

"ನಾನು ಮುಂಬಯಿಗೆ ಹೋಗಬೇಕು!"

"ನಾನೂ ನಮ್ಮೂರಿಗೆ ಹೋಗಬೇಕು!"

"ಇವು ನಿಮಗೆ ಖರ್ಚಿಗೆ ರೂಪಾಯಿ!"

ವಿ. ಪಿ. ಹೊರಡುವ ಸಿದ್ಧತೆ ಮಾಡಿದ. ಆಳುಗಳು ಬಂದು ಸಾಮಾನು ಕೆಳಗೊಯ್ದರು. ಮೆಟ್ಟಿಲುಗಳನ್ನಿಳಿಯುವಾಗ, ಹೋಟೆಲ್ಲಿನ ಆಳು ಒಂದು ತಂತಿಯನ್ನು ತಂದು ವಿ. ಪಿ. ಗೆ ಕೊಟ್ಟ. ನಡುಗುತ್ತಿರುವ ಕೈಯಿಂದಲೆ ಅದನ್ನೊಡೆದು ವಿ. ಪಿ. ಓದಿದ. ವಿಶಾಲಾ ಕೇಳಿದಳು:

"ಯಾರ ತಂತಿಯದು?"

"ತಂದೆಯವರದು— ಹೆಂಡತಿ ಬಾವಿಯಲ್ಲಿ ಬಿದ್ದು ಸತ್ತಳಂತೆ!"

"ಕಾರಣ?"

"ನಿನ್ನ ಮದ್ದು!— ಹಿಂದೆಯೆ ಒಂದು ಕಾಗದದಲ್ಲಿ ತಂದೆ ಬರೆದಿದ್ದರು: ಆಕೆಗೆ ಹುಚ್ಚು ಹೆಚ್ಚಾಗಿ ಹೇಗೋ ಹೇಗೋ ಮಾಡುತ್ತಿದ್ದಾಳೆಂದು. ನಿನಗದನ್ನು ಹೇಳಿರಲಿಲ್ಲ. ಸರಿ, ಆಕೆ ಬಾವಿಯಲ್ಲಿ ಬಿದ್ದಳು.. ನೀನು ಮುಂಬಯಿಗೆ ಹೊರಟೆ! ನನಗೂ ಹುಚ್ಚು ಹಿಡಿಯುವುದೊಂದು ಬಾಕಿ!........"

ಕನ್ನಡ ನಾಡಿನ ವೈಶ್ಯರಿಗೊಂದು ಹೆಮ್ಮೆಯ ವಿಷಯ!

ವೈಶ್ಯರ ಏಳ್ಗೆಗಾಗಿ ಹಗಲಿರುಳು ಹೋರಾಡುವ ಒಂದೇ ಒಂದು ಪತ್ರಿಕೆಯೆಂದರೆ

ಮೈಸೂರು ವೈಶ್ಯ ಪತ್ರಿಕೆ!

(ಕನ್ನಡ-ತೆಲುಗು ಮಾಸಪತ್ರಿಕೆ)

ಇದೇ ಆಗಸ್ಟ ತಿಂಗಳಿಗೆ ಎರಡನೆಯ ವರುಷ ಪ್ರಾರಂಭವಾಗಿದೆ.
ಎಲ್ಲರೂ ಪ್ರಯೋಜನ ಪಡೆಯಬಹುದಾದ ಅನೇಕ ವಿಷಯಗಳಿವೆ.

ವಾ. ಚಂ. ೨-೮-೦, ಬಿಡಿ ಪ್ರತಿ ೦-೩-೦.

ಮೈಸೂರು ವೈಶ್ಯಪತ್ರಿಕೆ

ವಾಸವಾಂಬಾ ಬಿಲ್ಡಿಂಗ್, ಮೈಸೂರು.

ಪಟ್ಟೇವಾಲ ತಿಮ್ಮ

(ಒಂದು ಬಡತನದ ಬಾಳು *)

★

‘ ವಿನೀತ ’ ಶಿರಶಿ

ಪಟ್ಟೇವಾಲರ ಜೀವನದಲ್ಲಿ ಹೊಸ ರಾವ್‌ಸಾಹೇಬರು ಬರುವುದೆಂದರೆ ಹುಡುಗರಿಗೆ ಹೊಸಪರೀಕ್ಷೆ ಬಂದಂತೆ. ಅದೇ ಆತುರ, ಅದೇ ಕಳವಳ! ‘ ರಾವ್‌ಸಾಬ ’ರು ಕೋಮಲರೊ ಕಠೋರರೊ ? ನಗುಮೋರೆಯವರೊ ಉರಿಮೋರೆಯವರೊ ? ಮೆತ್ತನೆಯ ಮಾತಾಡಿ ಸುಣ್ಣಗೆ ದುಡಿಸಿಕೊಳ್ಳುವವರೊ ಅಥವಾ ಬಾಡಿಗೆಯ ಎತ್ತಿನಂತೆ ಕನಿಕರವಿಲ್ಲದೆ ಹಗಲಿರುಳೂ ದುಡಿಸುವವರೋ ?’— ಇವೇ ವಿಚಾರತರಂಗಗಳಲ್ಲಿ ತಿಮ್ಮನ ಮನಸ್ಸು ಹೊಯ್ದಾಡುತ್ತಿತ್ತು. ರಾವಸಾಬರಿಗಿಂತಲೂ ಪಟ್ಟೇವಾಲರಿಗೆ ಆತುರವಿರುವುದು ‘ ಬಾಯಿ ’ಯವರ ಸ್ವಭಾವದ ಬಗ್ಗೆ. ‘ ಬಾಯಿ ’ಯವರು ಪರೀಕ್ಷಾ ಭವನದ ಸುಪರವೈಜರ್ ಇದ್ದ ಹಾಗೆ. ಸುಪರವೈಜರು ಅನುಕೂಲರಿದ್ದರೆ, ಪ್ರಶ್ನಪತ್ರಗಳು ಬಿಗಿಯಾಗಿದ್ದರೂ ಬಿಡಿಸಲಾಗುತ್ತವೆ; ‘ ಬಾಯಿ ’ಯವರು ಅನುಕೂಲರಿದ್ದರೆ, ‘ರಾವ್‌ಸಾಹೆಬ’ರೂ ಅನುಕೂಲರೇ ಸರಿ. ತಿಮ್ಮನಿಗೂ ಹೊಸ ಬಾಯಿಸಾಹೇಬರು ಹೇಗಿದ್ದಾರೆಂಬುದನ್ನು ಅರಿಯುವ ಆತುರವೇ ಆತುರ. ಅವರೆಲ್ಲ ಇಂದೆಯೆ ನಾಲ್ಕುಗಂಟೆಗೆ ಬರುತ್ತಾರೆಂದು ತಂತಿಬಂದದ್ದರಿಂದ, ತಿಮ್ಮನಿಗೆ ಊಟಕ್ಕೂ ಅವಕಾಶವಿರಲಿಲ್ಲ. ಮನೆಯನ್ನು ಸ್ವಚ್ಛಗುಡಿಸಿ, ಒರಸಿ, ಸಾರಿಸಿ, ಹಸನು ಹಸನು ಮಾಡಿಟ್ಟಿದ್ದ. ಬಾಯಿಸಾಹೇಬರು ಬಂದ ಕೂಡಲೆ, ಮನೆಯ ಸ್ವಚ್ಛತೆ ನೋಡಿ ಅವರು ಪ್ರಸನ್ನರಾಗಬೇಕೆಂಬುದೇ ಅದರ ಆಶಯ. ಮೊದಲನೆಯ ಬಾರಿ ಆದ ಅಭಿಪ್ರಾಯವು ಕೊನೆಯವರೆಗೂ ಉಳಿಯುವುದು.

ಎಲ್ಲವನ್ನೂ ಮುಗಿಸಿದಾಗ ಮೂರು ಗಂಟೆ ಹೊಡೆಯಿತು. ಬಳಿಕ ಮೋಟರಿನ ಕಡೆಗೆ ಕಣ್ಣು ಹೊರಳಿತು. ಹೆಡ್‌ಕಾರಕೂನರೂ ಬಂದರು; ರಾವ್‌ಸಾಹೇಬರ ಸ್ವಾಗತಕ್ಕಾಗಿ ಅಣಿಯಾಗಿ ನಿಂತರು. ಯಾವ ಮೋಟರೇ “ಪೋಂ” ಎಂದರೂ, ರಾವಸಾಬರ ಮೋಟರೆ ಬಂದಿತೆಂದು ಹೊರಗೆ ಓಡಿಬರುವುದು, ಅಲ್ಲವೆಂದು ಅರಿವಾಗಲು ಒಳಗೆ ಹೋಗುವುದು—ಇದೇ ಕ್ರಮ ಒಂದೆರಡು ಬಾರಿ ನಡೆಯಿತು. ತುಂಬುಬಸಿರಿನ ಬೇನೆಯಂತೆ ಕ್ಷಣಕ್ಷಣಕ್ಕೆ ಇವರ ಕುತೂಹಲ ಬೆಳೆಯಿತು. ನಾಲ್ಕು ಬಾರಿ ‘ ಢಣ್ ಢಣ್ ’ ಎಂದು ಕಚೇರಿಯ ಗಂಟೆಯು ಬಡಿದುಕೊಂಡಿತು. ‘ ಈಗ ಬಂದಾರು, ಆಗ ಬಂದಾರು ’ ಎಂದು ಕಾಯುತ್ತ ನಿಂತಿರುವಾಗ, ಕೊನೆಗೊಮ್ಮೆ “ ಪೋಂ ಪೋಂ ” ಎಂದು ಧ್ವನಿಮಾಡುತ್ತ ಒಂದು ಮೋಟರು ಬಂದು ನಿಂತೇ ಬಿಟ್ಟಿತು. ತಿಮ್ಮನೂ ಓಡಿದನು, ಕಾರಕೂನರೂ ಓಡಿದರು. ಫ್ರಂಟ್‌ಸೀಟಿನಲ್ಲಿಯೇ ವಿರಾಜಿಸಿದ್ದರು ರಾವ್‌ಸಾಹೇಬರು. ಸಲಾಮು ಮಾಡಿದವನೇ ತಿಮ್ಮ ಇಂಟರ್ ಸೀಟಿನ ಕಡೆಗೆ ತೆರಳಿದ. ರಾವ್‌ಸಾಹೇಬರ ಸ್ವಾಗತಕ್ಕೆ ಹೆಡ್‌ಕಾರಕೂನರಿದ್ದರು. ಅವನಿಗೆ ಒಡತಿಯ ಸ್ವಾಗತವನ್ನು ಮಾಡಬೇಕಾಗಿದ್ದಿತು. ತಿಮ್ಮ ಇಂಟರ್‌ಸೀಟಿನ ಬಾಗಿಲನ್ನು ತೆರೆಯುತ್ತಲೆ, ಬಾಯಿಯವರು ‘ ಚಿಕ್ಕರಾವ್‌ಸಾಹೇಬ ’ರನ್ನು ತಿಮ್ಮನ ಕೈಯಲ್ಲಿ ಕೊಟ್ಟರು. ಮಗು ತಿಮ್ಮನ ಕೈಯ್ಯಲ್ಲಿ ಬರುತ್ತಲೆ ಅವನನ್ನೊಮ್ಮೆ ದಿಟ್ಟಿಸಿ ನೋಡಿತು; ತನ್ನ ಪುಟ್ಟ ಕೈಗಳಿಂದ ಅವನ ಗಲ್ಲಮಿಸೆಗಳನ್ನು ಹಿಡಿದೆಳೆದು ನಕ್ಕು ಬಿಟ್ಟಿತು. ಸರಿ, ಮಗು ತಿಮ್ಮನಿಗೆ ಹೊಂದಿಕೊಂಡಿತು. ತಂದೆಯ ಮೋರೆಯ ಮೇಲೂ ಇಲ್ಲ, ತಾಯಿಯ ಮೋರೆಯ ಮೇಲೂ ಇಲ್ಲ, ಇಂತಹ ವಿಚಿತ್ರ ಗಲ್ಲಮಿಸೆಯೇ ‘ ಚಿಕ್ಕರಾವ್‌ಸಾಹೇಬ ’ರಿಗೆ ತಿಮ್ಮನ ಸಲುಗೆ ಬೆಳೆಯಲು ಕಾರಣವಾಯಿತು. ಅಂದಿನಿಂದ ತಿಮ್ಮನೆಂದರೆ ‘ ಚಿಕ್ಕರಾವ್‌ಸಾಹೇಬ ’ರಿಗೆ ಪಂಚಪ್ರಾಣ.

* * *

ನಾಲ್ಕುಗಂಟೆ ಹೊಡೆಯುತ್ತಲೇ, ಸಣ್ಣರಾಯರನ್ನು ಸೈಕಲ್‌ಗಾಡಿಯಮೇಲೆ ಅಡ್ಡಾಡಿಸುವುದಕ್ಕೆ ಒಯ್ಯುವುದು ವಾಡಿಕೆ. ಮಕ್ಕಳು ಹೊತ್ತನ್ನು ಸರಿಯಾಗಿ ತಿಳಿದುಕೊಳ್ಳುತ್ತವೆ. ಅವಕ್ಕೆ ಗಡಿಯಾಳಗಳ ಆವಶ್ಯಕತೆ ಇಲ್ಲ. ದಿನವೂ ನಾಲ್ಕು ಗಂಟೆಗೆ ಸರಿಯಾಗಿ ತಿಮ್ಮನು ಗಾಡಿಯಲ್ಲಿ ಕೂಡಿಸದಿದ್ದರೆ, ಸಣ್ಣರಾಯರು ತಮ್ಮ ಅಸ್ತ್ರ ತೆಗೆದು ಬಿಡುತ್ತಿದ್ದರು. ಗಟ್ಟಿಯಾಗಿ ಅಳಲು ಪ್ರಾರಂಭಿಸಿದರೆಂದರೆ, ತಿಮ್ಮನಿಗೆ ಹಿಡಿದ ಕೆಲಸ ಹಿಡಿದಿರುವಂತೆಯೆ ಬಿಟ್ಟು ಓಡಿ ಬರಬೇಕಾಗುತ್ತಿತ್ತು.

ಈ ದಿವಸವೂ ತಿಮ್ಮನು ಸರಿಯಾದ ಹೊತ್ತಿಗೆ ರಾಯರ ಸವಾರಿಯನ್ನು ಸಿದ್ಧಗೊಳಿಸಿದನು. ರಾಯರೂ ಬಂದು ಆಸನಸ್ಥರಾದರು. ತಿಮ್ಮನು ಗಾಡಿಯನ್ನು ನೂಡತೊಡಗಿದನು. ಆದರೆ ಸಣ್ಣರಾಯರ ಮನಸ್ಸಿನಲ್ಲಿ ಏನು ಬಂದಿತೋ ಏನೋ, “ **ಊಂ** ” ಎಂದು ಚೀರಿಬಿಟ್ಟರು. ತಿಮ್ಮನು ಗಾಬರಿಯಾಗಿ “ ಏನು ರಾಯರೇ ! ” ಎಂದು ಗಾಡಿಯನ್ನು ತಡೆದು ಕೇಳಿದನು. “ ಚಿಮ್ಮಾ ಇಂಗ ” ಎಂದು ಬೆರಳುಮಾಡಿ ತೋರಿಸಿದರು ಸಣ್ಣರಾಯರು. ತಿಮ್ಮನು ನಿತ್ಯವೂ ಒಂದೇ ದಾರಿಯಿಂದ ಒಯ್ಯುತ್ತಿದ್ದನು. ಮಕ್ಕಳು ನವೀನತಾಪ್ರಿಯರು. ಹೋದ ದಾರಿಯಿಂದ ಹೋಗುವುದು ಆ ಚಿಕ್ಕರಾಯರ ಮನಸ್ಸಿಗೆ ಬರಲಿಲ್ಲ. ಅದೇ ದಾರಿ, ಅದೇ ಮನೆಗಳು, ಅದೇ ಜನರು, ಅದೇ ನೋಟ! ಯಾರಿಗೆ ಸೇರಬೇಕು ? ತಿಮ್ಮನು ಬೇರೆಯ ದಾರಿಯಿಂದ ಒಯ್ಯಬಹುದೆಂದು ಮಗು ಇಷ್ಟು ದಿವಸ ಸುಮ್ಮಗಿದ್ದಿತು; ಆದರೆ **ವಿದ್ರೋಹವೃತ್ತಿಯು** ಮಗುವಿಗೂ

* ಮೇಳಾಟದಲ್ಲಿ ಮೊದಲನೆಯ ಬಹುಮಾನವನ್ನು ಪಡೆದ ಕತೆಯಿದು.
ಸಂ. ಜ.

ಬಿಡುವುದಿಲ್ಲ. ತಿಮ್ಮನು ಒಯ್ಯುವುದಿಲ್ಲವೆಂದು ತಿಳಿದುಬಂದ ಮೇಲೆಯೆ ಮಗು ತನ್ನ ಸತ್ಯಾಗ್ರಹದ ಅಸ್ತ್ರವನ್ನು ತೆಗೆಯಿತು. ತಿಮ್ಮ ಹೌಹಾರಿದವನಾದ. ರಾಯರ ಹೊಸ ದಿಕ್ಕು ತಿಮ್ಮನಿಗೆ ದಿಕ್ಕುತೋಚದಂತೆ ಮಾಡಿತು. ಇದು ಯಾಕೆ? ಅಲ್ಲೇನು ಇದೆ? ತಿಮ್ಮನಿಗೇ ಗೊತ್ತು. ರಾಯರಿಗೆಂದ: "ರಾಯರೆ, ಅಲ್ಲಿ ಗುಮ್ಮ ಅದೆ!" ಮಕ್ಕಳನ್ನು ಸುಮ್ಮಗಿರಿಸುವ ಕೊನೆಯ ಅಸ್ತ್ರವಿದು ಹಿರಿಯರದು. ತಿಮ್ಮನು ಮೊದಲೇ ಹಿರಿದು ಬಿಟ್ಟ. ರಾಯರು ಕೇಳಿದರಲ್ಲವೇ? ಕುಳಿತಲ್ಲಿಯೇ ಕಾಲು ಬಡಿಯುತ್ತ, ಕೈ ಮೇಲಕ್ಕೆತ್ತಿ ವಿರೋಧ ತೋರಿಸಹತ್ತಿದರು. ತಿಮ್ಮನು ಹಲವು ಯತ್ನ ಮಾಡಿದನು; ಆದರೆ ರಾಯರ ವಿರೋಧಕ್ಕೆ ಕಾವೇರಿತು. ಅವರ ಅಳು ಕೇಳಿ ಬಾಯಿಯವರು ಹೊರಬಂದರು. "ಏನು ತಿಮ್ಮಾ! ಯಾಕೆ ಅಳುತ್ತಾರೆ ರಾಯರು?" ಶ್ರೀಮಂತ ತಾಯಿಯ ಮಗುವು ಬಡವರ ಎದುರಿಗೆ 'ರಾಯರೇ'—ಮಗು ನಲ್ಲ. ತಾಯಿಯೆದೆ ಎಲ್ಲಿಯಾದರೂ ಅಡಗಿ ಕುಳಿತಿರುವುದಾದರೆ ಬಡವರ ಎದುರಿಗೆ. ತಿಮ್ಮ ಗಾಬರಿಯಾದ. ಏನು ಹೇಳಬೇಕು?

"ಏನಿಲ್ಲಾ ಬಾಯಿಯವರೇ! ರಾಯರು ಈ ಕಡೆಗೆ ಹೋಗೋಣ—ಅಂತಾರೆ!"

"ಒಯ್ಯೆಲ್ಲಾ!"

ತಿಮ್ಮನಿಗೆ ಬೇರೆ ಮಾರ್ಗವೇ ಉಳಿಯಲಿಲ್ಲ. ಗಾಡಿಯನ್ನು ತಿರುಗಿಸಿದನು. ರಾಯರಿಗೆ ಎಣೆಯಿಲ್ಲದ ಆನಂದ. "ಹೂಂ" ಎಂದು ತಿಮ್ಮನಿಗೆ ಅಪ್ಪಣೆಯಾಯಿತು. ಆದರೆ ತಿಮ್ಮ ಒಂದೊಂದು ಹೆಜ್ಜೆ ಇರಿಸಬೇಕಾದರೂ ಮುಳ್ಳಿನ ಮೇಲೆ ಹೆಜ್ಜೆ ಇರಿಸಿದಂತೆ ಮಾಡುತ್ತಿದ್ದ. ಏನೋ ಕಂಡಂತೆ ಮಾಡಿ ಗಾಡಿ ನಿಲ್ಲಿಸುತ್ತಿದ್ದ. ಮತ್ತೆ ಧೈರ್ಯತಾಳಿ ಮುಂದೆ ಸರಿಸುತ್ತಿದ್ದ. ಅದಾವ ಭಯವು ಅವನ ಹೃದಯವನ್ನು ನಡುಗಿಸಿತ್ತೋ! ಒಂದೊಂದೇ ಮನೆಯು ದಾಟಿದಂತೆ ಅವನ ಕಣ್ಣುಗಳು ಗಾಬರಿಗೊಳ್ಳುತ್ತಿದ್ದುವು. ಕಾಲುಗಳು ಭಾರವಾಗುತ್ತಿದ್ದುವು. ಮುಖವು ಕಪ್ಪಿಡುತ್ತಿತ್ತು. ಆಗಾಗ ಉಸ್ಸೆಂದು ನಿಟ್ಟುಸಿರು ಬಿಡುತ್ತಿದ್ದನು. ಆದರೆ, ರಾಯರಿಗೆ ಇದೇ ಅನುಕೂಲ. ಎಲ್ಲವೂ ಹೊಸತು. "ಇದೇನು, ಅದೇನು?" ಎಂದು ಪ್ರಶ್ನೆಯ ಮೇಲೆ ಪ್ರಶ್ನೆ. ತಿಮ್ಮನು ಬಾಯಿ ತೆರೆದರಲ್ಲವೇ? ಅತನ ಧ್ಯಾನವಾದರೂ ಎಲ್ಲಿ ಇದ್ದಿತೋ! ರಾಯರು ಉತ್ತರ ಸಿಕ್ಕದಿದ್ದರೆ ಒಮ್ಮೊಮ್ಮೆ ಗಟ್ಟಿಯಾಗಿ "ತಿಮ್ಮಾ" ಎಂದು ಚೀರುತ್ತಿದ್ದರು. ಆಗ ಬೆಚ್ಚಿ ಬಿದ್ದು ತಿಮ್ಮ ತಡವರಿಸುತ್ತಿದ್ದ. ಹೋಗುತ್ತ ಹೋಗುತ್ತ, ಯಾವುದೋ ಒಂದು ಗುಡಿಸಿಲು ದಾಟಿದಾಗ, ಅಡವಿಯಿಂದ ಹೊತ್ತು ತಂದ ಕಟ್ಟಿಗೆಹೊರೆಯನ್ನು ಮನೆಗೆ ಒಗೆದಾಗ ಉಸ್ಸೆನ್ನುವಂತೆ ತಿಮ್ಮನು ಉಸ್ಸೆಂದನು. ಈಗ ಮಾತ್ರ ಗಾಡಿಯ ವೇಗವು ಆರ್ಭಟದಲ್ಲಿ ಸಾಗಿತು. ನಾಲ್ಕೈದು ಮಾರು ಹೋಗುವುದರಲ್ಲಿಯೆ ಯಾರೋ ಕರೆದಂತಾಯಿತು. ಕರೆಯು ಬರೆಯಂತಾಯಿತು ತಿಮ್ಮನ ಹೃದಯಕ್ಕೆ. ಮನಸ್ಸು 'ಕಣ್ಣನ್ನು ಹೊರಳಿಸಬೇಡ' ಎನ್ನುತ್ತಿತ್ತು; ಹೃದಯವು 'ಹೊರಳಿಸು' ಎನ್ನುತ್ತಿತ್ತು. ಒಮ್ಮೆ ಓರೆಗಣ್ಣು, ಒಮ್ಮೆ ಎದುರುಗಣ್ಣು ಮಾಡಿ ಗಾಡಿ ನಡೆಯಿಸುತ್ತಲೇ ಇದ್ದನು. ಹಿಂದಿನಿಂದ "ಯಪ್ಪಾ, ಯಪ್ಪಾ!" ಎಂಬ ಅಳು ಜೋರಾಗುತ್ತ ನಡೆದಿತ್ತು. ಅದು ಯಾರ ಕೂಗು? ಅದು ಯಾರದೂ ಅಲ್ಲ, ಕರುಳಿನ ಕೂಗು! ತಿಮ್ಮನಿಗೂ ಚಿಕ್ಕ ರಾಯರ ಓರಗೆಯ ಮಗುವಿತ್ತು, ಆ ಗುಡಿಸಿಲು ಅವನದಾಗಿತ್ತು. "ಸುಬ್ಬು ನೋಡಿದರೆ ಬಿಡಲಿಕ್ಕಿಲ್ಲ, ಕರೆಯುವನು. ಕರೆದುಕೊಂಡು ಹೋಗಲಿಕ್ಕೆ ಹಟಮಾಡುವನು. ಏನು ಮಾಡಲಿ?....ಎತ್ತಿಕೊಳ್ಳಲೆ?....ರಾಯರ ಗಾಡಿಯನ್ನು ದೂಡಬೇಕಲ್ಲ?.... ಗಾಡಿಯಲ್ಲಿ ಕುಳ್ಳಿರಿಸಲೆ?.... ಇಬ್ಬರಿಗೆ ಇಂಬಿದೆ, ಆದರೆ ಯಾರಾದರೂ ನೋಡಿದರೆ?.... 'ನೋಡು ತಿಮ್ಮನ ಕೆಲಸ. ದೊಡ್ಡ ಕೊಚ್ಚೀ ನವಾಬನಾದ. ಮಗುವನ್ನು ರಾಯರ ಮಗನ ಸಂಗಡ ಸೈಕಲ್ ಗಾಡಿಯಲ್ಲಿ ಕೂರಿಸಿದ್ದಾನೆ.' ಎಂದು ಯಾರಾದರೂ ಅಂದರೆ?.... ಮೇಲಾಗಿ ಮಗುವಿನ ಬಟ್ಟೆ ಹೊಲಸು....ರಾಯರ ಮಗುವಿನ ಸಂಗಡ ಹೇಗೆ ಕುಳ್ಳಿರಿಸಬೇಕು? ದೇವಾ, ಸುಬ್ಬು ನನ್ನನ್ನು ನೋಡದಿದ್ದರೆ ಸಾಕು; ಹೇಗಾದರೂ ಮುಂದೆ ಹೋದರೆ ಗೆದ್ದೆ!" ಇವೇ ವಿಚಾರಗಳು ಅವನ ಮನಸ್ಸಿನಲ್ಲಿ ಯುದ್ಧಮಾಡುತ್ತಿದ್ದುವು—ತನ್ನ ಮನೆಯ ಎದುರಿಗೆ ಬರುವಾಗ. ಮನೆಯನ್ನು ದಾಟಿದಾಗ ಉಸ್ಸೆಂದು ಉಸಿರಿಟ್ಟು, ಮುಂದೆ ಸಾಗಿದನು ಆರ್ಭಟದಿಂದ. ಆದರೆ ಆಗುವುದು ತಪ್ಪಲಿಲ್ಲ. ಒಳಗಡೆಗೆ ಆಡುತ್ತಿದ್ದ ಮಗು, ದಾರಿಯ ಮೇಲೆ ಅಪ್ಪನನ್ನು ನೋಡಿದ ಕೂಡಲೆ ಓಡಿ ಬಂದಿತು "ಅಪ್ಪಾ" ಎನ್ನುತ್ತ. ಅಷ್ಟರಲ್ಲಿಯೆ ನಾಲ್ಕೈದು ಮಾರು ಹೋಗಿತ್ತು ಗಾಡಿ. 'ಯಪ್ಪಾ' ಕರೆಯು, ಯ—ಪಾ—ಪಾ—" ಅಳುವಾಗಿ ಹರಿಯಿತು. ಸುಬ್ಬುವಿನ ತಾಯಿ ಹೊರಗೆ ಬಂದು ನೋಡಿದಳು. ಮಗುವನ್ನು ಎತ್ತಿಕೊಂಡಳು. ದೂರ ತನ್ನ ಗಂಡ ಗಾಡಿ ದೂಡುತ್ತ ಹೋಗುವುದನ್ನು ಕಂಡಳು. ಎದುರಿಗಿದ್ದರೆ ನಿಲ್ಲಿಸಿ ಬಿಡುತ್ತಿದ್ದಳು ದೇವಿ. ದೂರ ಹೋದವನನ್ನು ಹೆಂಡತಿ ಕರೆಯುವುದು ಹೇಗೆ? 'ಎಂತಹ ಕಲ್ಲು ಎದೆ ಅವರದು; ಮಗು ಅತ್ತು ಕರೆಯುತ್ತಿದೆ. ಸ್ವಲ್ಪ ನಿಲ್ಲಬಾರದೆ? ಕೇಳಿಸುವದಿಲ್ಲವೇ ಕಿವಿ?' ಎಂದಳಾಕೆ. ಆದರೆ ಅವಳಿಗೇನು ಗೊತ್ತು ತಿಮ್ಮನ ಸಮಸ್ಯೆ? ಕೇಳಿಯೂ ಕೇಳದವನ ಹಾಗೆ ಎದೆ ಗಟ್ಟಿಮಾಡಿ ಹೊರಟು ಹೋಗಿದ್ದನಾತ.

(೩)

ರಾತ್ರಿ ಇದೇ ಮಾತಿನ ಮೇಲೆ ಗಂಡ-ಹೆಂಡಿರಲ್ಲಿ ಸ್ವಲ್ಪ ವಾದ-ವಿವಾದವಾಯಿತು. ತನಗೆ ಕೇಳಿಸಲಿಲ್ಲವೆಂದು ತಿಮ್ಮನು ಎಷ್ಟೋ ಪರಿಯಿಂದ ಹೇಳಿದನು; ಆದರೆ ಗಂಡನ ಹೃದಯವನ್ನು ಹೆಂಡತಿ ಅರಿಯುಳೆ? ಅವನಾ ಕುಂಟುನೆಪಕ್ಕೆ ಹೆಂಡತಿ ಸ್ವಲ್ಪ ಛೀ ಕೂಡ ಹಾಕಿದಳು. ಸಿಟಗೊಂಡಳು. 'ಮನೆಗೆ ಮಾರಿ ಪರರಿಗೆ ಉಪಕಾರ; ಇದೆಂತಹ ನ್ಯಾಯ!' ಎಂದು ಗದ್ದರಿಸಿದಳು. ಸ್ವಲ್ಪ ತಡೆದು ಹೋಗಿದ್ದರೆ ತಿಮ್ಮನಿಗೆ ಇದೆಲ್ಲವೂ ತಪ್ಪುತ್ತಿತ್ತು. ಸುಮ್ಮನೆ ಮಾತನಾಡಿಸಿ ಹೋಗಿದ್ದರೆ ಅವನ ಹೃದಯವೂ

ಕೇಳುತ್ತಿರಲಿಲ್ಲ. ಅವನೂ ಕೂಸಿನ ತಂದೆ. ತಾನೂ ಹಣಗಾರನಾಗಿದ್ದರೆ ಮಗುವನ್ನು ಗಾಡಿಯಲ್ಲಿ ಕುಳ್ಳಿರಿಸಬಹುದಾಗಿತ್ತು. ಈಗ ಬಡವನಾಗಿ ಹೀಗೆ ಮಾಡುವಂತಿಲ್ಲ. ಅದರಲ್ಲಿಯೂ ರಾವ್‌ಸಾಹೇಬರ ಕುಮಾರರ ಸವಾರಿ. ಇದೆಲ್ಲ ದೇವಿಗೆ ತಿಳಿಯುವುದು ಹೇಗೆ? ಮಾತಿಗೆ ಮಾತನ್ನು ಆಡಿದರೆ ಕಾವು ಏರಿಬಿಡುತ್ತದೆಂದು ತಿಮ್ಮ ಸುಮ್ಮನಾದ. ದೇವಿಯ ಸಿಡುಕು ತಾನಾಗಿ ನಂದಿಹೋಯಿತು.... ತಿದಿ ಊದದ ಕುಲುಮೆಯಂತೆ.

ಆದರೆ ತಿಮ್ಮನಿಗೆ ಆ ಸಂಕಟವು ಮಾತ್ರ ತಪ್ಪಲಿಲ್ಲ. ಇಂದು ಕೂಡ ಸಣ್ಣ ರಾಯರು ಅದೇ ದಾರಿಯಿಂದ ಹೋಗುವ ಹಟ ಹಿಡಿದರು. ಈಗ ನೆಪ ಹೇಳಿ ಗಾಡಿಯನ್ನು ಮುಂದೆ ಒಯ್ಯುವಂತಿರಲಿಲ್ಲ. ಸುಬ್ಬುವೂ ತಾಯಿಯೂ, ಪರೀಕ್ಷೆಗಾಗಿಯೇ ಎನ್ನುವಂತೆ ಹೊರಗೇ ನಿಂತುಬಿಟ್ಟಿದ್ದರು. ತಿಮ್ಮ ಗಾಡಿಯನ್ನು ನಿಲ್ಲಿಸಿದನು; "ಸುಬ್ಬಾ" ಎಂದು ಕಟ್ಟೆಯ ಮೇಲೇರಿ ತನ್ನ ಹತ್ತಿರ ತೆಗೆದುಕೊಂಡನು. ಎರಡು ಮುತ್ತುಗಳನ್ನು ಸೆಳೆದನು. ಸುಬ್ಬು ಗಾಡಿಯನ್ನು ತೋರಿಸಹತ್ತಿದನು. ತಿಮ್ಮ ಅವನನ್ನು ಕರಕೊಂಡು ಗಾಡಿಯ ಹತ್ತಿರ ಬಂದನು. ಸುಬ್ಬು ರಾಯರನ್ನು ನಿಟ್ಟಿಸಿದ. ರಾಯರು ಸುಬ್ಬುವನ್ನು ದಿಟ್ಟಿಸಿದರು. ಶ್ರೀಮಂತಿಕೆಯ ಬೀಜ ಮಕ್ಕಳಲ್ಲಿಯೂ ಒಡಮೂಡಿರುತ್ತದೆ. ರಾಯರು 'ಊಂ ಹೂಂ, ಊಂ, ಹೂಂ' ಎಂದುಬಿಟ್ಟರು. ತಿಮ್ಮ ಸ್ವಲ್ಪ ಮುದ್ದಾಡಿ ತಾಯಿಯ ಬಳಿ ಮುಟ್ಟಿಸಹೋದನು. ಸುಬ್ಬುವಿಗೆ ಸಮಾಧಾನವೆಲ್ಲಿ? ತನ್ನನ್ನು ಗಾಡಿಯಲ್ಲಿ ಕುಳ್ಳಿರಿಸಲಿಲ್ಲವೆಂದೇ ಇರಬಹುದು, ಅಳತೊಡಗಿದನು. ದೇವಿ ಹೇಳಿದಳು "ಸ್ವಲ್ಪ ಬದಿಗೆ ಕೂಡ್ರಿಸಿ ಅಡ್ಡಾಡಿಸಿ ತರಬಾರದೇ?" ಎಂದು. ಈಗ ಮಾತ್ರ ತಿಮ್ಮ ಸ್ವಲ್ಪ ಗಂಡುಸುತನ ತೋರಿಸಿದ. ಸ್ವಲ್ಪ ಸಿಡುಕಿನಲ್ಲಿಯೇ ಹೇಳಿದ: "ಹಾಂ, ನಾವು ದೊಡ್ಡ ರಾಯರಾಗಿಬಿಟ್ವಿ. ಈ ಹೊಲಸು ಬಟ್ಟೆಯಲ್ಲಿ ಕೂಡ್ರಿಸಿದ್ದನ್ನು ಯಾರಾದರೂ ನೋಡಿದರೆ ಏನೆಂದಾರು? ಅವನು ಅಳುತ್ತಾನೆ, ನೀನು ಹೇಳುತ್ತೀ! ಇದಕ್ಕಾಗಿಯೇ ಗಾಡಿ ಈ ಕಡೆ ತರುತ್ತಿರಲಿಲ್ಲ!"

ಆದೇನೋ ದೇವಿ ಸುಮ್ಮಗುಳಿದಳು. ಆದರೆ ರಾತ್ರಿ ಮಾತ್ರ ತನ್ನ ಅವತಾರ ಬಿಚ್ಚಿದಳು. ಕೊನೆಗೂ "ನಾಳೆ ಹೊಸ ವಸ್ತ್ರ ಹೊಲಿಸಿ ಒಂದಿಷ್ಟು ಅಡ್ಡಾಡಿಸಿ ತರುತ್ತೇನೆ" ಎಂದು ಸಂಧಾನಕ್ಕೆ ಶರಣುಬಂದಾಗ, ದೇವಿಯು ಹೆಂಡತಿಯಾಗಿದ್ದಳು.

ಅಂತೂ ಸುಬ್ಬುವೂ ರಾಯರಾಗಿ ಪುನರ್ಜನ್ಮ ತಾಳಬೇಕಾದರೆ, ತಿಮ್ಮನಿಗೆ ಸದ್ಯ ನೂರು ರೂಪಾಯಿಯ ಸಾಲವಾಗದೆ ಬಿಡಲಿಲ್ಲ. ಒಮ್ಮೆ ಈ ಹೊಸ ಡ್ರೆಸ್ಸಿನಲ್ಲಿ ನೋಡಿದಾಗ, ತಿಮ್ಮನು ಎಲ್ಲವನ್ನೂ ಮರೆತು ಲೋಲಾಡಿದನು. ಯಾವ ತಂದೆ-ತಾಯಿಗೆ ಮಗುವಿನ ಶೃಂಗಾರ ಮೆಚ್ಚುವುದಿಲ್ಲ? ಸುಬ್ಬುವೂ ಇಂದು ಗಾಡಿಯ ಮೇಲೆ ಸಣ್ಣರಾಯರ ಎದುರಿಗೆ ಮೆರೆದನು. ಸಣ್ಣರಾಯರು ಮೊದಲೇನೋ ಈ ಸುಬಿದ ಹಾಲುಗಾರನನ್ನು ಒಲ್ಲೆನೆಂದು, ಒಂದೆರಡು ಬಾರಿ ಕಾಲಿನಿಂದ ಒದೆದರು. ಆದರೆ ತಿಮ್ಮನು ತಿಳಿಸಿ ಹೇಳಿದುದರಿಂದಲೂ, ಹುಡುಗರಲ್ಲಿಯ ಗೆಳೆತನದ ಸ್ವಭಾವವು ಮಳೆಹರಿದು ಹೊರಬಿದ್ದುದರಿಂದಲೂ, ಕೊನೆಗೆ ಇಬ್ಬರಿಗೂ ಸಲುಗೆಯಾಯಿತು.

ತಿಮ್ಮನ ದುರ್ಭಾಗ್ಯವು ಇಲ್ಲಿಗೇ ಮುಗಿಯುವಂತಿರಲಿಲ್ಲ. ಒಂದು ದಿವಸ ಗಾಡಿಯನ್ನು ಒಯ್ಯುತ್ತಿರುವಾಗ, ಹಿಂದಿನಿಂದ ರಾವ್‌ಸಾಹೇಬರೇ ಹಾಯ್ದು ಹೋದರು. ಹೋಗುತ್ತ ಹೋಗುತ್ತ ಇಬ್ಬರನ್ನೂ ನೋಡಿದರು. ಅಲ್ಲಿ ಮಾತಾಡುವಂತಿರಲಿಲ್ಲ. ಮಗುವಾದರೇನಾಯಿತು? ರಸ್ತೆಯ ಮೇಲೆ ಮಾತಾಡುವುದು ರಾವ್‌ಸಾಹೇಬರ ಗಾಂಭೀರ್ಯಕ್ಕೆ ಕೊರತೆ. ಹಾಗೆಯೇ ಸಾಗಿಬಿಟ್ಟರು. ಅವರನ್ನು ಕಂಡಕೂಡಲೆ ತಿಮ್ಮನಿಗೆ ಚೇಳು ಕಚ್ಚಿದಂತಾಯಿತು. ರಾವ್‌ಸಾಹೇಬರು ನೋಡಿಬಿಟ್ಟರು. ಇನ್ನೇನು ಮಾಡುವುದು? ಮುಂದುಗಡೆಯಿಂದ ಬಂದಿದ್ದರೆ, ಅವರು ನೋಡುವುದಕ್ಕಿಂತ ಮುಂಚೆ ಎಂದೋ ತನ್ನ ಮಗುವನ್ನು ಎತ್ತಿಕೊಂಡು ಬಿಡುತ್ತಿದ್ದನು. 'ಈಗ ಮಾಡುವುದೇನು? ಅವರು ಕೇಳಿದರೆ ಏನು ಹೇಳಬೇಕು?' ಇದೇ ಚಿಂತೆಯಲ್ಲಿ ಗಾಡಿಯನ್ನು ತಿರುಗಿಸಿ, ಮಗುವನ್ನು ಮನೆಯಲ್ಲಿಳಿಸಿ, ಸಣ್ಣರಾಯರನ್ನು ಮುಟ್ಟಿಸಿದನು. ಅಲ್ಲಿ ರಾವ್‌ಸಾಹೇಬರು ಹೊರಗೇ ನಿಂತಿದ್ದರು. ಅಪ್ಪನನ್ನು ನೋಡುತ್ತಲೇ ಓಡಿಹೋಗಿ ಮಗು ತಬ್ಬಿಕೊಂಡುಬಿಟ್ಟಿತು. ರಾಯರು ಮುದ್ದಾಡುತ್ತ ತಿಮ್ಮನನ್ನು ಕೇಳಿಯೇಬಿಟ್ಟರು:

"ತಿಮ್ಮಾ ಆ ಹುಡುಗನಾರೋ?"

ತಿಮ್ಮನ ಎದೆಯು ಗಾಜಿನಂತೆ ಒಡೆದು ಹೋಯಿತು. ಏನೋ ಬಲವಂತದಿಂದ ಹೇಳಿದ: "ಆ ನಾಗೇಶರಾಯರ ಮಗ ರಾಯರೇ! ಬಹಳ ದಿನದ ಗುರುತು, ಸ್ವಲ್ಪ ಕೂಡ್ರಿಸೆಂದರು!" ಎಂದು ಹೇಳುತ್ತಿರುವಾಗ, ಅವನಿಗಾದ ವೇದನೆಯನ್ನು ಅಳೆಯುವುದಕ್ಕೆ ಶಕ್ಯವಿಲ್ಲ. ಹೊಟ್ಟೆಯ ಕರುಳನ್ನು ಪರರ ಪದರಿಗೆ ಸೇರಿಸುವುದು ಸಾಮಾನ್ಯವಲ್ಲ. ರಾವ್‌ಸಾಹೇಬರ 'ಹುಕುಂ' ಆಗಿಯೇಬಿಟ್ಟಿತು: "ಸಿಕ್ಕ ಸಿಕ್ಕವರ ಹುಡುಗರನ್ನು ಕೂಡ್ರಿಸಬೇಡ ನೋಡು ತಿಮ್ಮ!" ತಿಮ್ಮ ಸುಮ್ಮಗಾದ.

(೪)

ತಿಮ್ಮನು ಹಿಂದಿರುಗುವಾಗ ದಾರಿಯುದ್ದಕ್ಕೂ ವಿಚಾರಗಳ ಜಾಳಿಗೆಯನ್ನೇ ಹೆಣೆಯುತ್ತಲಿದ್ದನು. ವಿಚಾರದ ಗೊಂದಲದಲ್ಲಿ ತನ್ನ ಗುಡಿಸಲನ್ನು ದಾಟಿ ಎರಡು ಹೆಜ್ಜೆ ಮುಂದೆ ಹೋದುದರ ಪರಿವೆಯೂ ಉಳಿದಿರಲಿಲ್ಲ. ಎಚ್ಚರಾದಾಗ ತನ್ನನ್ನು ತಾನೇ [illegible] ಹಾಕಿಕೊಳ್ಳುತ್ತ ಹಿಂದಿರುಗಿದನು. ಊಟವೂ ರುಚಿಸಲಿಲ್ಲ. 'ನಾಳೆಯೇನು ಮಾಡಲಿ? ಇತ್ತ ಬಂದು ಸುಬ್ಬುವನ್ನು ಒಯ್ಯದಿದ್ದರೆ ಹೆಂಡತಿ ಕೇಳುವಂತಿಲ್ಲ. ಆದರೆ?....ಏನು ಮಾಡಲಿ?....' ಕೊನೆಗೆ ಅವಳಿಗೇ ಶರಣುಹೋಗುವ ನಿಶ್ಚಯ ಮಾಡಿ, ಸಾವಕಾಶವಾಗಿ ನಡೆದ ಸಂಗತಿಯನ್ನು ತಿಳಿಸಿ ಹೇಳಿದನು. ದೇವಿಯು ನಕ್ಕುಬಿಟ್ಟಳು. "ನೀವೇನೂ ಹೆದರಬೇಡಿ, ನಾನು ಅವ

ಪೊತ್ತಿಗೆ ಸುಬ್ಬುವನ್ನು ಎಲ್ಲಿಗಾದರೂ ಒಯ್ಯುತ್ತೇನೆ.'' ಎಂದಳು. ಭಾರ ಇಳಿದು ಹೋಯಿತು. ಬಡತನದ ವಿಚಾರವು ತಾಯಿಯ ಮಮತೆಯಲ್ಲಿ ಕ್ಷಣಕಾಲ ಮರೆಯಾಗಿತ್ತು; ಆದರೆ ಈಗ ಎದುರಿಗೆ ಬಂದ ಮೇಲೆ ಹಟ ಹಿಡಿಯಲಿಕ್ಕೆ ದೇವಿಯು ಹುಚ್ಚಳಲ್ಲ. ಬಡವರ ಹೆಂಡಿರು ನಿಜವಾಗಿಯೂ ಗಂಡಂದಿರಿಗೆ ಅರ್ಧಾಂಗಿಯರು. ಕಾಳಿದಾಸನು ಇವರನ್ನು ನೋಡಿಯೇ ತನ್ನ ಸ್ತ್ರೀವ್ಯಾಖ್ಯೆಯನ್ನು ಬರೆದಿರಬಹುದು. ಹೆಂಡತಿಯ ಸಲಹೆಯನ್ನು ಕೇಳಿದಾಗ, ಅವಳ ವಿಷಯಕ ಪ್ರೇಮ ಉಕ್ಕೇರಿಬಂದು "ನೀನು ನನ್ನ ರಾಣಿ" ಎಂದವನೇ ತಿಮ್ಮ ಪ್ರೇಮದ ಮುದ್ರೆ ಒತ್ತಿಯೆ ಬಿಟ್ಟನು. ದೇವಿಯು "ಓಹೋ ಹೋ! ಗೊತ್ತಿದೆ ರಾಜರೇ!" ಎಂದು ಅಣಕಿಸಿ ಬಿಟ್ಟಳು.

ಇಷ್ಟರಿಂದ ಒಂದು ಮಾತ್ರ ಅನುಭವಕ್ಕೆ ಬಂದಿತು: ತಮ್ಮ ಸುಬ್ಬುವೂ 'ರಾಯರ' ಮಗುವಾಗಬಲ್ಲನು, ಕೊರತೆ ಇರುವುದು ಒಂದಿಷ್ಟು ಅಚ್ಚುಕಟ್ಟಿನ ಡ್ರೆಸ್‌ನಲ್ಲಿ. ಒಮ್ಮೆ ರಾಯರ ಮಗುವಾಗಿ ನೋಡಿದನಂತರ ಸುಬ್ಬು ತಿರುಗಿ ಬಡವರ ಮಗುವಾಗುವಂತಿರಲಿಲ್ಲ. ಮೇಲಾಗಿ ದಿನಾಲೂ 'ಗಾಡಿ, ಗಾಡಿ,' ಎಂದು ಹಟಮಾಡುವ ಸುಬ್ಬನಿಗೆ, ಇಷ್ಟಾದರೂ ಸಮಾಧಾನ ಮಾಡದಿದ್ದರೆ ಹೇಗೆ? ಅವನ ಮಾತಿರಲಿ, ಇವರ ಮನಸ್ಸಿಗಾದರೂ ಒಗ್ಗಬಹುದೇ? ರಾವ್‌ಸಾಹೇಬರ ಕುಮಾರನಿಗೆ ಇಂದು ಚೆಂಡು ಬಂದರೆ ಸುಬ್ಬೂಗೂ ಚೆಂಡು. ನಾಳೆ ಅದು ಹರಿದು ಹೋಯಿತು. ಚಿಕ್ಕರಾಯರ ಹತ್ತಿರ ಮೋಟರು ಬಂತು; ಸುಬ್ಬುವೂ ಮೋಟರ್ ನಡಿಸಹತ್ತಿದ. ಈಗ ಪೀಪಿ ಬಂತು; ಸುಬ್ಬೂನ ಕೈಯಲ್ಲಿಯೂ ಪೀಪಿ. ಅಲ್ಲಿ ಬೊಗರಿ; ಇಲ್ಲಿಯೂ ಬೊಗರಿ! ಚಿಕ್ಕ ರಾವ್‌ಸಾಹೇಬರ ಸಲುವಾಗಿ ಪೇಟೆಯಿಂದ ತರುವವನು ತಿಮ್ಮನು. ಆದರೆ ಕೊಳ್ಳುವಾಗ ಒಂಟಿಯಾಗಿ ಕೊಳ್ಳುತ್ತಿರಲಿಲ್ಲ; ಎಲ್ಲವೂ ಜೋಡಿ. ಪರಿಣಾಮವೆಂದರೆ ತಿಮ್ಮನ ಹನ್ನೆರಡು ರೂಪಾಯಿ ಗಳಿಕೆಯಲ್ಲಿ ಎರಡು ಮೂರು ಸುಬ್ಬುವಿಗಾಗಿ. ಅದೇನು ದೊಡ್ಡ ಮಾತು? ಸುಬ್ಬುವಿನ ನಗುಮೊಗದ ಮುಂದೆ ನೂರಾರು ರೂಪಾಯಿಗಳನ್ನು ನಿವಾಳಿಸಿ ಒಗೆಯಬಹುದು! ಸಾಲವೂ ಸ್ವಲ್ಪ ಸ್ವಲ್ಪ ಏರಹತ್ತಿತು. ಆದರೇನೂ ಚಿಂತೆಯಿಲ್ಲ. ಈಗ ಆಡುವ ದಿವಸ, ನಾಳೇನು ಆಡುವನೋ ನಮ್ಮ ಸುಬ್ಬು!

ಆದರೆ ದಿನಾಲು ಸುಬ್ಬುವಿನ ಧ್ಯಾನ ಕಡಿಮೆಯಾಗಲಿಲ್ಲ. "ಅಪ್ಪಾ ಗಾಡಿ" ಎಂಬ ಪ್ರಶ್ನೆಯೆ ತಿಮ್ಮ ಮನೆಗೆ ಬಂದಕೂಡಲೆ. "ನಾಳೆ ತರುತ್ತೇನೆ ಸುಬ್ಬೂ" ಎಂದು ಮುದ್ದಿಡುತ್ತ ಹೇಳುತ್ತಿದ್ದ ತಿಮ್ಮ. ಆದರೆ ಆ 'ನಾಳೆ' ಬರುತ್ತಿರಲಿಲ್ಲ. ಹುಡುಗರ ಆಶೆ ದೊಡ್ಡದು. ನಿರಾಶೆಯೆನ್ನುವುದು ದೊಡ್ಡವರ ಪಾಲಿಗೆ. ಮಕ್ಕಳ ಕೋಶದಲ್ಲಿ ಅದಕ್ಕೆ ಸ್ಥಾನವಿಲ್ಲ. ದಿನವೂ "ಗಾಡಿ" ಎನ್ನುವ ಪ್ರಶ್ನೆಗೆ ತಿಮ್ಮನ ಉತ್ತರ ಕಟ್ಟಿಟ್ಟದ್ದು. ದಿನಗಳು ಕಳೆದುವು, ತಿಂಗಳು ಕಳೆದುವು, ಗಾಡಿ ಬರಲಿಲ್ಲ; 'ನಾಳೆ' ತಪ್ಪಲಿಲ್ಲ.

* * *

ಇಂದು ಹೊಸ ಪಟ್ಟೇವಾಲನು ಕೆಲಸಕ್ಕೆ ಬಂದುದನ್ನು ಕಂಡು ಬಾಯಿಯವರಿಗೆ ಆಶ್ಚರ್ಯವಾಯಿತು. "ಏನೋ, ತಿಮ್ಮ ಯಾಕೆ ಬರಲಿಲ್ಲ?" ಎಂದು ಕೇಳಿದರು.

"ರಜೆ ತೆಕ್ಕೊಂಡಿದ್ದಾನೆ ಬಾಯಿಸಾಹೇಬ್!"

"ಯಾಕೋ?"

"ಅವನ ಮಗುವಿಗೆ ವಿಷಮಜ್ವರವಂತೆ!"

"ಅವನಿಗೆ ಮಗುವಿತ್ತೇನು?" ಬಹುಶಃ ಬಡವರಿಗೆ ಮಕ್ಕಳ ಸುಖ ಸಿಕ್ಕುವುದೂ ಆಶ್ಚರ್ಯವಿರಬಹುದು.

"ಹೂಂ!"

"ಎಷ್ಟು ದೊಡ್ಡವನು?"

"ಸಣ್ಣರಾಯರ ಓರಗೆಯವನ್ರೀ!"

"ಅಂ! ಹಂ!" ಎನ್ನುತ್ತ ಬಾಯಿಯವರು ತಮ್ಮ ಕೆಲಸಕ್ಕೆ ಹೋದರು.

ಸುಬ್ಬುವಿಗೆ ಬಂದ ಜ್ವರ ಇಳಿಯಲಿಲ್ಲ. ಡಾಕ್ಟರು ವಿಷಮಜ್ವರವೆಂದಾಗ, ತಂದೆ ತಾಯಿಗಳು ಕುಸಿದುಬಿದ್ದರು. ತಿಮ್ಮನು ಹಗಲಿರುಳೂ ಸುಬ್ಬುವಿನ ಬಳಿಯಲ್ಲಿ. ಸುಬ್ಬು ಎಲ್ಲಿಯಾದರೂ ಕಣ್ಣು ತೆರೆದರೆ "ಅಪ್ಪಾ, ಗಾಡಿ ಬಂತು?" ಎನ್ನುವನು. ತಿಮ್ಮ

ಡೋಂಗರೆ ಬಾಲಾಮೃತವು
ಮಕ್ಕಳಿಗೆ
ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ.

ಶಿಕ್ಷಕ ಮಿತ್ರ

ಸಂಪಾದಕರು: ಜೋಶಿ ಅರವಿಂದರಾಯರು ಬಿ.ಎ., ಬಿ.ಟಿ.

ಶಿಕ್ಷಣದ ಬಗೆಗೆ ಉಪಯುಕ್ತ ಲೇಖನಗಳುಳ್ಳ, ಪ್ರಾಥಮಿಕ ಶಿಕ್ಷಕರ ಸುಖ-ದುಃಖದ ವಿಷಯವಾಗಿ ವಿಚಾರಿಸುವ ಅತ್ಯುತ್ತಮ ಮಾಸಪತ್ರಿಕೆ.

ವಾರ್ಷಿಕ ಚಂದಾ: ೨-೮-೦

'ಶಿಕ್ಷಕ ಮಿತ್ರ' ಕಾರ್ಯಾಲಯ,

ಫುಲಬಾಗಗಲ್ಲಿ, ಬೆಳಗಾಂವಿ.

"ತಂದೇನೆ ಮಗು! ವಾಸಿಯಾಗು. ನಿನ್ನನ್ನು ಕೂಡ್ರಿಸಿ ಒಯ್ಯುತ್ತೇನೆ" ಎನ್ನುತ್ತ ಎರಡು ತೊಟ್ಟು ಕಣ್ಣೀರನ್ನು ಸುರಿಸುತ್ತಿದ್ದನು. ಆವನ ಹತ್ತಿರ ಕುಳಿತಾಗ ಇವೇ ಬಡತನದ ವಿಚಾರಗಳು ಬರುತ್ತಿದ್ದುವು: "ತಾನು ಬಡವನಿದ್ದುದರಿಂದಲೇ ಗಾಡಿಯಲ್ಲಿ ಕೂಡ್ರಿಸಲಾರೆ! ಹೊಟ್ಟೆಗೆ ಹಿಟ್ಟು ತಿಂದಾದರೂ ಗಾಡಿ ತರಬಹುದಾಗಿತ್ತು; ಆದರೆ ಇದು ಬಡವರ ಕೆಲಸವಲ್ಲ- ಒಬ್ಬ ಪಟ್ಟೇವಾಲ, ಹನ್ನೆರಡು ರೂಪಾಯಿಯ ಆಳು, ಮಗುವಿಗಾಗಿ ಸೈಕಲ್‌ಗಾಡಿ ತರುವುದೇ? ಜಗತ್ತಿನ ಕಲ್ಪನೆಯು ಹೊರಗಿನ ಮಾತು! ಯಾರೂ ಸಹಿಸುವಂತಿರಲಿಲ್ಲ. ಹಾಗಾದರೆ ಸೂರ್ಯನು ಪಶ್ಚಿಮಕ್ಕೆ ಮೂಡಿದನೆಂದೇ ಹೇಳಬೇಕು. ಕಲಿಯುಗವು ಶಿಖರಕ್ಕೇರಿತೆಂದೇ ತಿಳಿಯಬೇಕು. ಇದು ಬಡವರಿಗಾಗಿಯಲ್ಲ, ಆದರೆ, ಸುಬ್ಬು ಕನವರಿಸುತ್ತಾನಲ್ಲ? ಏನುಮಾಡಲಿ? ಇಲ್ಲ, ಬೇಕಾದ ಹಾಗೆ ಜಗತ್ತು ನಗಲಿ. ಒಮ್ಮೆ ಸುಬ್ಬು ವಾಸಿಯಾಗಲಿ, ಗಾಡಿ ತಂದೇ ಬಿಡುತ್ತೇನೆ! ನಾನಲ್ಲದಿದ್ದರೆ ದೇವಿಯೇ ಸ್ವಲ್ಪ ಅಷ್ಟಾಡಿಸಿ ತರುವಳು. ದೇವಾ, ಸುಬ್ಬುವನ್ನು ಗುಣಮಾಡು!" ಹೀಗೆ ಅನೇಕ ಬಗೆಯಿಂದ ವಿಚಾರಿಸುತ್ತ ರಾತ್ರಿಯೆಲ್ಲ ಜಾಗರಣೆಯಾಗಿದ್ದರಿಂದ, ಸ್ವಲ್ಪ ಝಂಪು ಹಿಡಿದಂತಾಗುತ್ತಿತ್ತು. ಅಲ್ಲಿಯೂ ಅದೇ ಸ್ವಪ್ನ: ಸುಬ್ಬು ಸೈಕಲ್ ಗಾಡಿಯಲ್ಲಿ ಕುಳಿತಿದ್ದಾನೆ. ಒಬ್ಬ ಹುಡುಗ ದೂಡುತ್ತಾನೆ. ಸುಬ್ಬು "ಅಪ್ಪಾ ನೋಡು" ಎನ್ನುತ್ತಾನೆ. ಎಷ್ಟು ಆನಂದ! ಅಷ್ಟರಲ್ಲಿ "ಅಪ್ಪಾ ಗಾಡಿ" ಎಂಬ ಸುಬ್ಬುವಿನ ದನಿ ತಿಮ್ಮನನ್ನು ಎಚ್ಚರಿಸುತ್ತಿತ್ತು. ಸ್ವಪ್ನವೂ ಬಯಲು. "ಮಗು, ಈಗ ತಂದಿದ್ದೇನೆ" ಎಂದು ಚಪ್ಪರಿಸಿ ಮಲಗಿಸುತ್ತಿದ್ದನು ತಿಮ್ಮ.

ದಿನ ಕಳೆದಂತೆ ಹರಕೆಪಡೆಯದ ದೇವರುಳಿಯಲಿಲ್ಲ. ಅಷ್ಟು ಹರಕೆಗಳನ್ನು ತಮ್ಮ ಇಡೀ ಆಯುಷ್ಯದಲ್ಲಿ ತೀರಿಸುವುದು ಶಕ್ಯವಿರಲಿಲ್ಲ; ಆದರೆ ಮಗುವಿನ ಜೀವ! ಇಷ್ಟಾದರೂ ಡಾಕ್ಟರರ ಔಷಧಕ್ಕೆ ಗುಣಬರಲಿಲ್ಲ. ಹರಕೆ ಪಡೆದ ದೇವರಿಗೆ ಕರುಣೆ ಬರಲಿಲ್ಲ. ಒಂದು ರಾತ್ರಿ ಸುಬ್ಬುವಿನ "ಯಪ್ಪಾ ಗಾಡಿ" ತೆರಪಿಲ್ಲದೇ ನಡೆಯಿತು. ಕೊನೆಗೂ ಸುಬ್ಬು ನಿರಾಶನಾಗಿ, ಸಿಟ್ಟುಗೊಂಡು ಹೋದವನು ಹೋಗಿಯೇ ಬಿಟ್ಟನು; ತಿರುಗಿ ಬರಲೇ ಇಲ್ಲ. ಆದರೆ ತಿಮ್ಮ ಸಾವರಿಸಿಕೊಳ್ಳಬೇಕಾದರೆ ಒಂದು ತಿಂಗಳು ಹಿಡಿಯಿತು. ದೇವಿ ಯಾವಾಗ ಸಾವರಿಸಿಕೊಳ್ಳುವಳು? ಮಗುವನ್ನು ಕಳಕೊಂಡ ತಾಯಿಯನ್ನೇ ಕೇಳಬೇಕು.

(೬)

ತಿಮ್ಮನಿಂದು ಕೆಲಸಕ್ಕೆ ಬಂದಿದ್ದನು. ಚಿಕ್ಕರಾಯರು ನೋಡಿದವರೇ "ಚಿಮ್ಮಾ, ಚಿಮ್ಮಾ" ಎಂದು ಓಡಿ ಅಪ್ಪಿಕೊಂಡೇಬಿಟ್ಟರು. ಅವರಿಗೆ ಕಳೆದುಕೊಂಡ ರತ್ನ ಸಿಕ್ಕಿತು. ಆದರೆ ತಿಮ್ಮ! 'ಬನ್ರಿ ನನ್ನ ರಾಯರೇ' ಎಂದು ಎತ್ತಿ ಮುದ್ದಿಟ್ಟನು— ಎಂದೂ ಮುದ್ದಿಡದವನು. "ಚಿಮ್ಮಾ, ಇದು ನೋಡು ಫಟಾಕಿಸರ" ಎಂದು ರಾಯರು, ತನ್ನ ಫಟಾಕಿ ಪೆಟ್ಟಿಗೆಯನ್ನು ತೋರಿಸಿದರು. ಅವರು ಹೊಡೆಯುವಂತಿರಲಿಲ್ಲ, ರಾಯರ ಮಕ್ಕಳು! ಬಹಳ ಹೆದರಿಕೆ. "ಚಿಮ್ಮಾ ಹೊಡಿಯೋ ಊದಬತ್ತಿ ತತ್ತೀನೆ" ಎಂದು ಓಟಹೋದವರು, ಊದಬತ್ತಿ ಹಚ್ಚಿ ತಂದೇಬಿಟ್ಟರು. ತಿಮ್ಮ ಫಟಾಕಿ ಹಚ್ಚುತ್ತಿದ್ದ. ಅವು 'ಫಟ ಫಟ' ಆಗುತ್ತಿದ್ದುವು. ರಾಯರು ಕುಣಿಯುತ್ತಿದ್ದರು. ದೂರ ನಿಂತರೂ ಅವರ ಆನಂದಕ್ಕೆ ಮೇರೆ ಇಲ್ಲ. ಫಟಾಕಿ ಫಟಫಟ! ಮೇಲಾಗಿ ತನ್ನ 'ಚಿಮ್ಮು' ಹೊಡೆಯುತ್ತಾನೆ.

ತಿಮ್ಮ! ಫಟಾಕಿ ಹೊಡೆಯುತ್ತಿದ್ದ! ಛೇ, ಅವನು ತಿಮ್ಮನಲ್ಲ, ಅವನ ನೆರಳು! ತಿಮ್ಮನು ಸುಬ್ಬುವಿನ ಕೂಡ ಫಟಾಕಿ ಹೊಡೆಯುತ್ತಿದ್ದ.

ಕೆಲಸಕ್ಕೆ ಬಂದ ಮೇಲೆ ಎಲ್ಲವನ್ನೂ ಮಾಡಬೇಕು. ಸಾಯಂಕಾಲವಾಗುತ್ತಲೇ ರಾಯರ ಸ್ವಾರಿ ಮತ್ತೆ ಗಾಡಿಯ ಮೇಲೆ ಹೋಗಲೆಬೇಕು. ಅದೂ ಕೂಡ ತಿಮ್ಮನ ಗುಡಿಸಿಲಿನ ಎದುರಿನಿಂದಲೇ ಹಾಯಬೇಕು. ಮಾಡದಿದ್ದರೆ ಕೇಳುವವರಾರು? ಆಳು! ಅದರಲ್ಲಿಯೂ ಪಟ್ಟೇವಾಲ!! ಅವನು ತಂದೆಯಲ್ಲ, ಮನುಷ್ಯನೂ ಅಲ್ಲ, ಭಾವನೆಗೆ ನೌಕರಿಯಲ್ಲಿ ಇಂಬಿಲ್ಲ.

ನಾಲ್ಕು ಗಂಟೆಗೆ ಸರಿಯಾಗಿ ತಿಮ್ಮನು ಸೈಕಲ್ ಗಾಡಿಯನ್ನು ತಂದನು. ಚಿಕ್ಕ ರಾಯರು ಕುಳಿತರು. ಗಾಡಿ ಸಾಗಿತು, ತಿಮ್ಮನೂ ಸಾಗಿದನು. ಹೌದು, ನಿಜವಾಗಿಯೂ ಸಾಗಿದೆ ಆ ಗಾಡಿ. ನೋಡಿ ಅದೋ, ಅಲ್ಲಿ ಒಯ್ಯುತ್ತಾನೆ. ಆ ಗುಡಿಸಿಲಿನ ಎದುರಿಗೆ ನೋಡಿ, ಕಾಣಿಸುವುದಿಲ್ಲವೇ? 'ಮನೆಯ ಮುಂದುಗಡೆಯಿಂದ ಗಾಡಿ ಒಯ್ಯಬೇಕಾದರೆ ಎದೆ ಝಲ್ಲೆನ್ನಲಿಲ್ಲವೇ' ಎಂದು ಕೇಳುತ್ತೀರಾ? ಅದು ತಿಮ್ಮನ ವಿಷಯ, ನಮಗೇನೂ ಗೊತ್ತು ಇಲ್ಲ. ಹೇಗೆ ಗಾಡಿ ಒಯ್ದನೆಂದು ಕೇಳಿದರೆ ಮಾತ್ರ ಹೇಳಬಲ್ಲೆವು, "ಹೀಗೇ ಒಯ್ದನು" ಎಂದು.

ಹಾರೆ-ಗೋಲು

(ವಿಷಮ ದಾಂಪತ್ಯದ ವಿಷಪರಿಣಾಮ)*

ಕುಮಾರಿ ದೇವಾಂಗನಾ ಶಾಸ್ತ್ರಿ, ಗೋಕರ್ಣ

"ಹುಡುಗಿ ಲಗ್ನವಾಗಿ ತುಳಸೀಗಿಡಕ್ಕೆ ನೀರೆರೆಯುವುದಷ್ಟೇ! ಇನ್ನಾವ ಕೆಲಸ? ಮೇಲಾಗಿ ಕೇಳಿದರೆ, ನನ್ನ ಮೊಮ್ಮಗಳ ಮೇಲೆ ನನ್ನ ಅಧಿಕಾರವೂ ಇಲ್ಲ."

ನನ್ನ ಮುಂಕಾಳತ್ತೆ ಹಾಗೆ ಹೇಳುವುದಕ್ಕೆ ಮೊದಲು, ರಾಮಾವಧಾನಿಗಳು ತಮ್ಮ ಹಿರಿಯಮಗನಿಗಾಗಿಯೇ ವಧೂಶೋಧನೆ ನಡೆಯಿಸಿದ್ದರೆಂದು ನಮ್ಮೆಲ್ಲರ ಎಣಿಕೆಯಾಗಿದ್ದಿತು. ಆದರೆ ಆಗ ಅವರಿಗೇ ಹೆಣ್ಣು ಬೇಕಾಗಿದ್ದಿತೆಂಬುದು ಸ್ಪಷ್ಟವಾದುದು, ಅವರೇ ಮುಂಕಾಳತ್ತೆಯೊಡನೆ ಹಾಗೆ ಪ್ರಸ್ತಾಪಿಸಿದಾಗ. ಅತ್ತೆಯ ಮಾತು ಅವರ ಕಿವಿಗೆ ಬಿದ್ದಮೇಲಂತೂ ಮದುವೆಯಾಗಬೇಕೆನ್ನುವ ಅವರ ನಿರ್ಧಾರ ಇನ್ನಷ್ಟು ಬಲವಾಗಿಬಿಟ್ಟಿತು. ಈರ್ಷೆಯ ಅರ್ಕ ತೆಗೆದಿಟ್ಟಂತಿದ್ದ ಆ ಬ್ರಾಹ್ಮಣ ತುಂಬಾ ರೇಗಿಕೊಂಡು, ಅದೇ ಆವೇಶದಲ್ಲಿ "ಮನೆಯ ನೆಲಗಟ್ಟನ್ನು ಮಾರಿಯಾದರೂ ಮದುವೆ ಮಾಡಿಕೊಂಡೇ ತೀರುತ್ತೇನೆ," ಎಂದು ದೃಢಶಪಥ ಹಾಕಿಯೆ ಬಿಟ್ಟರು. ಅಂತೆಯೇ ಇಪ್ಪತ್ತೆರಡು ವರುಷದ ಮಗನನ್ನು ಬಿಟ್ಟು, ತಮ್ಮ ಮದುವೆಗೆ ಏರ್ಪಾಡನ್ನು ನಡೆಯಿಸಿದರು ಅವಧಾನಿಗಳು. ಹೆಚ್ಚು ವಿಚಾರಿಸುವ ವಿವೇಕ-ಅವಧಾನಗಳಿರದೆ, ಅವರ ಅಹಂಕಾರದ ಅಟ್ಟಹಾಸದಲ್ಲಿ, ಆ ಜೀವನದ ಸಂಜೆಯಲ್ಲಿ ಮದುವೆಯ ಯಾಗ ಹೂಡಿ, ಒಂದು ಹೆಣ್ಣಿನ ಆಹುತಿ ತೆಗೆದುಕೊಳ್ಳುವುದೊಂದೇ ಅವರಿಗೆ ಕರ್ತವ್ಯವೆನಿಸಿತು.

ರಾಮಾವಧಾನಿಗಳು ನಮ್ಮೂರಿನ ದೇವೀಗುಡಿಯ ಅರ್ಚಕರು. ವಯಸ್ಸು ಅರುವತ್ತು ದಾಟಿದೆ. ತುಂಬ ಸಂಪಾದನೆಯಿದ್ದು ವೈದ್ಯ-ಜ್ಯೋತಿಷದಲ್ಲಿ ಅಪಾರ ಪಾಂಡಿತ್ಯವುಳ್ಳವರೆಂದು ಊರಲ್ಲಿ ಮನ್ನಣೆ ಪಡೆದವರು. ಅವರಿಗೆ ಮೊದಲನೆಯ ಹೆಂಡತಿಯ ಹೊಟ್ಟೆಯಲ್ಲಿ ಇಬ್ಬರು ಮಕ್ಕಳಿದ್ದಾರೆ. ಎರಡನೆಯ ಹೆಂಡತಿ ಏಳು ಮಕ್ಕಳನ್ನು ಹಡೆದು ಧನ್ಯಳಾಗಿದ್ದಾಳೆ. ಮೂರನೆಯವಳು ಹೆಚ್ಚು ಆಯುಷ್ಯ ತರಲಿಲ್ಲ. ಇದೀಗ ನಾಲ್ಕನೆಯ ಮದುವೆ.

ಮನೆಯಲ್ಲಿ ಮಕ್ಕಳ ಆರಯಿಕೆಗೆ ಗಟ್ಟಿಮುಟ್ಟಾದ ಬೇರೆ ಹೆಂಗುಸರಿಲ್ಲ. ಅವರಾದರೂ ಏನು ಮಾಡುತ್ತಾರೆ?

ಪ್ರತಿಜ್ಞೆ ಮಾಡಿದಂದಿನಿಂದ ಅವಧಾನಿಗಳು ಊರಲ್ಲಿರುವ ಹೆಣ್ಣುಮಕ್ಕಳ ಜಾತಕವೆಲ್ಲವನ್ನೂ ತಮ್ಮ ಮಗನ ಮದುವೆ ಮಾಡುವೆನೆಂಬ ನೆಪದಿಂದ ತರಿಸಿದರು. ಒಮ್ಮೊಮ್ಮೆ ಸತ್ಯವೆಂದು ತಿಳಿದದ್ದು ತಪ್ಪಾಗಿ ಗಾಳಿಯ ಸುದ್ದಿಯೇ ನಿಜವಾಗಿ ಬಿಡುವುದಿಲ್ಲವೇ? ಹಾಗೆಯೇ ಅವಧಾನಿಗಳು ಮದುವೆಯಾಗುವರೆಂಬ ಸಂಗತಿಯು ಬಗೆಗೂ ಹೇಳಬೇಕಾಗಿದೆ. ಈ ಸುದ್ದಿ ಕೇಳಿದಾಗ, ಅವಧಾನಿಗಳೊಡನೆ ಊರಲ್ಲಿ ಯಾರೂ ಮತ್ತೆ ಜಾತಕ ಕೇಳುವ ಪ್ರಸ್ತಾಪಕ್ಕೆ ಇಳಿಯಲಿಲ್ಲ. ಹತ್ತು ಖಂಡುಗದ ಹೊಲವನ್ನೂ ನಗದಿಯಾಗಿ ಒಂದು ಸಾವಿರ ರೂಪಾಯಿಗಳನ್ನೂ ಅವಧಾನಿಗಳು ಕೊಡುವುದಾಗಿ ಹೇಳಿದರೂ, ಹೆಣ್ಣು ಹೆತ್ತ ತಾಯಂದಿರು ಆ ದುರಾಶೆಗೆ ಮೋಸಹೋಗಲಿಲ್ಲ. ಇಷ್ಟು ಮಾತ್ರಕ್ಕೇ ನಿರ್ಧಾರ ಸ್ವಭಾವದವರಾದ ಅವಧಾನಿಗಳು ನಿರಾಶರಾಗುವರೇ? ತಮ್ಮ ಜಾತಕದಲ್ಲಿ ನಾಲ್ಕು ಮದುವೆಯ ಫಲವಿದೆಯೆಂದು ಅವರೇ ಕಂಡುಕೊಂಡಿದ್ದರು. ಎಂದ ಮೇಲೆ ಶಾಸ್ತ್ರವನ್ನೆಂದಾದರೂ ಸುಳ್ಳುಮಾಡಲಾದೀತೆ? ಆರು ತಿಂಗಳೊಳಗೆ ಅವಧಾನಿಗಳಿಗೆ ಹೆಣ್ಣು ಗೊತ್ತಾಗಿ ಹೋಯಿತು. ಅವರೊಡನೆ ತಾಳಿಕಟ್ಟಿಕೊಳ್ಳುವ ಭಾಗ್ಯ, ನೀರಹಳ್ಳಿಯ ಶಾಂಭಟ್ಟರ ಮಗಳದಾಯಿತು.

* * *

ನೀರಹಳ್ಳಿಯಲ್ಲಿ ನಮ್ಮ ಸಂಬಂಧಿಕರೊಬ್ಬರಿದ್ದಾರೆ. ಒಮ್ಮೆ ಉಪನಯನದ ಔತಣಕ್ಕೆಂದು ನಾನವರಲ್ಲಿಗೆ ಹೋಗಿದ್ದೆ. ಭುವನೇಶ್ವರಿಯನ್ನು ನಾನಾಗಲೇ ನೋಡಿದುದು. ಅವಳಿಗೆ ವಯಸ್ಸು ಹದನೇಳಕ್ಕೆ ಏರಿದ್ದರೂ, ಆ ಪ್ರಮಾಣಕ್ಕೆ ತಕ್ಕಷ್ಟು ಬೆಳವಣಿಗೆಯಿರಲಿಲ್ಲ. ಶ್ವೇತವರ್ಣವನ್ನು ಮೆಚ್ಚುವವರಿಗೆ ಅವಳು ಅಷ್ಟು ಸುರೂಪಿಯೂ ಆಗಿದ್ದಿಲ್ಲ. ನನ್ನನ್ನು ಆಕರ್ಷಿಸಿದುದು, ಕೂದಲನ್ನು ನುಣುಪಾಗಿ ಬಾಚಿಕೊಂಡು ಆಕೆ ಹಾಕಿಕೊಂಡಿದ್ದ ಒಂದು ಬಗೆಯ ಗಂಟು. ನಗರದ ಅಂಚಿನಲ್ಲಿದ್ದ ನನಗೆ ಅವಳ ವಿಷಯದಲ್ಲಿ ಕುತೂಹಲ ಹುಟ್ಟಿದುದು ಅದರಿಂದಾಗಿಯೆ. ಕೂಡಿದ ಹೆಂಗುಸರಲ್ಲಿ ಪುರೋಹಿತರ ಮಗ ಮಾಧವನ ಪ್ರಶಂಸೆ ಹೊರಟಿತ್ತು. ಯಾರೋ ಹಿರಿಯ ಹೆಂಗುಸು ಹೇಳುತ್ತಿದ್ದಳು:

"ನಮ್ಮ ಮಾಧವ ಇಪ್ಪತ್ತು ವರುಷ ಹರಯದಲ್ಲಿಯೇ ಎಷ್ಟು ಜ್ಞಾನ ದೊರಕಿಸಿದ್ದಾನೆ! ಮದುವೆ, ಮುಂಜಿ ಏನೇಬರಲಿ, ತಂದೆಯ ಸಹಾಯವಿಲ್ಲದೆ ಈಗ ಆತ ಎಲ್ಲ ಮಾಡಿಸುತ್ತಾನೆ. ಜ್ಯೋತಿಷ ಕೂಡ ಬಲ್ಲ. ಈ ಹಳ್ಳಿಯ ಮಾತಿರಲಿ; ದೊಡ್ಡ ಪಾಠಶಾಲೆಗಳಿದ್ದ ಊರಲ್ಲಿ ಸಹ ಇಂಥ ವಿದ್ಯಾವಂತರು ಅಪರೂಪ ನೋಡಿ!"

ಅಂಗಳದಲ್ಲಿ ಮಂಡಲ ಬರೆಯುತ್ತಿದ್ದ ಮಾಧವನ ಮೋರೆ ಹಿಗ್ಗಿ ಅಗಲವಾಯಿತು. ಆದರೇಕೋ, ಭುವನೇಶ್ವರಿಗೆ ಆ ಪ್ರಶಂಸೆಯು ಹಿಡಿಸಲಿಲ್ಲ.

* ಒಟ್ಟು ಮೇಲಾಟದ ಕತೆಗಳಲ್ಲಿ ೫ ನೆಯ ಕ್ರಮಾಂಕ ಪಡೆದ ಒಳ್ಳೆಯ ಕತೆಯಿದು. ಸಂ. ಜ.

"ಹೋ! ಹೋ! ತುಂಬ ಬುದ್ಧಿವಂತಿಕೆಯಿದೆ ಬಿಡಿ! ನನ್ನ ಕಿರಿಯ ತಂಗಿ ಗೌರಿ, ಇವಳಷ್ಟೇ ಚೆನ್ನಾಗಿ ಬಾಗಿಲಿಗೆ ಸೇಡಿ ಇರಿಸಬಲ್ಲಳು. ಇವೇನೂ ಹೆಚ್ಚಲ್ಲ!"

"ಯಾರು ಭೂಮಿಯೆ?" ಮಂಡಲದ ರೇಖೆಯನ್ನು ಎಳೆಯುವುದನ್ನು ನಿಲ್ಲಿಸಿ, ಕಣ್ಣು ಹೊರಳಿಸಿ ಕೇಳಿದ ಮಾಧವ. ಭುವನೇಶ್ವರಿಯು ಸುಮ್ಮನಿದ್ದಳು. ಮಾಧವ ಹಾಗೆಯೇ ಮಾತನ್ನು ಮುಂದುವರಿಸಿದ:

"ಏನು? ಬಾಗಿಲುಪಟ್ಟಿಗೆ ಯದ್ವಾತದ್ವಾ ಬಳಿಯುವ ರಂಗವಲ್ಲಿಗೂ ವಿಧಿಯುಕ್ತವಾದ ಮಂಡಲಲೇಖನಕ್ಕೂ ಹೋಲಿಕೆ ಬಂದುಬಿಟ್ಟಿತೇ ನಿನ್ನ ತಿಳಿವಳಿಕೆಯಲ್ಲಿ?"

ಆತನ ಪರಿಹಾಸಕ್ಕೆ ಭೂಮಿ ಸ್ವಲ್ಪವೂ ಅಳುಕಲಿಲ್ಲ. ಆಕೆ ನೋಟದಲ್ಲಿ ಅಣಕದ ಭಾವ ತಂದುಕೊಂಡು ಹೇಳಿದಳು:

"ಯಾಕೆ ಪುರೋಹಿತರೇ, ಬಾಗಿಲ ಸೇಡಿಯೆಂದು ಅಷ್ಟು ನಿಕೃಷ್ಟವಾಗಬೇಕೆ? ನಿಮ್ಮ ಮಂಡಲಪೂಜೆ ತರುವುದಕ್ಕೆ ನೂರು ಪಟ್ಟು ಹೆಚ್ಚಾಗಿ ಮನೆಗೆ ಮಂಗಲವನ್ನು ನಮ್ಮ ರಂಗವಲ್ಲಿ ತರಬಲ್ಲದೆಂಬುದು ಗೊತ್ತೆ?"

ಮಾಧವನ ಮೋರೆಯಲ್ಲೀಗ ಅಸಹನೆ ತೋರಿಬರುತ್ತಿತ್ತು. ಅವಮಾನದಿಂದ ಕುದಿಗೊಂಡವನಂತೆ ಅವನು ಹೇಳಿದ:

"ಸರಿ, ಮಾತು ಬಹಳ ಜೋರಾಗಿಯೇ ಆಡುವೆ; ಇನ್ನು ಮದುವೆಯೊಂದು ಪೂರಯಿಸಿದರೆ ದೊಡ್ಡ ಹೆಂಗುಸೇ ಆದಹಾಗೆ!"

ಮಾಧವನೀಗ ಮಾತನ್ನು ಬಿಟ್ಟು ತನ್ನ ಕೆಲಸಕ್ಕೆ ಆರಂಭಿಸಿಬಿಟ್ಟ, ಭುವನೇಶ್ವರಿಯೂ ಏನನ್ನೋ ಹೇಳಬೇಕೆಂದಿದ್ದವಳು ಹೇಳಲಾರದವಳ ಹಾಗೆ ಸುಮ್ಮನಾಗಿಬಿಟ್ಟಳು. ಈಗ ಮಾತ್ರ ಮೊದಲು ಮಾತನಾಡಿದ ಹೆಂಗುಸಿಗೆ ಅವಕಾಶ ಸಿಕ್ಕಿತು. ಆಕೆ ಪುರೋಹಿತರ ತಂಗಿ—ಎಂದರೆ ಮಾಧವನ ಅತ್ತೆಯೆಂಬುದು ನನಗೆ ಅನಂತರ ತಿಳಿಯಿತು.

"ಈ ಬಾರಿಯೆ ಆಗಿಹೋಗಲಿ; ನೀನೇ ಇವಳನ್ನು ಮದುವೆಯಾಗಿ ಬಿಡು ಮಾಧವ! ಈ ಸೊಕ್ಕಿನ ಹೆಣ್ಣು ಇನ್ನಾರಿಗೂ ಮಣಿಯಲಾರಳು!"

ಭುವನೇಶ್ವರಿಯು ತಲೆತಗ್ಗಿಸಿ ನಾಚಿದ ಧ್ವನಿಯಲ್ಲಿ ಹೇಳಿದಳು. ಅವಳಿಗೀಗ ಆ ಮಾತನ್ನು ಮರೆಯಿಸಬೇಕಾಗಿದ್ದಿತು.

"ಸಾಕು, ಅತ್ತೆ, ನಿನ್ನ ಹರಟೆ ಹಾಗಿರಲಿ; ಒಳ್ಳೆಯ ಹಾಡೇನಾದರೂ ಬಂದರೆ ಹೇಳು!"

ಅವಳ ನಿರೀಕ್ಷಣೆ ತಪ್ಪಾಗಲಿಲ್ಲ; ಅಲ್ಲಿಂದ ಮಾತಿನ ಓಟ ಬೇರೆ ದಾರಿಯನ್ನೇ ಹಿಡಿಯಿತು.

* * *

ಭುವನೇಶ್ವರಿಯು ಶಾಂಭಟ್ಟನ ಹಿರಿಯ ಮಗಳು. ಅವನಿಗೆ ಹುಟ್ಟಿದುವೆಲ್ಲ ಹೆಣ್ಣೇ. ಆ ಮಗಳಲ್ಲದೆ ಇನ್ನೂ ಮೂರು ಮಂದಿ ಹೆಣ್ಣುಮಕ್ಕಳ ಮದುವೆಯನ್ನು ಆತ ಸಕಾಲದಲ್ಲಿ ಮಾಡಬೇಕಾಗಿದೆ. ಶಾಂಭಟ್ಟ ಹುಟ್ಟು ದರಿದ್ರ. ಹಳ್ಳಿಯ ಒಕ್ಕಲಿಗರಿಗೆ ನೋಟಹಾಕಿ, ಇಲ್ಲದ ದೈವ ಚಿಕಿತ್ಸೆಮಾಡಿ ಆತ ಜೀವನ ಸಾಗಿಸಬೇಕು. ಹೆಂಡತಿ ತೀರಿ ಹೋಗಿ ಅಂದಿಗೆ ಮೂರು ವರ್ಷ ಸಂದುಹೋಗಿವೆ. ಮನೆಗೆಲಸ, ತಂಗಿಯರ ರಕ್ಷಣೆ, ಅಪ್ಪನ ಆರಯಿಕೆ ಇವೆಲ್ಲವನ್ನೂ ಭುವನೇಶ್ವರಿಯೇ ನೋಡಿಕೊಳ್ಳುತ್ತಾಳೆ. ದುರ್ದೈವಕ್ಕೆ ದಾರಿದ್ರ್ಯದೊಡನೆ ವಿವಿಧ ಬೇನೆಗಳೂ ಶಾಂಭಟ್ಟನನ್ನು ಈಗಿತ್ತ ಹಣ್ಣು ಮಾಡಿವೆ. ಹೊರಗಿನಿಂದ ದುಡಿದುತರುವುದೂ ಕಷ್ಟಸಾಧ್ಯವಾಗಿತ್ತು.

ಮಿಕ್ಕೆಲ್ಲ ಹೆಣ್ಣುಮಕ್ಕಳ ತಂದೆಯಂತೆ "ಮಗಳನ್ನು ಒಳ್ಳೆಯವನಿಗೇ ಕೊಡಬೇಕು. ಅವಳ ಬಾಳು ಸುಖಮಯವಾಗಬೇಕು," ಎಂಬುದು ಶಾಂಭಟ್ಟನ ಹಿರಿಬಯಕೆಯಾಗಿದ್ದಿತು. ಬಡವರ ಮನೆಯ ಹೆಣ್ಣನ್ನು ಯಾರು ಮಾಡಿಕೊಂಡು ಹೋಗಬೇಕು? ಬಡವರೆಂದರೆ ಎಲ್ಲರಿಗೂ ಹಗುರು. ಅದೇ ಆಸ್ತಿ ಇಸ್ಟೇಟುಗಳನ್ನು ಕೊಟ್ಟು ಹೆಣ್ಣು ಕೊಡುವ ಹಾಗಿದ್ದರೆ, ವರನ ಕಡೆಯವರು ತಾವಾಗಿಯೇ ಎಡತಾಕುತ್ತಾರೆ. ಸಮಾಜದಲ್ಲಿ ಬಡತನಕ್ಕೆ ಸ್ಥಾನವೆಲ್ಲಿದೆ?

ಅಂದಿನ ಮಾಧವ-ಭುವನೇಶ್ವರಿಯರ ಆ ವ್ಯಂಗ್ಯೋಕ್ತಿ, ಒಬ್ಬರನ್ನೊಬ್ಬರು ಕದ್ದುನೋಡುವ ಒಲವಿನ ಅವರ ಭಂಗಿ ಇದೆಲ್ಲ ನೋಡಿ ನಾನು ಮನದಲ್ಲಿಯೇ 'ಈ ಜೋಡಿಯನ್ನು ದೇವರು ಕೂಡಿಸಿದರೆ ಎಷ್ಟು ಚೆನ್ನಾದೀತು?' ಎಂದುಕೊಂಡಿದ್ದೆ. ಮಾಡುವುದೇನು? ಪುರೋಹಿತರು (ಮಾಧವನ ತಂದೆ) "ಹುಡುಗಿಗೆ ಐದುನೂರು ರೂಪಾಯಿಗಳ ಭಂಗಾರ ಹಾಕಿಕೊಟ್ಟರೆ ನೋಡೋಣ," ಎಂದರಂತೆ. ಮಾಧವನೂ ತಂದೆಯ ಮಾತಿಗೆ ಹೂಂ ಗುಟ್ಟಿದನಂತೆ.

ಶಾಂಭಟ್ಟನು ಇನ್ನೂ ನಾಲ್ಕೂಕಡೆಗೆ ಪ್ರಯತ್ನ ಮಾಡದಿರಲಿಲ್ಲ. ಆಗಲೂ ಪ್ರಯೋಜನವಾಗದಿರಲು ಮಾತ್ರ ಆತ ತೀರ ನಿರಾಶನಾದ. ಅವನ ದಾರಿದ್ರ್ಯ ಮಗಳ ಮೇಲಿನ ವಾತ್ಸಲ್ಯವನ್ನಡುಗಿಸಿ, ದುಗುಡವನ್ನು ಬೆಳೆಯಿಸಿತು. "ಈ ಅರಿಷ್ಟ ಎಲ್ಲಿಯಾದರೂ ತೊಲಗಿ ಹೋದರೆ ಸಾಕು!" ಎನ್ನುವಷ್ಟರಮಟ್ಟಿಗೆ ರೋಸಿಹೋಗುವಂತಾಗಿಸಿತು.

ರಾಮಾವಧಾನಿಗಳಿಗೆ ಶಾಂಭಟ್ಟನ ವಿಚಾರ ಹೇಗೆ ತಿಳಿಯಿತೊ!? ಅವರು ಮುಖತಃ ಮಾತನಾಡುವುದಕ್ಕೆ ಭಟ್ಟನನ್ನು ಮನೆಗೆ ಕರೆಯಿಸಿಕೊಂಡರು. ಮೊದಲೇ ಜಾಹೀರುಪಡಿಸಿದಂತೆ ಹತ್ತು ಖಂಡುಗದ ಆಸ್ತಿಯನ್ನೂ, ಸಾವಿರಾರು ರೂಪಾಯಿಗಳ ಒಡವೆಗಳನ್ನೂ ಖಂಡಿತ ಕೊಡುತ್ತೇನೆಂದು ಅವಧಾನಿಗಳು ಹೇಳಿದ ಮೇಲೆ, ಶಾಂಭಟ್ಟ ಮಗಳನ್ನು ಕೊಡುವುದಕ್ಕೆ ಒಪ್ಪಿದ. ಬರಲಿರುವ ಕಾಲದ—ಮಗಳ—ಶ್ರೀಮಂತಿಕೆಯನ್ನು ನೆನೆಯುವಾಗ, ಆನಂದವಾದಂತೆನಿಸಿತು ಅವನಿಗೆ. ಅಂತೂ ಮಾತೆಲ್ಲ ಮುಗಿದು ಅವನು ಹೊರಡುವ ಮೊದಲು, ಏನೇನನ್ನೋ ನೆನಪಿಗೆ ತಂದುಕೊಂಡಂತೆ ಮಾಡಿ ಹೇಳಿದ:

"ನೋಡಿ ಅವಧಾನಿಗಳೆ, ನನ್ನ ಹತ್ತಿರ ಕಾಸಿಲ್ಲ. ಸದ್ಯದ ಮಟ್ಟಿಗೆ ಖರ್ಚಿಗೆ ಏನಾದರೂ...."

"ಛೇ, ನೀವು ಆ ಬಗ್ಗೆ ಕಾಳಜಿ ಮಾಡಬೇಡಿ. ಎಲ್ಲ ನಾನೇ ನೋಡಿಕೊಳ್ಳುತ್ತೇನೆ. ಹೆಣ್ಣಿನ ಮನೆಯ ಬಗೆಗೂ ಬಿಡಾರದ

ವ್ಯವಸ್ಥೆ ಇಲ್ಲಿಯೇ ಆಗುವುದು!" ಥಟ್ಟನೆ ಉತ್ತರವಿತ್ತರು ಅವಧಾನಿಗಳು.

"ಹಾಗಾದರೆ ಹೋಗಿ ಬರುತ್ತೇನೆ." ಶಾಂಭಟ್ಟನೀಗ ಹೊರಟು ನಿಂತಿದ್ದ. ಅವಧಾನಿಗಳು ಹತ್ತಿರಬಂದು, ಭಟ್ಟನ ಕಿವಿಯ ಸಮೀಪಕ್ಕೆ ಬಾಯಿ ಒಯ್ದು ಕೇಳಿದರು :

"ತಮ್ಮ ಮಗಳನ್ನು ಕೇಳುವುದಿದೆಯೇ ಮತ್ತೆ ?"

"ಛೇ, ಅಗತ್ಯವಿಲ್ಲ! ನೀವು ನನ್ನನ್ನು ಬಹುವಚನದಿಂದ ಕರೆಯುವುದೆಂದರೆ ನನಗೆ ನಾಚಿಕೆ. ಒಂದೆರಡು ವರ್ಷಕ್ಕಾದರೂ ನೀವು ನನಗಿಂತ ಹಿರಿಯರು; ಮೇಲಾಗಿ ದೊಡ್ಡಸ್ತಿಕೆಯುಳ್ಳವರು!"

"ಎಷ್ಟಾದರೂ ನೀವು ಮಾವನವರಲ್ಲವೇ ?" ಅವಧಾನಿಗಳು ದೇಶಾವರಿ ನಗೆ ನಗುತ್ತ ಶಾಂಭಟ್ಟನನ್ನು ಬೀಳ್ಕೊಟ್ಟರು. ಅಳಿಯನ ವಿಧೇಯತೆ, ಘನವಂತಿಕೆ, ಪಾಂಡಿತ್ಯವನ್ನು ನೆನೆಯುತ್ತ ಅವನು ಮನೆಯ ಹಾದಿ ಹಿಡಿದ.

(೩)

ಭುವನೇಶ್ವರಿಯು ಸಂಜೆಯ ಅಡುಗೆಯ ಸಿದ್ಧತೆ ಮಾಡುತ್ತಿದ್ದಾಳೆ. ಗೆಲವಿನಿಂದ ಕೂಡಿದ ಭಟ್ಟನು ನೇರವಾಗಿ ಒಳಗೆ ಬಂದ. ಮಗಳೊಡನೆ ಮದುವೆಯ ಪ್ರಸ್ತಾಪ ತೆಗೆಯಬೇಕೆಂದು ನೂರು ಸಾರೆ ಒಳಗೂ ಹೊರಗೂ ಸುತ್ತಾಡಿದ. ಆ ವಿಷಯ ತಿಳಿಸಲು ಮಾತೇ ಹೊಳೆಯದಂತಾಯಿತು ಆತನಿಗೆ.

ಊಟದ ವೇಳೆಯಲ್ಲಿ ಕಿರಿಯ ಮಗಳು ಅಂಗಿಯ ಸಲುವಾಗಿ ಹಟಮಾಡುತ್ತ ಕುಳಿತಿದ್ದಳು. ಇದೇ ತಕ್ಕ ಸಮಯವೆಂದುಕೊಂಡು ಶಾಂಭಟ್ಟ ಮಗುವನ್ನು ಸಂತಯಿಸಲು ಹೇಳಿದ :

"ಗೌರು, ಅಕ್ಕನ ಮದುವೆ ಆಗುತ್ತದೆ. ಆಗ ನಿನ್ನ ಭಾವ ಜರದಂಗಿ ತರುತ್ತಾನೆ. ಹಟಮಾಡಬೇಡ ಊಟಕ್ಕೇಳು!" ಈಗ ಮಾತ್ರ ಹುಡುಗಿಯ ಹಟವೆಲ್ಲ ಮಾಯವಾಗಿ, ಹರ್ಷ ಉಕ್ಕಿ ಕಣ್ಣೀರು ನಿಂತಿತು. ಮಗುವು ಊಟಕ್ಕೆ ಬಂದಳು. ಭುವನೇಶ್ವರಿಯೂ ಬಡಿಸಲು ಬಂದಳು.

"ಅಕ್ಕಾ, ಭಾವ ಜರದಂಗಿ ತರುತ್ತಾರೆ. ನಿನ್ನ ಮದುವೆಯಲ್ಲಿ!" ಹುಡುಗಿ ಹರ್ಷದಿಂದ ಕುಣಿದಾಡಿದಳು. ಶಾಂಭಟ್ಟನು ಗಾಂಭೀರ್ಯದಿಂದ ಈಗ ಮಾತಿಗೆ ಮೊದಲು ಮಾಡಿದ:

"ಹಾ, ಭೂಮಿ! ನಿನ್ನನ್ನು ಒಂದುಮಾತು ಕೇಳಬೇಕು. ನಾಳೆ ಎಂದರೆ ಬರುವ ಸೋಮವಾರ ಲಗ್ನ ನಿಶ್ಚಯವಾಗಿದೆ. ವರನಿಗೆ ವಯಸ್ಸು ನನಗಿಂತ ಒಂದೆರಡು ವರ್ಷ ಮಿಗಬಹುದೇನೊ! ಉಪಾಯವಿಲ್ಲ. ಗುಣಸಂಪನ್ನ, ಐಶ್ವರ್ಯವಂತೂ ನೋಡಲು ಎರಡು ಕಣ್ಣಲ್ಲಿ ಸಾಲದು. ನನ್ನ ಮೊಮ್ಮಕ್ಕಳು ಆಗರ್ಭ ಸಿರಿವಂತರೆಂದು ಹೆಮ್ಮೆಪಡುವುದಕ್ಕೆ ಅಡ್ಡಿಯೇನಿಲ್ಲ. ನಿನ್ನ ಅಭಿಪ್ರಾಯವೇನು ಹೇಳು ?"

"ಅಪ್ಪನಿಗಿಂತ ಎರಡುವರ್ಷ ಹಿರಿದು.............."

ಭುವನೇಶ್ವರಿಗೆ ಆಕಾಶವೇ ಕಳಚಿಕೊಂಡು ಬಿದ್ದಂತಾಯಿತು.

ಸ್ವಾವಲಂಬನ ದೀಪಾವಳಿ!



ಈ ನಡೆದ ಯುದ್ಧದ ಮೂಲಕ, ಪರದೇಶದಿಂದ ಬರುವ ಎಲ್ಲ ಒಡವೆಗಳು ಬರುವುದಿಲ್ಲ; ಎಂದಮೇಲೆ ನಾವು ನಮಗೆ ಬೇಕಿದ್ದ ಅರಿವೆ, ಸೌಂದರ್ಯಸಾಧನೆ, ಸುಗಂಧದ್ರವ್ಯ, ಮನರಂಜನೆಯ ಮದ್ದು, ಖಾದ್ಯಪದಾರ್ಥ ಇವೇ ಮೊದಲಾದುವುಗಳನ್ನು ನಾವೇ ಈಗ ತಯಾರಿಸುತ್ತಲಿದ್ದೇವೆ. ಮತ್ತು ಮುಂದೆಯೂ ಮಾಡುವೆವು. ಈ ಸ್ವಾವಲಂಬನದ ಆನಂದವು ಮಿಗಿಲಾದುದು. ಪ್ರತಿಯೊಂದು ★ ಕ್ಷೇತ್ರದಲ್ಲಿಯೂ ಸ್ವಾವಲಂಬಿಗಳಾಗುವ ಸಾಮರ್ಥ್ಯ ಮತ್ತು ಆತ್ಮವಿಶ್ವಾಸವನ್ನು ಗಳಿಸಿಕೊಂಡಿದ್ದೇವೆ.

ಆಯುರ್ವಿಮೆ ಕ್ಷೇತ್ರದಲ್ಲಿಯೂ ಭಾರತವು ಪರರನ್ನವಲಂಬಿಸಬೇಕಿಲ್ಲ!

ಹಿಂದೀ ವಿಮಾಕಂಪನಿಯವರು ಕೂಡ ಈ ಕ್ಷೇತ್ರದಲ್ಲಿ ಸಾಕಷ್ಟು ಯಶಸ್ಸನ್ನು ದೊರಕಿಸಿದ್ದಾರೆ.

'ಟ್ರಸ್ಟ್ ಆಫ್ ಇಂಡಿಯಾ'

ವಿಮಾ ಕಂಪನಿಯಲ್ಲಿ ವಿಮೆ ಇಳಿಸಿದವರಿಗೆ ಯಾವತರದ ಹೆಚ್ಚಿನ ಹಪ್ತೆಯನ್ನು ಹೇರದೆ, ವಿಮೆಯ ಸಂಪೂರ್ಣ ಸಂರಕ್ಷಣೆ (ಇವರಲ್ಲಿ ವಿಮಾನ ದಾಳಿಯಿಂದಾಗುವ ಅಪಾಯವಾಗುವವರನ್ನೂ ಒಳಗೊಂಡಿದೆ) ಮಾಡಲಾಗಿದೆ.

ತ್ರೈವಾರ್ಷಿಕ ಬೋನಸ್: ಸಾವಿರಕ್ಕೆ ರೂ. ೩೦, ೩೬.

ದಿ ಟ್ರಸ್ಟ್ ಆಫ್ ಇಂಡಿಯಾ

ವಿಮಾ ಕಂಪನಿ ಲಿಮಿಟೆಡ್, ಪುಣೆ ೨.

ಹಿಂದುಸ್ತಾನದ ಎಲ್ಲೆಡೆಯಲ್ಲಿಯೂ ಉಪಶಾಖೆಗಳೂ ಪ್ರಚಾರಕೇಂದ್ರಗಳೂ ಇವೆ.

ಹೊಸ ವರುಷ ತಮಗೆ ಸುಖಪ್ರದವಾಗಲಿ!

ಒಡನೆಯೆ ತನ್ನ ಸುಖದ ಆಶೆ ಕನಸುಗಳೆಲ್ಲ ಹುಡಿಗೂಡಿಹೋಗುವ ದಾರುಣಚಿತ್ರ ಅವಳ ಕಣ್ಣಮುಂದೆ ಕಟ್ಟಿ ನಿಂತಿತು.

ಎಲ್ಲ ತಮ್ಮಷ್ಟಕ್ಕೆ ನಿರ್ಧರಿಸಿಕೊಂಡು, ಮೇಲೆ ತೋರಿಕೆಗೆ ಮಕ್ಕಳ ಅಭಿಪ್ರಾಯ ಕೇಳುವ ಹಿರಿಯರಿಗೆ ಮಕ್ಕಳು ಹೇಳುವುದಾದರೂ ಏನು ? ಮದುವೆಯಂತಹ ಜೀವನ–ಮರಣಗಳ ಸಮಸ್ಯೆಗಳಲ್ಲಿಯೂ ಹೆಣ್ಣಿನ ನಿಜವಾದ ಅಭಿಮತಕ್ಕೆ ಕಾಸಿನ ಬೆಲೆಯಿದ್ದರಷ್ಟೆ ! ಆದರೂ ಭುವನೇಶ್ವರಿ ಸುಶಿಕ್ಷಿತೆಯಲ್ಲದಿದ್ದರೂ ಸುಸಂಸ್ಕೃತಳಾಗಿದ್ದಳು. ಅಂತೆಯೇ ತಂದೆಯ ಒಡಲ ಕಿಚ್ಚನ್ನು ಅರಿತಿದ್ದಳು. ತಾನೀಗ ಆತನಿಗೆ ಹೊರಲಾರದ ಭಾರವಾಗಿರುವುದಕ್ಕಿಂತ, ಅವನೆಂದಂತೆ ಹೇಗಾದರೂ ಲಗ್ನವಾಗಿ ಹೋಗುವುದೇ ಕರ್ತವ್ಯವೆಂದೆನಿಸಿತು. ಪುರೋಹಿತರ ಮಗ ಮಾಧವನ ಸಂಬಂಧ ತಪ್ಪಿಹೋದಾಗಿನಿಂದಲೂ, ಜೀವ ಭಾರವಾಗಿದ್ದ ಅವಳೀಗ ಹೆಚ್ಚಿನ ಆಲೋಚನೆ ಮಾಡದೆ, ಒಂದೇ ಉಸಿರಿಗೆ "ಹೂಂ" ಎಂದು ನಿರ್ಧಾರದ ಸ್ವರದಲ್ಲಿ ಹೇಳಿಯೆ ಬಿಟ್ಟಳು.

* * *

ಆ ದೊಂದು ಶುಭಮುಹೂರ್ತದಲ್ಲಿ, ರಾಮಾವಧಾನಿಗಳ ಮನೆಯ ಬಾಗಿಲಲ್ಲಿ ಬ್ಯಾಂಡಿನ ಸಪ್ಪಳ ಕೇಳಿಸಿತು. ಆ ವಯಸ್ಸಿನಲ್ಲಿ ಮದುವೆಯ ಬಗ್ಗೆ ನಾಚಿಕೆಪಡುವುದು ಹಾಗಿರಲಿ; ಇಲ್ಲದ ಆಡಂಬರ ಬೇರೆ ತೋರಿಸುತ್ತಿದ್ದಾರೆ ಅವಧಾನಿಗಳು. ಎಷ್ಟೆಂದರೂ ಪ್ರತಿಜ್ಞೆಯನ್ನು ಪೂರ್ತಿಗೈದ ಪ್ರತಾಪ ಅವರದು !

ಎಲ್ಲ ಸಂಭ್ರಮ ನೋಡಿಯೇ ಬರಬೇಕೆಂದು ನಾನೂ ಗೆಳತಿ ಶ್ಯಾಮಲೆಯೊಡನೆ ಅಲ್ಲಿಗೆ ಹೋಗಿದ್ದೆ. ಗಂಡಸರಲ್ಲಿ ಕಡಿಅಕ್ಕಿ ಕಂಡವಲ್ಲದೆ ತರುಣರಾರೂ ಇರಲಿಲ್ಲ. ಅವಧಾನಿಗಳ ಹಿರಿಯ ಮಗ, ಈ ಅನಾಚಾರದಲ್ಲಿ ಮನೆಬಿಟ್ಟು ದೇಶಾಂತರಕ್ಕೆ ಹೋಗಿದ್ದನಂತೆ. ನಡುವಯಸ್ಕರ ಪರಿಹಾಸಕ್ಕೆ ಹೆದರಿ ಅವನು ಹೋಗಿರಬೇಕು. ಇನ್ನೊಬ್ಬ ಏಳು ವರುಷದ ಹುಡುಗ, ನಮ್ಮನ್ನು ಕಂಡೊಡನೆಯೆ ಅಕ್ಷತೆಕೊಟ್ಟು "ಬನ್ನಿ, ಹನ್ನೆರಡು ಘಳಿಗೆಗೆ ಧಾರೆಮುಹೂರ್ತವಿದೆ. ಅಷ್ಟರ ತನಕ ಯಾರೂ ಎದ್ದು ಹೋಗಬೇಡಿ!" ಎಂದ. ಅಷ್ಟು ಸಣ್ಣಹುಡುಗನನ್ನು ಹೇಗೆ ತರಬೇತು ಮಾಡಿದ್ದಾರೆ ಅವಧಾನಿಗಳು !

ಮಾತಿನಲ್ಲಿ ವಿಚಕ್ಷಣತೆಯನ್ನು ಕಂಡುಕೊಳ್ಳಬೇಕಾದರೆ ನಮ್ಮ ಹೆಂಗುಸರಲ್ಲಿಯೆ ಸೇರಬೇಕು. ಅವಧಾನಿಗಳ ತಂಗಿ ದೇವಮ್ಮ ಹೇಳುತ್ತಿದ್ದಳು :

" ನಮ್ಮಣ್ಣನ ಹೆಂಡತಿಯನ್ನು ನೋಡಿದಿರೇನೆ ? "

"ಒಳ್ಳೇ ಸುಲಕ್ಷಣವಾಗಿದ್ದಾಳೆ ಹುಡುಗಿ. ದೇವಿಯ ಬಾಗಿಲು ಮನೆ. ಮುತ್ತೈದೆ ಹೆಂಗುಸರು ಎಷ್ಟಿದ್ದರೂ ಮನೆಗೆ ಬೇಕು. ವಯಸ್ಸು ಹೋದರೇನಾಯಿತು ಅವಧಾನಿಗಳಿಗೆ ! ಮನೆಯಲ್ಲಿ ಲಕ್ಷ್ಮಿ ಕಾಲು ಮುರಿದುಕೊಂಡು ಬಿದ್ದಿದ್ದಾಳೆ. ಹೇಗೂ ಮೈನೆರೆದ ಹೆಣ್ಣು ! ಒಂದು ಗಂಡು ಸಂತಾನವಾದರೆ ಆ ಭಾಗ್ಯ ಸಾಲದೇ ? "

ಎಲೆಅಡಿಕೆ ಮೆಲ್ಲುತ್ತ ಹಿರಿಯಳಾದ ಕಾವೇರಕ್ಕ ಈ ಮಾತನ್ನು ಹೇಳಿದಳು. ಬೇರೆ ಹೆಂಗುಸರಿಗೆ ಪ್ರಶ್ನೆ ತೆಗೆಯುವುದಕ್ಕೆ ಅವಕಾಶವೇ ಉಳಿಯಲಿಲ್ಲ.

" ನೋಡಿ ! ನಮ್ಮಣ್ಣನಿಗೆ, ಮದುವೆ ಬ್ಯಾಂಡಿನೊಡನೆ ವಿಜೃಂಭಣೆಯಿಂದ ಸಾಗಲೆಂಬ ಬಯಕೆ ! ಆಣೆ-ಪಾವಲಿ ದಕ್ಷಿಣೆ ಕೊಡಬೇಕೆಂದಿದ್ದಾನೆ. ಆ ಮಂಕಾಳಿ ಹೆಣ್ಣು ಕೊಡದಿದ್ದರೇನಾಯಿತು ! ಆಕೆ ತನ್ನಿಂದಲೇ ಚೆಳಗಾಗುವುದೆಂದುಕೊಂಡಿದ್ದಳೋ ! ಏನು ಮದುವೆಯಾಗಲಿಲ್ಲವೇ ಈಗ ?

ದೇವಮ್ಮ ಅಟ್ಟಹಾಸದಿಂದ ಹೇಳಿದಳು.

" ಈ ಸಡಗರ ಕಂಡ ಹಾಗೇ ಇದೆ. ಅವಧಾನಿಗಳಿಗೇನು ಧಾಡಿ; ಮತ್ತೆ ನಾಲ್ಕು ಹೆಣ್ಣು ತಂದುಕೊಟ್ಟರೂ ಮದುವೆಯಾಗುತ್ತಾರೆ. ಕೊಡುವವರಿಗೆ ಬುದ್ಧಿ ಬೇಕು ಅಷ್ಟೇ ! ನಾವಿನ್ನು ಮನೆಗೆ ಹೋಗೋಣ ! "

" ಗೆಳತಿ ನನ್ನ ಕಿವಿಯಲ್ಲಿ ಪಿಸುಗುಟ್ಟಿದಳು.

" ನಿಲ್ಲು, ವಧೂ-ವರರನ್ನು ನೋಡಿ ಹೋಗೋಣ ! " ಎಂದವಳೇ ನಾನು, ಶ್ಯಾಮಲೆಯ ಕೈಹಿಡಿದುಕೊಂಡು ಒಳಜಗುಲಿಗೆ ಹೋದೆ.

ಒಳಗಣ ಜಗುಲಿಯಲ್ಲಿ ಲಾಜಾಹೋಮವು ನಡೆಯುತ್ತಾ ಇತ್ತು. ಮದುಮಗಳ ತಂದೆ, ಉಪಾಧ್ಯಾಯರು, ವಧೂ-ವರರು, ಇವರ ಹೊರತಾಗಿ ಹೆಚ್ಚಿನ ಜನರಿದ್ದಿಲ್ಲ. ಮದುಮಗನಿಗೆ ಆಹುತಿ ಹಾಕಬೇಕಾದರೆ ಕೈ ನಡುಗುತ್ತಿತ್ತು. ಈ ಗೊಂದಲದಲ್ಲಿಯೇ ಎರಡು ವರುಷದ ಮಗುವೊಂದು "ಅಪ್ಪಾ, ಅಪ್ಪಾ," ಎನ್ನುತ್ತ ತೊಡೆಯ ಮೇಲೆ ಕೂತುಕೊಳ್ಳಲು ಹಾತೊರೆಯುತ್ತಿತ್ತು. ಅವನ್ನೆಲ್ಲ ನೋಡುತ್ತಿದ್ದ ಆ ವಧುವಿಗೆ ಅಸಹ್ಯ ವೇದನೆಯಾಗುತ್ತಿತ್ತು. ಆ ಮೋರೆ ಬತ್ತಿ ಬೆಂಡಾಗಿತ್ತು. ಮುಂದಿನ ಭವಿಷ್ಯ ನೆನೆದು ಕಂಬನಿಯನ್ನು ಹರಿಸುತ್ತಿದ್ದಳು ಆ ಪ್ರಾಣಿ. ನನಗೆ ಕಸಿವಿಸಿಯಾಯಿತು. ಶ್ಯಾಮಲೆ ಹೇಳಿದಳು :

"ಹೋಮದ ಹೊಗೆ ಸಹಿಸದೆ ಕಣ್ಣೀರು ಬರುತ್ತದೆ ಅಷ್ಟೇ ! "

ನನಗೆ ಇನ್ನೊಬ್ಬರ ಸುಖ-ದುಃಖಗಳಲ್ಲಿ ಸ್ವಲ್ಪಮಟ್ಟಿಗೆ ಅನುಭವವಿದ್ದುದರಿಂದ, ಹೃದಯದ ನೋವನ್ನರಿಯದವಳಂತೆ ಅವಳಾಡಿದ ಮಾತು ಕೇಳಿ, ತಡೆಯಲಾರದ ಸಿಟ್ಟು ಬಂತು. ಹಾಗೆಯೇ ಹೇಳಿದೆ:

" ನೀನೆನ್ನುವುದು ನಿಜವಿರಬಹುದು ; ಆದರೆ ಹೆಣ್ಣುಮಕ್ಕಳಿಗೆ ಹೊಗೆ ತಿನ್ನುವ ಅಭ್ಯಾಸ ಚೆನ್ನಾಗಿರುತ್ತದೆ. ಈ ಭುವನೇಶ್ವರಿಯಂತೂ ದಿನವೆಲ್ಲ ಹೊಗೆಯಲ್ಲಿಯೇ ಕಾಲಕ್ಷೇಪ ಮಾಡುತ್ತಿದ್ದವಳು. ನಮ್ಮ ಹಾಗೆ ಮಾಡಿಟ್ಟ ಅಡಿಗೆಯನ್ನು ಊಟ ಮಾಡುತ್ತಿದ್ದವಳಲ್ಲ. ಹೋಗಲಿ, ಈಗ ಕಣ್ಣೀರು ಬರುವುದಕ್ಕೆ ಕಾರಣ ಬೇಕೇನು ? ಹುಡುಕುವುದರಲ್ಲಿಯಾದರೂ ಅರ್ಥವೇನಿದೆ ಶ್ಯಾಮಲೆ ? ಇವಳದೂ ಆಶೆಪಡುವ ಹೆಣ್ಣುಹೃದಯವೆಂಬುದನ್ನಾದರೂ ಒಪ್ಪಿಕೊಳ್ಳುವುದಿಲ್ಲವೇ ? "

" ಹೌದು, ಆದರೆ ಇಚ್ಛೆ ಮಾಡಿದಂತೆ ಫಲಸಿಗಬೇಕಷ್ಟೇ ! "

" ಆ ಮಾತು ಬೇರೆ! ಒಳ್ಳೊಳ್ಳೆಯ ಆಶೆ ಮಾಡುವುದನ್ನೂ ಯಾರಿಂದ ಕೈಗಡ ತರಬೇಕಾಗಿಲ್ಲ!"

" ನೀನೆಂದಂತೆಯೆ ಆಗಲಿ, ಮಹಾರಾಯತಿ?" ಅಣಕವಿತ್ತು ಅವಳ ದನಿಯಲ್ಲಿ. ಆಮೇಲೆ ಶ್ಯಾಮಲೆ ನಾನು ಹೊರಬಂದೆವು. ಆಗ ಅಲ್ಲಿ ಯಾರೋ ಹೀಗೆಂದದ್ದು ಕೇಳಿಸಿತು: " ಅಣೆ-ಪಾವಲಿ ದಕ್ಷಿಣೆಯು ಅವಧಾನಿಗಳ ತಂಗಿಯ ಬಾಯಮಾತಿನಲ್ಲಿಯೆ; ಕೊನೆಗೆ ಕೊಟ್ಟದ್ದು ಬರೇ ಮೂರು ಕಾಸು!"

(೪)

ಅಂತೂ ಅವಧಾನಿಗಳು ಮದುವೆಯನ್ನು ಮಾಡಿಕೊಂಡು, ಕೃತಾರ್ಥರಾದರು. ಅವರ ಹಿರಿಯ ಮಗ ಮನೆಬಿಟ್ಟು ಹೋದ ವನು, ಅವಧಾನಿಗಳು ಬದುಕಿರುವಷ್ಟು ಕಾಲ ಮುಖ ಕಾಣಿಸಲೆ ಇಲ್ಲ. ದೇವಿಯ ಗುಡಿಯ ಪರಿಚಾರಿಕೆಗೆಂದು ತಮ್ಮ ಮಾವ ನನ್ನೇ ನಿಯಮಿಸಿಕೊಂಡರು ಅವರು. ಶಾಂಭಟ್ಟನ ಉಳಿದ ಹೆಣ್ಣುಮಕ್ಕಳೂ, ನೀರಹಳ್ಳಿಯನ್ನು ಬಿಟ್ಟು ತಂದೆಯೊಡನೆಯೆ ಇರಹತ್ತಿದರು. ಅಂತಹ ಕೆಲಸಮಾಡಿ ಊರಿಗೆ ಮುಖ ತೋರಿಸು ವುದಾದರೂ ಹೇಗೆ?

ಭುವನೇಶ್ವರಿ ಬದಲಾಯಿಸಿದ್ದಾಳೆ. ಮದುವೆಯ ಮೊದಲಿನ ಅಣಕು-ಅಟ್ಟಹಾಸಗಳೊಂದನ್ನೂ ಕೇಳಬಾರದು. ಗಂಭೀರವಾದ ಆ ಮೋರೆಯಲ್ಲಿ ಪ್ರಪಂಚದ ಬಗ್ಗೆ ಅದೊಂದು ವಿಧವಾದ ಜುಗುಪ್ಸೆಯ ಮುದ್ರೆ ಒತ್ತಿದಂತಿದ್ದಿತು. ತರುಣರನ್ನು ಕಂಡರಂತೂ ಆಕೆ ಉರಿದೇ ಬೀಳುತ್ತಿದ್ದಳು. ತನ್ನ ಪರಿವಾರದ ಸೇವೆ-ಶುಶ್ರೂಷೆ ಯಲ್ಲದೆ ಇನ್ನೇನನ್ನೂ ಅರಿಯದಂತಿರುವ ಅವಳನ್ನು ನೋಡಿ ದಾಗೆಲ್ಲ ನನಗೆ ಅಸಹ್ಯ ತಳಮಳವುಂಟಾಗುತ್ತಿತ್ತು.

ಒಮ್ಮೆ ನಾನು, ಗೆಳತಿ ಶ್ಯಾಮಲೆಯೊಡನೆ ಅವಧಾನಿಗಳ ಮನೆಗೆ ನವರಾತ್ರಿಯ ಊಟಕ್ಕೆ ಹೋಗಿದ್ದೆ. ನಾವು ಹೋದಾಗ ಅವಧಾನಿ ಗಳು ವಾತರೋಗದಿಂದ ನರಳುತ್ತಿದ್ದರು. ಭುವನೇಶ್ವರಿ ಹತ್ತಿರ ದಲ್ಲಿದ್ದು ಅವರ ಮೈಗೆ ಎಣ್ಣೆ ಸವರುತ್ತಿದ್ದಳು. ನಮ್ಮ ಪಟ್ಟಿಗೆ ಆ ದೃಶ್ಯ ಅಕಲ್ಪಿತವಾದುದಾಗಿತ್ತು. ಆಗ ನನಗೆ ಚ್ಯವನ ಋಷಿಯ ಕತೆ ನೆನಪಿಗೆ ಬಂದಿತು. ರಾಜಪುತ್ರಿ ಸುಕನ್ಯೆಯನ್ನೂ ಸೇವೆಯಲ್ಲಿ ಮೀರಿಸಿದ್ದಾಳೆ ನಮ್ಮ ಭುವನೇಶ್ವರಿಯು! ಮುಪ್ಪಿನ ಋಷಿಗೆ ಯೌವನ ಬಂದು ರಾಜಪುತ್ರಿಯ ಸೇವೆ ಸಫಲವಾಗಿತ್ತಂತೆ; ಆದರೆ ಭುವನೇಶ್ವರಿಯ ಸೇವೆಗೆ ಬೆಲೆಕಟ್ಟುವ ಅಶ್ವಿನೀಕುಮಾರರೆಲ್ಲಿದ್ದಾರೆ?

ಅವಧಾನಿಗಳ ಕಿರಿಯಮಗಳು ಕುಂಕುಮದ ಕರಡಗೆಯನ್ನು ತಂದು ನಮ್ಮೆದುರಿಗೆ ಇಟ್ಟಳು. ಆಗ ಶ್ಯಾಮಲೆ ಕೇಳಿದಳು:

" ಏನು? ನಿನ್ನ ಚಿಕ್ಕಮ್ಮ ಹೊಡೆಯುವುದಿಲ್ಲವೇ?"

" ಇಲ್ಲ, ಅಮ್ಮ ಇದ್ದಾಗ ಹೊಡೆಯುತ್ತಿದ್ದಳು. ಚಿಕ್ಕಮ್ಮ ಬಹಳ ಪ್ರೀತಿ ಮಾಡುತ್ತಾಳೆ!"

ಶ್ಯಾಮಲೆ ನನ್ನೆಡೆಗೆ ಕಣ್ಣರಳಿಸಿ ನೋಡಿದಳು. ಪರರ ಸದ್ಗುಣ ಗಳಿಗೆ ಸ್ಪರ್ಧೆಮಾಡುವ ನನ್ನ ಗೆಳತಿ, ಆ ಹುಡುಗಿಯ ಮಾತನ್ನು ಕೇಳಿ ಅವಮಾನಪಟ್ಟುಕೊಂಡಿರಲಿಕ್ಕೆ ಸಾಕು.

ಕ್ರಮವಾಗಿ ಮುತ್ತೈದೆಯರೂ, ದುರ್ಗೆಯರೂ ಆ ಜಗುಲಿಯಲ್ಲಿ ಸೇರಿದರು. ಭುವನೇಶ್ವರಿಯು ಪತಿಗೆ ಸ್ನಾನಮಾಡಿಸಿದ್ದಲ್ಲದೆ ತಾನೂ ಮಿಂದು, ಮಡಿಯುಟ್ಟುಕೊಂಡು, ಹೊರಜಗುಲಿಗೆ ಬಂದಿದ್ದಳು. ಎಲ್ಲರ ಊಟ ಮುಗಿದಿತ್ತು. ಜರದ ಶುಭ್ರ ಚೀನಾಂಬರವನ್ನುಟ್ಟಿರುವ ಆಕೆ, ನನಗಂತೂ ಅಂದು ಸಾಕ್ಷಾತ್ ಗೌರಿಯಂತೆ ಕಂಡಿದ್ದಳು. ಕೂಡಿದವರಲ್ಲಿ ತಾಂಬೂಲಹಾಕುತ್ತಿದ್ದಂತೆಯೆ ಗುಜುಗುಜು ಪ್ರಾರಂಭವಾಯಿತು:

" ನೋಡೇ, ಶ್ರೀಮಂತಿನಿ! ಇಂಥ ದೊಡ್ಡಸ್ತಿಕೆ ಬರಬೇಕಿದ್ದರೆ ಅದೆಷ್ಟು ಪುಣ್ಯ ಪಡೆದಿದ್ದಾಳೋ, ಹಳ್ಳಿಯ ಹೆಣ್ಣು!"

" ಗಂಡ ಸರಿಯಾಗಿದ್ದರೆ ಇನ್ನೂ ಇತ್ತೇನೋ! ಮುದುಕನ ಹೆಂಡತಿಯಾದಾಗಲೇ ಇಷ್ಟೊಂದು ಶೃಂಗಾರ! ಅವಳ ತಾರೀಫು, ಒಯ್ಯಾರ ನೋಡಿದರೆ ಸಾಕು!"

"ಬಿಡಿರೇ, ಹಳ್ಳಿಯ ಹೆಂಗುಸು ಪಾಪ! ನಗರದಲ್ಲಿ ಹೇಗೆ ನಡೆದು ಕೊಳ್ಳಬೇಕೆಂದು ತಿಳಿಯದೆ ಕಕ್ಕಾವಿಕ್ಕಿಯಾಗಿದ್ದಾಳೆನೋ!" ಈ ಮಾತನ್ನು ಹೇಳಿದವಳು ವ್ಯಂಗ್ಯವಿಟ್ಟುಕೊಂಡಿದ್ದಳಾದರೂ, ನಿಜವಾಗಿಯೂ ನನಗೆ ಕೇಳಿದಾಗ 'ಪಾಪ!' ಎನಿಸಿತು.

ಮತ್ತೊಮ್ಮೆ ಪ್ರೌಢೆಯೊಬ್ಬಳು ಹೇಳಿದಳು:

" ನೀನರಿಯೆ ಪಾರ್ವತಿ! ಈ ಹೆಂಗುಸಿನ ಗರ್ವ ಸಾಮಾನ್ಯವಿಲ್ಲ. ಇವಳು ಭೂಮಿಯ ಮೇಲೆ ಇರುವಳೋ ಭೂಮಿಯೇ ಈಕೆಯ ಮೇಲಿದೆಯೋ ತಿಳಿಯದು. ನಮ್ಮಂಥವರೊಡನೆ ಮಾತನಾಡುವುದು ಹೋಗಲಿ, ಸರಿಯಾಗಿ ಮೋರೆ ಕೂಡ ನೋಡುವುದಿಲ್ಲ ಈ ಅರಸು ಮಗಳು! ಸವತಿಯ ಮಕ್ಕಳನ್ನು ಕಂಡರೆ ಹಸಿದ ಹೆಣ್ಣುಹುಲಿ ಯಂತೆ ಮಾಡುತ್ತಾಳಂತೆ. ಅವರಿಗೆ ಇತ್ತಲಾಗಿ ಅಜ್ಜನ ಮನೆಗೂ ಹೋಗಲು ಬಿಡುವುದಿಲ್ಲ! ಈಕೆ ಹೇಳಿದ ಕೆಲಸಮಾಡಿಕೊಂಡು ಬಿದ್ದಿರಬೇಕು!"

" ಬರೇ ಹುಚ್ಚಿ ನೀನು! ಅವಳು ನಿನ್ನ ಮೋರೆಯನ್ನು ನೋಡಲೇ ಬೇಕೆಂಬ ಹಟವಾದರೂ ಏನು? ನಿನ್ನನ್ನು ನೋಡುವುದರಿಂದಾಗುವ ಲಾಭವಾದರೂ ಏನು ಆಕೆಗೆ? ಅರ್ಥವಿಲ್ಲದ ಮಾತು! ನೋಡು, ಹಳ್ಳಿಯವಳಾದಮಾತ್ರಕ್ಕೆ ಸುರುಚಿ-ಸುನೀತಿಯರ ಕಥೆಯನ್ನು ಓದಿಕೊಂಡಿರಲಾರಳೇ ಈ ಹೆಣ್ಣು? ಮುದುಕ ಗಂಡನಿಗೆ ಪ್ರಾಯ ಬರಿಸುವ ಮಾಟಬಲ್ಲವಳು, ಏನು ಮಾಡಲಾರಳು ಹೇಳು?"

ಭುವನೇಶ್ವರಿಗೆ ಅವರಾಡಿದ ಮಾತುಗಳ ಕಡೆಗೆ ಗಮನವಿರ- ಬಹುದೇ? 'ಅವಳದನ್ನು ಕೇಳದಿರಲಿ!' ಎಂದು ನಾನು ಮನದಲ್ಲಿಯೆ ಜಗದಂಬೆಯನ್ನು ಪ್ರಾರ್ಥಿಸಿದೆ.

ಶ್ಯಾಮಲೆಯ ರಾಗ ಹೊರಟಿತು, ಪರಿಹಾಸಸ್ವರದಲ್ಲಿ:

" ಏನಿರೇ! ಇಂದು ಇಲ್ಲಿಯೇ ಸಾಯಂಕಾಲ ಮಾಡುತ್ತೀರೇನು? ಈ ಜಾಗಕ್ಕೆ ಜೇನು ಸುರಿಸಿಬಿಟ್ಟಿದ್ದಾರೇನೊ!"

" ಹೌದು, ಮನೆಯವರು ಏನೆಂದುಕೊಳ್ಳುವರೋ, ನಡೆಯಿರಿ!" ಗಂಡನಲ್ಲಿ ತಾನು ಬಹಳ ವಿಧೇಯಳು ಎಂಬುದನ್ನು ತೋರ್ಪಡಿ-

ಸುವ ಮುಗುದೆಯೊಬ್ಬಳು, ಕೊನೆಯದಾಗಿ ಈ ಮಾತನ್ನು ಹೇಳಿದಳು. ಮುತ್ತೈದೆಯರ ಗುಂಪು ನಿಧಾನವಾಗಿ ಅಲ್ಲಿಂದ ಹೊರಬಿತ್ತು.

(೫)

ಬೆಳಗಾಗುವುದಕ್ಕೆ ಒಂದು ತಾಸು ರಾತ್ರಿ ಇರುವಾಗ, ಅವಧಾನಿಗಳ ಮನೆಯಲ್ಲಿ ರೋದನದ ದನಿ ಕೇಳಿಸಿತು. ಮುಪ್ಪಿನಿಂದ ಮೊದಲೇ ಹೈರಾಣಾದ ಅವಧಾನಿಗಳು, ವಾತವಿಕಾರಕ್ಕೆ ಒಳಪಟ್ಟು ಬೆಳಗಿನ ಜಾವಕ್ಕೆ ಪ್ರಾಣಬಿಟ್ಟರು, ಪುಣ್ಯಾತ್ಮರು! ಮಗಳ ರೋದನದ ಧ್ವನಿಕೇಳಿ, ದೇವಿಯ ಗುಡಿಯಲ್ಲಿ ಕಸಹೊಡೆಯುತ್ತಿದ್ದ ಶಾಂಭಟ್ಟ ಧಾವಿಸಿ ಬಂದ; ಅಜೆ ಈಚೆಯವರೂ ಕೂಡಿದರು.

ಪ್ರಪಂಚದ ಸುಖ-ಸಂತಸಗಳಿಗೆ ಭುವನೇಶ್ವರಿಯೆಂದೋ ಹೊರತಾಗಿದ್ದಾಳೆ. ಅವಳಿಗೆ ಆಶೆಪಡುವುದಕ್ಕೆ ಇನ್ನೇನಿದೆ? ಅವಧಾನಿಗಳು ಹೆಂಡತಿಗೆ ಕೊನೆಯದಾಗಿ ಒಂದು ಮಾತನೂ ಹೇಳದೆ ಇಹಲೋಕಯಾತ್ರೆ ಮುಗಿಸಿದರು. ಮದುವೆಯಲ್ಲಿ ಹೇಳಿದಂತೆ ಆಸ್ತಿ ಮತ್ತು ರೂಪಾಯಿಗಳ ವ್ಯವಸ್ಥೆಯನ್ನೇನೂ ಮಾಡಿರಲಿಲ್ಲ. ಈಗಭುವನೇಶ್ವರಿಯು ಅಳುತ್ತಿಲ್ಲ. ಅವಳ ಗಂಭೀರವಾದ ವೇದನೆಯ ಆಳವನ್ನು ಊಹಿಸುವುದು ಸಾಧ್ಯವೇ? ಮುಂದೆ ಬರುವ ಕಠೋರ ಶಾಸನಗಳಿಗಾಗಿ, ಆ ಮೋರೆಯಲ್ಲಿ ಯಾವ ದಿಗಿಲೂ ಇಲ್ಲದಂತಿದೆ. ಹಿರಿಯ ಹೆಂಗುಸೊಬ್ಬಳು ಅವಳಿಗೆ ಸಮಾಧಾನ ಹೇಳುವುದಕ್ಕೆ ಮುಂದೆ ಬಂದಳು:

"ಇಲ್ಲಿ ನೋಡು, ಭೂಮಿ......." ಆ ಹೆಂಗುಸಿಗೆ ಮುಂದೆ ಮಾತನಾಡಲು ಬಿಡಲಿಲ್ಲ.

"ಅಲ್ಲಿ ಮಕ್ಕಳು ಅಳುತ್ತಿವೆ, ನನಗೇನೂ ಹೇಳಬೇಕಾಗಿಲ್ಲ! ಮುಂದಿನ ಕೆಲಸವೇನೋ ನೋಡಿ....ನಾನು ಸಿದ್ಧಳಾಗಿದ್ದೇನೆ....!"

* * *

ಮುಂದಿನ ಸಂಸ್ಕಾರಕ್ಕಾಗಿ ಅವಧಾನಿಗಳ ಪುರೋಹಿತರು, ಹೇಗೋ ಹಿರಿಯ ಮಗನಿರುವ ಊರನ್ನು ಪತ್ತೆಹಚ್ಚಿ ಕಾಗದಹಾಕಿಸಿದರು. ಆತ ಒಂಬತ್ತನೆಯ ದಿನ ಬಂದ. ಯಥಾಸಾಂಗವಾಗಿ ಕೆಲಸ ಸಾಗಿತು. ಅವಧಾನಿಗಳ ಸ್ವರ್ಗಾರೋಹಣಕ್ಕೆ ಅಡ್ಡಗಲ್ಲಾದ ಭುವನೇಶ್ವರಿಯನ್ನೂ ಶುದ್ಧಮಾಡಿದುದಾಯಿತು. ಅವರಿಗೇನೋ ಸಾಯುವ ದಿನವೇ; ಮಕ್ಕಳು-ಮೊಮ್ಮಕ್ಕಳನ್ನು ಕಂಡಿದ್ದಾರೆ. ಅವರ ಬಹುತರವಾದ ಆಶೆಗಳೆಲ್ಲ ಪೂರಯಿಸಿದ್ದುವು. ಕೊನೆಯ ಸಲದ ಮದುವೆಯ ಆಶೆಯನ್ನೂ ಈಡೇರಿಸಿಕೊಂಡಿದ್ದರು. ಆದರೆ ಅವಧಾನಿಗಳ ಹೆಸರಿನಿಂದ ಜೀವನದ ಕೊನೆಯವರೆಗೂ ಕಣ್ಣೀರನ್ನಿಡುವ, ಉಸಿರೆಳೆಯುವ ಭುವನೇಶ್ವರಿಯು, ತನ್ನ ಕಷ್ಟವನ್ನು ಯಾವ ಭಗವಂತನೊಡನೆ ತೋಡಿಕೊಳ್ಳಬೇಕು? ಬಾಳಿನ ಬೆಳಗಿನಲ್ಲಿಯೆ ಪತಿಯನ್ನು ಕಳೆದುಕೊಂಡು, ಆಜನ್ಮ ವೈಧವ್ಯನರಕದಲ್ಲಿ ಕೊಳೆಯಬೇಕು, ಆ ಹತಭಾಗಿನಿ!

* * *

ಅವಧಾನಿಗಳು ತೀರಿ ಮೂರು ವರ್ಷಗಳಾದುವು. ಚಿಕ್ಕಮ್ಮ-ಮಕ್ಕಳಲ್ಲಿ ಜಗಳಕ್ಕೆ ಆರಂಭವಾಯಿತು.

"ನಿನ್ನ ತಂದೆ, ಆತನ ಮಕ್ಕಳು, ಇವರನ್ನೆಲ್ಲ ಇಟ್ಟುಕೊಂಡು ಹೊಟ್ಟೆಹೊರೆಯುತ್ತೇನೆಂದು ನಾನೇನೂ ಬರೆದುಕೊಟ್ಟಿಲ್ಲ!" ಅವಧಾನಿಗಳ ಮಗ ದಿನದಿನವೂ ಶಾಂಭಟ್ಟನಿಗೆ ಇಲ್ಲದ ಕಿರುಕುಳವನ್ನು ಉಂಟುಮಾಡುತ್ತಿದ್ದ. ಭುವನೇಶ್ವರಿ ತಂದೆಗೆ ಬೇರೆ ಗುಡಿಸಿಲಿನಲ್ಲಿರುವುದಕ್ಕೆ ವ್ಯವಸ್ಥೆಮಾಡಿದ್ದಳು. ತಾಯಿ-ಮಕ್ಕಳೊಳಗೆ ಇಷ್ಟರಿಂದ ಕಲಹ ಹೆಚ್ಚಿಕೊಂಡಿತೇ ಹೊರತು ಕಡಿಮೆಯಾಗಲಿಲ್ಲ.

ಒಂದು ದಿನ, ತಂದೆಗೆ ಉಡುವುದಕ್ಕೆ ಧೋತರವಿಲ್ಲವೆಂದು ಎರಡುವಸ್ತ್ರಗಳನ್ನು ಕಳಿಸಿಕೊಟ್ಟಿದ್ದಳು ಭುವನೇಶ್ವರಿ. ಮಗನ ಉದ್ರೇಕ ವಿಕೋಪಕ್ಕೆ ಹೋಯಿತು:

"ನೀನು ಹೀಗೆಲ್ಲ ಅಧಿಕಾರ ನಡೆಯಿಸಿದರೆ ಎಚ್ಚರಿಕೆ!"

"ನನಗೂ ಈ ಮನೆಯಲ್ಲಿ ಸ್ವಲ್ಪ ಅಧಿಕಾರವಿದೆ!"

"ಅದೆಲ್ಲ ಗಂಡನಕಾಲದಲ್ಲಿ ಆಯಿತು!"

ಭುವನೇಶ್ವರಿ ದಿಕ್ಕುತೋಚದೆ ಒಂದು ಕ್ಷಣ ಸ್ತಬ್ಧಳಾದಳು. ಮತ್ತೆ ಆ ಮಗನೇ ಹೇಳಿದ:

"ನೀನು ಸರಿಯಾಗಿ ಉಳಿಯುವುದಾದರೆ ಇಲ್ಲಿ ಉಳಿ. ಇಲ್ಲವಾದರೆ ನಾನೇ ಬೇಕಾದರೆ ಮನೆಬಿಟ್ಟು ಹೋಗುತ್ತೇನೆ. ನೀನೇ ಆಳಿಕೋ ಇಲ್ಲಿ!"

"ಮಹಾರಾಯಾ, ನಾನೇ ಹೋಗುತ್ತೇನೆ! ಅಯ್ಯೋ, ಈ ಹೆಂಗುಸಿಗೇಕೆ ಮನೆ-ಮಠವೆಲ್ಲ! ಹೊಟ್ಟೆಗಾದರೂ ಕೊಡುವೆಯಷ್ಟೇ?"

"ನನಗದಾವುದೂ ತಿಳಿಯದು!"

ಮೋರೆತಿರುವಿಕೊಂಡು ಆ ಭೂಪ ಸಿಡುಕಿನಿಂದ ಎದ್ದು ಹೋದ.

* * *

ಶಾಂಭಟ್ಟನು ತನ್ನ ಗುಡಿಸಿಲಿನ ಹೊರಭಾಗದಲ್ಲಿ ತಲೆತಿಕ್ಕಿಕೊಳುತ್ತ ಕುಳಿತಿದ್ದ. ಮಗಳು ಆಕಸ್ಮಿಕವಾಗಿ ಬಂದುದನ್ನು ನೋಡಿ, ಆತನಿಗೆ ದಿಗಿಲಾಯಿತು. ಭುವನೇಶ್ವರಿ ತಂದೆಯ ಕಾಲನ್ನು ಹಿಡಿದುಕೊಂಡು ಬಿಕ್ಕಿಬಿಕ್ಕಿ ಅತ್ತಳು. ಆ ವಾತ್ಸಲ್ಯದ ತಂದೆಗೆ ಮುಂದೆ ಮಾತುಬರಲಿಲ್ಲ. ಇಬ್ಬರೂ ಹಾಗೆ ಎಷ್ಟು ಹೊತ್ತು ಅತ್ತರೋ!

* * *

ಈಗ ಭುವನೇಶ್ವರಿ, ಊರೊಳಗೆ ಹೋಗಿ ಭತ್ತ-ಅವಲಕ್ಕಿಗಳನ್ನು ಕುಟ್ಟಿ, ತಂದೆ ಹಾಗೂ ತನ್ನ ತಂಗಿಯರ ಪೋಷಣೆಮಾಡುತ್ತಾಳೆ. ನಮ್ಮೂರಿನಲ್ಲಿ ಯಾರು ಕರೆದರೂ ಪ್ರೀತಿಯಿಂದ ಬಂದು ಕೈಯಿಂದ ಕೆಲಸಮಾಡಿಕೊಡುತ್ತಾಳೆ. ಹೀಗಾಗಿ ನಾಲ್ಕು ಜನರಿಗೆ ಬೇಕಾಗಿದ್ದವಳು ಆಕೆ.

(೩೩೦ ನೆಯ ಪುಟಕ್ಕೆ ಮುಂದುವರಿದಿದೆ)

ನಮ್ಮ ಮೇಲಾಟದ ವರದಿ

ಸಂಪಾದಕ ಮಂಡಳಿಯಿಂದ

ಮೊದಲ ಮಾತು

ಕಳೆದ ಸಲದಂತೆ ಈ ಸಲವೂ ಸಣ್ಣ ಕತೆಗಳ ಮೇಲಾಟವನ್ನು ಏರ್ಪಡಿಸಬೇಕೆಂದು ಆಲೋಚಿಸಿದೆವು, ಸಂಕಲ್ಪಿಸಿದೆವು. ಅದರಂತೆ ಪ್ರಕಟನೆಯನ್ನೂ ಕೊಟ್ಟೆವು. ಸದ್ಯದ ಯುದ್ಧದ ವಾತಾವರಣದ ಮೂಲಕ— ದೇಶದ ಪ್ರಕ್ಷುಬ್ಧ ಪರಿಸ್ಥಿತಿಯ ಮೂಲಕ 'ಈ ಸಲದ ಮೇಲಾಟ ಯಶಸ್ವಿಯಾಗಿ ನೆರವೇರೀತೇ?' ಎಂಬ ಸಂದೇಹ ನಮ್ಮ ಮನಸ್ಸನ್ನು ತಿನ್ನುತ್ತಲೇ ಇದ್ದಿತು. ಆದರೆ ಮೊದಲನೆಯ ಸಲದ ಪ್ರಕಟನೆ ಹೊರಬೀಳುವುದರಲ್ಲಿಯೆ, ಮುಂಬಯಿಯ ಕನ್ನಡಿಗರೊಬ್ಬರಿಂದ ಶುಭಶಕುನದಂತೆ ಕಾಗದವೊಂದು ಬಂದಿತು: 'ನೀವು ೧೦ ರೂಪಾಯಿಗಳದನ್ನಾಗಿರಿಸಿರುವ ಮೊದಲನೆಯ ಬಹುಮಾನವನ್ನು ೧೫ ರೂ. ಗಳಿಗೆ ಹೆಚ್ಚಿಸಿರಿ; ಹೆಚ್ಚಿನ ಹಣದ ಹೊಣೆಯನ್ನು ನಾನು ಹೊರುವೆನು!' ಎಂದು. ಮುಂದೆ ಒಂದೆರಡು ದಿನಗಳಲ್ಲಿಯೆ ಧಾರವಾಡದ ಕನ್ನಡಾಭಿಮಾನಿಗಳೊಬ್ಬರು ಕಾರ್ಯಾಲಯಕ್ಕೆ ಬಂದು 'ನೀವು ಎರಡರ ಬದಲು ಮೂರು ಬಹುಮಾನಗಳನ್ನು ಇಡಿರಿ; ಮೂರನೆಯದರ ಹೊಣೆಯನ್ನು ನಾನು ಹೊರುತ್ತೇನೆ!' ಎಂದು ತುಂಬ ಸಂತೋಷದಿಂದ ಹೇಳಿದರು. ಎಂತಲೇ ಮೊದಲನೆಯ ಪ್ರಕಟನೆಯಲ್ಲಿ ೧೦ ರೂಪಾಯಿ ೫ ರೂಪಾಯಿ ಎಂದಿದ್ದ ಎರಡೇ ಬಹುಮಾನಗಳು, ಮುಂದಿನ ಪ್ರಕಟನೆಯಲ್ಲಿ ೧೫ ರೂಪಾಯಿ, ೮ ರೂಪಾಯಿ ೫ ರೂಪಾಯಿಗಳ ಮೂರು ಬಹುಮಾನಗಳಾದುವು. ಜಯಂತಿ ಪ್ರಾಮಾಣಿಕತನದಿಂದ ಕಾರ್ಯ ಮಾಡುತ್ತ, ಕನ್ನಡ ಜನತೆಗೆ ಬೇಕಾದುದಾಗಿ ಸಾಗಿದರೆ, ವರುಷವರುಷಕ್ಕೂ ಈ ಬಹುಮಾನದ ಅಂಕಿ-ಸಂಖ್ಯೆಗಳು ಬೆಳೆಯುತ್ತ ಹೋಗಬಹುದೆಂಬ ನಂಬುಗೆ ನಮಗಿದೆ.

ಬಂದ ಕತೆಗಳು

ಜೂನ್ ತಿಂಗಳಲ್ಲಿ ಪ್ರಕಟನೆ ಕೊಟ್ಟಾಯಿತಷ್ಟೆ? ಜೂಲೈ ತಿಂಗಳು ಮುಗಿಯುವುದರಲ್ಲಿ ೭ ಕತೆಗಳು ಮಾತ್ರ ಬಂದುವು. ಮುಂದೆ ಆಗಸ್ಟ್ ತಿಂಗಳಲ್ಲಿ ಬಂದ ಕತೆಗಳು ನಾಲ್ಕೇ ನಾಲ್ಕು. ಈ ಪ್ರಮಾಣವನ್ನು ನೋಡಿದಾಗ, ಮೇಲಾಟದ ಯಶಸ್ವಿತೆಯ ಬಗೆಗಿರುವ ನಮ್ಮ ಸಂದೇಹ ಇನ್ನಿಷ್ಟು ಹೆಚ್ಚಾಯಿತು. ಆದರೆ ಸಪ್ಟಂಬರ್ ತಿಂಗಳಲ್ಲಿ ದಿನದಿನವೂ ಅಂಚೆಯಾಳು ಕೂಡ ಅಚ್ಚರಿಪಡುತ್ತ ತಂದೊಗೆಯತೊಡಗಿದ. ಸಪ್ಟಂಬರ್ ೩೦ ನೆಯ ತಾರೀಖಿನ ವರೆಗೆಂದರೆ ಕಾರ್ಯಾಲಯಕ್ಕೆ ಬಂದ ಮೇಲಾಟದ ಕತೆಗಳ ಸಂಖ್ಯೆ ೧೧೩ಕ್ಕೆ ಏರಿತು. ಕಳೆದ ಸಲದ ಮೇಲಾಟಕ್ಕೆ ಬಂದ ಕತೆಗಳ ಸಂಖ್ಯೆ ೫೧ ಮಾತ್ರ; ಈ ಸಲದ ಸಂಖ್ಯೆ ೧೧೩ — ಇಮ್ಮಡಿಗಿಂತ ಹೆಚ್ಚು.

(೨) ಎಲ್ಲ ಕತೆಗಳ ಹೆಸರನ್ನು ಇಲ್ಲಿ ಕೊಡುವುದರಿಂದ ಈ ವರದಿ ಹೆಚ್ಚು ಸ್ಥಳವನ್ನು ಆಕ್ರಮಿಸಬಹುದಾದರೂ ಹಾಗೆ ಕೊಡಬೇಕಾದುದು ಅನಿವಾರ್ಯ. ಹೆಸರುಗಳ ಮೇಲಿಂದ ಬಂದ ಕತೆಗಳ ವಸ್ತುವೈವಿಧ್ಯವನ್ನು ಕಲ್ಪಿಸಲೂ ಬರುವುದು. ಆದುದರಿಂದ ಕಾರ್ಯಾಲಯಕ್ಕೆ ಬಂದ ಪರಿಪಿಡಿಯಲ್ಲಿ, ಕತೆಗಳ ಹೆಸರುಗಳನ್ನು ಮಾತ್ರ ಇಲ್ಲಿ ಕೊಡಲಾಗಿದೆ:—

೧. ದೇವರ ದಯೆ, ೨. ಅಂಧ್ರಕಾಶಾ, ೩. ಬಡವನ ಬಲಿ, ೪. ಫಲಶ್ರುತಿ, ೫. ಅವಳ ಜೀವನ, ೬. ವಿಡಂಬನೆ, ೭. ಸಂಭಾವನೆ, ೮ ಆಶೀರ್ವಾದ, ೯. ನನ್ನ ಪ್ರೇಮದ ಹೂ, ೧೦. ಪರಿವರ್ತನ.

೧೧. ಸೋತವರಾರು? ೧೨. ಇವಳಾರು?, ೧೩. ಪ್ರೇಮಪ್ರಭಾವ, ೧೪. ಸಮಾಜದ ಸಂಗತಿ, ೧೫. ತಪ್ಪು ಯಾರದು? ೧೬. ಅತ್ತಿಗೆ, ೧೭. ಕೊರತೆ, ೧೮. ಏತಕ್ಕೆ? ೧೯. ಬಿನ್ನಹ, ೨೦. ಪರೀಕ್ಷೆಯ ದಿನ.

೨೧. ಮದುವೆ, ೨೨. ಕನಸು, ೨೩. ಕೊನೆಯ ದೃಶ್ಯ, ೨೪. ದೇವೀಪುರಾಣ, ೨೫. ವಿಹಾರ, ೨೬. ರಾಹುಗ್ರಹಣ, ೨೭. ಸುಧಾರಕ ರಂಗನಾಥ, ೨೮. ಪ್ರಾಮೋಷನ್ನು, ೨೯. ಧರ್ಮತ್ಯಾಗ, ೩೦. ಶಾಲೀ ಮಾಸ್ತರ್ ನಾನಾಚಾರಿ.

೩೧. ಅನುಭವ, ೩೨. ಮತಾಂತರ, ೩೩. ನರಬಲಿ, ೩೪. ವಿಧವೆ, ೩೫. ಅಸ್ಪೃಶ್ಯ, ೩೬. ಸಮಸ್ಯೆ, ೩೭. ಬಿಸಿಲುಗುದುರೆ, ೩೮. ಪತಿಯೊಡನೆ ೩೯. ಹೇಗಿದೆ ಈ ಕ್ಯೆ?, ೪೦. ತಂಗಿಯ ಕರುಳು.

೪೧. ಆತ್ಮನ ಪ್ರಲಾಪ, ೪೨. ದೇವಿ, ೪೩. ಎದುರಾಳಿ, ೪೪. ಯಾರ ತಪ್ಪು?, ೪೫. ಎರಡು ಪ್ರಶ್ನೆಗಳು, ೪೬. ಬಾಳಂಭಟ್ಟರು ಪೇಟೆಯಿಂದ ಬಂದರು, ೪೭. ಅಮೃತಘಳಿಯು, ೪೮. ಪಟ್ನೇದಾಲ ಶಿವ್ಯಾ, ೪೯. ದುರ್ಗಿ, ೫೦. ವಿರಸಮರಣ.

೫೧. ನನ್ನ ಜೀವನದಲ್ಲಿ, ೫೨. ಸುಖದಿಂದ ಏಕೆ ಇರಬಾರದು? ೫೩. ನ್ಯಾಯ, ೫೪. ನಿರ್ಮಲಾ, ೫೫. ಅನುಭವದ ಅಂಶ, ೫೬. ಬಡವಿಯ ಬಯಕೆ, ೫೭. ವಿಹಾರಿಯ ಮದ್ದು, ೫೮. ಮಾನವ ಧರ್ಮ, ೫೯. ಶತ್ರುವಿನ ಮಗಳಿಗೆ, ೬೦. ಅದೃಷ್ಟವೃಷ್ಟಿ.

೬೧. ಮರುಜನ್ಮದ ಆಶೆ, ೬೨. ಮೂರ್ತಿಯ ಪಂಥ, ೬೩. ಆಹುತಿ, ೬೪. ಹುಚ್ಚು, ೬೫. ಉಗ್ರಪ್ಪನ ಉಗಾದಿ, ೬೬. ನಾಲ್ಕುನೂರು, ೬೭. ಹಾರಿಗೋಲು, ೬೮. ಪಟ್ಟಣಕ್ಕೆ ಹೋದ ಕರುವಾಯ, ೬೯. ಕೊನೆಯ ದಿನ, ೭೦. ಯಾರಿಗೆ ಗೊತ್ತು?

೭೧. ದ್ರೋಹ, ೭೨. ಕಲಿತಕಳ್ಳ, ೭೩. ನಿಜಪ್ರೇಮ, ೭೪. ಪರದೆ, ೭೫. ಕಲೆಯ ನೆಲೆ, ೭೬. ಪೊನ್ನಿಪಾಪಾತಿ, ೭೭. ಪೈಲೆಟ್ ರಂಗನ್, ೭೮. ಏನುಹೇಳಲಿ?, ೭೯. ಮುತ್ತಿನ ಚಿಪ್ಪು, ೮೦. ಸೂಕ್ಷ್ಮಭಾವನೆ.

೮೧. ಪೀಠ, ೮೨. ನೊಂದಜೀವಿ, ೮೩. ನೇಗಿಲಯೋಗಿ, ೮೪. ಲೀಲಾನ ಪ್ರೇಮ, ೮೫. ಕಳ್ಳರು ಯಾರು? ೮೬. ಹುಚ್ಚಿ, ೮೭. ಅವರ ಬಾಳು, ೮೮. ರಂಗನ ಜೀವನ, ೮೯. ಪುನರ್ಮಿಲನ, ೯೦. ದಡ್ಡೇ-ದೊಡ್ಡಪ್ಪ.

೯೧. ದೇಶಕ್ಕಾಗಿ, ೯೨. ಕಾಯಾಕಲ್ಪ, ೯೩. ಅವರ ದೇವರು, ೯೪. ಹತಭಾಗಿನಿ, ೯೫. ಭಿಕಾರಿಣಿ, ೯೬. ಅನುಭವ, ೯೭. ಹೊಣೆಗಾರ, ೯೮. ವಿಶ್ವೇಶ್ವರ, ೯೯. ತೊಟ್ಟಿಗೆತೊಟ್ಟು, ೧೦೦. ರೇಣಿಯ ನೇಣು.

೧೦೧. ಸುಖದ ಸೆಲೆ, ೧೦೨. ಒಲೆ ಮಾರುವಳು, ೧೦೩. ಭೋಕ್ರಾ, ಏ!, ೧೦೪. ಹೀನಅದೃಷ್ಟ, ೧೦೫. ಕಲಾವಿದ, ೧೦೬. ಸಂಧ್ಯಾ, ೧೦೭. ಪ್ರೇಮದ ಆಹುತಿ, ೧೦೮. ನಾಗಾಭಟ್ಟನಿಗೆ ಮಾಡಿದ ಮಾಟ, ೧೦೯. ಬಡವನ ತಾಳ್ಮೆ, ೧೧೦. ಪ್ರೇಮಲೀಲೆ.

೧೧೧. ಬಾಳಿನ ಚಿತ್ರ, ೧೧೨. ನಿರ್ಗಂಧ ಕುಸುಮ, ೧೧೩. ಬಡತನದ ಬಾಳು.

ಎಲ್ಲೆಲ್ಲಿಂದ ಎಷ್ಟೆಷ್ಟು?

ಕತೆಗಳ ಸಂಖ್ಯೆ ೧೧೩ ಇದ್ದರೂ, ಕಳುಹಿದ ಕತೆಗಾರರ ಸಂಖ್ಯೆ ೯೩ ಇರುವುದು (ಇವರಲ್ಲಿ ಹದಿನಾರು ಜನರು ಮಹಿಳೆಯರು). ಕೆಲವರು ಎರಡೆರಡು ಕತೆಗಳನ್ನು ಕಳುಹಿರುವರು. ಯಾವ ಯಾವ ಕಡೆಯಿಂದ ಎಷ್ಟೆಷ್ಟು ಕತೆಗಳು ಬಂದಿರುವುವೆಂಬುದನ್ನು ಕೆಳಗಿನ ವಿವರಣೆಯಿಂದ ತಿಳಿದುಕೊಳ್ಳಬಹುದು.

ಮೈಸೂರು ಸಂಸ್ಥಾನ

ಮೈಸೂರು ೮, ಬೆಂಗಳೂರು ೫, ದಾವಣಗೇರಿ ೪, ಸಾಗರ ೩, ತುಮಕೂರು ೨, ಮಂಡ್ಯ ೧, ಚಿಕ್ಕಮಗಳೂರು ೧, ಹೊಳೆನರಸೀಪುರ ೧, ಒಟ್ಟು ೨೫ ಕತೆಗಳು.

ಧಾರವಾಡ ಜಿಲ್ಲಾ

ಧಾರವಾಡ ೧೦, ಹುಬ್ಬಳ್ಳಿ ೬, ಗದಗು ೩, ಬಂಕಾಪುರ ೨, ಹಾನಗಲ್ಲ ೧, ಗರಗ ೧, ಒಟ್ಟು ೨೩ ಕತೆಗಳು.

ಬೆಳಗಾವಿ ಜಿಲ್ಲಾ

ಬೆಳಗಾಂವಿ ೫, ಉಗಾರ (ಅಥಣಿ) ೩, ಗೋಕಾಕ ೩, ಗೋಕಾಕ ಫಾಲ್ಸ್ ೨, ಬೈಲಹೊಂಗಲ ೨, ನಂದಗಡ (ಖಾನಾಪುರ) ೧, ಇಟಗಿ (ಖಾನಾಪುರ) ೧. ಒಟ್ಟು ೧೭ ಕತೆಗಳು.

ಕಾರವಾರ ಜಿಲ್ಲಾ

ಕುಮಟಾ ೫, ಶಿರಸಿ ೫, ಗೋಕರ್ಣ ೪, ಒಟ್ಟು ೧೪ ಕತೆಗಳು.

ಮಂಗಳೂರು ಜಿಲ್ಲಾ

ಮಂಗಳೂರು ೪, ನೀಲೇಶ್ವರ ೩, ಕುಂದಾಪುರ ೧, ಬಂಟವಾಳ ೧, ಪುತ್ತೂರು ೧, ದಾರೂನಮಲಿ (ವಿಟ್ಲ) ೧, ಒಟ್ಟು ೧೧ ಕತೆಗಳು.

ಕೊಡಗು

ಮಡಿಕೇರಿ ೪, ಕಣಿವೆ (ದ. ಕೊಡಗು) ೧, ಒಟ್ಟು ೫ ಕತೆಗಳು.

ಉತ್ತರಕರ್ನಾಟಕ ಸಂಸ್ಥಾನ

ಕೊಲ್ಹಾಪುರ ೩, ಲಕ್ಷ್ಮೇಶ್ವರ ೨, ಒಟ್ಟು ೫ ಕತೆಗಳು.

ವಿಜಾಪುರ ಜಿಲ್ಲಾ

ವಿಜಾಪುರ ೨ ಕತೆಗಳು.

ಬಳ್ಳಾರಿ ಜಿಲ್ಲಾ

ಹೊಸಪೇಟೆ ೧ ಕತೆ

ಹೊರನಾಡು

ಹೈದರಾಬಾದ್ ೫, ಅಹಮ್ಮದನಗರ ೨, ಮುಂಬಯಿ ೧, ಮದ್ರಾಸ ೧, ಡೋಹದ (ಗುಜರಾತ) ೧, ೧೦ ಕತೆಗಳು.

ಮೇಲಾಟದ ನಿರ್ಣಯ

ಬಂದಿರುವ ಎಲ್ಲ ಕತೆಗಳನ್ನೂ ಸಂಪಾದಕ ಮಂಡಲಿಯವರು ವಿಮರ್ಶಾತ್ಮಕ ದೃಷ್ಟಿಯಿಂದ ಓದಿನೋಡಿ, ಒಳ್ಳೆಯವೆಂದು ಕಂಡ ೨೭ ಕತೆಗಳನ್ನು ಆಯ್ದು ನಿರ್ಣಾಯಕರ ಕಡೆಗೆ ಕಳುಹಿದರು. ಕಳುಹಿದ ಕತೆಗಳ ಕ್ರಮಾಂಕ ಹೀಗಿದೆ :

೬, ೧೭, ೧೮, ೩೯, ೪೦, ೪೨, ೪೮, ೫೪, ೫೭, ೫೮, ೫೯, ೬೬, ೬೭, ೭೧, ೭೨, ೭೬, ೭೮, ೭೯, ೮೩, ೮೫, ೯೧, ೯೩, ೯೬, ೯೮, ೧೦೦, ೧೦೨, ೧೦೩. (ಹಿಂದೆ ಕೊಟ್ಟಿರುವ ಪಟ್ಟಿಯಲ್ಲಿ ನೋಡಿದರೆ ಈ ನಂಬರಿನ ಕತೆಗಳು ಯಾವುವೆಂಬುದು ತಿಳಿಯುವುದು).

ಇಲ್ಲಿ ಒಂದು ವಿಷಯವನ್ನು ಅವಶ್ಯವಾಗಿ ಹೇಳಬೇಕಾಗಿದೆ. ಒಳ್ಳೆಯವೆಂದು ಆಯ್ದ ಕತೆಗಳಲ್ಲಿ ಬೆಳಗಾಂವಿ ಜಿಲ್ಲೆಯವು ೭, ಕಾರವಾರ ಜಿಲ್ಲೆಯವು ೬, ಮೈಸೂರು ದೇಶದುವು ೬, ಧಾರವಾಡ ಜಿಲ್ಲೆಯವು ೪, ಕೊಡಗಿನವು ೨, ಮಂಗಳೂರು-ಹೈದರಾಬಾದುದುವು ಒಂದೊಂದು ಇರುವುವು. ಬೆಳಗಾಂವಿ ಜಿಲ್ಲೆಯಿಂದ ಬಂದ ಹೆಚ್ಚು ಕತೆಗಳ ಮಟ್ಟ ಒಳ್ಳೆಯದಾಗಿರುವುದು ಸಂತೋಷದ ಸಂಗತಿಯಾಗಿದೆ.

ಸಂಪಾದಕ ಮಂಡಲಿಯಲ್ಲದೆ ಪ್ರೊ. ಆರ್. ವಿ. ಜಾಗಿರದಾರ್ ಎಂ. ಎ. (ಲಂಡನ್) ಅವರನ್ನೂ ಶ್ರೀ. ಎನ್. ಕೆ. ಕುಲಕರ್ಣಿ ಎಂ.ಎ.ಬಿ.ಟಿ. ಅವರನ್ನೂ ನಿರ್ಣಾಯಕರಾಗಿರುವಂತೆ ಬಿನ್ನವಿಸಿಕೊಳ್ಳಲಾಗಿದ್ದಿತು. 'ಆಯ್ದ ಇಪ್ಪತ್ತೇಳು ಕತೆಗಳೆಲ್ಲವೂ ಪ್ರಕಟನೆಗೆ ಅರ್ಹವಾಗಿರುವುವು,' ಎಂಬ ಅಭಿಪ್ರಾಯದೊಂದಿಗೆ ಈ ರೀತಿಯಲ್ಲಿ ಸ್ಥಾನಾನುಕ್ರಮದ ನಿರ್ಣಯವನ್ನವರು ಕೊಟ್ಟರು:

೧. ದೇಶತ್ಯಾಗಿ, ೨. ಪೊನ್ನುಪಾಪಾತಿ, ೩. ವಿಹಾರಿಯ ಮುದ್ದು, ೪. ಪಟ್ಟೆವಾಲ ತಿಮ್ಮ, ೫. ಹಾರೆಗೋಲು, ೬. ದ್ರೋಹ, ೭. ನಾಲ್ಕು ನೂರು, ೮. ನೇಗಿಲಯೋಗಿ, ೯. ಮಾನವಧರ್ಮ, ೧೦. ವಿಶ್ವೇಶ್ವರ, ೧೧. ಏನು ಹೇಳಲಿ? ೧೨. ಅವರ ದೇವರು, ೧೩. ಛೋಕ್ರಾ ಏ! ೧೪. ದೇವಿ, ೧೫. ಅನುಭವ, ೧೬. ನಿರ್ಮಲಾ, ೧೭. ತಂಗಿಯ ಕರುಳು, ೧೮. ವಿಡಂಬನ, ೧೯. ರೇಣಿಯ ನೇಣು, ೨೦. ಕೊರತೆ, ೨೧. ಕಲಿತ ಕಳ್ಳ, ೨೨. ಶತ್ರುವಿನ ಮಗನಿಗೆ, ೨೩. ಬಲಿಯಾಗುವವಳು, ೨೪. ಮುತ್ತಿನ ಚಿಪ್ಪು, ೨೫. ಕಳ್ಳರು ಯಾರು? ೨೬. ಹೇಗಿದೆ ಈ ಕೈ?, ೨೭. ಏತಕ್ಕೆ?

ಇವುಗಳಲ್ಲಿ ಮೊದಲನೆಯದಾಗಿ ನಿಂತ 'ದೇಶತ್ಯಾಗಿ' ಎಂಬ ಕತೆ ಮೋಲಾಟದ ನಿಯಮಗಳಿಗೆ ಅನ್ವಯಿಸದಿರುವುದರಿಂದ, ೨-೩-೪ ನೆಯ ಕತೆಗಳಿಗೆ ೧-೨-೩ ನೆಯ ಬಹುಮಾನಗಳನ್ನು ಕೊಡಲಾಗಿದೆ. ಮೋಲಾಟವು ಯಶಸ್ವಿಯಾಗುವಂತೆ ಉತ್ಸಾಹದಿಂದ ಭಾಗವಹಿಸಿದ ಕತೆಗಾರರೆಲ್ಲರಿಗೂ ನಮ್ಮ ಹೃತ್ಪೂರ್ವಕ ಅಭಿನಂದನೆಗಳು. ಒಳ್ಳೆಯವೆಂದು ನಿರ್ಣಯವನ್ನು ಪಡೆದ ಕತೆಗಳ ಲೇಖಕರೆಲ್ಲರೂ ಜಯಂತಿಯಲ್ಲಿ ಅವುಗಳನ್ನು ಕ್ರಮವಾಗಿ ಪ್ರಕಟಿಸಲು ಸಮ್ಮತಿಯನ್ನು ಕೊಡುವರೆಂಬ ನಂಬುಗೆ ನಮಗಿದೆ. ಸಮ್ಮತಿಯಿಲ್ಲದವರು ಹಾಗೆ ಬರೆದು ತಿಳುಹಿದರೆ, ಅವರ ಕತೆಯನ್ನು ಅವರಿಗೆ ತಲ್ಪಿಸಲಾಗುವುದು.

ನಿರ್ಣಾಯಕರಾಗಿ ನೆರವನ್ನು ನೀಡಿದ ಮಹನೀಯರಿಗೂ ಹೆಚ್ಚಿನ ಬಹುಮಾನದ ಹಣವನ್ನು ಕೊಟ್ಟ ಕನ್ನಡಿಗರಿಬ್ಬರಿಗೂ ನಮ್ಮ ವಿಶ್ವಾಸದ ವಂದನೆಗಳು.

ಬಹುಮಾನ ಪಡೆದ ಕತೆಗಳು—ಕತೆಗಾರರು.

ಅತ್ಯುತ್ತಮ ಕಥೆ

'**ದೇಶತ್ಯಾಗಿ**' ಎಂಬ ಕತೆ ಒಳ್ಳೆಯದೆಂದು ನಿರ್ಣಾಯಕರೆಲ್ಲರೂ ಏಕಕಂಠದಿಂದ ಒಪ್ಪಿದ್ದಾರೆ. ಕತೆಯಲ್ಲಿಯ ವರ್ತಮಾನ ಯುದ್ಧ ಕಥಾವಸ್ತುವನ್ನೂ ರಷ್ಯಾದೇಶದ ಪ್ರದೇಶಪರಿಚಯದ ಮಾತುಗಳನ್ನೂ ನೋಡಿ 'ಈ ಕತೆ ಭಾಷಾಂತರವಾಗಿರಬಹುದೇ?' ಎಂಬ ಸಂದೇಹ ನಿರ್ಣಾಯಕರೆಲ್ಲರಲ್ಲಿಯೂ ಮೂಡದೆ ಇರಲಿಲ್ಲ. ಆದುದರಿಂದಲೇ ಈ ವಿಷಯವಾಗಿ ಕತೆಗಾರರನ್ನು ಬರೆದು ಕೇಳಿ ಆಯಿತು. ಅದಕ್ಕೆ 'ನಾನು ಕಳಿಸಿದ ಕತೆ ಯಾವುದರ ಅನುವಾದವೂ ಅಲ್ಲ, ಅನುಕರಣವೂ ಅಲ್ಲ. ಸ್ವತಂತ್ರವಾಗಿ ಬರೆದಿದ್ದೇನೆ. ಕಥಾವಸ್ತು ಸಂಪೂರ್ಣವಾಗಿ ಕಾಲ್ಪನಿಕವಿದೆ' ಎಂದು ಕತೆಗಾರರು ಬರೆದು ತಿಳುಹಿದ್ದಾರೆ. ಇಂತಹ ಒಳ್ಳೆಯ ಕತೆಯನ್ನು ಬರೆಯಬಲ್ಲ ಶ್ರೀ. 'ಸಾವುಕಾರ' ಅವರನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇವೆ.

ಈ ಕತೆಯನ್ನು ಬರೆದವರು 'ಸಾವುಕಾರ' ಎಂದು ಹೆಸರಿಟ್ಟುಕೊಂಡಿರುವರಾದರೂ ಅವರ ನಿಜವಾದ ಹೆಸರು ಶ್ರೀ. ಕೆ. ಕೆ. ಕುಲಕರ್ಣಿಯವರೆಂದು. ಅವರ ಪರಿಚಯಕ್ಕಾಗಿ ಬರೆದು ಕೇಳಿದಾಗ ಹೀಗೆಂದು ಸ್ವಲ್ಪದರಲ್ಲಿ ನಮಗೆ ತಮ್ಮ ಗುರುತುಮಾಡಿ ಕೊಟ್ಟಿದ್ದಾರೆ:

"ನಾನು ಕೊಲ್ಹಾಪುರ ಸಂಸ್ಥಾನದಲ್ಲಿಯ ಬಿದ್ರಿಪೂರಿನವ. ನನ್ನ ಪ್ರಾಥಮಿಕ ಶಿಕ್ಷಣವು ಬೆಳಗಾಂವಿ ಜಿಲ್ಲೆಯ ಉಗಾರ ಸಾಲೆಯಲ್ಲಿ ಆಯಿತು. ಬೆಳಗಾಂವಿಯ 'ಬೆನಾನ್ ಸ್ಮಿಥ್' ಹೈಸ್ಕೂಲಿನಿಂದ ಮ್ಯಾಟ್ರಿಕ್ ಪಾಸಾಗಿ, ಲಿಂಗರಾಜ ಕಾಲೇಜನ್ನು ಸೇರಿದೆ. ನಾನೀಗ ಓದುತ್ತಿದ್ದುದು ಇಂಟರ್ ಆರ್ಟ್ಸ್‌ನಲ್ಲಿ. ಬೆಳಗಾಂವಿಯ ಸ್ಟೂಡಂಟ್ಸ್ ಯೂನಿಯನ್ನಿನ ಕೈಬರೆಹದ ಮಾಸಪತ್ರಿಕೆಗೆ ಸಂಪಾದಕನಾಗಿ ಆರಿಸಲ್ಪಟ್ಟಿದ್ದೆ. ಕನ್ನಡದಲ್ಲಿ ಬರೆಯಲಿಕ್ಕೆ ನನ್ನನ್ನು ಪ್ರೋತ್ಸಾಹಿಸಿದವರು, ಬೆನಾನ್ ಸ್ಮಿಥ್ ಹೈಸ್ಕೂಲಿನ ಈಗಿನ ಪ್ರಿನ್ಸಿಪಾಲರಾದ ರೆವರಂಡ್ ಇ. ಸಿ. ರೆಡ್ಡಿಯವರು.

ಯುದ್ಧದ ಜ್ವಾಲೆಗಳು ಜಗತ್ತಿನ ಮೂಲೆ-ಮೂಲೆಗಳಿಗೂ ಮುಟ್ಟುತ್ತಿವೆ. ದೇಶಕ್ಕಾಗಿ ಎಷ್ಟೋ ಕುಟುಂಬಗಳು ತಮ್ಮ ಆಹುತಿ ಕೊಡುತ್ತಿವೆ. ಇಂತಹ ಘಟನೆಯೊಂದನ್ನು ಕಲ್ಪಿಸಿ ಕತೆಬರೆದು ನಾನು ಮೋಲಾಟಕ್ಕೆ ಕಳುಹಿದ್ದೇನೆ....."

ಶ್ರೀಯುತರ ಕಥಾಲೇಖನ ಕನ್ನಡ ಕಥಾಪ್ರಪಂಚದ ಭವಿಷ್ಯವನ್ನು ಕಳೆಯುಳ್ಳದನ್ನಾಗಿ ಮಾಡಲಿ!

೧ನೆಯ ಬಹುಮಾನ

ಭಾರತೀಸುತ ವೈನಾಡು

ಶ್ರೀ. 'ಭಾರತೀಸುತ' ರ 'ಪೊನ್ನುಪಾಪಾತಿ' ಎಂಬ ಕತೆಯು ಮೊದಲನೆಯ ಬಹುಮಾನ (೧೫ ರೂಪಾಯಿ) ಪಡೆದಿದೆ. ಪ್ರೀತಿಯೆಂಬ ವಸ್ತುವನ್ನು ಎಂದೂ ಕಾಣದ ದೀನಜೀವಿಯೊಂದು, ನಿಜ-

ವಾದ ಪ್ರೀತಿಯ—ಮಮತೆಯ ಅಮೃತವು ದೊರೆತಾಗ, ಸಂಪ್ರದಾಯದ ಬಂಧನಗಳನ್ನು ಲೆಕ್ಕಿಸದೆ ಮನುಷ್ಯಧರ್ಮವನ್ನು ಹೇಗೆ ವ್ಯಕ್ತಗೊಳಿಸಿತೆಂಬುದರ ಚಿತ್ರವನ್ನು ಈ ಕತೆಯಲ್ಲಿ ಚೆನ್ನಾಗಿ ರೇಖಿಸಲಾಗಿದೆ.

‘ ಭಾರತೀಸುತರು ’ ಜಯಂತಿಯ ವಾಚಕರಿಗೆ ಅಪರಿಚಿತರೇನೂ ಅಲ್ಲ. ವೈನಾಡಿನ ಫಣಿಯರ ಜೀವನಚಿತ್ರಗಳ ಮೂಲಕ ಹಲವು ಜನರು ಇವರನ್ನು ಚೆನ್ನಾಗಿ ಬಲ್ಲರು. ಇವರ ನಿಜವಾದ ಹೆಸರು ಶ್ರೀ. ಎಸ್. ನಾರಾಯಣರಾವ್ ಎಂದು. ಅವರನ್ನು ಬಿನ್ನವಿಸಿಕೊಂಡಾಗ, ತಾವೇ ತಮ್ಮ ಪರಿಚಯವನ್ನು ಹೀಗೆ ಬರೆದು ಕಳುಹಿರುವರು :

“ನಾನು ಬಡಬ್ರಾಹ್ಮಣ ಕುಟುಂಬವೊಂದರಲ್ಲಿ, ೧೯೧೪ ಮಾರ್ಚ ೧೦ ರಲ್ಲಿ ಜನ್ಮವೆತ್ತಿದೆನು. ಹುಟ್ಟಿ ಬೆಳೆದುದು ಮಡಿಕೇರಿಯ ಹತ್ತಿರವಿರುವ ಚೆಳಗೇರಿ ಗ್ರಾಮದಲ್ಲಿ. ನಮ್ಮ ಮನೆತನಕ್ಕೆ ಹೆಸರು ‘ ಶಾನಭಾಗರ’ದೆಂದು. ೮-೯ ವರ್ಷದವನಿರುವಾಗಲೆ ತಂದೆ ತೀರಿದುದರಿಂದ, ತಾಯಿ, ಚಿಕ್ಕತಂದೆ ನನ್ನನ್ನು ಪೋಷಿಸಿದರು.

ಮಡಿಕೇರಿಯ ಸೆಂಟ್ರಲ್ ಹೈಸ್ಕೂಲಿನಲ್ಲಿ ನನ್ನ ವಿದ್ಯಾಭ್ಯಾಸವಾಯಿತು. ಬರೆಯುವುದು ಓದುವದು ಮೊದಲಿನಿಂದಲೂ ನನಗೆ ಹೊಂದಿಬಂದುವು. ನನ್ನ ಸಾಹಿತ್ಯಪ್ರೀತಿಯ ಸಸಿಗೆ ನೀರೆರೆದು ಬೆಳಸಿದವರು ನನ್ನ ಪೂಜ್ಯಗುರುಗಳಾದ ದಿವಂಗತ ಪಂಜೆ ಮಂಗೇಶರಾಯರು. ವಿದ್ಯಾರ್ಥಿಯಾಗಿ ಇದ್ದಾಗಲೇ ‘ ರಮಾನಾಥ ’ ಎಂಬುದೊಂದು ಪುಟ್ಟ ಕತೆಯನ್ನು ಬರೆದು, ನನ್ನ ಅಧ್ಯಾಪಕ ಮತ್ತು ವಿದ್ಯಾರ್ಥಿಗಳ ನೆರವಿನಿಂದ ಅಚ್ಚುಹಾಕಿಸಿದೆನು.

೧೯೩೦ರ ಕಾಯಿದೇಭಂಗ ಆಂದೋಲನದ ಬಿರುಗಾಳಿಯಲ್ಲಿ ಸಿಲ್ಕಿದೆ, ಶಾಲೆಗೂ ಮನೆಗೂ ಜಲಾಂಜಲಿಯನ್ನು ಕೊಟ್ಟೆ. ಸತ್ಯಾಗ್ರಹದಲ್ಲಿ ಭಾಗವಹಿಸಿದೆ ; ಅದೇ ವರ್ಷ ಕೊಡಗನ್ನು ಬಿಟ್ಟು ವೈನಾಡಿಗೆ ಹೋಗಬೇಕಾಯಿತು. ಕಾಯಿದೇಭಂಗ ಚಳವಳಿಯಲ್ಲಿ, ಒಂದು ವರ್ಷಕ್ಕಿಂತ ಹೆಚ್ಚುಕಾಲ ಸೆರೆಯವಾಸದ ಸವಿಯನ್ನು ನೋಡಿದೆ. ಆಗಲೇ ನನಗೆಶ್ರೀ. ಬಿ.ಕೆ. ದತ್ತರವರ ಪರಿಚಯ—ತಿರುಚನಾಪಳ್ಳಿಯ ಕುರಂಗದಲ್ಲಿ— ಆಯಿತು. ಅವರ ಪರಿಚಯ-ಸಹವಾಸಗಳು ನನ್ನನ್ನು ಒಬ್ಬ ಸಾಮ್ಯವಾದಿಯನ್ನಾಗಿ ಮಾಡಿದುವು. ಅಲ್ಲಿದ್ದಾಗ ಮಾರ್ಕ್ಸ್ ಸಿದ್ಧಾಂತಗಳಿಗೆ ಸಂಬಂಧಿಸಿದ ಕೆಲವು ಲೇಖನಗಳನ್ನು ಬರೆದೆ.

೧೯೩೪-೩೫ರಲ್ಲಿ, ಕೇರಳ ಕಾಂಗ್ರೆಸ್ ಸೋಶಾಲಿಸ್ಟ್ ಪಾರ್ಟಿಯಲ್ಲಿ ಸದಸ್ಯನಾದೆ. ಕಲ್ಲೀಕೋಟೆಯಲ್ಲಿ ಕೂಲಿಕಾರರ ಸಂಘಟನೆಯ ಕಾರ್ಯ ಮಾಡುತ್ತ ಎರಡು ವರ್ಷ ಕಳೆದೆ.

೧೯೩೬ರಲ್ಲಿ ವೈನಾಡಿನ ದೊಡ್ಡ ಪ್ಲಾಂಟರ್‌ರಾದ ಶ್ರೀ. ಎಂ. ಕೆ. ಜಿನಚಂದ್ರಗೌಡರು ನನ್ನನ್ನು ವೈನಾಡಿಗೆ ಕರೆದುಕೊಂಡು ಹೋದರು. ಅವರ ತೋಟದಲ್ಲಿ ಒಬ್ಬ ನೌಕರನಾಗಿ ೧೯೪೨ರ ವರೆಗೆ ಕೆಲಸಮಾಡಿದೆ. ಅಂದಿನಿಂದಲೂ ನಾನು ರಾಜಕಾರಣದಿಂದ ದೂರವಾದೆ, ಸಾಹಿತ್ಯದ ಕಡೆಗೇ ಹೆಚ್ಚು ಗಮನವನ್ನು ಇರಿಸಿದೆ. ನನ್ನ ಹಲವು ಕತೆ-ಲೇಖನಗಳು ಜಯಂತಿ, ಜೀವನ, ಜಯಕರ್ನಾಟಕ, ಸದ್ಬೋಧಚಂದ್ರಿಕೆ ಮೊದಲಾದ ಪತ್ರಿಕೆಗಳಲ್ಲಿ ಅಚ್ಚಾಗಿ ಬಂದಿವೆ. ‘ ಅವಮಾತೃನಂದಿನಿ ’ ‘ ನನ್ನ ಅತ್ತಿಗೆ, ‘ ಸಾಧನಕುಟೀರ ’ ಎಂಬ ಮೂರು ಕಾದಂಬರಿಗಳೂ ಪ್ರಕಟವಾಗಿವೆ. ‘ ದೂರ ಹೋದಳು ’ ಎಂಬ ನೀಳ್ಗತೆಯನ್ನು, ನನ ಗೆಳೆಯರಾದ ಶ್ರೀ. ಎಂ. ಕೆ. ಜಿನಚಂದ್ರಗೌಡರು ಪ್ರಕಟಿಸಿರುವರು.

೧೯೪೧ರಲ್ಲಿ ನನಗೆ ಮದುವೆಯಾಯಿತು. ಈಗ ನಾನು ಒಂದು ಹೆಣ್ಣುಕೂಸಿನ ತಂದೆ. ಮದುವೆ ನನ್ನ ಪ್ರೀತಿಯ ವೈನಾಡಿನಿಂದ ನನ್ನನ್ನು ಅಗಲಿಸಿತು. ನಾನೀಗ ಹುಟ್ಟಿದೂರಿಗೆ ಮರಳಿ ಬಂದಿದ್ದೇನೆ. ಪ್ರಾಥಮಿಕ ಶಾಲೆಯೊಂದರಲ್ಲಿ ಅಧ್ಯಾಪಕನಾಗಿ ನನ್ನ ಜೀವನ ನೌಕೆಯನ್ನು ತೇಲಬಿಟ್ಟಿದ್ದೇನೆ.

ಬಡತನ, ಸಮಾಜದ ಅಸ್ವಾಭಾವಿಕ ಕಟ್ಟಳೆ ಇವುಗಳಿಂದ ಬೆಂದನೊಂದ ಜನರ ಬಾಳುವೆಗಳನ್ನು ನಿರೀಕ್ಷಿಸುವುದು—ಅವರ ಬದುಕುಗಳನ್ನು ಚಿತ್ರಿಸುವುದು—ಇವುಗಳಿಗಿಂತ ಹೆಚ್ಚಿನ ಸಂತಸವು ನನಗೆ ಬೇರೊಂದಿಲ್ಲ.”

೨ನೆಯ ಬಹುಮಾನ

ಶ್ರೀ. ಬೇಂದ್ರೆ ಲಕ್ಷ್ಮಣರಾಯರ ‘ ನಿಸಾರೆಯ ಮದ್ದು ’ ಎಂಬ ಕತೆ ೨ನೆಯ ಬಹುಮಾನವನ್ನು (೮ ರೂಪಾಯಿ) ಪಡೆದಿದೆ. ಶ್ರೀ. ಬೇಂದ್ರೆಯವರನ್ನೂ ಜಯಂತಿಯ ವಾಚಕರು ಚೆನ್ನಾಗಿ ಬಲ್ಲರು. ಈ ಕತೆಯಲ್ಲಿ ಅವರು ಆದರ್ಶರಹಿತ ಜೀವಿಗಳ ಕಾಮುಕ-ಜೀವನದ ದುಷ್ಪರಿಣಾಮವನ್ನು ಚೆನ್ನಾಗಿ ರೂಪಿಸಿರುವರು. ಶ್ರೀ. ಲಕ್ಷ್ಮಣರಾಯರು ಸದ್ಯ ಧಾರವಾಡದಲ್ಲಿಯೆ ಮನೆಮಾಡಿಕೊಂಡಿರುವರು. ಬಹುಕಾಲ ಸೊಂಡೂರು ಸಂಸ್ಥಾನದಲ್ಲಿ, ಶ್ರೀಕುಮಾರಸ್ವಾಮಿ ದೇವಸ್ಥಾನದ ಆಡಳಿತಗಾರರಾಗಿ ಕೆಲಸ ಮಾಡುತ್ತಿದ್ದರು. ಮೊದಲಿನಿಂದಲೂ ಸ್ವಾತಂತ್ರ್ಯ, ದೇಶಭಕ್ತಿ, ರಾಷ್ಟ್ರಸೇವೆ ಇವುಗಳ ಬಗೆಗೆ ಪ್ರೀತಿಯುಳ್ಳವರು. ಇದೇ ಕಾರಣದಿಂದಲೇ ಇವರು ಸೊಂಡೂರನ್ನು ಬಿಟ್ಟು ಹೊರಡಬೇಕಾಯಿತು ಅಲ್ಲಿಂದ ಬಂದು ಧಾರವಾಡದಲ್ಲಿ ಒಂದು ವಿಶಿಷ್ಟರೀತಿಯ ಗ್ರಂಥಭಾಂಡಾರವನ್ನು ನಡೆಯಿಸುತ್ತಿದ್ದರು. ಧಾರವಾಡದ ನಾಗರಿಕರಲ್ಲಿ ಇವರ ಗ್ರಂಥಭಾಂಡಾರದ ಉಪಯೋಗವನ್ನು ಮಾಡಿಕೊಳ್ಳದವರೇ ಇಲ್ಲ. ಮಹಾಯುದ್ಧದ ಮೂಲಕ ಪರದೇಶದಿಂದ ಪತ್ರಿಕೆ-ಪುಸ್ತಕಗಳು ಬಾರದಂತಾಗಲು, ಅನಿವಾರ್ಯವಾಗಿ ಪುಸ್ತಕ ಭಾಂಡಾರವನ್ನು ನಿಲ್ಲಿಸಿ ಬಿಡಬೇಕಾಯಿತು.

ಶ್ರೀ. ಬೇಂದ್ರೆಯವರು ತುಂಬ ಓದಿದವರು. ಪ್ರಪಂಚದ ಪರಿಚಯ ಚೆನ್ನಾಗಿ ಉಳ್ಳವರು. ಮೊದಲಿನಿಂದಲೂ ಬರೆಯುವ ಸಾಮರ್ಥ್ಯವುಳ್ಳವರಾದರೂ, ಇತ್ತೀಚೆಗೆ ಲೆಕ್ಕಣಿಕೆಗೆ ಹೆಚ್ಚಾಗಿ ಕೆಲಸಕೊಡುತ್ತಲಿದ್ದಾರೆ. ನಾಟಕ-ಏಕಾಂಕ ದೃಶ್ಯಗಳನ್ನು ಬರೆದಿದ್ದಾರೆ; ಕಾದಂಬರಿ-ಲಘುಕಥೆಗಳನ್ನು ಬರೆದಿದ್ದಾರೆ; ಹರಟೆ-ಜೀವನಚಿತ್ರಗಳನ್ನೂ ಬರೆದಿದ್ದಾರೆ. ಸ್ವಭಾವ ಚಿತ್ರಣದಲ್ಲಿ ಪಳಗಿದ ಕೈಯವರು. ಸದ್ಯ ಕನ್ನಡ ಚಲಚ್ಚಿತ್ರ ವ್ಯವಸಾಯದ ಕಡೆಗೆ ಮನಸ್ಸುಹಾಕಿದ್ದಾರೆ. ಹಿಡಿದ ಕೆಲಸವನ್ನು ನೆರವೇರಿಸುವ ಕಾರ್ಯನಿಷ್ಠೆಯೂ ಮನೋದಾರ್ಢ್ಯವೂ ಇವರಲ್ಲಿವೆ. ಇವರ

ವಿವಿಧಕಾರ್ಯದಿಂದ ಕನ್ನಡ ಸಾಹಿತ್ಯದೇವಿ ಬೆಡಗನ್ನು ಹೆಚ್ಚಿಸಿಕೊಳ್ಳಲಿ !

೩ನೆಯ ಬಹುಮಾನ

ಶಿರಸಿಯ ನಿವಾಸಿಗಳಾದ ಶ್ರೀಮಾನ್ ಶ್ರೀಧರ ಬೈಲೂರ ಅವರ '**ಪಟ್ಟೆವಾಲ ತಿಮ್ಮ**' ಎಂಬ ಕತೆಯು ೩ನೆಯ ಬಹುಮಾನ (೫ ರೂಪಾಯಿ) ದೊರೆಕಿಸಿರುವುದು. ಬಡವರ ಸುಖಜೀವನದ ಆಶೆಯ ದುರಂತ ಪರಿಣಾಮವು ಇದರಲ್ಲಿ ಹೃದಯದ್ರಾವಕವಾಗಿ ರೂಪುಗೊಂಡಿದೆ.

'ವಿನೀತ' ಎಂಬ ಅಂಕಿತನಾಮದಿಂದ ಬೇರೆ ಬೇರೆ ಪತ್ರಿಕೆ-ಗಳಲ್ಲಿ— ಹೆಚ್ಚಾಗಿ ಶಿರಸಿಯ 'ನಂದಿನಿ' 'ನವಚೇತನ' ಪತ್ರಿಕೆಗಳಲ್ಲಿ—ಇವರ ವಿಚಾರಪ್ರಚೋದಕ ಲೇಖನಗಳು ಪ್ರಕಟ-ವಾಗಿವೆ. ತರುಣರು ; ಪುರೋಗಾಮಿ ವಿಚಾರದವರು. ದೇಶದ ಪಾರತಂತ್ರ್ಯಜೀವನಕ್ಕಾಗಿ ತಳಮಳಿಸುವವರು. ಪರಿಚಯ-ವನ್ನೂ ಛಾಯಾಚಿತ್ರವನ್ನೂ ಕಳುಹುವುದಾಗಿ ಬಿನ್ನವಿಸಿ ಇವರಿಗೂ ಪತ್ರಬರೆಯಲಾಗಿದ್ದಿತು. ಆದರೆ ಯಾವುದೋ ದೇಶ-ಭಕ್ತಿಯ ಅಪರಾಧದ ಸಂಶಯದಿಂದ ಇವರನ್ನು ಸರಕಾರದವರು ಹಿಡಿದೊಯ್ದಿರುವರೆಂಬುದು ನಮಗೆ ಅನಧಿಕೃತವಾಗಿ ಗೊತ್ತಾ-ಯಿತು. ಇದೇ ಕಾರಣದಿಂದಲೇ ಇರಬಹುದು. ಇವರಿಂದ ಪರಿಚಯ, ಚಿತ್ರ ಯಾವುವೂ ಬರಲಿಲ್ಲ.

ಒಳ್ಳೆಯ ಕತೆಗಳು

ಸಂಪಾದಕಮಂಡಲಿಯು ಆಯ್ದ ೨೭ ಕತೆಗಳೆಲ್ಲ ಪ್ರಕಟನೆಗೆ ತಕ್ಕವುಗಳಿವೆಯೆಂಬುದನ್ನು ಈ ಮೊದಲೇ ಹೇಳಲಾಗಿದೆ. ಬಹುಮಾನ ಪಡೆದ ಕತೆಗಳ ತರುವಾಯ ಮೇಲಿನ ಸ್ಥಾನ ಪಡೆದುವೆಂದರೆ ಅನುಕ್ರಮವಾಗಿ :

೧. 'ಹಾರಿಗೋಲು'

ವಿಷಮವಿವಾಹದ ಸಮಸ್ಯೆಯನ್ನು ಚಿತ್ರಿಸಲು ಹೊರಟ ಈ ಕತೆಯನ್ನು, ಕಳೆದ ಸಲದ ಮೇಲಾಟದಲ್ಲಿ ಮೊದಲನೆಯ ಬಹುಮಾನ ಪಡೆದವರಾದ ಕುಮಾರಿ ದೇವಾಂಗನಾಶಾಸ್ತ್ರಿ, ಗೋಕರ್ಣ ಅವರು ಬರೆದಿರುವರು.

೨. 'ದ್ರೋಹ'

ಸದ್ಯದ ರಾಜಕೀಯ ಪರಿಸ್ಥಿತಿಯನ್ನೇ ಹಿನ್ನೆಲೆಯನ್ನಾಗಿಟ್ಟು-ಕೊಂಡು, ಸರಕಾರಿ ನೌಕರಿಯಲ್ಲಿ ಸೇರಿದ ತರುಣನೊಬ್ಬನ ಮನದ ತೂಗುಯ್ಯಾಲೆಯನ್ನು ತೋರಿಸುವ ಈ ಕತೆಯನ್ನು ಶ್ರೀ. ಮಿರ್ಜೀ ಅಣ್ಣಾರಾಯರು, ಉಗಾರ ಅವರು ಬರೆದಿರುವರು.

೩. 'ನೇಗಿಲಯೋಗಿ'

ಹಳ್ಳಿಯ ರೈತನ ಕರುಣಾಮಯ ಜೀವನವನ್ನೂ, ಶ್ರೀಮಂತರ ಸ್ವಾರ್ಥಪೂರಿತ ದೇಶಭಕ್ತಿಯ ದಾಂಭಿಕತನವನ್ನೂ ಕರುಳು ಕರಗುವಂತೆ ಚಿತ್ರಿಸಿರುವ ಈ ಕತೆಯನ್ನು, ಬೆಳಗಾಂವಿ ಜಿಲ್ಲಾ ಖಾನಾಪುರ ತಾಲ್ಲೂಕು ಇಟಗಿ ಗ್ರಾಮದ ಶ್ರೀ. ಸಿ. ಬಿ. ಬೆಲ್ಲದ ಅವರು ಬರೆದಿರುವರು.

೪. 'ಮಾನವಧರ್ಮ'

ಹಿಂದೂ-ಮುಸಲ್ಮಾನ್ ಧರ್ಮಕಲಹದ ಜೊಳ್ಳುತನವನ್ನು ವಿವರಿಸಿ, ಮಾನವಧರ್ಮವೇ ಕೊನೆಗೆ ನಿಲ್ಲುವುದೆಂಬುದನ್ನು ವಿವರಿಸುವ ಈ ಕತೆಯನ್ನು, ಬೆಳಗಾಂವಿ ಜಿಲ್ಲಾ ಅಥಣೀ ತಾಲ್ಲೂಕಿನ ಉಗಾರ ಗ್ರಾಮದ ಶ್ರೀ. ಬಲವಂತ ಅವರು ಬರೆದಿರುವರು.

೫. 'ವಿಘ್ನೇಶ್ವರ'

ಒಬ್ಬ ಕಾರಕೂನನ ಬಾಳಿನಲ್ಲಿಯ ಒಂದು ಸಾಮಾನ್ಯ ಘಟನೆಯನ್ನು, ಕೇವಲ ಸಂಭಾಷಣೆಯ ರೂಪದಲ್ಲಿಯೆ ಬೆಳೆಯಿಸಿ ವಿನೋದದಲ್ಲಿ ಮುಗಿಸಿದ ಈ ಹಾಸ್ಯಕಥೆಯನ್ನು, ಕುಮಾರಿ ತಾರಾ ಹೆಗಡೆ, ಶಿರಸಿ ಅವರು ಬರೆದಿರುವರು.

೬. 'ಏನಂ ಹೇಳಲಿ ?'

ಪ್ರೇಮಸಂನ್ಯಾಸಿಯ ದುರಂತಜೀವನವನ್ನು ಬಣ್ಣಿಸಿದ ಈ ಕತೆಯನ್ನು ಶ್ರೀ. 'ಚಿದಾನಂದ' ಬೈಲಹೊಂಗಲ, ಜಿಲ್ಲಾ ಬೆಳಗಾಂವಿ ಅವರು ಬರೆದಿರುವರು.

೭. 'ಅವರ ದೇವರು'

ಹಳ್ಳಿಗರ ಒಣಗಳ ಜಗಳಾಟದಿಂದ ಅವರ ಸಂಸ್ಕೃತಿಗಳೆಲ್ಲವೂ ಹೇಗೆ ಬರಿ ನಾಮಶೇಷವಾಗಿರುತ್ತವೆಂಬುದನ್ನು, ಮೈಸೂರಿನ ಶ್ರೀ. ಡಿ. ಸೀತಾರಾಮರಾವ್ ಬಿ. ಎ. ಅವರು ಮನಂಬುಗುವಂತೆ ಕತೆಕಟ್ಟಿ ಇದರಲ್ಲಿ ಹೇಳಿರುವರು.

೮. 'ಛೋಕ್ರಾ, ಏ !'

ಬ್ರಹ್ಮದೇಶದಿಂದ ನಿರ್ವಾಸಿತರಾಗಿ ಬಂದ ಜನರ ದುರವಸ್ಥೆಯ ಹಿನ್ನೆಲೆಯಲ್ಲಿ, ಒಂದು ಮಗುವಿನ ಮರಣದ ಕರುಣಕಥೆಯನ್ನು ಹೇಳುವ ಇದನ್ನು, ಶ್ರೀ. ಕುಳಕುಂದ ಶಿವರಾಯ, ಮಂಗಳೂರು ಅವರು ಬರೆದಿದ್ದಾರೆ.

೯. 'ದೇವಿ'

ಒಂದು ಹಳ್ಳಿಯ ಹೆಣ್ಣಿನ ನಿಷ್ಕಲ್ಮಷ ಪ್ರೀತಿ ಅವಳ ಜಾತಿ-ಬಡತನಗಳ ಮೂಲಕ ಹುಡಿಗೂಡಿ ಹೋದ ಸಂಗತಿಯನ್ನು ನಿರೂಪಿಸುವ ಈ ಸಣ್ಣಕತೆಯನ್ನು, ಕುಮಟೆಯ ಶ್ರೀ. ವಿ. ಜಿ. ಶಾನಭಾಗ ಅವರು ಬರೆದಿದ್ದಾರೆ.

೧೦. 'ಅನುಭವ'

ಗಂಡ-ಹೆಂಡಿರ ಜೀವನದಲ್ಲಿಯ ಒಂದು ದಿನದ ಅನುಭವ-ವಿದು. ಒಳ್ಳೆಯ ನಗೆಯನ್ನು ಹುಟ್ಟಿಸಬಲ್ಲುದಾಗಿದೆ. ಬರೆದವರು ಬೆಂಗಳೂರು ಸೆಂಟ್ರಲ್ ಕಾಲೇಜಿನ ವಿದ್ಯಾರ್ಥಿಯಾದ ಶ್ರೀ. ಕೆ. ಪುರುಷೋತ್ತಮ ಅವರು.

ಮಿಕ್ಕ ಕತೆಗಳು ಯಾವುವೆಂಬುದನ್ನು ಹಿಂದೆಯೆ ಹೇಳಲಾ-ಗಿದೆ. ಅವು ಜಯಂತಿಯಲ್ಲಿ ಪ್ರಕಟವಾದಾಗ ಅವುಗಳನ್ನು ಬರೆದವರನ್ನೂ ಪರಿಚಯಮಾಡಿಕೊಡಲಾಗುವುದು.

ಮೇಲಾಟದ ಏರ್ಪಾಡಿನಲ್ಲಿ ನೆರವಾದ ಮಹನೀಯರಿಗೆಲ್ಲ ಇನ್ನೊಮ್ಮೆ ಕೃತಜ್ಞತೆಯ ವಂದನೆಗಳನ್ನು ಸಲ್ಲಿಸಿ, ತುಂಬ ಬೆಳೆದ ಈ ವರದಿಯನ್ನು ಮುಗಿಸುವೆವು.

ದ್ರೋಹ

(ಒಂದು ಮನೋವಿಶ್ಲೇಷಣೆ)*

ಶ್ರೀ. ' ಇಂದುತನಯ ' ಉಗಾರ

★

' ನಡುವೆಯೇ ಬರುವುದಾಯಿತು, ಗುಣೇಂದ್ರ ? '

' ಕೆಲಸದ ಮೇಲೆ ಹಾಜರಾಗಬೇಕಾಗಿದೆ ! '

' ರಜೆಯು ಇನ್ನೂ ಒಂದು ತಿಂಗಳಿದ್ದಿಲ್ಲವೆ ? '

' ಇತ್ತು ; ಆದರೆ.... '

' ಆದರೇನು ? '

' ಕೆಲಸದ ಮೇಲೆ ಕೂಡಲೆ ಹಾಜರಾಗಬೇಕೆಂದು ಆರ್ಡರ್ ಬಂತು, ' ಎಂದು ಹೇಳುತ್ತ ಗುಣೇಂದ್ರನು ಪ್ರಭಾಕರನ ಕೈ ಹಿಡಿದುಕೊಂಡು, ನಿಲ್ದಾಣದ ಹೊರಗೆ ಬರುತ್ತಿದ್ದನು.

ಅಂದು ಮುಂಬಯಿ ನಿಲ್ದಾಣದಲ್ಲಿ ಗೊಂದಲವೇ ಗೊಂದಲ. ದೇಶದ ಮೂಲೆ-ಮೂಲೆಗಳಿಲ್ಲಿಂದ ಕಾಂಗ್ರೆಸ್ ವರ್ಕಿಂಗ್ ಕಮಿಟಿಗೆಂದು ಬಂದ ದೇಶಭಕ್ತರು ನಿಲ್ಮನೆಯಲ್ಲಿ ನೆರೆದಿದ್ದಾರೆ. ಇದೀಗ ಬಂದ ಗಾಡಿಯಿಂದ ಮಹಾತ್ಮರು ಇಳಿದರು. ಅವರ ಸ್ವಾಗತಕ್ಕಾಗಿ ಸ್ಕೂಲು-ಕಾಲೇಜುಗಳ ವಿದ್ಯಾರ್ಥಿಗಳೆಲ್ಲ ಹುರುಪಿನಿಂದ ನಿಲ್ದಾಣಕ್ಕೆ ಬಂದಿರುವರು.

ಆ ವಿದ್ಯಾರ್ಥಿಗಳೊಳಗಿನವನೊಬ್ಬ ಪ್ರಭಾಕರ, ಅಲ್ಲಿಯ ಕಾಲೇಜಿನ ವಿದ್ಯಾರ್ಥಿ. ಎಲ್ಲ ಹುಡುಗರಂತೆ ಅವನೂ ಮಹಾತ್ಮರ ಸ್ವಾಗತಕ್ಕೆಂದು ಬಂದಿದ್ದ. ಅದೇ ಗಾಡಿಗೆ ಅವನ ಗೆಳೆಯ ಗುಣೇಂದ್ರ— ಮುಂಬಯಿ ಟೌನಿನ ಠಾಣಾ ಇನಸ್ಪೆಕ್ಟರನಾತ— ಬಂದ. ಇಬ್ಬರೂ ಬಿ. ಎ. ವರೆಗೆ ಕೂಡಿ ಕಲಿತ ಗೆಳೆಯರು.

ನಿಲ್ದಾಣದಲ್ಲಿಯ ಜನಸಂದಣಿಯನ್ನೆಲ್ಲ ದಾಟಿ ಮುಂದೆ ಬಂದ ಮೇಲೆ, ಪ್ರಭಾಕರನು ನಸುನಗುತ್ತ ಕೇಳಿದ :

' ಅಂತೂ ಕಲಿಯುವಾಗ ದೇಶಸೇವೆ ಮಾಡುವೆನು— ಎಂದು ಮಾಡಿದ ಪ್ರತಿಜ್ಞೆಯನ್ನು ಮರೆತು, ಕಾಂಗ್ರೆಸಿನ ಮೇಲೆ ಕಣ್ಣಿಡಲು ಬಂದೆಯಿಸ್ಟು ! '

' ಪೋಲೀಸ ಡಿಪಾರ್ಟ್‌ಮೆಂಟಿನಲ್ಲಿ ಕೆಲಸ ಹಿಡಿದುದಕ್ಕಾಗಿ ಕಾಂಗ್ರೆಸಿನ ಮೇಲೆ ಕಣ್ಣಿಡಲೇನೋ ಬರಬೇಕಾಯಿತು ; ಆದರೆ ದೇಶಸೇವೆ ಮಾಡುವೆನೆಂಬ ಪ್ರತಿಜ್ಞೆಯನ್ನು ಮರೆತಿಲ್ಲ. ಇದು ನಿನಗೂ ಗೊತ್ತಿದ್ದ ಸಂಗತಿ ! '

' ಹಾಗಿದ್ದಲ್ಲಿ ನಾಳೆಯ ದಿನ ನೀನು ಕಾಂಗ್ರೆಸ್ ಜನರಿಗೇನೂ ವಿರೋಧ ಬಗೆಯಲಿಕ್ಕಿಲ್ಲವಷ್ಟೆ ? '

' ಇಲ್ಲ, ಎಂದೂ ಇಲ್ಲ ! '

' ವಿರೋಧಿಸುವ ಪ್ರಸಂಗ ಬಂದರೆ ? '

' ಸುಮ್ಮನಿರುವೆ ! '

' ಕೆಲಸ ಕಳಕೊಳ್ಳುವ ಪ್ರಸಂಗ ಬಂದರೂ ? '.

ಹೀಗೆ ಮಾತನಾಡುತ್ತ ಗುಣೇಂದ್ರ-ಪ್ರಭಾಕರರಿಬ್ಬರೂ ನೀಲಲೋಚನೆಯ ಮನೆಯನ್ನು ಸೇರಿದರು.

* * *

ನೀಲಲೋಚನೆಯು ಪ್ರಭಾಕರನ ಜೊತೆಗೆ ಕಾಲೇಜಿನಲ್ಲಿ ಓದುವ ವಿದ್ಯಾರ್ಥಿನಿ. ಹೇಳಿಕೊಳ್ಳುವಂತಹ ರೂಪು ಅವಳದಲ್ಲವಾದರೂ ಚೆಲುವೆ. ಅವಳು ಸ್ಟೇಶನಿನ ಸಮೀಪದಲ್ಲಿಯೆ ಕೋಣೆಯೊಂದನ್ನು ಬಾಡಿಗೆಗೆ ಹಿಡಿದು ಇರುತ್ತಿದ್ದಳು. ಕಾಲೇಜಿನ ಚರ್ಚಾಕೂಟದಲ್ಲೊಮ್ಮೆ ನೀಲಲೋಚನೆಯು, ಮಿಶ್ರವಿವಾಹವಾಗಬೇಕೆಂದು ಪ್ರತಿಪಾದಿಸಿದಳು. ಅದಕ್ಕೆ ಪುಷ್ಟಿ ದೊರೆಯುವಂತೆ ಪ್ರಭಾಕರನು ಭಾಷಣ ಮಾಡಿದ. ಆ ಕಾರಣದಿಂದಲೇ ಅವರಿಬ್ಬರಲ್ಲಿಯೂ ವಿಶೇಷ ಪರಿಚಯವಾಯಿತು. ಅಂದಿನಿಂದ ಪ್ರಭಾಕರನು ಸಮಯ ಸಿಕ್ಕಾಗಲೆಲ್ಲ ನೀಲಲೋಚನೆಯ ಕೋಣೆಗೆ ಹೋಗುತ್ತಿದ್ದನು. ಇಬ್ಬರಲ್ಲಿಯೂ ಸ್ವಾಭಾವಿಕವಾಗಿ ಪ್ರೇಮಾಂಕುರವು ಹುಟ್ಟಿ ಬೆಳೆಯುತ್ತಿದ್ದಿತು.

ಗುಣೇಂದ್ರ ಮುಂಬಯಿಗೆ ಟೌನ್ ಠಾಣಾ ಇನಸ್ಪೆಕ್ಟರನಾಗಿ ಬಂದಾಗಲೇ, ಅವನಿಗೆ ಪ್ರಭಾಕರನ ಮೂಲಕ ನೀಲಲೋಚನೆಯ ಪರಿಚಯವಾಗಿದ್ದಿತು. ಆಗಾಗ ಪ್ರಭಾಕರನ ಜೊತೆಗೆ ಗುಣೇಂದ್ರನೂ ಅವಳ ಮನೆಗೆ ಹೋಗುವ. ಒಮ್ಮೊಮ್ಮೆ ಪ್ರಭಾಕರನು ಇಲ್ಲದಾಗಲೂ ಹೋಗುವ. ಆದರೂ ನೀಲಲೋಚನೆಯು ಪ್ರಭಾಕರನೊಡನೆ ಸಲುಗೆಯಿಂದ ಮಾತನಾಡುವಂತೆ ಇವನೊಡನೆ ಮಾತನಾಡುತಿರಲಿಲ್ಲ. ಅದೇಕೋ— ಹೊಸ ಪರಿಚಯವೆಂದೋ ಪೋಲೀಸ ಅಧಿಕಾರಿಯೆಂದೋ! ಆದರೂ ಗುಣೇಂದ್ರನ ಮನಸ್ಸು ಅವಳ ಕಡೆಗೆ ಹರಿಯುತ್ತಿದ್ದಿತು.

ಒಂದುದಿನ ' ಚೀನಾನಿಧಿ ' ಯನ್ನು ಸಾಧ್ಯವಾದವರು ಕೂಡಿಸಿ ಕಳುಹಬಹುದೆಂದು, ಮಹಾತ್ಮರು ಪ್ರಕಟನೆಯೊಂದನ್ನು ಹೊರಡಿಸಿದರು. ಅದನ್ನು ಪ್ರಭಾಕರ ಓದಿದ. ಕೈಲಾದಷ್ಟು ಹಣಕೂಡಿಸಿ ಕಳುಹಬೇಕೆಂದು ನಿಶ್ಚಯಿಸಿದ. ತನ್ನ ನಿಶ್ಚಯವನ್ನು ನೀಲಲೋಚನೆಗೂ ತಿಳುಹಿದ. ಅವಳೂ ಹಣಕೂಡಿಸಲು ನೆರವಾಗುವೆನೆಂದಳು. ಇಬ್ಬರೂ ಕೂಡಿ ಕೆಲವುಕಡೆ ತಿರುಗಿದರು, ಹಣ ಕೂಡಿಸಿದರು. ಎಲ್ಲರನ್ನೂ ಕೇಳುವಂತೆ ಗುಣೇಂದ್ರನನ್ನೂ ಕೇಳಿದರು. ' ನಿಮ್ಮಂತವರು ಕೇಳಿದ ಮೇಲೆ ಇಂತಹ ಕೆಲಸಕ್ಕೆ ಇಲ್ಲವೆನ್ನಲು ಬಂದೀತೆ?' ಎಂದು ಅವನು ೫೦ ರೂಪಾಯಿಗಳಷ್ಟು ಕೊಟ್ಟು, ತಾನು ಪೋಲೀಸ ಅಧಿಕಾರಿಯಾದುದರಿಂದ ಪಾವತಿಯನ್ನು ನೀಲಲೋಚನೆಯ ಹೆಸರಿನಿಂದಲೇ ಬರೆಯಬೇಕೆಂದು ಹೇಳಿದ, ಮತ್ತು ಹಾಗೆಯೆ ಮಾಡಿಸಿದ. ಇಲ್ಲಿಯ ವರೆಗೆ ಅವರಿಗೆ

* ಮೇಲಾಟದಲ್ಲಿ ೩ನೆಯ ಬಹುಮಾನವನ್ನು ಪಡೆದ ಒಳ್ಳೆಯ ಕತೆಯಿದು.
ಸಂ. ಜ.

ಹಣಕೊಟ್ಟವರಲ್ಲಿ, ಒಬ್ಬರೇ ಇಷ್ಟು ಹಣ ಕೊಟ್ಟವರು ಯಾರೂ ಇರಲಿಲ್ಲ. ಆದರಿಂದ ಇಬ್ಬರಿಗೂ ಆಶ್ಚರ್ಯವೆನಿಸಿತು; ಅದರ ಜೊತೆಗೆ ಅಭಿಮಾನವೂ ಎನಿಸಿತು, ನಾಲ್ಕು ದಿನಗಳಲ್ಲಿ ಸಾಧ್ಯವಾದಷ್ಟು ಹಣ ಕೂಡಿಸಿ ಕಾಂಗ್ರೆಸ್ ಕಾರ್ಯಾಲಯಕ್ಕೆ ಕಳುಹಿದರು. ಈ ಕೆಲಸ ಮಾಡಿದಾಗಿನಿಂದಲೂ ನೀಲಲೋಚನೆ–ಪ್ರಭಾಕರರ ತನುವೆರಡು, ಮನವೊಂದು.

ಗುಣೇಂದ್ರ ಇದನ್ನರಿತಿದ್ದ. ಆದರೂ ಅವನ ಮನಸ್ಸು ಆಗಾಗ ಅವಳ ಕಡೆಗೆ ಹರಿಯುತ್ತಿದ್ದಿತು, ಒಲೆಯುತ್ತಿದ್ದಿತು. ಆದರೆ 'ಎಷ್ಟಾದರೂ ಪ್ರಭಾಕರ ಗೆಳೆಯ.... ಇನ್ನೂ, ಅವಳ ಹೃದಯ ಹೇಗೋ ಗೊತ್ತಿಲ್ಲ '........ ಎಂದುಕೊಂಡು ಸುಮ್ಮನಿದ್ದ.

ಗುಣೇಂದ್ರನು ಚೀನಾನಿಧಿಗೆ ತನ್ನ ಶಕ್ತಿಮೀರಿ ಸಹಾಯ ನೀಡಿದ ; ತಮ್ಮ ದೇಶಕಾರ್ಯಕ್ಕೆ ನೆರವಾದ—ಎಂದು ನೀಲಲೋಚನೆಯು ಗುಣೇಂದ್ರನನ್ನು, ಅಂದಿನಿಂದ ಸ್ವಲ್ಪ ಆದರದಿಂದ ಕಾಣತೊಡಗಿದಳು.

ಇಷ್ಟು ದಿನಗಳ ವರೆಗೆ ಗುಣೇಂದ್ರನಲ್ಲಿ ಗುಪ್ತಗಾಮಿನಿಯಾಗಿದ್ದ ದೇಶಪ್ರೇಮದ ಸೆಲೆಯು ಈಗ ಹೊರಹೊಮ್ಮಿ ಹರಿಯಹತ್ತಿತು. ಪ್ರಭಾಕರ–ನೀಲಲೋಚನೆಯರೊಂದಿಗೆ ಕೂಡಿ ಇರುವಾಗಲಂತೂ ದೇಶಸೇವೆಯ ಮಾತುಗಳೇ ಅವನ ಬಾಯಿಂದ ಹೊರಡುವುವು. ಆಗೆಲ್ಲ ನೀಲಲೋಚನೆಯು : 'ಗುಣೇಂದ್ರನ ದೇಶಪ್ರೇಮ ದೊಡ್ಡದು!' ಎನ್ನುವಳು. ಅದಕ್ಕೆ ಗುಣೇಂದ್ರನು ಮನದಲ್ಲಿಯೆ ಹಿಗ್ಗಿ 'ನಾಲ್ಕುದುಡ್ಡು ಕೊಟ್ಟರೇನಾಯಿತು ? ನಿಮ್ಮ ದೇಹಶ್ರಮವೇನು ಸಾಮಾನ್ಯವಾದುವಲ್ಲ ಎನ್ನುವ. ಹೀಗೆ ಹೇಳುವಾಗ ಅವನ ಮಾತಿನ ಧ್ವನಿಯಲ್ಲಿ, 'ಸಾಧ್ಯವಿದ್ದರೆ ದೇಹಶ್ರಮವನ್ನೂ ಮಾಡುತ್ತಿದ್ದೆ,' ಎಂಬ ಭಾವ ತುಂಬಿ ಹೊರಸೂಸುತ್ತಿದ್ದಿತು.

* * *

ಮಧ್ಯಾಹ್ನದ ಮೂರು ಗಂಟೆಯಾಗಿರಬಹುದು. ಗುಣೇಂದ್ರನು ತನ್ನ ಆಫೀಸ್ ರೂಮಿನಲ್ಲಿ ಕುಳಿತಿದ್ದಾನೆ. ಎದುರಿಗೆ ಗೋಡೆಯ ಮೇಲೆ ವಿಕ್ಟೋರಿಯಾ ಮಹಾರಾಣಿಯವರ ಭವ್ಯ ಭಾವಚಿತ್ರ. ಎಡಗಡೆಯ ಗೋಡೆಯ ಮೇಲೊಂದು ಪುಟ್ಟ ಚಿತ್ರ; ಅದು ಹಿಂದಿನ ಗವ್ಹರ್ನರ್ ಜನರಲ್‌ರೊಬ್ಬರಾದ ಡಾಲ್‌ಹೌಸಿಯದು.

ಕುಳಿತಂತೆಯೆ ಗುಣೇಂದ್ರನ ಕಣ್ಣೆದುರಿಗೆ ಅಂದಿನ ಕಾಂಗ್ರೆಸ್ ಕಮಿಟಿಯ ಅಸಂಖ್ಯ ಜನಸಮೂಹ, ಉಚ್ಚಾಸನದ ಮೇಲೆ ಕುಳಿತ ಮಹಾತ್ಮರು ಇವೇ ಮೊದಲಾದ ದೃಶ್ಯಗಳು ಬಂದು ನಿಂತುವು. ಹಾಗೆಯೆ ಮಹಾತ್ಮರ ಮಾತುಗಳೂ ಕಿವಿಯಲ್ಲಿ ಗುಣುಗುಣಿಸತೊಡಗಿದುವು. ಅವು ಒಂದೊಂದೂ ಮುತ್ತಿನಂತಹ ಮಾತುಗಳು, ಸತ್ಯಸಂಗತಿಗಳು, ಸತ್ಯಾಗ್ರಹದ ಸೂಚನೆಗಳು. 'ಜನತೆಯಲ್ಲಿ ಎಂತಹ ಜಾಗೃತಿಯಿದು! ಅಪೂರ್ವ ಉತ್ಸಾಹ! ಅಪರಿಮಿತ ಜನಸಮೂಹವಾದರೂ ಎಷ್ಟು ಶಾಂತವಾಗಿದ್ದಿತು! ಆ ಜನರ–ದೇಶಭಕ್ತರ–ಮಧ್ಯದಲ್ಲಿ, ಕೈಯಲ್ಲಿ ಕೋವಿಯನ್ನು ಹಿಡಿದುಕೊಂಡು ನಿಂತ ನಾನು, ಮಹಾತ್ಮರಿಗೆ ದೇಶದ್ರೋಹಿಯಂತೆ ಕಂಡೆನೋ ಏನೋ! ಆಗ ನಾನು ನೀಲಲೋಚನೆಗೆ ಹೇಗೆ ಕಂಡಿರಬೇಕು ? ಅವಳೇನು ಹಾಗೆ ವಿಪರೀತ ಭಾವಿಸಿರಲಿಕ್ಕಿಲ್ಲವಷ್ಟೇ ? ಛೇ ! ಅವಳಂತೂ ಹಾಗೆ ತಿಳಿದುಕೊಳ್ಳುವುದು ಶಕ್ಯವಿಲ್ಲ. ಅವಳಿಗೆ ನನ್ನ ಮನಸ್ಸು ಗೊತ್ತಿರುವುದು....' ಎಂದು ಎಲ್ಲೆಲ್ಲೋ ಕಲ್ಪನೆಯ ಕುದುರೆಯನ್ನೇರಿ ವಿಹರಿಸುತ್ತ, ಅದಾವಾಗಲೋ ಕುರ್ಚಿಯ ಮೇಲೆ ಒರಗಿಕೊಂಡಿದ್ದನು. ಅಲ್ಲಿಯೇ ಕಣ್ಣುಮುಚ್ಚಿದುವು. ಕನಸಿನಲ್ಲಿ ಅವನ ಎದುರಿಗೆ ನೀಲಲೋಚನೆಯು ಬಂದು ನಿಂತತಾಯಿತು. ಕ್ರಮದಿಂದ ಆ ನೀಲಲೋಚನೆಯ ರೂಪಾಂತರವು ಝಾಂಸಿಯ ರಾಣಿ–ಲಕ್ಷ್ಮೀಬಾಯಿಯಂತಾಯಿತು. ಅದೇನೋ ಅವಳು ಕೂಗಿ ಹೇಳಿದಂತೆ ಕೇಳಿಸಿತು : 'ನನ್ನ ಕೊನೆಯ ಹೋರಾಟವಿದು ! ತರುಣರೇ, ಸ್ವಾತಂತ್ರ್ಯಕ್ಕಾಗಿ ಹೋರಾಡಲು ಮುನ್ನುಗ್ಗಿರಿ !' ಎಂಬುದಾಗಿ. ಗುಣೇಂದ್ರ ಕಣ್ದೆರೆದ. ಎದುರಿಗೆ ವಿಕ್ಟೋರಿಯಾ ಮಹಾರಾಣಿಯ ಭಾವಚಿತ್ರ. ಅವನ ಮುಖವು ವಿಷಣ್ಣವಾಯಿತು.

'ಕಿಣ್ ಕಿಣ್ ಕಿಣ್ ಕಿಣ್ ಕಿಣ್' ಎಂದು ಸಾಹೇಬರ ಮೇಜಿನ ಮೇಲಿರುವ ಗಂಟೆಯ ಸಪ್ಪಳವಾಯಿತು. ಗುಣೇಂದ್ರ ಎದ್ದು ಹೋದ.

'ಇಗೋ ಗುಣೇಂದ್ರ, ನಿನ್ನ ಈ ತಿಂಗಳ ಸಂಬಳ ತಕ್ಕೊಳ್ಳು ! ರುಜುಮಾಡು !' ಸಾಹೇಬರು ಹೇಳಿದರು. ಯುರೋಪಿಯನ್ ಸಾಹೇಬರು ಹೀಗೆ ಹೆಸರುಗೊಂಡು ಕರೆದುದು ಗುಣೇಂದ್ರನಿಗೆ ಹೊಸದೆನಿಸಿತು. ಕೆಲವು ದಿನಗಳ ಹಿಂದೆ, ಕಲೆಕ್ಟರರು ತನ್ನ ಸಲುವಾಗಿ ಪ್ರೇಮವನ್ನು ವ್ಯಕ್ತಮಾಡುವಾಗೊಮ್ಮೆ 'ಗುಣೇಂದ್ರ' ಎಂದು ಸಂಬೋಧಿಸಿದುದು ನೆನಪಿಗೆ ಬಂದು ಮುಖವರಳಿತು. ಈ ಸಂತೋಷಕ್ಕೆ ಇದೀಗ ಕೈಯಲ್ಲಿ ೧೦೫ ರೂಪಾಯಿಗಳು ಬರುವುವೆಂಬುದೂ ಕಾರಣವಾಗಿರಬೇಕು.

ಗುಣೇಂದ್ರನ ಕೈಯಲ್ಲಿ ೧೦೫ ರೂಪಾಯಿಗಳು ಬಂದುವು. ಸಾಹೇಬರಿಗೆ 'ಸೆಲ್ಯೂಟ್' ಮಾಡಿ ನಡೆದ. ಮನದಲ್ಲಿ : 'ತಿಂಗಳಿಗೆ ನೂರಾ ಐದು ರೂಪಾಯಿ ಸಂಬಳ. ನಾನು ಚೀನಾ ನಿಧಿಗೆ ಕೊಟ್ಟ ಐವತ್ತು ರೂಪಾಯಿಗಳು ನನ್ನ ಸಂಬಳದ ದೃಷ್ಟಿಯಿಂದ ಸ್ವಲ್ಪ ಹೆಚ್ಚಾಯಿತೆಂದೇ ಹೇಳಬೇಕು. ಆದರೆ ಆ ಐವತ್ತು ರೂಪಾಯಿಗಳಿಂದ ನೀಲಲೋಚನೆಯ ಮನಸ್ಸಿನ ಮೇಲೆ ಎಂತಹ ಪರಿಣಾಮವಾಗಿದೆ !' ಎಂದು ವಿಚಾರಿಸುತ್ತ, ಬಾಗಿಲವರೆಗೆ ಹೋಗಿದ್ದ. ಅಷ್ಟರಲ್ಲಿಯೆ ಹಿಂದಿನಿಂದ 'ಗುಣೇಂದ್ರ' ಎಂದು ಸಾಹೇಬರು ಕರೆದರು.

'ಯಾಕೆ ?' ಎಂದು ಕೇಳುವಂತಹ ಮುಖಮುದ್ರೆಯಿಂದ ಗುಣೇಂದ್ರ ಹಿಂದಿರುಗಿ ನೋಡಿದ.

'ನಿನಗೆ ಮೇಲಿನ ಆಫಿಸಿನಿಂದ ಬಂದ ಹುಕುಂ ಒಂದನ್ನು ತೋರಿಸಲಿಲ್ಲವಲ್ಲ !'

೫೦ ವರ್ಷಗಳಿಂದ ಅನುಭವಪಟ್ಟ

ಕರ್ಕಿ ಮತ್ತು ಕಂಪನಿ

ಇವರ

ಜ್ವರಗಡ್ಡೆಯು ಗುಳಿಗೆ

ಬಾಟ್ಲಿಗೆ ೧ ರೂ.

ಎಂತಹ ಜ್ವರಗಡ್ಡೆಯನ್ನೂ ಕಳೆಯುವುದು.

ವಿಳಾಸ:— ಗಣೇಶ ರಾಮಚಂದ್ರ ಕರ್ಕಿ ಮತ್ತು ಕಂಪನಿ, ಗಿರಗಾಂವ, ಮುಂಬಯಿ.

'ಯಾವ ಹುಕುಮು?' ಎಂದು ಕೇಳುತ್ತ ಮುಂದೆ ಹೋಗಿ, ಅದನ್ನು ಕೈಯಲ್ಲಿ ತೆಗೆದುಕೊಂಡು ಓದಿ ನೋಡಿದನು. ಅದರಲ್ಲಿ ಬರೆದುದರ ಭಾವವಿಷ್ಟು: 'ಮುಂಬಯಿ ಠಾಣೆಯಲ್ಲಿ ಯಾವ ತರದ ಗೊಂದಲವೂ ಏಳದಂತೆ ಹೆಚ್ಚು ಜಾಗ್ರತೆಯಿಂದ ಕೆಲಸಮಾಡ ಬೇಕು. ನಿಮ್ಮ ಕೆಲಸವು ವಿಶೇಷ ಸಮಾಧಾನಕರವಾಗಿ ಕಂಡು ಬಂದಲ್ಲಿ, ಇದಕ್ಕೂ ಮೇಲ್ತರಗತಿಯ ಸ್ಥಳಕ್ಕೆ ನಿಯಮಿಸಿಕೊಳ್ಳ ಬಹುದು.'

* * *

ಒಂದೆರಡು ತಾಸುಗಳು ಕಳೆದ ಮೇಲೆ ಗುಣೇಂದ್ರ ನೀಲ-ಲೋಚನೆಯ ಮನೆಯ ಕಡೆಗೆ ಹೋದ. ಅವಳು 'ಸ್ಟೌವ್' ಹೊತ್ತಿಸಿ ಚಹಕ್ಕಿಡುವುದರಲ್ಲಿದ್ದಳು. ಹೊರಗೆ ಹೆಜ್ಜೆಯ ಸಪ್ಪಳ ವಾಗಲು 'ಯಾರು? ಪ್ರಭಾಕರ!' ಎಂದಳು.

'ಅಲ್ಲ.' ಎನ್ನುತ್ತ ಗುಣೇಂದ್ರ ಒಳಗೆ ಹೋದ. ಅವನ ಮನಸ್ಸಿನ ಮೂಲೆಯಲ್ಲಿ ಎಲ್ಲಿಯೊ ಒಂದು ಸ್ವಲ್ಪ ಅಸಮಾಧಾನದ ನೆರಳು ಬಿದ್ದು ಹಾಯಬಾಯಿತು.

ನೀಲಲೋಚನೆಯು ಚಹಮಾಡಿ, ಗುಣೇಂದ್ರನಿಗೊಂದು ಕಪ್ಪು ಕೊಟ್ಟು ತಾನೊಂದನ್ನು ತೆಗೆದುಕೊಂಡಳು. ಚಹ ಕುಡಿಯುತ್ತ: 'ಈ ಹೊತ್ತು ಸ್ವಲ್ಪ ಬೇಗನೆ ಬಂದಿರಿ?' ಎಂದು ಕೇಳಿದಳು.

'ಎಲ್ಲಿಯಾದರೂ ಸ್ವಲ್ಪ ಅಡ್ಡಾಡಲು ಹೋಗೋಣವೆಂದು ಬಂದು ಬಿಟ್ಟೆ!'

'ಯಾವ ಕಡೆಗೆ ಹೋಗುವುದು?'

'ಎಲ್ಲಿಯಾದರೂ ಬಯಲಿಗೆ ಹೋದರಾಯಿತು.' ಕೈಯೊಳಗಿನ ಕಪ್ಪನ್ನು ಕೆಳಗಿಡುತ್ತ ಗುಣೇಂದ್ರ ಹೇಳಿದ.

'ಪ್ರಭಾಕರ ಸಮುದ್ರತೀರಕ್ಕೆ ಹೋಗೋಣವೆಂದಿದ್ದ; ಇನ್ನೂ ಯಾಕೆ ಬರಲಿಲ್ಲವೊ!'

'ನಾವೂ ಅಲ್ಲಿಯೇ ಹೋಗೋಣ; ಅವನೂ ಬಂದರೆ ಅತ್ತ ಕಡೆಗೇ ಬರುವನಲ್ಲ!' ಎಂದು ಸ್ವಲ್ಪ ಕೆರಳಿದ ಕಂಠದಿಂದ ಗುಣೇಂದ್ರ ನುಡಿದ.

ಸ್ವಲ್ಪ ಹೊತ್ತಿನ ಮೇಲೆ ನೀಲಾ, ಗುಣೇಂದ್ರ ಇಬ್ಬರೇ ಅಡ್ಡಾಡಲು ಹೋದರು. ಅಂದಿನ ಅವರ ಮಾತಿನ ವಿಷಯವೆಲ್ಲ ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಕಾರ್ಯಕ್ರಮವೇ ಆಗಿದ್ದಿತು. ನಡು ನಡುವೆ ವಿಷಯವನ್ನು ಬದಲಿಸಬೇಕೆಂದು, ಆಗಾಗ ಗುಣೇಂದ್ರ ಯತ್ನಿಸಿದ. ಆದರೆ ನೀಲಲೋಚನೆಯ ಮಾತಿನ ಭರದಲ್ಲಿ ಅದರ ಉಪಯೋಗವಾಗಲಿಲ್ಲ. ತಿರುಗಿ ಬರುವಾಗ ಗುಣೇಂದ್ರ ಹೇಳಿದ:

'ಬೇರೆಯ ಕಡೆಗೆ ಒಳ್ಳೆಯ ಮನೆಯೊಂದನ್ನು ಬಾಡಿಗೆಯಿಂದ ಹಿಡಿಯಬೇಕೆಂದಿದ್ದೇನೆ!'

'ಅದೇಕೆ? ಆ ಕೊಠಡಿಯಲ್ಲಿರಲು ಬೇಸರವೇ?'

'ಹೌದು; ಆ ಕೋಣೆ ಬಹಳ ಸಣ್ಣದು. ಮತ್ತೊಬ್ಬರು ಬಂದರೆ ಕುಳ್ಳಿರಲೂ ಸ್ಥಳವಿಲ್ಲ.'

'ಇಲ್ಲದಿದ್ದರೇನು? ಮದುವೆಯಾಗುವವರೆಗೆ ದೊಡ್ಡ ಮನೆಯ ಅಗತ್ಯವೆಲ್ಲಿದೆ ನಿಮಗೆ?' ಎಂದು ಮುಗುಳು ನಗೆಯೊಂದನ್ನು ಬೀರಿದಳು ನೀಲಲೋಚನೆ.

ಗುಣೇಂದ್ರ ಅವಳ ಮುಖವನ್ನೇ ನಿರೀಕ್ಷಿಸುತ್ತ 'ಇನ್ನೂ ಮದುವೆ ಎಂದೋ ಯಾರಿಗೆ ಗೊತ್ತು! ಅಲ್ಲಿಯವರೆಗೆ ಅದೇ....'

'ಅದೆಲ್ಲ ನಿಮ್ಮ ಮನಸ್ಸಿನ ಮೇಲೆ ಅವಲಂಬಿಸಿ ಇದೆ.' ನಡುವೆಯೆ ಬಾಯಿ ಹಾಕಿ ನುಡಿದಳು ನೀಲಾ.

'ಅದೇನೋ ನಿಜ, ಮದುವೆಗೆ ತಕ್ಕ ಹುಡುಗಿಯೊಬ್ಬಳು ಬೇಕಲ್ಲ!' 'ಅದಕ್ಕೇನು? ನಿಮಗೆ ಬೇಕಾದಂತಹ ಹುಡುಗಿಯರು ಸಿಕ್ಕುವರು. ಬ್ಯಾಂಕಿನಲ್ಲಿ ಸಾವಿರಾರು ರೂಪಾಯಿ ಇಟ್ಟಿದ್ದೀರಿ; ಮೇಲಾಗಿ ಇನಸ್ಪೆಕ್ಟರ್ ಸಾಹೇಬರು! ರೂಪು....'

'ಆ ದೃಷ್ಟಿಯಿಂದಲ್ಲ.' ನಡುವೆಯೇ ಗುಣೇಂದ್ರ ಹೇಳಿದ.

'ಮತ್ತಾವ ದೃಷ್ಟಿ ನಿಮ್ಮದು? ಹೆಂಡತಿ ದೇಶಸೇವೆ ಮಾಡು-ವಂತಹವಳಿರಬೇಕೆನ್ನುವಿರಾ?' ಎಂದು ನಗುತ್ತ ಕೇಳಿದಳು.

ಇಷ್ಟರಲ್ಲಿಯೆ ಪ್ರಭಾಕರ ಎದುರಿಗೆ ಬಂದ. ಯಾಕೋ ಗಂಭೀರ ಭಾವದವನಾಗಿದ್ದ. ಆ ಗಂಭೀರತೆಯ ಅರ್ಥ ಯಾರಿಗೂ ಆಗು-ವಂತಿರಲಿಲ್ಲ. ಆದರೂ ಅವನ ಕಣ್ಣಿನ ಕಡುಗೆಂಪು, ಮನೋ-ಭಾವವನ್ನೆಲ್ಲ ಒಡೆಮೂಡಿಸುವಂತಿತ್ತು; ಅದೇ ಅಸ್ತಮಿಸುತ್ತಿರುವ ನೇಸರನನ್ನು ನೆನಪಿಗೆ ತರುವಂತಿತ್ತು. ಗುಣೇಂದ್ರನಿಗೆ ಅಷ್ಟು ಕೆಂಪಾಗಿ ಕಂಡಿತು— ಪ್ರಭಾಕರನ ಕಣ್ಣಲ್ಲಿ ಕಾಣುತ್ತಿದ್ದ ಕನಲಿನ ಕೆಂಪು. ಮಿತ್ರನ ಮನೋಭಾವವನ್ನೂ, ಅದರಿಂದಾಗುವ ಪರಿ-ಣಾಮ ಪರಂಪರೆಯೆಲ್ಲವನ್ನೂ ನೆನೆದು ಗುಣೇಂದ್ರನು, ಅವನ ಮನಸ್ಸಿಗೆ ಹೇಗೆ ಸಮಾಧಾನವನ್ನುಂಟುಮಾಡಬೇಕೆಂದು ಯೋಚಿಸ ತೊಡಗಿದ.

ಕೆಲವು ಹೊತ್ತು ಎಲ್ಲರೂ ಮೌನವಾಗಿದ್ದರು. ಕೊನೆಗೆ ಗುಣೇಂದ್ರನೆ 'ಪ್ರಭಾಕರ, ನೀವು....ಇನ್ನೂ ಸ್ವಲ್ಪ ಹೊತ್ತು ಸಮುದ್ರತೀರದಲ್ಲಿ ಕುಳಿತುಕೊಳ್ಳಬಹುದು....ನಾನು ಹೊರಡುವೆ.... ಕೆಲಸವಿದೆ!' ಎಂದು ಮೃದುವಾಗಿ ಮೆಲ್ಲಗೆ ಹೇಳಿದನು. ಆ ಮೃದು ನುಡಿಗೆ ಪ್ರಭಾಕರನ ಪ್ರತ್ಯುತ್ತರವಿದು: 'ಹೋಗು, ನಿನಗಾರು ಬರಲಿಕ್ಕೆ ಹೇಳಿದ್ದರು?'

* * *

ದಾರಿಯುದ್ದಕ್ಕೂ ಜನರ ಓಡಾಟ. 'ಎಲ್ಲ ಕಡೆಗೂ ಕಾರ್ಗತ್ತಲೆ ಕವಿವರೆ ಅಡ್ಡಿಯಿಲ್ಲ; ನಮ್ಮ ಕಾಲಲ್ಲಿಷ್ಟು ಬೆಳಕಾದರಾಯಿತು' ಎಂದು ಭಾವಿಸಿಯೊ ಏನೊ, 'ಇಲೆಕ್ಟ್ರಿಕ್' ದೀಪಗಳು ಕಂಬಗಳ ಕೆಳಗಷ್ಟೇ ಬೆಳಕನ್ನು ಬೀರುತ್ತಿದ್ದುವು. ಗುಣೇಂದ್ರ ದಾರಿಯ ಒಂದು ಬದಿಯಿಂದ ನಡೆದಿದ್ದ. ನಡೆದಂತೆಯೆ "ಪ್ರಭಾಕರನ ಮನಸ್ಸು ಹೀಗೇಕೊ?....ಆಗ ಆತ ಬಾರದಿದ್ದಲ್ಲಿ, ನೀಲಲೋಚನೆ ಇನ್ನೂ ಏನು ಹೇಳುತ್ತಿದ್ದಳೊ!....ಅವನು ಇರದಿದ್ದರೆ....ಇದ್ದರೇನಾಯಿತು? ನೀಲಲೋಚನೆಯ ಒಲವು ನನ್ನ ಕಡೆಗೆಯೆ ಇರುವುದು. ಇಲ್ಲ-ವಾದರೆ 'ಮದುವೆ ಮಾಡಿಕೊಳ್ಳುವುದು ನಿಮ್ಮ ಮನಸ್ಸನ್ನು ಅವ-ಲಂಬಿಸಿದೆ. ನಿಮ್ಮ ಹೆಂಡತಿಯು ದೇಶಸೇವೆ ಮಾಡುವಂತವಳಿರ ಬೇಕನ್ನುವಿರಾ?' ಎಂದೇಕೆ ಕೇಳುತ್ತಿದ್ದಳು? ಮೇಲಾಗಿ ದೊಡ್ಡ ಮನೆಯಲ್ಲಿರುವ ವಿಚಾರ ಅವಳಿಗೆ....ಅಂತೂ ನೀಲಾನ ಮನಸ್ಸಿಗೆ ಬರುವಂತಹ ಮನೆಯೊಂದು ಬೇಕು. ನಾಳೆಯೇ ಒಂದು ಬಂಗಲೆ ಯನ್ನು ಬಾಡಿಗೆಯಿಂದ ಹಿಡಿಯುವೆನು. ಅದರಲ್ಲಿ ಮೂರು ಭಾಗಗ-ಳಂತೂ ಇರಲೇಬೇಕು| ಮುಂದೊಂದು ಕಿರುದೋಟವಿದ್ದರೆ ಒಳಿತು. ಅದರಲ್ಲೂ ಬಂಗಲೆಯ ವರೆಗೆ ಕಾರು ಹೋಗುವಂತಿರಬೇಕು. ಇವುಗಳಲ್ಲಿ ಯಾವುದರಂತಿರಬೇಕು ನನ್ನ ಬಂಗಲೆ?......." ಎಂದು, ಸುತ್ತಲಿನ ಬಂಗಲೆಗಳನ್ನು ನಿರೀಕ್ಷಿಸಲು ಗುಣೇಂದ್ರನ ಹುಚ್ಚು ಮನಸ್ಸು ಹವಣಿಸಿತು. ಸುತ್ತಲೂ ನೋಡಿದ; ಆಗ ಆತನಿಗೆ ತಾನು 'ಗವಾಲಿಯಾ ಟ್ಯಾಂಕಿ' ನಲ್ಲಿ ಬಂದುದು ಗೊತ್ತಾಯಿತು.

ಎದುರಿಗೆ ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಸಭಾಮಂಟಪದ ಹೆಬ್ಬಾಗಿಲು. ಅದರ ಮೇಲೊಂದು ಮಹಾತ್ಮರ ಭಾವಚಿತ್ರ. ಅದರ ಕಡೆಗೆ ಗುಣೇಂದ್ರನ ದೃಷ್ಟಿ ಹೋಯಿತು. 'ದೇಶಕ್ಕಾಗಿ ದೇಹ ಸವೆ-ಯಿಸುತ್ತಿರುವ ಮುದುಕ ಮಹಾತ್ಮ! ಇಂದು ರಾತ್ರಿ ಇಂಥವರನ್ನು ಕೈದು ಮಾಡುವುದು! ತಿಳಿದರೆ ಜನತೆ ಸುಮ್ಮನಿದ್ದೀತೆ? ಗಲಾಟೆ ಮಾಡಿದವರ ಮೇಲೆ ಗುಂಡುಹಾರಿಸುವುದಂತೆ! ಇದನ್ನೆಲ್ಲ ನಾನು ಮಾಡುವುದು! ಮಾಡಬೇಕೇ? ಮಾಡಿದರೆ ನೀಲಲೋಚನೆಯು ಮನಸ್ಸಿನಲ್ಲಿ ಏನೆಂದುಕೊಂಡಾಳು?' ಮಂಟಪದ ಒಳಗೆ ಹೋದ-ಅಲ್ಲ—ಹೊರಟ. ಅಲ್ಲಿ ಒಂದೊಂದು ಕಂಬದ ಮೇಲೂ ಒಬ್ಬೊಬ್ಬ ಮುಖಂಡನ ಚಿತ್ರ. ಎದುರಿಗೊಂದು ಭಾರತಾಂಬೆಯ ಚಿತ್ರ. ಭಾರತಾಂಬೆಯು ಬಂಧನದಲ್ಲಿ ಬಳಲುತ್ತಿರುವಂತೆ ಭಾಸವಾಯಿತು ಅವನಿಗೆ. ಮತ್ತೊಮ್ಮೆ ನೋಡಿದ, ಕಣ್ಣಲ್ಲಿ ಕಣ್ಣಿಟ್ಟು ನೋಡಿದ; ತಿರು-ತಿರುಗಿ ಸುತ್ತಲಿನ ಕಂಬಗಳಿಗೆ ಕಟ್ಟಿದ ಭಾವಚಿತ್ರಗಳತ್ತ ನೋಡಿದ. ಅವುಗಳೆಲ್ಲದರಲ್ಲಿಯೂ ಭಾರತಾಂಬೆಯು ಪ್ರತಿಬಿಂಬಿ-ಸಿರುವಂತೆ ಕಂಡಿತವನಿಗೆ. 'ಇದೇನು?' ಎಂದು ಕಣ್ಣುಜ್ಜಿಕೊಂಡು ನೋಡಿದ ಗುಣೇಂದ್ರ. ಒಂದೊಂದು ಕಂಭಕ್ಕೆ ಒಬ್ಬೊಬ್ಬ ಮುಖಂಡ-ನನ್ನು ಬಂಧಿಸಿರುವರೋ ಎನ್ನುವಂತೆ, ಮುಖಂಡರ ಭಾವಚಿತ್ರಗಳು ಮಂದಪ್ರಕಾಶದಲ್ಲಿ ಕಂಡುವು. ತಿರುಗಿ ಭಾರತಮ್ಮನ ಕಡೆಗೆ ನೋಡಿದ ಗುಣೇಂದ್ರ. 'ಭಾರತಮ್ಮನನ್ನು ಬಂಧಮುಕ್ತ ಮಾಡಲು ಹೆಣಗುವವರಿಗೆ ನಾನು ವಿರೋಧಿಸುವುದು....!'

ಇಷ್ಟರಲ್ಲಿ ಗುಣೇಂದ್ರನ ಹತ್ತಿರ ಒಂದು ಕಾರು ಬಂದು ನಿಂತಿತು. ಅದರೊಳಗಿಂದ ಒಬ್ಬ ಯುರೋಪಿಯನ್ ಸಾಹೇಬ ನಿಳಿದು 'ನೀವು ಇಲ್ಲೇ ನಿಲ್ಲಬೇಕು! ಮುಂಜಾನೆಯ ಎಂಟು ಗಂಟೆಯ ವರೆಗೂ ಗಲಭೆಯಾಗದಂತೆ ನೋಡಿಕೊಳ್ಳಿ!' ಎಂದು ಇಂಗ್ಲಿಷ್ ಭಾಷೆಯಲ್ಲಿ ಹೇಳಿ ಕಾರಿನಲ್ಲಿ ಕುಳಿತ. 'ಪ್ರಸಂಗ ಬಂದರೆ....' ಎಂದು ಏನೇನನೋ ಹೇಳುತ್ತ ಕಾಗದವೊಂದನ್ನು ಕೈಯಲ್ಲಿ ಕೊಡುತಿರುವಾಗಲೆ ಕಾರು ಹೊರಟಿತು, ಹೋಯಿತು, ಕಣ್ಮರೆಯಾಯಿತು. ಗುಣೇಂದ್ರ ಆ ಕಾಗದ ನೋಡುತ್ತ ಅಲ್ಲಿಯೆ ನಿಂತ; ಅದೆಷ್ಟೋ ಹೊತ್ತು ನಿರ್ಜೀವ ಕಂಬದಂತೆ ನಿಂತಲ್ಲಿಯೆ ನಿಂತಿದ್ದ.

ಇರುಳು ಕಳೆಯಿತು. ಬೆಳಗಾಯಿತು. ಜನರ ಗೊಂದಲಕ್ಕಾ-ರಂಭವಾಯಿತು. ಗುಣೇಂದ್ರನ ಮನಸ್ಸಿನಲ್ಲಿಯೂ ಗೊಂದಲವೇಳ ತೊಡಗಿತು: "ಕೆರಳಿದ ಜನತೆ ಈಗ ಸುಮ್ಮನಿರದು. ಶಾಂತತೆ ಕಾಯ್ದುಕೊಳ್ಳುವುದಕ್ಕಾಗಿ ಗುಂಡು ಹಾರಿಸುವುದು ನನ್ನ ಕರ್ತವ್ಯ. ಸಾಹೇಬರ ಆರ್ಡರು. ನನ್ನ ಕರ್ತವ್ಯವನ್ನು ನಾನು ಮಾಡಿದರೆ....ನಮ್ಮ ಜನರಮೇಲೆ ನಮ್ಮ ದಬ್ಬಾಳಿಕೆ,...ಭಾರತ ವನ್ನು ಆಳುವವರಾರು?....ಸ್ವಾತಂತ್ರ್ಯ ಕೇಳುವುದು ಯಾರ ಹತ್ತಿರ?........ನಾನೀಗ ಸುಮ್ಮನಿದ್ದರೆ ನನ್ನ ಕೆಲಸ ಹೋಗು-ವುದು!....ಅದರ ಜೊತೆಗೆ ನಾಳೆಗೆ ನನ್ನ ಬಂಗಲೆ....ಹೋಗುವುದು. ನೀಲಲೋಚನೆ....ಆ ಮೇಲೆ ನನ್ನವಳಾಗುವಳೋ ಇಲ್ಲವೊ....!" ಹೀಗೆಲ್ಲ ವಿಚಾರದ ಸುಟ್ಟುರೆಗಾಳಿಯಲ್ಲಿ ಸುತ್ತುವಾಗ 'ಪ್ರಭಾಕರ ಇಲ್ಲದಿದ್ದರೆ....' ಎಂಬ ವಿಚಾರದ ಸುಳಿವೂ ಆಗದೆ ಇರಲಿಲ್ಲ, ಗುಣೇಂದ್ರನ ಮನದಲ್ಲಿ. ಕೈ ಗಡಿಯಾರದಲ್ಲಿ ನೋಡಿದ; ಎಂಟಾಗಲು ಇನ್ನು ಹತ್ತೇ ನಿಮಿಷ. 'ಆಸ್ಟಾದರೆ ನನ್ನ ಡ್ಯೂಟಿ ತೀರಿತು' ಎಂದ. ಆದರೆ ಗಡಿಯಾರದ ಮುಳ್ಳು ನಿಂತಲ್ಲಿಯೆ ನಿಂತಂತೆ ತೋರಿತು. ಅದು ನಡೆಯುತ್ತಿದ್ದರೂ ಹಾಗೆ ತೋರಿ-ತನವನಿಗೆ! ಯಾಕೆ? ಅವನ ಮನಸ್ಸೂ ಅದರಂತಿದ್ದಿತು. ಅವನಿಗೆ ತಿಳಿಯದೆಯೆ ಸರಿಯುತ್ತಿದ್ದಿತು....ಓಡುತ್ತಿದ್ದಿತು. ಅದೆತ್ತೊ! ಅವನ ಕೈಗಳು ಅವನಿಗೆ ಗೊತ್ತಿಲ್ಲದೆಯೆ ಕೋವಿಯನ್ನು ಹಿಡಿದು 'ಧಡ್ ಧಡ್' ಎಂದು ಎರಡುಸಲ ಗುಂಡುಹಾರಿಸಿದುವು ಜನಸಂದಣಿಯಲ್ಲಿ.

"ಕಾಡುಕೋಣ"ದ ಗುರುತಿನ
++ ++ ++ ++ ಕಾಗದವು
ಕನ್ನಡನಾಡಿನದು!
ಬರೆಯಲಿಕ್ಕೂ ಮುದ್ರಣಕ್ಕೂ ತಕ್ಕುದಾದುದು.
ಅಧಿಕೃತ ಪ್ರಸಾರಕರು: ಜಿ. ಕೆ. ಕೇಳಕರ
ಸ್ವದೇಶಿ ಪೇಪರ್ ಮಾರ್ಟ್, ಧಾರವಾಡ.